
ಕರ್ನಾಟಕ ಸರ್ಕಾರ

ವಿಜಯನಗರ ಅಧ್ಯಯನ

ಸಂಪುಟ-೧೬



ಸಂಪಾದಕರು

ಡಾ. ಆರ್. ಗೋಪಾಲ್

ಟಿ.ಎಸ್. ಗಂಗಾಧರ

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ

ಮೈಸೂರು

2012

ಕರ್ನಾಟಕ ಸರ್ಕಾರ

ವಿಜಯನಗರ ಅಧ್ಯಯನ

ಸಂಪುಟ - ೧೬

ಸಂಪಾದಕರು

ಡಾ|| ಆರ್. ಗೋಪಾಲ್

ಶ್ರೀ ಟಿ. ಎಸ್. ಗಂಗಾಧರ್

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ
ಮೈಸೂರು
2012

ವಿಜಯನಗರ ಅಧ್ಯಯನ
ಸಂಪುಟ – ೧೬

ಪ್ರಕಾಶಕರು
ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ವಸ್ತುಪ್ರದರ್ಶನ ಆವರಣ, ಮೈಸೂರು ೫೭೦ ೦೧೦
ದೂರವಾಣಿ ೦೮೨೧-೨೪೨೪೬೭೩, ೨೪೨೪೬೭೪

ಮೊದಲ ಮುದ್ರಣ : ೨೦೧೨

ಪ್ರತಿಗಳು : ೫೦೦
ಪುಟಗಳು : XVI + ೩೬೦

ಬೆಲೆ : ರೂ ೨೬೫-೦೦

ಮುಖಪುಟ ವಿನ್ಯಾಸ : ಶ್ರೀ ಮುರಳೀಧರ್, ಸುಹಾಸ್ ಗ್ರಾಫಿಕ್ಸ್, ಬೆಂಗಳೂರು
ಅಕ್ಷರ ಜೋಡಣೆ : ಹೇಮಲತ, ಗೋಕುಲಂ, ಮೈಸೂರು
ಮುದ್ರಣ : ಶ್ರೀ ಸದ್ಗುರು ಪ್ರಿಂಟರ್ಸ್, ಮೈಸೂರು

VIJAYANAGARA ADHYAYANA
Vol - 16

Publisher
Director
Directorate of Archaeology and Museums
Exhibition Complex, Mysore - 570 010
Ph: 0821-2424673, 2424674

First Edition : 2012

Copies: 500
Pages : XVI + 360

Price : ₹ 265-00

Cover Page : Sri Muralidhar, Suhas Graphics, Bangalore
DTP : Hemalatha, Gokulam, Mysore
Printed at : Sri Sadguru Printers, Mysore

ಗೋವಿಂದ ಎಂ. ಕಾರಜೋಳ
ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ
ಸಚಿವರು ಹಾಗೂ ಬಾಗಲಕೋಟೆ ಜಿಲ್ಲಾ
ಉಸ್ತುವಾರಿ ಸಚಿವರು

ಕರ್ನಾಟಕ ಸರ್ಕಾರ

#3, ನೇ ಮಹಡಿ
ವಿಧಾನ ಸೌಧ, ಬೆಂಗಳೂರು-560 001
ದೂರವಾಣಿ: 080-22033167
ಫ್ಯಾಕ್ಸ್ : 080-22253578

ಶುಭ ಸಂದೇಶ

ವಿಜಯನಗರ ಹೆಸರು ಕನ್ನಡಿಗರಲ್ಲಿ ವಿಶೇಷವಾಗಿ ಸ್ಫೂರ್ತಿಯ ಸೆಲೆಯಾಗಿ ಹರಿದು ಹಲವಾರು ಪ್ರಮುಖ ಸಾಧನೆಗಳಿಗೆ ಕಾರಣೀಭೂತವಾಗಿದೆ. ವಿಜಯನಗರ ಒಂದು ಸಾಮ್ರಾಜ್ಯದ ರಾಜಧಾನಿಯಾಗಿ ಸಾಂಸ್ಕೃತಿಕ ಪರಂಪರೆಯ ನೆಲೆವೀಡಾಗಿ, ವಾಸ್ತುಶಿಲ್ಪ ವೈಭವದ ಪ್ರತೀಕವಾಗಿ, ರಕ್ಷಣೆಯ ಮಹತ್ವದ ಸ್ಥಳವಾಗಿ, ನಾಗರಿಕ ಸೌಲಭ್ಯಗಳ ಮಹಾನಗರಿಯಾಗಿ, ಶ್ರೇಷ್ಠ ರಾಜತಾಂತ್ರಿಕರ ಭೇಟಿಯ ಸ್ಥಳವಾಗಿ, ವೈಭವದ ದಸರಾ ಉತ್ಸವದ ರಂಗಮಂಚವಾಗಿ 250 ವರ್ಷಗಳಿಗೂ ಹೆಚ್ಚುಕಾಲ ಮೆರೆದು, ಇಂದು ಹಾಳುಹಂಪೆಯಾಗಿ ಅಗೆದಷ್ಟೂ, ಬಗೆದಷ್ಟೂ ವಿದ್ವಾಂಸರಿಗೆ-ಅಧ್ಯಯನಿಗಳಿಗೆ ಹೊಸ ಹೊಸ ಮೂಲ ಸಾಮಾಗ್ರಿಯನ್ನು ಒದಗಿಸುತ್ತಿರುವ ಮಹತ್ವದ ಐತಿಹಾಸಿಕ ನೆಲೆಯಾಗಿದೆ.

ವಿಜಯನಗರ ಸಾಮ್ರಾಜ್ಯದ ಬಗೆಗಿನ ಅಧ್ಯಯನ ಪ್ರಾರಂಭವಾಗಿ ಶತಮಾನ ಕಳೆದಿದ್ದರೂ, ಅದು ಇಂದಿಗೂ ಪ್ರಸ್ತುತವಾಗಿದ್ದು, ಹೊಸ ಹೊಸ ವಿಷಯಗಳನ್ನು ಹೊರಹಾಕುತ್ತಿರುವ ಅಕ್ಷಯ ಪಾತ್ರೆಯಾಗಿದೆಯೆಂದರೆ ತಪ್ಪಾಗಲಾರದು. ಕರ್ನಾಟಕ ಬಳ್ಳಾರಿ ಜಿಲ್ಲೆಯ ಇಂದಿನ ಹಂಪೆ ಅಂದಿನ ವಿದ್ಯಾನಗರ ಅಥವಾ ವಿಜಯನಗರ. 1565ರಲ್ಲಿ ಪತನವಾದ ಈ ಸಾಮ್ರಾಜ್ಯದ ಸ್ಮಾರಕಗಳ ಸಂರಕ್ಷಣೆಗಾಗಿ ಕರ್ನಾಟಕ ಸರ್ಕಾರ ಕೈಗೊಂಡ ಕಾರ್ಯಕ್ರಮಗಳು ಮತ್ತು ಪ್ರಕಟಿಸಿರುವ ಅಧ್ಯಯನದ ಹೊತ್ತಿಗೆಗಳನ್ನು ದಕ್ಷಿಣ ಭಾರತದ ಮತ್ತಾವ ಸಂಸ್ಥೆಯಾಗಲೀ, ರಾಜ್ಯ ಸರ್ಕಾರವಾಗಲೀ ಹೊರ ತಂದಿಲ್ಲ. ವಿಜಯನಗರ ಅಧ್ಯಯನ ಮಾಲಿಕೆಯಲ್ಲಿ 15 ಗ್ರಂಥಗಳು: 'ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್' ಮಾಲಿಕೆಯಲ್ಲಿ ಐದು ಗ್ರಂಥಗಳು; ಹಂಪಿ ಶಾಸನಗಳು, ಬಳ್ಳಾರಿ ಜಿಲ್ಲೆಯ ಶಾಸನಗಳು, ಕೊಪ್ಪಳ ಜಿಲ್ಲೆಯ ಶಾಸನಗಳು. ವಿಜಯನಗರ ಶಾಸನ ಸಂಪುಟಗಳು ಅಲ್ಲದೆ ದೇವಾಲಯಗಳು ಮತ್ತು ವಾಸ್ತು ಅಧ್ಯಯನದ ಬಗ್ಗೆ ಅನೇಕ ಗ್ರಂಥಗಳು ಈಗಾಗಲೇ ಪ್ರಕಟವಾಗಿದ್ದರೂ, ಅಧ್ಯಯನಾಕಾಂಕ್ಷಿಗಳಿಗೆ ಹೊಸ ಹೊಸ ವಿಷಯಗಳನ್ನು ಒದಗಿಸುತ್ತಿರುವ ಅಕ್ಷಯ ಪಾತ್ರೆ ಹಂಪೆ ಅಥವಾ ವಿಜಯನಗರ.

ಈ ಬಗೆಯ ಅಧ್ಯಯನ ಮತ್ತಷ್ಟು ಆಸಕ್ತಿಯಿಂದ ನಡೆದು ವಿಜಯನಗರ ಸಾಮ್ರಾಜ್ಯದ ಕುರಿತಾದ ಅಧ್ಯಯನ ಈ ಹಿಂದಿನಂತೆ ವಿಶ್ವದಾದ್ಯಂತ ಹೆಗ್ಗಳಿಕೆಗೆ ಪಾತ್ರವಾಗಲೆಂದು ಆಶಿಸುತ್ತೇನೆ. ವಿಜಯನಗರ ಅಧ್ಯಯನ ಮಾಲಿಕೆಯ 16ನೇಯ ಸಂಪುಟ ಸಂಗ್ರಹ ಯೋಗ್ಯವಾಗಿದ್ದು, ಇದನ್ನು ಕರ್ನಾಟಕದ ಜನತೆ ತೆರೆದ ಮನಸ್ಸಿನಿಂದ ಸ್ವಾಗತಿಸುವರೆಂದು ಭಾವಿಸುತ್ತೇನೆ.

(ಗೋವಿಂದ ಎಂ. ಕಾರಜೋಳ)
ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು
ಹಾಗೂ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರು

ಬಸವರಾಜು ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ಕರ್ನಾಟಕ ಸರ್ಕಾರ

ಕೊಠಡಿ ಸಂಖ್ಯೆ #2, ನೆಲ ಮಹಡಿ
ವಿಕಾಸ ಸೌಧ, ಬೆಂಗಳೂರು–560 001
ಕರ್ನಾಟಕ, ಭಾರತ
ದೂರವಾಣಿ: 080–22205781, 22034002
ಫ್ಯಾಕ್ಸ್ : 080–22353105
ಇ–ಮೇಲ್ : secy_kc@karnataka.gov.in

ಮುನ್ನುಡಿ

ವಿಜಯನಗರ ಸಾಮ್ರಾಜ್ಯ ಕುರಿತಾದ ಹಿಂದಿನ ಅಧ್ಯಯನಗಳಿಂದ ಬೃಹತ್ ಸಂಪುಟಗಳು ಲಭ್ಯವಾಗಿದ್ದರೂ ಅದರ ಬಗ್ಗೆ ಹೆಚ್ಚುತ್ತಿರುವ ಅಧ್ಯಯನಾಸಕ್ತಿ ಹಾಗೂ ವಿದ್ವಾಂಸರನ್ನು ಆಕರ್ಷಿಸುತ್ತಿರುವುದನ್ನು ನೋಡಿದರೆ ವಿಸ್ಮಯವಾಗುತ್ತದೆ. ವಿಜಯನಗರ ಅಧ್ಯಯನ ಮಾಲಿಕೆಯ ಈ ವರ್ಷದ ಸಂಚಿಕೆ ಬಹಳ ಮಹತ್ವದ ಸಂಚಿಕೆಯಾಗಿದೆ. ಈ ಕೃತಿಯು ವಿನ್ಯಾಸದಲ್ಲಿ, ವಸ್ತುವಿನ ಹರವಿನಲ್ಲಿ ಮತ್ತು ಅದರಲ್ಲಿ ಅಡಕವಾಗಿರುವ ವಿಷಯದಲ್ಲಿಯೂ ವರ್ಷ ಕಳೆದಂತೆ ಸಧೃಡವಾಗುತ್ತಾ ನಡೆದಿರುವುದು ಕಂಡು ಬರುತ್ತದೆ.

ವಿಜಯನಗರ ಅಧ್ಯಯನ ಮಾಲಿಕೆಗೆ ಪ್ರಬಂಧಗಳನ್ನು ಮಂಡಿಸಲು ವಿಜಯನಗರ ಸಾಮ್ರಾಜ್ಯದ ಬಗೆಗೆ ಹೊಸ ಹೊಸ ವಿಷಯಗಳನ್ನು ಹೆಕ್ಕಿ ತೆಗೆಯುತ್ತಿರುವ ವಿದ್ವಾಂಸರ ಪಾತ್ರ ಹಿರಿದಾದುದು. ಇದಕ್ಕೆ ಈ ಮಾಲಿಕೆಯ ಪ್ರಸ್ತುತ ಸಂಪುಟವೇ ಸಾಕ್ಷಿ. ವಿಜಯನಗರ ಕುರಿತಾದ ಅಧ್ಯಯನಗಳು ಇನ್ನೂ ಮುಂದುವರಿಯಬೇಕಾಗಿರುವುದನ್ನು ಈ ಅಧ್ಯಯನಗಳು ಮತ್ತೆ ಮತ್ತೆ ಸಾದರಪಡಿಸುತ್ತಿವೆ. ಇವೆಲ್ಲವನ್ನು ಗಮನಿಸಿದಾಗ, ಈ ಮಾಲಿಕೆ ಪ್ರಾಯಶಃ ಮುಂದಿನ ಹಲವಾರು ವರ್ಷಗಳು ಯಶಸ್ವಿಯಾಗಿ ಸಾಗುತ್ತ ತನ್ನ ಬೆಳ್ಳಿಹಬ್ಬ, ಸ್ವರ್ಣ ಮಹೋತ್ಸವಗಳನ್ನು ದಾಟಿ ಮುಂದೆ ಸಾಗುತ್ತದೆ ಎಂದು ಭಾವಿಸಬಹುದಾಗಿದೆ. ಹಾಗಾಗಿ, ಪ್ರಸ್ತುತ ಮಾಲಿಕೆಯ ಈ ಸಂಪುಟದಲ್ಲಿ ಅಡಕವಾಗಿರುವ ಲೇಖನಗಳು ವಿದ್ವತ್ ಪೂರ್ಣವಾಗಿದ್ದು ವಿಜಯನಗರ ಸಾಮ್ರಾಜ್ಯದ ಇತಿಹಾಸಕ್ಕೆ ಮತ್ತಷ್ಟು ವಿಷಯಗಳ ಸೇರ್ಪಡೆಯನ್ನು ಸೂಚಿಸುತ್ತವೆ. ಇವೆಲ್ಲವೂ ಸಂಗ್ರಹಯೋಗ್ಯವಾಗಿವೆ ಅಲ್ಲದೆ ಅಧ್ಯಯನ ಮಾಡಬೇಕಾದವುಗಳಾಗಿವೆ. ಈ ಮಾಲಿಕೆಯನ್ನು ಮುನ್ನಡೆಸಿಕೊಂಡು ಬರುತ್ತಿರುವ ಇಲಾಖೆಯ ಪ್ರಯತ್ನ ಸಹ ಪ್ರಶಂಸಾರ್ಹವಾಗಿದೆ.

ಕೇವಲ ರಾಜಕೀಯ ಇತಿಹಾಸಕ್ಕೆ ಪ್ರಾಮುಖ್ಯ ನೀಡದೆ, ಆರ್ಥಿಕ ಪರಿಸ್ಥಿತಿ ಮುಂತಾದ ಎಲ್ಲಾ ಸಾಂಸ್ಕೃತಿಕ ವಿಷಯಗಳಿಗೂ ಪ್ರಾತಿನಿಧ್ಯ ನೀಡಿ ವಿದ್ವಾಂಸರು ನಮ್ಮ ಮುಂದೆ ಪ್ರಸ್ತುತ ಪಡಿಸಿದ್ದಾರೆ. ಕರ್ನಾಟಕ ಸಂಸ್ಕೃತಿಯಲ್ಲಿ ಆಸಕ್ತಿ ವಹಿಸಿ, ಇದರ ವಿಷಯವಾಗಿ ಸಂಶೋಧನೆ ನಡೆಸುತ್ತಿರುವ ಈ ಎಲ್ಲ ವಿದ್ವಾಂಸರೂ ಅಭಿನಂದನಾರ್ಹರು.

ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ನಿರ್ದೇಶಕರಾದ ಡಾ. ಆರ್. ಗೋಪಾಲ್ ಅವರು ಈ ಎಲ್ಲಾ ಪ್ರಬಂಧಗಳನ್ನು ಸಂಪಾದಿಸಿ ಸುಂದರವಾಗಿ ಪ್ರಕಟಿಸಿದ್ದಾರೆ. ಅವರಿಗೆ ಸಹಕರಿಸುತ್ತಿರುವ ಎಲ್ಲಾ ಅಧಿಕಾರಿ ವರ್ಗದವರೂ ಹಾಗೂ ಇತರ ಸಿಬ್ಬಂದಿ ವರ್ಗದವರೂ ಅಭಿನಂದಾರ್ಹರು. ವಿಜಯನಗರವನ್ನು ಕುರಿತಾದ ವಿಚಾರ ಸಂಕಿರಣ ಹಾಗೂ ವಿಜಯನಗರ ಅಧ್ಯಯನ ಮಾಲಿಕೆ, ಇದೇ ರೀತಿ ಮುಂದುವರೆದುಕೊಂಡು ಹೋಗಲಿ ಎಂದು ನಾನು ಹಾರೈಸುತ್ತಾನೆ. ಪ್ರಸ್ತುತ ಸಂಪುಟನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾನು ಆಶಿಸುತ್ತೇನೆ.

(ಬಸವರಾಜು)
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

ಪ್ರಸ್ತಾವನೆ

ಹಂಪಿಯ ಸ್ಮಾರಕಗಳ ಪುನರುತ್ಥಾನ ಯೋಜನೆಯು ೧೯೭೫ರಲ್ಲಿ ಪ್ರಾರಂಭವಾಯಿತು. ಈ ಯೋಜನೆಯಿಂದಾಗಿ ಹಂಪೆಯ ಬಹುತೇಕ ಸ್ಮಾರಕಗಳು ತಮ್ಮ ನಿರ್ಮಾಣ ಅವಧಿಯ ಮೂಲ ಸ್ಥಿತಿಯನ್ನು ತಲುಪಿದ್ದಲ್ಲದೆ ಪ್ರವಾಸಿಗರನ್ನು ಆಕರ್ಷಿಸಲಾರಂಭಿಸಿದವು. ಈ ಯೋಜನೆಯಿಂದ ಪ್ರೇರಿತವಾಗಿ ವಿಜಯನಗರ ಸಾಮ್ರಾಜ್ಯದ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಪರಂಪರೆಯನ್ನು ಪ್ರತಿಬಿಂಬಿಸುವ ಸಲುವಾಗಿ ೧೯೮೭ರಲ್ಲಿ ಕರ್ನಾಟಕ ಸರ್ಕಾರ ಹಂಪೆಯಲ್ಲಿ 'ಹಂಪೆ ಉತ್ಸವ'ವನ್ನು ಆಚರಿಸಲಾರಂಭಿಸಿತು. ಈ ಉತ್ಸವ ಕಾಲಕಳೆದಂತೆ ದೇಶಾದ್ಯಂತ ಹೆಸರು ಮಾಡಿತು. ಈ ಉತ್ಸವದ ಅಂಗವಾಗಿ ಸಂಶೋಧನೆಯ ಕ್ಷೇತ್ರದಲ್ಲಿನ ಇತ್ತೀಚಿನ ಬೆಳವಣಿಗೆಯನ್ನು ಜನತೆಗೆ ತಿಳಿಸುವ ಉದ್ದೇಶದಿಂದ ವಿಜಯನಗರ ಅಧ್ಯಯನ ಮಾಲಿಕೆಯ ರಾಜ್ಯಮಟ್ಟದ ವಿಚಾರ ಸಂಕಿರಣದ ಆಯೋಜನೆಯನ್ನು ಸಹ ಮೊದಲು ಮಾಡಿತು. ಸರ್ಕಾರದ ಆದೇಶದಂತೆ ೧೯೯೫ರಲ್ಲಿ ಕರ್ನಾಟಕ ರಾಜ್ಯ ಪುರಾತತ್ವ ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ವಿಜಯನಗರ ಅಧ್ಯಯನ ಮಾಲಿಕೆಯ ವಿಚಾರ ಸಂಕಿರಣವನ್ನು ಆಯೋಜಿಸುವ ಜವಾಬ್ದಾರಿಯನ್ನು ವಹಿಸಿಕೊಂಡು ಅಂದಿನಿಂದ ಇಂದಿನವರೆಗೆ ಸತತವಾಗಿ ಈ ಮಾಲಿಕೆಯ ವಿಚಾರ ಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳನ್ನು ವಿಚಾರ ಸಂಕಿರಣದ ಮಾಲಿಕೆಯ ಹೆಸರಿನಿಂದಲೇ ಗ್ರಂಥರೂಪದಲ್ಲಿ ಹೊರತರುತ್ತಿದೆ.

ವಿಜಯನಗರ ಸಾಮ್ರಾಜ್ಯದ ಬಗೆಗಿನ ಅಧ್ಯಯನ ಪ್ರಾರಂಬವಾಗಿ ನೂರಾರು ವರ್ಷಗಳು ಸಂದಿದ್ದರೂ, ವಿಜಯನಗರ ಸಾಮ್ರಾಜ್ಯ ಕುರಿತಾಗಿ ಇಂದಿಗೂ ಹೊಸ ಹೊಸ ಆವಿಷ್ಕಾರಗಳು ನಡೆಯುತ್ತಲಿವೆ ಮತ್ತು ಪ್ರಕಟವಾಗುತ್ತಿವೆ. ರಾಜ್ಯ ಪುರಾತತ್ವ ಇಲಾಖೆಯು ವಿಜಯನಗರ ಅಧ್ಯಯನ ಕುರಿತಾದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಮೊದಲ ಬಾರಿಗೆ ೧೯೯೫ರಲ್ಲಿ ಪ್ರಾರಂಭಿಸಿತು. ಅಂದಿನಿಂದ ಆರಂಭಿಸಿ ಇಂದಿನವರೆಗೆ ಹದಿನಾರು ಸಂವತ್ಸರಗಳನ್ನು ದಾಟಿ ಇಂದಿಗೂ ಅದೇ ಉತ್ಸಾಹದಿಂದ ಹಲವಾರು ಬಗೆಯ ಹೊಸ ಆಯಾಮಗಳನ್ನು ಮಾಲಿಕೆಯು ಮೈಗೂಡಿಸಿಕೊಂಡು ಮುಂದುವರಿದುಕೊಂಡು ಬಂದಿದೆ. ಪ್ರಾರಂಭದ ದಿನಗಳಲ್ಲಿ ಈ ಮಾಲಿಕೆಯ ಗ್ರಂಥಗಳು ಡೆಮಿ ೧/೪ ಅಳತೆಯಲ್ಲಿ ಮುದ್ರಣವಾಗುತ್ತಿತ್ತು. ಆನಂತರ ಓದುಗನ ಬಳಕೆ ಮತ್ತು ಗ್ರಂಥ ಸಂರಕ್ಷಣೆಯನ್ನು ಗಮನದಲ್ಲಿರಿಸಿಕೊಂಡು ಗ್ರಂಥದ ಆಕಾರವನ್ನು ಏಳನೆಯ ಸಂಪುಟದಿಂದ ಡೆಮಿ ೧/೮ ಆಕಾರಕ್ಕೆ ಪರಿವರ್ತಿಸಿ ಮುದ್ರಿಸಲಾರಂಭಿಸಲಾಯಿತು. ಇಂದಿನವರೆಗೆ ಅದೇ ಆಕಾರದಲ್ಲಿ ಮಾಲಿಕೆಯ ಗ್ರಂಥಗಳು ಹೊರಬಂದಿವೆ.

ಈ ಮಾಲಿಕೆಗೆ ಹದಿನಾರು ಸಂವತ್ಸರಗಳು ತುಂಬಿದ ಹಾಗೂ ಬದಲಾವಣೆಯ ಹಿನ್ನೆಲೆಯಲ್ಲಿ ಸಂಚಿಕೆಯಲ್ಲಿ ಅಡಕ ಮಾಡಿದ ವಿಷಯಗಳು, ಅವುಗಳ ವಿಷಯಾನುಕ್ರಮಣಿಕೆ, ಲೇಖನಗಳ ಸಂಯೋಜನೆ, ಪುಸ್ತಕದ ಆಕಾರದಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ಮಾಡಲಾಗಿದೆ. ಗ್ರಂಥದ ಆಕಾರವನ್ನು ಸಹಬದಲಿಸಿ, ಕ್ರೌನ್ ೧/೪ ಅಳತೆಯಲ್ಲಿ ನೂತನ ವಿನ್ಯಾಸದೊಂದಿಗೆ ಹೊರತರಲಾಗುತ್ತಿದೆ ಅಲ್ಲದೆ ಉದ್ಘಾಟನಾ ಭಾಷಣ ಮತ್ತು ಅಧ್ಯಕ್ಷೀಯ ಭಾಷಣಕ್ಕೆ ಪ್ರಾಮುಖ್ಯತೆ ನೀಡಿ ಅದನ್ನು ಸಂಶೋಧನಾ ಲೇಖನಗಳಿಗೆ ಮಾರ್ಗಸೂಚಿ ಮತ್ತು ಆಶಯ ಲೇಖನಗಳಾಗಿ ಪ್ರಾರಂಭದಲ್ಲಿ ಬಳಸಲಾಗಿದೆ.

'ವಿಜಯನಗರ ಅಧ್ಯಯನ' ಮಾಲಿಕೆಯ ಹಳೆಯ ಸಂಪುಟಗಳನ್ನು ಒಮ್ಮೆ ತಿರುವುಹಾಕಿದರೆ ಅದರಲ್ಲಿ ಅಡಕವಾಗಿರುವ ವಿಷಯಗಳು, ಲೇಖನಗಳು ವಿಜಯನಗರ ಅಧ್ಯಯನ ಮಾಲಿಕೆಯ ಮಹತ್ವವನ್ನು ಸಾರುತ್ತವೆ. ಬರೆದಷ್ಟು, ಸಂಶೋಧಿಸಿದಷ್ಟು ಅಧ್ಯಯನದ ಮಹತ್ವ ದಿನೇ ದಿನೇ ವರ್ಷೇ-ವರ್ಷೇ ಬೆಳೆಯುತ್ತಿದೆ. ಈ ವರ್ಷ ಸಹ ಐವತ್ತಕ್ಕೂ ಮಿಕ್ಕ ಲೇಖನಗಳು ಈ ಸಂಪುಟದಲ್ಲಿ ಅಡಕವಾಗಿವೆ. ವಿಷಯಾಧಾರಿತವಾಗಿ ಹೇಳುವುದಾದರೆ, ಹೊಸ ಶಾಸನಗಳು, ಇವುಗಳ ಸಾಂಸ್ಕೃತಿಕ ಅಧ್ಯಯನ, ಆಡಳಿತದ ವಿಷಯಗಳು, ಸಾಹಿತ್ಯ, ಮುಂತಾದ

ವಿಷಯಗಳನ್ನು ಕುರಿತು ವಿಜಯನಗರ ಸಾಮ್ರಾಜ್ಯದ ಮಹತ್ವವನ್ನು ಸಾರುವ ಲೇಖನಗಳು ಅಡಕವಾಗಿವೆ. ಈ ಮಾಲಿಕೆಯನ್ನು ಮುನ್ನಡೆಸುತ್ತಿರುವ ಕರ್ನಾಟಕದ ವಿದ್ವಾಂಸರ ಕೊಡುಗೆ ಈ ನಿಟ್ಟಿನಲ್ಲಿ ಮಹತ್ತರವಾದುದು. ಈ ಮಾಲಿಕೆ ಇಂದು ಸಂಶೋಧಕರ ಕೈಪಿಡಿಯಾಗಿ, ಮಹತ್ವದ ಸಂಶೋಧನಾ ಪ್ರಕಟಣೆಯಾಗಿ ಗುರುತಿಸಿಕೊಂಡಿದೆ. ಇದು ಇಲಾಖೆಯ ಮತ್ತು ಈ ಮಾಲಿಕೆಗೆ ಪ್ರಬಂಧಗಳನ್ನು ನೀಡುವವರ ಜವಾಬ್ದಾರಿಯನ್ನು ಇಮ್ಮಡಿಗೊಳಿಸಿದೆ.

ವಿಚಾರ ಸಂಕಿರಣದ ಉದ್ಘಾಟನೆಯನ್ನು ನೆರವೇರಿಸಿಕೊಟ್ಟು ನಮ್ಮನ್ನು ಹುರಿದುಂಬಿಸಿ, ಕಾರ್ಯಪ್ರವೃತ್ತರಾಗುವಂತೆ ಮಾಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಮಾನ್ಯ ಶ್ರೀ. ಗೋವಿಂದ ಎಂ. ಕಾರಜೋಳರವರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ. ವಿಚಾರ ಸಂಕಿರಣದ ಉದ್ಘಾಟನೆಯಲ್ಲಿ ಪಾಲ್ಗೊಂಡಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್‌ರವರು ನಮ್ಮ ಹಿತೈಷಿಗಳು ಅವರನ್ನೂ ಸಹ ಈ ಸಂದರ್ಭದಲ್ಲಿ ವಿಶ್ವಾಸ ಪೂರ್ವಕವಾಗಿ ನೆನೆಯುತ್ತೇನೆ.

ಹೊಸಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಮಾನ್ಯ ಶ್ರೀ ಆನಂದಸಿಂಗ್‌ರವರು ಅಂದಿನ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ, ಕಾರ್ಯಕ್ರಮಕ್ಕೆ ಶುಭಹಾರೈಸಿ ನಮ್ಮನ್ನು ಹುರಿದುಂಬಿಸಿರುತ್ತಾರೆ. ಮಾನ್ಯ ಶ್ರೀ ಆನಂದ ಸಿಂಗ್‌ರವರನ್ನು ಸಹ ಕೃತಜ್ಞತಾ ಪೂರ್ವಕವಾಗಿ ಸ್ಮರಿಸುತ್ತೇನೆ.

ಈ ಗ್ರಂಥವನ್ನು ಹೊರತರಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಾರ್ತಾ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಬಸವರಾಜು, ಐ.ಎ.ಎಸ್., ರವರು ಪ್ರೋತ್ಸಾಹಿಸಿರುತ್ತಾರೆ. ಅವರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಡಾ. ಎಚ್. ಎಸ್. ಗೋಪಾಲರಾವ್, ಖ್ಯಾತ ಶಾಸನತಜ್ಞರು, ಬೆಂಗಳೂರು ಇವರು ಸಮ್ಮೇಳನದ ಅಧ್ಯಕ್ಷರಾಗಿ ನಮಗೆ ಮಾರ್ಗದರ್ಶನ ನೀಡಿದುದಲ್ಲದೆ, ಸಮ್ಮೇಳನ ಯಶಸ್ವಿಯಾಗಲು ಸಹಕರಿಸಿರುತ್ತಾರೆ. ಅವರಿಗೆ ಸಹ ಈ ಸಂದರ್ಭದಲ್ಲಿ ಮನಸಾರೆ ವಂದನೆಗಳನ್ನು ಸಲ್ಲಿಸುತ್ತೇನೆ.

ವಿಚಾರ ಸಂಕಿರಣದ ಆಯೋಜನೆಯಲ್ಲಿ ಮತ್ತು ಗ್ರಂಥದ ಮುದ್ರಣಕಾರ್ಯದ ಎಲ್ಲಾ ಹಂತಗಳಲ್ಲಿ ನಮ್ಮೊಂದಿಗೆ ಸಹಕರಿಸಿದ ಇಲಾಖೆಯ ಎಲ್ಲಾ ಸಿಬ್ಬಂದಿಯನ್ನು ವಿಶೇಷವಾಗಿ ಸಹಾಯಕ ನಿರ್ದೇಶಕರಾದ ಶ್ರೀ. ಗಂಗಾಧರ್‌ರವರ ಸಹಕಾರವನ್ನು ಈ ಸಂದರ್ಭದಲ್ಲಿ ಕೃತಜ್ಞತಾ ಪೂರ್ವಕವಾಗಿ ಸ್ಮರಿಸುತ್ತೇನೆ ಹಾಗೂ ಇಲಾಖೆಯಲ್ಲಿ ವಿಶೇಷಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಲ. ನ. ಸ್ವಾಮಿಯವರು ಸಹಕರಿಸಿರುತ್ತಾರೆ. ಅವರ ಪರಿಶ್ರಮ ಅಭಿನಂದನೀಯ.

ಪುಸ್ತಕದ ಕರಡು ತಿದ್ದುವಲ್ಲಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಭಾಷಾಂತರಕಾರರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿರುವ ಶ್ರೀಯುತ ಎನ್. ಎಸ್. ಶಾರದಾ ಪ್ರಸಾದ್‌ರವರು ಸಹಕರಿಸಿರುತ್ತಾರೆ. ಇವರಿಗೂ ಇಲಾಖೆಯು ಆಭಾರಿಯಾಗಿದೆ. ಮುದ್ರಣಕಾರ್ಯವನ್ನು ಕೈಗೊಂಡು ಅಚ್ಚುಕಟ್ಟಾಗಿ ಮುದ್ರಿಸಿರುವ ಶ್ರೀ ಸದ್ಗುರು ಪ್ರಿಂಟರ್ಸ್‌ನ ಶ್ರೀ ರಾಘವೇಂದ್ರ ಹಾಗೂ ಅವರ ಸಿಬ್ಬಂದಿಗೆ ಮತ್ತು ಮುಖಪುಟವನ್ನು ವಿನ್ಯಾಸಮಾಡಿಕೊಟ್ಟ ಸುಹಾಸ ಗ್ರಾಫಿಕ್ಸ್‌ನ ಶ್ರೀ ಮುರಳೀಧರ್‌ರವರಿಗೂ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಈ ಗ್ರಂಥವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ಆಶಿಸುತ್ತೇನೆ.

(ಆರ್. ಗೋಪಾಲ್)
ನಿರ್ದೇಶಕರು

ಪರಿವಿಡಿ

ಅಧ್ಯಕ್ಷ ಭಾಷಣ

ಡಾ. ಎಚ್. ಎಸ್. ಗೋಪಾಲರಾವ್, ಬೆಂಗಳೂರು

ಹಂಪಿ ಉತ್ಸವದ ಸಂದರ್ಭದಲ್ಲಿ, ಕರ್ನಾಟಕ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ಏರ್ಪಡಿಸಿರುವ ವಿಜಯನಗರ ಅಧ್ಯಯನ ಕುರಿತ 16ನೆಯ ವಿಚಾರ ಸಂಕಿರಣವನ್ನು ಉದ್ಘಾಟಿಸಿದ ಕರ್ನಾಟಕ ಸರ್ಕಾರದ ಸಣ್ಣ ನೀರಾವರಿ, ಜವಳಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಚಿವರಾದ ಸನ್ಮಾನ್ಯ ಶ್ರೀ ಗೋವಿಂದ ಎಂ.ಕಾರಜೋಳ ಅವರೇ, ಸಭೆಯ ಅಧ್ಯಕ್ಷತೆ ವಹಿಸಿರುವ ಹೊಸಪೇಟೆ ವಿಧಾನಸಭಾ ಕ್ಷೇತ್ರದ ಸದಸ್ಯರಾದ ಶ್ರೀ ಆನಂದ ಸಿಂಗ್ ಅವರೇ, ವಿಜಯನಗರ ಅಧ್ಯಯನ 15ನೆಯ ಸಂಪುಟವನ್ನು ಬಿಡುಗಡೆ ಮಾಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರೇ, ಕರ್ನಾಟಕ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶಕರಾದ ಡಾ. ಆರ್. ಗೋಪಾಲ್ ಅವರೇ, ವೇದಿಕೆಯ ಮೇಲಿರುವ ಇತರ ಗಣ್ಯರೇ, ವೇದಿಕೆಯ ಮುಂದಿರುವ ಹಿರಿಯ ಮತ್ತು ಕಿರಿಯ ವಿದ್ವಾಂಸ ಬಂಧುಗಳೇ, ವೃತ್ತಿಪರ ಇತಿಹಾಸಕಾರನಲ್ಲದ ನನಗೆ ನೀವು ನೀಡಿರುವ ಗೌರವಕ್ಕಾಗಿ ನಿಮಗೆಲ್ಲಾ ವಂದಿಸುವುದು ನನ್ನ ಆದ್ಯ ಕರ್ತವ್ಯವಾಗಿದೆ. ವೃತ್ತಿಯಿಂದ ಸಂಸ್ಕೃತಿಯ ವಿದ್ಯಾರ್ಥಿ ಎಂದು ಹೇಳಿಕೊಳ್ಳಲು ಹೆಮ್ಮೆಪಡುತ್ತೇನೆ.

ವಿಜಯನಗರ ಸಾಮ್ರಾಜ್ಯದ ಬಗ್ಗೆ ತಿಳಿಯದ ಇತಿಹಾಸದ ವಿದ್ಯಾರ್ಥಿ ಇಲ್ಲ. ವೈಭವಕ್ಕೆ ಮತ್ತೊಂದು ಹೆಸರೇ ವಿಜಯನಗರ ಎಂಬ ನಂಬಿಕೆ ನಮ್ಮದು. ಇದು ಎಷ್ಟರಮಟ್ಟಿಗೆ ಸತ್ಯ ಎಂದು ಪರಿಶೀಲಿಸುವ ಸಾಹಸಕ್ಕೂ ನಾವು ಕೈಹಾಕುತ್ತಿಲ್ಲ. ಇತಿಹಾಸವು ಸತ್ಯದ ಕಡೆಗಷ್ಟೇ ಮುಖ ಮಾಡಬೇಕು ಎಂಬ ನಿರೀಕ್ಷೆ ಸ್ವಾಭಾವಿಕ. ನ್ಯಾಯಾಲಯದಲ್ಲಿ ಸಾಕ್ಷಿದಾರನಿಂದ 'ನಾನು ಸತ್ಯವನ್ನೇ ಹೇಳುತ್ತೇನೆ. ಸತ್ಯವನ್ನು ಬಿಟ್ಟು ಬೇರೇನನ್ನೂ ಹೇಳುವುದಿಲ್ಲ. ನಾನು ಹೇಳುವುದೆಲ್ಲ ಸತ್ಯ' ಎಂದು ಪ್ರಮಾಣ ಮಾಡಿಸುತ್ತಾರೆ. ಅಂತಹುದೇ ಪ್ರಮಾಣವನ್ನು ನಿಜವಾದ ಇತಿಹಾಸಕಾರ ಮೌನವಾಗಿ ಸ್ವಗತದಲ್ಲೇ ಮಾಡಿರುತ್ತಾನೆ. ತನ್ನ ಅರಿವಿಗೆ ಬಂದ ಎಲ್ಲ ವಿಷಯಗಳನ್ನು ಒರೆ ಹಚ್ಚಿ ನೋಡುವ ಕೆಲಸವನ್ನು ಇತಿಹಾಸಕಾರ ಮಾಡುತ್ತಲೇ ಇರುತ್ತಾನೆ. ಹಿಂದಿನ ಕೆಲವು ಹಿರಿಯ ವಿದ್ವಾಂಸರ ಅಭಿಪ್ರಾಯದಂತೆ ವೈಜ್ಞಾನಿಕ ಮತ್ತು ತಾರ್ಕಿಕ ವಿಧಾನಗಳಿಂದ ವಿಜಯನಗರ ಇತಿಹಾಸವನ್ನು ಪುನರ್ವಿಮರ್ಶೆ ಮಾಡುವ ಆವಶ್ಯಕತೆ ಈಗ ಹೆಚ್ಚಿದೆ. ಈವರೆಗೆ ಆಗಿರುವ ಅಧ್ಯಯನವು ರಾಜಕೀಯ ಇತಿಹಾಸದ ಬಗ್ಗೆ ಹೆಚ್ಚಿನ ಬೆಳಕು ಚೆಲ್ಲಿದೆ ಮತ್ತು ಒಂದು ಹಂತಕ್ಕೆ ಸಾಮಾನ್ಯವಾಗಿ ಒಪ್ಪಬಹುದು ಎಂಬ ಇತಿಹಾಸ ನಮ್ಮ ಕಣ್ಣ ಮುಂದಿದೆ. ಸಂಗಮ ವಂಶದಿಂದ ಆರಂಭಿಸಿ ಅರವೀಡು ವಂಶದವರೆಗೂ ಆಳಿರುವ ಪ್ರತಿಯೊಬ್ಬ ರಾಜರ ಬಗೆಗೂ ಸ್ಥೂಲವಾಗಿ ತಿಳಿಯಲಾಗಿದೆ. ಇನ್ನು ಹೆಚ್ಚಿನ ವಿಷಯಗಳು ದೊರೆತಾಗ ಅವುಗಳನ್ನು ಸೇರಿಸಿಕೊಂಡು ಇತಿಹಾಸದ ಪುನಾರಚನೆಗೆ ಅವಕಾಶ ಮಾಡಿಕೊಳ್ಳಬಹುದು. ವಾಸ್ತು ಮತ್ತು ಮೂರ್ತಿ ಶಿಲ್ಪದ ಬಗೆಗೂ ಹೆಚ್ಚಿನ ಸಂಶೋಧನೆ ಆಗಿದೆ. ಈವರೆಗಿನ ಅಧ್ಯಯನ ಸಮಗ್ರ ಮತ್ತು ಸಂಪೂರ್ಣ ಎಂದು ಭಾವಿಸುವ ಪರಿಸ್ಥಿತಿ ಇಲ್ಲ. ಇನ್ನೂ ಆಗಲೇಬೇಕಾದ ಹೆಚ್ಚಿನ ಕೆಲಸಗಳು ಇವೆ.

ಒಂದು ಕಾಲಕ್ಕೆ ವಿಜಯನಗರ ಇತಿಹಾಸದ ಅಧ್ಯಯನಕ್ಕೆ ರಾಬರ್ಟ್ ಸ್ಯುವೆಲ್‌ನ The Forgotten Empire ಪ್ರಮುಖ ಆಕರ ಗ್ರಂಥವಾಗಿತ್ತು. ಹಯವದನರಾಯರ ಮೈಸೂರು ಗೆಜೆಟಿಯರ್‌ನ ಎರಡನೆಯ ಸಂಪುಟದ ಮೂರನೆಯ ಭಾಗವು ಹೆಚ್ಚಾಗಿ ವಿಜಯನಗರ ಇತಿಹಾಸವನ್ನು ಕುರಿತಂತೆಯೇ ಇದೆ. 1936ರಲ್ಲಿ ಹಂಪಿಯಲ್ಲಿ ನಡೆದ ವಿಜಯನಗರ ಸ್ಥಾಪನೆಯ 600ನೆಯ ವರ್ಷದ ಆಚರಣೆಯ ಸಂದರ್ಭ ಪ್ರಕಟವಾದ Vijayanagar Sexth Centenary ಸಂಚಿಕೆಯು ಸಮಕಾಲೀನ ವಿದ್ವಾಂಸರ ಪ್ರೌಢಪ್ರಬಂಧಗಳನ್ನು ಒಳಗೊಂಡಿದೆ. ಆ ಕಾಲಕ್ಕೆ ಮಾತ್ರವಲ್ಲದೆ ಈಗಲೂ ಅದು ಒಂದು ಮುಖ್ಯ ಆಕರ ಗ್ರಂಥವಾಗಿದೆ. ವಿಜಯನಗರ ಇತಿಹಾಸ ಕುರಿತ ಕರ್ನಾಟಕದ ವಿದ್ವಾಂಸರು ಮಾತ್ರವಲ್ಲದೆ ದೇಶದ ಬೇರೆ ಬೇರೆ ಪ್ರಾಂತ್ಯಗಳ ವಿದ್ವಾಂಸರು, ವಿಶೇಷವಾಗಿ ಆಂಧ್ರದ ವಿದ್ವಾಂಸರು ಶೋಧ ಮತ್ತು ಪರಿಶೋಧನ ಕಾರ್ಯವನ್ನು ಮುಂದುವರಿಸಿದ್ದಾರೆ.

1976ರ ನಂತರವಂತೂ ಹಂಪಿಯಲ್ಲಿ ಸರ್ವೇಕ್ಷಣ ಮತ್ತು ಉತ್ಖನನ ಕಾರ್ಯಗಳು ನಿರಂತರವಾಗಿ ನಡೆದಿವೆ. ಮೊದಲಿಗೆ Vijayanagar Progress of Research ಎಂಬ ಶೀರ್ಷಿಕೆಯಲ್ಲಿ ವಿಜಯನಗರದಲ್ಲಿ ಆದ ಶೋಧಗಳ ವಿವರಗಳು ವರದಿಯ ರೂಪದಲ್ಲಿ ಪ್ರಕಟವಾಗುತ್ತಿದ್ದವು. ಇದು ಆಗಿನ ಮೈಸೂರು ರಾಜ್ಯದ ಪುರಾತತ್ವ ಮತ್ತು ವಸ್ತು ಸಂಗ್ರಹಾಲಯಗಳ ಇಲಾಖೆಯ ಪ್ರಕಟಣೆಯಾಗಿತ್ತು. ಈ ವರದಿಗಳ ಪ್ರಕಟಣೆಯ ಕಾರ್ಯ 1991ರ ವರೆಗೆ ಮೈಸೂರು ಸಂಸ್ಥಾನದ ಹೆಸರು ಕರ್ನಾಟಕ ಎಂದಾದ ಮೇಲೂ ಮುಂದುವರಿಯಿತು. ಈ ಪ್ರಗತಿಯ ವರದಿಗಳು ಆಯಾ ವರ್ಷಗಳಲ್ಲಿ ಶೋಧಿತವಾದ ಎಲ್ಲ ಮಹತ್ವದ ವಸ್ತು ಮತ್ತು ವಿಚಾರಗಳ ಬಗ್ಗೆಯೂ ವಿವರಗಳನ್ನು ಒದಗಿಸುತ್ತಿದ್ದವು. ಹಂಪಿಯ ಶೋಧ ಕಾರ್ಯವು ಎಂದಿಗೂ ನಿಂತ ನೀರಾಗಲೇ ಇಲ್ಲ. ಇದಕ್ಕೆ ಸಾಕ್ಷಿ ಎಂಬಂತೆ ಈಗಲೂ ಹಂಪಿಯಲ್ಲಿ ಸರ್ವೇಕ್ಷಣೆ, ಉತ್ಖನನ, ಇತ್ಯಾದಿ ಶೋಧ ಮತ್ತು ಪರಿಶೋಧನ ಕಾರ್ಯವು ನಡೆಯುತ್ತಲೇ ಇದೆ. ಇದು ಸಂಶೋಧಕರ ಪಾಲಿಗೆ ಬರಿದಾಗದ ಭಂಡಾರ. ವಿಜಯನಗರದ ನೆಲದಲ್ಲಿ ನಿಧಿಶೋಧಕರಿಗೆ ಕೆಲಸವಿಲ್ಲ; ಇಲ್ಲಿ ಕೆಲಸ ಇರುವುದು ಸಂಶೋಧಕರಿಗೆ ಮಾತ್ರ. ನಿಧಿಶೋಧಕರು ಸ್ಮಾರಕಗಳನ್ನು ಹಾಳುಮಾಡಿದರೆ, ಸಂಶೋಧಕರು ಸ್ಮಾರಕಗಳಿಗೆ ಜೀವ ತುಂಬುತ್ತಾರೆ.

1970ಕ್ಕೂ ಹಿಂದೆ ಹಂಪಿ ನಿರ್ಜನ ಎನಿಸುತ್ತಿತ್ತು. ನಡೆದು ದಣಿಯುವ ಸಂಶೋಧಕರಷ್ಟೇ ಇಲ್ಲಿ ಕಾಣುತ್ತಿದ್ದರು. ಈಗ ಪರಿಸ್ಥಿತಿ ಬದಲಾಗಿದೆ. ಈ ಬದಲಾವಣೆ ಆಗಲೇಬೇಕಾಗಿತ್ತು. ಗತಿತರ್ಕದಲ್ಲಿ ಇದು ಅನಿವಾರ್ಯ. ಮೊದಲಿನಿಂದಲೂ ಹಂಪೆ ವಿರೂಪಾಕ್ಷನ ಭಕ್ತರ ಪ್ರೀತಿಯ ತಾಣ. 1970ಕ್ಕೆ ಮೊದಲಿಗೆ ವಿಜಯನಗರ ಸಂಶೋಧಕರ ವಿನಾ ಯಾರಿಗೂ ಪ್ರೀತಿಯ ತಾಣವಾಗಿರಲಿಲ್ಲ. ಕೇವಲ ಕುತೂಹಲಿಗಳ, ಪುರಾತತ್ವಜ್ಞರ, ಇತಿಹಾಸಕಾರರ, ಭಾರತೀಯ ಸಂಸ್ಕೃತಿಯ ಬಗ್ಗೆ ಕುತೂಹಲ ಇರಿಸಿಕೊಂಡವರ ನಿಲುಗಡೆಯ ತಾಣವಾಗಿತ್ತು. ಇಲ್ಲಿ ತಾವು ಗಳಿಸಿದ ತಿಳುವಳಿಕೆಯನ್ನು ವಿಶ್ವದಾದ್ಯಂತ ಹಂಚುವ ಕೆಲಸವನ್ನು ಹಿರಿಯ ವಿದ್ವಾಂಸರು ಮಾಡಿದ್ದಾರೆ. ಅವರೆಲ್ಲರ ಶ್ರಮ ಮತ್ತು ಸಂಶೋಧನೆಗಳನ್ನು ಕೃತಜ್ಞತೆಯಿಂದ ಸ್ಮರಿಸುವುದು ನಮ್ಮ ಕರ್ತವ್ಯ. ಹಿರಿಯ ವಿದ್ವಾಂಸರ ಕೆಲಸವನ್ನು ಮುಂದುವರಿಸಿದ ಎಂ.ಎಸ್. ನಾಗರಾಜರಾವ್, ಅ.ಸುಂದರ, ಡಿ.ವಿ. ದೇವರಾಜ್. ಸಿ.ಎಸ್.ಪಾಟೀಲ್, ಬಾಲಸುಬ್ರಹ್ಮಣ್ಯ ಇವರ ಜೊತೆಗಿದ್ದ ಜಾರ್ಜ್ ಮಿಶೆಲ್, ಜಾನ್ ಫ್ರಿಜ್ ಇತ್ಯಾದಿ ವಿದ್ವಾಂಸರ ಜೊತೆಗೇ ಭಾರತೀಯ ಪುರಾತತ್ವ ಸರ್ವೇಕ್ಷಣಾಲಯದ ಅನೇಕ ಹಿರಿಯ ವಿದ್ವಾಂಸರು ಮತ್ತು ಈಗಲೂ ಶ್ರಮಿಸುತ್ತಿರುವ ಎಸ್.ವಿ. ವೆಂಕಟೇಶಯ್ಯ, ಜಿ.ಎಸ್.ನರಸಿಂಹನ್, ಟಿ.ಎಂ.ಕೇಶವ, ಎಂ.ವಿ.ವಿಶ್ವೇಶ್ವರ, ಸಿ.ಎಸ್.ಶೇಷಾದ್ರಿ ಮತ್ತು ಇತರ ಸಂಶೋಧಕಮಿತ್ರರ ಶ್ರಮ ಸಾರ್ಥಕವಾಗುತ್ತಿದೆ. ಈ ಮಿತ್ರರು ಇತ್ತೀಚೆಗೆ ಬೆಳಕಿಗೆ ತಂದ ಶೋಧವು ಯಾವುದೇ

ಇತಿಹಾಸಕಾರರ ಕುತೂಹಲವನ್ನು ಹೆಚ್ಚಿಸುವುದರಲ್ಲಿ ಮಹತ್ವ ಪಡೆದಿದೆ. ಕಡೇಬಾಗಿಲು ಗುಡ್ಡ ಮತ್ತು ಚಿಕ್ಕರಾಮಾಪುರದ ಪ್ರಾಗಿತಿಹಾಸ ನೆಲೆಗಳ ಬಗ್ಗೆ ಅತ್ಯಂತ ಮಹತ್ವದ ಮಾಹಿತಿಗಳನ್ನು ಈ ಮಿತ್ರರು ಒದಗಿಸಿದ್ದಾರೆ. ಇವರು ಕಡೇಬಾಗಿಲು ನೆಲೆಯ ಎರಡು ಗುಂಪಿನ ರೇಖಾಚಿತ್ರಗಳ ಬಗ್ಗೆ ವಿವರವಾಗಿ ಚರ್ಚಿಸಿದ್ದಾರೆ. ಇದು ಮಧ್ಯ ಪ್ರದೇಶದ ಪ್ರಸಿದ್ಧ ಪ್ರಾಗಿತಿಹಾಸ ಕಾಲದ ನೆಲೆಯಾದ ಭೀಮ್‌ಬೇಟ್ಕಾವನ್ನು ನೆನಪಿಗೆ ತರುತ್ತದೆ. ಕೈಜೋಡಿಸಿ ನರ್ತಿಸುತ್ತಿರುವ ಸ್ತ್ರೀ-ಪುರುಷರ ಜೋಡಿ, ಎಮ್ಮೆ, ಬಹುಶೃಂಗ, ಜಿಂಕೆ ಇತ್ಯಾದಿ ಕಡುಕೆಂಪು ಮತ್ತು ತಿಳಿಕೆಂಪಿನ ಬಣ್ಣದಿಂದ ಬರೆದ ವರ್ಣಚಿತ್ರಗಳಿವೆ. ಈ ವರ್ಣಚಿತ್ರಗಳ ಪೈಕಿ ದೀರ್ಘವೃತ್ತಾಕಾರದ ಒಂದು ಚಿತ್ರದ ಬಗ್ಗೆ ವಿವರಿಸುತ್ತಾ, ಕೇಶವ ಮತ್ತು ಇತರ ಗೆಳೆಯರು ಅದನ್ನು ಗೂಗಲ್ ಚಿತ್ರದಲ್ಲಿ ಕಾಣುವ ಆ ಪ್ರದೇಶದ ಚಿತ್ರದೊಂದಿಗೆ ಸಮೀಕರಿಸಿ, ಅ.ಸುಂದರ ಅವರ ಶೋಧದ ಮುಂದುವರಿಕೆಯಂತೆ ಕಾಣುವ ಈ ಮತ್ತಷ್ಟು ಶೋಧದ ವಿಶ್ಲೇಷಣೆಯು ತಮ್ಮ ನೆಲೆಯನ್ನು ಚಿತ್ರರೂಪದಲ್ಲಿ ದಾಖಲಿಸುತ್ತಿದ್ದ ಪ್ರಾಗಿತಿಹಾಸ ಕಾಲದ ಜನರ ಪ್ರಯತ್ನದಂತೆ ಕಾಣುತ್ತದೆ ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ. ಕೆಲವು ದಿನಗಳ ಹಿಂದೆ ಶಿರ್ವದ ಮಿತ್ರ ಮುರಿಗೇಶಿ ಅವರು ಆ ಭಾಗದಲ್ಲಿ ದೊರೆತ ದೇವರಾಯನ ಕಾಲದ ಶಾಸನವೊಂದರ ಬಗ್ಗೆ ವರದಿ ಮಾಡಿದ್ದಾರೆ. ಕೆಲವು ವರ್ಷಗಳ ಹಿಂದೆ ಡಿ.ವಿ. ಪರಮಶಿವಮೂರ್ತಿ ಅವರು ವಿದ್ಯಾರಣ್ಯರ ಉಲ್ಲೇಖ ಇರುವ ಒಂದನೆಯ ಹರಿಹರನ ತಾಮ್ರಶಾಸನದ ಬಗ್ಗೆ ವಿಜಯನಗರ ಅಧ್ಯಯನದ 10ನೆಯ ಸಂಪುಟದಲ್ಲೇ ದಾಖಲಿಸಿದ್ದಾರೆ. ವಿಜಯನಗರ ಅಧ್ಯಯನ ಸಂಪುಟಗಳಲ್ಲಿ ಪ್ರಕಟವಾಗಿರುವ ಶಾಸನಗಳನ್ನು ಸಂಕಲಿಸಿ ಒಂದು ಸಂಪುಟ ಸಿದ್ಧಪಡಿಸಲು ಅವಕಾಶಗಳಿವೆ. ಪ್ರತಿ ವರ್ಷವೂ ಸುಮಾರು 35 ವರ್ಷಗಳಿಂದಲೂ ವಿಜಯನಗರ ಇತಿಹಾಸ ಕುರಿತಂತೆ ಹೊಸ ವಿಚಾರಗಳು ಪ್ರಕಟವಾಗುತ್ತಲೇ ಇವೆ. ಇದರಿಂದ ವಿಜಯನಗರ ಇತಿಹಾಸದ ಬಗೆಗಿದ್ದ ಕೆಲವು ಗೊಂದಲಗಳಿಗೆ ಅಂತ್ಯ ದೊರೆಯಬಹುದು ಎಂಬ ನಿರೀಕ್ಷೆ ಇತ್ತು. ಆದರೆ ಆ ಯಾವ ಗೊಂದಲಗಳೂ ಬಗೆಹರಿದ ಸೂಚನೆಗಳಿಲ್ಲ. ಜೊತೆಗೆ ಮತ್ತಷ್ಟು ಹೊಸ ಗೊಂದಲಗಳ ಸೇರ್ಪಡೆ ಆಗಿದೆ. ದೊರೆತಿರುವ ಸಾಕ್ಷ್ಯಾಧಾರಗಳನ್ನು ಮುಕ್ತಮನಸ್ಸಿನಿಂದ ವಿಶ್ಲೇಷಿಸಿದಾಗ ಯಾವ ಗೊಂದಲವೂ ಉಳಿಯುವುದಿಲ್ಲ. ಇತಿಹಾಸದಲ್ಲಿ ಇಂತಹ ಗೊಂದಲಗಳು ಇರಬಾರದೆಂದಿಲ್ಲ. ಕಳೆದ ಕಾಲದ ವಿಷಯವಾದ್ದರಿಂದ, ಅನೇಕ ಸಾಕ್ಷ್ಯಾಧಾರಗಳು ಸುಲಭವಾಗಿ ಸಿಗದ ಕಾರಣ ಇದೇ ಐತಿಹಾಸಿಕ ಸತ್ಯ ಎಂದು ಹೇಳುವಂತಿಲ್ಲ. ಸತ್ಯಕ್ಕೆ ಸಮೀಪ ಹೋಗುತ್ತಿದ್ದೇವೆ ಎಂಬ ಪ್ರಾಮಾಣಿಕತೆಯಾದರೂ ಇದ್ದರೆ ಆಗ ಸಂಶೋಧನೆಗೆ ಮತ್ತು ಅದರ ಫಲಿತಕ್ಕೆ ಬೆಲೆ ದೊರೆತಂತೆ; ಇತಿಹಾಸದ ಅಧ್ಯಯನದಲ್ಲಿ ವೈಭವೀಕರಣ ಮತ್ತು ಪ್ರತಿಷ್ಠೆ ಪ್ರಬಲವಾದರೆ ಸತ್ಯ ಅಗೋಚರವಾಗುತ್ತದೆ. ಕೃಷ್ಣದೇವರಾಯನನ್ನು ಕರ್ನಾಟಕ ರಾಜ್ಯ ರಮಾರಮಣನೆಂದು ಕನ್ನಡಿಗರು ಆಂಧ್ರಭೋಜನೆಂದು ತೆಲುಗರು ಅಭಿಮಾನ ಪಡುವುದರಲ್ಲಿ ತಪ್ಪಿಲ್ಲ; ಆದರೆ ಅವನು ಕೇವಲ ನಮ್ಮವನೆಂದು ಹೊಗಳಿದರೆ ಹೊನ್ನಶೂಲಕ್ಕೇರಿಸಿದ ಆತಂಕವನ್ನು ಈಗ ಇಲ್ಲದ ಕೃಷ್ಣದೇವರಾಯ ಎದುರಿಸಬೇಕಾಗುತ್ತದೆ. ಅವ ನಮ್ಮವ ಎಂಬ ಹೆಮ್ಮೆಯ ಜೊತೆಗೆ ಅವ ಎಲ್ಲರವ ಎಂಬ ಭಾವವೂ ಇದ್ದಾಗ ಯಾವುದೇ ಗೊಂದಲ ಉಳಿಯುವುದಿಲ್ಲ. ಕೃಷ್ಣದೇವರಾಯ ಕರ್ನಾಟಕವನ್ನು ಆಳಿದವನು. ಈಗಿನಂತೆಯೇ ಆಗಲೂ ಕರ್ನಾಟಕವು ಎಲ್ಲ ಧರ್ಮಗಳ, ಎಲ್ಲ ಭಾಷಿಕರ ನೆಲೆಯಾಗಿತ್ತು ಎಂದು ತಿಳಿದರೆ ಸಮಸ್ಯೆಗಳು ಇರುವುದಿಲ್ಲ. ಬ್ರಿಟಿಷರು ಭಾರತವನ್ನು ಬಿಟ್ಟು ಹೋದ ಎಪ್ಪತ್ತು ವರ್ಷಗಳ ನಂತರವೂ ಭಾರತದ ಯಾವುದೇ ಭಾಗದಲ್ಲಿ ಇಂಗ್ಲಿಷ್ ಭಾಷೆಯ ಮೇಲಾಟವನ್ನು ಗಮನಿಸಿದಾಗ ಇದು ಆಳುವ ಜನ ನಿರ್ಮಿಸುವ, ಅನಿವಾರ್ಯ ಎನಿಸುವಂತಹ ಪರಿಸ್ಥಿತಿ ಅರಿವಾಗುತ್ತದೆ, ವರ್ತಮಾನದ ಬೆನ್ನ ಹಿಂದೆ ನಿಂತು ಹಿಮ್ಮುಖವಾಗಿ ನೋಡಿದಾಗ ಎಲ್ಲ ಕಾಲದಲ್ಲೂ ಆಳುವ ವರ್ಗದ ಭಾಷೆಯೇ ಅಧಿಕೃತ ಎನಿಸಿಕೊಂಡಿರುವುದನ್ನು ಕಾಣಬಹುದು; ಒಂದು ಕಾಲಕ್ಕೆ ಪ್ರಾಕೃತ, ಮತ್ತೊಂದು ಕಾಲದಲ್ಲಿ ಸಂಸ್ಕೃತ, ವಸಾಹತುಶಾಹಿ ಆಳ್ವಿಕೆಯ ಕಾಲಕ್ಕೆ ಇಂಗ್ಲಿಷ್ ಪ್ರಾಬಲ್ಯ ಪಡೆದದ್ದು

ಇದೇ ಕಾರಣದಿಂದ; ಆದರೆ ಜನ ಭಾಷೆ ಮಾತ್ರ ಆಯಾ ಪ್ರಾಂತೀಯ ಭಾಷೆಗಳೇ ಆಗಿದ್ದವು ಎಂಬುದಕ್ಕೆ ಶಿಲಾಶಾಸನಗಳೇ ಸಾಕ್ಷಿ. ರಾಜನ ಅಥವಾ ಉನ್ನತ ಅಧಿಕಾರ ವರ್ಗದ ತಾಮ್ರಶಾಸನಗಳು ಸಂಸ್ಕೃತ ಭಾಷೆಯಲ್ಲಿದ್ದರೂ ಬಹುತೇಕ ಶಿಲಾಶಾಸನಗಳು ಆಯಾ ಪ್ರಾಂತೀಯ ಭಾಷೆಯಲ್ಲೇ ದಾಖಲಾಗಿರುವುದನ್ನು ಗಮನಿಸಿದಾಗ, ಆಳುವ ವರ್ಗದ ಭಾಷೆ ಸಂಸ್ಕೃತ ಮತ್ತು ಜನರ ಭಾಷೆ ಆಯಾ ಪ್ರಾಂತೀಯ ಭಾಷೆಯೇ ಆಗಿರುತ್ತಿತ್ತು ಎಂದು ಖಚಿತವಾಗಿ ಹೇಳಬಹುದು. ಕರ್ನಾಟಕದಲ್ಲೇ ಆರಂಭ ಕಾಲದ ಸಂಸ್ಕೃತ ಭಾಷೆಯ ಶಾಸನಗಳು ಕನ್ನಡ ಲಿಪಿಯಲ್ಲಿ ದಾಖಲಾಗಿವೆ. ಇದು ಜನತೆ ಮತ್ತು ಆಡಳಿತ ವರ್ಗ ಭಾಷೆಯನ್ನು ಬಳಸಿಕೊಳ್ಳುತ್ತಿದ್ದ ಪರಿ ಎಂದು ಅರ್ಥವಾಗುತ್ತದೆ. ಕೆಲವು ವರ್ಷಗಳ ಹಿಂದೆ ವಿಜಯನಗರ ಕಾಲದ ಒಂದು ತಾಮ್ರಶಾಸನದ ನೆರಳಚ್ಚು ಪ್ರತಿಯೊಂದು ಅಪ್ರಕಟಿತ ಎನ್ನುವ ಸೂಚನೆಯೊಂದಿಗೆ ನನ್ನ ಗಮನಕ್ಕೆ ಬಂದಿತ್ತು. ಅದು ಪ್ರಕಟಿತ ಶಾಸನ ಎನ್ನುವುದನ್ನು ಸ್ಪಷ್ಟಪಡಿಸಿಕೊಂಡು ಬೆರಳಚ್ಚು ಪ್ರತಿಯನ್ನು ಹಿಂದಿರುಗಿಸಿದೆ. ಆದರೆ ಶಾಸನದ ಬಹುಶಃ ಮೂರನೆಯ ಪಟದಲ್ಲಿ ಶಾಸನ ಪಾಠದ ನಡುವೆ ಸುಮಾರು ಹತ್ತು ಸಾಲು ಬರೆಯಲು ಅವಕಾಶ ಬಿಟ್ಟಿರುವುದನ್ನು ಗಮನಿಸಿ, ಕುತೂಹಲವಾಯಿತು. ಬಹುಶಃ ಈ ಭಾಗದಲ್ಲಿ ದಾನ ಪಡೆದವರ ವಿವರಗಳನ್ನು ಬರೆಯುವ ಉದ್ದೇಶವಿತ್ತು ಎಂದು ಊಹಿಸಿದೆ. ಪ್ರತಿಯೊಬ್ಬ ಅರಸನ ಕಾಲದಲ್ಲೂ ಆಯಾ ರಾಜನ ಹೆಸರಿನಲ್ಲಿ ತಾನ್ರುಶಾಸನದ ಪ್ರಮುಖ ಭಾಗವನ್ನು ಬರೆದು ಸಿದ್ಧಮಾಡಿ ಇಟ್ಟುಕೊಂಡಿದ್ದು, ಸಂದರ್ಭ ಬಂದಾಗ ದಾನ ಪಡೆದವನ ವಿವರಗಳು ಮತ್ತು ದಾನದ ವಿವರಗಳನ್ನು ಎರಡು ಪ್ರತಿಗಳಲ್ಲಿ ಭರ್ತಿಮಾಡಿ, ಒಂದು ಪ್ರತಿಯನ್ನು ದಾನ ಪಡೆದವನಿಗೆ ನೀಡಲಾಗುತ್ತಿತ್ತು ಎಂದು ಊಹಿಸಲು ಅವಕಾಶಗಳಿವೆ. ಶಾಸನದ ಅಂತ್ಯದಲ್ಲಿ ಆಯಾ ರಾಜನ ಅಂಕಿತವನ್ನು ಬರೆಯಲಾಗುತ್ತಿತ್ತು. ಕೃಷ್ಣದೇವರಾಯನ ತಾಮ್ರಶಾಸನಗಳೂ ಅದೇ ಮಾದರಿಯಲ್ಲಿ ಸಿದ್ಧವಾಗಿರುತ್ತಿದ್ದವು. ಕೃಷ್ಣದೇವರಾಯನ ಬಹುತೇಕ ತಾಮ್ರಶಾಸನಗಳಲ್ಲಿ ಕನ್ನಡ ಲಿಪಿಯಲ್ಲಿ 'ವಿರೂಪಾಕ್ಷ' ಎಂಬ ಅಂಕಿತವೇ ಇರುವುದರಿಂದ ಅವನ ಆಡಳಿತದಲ್ಲಿ ಅರಮನೆಯ ಒಳಗೆ ಆಡಳಿತ ಭಾಷೆಯಾಗಿ ಸಂಸ್ಕೃತಕ್ಕೇ ಆದ್ಯತೆ ಇತ್ತು. ಶಿಲಾಶಾಸನಗಳು ಆಯಾ ಪ್ರಾಂತೀಯ ಭಾಷೆಯಲ್ಲೇ ಇರುತ್ತಿದ್ದವು ಮತ್ತು ಇವುಗಳ ಅಂತ್ಯದಲ್ಲಿ ಅಂಕಿತಕ್ಕೆ ಸಾಮಾನ್ಯವಾಗಿ ಅವಕಾಶ ಇರಲಿಲ್ಲ ಎಂಬ ತಿಳುವಳಿಕೆ ನನ್ನದು. ಶ್ರೀನಿವಾಸ ರಿತ್ತಿ, ಬಾ.ರಾ. ಗೋಪಾಲ್ ಅವರ ಸಂಪಾದನೆಯಲ್ಲಿ ವಿಜಯನಗರದ ಕಾಲದ ಕನ್ನಡ ಶಾಸನಗಳೂ, ಪಿ.ವಿ. ಪರಬ್ರಹ್ಮ ಶಾಸ್ತ್ರಿಗಳ ಸಂಪಾದನೆಯಲ್ಲಿ ತೆಲುಗು ಶಾಸನಗಳೂ ಪ್ರಕಟವಾಗಿವೆ. ಇದರಿಂದ ಈವರೆಗೆ ನಮಗೆ ದೊರೆತಿರುವ ವಿಜಯನಗರದ ಅರಸರ ಶಾಸನಗಳ ಪೈಕಿ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡ ಶಾಸನಗಳಿವೆ ಎಂದು ಸ್ಪಷ್ಟವಾಗಿದೆ. ವಿಜಯನಗರ ಕಾಲದ ಕನ್ನಡ ಶಾಸನಗಳ ಒಟ್ಟು ಸಂಖ್ಯೆ 2000ನ್ನು ಮೀರುತ್ತದೆ ಎಂದು ಅಂದಾಜಿಸಬಹುದು. ಆದರೆ ತೆಲುಗು ಶಾಸನಗಳ ಸಂಖ್ಯೆ 590ನ್ನು ಮೀರುವುದಿಲ್ಲ. ಕೃಷ್ಣದೇವರಾಯನ ಕಾಲದಲ್ಲಿ ದಾಖಲಾದ ಕನ್ನಡ ಶಾಸನಗಳ ಸಂಖ್ಯೆ 219, ತೆಲುಗು ಶಾಸನಗಳ ಸಂಖ್ಯೆ 99. ಈ ಅಂಕಿ–ಅಂಶಗಳು ಕೃಷ್ಣದೇವರಾಯನನ್ನು ಕನ್ನಡ ವಿರೋಧಿ ಎಂದೇನೂ ಬಿಂಬಿಸುವುದಿಲ್ಲ. ಈಗಿನ ಆಂಧ್ರ ಪ್ರದೇಶದಲ್ಲೂ ಕೃಷ್ಣದೇವರಾಯನ ಕನ್ನಡ ಶಾಸನಗಳಿವೆ. ಅವನು ತೆಲುಗು ಭಾಷೆಯಲ್ಲಿ ಕಾವ್ಯವೊಂದನ್ನು ಬರೆದ ಎಂದ ಮಾತ್ರಕ್ಕೆ ಅವನನ್ನು ಕನ್ನಡವಿರೋಧಿ ಎಂದು ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ.

ಭಾರತೀಯ ಪುರಾತತ್ವ ಇಲಾಖೆ ಮತ್ತು ರಾಜ್ಯ ಪುರಾತತ್ವ ಇಲಾಖೆಯ ಹಿಂದಿನ ಹಿರಿಯ ವಿದ್ವಾಂಸರು ಮತ್ತು ಈಗಿನ ಮಿತ್ರರು ತಮ್ಮ ಕರ್ತವ್ಯದ ನೆಲೆಯಲ್ಲೇ ಅನೇಕ ಹೊಸ ವಿಷಯಗಳ ಶೋಧ ಮಾಡುತ್ತಿದ್ದಾರೆ. ಇವರ ಜೊತೆಗೆ ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯಾದ ನಂತರವಂತೂ ವಿಜಯನಗರದ ಅಧ್ಯಯನದ ಮಹತ್ವ ಹೆಚ್ಚಿದೆ.

ಭಾರತೀಯ ಪುರಾತತ್ವ ಸರ್ವೇಕ್ಷಣಾಲಯ, ರಾಜ್ಯ ಪುರಾತತ್ವ ಇಲಾಖೆ, ಹಂಪಿ ವಿಶ್ವವಿದ್ಯಾಲಯಗಳ ಜೊತೆಗೆ ಈಗ ಹಂಪಿ ಅಭಿವೃದ್ಧಿ ಪ್ರಾಧಿಕಾರವೂ ಸೇರಿ ಹಂಪಿಯ ಇತಿಹಾಸವನ್ನು ಅನಾವರಣಗೊಳಿಸುವ ಸಾರ್ಥಕ ಕಾರ್ಯ ಮಾಡುತ್ತಿರುವುದಕ್ಕಾಗಿ, ಆ ಎಲ್ಲಾ ಸಂಸ್ಥೆಗಳನ್ನು ಅಭಿನಂದಿಸುತ್ತಲೇ ಇನ್ನು ಮುಂದೆ ಆಗಲೇಬೇಕಾದ ಕೆಲವು ಕೆಲಸಗಳ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕಾಗಿದೆ.

ಈಗ ವಿಜಯನಗರದ ಇತಿಹಾಸದ ಅಧ್ಯಯನಕ್ಕೆ ಆಕರಗಳ ಕೊರತೆ ಇಲ್ಲ. ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ ವಿಜಯನಗರ ಕಾಲದ ಕನ್ನಡ, ತೆಲುಗು ಶಾಸನ ಸಂಪುಟಗಳನ್ನು ಪ್ರಕಟಿಸಿದೆ. ತಮಿಳು ಮತ್ತು ಸಂಸ್ಕೃತ ಶಾಸನ ಸಂಪುಟಗಳೂ ಬೇಗ ಪ್ರಕಟಗೊಳ್ಳುವ ನಿರೀಕ್ಷೆ ಇದೆ. ಈ ಸಂಪುಟಗಳಲ್ಲಿ ಶಾಸನಗಳ ಪಾಠಗಳು ಇಂಗ್ಲಿಷ್ ಲಿಪ್ಯಂತರದಲ್ಲಿ ಲಭ್ಯವಿವೆ. ರಾಜ್ಯ ಪುರಾತತ್ವ ಇಲಾಖೆಯು ಹಿಂದೆ ಬಾ.ರಾ.ಗೋಪಾಲ್ ಅವರ ಸಂಪಾದಕತ್ವದಲ್ಲಿ ಇಂಗ್ಲಿಷ್ ಭಾಷೆಯಲ್ಲಿ ವಿಜಯನಗರ ಶಾಸನಗಳ ಸಾರಾಂಶಗಳಿರುವ ನಾಲ್ಕು ಸಂಪುಟಗಳನ್ನು ಪ್ರಕಟಿಸಿದೆ. ಇನ್ನು ಮೂರು ಸಂಪುಟಗಳ ಪ್ರಕಟಣೆ ಬಾಕಿ ಉಳಿದಿದೆ. ಸಮಗ್ರ ಇತಿಹಾಸವನ್ನು ರಚಿಸಲು ಶಾಸನಗಳು ಮಾತ್ರ ನೆರವಾಗುವುದಿಲ್ಲ. ಜೊತೆಗೆ ಪ್ರಾಗಿತಿಹಾಸದ ವಸ್ತುವಿಶೇಷಗಳು, ವರ್ಣಚಿತ್ರಗಳು, ಆಯುಧಗಳು, ಸಮಾಧಿಗಳು, ವಾಸ್ತು ಮತ್ತು ಮೂರ್ತಿ ಶಿಲ್ಪಗಳು ಮಾತ್ರವಲ್ಲದೆ ಮೌಖಿಕ ಆಕರಗಳು ಮತ್ತು ರೂಢಿಯಿಂದ ಉಳಿದು ಬಂದಿರುವ ಆಚರಣೆಗಳೂ ಇತಿಹಾಸದ ಪುನಾರಚನೆಗೆ ಅತ್ಯವಶ್ಯಕ ಆಕರಗಳಾಗಿವೆ. ಸಾಂಪ್ರದಾಯಿಕ ದೃಷ್ಟಿಕೋನದಿಂದ ಇತಿಹಾಸವನ್ನು ರಚಿಸುವ ಮತ್ತು ಅರ್ಥೈಸುವ ಕಾಲ ಮುಗಿದಿದೆ. ವಿಜಯನಗರದ ರಾಜಕೀಯ, ಧಾರ್ಮಿಕ, ಆರ್ಥಿಕ ಇತಿಹಾಸದ ರಚನೆಯಾಗಿದ್ದರೂ, ಜನಾಂಗೀಯ ಅಧ್ಯಯನ ಆಗಿಲ್ಲ. ಇಲ್ಲಿ ಮುಖ್ಯವಾಗಿ ಸಬಾಲ್ಟರ್ನ್ ಅಧ್ಯಯನದ ಆವಶ್ಯಕತೆ ಇದೆ.

ವಿಜಯನಗರಕ್ಕೆ ಸಂಬಂಧಿಸಿದ ಕೆಲವು ಕಾದಂಬರಿಗಳಿವೆ. ಅವುಗಳು ಇತಿಹಾಸ ಬಗ್ಗೆ ಪ್ರೀತಿ ಹುಟ್ಟಿಸುವ ಕೆಲಸ ಮಾಡಿದರೆ ಸಂತೋಷ. ಇತಿಹಾಸವನ್ನು ತಿರುಚುವ ಕಾದಂಬರಿಗಳು ಸೃಷ್ಟಿಸುವ ಇತಿಹಾಸವನ್ನು ನಾವೆಲ್ಲರೂ ಒಪ್ಪಿಕೊಳ್ಳುವ ಸಂದರ್ಭ ಸೃಷ್ಟಿಯಾಗಬಹುದು. ಜಕ್ಕಣಾಚಾರಿ ಮತ್ತು ಶಾಂತಲೆಯ ಬಗ್ಗೆ ಇತಿಹಾಸಕಾರ ಏನೇ ಹೇಳಿದರೂ ಅದನ್ನು ಜನ ಒಪ್ಪಲು ಸಿದ್ಧರಿಲ್ಲ. ಅಂತಹ ಪರಿಸ್ಥಿತಿಯನ್ನು ಕಾದಂಬರಿಗಳು ಸೃಷ್ಟಿಸಿವೆ. ವಿಜಯನಗರದ ಇತಿಹಾಸದಲ್ಲೂ ಅಂತಹ ಸಂದರ್ಭ ಎದುರಾದರೆ ಆಶ್ಚರ್ಯವಿಲ್ಲ. ಇತ್ತೀಚೆಗೆ ನನ್ನ ಗಮನಕ್ಕೆ ಬಂದ ಒಂದು ಕಾದಂಬರಿಯ ಬಗ್ಗೆ ಪ್ರಸ್ತಾಪಿಸದೆ ಇರಲು ಸಾಧ್ಯವಿಲ್ಲ. ಧನಾತ್ಮಕ ಅಂಶಗಳಿವೆ. ಕೃಷ್ಣದೇವರಾಯನ ಕಾಲಕ್ಕೆ ಮೊದಲು ಬಡವರಿಗೆ ಕಿರುಕುಳವಾಗಿದ್ದ ಮದುವೆಯ ತೆರ, ಬಲವಂತದ ಸತಿ ಪದ್ಧತಿ, ಗರ್ಭಿಣಿ ಹೆಣ್ಣುಗಳ ಬಲಿ, ಅಧಿಕಾರಸ್ಥರ ಉನ್ಮತ್ತ ನಡವಳಿಕೆಗಳು ಇತ್ಯಾದಿ ವಿಚಾರಗಳನ್ನು ಕಾದಂಬರಿಕಾರರು ಘಟನೆಗಳ ರೂಪದಲ್ಲಿ ಪ್ರಸ್ತಾಪಿಸಿದ್ದಾರೆ. ಅಷ್ಟರಮಟ್ಟಿಗೆ ಕಾದಂಬರಿ ಉಪಯುಕ್ತ; ಆ ಕಾದಂಬರಿಯು ಕೃಷ್ಣದೇವರಾಯನು ಯುವರಾಜನಾಗಿದ್ದಾಗ, ಅಕಸ್ಮಾತ್ತಾಗಿ ಕಂಡ ಚಿನ್ನಾದೇವಿಯನ್ನು ಹುಡುಕುವದನ್ನು ಕುರಿತಾಗಿಯೇ ಇದ್ದು, ಕೊನೆಯ ಘಟ್ಟದಲ್ಲಿ ಚಿನ್ನಾದೇವಿ ದೊರೆಯುತ್ತಾಳೆ. ಇದು ನಮಗೆ ತಿಳಿದಿರುವ ಇತಿಹಾಸದಲ್ಲಿ ಇಲ್ಲ. ಅವಳು ಅಧಿಕಾರಿಯೊಬ್ಬಳ ಮಗಳು ಎಂಬ ವಿಚಾರವನ್ನು ಡಿ.ವಿ. ಪರಮಶಿವಮೂರ್ತಿ ಕಾಮಿಡಿಹಳ್ಳಿ ಶಾಸನದ ನೆರವಿನಿಂದ ಸ್ಪಷ್ಟಪಡಿಸಿದ್ದಾರೆ ಕೃಷ್ಣದೇವರಾಯನ ಮಗ ತಿರುಮಲನ ಸಾವಿಗೆ ತಿಮ್ಮರಸುವಿನ ಮಕ್ಕಳು ಮಾಡಿಸಿದ ವಿಷಪ್ರಾಶನ ಕಾರಣ ಎಂದು ಇತಿಹಾಸಕಾರರು ಒಪ್ಪಿಕೊಂಡಿದ್ದಾರೆ. ಆದರೆ ನಾನು ಪ್ರಸ್ತಾಪಿಸಿದ ಕಾದಂಬರಿಯ ಪ್ರಕಾರ ತಿರುಮಲನ ಸಾವು ಸಂಭವಿಸುವುದು ಹಲವು ನದಿ ಮತ್ತು ತೀರ್ಥಕ್ಷೇತ್ರಗಳಿಂದ ತಂದು ಹಲವು ವರ್ಷಗಳ ಕಾಲ ಶೇಖರಿಸಿ ಇಟ್ಟಿದ್ದ ನೀರಿನಿಂದ ಸ್ನಾನ ಮಾಡಿಸಿದ ಪರಿಣಾಮವಾಗಿ ಬಂದ ವಿಷಮಶೀತಜ್ವರದಿಂದ. ಹೊಸ

ಆಲೋಚನೆಯನ್ನು ಸ್ವಾಗತಿಸೋಣ. ಆದರೆ ಆ ಹೊಸ ಆಲೋಚನೆಯು ತರ್ಕಬದ್ಧವಾಗಿರಬೇಕು. ಅಳಿಯ ರಾಮರಾಯ ಚಕ್ರವರ್ತಿಯಾಗಿದ್ದ ಎಂಬ ಹೊಸ ಆಲೋಚನೆಗೆ ಅವಕಾಶ ಇದೆ. ಆದರೆ ಅದಕ್ಕೆ ಆಧಾರ ಬೇಕು. ನಮ್ಮಲ್ಲಿ ಹೆಚ್ಚು ಜನ ತಿಳಿದಿರುವಂತೆ ರಾಮರಾಯ ಪಟ್ಟ ಕಟ್ಟಿಸಿಕೊಳ್ಳದೆ ಪಟ್ಟಾಭಿಷಿಕ್ತನಂತೆ, ಸರ್ವಾಧಿಕಾರಿಯಾಗಿ ಆಳಿದವನು. ಇತಿಹಾಸದಲ್ಲಿ ಸರಿಹೊಂದಿಸುವ ಕೆಲಸವನ್ನು ಮಾಡುವುದು ಸರಿಯಾಗಲಾರದು. ಆಕರಗಳ ಗೈರುಹಾಜರಿಯಲ್ಲಿ ತರ್ಕದ ಗತಿಗೆ ತಕ್ಕ ಊಹೆಗೆ ಅವಕಾಶಗಳಿವೆಯಾದರೂ, ಆಕರ ದೊರೆತ ನಂತರ ಊಹೆ ತಪ್ಪಾಗಿದ್ದರೆ ಅದನ್ನು ಕೈಬಿಡುವುದು ಒಳ್ಳೆಯದು. ಕಾದಂಬರಿಗಳು ಸೃಷ್ಟಿಸಿರುವ ಅಪಾಯಗಳು ನಮ್ಮ ಎದುರಿಗಿರುವುದರಿಂದ ಅನಿವಾರ್ಯವಾಗಿ ಈ ಮಾತುಗಳನ್ನು ಹೇಳಬೇಕಾಯಿತು.

ಹಂಪಿಯ ನನ್ನ ಕೆಲವು ಸ್ನೇಹಿತರು ಈ ಭಾಗಕ್ಕೆ ಸಂಬಂಧಿಸಿದ ಜಾನಪದ ಆಚರಣೆಗಳು, ಜಾನಪದ ಕಲೆ ಇತ್ಯಾದಿ ವಿಷಯಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸುವ ಸಾರ್ಥಕ ಪ್ರಯತ್ನ ಮಾಡುತ್ತಲೇ ಇದ್ದಾರೆ. ಆ ಎಲ್ಲ ಪ್ರಯತ್ನಗಳೂ ಅಭಿನಂದನೆಗೆ ಪಾತ್ರವಾಗಿವೆ. ಲಿಖಿತ ಆಕರಗಳ ಜೊತೆಗೆ ಮೌಖಿಕ ಆಕರಗಳನ್ನೂ ತರ್ಕಬದ್ಧವಾಗಿ ಬಳಸಿಕೊಂಡು ಇತಿಹಾಸದ ಅಂತರಂಗವನ್ನು ತಿಳಿಯುವ ಕೆಲಸ ಆಗಬೇಕಾಗಿದೆ. ಈ ವಿಚಾರದಲ್ಲಿ ಹಂಪಿಯ ನನ್ನ ಕೆಲವು ಗೆಳೆಯರು ಈಗಾಗಲೇ ಹಲವು ಮೆಟ್ಟಿಲುಗಳನ್ನು ಏರಿದ್ದಾರೆ. ಗುರಿ ಮುಟ್ಟಲು ಇನ್ನೂ ಬೇಕಾದಷ್ಟು ಮೆಟ್ಟಿಲುಗಳಿವೆ. ಅವುಗಳನ್ನೂ ಅದೇ ಗೆಳೆಯರೇ ಹತ್ತಿ ಗುರಿ ಮುಟ್ಟಲಿ ಎಂದು ಆಶಿಸುತ್ತೇನೆ. ಇಂಥ ಸಂದರ್ಭದಲ್ಲಿ ಯಾವುದೇ ಪ್ರತಿಷ್ಠೆ, ಸಿದ್ಧಾಂತ ಮತ್ತು ಗುಂಪುಗಾರಿಕೆ ಮೇಲುಗೈಪಡೆದರೆ ಸತ್ಯ ಮರೆಯಾಗಿಬಿಡಬಹುದೆನ್ನುವ ಆತಂಕ ನನಗಿದೆ. ಈ ಆತಂಕಕ್ಕೆ ಅರ್ಥವಿಲ್ಲ ಎಂದು ಯಾವ ಗೆಳೆಯರಾದರೂ ಹೇಳಬಹುದು; ಆದರೆ ಕೆಲವು ಸಂದರ್ಭಗಳಲ್ಲಿ ವೈಯಕ್ತಿಕ ಪ್ರತಿಷ್ಠೆ ಮತ್ತು ಪೂರ್ವನಿರ್ಧಾರಿತ ಅಭಿಪ್ರಾಯಗಳು ಹೊಸದಾದ ಯಾವುದೇ ಅಭಿಪ್ರಾಯಗಳನ್ನು ಒಪ್ಪದೆ ಇರಬಹುದು. ಅಂತಹ ಸಂದರ್ಭಗಳ ಬಗ್ಗೆ ನಾನು ಆತಂಕಗೊಳ್ಳುತ್ತೇನೆ. ಸತ್ಯವಷ್ಟೇ ನಮ್ಮ ಗುರಿ ಎಂದು ಸಂಶೋಧಕರು ತಿಳಿದಾಗ ಯಾವ ಆತಂಕವೂ ಇರುವುದಿಲ್ಲ.

ವಿಜಯನಗರ ಸಾಮ್ರಾಜ್ಯದಲ್ಲಿ ರಚಿತವಾದ ಅನೇಕ ಸಾಹಿತ್ಯ ಕೃತಿಗಳಿವೆ. ಇವುಗಳನ್ನು ಸಾಹಿತ್ಯಿಕ ಹಿನ್ನೆಲೆಯಲ್ಲಿ ಅರ್ಥೈಸಲಾಗಿದೆ. ಇತಿಹಾಸದ ಹಿನ್ನೆಲೆಯಲ್ಲೂ ಅಧ್ಯಯನ ಮಾಡುವ ಆವಶ್ಯಕತೆ ಇದೆ. ವಾಸ್ತು ಮತ್ತು ಮೂರ್ತಿಶಿಲ್ಪಗಳ ಬಗ್ಗೆ ಆಗಿರುವ ಅಧ್ಯಯನಗಳು ಇನ್ನೂ ಹೆಚ್ಚು ಸೂಕ್ಷ್ಮ ವಿಷಯಗಳನ್ನು ಬೆಳಕಿಗೆ ತರಲು ಅವಕಾಶಗಳಿವೆ. ಭರತೇಶ ವೈಭವ ಕಾವ್ಯದಲ್ಲಿರುವ ಕೆಲವು ಐತಿಹಾಸಿಕ ವಿಚಾರದ ಬಗ್ಗೆ ವಿದ್ವಾಂಸರು ಚರ್ಚಿಸಿದ್ದಾರೆ. ಇಲ್ಲೇ ಜೀವಿಸಿದ್ದ ಹರಿಹರನ ಕಾವ್ಯಗಳಲ್ಲಿ ವಿಜಯನಗರದ ಪ್ರಸ್ತಾಪ ಇಲ್ಲವಾದರೂ ಹಂಪೆಯ ವಿವರಗಳಂತೂ ಇವೆ. ಜೊತೆಗೆ ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ಹಂಪೆಯ ವರ್ಣನೆ ಇದೆ. ವಿಜಯನಗರ ಸಾಮ್ರಾಜ್ಯದಲ್ಲಿ ಕನ್ನಡ ಮಾತ್ರವಲ್ಲದೆ, ತೆಲುಗು, ತಮಿಳು ಮತ್ತು ಸಂಸ್ಕೃತ ಭಾಷೆಗಳಲ್ಲಿ ರಚಿತವಾದ ಎಲ್ಲ ಸಾಹಿತ್ಯ ಕೃತಿಗಳಲ್ಲಿ ಸಮಕಾಲೀನ ಸಮಾಜ, ರಾಜಕೀಯ, ಧರ್ಮ, ಜನ ಜೀವನ ಇತ್ಯಾದಿ ವಿವರಗಳಲ್ಲಿರುವ ಇತಿಹಾಸದ ಎಳೆಗಳನ್ನು ಹುಡುಕಿ, ಸಾಮಾನ್ಯ ಜನತೆಯ ಬದುಕನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ರಾಜರು, ರಾಣಿಯರು, ಅಮಾತ್ಯರು, ದಂಡನಾಯಕರು ಇತ್ಯಾದಿ ಪ್ರಭಾವೀ ಗಣ್ಯರ ನಡುವೆ ಜನಸಾಮಾನ್ಯರ ಬದುಕನ್ನು ಹುಡುಕುವ ಸಾಹಸದ ಕೆಲಸ ಆಗಬೇಕಾಗಿದೆ. ವಿಜಯನಗರ ಸಾಮ್ರಾಜ್ಯದಲ್ಲಿ ಎಲ್ಲವೂ ಚೆನ್ನಾಗಿಯೇ ಇತ್ತು ಎಂಬ ತಿಳುವಳಿಕೆಯಿಂದ ಹೊರಬರಬೇಕಾಗಿದೆ. ಸಾಹಿತ್ಯ ಕೃತಿಗಳಲ್ಲಿನ ಉತ್ಪ್ರೇಕ್ಷೆಯನ್ನೇ ಸತ್ಯವೆಂದು ತಿಳಿಯಬೇಕಾಗಿಲ್ಲ.

ಪ್ರವಾಸಿಗಳ ಕಥನದಲ್ಲಿರುವ ಎಲ್ಲ ಹೇಳಿಕೆಗಳನ್ನೂ ಹಾಗೆಯೇ ಒಪ್ಪಿಕೊಳ್ಳುವುದು ಸಾಧುವಲ್ಲ. ಈಗಾಗಲೇ ಹಲವು ವಿದ್ವಾಂಸರು ಈ ಬಗ್ಗೆ ಚರ್ಚಿಸಿದ್ದಾರೆ. ಇತಿಹಾಸಕಾರ ಯಾವುದೇ ಪಕ್ಷಪಾತವಿಲ್ಲದ

ನ್ಯಾಯಾಧೀಶನಂತಿರಬೇಕಾಗುತ್ತದೆ. ದೊರೆತ ಆಕರಗಳನ್ನು ಸಾಕ್ಷಿಯಾಗಿಟ್ಟುಕೊಂಡು ನಿಷ್ಪಕ್ಷಪಾತ ನಿರ್ಧಾರ ಮಾಡುವುದು ಇತಿಹಾಸಕಾರನ ಜವಾಬ್ದಾರಿ. ಈವರೆಗೆ ದೊರೆತಿರುವ ಹೆಚ್ಚಿನ ಆಕರಗಳು ಆಳುವ ವರ್ಗದ ಬಗ್ಗೆಯೇ ಹೆಚ್ಚು ವಿಷಯಗಳನ್ನು ತಿಳಿಸಿವೆ ಎನ್ನುವುದಕ್ಕಿಂತ ಅಷ್ಟೇ ವಿಷಯಗಳನ್ನು ನಾವು ಬಳಸಿಕೊಂಡಿದ್ದೇವೆ. ಇನ್ನು ಮುಂದೆ ಅಕ್ಷರರೂಪದ ಆಕರಗಳ ಜೊತೆಗೆ ಮೌಖಿಕ ಆಕರಗಳನ್ನು ಮತ್ತು ರೂಢಿಮೂಲದ ಆಕರಗಳನ್ನು ಬಳಸಿಕೊಂಡು ಜನ ಇತಿಹಾಸವನ್ನು ತಿಳಿಯಬೇಕಾಗಿದೆ. ವಿಜಯನಗರ ಸಾಮ್ರಾಜ್ಯ ಅಸ್ತಿತ್ವಕ್ಕೆ ಬರುವುದಕ್ಕೆ ಮೊದಲಿನ ಮತ್ತು ನಂತರದ ಸಣ್ಣಪುಟ್ಟ ಅರಸುಮನೆತನಗಳ ಬಗ್ಗೆ ಸಮಗ್ರವಾಗಿ ಅಧ್ಯಯನ ಆಗಬೇಕಾಗಿದೆ. ಈಗಲೂ ಕೆಲವು ಗೆಳೆಯರು ಆ ನಿಟ್ಟಿನಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಈ ಅಧ್ಯಯನ ಮತ್ತಷ್ಟು ಮಹತ್ವ ಪಡೆಯಲಿ ಎಂಬುದು ನನ್ನಂಥಹವರ ಆಸೆ.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ 600ನೆಯ ವರ್ಷದ ಸ್ಮರಣೆಗೆ ನಡೆದ ವಿಚಾರ ಸಂಕಿರಣದಿಂದ ಈಗ ನಡೆಯುತ್ತಿರುವ ವಿಚಾರ ಸಂಕಿರಣದವರೆಗೆ ವಿಜಯನಗರ ಮತ್ತು ಹಂಪಿ ಕುರಿತಂತೆ ಅನೇಕ ವಿಚಾರ ಸಂಕಿರಣಗಳು ನಡೆದಿವೆ; ಅಲ್ಲಿ ಮಂಡನೆ ಆದ ಸಂಪ್ರಬಂಧಗಳು ಪ್ರಕಟಗೊಂಡಿವೆ. ಇವೇ ಅಲ್ಲದೆ, ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳ ಹಿರಿಯ ವಿದ್ವಾಂಸರು ಹಲವು ವಿಷಯಗಳನ್ನು ಕುರಿತು ಸಂಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ಅಂತೆಯೇ ವಿಜಯನಗರ ಅಧ್ಯಯನದ ಹದಿನೈದು ಸಂಪುಟಗಳು ಪ್ರಕಟಗೊಂಡಿವೆ. ಇವುಗಳ ಮೂಲಕ ಅನೇಕ ಹೊಸ ವಿಷಯಗಳು ಬೆಳಕಿಗೆ ಬಂದಿವೆ. ಪ್ರತಿ ವರ್ಷವೂ ವಿಜಯನಗರದ ಅಧ್ಯಯನಕ್ಕೆ ಸಂಬಂಧಿಸಿದ ವಿಚಾರ ಸಂಕಿರಣವನ್ನು ತಪ್ಪದೆ ಹಮ್ಮಿಕೊಂಡು ಮಂಡಿತವಾದ ಎಲ್ಲ ಸಂಪ್ರಬಂಧಗಳನ್ನೂ ಕೃತಿರೂಪದಲ್ಲಿ ಪ್ರಕಟಿಸುತ್ತಿರುವ ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ನಿರ್ದೇಶಕರು ಮತ್ತು ಸಿಬ್ಬಂದಿಯನ್ನು ಮನಸಾರೆ ಅಭಿನಂದಿಸುತ್ತಾ ಈ ಸಾರ್ಥಕ ಕಾರ್ಯವು ಯಾವ ಕಾರಣಕ್ಕೂ ನಿಲ್ಲದೆ ನಿರಂತರವಾಗಿ ಮುಂದುವರಿಯಲಿ ಎಂದು ಆಶಿಸುತ್ತೇನೆ.

ಕಲಕೇರಿ ಮತ್ತು ಬೈಚವಳ್ಳಿಯ ಶಾಸನಗಳು

ಹನುಮಾಕ್ಷಿ ಗೋಗಿ

ಹಾನಗಲ್ಲು ತಾಲೂಕಿನ ಕಲಕೇರಿಯಲ್ಲಿ ವಿಜಯನಗರದ ಹರಿಹರನ ಕಾಲದ ಶಾಸನವೊಂದು ದೊರೆತಿದೆ. ಇದಲ್ಲದೆ ವಿಜಯನಗರದ ಅಚ್ಯುತರಾಯನ ಕಾಲದ ಅಪ್ರಕಟಿತ ಶಾಸನವೊಂದು ಗಮನಕ್ಕೆ ಬಂದಿದ್ದು ಅವುಗಳ ಪೂರ್ಣಪಠ್ಯವನ್ನು ಪ್ರಕಟಿಸುವುದು ಈ ಲೇಖನದ ಆಶಯವಾಗಿದೆ.

ಕಲಕೇರಿಯ ಶಾಸನ

ಹನುಮಾನ್ ದೇವರ ಗುಡಿಯ ಪಕ್ಕದಲ್ಲಿ ನಿಲ್ಲಿಸಿದ ಶಾಸನ, ಸು. 14ನೆಯ ಶತಮಾನ (ಹೊಸತು)

ಸುಮಾರು ಒಂದು ವರ್ಷದ ಹಿಂದೆ ಮಂಗವೊಂದು ಸತ್ತಾಗ ಅದನ್ನು ಹೂಳಲು ಕೆರೆಯ ಒಡ್ಡಿನ ಭಾಗದಲ್ಲಿ ಅಗೆಯುತ್ತಿರುವಾಗ ವೀರಗಲ್ಲೊಂದು ಕಂಡುಬಂದಾಗ ಜೆಸಿಬಿಯಿಂದ ಅದನ್ನು ಹೊರತೆಗೆದು ನನಗೆ ಅಲ್ಲಿಯ ಶಿವಾನಂದಪ್ಪ ಕಮ್ಮಾರರು ತಿಳಿಸಿದ್ದರನ್ವಯ, ಅಲ್ಲಿಗೆ ಹೋಗಿ ಈ ಪಠ್ಯವನ್ನು ಸಿದ್ಧಪಡಿಸಿದ್ದೇನೆ.

50" ಎತ್ತರ 20" ಅಗಲದ ಕರಿಕಲ್ಲಿನ ಶಾಸನ ಇದಾಗಿದೆ. ಒಂದನೆಯ ಸ್ತರದಲ್ಲಿ ವೀರನೊಬ್ಬ ಖಡ್ಗವನ್ನು ಬಿಲ್ಲು-ಬಾಣ ಹಿಡಿದ ವೀರನೊಬ್ಬನ ಹೊಟ್ಟೆಯಲ್ಲಿ ಚುಚ್ಚಿದ್ದಾನೆ. ಚುಚ್ಚಿದ ವೀರನ ಹಿಂದೆಯೂ ಒಬ್ಬ ವೀರನಿದ್ದಾನೆ. ಚುಚ್ಚಿಸಿಕೊಂಡ ವೀರನ ಹಿಂದೆಯೂ ಬಿಲ್ಲು ಬಾಣ ಹಿಡಿದ ಒಬ್ಬ ವೀರನಿದ್ದಾನೆ. ವೀರನ ಕಾಲ ಕೆಳಗೆ ಶವವೊಂದು ಬಿದ್ದಿದೆ. ಎರಡನೆಯ ಸ್ತರದಲ್ಲಿ ಆರು ಸಾಲುಗಳ ಶಾಸನವಿದೆ. ಮೂರನೆಯ ಸ್ತರದಲ್ಲಿ ಅಪ್ಸರೆಯರು ವೀರ ಮತ್ತು ಆತನ ಹೆಂಡತಿ ಕುಳಿತ ಪಲ್ಲಕ್ಕಿಯನ್ನು ಹೊತ್ತೊಯ್ಯುತ್ತಿದ್ದಾರೆ. ನಾಲ್ಕನೆಯ ಸ್ತರದಲ್ಲಿ ವೀರ ಮಾಸ್ತಿ ದಂಪತಿಗಳು ಕೈಜೋಡಿಸಿ ಒಬ್ಬರನ್ನೊಬ್ಬರು ನೋಡುತ್ತ ಮಂಟಪದಲ್ಲಿ ಕುಳಿತಿದ್ದು, ಮಂಟಪದ ಎಡಬಲಗಳಲ್ಲಿ ಸೊಂಟದ ಮೇಲೆ ಕೈಯಿಟ್ಟುಕೊಂಡು ಒಬ್ಬೊಬ್ಬ ಅಪ್ಸರೆಯರು ಮಂಟಪವನ್ನು ಹಿಡಿದು ನಿಂತಿದ್ದಾರೆ. 5ನೆಯ ಸ್ತರವಲ್ಲಿ ವೀರ ಮತ್ತು ಮಾಸ್ತಿಯರು ಕೈಲಾಸದಲ್ಲಿ ಇರುವುದನ್ನು ಸೂಚಿಸುವಂತೆ ಕೈಮುಗಿದು ಕುಳಿತಿದ್ದು, ಪೂಜಾರಿ ಧೂಪಾರತಿ ಹಿಡಿದು ಶಿವಲಿಂಗವನ್ನು ಪೂಜಿಸುತ್ತಿದ್ದಾನೆ. ಶಿವಲಿಂಗದ ಎದುರಿಗೆ ಕುಳಿತ ನಂದಿಯಿದೆ. ಮೇಲೆ ಎಡಬಲಗಳಲ್ಲಿ ಸೂರ್ಯ-ಚಂದ್ರರಿದ್ದಾರೆ. ಅಕ್ಷರಗಳು ಸರಿಯಿಲ್ಲದೇ ಇರುವುದರಿಂದ ಪಠ್ಯ ಅಸ್ಪಷ್ಟವಾಗಿದೆ. ಕಾರಣ ವಿವರಗಳೂ ಸ್ಪಷ್ಟವಿಲ್ಲ.

ವಿಜಯನಗರದ ಅರಸು ಹರಿಹರದೇವರಾಯನ ಕಾಲದಲ್ಲಿ, ಮಂಗಪ್ಪ ದಣ್ನಾಯಕರು ಮತ್ತು ಕುಮಾರ ಹರಿಹರರಾಯರ ಗೋಗ್ರಹಣದಲ್ಲಿ ಸೋಮನೆಂಬ ವೀರನೊಬ್ಬನು ಮಡಿದುದನ್ನು ತಿಳಿಸುತ್ತದೆ.

1 ಶ್ರೀಮನ್ಮಹಾ ರ(ರಾ)ಜಾಧಿರಾಜ ಪರಮೇಸ್ವ(ಶ್ವ)ರ ಶ್ರೀಮ ಹರಿಹರರಾ–
2 ಯರು ಸುಖರಾಜ್ಯಂ ಗೆಯಿತ್ತಮಿರೆ ॥ ಶ್ರೀಮಂನ್ಮಹಾ ಪ್ರಧ(ಧಾ)ನಂ ಮಂಗ–
3 ಪ್ಪ ದಣ್ನಾಯ[ಕ]ರು ಕುಮಾರ ಹರಿಹರರಾಯನ ತುರುವ ತಳುತಲಿರೆ ಜಾನ–
4 ಯ ಮೊರಿಜ ರಾಜಮನಸಂಖ್ಯುತ್ವನು ಸ್ವಭಾನು ಸಂವತ್ಸರದ ಭಾದ್ರಪ–
5 ದ ಶುದ್ಧ ಮಹೂರಂ ಸಾರಿ ನಳತುದ ತಾಖರಿ ಬಂದನು ಯನಿಬಮ ಭಿವಪ್ಪ
6 ಸೋಮಂ ಪಡೆದನೂ ॥

ಬೈಚವಳ್ಳಿಯ ಶಾಸನ

ಹಾನಗಲ್ಲು ತಾಲೂಕಿನ ಬೈಚವಳ್ಳಿಯಲ್ಲಿ ಇದುವರೆಗೆ ಆರು ಶಾಸನಗಳು ದೊರೆತಿದ್ದು, ಈ ಎಲ್ಲ ಶಾಸನಗಳೂ ಅಪ್ರಕಟಿತವಾಗಿವೆ. ಇವುಗಳ ಪಠ್ಯವನ್ನು ನಾನು ಸಿದ್ಧಪಡಿಸಿದ್ದು, ವಿಜಯನಗರದ ಅಚ್ಯುತರಾಯನ ಕಾಲದ ಶಾಸನವೊಂದರ ಪಠ್ಯವನ್ನು ಮಾತ್ರ ಇಲ್ಲಿ ಪ್ರಕಟಿಸುತ್ತಿದ್ದೇನೆ. ಈ ಶಾಸನವು ಹನುಮಂತದೇವರ ಗುಡಿಯ ಎದುರಿಗಿದ್ದು, ಸದ್ಯ ನೆಲದಲ್ಲಿ ಹುದುಗಿದೆ.

ಪ್ರಸ್ತುತ ಬೆಣಚು ಕಲ್ಲಿನ ಮೇಲೆ ಕೆತ್ತಿದ ಈ ಶಾಸನವು 25" ಅಗಲ 30" ಎತ್ತರವಾಗಿದೆ. ಮೇಲೆ ಯಾವುದೇ ಚಿತ್ರಗಳಿಲ್ಲ.

ವಿಜಯನಗರದ ಅರಸು ಅಚ್ಯುತರಾಯರ ಕಾಲದಲ್ಲಿ ಬಂಕಾಪುರದ ವಿರುಪರಾಯ ದನಿಸೆಟ್ಟಿಯರ ಮಕ್ಕಳು ನಾರಾಯಣಸೆಟ್ಟಿಯು ಜೀರ್ಣೋದ್ಧಾರ ಮಾಡಿಸಿದ ಮಾಸುದೇವರಿಗೆ ತಿರುಪತಯ್ಯನವರು ಅಚ್ಯುತರಾಯರ ನಿರೂಪದಿಂದ ತಮ್ಮ ತಂದೆತಾಯಿಗಳಿಗೆ ಪುಣ್ಯವಾಗಬೇಕೆಂದು ತುಂಗಭದ್ರಾ ತೀರದ ವಿಠಲೇಶ್ವರನ ಸನ್ನಿಧಿಯಲ್ಲಿ ಬೈಚವಳ್ಳಿ ಗ್ರಾಮವನ್ನು ದಾನವಾಗಿ ನೀಡಿದುದನ್ನು ತಿಳಿಸುತ್ತದೆ.

ಶಾಸನದಲ್ಲಿ ಬರುವ "ಶಾಲಿವಾಹನ ಶಕವರುಷ 1422ನೆಯ ಮನ್ಮಥ ಸಂವತ್ಸರದ ಜೇಷ್ಟ ಸು . . . ." ಎನ್ನುವ ಮಿತಿಯು ಸರಿಯಿಲ್ಲ. ಶಕವರ್ಷ 1422ರಲ್ಲಿ ರೌದ್ರನಾಮ ಸಂವತ್ಸರವಿದೆ. ಮನ್ಮಥ ನಾಮ ಸಂವತ್ಸರವು ಶಕವರ್ಷ 1457ರಲ್ಲಿ ಬರುತ್ತದೆ. ಉಳಿದ ವಿವರಗಳಂತೆ ಶಾಸನ ರಚನಾ ಕಾಲವು ಕ್ರಿ.ಶ. 1535 ರ ಮೇ ತಿಂಗಳಲ್ಲಿ ಬರುತ್ತದೆ.

ಹನುಮಂತದೇವರ ಗುಡಿ ಎದುರಿನ ಶಾಸನ ಕ್ರಿ.ಶ. 1535 (*ARSIE,* 1950-51, No. 48, ಅಪ್ರಕಟಿತ)

1 ಶುಭಮಸ್ತು । ನಮಸ್ತುಂಗ ಸಿರಶ್ಚುಂಬಿ ಚಂದ್ರಚಾಮರ ಚಾರವೇ ತ್ರೈ–
2 ಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ । ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹ–
3 ನ ಶಕವರುಷ 1422ನೆಯ ಮನ್ಮಥ ಸಂವತ್ಸರದ ಜೇಷ್ಟ ಸು . . . . ಲೂಕರ ಮನ್ ಮಹಾರಾಜಾ–
4 ಧಿರಾಜ ಪರಮೇಶ್ವರ ಶ್ರೀ ವೀರಪ್ರತಾಪ . . . . ಅಚುತರಾಯ ಮಹಾರಾಯನೂ ವಿಜಯನ–
5 ಗರದಲ್ಲಿ ಸಿಂಹಾಸನಾರೂಢನಾಗಿ ಪ್ರುಥ್ವೀರಾಜ್ಯಂ ಆಳುತ್ತಮಿರಲು ಬಂಕಾಪುರದಲೂ ವಿರುಪರಾಯ

6 ದನಿಸೆಟ್ಟಿಯರ ಮಕ್ಕಳು ನಾರಾಯಣಸೆಟ್ಟಿ ಜಿರ್ನೋದ್ಧಾರ ಮಾಡಿದರಾ ಮಾಸುದೇವರಿಗೆ . . . . .

7 ತಿರುಪತಯ್ಯನವರು . . . .

8 . . . .

9 . . . . . . ಅಚುತರಾಯ ಮಹಾರಾಯರ ನಿರೂಪದಿಂದಲು . . . . . ತಿಥಿಯ ಸೂರ್‍ಯ್ಯ . .

10 ಗ ಪುಂಣ್ಯಬಲದಲೂ ತುಂಗಭದ್ರಾತೀರ ವಿಠಲೇಶ್ವರನ ಸಂನಿಧಿಯಲೂ ಅಚಾಂತಕಾ

11 ನಂಮ ತಂದೆತಾಯಿಗಳಿಗೂ ಆಗಮಕೆ ಸಲುವ ಚತುಸ್ಸೀಮೆಯೊಳ ಗಾದ ಕೊಟ ಕಂಭ ನಿರೋರಂಭ ನಿವಿನಿತ . . . . .

12 ಣ ಚಾಕೊಪ್ಪೆವಾಗಿ ಆಗಮಕೆ ಸಲುವ ಚತುಸ್ಸೀಮೆಯೊಳಗಾದ ಕೊಟ ಕಂಭ ನಿರೋರಂಭ ನಿವಿನಿತ . . . .

13 ಷಾಣ ಲಕ್ಷ್ಮಿ ಅಂಗಾ ಸಿದ್ಧ ಸಾಧ್ಯಂಗಳೆಂಬ ಅಷ್ಟಭೋಗ ತೇಜಸ್ವಾಮ್ಯ ಸರ್ವವೃತ್ತಿ ಸಮಸ್ತದೊಳಿಸವಾವ .

14 . ಚಂದ್ರಾರ್ಕವಾಗಿ ಅನು ಮಾಡಿಕೊಂಡು ಯಿಹುದು ಸಿಂಧು . . . . ದಾನಧರ್ಮಶಾಸನ . . . .

15 . . ತೋಪದಕೆ ಧರ್ಮಸಾಕ್ಷಿಗಳು ಆದಿತ್ಯ ಚಂದ್ರಾನನತಾನೆಲರ್‍ವ್ವಡಾ ಭೂದೇವಿ . . . *

* ಶಾಸನದ ಮುಂದಿನ ಭಾಗ ನೆಲದಲ್ಲಿ ಹುದುಗಿದೆ.



ವೀರಮಾಸ್ತಿಕಲ್ಲು



ವೀರಗಲ್ಲಿನ ಶಾಸನ ಭಾಗ

2

ವಿಜಯನಗರ ಕಾಲದ ಪಡುಬಿದ್ರಿಯ ಶಾಸನ

ಪ್ರೊ. ಟಿ. ಮುರುಗೇಶಿ

ಉಡುಪಿಜಿಲ್ಲೆ, ಉಡುಪಿ ತಾಲೂಕಿನ ಪಡುಬಿದ್ರಿ ಗ್ರಾಮ ಪಂಚಾಯಿತಿಯ ಪಾದೆಬೆಟ್ಟು ಗ್ರಾಮದ ಕಲಾಯಿಗುತ್ತುವಿನ "ಗುಡ್ಡೆಟ್ಟು" ಎಂಬ ಬೆಟ್ಟು ಗದ್ದೆಯಲ್ಲಿ ವಿಜಯನಗರದ ಅಪ್ರಕಟಿತ ಶಾಸನವೊಂದು ಪತ್ತೆಯಾಗಿದೆ. ತಿಳಿಕಂದು ಮತ್ತು ಬಿಳಿ ಪಟ್ಟೆಗಳನ್ನೊಳಗೊಂಡ ಸ್ಥಳೀಯ ನೀಸ್ ಶಿಲೆಯನ್ನು ಶಾಸನ ರಚನೆಗಾಗಿ ಬಳಸಲಾಗಿದೆ. ಶಾಸನ 32 ಇಂಚು ಎತ್ತರ, 24 ಇಂಚು ಅಗಲ ಮತ್ತು 6 ಇಂಚು ದಪ್ಪವಿದೆ. ಶಾಸನದ ಮೇಲ್ಭಾಗವನ್ನು ಲಾಳಾಕಾರದ ಪಟ್ಟಿಕೆಯನ್ನಾಗಿ ವಿನ್ಯಾಸಗೊಳಿಸಲಾಗಿದೆ. ಪಟ್ಟಿಕೆಯ ಮಧ್ಯೆ ಶಿವಲಿಂಗವಿದ್ದು, ಲಿಂಗದ ಸುತ್ತ ಲಾಳಾಕಾರದ ಪ್ರಭಾವಳಿಯಿದೆ. ಲಿಂಗದ ಎಡ – ಬಲಗಳಲ್ಲಿ ದೀಪಸ್ತಂಭಗಳಿವೆ. ಶಾಸನದ ಬಲಭಾಗದಲ್ಲಿ ಕುಳಿತಿರುವ ನಂದಿಯ ಶಿಲ್ಪವಿದೆ. ಈ ಪಟ್ಟಿಕೆಯ ಕೆಳಭಾಗದಲ್ಲಿ ಸುಮಾರು 15 ಸಾಲುಗಳಲ್ಲಿ ಬರೆದ ಕನ್ನಡ ಲಿಪಿ ಮತ್ತು ಭಾಷೆಯ ಶಾಸನವಿದೆ. ಕ್ರಿ.ಶ. 1371? ರ ಈ ಶಾಸನ ಸಂಗಮ ದೊರೆ ಮೊದಲನೇ ಬುಕ್ಕ ಹಾಗೂ ಬಾರಕೂರಿನ ರಾಜ್ಯಪಾಲ ಗೋಪರಸನನ್ನು ಉಲ್ಲೇಖಿಸುತ್ತದೆ. ಶಾಸನದ ಮುಖ್ಯ ಉದ್ದೇಶ, ಬಿದಿರೆಯ ಅಂದರೆ ಈಗಿನ ಪಡುಬಿದಿರೆಯ ದೇವರಿಗೆ ನೀಡಿದ ದಾನವನ್ನು ದಾಖಲಿಸುವುದಾಗಿದೆ.

ಶಾಸನದ ಪಾಠ

1. {ನಮಸ್ತು}ಂಗ ಸಿರಸ್ತುಂಗಶ್ಚಂದ್ರ ಚಾಮರವೇ ತ್ರಯಿ ಲೋಕ್ಯ ನಗರಾ
2. ರಂಭ ಮುಲ ಸ್ತಂಬಾಂ ಸಂಭವೇ ಸ್ವಸ್ತಿ ಶ್ರೀಮತು ಸಖವರುಷ {1293} ನೆಯ
3. ವಿರೋಧಿ ಕೃತು ಸಂವತ್ಸರದ – – – – – – – – ವೀರ ಬುಕಂಣೊಡೆ
4. ರ – – ರಾಜ್ಯಂ ಗೈಉ – – – ಗೋಪರಸಂ – – – {ಬಾರಕೂರ} ರಾಜಗೆಯಿ
5. ವಂದು ಬಿದಿರೆಯ– ದೇವರಿಗೆ ನ– – ಮಾ – –
6. – ಗ್ರಮದ ಉತಾರ ಚಿತ್ರವಾಡೆ ಮಾ {ಕೂ?} ಡಿ {ದ ಉಡುಪಿನ}
7. ದೇವರ ದೇವಸ್ವ – – – ಬೆಯಿರೆದ ಸಿಲಾ ಸಾಸನ – ಕವೆನಾಡ ಗ್ರಮ
8. ದಲು – – ಯಂ ಬೆಟ್ಟು ಚಿಂಮುವೆರ್ಗನ ಒಜಿಂದ – – –

9. [ಮದಿ] ಮಲೆಯ ಒಜಿಂದ ಮುಡಲು ಕುರುಡ[ಂ]ಕೆ ರಿಂಬ
10. ಬಯಲು ಗುಡಿ ದೇವಸ್ವ ಅಲಿಂ{ ಬೆ} ದ { ಬನ} ದೇವರಿಗೆ ಸಹ ನಡವ
11. ರತಮು– – – ಗಡೆಗೆ ಚಿತವಾಡಿಯ – – ಯ – – –
12. ಬುವಿ – – – ವ – – [ಕೆ?] ಮಲಾಯ ಅ – – – ಯ – – –
13. – – – – – – – ಅಡ ಚಿತ್ರವಾಡಿಯ ದೇವ – – – –
14. ಗೆ – – – – – – ಪ್ರ – – – – – ನಾಉಳಿದ – – – –

ಚರ್ಚೆ:

ಶಾಸನದ ಪಠ್ಯವನ್ನು ಇನ್ನು ಉತ್ತಮಪಡಿಸಲು ಹಾಗೂ ಪರಿಷ್ಕರಿಸಲು ಸಾದ್ಯವಿದೆ. ಶಾಸನೋಕ್ತ ಚಿತ್ರವಾಡೆ ಮತ್ತು ಕವೆನಾಡುಗಳನ್ನು ಗುರುತಿಸಬೇಕಾಗಿದೆ. ಕೆರಿಂಬಾ ಬಹುಶಃ ಶಾಸನದ ಸಮೀಪವಿರುವ ಈಗಿನ ಕೆರೆಮಾ ಪ್ರದೇಶವಾಗಿರಬಹುದು. ವಿಜಯನಗರದ ಆಳ್ವಿಕೆಯ ಕಾಲದಲ್ಲಿ ಬಾರಕೂರಿನ ರಾಜ್ಯಪಾಲನಾಗಿದ್ದ ಗೋಪರಸನ ಉಲ್ಲೇಖವಿರುವ ಅನೇಕ ಶಾಸನಗಳು ಈಗಾಗಲೇ ವರದಿಯಾಗಿದ್ದು, ಪ್ರಸ್ತುತ ಶಾಸನ ಮತ್ತೊಂದು ಹೊಸ ಸೇರ್ಪಡೆಯಾಗಿದೆ.

ರಾಮರಾಯನ ತಾಮ್ರ ಶಾಸನ

ಡಾ॥ ಎಸ್. ಜಿ. ಸಾಮಕ್ – ಡಾ॥ ಆರ್. ಗೋಪಾಲ್ – ಎಚ್. ಖಂಡೋಬರಾವ್

ಪ್ರಸ್ತುತ ತಾಮ್ರ ಶಾಸನ ಶಿವಮೊಗ್ಗದ ಖ್ಯಾತ ನಾಣ್ಯ ಸಂಗ್ರಹಕಾರರು ಹಾಗೂ ಅಮೂಲ್ಯ ಶೋಧ ವಸ್ತುಸಂಗ್ರಹಾಲಯದ ಸಂಸ್ಥಾಪಕ ನಿರ್ದೇಶಕರಾದ ಶ್ರೀಯುತ ಎಚ್. ಖಂಡೋಬರಾಯರ ಬಳಿಯಿದೆ. ಸುಮಾರು 16 ಸೆಂ.ಮೀ. ಅಗಲ ಹಾಗೂ 30 ಸೆಂ.ಮೀ. ಉದ್ದದ ಹಲಗೆಯ ಮೇಲೆ ಈ ಶಾಸನ ಬರೆಯಲ್ಪಟ್ಟಿದೆ. ಶಾಸನದ ಹಲಗೆಯ ಸುತ್ತಲೂ 5 ಮಿ.ಮೀ. ಅಗಲದ ಸಮಾನಾಂತರ ಗೆರೆಗಳನ್ನು ಕೊರೆಯಲಾಗಿದೆ. ಇದೊಂದು ಅಪೂರ್ಣ ಶಾಸನವಾಗಿದ್ದು ಮೊದಲ ಹಲಗೆ ಮಾತ್ರ ಲಭ್ಯವಿದ್ದು ಉಳಿದವು ದೊರೆತಿಲ್ಲ. ಈ ತಾಮ್ರ ಪಟದ ಮೂಲ ಭದ್ರಾವತಿಯೆಂದು ತಿಳಿದು ಬಂದಿದೆ. ಇದರಲ್ಲಿ 26 ಸಾಲುಗಳಿದ್ದು ಶುಭಮಸ್ತುವಿನಿಂದ ಪ್ರಾರಂಭಿಸಲಾಗಿದೆ.

ಶಾಸನ ಪಾಠ

ಶುಭಮಸ್ತು ।

1 ನಮಸ್ತುಂಗಶಿರಶ್ಚುಂಭಿಚಂದ್ರಚಾಮರಚಾರವೇ । ತ್ರೈ
2 ಲೋಕ್ಯ ನಗರಾರಂಭಮೂಲಸ್ತಂಭಾಯಶಂಭವೇ । ಯಸ್ಯ
3 ಸಂಪರ್ಕಪುಣ್ಯೇನ ನಾರೀರತ್ನಮಭೂಚ್ಛಿಲಾ । ಯದುಪಾಸ್ಯಂ
4 ಸುಮನಸಾಂ ತದ್ವಸ್ತುದ್ವಂದ್ವಮಾಶ್ರಯೇ । ಯಸ್ಯ ದ್ವಿರದವಕ್ತ್ರಾ
5 ದ್ಯಾಃ ಪಾರಿಷದ್ಯಾಃ ಪರಶ್ಶತಂ । ವಿಘ್ನಂ ನಿಘ್ನಂತಿ ಸತತಂ ವಿ
6 ಷ್ವಕ್ಸೇನಂ ತಮಾಶ್ರಯೇ । ಹರೇರ್ಲೀಲಾವರಾಹಸ್ಯ ದಂ
7 ಷ್ಟ್ರಾದಂಡಃ ಸ ಪಾತು ನಃ । ಹೇಮಾದ್ರಿಕಲಶಾ ಯತ್ರ ಧಾತ್ರೀ
8 ಛತ್ರಶ್ರಿಯಂ ದದೌ । ಪೌತ್ರಸ್ತಸ್ಯ ಪುರೂರುವಾ ಬುಧಸುತಸ್ತ
9 ಸ್ಯಾಯುರಸ್ಯಾತ್ಮಜಃ । ಸಂಜಜ್ಞೇ ನಹುಷೋ ಯಯಾತಿರಭ
10 ವತ್ತಸ್ಮಾಚ್ಚ ಪೂರುಸ್ತತಃ । ತದ್ವಂಶೇ ಭರತೋ ಬಭೂವ ನೃಪತಿಸ್ತ

11 ತ್ಸಂತತೌ ಶಂತನುಃ ತತ್ತುಲ್ಯೋ ವಿಜಯೋಭಿಮನ್ಯುರುದಭೂತ್ತಸ್ಮಾತ್ಪ
12 ರೀಕ್ಷಾದಯಃ । ಶ್ರೀರಾಮರಾಯ ಕ್ಷಿತಿಪಾಲಕಸ್ಯ ಚಿಂತಾಮಣೇರ
13 ರ್ಥಿಕದಂಬಕಸ್ಯ । ಲಕ್ಷ್ಮೀರಿವಾಂಭೋರುಹಲೋಚನಸ್ಯ ಲಕ್ಷ್ಮಾಂ
14 ಬಿಕಾಮುಷ್ಯ ಮಹಿಷ್ಯಥಾಸೀದ(ದ್) । ತಸ್ಯಾಧಿಕಃ ಸಮಭವತ್ತನ
15 ಯಸ್ತಪೋಭಿಃ ಶ್ರೀರಂಗರಾಜನೃಪತಿಃ ಶಶಿವಂಶದೀಪಃ
16 ಆಸಂತ್ಸಮುಲ್ಲಸತಿ ಧಾಮನಿ ಯಸ್ಯ ಚಿತ್ರಂ ನೇತ್ರಾಣಿ ವೈರಿ
17 ಸ(ಸು)ದೃಶಾಂ ಚ ನಿರಂಜನಾನಿ । ಸತೀಂ ತಿರುಮಲಾಂಬಿಕಾಂ
18 ಚರಿತಶೀಲಯಾರುಂಧತೀಂ ಪ್ರಿಯಾಮಪಿ ತಿತಿಕ್ಷಯಾ ವಸುಮ
19 ತೀಂ ಯಶೋರುಂಧತೀಂ ಹಿಮಾಂಶುರಿವ ರೋಹಿಣೀಂ ಹೃದಯಹಾ
20 ರಿಣೀಂ ಸದ್ಗುಣೈರಮೋದತ ಸಧರ್ಮಿಣೀಮಿಯಮವಾಪ ವೀ
21 ರಾಗ್ರಣೀಃ । ರಚಿತನಯವಿಚಾರಂ ರಾಮರಾಜಂ ಚ ಧೀರಂ ವರ
22 ತಿರುಮಲರಾಯಂ ವೆಂಕಟಾದ್ರಿಕ್ಷಿತೀಶಂ ಅಜನಯತ ಸಮೇ
23 ತಾನಾನುಪೂರ್ವ್ಯಾ ಕುಮಾರಾನಿಹ ತಿರುಮಲದೇವ್ಯಾಮೇವ ರಾಜಾ
24 ಮಹೋಜಾಃ । ಸಕಲಭುವನಕಂಟಕಾನರಾತೀ[ನ್*] ಸಂಯ
25 ತಿ ನಿಹತ್ಯ ಸ ರಾಮರಾಜವೀರಃ । ಭರತಮನುಭಗೀರಥಾ
26 ಧಿರಾಜಂ ಪ್ರಥಿತಯಶಾಃ ಪ್ರಶಶಾಸ ಚಕ್ರಮುರ್ವ್ಯಾಃ । ಆ

ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ । ತ್ರೈಲೋಕ್ಯನಗರಾರಂಭಮೂಲಸ್ತಂಭಾಯಶಂಭವೇ । ಯಸ್ಯಸಂಪರ್ಕಪುಣ್ಯೇನ ನಾರೀರತ್ನಮಭೂಚ್ಛಿಲಾ । ಯಚುಪಾಸ್ಯಂ ಸುಮನಸಾಂ ತದ್ವಸ್ತುದ್ವಂದ್ವಮಾಶ್ರಯೇ । ಯಸ್ಯ ದ್ವಿರದವಕ್ತ್ರಾದ್ಯಾಃ ಪಾರಿಷದ್ಯಾಃ ಪರಶ್ಶತಂ । ವಿಘ್ನಂ ನಿಘ್ನಂತಿ ಸತತಂ ವಿಷ್ವಕ್ಸೇನಂ ತಮಾಶ್ರಯೇ । ಹರೇರ್ಲೀಲಾವರಾಹಸ್ಯ ದಂಷ್ಟ್ರಾದಂಡಃ ಸ ಪಾತು ನಃ । ಹೇಮಾದ್ರಿಕಲಶಾ ಯತ್ರ ಧಾತ್ರೀಛತ್ರಶ್ರಿಯಂ ದದೌ । ಪೌತ್ರಸ್ತಸ್ಯ ಪುರೂರುವಾ ಬುಧಸುತಸ್ತಸ್ಯಾಯುರಸ್ಯಾತ್ಮಜಃ । ಸಂಜಜ್ಞೇ ನಹುಷೋ ಯಯಾತಿರಭ ವತ್ತಸ್ಮಾಚ್ಚ ಪೂರುಸ್ತತಃ । ತದ್ವಂಶೇ ಭರತೋ ಬಭೂವ ನೃಪತಿಸ್ತತ್ಸಂತತೌ ಶಂತನುಃ ತತ್ತುಲ್ಯೋವಿಜಯೋಭಿಮನ್ಯುರುದಭೂತ್ತಸ್ಮಾತ್ಪರೀಕ್ಷಾದಯಃ । ಶ್ರೀರಾಮರಾಯ ಕ್ಷಿತಿಪಾಲಕಸ್ಯ ಚಿಂತಾಮಣೇರರ್ಥಿಕದಂಬಕಸ್ಯ । ಲಕ್ಷ್ಮೀರಿವಾಂಭೋರುಹಲೋಚನಸ್ಯ ಲಕ್ಷ್ಮಾಂಬಿಕಾಮುಷ್ಯ ಮಹಿಷ್ಯಥಾಸೀದ(ದ್) । ತಸ್ಯಾಧಿಕಃ ಸಮಭವತ್ತನಯಸ್ತಪೋಭಿಃ ಶ್ರೀರಂಗರಾಜನೃಪತಿಃ ಶಶಿವಂಶದೀಪಃ ಆಸಂತ್ಸಮುಲ್ಲಸತಿ ಧಾಮನಿ ಯಸ್ಯ ಚಿತ್ರಂ ನೇತ್ರಾಣಿ ವೈರಿಸ(ಸು)ದೃಶಾಂ ಚ ನಿರಂಜನಾನಿ । ಸತೀಂ ತಿರುಮಲಾಂಬಿಕಾಂ ಚರಿತಶೀಲಯಾರುಂಧತೀಂ ಪ್ರಿಯಾಮಪಿ ತಿತಿಕ್ಷಯಾ ವಸುಮತೀಂ ಯಶೋರುಂಧತೀಂ ಹಿಮಾಂಶುರಿವ ರೋಹಿಣೀಂ ಹೃದಯಹಾರಿಣೀಂ ಸದ್ಗುಣೈರಮೋದತ ಸಧರ್ಮಿಣೀಮಿಯಮವಾಪ ವೀರಾಗ್ರಣೀಃ । ರಚಿತನಯವಿಚಾರಂ ರಾಮರಾಜಂ ಚ ಧೀರಂ ವರತಿರುಮಲರಾಯಂ ವೆಂಕಟಾದ್ರಿಕ್ಷಿತೀಶಂ ಅಜನಯತ ಸಮೇತಾನಾನುಪೂರ್ವ್ಯಾ ಕುಮಾರಾನಿಹ ತಿರುಮಲ ದೇವ್ಯಾಮೇವ ರಾಜಾಮಹೋಜಾಃ । ಸಕನಭುವನಕಂಟಕಾನರಾತೀ[ನ್*] ಸಂಯತಿ ನಿಹತ್ಯ ಸ ರಾಮರಾಜವೀರಃ । ಭರತಮನುಭಗೀರಥಾಧಿರಾಜಂ ಪ್ರಥಿತಯಶಾಃ ಪ್ರಶಶಾಸ ಚಕ್ರಮುರ್ವ್ಯಾಃ । ಆ

ಸಾರಾಂಶ

ಪ್ರಸ್ತುತ ಶಾಸನದ ಮೊದಲ ಏಳು ಸಾಲುಗಳಲ್ಲಿ ಧ್ಯಾನ ಶ್ಲೋಕಗಳಿದ್ದು, ನಂತರದ ಸಾಲುಗಳಲ್ಲಿ ಭರತವಂಶದ ಅರಸರುಗಳಾದ ಪುರೂರವ, ನಹುಷ, ಯಯಾತಿ, ಭರತ, ಶಂತನು, ಅಭಿಮನ್ಯು, ಪರೀಕ್ಷಿತರ ಹೆಸರುಗಳನ್ನು ಉಲ್ಲೇಖಿಸಿ, ಅಂತಹ ವಂಶದಲ್ಲಿ ಜನಿಸಿದವನು ಶ್ರೀರಾಮರಾಯ. ಇವನ ತಾಯಿ ಅಂಬಿಕಾಯೆಂದು ತಿಳಿಸಿ ಇದರಲ್ಲಿ ಇತರೇ ಪ್ರಮುಖರೆಂದರೆ ಶ್ರೀರಂಗರಾಜ, ನೀಲಾಂಬಿಕಾ, ರಾಮರಾಜ, ತಿರುಮಲರಾಯ, ವೆಂಕಟಾದ್ರಿ, ತಿರುಮಲರಾಜ ಹಾಗೂ ರಾಮರಾಜ ಎಂದು ಉಲ್ಲೇಖಿಸಿದೆ. ಕೊನೆಯಲ್ಲಿ ರಾಮರಾಜನು ತಿರುಮಲದೇವಿಯಲ್ಲಿ ತನಗೆ ಅನುಕೂಲಕರವಾಗಿರುವ ಎಲ್ಲರ ಹೊಗಳಿಕೆಗೆ ಪಾತ್ರರಾದ ಮಕ್ಕಳನ್ನು ಪಡೆದನು (ಆದರೆ ಅವುಗಳ ಉಲ್ಲೇಖ ಇಲ್ಲ). ಪರಾಕ್ರಮಿಯಾದ ಶತ್ರುಗಳಿಗೆ ಸ್ವಪ್ನದಂತಿದ್ದು ಯುದ್ಧದಲ್ಲಿ ಶತ್ರು (ಯಾರೆಂಬುದಿಲ್ಲ)ಗಳನ್ನು ಕೊಂದು ಭರತನಂತೆ, ಅಧಿರಾಜನಾದ ಭಗೀರಥನಂತೆ ಪ್ರಖ್ಯಾತವಾದ ಯಶಸ್ಸನ್ನು ಸಂಪಾದಿಸಿ ಸಮಾಜ ತೃಪ್ತಿಪಡುವಷ್ಟು ಕೊಡುಗೈ ದಾನಿಯಾಗಿದ್ದನು. (ಮುಂದೆ ಅಪೂರ್ಣ).

ಚರ್ಚೆ

ಪ್ರಸ್ತುತ ಶಾಸನದ ರೀತಿಯ ಹಲವು ತಾಮ್ರ ಪಠಗಳ ಉಲ್ಲೇಖ ಈಗಾಗಲೇ ವಿಜಯನಗರ ಶಾಸನ ಸಂಪುಟಗಳಲ್ಲಿ ಪ್ರಕಟಗೊಂಡಿವೆ. ಆದರೂ ಇದು ಕೂಡ ಒಂದು ಹೊಸ ಸೇರ್ಪಡೆಯೆಂದು ಭಾವಿಸಬಹುದು.

4

ಬಯಕಾರ ರಾಮಪ್ಪನ ಶಿಲಾಶಾಸನಗಳು

ಡಾ॥ ಎಚ್. ತಿಪ್ಪೇಸ್ವಾಮಿ

ಪೀಠಿಕೆ

ವಿಜಯನಗರ ಸಾಮ್ರಾಜ್ಯ ದಕ್ಷಿಣ ಭಾರತದ ಅತಿ ಪ್ರತಿಷ್ಠಿತ ಸಾಮ್ರಾಜ್ಯಗಳಲ್ಲಿ ಒಂದು. ಇದನ್ನು ಆಳಿದ ರಾಜರು ಅದರ ಉನ್ನತಿಗಾಗಿ ಹಗಲಿರುಳು ಶ್ರಮಿಸಿದರು. ಇದರ ಫಲವಾಗಿ ಈ ಸಾಮ್ರಾಜ್ಯ ಬಹುಬೇಗನೆ ಪ್ರಸಿದ್ಧಿಯನ್ನು ಪಡೆಯಿತು. ಈ ಕಾಲಾವಧಿಯಲ್ಲಿ (ಕ್ರಿ.ಶ. 1336–1565) ತಮ್ಮ ರಾಜ್ಯದ ಅಭಿವೃದ್ಧಿಗಾಗಿ ಶ್ರಮಿಸಿದ ಹಲವಾರು ಸಾಮಂತ ಅಧಿಕಾರಿಗಳಿದ್ದರು. ಅವರಲ್ಲಿ ಬಯಕಾರ ರಾಮಪ್ಪ (ಕ್ರಿ.ಶ. 1539–1559) ಪ್ರಮುಖವಾಗಿದ್ದಾನೆ. ಈತನು ತನ್ನ ಸೇವಾವಧಿಯಲ್ಲಿ ಹಲವಾರು ಪ್ರಜಾಹಿತ ಕಾರ್ಯಗಳನ್ನು ಮಾಡಿ ಕನ್ನಡನಾಡಿನ ಇತಿಹಾಸದಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದಿದ್ದಾನೆ.

ಬಯಕಾರ ರಾಮಪ್ಪನ ಚಾರಿತ್ರಿಕ ಮಹತ್ವ

ವಿಜಯನಗರದ ಅಂತ್ಯಕಾಲದಲ್ಲಿ (ಕ್ರಿ.ಶ. 1539–1559) ಜೀವಿಸಿದ್ದ ಬಯಕಾರ ರಾಮಪ್ಪನು ಚರಿತ್ರೆಯಲ್ಲಿ ತನ್ನದೇ ಆದ ಮಹತ್ವದ ಸ್ಥಾನವನ್ನು ಪಡೆದಿದ್ದಾನೆ. ಕೆಲ ಐತಿಹ್ಯಗಳು ಬಯಕಾರ ರಾಮಪ್ಪನನ್ನು ಒಬ್ಬ ಚಾರಿತ್ರಿಕ ಪುರುಷನೆಂದು, ರಾಜ ಮಹಾರಾಜರಿಗೆ ಹೋಲಿಸುತ್ತವೆ.[1] ಆದರೆ ಕೆಲ ಕೈಫಿಯತ್ತುಗಳು ಈತನೊಬ್ಬ ಪಾಳೇಗಾರನಾಗಿದ್ದು, ಕೆಲ ಸಮಕಾಲೀನರನ್ನು ಯುದ್ಧಗಳಲ್ಲಿ ಸೋಲಿಸಿ ತನ್ನ ರಾಜ್ಯವನ್ನು ಬಲಪಡಿಸಿಕೊಂಡನೆಂದು ವಿವರಿಸುತ್ತವೆ.[2] ಬಯಕಾರ ರಾಮಪ್ಪನ ಕುರಿತು ನಮಗೆ ಹೆಚ್ಚಿನ ಮಾಹಿತಿ ಶಾಸನಮೂಲಗಳಿಂದಲೇ ಲಭ್ಯವಾಗುತ್ತದೆ. ಅವು ವಿವರಿಸುವಂತೆ ಈತನ ಪೂರ್ವಜರು ಮೂಲತಃ ಆಂಧ್ರಪ್ರದೇಶದ ಕೊಂಡವೀಡು ಎನ್ನುವ ಪ್ರದೇಶಕ್ಕೆ ಸೇರಿದವರಾಗಿದ್ದು, ಕಾಲಕ್ರಮೇಣ ಕರ್ನಾಟಕಕ್ಕೆ ವಲಸೆ ಬಂದು ಜೀವಿಸಿರಬಹುದಾದ ಸಾಧ್ಯತೆಯಿದೆ. ಈತನು ವಿಜಯನಗರದ ಪ್ರಖ್ಯಾತ ಅರಸರಲ್ಲೊಬ್ಬನಾದ ತುಳುವನೆತನದ ಅಚ್ಯುತರಾಯ, ಸದಾಶಿವರಾಯನ ಕಾಲದಲ್ಲಿ (ಕ್ರಿ.ಶ. 1539–1559) ಜೀವಿಸಿದ್ದನು. ಈತನನ್ನು ಶಾಸನಗಳು 'ಬಯಕಾರ ರಾಮಪ್ಪಯ್ಯ' ಎಂದು ಇಲ್ಲವೇ 'ಬಯಕಾರ ರಾಮಪ್ಪ'ನೆಂದು ಉಲ್ಲೇಖಿಸುತ್ತವೆ.[3] ಅಚ್ಯುತರಾಯನ ಸಾಮಂತ ಅಧಿಕಾರಿಯಾಗಿದ್ದ ಈತನು ತನ್ನ ಅರಸನ ಆಜ್ಞೆಯ ಮೇರೆಗೆ ಇಲ್ಲವೇ ತನ್ನ ಸ್ವಇಚ್ಛೆಯಂತೆ ಹಲವಾರು ಪ್ರಜಾಹಿತ ಕಾರ್ಯಗಳನ್ನು ಕೈಗೊಂಡನು. ಅವುಗಳನ್ನು ತನ್ನ ಕಾಲದಲ್ಲಿ ತನ್ನಿಂದ ಇಲ್ಲವೇ ತನ್ನ ಅಧೀನಾಧಿಕಾರಿಗಳಿಂದ ಹೊರಡಿಸಲ್ಪಟ್ಟ ಶಾಸನಗಳಲ್ಲಿ ದಾಖಲಿಸಿದ್ದಾನೆ. ಆತನು ತನ್ನ ಜೀವಿತಾವಧಿಯಲ್ಲಿ ಹಲವು ಅಗ್ರಹಾರಗಳನ್ನು, ನಗರಗಳನ್ನು, ಕೆರೆಗಳನ್ನು, ತಟಾಕಗಳನ್ನು ಹಾಗೂ ಹಲವಾರು ಬನಗಳನ್ನು ನಿರ್ಮಿಸಿದ್ದಾನೆ. ಇದು ಪ್ರಜೆಗಳ ಬಗ್ಗೆ

ಆತನಿಗಿದ್ದ ಕಾಳಜಿ ಮತ್ತು ಪ್ರಜಾಭಿವೃದ್ಧಿಯ ದೂರದೃಷ್ಟಿಯನ್ನು ಎತ್ತಿ ತೋರಿಸುತ್ತದೆ. ಚರಿತ್ರೆಯಲ್ಲಿ ಕೇವಲ ರಾಜ ಮಹರಾಜರಿಗಷ್ಟೇ ಸೀಮಿತವಾಗಿದ್ದ ಈ ರೀತಿಯ ಪ್ರಜಾಹಿತ ಕಾರ್ಯಗಳನ್ನು, ಸಾಮಂತನೋರ್ವನು ರಾಜಮಹರಾಜರಷ್ಟೇ ಪ್ರಭಾವಶಾಲಿಯಾಗಿ ಕಾರ್ಯ ನಿರ್ವಹಿಸಿರುವುದು ಗಮನಾರ್ಹವಾಗಿದ್ದು, ಇದನ್ನು ಆತನ ಕಾಲದ ಹಲವು ಶಾಸನಗಳು ಧೃಢೀಕರಿಸಿವೆ.

ಬಯಕಾರ ರಾಮಪ್ಪನ ಜೀವನ ಮತ್ತು ಸಾಧನೆಯನ್ನು ಅರಿಯಲು ಅವನ ಕಾಲಾವಧಿಯ ಶಾಸನಗಳು ಬಹಳ ಮುಖ್ಯವಾದ ಆಕರಗಳಾಗಿವೆ. ಈತನು ಹೊರಡಿಸಿರುವ ಶಾಸನಗಳು ಮುಖ್ಯವಾಗಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ತಿಮ್ಮಲಾಪುರ, ಹಾರುವನಹಳ್ಳಿ, ಚಿಲಕನಹಟ್ಟಿ, ಪೊತಲಕಟ್ಟೆ, ಮರಿಯಮ್ಮನಹಳ್ಳಿ, ಗೊಲ್ಲರಹಳ್ಳಿಗಳಲ್ಲಿ ಒಟ್ಟು 12 ಶಾಸನಗಳು ದೊರತಿವೆ. ಇದೇ ರೀತಿ ಹಗರಿಬೊಮ್ಮನಹಳ್ಳಿ ತಾಲೂಕಿನ ಮಗಿಮಾವಿನಹಳ್ಳಿಯಲ್ಲಿ ಎರಡು ಶಾಸನಗಳು ದೊರತಿವೆ. ಅದೇ ರೀತಿ ಸಂಡೂರು ತಾಲೂಕಿನ ಚಿಕ್ಕ ಕೆರೆಯಾಗಿನಹಳ್ಳಿ ಒಂದು ಶಾಸನ ಇದೆ. ಹಾಗೂ ಕೂಡ್ಲಿಗಿ ತಾಲೂಕಿನ ಹುಲಿಕುಂಟೆಯಲ್ಲಿ ಒಂದು ಶಿಲಾಶಾಸನವಿದೆ. ಈವರೆಗೆ ಪ್ರಕಟವಾಗಿರುವ 21 ಶಿಲಾಶಾಸನಗಳು ಮತ್ತು ಇತ್ತೀಚೆಗೆ ದೊರೆತಿರುವ ಆರು ಅಪ್ರಕಟಿತ ಶಾಸನಗಳು ಸಹ ಬಯಕಾರ ರಾಮಪ್ಪನ ಕಾಲಾವಧಿಗೆ ಸೇರಿದ್ದು, ಅವು ಆತನ ಕಾಲಾವಧಿಯಲ್ಲಿ ಮಾಡಲಾದ ಪ್ರಜಾಹಿತ ಕಾರ್ಯಗಳ ಕುರಿತು ಪ್ರಧಾನವಾಗಿ ಉಲ್ಲೇಖಿಸುತ್ತವೆ. ಇವುಗಳಲ್ಲಿ ತಿಮ್ಮಲಾಪುರ, ಚಿಕ್ಕಕೆರಯಾಗಿನಹಳ್ಳಿ, ಹುಲಿಕುಂಟೆ ಮಗಿಮಾವಿನಹಳ್ಳಿಯ ಶಾಸನಗಳಲ್ಲಿ ಬಯಕಾರ ರಾಮಪ್ಪನ ವಂಶಾವಳಿಯ ವಿವರವಿದೆ. ಇದರಲ್ಲಿ ಆತನ ಪೂರ್ವಜರು, ಆತನ ತಂದೆ, ಚಿಕ್ಕಪ್ಪಂದಿರು, ಪತ್ನಿ ಮತ್ತು ಮಕ್ಕಳ ವಿವರವಿದೆ.[4] ಈ ಎಲ್ಲಾ ವಿವರಗಳ ಆಧಾರದ ಮೇಲೆ ಆತನ ವಂಶಾವಳಿಯನ್ನು ಹಾಗೂ ಆತನ ಸಾಧನೆಯನ್ನು ಅರಿಯಬಹುದಾಗಿದೆ. ಅದಕ್ಕಿಂತಲೂ ಮುಖ್ಯವಾಗಿ ಪ್ರಾಯಶಃ ಆತನ ಅಧೀನಕ್ಕೆ ಒಳಪಟ್ಟ ಪ್ರದೇಶಗಳ ಭೌಗೋಳಿಕ ಎಲ್ಲೆಯನ್ನು ತಿಳಿಯಬಹುದಾಗಿದೆ. ಅಂದರೆ ಬಯಕಾರ ರಾಮಪ್ಪನು ಈ ಮೇಲೆ ಉಲ್ಲೇಖಿಸಿದ ಈಗಿನ ತಾಲೂಕುಗಳಾದ ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ, ಹೊಸಪೇಟೆ, ಸಂಡೂರು ತಾಲೂಕಿನ ಗಡಿಭಾಗಗಳನ್ನು ಸೇರಿಸಿಕೊಂಡು ಅದರಲ್ಲಿ ಕೇಂದ್ರಭಾಗವಾದ (ಮಧ್ಯಭಾಗವಾದ) ತಿಮ್ಮಲಾಪುರದಿಂದ ಈತ ತನ್ನ ರಾಜಕೀಯ ಆಡಳಿತವನ್ನು ನಿರ್ವಹಿಸಿರಬಹುದಾದ ಸಾಧ್ಯತೆಯಿದೆ. ಇತರೆ ಪ್ರದೇಶಗಳಿಗೆ ಹೋಲಿಸಿ ನೋಡಿದರೆ ತಿಮ್ಮಲಾಪುರದಲ್ಲಿ ಹೆಚ್ಚಿನ ದೇವಾಲಯಗಳನ್ನು, ಬಾವಿಗಳನ್ನು ಹಾಗೂ ಕೋಟೆಗಳನ್ನು ಈತ ನಿರ್ಮಿಸಿದ್ದಾನೆ.[5] ಈತ ಪ್ರತ್ಯೇಕವಾದ ಒಂದು ರಾಜಧಾನಿನೆಲೆಯನ್ನು ಕಟ್ಟಿ ಆಳಿದನೇ ಎಂಬ ಪ್ರಶ್ನೆಗೆ ಮುಂದಿನ ಸಂಶೋಧನೆ ಉತ್ತರ ನೀಡಬೇಕಷ್ಟೆ.

ಬಯಕಾರ ರಾಮಪ್ಪನಿಂದ ಹೊರಡಿಸಲ್ಪಟ್ಟ ಹಾಗೂ ಆತನ ಕಾಲದಲ್ಲಿ ಆತನ ಅಧೀನಾಧಿಕಾರಿಗಳಿಂದ ಹೊರಡಿಸಲ್ಪಟ್ಟ ಶಿಲಾ ಶಾಸನಗಳು ಮುಖ್ಯವಾಗಿ ತಿಮ್ಮಲಾಪುರ, ಚಿಲಕನಹಟ್ಟಿ, ಹಾರುವನಹಳ್ಳಿ, ಪೋತಲಕಟ್ಟೆ, ಮರಿಯಮ್ಮನಹಳ್ಳಿ, ಗೊಲ್ಲರಹಳ್ಳಿ (ಹೊಸಪೇಟೆ ತಾಲ್ಲೂಕು), ಚಿಕ್ಕಕೆರೆಯಾಗಿನಹಳ್ಳಿ (ಸಂಡೂರು ತಾಲ್ಲೂಕು), ಮಗಿಮಾವಿನಹಳ್ಳಿ (ಹಗರಿಬೊಮ್ಮನಹಳ್ಳಿ ತಾಲ್ಲೂಕು), ಹುಲಿಕುಂಟೆ (ಕೂಡ್ಲಿಗಿ ತಾಲ್ಲೂಕು)ಗಳಲ್ಲಿ ಪ್ರಮುಖ ಶಾಸನಗಳು ಕಂಡುಬರುತ್ತವೆ. ಈತನ ಕಾಲದ ಕೆಲವು ಶಾಸನಗಳನ್ನು *ಆನ್ಯೂಯಲ್ ರಿಪೋರ್ಟ್ಸ್ ಆಫ್ ಸೌತ್ ಇಂಡಿಯಾ ಎಪಿಗ್ರಫಿ*, ಹಾಗೂ *ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್*‌ನಲ್ಲಿ ಪ್ರಕಟಿಸಲಾಗಿದೆ. ಡಾ. ದೇವರಕೊಂಡಾರೆಡ್ಡಿಯವರು ಮತ್ತು ಸಂಪಾದಿಸಿರುವ *ಬಳ್ಳಾರಿ ಜಿಲ್ಲೆಯ ಶಾಸನ ಸಂಪುಟ*ಗಳಲ್ಲಿ ಮತ್ತು ದಿ॥ ಸಿ.ಎಸ್. ಪಾಟೀಲ್ ಮತ್ತು ವಿನೋದಾ ಪಾಟೀಲ್‌ರವರು ಸಂಪಾದಿಸಿ ಪ್ರಕಟಿಸಿರುವ ಶಾಸನ ಸಂಪುಟದಲ್ಲಿಯೂ ಈತನ ಕಾಲದ ಕೆಲ ಶಾಸನಗಳನ್ನು

ಪ್ರಕಟಿಸಲಾಗಿದೆ. ಅಲ್ಲದೇ ಡಾ. ಪರಮಶಿವ ಮೂರ್ತಿಯವರು ಪತ್ರಿಕೆಯೊಂದರಲ್ಲಿ ಬಯಕಾರ ರಾಮಪ್ಪನ ತಿಮ್ಮಾಲಾಪುರದ ಶೈವ ದೇವಾಲಯದ ಶಾಸನವನ್ನು ಮರು ಪರಿಶಿಲಿಸಿ ಪ್ರಕಟಿಸಿದ್ದಾರೆ. ಅಲ್ಲದೆ ಕೇಂದ್ರ ಪುರಾತತ್ವ ಇಲಾಕೆಯ ನರಸಿಂಹನ್ ಮತ್ತು ಕ.ವಿ.ವಿ.ಯ ಡಾ. ಗೋವಿಂದರವರು ಈತನ ಶಾಸನಗಳ ಕುರಿತು ತಮ್ಮ ಲೇಖನಗಳಲ್ಲಿ ವಿವರಿಸಿದ್ದಾರೆ. ಅಲ್ಲದೆ ಡಾ. ಶಿವರುದ್ರಸ್ವಾಮಿಯವರು ತಮ್ಮ 'ಬಯಕಾರ ರಾಮಪ್ಪ' ಎನ್ನುವ ಕೃತಿಯಲ್ಲಿ ಈತನ ಶಾಸನಗಳ ಕುರಿತು ಅಲ್ಲಲ್ಲಿ ಉಲ್ಲೇಖಿಸಿದ್ದಾರೆ. ಇವುಗಳನ್ನು ಹೊರತುಪಡಿಸಿದರೆ, ಮತ್ತೆಲ್ಲಿಯೂ ಈತನ ಕಾಲದ ಶಾಸನಗಳ ಕುರಿತು ವ್ಯವಸ್ಥಿತ ಅಧ್ಯಯನ ನಡೆದಿಲ್ಲ. ಬಯಕಾರ ರಾಮಪ್ಪನ ಶಾಸನಗಳು ತನ್ನದೇ ಆದ ವೈಶಿಷ್ಟ್ಯ ಹೊಂದಿದ್ದು, ಇವುಗಳ ವ್ಯಾಪಕ ಸಮೀಕ್ಷೆ ನಡೆಯಬೇಕಿದೆ. ಈತನ ಶಾಸನ ಶೈಲಿ ಸ್ವಲ್ಪ ಮಟ್ಟಿಗೆ ವಿಜಯನಗರಕ್ಕಿಂತಲೂ ಭಿನ್ನವಾಗಿವೆ. ಈ ಭಿನ್ನತೆಗೆ ಕಾರಣಗಳನ್ನು ಹುಡುಕುವ ಅಗತ್ಯವಿದೆ ಹಾಗೂ ಈ ಶಾಸನಗಳು ಕಾಲಾನುಕ್ರದಲ್ಲಿ ಯಾವ ರೀತಿ ಯಾರ ಪ್ರಭಾವದಲ್ಲಿ ಬೆಳವಣಿಗೆಯಾದವು ಎಂಬುದನ್ನು ತಾರ್ಕಿಕವಾಗಿ ವಿಶ್ಲೇಷಿಸಬೇಕಾದ ಅವಶ್ಯಕತೆಯಿದೆ.

ಅಪ್ರಕಟಿತ ಶಿಲಾಶಾಸನಗಳು

ಬಯಕಾರ ರಾಮಪ್ಪನ ಕಾಲದಲ್ಲಿ ಹೊರಡಿಸಲ್ಪಟ್ಟ ಶಾಸನಗಳಲ್ಲಿ ಶಿಲಾಶಾಸನಗಳು ಮಾತ್ರ ಇಲ್ಲಿಯವರೆಗೆ ಲಭ್ಯವಾಗಿವೆ. ಪ್ರಾಯಶಃ ತಾಮ್ರಶಾಸನಗಳನ್ನೂ ಸಹ ಬಯಕಾರ ರಾಮಪ್ಪನು ಹೊರಡಿಸಿರಬಹುದಾದ ಸಾಧ್ಯತೆ ಇದೆ. ಆದರೆ ಇವುಗಳು ಇಲ್ಲಿಯವರೆಗೂ ವಿದ್ವಾಂಸರ ಕಣ್ಣಿಗೆ ಬಿದ್ದಿಲ್ಲ. ಇತ್ತೀಚೆಗೆ ನಾನು ಕ್ಷೇತ್ರಕಾರ್ಯ ಕೈಗೊಂಡಾಗ ಬಯಕಾರ ರಾಮಪ್ಪನ ಕಾಲದ ಕೆಲ ಶಾಸನಗಳು ದೊರೆತಿವೆ. ಇವುಗಳಲ್ಲಿ ಹೊಸಪೇಟೆ ತಾಲ್ಲೂಕಿನ ಪೋತಲಕಟ್ಟೆ, ಚಿಲಕನಹಟ್ಟಿ, ಗೊಲ್ಲರಹಳ್ಳಿ, ಮರಿಯಮ್ಮನಹಳ್ಳಿಯಲ್ಲಿ ಮತ್ತು ಕೂಡ್ಲಿಗಿ ತಾಲ್ಲೂಕಿನ ಶಿವಪುರ ಹಾಗೂ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮಗಿಮಾವಿನಹಳ್ಳಿಗಳಲ್ಲಿ ಕ್ರಮವಾಗಿ ತಲಾ ಒಂದರಂತೆ ಆರು ಅಪ್ರಕಟಿತ ಶಿಲಾ ಶಾಸನಗಳು ಹೊಸದಾಗಿ ದೊರೆತಿವೆ. ಬಯಕಾರ ರಾಮಪ್ಪನ ಜೀವನದ ಮೇಲೆ ಬೆಳಕು ಚೆಲ್ಲುವ ಈ ಅಪ್ರಕಟಿತ ಶಿಲಾಶಾಸನಗಳನ್ನು ಒಂದೆಡೆ ಪ್ರಾಥಮಿಕವಾಗಿ ದಾಖಲಿಸುವುದು ಈ ಲೇಖನದ ಬಹುಮುಖ್ಯವಾದ ಉದ್ದೇಶವಾಗಿದೆ. ಈ ಶಾಸನಗಳ ಸಹಾಯದಿಂದ ಆತನ ಸಾಧನೆಗಳನ್ನು (ಆತ ಕೈಗೊಂಡ ಪ್ರಜಾಹಿತ ಕಾರ್ಯಗಳನ್ನು) ವಿಶ್ಲೇಷಿಸುವುದು ಈ ಲೇಖನದ ಮತ್ತೊಂದು ಪ್ರಮುಖ ಉದ್ದೇಶವಾಗಿದೆ. ಈ ವಿವಿಧ ನೆಲೆಗಳಲ್ಲಿ ದೊರೆತಿರುವ ಶಿಲಾಶಾಸನಗಳು ಮತ್ತು ಅವುಗಳ ವಿವರ ಈ ಮುಂದಿನಂತಿದೆ.

1. ಹೊಸಪೇಟೆ ತಾಲ್ಲೂಕು ಪೋತಲಕಟ್ಟೆಯ ಕೆರೆಯ ಬಳಿಯಿರುವ ಶಾಸನ

1 ಶುಭಮಸ್ತು ಶ್ವಸ್ತಿಶ್ರೀ ವಿಜಯಾಭ್ಯುದಯ ಶಾ
2 ಲಿವಾಹನ ಶಕವರ್ಷಂಗಳು 1481ನೆಯ ಸಿ
3 ಧಾರ್ಥಿ ಸಂವತ್ಸರದ ಕಾರ್ತೀಕ ಶು 12ರಲ್ಲೂ
4 ಶ್ರೀಮತು ಬಯಕಾರ ರಾಮಪ್ಪಯ್ಯನವರ ತಂಮ್ಮ
5 ಮಗ ಅಕ್ಕಪ್ಪನಿಗೆ ಪುಣ್ಯವಾಗಲೆಂದು ಕಟ್ಟಿಸಿದ
6 .... ಕೆರೆ ಮಂಗಳ ಮಹಾಶ್ರೀ ಶ್ರೀ

ರಾಷ್ಟ್ರೀಯ ಹೆದ್ದಾರಿ 13ರ ಹತ್ತಿರದ ಪೋತಲಕಟ್ಟೆಯ ಕೆರೆಯ ಪೂರ್ವಭಾಗದಲ್ಲಿ ನಿಲ್ಲಿಸಿರುವ ಈ ಶಾಸನವು ಸುಮಾರು 4x2 ಅಡಿ ಇದ್ದು, ಇದನ್ನು ಗ್ರಾನೈಟ್ ಶಿಲೆಯಲ್ಲಿ ರಚಿಸಲಾಗಿದೆ. ಆರು ಸಾಲಿನ ಈ ಶಾಸನವು ಕನ್ನಡ

ಭಾಷೆ ಮತ್ತು ಕನ್ನಡ ಲಿಪಿಯಲ್ಲಿದೆ. ಈ ಶಾಸನವು ಶಾಲಿವಾಹನ ಶಕವರುಷ 1481ನೆಯ ಸಿದ್ದಾರ್ಥಿ ಸಂವತ್ಸರದ, ಕಾರ್ತೀಕ, ಶು. 12 ಎಂಬ ಕಾಲದ ಉಲ್ಲೇಖವನ್ನು ಹೊಂದಿದ್ದು, ಇದು ಕ್ರಿ.ಶ. 1559ಕ್ಕೆ ಸರಿಹೊಂದುತ್ತದೆ. ಬಯಕಾರ ರಾಮಪ್ಪಯ್ಯನು ತಮ್ಮ ಮಗ ಅಕ್ಕಪ್ಪನಿಗೆ ಪುಣ್ಯವಾಗಲೆಂದು ಕೆರೆಯೊಂದನ್ನು ಕಟ್ಟಿಸಿದ ವಿವರ ಮಾತ್ರ ಈ ಶಾಸನದಲ್ಲಿದ್ದು, ಆ ಕೆರೆಯ ಹೆಸರಾಗಲಿ ಅಥವಾ ಯಾವ ಸ್ಥಳದಲ್ಲಿ ಅದನ್ನು ಕಟ್ಟಲಾಯಿತು ಮತ್ತು ಈ ಶಾಸನ ರಚಿಸಿದವರ ಹೆಸರಾಗಲಿ, ದಾನದ ವಿವರಗಳಾಗಲಿ ಇದರಲ್ಲಿ ಉಲ್ಲೇಖಿತವಾಗಿಲ್ಲ.

2. ಹೊಸಪೇಟೆ ತಾಲ್ಲೂಕು ಚಿಲಕನಹಟ್ಟಿಯ ಜಂಬಯ್ಯನವರ ಜಮೀನಿನ ಬಳಿಯಿರುವ ಶಾಸನ

1 ಶುಭಮಸ್ತು ಸ್ವಸ್ತಿಶ್ರೀ ಜಯಾಭ್ಯುದಯ ಶಾ
2 ಲಿವಾಹನ ಶಕವರ್ಷಂಗಳು 1481ನೆಯ ಸಿ
3 ಧಾರ್ಥಿ ಸಂವತ್ಸರದ ಕಾರ್ತೀಕ ಶು 12ರಲ್ಲೂ
4 ಶ್ರೀಮತು ಬಯಕಾರ ರಾಮಪ್ಪಯ್ಯನವರ . . . . .
5 . . . . ನಮಶಿವಾಯನು . . . ನ ಹೆಸರಲಿ ಕಟ್ಟಿಸಿದ ತೋಪು
6 ಮಂಗಳ ಮಹಾಶ್ರೀ ಶ್ರೀ

ಗ್ರಾಮದ ವಾಯವ್ಯ ದಿಕ್ಕಿನಲ್ಲಿರುವ ನಿಸರ್ಗದತ್ತವಾಗಿರುವ ಕಣಶಿಲೆಯ ಗುಂಡೊಂದರ ಮೇಲೆ ಆರು ಸಾಲುಗಳಲ್ಲಿ ಈ ಶಾಸನವನ್ನು ಕನ್ನಡ ಭಾಷೆ ಮತ್ತು ಕನ್ನಡ ಲಿಪಿಯಲ್ಲಿ ರಚಿಸಲಾಗಿದೆ. ಶುಭಮಸ್ತು ಎಂದು ಆರಂಭವಾಗುವ ಈ ಶಾಸನವು ಶಾಲಿವಾಹನ ಶಕವರುಷ 1481ನೆಯ ಸಿದ್ದಾರ್ಥಿ ಸಂವತ್ಸರದ ಕಾರ್ತೀಕ, ಶು. 12 ಎಂಬ ಕಾಲವನ್ನು ಹೆಸರಿಸಿತ್ತು. ಇದು ಕ್ರಿ.ಶ. 1559ಕ್ಕೆ ಸರಿಹೊಂದುತ್ತದೆ. ಬಯಕಾರ ರಾಮಪ್ಪಯ್ಯನ ಅಧಿಕಾರಿ ನಮಶಿವಾಯನು ತನ್ನ ಹೆಸರಿನಲ್ಲಿ ತೋಪೊಂದನ್ನು ಕಟ್ಟಿಸಿದ ವಿವರವನ್ನು ಮಾತ್ರ ಈ ಶಾಸನ ಉಲ್ಲೇಖಿಸಿದ್ದು, ಇದನ್ನು ಹೊರತುಪಡಿಸಿ ಮತ್ತ್ಯಾವುದೇ ವಿವರಗಳನ್ನು ಈ ಶಾಸದ ನೀಡಿಲ್ಲ. ಇದರ 4 ಮತ್ತು 5ನೇ ಸಾಲಿನಲ್ಲಿನ ಕೆಲ ಅಕ್ಷರಗಳು ಸವೆದಿರುವುದರಿಂದ ನಮಶಿವಾಯನು ಯಾವ ರೀತಿಯ ಅಧಿಕಾರಿ ಆಗಿದ್ದನೆಂಬುದು ಸಹ ಸ್ಪಷ್ಟವಾಗಿಲ್ಲ.

3. ಹೊಸಪೇಟೆ ತಾಲ್ಲೂಕು ಗೊಲ್ಲರಹಳ್ಳಿಯ ಕೆರೆಕಟ್ಟೆಯ ಬಳಿಯಿರುವ ಶಾಸನ

1 ಶುಭಮಸ್ತು . . . . ಶಾ
2 ಲಿವಾಹನ ಶಕವರ್ಷಂಗಳು 1478ನೆಯ
3 ನಳ ಸಂವತ್ಸರದ ವೈಶಾಖ ಶು. 3 ರಲ್ಲೂ
4 . . . . ಬಯಕಾರ ರಾಮಪ್ಪಯ್ಯನವರು ತಂಮ್ಮ ಹೆಸರಿಲಿ
5 ಕಟ್ಟಿಸಿದ ಕೆರೆ ಮಂಗಳ ಮಹಾಶ್ರೀ ಶ್ರೀ

ಗ್ರಾಮದ ಪಶ್ಚಿಮ ದಿಕ್ಕಿನ ಭರಮಲಿಂಗಪ್ಪನವರ ಜಮೀನಿನ ಬಳಿ ಇರುವ ಕೆರೆಕಟ್ಟೆಯ ಬಳಿ ಇರುವ ಈ ಶಾಸನವನ್ನು 3x2 ಅಡಿ ಅಳತೆಯ ಕಣಶಿಲೆಯಲ್ಲಿ (ಗ್ರಾನೈಟ್) ರಚಿಸಲಾಗಿದೆ. ಕನ್ನಡ ಭಾಷೆ ಮತ್ತು ಕನ್ನಡ ಲಿಪಿಯಲ್ಲಿರುವ ಐದು ಸಾಲಿನ ಈ ಶಾಸನವು ಶುಭಮಸ್ತು ಎಂದು ಆರಂಭವಾಗುತ್ತದೆ. ಈ ಶಾಸನವು ಶಾಲಿವಾಹನ ಶಕವರುಷ 1478ನೆಯ ನಳ ಸಂವತ್ಸರ, ವೈಶಾಖ, ಶು. 3ಕ್ಕೆ ಸರಿಯಾದ ಕ್ರಿ.ಶ. 1556ರಲ್ಲಿ ಬಯಕಾರ ರಾಮಪ್ಪಯ್ಯನು

ತನ್ನ ಹೆಸರಿನಲ್ಲಿ ಕೆರೆಯನ್ನು ಕಟ್ಟಿಸಿದ ವಿವರವನ್ನು ಉಲ್ಲೇಖಿಸಿದೆ. ಶಾಸನದ ಅಂತ್ಯದಲ್ಲಿ ಮಂಗಳ ಮಹಾಶ್ರೀ ಶ್ರೀ ಎಂದು ಮಾತ್ರವಿದ್ದು, ಇದನ್ನು ಹೊರತುಪಡಿಸಿ ಇತರೆ ಯಾವ ವಿವರಗಳು ಇದರಲ್ಲಿ ನಮಗೆ ಲಭ್ಯವಾಗಿಲ್ಲ.

4. ಹೊಸಪೇಟೆ ತಾಲ್ಲೂಕು ಮರಿಯಮ್ಮನಹಳ್ಳಿಯ ರೈಲ್ವೇಟ್ರ್ಯಾಕ್ ಬಳಿ ಬಿದ್ದಿರುವ ಶಾಸನ

1 . . . .
2 ಶಾಲಿವಾಹನ ಶಕವರ್ಷಂಗಳು 1466ನೆಯ
3 ಕ್ರೋಧಿ ನಾಮ ಸಂವತ್ಸರದ ಮಾಘ ಶು 15ರಲ್ಲೂ
4 ಶ್ರೀಮತು ಬಯಕಾರ ರಾಮಪ್ಪಯ್ಯನವರು
5 ಕಟ್ಟಿಸಿದ ನಂದಿ ಬಂಡೆಯ ಅರವಟಿಗೆ
6 ಮಂಗಳ ಮಹಾಶ್ರೀ ಶ್ರೀ

ಮರಿಯಮ್ಮನಹಳ್ಳಿಯ ಬಸ್ ನಿಲ್ದಾಣದ ಆಗ್ನೇಯ ಭಾಗದಲ್ಲಿರುವ ಶ್ರೀ ನಾಗಯ್ಯ ಮೇಸ್ತ್ರಿ ಮನೆಯ ಹಿಂಬದಿಯ ರೈಲ್ವೆ ಟ್ರ್ಯಾಕ್ ಬಳಿ ಸು. 4x3 ಅಡಿ ಅಳತೆಯ ಈ ಶಾನಸವಿದೆ. ಕನ್ನಡ ಭಾಷೆ ಮತ್ತು ಲಿಪಿಯಲ್ಲಿರುವ ಆರು ಸಾಲಿನ ಈ ಶಾಸನವು ಶಾಲಿವಾಹನ ಶಕವರುಷ 1466ನೆಯ ಕ್ರೋಧಿ ನಾಮ ಸಂವತ್ಸರ, ಮಾಘ, ಶು. 15ರಲ್ಲಿ ಬಯಕಾರ ರಾಮಪ್ಪಯ್ಯನು ನಂದಿಬಂಡೆಯಲ್ಲಿ ಅರವಟಗೆಯನ್ನು ಕಟ್ಟಿಸಿದ ವಿವರವನ್ನು ಮಾತ್ರ ಉಲ್ಲೇಖಿಸಿದೆ. ಶಾಸನ ಆರಂಭದ ಅಕ್ಷರಗಳು ಸವೆದಿರುವುದರಿಂದ ಪ್ರಾರ್ಥನಾ ವಾಕ್ಯವನ್ನು ಗುರುತಿಸುವುದು ಕಷ್ಟಕರವಾಗಿದೆ, ಮಂಗಳಮಹಾಶ್ರೀಶ್ರೀ ಎಂದು ಶಾಸನದ ಕೊನೆಯಲ್ಲಿದ್ದು, ಉಳಿದಂತೆ ಇತರೆ ಯಾವುದೇ ವಿವರಗಳು ಈ ಶಾಸನದಲ್ಲಿ ಇಲ್ಲ.

5. ಹಗರಿಬೊಮ್ಮನಹಳ್ಳಿ ತಾಲ್ಲೂಕು ಮಗೀಮಾವಿನಹಳ್ಳಿಯ ಗ್ರಾಮ ಮಧ್ಯದಲ್ಲಿರುವ ತ್ರುಟಿತ ಶಾಸನ

1 ಶುಭಮಸ್ತು ॥ ಸ್ವಸ್ತಿಶ್ರೀ ಜಯಾಭ್ಯುದಯ . . . . .
2 .. . . ಶಕವರ್ಷಂ . . . .
3 . . . . ರಲ್ಲೂ . . . .
4 ಬಯಕಾರ ರಾಮಪ್ಪಯ್ಯನವರು ತಂಮ್ಮ
5 ಮಗ ಸಿಂಗಾಲಯ್ಯನಿಗೆ ಪುಣ್ಯವಾಗಲೆಂದು ಕಟ್ಟಿಸಿದ
6 ಜಂಬುನಾಥನ ವಿಗ್ರಹ ಮಂಗಳ ಮಹಾ ಶ್ರೀ ಶ್ರೀ

ಮಗಿಮಾವಿನಹಳ್ಳಿಯ ಫಕ್ಕೀರಪ್ಪನವರ ಮನೆಯಬಳಿ ಇರುವ ಕಲ್ಲಿನ ರಾಶಿಯಲ್ಲಿ ಈ ಶಾಸನವಿದೆ. ಮಧ್ಯಕ್ಕೆ ತುಂಡಾಗಿ ಎರಡು ಭಾಗವಾಗಿರುವ ಈ ಶಾಸನ ಕನ್ನಡ ಭಾಷೆ ಮತ್ತು ಕನ್ನಡ ಲಿಪಿಯಲ್ಲಿದೆ.

ಶುಭಮಸ್ತು ॥ ಸ್ವಸ್ತಿಶ್ರೀ ಜಯಾಭ್ಯುದಯ . . . ಎಂದು ಆರಂಭವಾಗುವ ಈ ಶಾಸನವು ಬಯಕಾರ ರಾಮಪ್ಪಯ್ಯನು ತಮ್ಮ ಮಗ ಸಿಂಗಾಲಯ್ಯನಿಗೆ ಪುಣ್ಯವಾಗಲೆಂದು ಜಂಬುನಾಥನ ವಿಗ್ರಹವನ್ನು ಪ್ರತಿಷ್ಠಾಪಿಸಿದ ವಿವರವನ್ನು ಮಾತ್ರ ಉಲ್ಲೇಖಿಸಿದ್ದು, ಎಲ್ಲಿ ಎಂಬ ವಿವರಗಳಿಲ್ಲ. ಶಾಸನದ ಮಧ್ಯದಲ್ಲಿ ಅಕ್ಷರಗಳು ಗುರುತಿಸಲಾರದಷ್ಟು ಸವೆದಿರುವುದರಿಂದ ಇದರ ಕಾಲವನ್ನು ಹೇಳುವುದು ಕಠಿಣವಾಗಿದೆ. ಆದರೆ ಶಾಸನದಲ್ಲಿ ಬಹಳ ಸ್ಪಷ್ಟವಾಗಿ ಬಯಕಾರ ರಾಮಪ್ಪನನ್ನು ಉಲ್ಲೇಖಿಸಿರುವುದರಿಂದ ಇದು ಆತನ ಕಾಲದ್ದೆಂದು ಹೇಳಬಹುದಾಗಿದೆ.

6. ಕೂಡ್ಲಿಗಿ ತಾಲ್ಲೂಕು ಶಿವಪುರ ಗ್ರಾಮದ ವಾಯವ್ಯ ಭಾಗದಲ್ಲಿರುವ ಶಾಸನ

1 ಶುಭಮಸ್ತು ॥ ಸ್ವಸ್ತಿಶ್ರೀ ಜಯಾಭ್ಯುದಯ ಶಾ

2 ಲಿವಾಹನ ಶಕವರ್ಷಂಗಳು 1461ನೆಯ ವಿ

3 ಕಾರಿ ಸಂವತ್ಸರದ ಭಾದ್ರಪದ ಶು 12ರಲ್ಲೂ

4 ಶ್ರೀಮತು ಬಯಕಾರ ರಾಮಪ್ಪಯ್ಯನವರ

5 ಹೆಸರಲಿ ನಮಶಿವಾಯನು ಮಾಡಿಸಿದ ಬಾವಿ

6 ಮಂಗಳ ಮಹಾಶ್ರೀ ಶ್ರೀ

ಶಿವಪುರ ಗ್ರಾಮದ ವಾಯವ್ಯ ಭಾಗದಲ್ಲಿರುವ ಅರಣ್ಯ ಸರಹದ್ದಿನ 56ನೇ ಸರ್ವೆಕಲ್ಲಿನ ಬಳಿ 5x3 ಅಡಿ ಅಳತೆ ಇರುವ ಈ ಶಾಸನವನ್ನು ಕಣಶಿಲೆಯಲ್ಲಿ ರಚಿಸಲಾಗಿದೆ. ಕನ್ನಡ ಭಾಷೆ ಮತ್ತು ಕನ್ನಡ ಲಿಪಿಯಲ್ಲಿರುವ ಈ ಮೇಲಿನ ಶಾಸನವು ಶಾಲಿವಾಹನ ಶಕವರುಷ 1461ನೆಯ ವಿಕಾರಿ ಸಂವತ್ಸರದ, ಭಾದ್ರಪದ ಶು. 12ಕ್ಕೆ ಸರಿಯಾದ ಕ್ರಿ.ಶ. 1539ರ ಆಗಸ್ಟ್ 26ರಂದು ಬಯಕಾರ ರಾಮಪ್ಪಯ್ಯನ ಹೆಸರಿನಲ್ಲಿ ಆತನ ಅಧಿಕಾರಿ ನಮಶಿವಾಯನು ಬಾವಿಯೊಂದನ್ನು ಕಟ್ಟಿಸಿದ ವಿವರ ಮಾತ್ರವಿದ್ದು, ಇತರೆ ಯಾವುದೇ ಉಲ್ಲೇಖಗಳಿಲ್ಲ. ಆರು ಸಾಲಿನ ಈ ಶಾನಸದ ಕೊನೆಯಲ್ಲಿ ಮಂಗಳ ಮಹಾಶ್ರೀ ಶ್ರೀ ಎಂಬ ಬರಹಗಳಿದ್ದು ಅಲ್ಲಿಗೆ ಶಾಸನ ಮುಕ್ತಾಯವಾಗುತ್ತದೆ.

ಉಪಸಂಹಾರ

ವಿವಿಧ ನೆಲೆಗಳಲ್ಲಿ ದೊರೆತಿರುವ ಈ ಶಾಸನಗಳ ರಚನಾಶೈಲಿ, ರಚನಾ ವಿಧಾನಗಳೆಲ್ಲವು ಬಯಕಾರ ರಾಮಪ್ಪನ ಕಾಲದಲ್ಲಿ ಹೊರಡಿಸಿದ ಇನ್ನಿತರೆ ಶಾಸನಗಳಂತೆ ಇದ್ದು, ವಿಜಯನಗರ ಕಾಲದ ಶಾಸನಗಳಿಗಿಂತಲೂ ಸ್ವಲ್ಪ ವಿಭಿನ್ನವಾಗಿವೆ. ಪೋತಲಕಟ್ಟೆ ಮತ್ತು ಗೊಲ್ಲರಹಳ್ಳಿಗಳಲ್ಲಿ ದೊರೆತ ಈತನ ಕಾಲದ ಶಾಸನಗಳು ಕೆರೆಗಳನ್ನು ಬಯಕಾರ ರಾಮಪ್ಪ ನಿರ್ಮಿಸಿದ ಕುರಿತು ಉಲ್ಲೇಖಿಸುತ್ತವೆಯಾದರೂ ಯಾವ ಕೆರೆಗಳು ಎಂಬುದನ್ನು ಸ್ಪಷ್ಟಪಡಿಸುವುದಿಲ್ಲ. ಆದರೆ ಅಲ್ಲಿನ ಕೆರೆಗಳ ಹತ್ತಿರವೇ ಈ ಶಾಸನಗಳು ಇರುವುದರಿಂದ ಬಹುಶಃ ಇದೇ ಕೆರೆಗಳೇ ಶಾಸನ ಉಲ್ಲೇಖಿತ ಕೆರೆಗಳಿರಬಹುದೆಂದು ಹೇಳಬಹುದಾಗಿದೆ. ಅದೇ ರೀತಿ ಚಿಲಕನಹಟ್ಟಿಯ ಶಾಸನವು ಬಯಕಾರ ರಾಮಪ್ಪನು ತೋಪೊಂದ(ವನ)ನ್ನು ನಿರ್ಮಿಸಿದ ವಿವರವಿದ್ದು, ಅದರಲ್ಲಿ ಆ ತೋಪಿನ ಸರಹದ್ದು ಮತ್ತು ಮೇರೆಗಳ ವಿವರಗಳಿಲ್ಲ. ಆದರೆ ಚಿಲಕನಹಟ್ಟಿಯ ಸುತ್ತಮುತ್ತ ವಿನಾಶದಂಚಿನಲ್ಲಿರುವ ಚಾರಿತ್ರಿಕ 'ತಾಳೆ' ವನವಿದೆ, ಪ್ರಾಯಶಃ ಇದೇ ವನವೇ ಚಿಲಕನಹಟ್ಟಿಯ ಶಾಸನೋಕ್ತ ತೋಪಾಗಿರುವ ಸಾಧ್ಯತೆ ಇದೆ. ಶಿವಪುರ ಗ್ರಾಮದ ಶಾಸನವು ಬಯಕಾರ ರಾಮಪ್ಪನ ಅಧೀನಾಧಿಕಾರಿ ನಮಶಿವಾಯನು ಬಾವಿಯೊಂದನ್ನು ನಿರ್ಮಿಸಿದ್ದನ್ನು ಮಾತ್ರ ದಾಖಲಿಸಿದ್ದು ಇದರಲ್ಲಿ ಇತರೆ ವಿವರಗಳಿಲ್ಲ. ಆದರೆ ಶಾಸನ ಸ್ಥಳದಿಂದ ಸು. 500 ಮೀಟರ್ ಅಂತರದಲ್ಲಿ ಸದಾ ನೀರಿರುವ ಚಿಲುಮೆಯೊಂದಿದೆ. ಪ್ರಾಯಶಃ ಇದೇ ಶಾಸನೋಕ್ತ ಬಾವಿಯಾಗಿರುವ ಸಾಧ್ಯತೆ ಇದೆ. ಇದನ್ನು ಸ್ಥಳೀಯರು 'ಊಟಿ' ಬಾವಿಯೆಂದು ಕರೆಯುತ್ತಾರೆ. ದಾರಿಯ ಬಳಿಯೇ ಇದು ಇರುವುದರಿಂದ ಬಹುಶಃ ಪ್ರಯಾಣಿಕರಿಗೆ ಅನುಕೂಲವಾಗಬೇಕೆಂಬ ಉದ್ದೇಶದಿಂದ ಇದನ್ನು ನಿರ್ಮಿಸಿರುವ ಸಾಧ್ಯತೆ ಇದೆ. ಮಗಿಮಾವಿನಹಳ್ಳಿ ಶಾಸನವು ಬಯಕಾರ ರಾಮಪ್ಪಯ್ಯನು ತಮ್ಮ ಮಗ ಸಿಂಗಾಲಯ್ಯನಿಗೆ ಪುಣ್ಯವಾಗಲೆಂದು ಜಂಬುನಾಥನ ವಿಗ್ರಹವನ್ನು ಪ್ರತಿಷ್ಠಾಪಿಸಿದ ವಿವರವನ್ನು ದಾಖಲಿಸಿದೆ. ಆದರೆ ಗ್ರಾಮದಲ್ಲಿ ಈ ಹೆಸರಿನ ಯಾವುದೇ ವಿಗ್ರಹಗಳಿರುವುದಿಲ್ಲ. ಬಹುಶಃ ಗ್ರಾಮದ ಪೂರ್ವಭಾಗದಲ್ಲಿ

ಹಾಳುಮಂಟಪವೊಂದಿದ್ದು, ಇದುವೇ ಶಾಸನ ಉಲ್ಲೇಖಿತ ಜಂಬುನಾಥನ ವಿಗ್ರಹ ಪ್ರತಿಷ್ಠಾಪಿಸಿದ ಸ್ಥಳವಾಗಿರುವ ಸಾಧ್ಯತೆ ಇದೆ.

ವಿಜಯನಗರ ಅಂತ್ಯಕಾಲದಲ್ಲಿ ಅನೇಕ ಸಾಮಂತರು ಸ್ವತಂತ್ರರಾಗಿ ತಮ್ಮದೇ ಆದ ಪಾಳೆಪಟ್ಟುಗಳನ್ನು ನಿರ್ಮಿಸಿಕೊಂಡರು. ಆದರೆ ಬಯಕಾರ ರಾಮಪ್ಪನು ಅಚ್ಯುತದೇವರಾಯನ ಕಾಲಾವಧಿಯಲ್ಲಿಯೇ (ಕ್ರಿ.ಶ. 1529–1544) ತಾನು ಹಲವಾರು ಪ್ರಜಾಹಿತ ಕಾರ್ಯಗಳನ್ನು ಕೈಗೊಂಡಿರುವುದನ್ನು ಗಮನಿಸಿದರೆ ಚರಿತ್ರೆಯಲ್ಲಿ ಆತನ ಸ್ಥಾನಮಾನ ನಮಗೆ ಸ್ಪಷ್ಟವಾಗುತ್ತದೆ. "ಕೆರೆಯಂ ಕಟ್ಟಿಸು, ಬಾವಿಯಂ ತೋಡಿಸು, ದೇವಗಾರವಂ ಮಾಡಿಸು" ಎಂಬ ವಿಜಯನಗರ ಕಾಲದ ಹಿತೋಕ್ತಿಯನ್ನು ಅಕ್ಷರಶಃ ಪಾಲಿಸಿದ ಒಬ್ಬ ಮಹಾನ್ ಪುರುಷನಾಗಿ ಇಲ್ಲವೇ ಒಬ್ಬ ಮಾದರಿ ಪ್ರಜಾರಕ್ಷಕನಾಗಿ ಬಯಕಾರ ರಾಮಪ್ಪ ನಮಗೆ ಗೋಚರಿಸುತ್ತಾನೆ ಎಂದರೆ ಅತಿಶಯೋಕ್ತಿಯಾಗಲಾರದು. ಆತನ ಜೀವನದುದ್ದಕ್ಕೂ ಆತ ಮಾಡಿದ ಪ್ರಜಾಹಿತ ಕಾರ್ಯಗಳು ನಿಜಕ್ಕೂ ಸ್ಮರಣೀಯವಾಗಿವೆ.

ಆತನ ಕಾಲದ ಶಾಸನಗಳು ದೊರೆತಿರುವ ಪ್ರದೇಶಗಳನ್ನು ಆಧಾರವಾಗಿಟ್ಟುಕೊಂಡು ಪ್ರಾಯಶಃ ಈ ಎಲ್ಲಾ ಪ್ರದೇಶಗಳು ಈತನ ಅಧೀನಕ್ಕೆ ಒಳಪಟ್ಟಿದ್ದವೆಂದು ಹೇಳಬಹುದಾಗಿದೆ. ಅಂದರೆ ಇಲ್ಲಿಯವರೆಗೂ ಈತನ ರಾಜಕೀಯ ಕ್ಷೇತ್ರ ವಿಸ್ತರಣೆಗೊಂಡಿತ್ತೆಂಬುದನ್ನು ಗುರುತಿಸಬಹುದಾಗಿದೆ.


ಕರ್ನಾಟಕದ ಚರಿತ್ರೆಯಲ್ಲಿ ಕಾಣಬರುವ ಹಲವಾರು ಸಾಮಂತ ಅಧಿಕಾರಿಗಳಲ್ಲಿ ಬಯಕಾರ ರಾಮಪ್ಪನು ಒಬ್ಬನಾಗಿದ್ದಾನೆ. ಈತನ ಕುರಿತು ಹೆಚ್ಚಿನ ಸಂಶೋಧನೆ ನಡೆಯದೇ ಇರುವುದರಿಂದ ಆತನ ಮೂಲ, ಆತನ ಕಾಲ, ಆತನ ಸಾಧನೆಗಳ ಕುರಿತು ಪರಿಪಕ್ವ ಮಾಹಿತಿ ಇಲ್ಲಿಯವರೆಗೆ ಲಭ್ಯವಾಗಿಲ್ಲ. ಆದರೆ ಲಭ್ಯ ಶಾಸನಗಳ ಅಲ್ಪ ಮಾಹಿತಿಗಳನ್ನು ಅನುಸರಿಸಿ ಆತನ ಜೀವನದ ಮೇಲೆ ಅಲ್ಪ ಬೆಳಕು ಬೀರಲಾಗಿದೆ. ಇದು ಮತ್ತಷ್ಟು ವಿಸ್ತೃತವಾದಲ್ಲಿ ನಾಡಿನ ಪ್ರಜಾ ರಕ್ಷಕನೋರ್ವನ ಚರಿತ್ರೆ ಮುಂದಿನ ಪೀಳಿಗೆಗೆ ಲಭ್ಯವಾಗುತ್ತದೆ. ಬಯಕಾರ ರಾಮಪ್ಪನ ಕಾಲದ ಶಾಸನಗಳ ಕುರಿತು ವಿವಿಧ ದೃಷ್ಟಿಕೋನಗಳಿಂದ ಮತ್ತಷ್ಟು ಸುದೀರ್ಘವಾಗಿ ಇನ್ನೂ ಹೆಚ್ಚಿನ ಮಟ್ಟದಲ್ಲಿ ಅಧ್ಯಯನ ಮಾಡಲು ಸಾಕಷ್ಟು ಅವಕಾಶಗಳಿವೆ. ಹಾಗಾದಲ್ಲಿ ಮಾತ್ರ ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ಈತನ ಸ್ಥಾನಮಾನಗಳ ಸ್ಪಷ್ಟತೆ ನಮಗೆ ಸಾಧ್ಯವಾಗುತ್ತದೆ. ಕಣಶಿಲೆಯಲ್ಲಿ ಕೆತ್ತಲ್ಪಟ್ಟಿರುವ ಈತನ ಕಾಲದ ಶಾಸನಗಳು ಕೆಲವೆಡೆ ಸುಸ್ಥಿತಿಯಲ್ಲಿದ್ದರೆ, ಇನ್ನೂ ಕೆಲವೆಡೆ ಜನರ ದುರಾಸೆಗೆ ಬಲಿಯಾಗಿ ಭಗ್ನವಾಗಿವೆ. ಅವಸಾನದಂಚಿನಲ್ಲಿರುವ ಇವುಗಳ ರಕ್ಷಣೆ ನಾಡಿನ ಜನರಾದ ನಮ್ಮೆಲ್ಲರ ಮೇಲಿದೆ.


ಅಡಿ ಟಿಪ್ಪಣಿಗಳು

1. ತಿಮ್ಮಲಾಪುರ ಮತ್ತು ಅದರ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಈ ಕುರಿತು ಜನರು ಅನೇಕ ಕಥೆಗಳನ್ನು ಹೇಳುತ್ತಾರೆ.
2. ನೋಡಿ: ಡಾ. ಎಂ.ಎಂ. ಕಲಬುರ್ಗಿ, *ಕರ್ನಾಟಕದ ಕೈಫಿಯತ್ತುಗಳು*, 1996.
3. ವಿವರಕ್ಕಾಗಿ ನೋಡಿ: *ಆನ್ಯೂಯಲ್ ರಿಪೋರ್ಟ್ಸ್ ಆಫ್ ಸೌತ್ ಇಂಡಿಯಾ ಎಪಿಗ್ರಫಿ*, ಹಾಗೂ *ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್* ಮತ್ತು ಡಾ. ದೇವರಕೊಂಡಾರೆಡ್ಡಿಯವರು ಸಂಪಾದಿಸಿದ *ಬಳ್ಳಾರಿ ಜಿಲ್ಲೆಯ ಶಾಸನ ಸಂಪುಟಗಳು*.
4. *ಅದೇ*.
5. ತಿಪ್ಪೇಸ್ವಾಮಿ, ಹೆಚ್., *ತಿಮ್ಮಲಾಪುರದ ಪ್ರಾಚ್ಯಾವಶೇಷಗಳು*, ಪ್ರ.ವಾ. ವಿಶೇಷ ಸಂಚಿಕೆ, ಪು. 18.

ಗ್ರಂಥಋಣ

1. Patil C.S. and Vinoda Patil, *Inscriptions of Bellary District,* Directorate of Archaeology and Museums, Mysore, 1997.
2. Veeratappa K., *Studies in Karnataka History and Culture,* Bharathi Prakashan, Mysore, 1987.
3. ಕೃಷ್ಣಕುಮಾರ್, ಸಿ.ಪಿ., *ಶಾಸನ ಶಾಸ್ತ್ರ ಪ್ರವೇಶ,* ಚೇತನ ಬುಕ್ ಹೌಸ್, ಮೈಸೂರು, 1993.
4. ಡಾ. ದೇವರಕೊಂಡಾರೆಡ್ಡಿ, *ಲಿಪಿಯ ಹುಟ್ಟು ಮತ್ತು ಬೆಳವಣಿಗೆ,* ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2002.
5. ಡಾ. ದೇವರಕೊಂಡಾರೆಡ್ಡಿ (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-1, ಬಳ್ಳಾರಿ ಜಿಲ್ಲೆ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1998.
6. ಡಾ. ಎಂ.ಎಂ. ಕಲಬುರ್ಗಿ, *ಕರ್ನಾಟಕದ ಕೈಫಿಯತ್ತುಗಳು,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1996.
7. ನರಸಿಂಹಮೂರ್ತಿ ಎ.ವಿ., *ಕನ್ನಡ ಲಿಪಿಯ ಉಗಮ ಮತ್ತು ವಿಕಾಸ,* 1968.
8. *Annual Reports of South Indian Epigraphy.*
9. *Epigraphia Indica.*
10. *Indian Antiquary.*
11. *South Indian Inscriptions* (Ed. B.L. Rice).
12. *Vijayanagara Inscriptions* (Ed. Gopal B.R.).
13. *Bellary District Gazetteer.*


ಬಯಕಾರ ರಾಮಪ್ಪನ ಶಾಸನಗಳು ದೊರೆತ ಸ್ಥಳಗಳ ನಕ್ಷೆ
ಉ
2, 3, 4 = ಶಾಸನ ದೊರೆತ ಸ್ಥಳಗಳು
= ತಾಲ್ಲೂಕು ಕೇಂದ್ರಗಳು
1 – ಸಿರಗುಪ್ಪ
2 – ಬಳ್ಳಾರಿ
3 – ಹೊಸಪೇಟೆ
4 – ಸೊಂಡೂರು
5 – ಕೂಡ್ಲಿಗಿ
6 – ಹಗರಿಬೊಮ್ಮನಹಳ್ಳಿ
7 – ಹೂವಿನ ಹಡಗಲಿ
ಬಳ್ಳಾರಿ ಜಿಲ್ಲೆ ನಕ್ಷೆ


ಬಯಕಾರ ರಾಮಪ್ಪನ (ಶಾಸನಗಳು ದೊಗೆತ ಸ್ಥಳ) ಅಧೀನಕ್ಕೊಳಪಟ್ಟ ಪ್ರದೇಶದ ನಕ್ಷೆ
1 – ತಿಮ್ಮಲಾಪುರ
2 – ಚಿಲಕನಹಟ್ಟಿ
3 – ಹಾರುವನಹಳ್ಳಿ
4 – ಪೋತನಕಟ್ಟೆ
5 – ಮರಿಯಮ್ಮನಹಳ್ಳಿ
6 – ಗೊಲ್ಲರಹಳ್ಳಿ
7 – ಹುಲಿಕುಂಟೆ
8 – ಚಿಕ್ಕಕೆರೆಯಾಗಿನಹಳ್ಳಿ
9 – ಮಗಿಮಾವಿನಹಳ್ಳಿ
10 – ಶಿವಪುರ
ಅಳತೆ ಇಲ್ಲ

5

ಗೋಕರ್ಣದಲ್ಲಿ ದೊರೆತ ವಿಜಯನಗರ ಕಾಲದ ಶಾಸನ

ಡಾ॥ ಕೆಳದಿ ವೆಂಕಟೇಶ್ ಜೋಯಿಸ್

ಗೋಕರ್ಣದ ಹಿರೇಗಂಗೆ ಅಥವಾ ಕೋಟಿ ತೀರ್ಥದ ಹತ್ತಿರ ಇರುವ ಶಿತಿಕಂಠ ಭಟ್ಟರು ಪ್ರಧಾನ ಅರ್ಚಕರು, ಶ್ರೀ ಸಂಸ್ಥಾನ ಮಹಬಲದೇವ ಗೋಕರ್ಣ. ಇವರ ಮನೆಯ ಗೋಡೆಯಲ್ಲಿರುವ ವಿಜಯನಗರ ಕಾಲದ ಶಿಲಾ ಶಾಸನವೊಂದಿದ್ದು ಇದು ಗಮನ ಸೆಳೆಯುವಂತಹುದಾಗಿದೆ. ಈ ಶಾಸನವು ಸುಮಾರು 89 ಸಾಲುಗಳನ್ನು ಹೊಂದಿದೆ. ಪ್ರತಿ ಸಾಲಿನಲ್ಲಿ ಸುಮಾರು 90 ಅಕ್ಷರಗಳಿವೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಚಿತ್ರವಿದೆ. ಅಕ್ಷರ ಸುಂದರವಾಗಿದೆ. ಈ ಶಾಸನವನ್ನು ಗೋಡೆಗೆ ಸೇರಿಸಿ ಪ್ಲಾಸ್ಟರ್ ಮಾಡಲಾಗಿದೆ. ಈ ಶಾಸನವನ್ನು ಸುಮಾರು ಒಂದುನೂರೈವತ್ತು ವರ್ಷಗಳ ಹಿಂದೆ ಕಾಗದದಲ್ಲಿ ಬರೆದುಕೊಂಡಿದ್ದು ಅದು ಈಗ ಲಭ್ಯವಾಗಿದೆ. ಈ ಪ್ರತಿಯನ್ನು ಆಧರಿಸಿ ಈ ಶಾಸನವನ್ನು ಗಮನಿಸಿದಾಗ ಎರಡೂ ಒಂದೇ ಎಂಬುದು ಸ್ಪಷ್ಟವಾಗುತ್ತದೆ. ಪ್ರತಿ ಮಾಡಿಕೊಂಡಿರುವವರ ಹೆಸರು ಇದರಲ್ಲಿ ಉಲ್ಲೇಖ ಇರುವುದಿಲ್ಲ. ಈ ಶಾಸನವನ್ನೂ ಪ್ರತಿ ಮಾಡಿಕೊಂಡಿರುವ ಪುಸ್ತಕ ಸುಮಾರು ಐವತ್ತೈದು ಪುಟ ಹೊಂದಿದ್ದು ಮೋಡಿ ಕನ್ನಡ ಬರಹವನ್ನು ಒಳಗೊಂಡಿದೆ. ಈ ಪ್ರತಿಯನ್ನಾಧರಿಸಿ ನಾನು ಇಲ್ಲಿ ಪ್ರಬಂಧವನ್ನು ಮಂಡಿಸುತ್ತಿದ್ದೇನೆ. ಕೈಬರಹದ ದಾಖಲೆ ಸುಮಾರು ಒಂದುನೂರ ತೊಂಬತ್ತೊಂದು ಸಾಲುಗಳನ್ನೊಳಗೊಂಡಿದ್ದು ಪ್ರತಿ ಸಾಲಿನಲ್ಲಿ ಸುಮಾರು ಇಪ್ಪತ್ತೆಂಟು ಅಕ್ಷರವನ್ನು ಒಳಗೊಂಡಿದೆ. ಶಾಸನದಲ್ಲಿ ಕಂಡುಬರುವ ಕೊನೆಯ ಪದ ಶುಭಮಸ್ತು ಎಂಬುದು ಈ ಕಾಗದ ಹಸ್ತಪ್ರತಿಯಲ್ಲಿ ಕಂಡುಬರುವುದಿಲ್ಲ ಎಂಬುದನ್ನು ಬಿಟ್ಟರೆ ಉಳಿದಂತೆ ಶಾನಸದ ಪ್ರತಿಯೇ ಇದಾಗಿದೆ ಎಂಬುದರಲ್ಲಿ ಅನುಮಾನಿಸುವಂತಿಲ್ಲ.

ಶಾಸನವು ಶ್ರೀಮದ್ರಾಜಾಧಿರಾಜ ರಾಜ ಪರಮೇಶ್ವರ ಧೀರ ವೀರ ಪ್ರತಾಪ ಶ್ರೀ ವೀರ ಸದಾಶಿವರಾಯ ಮಹಾರಾಯರ ವಿಜಯ ಸಾಮ್ರಾಜ್ಯಾಭ್ಯುದಯದಲ್ಲಿ ಶ್ರೀ ಮನ್ಮಹಾ ಮಂಡಳೇಶ್ವರ ಸಾಳ್ವ ಕೃಷ್ಣದೇವರಸ ಒಡೆಯಮಾನ್ನ ರಾಜ್ಯಕ್ಕೆ ಹಯಿವ ತುಳು ಕೊಂಕಣ ಮೊದಲಾದ ರಾಜ್ಯವನ್ನು ಪ್ರತಿಪಾಲಿಸುತ್ತ ಇದ್ದ ಶಾಲಿವಾಹನ ಶಕ ವರುಷ ೧೪೭೫ನೇ ಅಂದರೆ ಕ್ರಿ.ಶ. ೧೫೫೩ರಲ್ಲಿ ರೋಹಿಣಿ ನಕ್ಷತ್ರ ಸೂರ್ಯೋಪರಾಗ ಪುಣ್ಯ ಕಾಲದಲ್ಲಿ ವಶಿಷ್ಠ ಗೋತ್ರದ ಆಶ್ಲಾಯನ ಸೂತ್ರದ ಋಕು ಶಾಖೆಯ ಭಟ್ಟ ಕಳಗಣ ಸಣ್ಣ ಜೊಯಿಸರ ಮಗ ದೇವಪ್ಪಜೊಯಿಸರು ನಮ್ಮ ಸೆನಬೋವರ ಮಗ ಗಣಪರ್ಸನವರು ಬಿಟ್ಟ ಧರ್ಮಕ್ಕೆ ಯಿಾ ಶಾಸನದ ಭಾಷಾ ಕ್ರಮವೆಂತೆಂದರೆ ಎಂದು ಪ್ರಾರಂಭವಾಗುತ್ತದೆ.

ಶ್ರೀಗೋಕರ್ಣ ಕ್ಷೆತ್ರದೊಳಗೆಲ್ಲ ನಂದವಾಳ ಪರಿಶದಿಷ್ಟಿತರಾದ ಉಪ್ಪುಗುಂದದ ರಾಮಚಂದ್ರ ದಿಷ್ಟಿ ಶ್ರಿಪಾದಂಗಳು ಆನಂದವಾಳ ಪರ್ಿಶಾದಿಷ್ಠಿತರಾದ ಯಿಕ್ಕೆರಿಯ ಯಾದವೆಂದ್ರ ಶ್ರಿಪಾದಂಗಳು ಮಣ್ಣಿಯ ಯಿಾಶ್ವರ।ಯಾಜಿಗಳ ಮಕ್ಕಳು ಶಂಭುಯಾಜಿಗಳು ಅವರ ತಮ್ಮ ಗೊಪಣ್ಣ ಯಾಜಿಗಳು।ವಿಠಲದೆವಿಯ ಮಠದ ಲಿಂಗಾಭಟ್ಟರ ಮಗ ಶಂಕರಲಿಂಗಾಭಟ್ಟ ಇವನ ಅಣ್ಣ ವಿಷ್ಣುಭಟ್ಟನ ಮಗ ಮಹಾಬಲಿಂಗಭಟ್ಟ ಮುಂತಾದವರ ಕೈಯ ನಾಡ ಮುಲವ ಕೊಂಡು ಆಳುತ್ತಂಯಿದ್ದ ಕೋಟಿ ತೀರ್ಥದ ವಾಯುವ್ಯ ದಿಕ್ಕಿನ ಮರುವಗೊಳಿಯ ವತ್ತಿನ ಮಠದ ಹಿತ್ತಲಿಗೆ ಸಹ ಗಡಿ ಮೂಡಲು ನಡವ ಕೊಟಿತೀರ್ಥದ ಕಟ್ಟೆಯ ಪಾಗಾರವು ಅಲ್ಲಿಂದ ತ್ತಿರಿಗಿ ಕಟ್ಟಿದ ಪಾಗಾರ ಗಡಿ ಪಡುವಲು ವಿನಾಯಕ ದೆವರ ಭಟ್ಟಕಳ ಕೈಯಲ್ಲು ಮುಲವಾಗಿಕೊಂಸ ನೆಲದೊಳಗೆ ಬೊಪ್ಪೆಯ ಗದ್ದೆಯ ಗಡಿಯ ಬಳಿಯಲ್ಲಿ ಕಟ್ಟಿದ ಕಟ್ಟು ಗಡಿ ಬಡಗಲು ಯಿಕ್ಕೆರಿಯ ಶ್ರಿಪಾದಂಗಳ ಮಠ **ಹಿತ್ತಲಿಗೆ ಕಟ್ಟಿದ** ತ್ತಿರಗಿ ತೆಂಕ ಬಡಗಲಾಗಿ** ಆ ಶ್ರಿಪಾದಂಗಳ ಮಠದ ಗದ್ದೆಯಲ್ಲಿ ಯಿಕ್ಕಿದ ಕಟ್ಟು ತಿರುಗಿ ವಿಟಲದೆವಿಯ ಮಠ।ದವರಗದ್ದೆಯಲ್ಲು ಕಟ್ಟಿದ ಕಟ್ಟು ಗಡಿ ಯಿಂತಿ ಚತುಃಶಿಮೆಯಿಂದೊಳಗಣ ಮಠದ ಹಿತ್ತಿಲು ಮತ್ತಂ ಕೊಟಿತೀರ್ಥದ ಬಡಗದಿಕ್ಕಿನಲ್ಲು ಮಾಲೆಯ ಸೆನಬೊನ ಮಠ ಸಿಮೆಯದೊಳಗೆ ಆತನ ಕಯಲು ನಾವು ಮುಲವಾಗಿಕೊಂಡ ಸಮಾನರ್ದ ಮಠಕ್ಕೆ ಗಡಿ ಮೂಡಲು ರಾಮಚಂದ್ರ ಭಾರತಿ ಶ್ರಿಪದಂಗಳ ಮಠದ ಪಾಗಾರ ಗಡಿ ತೆಂಕಲು ಕೊಟಿ ತಿರ್ಥದ ಕಟ್ಟೆಯಬಳಿಯಲ್ಲಿ ಕಟ್ಟಿದ ಕಟ್ಟು ಗಡಿ ಪಡವಲು ಯಿಕ್ಕಿದ ಕಟ್ಟು ಗಡಿ ಬಡಗಲು ಮಾ ಹೀಗೆ ಪ್ರಾರಂಭವಾಗುತ್ತದೆ. ಶಾಸನವು ವಿಜಯನಗರ ಕಾಲದ ಹಾಗೂ ಬಹುಶಃ ಅವರ ಕೈಕೆಳಗಿನ ಅಧಿಕಾರಿಗಳು ಗೋಕರ್ಣ ಪ್ರದೇಶದಲ್ಲಿ ಆಡಳಿತ ನಡೆಸಿದ ಕುರಿತಂತೆ ಶಾಸನ ಉಲ್ಲೇಖಿಸುತ್ತದೆ. ಶಾಸನದಲ್ಲಿ ಗೋಕರ್ಣ ಸುತ್ತಮುತ್ತಲು ಇದ್ದಂತಹ ಮಠಗಳ ಉಲ್ಲೇಖಗಳು ಕಂಡುಬರುತ್ತವೆ. ಅಲ್ಲದೆ ಆ ಮಠಗಳಲ್ಲಿ ನಡೆಯುತ್ತಿದ್ದ ಧರ್ಮ ಛತ್ರಕ್ಕೆ ಉಪ್ಪಿನಕಾಯಿ, ತುಪ್ಪ, ಎಲೆಅಡಿಕೆ, ಪುಳಿಯೊಗರೆ, ಮೇಲೋಗರ, ಪುಜ್ಜಿಗೆ ಮೊದಲಾಗಿ ವಿಶೇಷವಾದ ಅಡಿಗೆಗಳನ್ನು ಬಾಣಸಿಗರು ಮಾಡಿ ಬಡಿಸುವುದಕ್ಕೆ ಬಿಟ್ಟಿರುವುದನ್ನು ಶಾಸನದಲ್ಲಿ ಪ್ರಸ್ತಾಪಿಸಲಾಗಿದೆ. ಶಾಸನದ ಪೂರ್ಣ ಪಾಠ ಹೀಗಿದೆ.

ಶಾಸನದ ಪಾಠ ಈ ರೀತಿ ಇದೆ.

ಸ್ವಸ್ತಿ ಶ್ರಿ ಗಣಾಧಿಪತಯೆ ನಮಃ ನಮಃಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ।
ಚಾರವೆ ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೆ । ಶ್ರಿಮದ್ರಾ
ಜಾಧಿರಾಜ ರಾಜಪರಮೇಶ್ವರ ಧೀರ ವಿರ ಪ್ರತಾಪ ಶ್ರಿ ವೀರ ಸದಾಶಿವರಾಯ
ಮಹಾರಾಯರ ವಿಜಯ ಸಾಮ್ರಾಜ್ಯಾಭ್ಯುದಯದಲ್ಲು ಶ್ರೀಮನ್ಮಹಾ
ಮಂಡಳೆಶ್ವರ ಸಾಳ್ವ ಕೃಷ್ಣ ದೆವರಸ **ಒಡೆಯಮಾನ್ನ ನಿರರಾಜ್ಯಕ್ಕೆ** ಹಯಿ
ವ ತುಳು ಕೊಂಕಣ ಮುಂತಾದ ರಾಜ್ಯವನ್ನು ಪ್ರತಿಪಾಲಿಸುತ್ತ ಯಿದಂ ।
ದಿನ ಶಲಿವಾಹನ ಶಕ ವರುಷ ೧೪೭೫ನೆಯ ಪರಿಧಾವಿ ಸಂವತ್ಸರದ ಪು
ಶ್ಯ ಬ ೧೦ಲ್ಲು । ಸ್ಥಿರವಾರ ರೊಹಿಣಿ ನಕ್ಷತ್ರ ಸೂರ್ಯೋಪರಾಗ ಪುಣ್ಯ ಕಾಲದಲ್ಲು ।
ವಶಿಷ್ಠ ಗೊತ್ರದ ಆಶ್ಲಾಯನ ಸೂತ್ರದ ಋಕು ಶಾಖೆಯ ಭಟ್ಟ ಕಳಗಣ
ಸಣ್ಣ ಜೊಯಿಸರ ಮಗ ದೆವಪ್ಪಜೊಯಿಸರು ನಮ್ಮ ಸೆನಬೊವರ ಮಗ ಗಣಪ
ರ್ಸನವರು ಬಿಟ್ಟ ಧರ್ಮಕ್ಕೆ ಯಿಾ ಶಾಸನದ ಭಾಷಾ ಕ್ರಮವೆಂತೆಂದರೆ । ಶ್ರೀ
ಗೊಕರ್ಣ ಕ್ಷೆತ್ರದೊಳಗೆಲ್ಲ ನಂದವಾಳ ಪರಿಶದಿಷ್ಟಿತರಾದ ಉಪ್ಪುಗುಂ

ದದ ರಾಮಚಂದ್ರ ದಿಪ್ತಿ ಶ್ರಿಪಾದಂಗಳು ಆನಂದವಾಳ ಪರ್ರಿಶಾದಿಕ್ಷಿತ
ರಾದ ಯಿಕ್ಕೆರಿಯ ಯಾದವೆಂದ್ರ ಶ್ರಿಪಾದಂಗಳು ಮಣ್ಣಿಯ ಯಿಾಶ್ವರ ।
ಯಾಜಿಗಳ ಮಕ್ಕಳು ಶಂಭುಯಾಜಿಗಳು ಅವರ ತಮ್ಮ ಗೊಪಣ್ಣ ಯಾಜಿಗಳು ।
ವಿಠಲದೆವಿಯ ಮಠದ ಲಿಂಗಾಭಟ್ಟರ ಮಗ ಶಂಕರಲಿಂಗಾಭಟ್ಟ ಅವನ
ಅಣ್ಣ ವಿಷ್ಣುಭಟ್ಟನ ಮಗ ಮಹಾಲಿಂಗಭಟ್ಟ ಮುಂತಾದವರ ಕೈಯ ನಾ
ಡ ಮುಲವ ಕೊಂಡು ಆಳುತ್ತಂ ಯಿದ್ದ ಕೋಟಿ ತೀರ್ಥದ ವಾಯುವ್ಯ ದಿಕ್ಕಿನ ಮ
ರುವಗೊಳಿಯ ವತ್ತಿನ ಮಠದ ಹಿತ್ತಲಿಗೆ ಸಹ ಗಡಿ ಮೂಡಲು ನಡವ ಕೊ
ಟಿತೀರ್ಥದ ಕಟ್ಟೆಯ ಪಾಗಾರವು ಅಲ್ಲಿಂದ ತ್ತಿರಿಗಿ ಕಟ್ಟಿದ ಪಾಗಾರ

ಮುಂದಿನ ಪುಟ: ಪುಟ ಸಂಖ್ಯೆ ೧೩

ಗಾರ ಗಡಿ ಪಡುವಲು ವಿನಾಯಕ ದೆವರ ಭಟ್ಟಕಳ ಕೈಯಲ್ಲು ಮುಲವಾಗಿ
ಕೊಂಡ ನೆಲದೊಳಗೆ ಬೊಪ್ಪೆಯ ಗದ್ದೆಯ ಗಡಿಯ ಬಳಿಯಲ್ಲಿ
ಕಟ್ಟಿದ ಕಟ್ಟು ಗಡಿ ಬಡಗಲು ಯಿಕ್ಕೆರಿಯ ಶ್ರಿಪಾದಂಗಳ ಮಠ
ಹಿತ್ತಲಿಗೆ ಕಟ್ಟಿದ ತ್ತಿರಗಿ ತೆಂಕ ಬಡಗಲಾಗಿ** ಆ ಶ್ರಿಪಾದಂ
ಗಳ ಮಠದ ಗದ್ದೆಯಲ್ಲಿ ಯಿಕ್ಕಿದ ಕಟ್ಟು ತಿರುಗಿ ವಿಟಲದೆವಿಯ ಮಠ ।
ದವರ ಗದ್ದೆಯಲ್ಲು ಕಟ್ಟಿದ ಕಟ್ಟು ಗಡಿ ಯಿಂತಿ ಚುಃಶಿಮೆಯಿಂದೊ
ಳಗಣ ಮಠದ ಹಿತ್ತಿಲು ಮತ್ತಂ ಕೊಟಿತೀರ್ಥದ ಬಡಗದಿಕ್ಕಿನಲ್ಲು ಮಾಲೆ
ಯ ಸೆನಬೊವನ ಮಠ ಸಿಮೆಯದೊಳಗೆ ಆತನ ಕಯಲು ನಾವು ಮು
ಲವಾಗಿಕೊಂಡ ಸಮಾನರ್ಥ ಮಠದ ಗಡಿ ಮೂಡಲು ರಾಮಚಂದ್ರ ಭಾರ
ತಿ ಶ್ರಿಪಾದಂಗಳ ಮಠದ ಪಾಗಾರ ಗಡಿ ತೆಂಕಲು ಕೊಟು ತಿರ್ಥದ ಕಟ್ಟೆಯ
ಬಳಿಯಲ್ಲಿ ಕಟ್ಟಿದ ಕಟ್ಟು ಗಡಿ ಪಡವಲು ಯಿಕ್ಕಿದ ಕಟ್ಟು ಗಡಿ ಬಡಗಲು ಮಾ
ಳಿಗೆಯ ದೊಳಗೆ ಯಿಕ್ಕಿದ ಗೋಡೆ ಬಂದ ಹಾಂಗೆ ಯಿಕ್ಕಿದ ಕಲ್ಲುಗಳು ಗಡಿ ।
ಯಿಂತಿ ನಾಲ್ಕು ಗಡಿಯಿಂದೊಳಗಣ ಮಠ ಅದಕೆ ಬಂದ ಹಿತ್ತಲಿಗೆ ಗಡಿ
ಮುದಲು ರಾಮಚಂದ್ರ ಭಾರತಿ ಶ್ರಿಪಾದಂಗಳ ಮಠದ ಪಾಗಾರ ಗಡಿ ।
ಪಡುವಲು ಅವರ ಹಿತ್ತಿಲ ಗದ್ದೆಯಲ್ಲು ಓಣಿ ಕ್ರಮದಲ್ಲು ಯಿಕ್ಕಿದ ಕಲ್ಲು ಗಡಿ
ಬಡಗಲು ಅಗಳು ಗಡಿ । ಯಿಂತಿ ಚತುಸ್ಸಿಮೆಯಿಂದೊಳಗಣ ಹಿತ್ತಲು ***
ವಾದಮಠಗಳು ಯಿಾ ಮಠಗಳಲ್ಲಿ ನಡವ ಸತ್ರ ಧರ್ಮ ಮುಂತಾ
ದ ಧರ್ಮಕ್ಕು ನಾವುಂ ಜಿರ್ನೊದ್ದಾರವಾಗಿ ಮಾಡಿಸಿದ ವೈಶ್ರಾವಣಿ ದೆವರ ಸಂ
ನ್ನಿಧಿಯಲ್ಲಿ ನಡವ ಧರ್ಮಂಗಳಿಗು ಸಹ ****** ಬಿಡುವರೆ ಆದಾಯವುಂ ಅನ್ಯರ ಗಳಿಂ
ದ ಮುಲವ ಕೊಂಡು ಆಳುತ್ತಂ ಯಿದ್ದ ಸ್ಥಳಂಗಳು ಆ ಸ್ಥಳಂಗಳಿಂದ ಅರಮನೆ
ಗೆ ಸಲುವ ಹೊಂನು ಅಕ್ಕಿ ಮುಂತಾದ ರೆಖೆಗಳೆಲ್ಲವ ಕಡಿದು ಯಿ ಯಲ್ಲವಕ್ಕು ಅನು
ಗುಣವಾಗಿ ಅರಸುಗಳಿಂದ ಸರ್ವಮಾನ್ಯವಾಗಿ ಧರ್ಮಕ್ಕೆ ಬಿಡುವರೆ ಮುಲದ

ಮೆಲುಸಾಧನವಂನ್ನು ನಾಲು ಪಾಲಿಸಿಕೊಂಡು । ಮುಲವಾಗಿ ಆಳುತ್ತಯಿದ್ದ
ಸ್ಥಳಂಗಳ ಗಡಿಯ ವಿವರ । ದೆವಸಹ್ಯೊಂಗೆ ಸ್ಥಳಕ್ಕೆ ಗಡಿ ಮುಡೆಲು ಹೊಳೆಯ
ಗಡಿ । ತೆಂಕಲ್ಲು ನಿರ ಅರಕಲು ದೊಳಗಾಗಿ ಹರಿವ ಹಂಚಿನ ಮೆಲೆ ಯಿಟ್ಟ ಕಲ್ಲು ಗ
ಡಿ । ಪಡವಲು ನಿರರಕಲು ವಾಗಿ ಹರಿವ ಹಂಚಿನ ಮೆಲೆ ಯಿಟ್ಟ ಕಲ್ಲು ಗಡಿ । ಬಡಗ
ಲು ನಿರಕಲ ದೊಳಗಾಗಿ ಹರ್‍ರಿವ ಹಂಚಿನ ಮೆಲಿಟ್ಟ ಕಲ್ಲು । ಅದು ಬಂದ
ಹಾಂಗೆ ವರದೆಶ್ವರದೆವರ ದೆವಸ್ತಾನದ ಗದ್ದೆಯಲ್ಲಿ ಯಿಕ್ಕಿದ ಕಲುಗಡಿ । ಯಿಂ
ತು ಗಡಿ ಯಿಂದೊಳಗಣ ಸ್ತಳಂಗಳಿಗೆ ಕಾರುಸರಕ್ಕೆ ಸಾಹಾ ವರುಷ *****

ಪುಟ ೧೨

ಬಾಹ ಗೆಣಿ ಅಂಬಲದ ಗ ೩೦ ****************************
ಸಿದಾಯದಿಂದಲು ಸರವಳಾಕೊಟ್ಟ ಯ ಗ ೪೨ ಶ್ರಿ ಮಹಾಬಲೆಶ್ವರ ದೆವರಿಗೆ –
ಬತ್ತವ ಮುಡಿ ೧ ಅಕ್ಕಿ ಅಂಬಲಿದ ಮು ೧೨ ಹಾನೆ ೭೬೦ ಯೆಳೆಂಣೆ ಅಂಬಲಿ ೧ *
ಕೊಟ್ಟ ಗ ೧ ಕಾಮೆಶ್ವರ ದೆವರಿಗೆ ಅಂಬಲದವರು ೧೨ಕೆ ಅಂಬಲದ ರು ೬ ಕಾಮೆ
ಶ್ವರದ ವಡೆಯರಿಗೆ ತ್ತೆರುವದು ಕೊಟ್ಟ ಗ ೬ ಅಕ್ಕಿ ಅಂಬಲಿದ ಮು ೯ಬಾದೆ ೭ ॥೦
ಶುಧ ಅಕ್ಕಿ ಮುಡಿ ೭೬ ಹಾ ೨೨॥ ಕೊಟ್ಟ ಗ ೩೯ರ ನಡವಧರ್ಮದ ವಿವರ । ಶ್ರಿ ಮಹಾ
ಬಲೆಶ್ವರ ದೆವರಿಗೆ ಅಂಮ್ರುತ ಪಡಿ ಬಗೆ ಡಿ ೧ರ ಪಡಿ ಹ ೧೪ರಲ್ಲಿ ವರುಷ ೧ರ ಅಂಬಲಿ
ದ ಯಿ ಮಾರುವಗೊಳಿಯ ವತ್ತಿನ ಮಠದಲ್ಲು ನಡವ ಸತ್ರದ ಬ್ರಾಂಹಣರ ಬೋಜನಕ್ಕೆ
ದಿವಳಿಸದ ಅಕ್ಕಿಯಲ್ಲಿ ಅಂನ್ನ ಮೊಸರ್‍ರು ತೊಯ ಫಳಿದ್ಯಾ ಕಲಸುಮೆಲೋಗರ ಮೆಣಸು ಮೆ
ಲೊಗರದವರುರಲಿ ಬಗೆಯ ತಾಳಿಲು ಯರಡು ಪ್ರಕಾರದ ಸಾಂಸವೆ ಯರಡು ಬಗೆ
ಉಪಿನಕಾಯಿ ಬ್ರಾಂಹ್ಮರು ಜನ ೧೦ಕ್ಕೆ ಪಡಿಯ ಸೊಲಿಗೆ ತುಪದ ಲೆಖದಲ್ಲಿ ಬಂ
ದ ತುಪ ಮಜಿಗೆ ಬಾಳೆಯಲೆ ತಾಂಬೂಲ ಮುಂತಾಗಿ ಯಿ ರಿತಿಯಲ್ಲು ನಡಸುವ
ಬ್ರಾಹ್ಮಣ ಬೊಜನಕ್ಕೆ ದಿನ ವಂದರ ಜನ ೬ರ ಅಕ್ಕಿ ಕಣಜದ – ವರುಷ ೧ ಕಣ
ಜದ ವಶ ೧೭೨೦ರ ಅಂಬಲದ ಮು ೫೪ ಯಿ ಬ್ರಾಂಹ್ಮರು ಜ ೬ ಕಂಡಿ ೧ರ ಅಂಬು
ಲಿದ ಸೊಲಿಗೆ ತುಪದಲಿ ಬಂದ ತುಪವವಂನುಳಿಯ ಮೆಲೆ ವ್ಯಚಾಗಿ ಬಡಿ**
ತುಪಾ । ಹಾ ೧ ಕೆ ಸೊಲಿಗೆಯಲ್ಲಿ ವರುಷ ೧ರ ಅಂಬಲಿದ ವಶಾ ೧೨ ।= ಗೆ ಕೊಟ್ಟ
ಯಿಾ ಬ್ರಾಂಹ್ಮರಿಗೆ ಕೊಡುವ ವಿಳ್ಯೆಯದ ಅಡಕೆಯದ ಸತ್ರದ ಅಕ್ಕಿಯ ಹೊರಗೆ
ಉತ್ತರಿಸಿದ ಸಂಮಂಧ ಜ೧ರ ವಿಳ್ಯೆಯದ ಯೆಲೆ ೫ ಅಕ್ಕಿ ಕೆ ೨ ಯಿ ಲೆಖದಲ್ಲಿ ವ
ರುಷ ೧ರ ಯೆಕಾದಸಿನುಳಿದು ವಿಳ್ಯೆದಯೆಲೆ ಕಲ್ಲಿ ೧೬೬॥೦ಗೆ ಕೊಟ್ಟ ಗ ೧
ಅದಕ್ಕೆ ೪೩೨೦ರ ಕೊಟ್ಟ ಗ ೧ ॥ ೧ ಯಿ ಬ್ರಾಂಹ್ಮರ ಜನ ೬ ಕಂ ಶನಿವಾರ ತಪದೆ
ಅಭ್ಯಾಂಗದ ಯೆಳೆಂಣೆ ಅಂಬಲಿದ ಅವರಳದ ಲೆಖದಲಿ ವರುಷ ೧
ಬಲಿದ ಹಾಗೆ *** ೬ರ ಕೊಟ ಗ ೪ ಹಾ ೨ ಯೆಕಾದಶಿ ಶಿವರಾತ್ರಿ ಕೃಷ್ಣಾಷ್ಟಮಿ ೧
ಉತ್ತಾರದ ಅಕ್ಕಿಯಿಂದ ಅಮವಾಶೆ ಹುಂಣುಮೆ ಶಂಕ್ರಾಂತಿಗಳಲ್ಲಿ । ದೊಷ

ಕಾಯಿವ *** ಮಾಡಿಸುವದು ಯಿ ತಿಥಿಗಳಲ್ಲಿ ಬಡಿಸುವ ಪಾಯಿಸ ***
ಯಿ ೭೨ರ ಕೊಟ್ಟ ಗ ೧ ಹಾ ೨ ಬೆಲ ೧೦೮೦ರ ಕೊಟ್ಟ ಗ ೨ ಹಾ ೧ ದ್ವಾದಶಿ ಶಿವ
ರಾತ್ರೆ ಕೃಷ್ಣಾಷ್ಟವು ಯ ಪಾರಣೆಯ ದಿನಗಳು ಸಹಾ ವರುಷ ೭ ರಡಿ **
ದೊಸೆ ಪಾಯಸ ಕಾಯಿ ಹಾಲಿಗೆ ಸಹಾ ದಿ ೧ರ ಕಾಯಿ ೩ ಲೆಖದಲ್ಲಿ ಕಾಯಿ ೭೮
ಕೊಟ್ಟ ಗ ೧ ಹಾ ೦೩ ಬೆಲ್ಲ ದಿ ೧ರ ೩೦ ಲೆಖದಲ್ಲಿ । ಬೆಲ್ಲ ೭೮೦ಕ್ಕೆ ಕೊಟ್ಟ ಗ ೧ ॥ ೦೦

ಪುಟ ೧೧

------------------- ವಾಚ್ಯಾಸಿ ಕೊಟ್ಟ ಅಕ್ಕಿ ಹಾನೆ ೧೯ ॥ ೦
ಯಿ ಧರ್ಮಂಗಳಂನೂ ನಾಂಉ । ಜೀರ್ಣೋದ್ದಾರ ಮಾಡಿಶಿದೆ । ವೈಸ್ರವಣಿ
ಶ್ರರ ದೆವಸ್ಥಾನದಲ್ಲಿ ನಡವ ಧರ್ಮಗಳು ಸಹವಾಸ ಧರ್ಮದ ಆಚಾ
ರ ವಿಚಾರ ಕತ್ರುಗಳಾದ ಮೂರು ಪರುಶನತಿನ ಯತಿಶ್ವರರುಗಳು ಅ
ವರ ಶುಕ್ಲ ಪಟ್ಟಿರು ಸಹಾ ಕಾರ್ತಿಕ ಶು ೧೨ ಆರಭ್ಯ ದಿನ ೧ಕ್ಕೆ ಜ ೧೦೦ಕೆ
ಅಂಬಲದ ಮುಡಿ ೧ ಹಾನೆ ೧ ಯೆತಿಶ್ವರರು ಗ ಬಿಕ್ಷಕ್ಕೆ ತುಪ್ಪಕೆ ಕೊ
ಟ್ಟ ಗ ॥ ೦ ಹಾಲು ಮಸರಿಗೆ ಕೊಟ್ಟ ಹಾ ೨ ಹಾಯಿಸಕ್ಕೆ ಕಾಯಿ ೮ ಮೆಲೊ
ಗರಕೆ ಕಾಯಿ ೪ ಸಹಾ ಕಾಯಿ ೧೨ಕೆ ಕೊಟ್ಟ ಹಾ ೨ ಬೆಲ್ಲಕೆ ಕೊಟ್ಟ ಹಾ ೨ ಅಡು
ಗಬಿಗೆ ಕೊಟ ಹಾ ೨ ಬಾಳೆಯಲೆ ಮೆಲೊಗರ ಕಾಯಿ ಸಂಬಾರದ್ರವ್ಯಕೆ ಕೊ
ಟ್ಟ ಹಾ ೩ ಅಂತೂ ದಿ ೧ಕೆ ಜನ ೧೦೦ಕ್ಕೆ ಅಕ್ಕಿ ಮುಡಿ ೧ ಹಾನೆ ೧ ಕೊಟ್ಟ ಗ ೧ ॥ ೧
ಲೆಖದಲ್ಲಿ ದಿನ ೩ ಅಕ್ಕಿ ಅಂಬಲದ ಮುಡಿ ೩ ಹಾನೆ ೩ಕ್ಕೆ ಕೊಟ್ಟ ಕೊಟ್ಟ ಗ ೪ ॥ ೩
ಯಿ ಧರ್ಮಗಳ ಅಪ್ಪಿ ಬಡಿಸುವ ಬ್ರಾಂಹ್ಮಣನ ಅಪ್ಪಲ ಪಡಿಗೆ ಅಂಬಲ
ದ ಹಾನೆ ೪ ಅಂತೂ । ಅಕ್ಕಿ ಅಂಬಲದ ಮುಡಿ ೭೨ ಹಾನೆ ೨೨ ॥ ೦ ಕೊಟ್ಟ
ಗ ೧೨೪ ಯಿ ಮಠ ಹಿತ್ತಲ ತೆಂಗಿನಕಾಯಿ ಕ್ರಯದಿಂದ ಯಿ ಮಠದ
ತೆರ್ರಿನ ಅಂಬಲ ಹಾನೆ ೪ಕ್ಕೆ ಯೆಳೆಂಣೆಯತ್ತೆರನು ಶ್ರೀ ಮಹಾ
ಬಲೆಶ್ವರ ದೆವರಿಗೆ ಉಪ್ಪುಗುಂದದ ವೊಡೆಯರ ಮುಖಾಂತ್ರದಲ್ಲು ।
ಆ ಮಠದಲ್ಲಿ ಯಿದ್ದ ಬ್ರಾಂಹ್ಮಣನು ತೆತ್ತು ಕೊಂಡು ಆ ಮಠದ ಚವ
ಕ್ಕಿಗೆ ಯೆನು ಹೊದಶಿ ಕೊಳುತ್ತ ಬಾಹಾನು ಅಡಿಗೊಣೆಯವಳಗ
ಣ ಕೊಳೆಯರ ಕಂಬಿಸ್ಥಳಕೆ ಗಡಿ ಮುಡಲು ರಾಮಚಂದ್ರಭಾರತಿ
ಗಳ ಧರ್ಮಸ್ಥಳದ ಗದ್ದೆಯ ಹೊಳೆಯಲ್ಲಿ ನಟ್ಟ ಕಲ್ಲು ಗಡಿ ತೆಂಕಲು
ವರದೆಶ್ವರ ಪಂಡಿತರ ಧರ್ಮಸ್ಥಳದ ಗದ್ದೆಯ ಹೊಳೆಯಲ್ಲಿ ನಟ್ಟ ಕ
ಲ್ಲುಗಡಿ ಪಡವಲು ಕಾನುಗಡಿ ಬಡಗಲು ಬಡಕಂಣಾಯಕನ ಗದ್ದೆ
ಹೊಳೆಯಲ್ಲಿ ನಟ್ಟ ಕಲ್ಲು ಗಡಿ ಅದಕ್ಕೆ ಬಂದ ಗಡಿಯ ಕಂಬಿಯ ಕು
ಡಣಲಿಸುವಾಳಿತುದಿಮುಂದೆ ಹೆಗ್ಗದ್ದೆ ಅದು ಬಂದ ಹಾಂಗೆ ಪ

ಡವಲು ನಾನಾ ಗಡಿ ಅದಕ್ಕೆ ಉಳವಳಿ ಮಂಣು ಮಕ್ಕಿಸ
ಹಾ ಯಿ ಬರದ ಚತುಃಶಿಮೆಯಿಂದೊಳಗಣ ಸ್ತಳಂಗಳೆಲ್ಲವ
ಕ್ಕು ಕಟ್ಟಿದ ಗೇಣಿಬತ್ತ ಮುಡಿ ೧ಕ್ಕೆ ಕೊಳ ಗ ೩೦ ಲೆಖದ ಮುಡಿ
೨೨ ಕೊಳಗಾ ೨೨ ಕೆ ಅಂಬಲದ ಮುಡಿ ೧೨ ಕೊಟ್ಟ ಗ ೨ ಹಾ ೨ ಕಟ್ಟಿಸ ।
ಗಹಳ್ಳಿಯದೊಳಗಣ ಸೆಟ್ಟಿಯ ಮಠದ ಸ್ತಳಕೆ ಬಂದ ಹೊತ್ತಿನ ಗೊ

ಪುಟ ೧೦

ಳಿಯ ಹಿರ್‍ರಿಯ ಗದ್ದೆ ೧ ಆವತ್ತಿನ ಗುಡನ ಗದ್ದೆ ॥ ---------
ಅಂತು ಗದ್ದೆ ೩ ಕ್ಕೆ ಗಡಿ ಮುಡಲು ಕಲ್ಲುಗಡಿನ ಗದ್ದೆಯಲ್ಲಿ ನಡವ ಹಾದಿ
ಗಡಿ ತೆಂಕಲು ಹಟ್ಟಿನ ಗದ್ದೆಯ ಹೊಳೆಯಲ್ಲಿ ಯಿಕ್ಕಿದ ಕಲ್ಲು ಬಂದ ಹಾಂ
ಗೆ ಮುಂಡಿಗೆಯ ಗದ್ದೆಗೆ ಹರ್‍ರಿವ ಕೊಳ್ಳ ಗಡಿ ಪಡವಲು ಅಳಿಯ ಹೊಸ
ಬಂಣ್ಣಾಯಕನ ವರ ಬಸವನಗದ್ದೆಯ ಹೊಳೆಯಲ್ಲಿ ಯಿಕ್ಕಿದ ಕಲ್ಲು ಗ
ಡಿ ಬಡಗಲು ಸೆಟ್ಟಿಯ ಗದ್ದೆಯ ಹಾಳೆಯಲ್ಲಿಯಿಕ್ಕಿದ ಕಲ್ಲುಗಡಿ ಯಿಂತ್ತಿ
ಚತುಃಶಿಮೆಯಿಂದೊಳಗಣ ಗದ್ದೆ ೩ ಕ್ಕೆ ಯಿದಕ್ಕೆ ಹಳ್ಳಿಯವರ ಗುಡಿಯ
ಬಳಿಯ ಗದ್ದೆ ೨ ಆ ಕೊಡವಿ ೧ ಕೆ ಸಹಾ ಗಡಿ ಮುಡಲು ಹಳ್ಳಿಯರ ಮು
ಡಿಯ ಕಂಠ ಗಡಿ ತೆಂಕಲು ಕೊಟ್ಟಿದ ವಡೆಯರ ಗದ್ದೆಯ ಹೊಳೆಯ
ಲ್ಲಿಕ್ಕಿ ಕಲ್ಲುಗಡಿ ಪಡವಲು ಹರ ಪಡವಲು ಹರದಾರ್‍ರಿಯ ಬಳುವಿನ ಗದ್ದೆ ಹೊ
ಳೆಯಲ್ಲಿ ನಟ್ಟ ಕಲ್ಲು ಅದು ಬಂದ ಹಾಂಗೆ ಕೆಶವನ ಗದ್ದೆ ಗದ್ದೆಯ ಹೊಳೆಯ
ಲ್ಲಿನಟ್ಟ ಕಲ್ಲುಗಡಿ ಬಡಗಲು ಹಿರ್‍ರಿಯ ಶಿವಯ್ಯನ ಮಕ್ಕಳ ಗದ್ದೆಯ ಹೊಳೆ
ಯಲ್ಲಿ ನಟ್ಟಕಲ್ಲುಗಡಿ ಯಿಂದೊಳಗಣ ಗದ್ದೆಯ ಕೊಡನಿಯಸಹಾ ಗ।
ದ್ದೆ ೩ಕ್ಕೆ ಯಿದಕೆ ಬಂದ ಸ್ಥಳಂಗಳೆಲ್ಲವ ಸಹಾ ಕಟ್ಟಿದ ಗೇಣಿ ಸೈಗನ ಹೊಳೆ
ಯ ಹಾನೆ ೩೦ ಲೆಖದಲ್ಲಿ । ಯಿ ಲೆಕ್ಕದ ಅಕ್ಕಿ ಮುಡಿ ೧೨ ಹಾನೆ ೧೭ಕ್ಕೆ
ಅಂಬಲದ ಮುಡಿ ೧೪ ಉಬಯಂ ಯಿ ಬರದ ಯರಡು ಸ್ಥಳಂಗಳಿಂದಲು।
ವರುಷ ೧ಕ್ಕೆ ಕಟ್ಟಿದ ಗೇಣಿಯ ಅಕ್ಕಿ ಅಂಬಲದ ಮುಡಿ ೨೬ ಕೊಟ್ಟ ಗ ೨ ಹಾ ೨ನ್ನು
ಕುಪ್ಪಿಲಿಯಲ್ಲು ತೆಂಗಿನ ಹಿತ್ತಲು ಸಹಾ ಕೊಟಿ ತಿರ್ಥ ಬಡಗ ದಿಕ್ಕಿನ ।
ಮಠದಲ್ಲು ಯಿದ್ದು ಧರ್ಮದ್ಯಯನ ಹೆಳುವ ಬ್ರಾಂಹ್ಮಣನು ತಂನ ಸ್ವಾಸ್ತೆ
ಗೆ ತೆಗದುಕೊಂಡು ಅದ್ಯಾಯನ ಹೆಳಿ ಯತಿಶ್ವರರ ಪಾದದ ತೊಳೆದು
ನಮಸ್ಕಾರವ ಮಾಡಿ ಸತ್ರದ ಬ್ರಾಂಹ್ಮರಿಗೆ ಶನಿವಾರ ತಪ್ಪದೆ ಅಬ್ಯಾಂ
ಗದ ಯೆಳೆಂಣೆಯ ಹಿಡಿಶಿ ನಿತ್ಯದಲ್ಲು ಉಂಡಿಗೆಯನರು ಬಿಶಿರಾ
ತ್ರೆಗೆ ನಮ್ಮವರು ಬಂದರ್‍ರೆ ಯರಡು ದಿನದಲ್ಲು ಉಂಟ್ಟವನು ಯಕ್ಕಿ
ಯೀ ಮಠಕ್ಕೆ ಪಾಠಾಳಿಯ್ವರಿಗೆ ತೆರುವ ಕಾಟ್ಟಿಯ ೬ ॥ ೦ ವಂನ್ನು ।

ಕಾಲಂಪ್ರತಿಯಲ್ಲು ತೆತ್ತುಕೊಂಡು ಸುಖದಲ್ಲು ಯಿಹದು ಸೈಗನ ಹಳಿ
ಯ ದೊಳಗಣ ಮಾನಿಯ ಕೊಪ್ಪದ ಸ್ಥಳಕೆ ಬಂದ ಅರಳಿಯ ಮಾ
ಸರಣೆರವಗದ್ದೆ ಸ್ಥಳಕೆ ಗವಿಮುಡಲು ನಾಮೂಡುವ ಗದ್ದೆ

ಪುಟ ೯

ಹೊಳೆಯ ಬಂದ ಹಾಂಗೆ ನಾಯಿದುವನ ಗದ್ದೆಯ ಹೊಳೆಯಲ್ಲಿಕ್ಕಿ
ದ ಕಲ್ಲು ಗಡಿ ತೆಂಕಲು ನಾವಿದ ಗದ್ದೆ ಹೊಳೆಯೆ ಬಂದ ಹಾಂಗೆ ಅಳಿ
ಯ ಹೊಸ ಬಣ್ಣಾಯಕನವರ ಗದ್ದೆಯ ಹೊಳೆ ಬಂದ ಹಾಂಗೆಸಾಣಾ
ತುವ ಗದ್ದೆಗೆ ಬಂದ ಗದ್ದೆಯ ನಹೊಳೆಯಲ್ಲಿಕ್ಕಿದ ಕಲ್ಲು ಗಡಿ ಅದು ಬಂದ
ಹಾಂಗೆ ಬಡಗಲು ಉದ್ದಂಡ ನಾಯಕನ ಮಾಣಿಯ ಕೂಡಲ ಗದ್ದೆ ಬಂದ
ಹಾಂಗೆ ಶೆಟ್ಟಿಗಳ ಪೈಕದವರ ಗದ್ದೆಯ ಹೆಳೆಯಲ್ಲಿಕ್ಕಿದ ಕಲ್ಲು ಗಡಿ
ಯಿಂತಿ ಚತುಸ್ಸಿಮೆಯಿಂದೊಳಗಣ ಸ್ಥಳ ಯಿದಕ್ಕೆ ಬಂದ ಕಟ್ಟಿನ ಕೆರೆ
ಗದ್ದೆ ೧ ಅದಕ್ಕೆ ತೆಂಕಲಾಗಿ ಯಿದ್ದ ಬಿಳು ೨ ನಾನು ನಾಗಸೆನಬೊವನ ಸಾಣ ತು
ನ ಗದ್ದೆಯ ಬಳಿಯಲ್ಲಿದ್ದ ಗದ್ದೆ ೧ ಮಾಣಿಯ ತಮ್ಮನ ಮನೆಯ ಕೆಳಗೆ
ಕೊಟ್ಟಿದ ಹಾದಿಯ ಗದ್ದೆ ಬಳಿಯಲ್ಲಿ ಯಿದ್ದ ಗದ್ದೆ ೧ ಅದಕ್ಕೆ ಬಂದ ಗಡಿ
ಮುಡಲುಕುಮ್ಮಣಸೆಯ ಗದ್ದೆಯ ಹೊಳೆಯಲ್ಲಿಕ್ಕಿದ ಕಲ್ಲು ಗಡಿ ತೆಂ
ಕಲು ಪಚಡಿ ಗಂದ ಗದ್ದೆಯ ಹೊಳೆಯಲ್ಲಿಕ್ಕಿದ ಕಲ್ಲು ಗಡಿ ಪಡ
ವಲು ಗೊಳಿಯರ ಗದ್ದೆ ಕಂಠ ಗಡಿ ಬಡಗಲು ಬಾನಸೆನಬೋವನ ಗದ್ದೆ
ಯ ಹೊಳೆಯಲ್ಲಿಕ್ಕಿದ ಕಲ್ಲು ಗಡಿ ಯಿಂತಿ ಚತುಃ ಸಿಮೆಯಿಂದೊಳ
ಗಣ ಸ್ಥಳಂಗಳು ಸಹವಾದ ಯಿಾ ಸ್ಥಳಗಳೆಲ್ಲವಕ್ಕೆ ಕಟ್ಟಿದ ಗೇಣಿ ಮು
ಡಿ ೧ಕ್ಕೆ ಹಾನೆ ೩೦ ಲೆಕ್ಕದಲ್ಲಿ ಅಕ್ಕಿ ವರುಷ ೧ ಕ್ಕೆ ಯಿ ಸಯಿಗನ ಹಳಿಯ ಮು
ಡಿ ೨೩ಕ್ಕೆ ಅಂಬಲದ ಮುಡಿ ಬಾಡದ ಹಡವು ಹೆರಕಟ್ಟಿನ ಗ್ರಾಮದ
ಮೊಗ್ಗೆಗೆನಾವು ಮುಲವ ಕೊಂಡ ಹರಿಯನ ಬುವಿ ಮನೆ ತೆಂಗಿನ
ಹಿತಲು ಸಹವಾದ ಬುವಿ ಗದ್ದೆ ಮೂಡಲುಹಿನಿಯೊಳಗಾಗಿ ಹೊಳೆ
ಯಾಗರದ ಕಂಠಗಡಿ ತೆಂಕಲು ರಜಬೀದಿಯ ಹೊನ್ನ ಕಳಸ
ವೆ ಗಡಿಯಲ್ಲಿ ನೆಟ್ಟ ಕಲ್ಲು ಅದು ಬಂದ ಹಾಗೆ ಲೊಕೆಶ್ರರ ದೆವರ
ದೆವಸ್ವದ ಗದ್ದೆಯ ಬೆಲಿ ಕಟ್ಟು ಗಡಿ ಪಡುವಲು ರಾಜಮಾರ್ಗದ ಹೆದ್ದಾ
ರ್ರಿ ಗಡಿ ಬಡಗಲು ಲೊಕೆಶ್ರರ ದೆವರ ಕಟ್ಟು ಗುತ್ತಿಗೆಯ ತೆಂಗಿನ ಹಿತ್ತಲ
ಬದಿಯಲ್ಲಿ ನಟ್ಟ ಕಲ್ಲು ಅದು ಬಂದ ಹಾಂಗೆ ಮಾಳಪ್ಪಗಳ ಮಲ್ಲಯನು
ಅಳುತ್ತಂ ಯಿದ್ದ ಸಣ್ಣ ಸಿಯಲ್ಲಿ ಯಿಕ್ಕಿದ ಕಲ್ಲು ಗಡಿ ಯಿಂತಿ ಚತುಃ
ಸಿಮೆಯಿಂದೊಳಗಣ ೧ಸೆನೆ ಸ್ಥಳಂಗಳು ಅದಕ್ಕೆ ಬಂದ ದಂಡಿಯಾ
ಗ್ರದ ಜಗನಿಗೆ ಗಡಿ ಮುಡಲು ಕಾರಂತನ ಮಾದಪ್ಪ ಸೆನಬೊವನು

ಪುಟ ೮

ಒಂದು ಸಾಲು ಕಾಣುವುದಿಲ್ಲ
ಕಟ್ಟಿದ ಗಜನಿ ಹೊಳೆಯಲ್ಲಿ ನಟ್ಟ ಕಲ್ಲು ಗಡಿ ತೆಂಕಲು ತಮಣ ಭಟ್ಟರಕಾ
ರ ಗದ್ದೆಯ ಕಂಠ ಗಡಿ ಪಡುವಲು ಆದಾನದ ಗದ್ದೆಯ ಹೊಳೆ ಅದು ಬಂ
ದ ಹಾಂಗೆ ಅರಿಯನ ಗದ್ದೆಯ ಕಂಠ ಗಡಿ ಬಡಗಲು ಕೆಸತಮತ್ತಿಯನ
ದರ್ಮಕೆ ಬಿಟ್ಟ ಗಜನಿಯ ಕಂಠ ಬಂದ ಹಾಂಗೆ ಯಿಕೆ ತುಕ ಪುತ್ತಿಯ ವರು
ಹಡವಿನ ಗಜನಿಯ ಕಂಠದ ಗಡಿ ಯಿಂತ್ತಿ ಚತುಃಸಿಮೆಯಿಂದೊಳಗಣ
ಗಜನಿಯ ಸ್ತಳ ಸಹವಾದ ಯಿವಂದಸೆನೆಯ ಭುವಿಗೆ ಸಹ ಕಟ್ಟಿದ ಗೆ
ಣಿಹೊಲನಗದ್ದೆ ನಾಡ ಹಾನೆ ೪೫ ಲೆಕ್ಕದಲ್ಲಿ ಅಕ್ಕಿ ಮುಡಿ೭೯ ಕೆ ೨।
ದೆವನಹೊಯಿಗೆ ಸ್ತಳದಲಿ ಛತ್ರ ಧರ್ಮಕೆ ಬಿಟ್ಟ ಮೆಲೆ ಯಿದ ಅಕ್ಕಿ ಮುಡಿ ೪
ಕೊಟ್ಟ ಗ ೬ ಅಂತು ಅಕ್ಕಿ ಮುಡಿ ೩೩ ಕೊಟ್ಟಿಯ ಗ ೬ ನಡವ ದರ್ಮದ ವಿವರ
ಶಾಂತ್ತಿಯ ಭಟ್ಟಕಳಿಗೆ ಅಕ್ಕಿಯ ಮುಡಿ ೩೦ ಅಮೃತಪಡಿಯವರಿಗೆ
ಮಾಲಿಯವರಿಗೆ ಅಕ್ಕಿ ಮುಡಿ ೯ ಕಟ್ಟುವ ಮಾಲೆ ೨೪ ಬಂಡಾರಿಗಳಿಗೆ ಅಕ್ಕಿ ಮು
ಡಿ ೯ ನಡಸುವ ಉಳಿಗದೊಳು ಜಗಪ್ಪಿ ಅಬೆಗಾರಕ್ಕೆ ಕೊಟ್ಟೆಯ ಗ ೧
ಹಾನೆ ೨ ನಂದಾದಿಪ್ತಿಯ ಆಕಳ ತುಪ್ಪದ ಕ್ರಯಕ್ಕೆ ಅಕ್ಕಿ ಮುಡಿ ೧೫
ಗಂಧಕ್ಕೆ ಕೊಟ್ಟ ಗ ೪ ಅಡಕೆ ಯಲೆಗೆ ಕೊಟ್ಟ ಹಣ ೮ ಶಿವರಾತ್ರೆ ಪಂಚ
ಮೃತ ಅಯನಕ್ಕೆ ಕೊಟ್ಟೆಯ ಗ೨ ನು ಆ ಪರ್ವದ ಪಂಚಾಮೃತ ಮುಂ
ತದಕ್ಕೆ ಕೊಟ್ಟೆಯ ಗ ೧ ಹಣ ೮ ದಿಪಾವಳಿಯ ಪಂಚಾಮೃತ ತಯಿಲಾ
ಬ್ಯಂಗಕ್ಕೆ ಕೊಟ್ಟ ಗ ೧ ಕಾರ್ತಿಕ ಪೂರ್ಣಮಿಯ ದಿಪಾರಾಧನೆ ಪಂಚಾಂ
ಮೃತದವೆಚ್ಚಕೆ ಕಾಟಿಯ ಗ ೧ ಉತ್ತರಾಯಣದ ಪಂಚಾಮೃತ ಮು
ರು ದಿನದ ಆಯನ ರಂಗಪೂಜೆಗೆ ಕೊ ೪೯ ದುಪಕೆ ಕೊಟ್ಟ ಹಣ ೨***
ಯಿವಸ್ತಳಕೆ ಕೊಟ್ಟ ಹಣ ೬ ॥ ೦ ಅಂತು ಕೊಟ್ಟ ಗ ೧೬ ಹಣ ೬೦ಕ್ಕೆ ಕೊಟ ಗ ೬
ನುಳಿದು ಮೆಲಾದ್ದು ೧೦ ಹೊನ್ನು ಹಣ ಆರುವರ್ರೆಗೆ ಅಕ್ಕಿ ಮುಡಿ ೧೦ ಶಿವರಾತ್ರೆ
ಮುಂತಾದ ಪುಣ್ಯ ತ್ತಿಥಿಗಳಲ್ಲಿಯು ಪ್ರತಿದಿನದಲ್ಲಿಯು ದೆ
ವರಿಗೆ ಬಂದ ಕಾಣಿಕೆಯನ್ನು ಉಳ್ಳದೆಲ್ಲವನ್ನು ಶಾಂತಿ ಭಟ್ಟಕಳೆ
ನೊಡಿ ತೆಗದುಕೊಂಡು ರಂಗಸಾಲೆಯ ಸಂಜಾದಿಪ್ತಿಯ ಯಣ್ಣೆಗೆನು
ಆರತಿ ಯಣ್ಣೆಯನ್ನು ನರಸಿಕೊಂಬದು ಯಿಾ ಸ್ತಳಂಗಳಿಂದಲ್ಲಿ
ಮಿಗತೆಯಿಂದ ಉಂಟಾದಕ್ಕೆ ಅದರ್ರಿಂದ ದೆವಸ್ತಾನವಂನು ಜಿ
ರ್ಣೊದ್ಧಾರ ಮಾಡಿ ಕೊಂಬದು ।

ಈ ಶಾಸನದ ಜೊತೆಗೆ ಅರೇಬಿಕ್‌ನಲ್ಲಿ ಬರೆದಿರುವ ಶಾಸನದ ಪ್ರತಿಗಳೂ ಇದೆ. ಕೆಳದಿ ಕಾಲದ ಶಾಸನಗಳು, ನಾಗರಿಲಿಪಿಯ ಶಾಸನ ಪ್ರತಿಗಳೂ ಇವೆ.

6

ಶಿವಗಂಗಾ ಕ್ಷೇತ್ರದ ಶ್ರೀಕೃಷ್ಣದೇವರಾಯನ ಕಾಲದ ಎರಡು ಶಿಲಾಶಾಸನಗಳು - ಸ್ಥಳೀಯ ಇತಿಹಾಸದ ಮೇಲೆ ಹೊಸಬೆಳಕು

ಡಾ॥ ಬಿ. ನಂಜುಂಡಸ್ವಾಮಿ

ದಕ್ಷಿಣಕಾಶಿ ಎಂದು ಪ್ರಸಿದ್ಧಹೊಂದಿರುವ ಶಿವಗಂಗಾ ಕ್ಷೇತ್ರ ಇರುವುದು ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕಿನಲ್ಲಿ, ತುಮಕೂರು ಜಿಲ್ಲೆಯ ಗಡಿಯಲ್ಲಿ ಇರುವುದರಿಂದ ಬಹಳಷ್ಟು ಜನ ತುಮಕೂರು ಜಿಲ್ಲೆಯಲ್ಲಿದೆ ಎಂದೇ ಭಾವಿಸಿದ್ದಾರೆ. ಕಕುದ್ಗಿರಿ, ಶಿವಗಂಗೆ ಎಂದು ಪ್ರಸಿದ್ಧವಾದ ಈ ಬೆಟ್ಟ, ಹತ್ತಾರು ತೀರ್ಥಗಳು, ಗವಿಗಳು ಮತ್ತು ನೂರಾರು ದೇವಾಲಯಗಳು ಇವೆ. ಈ ಬೆಟ್ಟದಲ್ಲಿ ಶಕ್ತಿವಿಶಿಷ್ಟಾದ್ವೈತ ಅಥವಾ ವೀರಶೈವ ಅಥವಾ ಲಿಂಗಾಯಿತ ಧರ್ಮಕ್ಕೆ ಸೇರಿದ 63 ಮಠಗಳು ಇದ್ದು ಸುಮಾರು ಐವತ್ತು ಮಠಗಳನ್ನು ಗುರುತಿಸಲಾಗಿದೆ. ಶಿವಗಂಗಾ ಕ್ಷೇತ್ರದಲ್ಲಿ ಸುಮಾರು 1600ರ ನಂತರ ಶಿವಗಂಗಾ ಶೃಂಗೇರಿ ಮಠ ಅಸ್ತಿತ್ವಕ್ಕೆ ಬಂತು. ಈ ಗ್ರಾಮದಲ್ಲಿ ವಿಶ್ವಕರ್ಮರಿಗೆ ಸಂಬಂಧಪಟ್ಟ ಮಠವು ಇದೆ. ಇತ್ತೀಚೆಗೆ ಅಗ್ನಿವಂಶ ಕ್ಷತ್ರಿಯರ ನೂತನ ಮಠವು ಪ್ರಾರಂಭವಾಗಿದೆ. ಈ ಗ್ರಾಮವನ್ನು ಆಲಯಾಶ್ರಿತ ಗ್ರಾಮವೆಂದೆ ಪರಿಗಣಿಸಲಾಗಿದೆ.

ಶಿವಗಂಗಾ ಬೆಟ್ಟದಲ್ಲಿ ನಾವು ಗಂಗರಸರ, ಹೊಯ್ಸಳರ, ವಿಜಯನಗರ ದೊರೆಗಳ, ಬೆಂಗಳೂರು-ಯಲಹಂಕ-ಮಾಗಡಿ ಗೌಡ ದೊರೆಗಳ, ಹಾಗಲವಾಡಿ, ಮೈಸೂರು ದೊರೆಗಳ, ಕಳಲೆ ಪ್ರಭುಗಳ ಕಟ್ಟಡಗಳನ್ನು ಮತ್ತು ಶಿಲಾಶಾಸನಗಳನ್ನು ಗಮನಿಸಬಹುದು. *Sravana Belugola Through the Ages, Melukote to Through the Ages* ಪುಸ್ತಕ ಬಂದಂತೆ ಶಿವಗಂಗಾ ಕ್ಷೇತ್ರದ ಮೇಲೆ ಒಂದು ಪ್ರಶಸ್ತಿಗ್ರಂಥ ಬಂದರೆ ಇತಿಹಾಸಜ್ಞರಿಗೆ ಅಧ್ಯಯನಕ್ಕೆ ಅನುಕೂಲವಾಗುತ್ತದೆ. ಶಿವಗಂಗಾ ಕ್ಷೇತ್ರದಲ್ಲಿ ಎರಡು ಪ್ರಮುಖ ಗುಹಾಂತರ ದೇವಾಲಯಗಳಿದ್ದು ಗಂಗಾಧರೇಶ್ವರ ದೇವಾಲಯ ಮತ್ತೊಂದು ಹೊನ್ನಾದೇವಿ ದೇವಾಲಯ. ಬೆಟ್ಟದ ಮಧ್ಯದಲ್ಲಿ ಗುಹಾಂತರ ಮೇಲಣ ಗವಿಮಠ, ಮತ್ತೊಂದು ಹೊನ್ನಾದೇವಿ ದೇವಾಲಯಕ್ಕೆ ಹೊಂದಿಕೊಂಡಂತೆ ಇರುವ ಹೊನ್ನಂಗವಿ ಮಠ, ಶಿವಗಂಗೆ ಬೆಟ್ಟದ ತುಟ್ಟತುದಿಯಲ್ಲಿ ಗಿರಿಗಂಗಾಧರೇಶ್ವರ ದೇವಾಲಯವಿದೆ. ಪ್ರತಿ ವರ್ಷ ಮಕರ ಸಂಕ್ರಮಣದ ದಿನ ಗಂಗಾಧರೇಶ್ವರನ ಗಿರಿಜಾ ಕಲ್ಯಾಣ ಮಹೋತ್ಸವಕ್ಕೆ ಗಂಗೋತ್ಪತ್ತಿಯಾಗುವ ತೀರ್ಥಕಂಬ ಗಿರಿಯಮೇಲಿದೆ. ಕಾರ್ತೀಕ ಮಾಸದಲ್ಲಿ ಶಿಖರದಲ್ಲಿ ಇರುವ ಕಂಬದ ಮೇಲೆ ದೀಪ ಹಚ್ಚುವ ಸಂಪ್ರದಾಯವಿದ್ದು ಅದನ್ನು ಉರಿಗಂಬ ಎಂದು ಕರೆಯಲಾಗುವುದು.

ಗಂಗಾಧರೇಶ್ವರ ದೇವಸ್ಥಾನದ ಮಾಳಿಗೆ ಗುಂಡಿನಲ್ಲಿ ದಕ್ಷಿಣ ಮುಖವಾಗಿರುವ ದೊಡ್ಡಕ್ಷರದ ಶಾಸನ (ಎ.ಕ. IX, ಅನುಬಂಧ ನೆಲಮಂಗಲ, 116)

1 ಶುಭಮಸ್ತು ॥ ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ

2 1450ನೆಯ ಸರ್ವಧಾರಿ ಸಂವತ್ಸರದ ಚಯಿತ್ರ ಬಗಿಲೂ ಶ್ರೀಕ್ರುಷ್ಣರಾಯನಕಾ

3 ಲದಲಿ ಚೆಂನಮಲಿಸೆಟಿಯರ ಮಕ್ಕಳು ಚಂನಣಸೆಟಿಯರು ಮಾಡಿ

4 ಸಿದ ಪಲ್ಲಕ್ಕಿಯ ಪ್ರದಕ್ಷಿಣ ವಿಜಯಾಪುರದ ರಾಮಚಂದ್ರಪಂಡಿತರ

5 ಮಕಳು ಚಂದರಸ ಪಂಡಿತರ ಪಾರುಪತ್ಯದಲ್ಲಿ ಶ್ರೀ ಶ್ರೀ ಶ್ರೀ

ಕರ್ನಾಟಕ ರಾಜ್ಯ ರಮಾರಮಣ ವಿಜಯನಗರ ಸಾಮ್ರಾಜ್ಯದ ಅಪ್ರತಿಮ ವೀರ ಪ್ರಜಾಸೇವಾ ಕಿಂಕರನಾದ ಶ್ರೀ ಕೃಷ್ಣದೇವರಾಯ ಮಹಾರಾಯನ (1509–1528) ಕಾಲದ ಈ ಶಾಸನ ಗುಹಾಂತರ ಗಂಗಾಧರೇಶ್ವರ ದೇವಾಲಯದ ಮಾಳಿಗೆ ಗುಂಡಿನ ಮೇಲೆ ಇದೆ. ಈ ಶಾಸನ ಕ್ರಿ.ಶ. 1528ರ ಕಾಲಮಾನದ್ದು. ಚೈತ್ರ ಬಹುಳ ಒಂದರಲ್ಲು ಚೆಂನಮಲಿಸೆಟಿಯರ ಮಕ್ಕಳು ಚಂನಂಣಸೆಟಿಯವರು ಮಾಡಿಸಿದ ಪಲ್ಲಕ್ಕಿ ಈ ಪಲ್ಲಕ್ಕಿಯನ್ನು "ಪಲ್ಲಕ್ಕಿಯ ಪ್ರದಕ್ಷಿಣ" ಎಂದು ಶಾಸನದಲ್ಲಿ ಕರೆದಿದೆ. ಈ ಪಲ್ಲಕ್ಕಿಯನ್ನು ವಿಜಯಾಪುರದ ರಾಮಚಂದ್ರ ಪಂಡಿತರ ಮಕ್ಕಳು ಚಂದರಸ ಪಂಡಿತರ ಪಾರುಪತ್ಯದಲ್ಲಿ ನಿರ್ಮಾಣವಾಗಿದೆ.

ಈ ಶಾಸನದಲ್ಲಿ ಉಲ್ಲೇಖಿತವಾಗಿರುವ ಚಂನಮಲಿಸೆಟಿಯವರ ಮಕ್ಕಳಾದ ಚಂನಣಸೆಟಿಯ ಬಗ್ಗೆ ಗಂಗಾಧರೇಶ್ವರನ ಮಜ್ಜನಕೊಳದ ಹತ್ತಿರ ಇರುವ ಶಾಸನ ಬೆಳಕು ಚೆಲ್ಲುತ್ತದೆ.

ವಿಜಯಾಪುರ ರಾಮಚಂದ್ರ ಪಂಡಿತರ ಮಕ್ಕಳು ಚಂದರಸಪಂಡಿತರ ಪಾರುಪತ್ಯದಲ್ಲಿ ಪಲ್ಲಕ್ಕಿ ನಿರ್ಮಾಣವಾಗಿದೆ. ಈ ಪಲ್ಲಕ್ಕಿಯ ಮುಂದೆ ಪ್ರದಕ್ಷಿಣೆಯ ಶಬ್ದವಿದೆ. ಶಾಸನವನ್ನು ಕೆತ್ತುವಾಗ [ಗಿರಿ] ಪ್ರದಕ್ಷಿಣೆ ಪಲ್ಲಕ್ಕಿ ಎಂದು ಕೆತ್ತಬೇಕಾಗಿತ್ತು. ಅನವಧಾನದಿಂದ ಪಲ್ಲಕ್ಕಿ ಪ್ರದಕ್ಷಿಣೆ ಎಂದು ಕೆತ್ತಲಾಗಿದೆ.

ಇಂದಿಗೂ ಪ್ರತಿವರ್ಷ ಗಂಗಾಧರೇಶ್ವರ ಉತ್ಸವಮೂರ್ತಿ ವರ್ಷಕ್ಕೆ ಒಂದು ಸಾರಿ ಗಿರಿಪ್ರದಕ್ಷಿಣೆ ಸೇವೆ ನಡೆಯುತ್ತದೆ. ಶಿವಗಂಗೆ ಬೆಟ್ಟದ ತಪ್ಪಲಲ್ಲಿ ಇರುವ ಗಂಗಿನಪುರ, ಐಸಂಪಾಳ್ಯ, ಗೌರಪಾಳ್ಯ, ಭದ್ರೀಪಾಳ್ಯದ ಭಕ್ತಾದಿಗಳು ಈ ಗಿರಿ ಪ್ರದಕ್ಷಿಣೆ ಸೇವೆಯನ್ನು ಮಾಡುತ್ತಾರೆ. ಸುಮಾರು 265 ಮಂಟಪಗಳಲ್ಲಿ ಗಂಗಾಧರೇಶ್ವರನಿಗೆ ಪೂಜೆ ಸಲ್ಲುತ್ತದೆ. ಗಿರಿಪ್ರದಕ್ಷಿಣೆ ಮುಗಿಸಿಕೊಂಡು ತೋಪಿನ ಗಣಪತಿ ಹತ್ತಿರ ಸ್ವಾಮಿಯನ್ನು ಬಿಜಂಗೈಸುತ್ತಾರೆ. ಸಂಜೆ ಶಿವಗಂಗೆಯ ಮಕ್ಕಳು ಊದುಕಡ್ಡಿ ಹಚ್ಚಿಕೊಂಡು ಹೋಗಿ "ಕುದುರೆ ವಾಹನ"ದಲ್ಲಿ ಉತ್ಸವದೊಂದಿಗೆ ಕರೆದುಕೊಂಡು ಬಂದು ಅಗಸ್ತ್ಯೇಶ್ವರ ತೀರ್ಥದಲ್ಲಿ ಗಂಗಾಸ್ನಾನ, ಸಂಪ್ರೋಕ್ಷಣೆ ನಡೆಯುತ್ತದೆ. ಗಂಗಾಧರೇಶ್ವರನು ಗುಹೆ ಸೇರುವಾಗ ರಾತ್ರಿ ಹತ್ತುಗಂಟೆ ಆಗುತ್ತದೆ.

ಇಂತಹ ಗಿರಿ ಪ್ರದಕ್ಷಿಣೆಗೆ ಬಹಳ ಸುಂದರವಾದ ಪಲ್ಲಕ್ಕಿಯನ್ನು ವಿಜಯಾಪುರ ರಾಮಚಂದ್ರ ಪಂಡಿತರ ಮಕ್ಕಳು ಚಂದರಸ ಪಂಡಿತರ ಪಾರುಪತ್ಯದಲ್ಲಿ ನಿರ್ಮಾಣವಾಗಿದೆ. ವಿಜಯಾಪುರ ಎಂದರೆ ಯಾವುದು ಇಂದಿನ ಬಿಜಾಪುರವನ್ನು ಇಂದಿನ ದಿನದಲ್ಲಿ ವಿಜಯಾಪುರ ಎಂದು ಕರೆಯುತ್ತಿದ್ದರು. ಶಿಲೆ, ಕಾಷ್ಠ, ಲೋಹದ ಕೆತ್ತನೆಯಲ್ಲಿ ವಿಶೇಷ ತಜ್ಞತೆ ಪಡೆದಿದ್ದ ರಾಮಚಂದ್ರ ಪಂಡಿತರು, ಅವರ ಕೈಕೆಳಗೆ ವಿಶೇಷವಾದ ತರಬೇತಿಯನ್ನು ಅವರ ಮಗ

ಚಂದರಸ ಪಂಡಿತರು ಪಡೆದುಕೊಂಡಿದ್ದು ಅವರ ಪಾರುಪತ್ಯದಲ್ಲಿ "ಪಲ್ಲಕ್ಕಿ" ನಿರ್ಮಾಣವಾಗಿದ್ದು ವಿಶೇಷವಾದ ಸುಂದರ ಕೆತ್ತನೆ ಇದ್ದ ಈ ಪಲ್ಲಕ್ಕಿ ಗಿರಿಪ್ರದಕ್ಷಿಣೆ ಬಳಸುತ್ತಾ ಇದ್ದಿರಬೇಕು. ಈಗ ನಮಗೆ ಪಲ್ಲಕ್ಕಿ ನೋಡಲು ಲಭ್ಯವಿಲ್ಲ. ರಾಮಚಂದ್ರ ಪಂಡಿತರು ಹಾಗೂ ಅವರ ಮಗ ಚಂದರಸಪಂಡಿತರು ವಿಶ್ವಕರ್ಮ ಜನಾಂಗದವರು ಆಗಿರಬಹುದು.

ಶಿವಗಂಗೆ ಗ್ರಾಮದಲ್ಲಿ ಮಠದ ಬಾಗಿಲಲ್ಲಿ ಪೂರ್ವಕಡೆ ಕಂಭದ ಮೇಲೆ (ಎ.ಕ., IX, ನೆಲಮಂಗಲ 74)

1 ಶುಭಮಸ್ತು ಸ್ವಸ್ತಿಶ್ರೀ ವಿಜೆಯಾ
2 ಭ್ಯುದಯ ಶಾಲಿವಾಹನ ಶಕ
3 ೧೪೩೦ನೆಯ ಸರ್ವಧಾರಿ ಸಂವ
4 ಚ್ಚರದ ಕಾರ್ತಿಕ ಶು. ೧೦ ಗುರುವಾ
5 ರದಲು ರಾಜಾಧಿರಾಜ ರಾಜಪರ
6 ಮೇಶ್ವರ ಕ್ರುಷ್ಣರಾಯಮಹಾರಾಯನ
7 ಮನೆಯ ಕುದುರೆ ಚಾಕಲ ಬೋವನ
8 ಮಗಚಂನಣನು.... ಗಂ
9 ಗಾ [ಧ]ರದೇವರ ...ಬಿಠೆ
10 ಉ.........

ಈ ಶಾಸನ ಅಗಸ್ತ್ಯ ತೀರ್ಥದ ದ್ವಾರದ ಕೋಲೇ ಗೋಪುರದಲ್ಲಿತ್ತು. ಸುಮಾರು 1890ರಲ್ಲಿಯೇ ಈ ಗೋಪುರವನ್ನು ಶಿವಗಂಗಾ ಶೃಂಗೇರಿ ಮಠದವರು ಕೆಡವಿಸಿದರು. ಈ ಬಗ್ಗೆ ಶಿವಗಂಗೆಯ ಸಾಹುಕಾರ್ ರೇವಣ್ಣನವರು ಸರ್ಕಾರಕ್ಕೆ ಫಿರ್ಯಾದು ಮಾಡಿ ಆ ದ್ವಾರ ಗೋಪುರದ ಕಂಬಗಳನ್ನು ಅಮಾನತ್ತಿನಲ್ಲಿ ಇಡಿಸಿದರು. ಮುಂದೆ ಈ ಶಾಸನ ಬೆಂಗಳೂರು ಶಾಸನ ಸಂಪುಟದಲ್ಲಿ ಪ್ರಕಟವಾದ ಮೇಲೆ ತಪ್ಪಾಗಿ ಓದಿ ಪ್ರಕಟಿಸಿರುವುದನ್ನು ಅನ್ಯ ಉದ್ದೇಶದಿಂದ ಈ ರೀತಿ ಮುದ್ರಣ ಮಾಡಲಾಗಿದೆ ಎಂದು ಸರ್ಕಾರದ ಜೊತೆ ಪತ್ರವ್ಯವಹಾರ ಮಾಡಿ ಶಾಸನ ಇಲಾಖೆಯ ಮುಖ್ಯಸ್ಥರಿಗೆ ಪತ್ರ ಬರೆದು ತಜ್ಞರನ್ನು ಕರೆಸಿ ಮತ್ತೆ ಸರಿಯಾಗಿ ಓದಿಸಿ ರೆಕಾರ್ಡ್ ಮಾಡಿಸಿದರು. ಪ್ರಕಟಿತ ಶಾಸನದ ತಿದ್ದುಪಡಿಯಾದ ಪಾಠವನ್ನು ಸರ್ಕಾರದ ಕಛೇರಿಯಿಂದ ತರಿಸಿಕೊಂಡ ಪತ್ರವನ್ನು ಸಾಹುಕಾರ್ ರೇವಣ್ಣನವರ ಮೊಮ್ಮಗ ಡಾ॥ ಸಿದ್ದಲಿಂಗಪ್ಪನವರ ಹತ್ತಿರ ನಾನು ನೋಡಿದ್ದೆ. ತಿದ್ದುಪಡಿಯಾದ ಶಾಸನ ಬೆಂಗಳೂರು ಎ.ಕ. IX, ಅನುಬಂಧ 116ನೇ ಶಾಸನವಾಗಿ ಪ್ರಕಟವಾಗಿದೆ.

ನೆಲಮಂಗಲ ಎ.ಕ., IX, ನೆಲಮಂಗಲ ಅನುಬಂಧ 74

1 ಶುಭಮಸ್ತು ಸ್ವಸ್ತಿಶ್ರೀ ವಿಜೆಯಾ
2 ಭ್ಯುದಯ ಶಾಲಿವಾಹನ ಶಕ
3 ೧೪೩೦ನೆಯ ಸರ್ವಧಾರಿಸಂವ
4 ಚ್ಚರ ಕಾರ್ತಿಕ ಶು. ೧೦ ಗುರುವಾ
5 ರದಲು ರಾಜಾಧಿರಾಜ ರಾಜಪರ
6 ಮೇಶ್ವರ ಕ್ರುಷ್ಣರಾಯಮಹಾರಾಯನ

7 ಮನೆಯ ಕುದುರೆ ಬಹರಿ ಚನಮ
8 ಲಿಸಟಿರ ಮಗ ಚಂನಣಸಟರು .ಗಂ
9 ಗಾಧರದೇವರ ಮಜನದ ....ಕಿದ
10 ವಾಗಿ .... ಚಂನಂಣ . ಕೊ
11 ಲೆಗೋಪುರ ವಿಜಯಾಪುರದರಾ[ಮ]
12 ಚಂದ್ರಪಂಡಿತರ ಮಗ ಚಂದರ್‍ಸರಕಾಲ

ಅಗಸ್ತ್ಯತೀರ್ಥ ದ್ವಾರ ಬಾಗಿಲಿನಲ್ಲಿ ರಕ್ಷಿಸಲ್ಪಟ್ಟ ಈ ಶಾಸನ ಈಗ ಮತ್ತೆ ಸ್ಥಾನಪಲ್ಲಟವಾಗಿದೆ. ಈ ಶಾಸನದ ಕಾಲ ಕ್ರಿ.ಶ. 1528 ಕಾರ್ತೀಕ ಶುದ್ಧ ದಶಮಿ ಗುರುವಾರ ರಾಜಾಧಿರಾಜ ರಾಜಪರಮೇಶ್ವರ ಕೃಷ್ಣರಾಯ ಮಹಾರಾಯನ ಮನೆಯ ಕುದುರೆ ಬಹರಿ ಚನ್ನಮಲ್ಲಿಸೆಟ್ಟರ ಮಗ ಚನ್ನಣ್ಣಸೆಟ್ಟರು ಗಂಗಾಧರ ದೇವರ ಮಜ್ಜನದ ಕೊಳಕ್ಕೆ ಚಂನಂಣ [ಶೆಟ್ಟರು] ಕೋಲೆ ಗೋಪುರವನ್ನು ವಿಜಯಪುರದ ರಾ[ಮ]ಚಂದ್ರ ಪಂಡಿತರ ಮಗ ಚಂದರ್‍ಸರ ಪರಿವೀಕ್ಷಣೆಯಲ್ಲಿ ಈ ಗೋಪುರವನ್ನು ಕಟ್ಟಲಾಗಿದೆ. ಕೃಷ್ಣದೇವರಾಯಮಹಾರಾಯನ ಅರಮನೆಯ ಕುದುರೆ ಬಹರಿ ಅರ್ಥಾತ್, ಅರಮನೆಯ ಕುದುರೆ ವ್ಯವಹಾರಿಯಾಗಿದ್ದವನು ಚನ್ನಮಲ್ಲಶೆಟ್ಟಿ.

ಶಿವಗಂಗೆ ಪೇಟೆ ಶೆಟ್ಟರ ವಂಶಸ್ಥರು ಇಂದಿಗೂ ತಮ್ಮ ಕೆಲಸಕಾರ್ಯಗಳನ್ನು ಭಕ್ತಿಯಿಂದ ಗಂಗಾಧರೇಶ್ವರನಿಗೆ ಹೊನ್ನಾದೇವಿಗೆ ಸಲ್ಲಿಸುತ್ತಾ ಇದ್ದಾರೆ. ಗಂಗಾಧರೇಶ್ವರನ ಗಿರಿಜಾ ಕಲ್ಯಾಣ ಮಹೋತ್ಸವಕ್ಕೆ ಗಂಗಾಧರೇಶ್ವರನ ಹೆಣ್ಣು ಕೇಳಲು ಇಂದಿಗೂ ಇವರ ಮನೆಗೆ ಬರುವ ಸಂಪ್ರದಾಯವಿದೆ. ಹೊನ್ನಾದೇವಿ ಜಾತ್ರಾ ಮಹೋತ್ಸವದಲ್ಲಿ ಕಂಬದ ರಾಯನ ಸ್ಥಾಪನೆಗೆ ಇವರ ಮನೆಯಿಂದ ಒಂದು ಕೊಡ ಹಾಲು ಅಥವಾ ಒಂದು ಕೊಟ ಬೆಲ್ಲದ ನೀರನ್ನು ಹಾಕುವ ಸಂಪ್ರದಾಯವಿದೆ. ಹೊನ್ನಾದೇವಿಯ ಜಾತ್ರೆಯ ಮಡೆಯ ದಿವಸ ಈ ಹಿಂದೆ ಮನೆತನದವರು ಹೊಕ್ಕಳಕ್ಕಿ ಆರತಿ ಮಾಡುವ ಸಂಪ್ರದಾಯವಿತ್ತು. ಈಗ ತಮ್ಮ ಮನೆಯಲ್ಲಿ ನಡೆಯುವ ಶುಭ ಸಮಾರಂಭದಲ್ಲಿ ಮಾಡುವ ಸಂಪ್ರದಾಯ ಇಟ್ಟುಕೊಂಡಿದ್ದಾರೆ. ಮೇಲಿನ ಎರಡು ಶಾಸನದಲ್ಲಿ ಉಲ್ಲೇಖಗೊಂಡಿರುವ ಕೃಷ್ಣದೇವರಾಯನ ಕುದುರೆ ಬಹರಿ ಚೆನ್ನಮಲ್ಲಶೆಟ್ಟರು ಇವರ ಮಗ ಚನ್ನಣ್ಣ ಶೆಟ್ಟರು ಮಾಡಿದ ಸೇವೆಯನ್ನು ಈ ಎರಡು ಶಾಸನಗಳು ಸ್ಪಷ್ಟವಾಗಿ ತಿಳಿಸುತ್ತದೆ. ಈ ಶಾಸನೋಕ್ತ ಚನ್ನಣ್ಣಶೆಟ್ಟರ ವಂಶಸ್ಥರೆ ಇಂದಿಗೂ ಶಿವಗಂಗೆಯಲ್ಲಿರುವ ಶೆಟ್ಟರ ಮನೆತನದವರು ಎಂದು ನನ್ನ ಊಹೆ.

ಬೆಟ್ಟದ ಕೋಟೆ ಪ್ರಭುಗಳು ವಂಶಸ್ಥರು ಶಿವಗಂಗೆ ಗಂಗಾಧರೇಶ್ವರನಿಗೆ ಕೊಟ್ಟ ಪೂಜಾದತ್ತಿ ತಾಮ್ರದ ಶಾಸನದಲ್ಲಿ ಶಿವಗಂಗೆ ಶೆಟ್ಟರ ವಂಶಸ್ಥರಾದ ಹೊನ್ನಶೆಟ್ಟರು ಮತ್ತು ಗಂಗಾಧರಶೆಟ್ಟರ ಉಲ್ಲೇಖವಿದೆ.

7

ವಿಜಯನಗರ ಕಾಲದ ತಾಮ್ರ ಶಾಸನ

ಡಾ॥ ಎಂ. ಕೊಟ್ರೇಶ್

ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ದಾಂಡೆಭಾಗದಲ್ಲಿರುವ ಶ್ರೀಧರ ದತ್ತಾರಾಂಶೈಲ ಇವರ ಬಳಿ ಇದ್ದ ತಾಮ್ರ ಶಾಸನ. ಇತ್ತೀಚೆಗೆ ಕ್ಷೇತ್ರಕಾರ್ಯಕ್ಕೆ ಹೋದಾಗ ಅವರ ಬಳಿ ಇದ್ದುದು ಪತ್ತೆಯಾಯಿತು. ಒಟ್ಟು ಮೂವತ್ತು ಸಾಲುಗಳಲ್ಲಿರುವ ನಡುಗನ್ನಡ ಭಾಷೆಯ ಅಪ್ರಕಟಿತ ಶಾಸನವಿದು. ನಮಸ್ತುಂಗಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಈ ಶ್ಲೋಕದೊಂದಿಗೆ ಆರಂಭವಾಗುತ್ತದೆ. ಶಾಲಿವಾಹನ ಶಕ ವರುಷ 1509ನೆಯ ವ್ಯಯ ಸಂವತ್ಸರದ ಮಾಘ ಶು. 5 ಲು ಶ್ರೀ ಎಂದು ಉಲ್ಲೇಖಿಸಿದೆ. ಅಂದರೆ 1509+78 = ಕ್ರಿ.ಶ. 1587ಕ್ಕೆ ಸರಿಹೊಂದುತ್ತದೆ. ಈ ಕಾಲಘಟ್ಟದಲ್ಲೇ ವಿಜಯನಗರ ಇಳಿಮುಖವಾಗಿತ್ತು. ಕ್ರಿ.ಶ. 1565ರ ತಾಳಿಕೋಟೆ ಯುದ್ಧದ ನಂತರ ವಿಜಯನಗರದ ರಾಜಧಾನಿ 'ಹಂಪಿ' ಹಾಳಾದ ಸ್ಥಿತಿ ತಲುಪಹತ್ತಿತ್ತು. ತಿರುಮಲ ಮತ್ತು ವೆಂಕಟಾದ್ರಿ ಪೆನುಗೊಂಡೆ ರಾಜಧಾನಿ ಮಾಡಿಕೊಂಡಾಗಿತ್ತು.

ಆಗ ಕೊಂಕಣ ರಾಜ್ಯವನ್ನು ವಿಜಯನಗರದ ಮಹಾಮಂಡಳೇಶ್ವರರು ಆಳುತ್ತಿದ್ದರು. ವಿಜಯನಗರ ಪತನವಾದರೂ ಇವರು ಮಹಾಮಂಡಳೇಶ್ವರರು ಎಂದು ಕರೆದುಕೊಂಡಿದ್ದಾರೆ. ಆಗ ಹಾಡುವಳ್ಳಿ ಹಾಗೂ ಗೇರುಸೊಪ್ಪೆಯಿಂದ ಚೆನ್ನಭೈರಾದೇವಿಯು ಆಳ್ವಿಕೆ ಮಾಡುತ್ತಿದ್ದ ವಿಷಯ ಈ ಶಾಸನದಲ್ಲಿದೆ. ಆದರೆ ಹಾಡುವಳ್ಳಿ + ಗೇರುಸೊಪ್ಪೆಯ ವಿಷಯಗಳಿಲ್ಲ.

ಸಂಗೀತಪುರ (ಹಾಡುವಳ್ಳಿ) ಮತ್ತು ಕ್ಷೇಮಪುರ (ಗೇರುಸೊಪ್ಪೆ) ಪರಸ್ಪರ ಕಚ್ಚಾಟದಲ್ಲಿ ದೂರ ದೂರ ಇದ್ದಾಗ ಇವುಗಳನ್ನು ಒಂದು ಮಾಡಿ ಆಳ್ವಿಕೆ ಮಾಡಿದ ಕೀರ್ತಿ ಈ ರಾಣಿಗೆ ಸಲ್ಲುತ್ತದೆ. ಈಕೆಗೆ ಮೆಣಸಿನ ರಾಣಿ ಎಂತಲೂ ಕರೆಯುತ್ತಾರೆ. ವ್ಯಾಪಾರ ವಹಿವಾಟುಗಳಿಂದ ತುಂಬ ಸಮೃದ್ಧಿ ಕಂಡ ರಾಜ್ಯವಿದು. ಈ ರಾಣಿಯ ಉಲ್ಲೇಖ ಈ ಶಾಸನದಲ್ಲಿರುವುದು ಮಾತ್ತು ಅಂಬಿಗರ ಇತರೆ ಜಾತಿಯವರಿಗೆ ಇದ್ದ ತಂಟೆ ತಕರಾರುಗಳನ್ನು ಬಗೆಹರಿಸಿ, ಕಾಣಿಕೆಗಳನ್ನು ನೀಡಿ ನ್ಯಾಯ ಬಗೆಹರಿಸಿದಳು. ಮುಂದೆ ಈ ತೀರ್ಮಾನಕ್ಕೆ ಅಡ್ಡಬಂದರೆ ಅವರಿಗೆ ತಕ್ಕ ಶಿಕ್ಷೆ ಆಗುವುದೆಂದು ಎಚ್ಚರಿಸಿದ್ದಾಳೆ. ಹಾಗಾಗಿ ಇದೊಂದು ಮಹತ್ವದ ಶಾಸನ.

ಶಾಸನ ಪಾಠ

1 ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೆ ತ್ರೈಲೋಕ್ಯ
2 ನಗರಾರಂಭಾ ಮೂಲಸ್ತಂಭಾಯ ಸಂಭವೇ ಶ್ರೀ . ಮಂಜಯಾಭ್ಯುದ
3 ಯ ನೃಪಶಾಲಿವಾಹನ ಶಕ ವರುಷ 1509 (೯)ನೆಯ ವೆಯ
4 ಸಂವತ್ಸರದ ಮಾಘ ಶು 5 ಲು ಶ್ರೀ ಮಂನ್ಮಾಹ ಮಂಡ
5 ರೇಶ್ವರರು ಹೈಯಿವೆರ್‍ವಳು ಕೊಂಕಣರಾಜ್ಯಂಪ್ರತಿಪಾಲಿ
6 ಸುತ್ತ ವಿದಂದಿನ ಶ್ರೀಮತ್ ಚೆಂನಭಯಿರಾದೇವಿ ಅಂಮ
7 ನವರು । ಅಂಬಿರಜಾತಿ ವರ್ಗದ ಬಿರಡಿಂಮ ಲಿಂಗ ಮ
8 ನು ಮುಂತಾದ ಜಾತಿ ಸಮಸ್ತ ವರ್ಗದವರಿಗೆ ಪಾಲಿಸಿ
9 ದ ತಾಂಬ್ರ ಶಾಸನ ಬಾಷ ಕ್ರಮವೆಂದರೆ ನಿಂಮ
10 ವಿಚಾರವಾಗಿ ಅಣಿಸೆಟ್ಟಿ ಭುಜ ಬಸೆಟ್ಟಿ ಚೆಂನಸೆಟ್ಟಿ
11 ಹೊನಣಸೆ । ಸೆಟ್ಟಿ(ಟಿ) ಒಲೆನವರದೆರು । ಭಯಿರ ನಾ
12 ಯಕ ದಂಡನಾಯಕ ಸಾಂತನಾಯಕ ಪುರಸನಾಯಕ
13 ಮುಂತಾದಸಮಸ್ತರು ಬಿಂನಹ ಮಡಿ ಹೆಳಿಕೊಂಡದು ।
14 ಯಿ ಅಂಬಿರ ಜಾತಿ ಗಂಗಾಪುತ್ರರು ಸೆವೆಗೆ ಬಹಂಥವರು
15 ಪುರ್ವಾರ (ಭನ್ದಂತ) ಬಂದಥಾರ ಕೆಯಿತ್ತಲಾಗಿಯಿವರಕ
16 ಪಡ ರಜಕರು ಕೊಳೊದಿಲ್ಲಾ ನಾ(ವಿ)(ಬ)ಕರು ಕ್ಷಸಿರಾಮಡು ದಿ
17 ಲ್ಲಾ ಯೆಂತ್ತಕಟ್ಟು ಮಾಡಿಕೊಂಡಥಾರೆಂದು ಕೇಳಿದೆ ಉಯಿ
18 ಅಭಿಪ್ರಾಯ ಚಿತ್ತಕೆಚಂದು ಯಿವರು ಗಂಗಾಪುತ್ರರು ಯಿ
19 ವರ ಜಾತಿಗೆ ಅಷ್ಟಾರುವೆನುಯಿಲ್ಲಾಯೆಂತನಿದಾನಿಸಿಯಿವ
20 ರಕಯ್ಯ ಅರಮನೆಗೆ ಕಾಣಿಕೆಗಳ ಎಂಬತ್ತು ವರ ಹತೆ
21 ಗದು ಕೊಂಡೆಲು । ಯಿ(ವ)ರಕಪರಜಕರು ಕೊಳವರು ನಾ
22 ವಿಕರು ಕ್ಷಉರಾಮಾಡಿಹ್ಯರು । ಲಾಳಿಶಿ ಕಟು ಮಾಡಿಸಿ
23 ದೆವೆ । ಮದುಮಂಗಳಕೆ ಬಾಸಿಂಗ ಮಂಟಪತಂದು
24 ತಾಳಿಕಟ್ಟಲೆ ಪೂರ್ವಾರಭ್ಯಯಿದ್ದಾ(ರೀತಿ) ನಡೆಸಿಕೊಂಡಾರು
25 ಯಿವರ ಕಾರ್‍ಯ್ಯ ಕೆಆರೊಬ್ಬರು (ಅ)ಡಬಹರೆ ಕಾರಣ ವಿಲ್ಲಾ
26 ಮತ್ತ್ಯಾರಾದರು ಅಡಬಂದಲಿ ಅವರು (ತ)ತಕ್ಕೆ ಅಪರಾದ
27 ವಾದಿತು । ನಿಂಮ ಜಾತಿ ಕಟಲೆಯಿದ್ದನೂ ರೀತಿ ಯಿಂದ್ದಾನುಕುಲಾ
28 ಮಾಡಿಕೊಂಡು ನಿಂಮ ಸಂತತಿ ಪಾರಂಪರೆ ಅನುಭವಿಸಿ
29 ಅರಮನೆಸೆಲೆಮಾಡಿಕೊಂಡು ಸುಖದಲ್ಲಿಹ್ಯ ದಾನಿಯೆಂ
30 ತ ಪಾಲಿಸಿ ಕೊಟ್ಟ ತಾಂಬ್ರಶಾಸನವೂ

8

ಒಂದನೇ ಬುಕ್ಕರಾಯನ ದಾವಣಗೆರೆ ಜಿಲ್ಲೆಯ ಶಾಸನಗಳು

ಸಂತೇಬೆನ್ನೂರು ಸುಮತೀಂದ್ರ ನಾಡಿಗ್

ವಿಜಯನಗರ ಸ್ಥಾಪಕರೆನ್ನಲಾಗುವ ಹಕ್ಕಬುಕ್ಕ ಸಹೋದರರನ್ನು ಇತಿಹಾಸಕಾರರು ಒಂದನೇ ಹರಿಹರ, ಒಂದನೇ ಬುಕ್ಕರಾಯ ಎಂದು ಕರೆದುಕೊಂಡುಬಂದಿದ್ದಾರೆ. ವಿಜಯನಗರ ಸಾಮ್ರಾಜ್ಯದ ರಾಜ್ಯಭಾರವನ್ನು ಅಣ್ಣ ಹರಿಹರ ಮೊದಲು ಕ್ರಿ.ಶ. 1336–1355ರ ವರೆಗೆ ನಿರ್ವಹಿಸಿದನು. ಅವನಿಗೆ ಮಕ್ಕಳಿಲ್ಲವಾದ ಕಾರಣ ಅವನ ನಿಧನದ ತರುವಾಯ ಅವನ ತಮ್ಮ ಕಂಪಣ ಕೆಲಕಾಲವೂ ಅವನನಂತರ ಅವನ ಇನ್ನೊಬ್ಬ ತಮ್ಮ ಬುಕ್ಕರಾಯ ಆಡಳಿತ ಚುಕ್ಕಾಣಿ ಹಿಡಿದನು ಎಂಬುದು ಸಾಮಾನ್ಯರ ನಂಬಿಕೆ. ಇದಕ್ಕೆ ಮೊದಲು ಅಣ್ಣನಿಗೆ ಬಲಭುಜದಂತಿದ್ದು, ಈ ದೊಡ್ಡ ಹಿಂದೂ ಸಾಮ್ರಾಜ್ಯದ ಅಡಿಪಾಯ ಹಾಕುವಲ್ಲಿ ಸಾಕಷ್ಟು ಸೇವೆಸಲ್ಲಿಸುತ್ತ ಯುವರಾಜನಾಗಿಯೂ ಬುಕ್ಕರಾಯ ಕರ್ತವ್ಯ ನಿರ್ವಹಿಸುತ್ತಿದ್ದು, ಅವನು ಸಮರ್ಥ ಸೇನಾಧಿಕಾರಿ, ಯೋಧ, ಆಡಳಿತಗಾರನಾಗಿದ್ದನು. ವಿಜಯನಗರ ಸ್ಥಾಪಕರಾದ ಈ ಸಂಗಮ ವಂಶದ ಅರಸರಲ್ಲಿ ಬುಕ್ಕರಾಯನಷ್ಟು ಪ್ರಖ್ಯಾತಿಗೆ ಬಂದವರು ಬೇರೆ ಯಾರೂ ಇಲ್ಲ. ಇವನನ್ನು ವಿಜಯನಗರದ ನಿಜವಾದ ಶಿಲ್ಪಿ ಎಂದೇ ಕರೆಯಲಾಗುತ್ತದೆ. ಈ ಬುಕ್ಕರಾಯನಿಗೆ ಮಹಾರಾಜ, ಮಹಾಮಂಡಳೇಶ್ವರ, ಅರಿರಾಯ ಸುರತ್ರಾಣ, ಪೂರ್ವ–ಪಶ್ಚಿಮ ಸಮುದ್ರಾಧಿಪತಿ, ಶ್ರೀ ವೀರ ಸಂಗಮೇಶ್ವರರಾಯ ಮುಂತಾದ ಬಿರುದುಗಳಿದ್ದುದಾಗಿ ಇವನು ಬರೆಸಿದ ಶಾಸನಗಳಿಂದ ತಿಳಿದುಬರುತ್ತದೆ. ಶ್ರೀರಂಗಪಟ್ಟಣದ ಶಾಸನದಲ್ಲಿ ಇವನನ್ನು ಬುಕ್ಕಣ್ಣ ಒಡೆಯರ್ ಎಂದು ಶೃಂಗೇರಿ ಕಡತಗಳಲ್ಲಿ ವೀರಬುಕ್ಕಣ್ಣೊಡಯರ್ ಎಂದೂ, ಚಾಮರಾಜನಗರ ಶಾಸನದಲ್ಲಿ ಬುಕ್ಕನನ್ನು ಪೂರ್ವ–ಪಶ್ಚಿಮ ಸಮುದ್ರಾಧೀಶ್ವರ ಎಂದೂ ಬಣ್ಣಿಸಲಾಗಿದೆ. ಇಂತಹ ಬುಕ್ಕರಾಯನು ಅರಬ್ಬಿಸಮುದ್ರ ಬಂಗಾಳಕೊಲ್ಲಿ ಮಧ್ಯೆ ಇರುವ ಕರ್ನಾಟಕದ ಮಧ್ಯ ಪ್ರದೇಶವಾದ ಈಗಿನ ದಾವಣಗೆರೆ ಜಿಲ್ಲೆಯ ಭೂಭಾಗವನ್ನು ತನ್ನ ಆಡಳಿತ ತೆಕ್ಕೆಯಲ್ಲಿಟ್ಟುಕೊಂಡಿದ್ದರಲ್ಲಿ ಅಚ್ಚರಿಯೇನೂ ಇಲ್ಲ.

ವಿಜಯನಗರ ಸ್ಥಾಪಕರಾಗಿದ್ದ ಹರಿಹರರಾಯ ಬುಕ್ಕರಾಯರು ಮೊದಲು ಓರಂಗಲ್ಲಿನ ಕಾಕತೀಯ ಪ್ರತಾಪರುದ್ರನ ಆಸ್ಥಾನದಲ್ಲಿ ಕ್ರಮವಾಗಿ ಮಂತ್ರಿ ಮತ್ತು ಭಂಡಾರಿ ಹುದ್ದೆಯಲ್ಲಿದ್ದರೆಂದು, ಪ್ರತಾಪ ರುದ್ರನನ್ನು ಸೋಲಿಸಿದ ಮಹಮದ್ ಬಿನ್ ತೊಗಲಕ್ ಇವರನ್ನು ಇಸ್ಲಾಂ ಧರ್ಮಕ್ಕೆ ಬಲವಂತವಾಗಿ ಸೇರಿಸಿಕೊಂಡು ಕಂಪಲಿಯ ರಾಜ್ಯಪಾಲ, ಉಪರಾಜ್ಯಪಾಲರನ್ನಾಗಿ ಮಾಡಿದನೆಂದು ಮುಸ್ಲಿಂ ಇತಿಹಾಸಕಾರರು ಹೇಳುತ್ತಾರೆ. ಆದರೆ ಇದು ಸುಳ್ಳು. ಇವರು

ಮೂಲತಃ ಹೊಯ್ಸಳರ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದು ಅವರು ಅಪ್ಪಟ ಕನ್ನಡಿಗರೆಂದು, ಹೊಯ್ಸಳರ ರಕ್ತ ಸಂಬಂಧಿಗಳಾಗಿದ್ದರೆಂದು ಈಚಿನ ಹೆಚ್ಚಿನ ಸಂಶೋಧನೆಗಳಿಂದ ಕಂಡುಬರುತ್ತಿದೆ. ಹೊಯ್ಸಳರ ಮೂರನೇ ಬಲ್ಲಾಳನ ಸೋದರಿ ಓರ್ವಳ ಪುತ್ರನನ್ನು, ಹರಿಹರನ ಪುತ್ರಿ ವಿವಾಹವಾಗಿದ್ದಳು ಎನ್ನಲಾಗುತ್ತದೆ. ಅದಕ್ಕಾಗಿಯೇ ಅವರು ತಮ್ಮ ಆಡಳಿತದಲ್ಲಿ ಹೊಯ್ಸಳ ಸಂಪ್ರದಾಯ ಅನುಸರಿಸುತ್ತಿದ್ದರೆಂದು ಹೇಳಲಾಗುತ್ತದೆ. ಇವರಿಗೆ ಹಂಪೆಯ ವಿರೂಪಾಕ್ಷ ಹೇಗೋ ಹಾಗೆಯೇ ಬೇಲೂರಿನ ಚನ್ನಕೇಶವನು ಅಷ್ಟು ಪ್ರಮುಖ ಆರಾಧ್ಯದೈವವಾಗಿದ್ದನು. ಹೊಯ್ಸಳರಂತೆ ಇವರು ಶೈವ ಪೀಠವಾದ ಶೃಂಗೇರಿ ಗುರುಪೀಠಕ್ಕೆ ತಮ್ಮ ಭಕ್ತಿಗೌರವವನ್ನು ಸಲ್ಲಿಸುತ್ತಿದ್ದರು, ಹಾಗೆಯೇ ಅಷ್ಟೇ ಗೌರವವನ್ನು ಶ್ರೀ ವೈಷ್ಣವ ಯತಿಗಳಿಗೂ ಕೊಡುತ್ತಿದ್ದರು. ಹೀಗಾಗಿ ಶೃಂಗೇರಿ ಗುರುಗಳಾಗಿದ್ದ ವಿದ್ಯಾರಣ್ಯರು ವಿಜಯನಗರ ಸ್ಥಾಪನೆಯಲ್ಲಿ ಸಕ್ರಿಯ ಪಾತ್ರವಹಿಸಿದ್ದಿರಬೇಕು. ಬುಕ್ಕಣ್ಣನ ಮಂತ್ರಿಯಾಗಿದ್ದ ಮಾಧವನೇ ಮುಂದೆ ಸನ್ಯಾಸತ್ವ ಪಡೆದು ವಿದ್ಯಾರಣ್ಯರಾದರೆಂದು ಕೆಲವು ಮಹನೀಯರ ಅಭಿಪ್ರಾಯ.

ಮುಳುಬಾಗಿಲು ಗೋರಿಬಿದನೂರು ಶಾಸನಗಳು ವಿಜಯನಗರ ಸ್ಥಾಪನೆ ಬಗ್ಗೆ ಹೆಚ್ಚಿನ ವಿವರಗಳನ್ನು ತಿಳಿಸುತ್ತವೆ. ಅದರಂತೆ ಹರಿಹರ, ಕಂಪ, ಬುಕ್ಕ, ಮಾರ, ಮುದ್ದ ಎಂಬ ಸಹೋದರರು ವಿಜಯನಗರ ಸ್ಥಾಪನೆಗೆ ಕಾರಣಕರ್ತರೆಂದು ತಿಳಿಸಲಾಗಿದೆ. ವಿಜಯನಗರದ ಮೊದಲ ಶಾಸನಗಳಲ್ಲಿ ಹರಿಹರನನ್ನು ಶ್ರೀಮಾನ್ ಮಹಾಮಂಡಲಾಧೀಶ್ವರ ಎಂದೇ ಕರೆಯಲಾಗಿದೆ. ಅಂದರೆ ಇವರು ವಿಜಯನಗರ ರಾಜ್ಯ ಸ್ಥಾಪನೆ ಮುನ್ನ ಹೊಯ್ಸಳ ಮೂರನೇ ಬಲ್ಲಾಳನ ಮಾಂಡಲೀಕರಾಗಿರಬೇಕು. ಅವರೊಂದಿಗೆ ಮುಸ್ಲಿಂ ಯುದ್ಧದಲ್ಲಿ ಹೋರಾಡಿ ಕಂಪಲಿ ಆನೆಗೊಂದಿ ಪ್ರದೇಶದಲ್ಲಿ ನೆಲೆನಿಂತು ತನ್ನದೇ ಆದ ರಾಜ್ಯಸ್ಥಾಪನೆ ಮಾಡಿದರೆಂಬ ಬಲವಾದ ನಂಬಿಕೆ ಇದೆ.

ದಾವಣಗೆರೆ ಜಿಲ್ಲೆಯಲ್ಲಿ ವಿಜಯನಗರ ಅರಸು ಮೊದಲನೇ ಬುಕ್ಕರಾಯನಿಗೆ ಸಂಬಂಧಿಸಿದಂತೆ ಒಟ್ಟು ಮೂರು ಶಾಸನಗಳು ಈವರೆಗೆ ದೊರೆತಿದ್ದು ಅವುಗಳು ಒಂದು ತಾಮ್ರ ಶಾಸನ, ಉಳಿದೆರಡು ಶಿಲಾ ಶಾಸನಗಳು. ಈ ಎಲ್ಲಾ ಶಾಸನಗಳು ಈ ಜಿಲ್ಲೆಯ ಹರಿಹರ ತಾಲ್ಲೂಕಿನಲ್ಲಿಯೇ ಇರುವುದು ಗಮನಾರ್ಹ ಅಂಶ.

ಸಂಗಮ ವಂಶದ ಮೂಲ ನೆಲೆಯೇ ಶಿವಮೊಗ್ಗಾ ಜಿಲ್ಲೆಯ ತುಂಗಭದ್ರಾ ಸಂಗಮ ಕ್ಷೇತ್ರ ಕೂಡಲಿ ಅಥವಾ ಹರಿಹರ (ತುಂಗಭದ್ರಾ ಹರಿಹರ ಸಂಗಮ ಕ್ಷೇತ್ರ) ಎಂಬ ಅಭಿಪ್ರಾಯವೂ ಇದೆ. ಈ ನೆಲೆಯಲ್ಲಿ ಹರಿಹರ ತಾಲ್ಲೂಕಿನ ಬುಕ್ಕರಾಯನ ಶಾಸನಗಳು ಮಹತ್ವವಾಗುತ್ತದೆ.

ಈ ಮೂರು ಶಾಸನಗಳನ್ನು ಕರ್ನಾಟಕ ಶಾಸನ ಪಿತಾಮಹ ಬಿ.ಎಲ್. ರೈಸರು ತಮ್ಮ ಚಿತ್ರದುರ್ಗ ಶಾಸನ ಸಂಪುಟದಲ್ಲಿ ಗುರುತಿಸಿ ಪ್ರಕಟಿಸಿದ್ದಾರೆ. ಆಗ ಹರಿಹರ ದಾವಣಗೆರೆ ತಾಲ್ಲೂಕಿನ ಒಂದು ಭಾಗವಾಗಿದ್ದು ಅವುಗಳು ದಾವಣಗೆರೆ ತಾಲ್ಲೂಕಿನ ಶಾಸನ ಕ್ರಮಾಂಕ 67, 68, 120ರಲ್ಲಿ ಬುಕ್ಕರಾಯನ ಶಾಸನಗಳು ಪ್ರಕಟವಾಗಿದೆ. 67ರ ಕ್ರಮಾಂಕದ ತಾಮ್ರಶಾಸನ ಹರಿಹರದ ಶಾನುಭೋಗ ರಾಮಕೃಷ್ಣಯ್ಯನವರಿಂದ ಸಂಗ್ರಹಿಸಿರುವುದಾಗಿ ಉಲ್ಲೇಖಿಸಲಾಗಿದೆ. ಆದರೆ ಈಗ ಆ ಶಾಸನ ಎಲ್ಲಿ ಯಾರ ಹತ್ತಿರ ಇದೆ ಎಂಬುದು ತಿಳಿದು ಬರುತ್ತಿಲ್ಲ. 78 ಸಂಖ್ಯೆಯ ಶಿಲಾಶಾಸನ ಹರಿಹರ ತಾಲ್ಲೂಕಿನ ಕೊಂಡಜ್ಜಿ ಗ್ರಾಮದ ಹನುಮಂತ ದೇವಾಲಯದ ನಂದಿ ಬಸವಣ್ಣ ಕಂಬದಲ್ಲಿದ್ದು ಇದು 11 ಸಾಲುಗಳನ್ನೊಳಗೊಂಡಿದ್ದು ಕನ್ನಡ ಭಾಷೆ ಮತ್ತು ಲಿಪಿಯಲ್ಲಿದೆ. ಇನ್ನೊಂದು ಶಾಸನ ಇದೇ ತಾಲ್ಲೂಕಿನ ಹಳ್ಳಿ ಹಾಳು ಗ್ರಾಮದಲ್ಲಿ ದೊರೆತಿದೆ (ಶಾಸನ ಸಂಖ್ಯೆ 120). ಈ ಮೂರು ಶಿಲಾ ಶಾಸನಗಳಿಂದ ಈ ಕೆಳಕಂಡ ಅಂಶಗಳು ತಿಳಿದುಬರುತ್ತದೆ.

ಹರಿಹರನ ತಾಮ್ರಶಾಸನ (ದಾವಣಗೆರೆ 67)

1. ದಾವಣಗೆರೆ ಜಿಲ್ಲೆ ಒಂದು ತಾಲ್ಲೂಕು ಕೇಂದ್ರವಾದ ಹರಿಹರದಲ್ಲಿ ದೊರೆತ ಬುಕ್ಕರಾಯನ ತಾಮ್ರಶಾಸನವೇ ವಿಜಯನಗರ ಅರಸರಿಗೆ ಸಂಬಂಧಿಸಿದಂತೆ ದೊರೆತ ಮೊದಲ ಶಾಸನವಾಗಿದೆ.
2. ಇದೊಂದು ದಾನಶಾಸನವಾಗಿದ್ದು ಇದರ ಕಾಲ ಕ್ರಿ.ಶ. 1354 – ಅಂದರೆ ಶಕ 1276ನೇ ವಿಜಯ ಸಂವತ್ಸರದ ಮಾಘಶುದ್ಧ 15 ಚಂದ್ರಗ್ರಹಣದಂದು ಬರೆಯಲ್ಪಟ್ಟಿರುವುದಾಗಿ ಶಾಸನ ತಿಳಿಸುತ್ತದೆ.
3. 67 ಸಾಲುಗಳ ಈ ತಾಮ್ರಶಾಸನ ನಾಗರಾಕ್ಷರದಲ್ಲಿದ್ದು ಪ್ರಾರಂಭದ ಏಳು, ಕಡೆಯ ಮೂರು ಶ್ಲೋಕಗಳು ಮಾತ್ರ ಸಂಸ್ಕೃತದಲ್ಲಿದ್ದು ಉಳಿದ ಭಾಗದಲ್ಲಿ ದಾನ ಕೊಟ್ಟ ರಾಜ, ದಾನ ಪಡೆದ ವ್ಯಕ್ತಿ, ದಾನ ಕೊಟ್ಟ ಪ್ರದೇಶ, ಗ್ರಾಮ, ಅದರ ಗಡಿಭಾಗಗಳು ಇತ್ಯಾದಿ ವಿವರಗಳು ಕನ್ನಡ ಗದ್ಯಭಾಷೆಯಲ್ಲಿದೆ.
4. ಕೊನೆಯಲ್ಲಿ ವಿಜಯನಗರದ ಪ್ರಾರಂಭದ ಇತರ ಶಾಸನಗಳಂತೆ ಕನ್ನಡದಲ್ಲಿ ಶ್ರೀವಿರುಪಾಕ್ಷವೆಂಬ ಅಂಕಿತವಿದ್ದು ಶಾಸನ ವಾಮನಮುದ್ರೆಯನ್ನು ಒಳಗೊಂಡಿದೆ.
5. ದಾನದ ವಿಷಯ: ಜ್ಯೋತಿಷ ಶಾಸ್ತ್ರದಲ್ಲಿ ಪರಿಣಿತರಾದ ವೇದಾಂತದಲ್ಲಿ ವೇದವ್ಯಾಸನಂತಿದ್ದ ಕಾಶ್ಯಪಗೋತ್ರದ ಬೋದಾಯನ ಸೂತ್ರದ ಯಜುಶಾಖೆಯ ಹರಿಹರದ ದೈವಜ್ಞ ಮಾಧವ ಜೋಯಿಸರ ಮಕ್ಕಳು ರಾಮಣ್ಣ ಜೋಯಿಸರಿಗೆ ವಿಜಯನಗರದ ಶ್ರೀ ಮನ್ಮಹಾರಾಜಾಧಿರಾಜ, ರಾಜಪರಮೇಶ್ವರ, ಧರ್ಮಮೂರ್ತಿ ಬುಕ್ಕರಾಯ ಮಹಾರಾಯರು ಕೊಟ್ಟೂರು ಚಾವಡಿಯ ಹುಚ್ಚಂಗಿ ವೆಂಟೆಗೆ ಸಲ್ಲುವ ಹರಿಹರ ದೇವರಪುರದ ಊರಂಬಾಡದೊಳಿಹ ಭೂಭಾಗದ ಭೂಮಿ ಮಧ್ಯದಲ್ಲಿರುವ ಮಿಟ್ಟಲಿಗೊಲ್ಲನಿಗೆ ನಿರೂಪಿಸಿ ಕಟ್ಟಿಸಿಕೊಟ್ಟ ಮಿಟ್ಟಲಿನ ಕಟ್ಟೆ ಎಂಬ ಗ್ರಾಮವನ್ನು ಚತುಸ್ಸೀಮೆ ಸಂಮತವಾಗಿ ಸಹಿರಣ್ಯೋದಕವಾಗಿ ಹಂಪೆಯ ವಿರೂಪಾಕ್ಷ ಸನ್ನಿಧಿಯಲ್ಲಿ ದಾನ ಕೊಟ್ಟಿದ್ದನ್ನು ತಿಳಿಸುತ್ತದೆ.
6. ಶಾಸನದಂತೆ ದಾನಕೊಟ್ಟ ಗ್ರಾಮದ ಮೇಲೆ ಪೂರ್ವಕ್ಕೆ ನಾಗೇನೂರು (ಇಂದಿನ ನಾಗನೂರು), ದಕ್ಷಿಣಕ್ಕೆ ಮುದಿಹಡದಿ (ಇಂದಿನ ಮುದಹದಡಿ), ಪಶ್ಚಿಮಕ್ಕೆ ಸಾಲಕಟ್ಟೆ, ಉತ್ತರಕ್ಕೆ ಕುಂದವಾಡಿ (ಇಂದಿನ ಕುಂದವಾಡ) ಮಧ್ಯದ ಭೂ ಭಾಗ ದಾನ ಕೊಟ್ಟಿದ್ದು ಉಲ್ಲೇಖಿತ ಗ್ರಾಮಗಳ ಹೆಸರುಗಳು ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಈಗಲೂ ಅಸ್ತಿತ್ವದಲ್ಲಿವೆ. ದಾನ ಕೊಟ್ಟ ಗ್ರಾಮ ಮಿಟ್ಟಲಿನ ಕಟ್ಟೆ ಈಗ ಮಿಟ್ಲಕಟ್ಟೆ ಎಂದು ಕರೆಯಲಾಗುತ್ತಿದ್ದು ಶಾಸನದಿಂದ ಗ್ರಾಮಗಳ ಮೊದಲಿನ ಹೆಸರಿನ ನಿಷ್ಪತ್ತಿ ಸ್ಪಷ್ಟವಾಗುತ್ತದೆ. ಸಾಲಕಟ್ಟೆ ಈಗಿನ ಹರಿಹರ ತಾಲ್ಲೂಕಿನಲ್ಲಿದ್ದು ಅದರ ಗಡಿಭಾಗದಲ್ಲಿರುವ ನಾಗನೂರು, ಮುದಹದಡಿ, ಕುಂದವಾಡ ಗ್ರಾಮಗಳು ದಾವಣಗೆರೆ ತಾಲ್ಲೂಕಿನ ಭಾಗವಾಗಿದೆ.
7. ದಾನ ಕೊಟ್ಟಿರುವ ಉದ್ದೇಶ ಶಾಸನದಲ್ಲಿ ನಮೂದಿಸಿರುವುದಿಲ್ಲ. ಬಹಳ ಮಾಡಿ ಜ್ಯೋತಿಷ ಶಾಸ್ತ್ರದ ಪ್ರಾವೀಣ್ಯತೆಗಾಗಿ ಮೆಚ್ಚಿ ಬಹುಮಾನವಾಗಿ ಈ ಭೂಮಿ ದಾನಕೊಟ್ಟಿರಬೇಕು. ಈ ದಾನಶಾಸನದಿಂದ ಆಗಿನಿಂದಲೂ ಹರಿಹರದಲ್ಲಿ ಬಹಳಷ್ಟು ಜನ ವಿದ್ವಾಂಸರು ಇದ್ದರೆಂದು ಗುರುತಿಸಬಹುದಾಗಿದೆ.
8. ಈ ಶಾಸನದಲ್ಲಿ ಹರಿಹರವನ್ನು ಹರಿಹರದೇವರಪುರ ಎಂದು ಉಲ್ಲೇಖಿಸಲಾಗಿದೆ. ಅಲ್ಲಿನ ಮುಖ್ಯ ದೇವತೆ ಹರಿಹರ. ಹಾಗಾಗಿ ಅದರಿಂದಲೇ ಈ ಊರಿಗೆ ಆ ಹೆಸರು ಬಂದಿದೆ. ಇದಲ್ಲದೆ ಈ ಹರಿಹರಕ್ಕೆ ಕೂಡಲಿ, ಕೂಡಲೂರು, ಹರೀಶ್‌ಪುರ, ಶಂಕರನಾರಾಯಣಪುರ, ಎಂಬಿತ್ಯಾದಿ ಹೆಸರುಗಳು ಇದ್ದುದಾಗಿ ಶಾಸನಗಳು ತಿಳಿಸುತ್ತದೆ.

9. ಈ ಶಾಸನ ರಚಿಸುವ ವೇಳೆಗಾಗಲೇ ಬನವಾಸಿ 12,000 ಬದಲಾಗಿ ಕೊಟ್ಟೂರು ಚಾವಡಿ, ಉಚ್ಚಂಗಿ ವೆಂಟೆ ಇತ್ಯಾದಿ ಭೂಭಾಗ ಇದ್ದುದಾಗಿ ತಿಳಿಯಬಹುದು.
10. ಶಾಸನದಲ್ಲಿ ಉಲ್ಲೇಖಿತ ಶಕ ವರ್ಷ ತಪ್ಪಾಗಿದ್ದು, ಅದು ದುರ್ಮುಖಿ ಸಂವತ್ಸರ ಎಂದಿದ್ದರೆ ಸರಿಹೋಗುತ್ತದೆ. ಹೀಗಾಗಿ ಶಾಸನದ ಸಾಚಾತನವನ್ನು ಪ್ರಶ್ನಿಸುವಂತಾಗಿದೆ. ಅದರ ಲಿಪಿ ಲಕ್ಷಣ ವಿಜಯನಗರ ಕಾಲದ್ದಾಗಿದೆ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಕೊಂಡಜ್ಜಿ ಶಿಲಾಶಾಸನ (ದಾವಣಗೆರೆ 78)

ಹರಿಹರ ತಾಲ್ಲೂಕು ಕೊಂಡಜ್ಜಿ ಗ್ರಾಮದಲ್ಲಿ ದೊರೆತ ಈ ಶಾಸನದ ಕಾಲ ಕ್ರಿ.ಶ. 1367 ಶಕ 1289ನೇ ಪರಾಭವ ಸಂವತ್ಸರದ ಮಾಘ ಶುದ್ಧ 7 ಎಂದು ಗುರುತಿಸಲಾಗಿದ್ದು ಇದು 11 ಸಾಲುಗಳ ಕಿರುಶಾಸನ. ಕನ್ನಡ ಭಾಷೆ ಮತ್ತು ಲಿಪಿಯಲ್ಲಿರುವ ಈ ಶಾಸನ ಹೆಚ್ಚಿನ ವಿಚಾರವನ್ನು ತಿಳಿಸದಿದ್ದರೂ, ಬುಕ್ಕರಾಯನಿಗೆ ವೀರ ಬುಕ್ಕರಾಯ ಎಂದು ಕರೆದಿದ್ದು ಅವರು ಪೃಥ್ವಿ ರಾಜ್ಯಮಾಡುವಲ್ಲಿ ಮುದ್ರೆಯ ಪುಟ್ಟಯ್ಯಗಳು ಶ್ರೀ ವಿರೂಪಾಕ್ಷ ದೇವರಿಗೆ ಬಿಟ್ಟಿದ್ದು ಎಂಬ ಅಂಶ ಮಾತ್ರ ವ್ಯಕ್ತವಾಗುತ್ತದೆ. ಬಹುಶಃ ಪುಟ್ಟಯ್ಯಯೆಂಬ ವ್ಯಕ್ತಿ ಹಂಪೆಯ ವಿರುಪಾಕ್ಷ ದೇವರಿಗೆ ಕೊಟ್ಟ ಯಾವುದೋ ಭೂಮಿಯ ಬಗ್ಗೆ ಇದು ತಿಳಿಸುತ್ತಿರಬೇಕು. ಆದರೆ ಅದು ಯಾವುದೆಂದು ಶಾಸನದಲ್ಲಿ ತಿಳಿದುಬರುವುದಿಲ್ಲ ಹಾಗೂ ಉಲ್ಲೇಖಿತ ಪುಟ್ಟಯ್ಯ ಯಾರು ಎಂದು ಸಹ ಶಾಸನ ತಿಳಿಸುವುದಿಲ್ಲ.

ಹಳ್ಳಿಹಾಳು ಶಾಸನ (ದಾವಣಗೆರೆ 120)

ಇದು ಹರಿಹರ ತಾಲ್ಲೂಕಿನ ಹಳ್ಳಿಹಾಳು ಗ್ರಾಮದಲ್ಲಿ ದೊರಕಿದ್ದು, ಶಾಸನದ ಮೇಲ್ಭಾಗ ಸವೆದು ಓದಲು ಬರುವಂತಿಲ್ಲ. ಕನ್ನಡ ಭಾಷೆ ಮತ್ತು ಲಿಪಿಯಲ್ಲಿರುವ ಕೆಳಗಣ 30 ಸಾಲುಗಳಿಂದ ಕೆಳಕಂಡ ಅಂಶಗಳನ್ನು ಗುರುತಿಸಬಹುದಾಗಿದೆ.

1. ವೀರ ಬುಕ್ಕಣ್ಣ ವಡೆಯರು ಪೃಥ್ವಿರಾಜ್ಯವಾಳುತ್ತಿದ್ದಾಗ ಅವರ ಮಾಂಡಳಿಕ ಬುವೆಯ ನಾಯಕನ ಮಗ ಯಿಬ್ಬೆಯ ನಾಯಕನು ತನ್ನ ತಂದೆ ದೇವಲೋಕಕ್ಕೆ ಸಂದಲ್ಲಿ ತಂದೆಯ ಹೆಸರಿನಲ್ಲಿ ಬುವಸಮುದ್ರ ಎಂಬ ಕೆರೆಯನ್ನು ಕಟ್ಟಿಸಿದ್ದಲ್ಲದೆ ಹಲೆವಾಳದಲ್ಲಿ (ಈಗಿನ ಹಳ್ಳಿಹಾಳು) ಬುವೇಶ್ವರ ದೇವರ ಪ್ರತಿಷ್ಠೆ ಮಾಡಿ ಅದಕ್ಕೆ ಬುವಸಮುದ್ರ ಕೆರೆ ಒಳಗಣ ಗದ್ದೆ, ಬೆದ್ದಲು ಭೂಮಿಯನ್ನು ಬೀರೂರು ಸಿದ್ದದೇವರ ಮಗ ವೀರಪ್ಪಗೆ ದಾನ ಬಿಟ್ಟಿದ್ದನ್ನು ತಿಳಿಸುತ್ತದೆ.
2. ಈ ಶಾಸನದಿಂದ ಈ ಗ್ರಾಮದ ಪೂರ್ವದ ಹೆಸರು ಹಲೆವಾಳ ಎಂದಿರುವುದಾಗಿ ತಿಳಿದುಬರುತ್ತದೆ.
3. ಈ ಶಾಸನದಲ್ಲಿ ಉಲ್ಲೇಖಿಸಿರುವ ಬುವೇಸ್ವರ ದೇವರೇ ಈಗಿನ ಬಸವೇಶ್ವರ ದೇವರು ಎಂದು ನಂಬಲಾಗಿದೆ.
4. ಬೀರೂರು ಸಿದ್ದದೇವರ ಮಗ ವೀರಪ್ಪಗೂ ಈ ಊರಿಗೂ ಇರುವ ಸಂಬಂಧ ಕುತೂಹಲವನ್ನುಂಟುಮಾಡುತ್ತದೆ.
5. ಬುವೆಯ ನಾಯಕನಿಗೆ ಗಂಡರ ಗೋವ, ಮಲೆಯ ಮಾಂಡಳಿಕರ ಗಂಡ, ಹೊನ್ನುಕೊಟ್ಟು ಕುದುರೆ ಕೊಂಬ, ಮರೆಹೊತ್ತವರಕಾವ, ಎಂಬಿತ್ಯಾದಿ ಬಿರುದುಗಳು ಈ ಶಾಸನದಲ್ಲಿ ಇದ್ದು ವಿಜಯನಗರದ ಸಾಮಂತನೋರ್ವ ಅದನ್ನು ಹಾಕಿಸಿಕೊಂಡಿರುವುದು ಅಚ್ಚರಿ ತರುತ್ತದೆ.
6. ಶಾಸನದಲ್ಲಿ ಕಾಲ ನಮೂದಿಸಿರುವುದಿಲ್ಲ.

ಹೀಗೆ ಮೇಲ್ಕಂಡ ಮೂರು ಶಾಸನಗಳು ಒಂದನೇ ಬುಕ್ಕರಾಯನ ದಾವಣಗೆರೆ ಜಿಲ್ಲೆಯ ಶಾಸನಗಳ ಬಗ್ಗೆ ಕೆಲವೊಂದು ಮಾಹಿತಿ ನೀಡುತ್ತವೆ. ಇದರಿಂದ ವಿಜಯನಗರ ಇತಿಹಾಸಕ್ಕೆ ಈ ಜಿಲ್ಲೆಯಲ್ಲಿ ಬುಕ್ಕರಾಯನ ಪಾತ್ರದ ಬಗ್ಗೆ ಒಟ್ಟಾಗಿ ತಿಳಿಯಬಹುದಾಗಿದೆ.

ಇನ್ನು ಕೈಫಿಯತ್ತಿನ ಉಲ್ಲೇಖದಂತೆ ಈಗಿನ ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನಲ್ಲಿರುವ ರಾಜ್ಯದ ದೊಡ್ಡಕೆರೆ ಸೂಳೆಕೆರೆಯ ದಂಡೆ ಒಡೆದಾಗ ವೀರ ಬುಕ್ಕಣ್ಣ ಒಡೆಯರ ಮಂತ್ರಿಯಾಗಿದ್ದ ಬಸವದಂಡನಾಯಕನೆಂಬುವನು ಅದನ್ನು ರಿಪೇರಿ ಮಾಡಿಸಿ, ಒಂದು ಹೊಸ ತೂಬನ್ನು ನಿರ್ಮಿಸಿದನೆಂದು ಆ ಕಾರಣ ಆ ಹೊಸ ತೂಬಿಗೆ ಬಸವನತೂಬೆಂದು, ಅಲ್ಲಿಂದ ಹರಿಯುವ ನಾಲೆಗೆ ಬಸವನಾಲೆ ಎಂದು ಕರೆಯಲಾಗುತ್ತಿದೆ ಎನ್ನಲಾಗಿದೆ. ಹೀಗೆ ಬುಕ್ಕರಾಯ ಮತ್ತು ದಾವಣಗೆರೆ ಜಿಲ್ಲೆ ಸಂಬಂಧ ಗಟ್ಟಿಯಾಗುತ್ತದೆ.

ಆಧಾರ ಗ್ರಂಥಗಳು

1. *ಎಪಿಗ್ರಾಫಿಯಾ ಕರ್ನಾಟಿಕ,* ಸಂ. 11, ಚಿತ್ರದುರ್ಗ ಜಿಲ್ಲಾ ಶಾಸನಗಳು, 1903.
2. *ಶ್ರೀ ಹರಿಹರ ದೇವಾಲಯ,* 1982, ಎಚ್.ಎಂ. ಶಂಕರನಾರಾಯಣರಾವ್, ಶಾರದಾ ಮಂದಿರ, ಮೈಸೂರು–4.
3. *ವಿಜಯನಗರ ಇತಿಹಾಸ,* 1999, ಎ.ಎಸ್. ನಂಜುಂಡಸ್ವಾಮಿ ಸಮಾಜ ಪುಸ್ತಕಾಲಯ, ಧಾರವಾಡ.
4. *ವಿಜಯನಗರ ಅಧ್ಯಯನ* ಸಂ., 13, 2008, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.
5. *ಸಂಗಮರ ಕಾಲದ ವಿಜಯನಗರ,* 1991, ಸಂ. ಜಿ.ಎಸ್. ದೀಕ್ಷಿತ್, ಬಿ.ಎಂ.ಶ್ರೀ ಪ್ರತಿಷ್ಠಾನ, ಬೆಂಗಳೂರು–19.
6. *ಕನ್ನಡ ವಿಷಯ ವಿಶ್ವಕೋಶ,* (1979), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. *ಕರ್ನಾಟಕ ಗ್ರಾಮಸೂಚಿ,* 1995, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
8. *ದಾವಣಗೆರೆ ಇದು ನಮ್ಮ ಜಿಲ್ಲೆ,* 2001, ಟಿ. ಗಿರಿಜ, ನಿಹಾರಿಕ ಪ್ರಕಾಶನ, ದಾವಣಗೆರೆ.
9. *ದಾವಣಗೆರೆ ಜಿಲ್ಲೆ ಇತಿಹಾಸದ ಕೆಲವು ಹೆಜ್ಜೆಗಳು,* 2010, ಸುಮತೀಂದ್ರ ನಾಡಿಗ್, ವಿಜಯ ಯುವಕ ಸಂಘ (ರಿ.), ಸಂತೇಬೆನ್ನೂರು.
10. *ಅಳಿದುಳಿದ ಹಂಪೆ,* 1982, ಡಾ. ವಸುಂಧರ ಫಿಲಿಯೊಜಾ, ಮಾನಸೋಲ್ಲಾಸ ಪ್ರಕಾಶನ, ಬೆಂಗಳೂರು.
11. *ಕನ್ನಡ ವಿಶ್ವವಿದ್ಯಾನಿಲಯ ಶಾಸನ ಸಂಪುಟ,* 3, ಹಂಪಿ ಶಾಸನಗಳು, 2000, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
12. *ಕರ್ನಾಟಕದ ಕೈಫಿಯತ್ತುಗಳು,* 1994, ಸಂ. ಡಾ॥ ಎಂ.ಎಂ. ಕಲಬುರ್ಗಿ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

9

ಎರಡನೆಯ ದೇವರಾಯನ ಧಾರ್ಮಿಕ ಶಾಸನಗಳು
(ಕ್ರಿ.ಶ. 1424–1446)

ಡಾ॥ ಡಿ. ಎಂ. ನಾಗರಾಜು

ಸಂಗಮ ವಂಶದ ವೀರವಿಜಯರಾಯನ ಮಗನೂ, ಉತ್ತರಾಧಿಕಾರಿಯೂ ಆದ ಇಮ್ಮಡಿ ದೇವರಾಯನಿಗೆ ಪ್ರೌಢದೇವರಾಯನೆಂಬ ಮತ್ತೊಂದು ಹೆಸರು ಇದ್ದಿತು. ಕೈಕಿಣಿಯ ಶಾಸನವು ಅವನನ್ನು ಶ್ರೀ ಮದ್ರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪದೇವರಾಯ ಮಹಾರಾಯ, ಕರ್ಣಾಟಕದ ಮಹಾರಾಜಧಾನಿ ವಿಜಯನಗರದ ಪುರವರಾಧೀಶ್ವರ ಎಂಬುದಾಗಿ ತಿಳಿಸುತ್ತದೆ. ತೀರ್ಥಹಳ್ಳಿಯ ಶಾಸನವು ಅಂಗ, ಕನೋಜ, ಕಾಂಬೋಜ, ವಂಗ ಮತ್ತು ನೇಪಾಳದ ಅರಸರು ಅವನ ಛತ್ರಚಾಮರಗಳನ್ನು ಹೊತ್ತಿರುವ ಸೇವಕನಂತಿದ್ದರೆಂದು ಇಮ್ಮಡಿ ದೇವರಾಯನನ್ನು ಸ್ತುತಿಸಿದೆ. ಎರಡನೇ ದೇವರಾಯನ ಪಟ್ಟಾಭಿಷೇಕದ ಕಾಲವನ್ನು ಖಚಿತವಾಗಿ ತಿಳಿಸಲು ಸಾಧ್ಯವಿಲ್ಲವಾದರೂ ಅವನು 1421ರಿಂದಲೇ ರಾಜ್ಯಭಾರದಲ್ಲಿ ಭಾಗವಹಿಸುತ್ತಿದ್ದಿರಬಹುದೆಂದು ದಕ್ಷಿಣ ಕನ್ನಡ ಜಿಲ್ಲೆಯ ಮಣಿಗರಕೇರಿ ಶಾಸನದಿಂದ ತಿಳಿದುಬರುತ್ತದೆ.

ಇಮ್ಮಡಿ ದೇವರಾಯನು ಧಾರ್ಮಿಕ ಸಹಿಷ್ಣುತೆಗೆ ಆದರ್ಶಪ್ರಾಯವಾಗಿದ್ದನು. ಅವನು ಹಿಂದೂ ಧರ್ಮದ ರಕ್ಷಣೆಗಾಗಿ ಜನ್ಮತಾಳಿದ್ದ ವಿಜಯನಗರಸೇನೆಯಲ್ಲಿ ಮುಸಲ್ಮಾನರನ್ನೂ ನಿಯಮಿಸಿದನು. ಅವನು ತನ್ನ ಸಿಂಹಾಸನದ ಮುಂದುಗಡೆ ಪವಿತ್ರವಾದ ಕುರಾನಿನ ಪ್ರತಿಯೊಂದನ್ನು ಇರಿಸಿದ್ದನು. ಇದರಿಂದ ಮುಸಲ್ಮಾನ ಪ್ರಜೆಗಳು ಅರಸನಿಗೂ, ತನ್ನ ಧಾರ್ಮಿಕ ಗ್ರಂಥಕ್ಕೂ ಏಕಕಾಲದಲ್ಲಿಯೇ ನಮಿಸಲು ಸಾಧ್ಯಯವಾಯಿತು. ಮಸೀದಿಯೊಂದನ್ನು ನಿರ್ಮಿಸಲು ಆಜ್ಞೆ ಮಾಡಿದ ಇಮ್ಮಡಿ ದೇವರಾಯನು ಮುಸಲ್ಮಾನರ ಧಾರ್ಮಿಕ ಆಚರಣೆಗಳಿಗೆ ತನ್ನ ಅಧಿಕಾರಿಗಳಿಂದಾಗಲಿ, ಇತರ ಪ್ರಜೆಗಳಿಂದಾಗಲಿ ಅಪಚಾರವಾಗದಂತೆ ನೋಡಿಕೊಂಡನು. ಎರಡನೆಯ ದೇವರಾಯನ ಕಾಲದಲ್ಲಿ ವೀರಶೈವ ಮತದ ಪುನರ್ ಜೀವನವಾಯಿತು. ಈತನ ಪ್ರಧಾನಮಂತ್ರಿಯಾಗಿದ್ದ ಲಕ್ಕಣ ದಂಡೇಶನ 'ಶಿವತತ್ವಚಿಂತಾಮಣಿ' ಎಂಬ ಬೃಹತ್ ವೀರಶೈವ ಪುರಾಣ ಗ್ರಂಥವನ್ನು ರಚಿಸಿದನು. ಜಕ್ಕಣ ದಂಡನಾಯಕನೆಂಬುವನು ವೀರಶೈವ ಧರ್ಮಕ್ಕೆ ಪ್ರೋತ್ಸಾಹ ಕೊಟ್ಟನು. ಕವಿ ಚಾಮರಸನು 'ಪ್ರಭುಲಿಂಗಲೀಲೆ'ಯನ್ನು ರಚಿಸಿ ಅರಸನ ಆದರಕ್ಕೆ ಪಾತ್ರನಾದನು. ಅರುಣಗಿರಿ ಎಂಬ ತಮಿಳು ಶೈವಕವಿಗೆ ಇಮ್ಮಡಿದೇವರಾಯನು ಪೋಷಕನಾಗಿದ್ದನು.

ಎರಡನೆಯ ದೇವರಾಯನು ಅನೇಕ ಹಿಂದೂ ದೇವಾಲಯಗಳನ್ನು ಕಟ್ಟಿಸಿದುದಲ್ಲದೆ ಕ್ರಿ.ಶ. 1426ರಲ್ಲಿ ಅರ್ಹತ್ ಪಾರ್ಶ್ವನಾಥನಿಗಾಗಿ ವಿಜಯನಗರದಲ್ಲಿ ಜಿನಾಲಯವನ್ನು ನಿರ್ಮಿಸಿದನು. ಆತನು ಶೃಂಗೇರಿ ಮಠಕ್ಕೆ

ಅನೇಕ ಕಾಣಿಕೆಯನ್ನು ನೀಡಿದನು. ತಾನು ಹೃದಯರೋಗದಿಂದ ನರಳುತ್ತಿದ್ದಾಗ ರಾಜ ಹೃದಯರೋಗಪೀಡತಃ ವೈದಿಕ ಚಿಕಿತ್ಸೆಯ (ವೈದ್ಯಕೀಯ ಚಿಕಿತ್ಸಾಂ) ಸಂದರ್ಭದಲ್ಲಿ ಧಾರ್ಮಿಕ ಕರ್ತವ್ಯಗಳನ್ನು ನೆರವೇರಿಸಿದ ನಾಗನಾಥರಾಯನಿಗೆ ಗೋವಹಳ್ಳಿ ಎಂಬ ಗ್ರಾಮವನ್ನು ಅರಸನು ದತ್ತಿ ನೀಡಿದನೆಂದು ಬೇಲೂರಿನ ಶಾಸನವು ತಿಳಿಸುತ್ತದೆ.

ಇನ್ನು ಕೆಲವು ಮುಖ್ಯ ಶಾಸನಗಳನ್ನು ಗಮನಿಸಿದಾಗ ಕ್ರಿ.ಶ. 1423ರ ಹೊಸಾಲ ಶಾಸನದಲ್ಲಿ ಕೆಲ್ಲಂಗೆಜಿಯ ವಿನಾಯಕದೇವರಿಗೆ ಚೌಲಕೇರಿ ಕೋಟಿಯಣ್ಣ ಸೆಟ್ಟಿಯ ಮಗ ನಾರಣಸೆಟ್ಟಿ ಉತ್ಥಾನ ದ್ವಾದಶಿ ಪುಣ್ಯಕಾಲದಲ್ಲಿ ದಾನ ನೀಡಿದ ವಿವರವಿದೆ.

ಕ್ರಿ.ಶ. 1424ರ ವರಂಗ ಶಾಸನದಲ್ಲಿ ಬಾರಕೂರು ನಾಡಿನಲ್ಲಿರುವ ವರಂಗ ಗ್ರಾಮವನ್ನು ರಾಜನು ವರಂಗತೀರ್ಥ ನೇಮಿನಾಥ ದೇವರಿಗೆ ಸರ್ವಮಾನ್ಯವಾಗಿ ದೇವಸ್ಥಾನದ ಪೂಜೆ ಆಹಾರ ದಾನಕ್ಕೆ ಉಪದೇಶಕರಿಗೆ ಮತ್ತು ವಿದ್ಯಾರ್ಥಿ ಸಮುದಾಯಕ್ಕೆ ರಾಜನು ಗ್ರಾಮವನ್ನು ದತ್ತಿ ನೀಡಿ ವರ್ಧಮಾನ ಭಟ್ಟಾರಕನಿಗೆ ದಾನ ನೀಡಿದ ದಾಖಲೆಯಿದೆ. ಇದೇ ಕಾಲದ ಆರಗ ಶಾಸನದಲ್ಲಿ ಆಖಂಡಬ್ರಹ್ಮೇಶ್ವರ ಮತ್ತು ಛತ್ರಗೋಸ್ಕರ ಪೂಜೆ ಮತ್ತು ನಂದಾದೀವಿಗೆಗೆ 55 ವರಹಗಳನ್ನು ಸಿರಿಗಿರಿನಾಥ ಒಡೆಯನು ದಾನ ನೀಡಿದ ವಿವರವಿದೆ. ಇದೇ ಕಾಲದ ಕಾಳಮ್ಮನಗುಡಿ ಶಾಸನದಲ್ಲಿ ಶ್ರೀಗಿರಿಮಲ್ಲಿಕಾರ್ಜುನದೇವರಿಗೆ ಸಂಗಮದೇವ ಮತ್ತು ಆತನ ಹೆಂಡತಿ ಸಂಗಾಯಿ ಭೂಮಿ ದಾನ ನೀಡಿದ್ದಾರೆ. ಈ ದಾನವನ್ನು ಎಲ್ಲಾ ಸೆಟ್ಟಿಯರು, ಮೂರು ಪಟ್ಟಣಗಳು ಮತ್ತು ಆರಗದ 18 ಕಂಪಣ ಗವುಡಗಳು ಈ ದಾನವನ್ನು ಕಾಪಾಡುವುದನ್ನು ತಿಳಿಸುತ್ತದೆ.

ಕ್ರಿ.ಶ. 1425ರ ಕಡೆಕಾರು ಶಾಸನದಲ್ಲಿ ಗೋಪಿನಾಥದೇವರ ಪ್ರತಿಷ್ಠೆ ಮಾಡಿಸಿ, ಪೂಜೆ, ನೈವೇದ್ಯಕ್ಕೋಸ್ಕರ ವಿದ್ಯಾತ್ಮಾತೀರ್ಥ ಶ್ರೀಗಳು ಮಠದಲ್ಲಿ ವಿಶ್ವಾಪತಿ ತೀರ್ಥ ಶ್ರೀಪಾದರನ್ನು ನೇಮಿಸಿ 400 ಹೊನ್ನುಗಳನ್ನು ಅಣ್ಣ ನೀಡುಂಬರ ಮತ್ತು ಕಡಕೇರು ವಾಸವಾಗಿರುವ ಮಠವನ್ನು ಕಟ್ಟಿಸಿ ದಾನ ನೀಡಿದ ದಾಖಲೆಯಿದೆ. ಇದೇ ಕಾಲದ ಕುಂದಾಪುರ ಶಾಸನದಲ್ಲಿ ಕುಡಾಕೂರ ದೇವಣ್ಣ ಸೇನಭೂವನು ಕುಂದೇಶ್ವರ ದೇವರ ಸೇವೆಗೋಸ್ಕರ ಭೂಮಿದಾನ ನೀಡಿದ ವಿವರವಿದೆ. ಕ್ರಿ.ಶ. 1426ರ ವಿಜಯಪುರ ಶಾಸನದಲ್ಲಿ ಶ್ರೀ ಅರ್ಕನಾಥದೇವರಿಗೋಸ್ಕರ ಹಣದ ಆದಾಯದ ಮಗ್ಗದತೆರಿಗೆಯಿಂದ ರಾಜನು ಸಭಾಪತಿ ಸೋಮರಸನು ದಾನ ನೀಡಿದ ದಾಖಲೆಯಿದೆ. ಕ್ರಿ.ಶ. 1427ರ ನೆಮಲಿ ಶಾಸನದಲ್ಲಿ ನೆನ್ನಮಲಿಪುನಿತವಣಮ್ ಉದಯನಾಯನಾರದೇವರ ನಿತ್ಯ ತಿಂಗಳ ಉತ್ಸವಕ್ಕೆ ದಾನ ನೀಡಿದ ವಿವರವಿದೆ.

ಕ್ರಿ.ಶ. 1429ರ ಮಾಂಬಳ್ಳಿ ಶಾಸನದಲ್ಲಿ ಶಾಸನ ಸವೆದಿದೆ. ಮಾಂಬಳ್ಳಿ ವಯಿದ್ಯನಾಥದೇವರಿಗೋಸ್ಕರ ಮಗ್ಗದಿಂದ ಬರುವ ತೆರಿಗೆಯಿಂದ ಹಾಗೂ ನಾನಾದೇಶಿಗಳು ದಾನ ನೀಡಿದ ವಿವರವಿದೆ. ಇದೇ ಕಾಲದ ಪೂಣಜೂರು ಶಾಸನದಲ್ಲಿ ಎಣ್ಣೆನಾಡಿನಲ್ಲಿ ಹರದನಹಳ್ಳಿ ದಿಬ್ಬಲಿಂಗೇಶ್ವರ, ಆಣಿಲೇಶ್ವರ ದೇವರ ಅಮೃತಪಡಿಗೆ, ನಂದಾದೀವಿಗೆಗೆ, ಉಡುವಂಕನಾಡ ಗಾಜನೂರ ಗ್ರಾಮ ಒಂದು ಹರದನಹಳ್ಳಿ ಸ್ಥಳದ ಪೂಣಜೂರು ಗ್ರಾಮದಲ್ಲಿ ವಾರ್ಷಿಕ 44 ಗದ್ಯಾಣಗಳನ್ನು ಹೊಂಗಂಣಿಯ ಹಳ್ಳಿ ಗ್ರಾಮದ ದೇವರಿಗೆ ದಾನ ನೀಡಿದ ವಿವರವಿದೆ.

ಕ್ರಿ.ಶ. 1430ರ ವಿರಿಂಚಿಪುರ (ತಮಿಳುನಾಡು) ಶಾಸನ ಸವೆದಿದೆ. ಮಾರ್ಗಸಹಾಯ್ಯದೇವರ ದೇವಾಲಯದ ಪೂಜೆ, ನೈವೇದ್ಯಕ್ಕೋಸ್ಕರ ಸುಳವಾರಿ ಮತ್ತು ಜೋಡಿ ತೆರಿಗೆಗಳಿಂದ ಮತ್ತು ಹಣದಿಂದ ರಾಜನು ದಾನ ನೀಡಿದ ದಾಖಲೆಯಿದೆ. ಇದೇ ಕಾಲದ ಕಿಳಿಯಾನಗರ್ ಶಾಸನದಲ್ಲಿ ರಾಜನ ಅಭಿವೃದ್ಧಿಗೋಸ್ಕರ ತಿರುವಗಟ್ಟೇಶ್ವರರ ಗಡೈಯನಾಯನಾಜಿರ್ ಎಂಟು ದೀಪಸ್ತಂಭಗಳು ಮತ್ತು ವೇದನಾಯಕಪೇರುಮಾಳ್ ನಾಲ್ಕು ದೀಪಗಳನ್ನು ಮಹಾಪ್ರಧಾನಿ ಸಿಲುಪ್ಪರಸರ್ ನೀಡಿದ್ದನ್ನು ತಿಳಿಸುತ್ತದೆ.

ಕ್ರಿ.ಶ. 1431ರ ಶ್ರೀರಂಗಪಟ್ಟಣದ ಶಾಸನದಲ್ಲಿ ರಂಗನಾಥದೇವರ ವಸಂತೋತ್ಸವ ಹಬ್ಬಕ್ಕೋಸ್ಕರ 30 ಹೊನ್ನುಗಳನ್ನು ಶ್ರೀವೈಷ್ಣವರು ಬೇರೆ ಬೇರೆ ಆದಾಯದಿಂದ ದಾನ ನೀಡಿದ ವಿವರವಿದೆ. ಇದೇ ಕಾಲದ ನಡೂರು ಶಾಸನದಲ್ಲಿ ಪಠಸಾಲಗೇರಿ ಗೋಪಿನಾಥದೇವರಿಗೆ ಚಂಡರಸವೊಡೆಯ ಬಾರಕೂರು ರಾಜ್ಯ ಆಳುತ್ತಿರುವಾಗ ನಾಡ ಊರಿನಲ್ಲಿ ಭೂಮಿದಾನ ನೀಡಿದ ದಾಖಲೆಯಿದೆ. ಪುತ್ತೂರಿನ ಶಾಸನದಲ್ಲಿ ಪುತ್ತೂರಿನ ಮಹಾದೇವರ ಪೂಜೆ, ನೈವೇದ್ಯಕ್ಕೋಸ್ಕರ ನಂದಾದೀವಿಗೆಗೆ ಎಣ್ಣೆ, ದೇವಸ್ಥಾನದಲ್ಲಿ ವಾಸಿಸುವವರಿಗೆ ಹಣ ಇತರೆ ದೇವಸ್ಥಾನಕ್ಕೆ ಅಣ್ಣಪ್ಪನು ದಾನ ನೀಡಿದನು. ಕೂಡ್ಲಿ ಶಾಸನದಲ್ಲಿ ದಂಣಾವರಪುರದಿಂದ ನರಸಿಂಹದೇವರಿಗೆ ಆದಾಯ ಬಹಳ ಕಡಿಮೆ ಇರುವುದರಿಂದ ಬೆಳುಗಲಿ ಗ್ರಾಮದಿಂದ ಸುಂಕದ ಏಳು ವರಹಗಳನ್ನು ಕೊಂಡದ್ದನ್ನು ತಿಳಿಸುತ್ತದೆ.

ಕ್ರಿ.ಶ. 1431ರ ಸವದಿ ಶಾಸನದಲ್ಲಿ ಬಾದಾಮಿ ಸೀಮೆಯೊಳಗಣ (ಸೈ)ವಡಿಯ ತ್ರೈಮೂರ್ತಿ ದೇವಾಲಯವನ್ನು ಬಾಗಿಲವಾಡದ ತಿಪಣ್ಣನಾಯಕರ ಮಕ್ಕಳು ಚಉಡಯ ನಾಯಕನು ಜೀರ್ಣೋದ್ಧಾರ ಮಾಡಿಸಿದ್ದನ್ನು ತಿಳಿಸುತ್ತದೆ. ಕ್ರಿ.ಶ. 1432ರ ಮೇಲುಕೋಟೆ ಶಾಸನದಲ್ಲಿ ಶ್ರೀಸಂಪಿತ ನಾರಾಣದೇವರ ಪೂಜೆ, ನೈವೇದ್ಯ, ನಂದಾದೀವಿಗೆಗೆ ಮತ್ತು ವನಮಾಲೆ ವಸಂತೋತ್ಸವ ಹಬ್ಬಕ್ಕೋಸ್ಕರ ದೇವರಾಜ ಒಡೆಯರು ಹೊಸಹಳ್ಳಿಯ ಮತ್ತು ಮೞಿಲಹಳ್ಳಿಯ ಭೂಮಿಯನ್ನು ದಾನ ನೀಡಿದ ದಾಖಲೆಯಿದೆ. ಇದೇ ಕಾಲದ ಹೊಸಾಳ ಶಾಸನದಲ್ಲಿ ವಿನಾಯಕ, ಚಂಡೇಶ್ವರ ಮತ್ತು ನಾರಾಯಣ ದೇವರುಗಳಿಗೆ ಪೂಜೆ, ನಯಿವೇದ್ಯ ಆಹಾರದಾನಕ್ಕೆ ರಂಗಣಸೆಟ್ಟಿ ಭೂಮಿ ಮತ್ತು ಆದಾಯದಿಂದ ಬಂದ ಹಣವನ್ನು ದಾನ ನೀಡಿದ್ದಾನೆ. ಕೈಕಿಣಿ ಶಾಸನದಲ್ಲಿ ಪಾರ್ಶ್ವದೇವ ಬಸದಿಗೆ ಭೈರವದೇವ ಒಡೆಯನಿಂದ ಭೂಮಿ ಕೊಂಡು ನಾಡಿನ 34 ಗುಂಪಿನ ನಾಡಿನ ಏಳು ಜೈನರು ಭೂಮಿ ದಾನ ನೀಡಿದ ವಿಷಯವಿದೆ. ಶೃಂಗೇರಿ ಶಾಸನದಲ್ಲಿ ರಾಮಚಂದ್ರ ದೇವರ ಪೂಜೆ, ನೈವೇದ್ಯಕ್ಕೋಸ್ಕರ ಹೊನ್ನಾಪುರ ರಾಜ್ಯದಲ್ಲಿ ಮತ್ತು ಸೈಗೆಹಳ್ಳಿಯ ವೆಂನ್ತಿ ತಂಬುನಲಿಗೆ ದೇಶಕ್ಕೆ ಹೊಂದಿಕೊಂಡಿರುವ ಮಂಜುಗನಿ ಗ್ರಾಮವನ್ನು ರಾಜನು ದಾನ ನೀಡಿದ ದಾಖಲೆಯಿದೆ. ನುಗ್ಗಹಳ್ಳಿ ಶಾಸನದಲ್ಲಿ ಚಿಕ್ಕಭೀಮಂಣನು ಶ್ರೀಸದಾಶಿವದೇವರ ಸಂಪ್ರೋಕ್ಷಣೆ ಮಾಡಿದ್ದನ್ನು ತಿಳಿಸುತ್ತದೆ.

ಕ್ರಿ.ಶ. 1433ರ ಬೈಲೂರು ಶಾಸನದಲ್ಲಿ ಮಡಕೇಶ್ವರ ದೇವಾಲಯದಲ್ಲಿ ಶ್ರಾವಣ ಮಾಸದಲ್ಲಿ ಪ್ರತಿನಿತ್ಯ ಪುರಾಣಗಳನ್ನು ಪಠಣ ಮಾಡುವುದನ್ನು ಅಧಿಕಾರಿ ಸಣ್ಣುನಾಯರು ವ್ಯವಸ್ಥೆ ಮಾಡುವುದನ್ನು ತಿಳಿಸುತ್ತದೆ. ಬಸರೂರು ಶಾಸನದಲ್ಲಿ ನಖರೇಶ್ವರ ದೇವರ ಮುಂದೆ ನಂದಾದೀವಿಗೆ ಇಡುವುದಕ್ಕೋಸ್ಕರ ಯೀಸರಸೆಟ್ಟಿ ಭೂಮಿ ದಾನ ಮಾಡಿದ ದಾಖಲೆಯಿದೆ. ಹಾಲಾಡಿ ಶಾಸನ ಸವೆದಿದೆ. ಕಾಲನಾಡಿನಲ್ಲಿ ರತ್ನಗಿರಿ ಲಕ್ಷ್ಮೀನರಸಿಂಹ ದೇವರಿಗೆ ಉಡುವ ಮನೆತನದ ಅಣ್ಣ ಭಂಡಾರಿ ಭೂಮಿ ದಾನ ನೀಡಿದ ವಿವರವಿದೆ. ವೆಲಹಗೋವ ಶಾಸನದಲ್ಲಿ ನೇಮಿನಾಥ ದೇವರ ಅಂಗರಂಗ ಭೋಗಕ್ಕೋಸ್ಕರ ಮತ್ತು ಬಂದವಾಡ ಗ್ರಾಮದ ನೇಮಿನಾಥ ಬಸದಿಯ ಜೀರ್ಣೋದ್ಧಾರಕ್ಕೆ ಚಂಡಿಕಾದೇವಿ ತ್ರಿಯಂಬಕ ದೇವರು ಉಭಯಮಾರ್ಗಗವರೇಶ್ವರದೇವರು ಮತ್ತು ರಾಯಪ್ಪ ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. 1434ರ ಕಂಪ್ಲಿ ಶಾಸನದಲ್ಲಿ ದೇವರಾಯ ಮಹಾರಾಯನು ದೇವಸ್ಥಾನದ ವ್ಯವಸ್ಥಾಪಕನಾದ ರಾಮಯ್ಯನಿಗೆ ಒಂದು ಗ್ರಾಮ ನೀಡಿದ್ದನ್ನು ತಿಳಿಸುತ್ತಾ, ಸಾಳುವ ಸಂಕರದೇವನು ಹನುಮಂತದೇವರನ್ನು ಪ್ರತಿಷ್ಠಾಪಿಸಿದ್ದನ್ನು ದಾಖಲಿಸಿದೆ. ಇದೇ ಕಾಲದ ತಮಿಳುನಾಡಿನ ಶ್ರೀರಂಗಮ್ ಶಾಸನದಲ್ಲಿ ರಂಗನಾಥದೇವರ ನಿತ್ಯನಯಿವೇದ್ಯ, ನಂದಾದೀವಿಗೆಗೆ ಮತ್ತು ಉತ್ತರ ಆಷಾಢ ಮತ್ತು ಭಾದ್ರಪದ ತಿಂಗಳಲ್ಲಿ ನಡೆಯುವ ರಥೋತ್ಸವಕ್ಕೆ ರಾಜಗಂಭೀರವಳನಾಡಿನಲ್ಲಿರುವ ಕೂಡಿಯಾಲ ಮತ್ತು ರಾಜರಾಜವಳನಾಡಿನಲ್ಲಿರುವ ಕೊಡಿಯಾಲ ಮತ್ತು ಚಿರುಡಯಾರ

ಗ್ರಾಮಗಳನ್ನು ಆದಿತ್ಯದೇವನ ಮಗ ಮತ್ತು ಮೊಮ್ಮಗ ಅಣ್ಣಚವುಡಪ್ಪನು ದಾನ ನೀಡಿದ ದಾಖಲೆಯಿದೆ. ಕ್ರಿ.ಶ. 1435ರ ನುಗ್ಗೇಹಳ್ಳಿ ಶಾಸನದಲ್ಲಿ ಚಿಕ್ಕಭೀಮಂಣ ನುಗ್ಗಿಯ ಹಳ್ಳಿಯ ನಾಡಿನಲ್ಲಿ ಅಧಿಕಾರದಲ್ಲಿರುವಾಗ ಶ್ರೀಪ್ರಸಂನ್ನಕೇಶವ, ನಾರಸಿಂಹದೇವರು, ಗೋಪಾಲ ದೇವರುಗಳ ವಿಗ್ರಹವನ್ನು ಸಂಪ್ರೋಕ್ಷಣೆ ಮಾಡಿಸಿದ್ದನ್ನು ತಿಳಿಸುತ್ತದೆ.

ಕ್ರಿ.ಶ. 1436ರ ಮೈಲಾರಿ ಶಾಸನದಲ್ಲಿ ದಂಡನಾಯಕ ಸಿಂಗಣನ ಆದೇಶದಂತೆ ನಾಗಪ್ಪಯನ ಮಗ ಮತ್ತು ಹೆಗ್ಗಡೆದೇವರಸನ ಸಹೋದರನಾದ ಗಂಗರಸನು ಮೈಲಾರದೇವರ ಶಿಲಾರಂಗಮಂಟಪವನ್ನು ಕಟ್ಟಿಸಿದ್ದನ್ನು ವಿವರಿಸಿದೆ. ಹೊಸಾಳ ಶಾಸನದಲ್ಲಿ ನಾರಾಯಣ ದೇವಸ್ಥಾನಕ್ಕೆ ತೂಳಹಾರ ಶಂಕರನಾಯಕನು ರಾಜನ ಅಪ್ಪಣೆ ಪಡೆದು ಮುಂಗಿನಾಡಿನಲ್ಲಿ ಭೂಮಿಯನ್ನು ದಾನ ನೀಡಿದ ವಿವರವಿದೆ. ಕನಕಗಿರಿ ಶಾಸನದಲ್ಲಿ ಕನಕಾಚಲ ಲಕ್ಷ್ಮೀಸಿಂಹಸ್ವಾಮಿಗೆ ದಾನ ನೀಡಿದ ವಿಷಯವಿದೆ. ಕ್ರಿ.ಶ. 1437ರ ಆನೆಗೊಂದಿ ಶಾಸನದಲ್ಲಿ ವೀರಪ್ರಉಡ ಪ್ರತಾಪದೇವನ ಅಳಿಯ ತಿರುವೆಂಕಟನು ಸಂಗಮರಾಯನು ಸೇರಿ ಆನೆಗುಂದಿಯ ಬಯಿರವದೇವರಿಗೆ ದಾನ ನೀಡಿದ ದಾಖಲೆಯಿದೆ. ಇದೇ ಕಾಲದ ಕುರುವಳ್ಳಿ ಶಾಸನದಲ್ಲಿ ತುಂಗಾಭದ್ರ ದಂಡೆಯ ಮೇಲಿರುವ ರಾಮನಾಥನ ದೇವರ ಮುಂದೆ ಒಂದು ಛತ್ರಕ್ಕೋಸ್ಕರ ಬೊಮ್ಮೆಯಕ್ಕಹೆಗ್ಗಡತಿಯ ಮಗ ಮುತ್ತಪರಸಹೆಗ್ಗಡೆ ಭೂಮಿ ದಾನ ನೀಡಿದ ವಿವರವಿದೆ. ಕ್ರಿ.ಶ. 1438ರ ಕುಡಿ ಶಾಸನದಲ್ಲಿ ಕೊಡುಗೆ ಶಂಕರನಾರಾಯಣ ದೇವರ ನಯಿವಿದ್ಯ ಪೂಜೆಗೋಸ್ಕರ ನಾರಣಸಣಂಜ ಭೂಮಿ ಕೊಂಡು ತೊಳಹನು ದಾನ ನೀಡಿದ ದಾಖಲೆಯಿದೆ. ಕ್ರಿ.ಶ. 1439ರ ಕ್ಯಾತನಹಳ್ಳಿ ಶಾಸನದಲ್ಲಿ ತಲಕಾಡಿನ ಶ್ರೀ ಕೀರ್ತಿ ನಾರಾಯಣ ದೇವರ ಪವಿತ್ರಾರೋಹಣ ಹಬ್ಬಕ್ಕೆ ನಂದಾದೀವಿಗೆಯ ಶ್ರೀ ಕಾರ್ಯಕ್ಕೆ ನಂದಾದೀವಿಗೆ ನಿರ್ವಹಣೆಗೋಸ್ಕರ ಕೇತನಹಣ್ಣಿಯನು ರಾ(ಠ)ಳ್ಳಿಯನು ಎಲ್ಲಾ ತೆರಿಗೆ ಸುಂಕಗಳನ್ನು ಮಹಾಪ್ರಧಾನ ಲಂಖಂಣದಂಣಾಯ್ಕ ನೀಡಿದ ವಿವರವಿದೆ. ಇದೇ ಕಾಲದಲ್ಲಿ ಇದೇ ಊರಿನ ಮತ್ತೊಂದು ಶಾಸನ ರಾಯಂಣೊಡೆಯನು ದಾನ ನೀಡಿದೆ. ಕಳಸ ಶಾಸನದಲ್ಲಿ ಕಳಸೇಶ್ವರ ದೇವರ ಪೂಜೆಗೋಸ್ಕರ ಬೈರಪ್ಪಹೆಗ್ಗಡೆ ಮೊಮ್ಮಗ ಅರಸ ಹೆಗ್ಗಡೆ ಭೂಮಿ ದಾನ ನೀಡಿದ್ದಾನೆ. ಕ್ರಿ.ಶ. 1440ರ ಹುಸ್ಕೂರು ಶಾಸನದಲ್ಲಿ ಬಸವರಾಜದೇವರ ಮೂರ್ತಿ ಪ್ರತಿಷ್ಠಾಪಿಸಿ ದೇವರ ಸೇವೆ ಅಮೃತಪಡಿಗೋಸ್ಕರ ಗದ್ದೆ ಮತ್ತು ಗೆದ್ದಲು ಭೂಮಿಯನ್ನು ಹುಸುಗೂರ ಕಲಿನಾಗಪ್ಪನವರ ಮಗ ವೀರಂಣಗಲುಡರು ದಾನ ನೀಡಿದ ದಾಖಲೆಯಿದೆ. ಇದೇ ಕಾಲದ ಕಿರಗಸೂರು ಶಾಸನದಲ್ಲಿ ರಾಜನ ಉನ್ನತಿಗೋಸ್ಕರ ತಲಕಾಡಿನ ವಯಿದ್ಯನಾಥ ದೇವಾಲಯದ ಅಂಗರಂಗಭೋಗ, ನಂದಾದೀವಿಗೆಗೆ ನಯಿವದ್ಯ, ಪೂಜೆ ನಿರ್ವಹಣೆಗೋಸ್ಕರ ಬೆಳಕವಾಡಿಯ ಪ್ರಾಂತ್ಯದ ಕಛೇರಿಗೆ ಕಿಱುಗಸುರು ಗ್ರಾಮದಿಂದ ಆರು ವರಹ ಬಾಕಿ ಇರುವ ಸುಂಕ ತೆರಿಗೆಗಳಾದ ಬಣಜವರ್ತ್ತನೆ, ಆಠದೆಱೆ, ಕಾವಲಿ, ಗಾಣಮುದ್ರೆ, ಮಗ್ಗ ಮುಂತಾದ ತೆರಿಗೆಗಳಿಂದ ಸಂಗ್ರಹಿಸಿ ಮಹಾಪ್ರಧಾನ ಲಖಂಣದಂಣಾಯ್ಕರು ದಾನ ನೀಡಿದ ವಿವರವಿದೆ. ಕ್ರಿ.ಶ. 1441ರ ಕೋಟೆ ಶಾಸನದಲ್ಲಿ ಕೋಟೆ ಹಿರಿಯ ದೇವಾಲಯ ಮಹಾದೇವರ ಬೆಳಗಿನ ನಯಿವೈದ್ಯ ಮತ್ತು ಪೂಜೆಗೋಸ್ಕರ ಪವಿತ್ರರೂಪಣ ಹಬ್ಬದಲ್ಲಿ ಪೂಜೆಗೋಸ್ಕರ ಮಹಾಪ್ರಧಾನ ಚಂದರಸನು 15 ಕಾಟಿಗದ್ಯಾಣಗಳಿಗೆ ಭೂಮಿಕೊಂಡು ದಾನ ನೀಡಿದ ವಿಷಯವಿದೆ.

ಕ್ರಿ.ಶ. 1442ರ ಸೋಮೇಶ್ವರ ಶಾಸನದಲ್ಲಿ ಸೋಮೇಶ್ವರ ದೇವರ ದೇವಾಲಯದ ಪೂಜೆ ನಯಿವೆದ್ಯಕ್ಕೆ ಮತ್ತು ದೇವಾಲಯದ ಜೀರ್ಣೋದ್ಧಾರಕ್ಕೆ ಬಂಗರು ಚವುಟರು ಮತ್ತು ಚುಂಟರುಗಳು ಅನೇಕ ಸಮುದಾಯದವರು ದಾನ ನೀಡಿದ ದಾಖಲೆಯಿದೆ. ಇದೇ ಕಾಲದ ಬಸರೂರು ಶಾಸನದಲ್ಲಿ ಬಸರೂರಿನ ಪಡುವಕೇರಿ ಮಹಾದೇವದೇವರ ಸೇವೆಗೋಸ್ಕರ ಕೋಟೆಯಂಣಸೆಟ್ಟಿ ಒಂದು ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಕ್ರಿ.ಶ. 1443ರ ಕೊಂಕ್ಕರಣಿ ಶಾಸನದಲ್ಲಿ ಕೊಡುಗೆ ಶಂಕರನಾರಾಯಣ ದೇವರಿಗೆ ಬೆಮ್ಮಣಚಗೋವಿಂದಸೆಟ್ಟಿ ಭೂಮಿ ದಾನ ನೀಡಿದ ವಿವರವಿದೆ.

ಕ್ರಿ.ಶ. 1444 ಕುಂದಗೋಳ ಶಾಸನದಲ್ಲಿ ವಲ್ಲಭರಾಜ ಮತ್ತು ಯಳಮಧಿರಾಜನು ಕುಂದಗಾಲ್ ಹನುಮಂತದೇವರ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದನ್ನು ತಿಳಿಸುತ್ತದೆ. ಇದೇಕಾಲದ ಹೆರೂರು ಶಾಸನದಲ್ಲಿ ಹೆರೂರು ಮಹಾದೇವದೇವರ ನಂದಾದೀವಿಗೆಗೆ ಮತ್ತು ಹೊಸಬುಸೆಟ್ಟಿ ಭೂಮಿ ಕೊಂಡು ದಾನ ನೀಡಿದ್ದಾನೆ. ಬಸರೂರು ಶಾಸನದಲ್ಲಿ ನಖರೇಶ್ವರ ದೇವಾಲಯದ ಪೂಜೆ, ಸೇವೆಗೋಸ್ಕರ ಬಸರೂರಿನಲ್ಲಿ ಪಡುವಕೇರಿ ಅನೇಕ ಸೆಟ್ಟಿಕಾರರುಗಳು, ನಾರಣಸೆಟ್ಟಿ ಭೂಮಿ ದಾನ ನೀಡಿದ ವಿವರ ಹಾಗೂ ನಾರಣಸೆಟ್ಟಿ ಕೂಡ ಈ ದೇವಾಲಯಕ್ಕೆ ಭೂಮಿದಾನ ನೀಡಿದ ದಾಖಲೆಯಿದೆ. ಇದೇ ಊರಿನ ಶಾಸನದಲ್ಲಿ ಮಹಾದೇವ ದೇವಾಲಯದ ಹೊನ್ನುಕಳಶ ಮಾಡುವುದಕ್ಕೆ ಧರ್ಮಪಟ್ಟಣದ ಸೆಟ್ಟಿಕಾರರು ಒಪ್ಪಿ ಬರುವ ಸುಂಕ, ಕಾಟಿಗ (ಹಣ) 10, ಆದಾಯದಿಂದ ಮಹಾದೇವರಿಗೆ ಸಮರ್ಪಿಸಿದ್ದನ್ನು ತಿಳಿಸುತ್ತದೆ. ಕ್ರಿ.ಶ. 1445ರ ಗೋವಿನಹಳ್ಳಿ ಶಾಸನದಲ್ಲಿ ಚಂದ್ರಮೌಳಿ ದೇವರ ಸಮ್ಮುಖದಲ್ಲಿ ಬೊಮ್ಮನಹಳ್ಳಿಯನ್ನು ದೇವರಾಯಪುರ ಎಂದು ಪುನರ್ ನಾಮಕರಣ ಮಾಡಿ ವಿವರ ಹಾಗೂ ರಾಜನ ಹೃದಯ ಚಿಕಿತ್ಸೆಗೋಸ್ಕರ ಧಾರ್ಮಿಕ ಆಚರಣೆಗೆ ನಾಗಭಟ್ಟನಿಗೆ ಗೋವಿನಹಳ್ಳಿ ಮತ್ತು ಬೊಮ್ಮನಹಳ್ಳಿಗಳನ್ನು ದಾನ ನೀಡಿದ ದಾಖಲೆಯಿದೆ. ಕ್ರಿ.ಶ. 1446ರ ಮುಂಡೊಳ್ಳಿಯ ಶಾಸನ ಸವೆದಿದೆ. ರಾಜನ ಮಂಗಳಮಜ್ಜನ ಮಾಡಿಸುವುದಕ್ಕೆ ಭಟ್ಕಾಲ್‌ನ ನರಸಿಂಹದೇವರಿಗೆ 3½ ಹೊನ್ನುಗಳನ್ನು ಅಮಂತಸರಸ್ವತಿ ದಾನ ನೀಡಿದ ವಿವರವಿದೆ. ಮುಂಡೊಳ್ಳಿ ಶಾಸನದಲ್ಲಿ ರಾಜನ ಅಭಿವೃದ್ಧಿಗೋಸ್ಕರ ದೇವೀ ಮಹಾತ್ಮೆ ಪಾರಾಯಣ ನಡೆಸಲು ದುರ್ಗಾದೇವಾಲಯದಲ್ಲಿ ಪುರುಷೋತ್ತಮ ಭಟ್ಟನಿಗೆ ದಾನ ನೀಡಿದ ದಾಖಲೆಯಿದೆ. ಉಪುಂಡಶಾಸನದಲ್ಲಿ ದುರ್ಗಾಪರಮೇಶ್ವರ ದೇವಾಲಯದ ಪಂಚಾವಾಡಾಯ ಮತ್ತು ಶ್ರೀ ಬಲಿಗೋಸ್ಕರ ಕುಪ್ಪಿಸೆಟ್ಟಿಯ ಅಳಿಯ ದೇವಣಸೆಟ್ಟಿ ಭೂಮಿ, ನಿವೇಶನ ದಾನ ನೀಡಿದ ವಿವರವಿದೆ. ಅರೂರು ಶಾಸನದಲ್ಲಿ ಕೊಟೆಯಕೆರೆ ಮಾರ್ಕಂಡೇಶ್ವರ ದೇವರ ಮುಂದೆ ಮಹಾಪ್ರಧಾನ ಮಾದಣ್ಣನಾಯಕನ ದಾನ ನೀಡಿದ್ದಾನೆ. ಮುರುಡೇಶ್ವರ ಶಾಸನದಲ್ಲಿ ಮುರುಡೇಶ್ವರ ದೇವಾಲಯದಲ್ಲಿ ವಾಮಣ ಉಪಧ್ಯಾಯನು ಪುರಾಣ ಓದುವುದಕ್ಕೆ ಭೂಮಿ ದಾನ ನೀಡಿದ ವಿವರವಿದೆ.

ಕ್ರಿ.ಶ. 14ನೆಯ ಶತಮಾನದ ಚಿತ್ರಗಿ ಶಾಸನ ಸವೆದಿದೆ. ವಿಜಯನಗರ ರಾಜರುಗಳ ವಂಶಾವಳಿಯನ್ನು ತಿಳಿಸುತ್ತದೆ. ಬುಕ್ಕರಾಯ, ಹರಿಹರ, ವಿಜಯಭೂಪತಿ ಮತ್ತು ದೇವರಾಯ ರಾಮಚಂದ್ರ ದೇವರಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ ಹಾಗೂ ಹೊನ್ನಾವರ ದೇಶದಲ್ಲಿ ಚಿಟ್ಟಾರಿಗೆ ಗ್ರಾಮ ಇರುವುದನ್ನು ಹೆಸರಿಸುತ್ತದೆ. ಕ್ರಿ.ಶ. 15ನೇ ಶತಮಾನದ ಶ್ರೀಮತ್ಪಂಡಿತಾಚಾರ್ಯ್ಯರ ಶಿಷ್ಯ ದೇವರಾಯ ಮಹಾರಾಯರ ರಾಣಿ ಭೀಮಾದೇವಿಯು ಶಾನ್ತಿನಾಥಸ್ವಾಮಿಯ ವಿಗ್ರಹವನ್ನು ಮಾಡಿಸಿದ್ದನ್ನು ತಿಳಿಸುತ್ತದೆ. ಗಂಗವಾಡಿ ಶಾಸನದಲ್ಲಿ ನಂಜನಾಥದೇವರ ಶ್ರೀಕಾರ್ಯಸೇವೆಗೋಸ್ಕರ ಮಗ್ಗಗಳ ತೆರಿಗೆ, ಬೇಡಿಗೆ ಆದಾಯದಿಂದ ದಾನ ನೀಡಿದ ವಿವರವಿದೆ.

ತೇದಿ ಇಲ್ಲದ ಶ್ರೀರಂಗಮ್‌ನ ಶಾಸನಗಳು ಗ್ರಂಥ ಲಿಪಿಯಲ್ಲಿವೆ. ದೇವಾಲಯದ ಸೇವೆಗೋಸ್ಕರ, ದೇವಸ್ಥಾನದ ಸ್ಥಾನಿಕರು ರಾಜನಲ್ಲಿ ವಿನಂತಿಸಿ ಕೊಡಿಯೂರು, ಸುಂಡಕ್ಕ ಮತ್ತು ಕರುವಗೊಳ, ಗೊವಟ್ಟಕುಡಿ ಗ್ರಾಮಗಳನ್ನು ಉತ್ತಮನಂಬಿಸ್ಥಾನಿಕ ಭೂಮಿ ದಾನ ನೀಡಿದ ದಾಖಲೆಯಿದೆ. ಮತ್ತೊಂದು ಶಾಸನದಲ್ಲಿ ದೇವಸ್ಥಾನದ ಪಾರುಪತ್ಯಗಾರ ನಿರ್ವಹಿಸುವುದಕ್ಕೆ ರಾಜನು ಉತ್ತಮಣಂಬಿಗೆ 300 ಹೊನ್ನು ಭೂಮಿ ದಾನ ನೀಡಿದ್ದಾನೆ. ಹಾಗೂ ಉತ್ತಮ ಸೇವೆಗಾಗಿ ಕೈಗಡಗ, ಚಿನ್ನದ ಸರ, ಕಳಸ ಗೌರವಪೂರ್ವಕವಾಗಿ ಈ ಮನೆಗೆ ದಾನ ನೀಡಿದ್ದಾನೆ.

ಇಮ್ಮಡಿ ದೇವರಾಯನು ತನ್ನ ರಾಜಧಾನಿಯಲ್ಲಿ ದೇವಾಲಯಗಳನ್ನು ನಿರ್ಮಿಸಿದನು. ಹಜಾರರಾಮನ ದೇವಾಲಯ ಹಾಗೂ ಹಂಪೆಯ ವಿಠಲದೇವಾಲಯ ನಿರ್ಮಾಣ ಕಾರ್ಯವು ಅವನ ಆಳ್ವಿಕೆಯಲ್ಲಿಯೇ ಪ್ರಾರಂಭವಾಗಿರಬಹುದೆಂದು ನಂಬಲಾಗಿದೆ.

ಇವನ ಕಾಲದಲ್ಲಿ ರಾಜನೀತಿ ದುರಂಧರನೂ ಕಲೆ, ಸಾಹಿತ್ಯ, ತತ್ವಜ್ಞಾನಗಳ ಪೋಷಕನೂ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಶಾಸನಗಳ ಆಧಾರದಿಂದ ಶೈವ, ವೈಷ್ಣವ, ಜೈನ ಧರ್ಮಗಳ ಪರಮತ ಸಹಿಷ್ಣುವೂ, ದೈವಭಕ್ತನೂ ಆಗಿದ್ದನೆಂದು ಈ ಸಂಗಮ ವಂಶದ ಅರಸರಲ್ಲಿ ಒಬ್ಬ ಶ್ರೇಷ್ಠ ರಾಜನಾಗಿದ್ದನೆಂದು ವಿಜಯನಗರದ ಸಾಮ್ರಾಜ್ಯಕ್ಕೆ ಸರ್ವಧರ್ಮ ಪೋಷಣೆಯ ಗುಣವನ್ನು ಉಳ್ಳವನು ಎಂದು ಭಾವಿಸಬಹುದು.

ಗ್ರಂಥಋಣ

1. *ಎ.ಆರ್.ಐ.ಇ.* (ರಿಪೋರ್ಟುಗಳು)
2. *ಎಸ್.ಐ.ಐ.* ಸಂಪುಟಗಳು.
3. *ಎ.ಕ.* ಸಂಪುಟಗಳು.
4. *ಕೆ.ಆರ್.ಐ.* ಸಂಪುಟಗಳು, ಧಾರವಾಡ.
5. *ಬಳ್ಳಾರಿ ಜಿಲ್ಲೆಯ ಶಾಸನಗಳು*, ಹಂಪಿ ಕನ್ನಡ ವಿಶ್ವವಿದ್ಯಾಲಯ.

10

ಪ್ರೌಢದೇವರಾಯನ ಕಾಲದ ವಿಶಿಷ್ಟ ದಾನ ಶಾಸನಗಳು

ಡಾ॥ ಎಚ್. ಜಯಮ್ಮ ಕರಿಯಣ್ಣ.

ಇಮ್ಮಡಿ ದೇವರಾಯನು ವೀರವಿಜಯರಾಯ ಮತ್ತು ನಾರಾಯಣಾಂಬಿಕೆಯರ ಪುತ್ರ. ಈತನನ್ನು ವೀರ ಪ್ರತಾಪ ದೇವರಾಯನೆಂದು, ಪ್ರೌಢದೇವರಾಯನೆಂಬ ಅಭಿದಾನದಿಂದ ಶಾಸನಗಳು ಉಲ್ಲೇಖಿಸಿವೆ. ಇಮ್ಮಡಿ ಪ್ರೌಢದೇವರಾಯನೆಂಬ ಹೆಸರಿನಿಂದ ರಾಜ್ಯವಾಳಿ ಜನಾನುರಾಗಿ ಸಾಮ್ರಾಟನೆನಿಸಿದ. ಸಾಹಿತ್ಯ ಕಲೆಗಳಿಗೆ ಆಶ್ರಯದಾತನಾಗಿ, ಕುಮಾರವ್ಯಾಸ, ಚಾಮರಸರಂತಹ ಕನ್ನಡ ಕವಿಗಳಿಗೆ ಆಶ್ರಯ ನೀಡಿದ ಅರಸು. ವೀರಶೈವ ವಚನ ಸಾಹಿತ್ಯದ ಪುನರುಜ್ಜೀವಕ್ಕೆ ಅನುಕೂಲ ಮಾಡಿಕೊಟ್ಟವನು. ಪ್ರೌಢದೇವರಾಯ ವಿಜಯನಗರದ ಹೆಸರನ್ನು ಇನ್ನೊಮ್ಮೆ ಶಾಶ್ವತವಾಗಿ ಉಳಿಯುವಂತೆ ಮಾಡಿದ. ಪ್ರೌಢದೇವರಾಯನ ಕಾಲದಲ್ಲಿ ಅತಿ ಹೆಚ್ಚು ದಾನಶಾಸನಗಳು ಕಂಡುಬರುತ್ತವೆ. ಸಾಮಾನ್ಯವಾಗಿರುವ ಅನೇಕ ದಾನ ಶಾಸನಗಳನ್ನು ಕೈ ಬಿಟ್ಟು ನನ್ನ ಅಧ್ಯಯನದ ವ್ಯಾಪ್ತಿಯಲ್ಲಿ ವಿಶೇಷವೆಂದು ಕಂಡು ಬಂದ ಅಥವಾ ಪರಿಗಣಿಸಿದ ದಾನ ಶಾಸನಗಳನ್ನು ಮಾತ್ರ ಈ ಲೇಖನದಲ್ಲಿ ಬಳಸಿಕೊಳ್ಳಲಾಗಿದೆ.

ಹರಿಹರದ ಹರಿಹರೇಶ್ವರ ದೇವಾಲಯದ ಆವರಣದಲ್ಲಿರುವ ಕ್ರಿ.ಶ. 1424ರ ಶಾಸನವು ವೀರಪ್ರತಾಪ ಹರಿಹರ ಮಹಾರಾಯರ ಮಗ ವೀರ ಪ್ರತಾಪ ದೇವರಾಯ ಮಹಾರಾಯರ ಪ್ರಧಾನಿ ನಾಗಣ್ಣದಣಾಯಕರು ಅರಸನ ಆದೇಶದಂತೆ ಬುಳ್ಳರಾಜನು ಹರಿದ್ರಾ ನದಿಗೆ ಹರಿಹರದ ಸಮೀಪ ಸೇತುವೆಯನ್ನು ನಿರ್ಮಿಸಿ ಹರಿಹರದೇವರಿಗೆ, ವಿಪ್ರರಿಗೆ, ಸಂಜೀವಿನಿಯಂತಿರುವೆ ನೀರನ್ನು ಜನರ ಜೀವನೋಪಾಯಕ್ಕೆ ಅನುಕೂಲ ಮಾಡಿಕೊಡಲಾಗಿತ್ತು. ಕ್ರಮೇಣ ಹಲವಾರು ವರ್ಷಗಳನಂತರ ಹರಿದ್ರಾ ನದಿಗೆ ಕಟ್ಟಿದ್ದ ಸೇತುವೆ ಬಿದ್ದುಹೋಯಿತು. ಇದರಿಂದ ಹರಿಹರ ದೇವರ ಪೂಜಾ ಕಾರ್ಯಗಳಿಗೆ ಮತ್ತು ಆ ಕ್ಷೇತ್ರ ನಿವಾಸಿಗಳಿಗೆ, ಬ್ರಾಹ್ಮಣರುಗಳಿಗೆ ನೀರಿನ ಅಗತ್ಯ ತುಂಬಾ ಇದ್ದು ಈಗ ತೊಂದರೆ ಅನುಭವಿಸುತ್ತಿದ್ದಾರೆ. ಹೇಗಾದರೂ ಸೇತುವೆಯನ್ನು ಪನಃ ನಿರ್ಮಾಣ ಮಾಡಬೇಕು. ಹಾಗೆ ಸೇತುವೆ ಮಾಡಿಕೊಡುವ ವ್ಯಕ್ತಿಯನ್ನು ಬುಳ್ಳರಾಜನು ಹುಡುಕುತ್ತಾನೆ. ಆಗ ಬುಕ್ಕರಾಯನ ಕುಮಾರನಾದ ಇಮ್ಮಡಿ ವೀರಪ್ರತಾಪದೇವರಾಯ ಮಹಾರಾಯನ ಸಮಸ್ತ ಸೈನ್ಯಕ್ಕೆ ಅಧಿಪತಿಯಾದ ಚಾಮನೃಪಾಲನನ್ನು ಕಂಡು, ಹಿಂದೆ ಪ್ರಧಾನಿ ನಾಗಣ್ಣದಂಣಾಯಕರ ನಿರೂಪದಂತೆ ಹರಿದ್ರಾ ನದಿಗೆ ಸೇತುವೆ ಕಟ್ಟಿಸಿದ್ದು ಸರಿಯಷ್ಟೆ. ಈಗ ಅದು ಬಿದ್ದುಹೋಗಿದೆ. ಹರಿಹರಪುರದಲ್ಲಿನ ದೇವರಿಗೆ ಮತ್ತು ಅಲ್ಲಿನ ನಿವಾಸಿಗಳಿಗೆ ನೀರಿಲ್ಲದ ತೊಂದರೆ ಅನುಭವಿಸುತ್ತಿದ್ದಾರೆ. ನೀನು ಅಗಣಿತ ಧರ್ಮ ಕಾರ್ಯಗಳನ್ನು ಮಾಡಿ, ಅದರ ಅರ್ಥ ಮತ್ತು ಧರ್ಮಶಾಸ್ತ್ರಗಳನ್ನು ತಿಳಿದಿರುವ ಮಹಾನುಭಾವ. ಈ ಧರ್ಮಕಾರ್ಯವನ್ನು ಮಾಡಲು ನೀನೇ ಸಮರ್ಥ. ನೀನಲ್ಲದೆ ಬೇರೆಯವರನ್ನು ನಾನು ಕಾಣೆ ಎಂದು ಹೇಳಿ ಒಪ್ಪಿಸುತ್ತಾನೆ. ಆಗ ಬುಳ್ಳರಸನ ಮಾತನ್ನು ಕೇಳಿದ ಚಾಮನೃಪನು ಹರಿದ್ರಾ ನದಿಗೆ ಸೇತುವೆ ಕಟ್ಟಲು ಸಂತೋಷದಿಂದ

ಒಪ್ಪಿಕೊಂಡು ಆ ಸೇತುವೆಯ ನಿರ್ಮಾಣಕ್ಕೆ ತಗಲುವ ವೆಚ್ಚದ ಹಣವನ್ನು ಬುಳ್ಳರಸನಿಗೆ ಕೊಡುತ್ತಾನೆ. ಈ ಚಾಮರಾಜನನ್ನು ಶಾಸನದಲ್ಲಿ ಶ್ರೀಸೋಮೇಶ್ವರಲಿಂಗ ಪಾದಪಯೋಜಪರಾಗ ಪರಿಮಳಾಸಕ್ತ ಮಧುವ್ರತನು, ಶುಭಗುಣಾನ್ವಿತನು, ಬೊಪ್ಪದೇವ ತನೂಜಾತನು, ವಂದಿಜನ ಪಾರಿಜಾತನು, ಯುವತೀಜನ ಕುಸುಮಕೋದಂಡನು, ಕದನ ಪ್ರಚಂಡನು, ಸಾಮಭೇದಾದಿ ಚತುರುಪಾಯ ವಿಚಕ್ಷಣನು, ಸದ್ಧರ್ಮ ರಕ್ಷಣನು, ಸಂಗೀತಲೋಲನು ಇತ್ಯಾದಿಯಾಗಿ ಶಾಸನದಲ್ಲಿ ಹೊಗಳಿದೆ. ಅಲ್ಲದೆ ಅವನನ್ನು ಅಭಿನವ ಭೋಜರಾಜನೆಂದು ಕರೆದಿದೆ, ಮತ್ತು ಅವನಿಗೆ ಗಂಡರಗೂಳಿ ಎಂಬ ಬಿರುದನ್ನು ನೀಡಿದೆ. ಆತನು ಅನೇಕ ಕೆರೆಗಳನ್ನು ನಿರ್ಮಿಸಿದ್ದನೆಂದು ತಿಳಿದುಬರುತ್ತದೆ. ಆತನಿಂದ ದಾನ ಪಡೆದು ಸೇತುವೆ ನಿರ್ಮಿಸಿದ ಬುಳ್ಳರಾಜನನ್ನೂ ಸಹ ಶಾಸನ ಹೊಗಳಿದೆ. ಬುಳ್ಳರಾಜ ಕಮ್ಮೆಕುಲದವನು, ಜಗನ್ನಾಥ ಮತ್ತು ಚಿನ್ನಾಂಬಿಕಾ ಅವರ ಪುತ್ರ. ಈತನು ಸಕಳ ಕಳಾಪ್ರವೀಣ, ಗಗನದಿಂದ ಗಂಗೆಯನ್ನು ತಂದ ಭಗೀರಥನ ಸಾಹಸಕ್ಕಿಂತ ಭೂಮಿಯಲ್ಲಿ ಹರಿಯುತ್ತಿದ್ದ ಹರಿದ್ರಾ ನದಿಯನ್ನು ಬಂಧಿಸಿ ಹರೀಶಪುರಕ್ಕೆ (ಹರಿಹರಕ್ಕೆ) ತಂದವನೆಂದೂ ಮತ್ತು ಕಾಲುವೆಗಳನ್ನೂ ನಿರ್ಮಿಸಿದವನೆಂದೂ ಹೊಗಳಿದೆ. ಹರಿದ್ರಾ ನದಿಯನ್ನು 'ಪೂಗಂ ತಮಾಲಂ ಫಲಭರಿತ ರಸಾಳಂ ಲತಾಮಂಟಪಂಗಳ್ಮದ ಭೃಂಗಂ ರಾಜಾಜಿಪಬ್ಬಾವಳಿವರಸು ಹರೀಶಾಂಘ್ರಿಯಂ ಸಾರ್ಚ್ಚೆ ಸೌಖ್ಯ ಪ್ರಭೆಯಂ ಪ್ರಖ್ಯಾತಿಯ'ನ್ನು (ಹರಿದ್ರಾ ನದಿಯು ಹಲವು ವಿಧವಾದ ಹೂವು, ಹಣ್ಣುಗಳನ್ನು ಬೆಳೆಯಲು ಕಾರಣವಾಗಿ ಹರಿಹರದೇವರ ಪಾದವನ್ನು ತೊಳೆದಳೆಂದು) ಪಡೆದಿದೆಯೆಂದು ಕಾವ್ಯಾತ್ಮಕವಾಗಿ ಹೇಳಿದೆ. ಈ ಶಾಸನವನ್ನು ಬರೆದ ಕವಿಯು ಮನುಕುಲ ರತ್ನಾಕರ ಚಂದ್ರನಾದ ಮಾಚಿದೇವನ ಮಗ ಧರಣೋಜನು ಎಂದಿದೆ. (ಹರಿಹರ–7) ಈ ಶಾಸನವು ಮೊದಲ ದೇವರಾಯನ ಕಾಲದಲ್ಲಿ ಕಟ್ಟಿದ್ದ ಹರಿದ್ರಾ ನದಿಯ ಸೇತುವೆ ಭಂಗವಾದ ಮೇಲೆ ಇಮ್ಮಡಿ ದೇವರಾಯಮಹಾರಾಯನ ಕಾಲದಲ್ಲಿ ಕ್ರಿ.ಶ. 1424 ರಲ್ಲಿ ಪುನಃ ನಿರ್ಮಾಣ ಮಾಡಿದ್ದನ್ನು ಹೇಳುತ್ತದೆ. ಮೊದಲಸಾರಿ ಸೇತುವೆ ಕಟ್ಟಿಸಿದ್ದು ಮತ್ತು ಎರಡನೇ ಸಾರಿ ಕಟ್ಟಿಸಿ ಊರಿನ ಜನತೆಗೆ ಉಪಕಾರ ಮಾಡಿಸಿದ್ದು ಬುಳ್ಳರಸನೆಂಬುದೊಂದು ವಿಶೇಷ.

ಬಾರಕೂರಿನ ಕೋಟಕೆರೆಯ ಪಂಚಲಿಂಗೇಶ್ವರ ಗುಡಿಯಲ್ಲಿರುವ ಕ್ರಿ.ಶ. 1425ರ ಶಾಸನವು ವೀರಪ್ರತಾಪದೇವರಾಯ ಮಹಾರಾಯನು ವಿಜಯನಗರವನ್ನು ಆಳ್ವಿಕೆ ಮಾಡುತ್ತಿರುವಾಗ ಅರಸನ ನಿರೂಪದಿಂದ ಮಂತ್ರಿ ನರಸಿಂಹದೇವ ಒಡೆಯನು ಬಾರಕೂರು ರಾಜ್ಯವನ್ನು ಪರಿಪಾಲಿಸುತ್ತಿದ್ದನು. ಆ ಅವಧಿಯಲ್ಲಿ ಬಾರಕೂರ ಕೋಟಕೆರೆಯ ಮೂಲಸ್ಥಾನ ಮಾರ್ಕಂಡೇಶ್ವರದೇವರ ಪಂಚಲಿಂಗದೇವರ ಸನ್ನಿಧಿಯಲ್ಲಿ ಶಿವರಾತ್ರೆಯ ಪುಣ್ಯಕಾಲದಲ್ಲಿ ಬ್ರಾಹ್ಮಣರ ಬೋಜನಕ್ಕೆ ದಿನವೊಂದಕ್ಕೆ ಒಬ್ಬರಿಗೆ ತುಪ್ಪ, ನಾಕು ಶಾಕ (ನಾಲ್ಕು ಬಗೆಯ ತರಕಾರಿ) ಮಜ್ಜಿಗೆ, ಉಪ್ಪಿನಕಾಯಿ, ತೋಯ, ವೀಳೆಯ ಸಹಿತವಾಗಿ ಹನ್ನೆರಡು ಜನ ಬ್ರಾಹ್ಮಣರಿಗೆ ಒಂದು ವರ್ಷಕ್ಕೆ (ನಾಲ್ವತ್ತಜಲು ಒರವೆಯಕ್ಕಿಯ ಮೂಡೆ ಹತ್ತಜಿ ಮರ್ಯಾದೆಯ) ನೂರುಯಿಪ್ಪತ್ತು (120) ಮೂಡೆ ಅಕ್ಕಿಯನ್ನು ದಾನವಾಗಿ ನೀಡಲಾಗಿದೆ. ಈ ಅಕ್ಕಿಯನ್ನು ಯಾವ ಯಾವ ಭೂಮಿಯಿಂದ ಎಷ್ಟೆಷ್ಟು ಸಂಗ್ರಹಿಸಬೇಕೆಂಬ ವಿವರವಿದೆ. ಅಕ್ಕಿಯನ್ನು ಸಂಗ್ರಹಿಸುವ ಕೇಶವನ ಮಗ ಗೋವಿಂದನ ಜೀವಿತಕ್ಕೂ ದಾನ ನೀಡಿದೆ. ಪ್ರತಿವರ್ಷವೂ ಬಾನಗೇಡು, ಬಜಗೇಡು ನಷ್ಟರುಷ್ಟಿಯೆಂದು ಕಾರಣ ಹೇಳದೆ ನಡೆಸಿಕೊಂಡು ಬರುವುದು. ಊರಮಧ್ಯದಲ್ಲಿರುವ ವಿಷ್ಣುಮೂರ್ತಿಯ ಅಮೃತಪಡಿಗೆ ಮತ್ತು ಪಂಚಲಿಂಗದೇವರ ನಂದಾದೀಪ್ತಿಯನ್ನು ನಡೆಸಿಕೊಂಡು ಬರುವುದಕ್ಕಾಗಿ ಯಿಪ್ಪತ್ತು ಮೂಡೆ ಅಕ್ಕಿಯನ್ನು, ಯಿಪ್ಪತ್ತೆಯೆಂಟು ಹೊನ್ನನ್ನು ದಾನವಾಗಿ ನೀಡಿ ಆಚಂದ್ರಾರ್ಕಸ್ಥಾಯಿಯಾಗಿ ನಡೆಸಿಕೊಂಡು ಬರುವಂತೆ ಹೇಳಿದೆ. ಈ ಧರ್ಮ ನಡೆಸಲು ಏನಾದರೂ ತೊಂದರೆಯಾದಲ್ಲಿ ಕೋಟಕರೆಯ ಸೆಟ್ಟಿಕಾರರು ಪರಿಹರಿಸಿಕೊಡುವರು ಎಂದು ಹೇಳಿ ಅವರು ತೆಗೆದುಕೊಳ್ಳಬೇಕಾದ ಜವಾಬ್ದಾರಿಯನ್ನು ಉಲ್ಲೇಖಿಸಿದೆ ಮತ್ತು ಊರಿನ ಹಲವು ಸೆಟ್ಟಿಕಾರರ ಒಪ್ಪದ

ಜೊತೆಗೆ ಮಾರ್ಕಂಡೇಶ್ವರ ದೇವರ ಸಾಕ್ಷಿಯಾಗಿ ಮತ್ತು ನಾಲ್ಕು ಗ್ರಾಮಗಳ ಒಪ್ಪವನ್ನು ದಾಖಲಿಸಿದೆ. (ಉಡುಪಿ–11) ಭಂಡಿಗಡಿ ಗ್ರಾಮದ ಗೋಣಿಮರದ ಬುಡದಲ್ಲಿರುವ ಕ್ರಿ.ಶ. 1427ರ ಶಾಸನವು ವೀರಪ್ರತಾಪ ದೇವರಾಯನು ವಿಜಯನಗರವನ್ನು ಆಳ್ವಿಕೆ ಮಾಡುತ್ತಿದ್ದಾಗ ಸಿರಿಗಿರಿನಾಥ ಒಡೆಯ ಅರಗದ ರಾಜ್ಯವನ್ನು ಪಾಲಿಸುತ್ತಿದ್ದಾಗ ಅರಗದ ವೇಂಠೆಯ ಸಾಂತಳಿಗೆ ನಾಡಿನ ಸಿರಿಯಮ್ಮ ಹೆಗ್ಗಡೆ, ಬೊಮ್ಮಣ್ಣ ಹೆಗ್ಗಡೆ, ಒಡಲನಾಗಪ್ಪಹೆಗ್ಗಡೆ, ಆತನ ಅಳಿಯ ಬೋವ, ಆದಿ ನಾಗಣ್ಣ ಹೆಗ್ಗಡೆ, ಈರಣ್ಣ ಹೆಗ್ಗಡೆ, ಅಕ್ಕಮ್ಮ ಹೆಗ್ಗಡತಿಯ ಬೊಮ್ಮಣ್ಣ ಹೆಗ್ಗಡೆ ಮತ್ತು ಸಮಸ್ತ ನಾಡವರು ಸೇರಿಕೊಂಡು ಹೆಬ್ಬರಡಿಯ ಹರಿಯಕ್ಕ ನಾಯಕಿತ್ತಿಗೆ ಮರಂವಳ್ಳಿಯ ಭೂಮಿಯನ್ನು ಕ್ರಯ ದಾನವಾಗಿ ನೀಡಿದರು. ಈ ಕ್ರಯದಾನವಾಗಿ ನೀಡಿದ ಭೂಮಿಯ ಮೇರೆಗಳನ್ನು ವಿವರವಾಗಿ ಸೂಚಿಸಿದೆ. ಈ ಭೂಮಿಗೆ ಎಂಬತ್ತೈದು ಹೊನ್ನನ್ನು ಪಡೆದ ವಿವರವಿದೆ. ಕ್ರಯದಾನ ಪಡೆದ ಹರಿಯಕ್ಕ ನಾಯಕಿತ್ತಿಯು ಅಮರೇಶ್ವರತೀರ್ಥ ಶ್ರೀಪಾದಂಗಳಿಗೆ ನಾನು ಎರಡುಕೊಳ ಬಲಿ ಮುಂದಿಟ್ಟು ಛತ್ರವ ಮಾಡಿಸಲೆಂದು ಮೂವತ್ತು ಸಲಗೆ ಭೂಮಿಯೆಲ್ಲವನ್ನು ನಿಮ್ಮ ವಶಕ್ಕೆ ಕೊಡುತ್ತಿದ್ದೇನೆ. ನೀವು ನಿಮ್ಮ ಮಠದ ಒತ್ತಿನಲ್ಲಿ ಛತ್ರವನ್ನು ಮಾಡಿ 'ದಿನವೊಂದಕ್ಕೆ ಮಠದ ಯತಿಯೊಬ್ಬರಿಗೆ, ಪರದೇಶಿ ನಾಲ್ಕು ಜನ ಬ್ರಾಹ್ಮಣರಿಗೆ, ಅಡಿಗೆ ಮಾಡುವ ಜನ ಇಬ್ಬರಿಗೆ' ಹೀಗೆ ಒಟ್ಟು ಏಳು ಜನರಿಗೆ ಛತ್ರ ನಡೆಸುವಂತೆ ಸ್ವಂತ ಇಚ್ಛೆಯಿಂದ ಬರೆದು ಕೊಟ್ಟ ದಾನಕ್ಕೆ ಸಾಕ್ಷಿಗಳಾಗಿ ಏಳು ಜನರ ಸಾಕ್ಷಿಗಳ ಒಪ್ಪವಿದೆ. ಶಾಸನದಲ್ಲಿ ಶ್ರೀಭೈರವ, ಶ್ರೀನರಸಿಂಹ, ಶ್ರೀಪ್ರಸನ್ನವಿಶ್ವೇಶ್ವರ, ಶ್ರೀಬನದಶಂಕರಿ, ಶ್ರೀಕೊಂತಿದೇವಿ, ಶ್ರೀಮಲ್ಲಿಕಾರ್ಜುನದೇವ, ಶ್ರೀಬ್ರಹ್ಮದೇವರನ್ನು ಸ್ಮರಿಸಲಾಗಿದೆ. (ಕೊಪ್ಪ–32)

ಕಬ್ಬಾಳು ಗ್ರಾಮದ ಕಬ್ಬಾಳಮ್ಮನ ಗುಡಿಯ ಬಳಿ ಇರುವ ವೀರಗಲ್ಲು ಕ್ರಿ.ಶ. 1429ರ ಶಾಸನ ವೀರಪ್ರತಾಪ ದೇವರಾಯನ ಅರಮನೆಯ ಚಿನ್ನ ಭಂಡಾರದ ಅಡ್ಡುಕದ ಸಮಯ ಚಕ್ರವರ್ತಿ ನಖರಾಚಾರಿಯ ಮಕ್ಕಳು ಮಲಪಾಚಾರಿ, ಏತಿರಾಯಾಚಾರಿಯರು ಕೆಳಲೆಯನಾಡಿನ ಮುಖ್ಯವಾದ ಚಿಣ್ಣಾಚಾರಿಯ ಮಗ ಮೂಲೋಚ್ಚಗರಚ್ಚ ಚಿಕ್ಕಮಳೂರ ದೇವೋಜ, ಹಿರಿಯಮಳೂರ ವಿರುಪೋಜ, ಬಲ್ಲೋಜ, ಕೂಡಲೂರ ಮಾಯೋಜ, ಪೆರುಗಾಳ ಮಲ್ಲೋಜ, ಬುಚೋಜ, ಸೂಳೇರಿಯ ಅಂಕೋಜ, ಹಡಬಳ್ಳಿಯ ದೊಂದೋಜ, ನಿಟ್ಟೂರ ಬೊಂಮೋಜ ಮೊದಲಾದ ಸಮಸ್ತ ವೀರಪಂಚಾಳರು ಸೇರಿ 'ಪೆರುಗಾಳ ಮಲ್ಲೋಜ ಮತ್ತು ಬಯಿರೋಜರಿಗೆ' ಸಂವತೇರಹಳ್ಳಿ ಸರಮಹಳ್ಳಿ ಹಿರಿಯೂರ ಬಡಿಗೆ ಕಂದುಜಿಕೆ ಅಕಸಾಲಿಕೆ ಪಂಚಾಳ ಕೊಲವರ್ತನೆ ಬೇಡಿಗೆಯೇನುಳವನು ಸರ್ವಮಾನ್ಯವಾಗಿ ಚಂದ್ರಸೂರ್ಯನುಳ್ಳನಕ ನಡೆಸಿಕೊಂಡು ಬರುವಂತೆ ಹೇಳಿದೆ. ಇದು ವೀರಗಲ್ಲು ಶಾಸನವಾದರು ವೀರರಿಗೆ ಸಂಬಂಧಿಸಿದ ಯಾವ ವಿಷಯವೂ ಕಾಣಬರುವುದಿಲ್ಲ. ಆದರೆ ವಿಶ್ವಕರ್ಮ ಸಮಾಜದ ಸಮುದಾಯಕ್ಕೆ ದಾನ ನೀಡಿದ ವಿವರವನ್ನು ಉಲ್ಲೇಖಿಸಲಾಗಿದೆ. (ಕನಕಪುರ–43) ಮೂಡಬಿದ್ರೆ ಹೊಸಬಸ್ತಿಯ ಗದ್ದಿಗೆ ಮಂಟಪದ ಕ್ರಿ.ಶ. 1430ರ ಶಾಸನವು ಪ್ರೌಢದೇವರಾಯನ ಆಳ್ವಿಕೆಯಲ್ಲಿ ಆತನ ಪ್ರಧಾನಿ ಪೆರುಮಾಳದೇವ ದಣ್ಣಾಯಕನು ಸಮಸ್ತ ರಾಜ್ಯವನ್ನು ಪ್ರತಿಪಾಲಿಸುತ್ತಿದ್ದಾಗ ಮಂಗಳೂರ ರಾಜ್ಯವನ್ನು ನಾಗಮಂಗಲದ ದೇವರಾಜೊಡೆಯನು ಆಳುತ್ತಿದ್ದ. ಆಗ ಪ್ರೌಢದೇವರಾಯನ ನಿರೂಪದಿಂದ ಅಭಿನವ ಚಾರುಕೀರ್ತಿಪಂಡಿತ ದೇವರುಗಳ ಪ್ರಿಯಶಿಷ್ಯರಾದ ವೇಣುಪುರದ ಯೆಂಟುಪ್ರಜೆ ಸೆಟ್ಟಿಕಾರರು ಮತ್ತು ಹಲವು ಸಮಸ್ತರು ಸೇರಿ ತ್ರಿಭುವನ ಚೂಡಾಮಣಿಯೆಂಬ ಚೈತ್ಯಾಲಯವನ್ನು ನಿರ್ಮಿಸುತ್ತಾರೆ. ಅರಸನ ಅಪ್ಪಣೆಯಂತೆ ಚೈತ್ಯಾಲಯದ ನಿರ್ಮಾಣಕ್ಕಾಗಿ ಭೂಮಿಯನ್ನು ನೀಡುವುದರ ಜೊತೆ ಎಲ್ಲ ರೀತಿಯ ಸಹಕಾರವನ್ನು ನೀಡುತ್ತಾರೆ. ಚೈತ್ಯಾಲಯದ ವಿವಿಧ ಭಾಗಗಳ ಹೆಸರುಗಳನ್ನು ಉಲ್ಲೇಖಿಸಿ ಅವುಗಳ ಚೆಲುವಿಕೆಯನ್ನು ಶಾಸನ ವರ್ಣಿಸಿದೆ. ಬಿದಿರೆಯ ಹಲವರು ಸೇರಿ ಚಂದ್ರಪ್ರಭ ತೀರ್ಥಂಕರನ ದಿವ್ಯಮೂರ್ತಿಯನ್ನು ಕಂಚಿನಿಂದ ದಶತಾಳ ಲಕ್ಷಣದಿಂದ ಮಾಡಿಸಿದ ಉಲ್ಲೇಖವಿದೆ. (ಕಾರ್ಕಳ–51).

ಇದೇ ಸ್ಥಳದ ಮತ್ತು ಇದೇ ಕಾಲದ ಶಾಸನವು ಪ್ರೌಢದೇವರಾಯನ ಆಜ್ಞಾಧಾರಕನಾದ ಗಣಪಣ್ಣೊಡೆಯ ಮಂಗಳೂರು ರಾಜ್ಯವನ್ನು ಆಳುತ್ತಿರುವಾಗ ತ್ರಿಭುವನ ಚೂಡಾಮಣಿ ಚೈತ್ಯಾಲಯದ ಮುಖಮಂಟಪವನ್ನು ಅತಿ ಆಶ್ಚರ್ಯಕರವೆನ್ನುವಂತೆ ಅಲ್ಲಿಯ ಭವ್ಯಜನರು ಮಾಡಿಸುತ್ತಾರೆ. ಅಲ್ಲಿಯ ಕಕ್ಕೆದೇವರುಸೆಟ್ಟಿಯಾದ ಚಳಸೆಟ್ಟಿಗೆ ಭಾಗ ಒಂದು ಸೇವಾಪತಿಗೆ ಎರಡು ಭಾಗ ಇತರ ಎಂಟು ಸೆಟ್ಟಿಯರಿಗೆ ಭಾಗ ಒಂದರಂತೆ ಎಂಬುದನ್ನು ಮಾತ್ರ ಹೇಳಿದೆ. ಆದರೆ ಯಾವ ಕಾರಣಕ್ಕೆ ಈ ಭಾಗಗಳನ್ನು ದಾನವಾಗಿ ನೀಡಿದರು ಎಂಬ ವಿಷಯದ ಬಗ್ಗೆ ಶಾಸನ ಮೌನವಾಗಿದೆ. (ಕಾರ್ಕಳ–52) ಇದೇ ಕಾಲದ, ಸ್ಥಳದ ಮತ್ತು ಇದೇ ಅರಸನ ಆಳ್ವಿಕೆಯು ಮುಂದುವರಿದಂತೆ ಕಾಣಬರುವ ಈ ಶಾಸನದಲ್ಲಿ ತುಳುನಾಡ ವರ್ಣನೆಯ ಜೊತೆಗೆ ತುಳುದೇಶಕ್ಕೆ ವಿಶಿಷ್ಟವಾದ ನಗರ ಶ್ರೀ ವೇಣುಪುರವು ಜಿನಧರ್ಮ ಮಾರ್ಗಕರಿಂದ, ಸತ್ಪಾತ್ರರಾದ ದಾನಿಗಳಿಂದ, ಜಿನಕಥಾ ಪರಿಣಿತಸಾಧು ಸಂಕುಳರಿಂದ ಅದನ್ನು ಕೇಳುವ ಸತ್ಪುರುಷರಿಂದ ಕೂಡಿರುವ ವೇಣುಪುರದ ವರ್ಣನೆಯನ್ನು ವಿಶೇಷವಾಗಿ ಹೊಗಳಿದೆ. ವೇಣುಪುರದ ಮಹಾಜನಗಳ ಗುರು ಅಭಿನವ ಚಾರುಕೀರ್ತಿ ಪಂಡಿತರನ್ನು ಸಹ ವಿಶೇಷವಾಗಿ ಹೊಗಳಿದೆ. ಇವರ ಪ್ರಿಯ ಶಿಷ್ಯ ಬಿದಿರೆಯ ನಗರದ ಯೆಂಟು ಪ್ರಜೆಸೆಟ್ಟಿಕಾರರು ಮತ್ತು ಅಲ್ಲಿಯ ಸಮಸ್ತರು ಸೇರಿ ಕಟ್ಟಿಸಿದ ತ್ರಿಭುವನ ಚೂಡಾಮಣಿಯೆಂಬ ಮಹಾ ಚೈತ್ಯಾಲಯವನ್ನು ಮಾಡಿಸಿದ್ದನ್ನು ಅದರ ಚೆಲುವಿನ ಹೆಗ್ಗಳಿಕೆಯನ್ನು ಮತ್ತು ಚಂದ್ರಪ್ರಭ ತೀರ್ಥಂಕರರ ಕಂಚಿನ ವಿಗ್ರಹವನ್ನು ಮಾಡಿಸಿ ಪ್ರತಿಷ್ಠೆಯನ್ನು ಮಾಡಿ ನಗಿರ ರಾಜ್ಯದ ಚಲುವಿಕೆಯನ್ನು ವರ್ಣನೆ ಮಾಡಲಾಗಿದೆ. ಅಲ್ಲಿನ ಭವ್ಯಜನಗಳು ಜಿನನನ್ನು ಪೂಜಿಸುತ್ತಾ ಕೃತಾರ್ಥರಾಗಿದ್ದರು ಎಂದಿದೆ. ಈ ಗೇರುಸೊಪ್ಪೆ ರಾಜ್ಯವನ್ನು ಆಳುತ್ತಿದ್ದ ಭೈರವರಸನು ಎಲ್ಲರೂ ಮೆಚ್ಚುವಂತೆ ರಾಜ್ಯವಾಳುತ್ತಿದ್ದ. ಶಾಸನ ಭೈರವರಸನ ವಂಶಾವಳಿಯನ್ನು ಆತನ ರಾಣಿಯರಾದ ಮಾಣಿಕಮಹಾದೇವಿ ಮತ್ತು ನಾಗಲದೇವಿಯರ ಬಗ್ಗೆಯೂ ವಿವರ ನೀಡಿದೆ. ಭೈರವರಸನು ರಾಜ್ಯದ ಅನೇಕ ಕಡೆ ಬಸದಿಗಳನ್ನು ನಿರ್ಮಿಸಿ ಪೂಜಾ ಕೈಂಕರ್ಯಕ್ಕೆ ಏರ್ಪಾಡು ಮಾಡಿದ್ದ. ತ್ರಿಭುವನ ಚೂಡಾಮಣಿ ಚೈತ್ಯಾಲಯದ ಶಿಖರಕ್ಕೆ ತಾಮ್ರದ ಹೊದಿಕೆ ಮಾಡಿಸಿದ್ದನ್ನು, ಪಂಚಾಮೃತ ಅಭಿಷೇಕ ಮಾಡಿಸಿ, ಬೆಳ್ಳಿಯ ಕಳಸ, ಕುಂಭಗಳನ್ನು ದೀವಿಗೆಗಳನ್ನು, ಪೀಠ ಮತ್ತು ಹಲವು ವಿಧದ ಬಟ್ಟಲುಗಳನ್ನು, ಗಿಂಡಿಯನ್ನು ಮಾಡಿಸಿ ದಾನವಾಗಿ ನೀಡಿದ್ದಾನೆ. ತ್ರಿಕಾಲದಲ್ಲಿ ನಡೆಯುವ ಬಲಿದಾನದ ಪೂಜೆಗೂ ಏರ್ಪಾಟು ಮಾಡಿದ್ದನು. ಆತನ ರಾಣಿ ನಾಗಲದೇವಿಯೂ ಬಸದಿಯ ಮುಂದೆ ಮಾನಸ್ತಂಭವನ್ನು ಮಾಡಿಸಿದ್ದನ್ನು ಅವರ ಮಕ್ಕಳಾದ ಲಕ್ಷ್ಮಿ ಮತ್ತು ಪಂಡಿತದೇವಿಯರು ಬಸದಿಯಲ್ಲಿನ ನಿತ್ಯದ ಆಹಾರದಾನಕ್ಕೆ ದಾನ ನೀಡಿದ್ದನ್ನು ಉಲ್ಲೇಖಿಸಿದೆ. (ಕಾರ್ಕಳ–53)

ಅಂದವಳ್ಳಿಯ ಶೃಂಗೇರಿ ಮಠದಲ್ಲಿರುವ ಕ್ರಿ.ಶ. 1430ರ ಶಾಸನದ ಪ್ರತಿಯಲ್ಲಿ ವೀರಪ್ರತಾಪ ದೇವರಾಯನು ವಿಜಯನಗರ ಸಾಮ್ರಾಜ್ಯವನ್ನು ಧರ್ಮದಿಂದ ಪಾಲಿಸುತ್ತಿರುವಾಗ ಆತನ ಪಾದಪದ್ಮೋಪಜೀವಿಯಾದ ಅರಸಪ್ಪವೊಡೆಯನ ಕುಮಾರ ಹಂಪೆರಾಯನು ಗೋವಗುತ್ತಿಯನ್ನು ಆಳುತ್ತಿದ್ದನು. ಅರಸ ದೇವರಾಯಮಹಾರಾಯನು 'ಹಂಪೆಯ ಕಲ್ಲುಮಠದಲ್ಲಿದ್ದ ವಿಶ್ವೇಶ್ವರಾರಣ್ಯ ಶ್ರೀಪಾದಂಗಳಿಗೂ ಅವರ ಮಠದಲ್ಲಿದ್ದ ವಿದ್ಯಾಶಂಕರ ದೇವರ ಅಮೃತಪಡಿಗೆ, ನಂದಾದೀಪ್ತಿಗೆ, ಯತಿಗಳ ಆಹಾರಕ್ಕಾಗಿ (ಬಿಕ್ಷಾಸ್ವಾಸ್ತಿಗೆ) ಬನವಸೆಯ ಪನ್ನಿರ್ಚ್ಛಾಸಿರಕೆ ಸಲ್ಲುವ ಚಂದ್ರಗುತ್ತಿಯ ವೇಂಟ್ಯದ ಚಿನಮಹಳ್ಳಿಯ ನಾಡೊಳಗಿನ ಅಂದವಳ್ಳಿಯ ಗ್ರಾಮವನ್ನು ವಿಶ್ವೇಶ್ವರಾರಣ್ಯಪುರವನ್ನಾಗಿಸಿ ಕುಳವ ಕಡಿದು ನಾಡಿಗೆ ಉತ್ತಾರ ಕೊಟ್ಟು ಕುಮಾರ ಹಂಪೆರಾಯನ್ನು ಕರೆಸಿ ಗೋವೆಗುತ್ತಿಯ ಕರಣಿಕರಿಂದ ಶಾಸನವನ್ನು ಬರೆಸಿ ವಿಶ್ವೇಶ್ವರಾರಣ್ಯ ಶ್ರೀಪಾದಂಗಳಿಗೆ ಧಾರೆಯನೆರೆದು ಕೊಡುತ್ತಾನೆ. ದಾನಮೂಲದ ವಿವರದ ಜೊತೆ ಆ ಗ್ರಾಮದಿಂದ ಉತ್ಪತ್ತಿಯಾಗುವ ತೆರಿಗೆ ನಲವತ್ತೇಳುವರೆ ಹಣವನ್ನು (47½) ಮನ್ನಾಮಾಡಿ ದಾನ ನೀಡಿದ ವಿವರವಿದೆ. (ಶೃಂಗೇರಿ–54) ಮರಗಲ್ಲು ಗ್ರಾಮದ ಊರಬಾಗಿಲಲ್ಲಿರುವ ಕ್ರಿ.ಶ. 1430ರ ಶಾಸನವು ವೀರವಿಜಯ ಮಹಾರಾಯರ

ಕುಮಾರ ದೇವರಾಯನು ಆಳ್ವಿಕೆ ಮಾಡುತ್ತಿರುವಾಗ ಲಕ್ಕಣ್ಣವೊಡೆಯನು ಆಳುತ್ತಿದ್ದ ಮುಳಬಾಗಿಲು ರಾಜ್ಯದ ತೇಕಲನಾಡ ಜುಂಜಿರುಗಣಗಳಿಗೆ ಸಲ್ಲುವ ಮರಗಳಲು(ಮರಗಲ್ಲು) ಗ್ರಾಮದ ಹಲವು ಪಾಂಚಾಳರು ಸೇರಿ ಸಂತೆಯನ್ನು ಕಟ್ಟಿಸಿದರು. ಆ ಸಂಬಂಧದಲ್ಲಿ ಆ ಸಂತೆಯ ಪಟ್ಟಣಸಾಮಿ ಚಿಯಿಯಬಸ್ಸಿಸೆಟ್ಟಿಗೆ ಭೂಮಿಯನ್ನು ಹಾಗೂ ಕೆಲವು ತೆರಿಗೆಗಳನ್ನು ಮಾನ್ಯಮಾಡಿ ದಾನ ಕೊಡಲಾಗಿದೆ. ಸಂತೆಯಲ್ಲಿ ಕೊತ್ತು ಯೆತ್ತು ತೊತ್ತು ಕುದುರೆ ಕೊಂಡರೂ ಮಾರಿದರೂ, ಕಬ್ಬಿಣದ ಕೆಲಸ, ಮರಕೆಲಸ, ಅಕ್ಕಸಾಲೆ, ಅಸಗ (ಅಗಸ), ನಾವಿಂದ, ಹೊಲೆಯನು ಇವರೆಲ್ಲಾ ಮಾನ್ಯವನ್ನು ಸಲ್ಲಿಸುವರು. ಈ ಶಾಸನ ಮರ್ಯಾದೆಗೆ ತಪ್ಪಿದವರಿಗೆಂದು ಶಾಪಾಶಯ ಹೇಳಿದೆ. (ಬಂಗಾರಪೇಟೆ–57)

ಬಾರಕೂರಿನ ಚೌಳಿಕೇರಿಯ ಗಣಪತಿ ಗುಡಿಯಲ್ಲಿರುವ ಕ್ರಿ.ಶ. 1430ರ ಶಾಸನವು ವೀರಪ್ರತಾಪ ದೇವರಾಯ ಮಹಾರಾಯ ವಿಜಯನಗರದಲ್ಲಿ ಆಳ್ವಿಕೆ ಮಾಡುತ್ತಿರುವಾಗ, ಮಹಾಪ್ರಧಾನಿ ಚಂಡರಸವೊಡೆಯನು ಬಾರಕೂರು ತುಳುರಾಜ್ಯವನ್ನು ಆಳುತ್ತಿದ್ದ. ಆಗ ಬಾರಕೂರು ಪಟ್ಟಣದ ಹತ್ತು ಕೇರಿಯೊಳಗಿನ ಚೌಳಿಯಕೇರಿ, ಮೂಜುಕೇರಿಯವರೊಳಗೆ ವ್ಯಾಪಾರದ ವ್ಯವಹಾರದ ವಹಿವಾಟಿನಲ್ಲಿ ಭಿನ್ನಾಭಿಪ್ರಾಯದಿಂದ ಮನಸ್ತಾಪ ಉಂಟಾಗುತ್ತದೆ. ಆಗ ಚಂಡರಸವೊಡೆಯನು ಈ ಎರಡೂ ಕೇರಿಯ ಮುಖಂಡರನ್ನು ಕರೆಸಿ ವ್ಯಾಪಾರದ ಕಟ್ಟಳೆಯನ್ನು ಮಾಡಿದ ವಿವರ ಹೀಗಿದೆ. ಘಟ್ಟದ ಮೇಲಿನ ಹಾದಿಯ ವ್ಯಾಪಾರದಿಂದ ಬಂದಂತಹ ಅಕ್ಕಿ, ಗೋದಿ, ಕಡಲೆ, ಉದ್ದು, ಹೆಸರು, ಎಳ್ಳು, ಕಬ್ಬು, ನಜಬಲ್ಲಿಯ ಶುಂಠಿ, ತುಪ್ಪ, ಬೆಲ್ಲ, ಇತರ ಸಾಂಬಾರ ಪದಾರ್ಥಗಳು, ದ್ವಿದಳ ದಾನ್ಯದ ಹೊರೆ, ತಲೆಹೊರೆಯಲ್ಲಿ ಬಂದಂತ ಸಾಮಾನುಗಳನ್ನು ಎರಡೂ ಕೇರಿಯವರು ಸಮನಾಗಿ ಹಂಚಿಕೊಂಡು ತಮ್ಮ ತಮ್ಮ ಕೇರಿಯಲ್ಲಿ ವ್ಯಾಪಾರ ಮಾಡತಕ್ಕದ್ದು. ಎರಡನೆಯದಾಗಿ, ಸಕ್ಕರೆ ವ್ಯಾಪಾರಕ್ಕೆ ಸಂಬಂಧಿಸಿದಂತೆ ಘಟ್ಟದ ಮೇಲಿಂದ ಚೌಳಿಕೇರಿಯವರು, ಮೂಜುಕೇರಿಯವರು ಹಾಗೂ ಇತರೆ ದೇಶದ ವ್ಯಾಪಾರಿಗಳು ತಂದ ಸಕ್ಕರೆಯನ್ನು ಎರಡೂ ಕೇರಿಯವರು ಸೇರಿ ಗಾಣಗೊಟ್ಟಗೆಯ ಜಾಗದಲ್ಲಿ ಬಡಗದ ಬಾಗಿಲಿರಿಸಿ ಕಟ್ಟಿಸಿದ ಮಳಿಗೆಯಲ್ಲಿ ಸಕ್ಕರೆಯನ್ನು ದಾಸ್ತಾನು ಮಾಡುವುದು. ಮಾರುವ ಸಂದರ್ಭದಲ್ಲಿ ಎರಡೂ ಕೇರಿಯವರೂ ಸೇರಿ ಬೆಲೆಯನ್ನು ನಿರ್ಧರಿಸಿ ಮಾರಬೇಕು. ಮಾರಾಟವಾಗದೆ ಉಳಿದ ಸಕ್ಕರೆಯನ್ನು ತಮ್ಮ ಕೇರಿಗಳಿಗೆ ತೆಗೆದುಕೊಂಡು ಹೋಗದೆ ದಾಸ್ತಾನು ಮಳಿಗೆಯಲ್ಲಿ ಸಂಗ್ರಹಿಸಿಟ್ಟು ಬೆಲೆ ಹೆಚ್ಚಳವಾದಾಗ ಕೊಳ್ಳಲು ಬಂದ ಗ್ರಾಹಕರಿಗೆ ಮಾರುವುದು. ಸಕ್ಕರೆ ಹೇಜೆಂದ ಯೆತ್ತಿಬಂದಂಥಾ ಹಣದಿಂದ ದೇವಣಪತ್ತಿಗ ದೇವರಾಯಗೂ, ಚೌಳಿಯಕೇರಿಯ ವಿನಾಯಕದೇವರಿಗೂ, ಮೂಜುಕೇರಿಯ ಸೌಮ್ಯದೇವರಿಗೂ ಸರಿಯಾಗಿ ಸಂದುಬಹುದು ಎಂದಿದೆ. ನೂಲಿನ ಸೀರೆಯ ವ್ಯಾಪಾರವು ಮೂಜುಕೇರಿಯವರಿಗೆ ಮಾತ್ರ ಸಲ್ಲುತ್ತದೆ, ಉಳಿದ ಎಲ್ಲಾ ವ್ಯಾಪಾರವೂ ಮೇಲೆ ಹೇಳಿದ ಎರಡೂ ಕೇರಿಯವರಿಗೂ ಸಲ್ಲುತ್ತದೆ. ಈ ವ್ಯಾಪಾರದ ವಿಷಯದಲ್ಲಿ ಎರಡೂ ಕೇರಿಯವರ ನಡುವೆ ಜಗಳವಾದರೆ ಆಯುಧ ಹಿಡಿದು ಹೋರಾಡದೆ ಧರ್ಮದ ಹೆಸರಿನಲ್ಲಿ ಬಗೆಹರಿಸಿಕೊಳ್ಳುತ್ತೇವೆ ಎಂಬ ಒಡಂಬಡಿಕೆಯನ್ನು ಮತ್ತು ಈ ಕಟ್ಟಳೆಗೆ ತಪ್ಪಿ ನಡೆದರೆ ಅರಮನೆಗೆ ಹನ್ನೆರಡುಸಾವಿರ ಹೊನ್ನನ್ನೂ ತಪ್ಪು ವರಹವಾಗಿ ಕೊಡುವೆವು. ಮತ್ತು ವಾರಣಾಸಿಯ ಗಂಗೆಯಲೂ ಶ್ರೀ ವಿಶ್ವನಾಥದೇವರ ಸನ್ನಿಧಿಯಲ್ಲಿ ಸೋಮ ಸೂರ್ಯ ಗ್ರಹಣದಲ್ಲಿ ಸಹಸ್ರ ಸಂಖ್ಯೆಯ ಬ್ರಾಹ್ಮಣರನ್ನೂ, ಗೋವುಗಳನ್ನೂ ವಧಿಸಿದ ಹಾಗೂ ಕೊಡಳಿಯ ಶಂಕರನಾರಾಯಣದೇವರ ಲಿಂಗವ ಕಿತ್ತ ದೋಷಕ್ಕೆ ಹೋಗುವೆವು ಎಂದೂ ಅವರು ತಮ್ಮೊಳಗೆ ಐಕ್ಯಮತದಿಂದ ಬರೆದುಕೊಟ್ಟ ಅಪರೂಪದ ಶಾಸನವಾಗಿದೆ. ಈ ಶಾಸನದಿಂದ ವ್ಯಾಪಾರಿಗಳಿಗೆ ಸಿಗುತ್ತಿದ್ದ ಪ್ರೋತ್ಸಾಹ, ಅವರು ನಡೆದುಕೊಳ್ಳಬೇಕಾಗಿದ್ದ ರೀತಿನೀತಿ ಮತ್ತು ಅವರುಗಳ ನಡುವೆ ಉಂಟಾಗುತ್ತಿದ್ದ ಮನಸ್ತಾಪ, ತಪ್ಪು ಮಾಡಿದರೆ ತೆರಬೇಕಾಗಿದ್ದ ದಂಡ ಇತ್ಯಾದಿ ವಿವರಗಳ ಬಗ್ಗೆ ಈ ಶಾಸನದಿಂದ ಮಾಹಿತಿ ದೊರೆಯುತ್ತದೆ. (ಉಡುಪಿ–60)

ಕೂಡ್ಲಿಯ ಕ್ರಿ.ಶ. 1431ರ ಶಾಸನವು ಪ್ರತಾಪದೇವರಾಯನು ವಿಜಯನಗರದಲ್ಲಿ ಆಳ್ವಿಕೆ ಮಾಡುತ್ತಿರುವಾಗ ಅವನ ಮನೆಯ ಮಹಾಪ್ರಧಾನಿ ಬೈಚಪ್ಪ ದಂಡನಾಯಕನ ಮಗ ರಾಯಣ್ಣೊಡೆಯನು ಆರಗ ರಾಜ್ಯದ ಆನವೇರಿ ನಾಡಿನ ಹನಗವಾಡಿ ಬಾಗದ ಹೊಳೆಯಹೊನ್ನೂರು ನಾಡನ್ನು ಆಳುತ್ತಿದ್ದ. ಆಗ ಈತನು ತುಂಗಭದ್ರಾ ಸಂಗಮದ ದಕ್ಷಿಣ ವಾರಣಾಸಿ, ಮಹಾಪ್ರಯಾಗ, ಹರಿಹರವಾದ ಕೂಡಲಿಯ ಸಮಸ್ತ ದೇವತಾ ಸನ್ನಿಧಿಯಲ್ಲಿ ಶ್ರೀಮಹೇಶ್ವರ. ಶ್ರೀಲಕ್ಷೀನಾರಾಯಣ ದೇವರ ಪ್ರೀತ್ಯರ್ಥವಾಗಿ ಕೂಡಲಿಯಲ್ಲಿ ಛತ್ರವನ್ನು ನಿರ್ಮಿಸುತ್ತಾನೆ. ಆ ದಂಣ್ಣಾಯಕ ಪುರವನ್ನು ಸ್ರೋತ್ರಿಯವಾಗಿ 20 ವೃತ್ತಿಗಳನ್ನು ಮಾಡಿ ಕೂಡಲಿಯ ಮಹಾಜನರಿಗೆ ಕೊಡುತ್ತಾನೆ. ಈ ಕಾರ್ಯಕ್ಕೆ ಹೊಳೆಹೊನ್ನೂರಿನ ಸಮಸ್ತರು ಸೇರಿ ದಣ್ಣಾಯಕಪುರದ ಉತ್ಪತ್ತಿ ನಾಲ್ವತಮೂರು ಹೊನ್ನನ್ನು ದೇವಾಲಯಗಳಿಗೆ, ಛತ್ರಕ್ಕೆ ಸೇವೆಯನ್ನು ನಡೆಸುವವರಿಗೆ ವಂಶಪರಂಪರೆಯಾಗಿ ಅನುಭವಿಸುವಂತೆ ಹೇಳಿ ದಾನ ನೀಡಿದೆ. ದಾನ ನೀಡಿದ ಭೂಮಿಯ ವಿವರವನ್ನು ವಿಸ್ತಾರವಾಗಿ ಹೇಳಿದೆ. (ಶಿವಮೊಗ್ಗ-67) ಕೊಡಿಗೆಹಳ್ಳಿ ಆಂಜನೇಯ ದೇವಾಲಯದಲ್ಲಿನ ಕ್ರಿ.ಶ. 1431ರ ಶಾಸನವು ವಿಜಯರಾಯರ ಕುಮಾರ ದೇವರಾಯನು ವಿಜಯನಗರದಲ್ಲಿ ಆಳ್ವಿಕೆ ಮಾಡುತ್ತಿದ್ದಾಗ ಅವರ ನಿರೂಪದಿಂದ ಸಕನಸಮುದ್ರದ ಊರಮುಂದಿನ ಸೋಮೇಶ್ವರ ದೇವರ ನೈವೇದ್ಯಕ್ಕೆ ಅಂಗರಂಗಭೋಗಕ್ಕೆ ಮಹಾಪ್ರಧಾನಿ ಮಂಗಪ್ಪ ದಂಣಾಯಕರ ಮಕ್ಕಳು ಪ್ರತಾಪರಾಯನು ಭೂಮಿದಾನ ಮಾಡಿದ ವಿವರವಿದೆ. ಈ ಅಧಿಕಾರಿಯು ತನ್ನ ನಾಯಕತನಕ್ಕೆ ಕೊಟ್ಟಿದ್ದ ಶಿವನ ಸಮುದ್ರದ ಯಲಹಂಕನಾಡ ದೇವಸಮುದ್ರದ ಗ್ರಾಮದ ಕಾಲುವಳಿ ವಿರುಪಾಕ್ಷಪುರ ಗ್ರಾಮದ ಉತ್ಪತ್ತಿಯನ್ನು ಅರಸ ದೇವರಾಯ ಮಹಾರಾಯರ ಆಯುರಾರೋಗ್ಯ ಐಶ್ವರ್ಯ ವೃದ್ಧಿಯಾಗಲೆಂದು ಮತ್ತು ಈ ವಿರುಪಾಕ್ಷಪುರವನ್ನು ವಿಜಯದೇವರಾಯಪುರವೆಂದು ಪ್ರತಿನಾಮವನ್ನಿಟ್ಟು ದಾನ ನೀಡಿದೆ. ಆ ಭೂಮಿಯ ಉತ್ಪತ್ತಿಂದ ಬರುವ ಹಣದಿಂದ ಪಾತ್ರದ ಜನ, ನಟುವಜನ, ಮದ್ದಳೆಕಾರರು, ಸಿತಾರಜನ, ಉಪಾಂಗದಜನ, ಕಂಸಾಳೆಜನರಿಗೆ ಎರಡು ಹೊತ್ತು ಸೋಮೆಯದೇವರ ನೈವೇದ್ಯ ಅಂಗರಂಗಭೋಗ ನಡೆಸಲು ದೇವಸಮುದ್ರದ ಕೆರೆಯ ಕೆಳಗಿನ ಗದ್ದೆಯನ್ನು ದಾನ ನೀಡಿರುವುದನ್ನು ಉಲ್ಲೇಖಿಸಿದೆ. (ಬೆಂಗಳೂರು-74)

ಪೆರ್ದೂರು ಪಂಟ್ಯಾಲದ ಗರಡಿ ಕಂಬಳ ಗದ್ದೆ ಬಯಲಿನ ಕ್ರಿ.ಶ. 1431ರ ಶಾಸನವು ವೀರಪ್ರತಾಪದೇವರಾಯನು ವಿಜಯನಗರವನ್ನು ಆಳ್ವಿಕೆ ಮಾಡುತ್ತಿರುವಾಗ ಆತನ ಪ್ರಧಾನಿ ಚಂದಪ್ಪಗಳು ಬಾರಕೂರ ತುಳುರಾಜ್ಯವನ್ನು ಪ್ರತಿಪಾಲಿಸುತ್ತಿದ್ದನು. ಆಗ ಅರಸನ ನಿರೂಪದಿಂದ ಶೃಂಗೇರಿಯ ಶ್ರೀಮಠದಲ್ಲಿದ್ದ ಕೃಷ್ಣಭಟ್ಟನ ಮಗ ಕವಿ ಶಂಕರಭಟ್ಟನಿಗೆ ಕುರ್ದುನಾಡಿನ ಶಿವಪುರ ಗ್ರಾಮದಲ್ಲಿ ಎಂಬತ್ತು ಕಾಟಿ ಗದ್ಯಾಣ ಹೊನ್ನು ಬೆಲೆ ಬಾಳುವ ಭೂಮಿಯನ್ನು ನಿಮ್ಮ ಪುತ್ರ ಪೌತ್ರ ಪರಂಪರೆಯಲ್ಲಿ ಅಷ್ಟಭೋಗತೇಜಸ್ವಾಮ್ಯದಲ್ಲಿ ಆಚಂದ್ರಸ್ಥಾಯಿಯಾಗಿ ಅನುಭವಿಸಿಕೊಂಡು ಬರುವಂತೆ ಶಿವಪುರ ಗ್ರಾಮಸ್ಥರ ಸಮ್ಮುಖದಲ್ಲಿ ದಾನವನ್ನು ಕವಿಯೊಬ್ಬನಿಗೆ ದಾನಕೊಟ್ಟದ್ದನ್ನು ಮತ್ತು ದಾನ ಕೊಟ್ಟ ಭೂಮಿಯ ವಿವರವನ್ನು ಶಾಸನದಲ್ಲಿ ನೀಡಿದೆ. ಆದರೆ ಕವಿಯ ರಚನಾತ್ಮಕ ಕಾವ್ಯಗಳ ಬಗ್ಗೆ ಯಾವುದೇ ಮಾಹಿತಿಯ ಉಲ್ಲೇಖವಿಲ್ಲ. (ಉಡುಪಿ-77) ಬಾರಕೂರಿನ ಕೋಟೆಕೆರೆಯಲ್ಲಿನ ಶಾಸನ ಕ್ರಿ.ಶ. 1433ರಲ್ಲಿ ಇಮ್ಮಡಿ ದೇವರಾಯನ ಆಳ್ವಿಕೆಯಲ್ಲಿ ಅವನ ನಿರೂಪದಿಂದ ಮಹಾಪ್ರಧಾನಿ ಚಂಡರಸವೊಡೆಯ ಬಾರಕೂರನ್ನು ಆಳುತ್ತಿದ್ದ. ಕೋಟೆಕೆರೆಯ ಮಾರ್ಕಂಡೇಶ್ವರ ದೇವರ ಗುಡಿಯಲ್ಲಿ ಹಂಬತ್ತರ ಬಳಿಯ ಹೆಗ್ಗಡತಿಯ ಮಗ ಮಾದಣ್ಣಸೆಟ್ಟಿ ಮಾಡಿದ ಛತ್ರದ ಮಠದಲ್ಲಿ ಪ್ರತಿದಿನ ಊಟಮಾಡುವ ಹನ್ನೆರಡು ಜನ ಬ್ರಾಹ್ಮಣರಿಗೆ ಯಳಂದೂರಿನಿಂದ ಆ ಚತುಃಸೀಮೆಯ ನಡುವೆ ಇರುವ ಬೇರೆ ಬೇರೆ ಪ್ರದೇಶಗಳಲ್ಲಿ ದಾನ ನೀಡಿದ ಭೂಮಿಯ ಜಾಗದ ವಿವರವಿದೆ. ಆ ಗೇಣಿ ಭೂಮಿಗಳಿಂದ ಬರುವ ಒಟ್ಟು 120 ಅಕ್ಕಿ ಮೂಡೆಗಳನ್ನು ಧರ್ಮವಾಗಿ ಕೊಡಲಾಗಿದೆ. ಅಲ್ಲದೆ ಪಂಚಲಿಂಗ ದೇವರಿಗೆ ರುದ್ರಾಭಿಷೇಕ ಮಾಡುವ

ಹರಿತಗೋತ್ರದ ಯಜುಶಾಖೆಯ ಮಾಯಂಣುಪಾಧ್ಯರ ಮಗ ದೇವರಸನ ಮಕ್ಕಳು ಶಿಷ್ಯರಿಗೆ 10 ಮೂಡೆ ಅಕ್ಕಿಯನ್ನು ಪಾರಂಪರಿಕವಾಗಿ ಅನುಭವಿಸಿಕೊಂಡು ಬರುವಂತೆ ದಾನವಾಗಿ ನೀಡಿದೆ. ಏಕಾದಶಿಯ ದಿವಸ ಉಳಿಯುವ ಅಕ್ಕಿಯನ್ನು ಶನಿವಾರದ ದಿನ ಹನ್ನೆರಡು ಮಂದಿ ಬ್ರಾಹ್ಮಣರ ಊಟಕ್ಕೆ ವಿನಿಯೋಗಿಸುವಂತೆ ಮತ್ತು ಅವರಿಗೆ ಯೆಣ್ಣೆಯನ್ನು ತಪ್ಪದೆ ಕೊಡುವಂತೆ ಹೇಳಿದೆ. (ಉಡುಪಿ–104)

ಕಾಂತಾವರದಲ್ಲಿನ ಪಲಿಮಾರು ಮಠದ ಕಂಬದಲ್ಲಿನ ಕ್ರಿ.ಶ. 1433ರ ಶಾಸನ ವೀರಪ್ರತಾಪ ದೇವರಾಯ ಮಹಾರಾಯನ ನಿರೂಪದಿಂದ ದೇವರಾಜವೊಡೆಯ ಮಂಗಳೂರನ್ನು ಆಳುತ್ತಿರುವಾಗ ಆತನ ಪ್ರದಾನಿ ದೇವರ್ಸನು, ಬಿದಿರೆಯನ್ನು ಆಳುತ್ತಿದ್ದ ತಿಮ್ಮರ್ಸನೂ ಕಾಂತಾರದ ಬಡಗಣ ಮಠದ ರಾಜರಾಕೇಶ್ವರ ತೀರ್ಥ ಶ್ರೀಪಾದಂಗಳ ಬಿಕ್ಷಾಸ್ವಾಸ್ಥೆಗೆ ಕಾಂತಾರದ ನಾಡೊಳಗೆ ಸಾಲಿಯ ಬಳಿಯ ಕೆಲವು ಗದ್ದೆಯ ಭಾಗಗಳನ್ನು ದಾನವಾಗಿ ನೀಡುತ್ತಾರೆ. ಸುಳಿಕಾಂಡುವಿನ ಅಳಿಯ ಪೀಲುಮಠ ದೇವರುಸೆಟ್ಟಿಯ ಬ್ರಹ್ಮಾದಾಯ ಮೂಲದ ಭೂಮಿ, ವುಳ್ಳಿರಡಿಯಂಬ ಬೆಟ್ಟಿನ ಗದ್ದೆಗಳು, ಸಗರೆಯೆಂಬ ಬಾಗಿಲಗದ್ದೆ, ಬಿಯಲೊಳಗೆ ಪುಳೆಮರನೆಂಬ ಗದ್ದೆ, ವಿಕ್ರಾಂತವೆಂಬ ಗದ್ದೆ, ಕಳೆಯಿತಥೆ ಎಂಬ ಗದ್ದೆ, ಬಿಪ್ಪತಿಮರು ಎಂಬ ಗದ್ದೆಯ ಬೆಟ್ಟು ಬಿಯಲು ಬಿತ್ತುವ ಬಿಣೆಕಾರು ಮುಡಿತಾಡೆ ಒಟ್ಟು 30ರ ಲೆಕ್ಕದ ಮೂಡೆ ಹದಿನೇಳು ಮೂಡೆ ಗದ್ದೆ ಅದಕ್ಕೆ ಸಲ್ಲವ ಮನೆ ಬಾವಿ ತೋಟ ತೆಂಗಿನಮರ ಹಲಸಿನಮರ ಈ ಭೂಮಿಗೆ ಸಲ್ಲುವ ಕೆರೆ ಮೊರೆ ಇದಕ್ಕೆ ಸಲ್ಲುವ ಸಮುದಾಯ ಗಂ ತೊಂಬತ್ತೇಳುವರೆ ಕಂ ಸಿದ್ದಾಯ ಕಂದಾಯ 2 ಕಂ, 17 ಹೊನ್ನನ್ನು ರಾಜಶ್ರೀ ರಾಜೇಶ್ವರತೀರ್ಥ ಶ್ರೀಪಾದಂಗಳ ಭವ್ಯ ಸ್ವಾಸ್ಥೆಗೆ ಸಹಿರಂಣ್ಯೋದಕ ಧನ ಧಾರಾಪೂರ್ವಕವಾಗಿ ದಾನವಾಗಿ ಕೊಟ್ಟು ಇದಕ್ಕೆ ಕಾಂತಾರದ ಹದಿನಾರರ ಕಟ್ಟಳೆಯವರ ವಚನವೇ ಸಾಕ್ಷಿ ಎಂದಿರುವ ಈ ದಾನವನ್ನು ನೀಡಿರುವ ಅಧಿಕಾರಿಗಳಾದ ತಿಮ್ಮರಸ ಮತ್ತು ದೇವರಸರು ಶಾಸನವನ್ನು ಬರೆದಿರುವುದು ಒಂದು ವಿಶೇಷವಾಗಿದೆ. (ಕಾರ್ಕಳ–105)

ಬೈಲೂರಿನ ಮಾರ್ಕಂಡೇಶ್ವರ ಗುಡಿಯಲ್ಲಿನ ಕ್ರಿ.ಶ. 1433ರ ಶಾಸನ ದೇವರಾಯನ ಪ್ರಧಾನಿ ಪುರುಷೋತ್ತಮ ದೇವೊಡೆಯನು ಬಾರಕೂರ ರಾಜಧಾನಿಯಲ್ಲಿ ಆಳುತ್ತಿರುವಾಗ ಅವರ ಅಧಿಕಾರಿ ಸಂಣುನಾಯರು ಮತ್ತು ಬೈರೂರ ದೇಶದ ಸಮಸ್ತರು ಶ್ರೀಮಡಕೇಶ್ವರ ದೇವರಿಗೆ ದಾನ ನೀಡಿದರು. ಇದೇ ದೇವಾಲಯದಲ್ಲಿ ನಿತ್ಯ ಪುರಾಣ ನಡೆಸಲು ಸುರೇಶ್ವರ ಶ್ರೀಪಾದಂಗಳ ಮಠದಲ್ಲಿ ಸೋಣಿ ಮೂವತ್ತು ದಿನಗಳು ಪುರಾಣ ನಡೆಸಲು ಶ್ರೀಪಾದಂಗಳು, ದೇಶದ ಸಮಸ್ತರು, ಗುಜ್ಜೊಡಿಯ ನಾರಾಯಣ ಭಟ್ಟರಿಗೆ ಕೊಟ್ಟ ಸ್ಥಳಗಳಿಗೆ 'ತಜು ಮುಡ, ಗಡಿ ದೇವರ ಧರ್ಮ ಆರುಗಡಿ ಮನೆ ಹಣ ನೊಗ ಹಣ ವೊಕ್ಕಲು ಗುತ್ತಗೆ ಕಾಣಿಕೆ ಖಡ್ಡಾಯ ಬೆಳ್ಳಾಕರಣೆ ಬೆಳುದಂಡ ಎಸೆ(ಹಸೆ) ವೊಸಗೆ ಬಿಟ್ಟ ಬಿಡಾರ ಎತ್ತು, ಮೊದಲಾದುವನ್ನೆಲ್ಲಾ ಸರ್ವಮಾನ್ಯವಾಗಿ ದಾನ ನೀಡಿದರು. ಮುಂದುವರಿದ ಶಾಸನ ಆ ಊರಿನ ಸಮಸ್ತರು ತಮ್ಮ ಮನೆಯ ದೇವಕಾರ್ಯ, ಪಿತೃಕಾರ್ಯ, ಮದುವೆ, ಉಪನಯನ ಇತ್ಯಾದಿ ಕೆಲಸ ಮಾಡುವಾಗ ಬಹುಶಃ ಒಳ್ಳೆಯ ಮುಹೂರ್ತವನ್ನು ಪುರಾಣ ಹೇಳುವ ಭಟ್ಟರನ್ನು ಕೇಳಿಯೇ ಮಾಡಬೇಕೆಂದು ಕಟ್ಟಳೆಯ ಒಪ್ಪ ಹಾಕಲಾಗಿದೆ. ಇದೇ ಬೈಲೂರ ಮತ್ತೊಂದು ಶಾಸನವೂ ಇದೇ ವಿಷಯವನ್ನು ಉಲ್ಲೇಖಿಸಿದೆ. (ಭಟ್ಕಳ–107, 108) ಊರಿನ ಸಮಸ್ತರು ಪ್ರತಿದಿನ ಪುರಾಣ ಪುಣ್ಯ ಕಥೆ ಕೇಳುವುದಕ್ಕಾಗಿ, ಹರಿಕಥೆ ಹೇಳುವ ಒಬ್ಬ ಬ್ರಾಹ್ಮಣನಿಗೆ ದಾನ ನೀಡಿರುವುದನ್ನು ಈ ಶಾಸನಗಳು ತಿಳಿಸುತ್ತವೆ.

ಬಸ್ರೂರಿನ ಮಹಾಲಿಂಗೇಶ್ವರ ಗುಡಿ ಪ್ರಾಕಾರದಲ್ಲಿರುವ ಕ್ರಿ.ಶ. 1433ರ ಶಾಸನವು ಗಣಪತಿ ಮತ್ತು ಸರಸ್ವತಿ ಪ್ರಾರ್ಥನೆಯಿಂದ ಆರಂಭವಾಗಿದೆ. ವೀರಪ್ರತಾಪ ದೇವರಾಯನು ವಿಜಯನಗರ ಸಾಮ್ರಾಜ್ಯವನ್ನು ಆಳ್ವಿಕೆ ಮಾಡುತ್ತಿದ್ದಾಗ

ಅವನ ನಿರೂಪದಿಂದ ಮಹಾಪ್ರಧಾನಿ ಚಂದರಸ ವೊಡೆಯನು ಬಾರಕೂರನ್ನು ಆಳುತ್ತಿದ್ದ ಕಾಲದಲ್ಲಿ ಬಸರೂರ ಪಡುವ ಕೇರಿಯ ಕಕ್ಕೆಯ ಬಳಿಯ ಸೆಟ್ಟಿಕಾರ ಬಾಳುಸೆಟ್ಟಿಯ ಮಗ ಯೀಸರ ಸೆಟ್ಟಿಯು ಶ್ರೀನಖರೇಶ್ವರ ದೇವರ ಪೂಜೆಯಲ್ಲಿ ಪ್ರತಿದಿನ ಒಬ್ಬ ಬ್ರಾಹ್ಮಣನಿಗೆ, ದ್ವಾದಶಿಗೆ ಇಬ್ಬರು, ಪ್ರದೋಷಕ್ಕೆ ಇಬ್ಬರು, ಅಮಾವಾಸ್ಯೆಯ ದಿನ ಇಬ್ಬರು ಬ್ರಾಹ್ಮಣರು ಊಟಮಾಡುವಂತೆಯೂ ಮತ್ತು ದೇವರ ನಂದಾದೀಪಕ್ಕೆ ಕೆಂಚನ ಕೆರೆ ಗ್ರಾಮದ ಚತುಃಸೀಮೆಯನ್ನು (ವಿವರವಿದೆ) ಮತ್ತು ತೋಟವನ್ನು, ಹಿತ್ತಲನ್ನು ದಾನವಾಗಿ ನೀಡಿದ ಉಲ್ಲೇಖವಿದೆ. ನಂದಾದೀವಿಗೆ ನಡೆಸಲು ಬಳಸಿ ಉಳಿದ ಅಕ್ಕಿಯನ್ನು ಈಶ್ವರಸೆಟ್ಟಿಯ ಬಳಿಕ ಮಂಜು ಸಾಮಂತನ ಕುಟುಂಬದಲ್ಲಿ ದೇವಕ್ಕ ದೇಸಿಂಗ ಸೆಟ್ಟಿಯು ಕುಟುಂಬದಲ್ಲಿ, ಕೋಟಿಯಕ್ಕ, ಬೆಂಮ್ಮಣಾಳುವನ ಕುಟುಂಬದಲ್ಲಿ ಯೀಸರಾಳುವನ ಮಕ್ಕಳು, ಈ ಮೂವರು ತಾಯ ಮಕ್ಕಳು ಅನುಭವಿಸಬೇಕು. ಗೋಜರದೆ ಬಳಿಯವರ ಮನೆಯ ಸಮೀಪದ ಮನೆಯನ್ನು, ಬಾಗಿಯ ಮನೆಯನ್ನು ಮತ್ತು ಹಿತ್ತಲನ್ನು ಕುಪ್ಪಿಸೆಟ್ಟಿಯ ಮಗ ಹರಿಯಪ್ಪಸೆಟ್ಟಿಗೆ ಬಾಗಿಯ ಮನೆಯ ಹಿತ್ತಲ ಸಹಿತ ಯೀಸರಸೆಟ್ಟಿ ತನ್ನ ಮೊಮ್ಮಕ್ಕಳು ಮಾಣಿಕಸೆಟ್ಟಿಯ ಮಗ ನಾರಣಸೆಟ್ಟಿಯ ಮದುವೆಯಾಗುವ ವಧು ದೇವಕ್ಕಳಿಗೆ ಕನ್ಯಾದಾನವಾಗಿ ನೀಡಿದೆ. ಸೋಮಾರದ ಬೆಂಮಣಸೆಟ್ಟಿ ಪ್ರತಿ ವರುಷ ಬೆಳೆ ತೆಗೆದು ಬಾಗೇಡು, ಬರಗೇಡು ಎಂಬ ನೆಪ ಹೇಳದೆ 12 ಮುಡಿ ಅಕ್ಕಿಯನ್ನು ರುದ್ರಪೂಜೆಗಾಗಿ ಕೊಡುವಂತೆ ಹೇಳಿರುವ ಈ ಶಾಸನಕ್ಕೆ ಮುದ್ದಣದೇವ ಮತ್ತು ಪಡುವಕೇರಿಯ ಹಲವು ಸೆಟ್ಟಿಕಾರರು ಒಪ್ಪ ಹಾಕಿರುವರು. ಈ ಧರ್ಮವನ್ನು ಅವರು ಪಾಲಿಸಬೇಕೆಂದು ಶಾಸನ ಉಲ್ಲೇಖಿಸಿದೆ. (ಕುಂದಾಪುರ–109)

ಶ್ರೀರಂಗಂನ ರಂಗನಾಥಸ್ವಾಮಿ ಗುಡಿಯ ಎರಡನೇ ಪ್ರಾಕಾರದ ಗೋಡೆಯಲ್ಲಿರುವ ಕ್ರಿ.ಶ. 1434ರ ಶಾಸನದಲ್ಲಿ ವೀರಪ್ರತಾಪದೇವರಾಯ ಮಹಾರಾಯನು ಆಳ್ವಿಕೆ ಮಾಡುತ್ತಿರುವಾಗ ಶ್ರೀರಂಗನಾಥ ದೇವರ ಭಂಡಾರದ ಕರ್ತನಾದ ಉತ್ತಮ ನಂಬಿಯರಿಗೆ ಆದಿತ್ಯದೇವಗಳ ಮಗ ಅಂಣಚವುಡಪ್ಪನು, ತಮ್ಮ ತಂದೆ ಆದಿತ್ಯದೇವನ ಹೆಸರಿನಲ್ಲಿ ಆತನ ಜನ್ಮ ನಕ್ಷತ್ರದ ಉತ್ತರಾಷಾಡ ನಕ್ಷತ್ರದಂದು ರಂಗನಾಥ ದೇವರ ಸೇವೆಗಾಗಿ ಘೃತ ಫಲ ಶರ್ಕರಾದಿಮಿಶ್ರವಾಗಿ ಐದು ಹರಿವಾಣ, ಒಂದು ಸಂಬಾತಳಿಯ ಹರಿವಾಣ, ಆಱು ಅಪ್ಪ, ಆರೋಗಣೆಯ ಸಮಯಕ್ಕೆ ಒಂದು, ನಂದಾದೀಪ್ತಿಗೆ ಎರಡು, ದಂಡೆಗೆ ಒಂದು ಹರಿವಾಣಗಳನ್ನು ನೀಡಿ ದೇವರು ಚಿತ್ತೈಸುವ ರಥ ಉತ್ಸವ ತಿರುನಾಳಿಗೆ ಧಾರಪೂರ್ವಕ ದಾನವಾಗಿ ತಿರಿಚಿರಾಪಳ್ಳಿಯ ಚಾವಡಿಯ ತೆಂಕದಲ್ಲಿರುವ ಕೋಡಿಯಾಲ ಗ್ರಾಮ ಮತ್ತು ಚಿರುದಯೂರು ಈ ಎರಡೂ ಗ್ರಾಮಗಳನ್ನು ಹಾಗೂ ಮೂವತ್ತು ಹಸುಗಳನ್ನು, ಒಂದು ಆನೆಯನ್ನು ದಾನವಾಗಿ ನೀಡಿರುವುದನ್ನು ಹೇಳಿದೆ. (ತಿರುಚಿನಾಪಳ್ಳಿ–112) ತೇಕಲ್ಲು ವರದರಾಜಸ್ವಾಮಿ ಗುಡಿಯಲ್ಲಿನ ಕ್ರಿ.ಶ. 1434ರ ಶಾಸನವು ದೇವರಾಯಮಹಾರಾಯನ ನಿರೂಪದಿಂದ ಲಕ್ಕಣ್ಣವೊಡೆಯ ಮತ್ತು ಮಾದಣ್ಣವೊಡೆಯನು ಸೇರಿ ಸಾಳುವ ಗೋಪರಾಜನಿಗೆ ತೇಕಲ್ಲನ್ನು ಮಾನ್ಯವಾಗಿ ನೀಡುತ್ತಾರೆ. ಇದಕ್ಕೆ ಪೂರ್ವದಲ್ಲಿ ಹೊಯ್ಸಳ ಅರಸ ಬಲ್ಲಾಳರಾಯನ ಪ್ರಧಾನಿ ವಲ್ಲಪ್ಪ ದಂಡನಾಯಕ ಮತ್ತು ಸಿಂಗಿದಂಡನಾಯಕರು ಅಲ್ಲಿ ಕಟ್ಟಿಸಿದ್ದ ಕಲ್ಲಿನ ಕೋಟೆಯ ಎಲ್ಲಾ ಭಾಗಗಳೂ ಬಿದ್ದು ಹಾಳಾದಾಗ, ಗೋಪರಾಜನು ಒಳಗೋಡೆಯ ಪುನರ್ ನಿರ್ಮಾಣದ ಬಗ್ಗೆ ಯೋಚಿಸುತ್ತಾನೆ ಮತ್ತು ತನ್ನ ಪ್ರಧಾನಿಯಾದ ಸಿಂಗಿರಾಜನಿಂದ ಒಳಕೋಟೆ, ಹೊರಕೋಟೆ ಎರಡನ್ನು ಕಟ್ಟಿಸಿ, ವರದರಾಜದೇವರ ಮುಖಮಂಟಪದ ಸನ್ನಿಧಿಯಲ್ಲಿ ರಾಜಗಂಭೀರವೆಂಬ ಕೊತ್ತಳವನ್ನು ಕಟ್ಟಿಸುತ್ತಾನೆ. ಈ ಕೊತ್ತಳದಲ್ಲಿ ಗೋಪರಾಜ ಮತ್ತು ಕುಮಾರತಿಪ್ಪಯ್ಯನು ಹುಲಿಗಳನ್ನು ಹಿಡಿದು ತರಿಸಿ ಕೊತ್ತಳದಲ್ಲಿ ಹಾಕಿಸಿ ಬೇಟೆಯನಾಡಿದರೆಂಬ ವಿಶೇಷ ವಿಷಯವನ್ನು ಈ ಶಾಸನ ಉಲ್ಲೇಖಿಸುತ್ತದೆ. (ಮಾಲೂರು–114)

ಬಸರೂರು ದೊಡ್ಡಕೆರೆ ಕಟ್ಟೆ ಬಳಿಯ ಮನೆ ಹಿಂದಿರುವ ಕ್ರಿ.ಶ. 1436ರ ಶಾಸನವು ವೀರ ಪ್ರತಾಪದೇವರಾಯ ಮಹಾರಾಯನು ವಿಜಯನಗರವನ್ನು ಆಳ್ವಿಕೆ ಮಾಡುತ್ತಿರುವಾಗ ಅವರ ನಿರೂಪದಿಂದ ಮಹಾ ಪ್ರಧಾನಿ ಅಣ್ಣಪ್ಪ ಒಡೆಯರು ಬಾರಕೂರನ್ನು ಪ್ರತಿಪಾಲಿಸುತ್ತಿರುವ ಕಾಲದಲ್ಲಿ ಬಸರೂರ ಪಡುವ ಕೇರಿಯ ಬಳೆಗಾರ ಬಳಬಿಜ್ಜನ ಬೆಂಮಸೆಟ್ಟಿ ನಾರಣಸೆಟ್ಟಿಯು ತನಗೆ ಬ್ರಹ್ಮದಾಯವಾಗಿ ಬಂದಿದ್ದ ಕುಂದಾಪುರದ ಬಳಿಯ ಕಂದಾಉರದ ಸ್ಥಳದಲ್ಲಿರುವ ಭೂಮಿಯನ್ನು ಕುಂದೇಶ್ವರದೇವರಿಗೆ ಮತ್ತು ಅಲ್ಲಿಯ ಮಠದಲ್ಲಿ ಊಟ ಮಾಡುವ ಒಂಬತ್ತು ಮಂದಿ ಬ್ರಾಹ್ಮಣರಿಗೆ ಮತ್ತು ಮಹಾದೇವರ ಕೆರೆಯ ಬಳಿ ಇರುವ ಅರಳಿಕಟ್ಟೆಯಲ್ಲಿ ಕುಡಿಯುವ ನೀರನ್ನು ಎರೆಯುತ್ತಿರುವ ಬ್ರಾಹ್ಮಣನಿಗೆ ಅಕ್ಕಿ, ಭತ್ತ ಬೆಳೆಯುವ ಭೂಮಿಯನ್ನು ದಾನವಾಗಿ ನೀಡುತ್ತಾನೆ. ದಾನಕೊಟ್ಟ ಭೂಮಿಯ ಚತುಃಸ್ಸೀಮೆಯ ವಿವರವನ್ನು ಉಲ್ಲೇಖಿಸಿದೆ. (ಕುಂದಾಪುರ–130) ಹೊಸಾಳ ಗ್ರಾಮದ ಗರಡಿ ಗುಡಿಯಲ್ಲಿನ ಕ್ರಿ.ಶ. 1436ರ ಕಾಲದ ಶಾಸನವು ವೀರಪ್ರತಾಪ ದೇವರಾಯನು ವಿಜಯನಗರದಲ್ಲಿ ಸಕಲ ವರ್ಣಾಶ್ರಮದ ಧರ್ಮಗಳನ್ನು ಪಾಲಿಸುತ್ತಾ ಆಳ್ವಿಕೆ ಮಾಡುತ್ತಿರುವಾಗ ಆತನ ನಿರೂಪದಿಂದ ಮಹಾಪ್ರಧಾನಿ ಅಂಣಪ್ಪಗಳು ಬಾರಕೂರು ರಾಜ್ಯವನ್ನು ಪಾಲಿಸುತ್ತಿದ್ದನು. ಆಗ ನಾಲ್ವತುನಾಡ ಒಳಗಣ ಕೊಱಗಿಯಲು ತೊಳಹರಬಳಿಯ ದೇವಯಕಂಬಳಿಯಱ ಅಳಿಯ ಶಂಕರನಾಯಕರು ಆ ದೇವ ಮಹಾರಾಯರ ಸೇವೆಯನು ಮಾಡಿ ಮುಂಗಿನಾಡ ಒಳಗಿಣ ಅಂಪಾರ ಹರಿವರಿ ಗ್ರಾಮವನ್ನು ಸರ್ವಮಾನ್ಯವಾಗಿ ಪಡೆಯುತ್ತಾನೆ. ಹೀಗೆ ಪಡೆದ ಭೂಮಿಯನ್ನು ರಾಜನ ನಿರೂಪ ಪಡೆದು ತುಳುರಾಜ್ಯದ ಕಟ್ಟಳೆಯ ಹತ್ತು ಕೇರಿಯ ಮಧ್ಯದಲ್ಲಿರುವ ಶ್ರೀಮನ್ನಾರಾಯಣ ದೇವರ ಸ್ಥಾನದಲ್ಲಿ ಆತನು ಹತ್ತು ಕೇರಿಯವರ ಮುಂದೆ ಬ್ರಾಹ್ಮಣ ಭೋಜನದ ವ್ಯವಸ್ಥೆಗಾಗಿ ದಾನ ನೀಡುತ್ತಾನೆ. ದಾನ ನೀಡಿದ ಭೂಮಿಯ ವಿವರದ ಜೊತೆ ಅಕ್ಕಿಯ ಮೂಡೆಗಳನ್ನು ದಾನ ಮಾಡಿದ ವಿವರವಿದೆ. ಮೊಸರು, ತುಪ್ಪ, ತೆಂಗು ಇತ್ಯಾದಿ ವಸ್ತುಗಳ ಜೊತೆಗೆ ಅಡಿಗೆಯ ಬ್ರಾಹ್ಮಣನಿಗೆ ಸಹ ಅಕ್ಕಿ ಮೂಡೆಯನ್ನು ದಾನವಾಗಿ ನೀಡಿದ ವಿವರವಿದೆ. ಅಲ್ಲದೆ ಅಲ್ಲಿಯ ಮಹಾದೇವರ ಮತ್ತು ದುರ್ಗಾ ದೇವಿಯ ದೇವಸ್ಥಾನಕ್ಕೂ ಅಕ್ಕಿ ಮತ್ತು ಭೂಮಿಯನ್ನು ದಾನವಾಗಿ ನೀಡಿದ ಉಲ್ಲೇಖವಿದೆ. (ಉಡುಪಿ–131)

ಕೃಷ್ಣಾಪುರದಲ್ಲಿನ ಪಾಳು ಈಶ್ವರನಗುಡಿ ಮುಂದಿರುವ ಕ್ರಿ.ಶ. 1338ರ ಶಾಸನವು ಪ್ರತಾಪ ದೇವರಾಯನು ವಿಜಯನಗರವನ್ನು ಆಳ್ವಿಕೆ ಮಾಡುತ್ತಿದ್ದಾಗ ಅವನ ಪ್ರಧಾನಿ ಪೆರುಮಾಳೆ ದಂಡನಾಯಕನ ಮಕ್ಕಳಾದ ಚಿಕ್ಕ ಪೆರುಮಾಳದೇವ ಒಡೆಯನಿಗೆ, ಅರಸ ದೇವರಾಯನು ಚೆನ್ನಪಟ್ಟಣದ ರಾಜ್ಯವನ್ನು ಚಿತ್ತೈಸಿ ಅದನ್ನು ಪಾಲಿಸುವಂತೆ ನೀಡಿರುತ್ತಾನೆ. ಚೆನ್ನಪಟ್ಟಣದ ಚಾವಡಿಗೆ ಸಲ್ಲುವ ಕಿಱುಗವರ ಸ್ಥಳದ ಸುಳ್ಳೇರಿ ಬಳಿಯ ನಾಲ್ವತ್ತು ಹೊನ್ನು ಉತ್ಪಾದನೆಯುಳ್ಳ ಬೆಟ್ಟವಳ್ಳಿ ಗ್ರಾಮದ ಭೂಮಿ ಹತ್ತೆಂಟು ಕಾಲದಿಂದ ಹಾಳಾಗಿ ಹುಲ್ಲು ಗರಿಕೆಗಳು ಬೆಳೆದು ದನಕರುಗಳು ಮೇಯುವ ಗೋಮಾಳವಾಗಿತ್ತು. ಇದನ್ನು ನೋಡಿದ ಪೆರುಮಾಳೆದೇವ ಅವನ ಅಣ್ಣ ತಿರುಮಲನಾಥ ಒಡೆಯನು ಸೇರಿ ತಲ್ಲೆಹದ ಮಾಡಂಬಾಳ ಅಂಕಸೆಟ್ಟಿಯ ಮಗ ಅಳಗಿಸೆಟ್ಟಿಯರಿಗೆ ಸರ್ವಮಾನ್ಯವಾಗಿ ಲಿಂಗಮುದ್ರೆ ಕಲ್ಲು ನೆಟ್ಟು ಆ ಭೂಮಿಯನ್ನು ದಾನ ಮಾಡುತ್ತಾರೆ. ಆ ಗ್ರಾಮದ ಮತ್ತೊಂದು ಸ್ಥಾನದಲ್ಲಿ ತಿರುಮಲನಾಥಪುರವೆಂಬ ಹೊಸ ಗ್ರಾಮವನ್ನು ನಿರ್ಮಿಸಿ ತರುವನಿಕ್ಕಿ ಆ ಗ್ರಾಮದ ಸೀಮೆಯಲ್ಲಿ ಉತ್ಪತ್ತಿಯಾಗುವ ದ್ರವ್ಯದಿಂದ ದೇವರು, ಬ್ರಾಹ್ಮಣರು, ಗುರುಲಿಂಗಜಂಗಮಕ್ಕೆ ಅನ್ನ ಉದಕ ಸಮರ್ಪಣೆಯಾಗಬೇಕೆಂದು ಲಿಂಗಾಂಕಿತವಾದ ಶಿಲಾ ಶಾಸನ ಹಾಕಿಸಿ ದಾನ ನೀಡಲಾಗಿದೆ. ಬೆಟ್ಟಹಳ್ಳಿಯನ್ನು ದಾನವಾಗಿ ಪಡೆದ ಅಳಗಿಸೆಟ್ಟಿಯರು ತನ್ನ ಕೈಯಿಂದ ಬಹಳ ದ್ರವ್ಯವನ್ನು ವೆಚ್ಚಮಾಡಿ ತಿರುಮಲನಾಥ ಪುರವನ್ನು ಪಟ್ಟಣವನ್ನಾಗಿ ರೂಪಿಸಿ ಆ ಊರ ಮುಂದೆ ಅಂಕಸಮುದ್ರವೆಂಬ ಹಿಱಿಗೆಱೆಯನ್ನು ಕಟ್ಟಿಸಿ ಅಲ್ಲಿಂದ ಬಡಗದಿಕ್ಕಿನ ಗಿಡುವಿನೊಳಗೆ ತಿರುಮಲನಾಥ ಒಡೆಯರ ನೆನಪಿಗೆ ತಿಮ್ಮಸಮುದ್ರವೆಂಬ ಕೆರೆಯನ್ನು

ಕಟ್ಟಿಸಿದ. ಅಂಕನಾಥದೇವರ ದೇವಾಲಯವೂ ಹಾಳಾಗಿ ನೆಲಗತವಾಗಿರಲು ಜೀರ್ಣೋದ್ಧಾರ ಮಾಡಿಸಿ ಗರ್ಭಗೃಹ, ಸುಖನಾಸಿ, ರಂಗಮಂಟಪ, ಶಿಖರ ಮೊದಲಾದವುಗಳನ್ನು ಕಟ್ಟಿಸಿ ಸಂಪ್ರೋಕ್ಷಣೆಯನ್ನು ಮಾಡಿಸಿ ಅಂಕನಾಥದೇವರ ಪ್ರೀತ್ಯರ್ಥವಾಗಿ ತಿರುಮಲನಾಥರಸರ ಹೆಸರಿನಲ್ಲಿ ನಿತ್ಯವೂ ಹನ್ನೆರಡು ಜನ ಬ್ರಾಹ್ಮಣರಿಗೆ ಒಂದು ಹೊತ್ತು ಅನ್ನ ಉದಕ ಸಲ್ಲುವಂತೆ ಆ ತಿಮ್ಮಸಮುದ್ರದ ಕೆಱೆಯಕೆಳಗೆ ಹತ್ತು ಖಂಡುಗ ಗದ್ದೆಯನ್ನು ದಾನವಾಗಿ ಬಿಡುವನು. ಆ ಬ್ರಾಹ್ಮಣರ ಛತ್ರಕ್ಕೆ ಸುಳ್ಳೇರಿಯ ಕೆಱೆಯ ಕೆಳಗಿನ ಗದ್ದೆಯನ್ನು ಅಂಕನಾಥದೇವರಿಗೆ ಪೂರ್ವದಲ್ಲಿ ಕೊಟ್ಟಿದ್ದ ಹೊಲ ಗದ್ದೆ ಅಲ್ಲದೆ ಎರಡು ಹೊತ್ತು ನೈವೇದ್ಯ ಮತ್ತು ಅಮೃತಪಡಿಗೆ ಖಂಡುಗ ಗದ್ದೆಯನ್ನು, ನಂದಾದೀವಿಗೆಗೆ ಅಯಿಗುಳದ ಹೊಲವನ್ನು ಲಿಂಗಮುದ್ರೆ ಕಲ್ಲನ್ನು ನೆಟ್ಟು ದಾನವಾಗಿ ನೀಡಿದೆ. ಅಲ್ಲದೆ ಮಿಕ್ಕ ಗದ್ದೆ ಬೆದ್ದಲು ಎಲ್ಲವನ್ನೂ ವ್ಯವಸ್ಥಿತವಾಗಿ ವೃತಿಗಳು ಧರ್ಮ ನಡೆಯುವಂತೆ ಊರಿನ ಹಿರಿಯರಿಗೆ ವಹಿಸಿ ಕೊಡಲಾಗಿದೆ. (ಚನ್ನಪಟ್ಟಣ–147)

ಕ್ಯಾತನಹಳ್ಳಿ ಗ್ರಾಮದ ಊರ ಬಾಗಿಲ್ಲಿರುವ ಕ್ರಿ.ಶ.1439ರ ಶಾಸನವು ಗಜಬೇಂಟೆಕಾರ ದೇವರಾಯಮಹಾರಾಯನು ಆಳ್ವಿಕೆ ಮಾಡುತ್ತಿರುವಾಗ ಅವನ ಪ್ರಧಾನಿ ಲಖಂಣದಂಡನಾಯಕನ ಕೈ ಕೆಳಗೆ ತಳಕಾಡನಾಡ ಅಧಿಕಾರಿಯಾದ ಪೆರುಮಾಳದೇವರಸನು ಕೇತನಹಳ್ಳಿಯನ್ನು ಮತ್ತು ರಠಳ್ಳಿಯನ್ನು ಕೀರ್ತಿನಾರಾಯಣ ದೇವರ ಕಾರ್ಯಕ್ಕೆ ದಾನವಾಗಿ ಬಿಡುತ್ತಾನೆ. ಆ ಗ್ರಾಮಗಳ ಸುಂಕ, ಮಗ್ಗ, ಮುದ್ರೆ, ವೊಳವಾರು, ಹೊಱವಾಱು, ತೋಟ, ಗಾಣ, ಕಾವಲಿಸುಂಕ ಮುಂತಾದವುಗಳನ್ನು ತಳಕಾಡನಾಡ ಅಧಿಕಾರಿ ಪೆರುಮಾಳದೇವರಸನು ಬಿಟ್ಟ ದಾನವೆಂದು ಹೇಳಿದೆ.(ಮಳವಳ್ಳಿ–149) ಇದೇ ಕಾಲದ ಇದೇ ಊರಿನ ಮತ್ತೊಂದು ಶಾಸನವು ಪೆರುಮಾಳದೇವರಸನು ಕೀರ್ತಿನಾರಾಯಣ ದೇವರ ನೈವೇದ್ಯಕ್ಕೆ, ಮಗ್ಗ, ಸುಂಕ, ಮೊಟ್ಟೆಸುಂಕ, ವೊಳವಾಱು, ಹೊಱವಾರು ಮುಂತಾದ ಹಲವಾರು ಸುಂಕವನ್ನು ಮನ್ನಮಾಡಿರುವುದನ್ನು ಉಲ್ಲೇಖಿಸಿದೆ. (ಮಳವಳ್ಳಿ–150) ಕೋಟೇಶ್ವರ ಊರಿನ ಗುಡಿಯ ಪ್ರಾಕಾರದದಲ್ಲಿನ ಕ್ರಿ.ಶ. 1447 ರ ಶಾಸನವು ಪ್ರತಾಪ ದೇವರಾಯಮಹಾರಾಯನ ಆಳ್ವಿಕೆಯಲ್ಲಿ ಆತನ ನಿರೂಪದಿಂದ ಬಾರಕೂರ ರುಪ್ಪಂಣ ಒಡೆಯರು ಆಳುತ್ತಿರುವಾಗ ಭಂಡಾರದ ಗುರುರಾಯ ಒಡೆಯನು ಶ್ರೀಕೋಟಿನಾಥ ದೇವರ ದರ್ಶನಕ್ಕೆ ಬಂದಾಗ ದೇವರಾಯ ಮಹಾರಾಯನ ಹೆಸರಿನಲ್ಲಿ ಮಠವನ್ನು ಕಟ್ಟಿಸುತ್ತಾನೆ. ಶ್ರೀಕೋಟಿನಾಥ ದೇವರ ಒಂದು ರಂಗಪೂಜೆಗೆ 5 ಗದ್ಯಾಣದಂತೆ 12 ತಿಂಗಳ ರಂಗಪೂಜೆಗೆ 60 ಗದ್ಯಾಣಗಳನ್ನು, ಪ್ರತಿವರ್ಷ ಭಾದ್ರಪದ ತಿಥಿಯ ಮಹಾಪೂಜೆಗೆ 30 ಕಾಟಿ ಗದ್ಯಾಣ, ಅಲ್ಲಿನ ಛತ್ರದಲ್ಲಿ ಅಡಿಗೆಯವನಿಗೆ ಮತ್ತು ಊಟಮಾಡುವ 10 ಜನ ಬ್ರಾಹ್ಮಣರಿಗೆ 100 ಕಾಟಿ ಗದ್ಯಾಣಗಳನ್ನು ರಂಗಪೂಜೆಗೆ, ಮಹಾಪೂಜೆಗೆ, ಪರಿಮಳದ ಹೂಮಾಲೆಗೆ 6 ಗದ್ಯಾಣಗಳಂತೆ ಒಟ್ಟು 196 ಗದ್ಯಾಣಗಳನ್ನು ದಾನವಾಗಿ ನೀಡಿರುವುದನ್ನು ಹೇಳಲಾಗಿದೆ. ಇದಕ್ಕೆ ಜೊತೆಯಾಗಿ ಬಾರಕೂರನ್ನು ಆಳುತ್ತಿರುವ ರುಪ್ಪಣ್ಣ ಒಡೆಯರು ಕುವಕುಂದ ಗ್ರಾಮದ ಉತ್ಪತ್ತಿಯಲ್ಲಿ 12 ಗದ್ಯಾಣಗಳನ್ನು ದಾನವಾಗಿ ನೀಡುವನು. ಒಟ್ಟು 208 ಹೊನ್ನನ್ನು ತರಿಸಿ ಬಾರಕೂರ ಚಾವಡಿಯವರಿಗೆ ನೀಡಿ ದೇವಾಲಯದ ಧರ್ಮ ಕಾರ್ಯಗಳನ್ನು ನೋಡಿಕೊಳ್ಳುವಂತೆ ಸೂಚಿಸಿದೆ. ದಾನದ ಕೆಲಸಗಳನ್ನು ಕರುವಕುಂದದ 30 ವೃತ್ತಿಕಾರರು ಧರ್ಮಕಾರ್ಯವನ್ನು ತಪ್ಪದೆ ನಡೆಸಬೇಕೆಂದು ಹೇಳಿದೆ. (ಕುಂದಾಪುರ–191)

ಇದೇ ಬಾರಕೂರು ಚೌಳಿಕೇರಿಯಲ್ಲಿರುವ ಕ್ರಿ.ಶ. 1448ರ ಶಾಸನವು ಇಮ್ಮಡಿ ದೇವರಾಯಮಹಾರಾಯನು ವಿದ್ಯಾನಗರಿಯನ್ನು ಆಳುತ್ತಿರುವಾಗ ಆತನ ನಿರೂಪದಿಂದ ರಾಯರಸ ವೊಡೆಯನು ಬಾರಕೂರನ್ನು ಪ್ರತಿಪಾಲಿಸುತ್ತಿದ್ದನು. ಆಗ ಇಮ್ಮಡಿ ದೇವರಾಯನಿಗೆ ಕಂಟಕ ಉಂಟಾಗುತ್ತದೆ. ಆ ಕಂಟಕ ನಿವಾರಣೆಯಾಗಲೆಂದು ಮತ್ತು ಆತನ ಆಯುಸ್ಸು ವೃದ್ಧಿಯಾಗಲೆಂದು ಚೋಳಿಯ ಕಲ್ಲಂಗೆರೆಯ ವಿನಾಯಕದೇವರಿಗೆ ಕೈಪಾಡಿಯ 74 ವೊಕ್ಕಲ ಉತ್ಪತ್ತಿಯಾದ

68 ಕಾಟಿ ಗದ್ಯಾಣ ಹೊನ್ನನ್ನು ಸೂರ್ಯೋಪರಾಗ ಪುಣ್ಯಕಾಲದಲ್ಲಿ ಪಶ್ಚಿಮ ಸಮುದ್ರತೀರದಲ್ಲಿ ಧಾರೆಯನೆರೆದು ದಾನಮಾಡುತ್ತಾನೆ. ದೇವಾಲಯಕ್ಕೆ, ನಂದಾದೀಪಕ್ಕೆ 2 ಕಂ ಕಾಟಿ ಗದ್ಯಾಣ ಹೊನ್ನನ್ನು ಮತ್ತು ಅಮೃತಪಡಿಗೆ ದೇವಾಲಯಕ್ಕೆ ಅಕ್ಕಿ ಹಾನೆ 4 ರ ಲೆಕ್ಕದಲ್ಲಿ ಒಂದು ವರ್ಷಕ್ಕೆ ಅಕ್ಕಿ 36 ಕಂ ಕಾಟಿ ಗದ್ಯಾಣ, ಪಂಚಪರ್ವ, ದೀವಳಿಗೆ ಹಬ್ಬ, ಕ್ಷೀರಾಬ್ಧಿಶಿಖರದ ಹುಣ್ಣಿಮೆ, ಶಿವರಾತ್ರೆ, ವಸಂತಯುಗಾದಿ, ವೈಶಾಖ ಹುಣ್ಣಿಮೆ, ನೂಲಹಬ್ಬ, ಬೆನಕನಚೌತಿ ಮೊದಲಾದ ಪಂಚಪರ್ವಗಳಿಗೆ 33 ಹೊನ್ನನ್ನು, ಪಂಚಾಮೃತ, ಹರಿವಾಳ ನೈವೇದ್ಯ, ತಳಿಯಡಿಗೆಗೆ ಸಹ 30 ಕಾಟಿ ಗದ್ಯಾಣವನ್ನು ದಾನ ಮಾಡಿ ಈ ಧರ್ಮ ಕಾರ್ಯ ಆಚಂದ್ರಾರ್ಕಸ್ಥಾಯಿಯಾಗಿ ನಡೆದು ಬರುವಂತೆ ಶಿಲಾಶಾಸನ ಬರೆಸಿ ರಾಯಸವೊಡೆಯರ ಸ್ವಹಸ್ತದ ವೊಪ್ಪ ಮತ್ತು ಕೈಪಾಡಿಯ 74 ವೊಕ್ಕಲುಗಳ ಜೊತೆಯಲ್ಲಿ ಇತರರು ವೊಪ್ಪ ಹಾಕಿರುವ ದಾನ ಶಾಸನವಾಗಿದೆ. (ಉಡುಪಿ–192)

ಆಧಾರ: *ಪ್ರೌಢದೇವರಾಯನ ಶಾಸನಗಳು:* ಪ್ರಸಾರಾಂಗ .ಕ.ವಿ.ವಿ., ಹಂಪಿ.

11

ಕೃಷ್ಣದೇವರಾಯನ ಕಾಲದ ಶಾಸನಗಳಲ್ಲಿ ಪ್ರತಿನಾಮ ಗ್ರಾಮಗಳು

ಪದ್ಮಜಾ ದೇಸಾಯಿ

ವಿಜಯನಗರ ಸಾಮ್ರಾಜ್ಯವು ಕ್ರಿ.ಶ. 1336ರಲ್ಲಿ ವಿದ್ಯಾರಣ್ಯರ ಮಾರ್ಗದರ್ಶನದಲ್ಲಿ ಸಂಗಮವಂಶದ ಸಹೋದರರಾದ ಹಕ್ಕ-ಬುಕ್ಕರಿಂದ ತುಂಗಭದ್ರಾ ನದಿಯ ಬಲದಂಡೆಯ ಮೇಲೆ ಸ್ಥಾಪನೆಗೊಂಡಿತು. ಈ ಸಾಮ್ರಾಜ್ಯವು ದಕ್ಷಿಣ ಭಾರತದಲ್ಲಿ ಉದಯಿಸಿದ ಏಕೈಕ ಹಿಂದೂ ಸಾಮ್ರಾಜ್ಯವಾಗಿತ್ತು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಮಧ್ಯಕಾಲೀನ ಭಾರತದ ಇತಿಹಾಸದಲ್ಲಿ ಹಿಂದುತ್ವದ ಪರಿಕಲ್ಪನೆಯನ್ನು ಪ್ರಚುರಪಡಿಸಿದಂತಹ ಮಹಾನ್ ಸಾಮ್ರಾಜ್ಯವಾಗಿ ಬೆಳಕಿಗೆ ಬಂದಿತು. ದಕ್ಷಿಣ ಭಾರತದ ರಾಜಕೀಯ ಇತಿಹಾಸದಲ್ಲಿ ಹೊಸದೊಂದು ಅಧ್ಯಾಯವೇ ಪ್ರಾರಂಭಗೊಂಡಿತು. ವಿಜಯನಗರ ಸಾಮ್ರಜ್ಯವು ಇಂದಿನ ದಕ್ಷಿಣ ಭಾರತದ ಬಹುತೇಕ ಭಾಗಗಳನ್ನು ಒಳಗೊಂಡಿತ್ತು. ಈ ಎಲ್ಲಾ ಭಾಗಗಳಲ್ಲಿ ಅವರ ಸಾಂಸ್ಕೃತಿಕ ಕುರುಹುಗಳನ್ನು ಕಾಣಬಹುದಾಗಿದೆ. ವಿಜಯನಗರ ಕಾಲದ ದೇವಾಲಯಗಳು, ಶಿಲ್ಪಗಳು, ಶಾಸನಗಳು, ಕೋಟೆಕೊತ್ತಲಗಳನ್ನು ಪ್ರಸ್ತುತವಾಗಿ ಕರ್ನಾಟಕ, ಆಂಧ್ರ, ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ಕಾಣಸಿಗುತ್ತವೆ. ವಿಜಯನಗರದ ಸಹಸ್ರಾರು ಶಾಸನಗಳು ಇಂದು ನಮಗೆ ಲಭ್ಯವಿದ್ದು, ಅವು ಕನ್ನಡ, ತೆಲುಗು, ತಮಿಳು ಮತ್ತು ಸಂಸ್ಕೃತ ಭಾಷೆಗಳಲ್ಲಿವೆ.

ಕೃಷ್ಣದೇವರಾಯನ ಹಲವಾರು ಶಾಸನಗಳು ನಮಗೆ ಲಭ್ಯವಿದ್ದು, ಇವುಗಳ ಸಂಖ್ಯೆಯು ಇನ್ನೂ ಅಧಿಕವಾಗುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಪ್ರಸ್ತುತ ಲೇಖನದ ಉದ್ದೇಶ ಕೃಷ್ಣದೇವರಾಯನ ಕಾಲದ ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಪ್ರತಿನಾಮಧೇಯವುಳ್ಳ ಗ್ರಾಮಗಳನ್ನು ಕುರಿತು ಚರ್ಚಿಸುವುದಾಗಿದೆ.

ವಿಜಯನಗರದ ಅರಸರಲ್ಲಿ ಪ್ರಸಿದ್ಧವಾದ ಅರಸು ತುಳುವಂಶದ ಶ್ರೀ ಕೃಷ್ಣದೇವರಾಯ ಇವನ ಕಾಲಾವಧಿಯಲ್ಲಿ ತನ್ನ ಪ್ರೀತಿಪಾತ್ರರಾದವರ ಹೆಸರು ಚಿರಸ್ಥಾಯಿಯಾಗಿ ನಿಲ್ಲಲಿ ಎಂದು ಗ್ರಾಮಗಳಿಗೆ ಅವರ ಹೆಸರುಗಳನ್ನು ಇಟ್ಟು ದಾನವಾಗಿ ನೀಡುತ್ತಿದ್ದನು. ಸಾಮಾನ್ಯವಾಗಿ ಅಗ್ರಹಾರ ಮತ್ತು ಪುರಗಳಿಗೆ ಈ ರೀತಿ ಮರುನಾಮಕರಣ ಮಾಡಿ ತಾಮ್ರ ಶಾಸನ ಸಹಿತ ದಾನವಾಗಿ ನೀಡುತ್ತಿದ್ದ ಸಂಗತಿ ಶಾಸನಾಧಾರಗಳಿಂದ ತಿಳಿದುಬರುತ್ತದೆ. ದಾನ ನೀಡುವಾಗಿನ ಸಹಜ ಪ್ರಕ್ರಿಯೆಗಳಲ್ಲಿ ಇದು ಕೂಡ ಒಂದು ಎನ್ನುವಂತಾಗಿತ್ತು. ಕೃಷ್ಣದೇವರಾಯ ಮಹಾರಾಯನು ಕೂಡ ತನ್ನ ಹಿರಿಯರಂತೆಯೇ ಅನೇಕ ಗ್ರಾಮಗಳನ್ನು ಹೆಸರು ಬದಲಾಯಿಸಿ ದಾನಗಳನ್ನಾಗಿ ನೀಡಿದ್ದಾನೆ.

ಒಂದು ಗ್ರಾಮವನ್ನು ದೇವಾಲಯಕ್ಕೆ ಅಥವಾ ದಾನ ನೀಡುವುದು ಪ್ರಾಚೀನ ಕಾಲದಿಂದಲೂ ಬಂದಿರುವ ಪದ್ಧತಿಯಾಗಿದೆ. ಒಂದು ಗ್ರಾಮವನ್ನು ಸ್ಥಾಪಿಸಿದಾಗ ಅದಕ್ಕೆ ನಾಮಕರಣ ಮಾಡುವುದು ಸಹ ಹಿಂದಿನಿಂದ ರೂಢಿಯಲ್ಲಿರುವುದು ತಿಳಿದ ಸಂಗತಿಯೇ. ಅಂತಹ ಗ್ರಾಮಗಳನ್ನು ದಾನ ನೀಡುವ ಸಂದರ್ಭದಲ್ಲಿ ಇವುಗಳಿಗೆ ಹೆಸರಿನಿಂದ ಮರುನಾಮಕರಣ ಮಾಡಿರುವುದು ಈ ಶಾಸನಗಳ ಅಧ್ಯಯನದಿಂದ ತಿಳಿದು ಬರುವ ಸಂಗತಿಯೇ ಸರಿ.

ಧಾರ್ಮಿಕ ಅಥವಾ ಸಾಮಾಜಿಕ ಕಾರಣಗಳಿಂದ ಗ್ರಾಮಗಳಿಗೆ ಪ್ರತಿನಾಮಗಳನ್ನು ಇಡುತ್ತಿದ್ದಿರುವ ಸಾಧ್ಯತೆಗಳಿವೆ. ಈ ಹೆಸರುಗಳು ಸಾಮಾನ್ಯವಾಗಿ ರಾಜ ಮತ್ತು ರಾಣಿಯರ ಹೆಸರನ್ನು ಹೊಂದಿರುವುದು ಕಂಡುಬರುತ್ತದೆ. ಒಬ್ಬ ಅರಸನು ಒಂದು ಗ್ರಾಮವನ್ನು ದೇವಾಲಯಕ್ಕೆ ದಾನ ನೀಡುವ ಸಮಯದಲ್ಲಿ ಅವನ ಪೂರ್ವಜರಿಗೆ ಅಥವಾ ತಂದೆ-ತಾಯಿ, ಸಹೋದರ-ಸಹೋದರಿ, ಬಂಧು-ಬಾಂಧವರ ಹೆಸರನ್ನು ಇಟ್ಟು ಅವರಿಗೆ ಪುಣ್ಯವಾಗಬೇಕೆಂದು ಸದರಿ ಗ್ರಾಮವನ್ನು ದೇವಾಲಯದ ಖರ್ಚುವೆಚ್ಚಕ್ಕಾಗಿ ನೀಡಲಾಗುತ್ತಿತ್ತು. ಇನ್ನು ಕೆಲವು ಸಂದರ್ಭಗಳಲ್ಲಿ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಸಹ ದಾನ ಮಾಡಲಾಗುತ್ತಿತ್ತು.

ಮತ್ತೊಂದು ಸಂದರ್ಭದಲ್ಲಿ ಗ್ರಾಮವು ಹಾಳುಬಿದ್ದಾಗ ಅಥವಾ ಗ್ರಾಮವನ್ನು ಜನರು ಕಾರಣಾಂತರಗಳಿಂದ ತ್ಯಜಿಸಿದಾಗ ಆ ಗ್ರಾಮವನ್ನು ಪುನರ್‌ಸ್ಥಾಪಿಸಿ ಜನರನ್ನು ವಸತಿಗೆ ಆಹ್ವಾನಿಸಿದಾಗಲೂ ಗ್ರಾಮಕ್ಕೆ ಮರುನಾಮಕರಣ ಮಾಡಲಾಗುತ್ತಿತ್ತು.

ಕೃಷ್ಣದೇವರಾಯನ ಕಾಲಾವಧಿಯಲ್ಲಿ ಮೊದಲು ಹೆಸರನ್ನು ಬದಲಾಯಿಸಿದ ಗ್ರಾಮವೆಂದರೆ ಹಂಪದೇವನಹಳ್ಳಿ ಗ್ರಾಮ. ಕ್ರಿ.ಶ. 1511ರಲ್ಲಿ ನಾರಿ ಸೀಮೆಯೊಳಗಿದ್ದ ಈ ಗ್ರಾಮವನ್ನು ಶ್ರೀ ಕೃಷ್ಣದೇವರಾಯಪುರವೆಂದು ಮರುನಾಮಕರಣ ಮಾಡಿ ಅಗ್ರಹಾರವನ್ನಾಗಿ ಪರಿವರ್ತಿಸಿ ನಾನಾಗೋತ್ರದ ಶಾಖೆಯ 105 ಜನ ಬ್ರಾಹ್ಮಣರಿಗೆ ವೃತ್ತಿಗಳನ್ನಾಗಿ ವಿಂಗಡಿಸಿ ದಾನ ನೀಡಿದನು.

ಕ್ರಿ.ಶ. 1512ರ ಶಾಸನದಲ್ಲಿ ಕೃಷ್ಣದೇವರಾಯನು ಹೊಯ್ಸಳ ದೇಶದ ಬೇಲೂರು ಸೀಮೆಯ ಹಿರಿಯಜಟ್ಟಿಗ ಗ್ರಾಮವನ್ನು ಚಿನ್ನಾದೇವಿಪುರವೆಂದು ಮರುನಾಮಕರಣ ಮಾಡಲಾಯಿತು. ಈ ಗ್ರಾಮವನ್ನು ಶ್ರೀನಿವಾಸಧ್ವರಿ ಎಂಬ ಬ್ರಾಹ್ಮಣನಿಗೆ ದಾನವಾಗಿ ನೀಡಿದನು. ಈ ದಾನವನ್ನು ಶಿವಗಂಗೆಯ ಗಂಗಾಧರನ ಸನ್ನಿಧಿಯಲ್ಲಿ ದಾನ ನೀಡಿದಂತಿದೆ. ಈ ಶಾಸನದಲ್ಲಿ ತನ್ನ ಪತ್ನಿಯ ಹೆಸರನ್ನು ಈ ಗ್ರಾಮಕ್ಕೆ ಇಟ್ಟಿರುವುದು ಮತ್ತು ಒಬ್ಬ ರಾಣಿಯ ಹೆಸರನ್ನು ಇಟ್ಟಿರುವುದು ಗಮನಾರ್ಹವಾದ ಸಂಗತಿಯಾಗಿದೆ.

ಕ್ರಿ.ಶ. 1498ರಲ್ಲಿ ತಿರುಮಲಾ ದೇವಿಯನ್ನು ಮದುವೆಯಾಗಿ ಕೃಷ್ಣದೇವರಾಯನು ಇವಳ ಮೇಲಿನ ಪ್ರೀತಿಯಿಂದ ತಿರುಮಲಾದೇವಿ ಪಟ್ಟಣ ಎಂಬ ಪಟ್ಟಣವನ್ನು ಕಟ್ಟಿಸಿ ಇದು ಈಗ ಹೊಸಪೇಟೆ ನಗರದ ನೈರುತ್ಯದ ದಿಕ್ಕಿನಲ್ಲಿ ಅಂತರ್ಗತವಾಗಿದೆ. ಇದಲ್ಲದೆ ಹೊಯ್ಸಳ ನಾಡಿನ ಕಿತ್ತಾನೆ ಗ್ರಾಮವನ್ನು ತಿರುಮಲಾದೇವಿ ಪುರವೆಂದು ಹೆಸರನ್ನು ಬದಲಾಯಿಸಿ ಬ್ರಾಹ್ಮಣರಿಗೆ ದಾನ ನೀಡಿದ್ದಾನೆ. ಈ ದಾನವನ್ನು ಶ್ರೀ ಶೈಲದ ಮಲ್ಲಿಕಾರ್ಜುನನ ಸನ್ನಿಧಿಯಲ್ಲಿ ನೀಡಿದ್ದಾನೆ. ಈ ಶಾಸನವು ಕೂಡ ರಾಣಿಯ ಹೆಸರಿನಿಂದ ಮರು ನಾಮಕರಣಗೊಂಡಿರುವುದು ವಿಶೇಷವಾದ ಸಂಗತಿಯಾಗಿದೆ.

ಅಬ್ಬೂರಿನ ಒಂದು ಶಾಸನದ ಪ್ರಕಾರ ಕ್ರಿ.ಶ. 1523ರಲ್ಲಿ ಚೆನ್ನಪಟ್ಟಣ ಸೀಮೆಯ ಹೊಂಗನೂರು ಸ್ಥಳದ ಒಂದು ಹಳ್ಳಿಯನ್ನು ಬ್ರಾಹ್ಮಣ್ಯತೀರ್ಥಪುರವೆಂದು ಹೆಸರಿಟ್ಟು ದಾನವಾಗಿ ನೀಡಲಾಗಿದೆ. ಈ ಗ್ರಾಮವನ್ನು ವ್ಯಾಸರಾಯರು 32 ವೃತ್ತಿಗಳನ್ನಾಗಿ ವಿಂಗಡಿಸಿ ತಮ್ಮ ಶಿಷ್ಯ ಪರಂಪರೆಗೆ ದಾನವಾಗಿ ನೀಡಿದ್ದಾರೆ. ಇದು ಅವರ ಉದಾರತೆಯನ್ನು ಎತ್ತಿ ತೋರಿಸುತ್ತದೆ.

ಕಮಲಾಪುರದ ಕ್ರಿ.ಶ. 1520ರ ಶಾಸನದ ಪ್ರಕಾರ ವ್ಯಾಸರಾಯರಿಗೆ ಪೆನಗೊಂಡ ರಾಜ್ಯದ ಬೆಟ್ಟಕೊಂಡ ಗ್ರಾಮವನ್ನು ನೀಡಿದ ವಿಷಯವಿದೆ. ಈ ಶಾಸನದಲ್ಲಿ 314 ಜನರಿಗೆ ವಿವಿಧ ಗ್ರಾಮಗಳಲ್ಲಿ ನೀಡಿರುವ ವಿಷಯ ಗಮನಾರ್ಹವಾಗಿದೆ.

ಕ್ರಿ.ಶ. 1513ರ ಶಾಸನದಲ್ಲಿ ಸಂಕಲಾಪುರದ ಚಂದ್ರಗಿರಿ ಮೇಳರಸರ ಮಗ ಸೋವಾರ್ಯನು ಸಂಕಲಾಪುರವನ್ನು ನವೀಕರಿಸಿ ಆ ಊರಿಗೆ ವಿನಾಯಕಪುರವೆಂದು ಮರುನಾಮಕರಣ ಮಾಡಲಾಯಿತು. (ಆ ಗ್ರಾಮದ ಪ್ರಮುಖ ದೇವರು)

ಕೃಷ್ಣದೇವರಾಯನು ತನ್ನ ತಾಯಿಗೆ ಪುಣ್ಯವಾಗಲೆಂದು ನಾಗಲಾದೇವಿಪುರವನ್ನು ನಾಗಲಾಪುರವೆಂದು ನಾಮಕರಣ ಮಾಡಿ ಅಲ್ಲಿ ನಾಗೇಶ್ವರ ಮತ್ತು ನಾಗಶಯನೇಶ್ವರ ಎಂಬ ಶೈವ ಮತ್ತು ವೈಷ್ಣವ ದೇವಾಲಯವನ್ನು ನಿರ್ಮಾಣ ಮಾಡಿ ನಾಗಲಾಪುರವೆಂದು ನಾಮಕರಣ ಮಾಡಿರುವುದು ವಿಶೇಷವಾದ ಸಂಗತಿ. ಇದು ಅಂದಿನ ಕಾಲದಲ್ಲಿ ಸರ್ವಧರ್ಮ ಸಮನ್ವಯತೆಯನ್ನು ಎತ್ತಿ ತೋರಿಸುತ್ತದೆ.

ಈ ಮೇಲ್ಕಂಡ ಶಾಸನಗಳ ಪ್ರಕಾರ ಕೃಷ್ಣರಾಯಪುರ ಕೃಷ್ಣಪುರ ಎಂಬ ಹೆಸರುಗಳು ಕಂಡುಬರುತ್ತವೆ. ತಿರುಮಲಾದೇವಿಪುರ, ಚೆನ್ನಾಪುರದೇವಿಪುರ, ನಾಗಲಾಪುರ ಗ್ರಾಮದ ಹೆಸರುಗಳು ರಾಣಿಯರ ಹೆಸರುಗಳನ್ನು ಸೂಚಿಸಿರುವುದು ಗಮನಾರ್ಹವಾದ ಸಂಗತಿಯಾಗಿದೆ. ಇದು ಮಹಿಳೆಯರಿಗೆ ಇರುವ ಸ್ಥಾನಮಾನವನ್ನು ತೋರ್ಪಡಿಸುತ್ತದೆ.

ಕೃಷ್ಣದೇವರಾಯನ ಶಾಸನಗಳಲ್ಲಿ ಕೆಲವು ಗ್ರಾಮಗಳಿಗೆ ಪ್ರತಿನಾಮ ಗ್ರಾಮಗಳಿದ್ದವೆಂದು ದಾಖಲಿಸಿವೆ. ಒಂದು ಗ್ರಾಮಕ್ಕೆ ಪರ್ಯಾಯವಾಗಿ ಇನ್ನೊಂದು ಹೆಸರನ್ನು ಇಡುವಾಗ ರಾಜನ ಹೆಸರನ್ನೇ ರಾಜರ ಪೂರ್ವಜರಿಗೆ ಗೌರವಾರ್ಥವಾಗಿ ಅವರ ಹೆಸರುಗಳನ್ನು ಇಟ್ಟಿರುವುದು ಈ ಮೇಲಿನ ಶಾಸನಗಳ ಅಧ್ಯಯನದಿಂದ ತಿಳಿಯಬಹುದಾಗಿದೆ. ಒಂದು ಗ್ರಾಮವನ್ನು ದೇವಾಲಯಕ್ಕೆ ದಾನ ನೀಡುವಾಗ ಆ ದೇವಾಲಯದ ಮುಖ್ಯ ದೇವರ ಹೆಸರನ್ನು ಇಟ್ಟು ಅವುಗಳಿಗೆ ಪುರ ಎಂಬ ಗುಣವಾಚಕವನ್ನು ಸೇರಿಸಿರುವುದು ಗಮನಾರ್ಹವಾದ ಸಂಗತಿ. (ಉದಾ: ಕೃಷ್ಣಾಪುರ, ಕೃಷ್ಣದೇವರಾಯಪುರ, ವಿನಾಯಕಪುರ) ಗ್ರಾಮಗಳಿಗೆ ಪ್ರತಿನಾಮ ಗ್ರಾಮಗಳನ್ನು ಅಧಿಕವಾಗಿ ಇಟ್ಟಿರುವುದು ಅಥವಾ ಶಾಸನಗಳಲ್ಲಿ ಅಧಿಕವಾಗಿ ಉಲ್ಲೇಖಿತವಾಗಿರುವುದು ವಿಜಯನಗರದ ಅರಸರ ಕಾಲದಲ್ಲಿ ಎಂಬುದು ಕುತೂಹಲಕಾರಿಯಾದ ಅಂಶವಾಗಿದೆ.

ಕೃಷ್ಣದೇವರಾಯನ ಕಾಲದಲ್ಲಿ ಗ್ರಾಮಗಳಿಗೆ ಪ್ರತಿನಾಮ ಗ್ರಾಮಗಳನ್ನು ಇರಿಸುವುದು ಮಹತ್ವವನ್ನು ಪಡೆದಿತ್ತು ಎಂದು ಅಭಿಪ್ರಾಯಪಡಬಹುದು. ಇದರೊಂದಿಗೆ ಗ್ರಾಮಗಳನ್ನು ಹೊಂದಿರುವ ಅಧಿಕಾರ ಒಡೆತನ ಅವುಗಳ ಹೆಸರುಗಳನ್ನು ಬದಲಾಯಿಸುವ ಅಧಿಕಾರವನ್ನು ಖರೀದಿಸುವವರು ಪಡೆದಿರುತ್ತಿದ್ದರು ಮತ್ತು ಗ್ರಾಮಗಳಿಗೆ ಹೆಸರಿಸುತ್ತಿದ್ದರು ಎಂದು ಕಂಡುಬಂದಿದೆ.

ಪ್ರತಿನಾಮ ಗ್ರಾಮಕ್ಕೆ ಮೌಲ್ಯಯುತವಾದ ಬೆಲೆಯಿತ್ತು. ಅವುಗಳನ್ನು ಖರೀದಿಸುವ ಮತ್ತು ಮಾರಾಟ ಮಾಡುವ ಪದ್ಧತಿಯು ಇತ್ತು. ಗ್ರಾಮಗಳ ಮೌಲ್ಯವನ್ನು ತಿಳಿಸುವ ಶಾಸನಗಳಿಂದ ಅಂದಿನ ಆರ್ಥಿಕ ಪರಿಸ್ಥಿತಿಯ ಬಗೆಗೆ ಮಾಹಿತಿಯನ್ನು ಈ ಅಧ್ಯಯನ ನೀಡಿದೆ. ಇವೆಲ್ಲಕ್ಕಿಂತ ಮುಖ್ಯವಾದ ಅಂಶವು ಬೆಳಕಿಗೆ ಬರುತ್ತದೆ. ಹಲವಾರು ಕಾರಣಗಳಿಂದ ಗ್ರಾಮಗಳಿಗೆ ಇದ್ದ ಹೆಸರನ್ನು ಬದಲಾಯಿಸಿ ಪ್ರತಿನಾಮಗಳನ್ನು ಇರಿಸಿದರು. ಪ್ರಾಚೀನ ಹೆಸರುಗಳೇ ಅಂದರೆ ರೂಢಿಯಲ್ಲಿ ಬಂದಂತಹ ನಾಮಗಳೇ ಹಲವಾರು ಶತಮಾನಗಳು ಕಳೆದರು ಉಳಿದುಕೊಂಡು ಬಂದಿದ್ದ ಹೊಸನಾಮಗಳು ಕೇವಲ ಕೆಲವು ವರ್ಷಗಳ ಕಾಲ ಚಾಲ್ತಿಯಲ್ಲಿದ್ದು ನಂತರ ಅವುಗಳು ಕಾಲಗರ್ಭದಲ್ಲಿ ಹುದುಗಿಹೋಗಿರುವುದು ಈ ಅಧ್ಯಯನದಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ಇಂತಹ ಅಧ್ಯಯನವನ್ನು ಬೇರೆ ಬೇರೆ ರಾಜವಂಶಗಳ ಶಾಸನಗಳನ್ನು ಅಧ್ಯಯನ ಮಾಡಿದಾಗ ಹಲವಾರು ಹೊಸ ಹೊಸ ಮತ್ತು ಕುತೂಹಲಕಾರಿಯಾದ ಮಹತ್ವದ ಅಂಶಗಳು ಬೆಳಕಿಗೆ ಬರುತ್ತವೆ ಎನ್ನುವುದರಲ್ಲಿ ಸಂಶಯವಿಲ್ಲ.

ಈ ಮೇಲ್ಕಂಡ ವಿವರಗಳನ್ನು ಗಮನಿಸಿದರೆ ದೇವಾಲಯ ಸೇವೆಗಳಿಗಾಗಿ ಬ್ರಾಹ್ಮಣ ಸಮುದಾಯಕ್ಕೆ ಹೆಚ್ಚಿನ ಗ್ರಾಮದಾನ ನೀಡಿರುವುದು ಕಂಡುಬರುತ್ತದೆ. ಅಲ್ಲದೆ ಆ ಗ್ರಾಮಗಳನ್ನು ಪುರಗಳನ್ನಾಗಿ ಪರಿವರ್ತಿಸಿ ಅಗ್ರಹಾರಗಳನ್ನಾಗಿ ರೂಪಿಸಿ ಬ್ರಾಹ್ಮಣ ಸಮುದಾಯಕ್ಕೆ ನೀಡಲಾಗಿದೆ. ಹೀಗೆ ಅನೇಕ ಆಂತರಿಕ ಮತ್ತು ಬಾಹ್ಯ ಕಾರಣಗಳಿಂದ ದೇವರು, ಧಾರ್ಮಿಕ ಚಟುವಟಿಕೆಗಳನ್ನು ಪ್ರೇರೇಪಿಸುತ್ತ ಧರ್ಮಕ್ಕೆ ಸಂಬಂಧಿಸಿದ ಕಾರ್ಯಗಳನ್ನೇ ಉದ್ಯೋಗವಾಗಿ ಮಾಡಿಕೊಂಡು ಆಡಳಿತಗಾರರು ಧಾರ್ಮಿಕ ಚಟುವಟಿಕೆಗೆ ಆದ್ಯತೆ ನಿಡುತ್ತಿದ್ದರು.

ಈ ಅಂಶವನ್ನು ಬಂಡವಾಳವನ್ನಾಗಿಟ್ಟುಕೊಂಡು ಆಡಳಿತಗಾರರು ಧಾರ್ಮಿಕ ಚಟುವಟಿಕೆಗಳಿಗೆ ಹೆಚ್ಚಿನ ನೆರವನ್ನು ನೀಡುತ್ತಾ ದೇವಾಲಯ ಸಂಸ್ಕೃತಿಯನ್ನು ಪೋಷಿಸುತ್ತಾ ಮುಗ್ಧ ಜನರ ಬೆಂಬಲವನ್ನು ಗಳಿಸುತ್ತಿದ್ದರು. ಹೆಚ್ಚಾಗಿ ಪ್ರತಿನಾಮ ಗ್ರಾಮಗಳನ್ನು ದಾನ ನೀಡಿರುವುದು ಬ್ರಾಹ್ಮಣರಿಗೆ ಮಾತ್ರ ಇತ್ತು ಎಂಬ ಅಂಶವು ಶಾಸನಾಧಾರಗಳಿಂದ ತಿಳಿದುಬರುತ್ತದೆ.

ಒಟ್ಟಾರೆಯಾಗಿ, ಕೃಷ್ಣದೇವರಾಯನ ಕಾಲಾವಧಿಯಲ್ಲಿ ಇಂತಹ ಪ್ರಕ್ರಿಯೆ ಎಂದರೆ ಪ್ರಾಚೀನ ಗ್ರಾಮಗಳಿಗೆ ಹೆಸರುಗಳನ್ನು ಬದಲಾಯಿಸುವ ಪ್ರಕ್ರಿಯೆಯು ಗಮನಾರ್ಹವಾಗಿದೆ.

ಅಡಿ ಟಿಪ್ಪಣಿಗಳು

1. ಪಿ.ಬಿ. ದೇಸಾಯಿ, *ಹಿಸ್ಟರಿ ಆಫ್ ಕರ್ನಾಟಕ*, ಪು. 42–45.
2. ಡಿ.ವಿ. ಪರಶಿವಮೂರ್ತಿ, *ಕೃಷ್ಣದೇವರಾಯನ ಶಾಸನಗಳು*, ಪು. 23–25.
3. *ಅದೇ*, ಪು. 94–97.
4. *ಅದೇ*, ಪು. 37.
5. *ಅದೇ*, ಪು. 40–41.

ಕ್ರಮ ಸಂಖ್ಯೆ	ರಾಜ	ಶಾಸನದಲ್ಲಿ ಉಲ್ಲೇಖಿತ ಗ್ರಾಮದ ಹೆಸರು	ಕೋಷ್ಟಕ ಗ್ರಾಮದ ಪ್ರತಿನಾಮ	ಶಾಸನದ ತೇದಿ	ಉಲ್ಲೇಖ	ವಿವರ
1	ಕೃಷ್ಣದೇವರಾಯ	ಹಂಪದೇವನಹಳ್ಳಿ	ಶ್ರೀಕೃಷ್ಣದೇವರಾಯಪುರ	ಕ್ರಿ.ಶ. 1511	ಕ.ವಿ.ಶಾ.ಸಂ. 1–39	ರಾಜನ ಹೆಸರು
2	ಕೃಷ್ಣದೇವರಾಯ	ಹಿರಿಯಜಟ್ಟಿಗ ಗ್ರಾಮ	ಚಿನ್ನಾದೇವಿಪುರ	ಕ್ರಿ.ಶ. 1523	ಕ.ವಿ.ಶಾ.ಸಂ. 1–37	ರಾಣಿಯ ಹೆಸರು
3	ಕೃಷ್ಣದೇವರಾಯ	ಕಿತ್ತಾನೆ ಗ್ರಾಮ	ತಿರುಮಲಾದೇವಿ ಪುರ	ಕ್ರಿ.ಶ. 1515	ಕ.ವಿ.ಶಾ.ಸಂ. 1–33	ರಾಣಿಯ ಹೆಸರು
4	ಕೃಷ್ಣದೇವರಾಯ	ಹೊಂಗನೂರು	ಬ್ರಾಹ್ಮಣ್ಯತೀರ್ಥಪುರ	ಕ್ರಿ.ಶ. 1523	ಎ.ಕ. 10, ಶಾ.ಸಂ. 153	ವೈಷ್ಣವ ಸಿದ್ಧಾಂತದ ಸ್ಥಾಪನಾಚಾರ್ಯ
5	ಕೃಷ್ಣದೇವರಾಯ	ಸಂಕಲಾಪುರ	ವಿನಾಯಕಪುರ	ಕ್ರಿ.ಶ. 1513	ಕ.ವಿ.ಶಾ.ಸಂ. 1–32	ಗ್ರಾಮದ ದೇವರ ಹೆಸರು
6	ಕೃಷ್ಣದೇವರಾಯ	ನಾಗೇನಹಳ್ಳಿ	ನಾಗಲಾದೇವಿಪುರ	ಕ್ರಿ.ಶ. 1516	ಕ.ವಿ.ಶಾ.ಸಂ. 28	ರಾಜನ ತಾಯಿಯ ಹೆಸರು

12

ಕೃಷ್ಣದೇವರಾಯನ ಕಾಲದ ಶಾಸನಗಳಲ್ಲಿ ಅರವಟಿಗೆಗಳು

ಎಸ್. ನಾಗರಾಜಪ್ಪ

ವಿಜಯನಗರ ಸಾಮ್ರಾಜ್ಯ ದಕ್ಷಿಣ ಭಾರತವನ್ನಾಳಿದ ಪ್ರಸಿದ್ಧ ಅರಸರ ಮನೆತನ. ಉತ್ತರದ ದಾಳಿಗಳಿಂದ ಉಂಟಾಗಿದ್ದ ರಾಜಕೀಯ ಕ್ಷೋಭೆಯನ್ನು ಶಮನಗೊಳಿಸುವಲ್ಲಿ ಮಹತ್ವದ ಪಾತ್ರವಹಿಸಿದ ವಿಜಯನಗರ ಸಾಮ್ರಾಜ್ಯಕ್ಕೆ ಆನೆಗೊಂದಿ, ಹಂಪೆ ಮತ್ತು ಪೆನುಗೊಂಡೆಗಳು ರಾಜಧಾನಿಗಳಾಗಿದ್ದವು. ಆನೆಗೊಂದಿಯಿಂದ ಹಂಪೆಗೆ ರಾಜಧಾನಿ ವರ್ಗಾವಣೆಯ ಅನಂತರ ಹಂಪಿ ಪ್ರಮುಖ ವ್ಯಾಪಾರಿ ಮತ್ತು ಧಾರ್ಮಿಕ ಕೇಂದ್ರವಾಗಿ ಅಭಿವೃದ್ಧಿಯಾಯಿತು. ಪ್ರತಿಫಲವಾಗಿ ಹಂಪೆಗೆ ಆಗಮಿಸುವವರ ಸಂಖ್ಯೆಯೂ ಹೆಚ್ಚಾಗತೊಡಗಿತು.

ಕೃಷ್ಣದೇವರಾಯ ವಿಜಯನಗರ ಸಾಮ್ರಾಜ್ಯದ ಪ್ರಸಿದ್ಧ ದೊರೆ. ದಕ್ಷಿಣ ಭಾರತದ ಬಹುತೇಕ ಪ್ರದೇಶಗಳಿಗೆ ತನ್ನ ಸಾಮ್ರಾಜ್ಯವನ್ನು ವಿಸ್ತರಿಸುವುದರೊಡನೆ, ಸಾಮ್ರಾಜ್ಯದ ಆರ್ಥಿಕ ವರಮಾನವನ್ನು ಹೆಚ್ಚಿಸಿದ್ದಲ್ಲದೆ, ಪೋರ್ಚುಗೀಸರೊಡನೆ ವ್ಯಾಪಾರ ಸಂಪರ್ಕವನ್ನು ಬೆಳೆಸಿ ಸಾಮ್ರಾಜ್ಯದ ಬೆಳವಣಿಗೆಗೆ ಕಾರಣೀಭೂತನಾದನು. ಅಂತೆಯೇ ಹಂಪೆಗೆ ಆಗಮಿಸುವ ಮತ್ತು ಹಂಪೆಯಿಂದ ಇತರ ಪ್ರದೇಶಗಳಿಗೆ ಪ್ರಯಾಣ ಬೆಳೆಸುವ ದಾರಿಹೋಕರಿಗೆ ಅನುಕೂಲವಾಗಲೆಂದು ಅಲ್ಲಲ್ಲಿ ಅನ್ನಛತ್ರಗಳು, ಅಗ್ರಹಾರಗಳು, ಅರವಟಿಗೆಗಳನ್ನು ಅರಸ, ದಂಡನಾಯಕ ಮುಂತಾದ ಪ್ರಮುಖರು ಸ್ಥಾಪಿಸುತ್ತಿದ್ದರು. ಕೃಷ್ಣದೇವರಾಯನ ಕಾಲದ ಶಾಸನಗಳಲ್ಲಿ ಉಲ್ಲೇಖಗೊಂಡ ಅರವಟಿಗೆಗಳ ಸ್ಥಾಪನೆಯ ಉದ್ದೇಶ, ಮಹತ್ವ ಮತ್ತು ನಿರ್ವಹಣೆಯನ್ನು ಕುರಿತು ವಿಶ್ಲೇಷಿಸುವುದು ಈ ಲೇಖನದ ಉದ್ದೇಶ.

ಮಾನವ ಜೀವನದಲ್ಲಿ ನೀರಿಗೆ (ಉದಕ) ಮಹತ್ವದ ಸ್ಥಾನವಿದೆ. ಪಂಚಭೂತಗಳಲ್ಲಿ ಒಂದಾದ ನೀರು ಮಾನವನ ಅವಿಭಾಜ್ಯ ಅಂಗವೂ ಹೌದು. ಭೂಮಂಡಲದಲ್ಲಿನ ಸಕಲ ಚರಾಚರ ಜೀವಿಗಳೂ ನೀರಿನಿಂದಲೇ ಉಗಮಗೊಂಡು ನೀರನ್ನೇ ಅವಲಂಬಿಸಿವೆ. ಶಿಲಾಯುಗದಿಂದ ಹಿಡಿದು ಇಂದಿನವರೆಗೆ ಮಾನವನು ವಿಪುಲವಾಗಿ ನೀರು ದೊರೆಯುವ ಸ್ಥಳಗಳಲ್ಲಿ ವಾಸಿಸುತ್ತಿರುವುದನ್ನು ಕಾಣಬಹುದು. ಆಹಾರವಿಲ್ಲದೆ ಸ್ವಲ್ಪ ಕಾಲ ಜೀವಿಸಬಹುದು. ಆದರೆ ಉದಕವಿಲ್ಲದೆ ಜೀವಿಸುವುದನ್ನು ಊಹಿಸಲೂ ಸಾಧ್ಯವಿಲ್ಲ. ಇದಕ್ಕಾಗಿಯೇ ಮಾನವ ನೀರಿಗೆ ಕೊಡುವ ಪ್ರಾಧಾನ್ಯ ಹೆಚ್ಚು.

ಪ್ರಾಚೀನ ಕಾಲದಲ್ಲಿ ಕೆರೆಯನ್ನು ಕಟ್ಟಿಸುವುದು, ಬಾವಿಯನ್ನು ತೊಡುವುದು, ಅಗ್ರಹಾರ, ಅನ್ನಛತ್ರ ಮತ್ತು ಅರವಟ್ಟಿಗೆಗಳನ್ನು ಸ್ಥಾಪಿಸುವುದು ಪುಣ್ಯದ ಕೆಲಸವೆಂದು ಭಾವಿಸುತ್ತಿದ್ದರು. ದಾನಗಳಲ್ಲೆಲ್ಲಾ ಶ್ರೇಷ್ಠ 'ಉದಕದಾನ'ವೆಂದು

ಶಾಸನ ಮತ್ತು ಸಾಹಿತ್ಯ ಕೃತಿಗಳು ತಿಳಿಸುತ್ತವೆ. 'ಉದಕದಾನವೆಂದರೆ ಅರವಟ್ಟಿಗೆಗಳ ಮುಖಾಂತರ ನೀರನ್ನು ದಾನವಾಗಿ ಕೊಡುವುದು' ಎಂದರ್ಥ. ಕ್ರಿ.ಶ. 1028ರ ಶಾಸನವೊಂದು 'ಉದಕದಾನ'ದ ಬಗ್ಗೆ ತಿಳಿಸುತ್ತದೆ.[1] ಮಾನವ ತಾನು ಇರುವ ಸ್ಥಳದಿಂದ ದೂರದ ಸ್ಥಳಕ್ಕೆ ಕುದುರೆ ಅಥವಾ ಎತ್ತಿನ ಗಾಡಿಗಳ ಮೂಲಕ ಪ್ರಾಚೀನ ಕಾಲದಲ್ಲಿ ಪ್ರಯಾಣ ಕೈಗೊಳ್ಳುತ್ತಿದ್ದ. ಅವರು ತಮ್ಮ ನಿಗದಿತ ಸ್ಥಳಕ್ಕೆ ತಲುಪಲು ವಾರ ಅಥವಾ ತಿಂಗಳುಗಳೇ ಬೇಕಾಗುತ್ತಿತ್ತು. ತನ್ನೊಂದಿಗೆ ಅಗಾಧ ಪ್ರಮಾಣದ ನೀರು ಅಥವಾ ಆಹಾರವನ್ನು ಸಾಗಿಸುವುದು ಕಷ್ಟಸಾಧ್ಯವಾಗುತ್ತಿತ್ತು. ಕೆಲ ದಾನಿಗಳು ಪ್ರಯಾಣಿಕರ ಅನುಕೂಲಕ್ಕಾಗಿ ಅನ್ನಛತ್ರಗಳನ್ನು, ಅರವಟಿಗೆಗಳನ್ನು ಸ್ಥಾಪಿಸುತ್ತಿದ್ದರು.

ಅರವಟಿಗೆಯೆಂದರೆ 'ಹಾದಿಕಾರರಿಗೆ ಕುಡಿಯುವ ನೀರನ್ನು ಧರ್ಮಾರ್ಥವಾಗಿ ಕೊಡುವ ಸ್ಥಳ' ಎಂದು ಪ್ರಾಚೀನ *ಕರ್ನಾಟಕದ ಆಡಳಿತ ಪರಿಭಾಷಾಕೋಶ* ಅರ್ಥೈಸುತ್ತದೆ.[2] ಊರಿಂದ ಊರಿಗೆ, ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಹೋಗುವ ವ್ಯಾಪಾರಿ, ಯಾತ್ರಾರ್ಥಿ, ಪ್ರಯಾಣಿಕರು ದಣಿವಾರಿಸಿಕೊಂಡು ನೀರು ಕುಡಿದು ಹೋಗಲು ಅಲ್ಲಲ್ಲಿ ಅರವಟಿಗೆಗಳನ್ನು ಸ್ಥಾಪಿಸಲಾಗುತ್ತಿತ್ತು. ಮುಖ್ಯವಾಗಿ ವ್ಯಾಪಾರಿ ಮಾರ್ಗಗಳು, ದಾರಿಗಳು, ಬಜಾರಗಳು ಅಥವಾ ಹೆಚ್ಚು ಜನದಟ್ಟಣೆಯ ಸ್ಥಳಗಳಲ್ಲಿ ಅರವಟಿಗೆಗಳನ್ನು ಸ್ಥಾಪಿಸುತ್ತಿದ್ದರು. ಕಾಲಕ್ಕನುಗುಣವಾಗಿ ಅಂದರೆ ಬೇಸಿಗೆಯ ಸಮಯದಲ್ಲಿ ಮಜ್ಜಿಗೆ, ಪಾನಕವನ್ನು ಮಳೆಗಾಲದಲ್ಲಿ ನೀರನ್ನು ಸೇವಿಸಲು ಕೊಡುತ್ತಿದ್ದರು ಎಂದು ಊಹಿಸಬಹುದು.

ಕೃಷ್ಣದೇವರಾಯ ಸ್ವತಃ ಅರವಟ್ಟಿಗೆ ಸ್ಥಾಪಿಸಿ, ದಾನ ನೀಡಿದ ಉಲ್ಲೇಖಗಳು ಅವನ ಕಾಲದ ಶಾಸನಗಳಲ್ಲಿ ಲಭ್ಯವಿಲ್ಲ. ಆದರೆ ಅರಸನಿಗೆ ಪುಣ್ಯವಾಗಬೇಕೆಂದು ಕೃಷ್ಣದೇವರಾಯನ ಅಧೀನಾಧಿಕಾರಿಗಳು ಅರವಟಿಗೆ ಸ್ಥಾಪಿಸಿ, ದಾನ ನೀಡಿದ ಉಲ್ಲೇಖಗಳು ದೊರೆಯುತ್ತವೆ. ಕೃಷ್ಣದೇವರಾಯನ ಕಾಲದ ಪೂರ್ವದಲ್ಲೇ ಹಂಪಿ ಪರಿಸರದಲ್ಲಿ ಅರವಟಿಗೆಯಿದ್ದ ಬಗ್ಗೆ ಶಾಸನವೊಂದು ತಿಳಿಸುತ್ತದೆ.

ಮಲಪನಗುಡಿಯ ಈಶ್ವರ ದೇವಾಲಯದ ಮುಂದಿರುವ ಕ್ರಿ.ಶ. 1512ರ ಶಾಸನವು ಅರವಟಿಗೆಯ ಸ್ಥಾಪನೆ ಮತ್ತು ನಿರ್ವಹಣೆಯ ಬಗ್ಗೆ ಮುಖ್ಯವಾದ ಮಾಹಿತಿ ಒದಗಿಸುತ್ತದೆ.[3] ದೇವರಾಯನ ಆಳ್ವಿಕೆ ಅವಧಿಯಲ್ಲಿ ಬುಳ್ಳನಾಯಕನ ಮಗ ಹೆಗ್ಗಡೆ ಸೋಮಣ್ಣ ಅಣ್ಣನು ಬಿಸಿಲು ಹಳ್ಳಿ ಕಣಿವೆ ಮತ್ತು ಬಡುವಲಿಯ ಕಣಿವೆಗಳು ಕೂಡುವ ಮಹಾಪಥದಲ್ಲಿ ಅರವಟಿಗೆಯನ್ನು ಸ್ಥಾಪಿಸಿ, ಮಾಳಿಗೆ ಕೂಪಾರಾವು ಬಾವಿಯನ್ನು ನಿರ್ಮಿಸಿದನು. ಅರವಟಿಗೆಯ ನಿರ್ವಹಣೆಗಾಗಿ ಮೂರು ವ್ರಿತ್ತಿ ಭೂಮಿಯನ್ನು ಕ್ರಯಕ್ಕೆ ತೆಗೆದುಕೊಂಡು ಅದರ ಬೆಳೆಯ ಆದಾಯವನ್ನು ಮೂರು ಭಾಗ ಮಾಡಿ, ಅರವಟಿಗೆಯನ್ನು ನಡೆಸುವ ಸಂಪೂರ್ಣ ಉಸ್ತುವಾರಿ ಹೊತ್ತಿದ್ದ ವಿರುಪಣ್ಣನಿಗೆ ಒಂದು ಭಾಗ, ಅರವಟಿಗೆಗೆ ನೀರು ಪೂರೈಸುವವರಿಗೆ, ಅರವಟಿಗೆ ಸುತ್ತಲೂ ಇದ್ದ ಮರಗಳಿಗೆ ನೀರನ್ನು ಹಾಕಲು, ಮಾಳಿಗೆ ಹಾಳಾದರೆ ಅದರ ದುರಸ್ತಿಗೆ ಮತ್ತು ಹೂಳು ತೆಗೆಯಲು, ಅರವಟಿಗೆ ನಡೆಸಲು ಬೇಕಾದ ಗುಡಾಣ, ಬಿಂದಿಗೆ, ಕರಗ, ಮೊಘೆ ಮುಂತಾದ ಪರಿಕರಗಳಿಗೆ ಮತ್ತು ಇಲ್ಲಿನ ಮನೆಗಳಿಗೆ ಉಳಿದ ಎರಡು ಭಾಗಗಳನ್ನು ದಾನ ನೀಡಲಾಗಿದೆ. ಅರವಟಿಗೆ ಸ್ಥಾಪಿಸಿ ಯಾವುದೇ ಅಡಚಣೆಗಳಿಲ್ಲದೆ ಸುಗಮ ನಿರ್ವಹಣೆಗಾಗಿ ದಾನಗಳನ್ನು ನೀಡಲಾಗಿತ್ತು. ಈ ಅರವಟಿಗೆಯು ಪಶ್ಚಿಮ ಕರಾವಳಿ ತೀರದ ಬಾರಕೂರು, ಗೋವಾದಿಂದ ಹಂಪೆಯನ್ನು ಪ್ರವೇಶಿಸುವ ಮುಖ್ಯ ರಸ್ತೆಯ ಬಾಗಿಲ ಬಳಿಯಿದ್ದುದು ಗಮನಾರ್ಹ ಸಂಗತಿ.

ಕೃಷ್ಣದೇವರಾಯನ ಕಾಲದ ಎರಡು ಶಾಸನಗಳು ಮೂರು ಅರವಟಿಗೆಗಳ ಬಗ್ಗೆ ಮಾಹಿತಿ ನೀಡುತ್ತವೆ. ಬಳ್ಳಾರಿ ಜಿಲ್ಲೆ ಹೂವಿನ ಹಡಗಲಿ ತಾಲ್ಲೂಕಿನ ಸೋಗಿ ಗ್ರಾಮದ ಶಾಂತೇಸ್ವಾಮಿ ದೇವಾಲಯದ ತೋಟದಲ್ಲಿರುವ ಕ್ರಿ.ಶ.

1516ರ ಶಾಸನವೊಂದು ಗೋವಿನ ಅರವಟಿಗೆಯ ಬಗ್ಗೆ ಮಾಹಿತಿ ಅರುಹುತ್ತದೆ.[4] ಶಾಸನವು ತಿಳಿಸುವಂತೆ ಕೃಷ್ಣದೇವರಾಯನ ಭುಜಪ್ರತಾಪನಾಗಿದ್ದವನು ಇಮ್ಮಡಿ ಬಸವಪ್ಪವೊಡೆಯ. ಕೊಟ್ಟೂರಿನ ಪ್ರಧಾನಿ ಅರುಹ ತಿಮ್ಮಣ್ಣನಾಯಕನು ಶ್ರೀ ಕೃಷ್ಣದೇವರಾಯರಿಗೆ ಪುಣ್ಯವಾಗಬೇಕೆಂದು ಇಮ್ಮಡಿ ಬಸವಪ್ಪವೊಡೆಯನ ತಾಯಿ ಪಾರ್ವತಿ ಅಮ್ಮನವರ ನಿರೂಪದಿಂದ ಧರ್ಮದ ಏತವನ್ನು ಮಾಡಿಸಿ, ಅದರ ನಿರ್ವಹಣೆಗಾಗಿ ಡಣಾಯಕಪುರವನ್ನು ದಾನವಾಗಿ ನೀಡಿರುವುದನ್ನು ಕಾಣಬಹುದು. ಬಹುಶಃ ಅರವಟಿಗೆಗೆ ನೀರನ್ನು ಕುಡಿಯಲು ಬರುವ ದನಕರುಗಳ ಸಂಖ್ಯೆ ಹೆಚ್ಚಾಗಿದ್ದು, ಮಾನವರಿಂದ ಹೆಚ್ಚು ನೀರಿನ ಪೂರೈಕೆ ಕಷ್ಟವಾದಾಗ ಕಡಿಮೆ ಸಮಯದಲ್ಲಿ ಹೆಚ್ಚಿನ ನೀರನ್ನು ಬಾವಿಯಿಂದ ಹೊರತೆಗೆದು ಅರವಟಿಗೆಗೆ ಪೂರೈಸಲು ಈ ಧರ್ಮದ ಏತವನ್ನು ಮಾಡಿಸಿದ್ದಿರಬಹುದು. ಇದುವರೆಗೆ ಮಾನವನಿಗೆ ಕುಡಿಯಲು ನೀರು ಪೂರೈಸುವ ಅರವಟಿಗೆಗಳನ್ನು ಮಾತ್ರ ಕೇಳಿದ್ದು, ಪಶುಗಳಿಗಾಗಿ ಪ್ರತ್ಯೇಕ ಅರವಟಿಗೆಗಳು ಇರುವ ಬಗ್ಗೆ ಮಾಹಿತಿ ಒದಗಿಸುತ್ತಿರುವುದು ಈ ಶಾಸನದ ವಿಶೇಷತೆ.

ಗದಗದ ವೀರನಾರಾಯಣ ದೇವಾಲಯದ ಉತ್ತರ ಪ್ರಾಕಾರದ ಗೋಡೆಯಲ್ಲಿನ ಕ್ರಿ.ಶ. 1519ರ ಶಾಸನವು ಗದಗ ಭಾಗದಲ್ಲಿ ಎರಡು ಅರವಟಿಗೆಗಳಿದ್ದ ಬಗ್ಗೆ ಮಾಹಿತಿ ಒದಗಿಸುತ್ತದೆ.[5] ಗದಗದ ವೀರನಾರಾಯಣ ದೇಗುಲದ ತೇರುಬೀದಿ ಬಳಿಯ ಕೋಟೆಯ ಮುಂಭಾಗದಲ್ಲಿ ಒಂದು ಅರವಟಿಗೆ ಮತ್ತು ಬಟ್ಟಕ್ಕೆರೆ (ಇಂದಿನ ಬೆಟಗೇರಿ) ಮತ್ತು ಬೆನಕನಕೊಪ್ಪ ಗ್ರಾಮಗಳ ಮಧ್ಯೆ ಇರುವ ರಸ್ತೆಯ ನಡುವೆ ಎರಡನೆಯ ಅರವಟಿಗೆಯಿತ್ತು. ನಾಗಿನಾಯಕನ ಮಗ ನಯನಪ್ಪನಾಯಕನು ಪತ್ತೊಡೆಯರಿಗೆ ಈ ಅರವಟಿಗೆಗಳಿಗೆ ನೀರು ಪೂರೈಸಿ ಸೇವೆ ಸಲ್ಲಿಸಲು ಹತ್ತು ಕೊಳಗ ಹೊಲವನ್ನು ವಿರೂಪಾಕ್ಷನ ಸನ್ನಿಧಿಯಲ್ಲಿ ದಾನ ನೀಡಲಾಗಿದೆ.

ಒಟ್ಟಾರೆಯಾಗಿ ಕೆರೆಯನ್ನು ಕಟ್ಟಿಸುವುದು, ಬಾವಿಯನ್ನು ತೋಡಿಸುವುದು, ಅರವಟ್ಟಿಗೆಗಳನ್ನು ಸ್ಥಾಪಿಸಿ ಉದಕದಾನ ಮಾಡುವುದು ಪುಣ್ಯದ ಜನೋಪಕಾರಿ ಕೆಲಸವಾಗಿತ್ತು. ಅರವಟಿಗೆಗಳನ್ನು ಹೆದ್ದಾರಿ ಅಥವಾ ಪ್ರಮುಖ ಮಾರ್ಗಗಳು, ದೇವಾಲಯಗಳು, ಕೋಟೆ ದ್ವಾರಗಳು, ಬಜಾರುಗಳಂತ ಜನದಟ್ಟಣೆಯ ಪ್ರದೇಶದಲ್ಲಿ ಸ್ಥಾಪಿಸುತ್ತಿದ್ದರು. ಮಾನವರಂತೆ ಪಶುಗಳಿಗೂ ಪ್ರತ್ಯೇಕವಾದ ಅರವಟ್ಟಿಗೆಗಳಿದ್ದವು. ಪ್ರಯಾಣದಿಂದ ಆಯಾಸಗೊಂಡ ಜನರಿಗೆ ಕುಳಿತು ವಿಶ್ರಮಿಸಲು ಸಮೃದ್ಧವಾಗಿ ಮರಗಳನ್ನು ಅರವಟಿಗೆ ಸಮೀಪ ಬೆಳೆಸುತ್ತಿದ್ದರು. ಅರವಟಿಗೆಗಳನ್ನು ಸ್ಥಾಪಿಸಿದವರು ಅದರ ನಿರ್ವಹಣೆಗಾಗಿ ನೀಡಿದ ಹಣ ಮತ್ತು ಹವಾಮಾನಗಳಿಗೆ ಅನುಗುಣವಾಗಿ ಕುಡಿಯಲು ಮಜ್ಜಿಗೆ, ಪಾನಕವನ್ನು ಪೂರೈಸುತ್ತಿದ್ದರು. ಉದಕವನ್ನು ಸದಾಕಾಲ ನೀಡುತ್ತಿದ್ದರು.

ಪ್ರಸ್ತುತ ಅರವಟಿಗೆಗಳನ್ನು ಉಲ್ಲೇಖಿಸುವ ಎರಡು ಶಾಸನಗಳಲ್ಲಿ ಸೋಗಿಯ ಶಾಸನವು ಗೋವುಗಳಿಗಾಗಿ ಇದ್ದ ಪ್ರತ್ಯೇಕ ಅರವಟಿಗೆಯನ್ನು ಉಲ್ಲೇಖಿಸುತ್ತದೆ. ಶಾಸನಗಳಲ್ಲಿ ಅರವಟಿಗೆಗಳ ಉಲ್ಲೇಖ ದೊರಕುವುದು ಕಡಿಮೆ. ಅದರಲ್ಲಿಯೂ ದನಕರುಗಳಿಗೆ ಪ್ರತ್ಯೇಕ ಅರವಟ್ಟಿಗೆಗಳು ಇರುತ್ತಿದ್ದವೆಂಬ ತೀರಾ ವಿರಳವಾದ ಮಾಹಿತಿ ಒದಗಿಸುತ್ತಿರುವುದು ಈ ಶಾಸನದ ಮಹತ್ವವನ್ನು ಹೆಚ್ಚಿಸಿದೆ. ಅರವಟಿಗೆ ನಿರ್ವಹಣೆಗೆ ಡಣಾಯಕಪುರವನ್ನು ದಾನವಾಗಿ ನೀಡಿದ್ದು, ಅರವಟಿಗೆಗೆ ವೆಚ್ಚ ಮಾಡಿ ಉಳಿದ ಹಣವನ್ನು ಕಲಿನಾಥ ದೇವರಿಗೆ ಬಳಸಬೇಕೆಂದು ಶಾಸನ ತಿಳಿಸುತ್ತದೆ. ಅಂದರೆ ಇಲ್ಲಿ ಗೋವಿನ ಅರವಟಿಗೆ ನಿರ್ವಹಣೆಗೆ ಮೊದಲ ಆದ್ಯತೆ ನೀಡಿರುವುದು ಸುಸ್ಪಷ್ಟ. ಗದಗದ ಶಾಸನವು ಎರಡು ಅರವಟಿಗೆಗಳ ಬಗ್ಗೆ ಮಾಹಿತಿ ನೀಡುತ್ತದೆ. ಅರವಟಿಗೆಗಳನ್ನು ಯಾವ ಯಾವ ಭಾಗಗಳಲ್ಲಿ ಸ್ಥಾಪಿಸುತ್ತಿದ್ದರು ಎನ್ನುವ ಸೂಚನೆಯನ್ನು ಪ್ರಸ್ತುತ ಶಾಸನವು ಒದಗಿಸುತ್ತದೆ.

ಅಡಿ ಟಿಪ್ಪಣಿಗಳು

1. ಶ್ರೀನಿವಾಸ ರಿತ್ತಿ ಮತ್ತು ಇತರರು (ಸಂ.), 2000, *ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾಕೋಶ*, ಪು. 196.
2. *ಅದೇ*, ಪು. 198.
3. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-1*, ಬಳ್ಳಾರಿ ಜಿಲ್ಲೆ, ಹೊಸಪೇಟೆ, ಸಂ. 32 ಮತ್ತು Channabasappa S.Patil, 'Malige-Kupa-Arama at Malapanagudi', Devaraj D.V. and Channabasappa S.Patil (Eds.), 1991, *Vijayanagara Progress of Research,* 1984-1987, pp. 177-182.
4. ಪರಮಶಿವಮೂರ್ತಿ ಡಿ.ವಿ. (ಸಂ.), 2010, *ಕೃಷ್ಣದೇವರಾಯನ ಶಾಸನಗಳು*, ಸಂಪುಟ-1, ಸಂ. 87, ಸೋಗಿ.
5. *ಅದೇ*, ಸಂ. 121, ಗದಗ.

13

ಮಂಡ್ಯ ಪ್ರದೇಶದ ಶ್ರೀ ಕೃಷ್ಣದೇವರಾಯನ ಕಾಲದ ಶಾಸನಗಳ ಅಧ್ಯಯನ

ಡಾ|| ಎಸ್. ಶಿವರಾಮು

ವಿಶ್ವವಿಖ್ಯಾತ ವಿಜಯನಗರದ ಚರಿತ್ರೆಯಲ್ಲಿ ಕೃಷ್ಣದೇವರಾಯನು ಅತ್ಯಂತ ಜನಪ್ರಿಯ ಅರಸನಾಗಿದ್ದಾನೆ. ಅನೇಕ ವಿದ್ವಾಂಸರ ಹಾಗೂ ಚರಿತ್ರೆಕಾರರ ದೃಷ್ಟಿಯಲ್ಲಿ ವಿಜಯನಗರದ ಚರಿತ್ರೆಯೆಂದರೆ ಕೃಷ್ಣದೇವರಾಯನ ಚರಿತ್ರೆ ಎಂಬಂತೆ ಬಿಂಬಿತವಾಗಿದೆ. ರಾಜ್ಯತಂತ್ರ ಪ್ರತಿಭೆ, ಆಡಳಿತ ದಕ್ಷತೆ, ಕಲಾಸಾಹಿತ್ಯ ಪೋಷಕ, ಕವಿಶೂರನೆಂಬ ಹೆಸರನ್ನು ಗಳಿಸಿದ್ದ ಸಂಗಮದೊರೆ ಪ್ರೌಢದೇವರಾಯನಿಗಿಂತಲೂ ಕೃಷ್ಣದೇವರಾಯನು ಚರಿತ್ರೆಯಲ್ಲಿ ಮುಂಚೂಣಿಯಲ್ಲಿದ್ದನು. ವಿಜಯನಗರ ಸಾಮ್ರಾಜ್ಯದ ಎರಡು ಕೋಡುಗಳಾಗಿ ಈ ಇಬ್ಬರೂ ಚರಿತ್ರೆಯಲ್ಲಿ ಅಜರಾಮರರಾಗಿದ್ದಾರೆ. ತನ್ನ ವರ್ಣಮಯ ವೈಯಕ್ತಿಕ ಚಟುವಟಿಕೆಗಳಿಂದ, ಪೋಷಿ ಕವಿಗಳ ಚಿತ್ತಾರದ ವರ್ಣನೆಗಳಿಂದ, ದಾನ-ಧರ್ಮ, ದೇವಾದೇಯ ಹಾಗೂ ಬ್ರಹ್ಮದೇಯಗಳಿಂದ, ಸಮರ್ಥಸೇನಾ ಬಲದಿಂದ ನೆರೆ-ಹೊರೆ ರಾಜರುಗಳೊಂದಿಗಿನ ಯುದ್ಧ, ದಿಗ್ವಿಜಯ ಸೇಹ, ವಿಶ್ವಾಸ ಮತ್ತು ಸಂಬಂಧಗಳಿಂದ, ವಿದೇಶಿ ಪ್ರವಾಸಿಗರ ಪ್ರಶಂಸೆಗಳಿಂದ ಕೃಷ್ಣದೇವರಾಯನು ಜನಮಾನಸದಲ್ಲಿ ಭಾರತದ ಸರ್ವಶ್ರೇಷ್ಠ ರಾಜರುಗಳ ಪೈಕಿ ಒಬ್ಬನೆಂದು ಪರಿಗಣಿಸಲ್ಪಟ್ಟಿರುವನು.[1] ವಿಜಯನಗರ ಕಾಲದಲ್ಲಿ ಮಂಡ್ಯ ಹೆಸರಿನ ಉಲ್ಲೇಖ ಪ್ರಪ್ರಥಮವಾಗಿ ಕ್ರಿಶ 1516ನೇ ವರ್ಷದ ಕೃಷ್ಣದೇವರಾಯನ ಕಾಲದ ಒಂದು ತಾಮ್ರ ಶಾಸನದಲ್ಲಿದೆ. ಕೃಷ್ಣದೇವರಾಯನು ಧಾತು ಸಂವತ್ಸರದ ಕಾರ್ತಿಕ ಪೌರ್ಣಿಮೆ ಭಾನುವಾರದಂದು ಶ್ರೀರಾಮಾನುಜಾಚಾರ್ಯರ ಅನುಯಾಯಿ ಅನಂತಚಾರ್ಯರ ಪರಂಪರೆಯಲ್ಲಿ ಹನ್ನೆರಡನೆಯವರಾದ ಗೋವಿಂದಚಾರ್ಯ ಎಂಬುವವರಿಗೆ 'ಮಂಠೆಯ' ಗ್ರಾಮವನ್ನು ಕೃಷ್ಣರಾಯಪುರವೆಂದು ಕರೆದು ಇದರ ಜೊತೆಗೆ ಹೊಯ್ಸಳ ದೇಶದ ಪ್ರಸಿದ್ಧ ಸೀಮೆಯಾದ ಶ್ರೀರಂಗಪಟ್ಟಣ ಸೀಮೆಯ ಆ ಗ್ರಾಮಕ್ಕೆ ಸೇರಿದ ಉಪಗ್ರಾಮಗಳಾದ ಚಿಕ್ಕಮಂಠೆಯ, ಹೊಸಹಳ್ಳಿ, ಕಲ್ಲಹಳ್ಳಿ, ತಂಡಸೇಹಳ್ಳಿ ಹಾಗೂ ಕೋಣನಹಳ್ಳಿಗಳನ್ನು ದಾನ ಮಾಡಿದ್ದಾನೆ.[2] ಮಂಡ್ಯವನ್ನು 'ಮಂಠೆಯ' ಎಂದು ಕರೆದಿದ್ದು ಅದಕ್ಕೆ 'ಚಿಕ್ಕಮಂಟೆಯ' ಎಂಬ ಉಪಗ್ರಾಮವಿದ್ದುದ್ದು ಸ್ಪಷ್ಟ. ಈ ಮಂಠೆಯವೇ ಈಗ ಮಂಡ್ಯ ಎಂಬ ರೂಪವನ್ನು ಪಡೆದಿದೆ. ಮಂಠೆಯ ಗ್ರಾಮವು ಹೊಯ್ಸಳರ ಕಾಲದಲ್ಲೂ ಅಗ್ರಹಾರವಾಗಿತ್ತು. ಹೀಗೆ ಅಗ್ರಹಾರವಾಗಿದ್ದ, 'ಮಂಡೆಯ'ವೇ ವಿಜಯನಗರಕಾಲಕ್ಕೆ 'ಮಂಠೆಯ' ಗ್ರಾಮವಾಗಿ ಈಗ ಏಳು ತಾಲ್ಲೂಕುಗಳನ್ನೊಳಗೊಂಡ 'ಮಂಡ್ಯ' ಜಿಲ್ಲೆಯಾಗಿ ಬೆಳೆದಿದೆ. ಈ ಅರಸರ ಆಡಳಿತಕ್ಕೆ ಈಗಿನ ಮಂಡ್ಯ ಜಿಲ್ಲೆಯ ಪ್ರದೇಶವೆಲ್ಲ ಸೇರಿದ್ದಿತು. ಮಂಡ್ಯ ಜಿಲ್ಲೆಯಲ್ಲಿ ವಿಜಯನಗರ ಕಾಲದ

ಸುಮಾರು 120ಕ್ಕೂ ಹೆಚ್ಚಿನ ಶಾಸನಗಳು ದೊರಕಿವೆ. ಈ ಪ್ರಬಂಧದಲ್ಲಿ ಕೃಷ್ಣದೇವರಾಯನ ಕಾಲದಲ್ಲಿನ ಮಂಡ್ಯ ಪ್ರದೇಶದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ.

ಮಂಡ್ಯ ಜಿಲ್ಲೆಯಲ್ಲಿ ಕೃಷ್ಣದೇವರಾಯನ ಕಾಲದ ಸುಮಾರು 11 ಶಾಸನಗಳು ಲಭ್ಯವಾಗಿವೆ. ನಾಗಮಂಗಲದಲ್ಲಿ ದೊರೆತಿರುವ ಕ್ರಿ.ಶ 1511ರ ಶಾಸನವು ಕೃಷ್ಣದೇವರಾಯನ ಆಳ್ವಿಕೆಯ ಅವಧಿಯಲ್ಲಿ ನಾಗಮಂಗಲ ಅಥವಾ ವೀರಬಲ್ಲಾಳ ಚತುರ್ವೇಧಿ ಭಟ್ಟರತ್ನಾಕರ ಅಗ್ರಹಾರದಲ್ಲಿದ್ದ ವೀರಭದ್ರ ದೇವಾಲಯದ ರಂಗಮಂಟಪ ದುರಸ್ತಿ ಮಾಡಿ, ಮುಂಭಾಗದ ಗಂಧಾಗೋಡಿ ಮಂಟಪವನ್ನು ಗುಮ್ಮಾಲಪುರದ ಅಕ್ಕಣ್ಣಚೆನ್ನಶೆಟ್ಟಿಯ ಮಗನಾದ ಹೊನ್ನಿಶೆಟ್ಟಿಯು ನಿರ್ಮಿಸಿದನೆಂದು ಹಾಗೂ ಅರಮನೆಯ ಬೇಹಾರಿಯೂ ಈ ಕೈಂಕರ್ಯಕ್ಕೆ ಅವಶ್ಯವಾದ ಮಾರ್ಗದರ್ಶನ ಮಾಡಿದನೆಂದು ಶಾಸನದಲ್ಲಿ ದಾಖಲಿಸಲಾಗಿದೆ. ಕ್ರಿ.ಶ. 1512ರ ನಾಗಮಂಗಲ ತಾಲ್ಲೂಕು ದೊಡ್ಡಜಟಕದ ಒಂದು ಶಾಸನ ಪ್ರಕಾರ ಕೃಷ್ಣದೇವರಾಯನು ಹೊಯ್ಸಳದೇಶದ ಬೇಲೂರು ಸೀಮೆಯ ಹಿರಿಜತ್ತಿಗೆ ಗ್ರಾಮವನ್ನು ಅವರ 4 ಪಾಳೆಯಗಳೊಡನೆ ಚಿನ್ನದೇವಿಪುರವೆಂಬ ಹೆಸರನಿಟ್ಟು ಶ್ರೀನಿವಾಸಾಧ್ವರಿಗೆ ದಾನ ಮಾಡಿದರು. ಶ್ರೀನಿವಾಸಾಧ್ವರಿಯರು 10 ವೃತ್ತಿಗಳನ್ನು ಸ್ವಂತಕ್ಕೆ ಇಟ್ಟುಕೊಂಡು ಉಳಿದ 20 ವೃತ್ತಿಗಳನ್ನು ಅರ್ಹರಾದ ಬ್ರಾಹ್ಮಣರಿಗೆ ಕೊಟ್ಟನು. ಈ ದಾನವನ್ನು ಶಿವಗಂಗೆಯ ಗಂಗಾಧರ ಸನ್ನಿಧಿಯಲ್ಲಿ ನೀಡಿದಂತೆ ಶಾಸನದಲ್ಲಿ ಹೇಳಿದೆ.[3]

ನಾಗಮಂಗಲ ತಾಲ್ಲೂಕಿನ ದೇವಾಲಪುರ ತಾಮ್ರಪಟವು ಕ್ರಿ.ಶ. 1513ರಲ್ಲಿ ಕೃಷ್ಣದೇವರಾಯನು ಆಳ್ವಿಕೆ ಮಾಡುತ್ತಿದ್ದಾಗ ಮದನಪುರ ಹಾಗೂ ಮಲ್ಲಿಗೆರೆ ಗ್ರಾಮಗಳನ್ನು "ಕೃಷ್ಣರಾಯಪುರ" ಎಂದು ನಾಮಕರಣ ಮಾಡಿದ ಬಗ್ಗೆ ಉಲ್ಲೇಖಿಸುತ್ತದೆ.[4] ಕ್ರಿ.ಶ. 1516ರಲ್ಲಿ ಕೃಷ್ಣದೇವರಾಯ ನಾಗಮಂಗಲ ರಾಜ್ಯದ ಚಿಕ್ಕಬ್ಬೆಹಳ್ಳಿಯನ್ನು ಅದರ ಮೂರು ಪಾಳೆಯಗಳೊಡನೆ ಹಾಗೂ ಚೆನ್ನಪಟ್ಟಣ ರಾಜ್ಯದ ಹಲವು ಮರಹೊಸಹಳ್ಳಿ ಮತ್ತು ಬಿಲ್ಲಗೊಂಡನಹಳ್ಳಿ ರಾಜ್ಯದ ವಂಗೇನಗಳ್ಳಿ ಈ ಮೂರು ಗ್ರಾಮಗಳನ್ನು ವ್ಯಾಸತೀರ್ಥರೆಂಬ ಸದ್ಗುಣ ತಪಸ್ವಿಗೆ ಕೊಟ್ಟನು.[5] ನಾಗಮಂಗಲ ತಾಲ್ಲೂಕಿನ ತಿಬ್ಬನಗಹಳ್ಳಿಯ ಕ್ರಿ.ಶ. 1524ರ ಶಾಸನವು ಕೃಷ್ಣದೇವರಾಯನ ಕಾಲದಲ್ಲಿ ದೇವಲಾಪುರದ ಸ್ಥಾನದ ತಿಬ್ಬನಹಳ್ಳಿಯನ್ನು "ಕೃಷ್ಣದೇವರಾಯ ಸಮುದ್ರ" ವೆಂದು ಕರೆದು ಚನ್ನಪಟ್ಟಣದ ವೀರಪ್ಪ ದೇವರಿಗೆ ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ.

ನಾಗಮಂಗಲ ಕೋಟೆಯನ್ನು ಮೊಟ್ಟಮೊದಲು ಕಟ್ಟಿದವ ತಿಮ್ಮಣ್ಣನಾಯಕ ವಿಜಯನಗರದ ಶ್ರೀಕೃಷ್ಣದೇವರಾಯನ ದಂಡನಾಯಕರಲ್ಲೊಬ್ಬನೀತ. ಕ್ರಿ.ಶ. 1515ರ ಸುತ್ತಮುತ್ತ ನಾಗಮಂಗಲದ ಬಗ್ಗೆ ಕ್ರಿ.ಶ. 1807ರಲ್ಲಿ ಬರೆದ ಮೂಲ ಕೈಫಿಯತ್ತಿನಲ್ಲಿ ಇದರ ಬಗ್ಗೆ ಸವಿಸ್ತಾರ ಮಾಹಿತಿ ಇದೆ. ನಾಗಮಂಗಲದ ಹೊರಕೋಟೆಯನ್ನು ಕ್ರಿ.ಶ. 1578ರಲ್ಲಿ ಚನ್ನಪಟ್ಟಣದ ಜಗದೇವರಾಯನು ಕಟ್ಟಿಸಿದನು.[6]

ಕ್ರಿ.ಶ. 1517ರಲ್ಲಿ ಕೃಷ್ಣದೇವರಾಯನು ಶ್ರೀರಂಗಪಟ್ಟಣ ರಾಜಧಾನಿಯಲ್ಲಿನ ಗಂಗಾಧರೇಶ್ವರ ದೇವಸ್ಥಾಕ್ಕೆ ಉಂಬಳಿಬಿಟ್ಟನೆಂದು ತಿಳಿದುಬರುವುದಲ್ಲದೆ ಕ್ರಿ.ಶ. 1551ರ ಮೇಲುಕೋಟೆಯ ಒಂದು ದಾಖಲೆಯಲ್ಲಿ ರಾಯನು ಮೈಸೂರಿನ ಮೇಲೆ ಧಾಳಿ ಮಾಡಿದ ಬಗ್ಗೆ ಉಲ್ಲೇಖಿಸುತ್ತದೆ.[7] ನಾಗಮಂಗಲದ ಒಂದು ಶಾಸನವು ಮಾವಿನಹಳ್ಳ ಮತ್ತು ನಾಮಿಹಳ್ಳಗಳ ಸಂಗಮದಲ್ಲಿ ವೀರಣ್ಣ ಎಂಬುವವನು ಒಂದು ಕೆರೆಯನ್ನು ನಿರ್ಮಿಸಿದನೆಂದು ತಿಳಿಸುತ್ತದೆ.[8] ಕ್ರಿ.ಶ. 1519ರ ಕೃಷ್ಣದೇವರಾಯನ ಆಡಳಿತದ ಮೇಲುಕೋಟೆ ಶಾಸನವು ತೂಬು ಒಡೆದುಹೋದ ಕೋಡಿ ಹಾಗೂ ಕೆರೆಯ ದುರಸ್ತಿಯನ್ನು ತಿಳಿಸುತ್ತದೆ. ಈ ಕಾರ್ಯಕ್ಕೆ ತಗುಲಿದ ಗದ್ಯಾಣ ಸುವರ್ಣ ನಾಣ್ಯಗಳನ್ನು ಲಕ್ಷ್ಮೀಪತಿಶೆಟ್ಟಿ ಎಂಬ ವ್ಯಾಪಾರಿಯು ನೀಡಿದ. ಈ ಎಲ್ಲಾ ಕಾರ್ಯಗಳಿಗೆ ಪ್ರತಿಫಲವಾಗಿ ದೇವಾಲಯದವರು ದೇವರಿಗೆ ವಿಶೇಷ

ಪೂಜೆಯನ್ನು, ಲಕ್ಷ್ಮಿಪತಿಯವರ ತಂದೆ ತಿಬ್ಬಾಶೆಟ್ಟಿಯ ಹೆಸರಿನಲ್ಲಿ ಮಾಡಿ ದಾನಿಗೆ ಪ್ರಸಾದ ನೀಡುತ್ತಿದ್ದರು. ಈ ಶಾಸನದಲ್ಲಿ ಕೆರೆಯ ಪ್ರಮುಖ ಭಾಗಗಳಾದ ಮೊಡವು, ತೂಬು ಮತ್ತು ಕೋಡಿಯನ್ನು ಉಲ್ಲೇಖಿಸಲಾಗಿದ್ದು, ಈಗಲೂ ಇವೇ ಶಬ್ದಗಳೆ ಪ್ರಯೋಗವಾಗುತ್ತಿರುವುದು ಗಮನೀಯ ಅಂಶವಾಗಿದೆ.[9]

ಕ್ರಿ.ಶ. 1528ರ ಪಾಂಡವಪುರದ 134ನೇ ಮೇಲುಕೋಟೆ ಶಾಸನವು ಬಹಳ ಮುಖ್ಯವಾಗಿದೆ. ಈ ಶಾಸನದ ಪ್ರಕಾರ ಕೃಷ್ಣದೇವರಾಯನು ತನಗೆ ನಾಯಕತನ ದಯಪಾಲಿಸಿದುದ್ದಕ್ಕಾಗಿ ದಂಡು ಅಹೋಬಳದ ಮಗನಾದ ಕೃಷ್ಣನಾಯಕನ ಶ್ರೀರಂಗಪಟ್ಟಣದ ದೇವಾಲಯಗಳಿಗೆ ಸಿಂಧುಘಟ್ಟ ಸೀಮೆಯೊಳಗಿನ ಎರಡು ಗ್ರಾಮಗಳನ್ನು ದಾನ ಮಾಡಿದ ವಿಷಯವಲ್ಲದೆ ಮೇಲುಕೋಟೆ ದೇವಸ್ಥಾನದ ಭೂಮಿಗಳನ್ನು ಉಳುಮೆ ಮಾಡುತ್ತಿದ್ದ, ಒಕ್ಕಲಿಗರನ್ನೆ ತೊಂಡನ್ನೂರಿನ ದೇವಸ್ಥಾಕ್ಕೆ ಸೇರಿದ ಭೂಮಿಗಳನ್ನು ಉಳುಮೆ ಮಾಡಲು ಕರೆದೊಯ್ಯಲಾಗುತ್ತಿತ್ತೆಂಬ ಕುತೂಹಲಕಾರ ಅಂಶ ತಿಳಿದುಬರುತ್ತದೆ.[10] ಇದರಿಂದ ಪ್ರಮುಖ ಧಾರ್ಮಿಕ ಕ್ಷೇತ್ರಗಳಾಗಿದ್ದ ಮೇಲುಕೋಟೆ ಹಾಗೂ ತೊಂಡನೂರು ದೇವಾಲಯಗಳು ಬ್ರಹ್ಮಾದಾಯದ ಮೂಲಕ ಭೂಒಡೆತನವನ್ನು ಹೊಂದಿದ್ದು, ಅವುಗಳನ್ನು ಉಳುಮೆ ಮಾಡಲು ಸ್ಥಳೀಯ ಒಕ್ಕಲಿಗರನ್ನು ಅಂದರೆ ರೈತಾಪಿ ಗೇಣಿದಾರರನ್ನು ಬಳಸಿಕೊಳ್ಳುತ್ತಿದ್ದರೆಂಬ ವಿಚಾರ ಗೊತ್ತಾಗುತ್ತದೆ.[11] ಕೃಷ್ಣದೇವರಾಯನ ಅವಧಿಯಲ್ಲಿ ಕ್ರಿ.ಶ. 1524ರ ಶಾಸನದಲ್ಲಿ ಮೊದಲಿಗೆ ರಾಮಾನುಜ ಕೂಟದ ಉಲ್ಲೇಖವಿದೆ. ಸಿಂಗಪ್ಪ ನಾಯಕನೆಂಬುವನು ಸಿಂಗಾಪುರ ಗ್ರಾಮದಲ್ಲಿರುವ ತಿರುವೆಂಗಳನಾಥ ದೇವಾಲಯದ ರಾಮಾನುಜ ಕೂಟದ ನಿರ್ವಹಣೆಗಾಗಿ ಹಿರಿಯವರದರಾಜಯ್ಯನೆಂಬುವನಿಗೆ ಚಿಕ್ಕಬೆಟ್ಟದ ಹಳ್ಳಿಯನ್ನು ದಾನವಾಗಿ ನೀಡಿದನು.[12]

ಹೊಯ್ಸಳ 3ನೇ ಬಲ್ಲಾಳನ ನಂತರ ವಿಜಯನಗರವು ಕ್ರಮೇಣ ವಿಸ್ತಾರ ಗೊಂಡು ಇಡೀ ದಕ್ಷಿಣ ಭಾರತವನ್ನೆಲ್ಲಾ ಒಳಗೊಂಡಿತು. ಮೈಸೂರು, ಮಂಡ್ಯ ಮತ್ತು ಇತರ ಜಿಲ್ಲೆಗಳಲ್ಲಿ ಸಣ್ಣಪುಟ್ಟ ಪಾಳೆಪಟ್ಟು ಮನೆತನಗಳು ತಲೆಯೆತ್ತಿ ವಿಜಯನಗರ ಸಾಮ್ರಾಟರಿಗೆ ಅಧೀನರಾಗಿ ಆಳುತ್ತಿದ್ದರು. ವಿಜಯನಗರದ ಸುಪ್ರಸಿದ್ಧ ಸಾಮ್ರಾಟನಾದ ಕೃಷ್ಣದೇವರಾಯನು ಆ ವೇಳೆಗೆ ಶ್ರೀರಂಗಪಟ್ಟಣದಲ್ಲಿ ಆಳುತ್ತಿದ್ದ ಸಾಮಂತಕುಮಾರ ವೀರಯ್ಯನ ಮಗಳಾದ ತಿರುಮಲಾದೇವಿ ಕೃಷ್ಣದೇವರಾಯನ ಪಟ್ಟದ ರಾಣಿಯರಲ್ಲಿ ಒಬ್ಬಳು.[13] ತಿರುಮಲದೇವಿಯ ವಿವಾಹವು ಕ್ರಿ.ಶ. 1510ರಲ್ಲಿ ಈಗ ಹೊಸಪೇಟೆ ಎಂದು ಕರೆಯುವ "ತಿರುಮಲದೇವಿಪಟ್ಟಣ"ದಲ್ಲಿ ನಡೆಯಿತು. ತಿರುಮಲದೇವಿಅಮ್ಮನ್ ಕ್ರಿ.ಶ.1513ರಲ್ಲಿ ತಿರುಮಲ ಶ್ರೀ ವೆಂಕಟೇಶ್ವರನಿಗೆ ಪೂಜಾದಿ ಕೈಂಕರ್ಯಗಳಿಗಾಗಿ ಚಿನ್ನದ ಬಟ್ಟಲನ್ನು ಕೊಡುಗೆಯಾಗಿ ಕೊಟ್ಟಳೆಂದು ತಿಳಿದುಬರುತ್ತದೆ.[14] ತಿರುವೆಂಗಳನಾಥದೇವರಿಗೆ 3742 ತೂಕದ ಚಿನ್ನದ ಪಾತ್ರೆಯನ್ನು ಪೂಜಾದಿಗಾಗಿ ಮತ್ತು 102 ತೂಕದ ಚಿನ್ನದ ತಟ್ಟೆಯನ್ನು ದೇವರಿಗೆ ಪುಷ್ಪಾರ್ಚನೆಗಾಗಿ ನೀಡಿದ ವಿಷಯವು ದಾಖಲೆಗಳಿಂದ ತಿಳಿದುಬರುತ್ತದೆ.[15] ಕೃಷ್ಣದೇವರಾಯನು ಬಹುಪತ್ನಿಯರನ್ನು ಹೊಂದಿದ್ದು ಸರ್ವವಿದಿತವಾಗಿದ್ದರೂ ಹಿರಿಯ ರಾಣಿ ಯಾರು ಎಂಬ ಬಗ್ಗೆ ಜಿಜ್ಞಾಸೆಯಿದೆ. ಕ್ರಿ.ಶ. 1517ರ ಶಾಸನವು ತಿರುಮಲದೇವಿಯ ಪಟ್ಟಮಹಿಷಿ ಎಂಬ ಅಂಶವನ್ನು ದೃಢಪಡಿಸುತ್ತದೆ. ಆಕೆಯ ಉನ್ನತ ಸಂಸ್ಕಾರ ಮತ್ತು ರಸಿಕತೆಯನ್ನು ಗ್ರಹಿಸಿ ತುಂಗಭದ್ರ ತೀರದಲ್ಲಿ "ಚಿತ್ರವಾಟಿಕಾ" ಎಂಬ ಉದ್ಯಾನವನ್ನು ನಿರ್ಮಿಸಿದನು. ಈ ಚಿತ್ರವಾಟಿಕಾ ನಾಗಲಾಪುರಕ್ಕೆ ಎರಡು ಮೈಲು ದೂರದಲ್ಲಿದ್ದಿತು. ಇಷ್ಟೇ ಅಲ್ಲದೇ ಕೃಷ್ಣದೇವರಾಯನು ರಾಜಧಾನಿಯ ಒಂದು ಭಾಗವನ್ನು 'ತಿರುಮಲದೇವಿಪುರ' ಎಂದು ನಾಮಕರಣ ಮಾಡಿದ್ದನು.[16] ರಾಣಿ ಚಿನ್ನಾದೇವಿ ನಾಗಮಂಗಲದ ಪಾಳೆಯಗಾರನ ಮಗಳೆಂದು ಇತ್ತೀಚೆಗೆ ದೊರೆತ ಕಾಮಿಡಿಹಳ್ಳಿ ಶಾಸನ ಹೇಳಿದೆ. ಆಕೆ ಸಂತ ತೋಂಟದಸಿದ್ದಲಿಂಗ ಯತಿಗಳಿಗೆ ಒಂದು ಗ್ರಾಮವನ್ನು 1521ರಲ್ಲಿ ದಾನಕೊಟ್ಟಿದ್ದಳೆಂದು ಡಾ. ಸೂರ್ಯನಾಥ್ ಕಾಮತ್ ಅಭಿಪ್ರಾಯಪಟ್ಟಿದ್ದಾರೆ.[17]

ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯನಿಗೆ ಪ್ರೀತಿಪಾತ್ರಳಾದ ತಿರುಮಲಾಂಬೆಯನ್ನು ಮಂಡ್ಯ ಪ್ರಾಂತ್ಯ ಒದಗಿಸಿಕೊಟ್ಟದ್ದು ಒಂದು ಅಭೂತಪೂರ್ವ ಅಂಶ. ಕ್ರಿ.ಶ. 1517ರಲ್ಲಿ ಕೃಷ್ಣದೇವರಾಯನು ಮತ್ತೊಂದು ಉಂಬಳಿಯನ್ನು ಶ್ರೀರಂಗಪಟ್ಟಣ ರಾಜಧಾನಿಯಲ್ಲಿನ ಗಂಗಾಧರೇಶ್ವರ ದೇವಸ್ಥಾನಕ್ಕೆ ಮಾಡಿಕೊಟ್ಟು ವಿಷಯವು ತಿಳಿದುಬರುತ್ತದೆ.[18]

ಕೃಷ್ಣದೇವರಾಯನು ಉಮ್ಮತ್ತೂರು ರಾಜ್ಯವನ್ನು ಆಳುತ್ತಿದ್ದ ಗಂಗಶಾಖೆಯ ರಾಜನನ್ನು ಸೋಲಿಸಿ ಕ್ರಿ.ಶ. 1511ರಲ್ಲಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡನು. ಉಮ್ಮತ್ತೂರು ಗಂಗರಸರ ಕಾಲದಲ್ಲಿ ಶಿವನಸಮುದ್ರವು ಒಂದು ಮುಖ್ಯ ಪಟ್ಟಣವಾಗಿತ್ತು. ಕೃಷ್ಣದೇವರಾಯನ ನಂತರ ಆಳಿದ ಅಚ್ಯುತರಾಯನೂ ಕ್ರಿ.ಶ 1532ರಲ್ಲಿ ಶ್ರೀರಂಗಪಟ್ಟಣಕ್ಕೆ ಭೇಟಿ ನೀಡಿದನು.[19] ಕ್ರಿ.ಶ. 1521ರಲ್ಲಿ ನಾಗಮಂಗಲದ ಸಮಸ್ತ ಮಹಾಜನರು ವಿಠ್ಠಣ್ಣನೆಂಬುನಿಗೆ, ಹೊಸಹಳ್ಳಿಗೆ ಪೂರ್ವಕ್ಕೆ ನದಿಯ ಹತ್ತಿರ ಕೆರೆಯೊಂದನ್ನು ಕಟ್ಟಲು ಒಂದು ಓಲೆಯನ್ನು ಕೊಟ್ಟರು. ಕೆರೆಯನ್ನು ಕಟ್ಟಿದುದಕ್ಕೆ ಅವರು ವಿಠ್ಠಣ್ಣನಿಗೆ 'ಕೆರೆಗೊಡಂಗೆ'ಯಾಗಿ ಮಾಯಿದೇವಿ ಕೆರೆಯ ಹತ್ತಿರ ಭೂಮಿಯನ್ನು ಮತ್ತು ತೂಬಿನ ಕೆಳಗಡೆ ಹೊಲಗಳಲ್ಲಿ ಒಂದು ಭಾಗವನ್ನು ಕೊಟ್ಟರು. ನೀರಾವರಿ ಕಾರ್ಯಗಳನ್ನು ನಡೆಸಿದ ಶ್ರೀಮಂತ ವ್ಯಕ್ತಿಗಳನ್ನು ಅರಸರು ಪುರಸ್ಕರಿಸುತ್ತಿದ್ದರು.

ಹೀಗೆ ಮಂಡ್ಯ ಪ್ರದೇಶವು ವಿಜಯನಗರ ಸಾಮ್ರಾಟ ಕೃಷ್ಣದೇವರಾಯನ ಕಾಲದಲ್ಲಿ ಆಡಳಿತ ಸಾಂಸ್ಕೃತಿಕ ಕೇಂದ್ರವಾಗಿ ಬೆಳವಣಿಗೆಗೊಂಡು ರಾಜನಿಂದ ಹಲವು ದಾನದತ್ತಿಗಳನ್ನು ಪಡೆದು ಅಭಿವೃದ್ಧಿಗೊಂಡಿದೆ.

ಅಡಿಟಿಪ್ಪಣಿಗಳು

1. ಡಾ. ಡಿ.ವಿ. ಪರಮಶಿವಮೂರ್ತಿ, *ಕೃಷ್ಣದೇವರಾಯನ ಶಾಸನಗಳು* (ಸಂ-01), ಕನ್ನಡ-ಸಂಸ್ಕೃತ ಶಾಸನಗಳು, ಹಂಪಿ, 2010, ಪು. 15.
2. *E.C. VII,* 90, ಮಂಡ್ಯ ಕ್ರಿ.ಶ., 1516.
3. *MAR* 1914, 15 Para 92-93, *E.C. VII,* No. 137, ದೊಡ್ಡಜಟಕ, ಕ್ರಿ.ಶ. 1512.
4. *E.C.* VII. Ng. 160. 1513, A.D. p. 155-156.
5. *MAR* 1919, Para. 90.
6. *Mysore Gazetteer,* p.484.
7. *Ibid,* p.1788.
8. *E.C.,* IV. Ng. 82 p. 389.
9. *E.C.,* VI. pp. 135-228, 229, *EC,* VI No. 135, ಮೇಲುಕೋಟೆ (ಕ್ರಿ.ಶ. 1519).
10. *E.C.,* VI. pp. 134-1528 A.D.
11. ಡಾ. ಎ. ಮುರಿಗೆಪ್ಪ (ಸಂ) - *ಕೃಷ್ಣದೇವರಾಯ* (ಆಯ್ದ ಲೇಖನ ಸಂಪುಟ) ಪು. 106.
12. *E.C.* VI. No. 186, ಚಿಕ್ಕಬೆಟ್ಟಹಳ್ಳಿ (ಕ್ರಿ.ಶ.1524)
13. *QJMS,* XII. pp. 624-625.
14. *TTD Inscriptions,* III. pp. 168-171.
15. Dr. N.Saraswathi, *The Position of Women during Vijayanagara Period (1336-1646),* p. 55.
16. *Mysore Gazetteer,* Vol. II, Part III, p.1789.
17. ಡಾ. ಸೂರ್ಯನಾಥ್ ಕಾಮತ್, *ವಿಜಯನಗರದ ಕೃಷ್ಣದೇವರಾಯ ಆಡಳಿತ ಮತ್ತು ಸಾಂಸ್ಕೃತಿಕ ಸಾಧನೆ,* ಪು. 16.
18. ಡಾ. ಬಿ.ಷೇಕ್‌ಅಲಿ (ಸಂ), *ಕರ್ನಾಟಕ ಚರಿತ್ರೆ,* ಸಂ. 3, ಪು. 121.
19. *E.C.,* IV. Ng. 82.

14

ಅಚ್ಯುತದೇವರಾಯನ ಹಂಪಿ ಶಾಸನಗಳು

ಎನ್. ಎಸ್. ಮಹಂತೇಶ

ವಿಜಯನಗರ ಸಾಮ್ರಾಜ್ಯದಲ್ಲಿ ತುಳುವ ವಂಶದ ಪ್ರಸಿದ್ಧ ದೊರೆ ಕೃಷ್ಣದೇವರಾಯನ ನಂತರ ಅಧಿಕಾರಕ್ಕೆ ಬಂದ ಅಚ್ಯುತದೇವರಾಯನ ಕಾಲದ ವಿಜಯನಗರದ ಚರಿತ್ರೆ ಮತ್ತು ಸಂಸ್ಕೃತಿಯು ತನ್ನದೇ ಆದ ಕೆಲವು ವೈಶಿಷ್ಟ್ಯಗಳಿಂದ ಕೂಡಿದೆ. ಕ್ರಿ.ಶ. 1529ರಿಂದ 1542ರ ವರೆಗೆ ಆಳಿದ ಅಚ್ಯುತದೇವರಾಯನು ತುಳು ವಂಶದ ಪ್ರಮುಖರಲ್ಲಿ ಒಬ್ಬನು. ಅಚ್ಯುತದೇವರಾಯನ ಆಸ್ಥಾನ ಕವಿ ರಾಜನಾಥ ಡಿಂಡಿಮನು ಬರೆದ 'ಅಚ್ಯುತರಾಯಾಭ್ಯುದಯಂ' ಸಂಸ್ಕೃತ ಕಾವ್ಯ ಅವನ ಇತಿಹಾಸ ರಚನೆಗೆ ಸಹಾಯಕವಾದರೂ ಅವನ ಕಾಲದ ಶಾಸನಗಳು ಅಂದಿನ ವಿಜಯನಗರದ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಆಯಾಮಗಳ ಹಿನ್ನೆಲೆಯಲ್ಲಿ ಅತ್ಯಂತ ಮಹತ್ವಪೂರ್ಣವಾದ ದಾಖಲೆಗಳಾಗಿವೆ.

ವಿಜಯನಗರ ಸಾಮ್ರಾಜ್ಯದ ಬಹು ಭಾಗಗಳಲ್ಲಿ ಅಚ್ಯುತದೇವರಾಯನ ಶಾಸನಗಳು ದೊರೆತಿವೆ. ಆದರೂ ಒಂದು ಸಾಮ್ರಾಜ್ಯದ ಸೂಕ್ಷ್ಮ ಹಾಗೂ ಕೇಂದ್ರಸ್ಥಾನ ಅದರ ರಾಜಧಾನಿಯಾಗಿರುತ್ತದೆ. 'ಅಲ್ಲಿ ರಾಜನು ನಡೆದುಕೊಳ್ಳುವ ರೀತಿ ನೀತಿಗಳನ್ನು ಗಮನಿಸಿ, ಅಲ್ಲಿಯ ಜನ ಅವನ ವಿಷಯದಲ್ಲಿ ತಳೆಯುವ ಅಭಿಪ್ರಾಯಗಳು ಮುಖ್ಯವೆನಿಸುತ್ತವೆ'. ಆದುದರಿಂದ ಒಂದು ರಾಜ್ಯ ಅಥವಾ ಸಾಮ್ರಾಜ್ಯದ ರಾಜಧಾನಿಯು ಆ ರಾಜ್ಯದ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯ ಮೇಲೆ ತನ್ನದೇ ಆದ ಪ್ರಭಾವ ಬೀರುತ್ತದೆ. ಈ ದೃಷ್ಟಿಯಿಂದ ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪಿಯು ಅಲ್ಲಿನ ರಾಜಕೀಯ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿದ್ದು ಬೆಳವಣಿಗೆ ಪಾಲನೆ-ಪೋಷಣೆ ಹಾಗೂ ಬದಲಾವಣೆಗಳಿಗೆ ಹೇಗೆ ತನ್ನ ಕಾಣಿಕೆ ನೀಡಿದೆ ಎಂಬ ಸಂಗತಿಯನ್ನು ದೊರೆತ ಆಧಾರಗಳಿಂದ ಅರ್ಥೈಸಬಹುದು. ಅಚ್ಯುತದೇವರಾಯನು ಅಧಿಕಾರಕ್ಕೆ ಬಂದಂದಿನಿಂದ ಅವನು ರಾಜಧಾನಿಯಲ್ಲಿ ವಹಿಸಿದ ಪಾತ್ರ ಮೊದಲಾದವುಗಳನ್ನು ಕುರಿತು ಹೇಳುವ ಹಂಪಿಯ ಅವನ ಶಾಸನಗಳನ್ನು ಕುರಿತು ವಿಶ್ಲೇಷಿಸುವ ಪ್ರಯತ್ನವನ್ನು ಪ್ರಸ್ತುತ ಪ್ರಬಂಧದಲ್ಲಿ ಮಾಡಿದ್ದೇನೆ.

ಹಂಪಿಯಲ್ಲಿ ಅಚ್ಯುತದೇವರಾಯನ ಕಾಲದ ಸುಮಾರು 34 ಶಾಸನಗಳು ದೊರೆತಿವೆ. ಅವುಗಳಲ್ಲಿ ನೇರವಾಗಿ ಅಚ್ಯುತದೇವರಾಯನಿಗೆ ಸಂಬಂಧಿಸಿದ ಶಾಸನಗಳು ಸುಮಾರು 13. ನಂತರದಲ್ಲಿ 11 ಶಾಸನಗಳು ಅಚ್ಯುತದೇವರಾಯನ ಮಹಾಮಂಡಳೇಶ್ವರರು ಹಾಗೂ ಇತರ ಅಧಿಕಾರಿಗಳು ಅವನ ಹೆಸರಿನಲ್ಲೇ ಹಾಕಿಸಿದವುಗಳು. ಉಳಿದ 10 ಶಾಸನಗಳಲ್ಲಿ

ಅಚ್ಯುತದೇವರಾಯನ ಕುರಿತು ಉಲ್ಲೇಖಗಳಿದ್ದರೂ ಅಸ್ಪಷ್ಟವಾಗಿರುವುದನ್ನು ಕಾಣಬಹುದು. ಅಚ್ಯುತದೇವರಾಯನ ಹಂಪಿ ಶಾಸನಗಳು ಬಹುತೇಕ ದಾನಶಾಸನಗಳಾಗಿವೆ. ಇವುಗಳಲ್ಲಿ (1) ದೇವಾಲಯಗಳಿಗೆ ನೀಡಿರುವ ದಾನಗಳನ್ನು ಕುರಿತ ಶಾಸನಗಳು, ಹಾಗೂ (2) ಬ್ರಾಹ್ಮಣರಿಗೆ ನೀಡಿರುವ ದಾನಗಳನ್ನು ಕುರಿತ ಶಾಸನಗಳು ಎಂದು ಎರಡು ಪ್ರಧಾನ ವರ್ಗಗಳಾಗಿ ವಿಂಗಡಿಸಬಹುದು.

1. **ರಾಜಧಾನಿ ಹಂಪಿಯಲ್ಲಿ (ವಿಜಯನಗರ) ವೈಷ್ಣವ/ಶ್ರೀವೈಷ್ಣವ ಪಂಥಕ್ಕೆ ನೀಡಿರುವ ಪ್ರಾಮುಖ್ಯ ಮತ್ತು ಆ ಪಂಥದ ದೇವಾಲಯಗಳಿಗೆ ನೀಡಿರುವ ಹೆಚ್ಚಿನ ದಾನ-ದತ್ತಿಗಳು.**

ವಿಜಯನಗರ ಸಾಮ್ರಾಜ್ಯ ದಕ್ಷಿಣ ಭಾರತದ ಮಧ್ಯಕಾಲೀನ ಚರಿತ್ರೆಯಲ್ಲಿ ವಿಶೇಷವಾದ ಸ್ಥಾನವನ್ನು ಪಡೆದಿದೆ. ಈ ಸಾಮ್ರಾಜ್ಯದಲ್ಲಿ ಸಂಗಮ, ಸಾಳ್ವ, ತುಳುವ ಮತ್ತು ಅರವೀಡು ಮನೆತನಗಳು ಆಳಿಹೋಗಿವೆ. ಸಂಗಮ, ಸಾಳ್ವ, ತುಳುವ ಮನೆತನಗಳು ವಿಜಯನಗರವನ್ನು (ಹಂಪಿ) ರಾಜಧಾನಿಯಾಗಿ, ಅರವೀಡು ಮನೆತನವು ಪೆನುಗೊಂಡೆಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ಮಾಡಿದರು. ರಾಜಧಾನಿ ವಿಜಯನಗರವು ಪಟ್ಟಣ ಆನೆಗುಂದಿ, ಹೊಸಪೇಟೆ, ಹಂಪೆ, ಕಮಲಾಪುರ, ಬುಕ್ಕಸಾಗರ, ಶಿವಪುರ, ನಲ್ಲಾಪುರ, ದರೋಜಿ ಗ್ರಾಮಗಳನ್ನು ಒಳಗೊಂಡಿತ್ತು. ಶಾಸನಗಳಲ್ಲಿ ಮತ್ತು ಇತರೆ ಸಾಹಿತ್ಯಕ ದಾಖಲೆಗಳಲ್ಲಿ ವಿಜಯನಗರವನ್ನು (ಹಂಪಿ) 'ಪಂಪಾ', 'ಪಂಪಾತೀರ್ಥ', 'ಪಂಪಾಕ್ಷೇತ್ರ', 'ಪಂಪಾಪುರ', 'ಪಂಪಾಸ್ಥಳ', 'ವಿರೂಪಾಕ್ಷತೀರ್ಥ', 'ಹಂಪೆ', 'ವಿರೂಪಾಕ್ಷಪುರ' ಇತ್ಯಾದಿಯಾಗಿ ಕರೆಯಲಾಗಿದೆ. ಧಾರ್ಮಿಕ ಪರಿಸರದ ಹಿನ್ನೆಲೆಯಿಂದ ಈ ಮೇಲಿನ ಹೆಸರುಗಳನ್ನು ಗಮನಿಸಿದರೆ ಹಂಪಿಯು ಆರಂಭದಿಂದಲೂ ಇದೊಂದು ದಕ್ಷಿಣ ಭಾರತದ ಪ್ರಸಿದ್ಧ ಶೈವ ಕೇಂದ್ರವಾಗಿದ್ದಿತೆಂದೂ ತಿಳಿದುಬರುತ್ತದೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಬಳಿಕ ಸಂಗಮ ದೊರೆಗಳು ಶೈವ ಧರ್ಮಕ್ಕೆ ಹೆಚ್ಚಿನ ಪ್ರಾಮುಖ್ಯ ನೀಡಿದ್ದರು. ಆದರೆ 15ನೇ ಶತಮಾನದ ಮಧ್ಯಾವಧಿಯಿಂದೀಚೆಗೆ ವಿಜಯನಗರದ ಅರಸರು ಕ್ರಮೇಣ ಶ್ರೀವೈಷ್ಣವ ಪಂಥದತ್ತ ಒಲವು ತೋರತೊಡಗಿದರು. ಸಾಳುವ ಅರಸರು ಕ್ರಮೇಣ ಶ್ರೀವೈಷ್ಣವ ಪಂಥಾನುಯಾಯಿಗಳಾಗಿದ್ದು, ಅಹೋಬಿಲಂನ ನರಸಿಂಹ ಮತ್ತು ತಿರುಪತಿಯ ವೆಂಕಟೇಶ್ವರ ದೈವಗಳಿಗೆ ಸಮಾನ ಭಕ್ತಿಯನ್ನು ಅರ್ಪಿಸಿದರು. ನಂತರದಲ್ಲಿ ತುಳುವಂಶದ ಕೃಷ್ಣದೇವರಾಯ (1510–1529), ಅಚ್ಯುತದೇವರಾಯ (1529–1542) ಮತ್ತು ಸದಾಶಿವರಾಯರ (1542–1565) ಅವಧಿಯಲ್ಲಿ ಶ್ರೀವೈಷ್ಣವ ಪಂಥಕ್ಕೆ ಹೆಚ್ಚಿನ ಆದ್ಯತೆ ದೊರೆಯಿತು.

ತುಳು ವಂಶದ ದೊರೆ ಅಚ್ಯುತದೇವರಾಯನ ಹಂಪಿ ಶಾಸನಗಳಿಂದ ಈ ಪರಿಸರದ ವೈಷ್ಣವ-ಶ್ರೀವೈಷ್ಣವ ಪಂಥಕ್ಕೆ ನೀಡಿರುವ ಪ್ರಾಮುಖ್ಯತೆಯನ್ನು ಅಧ್ಯಯನ ಮಾಡಬಹುದು. ಈತ ಸ್ವಯಂ ಶ್ರೀವೈಷ್ಣವ ಪಂಥೀಯನಾಗಿದ್ದು, ಈ ಪಂಥದ ದೇವಾಲಯಗಳು ಹಾಗೂ ಇತರ ಕಾರ್ಯಗಳಿಗೆ ಅಪಾರ ಪ್ರಮಾಣದಲ್ಲಿ ದಾನ-ದತ್ತಿಗಳನ್ನು ನೀಡಿದ್ದಾನೆ. ಕ್ರಿ.ಶ. 1531ರಿಂದ ಹಂಪಿಯಲ್ಲಿ ಶ್ರೀವೈಷ್ಣವ ಪಂಥಕ್ಕೆ ಅಚ್ಯುತ ದೇವರಾಯನು ಮನ್ನಣೆ ನೀಡಿದ್ದಾನೆ. ಹಂಪಿಯಲ್ಲಿ ಶ್ರೀವೈಷ್ಣವ ಪಂಥದ ಪ್ರಮುಖ ಕೇಂದ್ರವಾಗಿದ್ದ ವಿಠಲಾಪುರದಲ್ಲಿನ ದೇವಾಲಯಗಳಿಗೆ ಇವನು ಅಸಂಖ್ಯಾತ ದಾನ-ದತ್ತಿಗಳನ್ನು ನೀಡಿದ್ದಾನೆ. ಅದರಲ್ಲಿ ವಿಠಲ ದೇವಾಲಯವು ಹೆಚ್ಚಿನ ದಾನ-ದತ್ತಿಗಳನ್ನು ಪಡೆದು ನಿರ್ವಹಣೆ ಹೊಂದಿರುವುದನ್ನು ಶಾಸನಗಳಿಂದ ತಿಳಿಯಬಹುದು. ಕ್ರಿ.ಶ. 1431ರ ಶಾಸನದಲ್ಲಿ ಅಚ್ಯುತ ದೇವರಾಯನು ವಿಠಲ ದೇವರ ನಿತ್ಯಕಟ್ಟಳೆಗೆ ಒಂದು ಗ್ರಾಮವನ್ನು ದಾನ ನೀಡಿದ್ದಾನೆ. ಕ್ರಿ.ಶ. 1532ರ ಶಾಸನದಲ್ಲಿ ಅಚ್ಯುತದೇವರಾಯನ ಆಳ್ವಿಕೆಯ ಕಾಲದಲ್ಲಿ ತಿರುಮಲಯ್ಯ ಎಂಬುವವನು ಬೆಳುವಲ, ಆನೆಗನಹಾಳ, ಹೇಪೆ ಈ ಮೂರು ಗ್ರಾಮಗಳ ಉತ್ಪತ್ತಿಯನ್ನು ವಿಠಲ ದೇವರ ನಿತ್ಯ ನೈವೇದ್ಯ ದೀಪಾರಾಧನೆಗೆ ದಾನ ನೀಡಿದ್ದಾನೆ. ಕ್ರಿ.ಶ. 1534ರಲ್ಲಿ ತಿರುವೆಂಗಳನಾಯಕನ

ಮಗ ವರದಪ್ಪನಾಯಕನು ಅಚ್ಯುತದೇವರಾಯನಿಗೂ ಮತ್ತು ಚಿಕ್ಕರಾಯನಿಗೂ ಪುಣ್ಯವಾಗಲಿ ಎಂದು ವಿಠಲೇಶ್ವರ ದೇವರ ನಿತ್ಯ ನೈವೇಧ್ಯಕ್ಕೆ ದೇವರ ಭಂಡಾರಕ್ಕೆ 10 ಗಟ್ಟಿ ವರಹಗಳನ್ನು ಮತ್ತು ಈ ಹಣಕ್ಕೆ ದಿನಕ್ಕೆ 40 ಪಡಿ ಅಕ್ಕಿ, ಉಪ್ಪು, ಮೆಣಸು, ಸಂಬಾರ, ಹೆಸರು, ತುಪ್ಪ, ಸಕ್ಕರೆ, ಬಾಳೆಹಣ್ಣು, ಹಾಲು, ಮೊಸರು, ವೀಳೆಯ ಮುಂತಾದವುಗಳನ್ನು ಉಗ್ರಾಣದಿಂದ ನೀಡಬೇಕು ಎಂದು ಹೇಳಲಾಗಿದೆ. ಕ್ರಿ.ಶ. 1536ರ ಒಂದು ಶಾಸನದಲ್ಲಿ ಊಳಿಗದ ಹಿರಿಯ ಮಲ್ಲಪ್ಪನಾಯಕನು ಅಚ್ಯುತದೇವರಾಯ ಮತ್ತು ಚಿಕ್ಕರಾಯನಿಗೆ ಪುಣ್ಯವಾಗಲೆಂದು ವಿಠಲ ದೇವರ ನೈವೇದ್ಯಕ್ಕೆ 200 ಗಟ್ಟಿ ವರಹಗಳನ್ನು ಸಮರ್ಪಿಸುತ್ತಾನೆ. ಹೀಗೆ ವಿಠಲಾಪುರ ವಿಠಲ ದೇವಾಲಯವು ಅಚ್ಯುತದೇವರಾಯನ ಕಾಲದಲ್ಲಿ ಅತ್ಯಂತ ಹೆಚ್ಚಿನ ದಾನ-ದತ್ತಿಗಳನ್ನು ಪಡೆದು ಪಾಲನೆ ಪೋಷಣೆ ಹೊಂದಿರುವುದನ್ನು ಶಾಸನಗಳು ದಾಖಲಿಸುತ್ತವೆ.

ವಿಜಯನಗರದಲ್ಲಿ (ಹಂಪಿ) ವೈಷ್ಣವ ಪಂಥದ ಪ್ರಮುಖ ಕೇಂದ್ರವಾಗಿದ್ದ ವಿಠಲಾಪುರ ತುಳು ವಂಶದ ಕಾಲದಲ್ಲಿ ವೈಭವಯುತವಾಗಿ ನಡೆದುಕೊಂಡು ಬಂದಿರುವುದನ್ನು ಗಮನಿಸಬಹುದು. ಅಚ್ಯುತದೇವರಾಯನ ಕಾಲದಲ್ಲಿ ಕ್ರಿ.ಶ. 1534ರಲ್ಲಿ ವಿಠಲ ದೇವಾಲಯದ ಆವರಣದಲ್ಲಿ ಅಚ್ಯುತದೇವರಾಯನಿಗೆ ಪುಣ್ಯವಾಗಬೇಕೆಂದು ತಿಪ್ಪೀಸೆಟ್ಟಿಯ ಮಗ ಗಂಧದ ತಿಪ್ಪೀಸೆಟ್ಟಿಯು 13 ಆಳ್ವಾರರ ವಿಗ್ರಹಗಳನ್ನು ಪ್ರತಿಷ್ಠೆ ಮಾಡುತ್ತಾನೆ. ಅಲ್ಲದೆ ಈ ಪರಿಸರದಲ್ಲಿ ಆಳ್ವಾರರು ಮತ್ತು ಆಚಾರ್ಯರ ಆರಾಧನೆಯೊಡನೆ ರಾಮಾನುಜ ಕೂಟಗಳನ್ನು ಸ್ಥಾಪಿಸಿದುದು ಶ್ರೀವೈಷ್ಣವ ಪಂಥವು ಪಡೆದ ಪ್ರಾಮುಖ್ಯತೆಗೆ ಸಾಕ್ಷಿ. ಕ್ರಿ.ಶ. 1534ರ ಶಾಸನದಲ್ಲಿ ಹೇಳುವಂತೆ ಅಚ್ಯುತದೇವರಾಯನ ಮಹಾಮಂಡಳೇಶ್ವರ ಕಾಶ್ಯಪ ಗೋತ್ರ, ರುಕುಶಾಖೆಯ ಸಕಲರಾಜ ಒಡೆಯನ ಮಗ ಹಿರಿಯ ತಿರುಮಲರಾಜ ಒಡೆಯರ್ ತುಂಗಾಭದ್ರ ತೀರದಲ್ಲಿ ತಿರುವೆಂಗಳನಾಥ ದೇವರ ಪ್ರತಿಷ್ಠೆಯನ್ನು ಮಾಡಿಸುತ್ತಾನೆ. ಈ ಸಂದರ್ಭಲ್ಲಿ ಅಚ್ಯುತದೇವರಾಯನು ನವರತ್ನಖಚಿತವಾದ ಆಭರಣಗಳನ್ನು ಚಿನ್ನ, ಬೆಳ್ಳಿಯ ಪರಿಕರಗಳನ್ನು ನೀಡಿ ದೇವರ ಅಮೃತಪಡಿ, ನೈವೇದ್ಯ, ಅಂಗರಂಗಭೋಗ, ಮಾಸೋತ್ಸವ, ಪಂಚಪರ್ವ, ರಥೋತ್ಸವ ಮುಂತಾದ ಪೂಜೆಗಳಿಗಾಗಿ ಪೊರಮಲೆನಾಡಿಗೆ ಸೇರಿದ ಅಚ್ಯುತಾಪುರ ಎಂದು ಪ್ರತಿನಾಮ ಹೊಂದಿದ ಚೋರಮನ್ನೂರ ಗ್ರಾಮವನ್ನು ದಾನ ನೀಡುತ್ತಾನೆ. ಈ ಪೇಟೆಯ ಪರಿಸರದಲ್ಲಿ ರಾಮಾನುಜಕೂಟವಿದ್ದುದನ್ನು ಈ ದಾನವು ಅದನ್ನು ಒಳಗೊಂಡಿದ್ದಿತೆಂಬುದನ್ನು ಈ ಶಾಸನವು ಹೇಳುತ್ತದೆ.

2. ಬ್ರಾಹ್ಮಣರಿಗೆ ವಿಶೇಷವಾಗಿ ನೀಡಿರುವ 'ಆನಂದನಿಧಿ' ಮತ್ತು 'ಸುವರ್ಣಮೇರು' ದಾನಗಳು

ಅಚ್ಯುತದೇವರಾಯನ ಹಂಪಿಯ ಸುಮಾರು 10 ಶಾಸನಗಳು ಆನಂದನಿಧಿ ಮತ್ತು ಸುವರ್ಣಮೇರು ದಾನಗಳನ್ನು ಕುರಿತು ಉಲ್ಲೇಖಿಸುತ್ತವೆ. ಅವುಗಳಲ್ಲಿ ಏಳು ಶಾಸನಗಳು ಆನಂದನಿಧಿ ದಾನವನ್ನು ಕುರಿತು ಹೇಳುತ್ತವೆ. ಉಳಿದ ಮೂರು ಶಾಸನಗಳು ಸುವರ್ಣಮೇರು ದಾನವನ್ನು ಕುರಿತು ಹೇಳುತ್ತವೆ.

ಕ್ರಿ.ಶ. 1533ರಲ್ಲಿ ಅಚ್ಯುತದೇವರಾಯನು ವಿಠಲೇಶ್ವರ ಸನ್ನಿಧಿಯಲ್ಲಿ ಸುವರ್ಣಮೇರು ದಾನವನ್ನು ನೀಡಿದ್ದಾನೆ. ಈ ಶಾಸನದ ಮೂರು ಪ್ರತಿಗಳನ್ನು ಬೇರೆಡೆಯಲ್ಲಿಯೂ ಕಾಣಬಹುದು. ಸುವರ್ಣಮೇರು ಎಂದರೆ *ಪ್ರಾಚೀನ ಕರ್ನಾಟಕ ಆಡಳಿತ ಪಾರಿಭಾಷಿಕ ಪದಕೋಶದಲ್ಲಿ* ಚಿನ್ನದಿಂದ ಪರ್ವತದ ರೂಪದಲ್ಲಿ ಮಾಡಲ್ಪಟ್ಟು ದಾನ ನೀಡಿರುವ ಒಂದು ವಸ್ತು ಎಂಬುದಾಗಿ ಅರ್ಥೈಸಲಾಗಿದೆ.

ಕ್ರಿ.ಶ. 1539ರಲ್ಲಿ ಅಚ್ಯುತದೇವರಾಯನು ಆನಂದನಿಧಿ ಎಂಬ ದಾನವನ್ನು ಬ್ರಾಹ್ಮಣರಿಗೆ ನೀಡಿದ್ದಾನೆ. ಈ ದಾನದ ಉಲ್ಲೇಖವಿರುವ ಶಾಸನಗಳನ್ನು ಬಾಲಕೃಷ್ಣ ದೇವಾಲಯದಲ್ಲಿ ಎರಡು, ತಿರುವೆಂಗಳನಾಥ, ವಿಠಲೇಶ್ವರ, ಪಟ್ಟಾಭಿರಾಮ, ಕಮಲಾಪುರದ ಚಿಕ್ಕವುಡೇ ದೇವಾಲಯಗಳಲ್ಲಿ ಕಾಣಬಹುದಾಗಿದೆ. ಈ ಎಲ್ಲಾ ಶಾಸನಗಳಲ್ಲಿರುವ ವಿಷಯ ಒಂದೇ ಆಗಿದೆ. ಆನಂನಿಧಿ ದಾನವನ್ನು 1539ರಲ್ಲಿ ವಿಶೇಷವಾಗಿ ಬ್ರಾಹ್ಮಣರಿಗೆ ನೀಡಿರುವುದನ್ನು ಗಮನಿಸಬಹುದು.

15

ಕೃಷ್ಣದೇವರಾಯನ ಆಳ್ವಿಕೆಯಲ್ಲಿ ನಾಯಕತನಗಳು
(ಕ್ರಿ.ಶ. 1509–1529)

ಡಾ॥ ಡಿ. ಎನ್. ಯೋಗೀಶ್ವರಪ್ಪ

ವಿಜಯನಗರ ಸಾಮ್ರಾಜ್ಯದ ರಾಜಕೀಯ ಮತ್ತು ಸೈನಿಕ ವ್ಯವಸ್ಥೆಯಲ್ಲಿ ನಾಯಕರು ಪ್ರಮುಖ ಪಾತ್ರ ವಹಿಸಿರುವುದನ್ನು ಅನೇಕ ಸಂಶೋಧಕರು ಈಗಾಗಲೇ ಗುರ್ತಿಸಿದ್ದಾರೆ. ಆದರೆ, ಸಮಕಾಲೀನ ಶಾಸನಗಳು ಮತ್ತು ಇತರೆ ಪ್ರಾಥಮಿಕ ಆಕರಗಳ ಆಧಾರದ ಮೇಲೆ "ನಾಯಕ" ಸಂಶೋಧನೆಯು ಗುಣಾತ್ಮಕವಾಗಿಯಾಗಲೀ ಅಥವಾ ವಿಸ್ತಾರವಾಗಿಯಾಗಲೀ ನಡೆದಿದೆ ಎನ್ನಬಹುದು. ಇದರ ಪರಿಣಾಮವಾಗಿ ಈ ಸಂಶೋಧನೆಯಲ್ಲಿ ಮೂಲ ವಿಚಾರಗಳಾದ ಕೌಟುಂಬಿಕ ಹಿನ್ನೆಲೆ, ಚಕ್ರವರ್ತಿಯೊಂದಿಗೆ ಸಂಬಂಧ, ನಾಯಕರ ರಾಜಕೀಯ ಮತ್ತು ಸೈನಿಕ ಚಟುವಟಿಕೆಗಳಿಗೆ ಅಡಿಪಾಯ ಹಾಕುವ ಹಣಕಾಸು ನಿರ್ವಹಣೆಯ ಬಗೆಗೆ ಹೆಚ್ಚು ಕಡಿಮೆ ಸ್ಪಷ್ಟವಾಗಿಲ್ಲ. ಆದರೆ ಯಾರನ್ನು ನಾಯಕರೆಂದು ಗುರ್ತಿಸಬೇಕು ಹಾಗೂ ನಾಯಕ ಪದದ ವ್ಯಾಖ್ಯೆಯ ಬಗೆಗೆ ಸಂಶೋಧಕರಲ್ಲಿ ಸರಿಯಾದ ಒಮ್ಮತವಿಲ್ಲ. ಸಾಮಾನ್ಯವಾಗಿ ಇತಿಹಾಸ ಅಧ್ಯಯನ ಮಾಡುವವರು ಹೆಸರಿನ ಜೊತೆಗೆ ನಾಯಕ ಎಂಬ ಗೌರವಾನ್ವಿತ ಬಿರುದನ್ನು ಹಾಕಿಕೊಂಡವರನ್ನೆಲ್ಲಾ ನಾಯಕರೆಂದು ಪರಿಗಣಿಸಿದ್ದಾರೆ. ಆದರೆ ಈ ದೃಷ್ಟಿಕೋನವನ್ನಿಟ್ಟುಕೊಂಡು ನಾಯಕರನ್ನು ಗುರ್ತಿಸಿದರೆ ಶಾಸನಗಳಿಗಿಂತ ಹೆಚ್ಚಾಗಿಯೇ ನಾಯಕರು ಕಾಣಿಸಿಕೊಳ್ಳುವರು. ಇಷ್ಟೊಂದು ಸಂಖ್ಯೆಯ ನಾಯಕರು ವಿಜಯನಗರದಲ್ಲಿ ಇರಲು ಸಾಧ್ಯವೆ? ಇದ್ದರೂ ಅವರ ಸ್ಥಾನಮಾನಗಳೇನು? ಆಡಳಿತದಲ್ಲಿ ಅವರ ಪಾತ್ರವೇನು? ಇದಕ್ಕೆ ಸಹಮತವಾಗುವ ಯಾವುದೇ ಉತ್ತರವೂ ಸದ್ಯಕ್ಕಿಲ್ಲ. ಇಂತಹ ಜಟಿಲವಾದ ಪ್ರಶ್ನೆಯನ್ನೆತ್ತಿಕೊಂಡು ಈ ಪ್ರಬಂಧದಲ್ಲಿ ಕೃಷ್ಣದೇವರಾಯನ ಕಾಲಕ್ಕೆ ಸೀಮಿತಗೊಳಿಸಿಕೊಂಡಂತೆ ಪ್ರಯತ್ನ ಮಾಡಲಾಗಿದೆ. ಅದಕ್ಕಿಂತ ಮೊದಲು ನಾಯಕರ ಬಗೆಗೆ ವಿವಿಧ ವಿದ್ವಾಂಸರು ನೀಡಿರುವ ವ್ಯಾಖ್ಯೆಯನ್ನು ಪರಿಶೀಲಿಸೋಣ.

1. ಡಿ.ಸಿ. ಸರ್ಕಾರ್‌ರವರ[1] ಅಭಿಪ್ರಾಯದಲ್ಲಿ "ಸೈನಿಕ ಸೇವೆಯ ಷರತ್ತಿನ ಮೇರೆಗೆ ವಿಜಯನಗರ ಚಕ್ರವರ್ತಿಗಳಿಂದ ಭೂಮಿಯನ್ನು ಪಡೆಯುವವರೇ ನಾಯಕರು."
2. ಜೆ.ಡಿ.ಎಂ. ಡೆರ್ರೆಟ್[2]ರವರು ಹನ್ನೊಂದನೇ ಶತಮಾನದ ಶಾಸನಗಳನ್ನಾಧರಿಸಿ ನಾಯಕರನ್ನು ಸೈನಿಕ ಸೇವೆ ನೀಡುವ ಇಂಗ್ಲೀಷರ ಕ್ಯಾಪ್ಟನ್‌ಗಳಿಗೆ ಹೋಲಿಸಿದ್ದಾರೆ.

3. ಮೋನಿಯರ್ ವಿಲಿಯಮ್ಸ್[3] ಪ್ರಕಾರ "ನಿರ್ದಿಷ್ಟವಾದ ಸೇನೆಯ ನಾಯಕತ್ವ ಹೊಂದಿದ ಪ್ರಮುಖ ವ್ಯಕ್ತಿ".
4. ಎಸ್.ಎನ್. ರಂಗರಾಜು[4]ರವರು ಒರಿಸ್ಸಾದಲ್ಲಿ ಗಂಗರ ಶಾಸನಗಳನ್ನು ಅಭ್ಯಾಸ ಮಾಡಿರುವ ಇವರು ಶುಕ್ರನೀತಿಯನ್ನು ಆಧಾರವಾಗಿಟ್ಟುಕೊಂಡು "ಹತ್ತು ಗ್ರಾಮಗಳ ಅಧಿಪತಿಯಾಗಿದ್ದು ನಾಯಕ ಬಿರುದನ್ನು ಧರಿಸಿರಬೇಕು. ರಾಜ್ಯದಿಂದ "ಕೊಳ" ಅಳತೆಯ ಭೂಮಿಯನ್ನು ಪಡೆದಿರಬೇಕು.
5. ಎ.ಕೃಷ್ಣಸ್ವಾಮಿಯವರ[5] ಪ್ರಕಾರ "ನಾಯಕ" ಎಂಬುದು ಸೈನ್ಯದ ಮುಖಂಡನ ಹೆಸರು. ಅವನು ಭೂಮಿಯನ್ನು ಪಡೆದಿರಬೇಕು".
6. ಟಿ.ವಿ. ಮಹಾಲಿಂಗಂ[6]ರವರ ಪ್ರಕಾರ "ರಾಜನಿಂದ ಯಾರು ಭೂಮಿಯನ್ನು ಪಡೆದಿರುತ್ತಾರೊ, ಅವರೇ ನಾಯಕರು".
7. ಬರ್ಟನ್ ಸ್ಟೇನ್[7]ರವರು "ನಾಯಕ ಎಂಬುದು ಪ್ರಬಲ ಯೋಧನ ಸಾಮಾನ್ಯ ಬಿರುದು. ಅವನು ರಾಜನ ಪರವಾಗಿ ಎಲ್ಲಾ ಯುದ್ಧಗಳಲ್ಲಿ ಸಹವರ್ತಿಯಾಗಿರಬೇಕು, ಆದರೆ ಅವನು ಎಲ್ಲಾ ಸಮಯದಲ್ಲೂ ಸ್ವತಂತ್ರವಾಗಿ ತನ್ನ ಪ್ರಾಂತ್ಯದಲ್ಲಿ ಹಕ್ಕುಗಳನ್ನು ಚಲಾಯಿಸುವವನು."
8. ನೊಬುರು ಖರಾಷಿಮಾರವರು[8] ನಾಯಕ ಎಂದರೆ – (1) ನಾಯಕ ಬಿರುದು, (2) ಅವನ ಸೀಮೆ ನಾಯಕತನದಿಂದ ಪ್ರಾಪ್ತವಾಗಿರಬೇಕು, (3) ಅವನು ರಾಜನ ಮಧ್ಯವರ್ತಿಯ ಅಂತಸ್ತನ್ನು ಹೊಂದಿರಬೇಕು. ಈ ಮೂರರಲ್ಲಿ ಅವನಿಗೆ ಯಾವುದಾದರೂ ಒಂದು ಅರ್ಹತೆ ಇದ್ದರೂ ಅವನನ್ನು ನಾಯಕ ಎಂದು ಪರಿಗಣಿಸಬೇಕು.

ಇಲ್ಲಿಯವರೆಗೂ ನಾಯಕ ವ್ಯವಸ್ಥೆಯ ಮೇಲೆ ಅಧ್ಯಯನ ಮಾಡುತ್ತಿರುವ ವಿದ್ವಾಂಸರ ಕೃಷ್ಣಸ್ವಾಮಿಯವರನ್ನು ಸೇರಿಸಿದಂತೆ ಮೇಲೆ ತಿಳಿಸಿರುವ ವಿಶಾಲ ಅರ್ಥವನ್ನುಳ್ಳ ವ್ಯಾಖ್ಯೆಯನ್ನು ಅಂಗೀಕರಿಸಿದ್ದಾರೆ. ಆದಾಗ್ಯೂ ಆ ವಿದ್ವಾಂಸರು ಖರಾಷಿಮಾರವರು ಮಾಡಿರುವಂತೆ ವ್ಯಾಖ್ಯೆಯನ್ನು ವಿಭಜಿಸಿಲ್ಲ. ಆದರೂ ಖರಾಷಿಮಾರವರು ಈ ವ್ಯಾಖ್ಯೆಯನ್ನು ಎಲ್ಲಾ ವಿದ್ವಾಂಸರು ಒಪ್ಪುವುದಿಲ್ಲ ಎಂದು ಹೇಳಿದ್ದಾರೆ.

ಆದರೆ ವಿಜಯನಗರ ಕಾಲದಲ್ಲಿ ವಿಶೇಷವಾಗಿ ತುಳುವರ ಕಾಲದಲ್ಲಿ ನಾಯಕ ವ್ಯವಸ್ಥೆಯು ಒಂದು ಕ್ರಮಬದ್ಧವಾದ ರಾಜಕೀಯ ವ್ಯವಸ್ಥೆಯಾಗಿ ನಡೆಯುತ್ತಿತ್ತು. ಅದರಲ್ಲಿ ರಾಜರು ಕೆಲವರಿಗೆ ಸೀಮೆಗಳನ್ನು ನಾಯಕತನಕ್ಕೆ ಪಾಲಿಸುತ್ತಿದ್ದರು. ಈ ರೀತಿ ರಾಜರಿಂದ ತಮ್ಮ ನಾಯಕತನಕ್ಕೆ ಸೀಮೆಗಳು ಪಾಲಿಸಲು ಪಟ್ಟಿದ್ದವರನ್ನು ನಾಯಕರು ಎಂದು ಕರೆಯುವುದು ಸೂಕ್ತ. ಕೇವಲ ಹೆಸರಿನ ಕೊನೆಯಲ್ಲಿ ನಾಯಕ ಎಂಬ ಬಿರುದು ಇದ್ದರೆ ಸಾಲದು. ಅವರು ರಾಜರಿಂದ ನಾಯಕತನಕ್ಕೆ ಸೀಮೆಗಳನ್ನು ಸ್ವೀಕರಿಸಿದ ಮೇಲೆಯೇ ಅವರು ನಾಯಕರಾಗುತ್ತಾರೆ. ಇದೇ ಅರ್ಥದಲ್ಲಿ ಕೆಲವರು ಹೆಸರಿನ ಅಂತ್ಯದಲ್ಲಿ ನಾಯಕ ಎಂಬ ಬಿರುದು ಇಲ್ಲದಿದ್ದರೂ ನಾಯಕರಾಗಿದ್ದರು. ಈ ರೀತಿ "ನಾಯಕತನಕ್ಕಾಗಿ ರಾಜನಿಂದ ಭೂಮಿಯನ್ನು ಪಡೆದು; ಅವನ ನಿಯಂತ್ರಣದಲ್ಲಿ ತನಗೆ ವಹಿಸಿದ ಪ್ರದೇಶದಲ್ಲಿ ಸಣ್ಣರಾಜರಂತೆ ಆಳ್ವಿಕೆ ಮಾಡುತ್ತಿದ್ದವರನ್ನು ನಾಯಕರು" ಎಂದು ಕರೆಯಬಹುದು. ಇಂತಹ ನಾಯಕರು ರಾಜ್ಯದ ಉನ್ನತ ಭೂಕಂದಾಯಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದರು. ಇಂಥವರನ್ನು ಕುರಿತಂತೆ ವಿಜಯನಗರದ ತುಳುವ ವಂಶದ ಪ್ರಸಿದ್ಧ ಚಕ್ರವರ್ತಿ ಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿ ನಾಯಕತನದ ಮೂಲಕ ಎಷ್ಟು ಜನ ನಾಯಕರು ಹೇಗೆ ಕಾರ್ಯ ನಿರ್ವಹಿಸುತ್ತಿದ್ದರು ಎಂಬುದನ್ನು ಸಂಶೋಧಿಸುವ ಪ್ರಯತ್ನ ಮಾಡಿದ್ದೇನೆ.

ಕೃಷ್ಣದೇವರಾಯನ ಸಾಮ್ರಾಜ್ಯವು ಇಡೀ ದಕ್ಷಿಣ ಭಾರತದ ಕನ್ನಡ, ತೆಲುಗು ಮತ್ತು ತಮಿಳು ಭಾಷಾ ರಾಜ್ಯಗಳಲ್ಲಿ ವ್ಯಾಪಿಸಿತ್ತು. ಆದುದರಿಂದ ಅವನ ಬಗೆಗೆ ಸಂಶೋಧನೆ ಮಾಡಬಲ್ಲವರಿಗೆ ಆ ಮೂರು ಭಾಷೆಗಳ ಜ್ಞಾನವಿರಬೇಕಾಗುತ್ತದೆ. ಇದರ ಜೊತೆಗೆ ಸಂಸ್ಕೃತ ಜ್ಞಾನವೂ ಅವಶ್ಯ. ಆದರೂ ಈ ವ್ಯಕ್ತಿಯ ಸಾಧನೆಯ ಬಗೆಗೆ ಹೆಚ್ಚು ಸಂಶೋಧನೆಗಳು ನಡೆದಿವೆ. ಆದರೆ ಅವನ ಆಡಳಿತ ಯಂತ್ರದ ಹೊಣೆಯನ್ನು ಹೊತ್ತಿದ್ದ ನಾಯಕರ ಬಗೆಗೆ ಆಶಾದಾಯಕ ಸಂಶೋಧನೆಗಳು ನಡೆದಿಲ್ಲವೆಂದೇ ಹೇಳಬಹುದು. ಈ ದೃಷ್ಟಿಕೋನದಿಂದ ಈ ವಿಷಯವನ್ನು ಆರಿಸಿಕೊಂಡಿದ್ದೇನೆ. ಈ ನನ್ನ ಸಂಶೋಧನಾ ಪ್ರಬಂಧವು ಕೃಷ್ಣದೇವರಾಯನ ಕಾಲಕ್ಕೆ ಸಂಬಂಧಿಸಿದ ಶಾಸನಗಳನ್ನು ಮಾತ್ರ ಆಧರಿಸಿದೆ. ಅವನ್ನು ಈ ಮೂಲಗಳಿಂದ ಸಂಗ್ರಹಿಸಿದ್ದೇನೆ.

1. *ಕೃಷ್ಣದೇವರಾಯನ ಶಾಸನಗಳು* (ಸಂ. 1) *(ಕೃ.ಶಾ.ಸಂ.),* (ಸಂ.) ಡಾ. ಡಿ.ವಿ. ಪರಮಶಿವ ಮೂರ್ತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.
2. *Inscriptions of the Vijayanagara Rulers (I.V.R.),* Vol. IV, Telugu Inscriptions, Editor: P.V. Parabrahma Sastry, I.C.H.R., Bangalore, 2010.
3. *A Concordance of Nayakas,* Karashima, Oxford University Press, Delhi, 2002.
4. *South Indian Inscriptions (S.I.I.),* Vol. 26, New Delhi, Archaeological Survey of India, 1890-1990.
5. *Annual Report on Indian Epigraphy (AREp.),* New Delhi, Archaeological Survey of India.

ಕೃಷ್ಣದೇವರಾಯನು ತನ್ನ ಆಳ್ವಿಕೆಯ 20 ವರ್ಷಗಳ ಅವಧಿಯಲ್ಲಿ ಅನೇಕ ಯುದ್ಧಗಳ ಮೂಲಕ ಇಡೀ ದಕ್ಷಿಣ ಭಾರತವನ್ನು ನಿಯಂತ್ರಣಕ್ಕೊಳಪಡಿಸಿಕೊಂಡಿದ್ದನು. ಇಂತಹ ವಿಶಾಲ ಸಾಮ್ರಾಜ್ಯ ಭೂ ಪ್ರದೇಶವನ್ನು ರಾಯನು ತನಗೆ ನಿಷ್ಠರಾದವರಿಗೆ ನಾಯಕತನದ ಮೂಲಕ ನೀಡಿದ್ದನು. ಕನ್ನಡ ಶಾಸನಗಳು ಇಂಥ ಕ್ರಮವನ್ನು ನಾಯಕತನ ಎಂದೂ, ತಮಿಳು ಶಾಸನಗಳು ನಾಯಕತ್ತನಂ ಎಂದೂ ಉಲ್ಲೇಖಿಸಿದರೆ ತೆಲುಗು ಶಾಸನಗಳು ನಾಯಂಕರರು ಎಂದು ದಾಖಲಿಸಿವೆ. ಇವುಗಳ ಮೂಲಕ ಅರ್ಥ "ನಾಯಕತ್ವ" ಎಂದೇ ಹೇಳಬಹುದು. ಕೃಷ್ಣದೇವರಾಯನು ತನ್ನ ಆಡಳಿತದಲ್ಲಿ ನಾಯಕತನ ನೀಡುವುದರ ಮೂಲಕ ಆ ಭೂಪ್ರದೇಶದ ಉಸ್ತುವಾರಿಯನ್ನು ಸಮರ್ಥ ಅಥವಾ ತನಗೆ ನಿಷ್ಠರಾದ ವ್ಯಕ್ತಿಗಳಿಗೆ ನೀಡಿರುವುದು ಕಂಡು ಬರುತ್ತದೆ. ಅದರ ಪಟ್ಟಿಯನ್ನು ಈ ಲೇಖನದ ಅನುಬಂಧದಲ್ಲಿ ನೀಡಿದೆ. ಇದನ್ನು ನೋಡಿದಾಗ ನಾಯಕತನವು ಕೃಷ್ಣದೇವರಾಯನ ಕಾಲದಲ್ಲಿ ರಾಜ್ಯಾಡಳಿತ ವ್ಯವಸ್ಥೆಯ ಮೂಲೆಗಲ್ಲಾಗಿ ಸೇವೆ ಸಲ್ಲಿಸುತ್ತಿತ್ತು.[9] ಅದನ್ನು ಈ ಕೆಳಗಿನ ಪಟ್ಟಿಯಿಂದ ತೋರಿಸಬಹುದು.

ಕಾಲಾನುಕ್ರಮದಲ್ಲಿ ನಾಯಕತನ

ಕಾಲ	ಆಂಧ್ರಪ್ರದೇಶ	ಕರ್ನಾಟಕ	ತಮಿಳುನಾಡು	ಒಟ್ಟು
ಕ್ರಿ.ಶ. 1509–1513	04	04	03	11
ಕ್ರಿ.ಶ. 1514–1518	04	05	–	09
ಕ್ರಿ.ಶ. 1519–1523	06	09	08	23
ಕ್ರಿ.ಶ. 1524–1530	12	10	03	25
ಒಟ್ಟು	**26**	**28**	**14**	**68**

ನಾಯಕತನಕ್ಕೆ ಒಳಪಟ್ಟ ಸೀಮೆಗಳ ಸಂಖ್ಯೆ

ಈ ಮೇಲಿನ ಪಟ್ಟಿಯನ್ನು ಗಮನಿಸಿದಾಗ ಕೃಷ್ಣದೇವರಾಯನು ತನ್ನ ಆಳ್ವಿಕೆಯ ಆರಂಭದ ಹತ್ತು ವರ್ಷಗಳ ಅವಧಿಯಲ್ಲಿ (1509–18) ಒಟ್ಟು 20 ಬಾರಿ ನಾಯಕತನಕ್ಕೆ ಭೂ ಪ್ರದೇಶವನ್ನು ನೀಡಿದ್ದರೆ, ಕೊನೆಯ ಅವಧಿಯಲ್ಲಿ (ಕ್ರಿ.ಶ. 1519–30) ಒಟ್ಟು ಮೂರೂ ರಾಜ್ಯಗಳಿಂದ 48 ಬಾರಿ ನಾಯಕತನಕ್ಕೆ ಭೂ ಪ್ರದೇಶವನ್ನು ಪಾಲಿಸಿದ್ದಾನೆ. ನಾನು ಅನುಬಂಧದಲ್ಲಿ ಕೊಟ್ಟಿರುವ ಶಾಸನಗಳನ್ನು ಗಣನೆಗೆ ತೆಗೆದುಕೊಂಡು; ನಾಯಕತನಕ್ಕೆ ಪಾಲಿಸಿದ ಸೀಮೆಯ ಹೆಸರು ಅನೇಕ ಬಾರಿ ಉಲ್ಲೇಖಿತವಾಗಿದ್ದರೂ ಅದನ್ನು ಒಮ್ಮೆಲೇ ಮಾತ್ರ ಪರಿಗಣಿಸಿ ಲೆಕ್ಕ ಹಾಕಿದಾಗ ಮೊದಲ 10 ವರ್ಷಗಳ (1509–1518) ಆಳ್ವಿಕೆಯ ಅವಧಿಯಲ್ಲಿ ಒಟ್ಟು 20 ಸೀಮೆಗಳನ್ನು ಕೃಷ್ಣದೇವರಾಯನು ನಾಯಕತನಕ್ಕೆ ನೀಡಿದ್ದರೆ ಕೊನೆಯ ಅವಧಿಯಲ್ಲಿ (1519–1530) 35 ಸೀಮೆಗಳನ್ನು ನಾಯಕತನಕ್ಕೆ ಕೊಟ್ಟಿದ್ದನು. ಒಟ್ಟಾರೆ ಕೃಷ್ಣದೇವರಾಯನ ಆಳ್ವಿಕೆಯ ಪೂರ್ಣಕಾಲಾವಧಿಯನ್ನು ಗಣನೆಗೆ ತೆಗೆದುಕೊಂಡರೆ, (ಸೀಮೆಯ ಹೆಸರು ಅನೇಕ ಬಾರಿ ಉಲ್ಲೇಖವಾಗಿದ್ದರೂ ಅದನ್ನು ಒಮ್ಮೆ ಮಾತ್ರ ಪರಿಗಣಿಸಲಾಗಿದೆ). ಆಂಧ್ರಪ್ರದೇಶ, ಕರ್ನಾಟಕ, ತಮಿಳುನಾಡಿನಿಂದ ಅವನ ಆಳ್ವಿಕೆಯಲ್ಲಿ ಒಟ್ಟು 55 ಸೀಮೆಗಳಿದ್ದವೆಂದು ಶಾಸನೋಕ್ತ ದಾಖಲೆಗಳಿಂದ ಹೇಳಬಹುದು. ಅದರಲ್ಲಿ ಆಂಧ್ರಪ್ರದೇಶದಲ್ಲಿ 17 ಸೀಮೆಗಳೂ, ಕರ್ನಾಟಕದಲ್ಲಿ 24 ಸೀಮೆಗಳೂ, ತಮಿಳುನಾಡಿನಲ್ಲಿ 14 ಸೀಮೆಗಳೂ ನಾಯಕತನಕ್ಕೆ ಪಾಲಿಸಲ್ಪಟ್ಟಿದ್ದವು. ಆ ಸೀಮೆಗಳನ್ನು ಈ ಮುಂದಿನ ಪಟ್ಟಿಯಿಂದ ತೋರಿಸಲಾಗಿದೆ.

ಕೃಷ್ಣದೇವರಾಯನ ಕಾಲದ ಕರ್ನಾಟಕದಲ್ಲಿನ ಸೀಮೆಗಳು

1) ರಾಮನಾಯ್ಕನ ಹಳ್ಳಿ	2) ನೆಲುವಾಗಿಲು	3) ಚನ್ನಪಟ್ಟಣ
4) ತೆರಕಣಾಂಬಿ	5) ಮಾಳೇನಹಳ್ಳಿ	6) ಮಲೆಬೆನ್ನೂರು
7) ಲಿಂಗದಹಳ್ಳಿ	8) ಹಾಸನ	9) ಸೋಲೂರು
10) ಜಾಜೂರು	11) ಮೂಗೂರು	12) ಕೊಪ್ಪಣ
13) ದಡಿಗ	14) ಗೋಣಿಬೀಡು	15) ಉಮ್ಮತ್ತೂರು
16) ಕೋಟೆ	17) ಕುಕ್ಕಲನಾಡು	18) ವಸ್ತಾರೆ
19) ರವುಡಕುಂದಿ	20) ತೇಕಲ	21) ಜಗಳೂರು
22) ಹೊಸವಾಡಸ್ಥಳ	23) ಶ್ರೀರಂಗಪಟ್ಟಣ	24) ಸಿಂಧಗಟ್ಟ

ತಮಿಳುನಾಡಿನ ಸೀಮೆಗಳು

1) ಮಂಜಿನಾಡ ಪೆನ್ನಾಗರ	2) ಪಡವೀಡು	3) ಮಲಾಡು
4) ತಿರುಚಿನಾಪಳ್ಳಿ	5) ಇರ್ರೈವಾನರವೂರ್	6) ಕರ್ವಾಚಿ
7) ಭುವನೈಕವೀರಪಟ್ಟಣ	8) ದಿಂಡುಗಲ್	9) ಇಳೈಯಾತ್ತಕುಡಿ
10) ಕುನ್ನರತ್ತೂರು	11) ಮುಳುವಾಯಿ	12) ಕವಿಳೆ ಚರ್ವಿನ
13) ಅಮರಸೀರ್ಮೆ	14) ಪುವಿರುಂಡವಳ್ಳಿ	

ಆಂಧ್ರಪ್ರದೇಶದ ಸೀಮೆಗಳು

1) ಪಾಣೆಂ	2) ಪೊಟ್ಲದುರ್ತಿ	3) ಗುತ್ತಿ
4) ಪೋಲೂರಿ	5) ನಾಗಾರ್ಜುನಕೊಂಡ	6) ಗಂಡಿಕೋಟ
7) ಕೊಂಡವೀಟಿ	8) ವಿನುಕೊಂಡ	9) ಕುಂದುರ್ಪಿ
10) ಬಸವಕೊಂಡ	11) ಆಲಂಪುರ	12) ಸಕಲಿ
13) ಅಡ್ಡಂಕಿ	14) ಮೊಸಲಿಮಡೆಗು	15) ಮಾರಟೂರು
16) ಆದವಾನಿದುರ್ಗ		

ನಾಯಕತನ ಪಡೆದ ವ್ಯಕ್ತಿಗಳ ಸಂಖ್ಯೆ

ಕೃಷ್ಣದೇವರಾಯನ ಶಾಸನಗಳನ್ನು ಪರಿಶೀಲಿಸಿದಾಗ ಒಂದೇ ಹೆಸರಿನವರಿಗೆ ಅನೇಕ ಬಾರಿ ವಿವಿಧ ಸೀಮೆಗಳಲ್ಲಿ ನಾಯಕತನಗಳು ನೀಡಲ್ಪಟ್ಟಿವೆ. ಅಂತಹ ಹೆಸರನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಅವರು ಪ್ರತ್ಯೇಕ ಹೆಸರಿನವರೇ ಅಥವಾ ಒಬ್ಬರೇ ಎಂದು ಗುರ್ತಿಸಲಾಗಿದೆ. ಈ ರೀತಿ ಗುರುತಿಸಲು ಅವರ ತಂದೆಯ ಹೆಸರನ್ನು ಬಳಸಿಕೊಳ್ಳಲಾಗಿದೆ. ಉದಾಹರಣೆಗೆ (1) ಸಾಳುವ ಗೋವಿಂದರಾಜನು ಕ್ರಿ.ಶ. 1513ರಿಂದ ಕ್ರಿ.ಶ. 1522ರ ಅವಧಿಯಲ್ಲಿ ಆರು ಬಾರಿ ಉಲ್ಲೇಖಗೊಂಡಿದ್ದಾನೆ. [ನೋಡಿ : ಅನುಬಂಧ ಕ್ರ.ಸಂ. 10, 12, 18, 23, 32, 34], (2) ತ್ರಿಯಂಬಕರಸನು ಎರಡು ಬಾರಿಯೂ [ಅನುಬಂಧ ಕ್ರ.ಸಂ. 13, 43], (3) ಬುಕ್ಕರಾಜು ತಿಮ್ಮರಾಜು ಎರಡು ಬಾರಿಯೂ [ಅನುಬಂಧ ಕ್ರ.ಸಂ. 19, 27], (4) ತಿಮ್ಮಪ್ಪನಾಯಕನು ಮೂರು ಬಾರಿಯೂ [ಅನುಬಂಧ ಕ್ರ.ಸಂ. 21, 22, 26], (5) ದೇಮರಸಯ್ಯ [ಅನುಬಂಧ ಕ್ರ.ಸಂ. 49, 51], (6) ವೈರವನೀ ವಸ್ಯೈಯಾಲ್ಯೈಯ ದೇವರ್ [ಅನುಬಂಧ ಕ್ರ.ಸಂ. 37, 52], (7) ಕೃಷ್ಣರಾಯನಾಯಕ [ಅನುಬಂಧ ಕ್ರ.ಸಂ. 58, 59], (8) ರಾಯಸಂ ಅಯ್ಯಪ್ಪರಸು [ಅನುಬಂಧ ಕ್ರ.ಸಂ. 62, 64] ತಲಾ ಎರಡೆರಡು ಬಾರಿಯೂ ಉಲ್ಲೇಖಗೊಂಡಿದ್ದಾರೆ. ಆದುದರಿಂದ ಒಂದೇ ಹೆಸರಿನ ಎಂಟು ವ್ಯಕ್ತಿಗಳು ಇಪ್ಪತ್ತೊಂದು ಬಾರಿ ಶಾಸನದಲ್ಲಿ ಉಲ್ಲೇಖಗೊಂಡಿರುವುದು ಖಚಿತವಾಗುತ್ತದೆ. ಆದುದರಿಂದ ಉಲ್ಲೇಖವಾಗಿರುವ ಒಟ್ಟು 68 ಸೀಮೆಗಳಲ್ಲಿ ಎಂಟು ವ್ಯಕ್ತಿಗಳ 21 ಬಾರಿ ಸ್ಥಾನ ಪಡೆದಂತಾಯಿತು. ಇದನ್ನು ಲೆಕ್ಕ ಹಾಕಿ ನೋಡಿದಾಗ [68–21 + 8 = 55] ಒಟ್ಟು 55 ವ್ಯಕ್ತಿಗಳು ನಾಯಕತನವನ್ನು ಪಡೆದುಕೊಂಡಿದ್ದರೆಂಬುದು ಗಮನಿಸಲಾಗುತ್ತದೆ. ಒಟ್ಟಾರೆ ಹೇಳುವುದಾದರೆ ಕೃಷ್ಣದೇವರಾಯನ ಇಪ್ಪತ್ತುವರ್ಷಗಳ ಆಳ್ವಿಕೆಯ ಅವಧಿಯಲ್ಲಿ 55 ಸೀಮೆಗಳಿದ್ದು ಅವುಗಳನ್ನು 55 ಜನರಿಗೆ ನಾಯಕತನಕ್ಕೆ ನೀಡಿದ್ದನು ಎಂದು ದಾಖಲೆಗಳಿಂದ ಖಚಿತವಾಗಿ ನಿರ್ಧರಿಸಬಹುದು. ಈ ಸಂಖ್ಯೆ ಭವಿಷ್ಯದಲ್ಲಿ ದೊರೆಯುವ ಶಾಸನಗಳನ್ನು ಅವಲಂಬಿಸಿ ಬದಲಾಗಲೂಬಹುದು.

ನಾಯಕತನ ಪಡೆದ ಸಮುದಾಯಗಳು

ಕೃಷ್ಣದೇವರಾಯನಿಂದ ನಾಯಕತನಕ್ಕಾಗಿ ಪಾಲಿಸಿದ ಭೂಪ್ರದೇಶದ ಅಥವಾ ಸೀಮೆಗಳ (ಬಹುಪಾಲು) ಮುಖ್ಯಸ್ಥರನ್ನು ನಾಯಕರು ಎಂದು ಸಾಮಾನ್ಯವಾಗಿ ಕರೆಯಲಾಗಿದೆ. ಇಂದಿನಂತೆ ನಾಯಕ ಎಂಬುದು ಒಂದು ನಿರ್ದಿಷ್ಟ ಸಮುದಾಯದ ವ್ಯಕ್ತಿಗಳು ತಮ್ಮ ಹೆಸರಿನ ಕೊನೆಯಲ್ಲಿ ಇಟ್ಟುಕೊಳ್ಳುವ ಬಿರುದಾಗಿರಲಿಲ್ಲವೆಂಬುದು ಶಾಸನಗಳಿಂದ ಗೊತ್ತಾಗುತ್ತದೆ. ಕೃಷ್ಣದೇವರಾಯನ ಶಾಸನಗಳನ್ನು ಪರಿಶೀಲಿಸಿದಾಗ ನಾಯಕತನವನ್ನು ವಿವಿಧ

ಸಮುದಾಯದ ವ್ಯಕ್ತಿಗಳಿಗೆ ನೀಡಿರುವುದು ಕಂಡುಬರುತ್ತದೆ. ಇವರಲ್ಲಿ ಬ್ರಾಹ್ಮಣರೇ ಹೆಚ್ಚಾಗಿರುವುದು ಗಮನಾರ್ಹ. ಏಕೆಂದರೆ ಕೃಷ್ಣದೇವರಾಯನಿಂದಲೇ ರಚಿತವಾದ ತೆಲುಗಿನ ಆಮುಕ್ತಮಾಲ್ಯದ ಕೃತಿಯು "ಕೋಟೆಯ ಕಾವಲು, ರಕ್ಷಣೆ ಇತ್ಯಾದಿ ಹೊಣೆಗಳನ್ನು ತನ್ನ ಆಪ್ತ ಬಂಧುಗಳಿಗೇ ವಹಿಸಬೇಕು" ಎಂದು ಹೇಳುತ್ತದೆ.[10] ಕೃಷ್ಣದೇವರಾಯನು ಬ್ರಾಹ್ಮಣರ ವಶಕ್ಕೆ ಪ್ರಾಂತೀಯ ಗವರ್ನರ್ ಮತ್ತು ಕೋಟೆಯ ದಂಡನಾಯಕತ್ವನ್ನು ಸಮರ್ಪಿಸಿದ್ದನು. ಏಕೆಂದರೆ, ಬ್ರಾಹ್ಮಣರು ತಮ್ಮ ಮೊದಲ ನಿಷ್ಠೆಯನ್ನು ಚಕ್ರವರ್ತಿಗೆ ನೀಡುತ್ತಿದ್ದರಲ್ಲದೆ, ಕ್ಷತ್ರಿಯ, ಶೂದ್ರ, ಬೇಡ ಅಧಿಕಾರಿಗಳನ್ನು ದಿಕ್ಕರಿಸುವ ಹೋರಾಟದಲ್ಲಿ ಮೇಲುಗೈಯನ್ನು ಸಾಧಿಸುತ್ತಿದ್ದರು. ಇದನ್ನೇ ರಂಗಸ್ವಾಮಿ ಸರಸ್ವತಿಯವರು ತಮ್ಮ ಲೇಖನವೊಂದರಲ್ಲಿ ಹೀಗೆ ಹೇಳಿದ್ದಾರೆ.

"The king can lay his hand on his breast and sleep peacefully who appoints as master of his fortresses, such Brahmins as are attached to himself and learned in many sciences and arts and addicted to dharma and heroic ...." [11]

ಒಟ್ಟಾರೆ ಹೇಳುವುದಾದರೆ ನಾಯಕತನವನ್ನು ಪಡೆದುಕೊಂಡವರಲ್ಲಿ ಬ್ರಾಹ್ಮಣರು ಮೇಲುಗೈಯನ್ನು ಸಾಧಿಸಿದ್ದರು. ಶಾಸನಗಳಲ್ಲಿ ಉಲ್ಲೇಖಿತವಾದ ಆ ವ್ಯಕ್ತಿಯ ಗೋತ್ರಗಳಿಂದ ಈ ಕೆಳಗಿನ ಪಟ್ಟಿಯನ್ನು ಅವರ ಹೆಸರನ್ನು ಸಂಗ್ರಹಿಸಿ ನೀಡಿದ್ದೇನೆ.

ನಾಯಕತನ ಪಡೆದ ಬ್ರಾಹ್ಮಣರು ಮತ್ತು ಅವರ ಗೋತ್ರಗಳು

ಕ್ರ.ಸಂ.	ಹೆಸರು	ಗೋತ್ರ	ಸೀಮೆ
1.	ಮಹಾಮಂಡಲೇಶ್ವರ ರಾಚೆರಾಜು	ಕೌಂಡಿನ್ಯ ಗೋತ್ರ	ಪೊಟ್ಲದುರ್ತಿ (ಆಂಧ್ರ)
2.	ಸಾಳುವ ಗೋವಿಂದರಾಜು	ಕೌಂಡಿನ್ಯ ಗೋತ್ರ	ತೆರಕಣಾಂಬಿ (ಕರ್ನಾಟಕ) ಗುತ್ತಿ (ಆಂಧ್ರ) ಉಮ್ಮತ್ತೂರು (ಕರ್ನಾಟಕ)
3.	ತ್ರಿಯಂಬಕರಸ	ವಶಿಷ್ಠ ಗೋತ್ರ	ಮಾಳೆನಹಳ್ಳಿ (ಕರ್ನಾಟಕ)
4.	ಧನಂಜಯರಾಯ ಒಡೆಯ	ಆತ್ರೇಯ ಗೋತ್ರ	ಹಾಸನ (ಕರ್ನಾಟಕ)
5.	ಪೆದಸಿಂಗಮನಾಯಕ	ಹಾರೀತಿ ಗೋತ್ರ	ನಾಗಾರ್ಜುನ ಕೊಂಡ (ಆಂಧ್ರ)
6.	ಅಪ್ಪರಸಯ್ಯ (ಸಾಳುವ ತಿಮ್ಮರಸ ಅಳಿಯ)		ಸೋಲೂರು (ಕರ್ನಾಟಕ)
7.	ಭಂಡಾರದ ತಿಮ್ಮಪ್ಪಯ್ಯ		ಕೊಪ್ಪಣ (ಕರ್ನಾಟಕ)
8.	ನಾದೆಂಡ್ಲ ಗೋಪಯ್ಯ	ಕೌಶಿಕ ಗೋತ್ರ	ಕೊಂಡವೀಟ (ಆಂಧ್ರ)
9.	ಮಹಾಮಂಡಲೇಶ್ವರ ಸರ್ವಯ್ಯದೇವ	ಕಾಶ್ಯಪ ಗೋತ್ರ	ವಿನುಕೊಂಡ (ಆಂಧ್ರ)
10.	ಕೊಂಡಮರಸ (ಸಾಳುವ ತಿಮ್ಮರಸನ ಮಗ)	ಕೌಂಡಿಣ್ಯ ಗೋತ್ರ	ದಿಂಡುಗಲ್ (ತಮಿಳುನಾಡು)
11.	ವಿಸಣ್ಣರಾಉತ	ಕಾಶ್ಯಪ ಗೋತ್ರ	ಕವಿಳೆಚೆರ್ವಿನ (ಕರ್ನಾಟಕ)

12.	ದೇವರಸಯ್ಯ	ಗಾರ್ಗೇಯ ಗೋತ್ರ	ಗಂಡಿಕೋಟೆ (ಆಂಧ್ರ)
13.	ರಂಗನಾಥ ರಾವುತ	ಕಾಶ್ಯಪ ಗೋತ್ರ	ಜಗಳೂರು (ಕರ್ನಾಟಕ)
14.	ರಾಯಸದ ಅಯ್ಯಪ್ಪರಸು	ಕೌಂಡಿಣ್ಯ ಗೋತ್ರ	ಗಂಡಿಕೋಟ (ಆಂಧ್ರ)
15.	ಕೃಷ್ಣರಾಯನಾಯಕ	ಕಾಶ್ಯಪ ಗೋತ್ರ	ಶ್ರೀರಂಗಪಟ್ಟಣ, ಸಿಂದಗಟ್ಟ (ಕರ್ನಾಟಕ)
16.	ಬೋಗಯ್ಯದೇವ ಮಹಾಅರಸು	ಆತ್ರೇಯ ಗೋತ್ರ	ಶ್ರೀರಂಗಪಟ್ಟಣ (ಕರ್ನಾಟಕ)
17.	ರಾಯಸಂ ಅಯ್ಯಪ್ಪರಸು	ಭಾರಧ್ವಾಜ ಗೋತ್ರ	ಅಡ್ಡಂಕಿ (ಆಂಧ್ರ)
18.	ಅವಸರಂ ಚಂದ್ರಶೇಖರಯ್ಯ	–	ಮೊಸಲಿ ಮಡಗು (ಆಂಧ್ರ)
19.	ಗೌರೆದಣ್ಣಾಯಕರ ಬಸ್ವಪಯ್ಯ	ಹಾರೀತ ಗೋತ್ರ	ಆಲಂಪುರ (ಆಂಧ್ರ)
20.	ದೀಕ್ಷಿತಯ್ಯ	–	ಆಲಂಪುರ (ಆಂಧ್ರ)
21.	ಸಿದ್ಧವಾಟಂ ಯಲ್ಲಮ್ಮರಸುವಯ್ಯ	ಶ್ರೀವತ್ಸ ಗೋತ್ರ	ಸಕಲಿ (ಆಂಧ್ರ)
22.	ಪೆದ್ದರಾಜು	ವಶಿಷ್ಟ ಗೋತ್ರ	ಕರ್ವಾಟಿ (ತಮಿಳುನಾಡು)

ಹೀಗೆ ಬ್ರಾಹ್ಮಣರು, ಕೃಷ್ಣದೇವರಾಯನು ನಾಯಕತನಕ್ಕೆ ನೀಡಿದ ಭೂಪ್ರದೇಶಗಳಲ್ಲಿ ಅರ್ಧಭಾಗವನ್ನು ಪಡೆದುಕೊಂಡಿದ್ದರು. ಇದು ಇನ್ನೂ ಹೆಚ್ಚಾಗಿರಬಹುದು. ಬ್ರಾಹ್ಮಣರಂತೆ ಬೇಡರ ನರಸನಾಯಕ ಮತ್ತು ತಿಪ್ಪನಾಯಕ ಆಂಧ್ರ ಪ್ರದೇಶದ ಕುಂದುರ್ಪಿ ಮತ್ತು ಬಸವಕೊಂಡ ಸೀಮೆಗಳನ್ನು ಕ್ರಮವಾಗಿ ಪಡೆದುಕೊಂಡರೆ ಕೋಟೆ ಸೀಮೆಯ ನಾಯಕತನವನ್ನು ಪಡೆದುಕೊಂಡಿದ್ದ ಪ್ರಧಾನ ಬಸವಪ್ಪಯ್ಯನು ಯರ್ರಗೊಲ್ಲ ಜಾತಿಗೆ ಸೇರಿದವನಾಗಿದ್ದನು. ಇನ್ನುಳಿದವರ ವಿವರವು ಶಾಸನಗಳಲ್ಲಿ ಉಲ್ಲೇಖವಾಗಿಲ್ಲ.

ಪ್ರಭಾವಿ ಕುಟುಂಬ

ಕೃಷ್ಣದೇವರಾಯನಿಂದ ನಾಯಕತನವನ್ನು ಪಡೆದುಕೊಂಡಿದ್ದ ಪ್ರಭಾವಿ ಕುಟುಂಬವೆಂದರೆ ರಾಚಿರಾಜನ ಕುಟುಂಬವಾಗಿದೆ. ಇವನ ತಂದೆ ಯರ್ರ ಗಡ್ಡಮಯ್ಯ ಮಹಾರಾಜು[12] ಅವರು ಅರಸು ಕುಟುಂಬದವರೆಂದು ಅವರು ಧರಿಸಿರುವ ಮಹಾರಾಜ ಎಂಬ ಬಿರುದು ಹೇಳುತ್ತದೆ. ರಾಚಿರಾಜನು ಕೂಡಾ ಮಹಾಮಂಡಲೇಶ್ವರನಾಗಿದ್ದು ಕ್ರಿ.ಶ. 1513ರಲ್ಲಿ ಪೊಟ್ಲದುರ್ತಿಸೀಮೆಯ ನಾಯಕತನವನ್ನು ಕೃಷ್ಣದೇವರಾಯನಿಂದ ಪಡೆದಿದ್ದನು.[13] ರಾಚಿರಾಜನಿಗೆ ಇಬ್ಬರು ಪುತ್ರರಿದ್ದರು. ಅವರೆಂದರೆ ಹಿರಿಯವನಾದ ಸಾಳುವ ತಿಮ್ಮರಸು ಮತ್ತು ಅವನ ತಮ್ಮ ಸಾಳುವ ಗೋವಿಂದರಾಜು ಅಥವಾ ಗೋವಿಂದಯ್ಯ. ಇವರ ಕುಟುಂಬವು ಸಾಳುವ ಸಂತತಿಯ ಕಾಲದಲ್ಲೇ ಪ್ರಬಲವಾಗಿತ್ತು. ತುಳುವ ವೀರನರಸಿಂಹನ ಆಳ್ವಿಕೆಯಲ್ಲಿ ರಾಚಿರಾಜನ ಮಗ ಸಾಳುವ ತಿಮ್ಮರಸು ವಿಜಯನಗರದ ಮಹಾಪ್ರಧಾನಿಯಾಗಿದ್ದನು. ಆದರೂ ಅವನು ತನ್ನ ಪ್ರಭಾವದಿಂದ ಚಕ್ರವರ್ತಿಯಿಂದ ಗುತ್ತಿರಾಜ್ಯದ ನಾಯಕತನವನ್ನು ಕ್ರಿ.ಶ. 1509ರಲ್ಲಿ ಪಡೆದುಕೊಂಡಿದ್ದನು.[14] ಕೃಷ್ಣದೇವರಾಯನು ಕೊಂಡವೀಡನ್ನು ವಶಪಡಿಸಿಕೊಂಡು ಅದಕ್ಕೆ ರಾಜ್ಯದ ಸ್ಥಾನಮಾನ ನೀಡಿ ಸಾಳುವ ತಿಮ್ಮರಸನ ಉಸ್ತುವಾರಿಗೆ ವಹಿಸಿದ್ದನು.[15] ಅದೇ ರೀತಿ 1517ರಲ್ಲಿ ಮುಲುಕಿ ನಾಡು ಸೀಮೆಯನ್ನು ನಾಯಕತನಕ್ಕಾಗಿ ರಾಯನಿಂದ ಪಡೆದುಕೊಂಡಿದ್ದನು.[16] ಸಾಳುವ ತಿಮ್ಮರಸನ ಮಗನಾದ ರಾಯಸದ ಕೊಂಡಮರಸನು ಕ್ರಿ.ಶ. 1512ರಲ್ಲಿ ಕುಂದುರ್ಪಿ ಸೀಮೆಯಲ್ಲಿ[17] ಕ್ರಿ.ಶ. 1516ರಲ್ಲಿ ಪೊದ್ದಿಲಸೀಮೆಯ[18] ಮತ್ತು ಕೊಂಡಪಲ್ಲಿ ಹಾಗು

ಕೊಂಡವೀಡು ರಾಜ್ಯದ[19] ಆಡಳಿತ ಮಾಡುತ್ತಿದ್ದನೆಂದು ಶಾಸನಗಳು ತಿಳಿಸುತ್ತವೆ. ಇದರಿಂದ ಮಹಾಪ್ರಧಾನಿ ತಿಮ್ಮರಸನು ತನಗೆ ವಹಿಸಿದ್ದ ರಾಜ್ಯದ ಸುತ್ತಲ ಪ್ರದೇಶಕ್ಕೆ ತನ್ನ ಮಗನನ್ನೇ ನೇಮಕ ಮಾಡಿಸಲು ರಾಯನ ಮೇಲೆ ಪ್ರಭಾವ ಬೀರಿದ್ದು ಕಂಡುಬರುತ್ತದೆ. ಇದೇ ಕೊಂಡಮರಸನು ಕ್ರಿ.ಶ. 1522ರಲ್ಲಿ ದಿಂಡುಗಲ್ ಸೀಮೆಯ ನಾಯಕತನವನ್ನು ಪಡೆದು ಅಲ್ಲಿದ್ದನೆಂದು ಶಾಸನವು ಉಲ್ಲೇಖಿಸಿದೆ.[20] ಇದರಿಂದ ಇವನನ್ನು ಕೊಂಡವೀಡುವಿನಿಂದ ದೂರದ ದಿಂಡುಗಲ್‌ಗೆ ವರ್ಗಾವಣೆ ಮಾಡಿರುವುದು ಗೊತ್ತಾಗುತ್ತದೆ. ರಾಯಸದ ಕೊಂಡಮರಸಯ್ಯನಿಗೆ ರಾಯಸದ ಅಯ್ಯಪ್ಪರಸು ಎಂಬ ಮಗನಿದ್ದನು. ಅವನು ಕೂಡ ಕ್ರಿ.ಶ. 1529ರಲ್ಲಿ ಗಂಡಿಕೋಟೆ ಸೀಮೆ[21] ಮತ್ತು ಕೊಂಡವೀಟಿರಾಜ್ಯದ ಅಡ್ಡಂಕಿ ಸೀಮೆಯ[22] ನಾಯಕತನವನ್ನು ಪಡೆದು ಆಳ್ವಿಕೆ ಮಾಡುತ್ತಿದ್ದನು. ಒಟ್ಟಾರೆ ಹೇಳುವುದಾರೆ ಸಾಳುವ ತಿಮ್ಮರಸನು ಕೃಷ್ಣದೇವರಾಯನ ಮಹಾಪ್ರಧಾನಿಯಾಗಿದ್ದು ಆ ಹುದ್ದೆಯ ಪ್ರಭಾವದಿಂದ ಮತ್ತು ರಾಜನಿಷ್ಠೆಯಿಂದ ತನ್ನ ಮಗ ಮತ್ತು ಮೊಮ್ಮಗನಿಗೆ ನಾಯಕತನಕ್ಕೆ ಸೀಮೆಗಳನ್ನು ಪಾಲಿಸಲು ಕಾರಣನಾಗಿದ್ದನು. ಅಲ್ಲದೆ ತಂದೆ ಮಹಾಪ್ರಧಾನಿಯಾಗಿದ್ದರೆ ಅವನ ಮಗ ಮತ್ತು ಮೊಮ್ಮಗ ರಾಯಸದವರಾಗಿದ್ದರು.[23] ಹೀಗೆ ಸಾಳುವ ತಿಮ್ಮ ಚಕ್ರವರ್ತಿಯ ಮಹಾಪ್ರಧಾನಿಯಾಗಿದ್ದು ತನ್ನ ಮಗ ಮತ್ತು ಮೊಮ್ಮಗನನ್ನು ರಾಯಸ ಕಛೇರಿಯ ಮುಖ್ಯಸ್ಥರನ್ನಾಗಿಟ್ಟುಕೊಂಡು ಅದರ ಮೂಲಕ ರಾಜ್ಯದ ವಿವಿಧ ಪ್ರದೇಶಗಳಿಗೆ ಸಂದೇಶಗಳನ್ನು ರವಾನಿಸುತ್ತದ್ದನು. ಇದರಿಂದ ಅಧಿಕಾರ ಒಂದೇ ಕುಟುಂಬದವರ ಬಳಿ ಇರಲು ಕಾರಣವಾಯಿತು ಎನ್ನಬಹುದು.

ಸಾಳುವ ತಿಮ್ಮರಸನ ಅಳಿಯನಾದ ಅಪ್ಪರಸಯ್ಯನು ಸೋಲೂರು ಸೀಮೆಯ ನಾಯಕತನವನ್ನು ಪಡೆದು ಕ್ರಿ.ಶ. 1520ರಲ್ಲಿ ಆಳ್ವಿಕೆ ಮಾಡುತ್ತಿದ್ದರೆ[24] ಅವನ ಮತ್ತೊಬ್ಬ ಸಂಬಂಧಿ ನಾದೆಂಡ್ಲ ಗೋಪ ಎಂಬುವನು ಮಂತ್ರಿಯಾಗಿದ್ದು ಕೊಂಡವೀಟಿ ಸೀಮೆಯ ನಾಯಕತನವನ್ನು ಪಡೆದಿದ್ದನು.[25] ಸಾಳುವ ತಿಮ್ಮರಸನಿಗೆ ತನ್ನಷ್ಟೇ ಪ್ರಭಾವಶಾಲಿಯಾದ ಸಾಳುವ ಗೋವಿಂದರಾಜ ಎಂಬ ತಮ್ಮನಿದ್ದನು. ಇವನು ಕ್ರಿ.ಶ. 1513ರಲ್ಲಿ ತೆರಕಣಾಂಬಿ ಸೀಮೆಯ ನಾಯಕತನವನ್ನು ಹೊಂದಿದ್ದನು.[26] ತನ್ನ ಅಣ್ಣನಾದ ಸಾಳುವ ತಿಮ್ಮರಸನು ಗುತ್ತಿರಾಜ್ಯದಿಂದ ಕೊಂಡವೀಡು ರಾಜ್ಯಕ್ಕೆ ಬದಲಾದಾಗ, ಕ್ರಿ.ಶ. 1514ರಲ್ಲಿ ಚಕ್ರವರ್ತಿಯಿಂದ ಗುತ್ತಿಸೀಮೆಯ ನಾಯಕತನವನ್ನು ಪಡೆದಿದ್ದನೆಂದು ಶಾನಸದಿಂದ[27] ತಿಳಿಯುತ್ತದೆ. ಅಲ್ಲಿಗೆ ಹೋದರೂ ಸಾಳುವ ಗೋವಿಂದರಾಜನು ತೆರಕಣಾಂಬಿ ಸೀಮೆಯನ್ನು ಬಿಟ್ಟುಕೊಡಲಿಲ್ಲ. ಇದರ ಜೊತೆಗೆ ಕ್ರಿ.ಶ. 1516ರಲ್ಲಿ ಉಮ್ಮತ್ತೂರು ರಾಜ್ಯವನ್ನು ಪಡೆದಿದ್ದನು. ಆ ವೇಳೆಗಾಗಲೇ ಅವನು ಕೃಷ್ಣದೇವರಾಯನ ಆಸ್ಥಾನ ಶಿರೋಮಣಿಯಾಗಿದ್ದನು.[28] ಸಾಳುವ ಗೋವಿಂದರಾಜನು ಕ್ರಿ.ಶ. 1519ರ ವೇಳೆಗಾಗಲೇ ಕೃಷ್ಣದೇವರಾಯನ ಮಹಾಪ್ರಧಾನಿಯೆಂದು ಕರೆಸಿಕೊಂಡಿದ್ದು ಉಮ್ಮತ್ತೂರು ಸೀಮೆಯ ಜವಾಬ್ದಾರಿಯನ್ನು ವಹಿಸಿಕೊಂಡಿದ್ದನೆಂದು ಹೇಳಲಾಗಿದೆ.[29] ಇವರು ವಿಜಯನಗರದಲ್ಲೇ ಇದ್ದುಕೊಂಡು ತಮಗೆ ನೀಡಿದ ನಾಯಕತನದ ಪ್ರದೇಶಗಳನ್ನು ನೋಡಿಕೊಳ್ಳುತ್ತಿದ್ದರು. ಉದಾ: ಉಮ್ಮತ್ತೂರು ರಾಜ್ಯಕ್ಕೆ ಸೇರಿದ್ದ ಹನೂರಿನ ಗೌಡ ಪ್ರಜೆಗಳಾದ ಮಾರನಗೌಡ ವೀರಯ್ಯಗೌಡ ಮೊದಲಾದ ಗೌಡರು ವಿಜಯನಗರಕ್ಕೆ ಹೋಗಿ ಕೃಷ್ಣರಾಯರನ್ನು ಕಂಡು ಸಾಳವ ತಿಂಮರಸನ ಕಂಡು ಗೋವಿಂದರಾಜಯ್ಯನ ಕಂಡು ಚಿಕ್ಕರರಯ್ಯನ ಕಂಡು..........[30] ಇದರಿಂದ ಇವರ ಕಛೇರಿ ವಿಜಯನಗರದಲ್ಲೇ ಇತ್ತು ಎಂದು ಹೇಳಲು ಸಾಧ್ಯವಿದೆ. ಒಟ್ಟಾರೆ ಹೇಳುವುದಾದರೆ ಸಾಳುವ ಗೋವಿಂದ ರಾಜನು ತೆರಕಣಾಂಬಿ, ಉಮ್ಮತ್ತೂರು, ಗುತ್ತಿ ಎಂಬ ವಿಶಾಲ ರಾಜ್ಯಗಳ ನಾಯಕತನವನ್ನು ಪಡೆದಿದ್ದು ಇವುಗಳ ಉಸ್ತುವಾರಿಯನ್ನು ರಾಜಧಾನಿಯಿಂದಲೇ ನಿರ್ವಹಿಸುತ್ತಿದ್ದು ಅವಶ್ಯವಾದಾಗ ಅಲ್ಲಿಗೆ ಭೇಟಿ ನೀಡುತ್ತಾ ಇಂದಿನ ಜಿಲ್ಲಾ ಉಸ್ತುವಾರಿ ಸಚಿವರಂತೆ ಕಾರ್ಯನಿರ್ವಹಿಸುತ್ತಿದ್ದನು. ಈ ಮೂರು ರಾಜ್ಯಗಳು ಅತ್ಯಂತ ಫಲವತ್ತಾದವುಗಳಾಗಿದ್ದು ಅಧಿಕ

ಆದಾಯವನ್ನು ತರುತ್ತಿದ್ದವು. ತೆರಕಣಾಂಬಿ ಮತ್ತು ಉಮ್ಮತ್ತೂರು ರಾಜ್ಯಗಳು ಕಾವೇರಿ ನದಿಯ ಮುಖಜ ಭೂಮಿಯ ಪ್ರದೇಶಗಳಾಗಿದ್ದರೆ ಗುತ್ತಿಯು ಗಣಿ ಪ್ರದೇಶವಾಗಿತ್ತು. ಆದ್ದರಿಂದಲೇ ಹೆಚ್ಚು ಪ್ರಭಾವಶಾಲಿಯಾಗಿದ್ದ ಈ ಮನೆತನದವರು ಕೃಷ್ಣದೇವರಾಯನ ಕಾಲದಲ್ಲಿ ಆಯಕಟ್ಟಿನ ಸ್ಥಳದ ನಾಯಕತನವನ್ನು ಪಡೆದುಕೊಂಡಿದ್ದರೆಂದು ಹೇಳಬಹುದು. ಸಾಳುವ ಗೋವಿಂದರಾಜನು ಮಹಾಪ್ರಧಾನಿಯಾಗಿ ರಾಜಧಾನಿಗೆ ಹಿಂತಿರುಗಿದ ಮೇಲೆ ತನಗೆ ಕೃಷ್ಣದೇವರಾಯನು ನೀಡಿದ್ದ ನಾಯಕತನವನ್ನು ಬಿಟ್ಟುಕೊಟ್ಟನೆಂದು ಹೇಳಲು ಸಾಧ್ಯವಿದೆ. ಏಕೆಂದರೆ ಕ್ರಿ.ಶ. 1526ರಲ್ಲಿ ಉಮ್ಮತ್ತೂರಿನಲ್ಲಿ ಗೌರವ ನರಸಪ್ಪನೂ[31] ಕ್ರಿ.ಶ. 1531ರಲ್ಲಿ ಗುತ್ತಿಯಲ್ಲಿ[32] ಮಹಾಮಂಡಳೇಶ್ವರ ಅನಿವಾರಣ ಸಿಂಹವಾರ್ರು ಸಿಂಗರೈಯಂಗಾರ್ರು ಆಳ್ವಿಕೆ ಮಾಡುತ್ತಿದ್ದರು. ಇದರಿಂದ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಒಂದು ಸೀಮೆಯ ನಾಯಕತನವು ವಂಶಪಾರಂಪರ್ಯವಾಗಿರಲಿಲ್ಲ ಎಂದು ಹೇಳಲು ಸಾಧ್ಯವಿದೆ.

ವಂಶಾವಳಿ

ಯರ್ರಗದ್ದಮಯ್ಯ ಮಹಾರಾಜ
|
ಮಹಾಮಂಡಲೇಶ್ವರ ರಾಚಿರಾಜು (ಪೊಟ್ಲದುರ್ತಿಸೀಮೆ ನಾಯಕತನ)

- ಸಾಳುವ ತಿಮ್ಮರಸು (ಗುತ್ತಿ, ಕೊಂಡವೀಡು ನಾಯಕತನ ಮುಲುಕಿ ನಾಡು ಸೀಮೆ)
  - ರಾಯಸದ ಕೊಂಡಮರಸ (ಮೊದ್ದಿಲ ಸೀಮೆ, ಕೊಂಡಪಲ್ಲಿ, ದಿಂಡುಗಲ್ ಕೊಂಡವೀಡು ಸೀಮೆ)
    - ರಾಯಸದ ಅಯ್ಯಪ್ಪರಸು (ಗಂಡಿಕೋಟ, ಅಡ್ಡಂಕಿ ಸೀಮೆ)
- ಸಾಳುವ ಗೋವಿಂದರಾಜು (ತೆರಕಣಾಂಬಿ, ಗುತ್ತಿ, ಉಮ್ಮತ್ತೂರು ಸೀಮೆ)

ಮಹಾಮಂಡಲೇಶ್ವರ ರಾಚಿರಾಜನು ಮತ್ತು ಅವನ ಪೂರ್ವಜರು ತೆಲುಗು ಪ್ರದೇಶಗಳಲ್ಲೇ ಉದಯಿಸಿದ ತೆಲುಗುನಿಯೋಗಿ ಬ್ರಾಹ್ಮಣರು. ಇಂದಿನ ಕಡಪಾ ಜಿಲ್ಲೆಯ ಪ್ರದೇಶದಲ್ಲಿ ಆಳ್ವಿಕೆ ಮಾಡುತ್ತಿದ್ದರು. ಇವನ ಹಿರಿಯ ಮಗನಾದ ಸಾಳುವ ತಿಮ್ಮರಸ ತುಳುವ ಸಂತತಿಯ ಕಾಲದಲ್ಲಿ ರಾಜ್ಯದ ಉನ್ನತ ಹುದ್ದೆಯನ್ನು ಅಲಂಕರಿಸಿ ತೆಲುಗು ಭೂಪ್ರದೇಶಗಳಲ್ಲಿಯೇ ನಾಯಕತನವನ್ನು ಪಡೆದುಕೊಂಡನು. ಇವನ ಮಗ ಮೊಮ್ಮಗ ಅರಮನೆಯಲ್ಲಿ ರಾಯಸ ಕಛೇರಿಯ ಉನ್ನತ ಅಧಿಕಾರಿಗಳು ಇಂದಿನ ಕಡಪಾ, ಹಿಂದೂಪುರ, ಪ್ರಕಾಶಂ ಜಿಲ್ಲೆಗಳಲ್ಲಿನ ಭೂ ಪ್ರದೇಶಗಳನ್ನು ನಾಯಕತನಕ್ಕೆ ಪಡೆದುಕೊಳ್ಳುವುದರ ಮೂಲಕ ತಮ್ಮ ತೆಲುಗು ಪ್ರೀತಿಯನ್ನು ತೋರಿಸಿದರು. ಸಾಳುವ ಗೋವಿಂದರಾಜನೂ ಕರ್ನಾಟಕದಲ್ಲಿ ನಾಯಕತನ ಪಡೆದಿದ್ದರೂ ಆಂಧ್ರದ ಗುತ್ತಿಯನ್ನು ಬಿಡಲಿಲ್ಲ. ಆದ್ದರಿಂದಲೇ ತುಳುವರ ಕಾಲದಲ್ಲಿ ಈ ಎಲ್ಲ ಅಧಿಕಾರಿ ವರ್ಗದಿಂದ ತೆಲುಗು ವಿರಾಜಮಾನವಾಗಿ ಬೆಳೆಯಲು ಕಾರಣವಾಯಿತು. ಇವರ ಪಕ್ಷಪಾತ ಧೋರಣೆಯಿಂದ ಕನ್ನಡಕ್ಕೆ ನಷ್ಟವಾಯಿತು.

ನಾಯಕತನ ಪಡೆದ ಬಹುಪಾಲು ವ್ಯಕ್ತಿಗಳು ರಾಜ್ಯಾಡಳಿತದಲ್ಲಿ ಪ್ರಭಾವಿ ವ್ಯಕ್ತಿಗಳಾಗಿದ್ದರು. ಅವರು ವಿವಿಧ ಹುದ್ದೆಗಳನ್ನಲಂಕರಿಸಿ ಸಮಾಜದಲ್ಲಿ ಪ್ರತಿಷ್ಠಿತರೆನಿಸಿಕೊಂಡಿದ್ದರು. ಇವರಲ್ಲಿ ಮಹಾಮಂಡಲೇಶ್ವರರು, ಕಾರ್ಯಕೆಕರ್ತರು, ರಾಯಸದವರು, ರಾವುತರು, ಬೊಕ್ಕಸದವರು, ಪ್ರಧಾನರು, ಮಹಾಪ್ರಧಾನರು, ಅವಸರದವರು ಇದ್ದರು ಅವರನ್ನು ಈ ಕೆಳಕಂಡ ಪಟ್ಟಿಯಿಂದ ಹೀಗೆ ತೋರಿಸಬಹುದು.

1) ಮಹಾಪ್ರಧಾನಿ

(ಎ) ಸಾಳುವ ತಿಮ್ಮರಸ – ಗುತ್ತಿ, ಕೊಂಡವೀಡು, ಮುಲುಕಿನಾಡು ಸೀಮೆಯ ನಾಯಕತನ

(ಬಿ) ಸಾಳುವ ಗೋವಿಂದರಾಜು – ತೆರಕಣಾಂಬಿ, ಗುತ್ತಿ, ಉಮ್ಮತ್ತೂರು.

2) ಮಹಾಮಂಡಲೇಶ್ವರರು

(ಎ) ರಾಚಿರಾಜು – ಪೊಟ್ಲದುರ್ತಿಸೀಮೆ

(ಬಿ) ಸರ್ವಯ್ಯದೇವ ಕೋಡ ಮಹಾರಾಜು – ವಿನುಕೊಂಡ ಸೀಮೆ

(ಸಿ) ಬೋಗಯ್ಯದೇವ ಮಹಾಅರಸು – ಶ್ರೀರಂಗಪಟ್ಟಣ ಸೀಮೆ

(ಡಿ) ಬುಕ್ಕರಾಜು ತಿಮ್ಮರಾಜು – ಗಂಜಿಕುಂಟ ಸೀಮೆ

3) ಕಾರ್ಯಕೆಕರ್ತರು

(ಎ) ಊಳಿಗದ ಮಾದೆನಾಯ್ಕ – ಸೋಲೂರು ಸೀಮೆ

(ಬಿ) ಪ್ರಧಾನ ಮಲ್ಲರಸ – ಜಾಜೂರು ಸೀಮೆ

(ಸಿ) ಯಲ್ಲಮರಸುವಯ್ಯ – ಸಕಲಿ ಸೀಮೆ

(ಡಿ) ಅಪ್ಪರಸಯ್ಯ – ಸೋಲೂರು

(ಇ) ತಿಮ್ಮರಾಯ ಚಕ್ರವರ್ತಿ – ಡೆಂಕನ ಕೋಟೆ

4) ರಾಯಸದವರು

(ಎ) ರಾಯಸಂ ಅಯ್ಯಪ್ಪರಸು – ಗಂಡಿಕೋಟೆ ಸೀಮೆ

(ಬಿ) ರಾಯಸಂ ಅಯ್ಯಪ್ಪ – ಅಡ್ಡಂಕಿ ಸೀಮೆ

(ಸಿ) ಕೊಂಡಮರಸಯ್ಯ – ದಿಂಡುಗಲ್, ಪೊದ್ದಿಲ ಸೀಮೆ, ಕೊಂಡಪಲ್ಲಿ, ಕೊಂಡವೀಡು

5) ರಾವುತರು

(ಎ) ವಿಠಲ ರಾವುತ – ತೇಕಲ ಸೀಮೆ

(ಬಿ) ವಿಸಣ್ಣರಾವುತ – ಉಚ್ಚಂಗಿ ವೇಂಠಿಯ ಕವಿಳೆಚೆರ್ವಿನ ಸೀಮೆ

(ಸಿ) ರಂಗನಾಥರಾವುತ – ಜಗಳೂರು ಸೀಮೆ

6) **ಬೊಕ್ಕಸದವರು**

(ಎ) ಪೆದ್ದಿನಾಯಕ – ಆಲಂಪುರ ಸೀಮೆ
(ಬಿ) ವಾಕಿಟಿ ಪೆದ್ದಿನಾನಿಗಾರು – ಪಾಣೆಂ ಸೀಮೆ
(ಸಿ) ಭಂಡಾರದ ತಿಮ್ಮಪ್ಪಯ್ಯ – ಕೊಪ್ಪಣದ ಸೀಮೆ
(ಡಿ) ಹೊನ್ನಪ್ಪ ನಾಯಕ – ಪಾಣೆಂ ಸೀಮೆ

7) **ಪ್ರಧಾನ**

(ಎ) ಎಲ್ಲರಸ – ಜಾಜೂರು ಸೀಮೆ
(ಬಿ) ಬಸವಪ್ಪಯ್ಯ – ಕೋಟೆ ಸೀಮೆ (ಹೆಚ್.ಡಿ. ಕೋಟೆ)

8) **ಅವಸರಂ**

(ಎ) ಚಂದ್ರಶೇಖರಯ್ಯ – ಮೊಸಲಿ ಮಡಗು ಸೀಮೆ
(ಬಿ) ದೇಮರಸಯ್ಯ – ಉಮ್ಮತ್ತೂರು ಸೀಮೆ

ಮೇಲೆ ಉಲ್ಲೇಖಿಸಿರುವ ವ್ಯಕ್ತಿಗಳು ರಾಜ್ಯಾಡಳಿತದಲ್ಲಿ ವಿವಿಧ ಹುದ್ದೆಗಳನ್ನಲಂಕರಿಸಿದ್ದವರು, ಮಹಾಪ್ರಧಾನಿಗಳಾಗಿದ್ದವರು ರಾಜನೊಂದಿಗೆ ನೇರ ಸಂಪರ್ಕವನ್ನಿಟ್ಟುಕೊಂಡಿರುತ್ತಿದ್ದರು. ಕಾರ್ಯಕರ್ತ ಹುದ್ದೆಯನ್ನು ವಿವರಿಸುವುದು ಕಷ್ಟವಾದರೂ ಅದರ ಪದದ ಸ್ವರೂಪವನ್ನು ಗಮನಿಸಿದಾಗ ತನ್ನನ್ನು ನೇಮಕಮಾಡಿದ ವ್ಯಕ್ತಿಯ ಎಲ್ಲಾ ಕೆಲಸಗಳನ್ನು ಮಾಡಿಕೊಡುವವನು ಎಂದು ಹೇಳಬಹುದು. ಅಂದರೆ ಇದು ಖಾಸಗಿ ಕಾರ್ಯದರ್ಶಿಯ ಹುದ್ದೆಯಂತಿದೆ (Private Secretary). ಕಾರ್ಯಕರ್ತರಲ್ಲಿ ಉನ್ನತ ಹುದ್ದೆಗಳಿಂದ ಹಿಡಿದು ಅತ್ಯಂತ ಕೆಳ ಹುದ್ದೆಗಳವರೆಗಿನ ಅಧಿಕಾರಿಗಳು ತಮ್ಮದೇ ಆದ ಕಾರ್ಯಕರ್ತನನ್ನು ಹೊಂದಿರುತ್ತಿದ್ದರು. ಉದಾ: ಸಾಳುವ ತಿಮ್ಮರಸನು ಕೃಷ್ಣದೇವರಾಯನ ಕಾರ್ಯಕೆಕರ್ತನಾಗಿದ್ದರೆ (*ಕೃ.ಶಾ.ಸಂ.* 1, ಸಂ. 134), ತಿಮ್ಮರಾಯ ಚಕ್ರವರ್ತಿಯು ತಿಪ್ಪರಸ ಎಂಬುವನ ಕಾರ್ಯಕರ್ತನಾಗಿದ್ದನು (*SII*, VII-15), ಊಳಿಗದ ಮಾದೆನಾಯ್ಕ (*ಕೃ.ಶಾ.ಸಂ.* 1, ಸಂ. 89), ಪ್ರಧಾನ ಮಲ್ಲರಸ (*ಕೃ.ಶಾ.ಸಂ.* 1, ಸಂಖ್ಯೆ 100) ಕೃಷ್ಣದೇವರಾಯನ ಕಾರ್ಯಕರ್ತರಾಗಿದ್ದರು.

ಕೃಷ್ಣದೇವರಾಯನ ಕಾಲದಲ್ಲಿ ರಾಯಸಂ ಕಛೇರಿಯು ನಿಷ್ಠರಾದ ಹಿರಿಯ ಅಧಿಕಾರಿಗಳ ನಿಯಂತ್ರಣದಲ್ಲಿತ್ತು. ರಾಯಸ ಎಂದರೆ ರಾಜಾಜ್ಞೆಗಳನ್ನು ತಯಾರಿಸಿ ಬಿಡುಗಡೆ ಮಾಡುವ ಕಛೇರಿ ಎನ್ನಬಹುದು. ಇಂತಹ ಕಛೇರಿಯಲ್ಲಿ ಮಹಾಪ್ರಧಾನಿ ತಿಮ್ಮರಸುವಿನ ಮಗನಾದ ಕೊಂಡಮರಸ, ಮೊಮ್ಮಗನಾದ ಅಯ್ಯಪ್ಪರಸು ಕೆಲಸ ನಿರ್ವಹಿಸುತ್ತಿದ್ದರು. ವಿಜಯನಗರದ ನಂಬಿಕಸ್ಥ ಪ್ರಾಮಾಣಿಕ ಮಂತ್ರಿ ವರ್ಗದ ಕುಟುಂಬವಾಗಿದ್ದರಿಂದಲೇ ಕೃಷ್ಣದೇವರಾಯನು ಇಂತಹ ಕಛೇರಿಯ ನಿರ್ವಹಣೆಯ ಜವಾಬ್ದಾರಿಯನ್ನು ಕೊಟ್ಟಿದ್ದನೆನ್ನಬಹುದು. ಚಕ್ರವರ್ತಿಯಿಂದ ನಾಯಕತನವನ್ನು ಪಡೆದುಕೊಂಡ ವ್ಯಕ್ತಿಗಳು ಅವನೊಂದಿಗೆ ಉತ್ತಮ ಬಾಂಧವ್ಯವನ್ನು ಇಟ್ಟುಕೊಂಡಿದ್ದರು. ಅವನ ಕೃಪಾದೃಷ್ಟಿಯನ್ನು ತಮ್ಮ ಮೇಲೆ ಪಡೆದುಕೊಳ್ಳಲು ಪ್ರಯತ್ನಿಸುತ್ತಿದ್ದರು. ಇಂತಹ ಪ್ರಯತ್ನಗಳಲ್ಲಿ ರಾಜನಿಗೆ ಒಳ್ಳೆಯದಾಗಲಿ, ಪುಣ್ಯಬರಲಿ, ಧರ್ಮವಾಗಲಿ ಎಂದು ದೇವಾಲಯಗಳಿಗೆ ಭೂದತ್ತಿಯನ್ನಾಗಲೀ, ಸುಂಕ ವಿನಾಯಿತಿಯನ್ನು ನೀಡುವುದಾಗಲೀ ಮಾಡಿ ರಾಜನ ಗಮನವನ್ನು ಸೆಳೆಯುತ್ತಿದ್ದರು. ಉದಾಹರಣೆಗೆ ಕೃಷ್ಣದೇವರಾಯನ ಕಾಲದ 55 ಸೀಮೆಯ ಶಾಸನೋಕ್ತ ನಾಯಕರಲ್ಲಿ 26 ಜನರು ಚಕ್ರವರ್ತಿಗೆ ಪುಣ್ಯವಾಗಲಿ ಎಂದು ದಾನ ನೀಡಿದ್ದಾರೆ. ಇದರಿಂದ ಸ್ಪಷ್ಟವಾಗುವ

ಅಂಶವೆಂದರೆ ನಾಯಕತನಕ್ಕೆ ಭೂ ಪ್ರದೇಶವನ್ನು ಪಡೆದುಕೊಳ್ಳುವುದರ ಮೂಲಕ ರಾಜನೊಂದಿಗೆ ರಾಜಕೀಯ ಸಂಬಂಧವನ್ನು ಬೆಳಸಿಕೊಂಡರೆ, ಅದರಲ್ಲಿಯ ಸ್ವಲ್ಪಭಾಗವನ್ನು ರಾಜನ ಹೆಸರಿನಲ್ಲಿ ಅವನಿಗೆ ಧರ್ಮವಾಗಬೇಕೆಂದು ದೇವರಿಗೆ ದಾನ ಮಾಡುವುದು ಆ ಸಂಬಂಧವನ್ನು ಗಟ್ಟಿಗೊಳಿಸುವ ತಂತ್ರವಾಗಿದೆ. ಇದರ ಮೂಲಕ ಅಧಿಕಾರದಲ್ಲಿ ಮುಂದುವರಿಯುವ ಕಸರತ್ತು ಮಾಡುತ್ತಿದ್ದರು ಎನ್ನಬಹುದು.

ಕೃಷ್ಣದೇವರಾಯನ ಶಾಸನಗಳು ನಾಯಕ ವ್ಯವಸ್ಥೆಯಲ್ಲಿನ ನಾಯಕರ ಪಾತ್ರ ಮತ್ತು ಕಾರ್ಯಗಳ ಬಗೆಗೆ ಏನನ್ನು ಹೇಳುವುದಿಲ್ಲ. ಅವನ ಕಾಲದಲ್ಲಿ ಅಂದರೆ ಕ್ರಿ.ಶ. 1520ರಲ್ಲಿ ವಿಜಯನಗರಕ್ಕೆ ಭೇಟಿನೀಡಿದ್ದ ಪಯಸ್‌ನು ಇವರ ಬಗೆಗೆ ಸ್ವಲ್ಪಮಟ್ಟಿಗೆ ತಿಳಿಸುತ್ತಾನೆ. ಅವನ ಪ್ರಕಾರ "ತನ್ನ ಸೈನಿಕರ ಮೇಲೆ ನಿಯಮಿಸಿದ ಈ ದಳಪತಿಗಳು (ನಾಯಕರು) ಅವನ ಮನ್ನೆಯರು; ಅವರು ಪ್ರಭುಗಳು ಅವರು ನಗರಗಳು, ಪಟ್ಟಣಗಳು ಮತ್ತು ಗ್ರಾಮಗಳ ಸ್ವಾಮ್ಯಪಡೆದಿರುತ್ತಾರೆ. ದಳಪತಿಗಳಲ್ಲಿ ಕೆಲವರು ಒಂದು ಒಂದೂವರೆ ದಶಲಕ್ಷ ಪರ್ದಾಓಗಳ ಆದಾಯವುಳ್ಳವರಿದ್ದರೆ ಇನ್ನು ಕೆಲವರು ಒಂದುನೂರು ಮತ್ತು ಇನ್ನೂ ಕೆಲವರು ಇನ್ನೂರು, ಮುನ್ನೂರು ಅಥವಾ ಐನೂರು ಸಾವಿರ ಪರ್ದಾಓಗಳ ಆದಾಯವುಳ್ಳವರು. ಪ್ರತಿಯೊಬ್ಬನಿಗೂ ಆದಾಯವಿರುವುದರಿಂದ ರಾಜ ಅವನ ಸಲಹಬೇಕಿದ್ದ ಕಾಲಾಳು, ಕುದುರೆ ಮತ್ತು ಆನೆಗಳ ಸೈನ್ಯವನ್ನು ನಿಗದಿಗೊಳಿಸುತ್ತಾನೆ."[33]

ನ್ಯೂನಿಜ್‌ನ ಪ್ರಕಾರ "ಈ ನಾಯಕರೆಲ್ಲಾ ರಾಜನಿಂದ ಭೂ ಪ್ರದೇಶವನ್ನು ಪಡೆದ ಗುತ್ತಿಗೆದಾರರು. ಇವರೆಲ್ಲಾ ಜನರನ್ನು ಹಿಡಿದುಕೊಂಡದಷ್ಟೇ ಅಲ್ಲದೆ ಖರ್ಚನ್ನೂ ಕೊಡಬೇಕಾಗುತ್ತದೆ. ಇವರು ಅವನಿಗೆ ಪ್ರತಿವರ್ಷ ರಾಜತೆರಿಗೆಯಾಗಿ ಆರು ಲಕ್ಷಗಳ ಗೇಣಿಕೊಡಬೇಕು. ಹೊಲಗಳು 120 ಲಕ್ಷ ನೀಡುವುದಾಗಿ ಹೇಳಲಾಗುತ್ತಿದ್ದು. ಅದರಲ್ಲಿ 60ನ್ನು ಅವರು ರಾಜನಿಗೆ ಕೊಡಬೇಕು ಮತ್ತು ಮಿಕ್ಕಿದ್ದನ್ನು ಅವರು ತಾವು ಸಲಹಬೇಕಾದರೆ ಸೈನಿಕರ ಮತ್ತು ಆನೆಗಳ ಖರ್ಚಿಗಾಗಿ ಇಟ್ಟುಕೊಳ್ಳುವರು."[34] ಅವನೇ ಮುಂದುವರಿದು "ಬಿಸ್ನೆಗ ರಾಜ್ಯವನ್ನು ಎಲ್ಲರೂ ವಿಧರ್ಮಿಯರಾಗಿರುವ 200ಕ್ಕೂ ಹೆಚ್ಚು ದಳಪತಿಗಳಲ್ಲಿ ವಿಭಜಿಸಲಾಗಿದೆ."[35] ಈ ದಳಪತಿಗಳನ್ನೇ ನಾವು ನಾಯಕತನಕ್ಕಾಗಿ ಭೂಪ್ರದೇಶವನ್ನು ಪಡೆದುಕೊಂಡಿದ್ದವರಿಗೆ ಸಮೀಕರಿಸಬಹುದು. ಪಯಸ್ ಮತ್ತು ನ್ಯೂನಿಜ್ ಬರವಣಿಗೆಗಳು ನಾಯಕ ವ್ಯವಸ್ಥೆಯ ಕಾರ್ಯನಿರ್ವಹಣೆಯ ಬಗ್ಗೆ ತಿಳಿಸಿದರೂ ಕೃಷ್ಣದೇವರಾಯನ ಶಾಸನಗಳು ಅವರು ಸಲ್ಲಿಸುತ್ತಿದ್ದ ತೆರಿಗೆಯ ಬಗ್ಗೆಯಾಗಲೀ ಅಥವಾ ರಾಜ್ಯಕ್ಕೆ ಪೂರೈಸುತ್ತಿದ್ದ ಸೇನೆಯ ಸಂಖ್ಯೆಯ ಬಗ್ಗೆಯಾಗಲೀ ಏನನ್ನು ತಿಳಿಸುವುದಿಲ್ಲ. ನ್ಯೂನಿಜ್ ತನ್ನ ಪ್ರವಾಸಿ ಕಥನದಲ್ಲಿ ಉಲ್ಲೇಖ ಮಾಡಿರುವಂತೆ ಈ ನಾಯಕರಿಂದ ಭೂಪ್ರದೇಶದ ಆದಾಯವು 45 ಲಕ್ಷ 35 ಸಾವಿರ ಪರ್ದಾಓಗಳಾಗಿದ್ದರೆ ಅದರಿಂದ ಬರುವ ಒಟ್ಟು ತೆರಿಗೆ 15 ಲಕ್ಷ 8 ಸಾವಿರ ಪರ್ದಾಓಗಳಾಗುತ್ತದೆ.[36] ಆದುದರಿಂದ ಇದನ್ನು ಆಧಾರವಾಗಿಟ್ಟುಕೊಂಡು ಹೇಳುವುದಾದರೆ ಕೃಷ್ಣದೇವರಾಯನು ನಾಯಕತನದ ಭೂಪ್ರದೇಶಗಳಿಂದ ಸರಾಸರಿ ಶೇ. 30ರ ದರದಲ್ಲಿ ನಾಯಕರಿಂದ ಕಂದಾಯ ವಸೂಲಿ ಮಾಡುತ್ತಿದ್ದನು ಎಂದು ಹೇಳಬಹುದು. ಇನ್ನುಳಿದ ಹಣದಲ್ಲಿ ನಾಯಕರು ತಾವು ನಿರ್ವಹಿಸಬೇಕಾದ ಸೇನೆಯ ಖರ್ಚುವೆಚ್ಚ ಮತ್ತು ತಮ್ಮ ಖರ್ಚನ್ನು ನೋಡಿಕೊಳ್ಳಬೇಕಾಗಿತ್ತು. ಈ ಕಂದಾಯ ಪ್ರತಿವರ್ಷ ಸೆಪ್ಟೆಂಬರ್ ತಿಂಗಳಿನಲ್ಲಿ ನಿರ್ದಿಷ್ಟವಾಗುತ್ತಿತ್ತು.

ಕಾರ್ಯಚಟುವಟಿಕೆಗಳು

ದಾನ: ಕೃಷ್ಣದೇವರಾಯನ ಶಾಸನಗಳನ್ನು ಪರಿಶೀಲಿಸಿದಾಗ ನಾಯಕತನದ ಮೂಲಕ ಭೂ ಪ್ರದೇಶಗಳನ್ನು ಪಡೆದ ವ್ಯಕ್ತಿಗಳು ಕೇವಲ ರಾಜ್ಯಾಡಳಿತ ವಿಧಿಸಿದ ತೆರಿಗೆಗಳನ್ನು ವಸೂಲಿ ಮಾಡುವವರಾಗಿರದೆ; ಅವರು ತಮ್ಮ

ಆದಾಯದಲ್ಲಿ ಸಾರ್ವಜನಿಕ ಕೆಲಸಗಳಿಗಿಂತ ಹೆಚ್ಚಾಗಿ ದಾನ ಕಾರ್ಯಕ್ಕೆ ಖರ್ಚು ಮಾಡಿರುವುದು ಕಂಡುಬರುತ್ತದೆ. ಇವರು ದಾನ ಅಪರಿಗ್ರಹಕ್ಕೆ ಮಾರ್ಗ ಎಂದು ಭಾವಿಸಿದ್ದಂತೆ ಕಾಣುತ್ತದೆ. ದೇವಾಲಯಗಳಿಗೆ ಬ್ರಾಹ್ಮಣರಿಗೆ ಮತ್ತು ಮಠಗಳಿಗೆ ದಾನ ನೀಡುವುದು ಪುಣ್ಯದ ಕೆಲಸವೆಂದು ಅವರು ತಿಳಿದುಕೊಂಡಿದ್ದರು. ಧಾರ್ಮಿಕ ಕೇಂದ್ರಗಳಾಗಿದ್ದ ದೇವಾಲಯಗಳು ಜನರ ಸಾಂಸ್ಕೃತಿಕ ಬದುಕಿಗೂ ಚಾಲನೆಕೊಡುತ್ತಿದ್ದವು. ಅಲ್ಲದೆ ದೇವಾಲಯದ ನಿತ್ಯಪೂಜಾಕ್ರಿಯೆ, ಉತ್ಸವಗಳು ಹಾಗೂ ಜೀರ್ಣೋದ್ಧಾರದಂತಹ ಕ್ರಿಯೆಗಳು ಸಾಂಗವಾಗಿ ನಡೆದುಕೊಂಡು ಬರಲು ಆರ್ಥಿಕ ಸಹಾಯದ ಅಗತ್ಯ ಹೆಚ್ಚಿದ್ದಿತು. ಇದನ್ನು ಸಂಗ್ರಹಿಸಲು "ಧರ್ಮ ಭೀತಿಯಂತಹ" ಅಸ್ತ್ರವನ್ನು ಶಿಷ್ಟವರ್ಗಗಳು ಪ್ರಯೋಗ ಮಾಡಿರುವುದು ಪ್ರಾಚೀನ ಕಾಲದಿಂದಲೂ ಇತಿಹಾಸದಲ್ಲಿ ಬೆಳೆದು ಬಂದ ಪದ್ಧತಿಯಾಗಿದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಕೃಷ್ಣದೇವರಾಯನ ಕಾಲದಲ್ಲಿ ನಾಯಕತನವನ್ನು ಪಡೆದುಕೊಂಡಿದ್ದ ವ್ಯಕ್ತಿಗಳು ಸಮುದಾಯದ ನಾಯಕರಾಗಿ ದಾನಕ್ರಿಯೆಯಲ್ಲಿ ಪಾಲ್ಗೊಂಡಿರುವುದನ್ನು ಶಾಸನಗಳು ತಿಳಿಸುತ್ತವೆ.

ಕೃಷ್ಣದೇವರಾಯನ ಆಳ್ವಿಕೆಯ ಅವಧಿಯಲ್ಲಿ ಒಟ್ಟು 68 ಬಾರಿ ನಾಯಕತನಗಳ ಉಲ್ಲೇಖವಿದ್ದರೆ ಅದರಲ್ಲಿ ಬಹುಪಾಲು ಶಾಸನಗಳು ದಾನ ಶಾಸನಗಳೇ ಆಗಿವೆ. ಈ ದಾನಗಳಲ್ಲಿ 54 ದಾನಗಳು ದೇವಾಲಯಕ್ಕೆ ನೀಡಿದವುಗಳಾಗಿದ್ದರೆ 08 ಅಗ್ರಹಾರ ಸ್ಥಾಪನೆಗೂ 02 ಮಠಪುರಿಗೂ ಇನ್ನುಳಿದ 04 ದಾನಗಳು ಇತರೆ ವ್ಯಕ್ತಿಗಳಿಗೆ ನೀಡಿದವುಗಳಾಗಿವೆ. ಈ ದಾನ ಕ್ರಿಯೆಯಲ್ಲಿ 25 ದಾನಗಳು ಕೃಷ್ಣದೇವರಾಯನಿಗೆ ಧರ್ಮವಾಗಲಿ, ಪುಣ್ಯವಾಗಲಿ ಎಂದು ನೀಡಿದ ದಾನಗಳಾಗಿವೆ. ಇದರಲ್ಲಿ ನಾಯಕತನ ಪಡೆದು ಆಳ್ವಿಕೆ ನಡೆಸುತ್ತಿದ್ದ ಬ್ರಾಹ್ಮಣವರ್ಗಗಳ 22 ದಾನಗಳಲ್ಲಿ ಕೃಷ್ಣದೇವರಾಯನಿಗೆ ಧರ್ಮವಾಗಲಿ ಎಂದು ದೇವಾಲಯದ ಪೂಜಾಕಾರ್ಯಗಳಿಗಾಗಿ ದೇವರ ಹೆಸರಿನ 06 ದಾನಗಳೂ ಬ್ರಾಹ್ಮಣ ಅಗ್ರಹಾರಗಳಿಗೆ 06 ದಾನಗಳೂ ಕೊಡಲ್ಪಟ್ಟಿವೆ. ಇನ್ನುಳಿದ 07 ದಾನಗಳನ್ನು ಯಾರನ್ನು ಹೆಸರಿಸದೆ ದೇವರಿಗೆ ನೀಡಿದ ದಾನಗಳಾಗಿವೆ (ವಿವರಗಳಿಗೆ ಅನುಬಂಧದ ಪಟ್ಟಿ ನೋಡಬಹುದು). ದೇವಾಲಯಗಳಿಗೆ ದಾನ ಬಿಡುವ ವಸ್ತುಗಳಲ್ಲಿ ಭೂಮಿ (ಗದ್ದೆ, ಹೊಲ) ಗ್ರಾಮದ ಆದಾಯ, ಸುಂಕ ಸೇರಿದ್ದವು. ಇದರಿಂದಾಗಿ ದೇವಾಲಯಗಳಿಗೆ ವಿಪುಲವಾದ ಸಂಪತ್ತು ಹರಿದುಬಂದಿತು. ಅಗ್ರಹಾರಗಳಿಗೆ ನೀಡಿದ ದಾನಗಳು ಕೃಷಿಕರಲ್ಲದ ವರ್ಗದವರೂ ಕೂಡಾ ಭೂ ಒಡೆತನವನ್ನು ಪಡೆದುಕೊಳ್ಳುವಂತಾಯಿತು. ಇವು ಅಂದು ವರ್ಣಾಶ್ರಮ ಧರ್ಮವನ್ನು ಎತ್ತಿ ಹಿಡಿದುದಲ್ಲದೆ ಪ್ರಸಾರ ಮಾಡುತ್ತಿದ್ದವು. ಈ ದಾನಗಳು ಆಳುವ ವರ್ಗವಾದ ಆ ಪ್ರದೇಶದ ನಾಯಕರಿಗೂ ಮತ್ತು ಪ್ರಜೆಗಳಾದ ರೈತರಿಗೂ ಸಂಪರ್ಕ ಕಲ್ಪಿಸುವ ಕೊಂಡಿಯಾಗಿದ್ದವು. ನಾಯಕತನಕ್ಕಾಗಿ ಭೂಪ್ರದೇಶಗಳನ್ನು ಪಡೆದುಕೊಂಡಿದ್ದವರು ರಾಜನಿಗೆ ವಾರ್ಷಿಕ ಕಪ್ಪ ಕಲ್ಪಿಸುವುದೇ ಅಲ್ಲದೆ ತಮ್ಮ ಬಳಿ ಇರುವ ಸೇನೆಯ ಖರ್ಚನ್ನು ಭರಿಸುವುದರ ಜೊತೆಗೆ ದಾನ ಕ್ರಿಯೆಯಂತಹ ಕೆಲಸಗಳಲ್ಲಿ ಪಾಲ್ಗೊಳ್ಳಬೇಕಾಗಿತ್ತು. ಇದಕ್ಕಾಗಿ ಅಧಿಕ ಹಣ ಬೇಕಾಗಿತ್ತು. ಆದ್ದರಿಂದಲೋ ಏನೋ ನ್ಯೂನಿಜ್‌ನು ಜಮೀನುಗಳನ್ನು ಹಿಡಿದುಕೊಂಡವರು ಪೀಡಕರಾಗಿದ್ದುದರಿಂದ ಸಾಮಾನ್ಯ ಜನ ಬಹಳ ಕಷ್ಟ ಅನುಭವಿಸುತ್ತಾರೆ."[37] ಇವನು ಹೇಳಿರುವ ಮಾತು ಸತ್ಯವೇ ಆಗುತ್ತದೆ.

ಕೃಷ್ಣದೇವರಾಯನ ಶಾಸನಗಳನ್ನು ಗಣನೆಗೆ ತೆಗೆದುಕೊಂಡು ಲೆಖ್ಖಮಾಡಿದರೆ ಒಟ್ಟು 55 ವ್ಯಕ್ತಿಗಳಿಗೆ ನಾಯಕತನಕ್ಕಾಗಿ ಸೀಮೆಯನ್ನು ಪಾಲಿಸಿದ್ದಾನೆ. ಇದರಲ್ಲಿ ಕೆಲವರು ನೇರವಾಗಿ ರಾಜನಿಂದ ನಾಯಕತನ ಪಡೆಯದೆ ತಮಗಿಂತ ಬಲಾಢ್ಯ ಅಥವಾ ಶ್ರೇಷ್ಠವ್ಯಕ್ತಿಗಳಿಂದ ನಾಯಕತನ ಪಡೆದುಕೊಂಡಿದ್ದಾರೆ. ಆದರೆ ಅಂತಹವರ ಸಂಖ್ಯೆ ಕಡಿಮೆ.

ಉದಾಹರಣೆಗೆ:

1. ಪೆದ್ದ ಸಿಂಗಮನಾಯಕ ಎಂಬುವನು ವಾಕಿಟಿ ತಿಮ್ಮಪ್ಪನಾಯಕ ಎಂಬುವನಿಂದ ನಾಯಕತನಕ್ಕಾಗಿ ನಾಗಾರ್ಜುನಕೊಂಡ ಸೀಮೆಯನ್ನು ಕ್ರಿ.ಶ. 1518ರಲ್ಲಿ ಪಡೆದುಕೊಂಡಿದ್ದಾನೆ.
2. ಮಹಾಮಂಡಳೇಶ್ವರ ಸರ್ವಯ್ಯದೇವ ಕೋಡ ಮಹಾರಾಜನು ಮಹಾಪ್ರಧಾನಿ ಸಾಳುವ ತಿಮ್ಮರಸನಿಂದ ವಿನುಕೊಂಡ ಸೀಮೆಯ ನಾಯಕತನವನ್ನು ಕ್ರಿ.ಶ. 1522ರಲ್ಲಿ ಪಡೆದುಕೊಂಡನು.
3. ಅಂದಂಬಾರ್ ಕಂದ್ಯೆಯನ್ ಪಾಪ್ಪೆಯಾರ್ ಎಂಬುವನು ಸ್ವಾಮಿ ವೀರ ನರಸಿಂಗರಾಯನಿಂದ ಅಮರ ಸೀಮೆಯ ನಾಯಕತನವನ್ನು ಕ್ರಿ.ಶ. 1524ರಲ್ಲಿ ಪಡೆದುಕೊಂಡಿದ್ದಾನೆ.
4. ಸಿದ್ದಾವಟಂ ಯಲ್ಲಪ್ಪರಸುವಯ್ಯ ಎಂಬುವನು ರಾಯಸದ ಅಯ್ಯಪ್ಪರಸನಿಂದ ಸಕಲಿ ಸೀಮೆಯನ್ನು ನಾಯಕತನಕ್ಕಾಗಿ ಕ್ರಿ.ಶ. 1529ರಲ್ಲಿ ಪಡೆದುಕೊಂಡಿದ್ದಾನೆ.

ಈ ರೀತಿ ನಾಯಕತನಕ್ಕಾಗಿ ಭೂ ಪ್ರದೇಶಗಳನ್ನು ನೀಡಬೇಕಾದಾಗ ರಾಜನ ಅನುಮತಿ ಅಗತ್ಯವಾಗಿತ್ತು. ಆದ್ದರಿಂದಲೇ ಅವರು ಕೃಷ್ಣದೇವರಾಯನ ಹೆಸರನ್ನು ಮೊದಲು ನಮೂದಿಸಿ ಆನಂತರ ಮುಂದುವರಿಯುತ್ತಿದ್ದರು. ಈ ರೀತಿ ನಾಯಕತನ ನೀಡುವ ಸಾಮರ್ಥ್ಯ ಎಲ್ಲರಿಗೂ ಇರಲಿಲ್ಲ. ಅವರು ರಾಜಾಸ್ಥಾನದಲ್ಲಿ ಪ್ರಭಾವಿಗಳಾಗಿರಬೇಕು. ಇಲ್ಲವೆ ತಮ್ಮ ಭೂ ಪ್ರದೇಶದಲ್ಲಿ ಬಲಾಢ್ಯರಾಗಿರಬೇಕು. ಉದಾಹರಣೆಗೆ ಸಾಳುವ ತಿಮ್ಮರಸನು ವಿಜಯನಗರ ಸಾಮ್ರಾಜ್ಯದ ಮಹಾಪ್ರಧಾನಿಯಾಗಿದ್ದರೆ ರಾಯಸದ ಅಯ್ಯಪ್ಪರಸ ತಿಮ್ಮರಸುವಿನ ಮೊಮ್ಮಗ ಹಾಗೂ ರಾಯಸ ಕಛೇರಿಯ ಉನ್ನತ ಹುದ್ದೆಯಲ್ಲಿದ್ದು ರಾಜನೊಂದಿಗೆ ನೇರ ಸಂಪರ್ಕದಲ್ಲಿದ್ದ ವ್ಯಕ್ತಿಯಾಗಿದ್ದನು. ಸ್ವಾಮಿ ವೀರನರಸಿಂಗರಾಯನು ತಮಿಳುನಾಡಿನಲ್ಲಿ ಪ್ರಭಾವಿ ವ್ಯಕ್ತಿಯಾಗಿದ್ದರೆ ವಾಕಿಟಿ ತಿಮ್ಮಪ್ಪನಾಯಕನು ಆಂಧ್ರಪ್ರದೇಶದಲ್ಲಿ ಪ್ರಭಾವಿಯಾಗಿದ್ದನು.

ಕೃಷ್ಣದೇವರಾಯನು ಕೆಲವು ವ್ಯಕ್ತಿಗಳಿಗೆ ಒಂದಕ್ಕಿಂತ ಹೆಚ್ಚು ಸೀಮೆಗಳನ್ನು ನಾಯಕತನಕ್ಕೆ ನೀಡಿರುವುದು ಕಂಡುಬರುತ್ತದೆ. ಸಾಳುವ ತಿಮ್ಮರಸನ ಸೋದರನಾಗಿದ್ದ ಸಾಳುವ ಗೋವಿಂದರಾಜನು ತೆರಕಣಾಂಬಿ ಗುತ್ತಿ, ಉಮ್ಮತ್ತೂರು ಸೀಮೆಗಳನ್ನು ನಾಯಕತನಕ್ಕಾಗಿ ಪಡೆದುಕೊಂಡು ಆಳ್ವಿಕೆ ಮಾಡುತ್ತಿದ್ದರೆ, ಅವನಷ್ಟೇ ಮೂರು ಸೀಮೆಗಳನ್ನು ನಾಯಕತನಕ್ಕಾಗಿ ಪಡೆದುಕೊಂಡಿದ್ದ ವ್ಯಕ್ತಿ ಎಂದರೆ ತಿಮ್ಮಪ್ಪ ನಾಯಕನಾಗಿದ್ದಾನೆ. ಇವನು ಅರಮನೆಯ ಮುಖ್ಯ ರಕ್ಷಕನಾಗಿದ್ದ (Chief Vassal) ಮಲ್ಲಪ್ಪನಾಯಕ ಎಂಬುವನ ಮಗನಾಗಿದ್ದಾನೆ. ಇವನಿಗೆ ಚಿನ್ನಪ್ಪನಾಯಕ ಎಂಬ ಸೋದರನಿದ್ದನು. ತಿಮ್ಮಪ್ಪನಾಯಕನು ಚಕ್ರವರ್ತಿ ಕೃಷ್ಣದೇವರಾಯನಿಂದ ಕ್ರಿ.ಶ. 1519ರಲ್ಲಿ ರಿಷಿವಂಧ್ಯಮ್ ಪ್ರದೇಶದಲ್ಲಿನ ಇರೈವಾನರವುರ್ ಸೀಮೆಯನ್ನು ನಾಯಕತನಕ್ಕೆ ಪಡೆದುಕೊಳ್ಳುವುದರ ಮೂಲಕ ಪ್ರತ್ಯೇಕ ನಾಯಕನಾದನು.[38] ಅದೇ ವರ್ಷ ತಿರುಚಿನಾಪಳ್ಳಿಯ ಸೀಮೆಯ ನಾಯಕತನವನ್ನು ಪಡೆದುಕೊಂಡನು.[39] ಈ ಎರಡೂ ಸೀಮೆಗಳು ಅವನ ನಾಯಕತನದಲ್ಲಿದ್ದವು. ಕ್ರಿ.ಶ. 1520ರಲ್ಲಿ ಇವನು ಭುವನೇಕವೀರ ಪಟ್ಟಣ ಸೀಮೆಯ ನಾಯಕತನ ಪಡೆದಿರುವುದು ದಾಖಲಾಗಿದೆ.[40] ಕ್ರಿ.ಶ. 1521ರಲ್ಲಿ ಇದೇ ಪ್ರದೇಶದಲ್ಲಿನ ತೆರಿಗೆಯನ್ನು ಖಜಾನೆಗೆ ಜಮಾ ಮಾಡಿದ್ದರ ವಿವರ ಶಾಸನದಲ್ಲಿದೆ. ಇದರಿಂದ ತಿಮ್ಮಪ್ಪನಾಯಕನು ಅತಿ ಶೀಘ್ರದಲ್ಲೇ ಮೂರು ಪ್ರದೇಶಗಳ ನಾಯಕತನವನ್ನು ಪಡೆಯಲು ಅವನ ತಂದೆಯಾದ ಮಲ್ಲಪ್ಪನಾಯಕನೇ ಕಾರಣನಾಗಿರಬಹುದು ಎಂದು ಹೇಳಲು ಸಾಧ್ಯವಿದೆ. ಆದ್ದರಿಂದ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಮಹಾಪ್ರಧಾನಿ ಸಾಳುವ ತಿಮ್ಮರಸುವಿನ ಕುಟುಂಬ ರಾಜಕೀಯದಲ್ಲಿ ಅತ್ಯಂತ ಪ್ರಭಾವಿ ಕುಟುಂಬವಾಗಿತ್ತು. ಮಲ್ಲಪ್ಪನಾಯಕನ ಕುಟುಂಬವೂ ಕೂಡಾ ಅಷ್ಟೇ ಪ್ರಭಾವಶಾಲಿಯಾಗಿತ್ತು ಎಂದು ಹೇಳಬಹುದು.

ವರ್ಗಾವಣಾ ನೀತಿ

ಕೃಷ್ಣದೇವರಾಯನ ಕಾಲದಲ್ಲಿ ನಾಯಕರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಾವಣೆ ಮಾಡಲಾಗುತ್ತಿತ್ತು. ಆದರೆ ಈ ವರ್ಗಾವಣೆ ಅಲ್ಪ ಪ್ರಮಾಣದಲ್ಲಿ ನಡೆದಿದೆ. ಉದಾಹರಣೆಗೆ, ತ್ರಯಂಬಕರಸ ಎಂಬುವನು ಕ್ರಿ.ಶ. 1515ರಲ್ಲಿ ಶಿವಮೊಗ್ಗ ಜಿಲ್ಲೆಯ ಮಾಳೇನಹಳ್ಳಿ ಸೀಮೆಯ ನಾಯಕತನವನ್ನು ಹೊಂದಿದ್ದರೆ ಕ್ರಿ.ಶ. 1523ರಲ್ಲಿ ತಮಿಳುನಾಡಿನ ಸೇಲಂ ಜಿಲ್ಲೆಯ ಮುಳುವಾಯಿಯಲ್ಲಿ ನಾಯಕತನ ಪಡೆದಿದ್ದನು. ಏಕೆಂದರೆ ಕ್ರಿ.ಶ. 1527ರಲ್ಲಿ ಕೃಷ್ಣದೇವರಾಯನು ಮಾಳೇನಹಳ್ಳಿಯನ್ನು ಕೂಡಲಮಠದ ನಾರಾಯಣ ಯತೀಂದ್ರರಿಗೆ ದಾನಮಾಡಿದ್ದಾನೆ.[41] ಆದ್ದರಿಂದ ಈ ಮಾಳೇನಹಳ್ಳಿ ಸೀಮೆಯನ್ನು ತ್ರಿಯಂಬಕರಸನು ಬಿಟ್ಟುಹೋದ ಮೇಲೆ ಅದು ಕೃಷ್ಣದೇವರಾಯನ ನೇರ ನಿಯಂತ್ರಣಕ್ಕೆ ಒಳಪಟ್ಟಿತ್ತು ಎಂದು ಹೇಳಬಹುದು. ಅದೇ ರೀತಿ ಬುಕ್ಕರಾಜು ತಿಮ್ಮರಾಜು ಎಂಬ ವ್ಯಕ್ತಿ 1517ರಲ್ಲಿ ಡಿಸೆಂಬರ್‌ನಲ್ಲಿ ಪೋಲೂರಿ ಸೀಮೆಯ ನಾಯಕತನವನ್ನು ಪಡೆದಿದ್ದರೆ ಕ್ರಿ.ಶ. 1521ರಲ್ಲಿ ಗಂಡಿಕೋಟೆ ಸೀಮೆಯ ನಾಯಕತನವನ್ನು ಪಡೆದುಕೊಂಡಿದ್ದಾನೆ. ಇವನು ಪೋಲೂರಿ ಸೀಮೆಯ ನಾಯಕತನವನ್ನು ಹೊಂದಿದ್ದಾಗ ಗಂಡಿಕೋಟೆ ಸೀಮೆಯು ಸಾಳುವ ಗೋವಿಂದರಾಜನ ಅಧೀನದಲ್ಲಿತ್ತು ಎಂದು ಶಾಸನದಲ್ಲಿ ಉಲ್ಲೇಖಿತವಾಗಿದೆ.[42] ಇದೇ ಗಂಡಿಕೋಟೆ ಸೀಮೆಯು ಕ್ರಿ.ಶ. 1528ರ ವೇಳೆಗೆ ರಾಯಸಂ ಅಯ್ಯಪ್ಪರಸನ ನಾಯಕತನಕ್ಕೆ ಸೇರಿತ್ತು. ಆದುದರಿಂದ ಬುಕ್ಕರಾಜು ತಿಮ್ಮರಾಜು 1517ರಲ್ಲಿ ಪೋಲೂರಿ ಸೀಮೆಯಿಂದ 1521ರ ವೇಳೆಗೆ ಗಂಡಿಕೋಟೆ ಸೀಮೆಗೂ 1528ರಲ್ಲಿ ಅಲ್ಲಿಂದ ಅವನನ್ನು ಎಲ್ಲಿಗೆ ವರ್ಗಾವಣೆ ಮಾಡಲಾಯಿತು ಎಂದು ಹೇಳಲು ಆಧಾರಗಳಿಲ್ಲ. ಪ್ರಾಯಶಃ ಅವನಿಂದ ನಾಯಕತನವನ್ನು ಕಿತ್ತುಕೊಳ್ಳಲಾಯಿತೋ ಅಥವಾ ಅವನು ಮರಣ ಹೊಂದಿದನೋ ತಿಳಿಯದು.

ಕೃಷ್ಣರಾಯನಾಯಕ ಎಂಬುವನು ಮೊದಲು ಬಾರಕೂರು ರಾಜ್ಯವನ್ನಾಳುತ್ತಿದ್ದನೆಂಬ ಅಂಶ ಕ್ರಿ.ಶ. 1528ರ ನೀಲಾವರದ ಶಾಸನದಲ್ಲಿ ಉಲ್ಲೇಖವಾಗಿದ್ದು[43] ಅದನ್ನು ಅವನು ತಿಮ್ಮಣ್ಣವೊಡೆಯನೆಂಬುವನಿಗೆ ಬಿಟ್ಟುಕೊಟ್ಟು ಅದೇ ವರ್ಷ ಜನವರಿ ತಿಂಗಳಿನಲ್ಲೇ ಶ್ರೀರಂಗಪಟ್ಟಣ ಮತ್ತು ಸಿಂಧಗಟ್ಟದ ಸೀಮೆಯ ನಾಯಕತನವನ್ನು ಕೃಷ್ಣದೇವರಾಯನಿಂದ ಪಡೆದುಕೊಂಡನು.[44] ಆದರೆ 1528ರ ಜೂನ್ ತಿಂಗಳಿನಲ್ಲಿಯೇ ಮಹಾಮಂಡಲೇಶ್ವರ ಬೋಗಯ್ಯದೇವ ಮಹಾ ಅರಸು ಶ್ರೀರಂಗಪಟ್ಟಣ ಸೀಮೆಯ ನಾಯಕತನದಲ್ಲಿದ್ದನೆಂದು ಶಾಸನದಲ್ಲಿ ಉಲ್ಲೇಖವಾಗಿರುವುದರಿಂದ[45] ಕೃಷ್ಣರಾಯನಾಯಕನು ತನಗೆ ನೀಡಿದ್ದ ಎರಡು ಸೀಮೆಗಳಲ್ಲಿ ಶ್ರೀರಂಗಪಟ್ಟಣವನ್ನು ಬಿಟ್ಟುಕೊಟ್ಟು ಸಿಂಧಗಟ್ಟ ಸೀಮೆಗೆ ಮಾತ್ರ ಸೀಮಿತವಾದನು. ಇದರಿಂದ ಚಕ್ರವರ್ತಿಯ ವಿಶ್ವಾಸವಿರುವವರೆಗೆ ಮಾತ್ರ ನಾಯಕತನವನ್ನು ತಮ್ಮ ಬಳಿ ಇಟ್ಟುಕೊಂಡಿರಲು ಸಾಧ್ಯ. ಅವನ ವಿಶ್ವಾಸ ಕಳೆದುಕೊಂಡರೆ ಚಕ್ರವರ್ತಿ ಅದನ್ನು ವಾಪಸ್ ಪಡೆಯುತ್ತಿದ್ದಾನೆಂಬ ಅಂಶ ಕೃಷ್ಣರಾಯನಾಯಕನ ವಿಷಯದಲ್ಲಿ ಸ್ಪಷ್ಟವಾಗುತ್ತದೆ.

ಕೃಷ್ಣದೇವರಾಯನು ಸಾಹಿತ್ಯ ಕ್ಷೇತ್ರದಲ್ಲಿ ಪ್ರಸಿದ್ಧರಾದ ವ್ಯಕ್ತಿಗಳಿಗೂ ನಾಯಕತನ ನೀಡಿರುವುದು ಕಂಡುಬರುತ್ತದೆ. ಉದಾ: ಆಂಧ್ರಕವಿತ ಪಿತಾಮಹ ಎಂದೇ ಶಾಸನದಲ್ಲಿ ಉಲ್ಲೇಖಿತವಾದ ಪೆದ್ದಿರಾಜು ಎಂಬ ವ್ಯಕ್ತಿಗೆ ಕರಿವಾಚಿ ಸೀಮೆಯ ನಾಯಕತನವನ್ನು ನೀಡಿದ್ದಾನೆ. ಅವನು ಆ ಸೀಮೆಗೆ ಸೇರಿದ್ದ ಅಣ್ಣೂರು ಎಂಬ ಗ್ರಾಮದಲ್ಲಿ ಅಪೂರ್ಣವಾಗಿ ಉಳಿದಿದ್ದ ದೇವಾಲಯದ ನಿರ್ಮಾಣವನ್ನು ಪೂರ್ಣಗೊಳಿಸಿ ವರದರಾಜ ಪೆರುಮಾಳು ದೇವರನ್ನು ಪ್ರತಿಷ್ಠಾಪಿಸಿ ಕ್ರಿ.ಶ. 1519ರಲ್ಲಿ ಆ ದೇವರ ಪೂಜಾ ಕಾರ್ಯಗಳಿಗೆ ಮತ್ತು ಗುಡಿಯ ಜೀರ್ಣೋದ್ಧಾರಕ್ಕೆ ಅಣ್ಣೂರು ಗ್ರಾಮವನ್ನೇ ದಾನ ಮಾಡಿದ್ದಾನೆ.[46] ಪೆದ್ದಿರಾಜನು ಅಲ್ಲಸಾನಿ ಚೊಕ್ಕರಾಜನ ಮಗ. ಆದ್ದರಿಂದ ಕೃಷ್ಣದೇವರಾಯನ ಆಸ್ಥಾನದಲ್ಲಿದ್ದ

ಅಷ್ಟದಿಗ್ಗಜಗಳ ಪೈಕಿ ಒಬ್ಬನಾದ ಅಲ್ಲಸಾನಿ ಪೆದ್ದಣ್ಣನೇ ಈ ನಾಯಕತನ ಪಡೆದಿದ್ದ ಪೆದ್ದಿರಾಜನೇ ಆಗಿದ್ದಾನೆ. ಅಲ್ಲಸಾನಿ ಪೆದ್ದಣ್ಣನು ಆಂಧ್ರಕವಿತ ಪಿತಾಮಹ ಎಂದು ಹೆಸರಾದರೂ ಅವನಿಗೆ ಆಂಧ್ರದಲ್ಲಿ ನಾಯಕತನ ನೀಡದೆ ತಮಿಳುನಾಡಿನ ಪ್ರದೇಶದಲ್ಲಿ ನಾಯಕತನ ನೀಡಿದ್ದಾದರೂ ಏಕೆ? ಅಣ್ಣೂರು ಅವನ ಪೂರ್ವಜರ ಸ್ಥಳವಾಗಿತ್ತೇ? ಅಥವಾ ಅಲ್ಲಿ ಅಪೂರ್ಣಗೊಂಡಿದ್ದ ದೇವಾಲಯವನ್ನು ಪೂರ್ಣಗೊಳಿಸಲು ಚಕ್ರವರ್ತಿಯ ಮನ ಒಲಿಸಿ ಆ ಸೀಮೆಯ ನಾಯಕತನವನ್ನು ಪಡೆದುಕೊಂಡನೇ? ಈ ಪ್ರಶ್ನೆಗಳಿಗೆ ಸದ್ಯಕ್ಕೆ ಆಧಾರಗಳ ಕೊರತೆ ಇದೆ. ಒಟ್ಟಾರೆ ನಾಯಕತನ ನೀಡುವಾಗ ಚಕ್ರವರ್ತಿ ಕೇವಲ ಬಲವನ್ನು ನೋಡದೆ ಬುದ್ಧಿವಂತಿಕೆಯನ್ನು ಗಮನಿಸುತ್ತಿದ್ದ. ಅಲ್ಲದೆ ತೆಲುಗು ಸಾಹಿತ್ಯದಲ್ಲಿ ಆಂಧ್ರಕವಿತ ಪಿತಾಮಹ ಎಂಬ ಬಿರುದನ್ನು ಸಂಪಾದಿಸಿದ್ದರಿಂದ ಗೌರವಕ್ಕೆ ಮಾನ್ಯತೆ ನೀಡಿ ಅಲ್ಲಸಾನಿ ಪೆದ್ದಣ್ಣನಿಗೆ ನಾಯಕತನ ನೀಡಿರಬಹುದು. ಇದರಿಂದ ಕೃಷ್ಣರಾಯ ಸಾಹಿತ್ಯ ಕ್ಷೇತ್ರಕ್ಕೂ ಆಡಳಿತದಲ್ಲಿ ಮಾನ್ಯತೆ ನೀಡಿದ್ದನೆನ್ನಬಹುದು.

ಕೃಷ್ಣದೇವರಾಯನು ತನ್ನ ರಾಣಿ ಚಂನಾದೇವಿಯ ತಂದೆ ವೀರಪೊಡೆಯ ಎಂಬುವನಿಗೂ ನಾಯಕತನ ನೀಡುವುದರ ಮೂಲಕ ಅಧಿಕಾರ ನೀಡಿದ್ದಾನೆ. ಕ್ರಿ.ಶ. 1516ರಲ್ಲಿ ಶ್ರೀರಂಗಪಟ್ಟಣದಲ್ಲಿದ್ದ ಇವನನ್ನು ಶಾಸನವು ಶ್ರೀಮನ್ಮಹ ಸೇನಾ ಸಮುದ್ರ ಸಾಳುವ ಗಜಸಿಂಹ ಎಂದು ಬಣ್ಣಿಸಿದೆ.[47] ಇವನು ಅದೇ ಬಿರುದಾಂಕಿತನಾದ ಚಿಕ್ಕೊಡೆಯನ ಮಗ. ಕ್ರಿ.ಶ. 1521ರ ಶಾಸನವು ವೀರಪ್ಪೊಡೆಯನು ದಡಿಗದ ಸೀಮೆಯ ನಾಯಕತನವನ್ನು ಪಡೆದುಕೊಂಡಿದ್ದನೆಂದು ದಾಖಲಿಸಿರುವುದರಿಂದ ರಾಯನು ತನ್ನ ಹತ್ತಿರದ ಸಂಬಂಧಿಗಳಿಗೂ ಅಧಿಕಾರ ನೀಡಿದ್ದನೆಂದು ಹೇಳಬಹುದು. ಇದು ಹತ್ತಿರದ ಸಂಬಂಧಿಗಳಿಗೆ, ಬಂಧುಬಾಂಧವರಿಗೆ, ಸೋದರ ಸೋದರಿಯರಿಗೆ ಅಧಿಕಾರ ನೀಡುವುದು ರಾಜಪ್ರಭುತ್ವದಲ್ಲಿ ಅಂದು ಸರ್ವೇಸಾಮಾನ್ಯವಾದ ಸಂಗತಿಯಾಗಿತ್ತು.

ಒಟ್ಟಾರೆ, ಕೃಷ್ಣದೇವರಾಯನ ಆಡಳಿತವನ್ನು ಗಮನಿಸಿದರೆ, ಮುಖ್ಯ ಅಂಶಗಳನ್ನು ಹೀಗೆ ಸಂಗ್ರಹಿಸಬಹುದು.

1. ಕೃಷ್ಣದೇವರಾಯನ ಕಾಲದಲ್ಲಿ 68 ಬಾರಿ "ನಾಯಕತನಕ್ಕೆ ಪಾಲಿಸಿದ ಪ್ರದೇಶವೆಂದು" ದಾಖಲಾಗಿದ್ದರೂ ಮೂರೂ ರಾಜ್ಯಗಳಿಂದ 55 ಸೀಮೆಗಳು ನಾಯಕತನಕ್ಕೆ ಒಳಪಟ್ಟಿದ್ದವು.
2. 55 ವ್ಯಕ್ತಿಗಳು ನಾಯಕತನದ ಮೂಲಕ ವಿವಿಧ ಸೀಮೆಗಳಲ್ಲಿ ಅಧಿಕಾರವನ್ನು ನಡೆಸುತ್ತಿದ್ದರು.
3. ವಿವಿಧ ಸಮುದಾಯಗಳಿಗೆ ನಾಯಕತನ ನೀಡಿದ್ದರೂ, ಒಟ್ಟಾರೆ ಶೇ. 50ರಷ್ಟು ಬ್ರಾಹ್ಮಣ ಸಮುದಾಯದವರು ನಾಯಕತನ ಪಡೆದುಕೊಳ್ಳುವುದರಲ್ಲಿ ಮೇಲುಗೈ ಸಾಧಿಸಿದ್ದರು. ಬೇಡ, ಗೊಲ್ಲ ಸಮುದಾಯದ ಬೆರಳೆಣಿಕೆಯ ವ್ಯಕ್ತಿಗಳು ನಾಯಕತನ ಪಡೆದುಕೊಂಡಿರುವುದು ಕಂಡುಬರುತ್ತದೆ.
4. ನಾಯಕತನಕ್ಕೆ ಒಳಪಟ್ಟ ಸೀಮೆಗಳಲ್ಲಿ ವಂಶಪಾರಂಪರ್ಯದ ಆಳ್ವಿಕೆ ಕಂಡುಬಂದಿಲ್ಲ. ಇವರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಾಯಿಸಿದ ಕೆಲವೇ ಕೆಲವು ಉದಾಹರಣೆಗಳಿವೆ.
5. ಒಬ್ಬ ವ್ಯಕ್ತಿಗೆ ಅನೇಕ ಸೀಮೆಗಳ ನಾಯಕತನ ನೀಡಿರುವುದು ಗೊತ್ತಾಗುತ್ತದೆ. ಕೃಷ್ಣದೇವರಾಯನ ಕಾಲದಲ್ಲಿ ಅತಿ ಹೆಚ್ಚೆಂದರೆ ಮೂರು ಸೀಮೆಯ ನಾಯಕತನ ಪಡೆದುಕೊಳ್ಳಲಾಗಿದೆ.
6. ನಾಯಕತನಪಡೆದುಕೊಂಡ ಪ್ರಭಾವಿ ಕುಟುಂಬವೆಂದರೆ ಆಂಧ್ರದಲ್ಲಿ ಸಾಳುವ ತಿಮ್ಮರಸ ಮತ್ತು ತಮಿಳುನಾಡಿನಲ್ಲಿ ಮಲ್ಲಪ್ಪನಾಯಕನ ಕುಟುಂಬವಾಗಿದೆ.

7. ನಾಯಕತನ ಪಡೆದುಕೊಂಡ ಬಹುಪಾಲು ವ್ಯಕ್ತಿಗಳು ರಾಜ್ಯಾಡಳಿತದಲ್ಲಿ ವಿವಿಧ ಹುದ್ದೆಗಳಿದ್ದವರೇ ಆಗಿದ್ದಾರೆ. ಉದಾ: ಮಹಾಪ್ರಧಾನಿ, ಮಹಾಮಂಡಲೇಶ್ವರರು, ರಾಯಸದವರು, ಕಾರ್ಯಕರ್ತರು, ಬೊಕ್ಕಸದವರು, ರಾವುತರು, ಪ್ರಧಾನರು, ಅವಸರದವರು ಇತ್ಯಾದಿ. ರಾಜನೊಂದಿಗಿನ ನೇರ ಸಂಪರ್ಕವೇ ಇವರ ನಾಯಕತನಕ್ಕೆ ಕಾರಣವಾಗಿದೆ ಎನ್ನಬಹುದು.

8. ನಾಯಕತನ ಪಡೆದ ವ್ಯಕ್ತಿಗಳು ತಮಗೆ ವಹಿಸಿದ ಸೀಮೆಗಳ ಆಡಳಿತ ನೋಡಿಕೊಳ್ಳುವುದಲ್ಲದೆ ಆ ಪ್ರದೇಶದಲ್ಲಿ ತೆರಿಗೆ ಸಂಗ್ರಹಿಸಿ ರಾಜ್ಯದ ಪಾಲನ್ನು ರಾಜ ಭಂಡಾರಕ್ಕೆ ಜಮಾಮಾಡಬೇಕಾಗಿತ್ತು. ನಾಯಕತನಕ್ಕೊಳಪಟ್ಟ ಸೀಮೆಗಳಿಗೆ ಚಕ್ರವರ್ತಿ ಏಕರೀತಿಯ ತೆರಿಗೆಯನ್ನು ನಿರ್ದಿಷ್ಟ ಪಡಿಸದೆ ಇದ್ದುದರಿಂದ ಅತಿ ಹೆಚ್ಚು ತೆರಿಗೆ ಜಮಾ ಮಾಡಬೇಕಾದ ನಾಯಕರು ಜನರನ್ನು ಸುಲಿಗೆ ಮಾಡುತ್ತಿದ್ದರು. ಚಕ್ರವರ್ತಿಗೆ ಸರಿಯಾಗಿ ನಿಷ್ಠೆ ವ್ಯಕ್ತಪಡಿಸದಿದ್ದರೆ ಅವರ ನಾಯಕತನಗಳನ್ನು ವಾಪಸ್ ಪಡೆದುಕೊಳ್ಳಲಾಗುತ್ತಿತ್ತು. ಆದ್ದರಿಂದ ಅವರು ಚಕ್ರವರ್ತಿಯ ನಿಷ್ಠೆಯನ್ನು ಸಾಬೀತು ಪಡಿಸಲು ಅವನಿಗೆ ಪುಣ್ಯವಾಗಲಿ ಎಂದು ದಾನ ಮಾಡುತ್ತಿದ್ದರು. ಉದಾ: ಕೃಷ್ಣದೇವರಾಯನ ಹೆಸರನಲ್ಲಿ ಅವನಿಗೆ ಪುಣ್ಯವಾಗಲೀ ಎಂದು 25 ನಾಯಕಗು ದೇವಾಲಯಕ್ಕೆ ದಾನ ನೀಡಿದರೆ ಇಬ್ಬರು ನಾಯಕರು ರಾಯನ ಹೆಸರಿನಲ್ಲಿ ಎರಡು ಮಠಗಳಿಗೂ 6 ದಾನಗಳನ್ನು 6 ಅಗ್ರಹಾರಗಳಿಗೂ ನೀಡಲಾಗಿದೆ. ಇದರಿಂದ ರಾಜನ ನಿಷ್ಠೆಗಳಿಸುವ ತಂತ್ರವಾಗಿ ದಾನಕ್ರಿಯೆಯನ್ನು ಉಪಯೋಗಿಸಿಕೊಂಡಿದ್ದರು.

9. ನಾಯಕತನಕ್ಕೆ ಒಳಪಟ್ಟ 55 ಸೀಮೆಗಳಲ್ಲಿ 55 ನಾಯಕರಿದ್ದರೂ ತಮ್ಮ ಹೆಸರಿನ ಕೊನೆಯಲ್ಲಿ ಕೇವಲ 19 ಜನರಿಗೆ ನಾಯಕ ಬಿರುದು ಇರುವುದು ಕಂಡುಬರುತ್ತದೆ. ಆದ್ದರಿಂದ ನಾಯಕತನ ಪಡೆದವರೆಲ್ಲಾ ನಾಯಕ ಬಿರುದನ್ನು ಹಾಕಿಕೊಳ್ಳುವ ನಿಯಮವೇನೂ ಇರಲಿಲ್ಲ. ಉದಾ: ಸಾಳ್ವ ತಿಮ್ಮರಸನ ಕುಟುಂಬದವರು ನಾಯಕತನ ಪಡೆದಿದ್ದರೂ ನಾಯಕ ಬಿರುದನ್ನು ಧರಿಸಿರಲಿಲ್ಲ. ಕೃಷ್ಣದೇವರಾಯನ ಕಾಲದಲ್ಲಿದ್ದ ಮತ್ತೊಂದು ಪ್ರಭಾವಿ ಕುಟುಂಬವಾದ ಮಲ್ಲಪ್ಪನ ಕುಟುಂಬವು ನಾಯಕ ಎಂಬುದನ್ನು ತಮ್ಮ ಹೆಸರಿನ ಕೊನೆಯಲ್ಲಿ (ತಿಮ್ಮಪ್ಪನಾಯಕ, ಚಿನ್ನಪ್ಪನಾಯಕ, ಮಲ್ಲಪ್ಪನಾಯಕ) ಜೋಡಿಸಿಕೊಂಡಿರುವುದು ಕಂಡುಬರುತ್ತದೆ.

10. ನಾಯಕ ಎಂಬುದು ಜಾತಿಸೂಚಕವಲ್ಲ ಎಂದು ಕೃಷ್ಣದೇವರಾಯನ ಶಾಸನಗಳು ತಿಳಿಸುತ್ತವೆ. ಉದಾ: ಬ್ರಾಹ್ಮಣನಾದ ಆಹೋಬಲ ದೇವಯ್ಯನ ಮಗನ ಹೆಸರು ಕೃಷ್ಣರಾಯನಾಯಕ. ಅವನಿಗೆ ಶ್ರೀರಂಗಪಟ್ಟಣದ ಸೀಮೆಯ ನಾಯಕತನವಿತ್ತು. ಆದ್ದರಿಂದ ನಾಯಕತನ ಸ್ವೀಕರಿಸಿದರೆ ಮಾತ್ರ ಇವರು ನಾಯಕರಾಗುತ್ತಾರೆ ವಿನಃ ಹೆಸರಿನ ಕೊನೆಯಲ್ಲಿ ಕೇವಲ ನಾಯಕ ಎಂಬುದಿದ್ದರೆ ಅವರು ನಾಯಕರಾಗಲು ಸಾಧ್ಯವಿಲ್ಲ. ಒಟ್ಟಾರೆ ಹೇಳುವುದಾದರೆ, ಚಕ್ರವರ್ತಿಯಿಂದ ನಾಯಕತನಕ್ಕೆ ಸೀಮೆಗಳನ್ನು ಪಡೆದುಕೊಂಡನಂತರ ಅವರು ರಾಜ ಮತ್ತು ಪ್ರಜೆಗಳ ಮಧ್ಯವರ್ತಿಯಾಗಿ ಆಡಳಿತ ಮಾಡುತ್ತಾ ಆ ಸೀಮೆಯ ಉಸ್ತುವಾರಿಯನ್ನು ನೋಡಿಕೊಳ್ಳಬೇಕಾಗಿತ್ತು. ಇವರು ಒಂದು ರೀತಿ ಇಂದಿನ ಜಿಲ್ಲಾ ಉಸ್ತುವಾರಿ ಮಂತ್ರಿಗಳಿದ್ದಂತೆ ಎನ್ನಬಹುದು. ಬಹುಪಾಲು ಇಂಥ ವ್ಯಕ್ತಿಗಳು ರಾಜಧಾನಿಯಲ್ಲಿ ಹೆಚ್ಚು ಸಮಯ ಕಳೆಯುತ್ತಿದ್ದರೆಂದು ತೋರುತ್ತದೆ. ಉದಾ: ಸಾಳುವ ಗೋವಿಂದರಾಜನನ್ನು ಭೇಟಿ ಮಾಡಲು ಗೌಡಪ್ರಜೆಗಳು ವಿಜಯನಗರಕ್ಕೆ ಹೋಗಿದ್ದ ಸಂಗತಿ ಶಾಸನವೊಂದರಲ್ಲಿ ಉಲ್ಲೇಖವಾಗಿರುವುದನ್ನು ಸ್ಮರಿಸಬಹುದು. (*ಕೃ.ಶಾ.ಸಂ.* 1, ಹನೂರು 271)

ಅಡಿಟಿಪ್ಪಣಿಗಳು

1. *Indian Epigraphical Glossary,* Delhi, 1966, p. 214.
2. *The Hoysalas, A Medieval Royal Family,* Oxford, 1957, p. 25.
3. *A Sanskrit English Dictionary,* p. 536.
4. *Inscriptions of Orissa* (Further 10), Vol. 111, 2, pp. 324-325.
5. *The Tamil Country under Vijayanagar,* Annamalainagar, 1964, p. 180.
6. *Administration and social life under Vijayanagar,* Madras, 1940, p. 195.
7. *Peasant State and Society in Medieval South India,* Oxford University Press, Delhi, 1980, p. 408.
8. *Concordance of Nayakas,* Oxford University Press, Delhi, 2002, p. 75-85.
9. ನಾಯಕರಿಗೆ ತಮಗೆ ನೀಡಿದ ಭೂ ಪ್ರದೇಶದ ವ್ಯಾಪ್ತಿಯಲ್ಲಿ ಕಂದಾಯ ಸಂಗ್ರಹಿಸುವ ಮತ್ತು ವಿಧಿಸುವ ಅಧಿಕಾರವಿತ್ತು. ನಿರ್ದಿಷ್ಟಪಡಿಸಿದ ಸೇನಾಪಡೆಯನ್ನಿಟ್ಟುಕೊಂಡು ಅದರ ಖರ್ಚುಗಳನ್ನು ನಿಭಾಯಿಸಿ ರಾಜನಿಂದ ಕರೆ ಬಂದಾಗ ಇವನ ಪರವಾಗಿ ಯುದ್ಧದಲ್ಲಿ ಭಾಗವಹಿಸಬೇಕಾಗಿತ್ತು ಮತ್ತು ವಾರ್ಷಿಕ ಕಪ್ಪವನ್ನು ರಾಜನಿಗೆ ನೀಡಬೇಕಾಗಿತ್ತು.
10. ಶ್ರೀ ಕೃಷ್ಣದೇವರಾಯನ ಆಮುಕ್ತ ಮಾಲ್ಯದ, ಡಾ. ನಿರುಪಮಾ (ಕನ್ನಡಕ್ಕೆ), ಪು. 63, ಪ್ರಸಾರಾಂಗ, ಕ.ವಿ.ವಿ., 2010.
11. "Political Maxims of the Emperor - Poet Krishna Devaraya," *The Journal of Indian History,* 4, Part 3, 1925, p. 72.
12. *I.V.J.,* Vol. IV, No. 84, ICHR, Bangalore, 2009
13. *ಅದೇ.*
14. *ಅದೇ,* ಸಂ. 72.
15. *ಅದೇ,* ಸಂ. 128.
16. *ಅದೇ,* ಸಂ. 70.
17. *ಕೃ.ಶಾ.ಸಂ.* 1, ಸಂ. 296.
18. *I.V.J.* Vol. IV, ಸಂಖ್ಯೆ 98, ICHR, Bangalore, 2009.
19. ಅದೇ, ಸಂ. 99.
20. *S.I.I.,* Vol. V, p. 292, ಮಧುರೈ ಜಿಲ್ಲೆ, ತಮಿಳುನಾಡು.
21. *I.V.J.,* Vol. IV, ಸಂ. 162.
22. *ಅದೇ,* ಸಂ. 163.
23. ರಾಯಸ ಎಂದರೆ, ರಾಜಧಾನಿಯಲ್ಲಿದ್ದ ಪ್ರಮುಖ ಕಛೇರಿ ಇದರ ನೇತೃತ್ವವನ್ನು ಹಿರಿಯ ಅಧಿಕಾರಿಗಳು ವಹಿಸುತ್ತಿದ್ದರು. ಇದರ ಸಾಮಾನ್ಯ ಅರ್ಥ ಆಜ್ಞಾಪತ್ರಗಳನ್ನು ಬರೆಯುವ ಅಥವಾ ಓದಿ ಹೇಳುವ, ನಿರೂಪ, ಪತ್ರ, ಇಂತಹ ಪತ್ರಗಳನ್ನು ನಿರ್ವಹಣೆ ಮಾಡುವ ಕಛೇರಿ. ಇಲ್ಲಿನ ಅಧಿಕಾರಿಗಳಿಗೆ ರಾಜನ ನೇರ ಸಂಪರ್ಕವಿರುತ್ತಿತ್ತು. ಇಂತಹ ಅಧಿಕಾರಿಗಳೇ ರಾಯಸ್ತ ಕೊಂಡಮರಸ, ರಾಯಾಸ್ತ ಅಯ್ಯಪ್ಪರಸ, ರಾಯಸ್ತ ನಾರಾಯಣಪ್ಪ.
24. *ಕೃ.ಶಾ.ಸಂ.* 1, ಶಾ.ಸಂ. 134.
25. *I.V.J.* Vol. IV, ಸಂ. 139, ICHR, Bangalore, 2009.
26. *ಕೃ.ಶಾ.ಸಂ.* 1, ಶಾ.ಸಂ. 48.
27. *I.V.J.* Vol. IV, ಸಂ. 85, ICHR, Bangalore, 2009.
28. *ಕೃ.ಶಾ.ಸಂ.* 1, ಸಂಖ್ಯೆ 86.

29. *ಅದೇ,* ಸಂಖ್ಯೆ 118.
30. *ಎಪಿಗ್ರಾಫಿಯಾ ಕರ್ನಾಟಿಕ* (ಹೊಸ ಸಿರೀಸ್) ಸಂ. 4, ಹನೂರು 83, ಕೊಳ್ಳೆಗಾಲ (ತಾ).
31. *ಕೃ.ಶಾ.ಸಂ.* 1, ಸಂಖ್ಯೆ 207
32. *I.V.J.* Vol. IV, ನಂ. 182, ICHR, Bangalore, 2009.
33. *ಪ್ರವಾಸಿ ಕಂಡ ಇಂಡಿಯಾ,* (ಸಂ) ವಿವೇಕ ರೈ, ಪು. 88, ಕ.ವಿ.ವಿ. ಪ್ರಸಾರಾಂಗ, 2005.
34. *ಅದೇ,* ಪು. 175.
35. *ಅದೇ,* ಪು. 186
36. *ಅದೇ,* ಪು. 186. [ಈ ಪುಟದಲ್ಲಿ ಕೊಟ್ಟಿರುವ ಪ್ರತಿಯೊಬ್ಬ ನಾಯಕನ ಆದಾಯ ಮತ್ತು ತೆರಿಗೆಯನ್ನು ಒಟ್ಟುಗೂಡಿಸಿ ನೀಡಿದ್ದೇನೆ. ವಿವರಗಳಿಗೆ ಆ ಕೃತಿಯನ್ನು ನೋಡಬಹುದು.]
37. *ಅದೇ,* ಪು. 175.
38. *A.R.Ep.,* 1943-44, p. 110.
39. *A.R.Ep.,* 1936-37, p. 105.
40. *A.R.Ep.,* 1937-38, p. 494
41. *ಕೃ.ಶಾ.ಸಂ.* 1, ಸಂಖ್ಯೆ 227.
42. *I.V.J.,* Vol. IV, ಸಂ. 109.
43. *ಕೃ.ಶಾ.ಸಂ.* 1, ಸಂಖ್ಯೆ 248.
44. *ಅದೇ,* ಸಂಖ್ಯೆ 236, 237.
45. *ಅದೇ,* ಸಂಖ್ಯೆ 249.
46. *I.V.J.* Vol. IV, ಸಂ. 127, ICHR, Bangalore, 2009.
47. *ಕೃ.ಶಾ.ಸಂ.* 1, ಸಂಖ್ಯೆ 85.

ಶಾಸನಗಳನ್ನಾಧರಿಸಿದ ನಾಯಕತನಗಳ ಪಟ್ಟಿ (ಕ್ರಿ.ಶ. 1509–1529)

1. **ತಿಮ್ಮರಾಯ ಚಕ್ರವರ್ತಿ ಬಿನ್ .... (ಏಜೆಂಟ್ ಆಫ್ ತಿಪ್ಪರಸ)**
ಮಂಜಿನಾಡ ಪೆನ್ನಾಗರ ಡೆಂಕನಕೋಟೆ ನಾಯಕತನ, ಕ್ರಿ.ಶ. 1509, ತಿಮ್ಮರಸನಿಗೆ ಧರ್ಮವಾಗಲಿ ಎಂದು ನೀಡಿದ ಭೂದಾನ.
S.I.I., VII-15, ಧರ್ಮಪುರಿ ಜಿಲ್ಲೆ, ತಮಿಳುನಾಡು

2. **ಹೊನ್ನಪ್ಪನಾಯಕ ಬಿನ್ ಬೊಕ್ಕಸದ ದೇವಪ್ಪನಾಯಕ**
ಪಾಣೆಂ ಸೀಮೆ, ಬೂಡಿದೆಪಾಡು, ಕ್ರಿ.ಶ. 1510 ಮಾರ್ಚ್, ಪಾಣಿಕೇಶ್ವರ ದೇವರಿಗೆ (ಪುಣ್ಯದ) ಭೂದಾನ.
I.V.R., Vol. IV, No. 74, ICHR, Bangalore, 2009, ಕರ್ನೂಲು ಜಿಲ್ಲೆ, ಆಂಧ್ರಪ್ರದೇಶ.

3. **ಯಲ್ಲಪ್ಪನಾಯಕ ಬಿನ್. ....**
ರಾಮನಾಯ್ಕನಹಳ್ಳಿ ಸೀಮೆ, ಹಂದರಾಳು, ಕ್ರಿ.ಶ. 1511, ಫೆಬ್ರವರಿ, ಹಂದರಾಳು ತಿರುಮಲದೇವರಿಗೆ ಕೃಷ್ಣದೇವರಾಯನಿಗೆ ಧರ್ಮವಾಗಲಿ ಎಂದು ನೀಡಿದ ಭೂದಾನ.
ಕೃ.ಶಾ.ಸಂ. 1, ಸಂ. 12, ಕನ್ನಡ ವಿ.ವಿ., ಹಂಪೆ, 2010, ತುಮಕೂರು ಜಿಲ್ಲೆ, ಕರ್ನಾಟಕ.

4. **ವೀರನರಸಿಂಗರಾಯ ನಾಯಕ ಬಿನ್ .... (ವಯಿರಾವನಿಯ ಒಡೆಯ)**
ಪಡವೀಡು ರಾಜ್ಯದ ಇರಂಡಾಯಿರವೆಲಿ ಪರ್ರು, ನೆಡುಂಗುನ್ನಾರಂ, ಕ್ರಿ.ಶ. 1511ರಲ್ಲಿ ಅವನ ಏಜೆಂಟ್ ನೆಡುಂಗುನ್ನಾರಂನಲ್ಲಿ ಅವನ ಹೆಸರಿನಲ್ಲಿ ಭೂದತ್ತಿ ನೀಡಿದ್ದಾನೆ.
A.R.Ep., 1934-35, p. 27, ಚಂಗಲ್ ಪೇಟೆ ಜಿಲ್ಲೆ, ತಮಿಳುನಾಡು

5. **ಊಳಿಗದ ಎಲ್ಲಯ್ಯ ಬಿನ್. ....**
ಮಾರಟೂರ ಸೀಮೆ, ರೊದ್ದನಾಡು, ಉಪುಡಿಹಳ್ಳಿ, ಕ್ರಿ.ಶ. 1512, ಏಪ್ರಿಲ್, ಕೃಷ್ಣದೇವರಾಯನಿಗೆ ಧರ್ಮವಾಗಲಿ ಎಂದು ಹಿರಿಯದಾಳಿವಾಟದ ಅಹೋಬಲ ನರಸಿಂಹದೇವರಿಗೆ ಭೂದಾನ.
ಕೃ.ಶಾ.ಸಂ. 1, ಶಾ.ಸಂ. 293, ಅನಂತಪುರ ಜಿಲ್ಲೆ, ಆಂಧ್ರಪ್ರದೇಶ.

6. **ನರಸನಾಯಕ ಬಿನ್ ....**
ನೆಲವಾಗಿಲು ಸೀಮೆ, ಸುರಭಿ ದೇವನಪುರ, ಉರುದೇವನ ಹಳ್ಳಿ, ಕ್ರಿ.ಶ. 1512 ಆಗಸ್ಟ್, ಗೌರೀಶ್ವರ ದೇವಾಲಯಕ್ಕೆ ಭೂದತ್ತಿ ನೀಡಿದ್ದಾನೆ.
ಕೃ.ಶಾ.ಸಂ. 1, ಶಾ.ಸಂ. 26, ಕೋಲಾರ ಜಿಲ್ಲೆ, ಕರ್ನಾಟಕ.

7. **ರಾಯಸ್ತ ಕೊಂಡಮರಸಯ್ಯ**
ಕುಂದುರುಪೆ ಸೀಮೆ, ಕುಂಭದೂರು, ಕ್ರಿ.ಶ. 1512 ಅಕ್ಟೋಬರ್‌ನಲ್ಲಿ ಕೃಷ್ಣದೇವರಾಯರಿಗೆ ಧರ್ಮವಾಗಲೆಂದು ಕಂಭದೂರು ಕೆರೆಯ ಕೆಳಗಿನ ಗದ್ದೆ ಮತ್ತು ಪಂಡೇನಹಳ್ಳಿ ಪುರವರ್ಗದ ಗದ್ದೆ ಹೊಲವನ್ನು ಕಂಭದೂರಿನ ಮಲ್ಲಿಕಾರ್ಜುನ ದೇವರಿಗೆ ದಾನ ಮಾಡಿದ್ದಾನೆ.
ಕೃ.ಶಾ.ಸಂ. 1, ಶಾ.ಸಂ. 296, ಅನಂತಪುರ ಜಿಲ್ಲೆ, ಆಂಧ್ರಪ್ರದೇಶ.

8. **ಕೆಂಚಸೋಮಣ್ಣ ವೊಡೆಯ ಬಿನ್. ದೇವರಾಯಪಟ್ಟಣದ ತಿಮ್ಮಣ್ಣೊಡೆಯ**
ಚನ್ನಪಟ್ಟಣದ ಸೀಮೆ, ಕೂಡಲೂರು ಸ್ಥಳದ ಹೊಸಹಳ್ಳಿ, ಕ್ರಿ.ಶ. 1513 ಏಪ್ರಿಲ್, ಕೂಡಲೂರು ಕೆರೆಯ ಜೀರ್ಣೋದ್ಧಾರಕ್ಕೆ ಕೃಷ್ಣದೇವರಾಯನಿಗೆ ಪುಣ್ಯವಾಗಲಿ ಎಂದು ನೀಡಿದ ಭೂದಾನ.
ಕೃ.ಶಾ.ಸಂ. 1, ಶಾ.ಸಂ. 40, ರಾಮನಗರ ಜಿಲ್ಲೆ, ಕರ್ನಾಟಕ.

9. **ಮಹಾಮಂಡಲೇಶ್ವರ ರಾಚಿರಾಜು ಬಿನ್. ಯರ್ರಗದ್ದಮಯ್ಯ ಮಹಾರಾಜು**
ಪೊಟ್ಲದುರಿತಿ, ಪೊಟ್ಲದುರಿತಿ, ಕ್ರಿ.ಶ. 1513 ಜುಲೈ, ಚನ್ನಕೇಶವ ದೇವರ ಪೂಜಾಕಾರ್ಯಗಳಿಗೆ ಸ್ಥಳ ಸುಂಕ ನೀಡಿದ್ದಾನೆ.
I.V.J., Vol. IV, ನಂ. 84, ICHR, Bangalore, 2009, ಕಡಪಾ ಜಿಲ್ಲೆ, ಆಂಧ್ರಪ್ರದೇಶ

10. **ಸಾಳುವ ಗೋವಿಂದರಾಜು ಬಿನ್. ರಾಚಿರಾಜ**
ತೆರಕಣಾಂಬಿ ಸೀಮೆ, ಅನೇಕ ಗ್ರಾಮ, ಕ್ರಿ.ಶ. 1513 ಅಕ್ಟೋಬರ್, ತ್ರಿಯಂಬಕ ದೇವರಿಗೆ (ತ್ರಿಯಂಬಕ ಪುರ) ಕೃಷ್ಣದೇವರಾಯನಿಗೆ ಧರ್ಮವಾಗಬೇಕೆಂದು ನೀಡಿದ ಭೂದಾನ.
ಕೃ.ಶಾ.ಸಂ. 1, ಶಾ.ಸಂ. 48, ಚಾಮರಾಜನಗರ ಜಿಲ್ಲೆ, ಕರ್ನಾಟಕ.

11. **ಅಕ್ಕಿ ತಿಮ್ಮಯ್ಯನಾಯಕ**
ಮಡಿ ಮಂಡಲಂ ಮಲಾಡು ಸೀಮೆ, ಕ್ರಿ.ಶ. 1513ರಲ್ಲಿ ತನ್ನ ಹೆಸರಿನಲ್ಲಿ ಅಗ್ರಹಾರ ಸ್ಥಾಪಿಸಿ ಬ್ರಾಹ್ಮಣರಿಗೆ ದಾನ ಮಾಡಿದ್ದಾನೆ.
A.R.Ep. 1913-14, ಸೇಲಂ ಜಿಲ್ಲೆ, ತಮಿಳುನಾಡು, p. 403.

12. **ಸಾಳುವ ಗೋವಿಂದಯ್ಯ ಬಿನ್. ರಾಚಿರಾಜಯ್ಯ**
ಗುತ್ತಿಸೀಮೆ, ತೌಡಿಪುರ, ಕ್ರಿ.ಶ. 1514 ಫೆಬ್ರವರಿ, ರಾಮಯ್ಯದೇವ ದೇವರ ಪೂಜಾಕಾರ್ಯಕ್ಕೆ ಗಜತಿಮ್ಮಾಪುರದಲ್ಲಿ ಭೂಮಿ ದಾನ.
I.V.J., Vol. IV, ನಂ. 85, ICHR, Bangalore, 2009, ಅನಂತಪುರ ಜಿಲ್ಲೆ, ಆಂಧ್ರಪ್ರದೇಶ.

13. **ತ್ರಿಯಂಬಕರಸ ಬಿನ್. ಶಿವನಸಮುದ್ರದ ತಿಪ್ಪರಸ**
ಮಾಳೇನಹಳ್ಳಿ ಸೀಮೆ, ಬಯಿರಾಪುರ, ಕ್ರಿ.ಶ. 1515 ಏಪ್ರಿಲ್, ಅಗ್ರಹಾರ ಮಾಡಿ ಹರಿಹರಾಧ್ಯರಿಗೆ ದಾನ.
ಕೃ.ಶಾ.ಸಂ. 1, ಶಾ.ಸಂ. 68, ಶಿವಮೊಗ್ಗ ಜಿಲ್ಲೆ, ಕರ್ನಾಟಕ

14. **ವೀರಭದ್ರ ಮಹಾರಾಯ ಬಿನ್. ಗಜಪತಿ ಪ್ರತಾಪರುದ್ರ**
ಮಲೆಬೆನ್ನೂರು ಸೀಮೆ, ಲಿಂಗದಹಳ್ಳಿ ಸೀಮೆ, ಕ್ರಿ.ಶ. 1515 ಅಕ್ಟೋಬರ್, ಮದುವೆ ಸುಂಕ ಬಿಟ್ಟುಕೊಟ್ಟು ಪ್ರತಾಪರುದ್ರನಿಗೆ, ಕೃಷ್ಣದೇವರಾಯನಿಗೆ ಮತ್ತು ತಮಗೆ ಧರ್ಮವಾಗಲಿ ಎಂದು ನೀಡಿದ ದಾನ.
ಕೃ.ಶಾ.ಸಂ. 1, ಶಾ.ಸಂ. 76, ದಾವಣಗೆರೆ ಜಿಲ್ಲೆ, ಕರ್ನಾಟಕ.

15. **ಧನಂಜಯ ರಾಯವೊಡೆಯ ಬಿನ್. ದಳವಾಯಿ ತಿಂಮರಸ**
ಹಾಸನದ ಸ್ಥಳ, ಬಿಟ್ಟುಗೊಂಡನಹಳ್ಳಿ, ಕ್ರಿ.ಶ. 1515 ಜೂನ್, ಪ್ರತಿನಾಮ ಧನಂಜಯ ಗ್ರಾಮ ಎಂದೂ, ಅದನ್ನು ಅಗ್ರಹಾರ ಮಾಡಿ ಚನ್ನದೀಕ್ಷಿತರಿಗೆ ದಾನ ಮಾಡಿದ್ದಾನೆ.
ಕೃ.ಶಾ.ಸಂ. 1, ಶಾ.ಸಂ. 82, ಹಾಸನ ಜಿಲ್ಲೆ, ಕರ್ನಾಟಕ.

16. **ಊಳಿಗದ ಮಾದೆನಾಯ್ಕ ಕಾರ್ಯಕೆಕರ್ತ ಬಿನ್. .... (ಕೃಷ್ಣದೇವರಾಯನ)**
ಸೋಲೂರು ಸೀಮೆ, ಅರಿಸಿನ ಗುಂಟೆ, ಕ್ರಿ.ಶ. 1516 ನವೆಂಬರ್, ಕೃಷ್ಣದೇವರಾಯನಿಗೆ ಧರ್ಮವಾಗಲಿ ಎಂದು ಅರಿಸಿನ ಗುಂಟೆ ಜಗ್ಗೇಯ ವೀರಣ ಒಡೆಯ ದೇವರಿಗೆ ಪುರ ಧರ್ಮ.
ಕೃ.ಶಾ.ಸಂ. 1, ಶಾ.ಸಂ. 89, ರಾಮನಗರ ಜಿಲ್ಲೆ, ಕರ್ನಾಟಕ.

17. **ಪ್ರಧಾನ ಮಲ್ಲರಸ ಕಾರ್ಯಕೆಕರ್ತ ಬಿನ್. .... (ಕೃಷ್ಣದೇವರಾಯನ)**
ಜಾಜೂರು ಸೀಮೆ, ತೇಗದಹಳ್ಳಿ, ಕ್ರಿ.ಶ. 1517 ಅಕ್ಟೋಬರ್, ಹಂಪೆಯ ವಿರೂಪಾಕ್ಷ, ವಿಠಲ, ಶ್ರೀಕೃಷ್ಣದೇವರ ಸನ್ನಿಧಿಯಲ್ಲಿ ದಾನವಾಗಿ ನೀಡಲಾಗಿದೆ.
ಕೃ.ಶಾ.ಸಂ. 1, ಶಾ.ಸಂ. 100, ಚಿತ್ರದುರ್ಗ ಜಿಲ್ಲೆ, ಕರ್ನಾಟಕ.

18. **ಸಾಳುವ ಗೋವಿಂದಯ್ಯ ಬಿನ್. ರಾಚಿರಾಜು**
ಗುತ್ತಿಸೀಮೆ, ಪುತ್ತಿಮಾಗಣಿಯ ಮಿಡತೂರು ಗ್ರಾಮ, ಕ್ರಿ.ಶ. 1517 ಜೂನ್, ಬುರುದಾಟಿ ವಿಗ್ನೇಶ್ವರ ದೇವರಿಗೆ ನೀಡಿದ ಭೂದಾನ.
I.V.J., Vol. IV, ನಂ. 110, ICHR, Bangalore, 2009, ಅನಂತಪುರ ಜಿಲ್ಲೆ, ಆಂಧ್ರಪ್ರದೇಶ.

19. **ಬುಕ್ಕರಾಜು ತಿಮ್ಮರಾಜು ಬಿನ್. ....**
ಪೋಲೂರಿ ಸೀಮೆ, ನಾಮಿಲದಿನ್ನ, ಕ್ರಿ.ಶ. 1617 ಡಿಸೆಂಬರ್, ಅವನ ಮಗ ಕೃಷ್ಣಯ್ಯನು ಮಹಾಜನರ ಒಪ್ಪಿಗೆ ಪಡೆದು [ನಾಮಿಲದಿನ್ನ ಗ್ರಾಮದ ಸ್ಥಳ ಸುಂಕಾದಾಯವನ್ನು ರಾಮರಾಜಯ್ಯ ಎಂಬುವನು ನೀಡಿದ್ದನು] ಆ ದಾನವನ್ನು ಪೆರುಮಾಳು ದೇವರ ದಶಮಿ ಹಬ್ಬ ಆಚರಣೆಗೆ ಖಾಯಂ ಮಾಡಿದನು.
I.V.J., Vol. IV, ನಂ. 111, ICHR, Bangalore, 2009, ಕಡಪ ಜಿಲ್ಲೆ, ಆಂಧ್ರಪ್ರದೇಶ.

20. **ಪೆದ್ದಸಿಂಗಮನಾಯಕ ಬಿನ್. ರಾಮನಾಯಕ (ವಾಕಿಟಿ ತಿಮ್ಮಪ್ಪನಾಯಕನಿಂದ ನಾಯಕತನ)**
ನಾಗಾರ್ಜುನಕೊಂಡ ಸೀಮೆ, ಗುಂಡಾಲ ಗ್ರಾಮ, ಕ್ರಿ.ಶ. 1518 ನವೆಂಬರ್, ದುರ್ಗಿಯ ವೀರೇಶ್ವರ ವೆಂಕೇಶ್ವರ ದೇವರಿಗೆ ಭೂದಾನ ಮಾಡಿದ್ದಾನೆ.
I.V.J., Vol. IV, ನಂ. 121, ICHR, Bangalore, 2009, ಗುಂಟೂರು ಜಿಲ್ಲೆ, ಆಂಧ್ರಪ್ರದೇಶ.

21. **ತಿಮ್ಮಪ್ಪನಾಯಕ ಬಿನ್. ಮಲ್ಲಪ್ಪನಾಯಕ**
ತಿರುಚಿನಾಪಳ್ಳಿ ಸೀಮೆ, ಕ್ರಿ.ಶ. 1619 ನಾಲ್ಕು ಗ್ರಾಮಗಳನ್ನು ಭೂದಾನ ಮಾಡಿದ್ದಾನೆ.
A.R.Ep. 1936-37, ತಿರುಚಿನಾಪಲ್ಲಿ, ತಮಿಳುನಾಡು, p. 105.

22. **ತಿಮ್ಮಪ್ಪನಾಯಕ ಬಿನ್. ಮಲ್ಲಪ್ಪನಾಯಕ**
ಇರೈವಾನರ ವೂರ್, ಕ್ರಿ.ಶ. 1519, ಕೃಷ್ಣದೇವರಾಯನಿಗೆ ಧರ್ಮವಾಗಲಿ ಎಂದು ಭೂದತ್ತಿ ನೀಡಿದ್ದಾನೆ.
A.R.Ep. 1943-44, ದಕ್ಷಿಣ ಆರ್ಕಾಟ್ ಜಿಲ್ಲೆ, ತಮಿಳುನಾಡು, p. 110.

23. **ಸಾಳುವ ಗೋವಿಂದರಾಜು ಬಿನ್. ರಾಚಿರಾಜು**
.... ರಾಜ್ಯದೊಳಗಣ ಮೂಗೂರು ಸ್ಥಳ, ಹೊಸಪುರ, ಕ್ರಿ.ಶ. 1519 ಅಕ್ಟೋಬರ್, ತಿರುಮಕೂಡಲು ಅಗಸ್ತೀಶ್ವರ ದೇವರಿಗೆ ದಾನ ನೀಡಿದ್ದಾನೆ.
ಕೃ.ಶಾ.ಸಂ. 1, ಶಾ.ಸಂ. 124, ಮೈಸೂರು ಜಿಲ್ಲೆ, ಕರ್ನಾಟಕ.

24. ಅಪ್ಪರಸಯ್ಯ (ಕಾರ್ಯಕರ್ತರಾದ ಸಾಳುವ ತಿಂಮರಸಯ್ಯನ ಅಳಿಯ) ಬಿನ್. ....
ಸೋಲೂರು ಸೀಮೆ, ನಾಗಿಸೆಟ್ಟಿಹಳ್ಳಿ, ಕ್ರಿ.ಶ. 1520 ಜುಲೈ, ಕೃಷ್ಣದೇವರಾಯರಿಗೆ ಧರ್ಮವಾಗಲಿ ಎಂದು ನಲ್ಲದಾಯಮ್ಮನವರಿಗೆ ಅಗ್ರಾಹಾರವಾಗಿ ದಾನ.
ಕೃ.ಶಾ.ಸಂ. 1, ಶಾ.ಸಂ. 134, ರಾಮನಗರ ಜಿಲ್ಲೆ, ಕರ್ನಾಟಕ.

25. ಪೆದ್ದಿರಾಜು (ಆಂಧ್ರ ಕವಿತ ಪಿತಾಮಹ) ಬಿನ್. ಅಲ್ಲಸಾನಿ ಚೊಕ್ಕರಾಜು
ಕರ್ವಾಚಿ ಸೀಮೆ, ಅಣ್ಣೂರಿ, ಕ್ರಿ.ಶ. 1520ರಲ್ಲಿ ದೇವಾಲಯ ಕಟ್ಟಿಸಿ ಅದರ ನಿರ್ವಹಣೆಗೆ ಭೂದಾನ ಮಾಡಿದ್ದಾನೆ.
S.I.I., XVI-68, ದಕ್ಷಿಣ ಆರ್ಕಾಟ್ ಜಿಲ್ಲೆ, ತಮಿಳುನಾಡು

26. ತಿಮ್ಮಪ್ಪನಾಯಕ ಬಿನ್. ಮಲ್ಲಪ್ಪನಾಯಕ
ಭುವನೇಕ ವೀರಪಟ್ಟಣ ಸೀಮೆಯ ವಲುದಿಲ ಮಂಪಟ್ಟು ಚಾವಡಿ, ಕ್ರಿ.ಶ. 1520ರಲ್ಲಿ, ರಾಜನಿಗೆ ಧರ್ಮವಾಗಲಿ ಎಂದು ತನ್ನ ನಾಯಕತನಕ್ಕೆ ಸೇರಿದ ಗ್ರಾಮದಲ್ಲಿ ಸುಂಕವನ್ನು ವಿನಾಯಿತಿ ಮಾಡಿದ್ದಾನೆ.
A.R.Ep. 1937-38, ದಕ್ಷಿಣ ಆರ್ಕಾಟ್ ಜಿಲ್ಲೆ, ತಮಿಳುನಾಡು, p. 494.

27. ಬುಕ್ಕರಾಜು ತಿಮ್ಮರಾಜು (ಮಹಾಮಂಡಲೇಶ್ವರ) ಬಿನ್. ....
ಗಂಜಿಕುಂಟಸೀಮೆ, ಕ್ರಿ.ಶ. 1521 ಏಪ್ರಿಲ್, ವಾಣಿಪೆಂಟ ಗ್ರಾಮದ ಕೆರೆಯ ನಿರ್ವಹಣೆಗೆ ಮತ್ತು ರಿಪೇರಿಗೆ ವ್ಯವಸ್ಥೆ ಮಾಡಿದನು.
I.V.J., Vol. IV, ನಂ. 136, ICHR, Bangalore, 2009, ಕಡಪಾ ಜಿಲ್ಲೆ, ಆಂಧ್ರಪ್ರದೇಶ.

28. ಭಂಡಾರದ ತಿಂಮಪಯ್ಯ ಬಿನ್. ಭಂಡಾರದ ಅಪ್ಪರಸಯ್ಯ
ಕೊಪಣದ ಸೀಮೆ, ಹಿರಿಯ ಸಿಮೋಗಿ, ಕ್ರಿ.ಶ. 1521 ಏಪ್ರಿಲ್, ಕೊಪ್ಪಣದ ಚನ್ನಕೇಶವ ದೇವರ ಪೂಜಾ ಕಾರ್ಯಗಳಿಗೆ ದಾನ ನೀಡಿದ್ದಾನೆ.
ಕೃ.ಶಾ.ಸಂ. 1, ಶಾ.ಸಂ. 143, ಕೊಪ್ಪಳ ಜಿಲ್ಲೆ, ಕರ್ನಾಟಕ.

29. ಸಾಳುವ ಗಜಸಿಂಹ ವೀರಪ್ಪೊಡೆಯ ಬಿನ್. (ಕೃಷ್ಣದೇವರಾಯನ ರಾಣಿವಾಸ ದೇವಿ ಚಂನಾದೇವಿಯಮ್ಮನ ತಂದೆ) ಚೊಕ್ಕಣ್ಣನಾಯ್ಕರ ಚಿಕ್ಕನಾಯ್ಕ
ದಡಿಗದ ಸೀಮೆ (ನಾಗಮಂಗಲ ಸ್ಥಳ) ಕಾಮಿಡಿಹಳ್ಳಿ, ಕ್ರಿ.ಶ. 1521 ಏಪ್ರಿಲ್, ಕೃಷ್ಣದೇವರಾಯನಿಗೆ ಧರ್ಮವಾಗಲಿ ಎಂದು ತೋಟಮಠದ ನಿರಂಜನದೇವರಿಗೆ, ಮಲ್ಲಿಕಾರ್ಜುನ ದೇವರಿಗೆ ಭೂದಾನ ನೀಡಿದ್ದಾನೆ.
ಕೃ.ಶಾ.ಸಂ. 1, ಶಾ.ಸಂ. 144, ಮಂಡ್ಯ ಜಿಲ್ಲೆ, ಕರ್ನಾಟಕ.

30. ಗೌರೆದಣ್ಣಾಯಕರ ಬಸ್ವಪ್ಪಯ್ಯ ಬಿನ್. ....
ಆಲಂಪುರ ಸೀಮೆ (ಅಮರದಂಣಾಯಕತನ) ಕ್ರಿ.ಶ. 1521 ಜೂನ್, ಕೃಷ್ಣದೇವರಯನಿಗೆ ಮತ್ತು ಗೌರದಂಣಾಯಕರಿಗೆ ಧರ್ಮವಾಗಲಿ ಎಂದು ಆಲಂಪುರದ ನರಸಿಂಹದೇವರಿಗೆ ಬಯಿರಪುರ ಗ್ರಾಮವನ್ನು ದಾನ ನೀಡಿದ್ದಾನೆ.
ಕೃ.ಶಾ.ಸಂ. 1, ಶಾ.ಸಂ. 337, ಮೆಹಬೂಬ್ ನಗರ ಜಿಲ್ಲೆ, ಆಂಧ್ರಪ್ರದೇಶ.

31. **ನಾದೆಂಡ್ಲ ಗೋಪಯ್ಯ ಬಿನ್. ....**
ಕೊಂಡವೀಟಿ ಸೀಮೆ, ವೇರೂರು, ಕ್ರಿ.ಶ. 1521 ನವೆಂಬರ್, ವೇರೂರಿನ ಸೋಮೇಶ್ವರ ದೇವರಿಗೆ ಭೂದಾನ ನೀಡಿದ್ದಾನೆ.
I.V.J., Vol. IV, ನಂ. 139, ICHR, Bangalore, 2009, ಪ್ರಕಾಶಂ ಜಿಲ್ಲೆ, ಆಂಧ್ರಪ್ರದೇಶ.

32. **ಸಾಳುವ ಗೋವಿಂದರಾಜು ಬಿನ್. ರಾಚಿರಾಜ**
ಕುಡುಗನಾಡ ತೆರಕಣಾಂಬಿ ಸ್ಥಳ, ಕೋಡಿಹಳ್ಳಿ, ಅಂಣೆಯೂರು, ಚನ್ನಯ್ಯನ ಪುರ, ಕ್ರಿ.ಶ. 1521 ಡಿಸೆಂಬರ್, ಕೃಷ್ಣದೇವರಾಯನಿಗೆ ಪುಣ್ಯವಾಗಲಿ ಎಂದು ತ್ರಿಯಂಬಕ ದೇವರ ಸೇವೆಗೆ ಭೂದಾನ ಮಾಡಿದ್ದಾನೆ.
ಕೃ.ಶಾ.ಸಂ. 1, ಶಾ.ಸಂ. 148, ಚಾಮರಾಜನಗರ ಜಿಲ್ಲೆ, ಕರ್ನಾಟಕ.

33. **ಸಿಂಗಪ್ಪನಾಯಕ ಬಿನ್. ಮಾಚಪ್ಪನಾಯಕ**
ಗೋಣಿಬೀಡು ಸೀಮೆ, ಗಂಗಾವರ, ಮಲ್ಲವಳ್ಳಿ, ಕೂಸಾವರ, ಕ್ರಿ.ಶ. 1522 ಜನವರಿ, ಕೃಷ್ಣದೇವರಾಯನಿಗೆ ಧರ್ಮವಾಗಲಿ ಎಂದು ವೇಲಾಪುರಿ ಚನ್ನಕೇಶವ ದೇವರಿಗೆ ಭೂದಾನ ನೀಡಿದ್ದಾನೆ.
ಕೃ.ಶಾ.ಸಂ. 1, ಶಾ.ಸಂ. 151, ಹಾಸನ ಜಿಲ್ಲೆ, ಕರ್ನಾಟಕ.

34. **ಸಾಳುವ ಗೋವಿಂದರಾಜು ಬಿನ್. ರಾಚಿರಾಜ**
ಉಮ್ಮತ್ತೂರು ರಾಜ್ಯ, ಹೊಸವಾಡ ಸ್ಥಳ, ಕಲಿಯುಗವಾಡಿ, ಕ್ರಿ.ಶ. 1522 ಜನವರಿ, ತಿರುಮಕೂಡಲ ಅಗಸ್ತ್ಯನಾಥ ದೇವರಿಗೆ ಭೂದಾನ ನೀಡಿದ್ದಾನೆ.
ಕೃ.ಶಾ.ಸಂ. 1, ಶಾ.ಸಂ. 151, ಹಾಸನ ಜಿಲ್ಲೆ, ಕರ್ನಾಟಕ.

35. **ಮಹಾಮಂಡಲೇಶ್ವರ ಸರ್ವಯ್ಯದೇವ ಕೋಡ ಮಹಾರಾಜು ಬಿನ್. ಆಲಮಂಡಲ ಯರ್ರಯ್ಯದೇವ ಕೋಡ ಮಹಾರಾಜು (ಮಹಾಪ್ರಧಾನ ಸಾಳುವ ತಿಮ್ಮರಸಯ್ಯ ನಾಯಂಕತನವನ್ನು ನೀಡಿದ್ದು)**
ವಿನುಕೊಂಡ ಸೀಮೆ, ಕುಂದುರ್ತಿ (ಕುಂದ್ರೂರ್ರು), ಕ್ರಿ.ಶ. 1522 ಮೇ, ಕುಂದುವರ್ತಿಯ ಪುರುಶೋತ್ತಮ ದೇವರಿಗೆ ಭೂದಾನ ನೀಡಿದ್ದಾನೆ.
I.V.J., Vol. IV, ನಂ. 139, ICHR, Bangalore, 2009, ಗುಂಟೂರು ಜಿಲ್ಲೆ, ಆಂಧ್ರಪ್ರದೇಶ.

36. **ಕೊಂಡಮರಸ ರಾಯಸದವನು ಬಿನ್ ....**
ದಿಂಡುಗಲ್ ಸೀಮೆ, ರಾಜರಾಜಪುರ ಚಾವಡಿ, ಕ್ರಿ.ಶ. 1522ರಲ್ಲಿ ರಾಜನಿಗೆ ಪುಣ್ಯವಾಗಲಿ ಎಂದು ತನ್ನ ಪ್ರಾಂತ್ಯದ ಎರಡು ಗ್ರಾಮಗಳನ್ನು ಸೇರಿಸಿ ಅಗ್ರಹಾರ ಮಾಡಿದ್ದಾನೆ.
S.I.I., V, p. 292, ಮಧುರೈ ಜಿಲ್ಲೆ, ತಮಿಳುನಾಡು

37. **ವೈರವನೀ ವಸೈಯಾಲೈಯಾ ದೇವರ್ ಬಿನ್. ಪಲ್ಲಿಕೊಂಡಪೆರುಮಾಳ್ ವಿಸೈಯಾಲೈಯಾ ದೇವರ್**
ಇಳೈಯಾತ್ತಕುಡಿ ಸೀಮೆ, ಕ್ರಿ.ಶ. 1522, ತಿರುವಿದ್ಯೆಯಾತಂ ಎಂಬ ಗ್ರಾಮವನ್ನು ದಾನ ಮಾಡಿದ್ದಾನೆ.
A.R.Ep. 1926-27, ರಾಮನಾಥಪುರಂ ಜಿಲ್ಲೆ, ತಮಿಳುನಾಡು.

38. **ಪ್ರಧಾನ ಬಸವಪ್ಪಯ್ಯ ಬಿನ್. ....**
ಕೋಟೆಸೀಮೆ (ಹೆಚ್.ಡಿ.ಕೋಟೆ), ಬಯಿನಾಡ ಸ್ತಳದ ಸೋಗಹಳ್ಳಿ, ಕ್ರಿ.ಶ. 1522 ಸೆಪ್ಟಂಬರ್, ಕೃಷ್ಣದೇವರಾಯನಿಗೆ ಧರ್ಮವಾಗಲಿ ಎಂದು ಮಟಕೇರಿಯ ರಾಮೇಶ್ವರ ಲಿಂಗಕ್ಕೆ ಸರ್ವಮಾನ್ಯ ಗ್ರಾಮ ನೀಡಿದ್ದಾನೆ.
ಕೃ.ಶಾ.ಸಂ. 1, ಶಾ.ಸಂ. 159, ಮೈಸೂರು ಜಿಲ್ಲೆ, ಕರ್ನಾಟಕ.

39. ಮಹಾನಾಯಕಾಚಾರ್ಯ ನರಸನಾಯಕ ಬಿನ್. ಕುಂದುರ್ಪಿ ತಿಮ್ಮನಾಯಕ
ಕುಂದುರ್ಪಿಸೀಮೆ, ಕುಗಾರಿನಾಡು ಸ್ಥಳದ ಬೈರಸಮುದ್ರ, ಕ್ರಿ.ಶ. 1522 ಡಿಸೆಂಬರ್, ವೇಮಲಪರ್ತಿಯ ತಿರುವೆಂಗಳನಾಥ ದೇವರಿಗೆ ಭೂದಾನ ನೀಡಿದ್ದಾನೆ.
I.V.J., Vol. IV, ನಂ. 141, ICHR, Bangalore, 2009, ಅನಂತಪುರ ಜಿಲ್ಲೆ, ಆಂಧ್ರಪ್ರದೇಶ.

40. ಮಹಾನಾಯಕಾಚಾರ್ಯ ಕೊಮಾರ ವೊಬಿಲ್ನಾಯಿನಿ ತಿಪ್ಪನಾಯಕ ಬಿನ್. ....
ಬಸವಕೊಂಡ ಸೀಮೆ, ಮದನಪಲ್ಲಿ, ಕ್ರಿ.ಶ. 1523 ಆಗಸ್ಟ್, ಬೊಮ್ಮರೆಡ್ಡಿ ತಿಪ್ಪಣ್ಣನಿಗೆ ರಾಯಸವಾಗಿ ದಾನ ಮಾಡಿದ್ದಾನೆ.
I.V.J., Vol. IV, ನಂ. 142, ICHR, Bangalore, 2009, ಚಿತ್ತೂರು ಜಿಲ್ಲೆ, ಆಂಧ್ರಪ್ರದೇಶ.

41. ಕೊಮನಾಯಕ ಬಿನ್. ....
ಕುಕ್ಕಲನಾಡು, ದಾಸನಪುರ, ಕ್ರಿ.ಶ. 1523 ಆಗಸ್ಟ್, ತಿರುವೆಂಡನಾಥ ದೇವರಿಗೆ ಭೂದಾನ ನೀಡಿದ್ದಾನೆ.
ಕೃ.ಶಾ.ಸಂ. 1, ಶಾ.ಸಂ. 170, ಬೆಂಗಳೂರು ಜಿಲ್ಲೆ, ಕರ್ನಾಟಕ.

42. ಚಾಮನಾಯಕ ಬಿನ್. ಮಾಣಿಕ್ಕ–ನಿ, (ತ್ರಿಯಂಬಕ ಉದ್ದೈಯಾರ್ ಏಜೆಂಟ್)
ಮುಳುವಯಿಯಲ್ಲಿನ ಕುನ್ನರತ್ತೂರ್ ಸೀಮೆ, ಉಳವುಕ್ಕುಡಿ ಮತ್ತು ಕಾಸಾಯಿಕುಡಿ, ಕ್ರಿ.ಶ. 1523(?), ದೇವಾಲಯಕ್ಕಾಗಿ ದಾನ
A.R.Ep. 1915-16, ಸೇಲಂ ಜಿಲ್ಲೆ, ತಮಿಳುನಾಡು, p. 140.

43. ತ್ರಿಯಂಬಕ ಉದ್ದೈಯಾರ್ ಬಿನ್. ತಿಪ್ಪರಸ ಉದ್ದೈಯಾರ್
ಮುಳುವಾಯಿ ಸೀಮೆ, ಕ್ರಿ.ಶ. 1523.
A.R.Ep. 1915-16, ಸೇಲಂ ಜಿಲ್ಲೆ, ತಮಿಳುನಾಡು, p. 140.

44. ಬಸಪ್ಪನಾಯಕ ಬಿನ್. ಊಳಿಗದ ಜಕ್ಕಣ್ಣನಾಯಕ
ವಸ್ತಾರೆ ಸೀಮೆ, ದೇವಣಿಗೆ ನಾಡೊಳಗಣ ನಾರಾಯಣಪುರ, ಹಲ್ಮಿಡಿ ಗ್ರಾಮ, ಬೇಲೂರು ತಳವಾರಿಕೆ ವಿಶೇಷಾದಾಯ, ಕ್ರಿ.ಶ. 1523 ಜುಲೈ, ಬೇಲೂರಿನ ಚೆನ್ನಿಗರಾಯನ ಶ್ರೀಪಾದಕ್ಕೆ ಸಮರ್ಪಣೆ.
ಕೃ.ಶಾ.ಸಂ. 1, ಶಾ.ಸಂ. 181, ಹಾಸನ ಜಿಲ್ಲೆ, ಕರ್ನಾಟಕ.

45. ವೀಸಣ್ಣರಾಉತ ಬಿನ್. ಮುರಾರಿ ರಾವುತ
ಉಚ್ಚಂಗಿ ವೇಂಠೆಯ ಕವಿಳಿಚೆರ್ವಿನ ಸೀಮೆ, ಚಟ್ಟನಹಳ್ಳಿ, ಕ್ರಿ.ಶ. 1524 ನವೆಂಬರ್, ಕೃಷ್ಣದೇವರಾಯನಿಗೆ ಪುಣ್ಯವಾಗಲಿ ಎಂದು ದೇವರ ಭಟ್ಟರ ಮಕ್ಕಳು ನಾರಾಯಣ ಭಟ್ಟರಿಗೆ ಭೂದಾನ ಮಾಡಿದ್ದಾನೆ.
ಕೃ.ಶಾ.ಸಂ. 1, ಶಾ.ಸಂ. 184, ದಾವಣಗೆರೆ ಜಿಲ್ಲೆ, ಕರ್ನಾಟಕ.

46. ಆದಂಬಾರ್–ಕಂದನ್–ಪಾಪೈಯಾನ್ (ಸ್ವಾಮಿ ವೀರನರಸಿಂಗರಾಯನಿಂದ ನಾಯಕತನ ಪಡೆದಿದ್ದಾನೆ)
ಅಮರಸಿರ್ಮೆ, ಚಟ್ಟನಹಳ್ಳಿ, ಕ್ರಿ.ಶ. 1524ರಲ್ಲಿ, ಸ್ಥಳೀಯ ದೇವಾಲಯಕ್ಕೆ ದಾನ.
A Concordance of Nayakas - Karoshima, ಪುದುಕೋಟೆ ಜಿಲ್ಲೆ, ತಮಿಳುನಾಡು, p. 93 ಮತ್ತು 76.

47. **ಅಬ್ಬರಾವು ಅಯ್ಯನವರು ಬಿನ್. .... (ಕುದುರೆಯ ನಾಯಕತನ)**
ರವುಡಕುಂದಿನ ಸೀಮೆ, ಸಾಲಿಗುಂದಿ, ಕ್ರಿ.ಶ. 1525 ಮೇ, ರವುಡಕುಂದಿಯ ತಿರುಮಲದೇವರಿಗೆ ಅಬ್ಬರಾವು ಅಯ್ಯನಿಗೆ ಪುಣ್ಯವಾಗಲಿ ಎಂದು ಭೂದಾನ ನೀಡಿದ್ದಾನೆ.
ಕೃ.ಶಾ.ಸಂ. 1, ಶಾ.ಸಂ. 190, ರಾಯಚೂರು ಜಿಲ್ಲೆ, ಕರ್ನಾಟಕ.

48. **ವಿಠಲರಾವುತ ಬಿನ್. ....**
ತೇಕಲಸೀಮೆ, ಉಳ್ಳೆಯರ ಹಳ್ಳಿ ಮತ್ತು ಕೋಳಾಳದ ತಂಬಿಗೆ, ಕ್ರಿ.ಶ. 1525 ಆಗಸ್ಟ್, ಭಟವೃತ್ತಿಯಾಗಿ ದಾನ ಮಾಡಲಾಗಿದೆ.
ಕೃ.ಶಾ.ಸಂ. 1, ಶಾ.ಸಂ. 192, ಕೋಲಾರ ಜಿಲ್ಲೆ, ಕರ್ನಾಟಕ.

49. **ದೇವರಸಯ್ಯ ಬಿನ್. ....**
ಗಂಡಿಕೋಟ ಸೀಮೆಕುಂ, ಸಕಲಿ ಸೀಮೆ, ಕತ್ರಕಂದಲ, ಕ್ರಿ.ಶ. 1525 ಡಿಸೆಂಬರ್, ಚನ್ನಕೇಶ್ವರ ದೇವರಿಗೆ, ಕೃಷ್ಣದೇವರಾಯನಿಗೆ ಮತ್ತು ದೇವರಸಯ್ಯನಿಗೆ ಪುಣ್ಯವಾಗಲಿ ಎಂದು ಭೂದಾನ ನೀಡಲಾಗಿದೆ.
I.V.J., Vol. IV, ನಂ. 147, ಕಡಪಾ ಜಿಲ್ಲೆ, ಆಂಧ್ರಪ್ರದೇಶ.

50. **ತಿರುಮಲೈನಾಯಕ ಬಿನ್. ....**
ಪುವಿರುಂಡವಳ್ಳಿ, ಕ್ರಿ.ಶ. 1525ರಲ್ಲಿ ಬಾಳಯ ನಾಯಕನಿಗೆ ಭೂದತ್ತಿ ನೀಡಿದ್ದಾನೆ.
A.R.Ep. 1938-39, ಚಿಂಗಲ್ ಪೇಟೆ, ತಮಿಳುನಾಡು, p. 300 (363).

51. **ದೇಮರಸಯ್ಯ ಬಿನ್. ......**
ಗಂಡಿಕೋಟ ಸೀಮೆ, ಪೊರುಮಾಮಿಲ್ಲ, ಕ್ರಿ.ಶ. 1526 ಮೇ, ಪಾರುಪತ್ಯಗಾರ ರೇವೂರಿವೆಂಗಳಯ್ಯನು ಪೊರುಮಾಮಿಲ್ಲದ ಲಕ್ಷ್ಮಿಕಾಂತ ದೇವರಿಗೆ ಭೂದಾನ ನೀಡಿದ್ದಾನೆ.
I.V.J., Vol. IV, ನಂ. 150, ಕಡಪಾ ಜಿಲ್ಲೆ, ಆಂಧ್ರಪ್ರದೇಶ.

52. **ವೈರವನೀ ವಿಸ್ಸೈಯಾಲೈದೇವರ್ ಬಿನ್. ಪೆಲ್ಲಿಕೊಂಡ ಪೆರುಮಾಳ್ ವಿಸ್ಸೈಯಾಲೈದೇವರ್**
ಕಳ್ವಾಸೆಲ್ ನಾಡುವಿನ ಇಳೈಯಾತ್ತಕುಡಿ ಸೀಮೆ, ಕ್ರಿ.ಶ. 1526ರಲ್ಲಿ, ಅಗ್ರಹಾರ ಸ್ಥಾಪನೆ ಮಾಡಿದ್ದಾನೆ.
A.R.Ep. 1926-27, ರಾಮನಾಥಪುರ ಜಿಲ್ಲೆ, ತಮಿಳುನಾಡು, p. 14.

53. **ರಂಗನಾಥ ರಾವುತ ಬಿನ್. ವಿಶ್ವನಾಥ ರಾವುತ**
ಜಗಲೂರು ಸೀಮೆ, ನಿಬುಗೂರು, ಕ್ರಿ.ಶ. 1527 ಮಾರ್ಚ್, ಕೃಷ್ಣದೇವರಾಯನಿಗೆ ಧರ್ಮವಾಗಬೇಕೆಂದು ಬ್ರಾಹ್ಮಣರ ಭೋಜನಕ್ಕೆ ಮತ್ತು ಅನೇಕ ಧರ್ಮದವರಿಗೆ ಛತ್ರ ನಡೆಸಲು ಹನತೊರೆಯ ತೀರ್ಥದ ಕಲ್ಲಿನಾಥ ದೇವರ ಸನ್ನಿಧಿಯಲ್ಲಿ ನಿಬುಗೂರು ಗ್ರಾಮವನ್ನು ದಾನ ಮಾಡಿದ್ದಾನೆ.
ಕೃ.ಶಾ.ಸಂ. 1, ಶಾ.ಸಂ. 211, ದಾವಣಗೆರೆ ಜಿಲ್ಲೆ, ಕರ್ನಾಟಕ.

54. **ಚಿನಪೆದ್ದಿನಾಯನಿಂಗಾರು ಬಿನ್. ಬೂದಾರಂಪೆದ್ದಿನಾಯಿನಿಂಗಾರು**
ಆಲಂಪುರ ಸೀಮೆ, ಪೆನುಪಲ್ಲಿ, ಕ್ರಿ.ಶ. 1527 ಮಾರ್ಚ್, ಆಲಂಪುರದ 9 ದೇವರಿಗೆ ದಾನ ಮಾಡಲಾಗಿದೆ.
I.V.J., Vol. IV, ನಂ. 152, ಮೆಹಬೂಬ್ ನಗರ ಜಿಲ್ಲೆ, ಆಂಧ್ರಪ್ರದೇಶ.

55. ಪೆದ್ದಿನಾಯಿಕ ಬಿನ್. ಭಂಡಾರದ ಪಿದಿನಾಯಕ

ಅಮರನಾಯಕತನಕ್ಕೆ ಆಲಂಪುರಿ ಸೀಮೆಯೊಳಗಣ ಗೋಕುಲಪಾಡ ಗ್ರಾಮ, ಕ್ರಿ.ಶ. 1527 ಮಾರ್ಚ್, ಕೃಷ್ಣರಾಯನಿಗೆ ಪುಣ್ಯವಾಗಲಿ ಎಂದು ಚೆಂನಿಪಾಡು ಚನ್ನಕೇಶ್ವರ ದೇವರಿಗೆ ಭಂಡಾರದ ಪೆದ್ದಾಪುರ (ಗೋಕುಲಪಾಡು) ಗ್ರಾಮವನ್ನು ದಾನ ಮಾಡಿದ್ದಾನೆ.

ಕೃ.ಶಾ.ಸಂ. 1, ಶಾ.ಸಂ. 343, ಮೆಹಬೂಬ್ ನಗರ ಜಿಲ್ಲೆ, ಆಂಧ್ರಪ್ರದೇಶ.

56. ಸುಂಕಣ್ಣನಾಯಕ ಬಿನ್. ದಾಡಿನಾಯಕ

ಅಮರಕ್ಕೆ ಪಾಲಿಸಿದ ಆದವಾನಿಯ ದುರ್ಗದೊಳಗಣ ಕೆರೆಬೆಳುಗಲ್ಲು, ಕ್ರಿ.ಶ. 1527 ಜೂನ್, ಕೃಷ್ಣದೇವರಾಯನಿಗೆ ಮತ್ತು ದಾಡಿನಾಯಕನಿಗೆ ಪುಣ್ಯವಾಗಲಿ ಎಂದು ಬೆಳಗಲ್ಲು ವೀರಭದ್ರದೇವರಿಗೆ ಭೂದಾನ ಮಾಡಿದ್ದಾನೆ.

ಕೃ.ಶಾ.ಸಂ. 1, ಶಾ.ಸಂ. 344, ಪು. 646, ಕರ್ನೂಲು ಜಿಲ್ಲೆ, ಆಂಧ್ರಪ್ರದೇಶ.

57. ದೇಮರಸಯ್ಯ (ಅವಸರದ) ಬಿನ್. ....

ಉಮ್ಮತ್ತೂರು ಸೀಮೆ, ತಗಡೂರು ಸ್ತಳದ ಹೆಗ್ಗೋಠಾರ, ಕ್ರಿ.ಶ. 1527 ಡಿಸೆಂಬರ್, ಕೃಷ್ಣದೇವರಾಯನ ಆದೇಶದಂತೆ ಬಮ್ಮಾಪುರದ ಬಾಲಕೃಷ್ಣದೇವರ ಸೇವೆಗೆ ಪುರಮಾರ್ಗ ಸರ್ವಮಾನ್ಯ ದತ್ತಿ ನೀಡಿದ್ದಾನೆ.

ಕೃ.ಶಾ.ಸಂ. 1, ಶಾ.ಸಂ. 233, ಚಾಮರಾಜನಗರ ಜಿಲ್ಲೆ, ಕರ್ನಾಟಕ.

58. ಕೃಷ್ಣರಾಯನಾಯಕ ಬಿನ್. ಆಹೋಬಲ ದೇವಗಳು

ಶ್ರೀರಂಗಪಟ್ಟಣದ ಸೀಮೆ, ಕುರುವಂಕ ನಾಡ ಬೀರಿಸೆಟ್ಟಿಹಳ್ಳಿ ಕ್ರಿ.ಶ. 1528 ಜನವರಿ, ಕೃಷ್ಣದೇವರಾಯನಿಗೆ ಪುಣ್ಯವಾಗಲಿ ಎಂದು ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವರಿಗೆ ಅತಿರಸ ನೈವೇದ್ಯಕ್ಕೆ ಕೃಷ್ಣದೇವರಾಯನ ಅಪ್ಪಣೆ ಪಡೆದು ದಾನ ನೀಡಿದ್ದಾನೆ.

ಕೃ.ಶಾ.ಸಂ. 1, ಶಾ.ಸಂ. 236, ಮಂಡ್ಯ ಜಿಲ್ಲೆ, ಕರ್ನಾಟಕ.

59. ಕೃಷ್ಣರಾಯನಾಯಕ ಬಿನ್. ಅಹೋಬಲ ದೇವಯ್ಯ

ಶ್ರೀರಂಗಪಟ್ಟಣ ಮತ್ತು ಸಿಂಧಗಟ್ಟದ ಸೀಮೆ ಕಾಮಿನಾಯ್ಕನಹಳ್ಳಿ ಗೊಲ್ಲರಚಟ್ಟನಹಳ್ಳಿ, ಕ್ರಿ.ಶ. 1528 ಜನವರಿ ಕೃಷ್ಣದೇವರಾಯರಿಗೆ ಪುಣ್ಯವಾಗಲಿ ಎಂದು ಅವನ ಅಪ್ಪಣೆ ಪಡೆದುಕೊಂಡು ಮೇಲಿನಕೋಟೆ ಚಲುವನಾರಾಯಣನಿಗೆ ಎಲ್ಲ ಮೂಲದಿಂದ 254 ವರಹ ದಾನ ನೀಡಿದ್ದಾನೆ.

ಕೃ.ಶಾ.ಸಂ. 1, ಶಾ.ಸಂ. 237, ಮಂಡ್ಯ ಜಿಲ್ಲೆ, ಕರ್ನಾಟಕ.

60. ಮಹಾಮಂಡಲೇಶ್ವರ ಬೋಗಯ್ಯದೇವ ಮಹಾ ಅರಸು ಬಿನ್. ತಿಂಮರಾಜ ಚೆಂಮೇಟಿ

ಶ್ರೀರಂಗಪಟ್ಟಣ ಸೀಮೆ, ಗುಮ್ಮನವೃತ್ತಿ ಸ್ಥಳದ ದೇವಪುರಿ, ಕ್ರಿ.ಶ. 1528 ಜೂನ್, ದೇವಪುರಿಗೆ ನಾಗಲಾಪುರ ಎಂದು ಹೆಸರಿಟ್ಟು ಶ್ರೀರಂಗನಾಯಕಿ ದೇವರ ಸೇವೆಗೆ ಆ ಗ್ರಾಮದ ಆದಾಯ 90 ವರಹವನ್ನು ದಾನ ಮಾಡಿದ್ದಾನೆ.

ಕೃ.ಶಾ.ಸಂ. 1, ಶಾ.ಸಂ. 249, ಮಂಡ್ಯ ಜಿಲ್ಲೆ, ಕರ್ನಾಟಕ.

61. ಆದಿಯಪ್ಪನಾಯಕ ಬಿನ್. ....

ಮಲೆಯಬೆನ್ನೂರು ಗ್ರಾಮ, ಮಾಲೆಯ ಬೆನ್ನೂರು, ಕ್ರಿ.ಶ. 1528 ಏಪ್ರಿಲ್, ಗುಡಿಯ ಮಂಟಪದ ಜೀರ್ಣೋದ್ಧಾರಕ್ಕೆ ಕಬ್ಬಿನ ಸುಂಕ ಮತ್ತು ಇತರೆ ಸುಂಕ ದಾನ ನೀಡಿದ್ದಾನೆ.

ಕೃ.ಶಾ.ಸಂ. 1, ಶಾ.ಸಂ. 244, ದಾವಣಗೆರೆ ಜಿಲ್ಲೆ, ಕರ್ನಾಟಕ.

62. **ರಾಯಸಂ ಅಯ್ಯಪ್ಪನರಸು ಬಿನ್. ಕೊಂಡಮರಸಯ್ಯ**
ಗಂಡಿಕೋಟೆ ಸೀಮೆ, ಕ್ರಿ.ಶ. 1528 ನವೆಂಬರ್, ಕೃಷ್ಣದೇವರಾಯ ಮತ್ತು ಅಯ್ಯಪ್ಪರಸುವಿಗೆ ಪುಣ್ಯವಾಗಲಿ ಎಂದು ಪಂಡಿಲಪಳ್ಳಿ ಅಮರನಾಯಕನಾದ ರಂಗಪ್ಪ ನಾಯಕನು ಕೇಶವರಾಯ ದೇವರಿಗೆ (ಪಂಡಿಲಪಟ್ಲ) ಸೋಲು, ನಾದಸ್ವರ, ಹೂದೋಟಕ್ಕಾಗಿ ಭೂದಾನ ನೀಡಿದ್ದಾನೆ.
I.V.J., Vol. IV, ನಂ. 159, ಕಡಪಾ ಜಿಲ್ಲೆ, ಆಂಧ್ರಪ್ರದೇಶ.

63. **ವಾಕಿಟಿ ಪೆದ್ದನಾಯಿನಿಗಾರು ಬಿನ್. ಬೊಕ್ಕಸದ ಪೆದ್ದನಾಯಿನಿಗಾರು**
ಪಾಣೆಂ ಸೀಮೆ, ಪಾಣೆಂ, ಕ್ರಿ.ಶ. 1529 ಏಪ್ರಿಲ್, ಪಾಣ್ಯದ ಪಾಣಿಕೇಶ್ವರ ದೇವರಿಗೆ ಮತ್ತು ಲಿಂಗಾಪುರ ಮತ್ತು ಬೂಪಾಲಿನಿಪಾಡು ಎಂಬ ಅಗ್ರಹಾರಗಳಿಗೆ ದಾನ ನೀಡಿದ್ದಾನೆ.
I.V.J., Vol. IV, ನಂ. 160, ಕರ್ನೂಲು ಜಿಲ್ಲೆ, ಆಂಧ್ರಪ್ರದೇಶ.

64. **ರಾಯಸದ ಅಯ್ಯಪ್ಪರಸು ಬಿನ್. ....**
ಗಂಡಿಕೋಟೆ ಸೀಮೆ, ಕ್ರಿ.ಶ. 1529 ಏಪ್ರಿಲ್.
I.V.J., Vol. IV, ನಂ. 162, ಕಡಪಾ ಜಿಲ್ಲೆ, ಆಂಧ್ರಪ್ರದೇಶ.

65. **ಯಲ್ಲಮ್ಮರಸುವಯ್ಯ (ಸಿದ್ದಾವಟಂ) (ನಾಯಕತನವನ್ನು ಅಯ್ಯಪ್ಪರುಸುವಯ್ಯನಿಂದ ಪಡೆದನು) ಅಯ್ಯಪ್ಪರಸನ ಕಾರ್ಯಕೆಕರ್ತ**
ಸಕಲಿ ಸೀಮೆ, ನುವ್ವುಸೂಲಪಾಡು, ಕ್ರಿ.ಶ. 1529 ಏಪ್ರಿಲ್, ಕತ್ರೆಗಂಡ್ಲದ ಚನ್ನಕೇಶವ ದೇವರಿಗೆ ದಾನ ನೀಡಿದ್ದಾನೆ. ಅಯ್ಯಪ್ಪರಸುವಿನ ತಾಯಿ ಅಕ್ಕಮ್ಮಗೆ ಪುಣ್ಯವಾಗಲಿ ಎಂದು ನೀಡಿದ ಭೂದಾನವಾಗಿದೆ.
I.V.J., Vol. IV, ನಂ. 162, ಕಡಪಾ ಜಿಲ್ಲೆ, ಆಂಧ್ರಪ್ರದೇಶ.

66. **ದೀಕ್ಷಿತಯ್ಯ ಬಿನ್ ಅಣಾಜಿ ಅಯ್ಯ**
ಅಮರನಾಯಕತನಕ್ಕೆ ಪಾಲಿಸಿದ ಆಲಂಪುರಿ ಸೀಮೆಗೆ ಸಲ್ಲುವ ಪೊಸಲಪಾಡು ಗ್ರಾಮ, ಕ್ರಿ.ಶ. 1529 ಏಪ್ರಿಲ್, ಕೃಷ್ಣದೇವರಾಯ ಮತ್ತು ತಿಮ್ಮರಸಯ್ಯನವರಿಗೆ ಪುಣ್ಯವಾಗಲಿ ಎಂದು ಚೆಂನಿಪಾಡು ಚನ್ನಕೇಶ್ವರ ದೇವರಿಗೆ ಪೊನುಪಾಡು ಗ್ರಾಮ ದಾನ ಮಾಡಿದ್ದಾನೆ.
ಕೃ.ಶಾ.ಸಂ. 1, ಶಾ.ಸಂ. 349, ಮೆಹಬೂಬ್ ನಗರ ಜಿಲ್ಲೆ, ಆಂಧ್ರಪ್ರದೇಶ.

67. **ರಾಯಸಂ ಅಯ್ಯಪ್ಪ ಬಿನ್. ವೇಮರಸುವಯ್ಯ ಬಿನ್. ರಾಯಸಂ ತಿಮ್ಮರಸುವಯ್ಯ**
ಕೊಂಡವೀಟಿ ರಾಜ್ಯದ ಅಡ್ಡಂಕಿ ಸೀಮೆ, ಪೊಲ್ಲವರಂ, ಕ್ರಿ.ಶ. 1529 ಜುಲೈ, ಕೃಷ್ಣದೇವರಾಯನಿಗೆ ಪುಣ್ಯವಾಗಲಿ ಎಂದು ತಿರುವೆಂಕಟಾದ್ರಿನಾಥನಿಗೆ ದಾನ ಮಾಡಿದ್ದಾನೆ.
I.V.J., Vol. IV, ನಂ. 163, ಪ್ರಕಾಶಂ ಜಿಲ್ಲೆ, ಆಂಧ್ರಪ್ರದೇಶ.

68. **ಅವರಸರಂ ಚಂದ್ರಶೇಖರಯ್ಯ ಬಿನ್. ....**
ಮೊಸಲಿ ಮಡಗು ಸೀಮೆ (ಶ್ರೀಶೈಲ ರಾಜ್ಯ), ಕ್ರಿ.ಶ. 1530 ಮಾರ್ಚ್.
I.V.J., Vol. IV, ನಂ. 165, ಕರ್ನೂಲು ಜಿಲ್ಲೆ, ಆಂಧ್ರಪ್ರದೇಶ.

16

ಮಂಡ್ಯ ಜಿಲ್ಲೆಯ ವಿಜಯನಗರ ಕಾಲದ ಶಾಸನೋಕ್ತ ಸಾಮಂತರು

ಲಿಂಗರಾಜು

ಪೀಠಿಕೆ

ಇತ್ತೀಚಿನ ದಿನಗಳಲ್ಲಿ ಸ್ಥಳೀಯ ಹಾಗೂ ಪ್ರಾದೇಶಿಕ ನೆಲೆಯಲ್ಲಿ ಇತಿಹಾಸವನ್ನು ಆಮೂಲಾಗ್ರವಾಗಿ ಸಂಶೋಧನೆಗೆ ಒಳಪಡಿಸಬೇಕೆನ್ನುವ ಪ್ರತಿಪಾದನೆಯನ್ನು ನಾವು ಎಲ್ಲೆಡೆ ಕೇಳುತ್ತಿರುವುದರಿಂದ, ಸಾಮಂತ ಅರಸು ಮನೆತನಗಳ ಇತಿಹಾಸ ರಚನೆಯ ಬಗ್ಗೆ ಇತಿಹಾಸಕಾರರು ಗಮನಹರಿಸುತ್ತಿರುವುದು ಒಂದು ಉತ್ತಮ ಬೆಳವಣಿಗೆಯಾಗಿದೆ. ಸಾಮ್ರಾಟರು ಹಾಗೂ ಸಾಮಾನ್ಯ ಪ್ರಜೆಗಳ ನಡುವೆ ಸೇತುವೆಯಂತಿದ್ದ ಸಾಮಂತರು ಮಾಡಿರುವ ರಾಜಕೀಯ, ಹಾಗೂ ಸಾಂಸ್ಕೃತಿಕ ಸಾಧನೆಗಳನ್ನು ಅಧ್ಯಯನ ಮಾಡುವುದು ಸ್ಥಳೀಯ ಇತಿಹಾಸದ ದೃಷ್ಟಿಯಿಂದ ಅತ್ಯವಶ್ಯಕವಾಗಿರುವುದಲ್ಲದೆ, ಈ ಪ್ರಬಂಧದ ಮೂಲ ಉದ್ದೇಶವೂ ಆಗಿದೆ.

ಸಾಮಂತ ಪದದ ಅರ್ಥ ಮತ್ತು ಸ್ವರೂಪ: ಸಾಮಂತ ಕುಟುಂಬಗಳು ಒಂದು ನಿರ್ದಿಷ್ಟ ಭೂಪ್ರದೇಶದ ಮೇಲೆ ಆಡಳಿತ ನಿರ್ವಹಿಸಲು ಸ್ಥಳೀಯ ರಾಜಕೀಯ ಅನುಕೂಲತೆಗಾಗಿ ಮಾಡಿಕೊಂಡ ಒಂದು ಒಪ್ಪಂದವಾಗಿದೆ. ಸ್ಥಳೀಯ ಪ್ರಭಾವಿ ಜನಾಂಗವೊಂದು ನಿರ್ದಿಷ್ಟ ಭೂ ಪ್ರದೇಶವನ್ನು ವಂಶಪಾರಂಪರ್ಯವಾಗಿ ಆಳುತ್ತ ಅದಕ್ಕಾಗಿ ಹಲವು ತೆರಿಗೆಗಳನ್ನು ಅಥವಾ ಕಪ್ಪ ಕಾಣಿಕೆಗಳನ್ನು ಅಥವಾ ದತ್ತಿಯನ್ನು ಕೊಡುತ್ತ ನಡೆದು ಬಂದ ಒಂದು ವ್ಯವಸ್ಥೆ. ಈ ಪದ್ಧತಿಯು ಮೌರ್ಯರ ಕಾಲದ ಸರಿಸುಮಾರಿಗೆ ಭಾರತದಲ್ಲಿ ಅಸ್ತಿತ್ವಕ್ಕೆ ಬಂದಿತ್ತೆಂದು ತಿಳಿದುಬರುತ್ತದೆ.[1]

ಸಾಮಂತರು ಅಥವಾ ಸ್ಥಾನಿಕಪ್ರಭು ಎಂದರೆ ಒಂದು ನಿರ್ದಿಷ್ಟ ಪ್ರದೇಶದ ಆಡಳಿತಗಾರ ಎಂದು ಅರ್ಥೈಸಬಹುದು. ಇದು ಇಂಗ್ಲೀಷ್‌ನ ಲೋಕಲ್ ಚೀಫ್‌ಟನ್, ಫ್ಯೂಡಟರಿ, ಟ್ರಿಬುಟರಿ ಪ್ರಿನ್ಸ್ ಎಂಬ ಶಬ್ದಗಳಿಗೆ ಸಮಾನವಾದುದು. ಕನ್ನಡದಲ್ಲಿ ಬಳಕೆಯಿರುವ ಸ್ಥಾನಿಕ ಪ್ರಭು, ಪಾಳೆಯಗಾರ, ಮಾಂಡಲಿಕ ಎಂಬ ಪದಗಳೆಲ್ಲ ಸಾಮಂತ ಎಂಬುದಕ್ಕೆ ಪರ್ಯಾಯವಾದವು. ವಿಜಯನಗರ ಸಾಮ್ರಾಜ್ಯದಲ್ಲಿ ಸಾಮಂತ ಅರಸರು ಆಳುತ್ತಿದ್ದ ಅನೇಕ ಪ್ರದೇಶಗಳಿದ್ದವು. ಅವರು ಅರೆ-ಸ್ವತಂತ್ರ ಸ್ಥಾನಮಾನವನ್ನು ಪಡೆದಿದ್ದರು. ಅವರನ್ನು ಸಾಮಂತ, ನಾಯಕ, ದಂಡನಾಯಕ, ಮಂಡಲೇಶ್ವರ, ರಾಜಮಹಾರಾಜ, ಉಡೈಯರ್ ಮೊದಲಾದ ಹೆಸರುಗಳಿಂದ ಕರೆಯಲಾಗುತ್ತಿತ್ತು.[2]

ಸಾಮಂತರ ಆಡಳಿತಕ್ಕೆ ಒಳಪಟ್ಟ ಪ್ರದೇಶಕ್ಕೆ ಪಾಳೆಯಪಟ್ಟು, ನಾಡು, ಸಂಸ್ಥಾನ ಎಂಬ ಹಲವು ಹೆಸರುಗಳಿವೆ. ಸಾಮಂತ ಪ್ರಭುವಿಗೆ ಒಂದು ಪ್ರದೇಶ ವಿಕ್ರಮಾರ್ಜಿತವಾಗಿ ಅಥವಾ ವಂಶಪಾರಂಪರ್ಯವಾಗಿ ಕೂಡ ದೊರೆಯಬಹುದು.

ಪ್ರಬಲ ಸಾಮ್ರಾಟರು ಆಡಳಿತ ಸುಧಾರಣೆಯ ದೃಷ್ಟಿಯಿಂದ ತಮ್ಮ ವಿಸ್ತಾರವಾದ ರಾಜ್ಯವನ್ನು ಚಿಕ್ಕ-ಪುಟ್ಟ ಸಂಸ್ಥಾನಗಳನ್ನಾಗಿ ವಿಂಗಡಿಸಿ ಅವುಗಳಿಗೆ ಸ್ಥಳೀಯ ಪ್ರಭುವೊಬ್ಬನನ್ನು ನೇಮಿಸಿರುವ ನಿದರ್ಶನಗಳುಂಟು. ಇಂಥ ಸ್ಥಳೀಯ ಪ್ರಭುಗಳ ಪ್ರಮುಖ ಕರ್ತವ್ಯವೆಂದರೆ ತಮ್ಮ ಅಧೀನಕ್ಕೆ ಒಳಪಟ್ಟ ಪ್ರದೇಶಗಳಲ್ಲಿ ಪ್ರಜೆಗಳಿಂದ ಕಂದಾಯವನ್ನು ವಸೂಲಿಮಾಡಿ ತಮ್ಮ ಆಶ್ರಿತ ದೊರೆಗಳಿಗೆ ಕಪ್ಪಕಾಣಿಕೆಗಳನ್ನು ಸಲ್ಲಿಸುವುದು, ಶಾಂತಿಕಾಲದಲ್ಲಿ ಕಾನೂನು ಮತ್ತು ಶಿಸ್ತುಪಾಲನೆ, ಯುದ್ಧಕಾಲದಲ್ಲಿ ತಮ್ಮ ಸಾಮ್ರಾಟನಿಗೆ ಸೈನಿಕ ನೆರವು ನೀಡಿ ರಣರಂಗದಲ್ಲಿ ಹೋರಾಡುವುದಾಗಿದ್ದಿತು. ಇವರು ಪ್ರಜೆಗಳಿಗೆ ಸಮೀಪವರ್ತಿಗಳಾಗಿರುತ್ತಿದ್ದರಿಂದ ಪ್ರಜೆಗಳು ತಮ್ಮ ಕುಂದುಕೊರತೆಗಳನ್ನು ಅವರಲ್ಲಿ ಬಿನ್ನವಿಸಿಕೊಳ್ಳುತ್ತಿದ್ದರು. ಜನಸಾಮಾನ್ಯರಿಂದ ರಾಜನಿಗೆ ದೊರಕುವ ಪ್ರೀತಿ, ಅಭಿಮಾನ, ಗೌರವ, ಪ್ರಶಸ್ತಿಗಳೆಲ್ಲ, ಸ್ಥಾನಿಕ ಪ್ರಭುಗಳಿಗೂ ಲಭ್ಯವಾಗುತ್ತಿದ್ದವು. ಇವರು ತಮ್ಮ ಸೀಮಿತ ಪ್ರದೇಶಗಳಲ್ಲಿ ಸಾಮ್ರಾಟರಂತೆ ಆಳ್ವಿಕೆ ನಡೆಸುತ್ತಿದ್ದರು.[3]

ಈ ವ್ಯವಸ್ಥೆಯನ್ನೇ ವಿಜಯನಗರದರಸರ ಕಾಲದಲ್ಲಿ ನಾಯಕ ಅಥವಾ ನಾಯಂಕರ ವ್ಯವಸ್ಥೆಯೆಂದು ಕರೆಯಲಾಗಿದೆ. ಇಂತಹ ವ್ಯವಸ್ಥೆಯ ಮೂಲಕ ರಾಜನು ಒಬ್ಬ ನಾಯಕನಿಗೆ ಅಥವಾ ಪಾಳೆಯಗಾರನಿಗೆ ಸೈನಿಕ ಸೇವೆ ಸಲ್ಲಿಸಬೇಕೆಂಬ ಷರತ್ತಿನ ಮೇಲೆ ಭೂಮಿಯನ್ನು ಕೊಡುವ ಪದ್ಧತಿ ಅಸ್ತಿತ್ವಕ್ಕೆ ಬಂದಿತು. ಹೀಗೆ ಸಾಮಂತರ ಮೂಲಕ ಸಾಮ್ರಾಜ್ಯದ ಆಡಳಿತವನ್ನು ನಿರ್ವಹಿಸುವ ಪದ್ಧತಿಯು ನಾಯಂಕರ ಪದ್ಧತಿಯಾಗಿ ವಿಜಯನಗರದರಸರ ಕಾಲದಲ್ಲಿ ಬೆಳೆದುಬಂದಿತು. ರಾಜ ಮತ್ತು ನಾಯಕ ಇವರ ನಡುವಣ ಸಂಬಂಧವು ರಾಜ ಮತ್ತು ಅವನ ಸಾಮಂತನ ನಡುವಣ ಸಂಬಂಧವಾಗಿತ್ತು.[4] ವಿಜಯನಗರದರಸರ ಕಾಲದಲ್ಲಿ ಸಾಮಂತರ ಆಡಳಿತಕ್ಕೆ ಒಳಪಟ್ಟ ಪ್ರದೇಶಕ್ಕೆ ಪಾಳೆಯಪಟ್ಟು, ನಾಡು, ಸಂಸ್ಥಾನ ಮೊದಲಾದ ಹೆಸರುಗಳಿಂದ ಕರೆಯುವುದು ರೂಢಿಗೆ ಬಂದಿದ್ದು ವಿಜಯನಗರ ಸಾಮ್ರಾಜ್ಯದ ಪತನಾನಂತರವೂ ಇದೇ ವ್ಯವಸ್ಥೆ ಕೆಲವು ಶತಮಾನಗಳ ಕಾಲ ಮುಂದುವರಿಯಿತು. ಈ ವ್ಯವಸ್ಥೆಯನ್ನೆ ವಿಜಯನಗರ ಕಾಲದ ಊಳಿಗಮಾನ್ಯ ಸ್ವರೂಪದ ರಾಜ್ಯವ್ಯವಸ್ಥೆಯೆಂದು ಅನೇಕ ವಿದ್ವಾಂಸರು ವಿಶ್ಲೇಸಿದ್ದಾರೆ.

ಈ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲೆಯ ಶಾಸನೋಕ್ತ ವಿಜಯನಗರದರಸರ ಕಾಲದ ಸಾಮಂತರ ಬಗ್ಗೆ ತಿಳಿದುಕೊಳ್ಳುವ ಉದ್ದೇಶದಿಂದ ಈ ಪ್ರಬಂಧವನ್ನು ಸಿದ್ಧಪಡಿಸಿದ್ದೇನೆ. ವಿಜಯನಗರದರಸರ ಕಾಲದ ಮಂಡ್ಯ ಜಿಲ್ಲೆಯ ಶಾಸನಗಳ ಹಿನ್ನೆಲೆಯಲ್ಲಿ ಪ್ರಾದೇಶಿಕ ಆಡಳಿತದಲ್ಲಿ ಪ್ರಮುಖ ಪಾತ್ರ ವಹಿಸಿದ ಸಾಮಂತರು: (ಮಂಡ್ಯ ಜಿಲ್ಲೆ ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ಗಂಗರು, ಚೋಳರು, ಕಲ್ಯಾಣಿಚಾಳುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ಹಾಗೂ ಮೈಸೂರು ಒಡೆಯರ ಆಳ್ವಿಕೆಯಲ್ಲಿ ರಾಜಕೀಯವಾಗಿ ಗಮನಾರ್ಹ ಪಾತ್ರವಹಿಸಿದೆ).

ನಾಗಮಂಗಲದ ಪ್ರಭುಗಳು: ಮಂಡ್ಯ ಜಿಲ್ಲೆಯ ಸ್ಥಾನಿಕಪ್ರಭುಗಳಲ್ಲಿ ನಾಗಮಂಗಲದ ಪ್ರಭುಗಳು ಪ್ರಮುಖರಾಗಿದ್ದಾರೆ. ಮಂಡ್ಯ ಜಿಲ್ಲೆಯ ತಾಲ್ಲೂಕು ಕೇಂದ್ರವಾದ ನಾಗಮಂಗಲವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು 15-16ನೇ ಶತಮಾನದಲ್ಲಿ ಈ ಪ್ರದೇಶವನ್ನು ಆಳ್ವಿಕೆ ಮಾಡಿದ ಈ ಅರಸು ಮನೆತನವನ್ನು ಶಾಸನಗಳಲ್ಲಿ 'ಲೋಹಿತ ಕುಲ'ವೆಂದೂ, 'ನಾಗಮಂಗಲ ಪ್ರಭು'ಗಳೆಂದು ಕರೆಯಲಾಗಿದೆ.[5] ನಾಗಮಂಗಲ ಹೊಯ್ಸಳರ ಕಾಲದಲ್ಲಿ ಕಲ್ಕುಣಿನಾಡಿಗೆ ಸೇರಿತ್ತು. ವಿಷ್ಣುವರ್ಧನನ ಶಾಸನಗಳಲ್ಲಿ 'ಕಲ್ಕುಣಿನಾಡೊಳಗಣ ನಾಗಮಂಗಲ' ಎಂದು ಅದರ ಉಲ್ಲೇಖವಿರುತ್ತದೆ. ಹೊಯ್ಸಳರ ಕಾಲದಲ್ಲಿ ಅದು ಅಗ್ರಹಾರವಾಗಿದ್ದು, 'ವೀರಬಲ್ಲಾಳ ಚತುರ್ವೇದ ಭಟ್ಟರತ್ನಾಕರ' ಎಂಬ ಪರ್ಯಾಯ ಹೆಸರು ಪಡೆದಿತ್ತು. ವಿಜಯನಗರದರಸರ ನೆಚ್ಚಿನ ಭಂಟನಾಗಿದ್ದ ಸಿಂಗಣ್ಣವೊಡೆಯನೊಂದಿಗೆ ಈ ವಂಶದ ಆಡಳಿತ ಪ್ರಾರಂಭವಾಗುತ್ತದೆ. ಈತನ ಪತ್ನಿ ಸೀತಾಂಬಿಕೆ, ಇವರಿಗೆ ತಿಮ್ಮಣ್ಣ ಹಾಗೂ ದೇವರಾಜ ಎಂಬ ಇಬ್ಬರು ಮಕ್ಕಳಿದ್ದರು.

ಕ್ರಿ.ಶ. 1458ರ ಮೇಲುಕೋಟೆಯ ಶಾಸನದಲ್ಲಿ ತಿಮ್ಮಣ್ಣದಂಡನಾಯಕನು ವಿಜಯನಗರದರಸ ಮಲ್ಲಿಕಾರ್ಜುನನ (ಕ್ರಿ.ಶ. 1446–67) ಮಂತ್ರಿಯಾಗಿದ್ದು ಮಡದಿ ರಂಗಾಂಬಿಕೆಯೊಂದಿಗೆ ಮೇಲುಕೋಟೆಯ (ಯಾದವಗಿರಿ) ಜೀರ್ಣೋದ್ಧಾರ ಕಾರ್ಯ ಕೈಗೊಂಡು 'ಯಾದವಗಿರಿ ಜೀರ್ಣೋದ್ಧಾರಕ'ನೆಂಬ ಬಿರುದುಗಳಿಸಿದ್ದನೆಂದು ಉಲ್ಲೇಖಿಸಲಾಗಿದೆ.[6] ಅಲ್ಲದೆ ಶ್ರೀರಂಗಪಟ್ಟಣದ ಪಶ್ಚಿಮ ಭಾಗದಲ್ಲಿ ಕೋಟೆ–ಕಂದಕಗಳನ್ನು ಕಟ್ಟಿಸಿದನೆಂದು ತಿಳಿದುಬರುತ್ತದೆ. ಅಲ್ಲಿ ಕೋಟೆ ನಿರ್ಮಿಸಿದವರಲ್ಲಿ ಈತನೇ ಮೊದಲಿಗ. ಮೇಲುಕೋಟೆಯ ಇನ್ನೂ ನಾಲ್ಕಾರು ಶಾಸನಗಳಲ್ಲಿ ಮಂತ್ರಿ ತಿಮ್ಮಣ್ಣನ ಉಲ್ಲೇಖ ಕಂಡುಬರುತ್ತದೆ. ಇದೇ ದಂಡನಾಯಕನಿಗೆ ಸಂಬಂಧಿಸಿದ ನೆಲಮನೆಯ ಕ್ರಿಶ 1458ರ ಶಾಸನದಿಂದ ಅವನ ಮಡದಿ ರಂಗಾಂಬಿಕೆಯ ಕೋರಿಕೆಯಂತೆ ತಿಮ್ಮಣ್ಣನು ಮೇಲುಕೋಟೆಯ ಲಕ್ಷ್ಮೀದೇವಿಗೆ ಬಲ್ಲೇನಹಳ್ಳಿ ಹಾಗೂ ಯಲವದಹಳ್ಳಿಗಳನ್ನು ದತ್ತಿಬಿಟ್ಟ ಅಂಶವನ್ನು ದಾಖಲಿಸಿದೆ. ಈತನ ಕಾಲದಲ್ಲಿ ನಾಗಮಂಗಲ ರಾಜ್ಯದ ಆಡಳಿತ ಗುಂಡ್ಲುಪೇಟೆಯವರೆಗೆ ವಿಸ್ತರಿಸಿತ್ತು.

ಕ್ರಿ.ಶ. 1467ರ ಪಾಂಡವಪುರದ 19ನೇ ಶಾಸನದಂತೆ ತಿಮ್ಮಣ್ಣ ದಣ್ಣಾಯಕನ ಸೋದರನಾದ ದೇವರಾಜನು ಕಾವೇರಿ ನದಿಗೆ ಅಣೆಕಟ್ಟೆ ನಿರ್ಮಿಸಿ ಕಾಲುವೆಯ ಮೂಲಕ ಗ್ರಾಮಸ್ಥರ ಕೋರಿಕೆಯಂತೆ ಹರವು ಗ್ರಾಮಕ್ಕೆ ನೀರನ್ನು ಹರಿಸಲು ಕಾಲುವೆಯನ್ನು ತೋಡಿಸಿದನು.

ಕ್ರಿ.ಶ. 1467ರ ಪಾಂಡವಪುರದ ಸೀತಾಪುರದ ಶಾಸನದಂತೆ ದೇವರಾಜನು ಹೊಸಹಳ್ಳಿ ಗ್ರಾಮವನ್ನು ಅಲ್ಲಿನ ಪುಮುಖ ದೇವರಾದ ಶ್ರೀರಾಮಚಂದ್ರ ದೇವರಿಗೆ ಹಾಗೂ ಹಲವು ಮಹಾಜನರಿಗೆ ದಾನ ಮಾಡಿ, ಆ ಗ್ರಾಮಕ್ಕೆ ಅಲ್ಲಿನ ದೇವರ ಹಾಗೂ ತನ್ನ ತಾಯಿಯ ಹೆಸರಿನ ಮೇರೆಗೆ 'ಶ್ರೀರಾಮ ಸೀತಾಪುರ' ಅಗ್ರಹಾರವೆಂಬ ಹೆಸರಿಟ್ಟನೆಂದು ತಿಳಿಸುತ್ತದೆ.[7] ಈತನು ವಿಜಯನಗರ ಸಾಮ್ರಾಜ್ಯದ ರಾಜಪ್ರತಿನಿಧಿಯಾಗಿ ಮಂಗಳೂರಿನಲ್ಲಿ ಸೇವೆ ಸಲ್ಲಿಸುತ್ತಿದ್ದನೆಂದು ಬೇರೆ ಮೂಲಗಳಿಂದಲೂ ತಿಳಿದುಬರುತ್ತದೆ.[8]

ವಿಜಯನಗರ ಸಾಮ್ರಾಜ್ಯದ ಪತನಾನಂತರ 16ನೇ ಶತಮಾನದ ಅಂತ್ಯದಲ್ಲಿ ನಾಗಮಂಗಲ ರಾಜ್ಯ ಚನ್ನಪಟ್ಟಣದ ಜಗದೇವರಾಯನ ಆಳ್ವಿಕೆಗೊಳಪಟ್ಟಿತು. ಸು. 1630ರಲ್ಲಿ ಮೈಸೂರು ಅರಸರ ರಾಜ್ಯದಲ್ಲಿ ವಿಲೀನವಾಯಿತು.[9] ಚಿಕ್ಕನಾಯಕನಹಳ್ಳಿಯ 2ನೇ ಭೈರಪ್ಪನಾಯಕ ಚನ್ನಪಟ್ಟಣದ ಜಗದೇವರಾಯನ ಪ್ರಾಂತ್ಯದ ಭಾಗವಾಗಿದ್ದ ನಾಗಮಂಗಲ ತಾಲ್ಲೂಕಿನ ಬೆಳ್ಳೂರನ್ನು ವಶಪಡಿಸಿಕೊಂಡನು. ಆದರೆ ಮೈಸೂರಿನ 5ನೇ ಚಾಮರಾಜ ಒಡೆಯರ್ ಕಾಲದಲ್ಲಿ ಮೈಸೂರ್ ಸೈನ್ಯವು 1630ರಲ್ಲಿ ಚನ್ನಪಟ್ಟಣವನ್ನು, 1631ರಲ್ಲಿ ಚಿಕ್ಕನಾಯಕನಹಳ್ಳಿಯ ಮೇಲೆ ಆಕ್ರಮಣ ಮಾಡಿ ಬೆಳ್ಳೂರನ್ನು ವಶಪಡಿಸಿಕೊಂಡಿತು.[10]

ಉಮ್ಮತ್ತೂರಿನ ಪಾಳೆಯಗಾರರು ಅಥವಾ ಉಮ್ಮತ್ತೂರಿನ ಪ್ರಭುಗಳು: ವಿಜಯನಗರದರಸರ ಸಾಮಂತರಾಗಿದ್ದ ಉಮ್ಮತ್ತೂರಿನ ಪ್ರಭುಗಳು ಚಾಮರಾಜನಗರ ಜಿಲ್ಲೆಗೆ ಸೇರಿದ ಉಮ್ಮತ್ತೂರನ್ನು ಕೇಂದ್ರವಾಗಿಟ್ಟುಕೊಂಡು ಮೈಸೂರು, ಮಂಡ್ಯ ಹಾಗೂ ಕೊಯಮತ್ತೂರು ಜಿಲ್ಲೆಗಳ ಕೆಲವು ಭಾಗಗಳನ್ನು ಆಳಿದರು. ಉಮ್ಮತ್ತೂರಿನ ಪ್ರಭುಗಳಿಗೆ ಸಂಬಂಧಿಸಿದ ಐದು ಶಾಸನಗಳು ಮಳವಳ್ಳಿಯಲ್ಲಿ ದೊರೆತಿವೆ. ಇವುಗಳಲ್ಲಿ ಪ್ರಾಚೀನವಾದುದು ಮಳವಳ್ಳಿಯ 149ನೇ ಶಾಸನ. ಇದು ಸು.15–16ನೆಯ ಶತಮಾನಕ್ಕೆ ಸೇರಿದ್ದು ಇಮ್ಮಡಿ ರಾಯಒಡೆಯನಿಗೆ ಸಂಬಂಧಿಸಿದೆ. ಈತ ಬನ್ನಿಯೂರಿನ ಮಾಯಪ್ಪ ಎಂಬುವನಿಗೆ ಹೊಲಗನಹಳ್ಳಿ (ಈಗಿನ ಹೊಂಗನಹಳ್ಳಿ)ಯನ್ನು ದತ್ತಿ ಬಿಟ್ಟನು.

ಕ್ರಿ.ಶ 1506ರ ಮಳವಳ್ಳಿಯ 106ನೇ ಶಾಸನ ಉಮ್ಮತ್ತೂರಿನ ದೊರೆ ದೇಪಣ್ಣೊಡೆಯನ ಮಗ ಚಿಕ್ಕರಾಯನಿಗೆ ಸಂಬಂಧಿಸಿದ್ದಾಗಿದೆ. ಚಿಕ್ಕರಾಯನಿಗೆ 'ಪೆನುಗೊಂಡ ಚಕ್ರೇಶ್ವರ' ಎಂಬ ಪ್ರಶಸ್ತಿಯಿತ್ತು. ಮಲ್ಲರಾಜ ಎಂಬುದು ಈತನ

ಮತ್ತೊಂದು ಹೆಸರು. ಈತ ತೆರಕಣಾಂಬಿಯನ್ನು ಕೇಂದ್ರವನ್ನಾಗಿಟ್ಟುಕೊಂಡು ಆಡಳಿತ ನಡೆಸುತ್ತಿದ್ದಾಗ ತುಳುವ ಮನೆತನದ ನರಸಿಂಹ ಮಹಾರಾಯನು ವಿಜಯನಗರ ಸಾಮ್ರಾಜ್ಯದ ಅಧಿಪತಿಯಾಗಿದ್ದನು. ಚಿಕ್ಕರಾಯನು ತಲಕಾಡುನಾಡು, ದನಗೂರು, ಸ್ಥಳದ ಮೊನೆಮುಟ್ಟರಹಳ್ಳಿಯನ್ನು ಚಿಕ್ಕರಾಯಸಾಗರ ಎಂದು ತನ್ನ ಹೆಸರಿನಲ್ಲಿ ಪುನರ್‌ನಾಮಕರಣ ಮಾಡಿ ಆ ಊರನ್ನು ಅದರ ಸಕಲ ಆದಾಯಗಳೊಂದಿಗೆ ಆಲಿಕೊಂಡದ ನಾಗಭಟ್ಟ ಎಂಬ ವಿದ್ವಾಂಸನಿಗೆ ದತ್ತಿಬಿಟ್ಟಿದ್ದನು. ಮೊನೆಮುಟ್ಟರಹಳ್ಳಿಯನ್ನು ಈತ ಅಗ್ರಹಾರವಾಗಿ ಪರಿವರ್ತಿಸಿದ. ಪ್ರಸ್ತುತ ಶಾಸನದಲ್ಲಿ ದೆಪಣ್ಣೊಡೆಯನನ್ನು ಫೇಣಾಂಕ ಚಕ್ರೇಶ್ವರ, ಪೆಸಾಳಿ ಹನುಮ, ಅರಸಂಕ, ಸೊನೆಗಾರ, ಜವಾದಿ ಕೋಲಾಹಲ, ಗಜಬೇಂಟೇಕಾರ, ಸಂಗ್ರಾಮಭೀಮ ಎಂಬ ವಿಶೇಷಣಗಳಿಂದ ವರ್ಣಿಸಿದೆ. ಇವು ಉಮ್ಮತ್ತೂರಿನ ದೊರೆಗಳ ಪ್ರಸಿದ್ಧ ಬಿರುದುಗಳು.

ಕಿ.ಶ.1510ರ ಮಳವಳ್ಳಿಯ 130ನೇ ಶಾಸನದಿಂದ ಉಮ್ಮತ್ತೂರಿನ ದೊರೆ ವೀರಚಿಕ್ಕರಾಯ ಒಡೆಯನ ನಿರೂಪದಿಂದ ಸಾದಿಯಪವೊಡೆಯನು ದತ್ತಿ ನೀಡಿದ ಸಂಗತಿ ತಿಳಿದುಬರುತ್ತದೆ. ಸಾದಿಯಪವೊಡೆಯನು ಕುಂದೂರಿನ ಮೂಲಸ್ಥಾನದೇವರಿಗೆ ನೈವೇದ್ಯ ನಂದಾದೀಪಗಳಿಗೆಂದು ನೀಡಿದ ಕಾಣಿಕೆಯನ್ನು ಊರ ಗೌಡರು ಗುತ್ತಿಗೆಯಾಗಿ ಸ್ವೀಕರಿಸುತ್ತಾರೆ.

ಮಳವಳ್ಳಿಯ 131ನೆಯ ಶಾಸನದಲ್ಲೂ ಕೂಡ ಸಾದಿಯಪವೊಡೆಯನ ಉಲ್ಲೇಖವಿದೆ. ಈತ ಕುಂದೂರು ಮೂಲಸ್ಥಾನದೇವರಿಗೆ ದತ್ತಿಬಿಟ್ಟಿದ್ದನು. ಮಳವಳ್ಳಿಯ 130ನೆಯ ಶಾಸನೋಕ್ತ ಸಾದಿಯಪವೊಡೆಯ ಮತ್ತು ಪ್ರಸ್ತುತ ಶಾಸನದ ಸಾದಿಯಪವೊಡೆಯ ಏಕವ್ಯಕ್ತಿಗಳಾಗಿದ್ದಿರಬಹುದು. ಈತ ಉಮ್ಮತ್ತೂರಿನ ದೊರೆಗಳ ಆಶ್ರಯದಲ್ಲಿ ಕುಂದೂರನ್ನು ಪಾಲಿಸುತ್ತಿದ್ದನೆಂದು ತೋರುತ್ತದೆ.

ಕ್ರಿ.ಶ. 1511ರ ಮಳವಳ್ಳಿಯ 145ನೇ ಶಾಸನದಲ್ಲಿ ಉಮ್ಮತ್ತೂರಿನ ದೊರೆ ವೀರನಂಜರಾಜ ಒಡೆಯನ ಮಗ ಪಿರಿಯೊಡೆಯನಿಗೆ ಸಂಬಂಧಿಸಿದ ಉಮ್ಮತ್ತೂರು ರಾಜರ ಬಿರುದುಗಳು ದೊರೆಯುತ್ತವೆ. ಪಿರಿಯೊಡೆಯನು ಕಿರುಗಾವಲು ಸ್ಥಳದ ಕಲ್ಲುಕಣಿ ಗ್ರಾಮವನ್ನು ನಂಜುಂಡೇಶ್ವರ ದೇವರಿಗೆ ದತ್ತಿಬಿಟ್ಟಿದ್ದನು.

ಕ್ರಿ.ಶ. 1532ರ ಮಳವಳ್ಳಿಯ 86ನೇ ಶಾಸನದಿಂದ ವಿಜಯನಗರದ ಅಚ್ಯುತರಾಯನ ಕಾಲದಲ್ಲಿ ಉಮ್ಮತ್ತೂರಿನಲ್ಲಿ ವೀರಮಂಗಪ್ಪೊಡೆಯನ ಮಗ ಮಲ್ಲರಾಜ ಒಡೆಯನು ಆಳುತ್ತಿದ್ದನು. ಈತ "ತಳಕಾಡನಾಡಾಪ್ವಯ ದನುಗೂರು ಸಾಧಿಪ್ಪವೊಡೆಯರ ಮಗ ಚಿಕ್ಕಸಾಧಿಪ್ಪನಿಗೆ" ದನುಗೂರು ಸೀಮೆಯ ನೆಟ್ಟಕಲ್ಲು ಗ್ರಾಮವನ್ನು ದತ್ತಿ ನೀಡಿದ ಸಂಗತಿಯನ್ನು ತಿಳಿಸುತ್ತದೆ. ಈ ಚಿಕ್ಕಸಾಧಿಪ್ಪನು ಮಳವಳ್ಳಿಯ 130 ಮತ್ತು 131ನೇ ಶಾಸನಗಳಲ್ಲಿ ಉಲ್ಲೇಖಿತನಾದ ಸಾಧಿಪ್ಪವೊಡೆಯನ ಪುತ್ರನಾಗಿರಬಹುದು ಒಟ್ಟಿನಲ್ಲಿ ಉಮ್ಮತ್ತೂರು ದೊರೆಗಳ ಶಾಸನಗಳು ಆ ರಾಜರ ದೈವಭಕ್ತಿಯನ್ನೂ ದಾನದತ್ತಿಗಳ ಗುಣಗಾನವನ್ನು ಮಾಡಿವೆ.[11]

ಉಮ್ಮತ್ತೂರಿನ ಪ್ರಭುಗಳು ವಿಜಯನಗರದ ರಾಜಪ್ರತಿನಿಧಿಗಳಾಗಿ ಶ್ರೀರಂಗಪಟ್ಟಣದಲ್ಲಿದ್ದ ಶ್ರೀರಂಗರಾಯ ಮತ್ತು ತಿರುಮಲರಾಯರಿಗೆ ಸಂಬಂಧಿಗಳಾಗಿದ್ದರು. ಈ ರಾಜಪ್ರತಿನಿಧಿಗಳು ತಮ್ಮ ರಾಜಪ್ರತಿನಿಧಿತ್ವವನ್ನು ಉಮ್ಮತ್ತೂರಿನ ಪಾಳೆಯಗಾರರಿಗೆ ಹಸ್ತಾಂತರಿಸಲು ಅಪೇಕ್ಷಿಸಿದ್ದರು.[12] ಆದರೆ ಕೊನೆಯ ರಾಜಪ್ರತಿನಿಧಿ (ಮಹಾಮಂಡಲೇಶ್ವರ) ತಿರುಮಲರಾಯ ಮೈಸೂರಿನ ರಾಜ ಒಡೆಯರಿಗೆ ರಾಜ್ಯವನ್ನೊಪ್ಪಿಸಬೇಕಾಯಿತು.[13]

ಹದಿನಾಡು ಪ್ರಭುಗಳು: 16–17ನೇ ಶತಮಾನಗಳಲ್ಲಿ ಮೈಸೂರು ಜಿಲ್ಲೆಯ ಎಳಂದೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ರಾಜರು ಹದಿನಾಡು ಅರಸರು ಎಂದು ಪ್ರಸಿದ್ಧರಾಗಿದ್ದರು. ಹದಿನಾಡು ಪ್ರಾಂತ್ಯ ಎಳಂದೂರು

ಚಾಮರಾಜನಗರ, ಕೊಳ್ಳೆಗಾಲ, ಟಿ.ನರಸೀಪುರದ ಹಲವು ಪ್ರದೇಶಗಳನ್ನು ಒಳಗೊಂಡಿತ್ತು. ಪದಿನಾಡು ಅಥವಾ ಹದಿನಾಡು ಪುನ್ನಾಟ, ಗಂಗ, ಹೊಯ್ಸಳ, ವಿಜಯನಗರ, ಮೈಸೂರಿನ ಒಡೆಯರು, ಉಮ್ಮತ್ತೂರು ರಾಜರು, ಹದಿನಾಡು ದೊರೆಗಳು ಹಾಗೂ ತಮಿಳುನಾಡಿನ ಚೋಳರ ಆಳ್ವಿಕೆಯಲ್ಲಿದ್ದಂತೆ ತಿಳಿದುಬರುತ್ತದೆ. ಅವರಲ್ಲಿ ಅತ್ಯಂತ ಪ್ರಮುಖರಾದವರು ಹದಿನಾಡಿನ ರಾಜರು ಎಂಬುದಾಗಿ ಶಾಸನಗಳಿಂದಾಗಿ ತಿಳಿದುಬರುತ್ತದೆ. ಹೊಯ್ಸಳ ಮತ್ತು ವಿಜಯನಗರದ ಶಾಸನಗಳಲ್ಲಿ ಇದನ್ನು ಹದಿನಾಡು ಎಂಬ ಉಲ್ಲೇಖವಿದೆ. ವಿಜಯನಗರ ಕಾಲದಲ್ಲಿ ಸ್ವತಂತ್ರ ಅಸ್ತಿತ್ವ ಪಡೆದಿದ್ದ ಯಳಂದೂರು ಹದಿನಾಡಿನ ರಾಜಧಾನಿಯಾಗಿದ್ದಿತು. ಮೂಲತಃ ಗೌಡ ಜನಾಂಗಕ್ಕೆ ಸೇರಿದ ಹದಿನಾಡು ರಾಜರು ಕಾಲಕ್ರಮದಲ್ಲಿ ರಾಜರಾಗಿ ಅಭಿವೃದ್ಧಿ ಹೊಂದಿದರು. ಈ ಮನೆತನದ ಮೊದಲ ದೊರೆ ಸಿಂಘದೇವಭೂಪ ಅಥವಾ ದೇವಪ್ಪಗೌಡ. ದೇವಪ್ಪಗೌಡ ಮತ್ತು ಚಾಮರಸ ಒಡೆಯರು ವಿಜಯನಗರದ ಅರಸರ ಪ್ರಾಂತೀಯ ರಾಜ್ಯಪಾಲರಾಗಿದ್ದ ನರಪರಾಜ ಮತ್ತು ಜಗದೇವರಾಜರ ಅಧೀನ ಅಧಿಕಾರಿಗಳಾಗಿದ್ದರು. ಚಾಮರಸ ಒಡೆಯನ ಕಾಲದಲ್ಲಿ ಅವರು ತಾವೇ ರಾಜರಾದರು. ಆದ್ದರಿಂದ ಚಾಮರಸ ಒಡೆಯನು ಹದಿನಾಡಿನ ಮೊದಲನೆಯ ರಾಜನಾಗಿದ್ದನೆಂದು ಹೇಳಬಹುದು.[14] (ಈ ರಾಜರು ಕ್ರಿ.ಶ 1549ರಿಂದ 1667ರವರೆಗೆ ಒಟ್ಟು 118 ವರ್ಷ ರಾಜ್ಯಭಾರ ಮಾಡಿದರು.)

ಹದಿನಾಡು ಅರಸರಿಗೆ ಸಂಬಂಧಿಸಿದಂತೆ ಮಂಡ್ಯ ಜಿಲ್ಲೆಯಲ್ಲಿ ಮೂರು ಶಾಸನಗಳು ದೊರೆತಿವೆ. ಕ್ರಿ.ಶ 1576ರ ಮದ್ದೂರಿನ 137ನೇ ಶಾಸನದಲ್ಲಿ ಹದಿನಾಡಿನ ಪ್ರಭು ರಾಮರಾಜಯ್ಯನು ಅರಸನ ಕೆರೆಸ್ಥಳದ ಕುದುರುಗುಂಡಿಯನ್ನು ಪಲ್ಲಕ್ಕಿ ಉಂಬಳಿಯಾಗಿ ಕೊಟ್ಟ ಉಲ್ಲೇಖವಿದೆ. ಶಾಸನದ ಬಹುಭಾಗ ಸವೆದುಹೋಗಿರುವುದರಿಂದ ಹೆಚ್ಚಿನ ವಿವರಗಳು ತಿಳಿಯುವುದಿಲ್ಲ.

ಕ್ರಿ.ಶ 1589ರ ಮದ್ದೂರಿನ 82ನೇ ಶಾಸನವು ಹದಿನಾಡಿನ ತಿರುಮಲರಾಯನ ಮಕ್ಕಳಾದ ರಾಮರಾಜಯ್ಯ ಮತ್ತು ತಿರುಮಲರಾಜಯ್ಯರು ನೀಡಿದ ದತ್ತಿಯನ್ನು ವಿವರಿಸುತ್ತದೆ. ಗಣಪತಿಪಂಡಿತನ ಪೌತ್ರ ಅಪ್ಪಾಜಿ ಪಂಡಿತನ ಪುತ್ರ ಷಣ್ಮುಖ ಪಂಡಿತನಿಗೆ ಕಬ್ಬೆರೆಯನ್ನು ತಿರುಮಲರಾಯನ ಮಕ್ಕಳು ಧಾರಾಪೂರ್ವಕವಾಗಿ ನೀಡಿದ್ದರು. ಆದ್ದರಿಂದ ಮದ್ದೂರು ತಾಲ್ಲೂಕಿಗೆ ಸೇರಿದ ಕಬ್ಬಾರೆ ಹದಿನಾಡಿನ ಅರಸರ ವಶದಲ್ಲಿತ್ತೆಂದು ಊಹಿಸಬಹುದು.

ಕ್ರಿ.ಶ 1596ರ ಮಂಡ್ಯದ 17ನೇ ಶಾಸನದ ಬಹುಭಾಗ ಜೀರ್ಣವಾಗಿದೆ. ಇದು ಹದಿನಾಡಿನ ಮಹಾಮಂಡಲೇಶ್ವರ ರಾಮರಾಜ ತಿರುಮಲರಾಜಯ್ಯದೇವನನ್ನು ಉಲ್ಲೇಖಿಸುತ್ತದೆ. ಇಲ್ಲಿ ಉಕ್ತವಾದ ನಗರೂರಿನ ಗುತ್ತಿನಾಯಕನ ಮಗ ಜಕ್ಕಣ್ಣನಾಯಕನು ಹದಿನಾಡು ರಾಜರಲ್ಲಿ ಅಧಿಕಾರಿಯಾಗಿದ್ದಿರಬಹುದು.

ಮೇಲೆ ತಿಳಿಸಿದ ಪ್ರಮುಖ ಸಾಮಂತರಲ್ಲದೆ ಮಂಡ್ಯ ಜಿಲ್ಲೆಯ ಶಾಸನೋಕ್ತ ಇತರೆ ಸಾಮಂತರೆಂದರೆ. ಕ್ರಿ.ಶ. 1420ರ ಮಳವಳ್ಳಿಯ ಬೆಳಕವಾಡಿಯ 96ನೇ ಶಾಸನದಂತೆ 1ನೇ ದೇವರಾಯನ ಕಾಲದ ಮಹಾಪ್ರಧಾನ ಪುಲಿಯಣ್ಣವೊಡೆಯರ ಅಪ್ಪಣೆಯ ಮೇರೆಗೆ ದೇವರಸವೊಡೆಯನು ಬೆಳಕವಾಡಿಯ ಸ್ವಯಂಭುನಾಥ ದೇವಾಲಯದಲ್ಲಿ ಪೂಜೆ ಮೊದಲಾದವಕ್ಕೆ ಮಗ್ಗದೆರೆಯನ್ನು ಬಿಟ್ಟಿದ್ದಾನೆ. ಶಾಸನದಲ್ಲಿ ದೇವರಸವೊಡೆಯನೆಂದು ಕರೆದಿರುವುದನ್ನು ಗಮನಿಸಿದಲ್ಲಿ ಆತನು ಒಬ್ಬ ವಿಶೇಷಾಧಿಕಾರಿಯಾಗಿದ್ದನೆಂಬುದನ್ನು ಅದು ಸೂಚಿಸುತ್ತದೆನ್ನಬಹುದು.

ದೇವಲಾಪುರದ ಸಾಮಂತರು: ಕ್ರಿ.ಶ 1444ರ ನಾಗಮಂಗಲದ 166ನೆಯ ಶಾಸನದಂತೆ ಮಲೆಯನಾಯಕನಹಳ್ಳಿ, ಮುತ್ಸಂದ್ರ, ಕುಡುಗುಬಾಳು, ದೇವಲಾಪುರ, ಇವೆಲ್ಲವೂ ಸೇರಿ ಒಂದು ಪ್ರಾಂತ್ಯವಾಗಿ ರೂಪುಗೊಂಡು ಒಬ್ಬ

ಸಾಮಂತನ ಆಡಳಿತಕ್ಕೆ ಒಳಪಟ್ಟಿದ್ದಂತೆ ತೋರುತ್ತದೆ. ಈ ಶಾಸನದಲ್ಲಿ ಉಲ್ಲೇಖಿಸಿರುವ ತೆಪ್ಪದ ಮುದ್ದೆನಾಯಕನ ಪುತ್ರ, ನಾಗೆಯ ನಾಯಕನು ಮಲೆಯನಾಯಕನಹಳ್ಳಿಯಲ್ಲಿರುವ ತಿರುಮಲದೇವರ ಪೂಜೆಗೆಂದು ಮುದಸಮುದ್ರ(ಮತ್ಸಂದ್ರ)ವನ್ನು ದತ್ತಿ ನೀಡಿದ್ದನು. 'ಮೂವರು ರಾಯರ ಗಂಡ' 'ಗಜಸಿಂಹ' ಎಂಬುದು ಈತನ ಬಿರುದುಗಳು; ಈ ಶಾಸನದಿಂದ ವಿಜಯನಗರದ ರಾಜನಿಗೆ ಸಾಮಂತನಾಗಿದ್ದನೆಂದು ತಿಳಿದುಬರುತ್ತದೆ.

ಕ್ರಿ.ಶ.1460ರ ನಾಗಮಂಗಲದ 165ನೇ ಶಾಸನದಲ್ಲಿ ವಿಜಯನಗರದ ಶ್ರೀರಂಗರಾಯನ ಉಲ್ಲೇಖವಿದೆ. (ಮಲ್ಲಿಕಾರ್ಜುನ ಕ್ರಿ.ಶ. 1446ರಿಂದ 1465) ಶ್ರೀರಂಗರಾಯನ ಅಧೀನದಲ್ಲಿ ಸುರಗಿಯ ದೇವಪ್ಪನಾಯಕ ಎಂಬ ಸಾಮಂತನ ಸಂಗತಿ ಈ ಶಾಸನದಿಂದ ತಿಳಿದುಬರುತ್ತದೆ. ಈತನು ಕುಡುಗುಬಾಳಿನ ಶ್ರೀ ರಾಮಲಿಂಗದೇವರ ಸೇವೆಗೆಂದು ದೇವಲಾಪುರವನ್ನು ಅದರ ಸಕಲ ಆದಾಯಗಳೊಂದಿಗೆ ದತ್ತಿಬಿಟ್ಟಿದ್ದನು. ಈ ದತ್ತಿ ಬಿಟ್ಟ ಹಳ್ಳಿಯು ದೇವಪ್ಪನಾಯಕನ ವಶಕ್ಕೆ ಸೇರಿತ್ತೆಂಬುದು ಗಮನಿಸಬೇಕಾದ ಸಂಗತಿ.

* ಕ್ರಿ.ಶ. 1512ರ ನಾಗಮಂಗಲ ತಾಲ್ಲೂಕಿನ ದೊಡ್ಡ ಜಾತಕದ ಶಾಸನದಂತೆ, ಕೃಷ್ಣದೇವರಾಯ ಹಿರಿಜತ್ತಿಗೆ ಗ್ರಾಮವನ್ನು ಅದರ ನಾಲ್ಕು ಪಾಳೆಯಗಳೊಡನೆ ಚಿನ್ನದೇವಿಪುರವೆಂಬ ಹೆಸರನ್ನಿಟ್ಟು ಶ್ರೀನಿವಾಸಾಧ್ವರಿಗೆ ದಾನ ಮಾಡಿದನು. ಶ್ರೀನಿವಾಸಾಧ್ವರಿ ಹತ್ತು ವೃತ್ತಿಗಳನ್ನು ಸ್ವಂತಕ್ಕೆ ಇಟ್ಟುಕೊಂಡು ಉಳಿದ ಇಪ್ಪತ್ತು ವೃತ್ತಿಗಳನ್ನು ಅರ್ಹರಾದ ಬ್ರಾಹ್ಮಣರಿಗೆ ಕೊಟ್ಟನೆಂದು ತಿಳಿದುಬರುತ್ತದೆ.[15]

* ನಾಗಮಂಗಲ ತಾಲ್ಲೂಕಿನ ಕಾಮಿಡಿಹಳ್ಳಿ ಶಾಸನವು ಕ್ರಿ.ಶ. 1521ಕ್ಕೆ ಸಂಬಂಧಿಸಿದ್ದು ಈ ಅವಧಿಯಲ್ಲಿ ಕೃಷ್ಣದೇವರಾಯನ ರಾಣಿವಾಸದ ಚಿಂನಾದೇವಿಯಂಮನು ಹಂಪಿಗೆ ಆಗಮಿಸಿದ್ದ ತೋಂಟಮಠದ ನಿರಂಜನದೇವರು ಮತ್ತು ಮಲ್ಲಿಕಾರ್ಜುನ ದೇವರ ಸೇವಾರ್ಥ ವೀರಪ್ಪವೊಡೆಯರ ನಾಯಕತನಕ್ಕೆ ಸೇರಿದ ನಾಗಮಂಗಲ ಸ್ಥಳದ ದಡಿಗದ ಸೀಮೆಯ ಕಾಮಿಡಿಹಳ್ಳಿಯನ್ನು ದಾನವಾಗಿ ನೀಡಿದ ವಿಷಯ ತಿಳಿದುಬರುತ್ತದೆ.[16]

* ನಾಗಮಂಗಲ ತಾಲ್ಲೂಕಿನ ತಿಬ್ಬನಹಳ್ಳಿ ಶಾಸನವು ಕ್ರಿ.ಶ. 1524ಕ್ಕೆ ಸಂಬಧಿಸಿದ್ದು, ಈ ಶಾಸನದಲ್ಲಿ ಇನ್ನೂ ಮುಂಚಿನ ಕೆಲವು ಶಾಸನಗಳಲ್ಲಿ ಕೃಷ್ಣದೇವರಾಯನನ್ನು ಶ್ರೀಮನ್ಮಹಾಮಂಡಲೇಶ್ವರನೆಂದು ಕರೆದಿವೆ. ಇದು ಅವನು ಈ ಭೂಮಿಗೆ ಒಡೆಯನೆಂದು ಅರ್ಥವಾಗುತ್ತದೆಯೇ ವಿನಃ ಸಾಮಂತನೆಂಬ ಅರ್ಥವಲ್ಲ.[17]

ಶ್ರೀರಂಗಪಟ್ಟಣ ಸೀಮೆಯ ಸಾಮಂತರು: ಕ್ರಿ.ಶ. 1528ರ ಜನವರಿ 24ರ ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯದ ಶಾಸನದಂತೆ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಅಹೋಬಳದೇವನ ಮಗ ಕೃಷ್ಣರಾಯ ನಾಯಕನು ಶ್ರೀರಂಗಪಟ್ಟಣಸೀಮೆಯನ್ನು ಆಳುತ್ತಿದ್ದನು. ಈತನಿಗೆ ಶ್ರೀರಂಗಪಟ್ಟಣಸೀಮೆಯ (ಕುರುವಂಕನಾಡಿನ) ಒಡೆತನ ನೀಡಿದವನು ವಿಜಯನಗರದರಸ ಕೃಷ್ಣದೇವರಾಯನಿರಬೇಕು. ಅದಕ್ಕಾಗಿ ಕೃಷ್ಣರಾಯನಾಯಕನು ಕೃಷ್ಣದೇವರಾಯನ ಪುಣ್ಯಾರ್ಥವಾಗಿ ಆತನ ಅನುಮತಿ ಪಡೆದು ಶ್ರೀರಂಗನಾಥದೇವರಿಗೆ ಪ್ರತಿನಿತ್ಯ 25 ಅತಿರಸಗಳನ್ನು ನೈವೇದ್ಯ ಮಾಡಲೆಂದು ನಿತ್ಯಪೂಜೆಯ ಹೂಮಾಲೆಗೆಂದು ಕುರುವಂಕನಾಡಿಗೆ ಸೇರಿದ ಬೀರಸೆಟ್ಟಿ ಹಳ್ಳಿಯನ್ನು ದತ್ತಿ ನೀಡಿದನು.[18]

* ಪಾಂಡವಪುರ ತಾಲ್ಲೂಕಿನ ಮೇಲುಕೋಟೆಯ ಶಾಸನವು ಕ್ರಿ.ಶ. 1528ಕ್ಕೆ ಸಂಬಂಧಿಸಿದ್ದು ಕೃಷ್ಣದೇವರಾಯನ ನಿರೂಪದಿಂದ ದಂಡು ಅಹೋಬಳದೇವನ ಮಗ ಕೃಷ್ಣರಾಯನಾಯಕನು ಶ್ರೀರಂಗಪಟ್ಟಣ ಸಿಂಧಘಟ್ಟವನ್ನು ಆಳುತ್ತಿರುವಾಗ ಈತನು ಕೃಷ್ಣರಾಯನಿಗೆ ಪುಣ್ಯವಾಗಲೆಂದು ಅವನ ಅಪ್ಪಣೆಯನ್ನು ಪಡೆದು ತಿರುನಾರಯಣಪುರದ (ಮೇಲುಕೋಟೆ) ಚಲ್ಲಪಿಳೆರಾಯರಿಗೆ (ಚಲುವನಾರಾಯಣ) ಕಾಮೇನಾಯಕನಹಳ್ಳಿ ಗೊಲ್ಲರಚಟ್ಟಣಹಳ್ಳಿಯ

ಗ್ರಾಮಗಳನ್ನು ಮತ್ತು ಮೇಲುಕೋಟೆಯಲ್ಲಿ ಹೊಸದಾಗಿ ಪ್ರಾರಂಭಿಸಿದ ಸಂತೆಯ ಆದಾಯವೂ ಸೇರಿದಂತೆ, ಒಟ್ಟು ಎಲ್ಲಾ ಮೂಲದಿಂದ 254 ವರಹಗಳನ್ನು ದಾನವಾಗಿ ನೀಡಿದನೆಂದು ತಿಳಿದುಬರುತ್ತದೆ.[19]

* ಶ್ರೀರಂಗಪಟ್ಟಣದ ರಂಗನಾಥ ದೇವಾಲಯದ ಕ್ರಿ.ಶ. 1528ರ ಕೃಷ್ಣದೇವರಾಯನ ಕಾಲದ ಶಾಸನವು ಕೃಷ್ಣದೇವರಾಯನ ಕಾಲದಲ್ಲಿ ಶ್ರೀರಂಗಪಟ್ಟಣದ ಸೀಮೆಯನ್ನು ಭೋಗಯದೇವ ಮಹಾ ಅರಸನು ಆಳುತ್ತಿದ್ದನೆಂದು ತಿಳಿದುಬರುತ್ತದೆ. ಈತನು ಅರಸನ ಅನುಮತಿಯನ್ನು ಪಡೆದು ಶ್ರೀರಂಗಪಟ್ಟಣ ಸೀಮೆಯ ಗುಮ್ಮನವೃತ್ತಿ ಸ್ಥಳದ ದೇವಪುರಿಯೆಂಬ ಹಳ್ಳಿಯನ್ನು ನಾಗಂಬ ಅಮ್ಮನ ನೆನಪಿಗೆ ನಾಗಲಾಪುರವೆಂದು ಮರುಹೆಸರಿಟ್ಟು ಶ್ರೀರಂಗನಾಯಕಿದೇವಿಯರ ಸೇವೆಗಾಗಿ ಸಮರ್ಪಿಸುತ್ತಾನೆ. ದಾನ ನೀಡಿದ ಭೋಗಯದೇವ ಮಹಾ ಅರಸನು ಶ್ರೀಮನ್ಮಹಾಮಂಡಳೇಶ್ವರ, ಅರಿವೆಂಟಿ, ಗಜಪತಿ, ಉರುಳಗೋತ್ರ, ಸುರುದಾಣ ಧರಣಿವರಾಹ, ಮರಿಯ ಶಾರ್ದೂಲ, ಚಮಟಿ, ಸೋಮ ವಂಶಾಭರಣ, ಭೂವಿರ ಸಕಲವಿದ್ಯಾವಿಶಾರದ ಪ್ರಜಾಪಾಲನಾದ ಧರ್ಮಪರಾಯಣ ಮೊದಲಾದ ಬಿರುದುಗಳನ್ನು ಧರಿಸಿದ್ದಾನೆಂದು ತಿಳಿಸುತ್ತದೆ.[20]

ಹರಿಗಿಲ ಸಾಮಂತರು: ಕ್ರಿ.ಶ. 1534ರ ಫೆಬ್ರವರಿ 8ರ ಪಾಂಡವಪುರದ 138ನೆಯ ಶಾಸನದ ಪ್ರಕಾರ ಹರಿಗಿಲ ಅಬ್ಬರಾಜನ ಮಗ ಪೆರಿರಾಜನು 150 ಗದ್ಯಾಣ ವೆಚ್ಚ ಮಾಡಿ ಮೇಲುಕೋಟೆಯ ದೇವಾಲಯಕ್ಕೆ ಸೇರಿದ ಕದಳಗೆರೆಯ ಹೊಸಕೆರೆ ಹಾಗೂ ಕೃಷ್ಣದೇವ ಒಡೆಯರ ಕೆರೆಗಳನ್ನು ದುರಸ್ತಿಗೊಳಿಸಿದನು. ಇಂತಹ ಒಳ್ಳೆಯ ಕಾರ್ಯಕ್ಕೆ ದೇವಾಲಯದ 52 ಮಂದಿ ಅಯ್ಯಗಳು ಪೆರಿರಾಜನ ಹೆಸರಿನಲ್ಲಿ ದೇವರಿಗೆ ನೈವೇದ್ಯ ಸಲ್ಲಿಸಿದರು. ಅಲ್ಲದೆ ನೈವೇದ್ಯದ ನಾಲ್ಕರಲ್ಲಿ ಒಂದು ಭಾಗವನ್ನು ಪೆರಿರಾಜ ಅಥವಾ ಆತನು ಕಟ್ಟುಮಾಡಿದ ಬೇರೆ ಯಾರಿಗಾದರೂ ನೀಡುವುದಾಗಿ ತಿಳಿಸಿ ಶಾಸನವನ್ನು ಕೆತ್ತಿಸಿದನು. ಒಂದು ವೇಳೆ ಆ ಕೆರೆಗಳ ಅನುಭೋಗ ತಪ್ಪಿದರೂ ಈ ಮರ್ಯಾದೆ ತಪ್ಪುವುದಿಲ್ಲವೆಂದು ಆಶ್ವಾಸನೆಯನ್ನು ಸಹ ನೀಡಿದನು. ಇದೇ ಶಾಸನದಲ್ಲಿ ವಿಜಯನಗರದ ಅಚ್ಯುತರಾಯನ ಉಲ್ಲೇಖವಿರುವುದರಿಂದ ಹರಿಗಿಲರಾಜರು ವಿಜಯನಗರದರಸರಿಗೆ ಸಾಮಂತರಾಗಿದ್ದರೆಂದು ತಿಳಿದುಬರುತ್ತದೆ.

ಪಾಂಡವಪುರದ 125 ಹಾಗೂ 127ನೇ ಶಾಸನಗಳು ಹರಿಗಿಲ (ಹರಿನೀಲ) ಅಬ್ಬರಾಜನ ಮತ್ತೊಬ್ಬ ಮಗ ತಿರುಮಲರಾಜನಿಗೆ ಸಂಬಂಧಿಸಿವೆ. ತಿರುಮಲ ರಾಜನು ನಾಗಮಂಗಲ ಪ್ರದೇಶಕ್ಕೆ ಸೇರಿದ ಸೆಟ್ಟಿಪುರ, ಮಾಲನಹಳ್ಳಿ, ನಿಲೆಮಂಗಲ, ಹೊಳವಳ್ಳಿ, ಕರನಾರಹಳ್ಳಿಗಳನ್ನು (ಹಿಂದೆ ಅಚ್ಯುತದೇವಮಹಾರಾಯರು ರಾಮಭಟ್ಟಯ್ಯನಿಗೆ ದಾನ ನೀಡಿದ್ದನು) ಮೇಲುಕೋಟೆಯ ಶ್ರೀಚೆಲಪಿಳೆರಾಯ (ಶೆಲ್ವಪಿಳ್ಳೆರಾಯ) ದೇವರಿಗೆ ಕ್ರಿ.ಶ. 1535ರಲ್ಲಿ ದತ್ತಿ ನೀಡಿದನೆಂದು ತಿಳಿದುಬರುತ್ತದೆ. ಮೇಲಿನ ಶಾಸನದಲ್ಲಿ ಉಲ್ಲೇಖಿಸಿದ 52 ಮಂದಿ ಅಯ್ಯಗಳಿಗೂ ಕೂಡ ದಾನ ನೀಡಿದನೆಂದು ತಿಳಿದುಬರುತ್ತದೆ. ಪಾಂಡವಪುರದ 125ನೇ ಶಾಸನ ತಿರುಮಲರಾಜನನ್ನು 'ಸಿಂಧುಗೋವಿಂದ', 'ಸಿತಗರಗಂಡ', 'ಮಣಿನಾಗಪುರವರಾಧೀಶ್ವರ' ಎಂದು ವರ್ಣಿಸಿದೆ. ಈ ಬಿರುದನ್ನು ಬೇಲೂರಿನ ನಾಯಕರು ಧರಿಸಿದ್ದರು. ಆದರೆ ಆ ಪಾಳೆಯಗಾರರ ಮನೆತನದ ಮೂಲಪುರುಷ ಕೃಷ್ಣಪ್ಪನಾಯಕ ಅವರೆಲ್ಲ 'ನಾಯಕ' ಎಂಬ ಉಪನಾಮವನ್ನು ಧರಿಸಿದ್ದರು. ಅದನ್ನು ಗಮನಿಸಿದರೆ ಈ ತಿರುಮಲ ರಾಜ ಬಹುಶಃ ಈ ಮನೆತನಕ್ಕೆ ಸೇರಿದವನಲ್ಲವೆಂದು ಹೇಳಬಹುದು.

ಶ್ರೀರಂಗಪಟ್ಟಣದ 5ನೇ ಶಾಸನದಲ್ಲಿ ಅಚ್ಯುತರಾಯನ ಆಳ್ವಿಕೆಯ ಉಲ್ಲೇಖವಿದೆ. (ಶಕವರ್ಷಕ್ಕೆ ಸಮನಾದ ಕ್ರಿ.ಶ. 1542 ಅಚ್ಯುತರಾಯನ ಆಳ್ವಿಕೆಯ ಕೊನೆಯ ವರ್ಷವಾಗಿರುತ್ತದೆ.) ಶಾಸನದ ಪ್ರಮುಖ ಅಂಶವೆಂದರೆ ಶ್ರೀರಂಗಪಟ್ಟಣದ ಸೀಮೆಯನ್ನು ಅಮರಮಾಗಣಿಯಾಗಿ ರಾಮಾಭಟ್ಟಯ್ಯನಿಂದ ಅಪ್ಪಾಜಿಯ ಮಗನಾದ ಪೆದ್ದಿರಾಜನು

ಪಡೆದಿರುತ್ತಾನೆ. ಈ ಸೀಮೆಯ ದಳವಾಯಿ ಅಗ್ರಹಾರಗಳು, ಮಾನ್ಯಗ್ರಾಮಗಳು, ಕರಗ್ರಾಮಗಳಲ್ಲಿದ್ದ ಮಾನ್ಯಗಳು ಹಾಗೂ ಸತ್ರ ದೇವಸ್ಥಾನಗಳಿಂದ ಸುಂಕವನ್ನು ಪಾರುಪತ್ಯಮಾಡುತ್ತಿದ್ದ ಕಾಮಪ್ಪನಾಯಕನು ವಸೂಲು ಮಾಡಿರುತ್ತಾನೆ. ಹೀಗೆ ವಸೂಲು ಮಾಡಿದ ಒಟ್ಟು ಹಣ 300 ಗದ್ಯಾಣಗಳು. ಆದರೆ ಇದು ಪೂರ್ವದಲ್ಲಿ ಇರಲಿಲ್ಲ. ಆದ್ದರಿಂದ ಅನುಚಿತವಾಗಿ ಬಂದ ಈ ಹಣವನ್ನು ಪೆದ್ದಿರಾಜನು ಶ್ರೀರಂಗಪಟ್ಟಣದ ದೇವರಿಗೆ, ರಾಯರಿಗೂ, ರಾಮಾಭಟ್ಟಯ್ಯನಿಗೂ ಪುಣ್ಯವಾಗಬೇಕೆಂದು ದಾನಮಾಡಿದನು. ಅಲ್ಲದೆ ಇನ್ನೂ ಮುಂದೆ ಇಂತಹ ಸುಂಕವನ್ನು ಪ್ರಜೆಗಳು ಕೊಡಬಾರದೆಂದೂ ಮೊದಲಿದ್ದಂತೆ ಅಡಿಕೆಯನ್ನು ವರ್ತಕರಿಗೆ ಮಾರಿದ ಮಹಾಜನರು 3 ಹಣವನ್ನು ವೊಳವಾರು ಸುಂಕವಾಗಿ ಕೊಡುವುದನ್ನು ಹೊರತುಪಡಿಸಿ ಬೇರಾವ ಸುಂಕವನ್ನು ನೀಡಬಾರದೆಂದು ನಿರೂಪ ನೀಡಿದನೆಂದು ಶಾಸನ ತಿಳಿಸುತ್ತದೆ. ಇದರಿಂದ ಅಡಿಕೆಯ ಸುಂಕವನ್ನು ಮಹಾಜನರು ತೆರುತ್ತಿದ್ದರೆಂದು ತಿಳಿದುಬರುತ್ತದೆ.

* ಕ್ರಿ.ಶ. 1544ರ ನಾಗಮಂಗಲದ 6ನೆಯ ಶಾಸನದಂತೆ ವಿಜಯನಗರದಲ್ಲಿ ಸದಾಶಿವರಾಯನು ಆಳುತ್ತಿದ್ದಾಗ ಚನ್ನರಾಜ, ತಿಮ್ಮಪ್ಪನಾಯಕ ಎಂಬ ಸಾಮಂತರು ಇದ್ದರೆಂಬುದು ತಿಳಿದುಬರುತ್ತದೆ. ಈ ಇಬ್ಬರು ಸಾಮಂತರು ತಮ್ಮ ಮೇಲಿನ ಅಧಿಪತಿಯ ಅಪ್ಪಣೆಯ ಮೇರೆಗೆ ದತ್ತಿ ಬಿಟ್ಟಿದ್ದರು.

* ಮದ್ದೂರಿನ 63ನೇ ಶಾಸನದಿಂದ ಸುಮಾರು 15-16ನೇ ಶತಮಾನದಲ್ಲಿ ಮದ್ದೂರು ತಾಲ್ಲೂಕಿನ ಹೊಂದಲಗೆರೆಯಲ್ಲಿ ಸಂಕರಬನಾಯಕ ಎಂಬ ಸಾಮಂತನಿದ್ದನೆಂದು ತಿಳಿದುಬರುತ್ತದೆ. ಈತನ ಆಜ್ಞೆಯ ಮೇರೆಗೆ ಹೊಂದಲಕೆರೆಯ ಸಮಸ್ತ ಪ್ರಜೆಗಳು ಸೇರಿ ಎಣ್ಣೆಗಾಣ ಮಾಡಿಸಿದ ಸಂಗತಿ ತಿಳಿದುಬರುತ್ತದೆ.

* ಮಳವಳ್ಳಿಯ ಮಾರಹಳ್ಳಿಯಲ್ಲಿ ದೊರೆತ ಸು.15-16ನೇ ಶತಮಾನಕ್ಕೆ ಸೇರಿದ 70ನೇ ಶಾಸನದಲ್ಲಿ ಮಾದನಾಯಕನ ಮಗ ಮಹಾಸಾಮಂತಾಧಿಪತಿ ಚಿಕ್ಕೆಯನಾಯಕನ ಉಲ್ಲೇಖವಿದೆ. ಈತನು ಮಾರೆಹಳ್ಳಿಯಲ್ಲಿ ಒಂದು ಸ್ತಂಭವನ್ನು ನಿಲ್ಲಿಸಿದನೆಂದು ತಿಳಿದುಬರುತ್ತದೆ.

ನಂದ್ಯಾಲರು: ಮಂಡ್ಯದ ಬೇವುಕಲ್ ಹಟ್ಣದಲ್ಲಿ ದೊರೆತಿರುವ 21ನೇ ಶಾಸನವು ಸು.16-17ನೇ ಶತಮಾನದಲ್ಲಿ ನಂದ್ಯಾಲದ ತಮ್ಮದೇವ ಮಹಾಅರಸನು ದುದ್ದ ಗ್ರಾಮದ ನಂಜವೊಡೆಯನಿಗೆ ಹಟ್ಟಣ ಗ್ರಾಮವನ್ನು ಉಂಬಳಿಯಾಗಿ ನೀಡಿದ ಸಂಗತಿಯನ್ನು ತಿಳಿಸುತ್ತದೆ. ಪಾಂಡವಪುರದ ಮೇಲುಕೋಟೆಯ 130ನೇ ಹಾಗೂ 129ನೇ ಶಾಸನಗಳು ವಿಜಯನಗರದ ಸದಾಶಿವರಾಯನ ಕಾಲಕ್ಕೆ ಸಂಬಂಧಿಸಿದ್ದು ನಂದ್ಯಾಲದ ಶ್ರೀಮನ್‌ಮಹಾಮಂಡಲೇಶ್ವರ ನರಸಿಂಗೆಯದೇವಮಹಾಅರಸು ಆತನ ಮಗ ನಾರಯದೇವಮಹಾಅರಸುರವರು ಮಾಡಿದ ಧರ್ಮಶಾಸನಗಳಾಗಿವೆ. ಪಾಂಡವಪುರದ 130ನೇ ಶಾಸನ ಕ್ರಿ.ಶ. 1544ನೇ ವರ್ಷದ್ದು, ಭಾಷ್ಯಕಾರರು ಎಂದರೆ ರಾಮಾನುಜಾಚಾರ್ಯರು ಹಿಂದೆ ಬಿಜಯಮಾಡಿದ್ದ ಯತಿರಾಜ ಮಠದ ಯತಿಗಳಿಗೆ ನಾರಯದೇವನು ದೇಶಾಂತ್ರಿ ಮುದ್ರೆಯನ್ನು ಉಪಯೋಗಿಸುವ ಹಕ್ಕನ್ನು ನೀಡಿದುದನ್ನು ಹೇಳಿದೆ. ಇದರಿಂದಾಗಿ ದೇವಸ್ಥಾನದ ಆಸ್ತಿಪಾಸ್ತಿಗಳ ಮೇಲೆ ಈ ಯತಿಗಳಿಗೆ ಹಕ್ಕು ದೊರೆಯಿತು. ಸದಾಶಿವರಾಯರು ನಮ್ಮ ನಾಯಕತನಕ್ಕೆ ವೇದಾಂತಿ ರಾಮಾನುಜರಿಂದ ಆಶೀರ್ವದಿಸಿ ಕೊಟ್ಟ ದತ್ತಿಯೆಂದು ಉಲ್ಲೇಖಿಸಿದೆ.

ಇದೇ ನಾರಯದೇವ ಮಹಾಅರಸನು (ಕ್ರಿ.ಶ.1545) ಬಲ್ಲಾಳಪುರ, ಮತ್ತು ವರಾಹನಾಥಕಲ್ಲಹಳ್ಳಿ ಎಂಬ ಗ್ರಾಮಗಳನ್ನು ಸಾಗುವಳಿಯ ಸಮೇತ ದಾನ ಮಾಡಿದನು. ಈ ಎರಡು ಗ್ರಾಮಗಳಿಂದ ಬರುತ್ತಿದ್ದ ಆದಾಯ 2000 ವರಹಗಳು ಆದರೆ ಕ್ಷಾಮಕ್ಷೋಭೆಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳ ಉತ್ಪನ್ನ 1200 ವರಹಗಳೆಂದು ನಿರ್ಧರಿಸಿ

ಅದನ್ನು ದೇವರಿಗೆ ಸಲ್ಲಿಸುವ ಪೂಜೆ ನೈವೇದ್ಯಗಳ ವೆಚ್ಚಕ್ಕೆಂದು ದತ್ತಿಬಿಟ್ಟನೆಂದು ಶಾಸನದಲ್ಲಿ ಹೇಳಿದೆ. ಮಹಾಮಂಡಲೇಶ್ವರ ತಿಮ್ಮೆಯದೇವ ಮಹಾಅರಸನು ನಾರಸಿಂಗದೇವನ ಮತ್ತೊಬ್ಬ ಮಗನೆಂದು ತಿಳಿದುಬರುತ್ತದೆ. ನಂದ್ಯಾಲರು ಆಂದ್ರಪ್ರದೇಶದ ಕರ್ನೂಲು ಜಿಲ್ಲೆಯ ನಂದ್ಯಾಲವನ್ನು ಕೇಂದ್ರವನ್ನಾಗಿಟ್ಟುಕೊಂಡು ಆಳಿದವರೆಂದು ತಿಳಿದುಬರುತ್ತದೆ. ಇವರಿಗೆ ಸಂಬಂಧಿಸಿದ ಮಾಹಿತಿಯನ್ನು ಮಂಡ್ಯದ ಶಾಸನಗಳು ತಿಳಿಸುತ್ತವೆ.

ತೆಲುಗು ಚೋಳ ಮನೆತನದ ಸಾಮಂತರು: ಪಾಂಡವಪುರದ 133ನೇ ಶಾಸನದಂತೆ ಮಹಾಮಂಡಲೇಶ್ವರ ಅಪ್ರತಿಮಮಲ್ಲ ಮನುಬ್ರೋಲು ಚೆನ್ನದೇವಚೋಡಮಹಾಅರಸನು ಸಿಂಧಘಟ್ಟದ ಸ್ಥಳವನ್ನು ಸದಾಶಿವರಾಯನಿಂದ ಅಮರಮಾಗಣಿಯಾಗಿ ಪಡೆದಿದ್ದನು. ಈತನು ತೆಲುಗು ಚೋಳ ಮನೆತನಕ್ಕೆ ಸೇರಿದಾತನೆಂದು ತಿಳಿದುಬರುತ್ತದೆ. ಮೇಲುಕೋಟೆಯ ದೇವಸ್ಥಾನಕ್ಕೆ ಸಲ್ಲುವ ಈ ಸ್ಥಳದ ಗ್ರಾಮಗಳಲ್ಲಿ ತಳವಾರನನ್ನು ನೇಮಿಸಲೆಂದು ನಿಗದಿಗೊಳಿಸಿದ ಹಣದಲ್ಲಿ ಉಳಿದ 46 ವರಹಗಳನ್ನು ದೇವಾಲಯಗಳಲ್ಲಿ ಏಳು ನೈವೇದ್ಯಗಳನ್ನು ಸಮರ್ಪಿಸಲೆಂದು ದೇವಾಲಯಕ್ಕೆ ದಾನ ಮಾಡಿದನೆಂದು ಹೇಳಿದೆ. ಶಾಸನದ ಕೊನೆಯಲ್ಲಿ 46 ವರಹಗಳ ಬದಲು 26 ವರಹಗಳೆಂದು ಬರೆದಿದೆ. ಇದರಲ್ಲಿ ಯಾವುದು ಸರಿ ಎಂದು ಹೇಳಲಾಗದು. ಶಾಸನದ ಕಾಲ ಕ್ರಿ.ಶ. 1550–51.

ಕ್ರಿ.ಶ. 1553ರ ಕೃಷ್ಣರಾಜಪೇಟೆಯ ಸಂತೇಬಾಚಹಳ್ಳಿಯ 64ನೇ ಶಾಸನದಲ್ಲಿ ಮಹಾಮಂಡಲೇಶ್ವರ ಅಪ್ರತಿಮ ಮಲ್ಲ ಅವೋ ಬಳಮದೇವರಾಜಯದೇವ ಚೋಳಮಹಾಅರಸನ ಕಾರ್ಯಕರ್ತನಾದ ರಂಗಪಯ್ಯನು ಹಾಳಾಗಿದ್ದು ಈಗ ಪುನರ್ವಸತಿಗೊಳಿಸಲ್ಪಟ್ಟಿದ್ದ ಕೆಸವಿನಕಟ್ಟೆ ಮತ್ತು ಹಲಸಿನಹಳ್ಳಿ ಗ್ರಾಮಗಳನ್ನು ಬೀಚಹಳ್ಳಿಯ ವೀರಭದ್ರದೇವರ ಸ್ಥಾನಿಕ ಹೊಂನಹಲಗೆ ಲಿಂಗಣ್ಣನಿಗೆ ಕಾಣಿಕೆಯಾಗಿ ಕೊಟ್ಟನೆಂದು ತಿಳಿದುಬರುತ್ತದೆ. ಅವೋಬಳ ದೇವರಾಜಯ ಚೋಳಮಹಾಅರಸನು ಸಹ ಅಪ್ರತಿಮ ಮಲ್ಲನೆಂಬ ಬಿರುದನ್ನು ಪಡೆದಿರುವುದನ್ನು ಗಮನಿಸಿದರೆ ಮೇಲೆ ಹೇಳಿರುವ ಚನ್ನದೇವ ಚೋಡಮಹಾಅರಸ ಹಾಗೂ ಅವೋಬಳ ದೇವರಾಜಯ ಚೋಳಮಹಾಅರಸ ಬಹುಶಃ ಒಂದೇ ಮನೆತನಕ್ಕೆ ಸೇರಿದವರೆಂದು ಊಹಿಸಬಹುದು.

ಗುತ್ತಲಿನ ಪಾಳೆಯಗಾರ: ಕ್ರಿ.ಶ. 1564ರ ಮಂಡ್ಯದ ಗುತ್ತಲಿನ 63ನೇ ಶಾಸನ ಗುತ್ತಲಿನಲ್ಲಿ ಶಿವಾಜಿನಾಯಕನೆಂಬ ಪಾಳೆಯಗಾರನ ಬಗ್ಗೆ ಮಾಹಿತಿ ನೀಡುತ್ತದೆ. ಗುತ್ತಲಿನ ಮತ್ತೊಂದು ಹೆಸರು ಅರ್ಕಿಗುಪ್ತಿಪುರ. ಇಲ್ಲಿನ ದೇವಾಲಯದ ಪೂಜೆಯ ಹಕ್ಕಿನ ಬಗ್ಗೆ ಗುತ್ತಲಿನ ಬ್ರಾಹ್ಮಣರಿಗೂ ಮತ್ತು ಕೆಲವು ಅರ್ಕಒಡೆಯರ ನಡುವೆ ವಿವಾದವುಂಟಾದಾಗ ಪಾಳೆಯಗಾರ ಶಿವೋಜಿನಾಯಕ ಮತ್ತು ಅಮಲ್ದಾರ ವೆಂಕಟಪ್ಪನಾಯಕರಿಗೆ ದೂರು ನೀಡಲಾಯಿತು. ಆಗ ದಿವ್ಯ ಪರೀಕ್ಷೆಯ ಮೂಲಕ (ಕಾದ ತುಪ್ಪದಲ್ಲಿ ಕೈಯನ್ನು ಅದ್ದುವುದು) ಅರ್ಕಒಡೆಯನಿಗೆ ದೇವಾಲಯದ ಪೂಜೆಯ ಹಕ್ಕನ್ನು ದೇವಾಲಯದ ಆಸ್ಥಿಯನ್ನು ನೀಡಲಾಯಿತು. ಕ್ರಿ.ಶ 1564ರ ವೇಳೆಗಾಗಲೇ ಅಮಲ್ದಾರಿಕೆ ಅಸ್ತಿತ್ವದಲ್ಲಿತ್ತೆಂಬುದು ಅನುಮಾನಕ್ಕೆ ಕಾರಣವಾಗಿದೆ.

ಉಪಸಂಹಾರ: ಹೀಗೆ ಶಾಸನಾಧಾರಗಳಿರುವ ಮತ್ತು ಸಾಮಂತರೆಂಬುದಕ್ಕೆ ಸೂಚನೆಗಳಿರುವವರನ್ನು ಮಾತ್ರ ಗಣನೆಗೆ ತೆಗೆದುಕೊಂಡು ಮೇಲಿನ ಸಾಮಂತರ ಬಗ್ಗೆ ಅವಲೋಕಿಸಲಾಗಿದೆ. ಅನಿರ್ದಿಷ್ಟ ಉಲ್ಲೇಖವಿರುವ ಹಲವಾರು ಸಾಮಂತರ ಬಗ್ಗೆ ಮಂಡ್ಯ ಜಿಲ್ಲೆಯ ಶಾಸನಗಳಲ್ಲಿ ಮತ್ತಷ್ಟು ಮಾಹಿತಿ ದೊರೆಯಬಹುದು. ವಿಜಯನಗರದರಸರ ಮಹಾಪೂರದಲ್ಲಿ ಸ್ಥಾನಿಕ ಪ್ರಭುಗಳ ಸಾಮರ್ಥ್ಯ ಸ್ಪಷ್ಟವಾಗಿ ಗೋಚರಿಸದಿದ್ದರೂ ಒಂದು ಮಿತಿಯಲ್ಲಿ ಇವರು ಆಶ್ರಯದಾತನಿಗಾಗಿ ಮಾಡಿದ ಸಾಧನೆಗಳು, ತೋರಿದ ಸಾಹಸ ಶ್ಲಾಘನೀಯವಾದುದ್ದು, ಅಲ್ಲದೆ ಆಶ್ರಯದಾತನ ಒಳಿತಿಗಾಗಿ, ಶ್ರೇಯಸ್ಸಿಗಾಗಿ ದತ್ತಿ ಬಿಟ್ಟಿರುವುದನ್ನು ಶಾಸನಗಳಿಂದ ತಿಳಿಯಬಹುದು.

ಸಾಮಂತರು ದಂಡನಾಯಕರಾಗಿ, ಪ್ರಧಾನಿಯಾಗಿ, ಸೇನಾನಾಯಕರಾಗಿ ವಿಜಯನಗರದರಸರ ಪ್ರಾಬಲ್ಯವನ್ನು ಹೆಚ್ಚಿಸುವಲ್ಲಿ ನೆರವಾಗಿದ್ದಾರೆ. ಧಾರ್ಮಿಕವಾಗಿಯೂ ಸಾಮಂತರು ತಾವು ನಂಬಿದ ದೇವರಿಗಾಗಿ ದೇವಾಲಯಗಳನ್ನು ನಿರ್ಮಿಸಿರುವುದಲ್ಲದೆ ಪೂಜಾಕಾರ್ಯಗಳು ಜರುಗುವುದಕ್ಕೆ, ದೇವಾಲಯಗಳ ಜೀರ್ಣೋದ್ದಾರಕ್ಕೆ, ಅವುಗಳ ರಕ್ಷಣೆಗೆ ದತ್ತಿಗಳನ್ನು ನೀಡಿರುವುದು ಶ್ಲಾಘನೀಯವಾದುದು.

ಆಧಾರ ಗ್ರಂಥಗಳು

1. *ಎಪಿಗ್ರಾಫಿಯಾ ಕರ್ನಾಟಿಕ,* ಸಂಪುಟ–06 ಮತ್ತು 07, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು–1977

ಅಡಿಟಿಪ್ಪಣಿಗಳು

1. ಹ. ಕ. ರಾಜೇಗೌಡ (ಸಂ.), *ಸಿಂಗಾರ,* ಶ್ರೀ ಸಿ. ಸಿಂಗಾರಿಗೌಡ ಅಭಿನಂದನಾ ಗ್ರಂಥ, 1988, ಪು. 243.
2. ಅದೇ, ಪು. 242, 243 .
3. ಡಾ. ಎಚ್. ಎಂ. ನಾಗರಾಜು, *ವಿಜಯನಗರದ ಇಮ್ಮಡಿ ದೇವರಾಯ,* ಸಂವಹನ ಪ್ರಕಾಶನ, 1999, ಪು. 79.
5. ಡಾ. ಆರ್ ಗೋಪಾಲ್ (ಸಂ.), *ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ.*
6. *ಎ.ಕ.,* ಸಂ. 6, 1977, ಪು. 179.
7. *ಮಂಡ್ಯ ಜಿಲ್ಲಾ ಗ್ಯಾಸೆಟಿಯರ್* (ಪರಿಷ್ಕೃತ), ಪು. 75.
8. ಹ. ಕ. ರಾಜೇಗೌಡ (ಸಂ.), *ಸಿಂಗಾರ,* ಶ್ರೀ ಕೆ.ಸಿಂಗಾರಿಗೌಡ ಅಭಿನಂದನ ಗ್ರಂಥ, 1988, ಪು. 203.
9. *ಅದೇ,* ಪು. 259.
10. ಪ್ರೊ. ಷೇಕ್ ಅಲಿ, ಪ್ರಧಾನಸಂಪಾದಕರು, *ಕರ್ನಾಟಕ ಚರಿತ್ರೆ,* ಸಂಪುಟ–3, ಕನ್ನಡ ವಿಶ್ವವಿದ್ಯಾಲಯ, ಹಂಪಿ–1997, ಪು. 431, 432.
11. ಹ. ಕ. ರಾಜೇಗೌಡ (ಸಂ.), *ಸಿಂಗಾರ,* ಶ್ರೀ ಕೆ.ಸಿಂಗಾರಿಗೌಡ ಅಭಿನಂದನ ಗ್ರಂಥ, 1988, ಪು. 260.
12. *ಕರ್ನಾಟಕದ ಪರಂಪರೆ,* ಸಂಪುಟ–02, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪು. 208.
13. ಎಂ. ವಿ. ಕೃಷ್ಣಮೂರ್ತಿ ಮತ್ತು ಎಂ. ಕೇಶವಭಟ್, *ಕರ್ನಾಟಕ ಇತಿಹಾಸ ದರ್ಶನ,* ಕರ್ನಾಟಕ ಸಹಕಾರಿ ಪ್ರಕಾಶನ, 1970, ಪು. 491.
14. ಸಂಪಾದಕರು, *ಕರ್ನಾಟಕ ಚರಿತ್ರೆ,* ಸಂಪಟ–3, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ–1997, ಪು. 108–110.
15. ಡಾ. ಎ. ವಿ. ವೆಂಕಟರತ್ನಂ, *ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ,* ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, 1974, ಪು. 55.
16. ಸಂಪಾದಕರು. ಡಾ. ಡಿ. ವಿ. ಪರಶಿವಮೂರ್ತಿ (ಸಂ), *ಕೃಷ್ಣದೇವರಾಯನ ಶಾಸನಗಳು,* ಸಂಪುಟ–01, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010, ಪು. 288.
17. *ಅದೇ,* ಪು. 382.
18. *ಅದೇ,* ಪು. 485.
19. *ಅದೇ,* ಪು. 487.
20. ಅದೇ, ಪು. 505.

17

ಹಂಪಿಯ ಉದ್ಧಾನ ವೀರಭದ್ರೇಶ್ವರ ಪುರಾಣ

ಡಾ॥ ಕೆ. ರವೀಂದ್ರನಾಥ

ಕನ್ನಡದಲ್ಲಿ ವೀರಭದ್ರನನ್ನು ಕುರಿತು ಕಾವ್ಯ, ಪುರಾಣ, ವಡಬು, ವೀರಗಾಸೆ, ಪುರವಂತಿಕೆ ಮುಂತಾದ ಸಾಹಿತ್ಯ-ಸಾಹಿತ್ಯೇತರ ಆಚರಣೆ ನಂಬಿಕೆಗಳು ಹುಟ್ಟಿಕೊಂಡಿವೆ. ಇವುಗಳ ದೃಶ್ಯರೂಪಕಗಳಾಗಿ ಚಿತ್ರ-ಶಿಲ್ಪಗಳು ರಚನೆಯಾಗಿವೆ. ಡಾ. ಎಂ.ಜಿ. ನಾಗರಾಜ ಅವರು ಸಾಹಿತ್ಯೋಕ್ತ ವೀರಭದ್ರ ಎಂಬ ಕೃತಿಯಲ್ಲಿ 69 ಕೃತಿಗಳು ವೀರಭದ್ರನನ್ನು ಉಲ್ಲೇಖಿಸುವ ಪ್ರಮುಖ ಹಾಗೂ ಪ್ರಾಸಂಗಿಕ ಆಕರಗಳೆಂದು ತಿಳಿಸುತ್ತಾರೆ. ಈ ಕೃತಿಗಳು ಖಡ್ಗ, ವೃತ್ತ, ಅಷ್ಟಕ, ಷಟ್ಪದಿ, ರಗಳೆ, ತಾರಾವಳಿ, ಚೌಪದಿ ಪ್ರಕಾರಗಳಲ್ಲಿ ರಚನೆಯಾಗಿವೆ.

ದಕ್ಷಯಾಗ, ಆತನಿಂದ ಶಿವನಿಂದೆ, ದಾಕ್ಷಾಯಿಣಿಯ ಅಗ್ನಿಗೆ ಆಹುತಿಯಾದುದು, ಕೋಪಗೊಂಡ ಶಿವನ ನೇತ್ರದಿಂದ ವೀರಭದ್ರನ ಜನನ, ದಕ್ಷನ ಯಾಗನಾಶ, ಕುರಿದಲೆ ಅಲಂಕಾರ – ಇದು ವೀರಭದ್ರಕಾವ್ಯಗಳ ಕಥಾವಿವರಣೆ. ಪ್ರಸ್ತುತ ಅಪ್ರಕಟಿತ ಕಾಗದ ಹಸ್ತಪ್ರತಿಯಲ್ಲಿರುವ 'ಶ್ರೀ ವೀರಭದ್ರೇಶ್ವರ ಪುರಾಣವು' ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಶಾಸ್ತ್ರ ವಿಭಾಗದಲ್ಲಿ 1362 ಕ್ರಮ ಸಂಖ್ಯೆಯಲ್ಲಿ ಸಂರಕ್ಷಿಸಲ್ಪಟ್ಟಿದೆ. 7" x 6" ಅಳತೆಯ ನೋಟುಪುಸ್ತಕದಲ್ಲಿ ಪ್ರತಿಮಾಡಿದ ಕೃತಿ.

ಈ ಕೃತಿಯ ಕರ್ತೃ ತನ್ನ ತಂದೆ-ತಾಯಿ ಹಾಗೂ ತನ್ನ ಮನೆತನದ ವಿವರವನ್ನು ಹೀಗೆ ಹೇಳಿಕೊಂಡಿದ್ದಾನೆ.

ಚರಿತೆಯಿದನತಿ ಹರುಷದಿಂದಲಿ
ವರೆದ ಚಾಗಿಯ ಮಠದ ಸನ್ನುತ
ಪರಮ ಪಂಪಾರಾಧ್ಯರುದ್ರಾಂಬೆಯರ ತನುಜಾತಾ ।
ನಿರುತ ಗುರುಚರಲಿಂಗಪೂಜಕ
ಸರಸ ಪಂಡಿತ ಚನ್ನಬಸವನು
ಹರುಷದಿಂದ ನಾಲಿಪುದು ಸದುಹೃದಯರಾದರದೀ ॥ (1 ಸಂಧಿ-18 ಪದ್ಯ)

ಚಾಗಿಯ ಮಠದ ಪಂಪಾರಾಧ್ಯ-ರುದ್ರಾಂಬೆಯರ ಮಗನಾದ ಪಂಡಿತ ಚನ್ನಬಸವನು ಈ ಚರಿತ್ರೆಯನ್ನು ಬರೆದುದಾಗಿ ತಿಳಿಸುತ್ತಾನೆ. ಈತನು ಈ ಕಾವ್ಯವನ್ನು ನಂದೂರ ಸದಾಶಿವ ಸ್ವಾಮಿಗಳ ದಯದಿಂದ ಬರೆದುದಾಗಿ ಹೇಳಿಕೊಂಡಿದ್ದಾನೆ.

ಉಭಯ ನಂದೂರೇಶನೆನಿಸುತ
ಲಭವ ಸಮಮಹಿಮೆಯೊಳು ಮೆರೆಯುವ
ಪ್ರಭುವರಾಗ್ರಣಿಸುತ ಸದಾಶಿವ ಸ್ವಾಮಿಗಳು ದಯದೀ ।
ಶುಭಗಳಿಗೆ ರಾಯಚೂರು ಜಿಲ್ಲೆಯ
ಪ್ರಭುಗಳಧಿಕಾರ ಸಮಯದಲಿ ಬಹು
ವಿಭವದಿಂದಲ ಕರೆದರೆನ್ನಗತಿ ಮುದದೀ ॥ (1 ಸಂಧಿ – 15 ಪದ್ಯ)

ಈಗಾಗಲೇ 13ನೇ ಶತಮಾನದ ಹಂಪೆಯ ರಾಘವಾಂಕ ಕವಿ 'ವೀರೇಶ ಚರಿತೆ' ಎಂಬ ಮೀಸಲುಗವಿತೆಯನ್ನು ಬರೆದಿದಾನೆ. ಇದು 2 ಸಂಧಿಯ 127 ಪದ್ಯಗಳ ಚಿಕ್ಕ ಕೃತಿ. "ಕೃತಿಪತಿ ಓರಂಗಲ್ಲಿನ ವೀರೇಶ್ವರ ನೀ ಕೃತಿಗೆ" ಎಂದು ಸಂಧಿ 1 – ಪದ್ಯ 8ರಲ್ಲಿ ಹೇಳಿರುವುದರಿಂದ ಈ ಮೀಸಲುಗವಿತೆಯ ಕಥಾನಾಯಕ ಓರಂಗಲ್ಲಿನ ವೀರೇಶ. ಆದರೆ ರಾಯಚೂರಿನ ಚಾಗಿಹಿರೇಮಠದ ಪಂಡಿತ ಚನ್ನಬಸವಕವಿಗೆ ಹಂಪೆಯ ಉದ್ಧಾನ ವೀರಭದ್ರ ಕಥಾನಾಯಕನಾಗಿದ್ದಾನೆ.

ಕೃತಿಯಿದುವೆ ವೀರೇಶ ಮಹಿಮೆಯು
ಕೃತಿಪತಿಯು ಪಂಪಾ ಮಹೇಶನ
ಸುತನು ಉದ್ಧಾನ ವೀರಭದ್ರೇಶ್ವರನು ಎಂಬುದರಿಂ ।
ಕೃತಿಯ ಕೇಳ್ವುದು ಭಕ್ತಿಭಾವದಿ
ಮತಿಯುತರು ಸಲೆ ಶಾಂತಿ ಚಿತ್ತದಿ
ಕೃತಿಯೊಳಗೆ ದೋಷಗಳೆಣಿಸದೆ ಸರ್ವಕಾಲದಲಿ ॥ (ಸಂಧಿ 1 – ಪದ್ಯ 14)

ಈ ಕೃತಿಯನ್ನು ಶಾಲಿವಾಹನ ಶಕೆ 1888ರಲ್ಲಿ ಸೋಮವಾರದಂದು ಸಮಾಪ್ತಿಯಾಯಿತೆಂದು 5 ಸಂಧಿ 118ನೇ ಪದ್ಯದಲ್ಲಿ ಹೇಳಲಾಗಿದೆ.

ಮೂರು ಎಂಟೆಂಟೊಂದು ಶಕದಲಿ
ತೋರುವಾ ಪ್ಲವರೂರ್ಜಿಮಾಸದಿ
ಮಾರಮಣ ತಿಥಿ ವಕಳ ಪಕ್ಷದ ಸೋಮವಾರದಲಿ ॥

ಎಂದು ಮುಕ್ತಾಯವಾಗಿದೆ.

ಪ್ರಸ್ತುತ ಕೃತಿಯಲ್ಲಿ 1ನೇ ಸಂಧಿ ಪೀಠಿಕಾ ಸಂಧಿ, 2ನೇ ಸಂಧಿ ದಕ್ಷನ ಯಜ್ಞ ಮತ್ತು ಶಿವನ ಗೈರುಹಾಜರಿ ಪ್ರಸಂಗ, 3ನೇ ಸಂಧಿ ವೀರೇಶನ ಜನನ, 4ನೇ ಸಂಧಿ ಅಸುರರನ್ನು ಸದೆಬಡಿಯುವ ಪ್ರಸಂಗ, 5ನೇ ಸಂಧಿ ಅಷ್ಟಾವರಣ ಮಹಿಮೆಯ ಪ್ರತಿಪಾದನೆಯನ್ನು ಒಳಗೊಂಡಿದೆ. ಅಂದರೆ ಮೊದಲ ನಾಲ್ಕು ಸಂಧಿಗಳು ಈ ಮೊದಲು ರಚನೆಯಾದ ವೀರೇಶ ಚಿರತೆಯ ವಸ್ತುವನ್ನೊಳಗೊಂಡಿದ್ದರೆ ಕೊನೆಯ ಸಂಧಿ ವೀರಶೈವ ಸಮಾಜೋ–ಸಾಂಸ್ಕೃತಿಕ ಆವರಣಗಳಾದ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ ಮಹತ್ವಗಳನ್ನು ವರ್ಣಿಸುವುದಕ್ಕೆ ಮೀಸಲಾಗಿದೆ.

ಇದಕ್ಕೂ ವಿಶೇಷವೆಂದರೆ ಹನುಮಂತನ ಘನವಾದ ತಪಸ್ಸಿಗೆ ಮೆಚ್ಚಿದ ಉದ್ಧಾನ ವೀರಭದ್ರ ಆತನಿಗೆ ಲಿಂಗವನೀಯುತ ಅಷ್ಟಾವರಣ ಮಹಿಮೆಯ ಬೋಧಿಸಿದನೆಂಬುದು. ಈ ನೆಪದಲ್ಲಿ ರಾಮಚಂದ್ರನು ಗೌಲಮಿಯ ತಟದಲ್ಲಿಯ ರಾಮಗಿರಿ ಸುಕ್ಷೇತ್ರದಲ್ಲಿ ನಿಲ್ಲುವುದು, ಪಡೆದು ತಾ ಪಾಶುಪತ ಶರವನು ನಡೆದು ಕಿಷ್ಕಿಂದೆಯಲ್ಲಿ,

ರಿಪುನಿರ್ಧೂಮ ನೆಲೆಸಿದ ಅಮಲ ಪಂಪಾಕ್ಷೇತ್ರದಡೆಯಲಿ, ತೆರಳಿ ಉದ್ಧಾನ ವೀರಭದ್ರೇಶ್ವರನಿಗೊಂದಿಸಿ, ನುಡಿಸಿ ಪೂಜಿಸಿ ಭರದಿ ಬಂದಾ ಹೇಮಕೂಟಾಚಲದ ಕಂದರದಿ – ಎಂಬ ಕಾವ್ಯೋಕ್ತ ಉಲ್ಲೇಖದಲ್ಲಿ ರಾಮಾಯಣದ ಕಥೆ, ಹನುಮ–ರಾಮರ ಸಂಬಂಧ, ಹಂಪಿ ಪರಿಸರದಲ್ಲಿ ಸೀತೆಗಾಗಿ ಶೋಧ, ಅಲ್ಲಿಯ ಗೌತಮಿ ತಟಾಕ, ರಾಮಗಿಸುಕ್ಷೇತ್ರ, ಕಿಷ್ಕಿಂದೆ, ಪಂಪಾಕ್ಷೇತ್ರ, ಹೇಮಕೂಟಾಚಲ ಮುಂತಾದ ಸ್ಥಳಮಹಾತ್ಮ್ಯೆಯನ್ನು ಹಿಡಿದಿಡಲಾಗಿದೆ.

ಹಂಪಿಯ ಇನ್ನೊಂದು ವಿಶೇಷವೆಂದರೆ ನಮ್ಮ ಪುರಾಣಗಳಿಗೆ ಲಾಕ್ಷಣಿಕ ಪರಿವರ್ತನಾರೂಪವನ್ನು ನೀಡಿದ್ದು. ಉದಾ: ಹದಿನೆಂಟು ವರ್ಣನೆಗಳಿಗೆ ಬದಲಾಗಿ ಸೃಷ್ಟಿರಚನೆ, ಶಿವಾಧಿಕ್ಯ, ವೀರಶೈವಾಧಿಕ್ಯ, ನಾರದದರ್ಶನ, ಶಿವಸ್ಥಾನ ವರ್ಣನೆ, ಪವಾಡಗಳು, ಗಣಾಧೀಶ್ವರರ ಕಥೆ ಮುಂತಾದವುಗಳಿಗೆ ಹೆಚ್ಚು ಪ್ರಾಶಸ್ತ್ಯ ನೀಡಿದ್ದು. ಈ ಪರಂಪರೆಗೆ ಚಾಗಿ ಚನ್ನಬಸವಕವಿ ಹೊರತಾಗಿಲ್ಲ.

> "ಕೃತಿಯ ಪದಿನೆಂಟಂಗಗಳು ಯೀ
> ಕೃತಿಯೊಳಿಲ್ಲವದದು ...."

ಎಂದು ಪೀಠಿಕಾ ಸಂಧಿಯಲ್ಲಿ ಹೇಳಿಕೊಂಡಿದ್ದಾನೆ.

ಪ್ರಸ್ತುತ ಕೃತಿಯನ್ನು ಪ್ರತಿಮಾಡಿದವರು ಹೊಸಪೇಟೆ ತಾಲ್ಲೂಕಿನ ಬೈಲುವದ್ದೀಗೇರಿಯ ಬಿ.ಎಂ. ಶಿವರುದ್ರಯ್ಯ ಸ್ವಾಮಿಗಳು. ತೀರಾ ಇತ್ತೀಚಿನ ರಚನೆಯಾದ ಈ ಕಾವ್ಯ ಚಾರಿತ್ರಿಕ ದೃಷ್ಟಿಯಿಂದ ಮಹತ್ವದ್ದಲ್ಲ. ಆದರೆ ರಾಚೋಟಿ ವೀರಭದ್ರ, ಸಿಂಗಚಲೂರು ವೀರಭದ್ರ, ಗೊಡಚಿ ವೀರಭದ್ರ, ಓರಂಗಲಿನ ವೀರಭದ್ರರಂತೆ ಹಂಪಿಯ ಉದ್ಧಾನ ವೀರಭದ್ರನನ್ನು ಕುರಿತು ಬರೆದ ಏಕೈಕ ಕೃತಿ ಇದಾಗಿದೆ.

ಹಂಪಿಯಲ್ಲಿ ನಿಂತ ರಾಘುವಾಂಕನಿಗೆ ದೂರದ ಓರಂಗಲ್ಲಿನ ವೀರಭದ್ರ ಕಥಾನಾಯಕನಾಗುವ ಔಚಿತ್ಯವೇನು? ಪ್ರಾಯಶಃ ಓರಂಗಲ್ಲು ಶೈವಕೇಂದ್ರವಾಗಿ ಪ್ರಸಿದ್ಧಿಹೊಂದಿರುವ ಕಾರಣ ರಾಘವಾಂಕನಿಗೆ ಪ್ರಭಾವ ಆಗಿರಬಹುದೇ? ಕನ್ನಡದಲ್ಲಿ ಪಂಪರನ್ನಾದಿ ಕವಿಗಳು ತಮ್ಮ ಆಶ್ರಿತರನ್ನು ಪುರಾಣ ವ್ಯಕ್ತಿಗಳೊಂದಿಗೆ ತಗುಳ್ಚಿ ಹೇಳುವ ನೆಪದಲ್ಲಿ ನಮ್ಮ ಅರಿಕೇಸರಿ ಮುಂತಾದ ರಾಜರ ನಿಜ ವ್ಯಕ್ತಿತ್ವವನ್ನು ಚಿತ್ರಿಸಿದಂತೆ ತೋರಲಿಲ್ಲ. ಹೀಗಾಗಿ ಪಂಪನಂಥ ಮಹಾಕವಿಯು ಚಿತ್ರಿಸಿದ ಅರಿಕೇಸರಿಗಿಂತ ನಿರಾಡಂಬರನಾಗಿ ಚರಿತ್ರೆಯಲ್ಲಿ ಹೆಸರು ಮಾಡಿದ ಪಾಂಚಾಳಗಂಗನ ಕುಮಾರರಾಮ ಹೆಚ್ಚು ಚಾರಿತ್ರಿಕ ದೃಷ್ಟಿಯಿಂದ ಪ್ರಿಯನಾಗುತ್ತಾನೆ; ಅಧ್ಯಯನ ಯೋಗ್ಯನಾಗುತ್ತಾನೆ. ಈ ದೃಷ್ಟಿಕೋನದಿಂದ ಹಂಪಿ ಪರಿಸರದ ಕಾವ್ಯಗಳನ್ನು ಪುನರ್ ಅಧ್ಯಯನಕ್ಕೆ ಒಳಪಡಿಸುವ ಸಾಧ್ಯತೆಗಳ ಕಡೆಗೆ ಈ ಚಿಕ್ಕ ಕೃತಿಯ ಪರಿಚಯ ಸಾಧ್ಯವಾಗುತ್ತದೆಂಬುದನ್ನು ವಿದ್ವಾಂಸರ ಗಮನಕ್ಕೆ ತರಲು ಪ್ರಯತ್ನಿಸುತ್ತೇನೆ.

ಇನ್ನು ಅದೇ ರಾಘವಾಂಕನ ಸೋಮನಾಥ ಚಾರಿತ್ರ್ಯದ ಆದಯ್ಯ ಮತ್ತು ಅಬ್ಬಲೂರಿನ ಏಕಾಂತರಾಮಯ್ಯ, ಅಂಬಿಗರ ಚೌಡಯ್ಯ, ವೀರಘಂಟಿ ಮಡಿವಾಳ ಮಾಚಿದೇವ, ಹಡಪದ ಅಪ್ಪಣ್ಣ, ಗುಂಡಬ್ರಹ್ಮಯ್ಯ ಮುಂತಾದವರನ್ನು ಗಣಾಚಾರ ಸಂಪ್ರದಾಯದ ವೀರಭದ್ರನ ಪಂಥದವರಾಗಿ ಅಧ್ಯಯನ ಮಾಡುವ ಅಗತ್ಯದ ಕಡೆಗೆ ಈವರೆಗಿನ ವೀರಭದ್ರಪುರಾಣಗಳು ಬೆರಳುಮಾಡಿ ತೋರಿಸುತ್ತವೆಂಬುದನ್ನು ಲಕ್ಷಿಸಬೇಕು.

18

ಕುಹುಯೋಗದಲ್ಲಿ ವ್ಯಾಸರಾಯರ ಸಿಂಹಾಸನಾರೋಹಣ : ಒಂದು ಕಟ್ಟುಕತೆ

ಡಾ॥ ಹೆಚ್. ಚಂದ್ರಶೇಖರ

ಪೀಠಿಕೆ

ಮೈಸೂರು ಜಿಲ್ಲೆಯ ಸೋಸಲೆ ಬಳಿಯ ಬನ್ನೂರು ಗ್ರಾಮದಲ್ಲಿ ಕ್ರಿ.ಶ. 1446 (1447)ರಲ್ಲಿ ಜನಿಸಿ, ಕ್ರಿ.ಶ. 1540 ಅಥವಾ 1539ರಲ್ಲಿ ಹಂಪಿಯಲ್ಲಿ (ನವವೃಂದಾವನ) ವೃಂದಾವನಸ್ಥರಾದ ವ್ಯಾಸರಾಯರು ಮಾಧ್ವ ಸಂಪ್ರದಾಯದ ಅತ್ಯಂತ ಪ್ರಮುಖ ಹಾಗೂ ಪ್ರಭಾವಿ ಸನ್ಯಾಸಿಗಳು. ಅವರನ್ನು ವಿಜಯನಗರದ ಸಾಮ್ರಾಟ ಕೃಷ್ಣದೇವರಾಯನು ತನ್ನ ಗುರುವೆಂದು ಸ್ವೀಕರಿಸಿ ಅಪಾರ ಭಕ್ತಿಗೌರವಗಳಿಂದ ಕಾಣುತ್ತಿದ್ದನು ಎಂಬುದಕ್ಕೆ ರಾಯರ ಹಲವಾರು ಶಾಸನಗಳು ಸಾಕ್ಷಿಯಾಗಿವೆ.[1]

ಇಂಥ ಮಹಾನುಭಾವರು ಕುಹುಯೋಗದ ಕ್ಷಣಗಳಲ್ಲಿ ಕರ್ನಾಟಕ ಸಿಂಹಾಸನವನ್ನೇರಿ ರಾಯನನ್ನು ಕಾಪಾಡಿದರೆಂದು ಕೆಲ ಇತಿಹಾಸಕಾರರು ಹಾಗೂ ಧಾರ್ಮಿಕ ಬರಹಗಾರರು ನಂಬುತ್ತಾರೆ.[2,3] ಇಂಥ ಅಪರೂಪದ ಘಟನೆಯ ಬಗ್ಗೆ ಐತಿಹಾಸಿಕ ಮತ್ತು ವೈಜ್ಞಾನಿಕ ಹಿನ್ನೆಲೆಗಳಲ್ಲಿ ವಿಶ್ಲೇಷಿಸುವುದು ಈ ಸಂಪ್ರಬಂಧದ ಉದ್ದೇಶವಾಗಿದೆ. ಮುಂದೆ ಚರ್ಚಿಸುವುದಕ್ಕೆ ಮೊದಲು ಕುಹುಯೋಗ ಅಂದರೇನು ಎಂಬುದನ್ನು ತಿಳಿಯುವುದು ಅವಶ್ಯಕ.

ಕುಹುಯೋಗ ಎಂದರೇನು?

ವೆಂಕೋಬರಾಯರು ಕುಹುಯೋಗವೆಂದರೆ ಸೂರ್ಯ, ಮಂಗಳ (ಅಂಗಾರಕ-Mars) ಮತ್ತು ಶನಿ (Saturn) ಗ್ರಹಗಳು ರಾಹುವಿನಲ್ಲಿ ಒಂದೇ ಭೂಕೇಂದ್ರೀಯ ರೇಖಾಂಶದಲ್ಲಿ ಒಂದಾಗಿರುವುದು (in conjunction) ಎಂದು ವಿವರಿಸುತ್ತಾರೆ. (ಪ್ಯಾರಾ 136).[4] ಕೆಲವು ಲೇಖಕರು ರಾಹು ಕೂಡ ಒಂದು ಗ್ರಹವೆಂದು ಭಾವಿಸಿ ಈ ನಾಲ್ಕು ಗ್ರಹಗಳು ಒಂದೇ ಮನೆಯಲ್ಲಿ ಒಂದಾಗಿರುವುದೇ ಕುಹುಯೋಗವೆಂದು ಬರೆಯುತ್ತಾರೆ.[1] ಇದು ಸರಿ ಅಲ್ಲ. ರಾಹು ಮತ್ತು ಕೇತುಗಳು ಗ್ರಹಗಳಲ್ಲ ಅಥವಾ ಯಾವುದೇ ಆಕಾಶಕಾಯಗಳಲ್ಲ. ಅವೆರಡೂ ಒಂದೊಂದು ಬಿಂದುಗಳು. ಭೂಮಿಯನ್ನು ಪಶ್ಚಿಮ-ಪೂರ್ವದಿಶೆಯಲ್ಲಿ ಪರಿಭ್ರಮಿಸುತ್ತಿರುವ ಚಂದ್ರಕ್ರಾಂತಿ ವೃತ್ತವನ್ನು ಧ್ರುವ ನಕ್ಷತ್ರವಿರುವ ಗೋಳಾರ್ಧದೆಡೆಗೆ ದಾಟುವ ಬಿಂದುವಿಗೆ ರಾಹು ಎಂದು ಕರೆಯಲಾಗುತ್ತದೆ (ascending node). ಹಾಗೆಯೆ

ಉತ್ತರ ಗೋಳಾರ್ಧದಿಂದ ದಕ್ಷಿಣ ಗೋಳಾರ್ಧದಕಡೆಗೆ ದಾಟುವ ಬಿಂದುವನ್ನು ಕೇತು (descending node) ಎಂದು ಕರೆಯಲಾಗುತ್ತದೆ. ಇದು ಖಗೋಳಶಾಸ್ತ್ರದಲ್ಲಿ ವಿವರಿಸಲಾಗುವ ಸರಿಯಾದ ವೈಜ್ಞಾನಿಕ ವಿವರಣೆ (ನೋಡಿ ಚಿತ್ರ 1).[5,6]

ಎಷ್ಟು ಕುಹುಯೋಗಗಳು?

ಇಂಥ ಕುಹುಯೋಗವು ಯಾವಾಗ ಸಂಭವಿಸಿತು ಎಂಬುದನ್ನು ತಿಳಿಯುವುದು ಅವಶ್ಯ. ಸ್ವಾಮಿ ಕನ್ನುಪಿಳ್ಳೆಯವರ ಕೋಷ್ಟಕವನ್ನಾಧರಿಸಿ ಗುರುವಾರ ಫೆಬ್ರುವರಿ 4 ಕ್ರಿ.ಶ. 1524ರಂದು (4–2–1524) ಸಂಭವಿಸಿತೆಂದು ಇತಿಹಾಸಕಾರರು ಬರೆಯುತ್ತಾರೆ. ಅಂದು ಅಮಾವಾಸ್ಯೆಯಾಗಿತ್ತು. ಅಂದು ಮೂರು ಮುಕ್ಕಾಲು ಘಳಿಗೆ ಕಾಲ ವ್ಯಾಸರಾಯರು ಸಿಂಹಾಸನವನ್ನೇರಿ ಕೃಷ್ಣದೇವರಾಯನಿಗೆ ಒದಗಬಹುದಾದ ಅಪಾಯವನ್ನು (ಮೃತ್ಯು) ನೀಗಿಸಿದರೆಂದು ಕೆಲ ಇತಿಹಾಸಕಾರರು ಬರೆಯುತ್ತಾರೆ.[1,4] ಆದರೆ ವೆಂಕೋಬರಾಯರು ಕೆಲವು ಜ್ಯೋತಿಷಿಗಳನ್ನು ಸಂಪರ್ಕಿಸಿ ತಮ್ಮ ಮುನ್ನುಡಿಯ ಪ್ಯಾರಾ 142ರಲ್ಲಿ ಒಟ್ಟು ಏಳು ಅಂಥ ಕುಹುಯೋಗಗಳು ಸಂಭವಿಸಿದವು ಎಂದು ಈ ಕೆಳಗಿನಂತೆ ದಿನಾಂಕಗಳನ್ನು ಕೊಟ್ಟಿದ್ದಾರೆ.[4]

ಕ್ರ.ಸಂ.	ದಿನಾಂಕ
*1.	4–2–1524
2.	22–11–1519
3.	10–11–1520
4.	29–11–1521
5.	18–11–1522
6.	7–11–1523
7.	26–11–1524

ನಾನು ಇಬ್ಬರು ಖಗೋಳಶಾಸ್ತ್ರಜ್ಞರೊಡನೆ (ಡಾ॥ ಬಿ. ಎಸ್. ಶೈಲಜಾ ಮತ್ತು ಡಾ॥ ಎಸ್. ಬಾಲಚಂದ್ರರಾವ್) ಚರ್ಚಿಸಿದ್ದೇನೆ. ಈ ಕುಹುಯೋಗದ ಪರಿಕಲ್ಪನೆ ಖಗೋಳಶಾಸ್ತ್ರದಲ್ಲಿಲ್ಲ, ಇದೊಂದು ಫಲಜ್ಯೋತಿಷ್ಯದ ಪರಿಕಲ್ಪನೆ ಎಂಬುದು ಚರ್ಚೆಯಿಂದ ತಿಳಿದುಬಂತು.

ಸಮಕಾಲೀನ ಶಾಸನಗಳಲ್ಲಿ ಮತ್ತು ಸಾಹಿತ್ಯದಲ್ಲಿ ಕುಹುಯೋಗದ ಉಲ್ಲೇಖವಿಲ್ಲ

ಈ ಸದರಿ ಕುಹುಯೋಗದಂದು ರಾಜಗುರು ವ್ಯಾಸರಾಯರು ಸಿಂಹಾಸನವನ್ನೇರಿದರು ಎಂದು ಯಾವ ಸಮಕಾಲೀನ ಇತಿಹಾಸಕಾರರು ದಾಖಲಿಸಿಲ್ಲ. ರಾಯರ ಶಾಸನಗಳಲ್ಲಿಯೂ ಈ ಬಗ್ಗೆ ಉಲ್ಲೇಖವಿಲ್ಲ.[1] ಆದರೆ ವೈಷ್ಣವ ಸಂಪ್ರದಾಯಕ್ಕೆ ಸೇರಿದ ಕೆಲವರು ಇತಿಹಾಸಕಾರರು ಮತ್ತು ದಾಸಸಾಹಿತ್ಯದ ಲೇಖಕರು ಇದು ಶಾಸನೋಕ್ತ ಘಟನೆ ಎಂದು ಬರೆದಿದ್ದಾರೆ.[2,3] ರಾಯನು ವ್ಯಾಸರಾಯರಿಗೆ ಮಾಡಿದ ರತ್ನಾಭಿಷೇಕ ಮತ್ತಿತರ ದಾನಗಳು ಕುಹುಯೋಗದಿಂದ ಪಾರಾದ್ದರಿಂದ ನೀಡಿದ ದಾನಗಳೆಂದು ಇವರು ಬರೆಯುತ್ತಾರೆ. ಈ ಶಾಸನಗಳಲ್ಲಿ ರಾಯರು

* ಕುಹುಯೋಗವನ್ನು ಮಾತ್ರ ಇತಿಹಾಸಕಾರರು ಉಲ್ಲೇಖಿಸಿದ್ದಾರೆ.

ಭಕ್ತಿಪೂರ್ವಕವಾಗಿ ವ್ಯಾಸರಾಯರಿಗೆ ಪೂಜೆ, ಅಭಿಷೇಕ ಮಾಡಿದ್ದು ಮಾತ್ರ ಉಲ್ಲೇಖವಾಗಿದೆ. ಕುಹುಯೋಗ ನಿಜವಾಗಿ ನಡೆದು, ವ್ಯಾಸರಾಯರು ಸಿಂಹಾಸನಾರೋಹಣ ಮಾಡಿದ್ದೇ ಆಗಿದ್ದರೆ, ಇದೊಂದು ಅತ್ಯಪೂರ್ವ ಘಟನೆಯಾಗಿದ್ದು ಶಾಸನಗಳಲ್ಲಿ, ಸಮಕಾಲೀನ ಪ್ರವಾಸೀ ಬರಹಗಳಲ್ಲಿ ಖಂಡಿತವಾಗಿ ಉಲ್ಲೇಖಿತವಾಗುತ್ತಿತ್ತು.[7]

ವ್ಯಾಸಂಯೋಗಿಚರಿತಮ್

ಸೋಮನಾಥ ಕವಿ ಸಂಸ್ಕೃತದಲ್ಲಿ ಬರೆದ ಸಮಕಾಲೀನ ಕಾವ್ಯದಲ್ಲಿಯೂ ಈ ಸದರಿ ತತ್ಕಾಲೀನ ಸಿಂಹಾಸನಾರೋಹಣದ ವರ್ಣನೆ ಇಲ್ಲ. ಸೋಮನಾಥಕವಿಯು "ವ್ಯಾಸಯೋಗಿಚರಿತಮ್" ಬರೆದು ಸ್ವತಃ ವ್ಯಾಸರಾಯರಿಗೆ ಅರ್ಪಿಸಿದಾಗ ವ್ಯಾಸರಾಯರು ಕವಿಯನ್ನು ಸನ್ಮಾನಿಸಿದರೆಂದರೆ ಇದೊಂದು ನಂಬಲರ್ಹ ಕೃತಿ. ಇಂಥ ಕೃತಿಯಲ್ಲಿ ಈ ಸಿಂಹಾಸನಾರೋಹಣದ ಉಲ್ಲೇಖವಿಲ್ಲವಾದ್ದರಿಂದ ಈ ಸಿಂಹಾಸನಾರೋಹಣದ ಘಟನೆಯನ್ನು ನಂಬಲಾಗದೆಂದು ಇತಿಹಾಸಕಾರ್ತಿ ಕೊಂಡೂರಿ ಸರೋಜಿನಿದೇವಿ ಅಭಿಪ್ರಾಯಪಟ್ಟಿದ್ದಾರೆ.[8]

ರಾಯವಾಚಕ

ಪಾಂಡ್ಯ ರಾಜಧಾನಿ ಮಧುರೆಯ ಕಾಶಿ ವಿಶ್ವನಾಥ ನಾನಯ್ಯನ ರಾಯಭಾರಿ ಬರೆದಿರುವ "ರಾಯವಾಚಕ" ಒಂದು ಪ್ರಮುಖ ತೆಲುಗು ಕೃತಿ ಎಂದೂ, ಪ್ರಮುಖ ಐತಿಹಾಸಿಕ ಆಕರಗ್ರಂಥವೆಂದು ಪರಿಗಣಿಸಲಾಗಿದೆ. ಈ ಗದ್ಯ ಕೃತಿಯನ್ನು ರಚಿಸಿರುವ ಲೇಖಕನ ಹೆಸರು ಗೊತ್ತಾಗಿಲ್ಲವೆಂದು ಇದನ್ನು ಅನುವಾದಿಸಿರುವ ಗುರುಮೂರ್ತಿ ಪೆಂಡಕೂರು ತಿಳಿಸುತ್ತಾರೆ.[9]

ಕೃಷ್ಣದೇವರಾಯನ ಆಸ್ಥಾನದಲ್ಲಿ ಮಧುರೆಯ ಕಾಶೀ ವಿಶ್ವನಾಥ ನಾನಯ್ಯನ ರಾಯಭಾರಿಯಾಗಿದ್ದ ಈ ಅನಾಮಧೇಯ ಲೇಖಕನೂ ಕುಹುಯೋಗದ ಬಗ್ಗೆಯಾಗಲೀ, ವ್ಯಾಸರಾಯರ ತತ್ಕಾಲೀನ ಸಿಂಹಾಸನಾರೋಹಣದ ಬಗ್ಗೆಯಾಗಲೀ ಬರೆದಿಲ್ಲ. ಬದಲಾಗಿ ಕೃಷ್ಣದೇವರಾಯನ ಆಡಳಿತ ಮತ್ತು ದಿನಚರಿಯ ವಿವರಗಳನ್ನು ಈ ಲೇಖಕನು ನಂಬಲರ್ಹ ಮಾಹಿತಿಗಳನ್ನು ನೀಡುತ್ತಾನೆ. ಇಂಥ ವರದಿಯಲ್ಲಿ ಸದರಿ ತತ್ಕಾಲೀನ ಸಿಂಹಾಸನಾರೋಹಣದ ಉಲ್ಲೇಖವಿಲ್ಲ ಎಂಬುದನ್ನು ಗಮನಿಸಲೇಬೇಕು.

ಅಮುಕ್ತಮೌಲ್ಯದ

ಇನ್ನು ರಾಯನೇ ರಚಿಸಿದ ತೆಲುಗು ಚಂಪು ಕಾವ್ಯ "ಅಮುಕ್ತ ಮಾಲ್ಯದ"ದಲ್ಲಿ ಕುಹುಯೋಗದ ಉಲ್ಲೇಖವೇ ಇಲ್ಲ. ಅದರ ಬದಲಾಗಿ ಮೂರು ನೈಸರ್ಗಿಕ ವಿಕೋಪಗಳ ಉಲ್ಲೇಖವಿದೆ (IV-242) ಮತ್ತು ಅವುಗಳ ದುಷ್ಪರಿಣಾಮಗಳ ಪರಿಹಾರಕ್ಕಾಗಿ ಬ್ರಾಹ್ಮಣರಿಗೆ ಯಥೇಚ್ಛವಾಗಿ ದಾನಗಳನ್ನು ನೀಡಬೇಕೆಂದು ರಾಯನು ಬರೆದಿದ್ದಾನೆ (IV-253). ಇದೊಂದು ಮೂಢನಂಬಿಕೆಯ ಉದಾಹರಣೆ. ರಾಜನಾದವನು ವಿಕೋಪಗಳಿಗೆ ಒಳಗಾದ ಪ್ರಜೆಗಳಿಗೆ ಪರಿಹಾರ ನೀಡಬೇಕು; ಅದರ ಬದಲಾಗಿ ಬ್ರಾಹ್ಮಣರಿಗೆ ದಾನಗಳನ್ನು ನೀಡುವುದೆಂದರೆ ಮೂಢನಂಬಿಕೆ ಅಲ್ಲದೆ ಮತ್ತಿನ್ನೇನು? ಸದರಿ ಕಾವ್ಯದ ಸಂಬಂಧಿತ ನುಡಿಗಳ ಇಂಗ್ಲಿಷ್ ಅನುವಾದಗಳನ್ನು ಓದುಗರಿಗಾಗಿ ಈ ಕೆಳಗೆ ಕೊಡಲಾಗಿದೆ:[10]

> "That would increase in the state evils
> such as famine, disease and infant mortality !
> So, it is sufficient if the king shows bhakti towards them !
> The only evil that might then result is their suffering,

But no sin would accrue to the sovereign !
Be assured of this ! IV-242

"When the three sorts of disasters occur
The king should much money in feeding Brahmins
And in appearing gods
By offerings in the sacrificial fire !"

ಅಂದರೆ ನೋವಿನಿಂದ ಬಳಲುವ ಪ್ರಜೆಗಳಿಗಿಂತ ಭೂಸುರರ ಸಂತೃಪ್ತಿ, ಕಾಣದ ದೇವರುಗಳ ಸಂತೃಪ್ತಿ ಮತ್ತು ಯಾಗ-ಹೋಮಗಳೇ ಮುಖ್ಯವೆಂದು ಹೇಳುತ್ತಾನೆ ಈ ಸಾಮ್ರಾಟ !

ಈ ಆಕ್ಷೇಪಣೆಗೆ ಉತ್ತರವೆಂಬಂತೆ, ರಾಯನು ಈ ಚಂಪೂ ಕೃತಿಯನ್ನು ಕ್ರಿ.ಶ. 1519ರಲ್ಲಿ ಆರಂಭಿಸಿ, ಕ್ರಿ.ಶ. 1520ರಲ್ಲಿ ಮುಗಿಸಿರಬಹುದೆಂದು ಡಾ॥ ರಾಮಚಂದ್ರಯ್ಯ ಊರುಗಂಟಿ ಅಭಿಪ್ರಾಯಪಡುತ್ತಾರೆ.[8] ಆದ್ದರಿಂದ ಮುಂಬರುವ ಕುಹುಯೋಗದ ಉಲ್ಲೇಖ ಈ ಚಂಪೂಕಾವ್ಯದಲ್ಲಿಲ್ಲ ಎಂಬುದು ಅವರ ಅಭಿಪ್ರಾಯ. ವಾದಕ್ಕಾಗಿ ಈ ಊಹೆಯನ್ನು ಒಪ್ಪಿಕೊಂಡರೂ, ಮೇಲೆ ಕ್ರಸಂ. 2 ಮತ್ತು 3 ರಲ್ಲಿ ತೋರಿಸಲಾಗಿರುವ 1519 ಮತ್ತು 1520ರಲ್ಲಿ ಸಂಭವಿಸಿರಬಹುದಾದ ಕುಹುಯೋಗಗಳ ಉಲ್ಲೇಖವಾದರೂ "ಅಮುಕ್ತಮಾಲ್ಯದ"ದಲ್ಲಿ ಬರಬೇಕಾಗಿತ್ತಲ್ಲವೆ? ಈ ಕಾರಣದಿಂದಲೂ ಕುಹುಯೋಗದಲ್ಲಿ ತತ್ಕಾಲೀನ ಸಿಂಹಾಸನಾರೋಹಣದ ಘಟನೆಯನ್ನು ನಂಬುವಂತಿಲ್ಲ.

ಪುರಂಧರದಾಸರು ಮತ್ತು ಕನಕದಾಸರು

ವ್ಯಾಸರಾಯರಿಂದಲೇ ದೀಕ್ಷೆ ಪಡೆದ ಹಾಗೂ ಕೃಷ್ಣದೇವರಾಯನ ಕಾಲದಲ್ಲಿಯೇ ಬದುಕಿದ್ದ ಪುರಂಧರದಾಸರ ಮತ್ತು ಕನಕದಾಸರ ಕೃತಿಗಳಲ್ಲಿ ಈ ಸದರಿ ಘಟನೆಯ ಉಲ್ಲೇಖವಿಲ್ಲ. ತಮ್ಮ ದೀಕ್ಷಾಗುರುಗಳಾದ ಶ್ರೀ ವ್ಯಾಸರಾಯರು ಕೃಷ್ಣರಾಯನಿಗೆ ಒದಗಬಹುದಾಗಿದ್ದ ಮೃತ್ಯುದೋಷದ ಪರಿಹಾರಕ್ಕಾಗಿ ತತ್ಕಾಲಿಕವಾಗಿ ಕರ್ನಾಟಕ ಸಿಂಹಾಸನಾರೋಹಣ ಮಾಡಿದ್ದರೆ, ಈ ದಾಸವರೇಣ್ಯರು ತುಂಬುಹೃದಯದಿಂದ ಭಕ್ತಿಪೂರ್ವಕವಾಗಿ ವರ್ಣಿಸುತ್ತಿದ್ದರು. ಆದರೆ ಹಾಗಿಲ್ಲ; ಇದರ ಅರ್ಥ ಸ್ಪಷ್ಟ.

ವಿಜದಾಸರ ಕೃತಿಯಲ್ಲಿ ಮಾತ್ರ ಉಲ್ಲೇಖ ಇದೆ

ದಾಸಸಾಹಿತ್ಯದಲ್ಲಿ ವಿಜಯವಿಠ್ಠಲ ಎಂಬ ಅಂಕಿತದಿಂದ ಕೃತಿಗಳನ್ನು ರಚಿಸಿರುವ ಪುರಂಧರದಾಸರ (ಕ್ರಿ.ಶ. 1484–1564) ನಂತರ ಸುಮಾರು ನೂರು ವರ್ಷಗಳ ನಂತರ ಬಂದ ವಿಜಯದಾಸರು ಮಾತ್ರ ತಮ್ಮದೊಂದು ಕೃತಿಯಲ್ಲಿ ಶ್ರೀ ವ್ಯಾಸರಾಯನ್ನು ಭಜಿಸುವಾಗ ಈ ರೀತಿಯಾಗಿ ಹೇಳುತ್ತಾರೆ:–

"ರಾಯಗದ್ದುಗೆಯನೇರಿ ಅವನಿಗೆ ಬಂದ ಮಹ ಕು
ಹಯೋಗವನೆ ನೂಕಿ ರಾಜ್ಯದೊಳಗೆ ಇದ್ದು
ಮಾಯಗಳ ಮರ್ದಿಸಿ ಮುದದಿಂದ ಸುವರ್ಣ
ಛಾಯದಂತೆ ಕಾಂತಿಯಲಿ" (ನುಡಿ 14)"

ನನಗೆ ಲಭ್ಯವಾದ ಸಾಹಿತ್ಯ ಮತ್ತು ಶಾಸನಗಳ ಅಧ್ಯಯನದಲ್ಲಿ ಈ ನುಡಿಯಲ್ಲಿ ಮಾತ್ರ ಕುಹುಯೋಗದ ಉಲ್ಲೇಖವಿದೆ. ಆದರೆ ಇದು ಸುಮಾರು 150 ವರ್ಷಗಳ ನಂತರ ರಚನೆಯಾಗಿರುವುದರಿಂದ ನಂಬಲರ್ಹವಾದ ಐತಿಹಾಸಿಕ ದಾಖಲೆಯಾಗುವುದಿಲ್ಲ. ಬದಲಾಗಿ, ವಿಜಯದಾಸರು ತಾವು ಭಜಿಸುವ ವ್ಯಾಸರಾಯರು ಪವಾಡ

ಪುರುಷರೆಂದು ಬಿಂಬಿಸುವುದಕ್ಕಾಗಿ ಈ ನುಡಿಯನ್ನು ರಚಿಸಿದ್ದಾರೆಂದು ಹೇಳಬೇಕಾಗುತ್ತದೆ. ಬಹುಶಃ ಈ ಒಂದು ನುಡಿ ಮುಂದಿನ ಕೆಲ ಇತಿಹಾಸಕಾರರಿಗೂ ದಾಸಸಾಹಿತ್ಯದ ಅಧ್ಯಯನಕಾರರಿಗೂ ಕುಹುಯೋಗದ ಕಲ್ಪನೆಗೆ ಪ್ರೇರಣೆ ನೀಡಿರಬಹುದೆಂದು ತರ್ಕಿಸಬಹುದಾಗಿದೆ.

ಕುಹುಯೋಗದ ಚಿತ್ರ

ಭಾರ್ಗವಿ ಶಿವಯ್ಯನವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ 1972ರಲ್ಲಿ ಸಲ್ಲಿಸಿದ ತಮ್ಮ ಪಿಎಚ್.ಡಿ. ಮಹಾಪ್ರಬಂಧದಲ್ಲಿ ಒಂದು ಕುತೂಹಲಕಾರಿ ಛಾಯಾಚಿತ್ರವನ್ನು ಪ್ರಸ್ತುತಪಡಿಸಿ, ಈ ಫೋಟೊದ ಅಡಿಯಲ್ಲಿ "Sri Vysaraya on the throne on the occasion of a Kuhuyoga" ಎಂದು ಬರೆದಿದ್ದಾರೆ (ಚಿತ್ರ 2). ಆದರೆ ತಮ್ಮ ಮಹಾಪ್ರಬಂಧದಲ್ಲಿ ಎಲ್ಲಿಯೂ ಈ ವಿಷಯದ ಬಗ್ಗೆ ಒಂದು ವಾಕ್ಯವನ್ನಾದರೂ ಬರೆದಿಲ್ಲ; ಚರ್ಚಿಸಿಲ್ಲ.[12] ಇದೊಂದು ವಿರೋಧಾಭಾಸದ ಸಂಗತಿ. ಆದರೂ ಈ ಫೋಟೋವನ್ನು ಸೂಕ್ಷ್ಮವಾಗಿ ಗಮನಿಸಿದ್ದೇನೆ. ಈ ಚಿತ್ರದ ಮಧ್ಯದಲ್ಲಿ ವ್ಯಾಸರಾಯರು ಒಂದು ಪೀಠದ ಮೇಲೆ ಆಸೀನರಾಗಿದ್ದಾರೆ. ಅದೊಂದು ಸಾಮ್ರಾಟನ ಸಿಂಹಾಸನವೆನಿಸುವುದಿಲ್ಲ. ಈ ಪೀಠದ ಅಡಿಯಲ್ಲಿ 10 ಕಿಂಡಿಗಳನ್ನು ಕೊರೆಯಲಾಗಿದೆ. ಇಂಥ ಮೂರನೆಯ ಕಿಂಡಿಯೊಂದರಿಂದ ಐದು ಹೆಡೆಯ ಸರ್ಪವೊಂದು ಹೊರ ಹೋಗುತ್ತಲಿದೆ. ಅಂದರೆ ಈ ಚಿತ್ರದ ಪ್ರಕಾರ ಕುಹುಯೋಗವೆಂದರೆ ಐದು ಹೆಡೆಗಳ ಸರ್ಪ ಎಂದಂತಾಯಿತು. ನಿಸರ್ಗದಲ್ಲಿ ಸರ್ಪಕ್ಕೆ ಒಂದೇ ಒಂದು ಹೆಡೆ ಇರುತ್ತದೆಯಾದ್ದರಿಂದ ಇದೊಂದು ಅವಾಸ್ತವ ಸಂಗತಿ ಎಂದಂತಾಯಿತು. ಈ ಚಿತ್ರದ ಕಂಬಗಳು ಇತ್ಯಾದಿ ರಚನೆಗಳು ಯಾವುದೋ ಮಠದ ಸಾಧಾರಣ ಕಂಬಗಳಂತಿದೆ. ಸಾಮ್ರಾಟನ ಸಭಾಂಗಣದಂತೆ ಕಾಣುವದಿಲ್ಲ. ಇನ್ನೊಂದು ಮುಖ್ಯ ದೋಷವೆಂದರೆ ವ್ಯಾಸರಾಯರ ಪೀಠದ (ಎಡಬದಿಯಲ್ಲಿ) ಮೇಲೆಯೇ ಶಾರ್ದೂಲವು ತನ್ನ ಹಿಂಬದಿಯ ಕಾಲುಗಳನ್ನು ಊರಿ, ಮುಂದಿನ ಎರಡು ಕಾಲುಗಳನ್ನು ಆನೆಯ ತಲೆಯಮೇಲೆ ಊರಿದೆ. ಯಾವುದೇ ಸಾಮ್ರಾಟನ ಸಿಂಹಾಸನದ ಮೇಲೆ ಯಾವುದೇ ಪ್ರಾಣಿಯ ಕಾಲುಗಳನ್ನು ಊರಿದಂತೆ ರಚಿಸುವುದು ಸಾಧ್ಯವೇ ಇಲ್ಲ. ಈ ಚಿತ್ರದಲ್ಲಿ ಚಿತ್ರಿತವಾಗಿರುವ ಸಭಾಂಗಣದಲ್ಲಿ ಸಮಾನಾಂತರತೆ (Parallelism) ಇಲ್ಲ. ನಾವು ಈಗ ಹಂಪಿಯಲ್ಲಿ ನೋಡುವ ಪುರಾತತ್ವ ಅವಶೇಷಗಳಲ್ಲಿ ಸಮಾನಂತರತೆಯನ್ನು ನೋಡಬಹುದು. ಒಟ್ಟಿನಲ್ಲಿ ಹೇಳುವುದಾದರೆ ಇದು ತೀರ ಇತ್ತೀಚೆಗೆ ರಚಿತವಾದ ಒಂದು ಕಲಾಕೃತಿಯಾಗಿದೆ ಎಂಬುದು ಸ್ಪಷ್ಟ. ಇದೊಂದು ನಂಬಲನರ್ಹವಾದ ಅನೈತಿಹಾಸಿಕ ಕಾಲ್ಪನಿಕ ಕೃತಿ. ಇದನ್ನು ಮಹಾಪ್ರಬಂಧದಲ್ಲಿ ಸೇರಿಸಿರುವುದು ಆಭಾಸಕಾರಿಯಾದ ಸಂಗತಿ. ಬಹುಶಃ ಈ ಕಾರಣಕ್ಕಾಗಿ ದಿವಂಗತ ಜಿ.ಎಸ್. ದೀಕ್ಷಿತರ (ಈ ಮಹಾಪ್ರಬಂಧದ ಮಾರ್ಗದರ್ಶಿಗಳಾಗಿದ್ದರೂ) ತಮ್ಮ 'ಕೃಷ್ಣದೇವರಾಯನ: ಜೀವನ, ಸಾಧನೆಗಳು' ಎಂಬ ಕೃತಿಯಲ್ಲಿ ಈ ಕುಹುಯೋಗದ ಬಗ್ಗೆಯಾಗಲೀ, ಸದರಿ ಚಿತ್ರದ ಬಗ್ಗೆಯಾಗಲೀ ಚರ್ಚಿಸಿಲ್ಲ. ಇದು ಗಮನಿಸಬೇಕಾದ ಸಂಗತಿ.

ತೀರ್ಮಾನಗಳು

ಮೇಲೆ ವಿವರವಾಗಿ ಚರ್ಚಿಸಲಾದ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಈ ರೀತಿ ತೀರ್ಮಾನಿಸಬಹುದು:

(1) ಕುಹುಯೋಗವೆಂಬುದು ಖಗೋಳಶಾಸ್ತ್ರದ ಪರಿಕಲ್ಪನೆ ಅಲ್ಲ. ಅದಕ್ಕೆ ವೈಜ್ಞಾನಿಕ ಆಧಾರಗಳಿಲ್ಲ. ಇದು ಫಲಜ್ಯೋತಿಷಿಗಳ ಕಲ್ಪನೆ.

(2) ಕುಹುಯೋಗ ಮತ್ತು ಶ್ರೀ ವ್ಯಾಸರಾಯರ ತತ್ಕಾಲಿಕ ಸಿಂಹಾಸನಾರೋಹಣದ ಬಗ್ಗೆ ಯಾವ ಸಮಕಾಲೀನ ಇತಿಹಾಸಕಾರನಾಗಲೀ, ಪ್ರವಾಸಿಯಾಗಲೀ, ಲೇಖಕನಾಗಲೀ, ಕವಿಯಾಗಲೀ ಬರೆದಿಲ್ಲ.

(3) ಕೃಷ್ಣದೇವರಾಯನೇ ಬರೆದ ಚಂಪೂಕಾವ್ಯ "ಅಮುಕ್ತ ಮಾಲ್ಯದ"ದಲ್ಲಿ ಕುಹುಯೋಗದ ಪ್ರಸ್ತಾಪವೇ ಇಲ್ಲ.

(4) ಒಟ್ಟು ಏಳು ಕುಹುಯೋಗಗಳ ಕಲ್ಪನೆ (ಕ್ರಿ.ಶ. 1517ರಿಂದ ಕ್ರಿ.ಶ. 1524ರವರೆಗೆ) ಫಲಜ್ಯೋತಿಷದಲ್ಲಿದ್ದರೂ, 4–2–1524ರ ಕುಹುಯೋಗದ ಬಗ್ಗೆ ಕೆಲ ಲೇಖಕರು ಚರ್ಚಿಸಿದ್ದಾರೆ; ಆದರೆ ಕಾರಣ ಗೊತ್ತಿಲ್ಲ.

(5) "ವ್ಯಾಸಯೋಗಿಚರಿತಂ" ಮತ್ತು "ರಾಯವಾಚಕ" ಕೃತಿಗಳು ಕೃಷ್ಣದೇವರಾಯನ ಕಾಲದಲ್ಲಿ ರಚಿತವಾದ ಸಂಸ್ಕೃತ ಮತ್ತು ತೆಲುಗು ಕೃತಿಗಳಾದರೂ ಇವುಗಳಲ್ಲಿ ಸದರಿ ಕುಹುಯೋಗ ಮತ್ತು ತತ್ಕಾಲಿಕವಾಗಿ ವ್ಯಾಸರಾಯರಿಂದ ಸಿಂಹಾಸನಾರೋಹಣದ ಮಾಡಿದ ಬಗ್ಗೆ ಉಲ್ಲೇಖವಿಲ್ಲವಾದ್ದರಿಂವ ಕುಹುಯೋಗ ಮತ್ತು ವ್ಯಾಸರಾಯರ ಸಿಂಹಾಸನಾರೋಹಣ ಐತಿಹಾಸಿಕ ಘಟನೆಗಳಲ್ಲ.

(6) ಕುಹುಯೋಗದ ಕಲ್ಪನೆ ಮತ್ತು ಶ್ರೀ ವ್ಯಾಸರಾಯರ ಸಿಂಹಾಸನಾರೋಹಣವೆಂಬುದೊಂದು ಕಟ್ಟುಕತೆ. ವ್ಯಾಸರಾಯರು ಪವಾಡಪುರುಷರೆಂದು ಬಿಂಬಿಸಲು, ಯಾರೋ ಕಟ್ಟಿದ ಈ ಕಟ್ಟುಕತೆ ಕೆಲವರಲ್ಲಿ ನಂಬಿಕೆ ಹುಟ್ಟಿಸಿದೆ. ಬಹುಶಃ ವಿಜಯದಾಸರ ಕಾಲದಲ್ಲಿ ಅಥವಾ ಅವರಿಗಿಂತ ಕೊಂಚ ಪೂರ್ವದಲ್ಲಿ ಯಾರೋ ಈ ಕಟ್ಟುಕತೆಯನ್ನು ಪ್ರಚಾರದಲ್ಲಿ ತಂದಿರಬೇಕು.

(7) ಇದೊಂದು ಕಟ್ಟುಕತೆ ಎಂಬುದನ್ನು ವೈಜ್ಞಾನಿಕವಾಗಿ ಮತ್ತು ಐತಿಹಾಸಿಕವಾಗಿ ಮೇಲೆ ವಿವರಿಸಿ, ಚರ್ಚಿಸಿ, ಸಾಧಿಸಲಾಗಿದೆ.

ಅಡಿ ಟಿಪ್ಪಣಿಗಳು


1. ಡಾ. ಡಿ.ವಿ. ಪರಮಶಿವಮೂರ್ತಿ, *ಕೃಷ್ಣದೇವರಾಯನ ಶಾಸನಗಳು*, ಸಂ. 1, ಕನ್ನಡ ವಿಶ್ವವಿದ್ಯಾಲಯ, ಹಂಪಿ. 2010. ಪು. 33.
2. ಸುಮತೀಂದ್ರ ನಾಡಿಗ್, ಸಂತೇಬೆನ್ನೂರು, *ವಿಜಯನಗರ ಅರಸರು ಮತ್ತು ವ್ಯಾಸರಾಯರು*, "ಕೃಷ್ಣದೇವರಾಯ", ಸಂ. ಪರಮಶಿವಮೂರ್ತಿ ಮತ್ತಿತರರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2008, ಪು. 61–63
3. ಪಾರ್ಥಸಾರಥಿ, ಅರಳುಮಲ್ಲಿಗೆ, *ಶ್ರೀ ವ್ಯಾಸರಾಜ ಸಂಪುಟ*, ಎರಡನೇ ಮುದ್ರಣ, ಹರಿದಾಸ ಅಕಾಡೆಮಿ, ಬೆಂಗಳೂರು, 2000, ಪು. 96.
4. ವೆಂಕೋಬರಾಯರು, ಪಿ, *Synopsis of Sri Vyasayogicharitam,* Introduction, ಶ್ರೀ ವ್ಯಾಸಯೋಗಿಚರಿತಮ್, ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠ, ಮಂತ್ರಾಲಯ, 2004, ಪ್ಯಾರಾ. 136–150.
5. ನಾರಾಯಣರಾವ್ ಮತ್ತಿತರು (ಸಂ.), *ನವಕರ್ನಾಟಕ ಪದ ವಿವರಣ ಕೋಶ*, ನವಕರ್ನಾಟಕ ಪಬ್ಲಿಕೇಷಶನ್ಸ್, ಬೆಂಗಳೂರು, 2001.
6. ಸೇತುರಾವ್. ಎಂ.ಎ., ಗೋಪಾಲಕೃಷ್ಣರಾವ್, ಕೆ.ಎಲ್. (ಸಂ.) *ಖಗೋಳ ವಿಜ್ಞಾನ*, ನವಕರ್ನಾಟಕ ಜ್ಞಾನ–ವಿಜ್ಞಾನ ಕೋಶ ಸಂಪುಟ–2, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು, 1998, ಪು. 21.
7. ಸದಾನಂದ ಕನವಳ್ಳಿ (ಅನುವಾದಕ), *ಮರೆತುಹೋಗಿರುವ ಸಾಮ್ರಾಜ್ಯ: ವಿಜಯನಗರ*, ಮೂಲ ಲೇಖಕ: ರಾಬರ್ಟ್ ಸಿವೆಲ್, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1992, ಪು. 131–177.
8. ಸರೋಜಿನಿ ದೇವಿ ಕೊಂಡೂರಿ, *Religion in Vijayanagar Empire,* Sterling Publishers Private Ltd., Bangalore, 1990, ಪು. 134–140.
9. ಗುರುಮೂರ್ತಿ ಪೆಂಡಕೂರು (ಅನುವಾದಕ), *ರಾಯವಾಚಕ*, ಮೂಲಸಂಪಾದಕರು: ರಾಮಚಂದ್ರರಾವ್ ಸಿ.ವಿ., ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ, 2008.

10. Srinivasa Sistala, *Sri Krishnadevaraya Amuktamalyada,* Translation from Telugu, Navodaya Book House, Hyderabad, 2010.


11. ಶ್ರೀನಿವಾಸ ಹಾವನೂರು ಮತ್ತು ಅರಳುಮಲ್ಲಿಗೆ ಪಾರ್ಥಸಾರಥಿ, *ಸಮಗ್ರ ದಾಸಸಾಹಿತ್ಯ*, ಸಂಪುಟ 1, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, 2003, ಪು. 280–281.

12. Bhargavi Shivaiah, *Krishnadevaraya: His Life and Achievements,* Unpublished Ph.D. Thesis, Karnataka University, Dharwad, 1972.

13. ಜಿ.ಎಸ್. ದೀಕ್ಷಿತ್ ಮತ್ತಿತರರು, *ಶ್ರೀ ಕೃಷ್ಣದೇವರಾಯ: ಜೀವನ, ಸಾಧನೆಗಳು*, ಕರ್ನಾಟಕ ರಾಜ್ಯ ಪುರಾತತ್ವ ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 1997.



ಚಿತ್ರ 1: ರಾಹು ಮತ್ತು ಕೇತುಗಳೆಂಬ ಬಿಂದುಗಳು
(ಆಕರ: ನವಕರ್ನಾಟಕ ಜ್ಞಾನ–ವಿಜ್ಞಾನ ಕೋಶ, ಸಂ. 2)



ಚಿತ್ರ 2: ಯಾವುದೇ ಐತಿಹಾಸಿಕ ಮಹತ್ವ ಇಲ್ಲದ ಇತ್ತೀಚೆಗೆ ರಚಿಸಲ್ಪಟ್ಟ ಕಾಲ್ಪನಿಕ ಚಿತ್ರ

ಕೈಫಿಯತ್ತುಗಳಲ್ಲಿ ವಿಜಯನಗರದ ಕೆಲವು ವಿಚಾರಗಳು

ಡಾ. ಬಿ.ಎಸ್. ಪುಟ್ಟಸ್ವಾಮಿ

ಕರ್ನಾಟಕ ಇತಿಹಾಸ ಸಂಶೋಧನಾ ಕಾರ್ಯದಲ್ಲಿ ಕೈಫಿಯತ್ತುಗಳು ಬಹುಮಹತ್ವದ ಪಾತ್ರವನ್ನು ಹೊಂದಿವೆ. ಸ್ಥಳ ಪುರಾಣ, ಐತಿಹ್ಯ, ಸಾಮಾಜಿಕ ಮತ್ತು ಧಾರ್ಮಿಕ ಅಂಶಗಳನ್ನೊಳಗೊಂಡ ಈ ಕೈಫಿಯತ್ತುಗಳು 19ನೇ ಶತಮಾನದಲ್ಲಿ ಬೆಳಕಿಗೆ ಬಂದು ನಮ್ಮ ಚರಿತ್ರೆಯ ಅಧ್ಯಯನಕ್ಕೊಂದು ಹೊಸ ಆಯಾಮ ನೀಡಿದೆ. 19ನೇ ಶತ ಮಾನದ ಪ್ರಾರಂಭದಲ್ಲಿ ಕರ್ನಲ್ ಮೆಕೆಂಝಿ ದಕ್ಷಿಣ ಭಾರತದಲ್ಲಿ ಸಂಗ್ರಹಿಸಿದ ಕೈಫಿಯತ್ತುಗಳು ನಾಡಿನ ಇತಿಹಾಸದ ಮತ್ತೊಂದು ಮಗ್ಗುಲನ್ನು ತೋರಿಸಿಕೊಟ್ಟು ಇತಿಹಾಸ ಅಭ್ಯಾಸಿಗಳ ಆಸಕ್ತಿಯನ್ನು, ಕುತೂಹಲವನ್ನು ತಣಿಸಿ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಹಲವಾರು ಅಂಶಗಳು ಕೈಫಿಯತ್ತುಗಳ ಅಧ್ಯಯನದಿಂದ ಬೆಳಕಿಗೆ ಬಂದು ನಮ್ಮ ಜ್ಞಾನದಿಗಂತವನ್ನು ವಿಸ್ತಾರಗೊಳಿಸಿವೆ. ಕೈಫಿಯತ್ ಎನ್ನುವುದು ಅರೆಬಿಕ್ ಪದ. ಕ್ರಿ.ಶ. 1783ರಲ್ಲಿ ಭಾರತಕ್ಕೆ ಬ್ರಿಟೀಷ್ ಸೇನೆಯಲ್ಲಿ ಇಂಜಿನಿಯರ್ ಆಗಿ ಬಂದ ಕರ್ನಲ್ ಮೆಕೆಂಝಿ ಭಾರತಕ್ಕೆ ಸಂಬಂಧಿಸಿದ ಪುರಾತನವಾದುದೆಲ್ಲವನ್ನು ಸಂಗ್ರಹಿಸತೊಡಗಿದ.

ಕರ್ನಾಟಕದ ಇತಿಹಾಸ ವಿಶಿಷ್ಟರೀತಿಯಲ್ಲಿ ವಿಕಾಸಗೊಂಡಿರುವುದು ಇಲ್ಲಿಯವರೆಗಿನ ಸಂಶೋಧನೆಯಿಂದ ಸ್ಪಷ್ಟವಾಗಿದೆ. ಈ ಪ್ರದೇಶ ವಿಜಯನಗರ ಸಾಮ್ರಾಜ್ಯದ ಹೃದಯವಾಗಿತ್ತು. ಇಂತಹ ಸಾಮ್ರಾಜ್ಯದ ಬಗೆಗೆ ಕೈಫಿಯತ್ತುಗಳು ಹಲವಾರು ವಿವರಗಳನ್ನು ನೀಡಿವೆ. ಇಲ್ಲಿ ಮುಖ್ಯವಾಗಿ ವಿಜಯನಗರ ಸಾಮ್ರಾಜ್ಯದ ಸಾಮ್ರಾಟ ಕೃಷ್ಣದೇವರಾಯನ ಸಾಧನೆಗಳು, ಕಾಲಮಾನ, ಆತನ ವ್ಯಕ್ತಿತ್ವ, ಆಡಳಿತದ ವಿವರಗಳು ಕೈಫಿಯತ್ತುಗಳಲ್ಲಿ ಹೇಗೆ ಅಂದಿನ ಕಾಲದ ಭಾಷಾ ಶೈಲಿಯಲ್ಲಿ ವ್ಯಕ್ತವಾಗಿವೆ ಎಂಬುದನ್ನು ನೋಡಬಹುದು.

ಕ್ರಿ.ಶ. 1336ರಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಭಾರತದ ಇತಿಹಾಸದಲ್ಲಿಯೇ ಮಹತ್ವಪೂರ್ಣ ಹಾಗೂ ಔಚಿತ್ಯಪೂರ್ಣ ಘಟನೆ. ಹೊಯ್ಸಳ ಆಳ್ವಿಕೆಯ ಅಳಿಗಾಲ ಮತ್ತು ದಕ್ಷಿಣ ಭಾರತದ ಮೇಲೆ ಉತ್ತರ ಭಾರತೀಯರ ಆಕ್ರಮಣ ಈ ಎರಡರ ಕಾಲ ಕರ್ನಾಟಕದ ಇತಿಹಾಸದಲ್ಲಿ ಒಂದು ಹೊಸ ಮನ್ವಂತರ ಕಾಲ.

ಕೃಷ್ಣದೇವರಾಯ (ಕ್ರಿ.ಶ.1509–1529) ದಕ್ಷಿಣ ಭಾರತವನ್ನು ಆಳಿದ ಸಾಮ್ರಾಟರಲ್ಲಿಯೇ ಶ್ರೇಷ್ಠನು. ಸಾಳುವ ನರಸಿಂಹನ ಮಹಾದಂಡನಾಯಕನಾಗಿದ್ದ ನರಸನಾಯಕನ ಮಗ–ತಾಯಿ ನಾಗಲಾದೇವಿ. ಕೃಷ್ಣದೇವರಾಯ ಅಧಿಕಾರಕ್ಕೆ ಬಂದಾಗ ಸಾಮ್ರಾಜ್ಯ ಸುಭದ್ರ ಸ್ಥಿತಿಯಲ್ಲಿರಲಿಲ್ಲ. ನಾಲ್ಕು ಪ್ರಕಾರದ ಶತ್ರುಗಳನ್ನು (ಸಾಮಂತರು, ಪ್ರತಾಪರುದ್ರದೇವ,

ಬಹಮನಿ, ಪೋರ್ಚುಗೀಸರು) ಗುರುತಿಸಿದ ಈತ ಒಂದು ವರ್ಷಕಾಲ ರಾಜಧಾನಿಯಲ್ಲಿಯೇ ಇದ್ದು ಆಂತರಿಕ-ಬಾಹ್ಯ ವಿದ್ಯಮಾನಗಳನ್ನು ಚೆನ್ನಾಗಿ ಅರಿತು ನಿರ್ದಿಷ್ಟ ಯೋಜನೆಗಳನ್ನು ರೂಪಿಸಿದ. ಕೃಷ್ಣದೇವರಾಯನ ಸೈನಿಕ ಸಾಧನೆಗಳು ಅದ್ಭುತವಾದುವು. ಅಪಜಯ ಹೊಂದಿದ ಶತ್ರುಗಳನ್ನು ದ್ವೇಷಿಸದೆ ಮಾನವೀಯತೆಯನ್ನು ತೋರಿಸುತ್ತಿದ್ದ. ಕದನಗಳಲ್ಲಿ ಸ್ವತಃ ಹೋರಾಡುತ್ತಿದ್ದ ಹಾಗು ಯುದ್ಧ ವೀರರಿಗೆ ವಿಶೇಷ ಮನ್ನಣೆ, ಬಹುಮಾನಗಳನ್ನು ನೀಡುತ್ತಿದ್ದ ಎಂಬ ವಿಷಯಗಳು ಕೈಫಿಯತ್ತುಗಳಲ್ಲಿ ಕಂಡುಬರುತ್ತವೆ.

ವಿಜಯನಗರ ಸಾಮ್ರಾಜ್ಯದ ಸ್ಥಾಪನೆ, ವಿದ್ಯಾರಣ್ಯರ ಮಹತ್ವ, ಆರಂಭದ ರಾಜರುಗಳ ಬಗ್ಗೆ ಹಾಗು ಗೊಲ್ಲರ ಬುಕ್ಕರಾಯ ವಿದ್ಯಾರಣ್ಯರ ಸೇವೆ ಮಾಡುತ್ತಿದ್ದು, ಅವರಿಗೆ ಉಪಕಾರ ಮಾಡಿಕೊಂಡು ಇರಲಾಗಿ ಬುಕ್ಕನಿಗೆ ಪಟ್ಟಾಭಿಷೇಕಮಾಡಿ ತಾವು ನಿರ್ಮಾಣ ಮಾಡಿದಂತಹ ಪಟ್ಟಣಕ್ಕೆ ಅಧಿಪತಿ ಮಾಡಿ ಬುಕ್ಕಮಹಾರಾಯ ಎಂಬ ಹೆಸರುಕೊಟ್ಟ ವಿವರ ಕಮಲಾಪುರ ಕೈಫಿಯತ್ತಿನಲ್ಲಿ ವಿವರಣೆ ಕಂಡುಬರುತ್ತದೆ. ಹೀಗೆ ವಿಜಯನಗರ ಇತಿಹಾಸದ ಬಗ್ಗೆ ಬೆಳಕು ಚೆಲ್ಲುವ ಹಾಗು ಕೃಷ್ಣದೇವರಾಯನ ಬಗ್ಗೆ ಅಲ್ಪ ಮಾಹಿತಿ ನೀಡುವ ಕಾಲಮಾನ, ಸಾಧನೆಗಳು ಕೆಲವು ಐತಿಹ್ಯಗಳನ್ನೊಳಗೊಂಡ ಗೊಂದಲಮಯ ವಿಷಯಗಳು ಈ ಕೆಳಕಂಡ ಕೈಫಿಯತ್ತುಗಳಲ್ಲಿ ಕಂಡು ಬರುತ್ತವೆ.

1 ಮಂಡಗದ್ದೆ ಕೈಫಿಯತ್ತು
2 ವಸುಧಾರೆ ಗ್ರಾಮದ ಕೈಫಿಯತ್ತು
3 ಮಲ್ಲೂರು ಸಾಸಿವೆಹಳ್ಳಿಸೀಮೆ ಕೈಫಿಯತ್ತು
4 ಕುರುಗೋಡು ಕೈಫಿಯತ್ತು, ತಾಲುಕ ಬಳ್ಳಾರಿ
5 ಹಾರನಹಳ್ಳಿ ಕೈಫಿಯತ್ತು
6 ಹೊಳೆಹೊನ್ನೂರು ಕೈಫಿಯತ್ತು
7 ಹಳೇಬೀಡು ಕೈಫಿಯತ್ತು
8 ಕಂಪಿಲಿ ಕೈಫಿಯತ್ತು
9 ಅಂಕನಾಥಪುರ ಅರ್ಕೇಶ್ವರಸ್ವಾಮಿ ಕೈಫಿಯತ್ತು
10 ಗಳಿಗೆಕೆರೆ ಕೈಫಿಯತ್ತು (ಕೆ.ಆರ್.ನಗರ)
11 ಅಜ್ಜಂಪುರ ಕೈಫಿಯತ್ತು
12 ಆರ್ಕಾಡು ಸಂಸ್ಥಾನದ ಕೈಫಿಯತ್ತು.

ಕೃಷ್ಣದೇವರಾಯನ ಬಗ್ಗೆ ಕೆಲವು ವಿವರಣೆಗಳನ್ನು ನೀಡುವ ಈ ಕೈಫಿಯತ್ತುಗಳಲ್ಲಿ ಇತರೆ ಆಕರಗಳಿಗಿಂತ ಭಿನ್ನವಾಗಿರುವುದನ್ನು ಗಮನಿಸಬಹುದು.

ಬೆಟ್ಟದಕೋಟೆ ಕೈಫಿಯತ್ತು

'ಯೀ ರಾಯಪಟ್ಟ ಅರವತ್ತೈದು ಪಟ್ಟದಲ್ಲಿ ಕೃಷ್ಣರಾಯರ ತಂದೆ ನರಸಿಂಗರಾಯರ ದಿವಸ್ತಿದಲ್ಲಿ ನಿಂತ ರಾಜ್ಯ 31 ಕೋಟಿ. ಯಿವರ ಮಗ ಕೃಷ್ಣರಾಯರು ಸಾಣೂರ ತಿಂಮಮಂತ್ರಿ ಸಹಾ ಸಾಧಿಸ್ತರಾಜ್ಯ 50 ಕೋಟಿ, ಉಭಯಂ 80 ಕೋಟಿ ರಜ್ಯವನ್ನು ಧರ್ಮದಿಂದ ಪರಿಪಾಲನವಂ ಮಾಡಿಕೊಂಡು ಯಿರುವ ಕಾಲದಲ್ಲಿ, ಸಾಣೂರ ತಿಂಮಮಂತ್ರಿ ಆಲೋಚನೆಯಿಂದ ಕೃಷ್ಣರಾಯರು ರಾಜ್ಯಕ್ಕೆ ನವ ಢಣಾಯಕರ ಮಾಡಿ, ಯೀ ಢಣಾಯಕರಿಗೆ ಜನ 1ಕ್ಕೆ ವಂಬತ್ತು

ಕೋಟಿ ರಾಜ್ಯವಂ ಹಂಚಿಕೊಂಡಲ್ಲಿ, ಯೀ ದಕ್ಷಿಣ ದೇಶದಲು ಸೋಮಂಣಥಣಾಯಕರಿಗೆ ಸೇರಿದ ಕಾರಣ ಯೀ ಥಣಾಯಕನು ಯೀ ದಕ್ಷಿಣ ದೇಶಕ್ಕೆ ಸೇರಿದ ಉಂಮತ್ತೂರಿಗೆ ಬಂದು, ಅದನ್ನು ಸಂಸ್ಥಾನವಂ ಮಾಡಿ, ಅಲ್ಲಿ ನಂಜರಾಜವಡೇಯರನ್ನು ಯಿಟ್ಟು, ಯೀ ಥಣಾಯಕವಡೇರು ಯೀ ದಕ್ಷಿಣ ದೇಶಕ್ಕೆ ಬಂದು ಗೋವರ್ಧನಕ್ಕೆ ಪ್ರತಿನಾಮದೇಯವಾದ ಕಮಲಾಚಲ ಪರ್ವತಕ್ಕೆ ಬಂದು, ಸ್ವಾಮಿಯ ಸೇವೆಯಂ ಮಾಡಿ ತ್ರಿರಾತ್ರಿ ಅಲ್ಲಿ ವಾಸವಂ ಮಾಡುವ ಕಾಲದಲ್ಲಿ ಯಿವನಿಗೆ ಸ್ವಪ್ನವಾದ ಕಾರಣ ಸ್ವಪ್ನಾಭಿಪ್ರಾಯವನ್ನು ಮಂತ್ರಿಗಳ ಕೂಡ ಆಲೋಚಿಸಿ ಯೀ ಸ್ವಪ್ನ ಪ್ರಕಾರಕ್ಕೆ ಆ ಕಮಲಾಚಲಕ್ಕೆ ಯರಡು ಸುತ್ತಿನ ಯೆಂಟು ಯೇಳು ಬಾಗಿಲು ಯೀ ಗಿರಿಯಲ್ಲಿ ಅಷ್ಟತೀರ್ಥವಿಹುದು.'

ಇದೇ ಬೆಟ್ಟದಕೋಟೆ ಕೈಫಿಯತ್ತಿನಲ್ಲಿ ಉಮ್ಮತ್ತೂರಿನ ಸಂಸ್ಥಾನದ ಭುಜಂಗರಾಯರು ಪ್ರಬಲವಾಗಿ ಆಲೋಚನೆ ಮಾಡಿದ್ದರಿಂದ ತನ್ನಯ ಸಂಸ್ಥಾನಕ್ಕೆ ಯೀ ನಗರಪುರಿಪಟ್ಟಣ ಸಮೀಪವಾಗಿ ಯಿದೆಯೆಂಬುದಾಗಿ ಯೋಚಿಸಿಕೊಂಡು, ತನ್ನ ಫಉಜುಗಳನ್ನೆಲ್ಲ ತಯಾರು ಮಾಡಿಕೊಂಡು, ಯೀ ಪಟ್ಟಣದ ಮೇಲೆ ಜಗಳಕ್ಕೆ ಬಂದು ಯುದ್ಧವನ್ನು ಮಾಡಿದನು. ಈ ಯುದ್ಧದಲ್ಲಿ ಸಕಳೆ ಡಣ್ಣಾಯಕನು ಮೃತನಾದನು. ಯೀ ಮೇಲೆ ಭುಜಂಗರಾಯರು ಪಟ್ಟಣವನ್ನು ಕೈವಶಮಾಡಿಕೊಂಡು, ಬಂದೋಬಸ್ತ್ ಮಾಡಿಕೊಂಡು ರಾಜ್ಯ ಆಳಿದ ವರುಷ 45.

ಹತ್ತಿಬೆಳಗಲ್ಲು ಕೈಫಿಯತ್ತು

ಹಂಪಿ ಊರು ಬೆಟ್ಟದಮ್ಯಾಲೆ ಕೋಟೆ ಮನೆ ಮುಂತಾದವು ಕೆಲವು ಕಾಲದ ಮ್ಯಾಲೆ ಖಿಲವಾಗುತ್ತಾ ಬಂತು. ವಿಜಯನಗರದ ಅರಸರ ಕೆಳಗೆ ನಡೆಯುತಾ ಯಿರುವಾಗ್ಯೆ ಕ್ರಿಷ್ಣರಾಯ, ಅಚುತರಾಯ, ಸದಾಶಿವರಾಯರ ಕಾಲದಲ್ಲು ಯೀ ವೂರಿಗೆ ಪಶ್ಚಿಮ 10 ಹರದಾರಿ ಮ್ಯಾಲೆ ಅಗ್ರಹಾರ ಕಟ್ಟಿಸಿ ಬ್ರಾಹ್ಮಣರಿಗೆ ಸರ್ವಮಾನ್ಯವಾಗಿ ಬಿಟ್ಟರು. ಅವರ ಕಾಲದಲ್ಲು ಶಿಲಾಶಾಸನ ಹಾಕಿದ್ದು ಮೂರು ಶಾಸನಯಿದೆ. ಅದರಲ್ಲಿ ಶಾಲಿವಾಹನ ಶಕ 1432ನೇ ಪ್ರಜೋತ್ಪತ್ತಿ ಸಂವತ್ಸರದಂದು ಶಾಸನದಲ್ಲಿದೆ.

ತಳಕಾಡು ಕೈಫಿಯತ್ತು–1

'ಉಲ್ಲುಕ್ಸ ಸಾಹೇಬರ ಕಡೆಯಿಂದಾ ತಂದ್ದದರ ನಕಲು ತಾರೀಖು 30ನೇ ಮಾಹೆ ಡಿಶಂಬರ, ಶಕವರ್ಷ1806 ಮೊಕ್ಕಮ್ ಮೈಸೂರು (ತಳಕಾಡು ಕೈಫಿಯತ್ತು ಅಗ್ರಹಾರ ತಾಲ್ಲೂಕ) ಅಗ್ರಹಾರ ಶಾ. ಶಕ ವರುಷ 1448ನೇ ವ್ಯಯನಾಮ ಸಂವತ್ಸರ ಶ್ರಾವಣ 5ರಲ್ಲು ಚಂದ್ರಾಪರಾಗ ಪುಣ್ಯಕಾಲದಲ್ಲೂ ತಿಮ್ಮಣ್ಣುಪಾದ್ಯೆಯರ ಮಕ್ಕಳು ಲಕ್ಷಣ ಉಪಾಧ್ಯಾಯರಿಗೆ ಉಮ್ಮತೂರು ಗವಡಿಕೆ ಸಲ್ಲುವ ಕಲ್ಲಯ್ಯನೂರು ಸ್ಥಳದ ಪಶ್ಚಿಮವಾಹಿನಿ ಹಂಯಿಗೆ ಗ್ರಾಮವನ್ನು ದಾರಾಪೂರ್ವಕವಾಗಿ ಕೊಟ್ಟುಯಿದ್ದ ಬಗ್ಗೆ ಗ್ರಾಮಾ ಯೀಚೆಗೆ ಮಾಡಿದ ವಿವರ.

ಅಂತಾಪುರ ಕೈಫಿಯತ್ತು

'ಕೃಷ್ಣರಾಯರಿಗೆ ಪಟ್ಟವಾಗಿ ಪ್ರಾಗ್ದೇಸಕ್ಕೆ ತೆರಳುವ ವೇಳೆಯಲ್ಲಿ ರಾಜ್ಯದೊಳಗೆಯಿದ್ದ ಪಾಳೆಯಗಾರರ ಕರೆಸಿ, ಪೌಜು ಮಂದಿ ಮಾಡಿಕ್ಕೊಂಡು ಹೋಗಿ ತಾವು ಜೈಸಿ ಬಂದು ಯೀ ಪಾಳೇಗಾರರಿಗೆ ಅವರವರ ಮರ್ಯಾದೆ ಪೂರೈಕೆ ಮಾನಪಾನಗಳ ಮಾಡಿ ಕಳುಹಿಸಿದ ವೇಳೆಯಲ್ಲಿ, ಮೂಲ ಪುರುಷ ಕುಮಾರರಾಮನ ವಂಶಸ್ಥರು ಬೊಮ್ಮಂತರಾಜ ಮರಳನವರು ವಂಶಸ್ತರಿಗು ಮರ್ಯಾದಿ ಮಾಡೊ ವೇಳೆಯಲ್ಲಿ ಬಿನ್ನಹ ಮಾಡಿಕೊಂಡರು ನಮಗೆ ಪೂರ್ವದಲ್ಲಿ ನಾಡದಳವಾರಿಗೆ ಕಾವಲಿ ಸ್ವಾಸ್ತಿ ಭಾಗದ್ದು ಸುದ್ದಾ ನಡೆಯಿತ್ತಾ ಇತ್ತು. ಅದೆ ಪಾಲಿಸಿದರೆ ಪಾಲಿಸಬೇಕೆಂದು'–ಸಂತೋಷ ಪಟ್ಟ ಕೃಷ್ಣರಾಯ ಅವರಿಗೆ ಕೊಟ್ಟ ತಾಲ್ಲೂಕು ವಿವರ.

1. ಕುತ್ತಾನೆ, 2. ಸೊಂಡೂರು, 3. ಜೆರಿಮಲ, 4. ವಡ್ಡು ದರೋಜಿ, 5. ಗುಡೆಕೋಟೆ, 6. ಬಾಣರಾವಿ, 7. ಉಜನಿ ಈ ಏಳು ತಾಲುಕು ಜಾಗೀರು ಕೊಟ್ಟು ನಾಡ ದಳವಾರಿಕೆ ಕಾವಲ ಸ್ವಾಸ್ತಿ ಸುದ್ದಾ ಮಾಡಿಕೊಟ್ರು' ಎಂಬ ವಿವರಗಳು ಕಂಡುಬರುತ್ತವೆ.

ಆಂಧ್ರದಲ್ಲೂ ಕೂಡ ಕರ್ನಲ್ ಮೆಕಂಝಿ ಅಧಿಕ ಸಂಖ್ಯೆಯ ಕೈಫಿಯತ್ತುಗಳನ್ನು ಸಂಗ್ರಹಿಸಿದನು. ಇವು ವಿಜಯನಗರಕಾಲದ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು ಸಹಾಯಕವಾಗಿವೆ. ಮೆಕೆಂಝಿ ಸಂಗ್ರಹದಲ್ಲಿರುವ ತೆಲುಗು ಕೈಫಿಯತ್ತುಗಳು ತಾಳಿಕೋಟೆ ಯುದ್ಧಾನಂತರ ಸಾಮಾಜಿಕ, ರಾಜಕೀಯ ಸ್ಥಿತಿಗಳನ್ನು ವಿವರಿಸುತ್ತವೆ. ಗುಂಟೂರು ಕೈಫಿಯತ್ತು ವಿಜಯನಗರಕ್ಕೆ ಸೇರಿದ ಅನೇಕ ಪ್ರದೇಶಗಳಲ್ಲಿ ಧಾರ್ಮಿಕ ಜೀವನದ ಚಿತ್ರಣವನ್ನು ನೀಡುತ್ತದೆ. ಫ್ರೆಂಚರು 17–18ನೇ ಶತಮಾನದಲ್ಲಿ ಆಂಧ್ರದ ಪೂರ್ವ ತೀರಪ್ರದೇಶದಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿಕೊಂಡಿದ್ದರು. ಇವರ ಆಳ್ವಿಕೆಯಲ್ಲಿ ಹಿಂದೂ ದೇವಾಲಯಗಳನ್ನು ನಾಶ ಮಾಡಲಾಯಿತೆಂದು, ಹಿಂದೂಗಳ ಧಾರ್ಮಿಕ ಆಚರಣೆಗಳನ್ನು ಫ್ರೆಂಚರು ನಿಷೇಧಿಸಿದ್ದರೆಂದು ತಿಳಿಸುತ್ತದೆ. ಗುಂಟೂರು ಜಿಲ್ಲೆಯ ಓಲೆಯರು ಗ್ರಾಮದಲ್ಲಿದ್ದ ಕಾಶಿ ವಿಶ್ವನಾಥ ದೇವಾಲಯವನ್ನು ಫ್ರೆಂಚರು ನಾಶಪಡಿಸಿ ಅಲ್ಲಿ ಒಂದು ಕ್ರೈಸ್ತಮಠವನ್ನು ಸ್ಥಾಪಿಸಿದರೆಂದು ಗುಂಟೂರು ಕೈಫಿಯತ್ತು ತಿಳಿಸುತ್ತದೆ.

ಶ್ರೀಶೈಲಂ ಕೈಫಿಯತ್ತು ಆಂಧ್ರ ಪ್ರದೇಶದಲ್ಲಿದ್ದ ಧಾರ್ಮಿಕ ಸ್ಥಿತಿಗತಿಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ. ಈ ಕೈಫಿಯತ್ತು ಶ್ರೀಶೈಲಂ ದೇವಾಲಯದಲ್ಲಿದ್ದ ಬ್ರಾಹ್ಮಣರಿಂದ ಅರ್ಧ ರುಪಾಯಿ ತೆರಿಗೆಯನ್ನು ಸಂಗ್ರಹಿಸುತ್ತಿದ್ದರೆಂದು ತಿಳಿಸುತ್ತದೆ. ಯಾತ್ರಾರ್ಥಿಗಳಿಂದಲೂ ಈ ರೀತಿಯ ತೆರಿಗೆಗಳನ್ನು ಸಂಗ್ರಹಿಸಲಾಗುತ್ತಿತ್ತು. ಇಲ್ಲಿನ ಸುಲ್ತಾನರ ಅಧಿಕಾರಿಗಳು ದೇವಾಲಯದಲ್ಲಿ ಭಕ್ತರಿಂದ ಹಣವನ್ನು ಸಂಗ್ರಹಿಸಿ ಅರ್ಚಕರಿಗೆ ಒಂದು ಭಾಗವನ್ನು ಮಾತ್ರ ಕೊಟ್ಟು ಉಳಿದದ್ದನ್ನು ತಾವೇ ಇಟ್ಟುಕೊಳ್ಳುತ್ತಿದ್ದರು. ತಾಡಪತ್ರಿ ಕೈಫಿಯತ್ತು ಮಹಮದಿಯರು ರಾಮೇಶ್ವರ ದೇವಾಲಯವನ್ನು ಧ್ವಂಸಮಾಡಿ ಅಲ್ಲಿದ್ದ ಅಮೂಲ್ಯ ವಸ್ತುಗಳನ್ನು ಕೊಳ್ಳೆಹೊಡೆದುಕೊಂಡು ಹೋದರೆಂದು ತಿಳಿಸುತ್ತದೆ. ಅಹೋಬಲಂ ಕೈಫಿಯತ್ತು ಸುಲ್ತಾನರು ಅಹೋಬಲಂ ದೇವಾಲಯದಲ್ಲಿ ಹಿಂದೂ ಅರಸರು ದೇವಾಲಯಕ್ಕೆ ಕಾಣಿಕೆಯಾಗಿ ನೀಡಿದ್ದ ಅಮೂಲ್ಯ ವಜ್ರಾಭರಣಗಳನ್ನು ಕೊಳ್ಳೆ ಹೊಡೆದುಕೊಂಡು ಹೋದರೆಂದು ತಿಳಿಸುತ್ತದೆ.

ಗುಂಟೂರು ಜಿಲ್ಲೆಯ ಪೇದಪುರಿ ಕೈಫಿಯತ್ ವಿಜಯನಗರ ಪತನಾನಂತರ ಅಧಿಕಾರಕ್ಕೆ ಬಂದ ಕುತುಬ್‌ಷಾಹಿ ಸರ್ಕಾರವು ಶ್ರೋತ್ರಿಯರಿಗೆ ಕೊಟ್ಟಿದ್ದ ಇನಾಮುಗಳನ್ನು, ಅಗ್ರಹಾರಗಳನ್ನು ಕಿತ್ತುಕೊಂಡಿತ್ತೆಂದು ತಿಳಿಸುತ್ತದೆ. ಈ ಪ್ರದೇಶದಲ್ಲಿದ್ದ ಜಮೀನ್ದಾರರು ಹಿಂದೂಗಳಾಗದ್ದರೂ ಕೂಡ ತಮ್ಮ ಮೇಲಧಿಕಾರಿಗಳ ಆಗ್ರಹಕ್ಕೆ ಬಲಿಯಾಗುವುದನ್ನು ತಪ್ಪಿಸಲು ಹಲವಾರು ಬ್ರಾಹ್ಮಣರ ಅಗ್ರಹಾರಗಳನ್ನು ವಶಪಡಿಸಿಕೊಂಡಿದ್ದರು. ವೈಷ್ಣವ ಮಠದ ಜೀಯರ್‌ಗಳನ್ನು ಕೂಡ ಮಹಮದಿಯರು ಹಿಂಸಿಸುತ್ತಿದ್ದರೆಂದು ಕೈಫಿಯತ್ತುಗಳಲ್ಲಿ ದಾಖಲಾಗಿದೆ.

ಅಬ್ದುಲ್ಲಾ ಕುತುಬ್‌ಷಹ ತಿರುಪತಿಯ ಮೇಲೆ ದಾಳಿಯನ್ನು ನಡೆಸಿ ಅಲ್ಲಿದ್ದ ಐಶ್ವರ್ಯವನ್ನು ಕೊಳ್ಳೆಹೊಡೆಯುವಾಗ ತಿರುಪತಿ ಮಠದ ಜೀಯರ್‌ನನ್ನು ಕೊಂದುಹಾಕಿದ್ದನು. ಈ ರೀತಿಯಲ್ಲಿ ತೆಲುಗು ಕೈಫಿಯತ್ತುಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಅನೇಕ ಸಂಗತಿಗಳು ಉತ್ಪ್ರೇಕ್ಷೆಯಿಂದ ಕೂಡಿದ್ದರೂ ಅವುಗಳಲ್ಲಿ ಬಹುಮಟ್ಟಿನ ಸತ್ಯಾಂಶವಿದೆಯೆಂಬುದು ಇತರೆ ಆಧಾರಗಳ ಸಹಾಯದಿಂದ ಸ್ಪಷ್ಟವಾಗಿದೆ.

ಕೈಫಿಯತ್ತುಗಳಲ್ಲಿ ಅಮರನಾಯಕರ ಹುಟ್ಟು, ಬೆಳವಣಿಗೆ, ಕರ್ತವ್ಯ, ವರ್ಗಾವಣೆ, ಸ್ವತಂತ್ರಘೋಷಿಸಿಕೊಂಡ ವಿವರಗಳು ಹಾಗು ಹೈದರಾಲಿ ಏಳಿಗೆಯಿಂದ ಈ ಸಂಸ್ಥಾನಗಳನ್ನು ಮೈಸೂರಿನಲ್ಲಿ ವಿಲೀನಗೊಳಿಸಿದ್ದ ವಿವರಣೆಗಳನ್ನು

ತಿಳಿಸುತ್ತವೆ. ಅಮರನಾಯಕರು ಎಂಬ ಸ್ಥಳೀಯ ಪ್ರಭುಗಳು ವಿಜಯನಗರ ರಾಜಕೀಯ ಇತಿಹಾಸದಲ್ಲಿ ಕಂಡುಬಂದು ವಿಜಯನಗರೋತ್ತರ ಕಾಲದಲ್ಲಿ 'ಪಾಳೆಯಗಾರ'ರೆಂದು ಕರೆಯಲ್ಪಟ್ಟ ವಿಷಯಗಳ ಜೊತೆಗೆ ಚಿತ್ರದುರ್ಗ, ಕೆಳದಿ, ಹಾಗಲವಾಡಿ, ಉಮ್ಮತ್ತೂರು, ತರೀಕೆರೆ, ಯಲಹಂಕ, ಅರಿಕುಠಾರ, ಬೆಳಗುತ್ತಿ, ಮೈಸೂರು, ಹರಪನಹಳ್ಳಿ, ಚನ್ನಪಟ್ಟಣ, ನಾಗಮಂಗಲ, ಹೊಳೆನರಸೀಪುರ ಮೊದಲಾದ ಅನೇಕ ಪ್ರಸಿದ್ಧ ಪಾಳೇಪಟ್ಟಿನ ನಾಯಕರೊಡನೆ ಇದ್ದ ಕೃಷ್ಣದೇವರಾಯನ ಸಂಬಂಧಗಳ ಬಗ್ಗೆ ವಿವರಣೆಗಳನ್ನು ನೊಡಬಹುದು.

ವಿಜಯನಗರವನ್ನು ಸ್ಥಾಪಿಸಿದ ಹರಿಹರ, ಬುಕ್ಕರು ಯಾವ ಜಾತಿಗೆ ಸೇರಿದ್ದರು ಎಂಬುದರ ಬಗ್ಗೆ ಕೈಫಿಯತ್ತುಗಳಲ್ಲಿ ಕೆಲವು ಮಾಹಿತಿಗಳನ್ನು ನೋಡಬಹುದು. ಆರಂಭದ ರಾಜ್ಯವನ್ನು 'ಕುರುಬ ಸಂಸ್ಥಾನ' ಎಂದೂ, ಕೆಲವು ಕೈಫಿಯತ್ತುಗಳು ವಿಜಯನಗರ ಸಂಸ್ಥಾಪಕರು 'ಗೊಲ್ಲರು' ಎಂಬುದಾಗಿಯೂ ದಾಖಲಿಸಿವೆ. ವಿಜಯನಗರ ಕಾಲದ ರಾಜಕೀಯ ಚರಿತ್ರೆಯ ಮೇಲೆ ಕೈಫಿಯತ್ತುಗಳು ನೀಡುವ ಮಾಹಿತಿ ಉಪಯುಕ್ತವೂ, ಕುತೂಹಲಕಾರಿಯೂ ಮತ್ತು ಅನೇಕ ಸಂದರ್ಭಗಳಲ್ಲಿ ಗೊಂದಲಮಯವಾಗಿರುವುದು ಸ್ಪಷ್ಟವಾಗಿದೆ.

ಪರಾಮರ್ಶನ ಗ್ರಂಥಗಳು

1. ಕಲಬುರ್ಗಿ, ಎಂ.ಎಂ., *ಕರ್ನಾಟಕದ ಕೈಫಿಯತ್ತುಗಳು,* ಕನ್ನಡ ವಿ.ವಿ. ಹಂಪಿ, 1995.
2. ಪುರುಷೋತ್ತಮ ಬಿಳಿಮಲೆ, *ಮೆಕೆಂಝಿ ಕೈಫಿಯತ್ತುಗಳು.*
3. ಕುಲಕರ್ಣಿ, ಬಿ.ಎಸ್., 'ಕೈಫಿಯತ್ತು ಮತ್ತು ಮೈಸೂರು ರಾಜರ ಚರಿತೆ ವಚನ ಕಾವ್ಯವು'.
4. ಸೋಮಶೇಖರ, ಎ., *ಮೈಸೂರು ಪ್ರದೇಶದ ಕೈಫಿಯತ್ತುಗಳ ಅಧ್ಯಯನ.* (ಅಪ್ರಕಟಿತ-ಪಿಎಚ್.ಡಿ. ಪ್ರಬಂಧ)
5. ಪುಟ್ಟಸ್ವಾಮಿ, ಬಿ.ಎಸ್., *ಕೈಫಿಯತ್ತು ಕಂಡ ಮೈಸೂರು ರಾಜಕೀಯ ಚರಿತ್ರೆ,* ಬೆಂಗಳೂರು, 2007.

20

ಆನೆಗೊಂದಿ ಜಯಪ್ರಶಸ್ತಿ ಶಾಸನ : ಒಂದು ವಿವೇಚನೆ

ಡಾ॥ ಬೆಂ. ಶಾ. ಶ್ಯಾಮಲಾ ರತ್ನಕುಮಾರಿ

ಶಾಸನದ ಪಾಠ

*ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕಾಬ್ದಾ ಒಂದು ಸಾವಿರದ ಎರಡು ನೂರ ಇಪ್ಪತ್ತೇಳನೇ ಆಂಗೀರಸ ನಾಮ ಸಂವತ್ಸರದ ಕಾರ್ತಿಕ ಶುದ್ಧ 12 ದ್ವಾದಶಿ ಸೋಮವಾರದ ದಿವ್ಸ ಶ್ರೀಮಾನ್ ಮಹಾರಾಜಾಧಿರಾಜ ರಾಜಪ್ರೌಢಪರಮೇಶ್ವರ ಪ್ರತಾಪನಾದ ನರಪತಿ ಬಿರುದೆಂತೆಂಬರ ಗಂಡ ಶಂಖಚಕ್ರ ಸಾಳ್ವರ ಗಂಡ (ನರಸಿಂಹ) ಬಿರುದಾಂಕಿತರಾದ ಆನೆಗೊಂದಿ ಜಂಬುಕೇಶ್ವರರಾಯರು ಪ್ರಧಾನಿ ಅಪ್ಪಾಜಿರಾಯರು ರಾಜ್ಯಭಾರಂಗೈಯ್ಯುವ ಕಾಲದಲ್ಲಿ ಡಿಳ್ಳಿಯಿಂದ ಕುಂಚಟಿಗರ 48 ಕುಲದವರು ಆನೆಗೊಂದಿ ಶೀಮೆಗೆ ಬಂದು ನಿಂತರು. ಆ ವೇಳೆಯಲ್ಲಿ ಹಿಂದಣ ಮತ್ಸರದಿಂದ ಬೆನ್ನಾಡಿ ನಾದರಗಿಡ್ಡ** ಎಂಬುವನು ಆನೆಗೊಂದಿ ಪೇಟೆಯೊಳಗೆ ಭಟ್ಟರ ಸಂಗಡ ಬಂದು ಎತ್ತನ್ನು ನಿಲ್ಲಿಸಿಕೊಂಡು ಅದಕ್ಕೆ 'ಕುಡುಕಾಲುಚಿಂಚಿ' ಎಂದು ಹೆಸರನ್ನು ಇಟ್ಟುಕೊಂಡು, ಪೇಟೆಯಲ್ಲಿ ನಿಲ್ಲಿಸಿಕೊಂಡು ಅದರ ಬಿರುದು ಏನೆಂದರೆ, ಕೊಡುಗೊಂಬಿನ ಚಲ್ಲ, ಬಸವನರೆಕ್ಕೆ ವಕ್ಕುಳಗಂಟೆ, ಹುಲಿಚರ್ಮ ಹಗಲು ದೀವಟಿಗೆ ಈ ಬಿರುದುಗಳನ್ನು ವಹಿಸಿಕೊಂಡು ಕುಂಚಟಿಗರ ಗಂಡ ಕುಡಿ ವಕ್ಕಲಿಗರ ಮಿಂಡ ಎಂದು ಆನೆಗೊಂದಿ ಪೇಟೆಯೊಳಗೆ ಭಟ್ಟರ ಸಂಗಡ ಹೊಗಳಿಸಿಕೊಂಡು ಹೋಗುತ್ತಾ ಇರುವ ಮಾತನ್ನು ಈ ಕುಂಚಟಿಗರ ಕುಲವು ಕೇಳಿ ತಲೆ ಬಗ್ಗಿಸಿಕೊಂಡು ಕುಲಕ್ಕೆ ಅಪಕೀರ್ತಿ ಬಂತಲ್ಲಾ ಎಂದು ವುಂಡೇನವರ ಶಿದ್ದಪ್ಪ, ಜಲದಿಬೊಪ್ಪರಾಯ, ವೀರಕ್ಯಾತರಾಯ, ರಂಗಪ್ಪ, ಮಾಳಪ್ಪ ಇವರು ಗಿಡ್ಡನು ಹೊಗಳಿಸಿಕೊಂಡು ಬರುವುದನ್ನು ನೋಡಿ ವುಂಡೇನವರ ಶಿದ್ದಪ್ಪನ ಕೈಲಿ ಈ ರೀತಿಯಾಗಿ ಹೊಗಳಿಸಿಕೊಂಡು ಬರುತ್ತಿದ್ದಾನೆ ನಾವು ಏನು ಮಾಡಬೇಕೆಂದು ಕೇಳಿದ್ದಕ್ಕೆ ಇವನನ್ನು ಜೈಸುವುದಕ್ಕೆ ಯಾರಿಂದಲೂ ಆಗುವುದಿಲ್ಲವೆಂದು*

** ಬೆನ್ನಾಡಿ ನಾದರ ಗಿಡ್ಡ – ಬೆನ್ನಾಡಿ = ಗೂನು ಬೆನ್ನಿನವರು
ನಾದರ = ನಾದಸ್ವರವನ್ನೂದುತ್ತಾ ಎತ್ತನ್ನು ಅಲಂಕರಿಸಿ ಮೆರವಣಿಗೆಯಲ್ಲಿ ಬೀದಿಯಲ್ಲಿ ಕರೆತಂದು ಭಿಕ್ಷೆಯನ್ನೆತ್ತುವ
ಗಿಡ್ಡ = ವ್ಯಕ್ತಿನಾಮ, 'ಬಸವನಾಡಿಸುವ ಜನಸಮುದಾಯ.'

ಕುಲವೆಲ್ಲಾ ಹೇಳಿತು. ಆಗ ಕಟ್ಟಿಗೆ ಮಾರಣ್ಣನನ್ನು ಕರೆದು ಕೇಳಿದರು. ಏನೆಂದರೆ ನಮ್ಮನು ಅವಮಾನ ಮಾಡಿಕೊಂಡು ಪೇಟೆಯೊಳಗೆ ಹೊಗಳಿಸಿಕೊಂಡು ಬರುತ್ತಾ ಇರುವ ನಾದರ ಗಿಡ್ಡನೆಂಬುವನನ್ನು ನೀನು ಜೈಸಬೇಕು. ನಿನ್ನಿಂದ ನಮಗೆ ಮಾನ ಬರಬೇಕೆಂದು ನಾನಾ ವಿಧವಾಗಿ ಹೇಳಿಕೊಂಡರು. ಆಗ ಕಟ್ಟಿಗೆ ಮಾರಣ್ಣನು ಆತನನ್ನು ಜೈಸಿ ಬರುತ್ತೇನೆ ಎಂದು ಹೇಳಿ ಕಟ್ಟಿಗೆ ಹೊರೆಯನ್ನು ಹೊತ್ತುಕೊಂಡು ಹೋದನು.

ಹೋಗುವಾಗ್ಗೆ ಈ ನಾದರಗಿಡ್ಡನು ಕುಂಚಟಿಗರ ಗಂಡ ಕುಡಿವಕ್ಕಲಿಗರ ಮಿಂಡ ಎಂದು ಹೊಗಳಿಸಿಕೊಂಡು ಬರುವುದನ್ನು ಕಂಡು ಈ ಮಾತು ಮಾರಣ್ಣನು ಕೇಳಿ ಕಟ್ಟಿಗೆ ಹೊರೆಯನ್ನು ಗೋಡೆಗೆ ನಿಲ್ಲಿಸಿ ಗಿಡ್ಡನ ಕಣ್ಣು ಗುಡ್ಡೆಗಳನ್ನು ತೆಗೆಯುವೆನೆಂದು ಗಿಡ್ಡನ ಕೈ ಹಿಡಿದುಕೊಂಡನು. ಇದನ್ನು ತಳವಾರರು ನೋಡಿ ರಾಯರಿಗೆ ತಿಳಿಸಿದರು. ರಾಯರು ಇವರಿಬ್ಬರನ್ನೂ ಕರೆಯಿಸಿ ವಿಚಾರ ಮಾಡುವಲ್ಲಿ ಕುಂಚಟಿಗರ ಗಂಡ ಕುಡಿವಕ್ಕಲಿಗರ ಮಿಂಡನೆಂದು ಈ ಗಿಡ್ಡನು ಹೊಗಳಿಸಿಕೊಂಡು ಬಂದದ್ದರಿಂದ ಇವನ ಕಣ್ಣುಗುಡ್ಡೆಗಳನ್ನು ನಾನು ತೆಗೆಯದೇ ಬಿಡುವುದಿಲ್ಲವೆಂದು ರಾಯರ ಮುಂದೆ ಮಾರಣ್ಣನು ಹೇಳಿದನು. ರಾಯರು ಸಂಸ್ಥಾನಕ್ಕೆ ಅಪಕೀರ್ತಿ ಬರುವದೆಂದು ಎಷ್ಟು ಸಮಜಾಯಿಷಿ ಹೇಳಿದರೂ ಕೂಡ ಮಾರಣ್ಣನು ಕೇಳದೆ ಅವನ ಕಣ್ಣು ಕಿತ್ತು ಹಾಕದೆ ಬಿಡುವುದಿಲ್ಲವೆಂದು ಹೇಳಿದನು. ಅದಕ್ಕೆ ರಾಯರು ಒಂದು ಪಂಥವನ್ನು ಗೊತ್ತುಮಾಡಿದರು. ಆ ಪಂಥಕ್ಕೆ ಇಬ್ಬರೂ ಒಪ್ಪಿದರು. ಏನೆಂದರೆ ಮಾರಣ್ಣನು ಸೋತರೆ ಗಿಡ್ಡನ ಮನೆಗೆ ಜೀವಮಾನವಿರುವವರೆವಿಗೂ ಸೌದೆ ನೀರು ಹೊರಬೇಕು. ಗಿಡ್ಡ ಸೋತರೆ ಅವನ ಕಣ್ಣುಗುಡ್ಡೆ ಕೀಳಿಸಿ ಗಿಡ್ಡನ ಮನೆಯನ್ನೆಲ್ಲಾ ಬಾಚಿ ಅರಮನೆಗೆ ಹಾಕಬೇಕು ಎಂದು ಗೊತ್ತುಮಾಡಿ ರಾಯರ ಅಪ್ಪಣೆಯನ್ನು ತೆಗೆದುಕೊಂಡು 48 ದಿನಗಳ ವಾಯಿದೆವರಿವಿಗೂ ತುಪ್ಪ ಅನ್ನ ಸಹ ಮಾರಣ್ಣನು ಉಂಡನು. ಗಿಡ್ಡನ ಎತ್ತಿಗೆ 48 ದಿವಸ ಕಡಲೆ ಹಾಕಿದರು. 48 ದಿವಸ ತೀರಿದ ಕೂಡಲೇ ನಡುವಿನ ಉದ್ದ ಒಂದು ಬಂಡಿಯನ್ನು ಹೂಣಿಸಿ ಅದಕ್ಕೆ ಐದು ಖಂಡಗದ ಐಗಳ ಅಕ್ಕಿಯನ್ನು ತುಂಬಿಸಿ ಧೂಪ ದೀಪ ನೈವೇದ್ಯದಿಂದ ಪೂಜೆ ಮಾಡಿಸಿ ರಾಯರೂ ಮತ್ತು ಸರ್ವರೂ ಸೇರಿಕೊಂಡು ಎಡಕ್ಕೆ ಗಿಡ್ಡನ ಎತ್ತನ್ನು ಹೂಡಿ ಬಲಕ್ಕೆ ಮಾರಣ್ಣನನ್ನು ಹೂಡಿ ಭಟರ ಸಂಗಡ ಹೊಗಳಿಸಿಕೊಂಡು ರಾಯರ ಕಡೆ ಅಪ್ಪಣೆಯನ್ನು ತೆಗೆದುಕೊಂಡು ಬಂಡಿ ಬಹುಭಾರವೆಂದು ಒಬ್ಬ ಮನುಷ್ಯನ ಕೈಲಿ ಮುತ್ತಿನ ತಿರುಬಾರು ಕೋಲನ್ನು ಕೊಟ್ಟು ಬಾರುಕೋಲಿನಿಂದ ಹೊಡೆ ಎಂದರು. ಆ ಮನುಷ್ಯನು ಎತ್ತಿನ ಮೇಲೆ ಒಂದು ಪೆಟ್ಟನ್ನು ಹೊಡೆದು ಮಾರಣ್ಣನಿಗೆ ಒಂದು ಪೆಟ್ಟು ಹೊಡೆಯುವುದರೊಳಗಾಗಿ ಬಂಡಿಯು ಮಾರಣ್ಣನ ಕಡೆಯ ಚಕ್ರವು ಎದ್ದು ನಿಂತಿತು. ಎತ್ತಿನ ಕಡೆ ಚಕ್ರವು ಸಡಲಲಿಲ್ಲ. ಗಿಡ್ಡನ ಎತ್ತಿನ ಕಣ್ಣುಗುಡ್ಡೆಗಳು ಹೊರಕ್ಕೆ ಹೊರಟವು ಎಂದು ಭಟ್ಟರ ಮಲ್ಲಣ್ಣನು ಬಂಡಿಯ ಮೂಕಿನ ಬಳಿ ನಿಂತುಕೊಂಡು ಹೊಗಳುತ್ತಾನೆ.

ಆಗ ರಾಯರೂ 48 ಕುಲವೂ ಅಲ್ಲಿದ್ದ ಜನಗಳೂ ಸಹ ಮಾರಣ್ಣನು ಗೆದ್ದನೆಂದು ಗಿಡ್ಡನ ಕಣ್ಣು ಕೀಳಿಸಿ ಅವನ ಮನೆಯನ್ನೆಲ್ಲಾ ಬಾಚಿ ಅರಮನೆಗೆ ಸಾಗಿಸಿದರು. ಆಗ ಕಟ್ಟಿಗೆ ಮಾರಣ್ಣನು ನಮ್ಮ ಕುಲಕ್ಕೆ ಕೀರ್ತಿ ತಂದನೆಂದು ಕೈ ಮುಗಿದು ರಾಯರ ಬಳಿಗೆ ಕರೆದುಕೊಂಡು ಹೋದರು. ರಾಯರು ಮೆಚ್ಚಿ ಉಂಗುರ ಉಡಿದಾರ ಉಡಿಗೆತೊಡುಗೆಗಳನ್ನು ಬಹುಮಾನ ಮಾಡಿದರು. ಈ ಮಾರಣ್ಣನು

ಹಿಂದೆಗೆದಿದ್ದಾನೆ. ಈಗ ಬಹಳ ಅಗಾಧ ಕಾರ್ಯವನ್ನು ಮಾಡಿ ಗೆದ್ದವನಾದ್ದರಿಂದ ನಮ್ಮ ಕರೇಕಂಬಳಿಗದ್ದುಗೆ ಮೇಲೆ ನಾಡುಗೌಡಿಕೆ ವೀಳ್ಯವನ್ನು ಕೊಡುತ್ತೇವೆಂದು ರಾಯರ ಮುಂದೆ ಒಪ್ಪಿಕೊಂಡಿರುವ ಜಯರೇಖೆ ಸಹಿ.

ಈ ಕುಂಚಟಿಕುಲದಲ್ಲಿ ಗಂಡಿಗೆ ಹೆಣ್ಣು ಕೊಟ್ಟಲ್ಲಿ ತಪ್ಪುನೆಪ್ಪು ಮುಂತಾದ್ದನ್ನು ಮನ್ನಿಸಿ ಬಲವುಳ್ಳವರು ಯಾರು? 48 ಕುಲಸ್ವಾಮಿಗಳು ಆಗಲೇ ಹೋಗಿ ಉಂಡೇನವರ ಶಿದ್ದಪ್ಪನ ಮಗಳನ್ನು ತಂದು ಕಟ್ಟಿಗೆ ಮಾರಣ್ಣನಿಗೆ ಕೊಟ್ಟು ವಿವಾಹವನ್ನು ಮಾಡಿದರು. ಅದಕ್ಕೆ 48 ಕುಲಸ್ವಾಮಿಗಳು ಯಾರು ತಪ್ಪಿದಾಗ್ಗೂ ಕಾಶಿಯೊಳಗೆ ಗೋಹತ್ಯ ಮಾಡಿದ ಪಾಪವನ್ನು ಅನುಭವಿಸುವರು.

ಇದಕ್ಕೆ ಸಾಕ್ಷಿಗಳು – ಭೂದೇವತೆ ಆಕಾಶವಾಣಿ ಸೂರ್ಯಚಂದ್ರಾದಿಗಳು ಸಾಕ್ಷಿಯಾಗಿರುತ್ತಾರೆಂದ ಶಾಸನದ ಸಹಿ ಪ್ರಧಾನಿ ಅಪ್ಪಾಜಿರಾಯರು ಬರೆದ ಶಾಸನ

ಸಂಪೂರ್ಣಂ

ಶಾಸನದ ಸಾರಾಂಶ: ಇದೊಂದು ಜಯರೇಖೆ ಶಾಸನ. ಕ್ರಿ.ಶ. 14ನೇ ಶತಮಾನದ ಆದಿಭಾಗದಲ್ಲಿ ಡಿಳ್ಳಿಯಿಂದ ಆನೆಗೊಂದಿಗೆ ವಲಸೆ ಬಂದು ನೆಲೆಸಿದ್ದ ಕುಂಚಟಿಗರ ಮತ್ತು ನಾದರರ ನಡುವಣ ಮರ್ಯಾದಾ ಹಾನಿಯನ್ನು ಕುರಿತ ವ್ಯಾಜ್ಯವನ್ನು ಆನೆಗೊಂದಿಯ ಅಂದಿನ ಅರಸರಾಗಿದ್ದ ಜಂಬುಕೇಶ್ವರರಾಯರೂ ಪ್ರಧಾನಿ ಅಪ್ಪಾಜಿರಾಯರು ಪರಿಹರಿಸಿ ಪಂಥದಲ್ಲಿ ಜಯಶೀಲನಾದ ಕಟ್ಟಿಗೆ ಮಾರಣ್ಣನಿಗೆ ಬಹುಮಾನಿಸಿ, ಕುಂಚಟಿಗರನ್ನು ಅವಮಾನಿಸಿದ ಮತ್ತು ಪಂಥದಲ್ಲಿ ಸೋತದ್ದಕ್ಕಾಗಿ ನಾದರಗಿಡ್ಡನನ್ನು ಶಿಕ್ಷಿಸಿ ಕುಂಚಟಿಗರ ಮಾನವನ್ನು ಸಂರಕ್ಷಿಸಿ 48 ಕುಂಚಟಿಗರ ಕುಲಸ್ವಾಮಿಗಳ ಸಮ್ಮುಖದಲ್ಲಿ ನೀಡಿದ ಜಯರೇಖೆ ಶಾಸನ ಇದಾಗಿದೆ. ಇದರಲ್ಲಿ ಉಕ್ತವಾಗಿರುವ ಚಾರಿತ್ರಿಕ ಅಂಶಗಳ ಅಧ್ಯಯನ ಮತ್ತು ತುಲನೆ ಮಹತ್ವವಾಗಿದ್ದು ದಿನಗಳಲ್ಲಿ ಅದನ್ನು ನೆರವೇರಿಸಲಾಗುವುದು.

ಆಕರಗಳು

1. *ವೀರ ನಾಗಮ್ಮನ ಚರಿತ್ರೆ* ಎಂಬ ಹಸ್ತಪ್ರತಿ ಗ್ರಂಥ, ಬಿ.ಎಂ.ಶ್ರೀ ಪ್ರತಿಷ್ಠಾನದ ಹಸ್ತಪ್ರತಿ ಭಂಡಾರ, ನ.ರಾ. ಕಾಲೋನಿ, ಬೆಂಗಳೂರು.
2. ರಾಜಾಅಚ್ಯುತದೇವರಾಯ, ಜಿ.ಆರ್. ರಾಮಮೂರ್ತಿ, ಟಿ. ಪರಮೇಶ್ವರಪ್ಪ, *ಆನೆಗೊಂದಿ (ಒಂದು ಕಿರು ಪರಿಚಯ)*, ಹಂಪಿ ಉತ್ಸವ ಸಮಿತಿ, ಕುಮಾರರಾಮ ಮಂಟಪ, ಆನೆಗೊಂದಿ, 1998.
3. *ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ*, ಡಾ. ಅಂಬಳಿಕೆ ಹಿರಿಯಣ್ಣ, ಜಾನಪದ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
4. ಡಾ. ಶಿವರಾಮ ಕಾರಂತ, *ಸಿರಿಗನ್ನಡ ಅರ್ಥಕೋಶ.*

21

ಕೊಪ್ಪಳ ಜಿಲ್ಲೆಯ ವಿಜಯನಗರದ ಅರಸರ ಶಾಸನಗಳ ಸಮೀಕ್ಷೆ

ಡಾ॥ ಲ. ನ. ಸ್ವಾಮಿ

ಕೊಪ್ಪಳ ಜಿಲ್ಲೆಯು ವಿಜಯನಗರ ಸಾಮ್ರಾಜ್ಯದ ರಾಜಧಾನಿಗೆ ಅತಿ ಸಮೀಪದಲ್ಲಿರುವ ಪ್ರದೇಶವಾಗಿದೆ. ತುಂಗಭದ್ರಾನದಿಯ ಉತ್ತರ ದಂಡೆಯಲ್ಲಿ ಹರಡಿರುವ ಈ ಜಿಲ್ಲೆಯು ಗಂಗಾವತಿ, ಕುಷ್ಟಗಿ, ಕೊಪ್ಪಳ ಮತ್ತು ಯಲಬುರ್ಗ ತಾಲ್ಲೂಕುಗಳನ್ನು ಹೊಂದಿದೆ. ಜಿಲ್ಲೆಯಲ್ಲಿ ವಿಜಯನಗರ ಸಾಮ್ರಾಜ್ಯದ 40 ಶಾಸನಗಳನ್ನು ಕನ್ನಡ ವಿಶ್ವವಿದ್ಯಾನಿಲಯ ಹೊರತಂದಿರುವ ಶಾಸನ ಸಂಪುಟದಲ್ಲಿ ಪ್ರಕಟಿಸಲಾಗಿದೆ. ಜಿಲ್ಲೆಯಲ್ಲಿ ಪ್ರಕಟವಾಗಿರುವ 378 ಶಾಸನಗಳ ಪೈಕಿ ಕೇವಲ 40 ಶಾಸನಗಳು ವಿಜಯನಗರದ ಸಾಮ್ರಾಜ್ಯದ ಅರಸರ ಕಾಲದವು. ಮುಂದಿನ ಪಟ್ಟಿ ತಾಲ್ಲೂಕುವಾರು ಶಾಸನಗಳ ಸಂಖ್ಯೆಯನ್ನು ಸೂಚಿಸುತ್ತದೆ.

ಕೊಪ್ಪಳ	8
ಕುಷ್ಟಗಿ	3
ಗಂಗಾವತಿ	25
ಯಲಬುರ್ಗ	4
ಒಟ್ಟು	40

ಈ ಮುಂದಿನ ಕೋಷ್ಟಕದಲ್ಲಿನ ತಾಲ್ಲೂಕುವಾರು ಪಟ್ಟಿಯನ್ನು ನೋಡಿದರೆ ಗಂಗಾವತಿ ತಾಲ್ಲೂಕು 62.5% ಶಾಸನಗಳನ್ನು ಹೊಂದಿದೆ. ಕೃಷ್ಣರಾಯನ ಒಟ್ಟು ಎಂಟು ಶಾಸನಗಳು ಜಿಲ್ಲೆಯಲ್ಲಿ ದೊರೆತಿದೆ. ಆದರೆ ಅದರಲ್ಲಿ ಅತ್ಯಲ್ಪ ಗಂಗಾವತಿಯಲ್ಲಿ ಕಂಡುಬಂದಿದೆ. ಕೊಪ್ಪಳದಲ್ಲಿ ಕೃಷ್ಣರಾಯನ ಕಾಲದ ಆರು ಶಾಸನಗಳು ಕಂಡುಬರುತ್ತವೆ. ಅಚ್ಯುತರಾಯನ ಮತ್ತು ಸದಾಶಿವರಾಯನ ಬಹುತೇಕ ಶಾಸನಗಳು ಗಂಗಾವತಿ ತಾಲ್ಲೂಕಿಗೆ ಸೀಮಿತವಾಗಿವೆ. ಅಚ್ಯುತರಾಯನ ಎಂಟು ಶಾಸನಗಳಲ್ಲಿ ಆರು ಗಂಗಾವತಿ ತಾಲ್ಲೂಕಿನಲ್ಲಿ, ಎರಡು ಯಲಬುರ್ಗದಲ್ಲಿ ಹಂಚಿಕೆಯಾಗಿವೆ. ಸದಾಶಿವರಾಯನ ಕಾಲದಲ್ಲಿ ಸಹ ಇದೇ ಬಗೆಯಲ್ಲಿ ಹಂಚಿಕೆಯಾಗಿದೆ. ಅವನ ಕಾಲದ ಹನ್ನೊಂದು ಶಾಸನಗಳಲ್ಲಿ ಎಂಟು ಗಂಗಾವತಿ ತಾಲ್ಲೂಕಿನಲ್ಲಿ, ಉಳಿದ ಎರಡು ಶಾಸನಗಳಲ್ಲಿ ಕುಷ್ಟಗಿಯಲ್ಲಿ ಮತ್ತು ಯಲಬುರ್ಗ ತಾಲ್ಲೂಕಿನಲ್ಲಿ ತಲಾ ಒಂದು ಶಾಸನ ಲಭ್ಯವಾಗಿವೆ.

ರಾಜರು ಮತ್ತು ಅವರ ಕಾಲಾವಧಿಯ ತಾಲ್ಲೂಕುವಾರು ಶಾಸನಗಳ ಹಂಚಿಕೆ

	ಗಂಗಾವತಿ	ಕೊಪ್ಪಳ	ಯಲಬುರ್ಗ	ಕುಷ್ಟಗಿ
ಹರಿಹರ	28, 21	31	48	–
2ನೇ ಹರಿಹರ	39	–	–	–
ದೇವರಾಯ	20, 66, 80	–	–	12
ವಿರೂಪಾಕ್ಷ	–	163	–	–
ಸಾಳುವ ನರಸಿಂಹ	80	–	–	–
ನರಸನಾಯಕ	64, 69			
ಕೃಷ್ಣರಾಯ	80, 73	39, 135, 138, 139, 160, 161	–	–
ಅಚ್ಯುತರಾಯ	54, 55, 80, 90, 91, 93	–	14, 22	–
ಸದಾಶಿವರಾಯ	25, 37, 60, 68, 74, 82, 94, 95	–	42	10, 17
ಶಾಸನ ಸಂಖ್ಯೆ	25	8	4	3
ಪ್ರತಿಶತ	62.5%	20%	10%	7.5%

ಕೊಪ್ಪಳ ತಾಲ್ಲೂಕಿನಲ್ಲಿ ಎಂಟು ಶಾಸನಗಳು ಪತ್ತೆಯಾಗಿದ್ದು ಅವುಗಳಲ್ಲಿ ಆರು ಕೃಷ್ಣರಾಯನ ಕಾಲದವು ಮತ್ತು ತಲಾ ಒಂದೊಂದು ಶಾಸನಗಳು ಒಂದನೇ ಹರಿಹರನ ಮತ್ತು ವಿರೂಪಾಕ್ಷನ ಕಾಲದವು. ಸಾಮ್ರಾಜ್ಯದ ಜಿಲ್ಲೆಯ ಒಟ್ಟು ಶಾಸನಗಳಲ್ಲಿ ಈ ತಾಲ್ಲೂಕಿನ ಶೇಕಡವಾರು ಗಳಿಕೆ 20. ಕೃಷ್ಣರಾಯನನ್ನು ಹೊರತುಪಡಿಸಿದರೆ ಉಳಿದ ಅರಸರ ಕಾಣಿಕೆ ಈ ತಾಲ್ಲೂಕಿನಲ್ಲಿ ಇಲ್ಲವೆಂದೇ ಹೇಳಬಹುದು.

ಯಲಬುರ್ಗ ತಾಲ್ಲೂಕಿನಲ್ಲಿ ಒಟ್ಟು ನಾಲ್ಕು ಶಾಸನಗಳು ದೊರೆತಿದ್ದು ಶೇಕಡಾವಾರು ಕ್ರಮದಲ್ಲಿ 10% ಆಗಿದೆ ಹಾಗೂ ಕುಷ್ಟಗಿ ತಾಲ್ಲೂಕು ಮೂರು ಶಾಸನಗಳನ್ನು ಹೊಂದಿದ್ದು ತಾಲ್ಲೂಕುವಾರು ಹಂಚಿಕೆಯಲ್ಲಿ ಅತೀ ಕಡಿಮೆ (7.5%) ಶೇಕಡಾವಾರು ಗಳಿಕೆಯನ್ನು ಹೊಂದಿದೆ. ರಾಜಕೀಯ ಕ್ಷೇತ್ರದಲ್ಲಿ ಹಾಗೂ ಧಾರ್ಮಿಕ ಕ್ಷೇತ್ರದಲ್ಲಿ ಸಂಮೃದ್ಧತೆ ಸಾಧಿಸುವಲ್ಲಿ ಹಿಂದೆ ಸರಿದಿದೆ ಎಂದು ಹೇಳಬೇಕು. ನದೀ ಪಾತ್ರದಲ್ಲಿರುವ ಗಂಗಾವತಿ ಮತ್ತು ಕೊಪ್ಪಳ ತಾಲ್ಲೂಕುಗಳು 82.5% ಶಾಸನಗಳನ್ನು ದಾನಗಳನ್ನು ಹೊಂದಿದ್ದು ನದಿಯ ಪಾತ್ರದಿಂದ ದೂರವಿದ್ದ ಯಲಬುರ್ಗ ಮತ್ತು ಕುಷ್ಟಗಿ ಪ್ರದೇಶ ಅಕಾಲದಲ್ಲಿಯು ಅವಕೃಪೆಗೆ ಒಳಗಾಗಿದ್ದು ಕಂಡುಬರುತ್ತದೆ.

ಈ ಕಾಲಘಟ್ಟದಲ್ಲಿ ಒಂದೇ ಒಂದು ಕೆರೆಯನ್ನು ನಿರ್ಮಾಣಮಾಡಿದ್ದನ್ನು ಶಾಸನಗಳು ಪ್ರಸ್ತಾಪಮಾಡಿರುವುದಿಲ್ಲ. ಇದು ಈ ಪ್ರದೇಶದ ಅಭಿವೃದ್ಧಿಗೆ ಅಂದಿನ ಆಡಳಿತ ಹರಿಸಿದ್ದ ಗಮನವನ್ನು ವ್ಯಕ್ತಪಡಿಸುತ್ತದೆ. ಅಂದರೆ ವ್ಯವಸಾಯ

ಮತ್ತು ಇತರ ಕ್ಷೇತ್ರಗಳ ಕಡೆಗೆ ಗಮನ ಹರಿಸದಿರುವ ಅಧಿಕಾರಿಗಳ ಕಾರ್ಯತಂತ್ರದ ಹಿಂದಿನ ಭಾವನೆ, ರಾಜಕೀಯ ಕಾರಣಗಳನ್ನು ಅಭ್ಯಸಿಸುವ ಆವಶ್ಯಕತೆ ಎದ್ದು ತೋರುತ್ತದೆ. ಬಹುಶಃ ಬಹಮನಿ ಸಾಮ್ರಾಜ್ಯದೊಂದಿಗಿನ ನಿರಂತರ ಹೋರಾಟದ ಕ್ಷೇತ್ರವಾಗಿದ್ದ ಈ ಪ್ರದೇಶಗಳು ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವಲ್ಲಿ ವಿಫಲವಾದದ್ದರಿಂದ, ಅಥವಾ ಅವಶ್ಯಕ ಸಂದರ್ಭದಲ್ಲಿ ರಾಜಧಾನಿಯಿಂದ ಸೈನ್ಯ ನುಗ್ಗಿ ಬಂದು ರಕ್ಷಣೆ ಕೈಗೊಳ್ಳುವ ಹೊತ್ತಿಗೆ ಎಲ್ಲವೂ ವೈರಿಪಡೆಯ ಪಾಲಾಗುವ ಸಾಧ್ಯತೆಗಳು ಹೆಚ್ಚಿದ್ದರಿಂದ ಈ ಕಾಲಘಟ್ಟದಲ್ಲಿ ಕನಕಗಿರಿಯನ್ನು ಹೊರತುಪಡಿಸಿದರೆ ಈ ಜಿಲ್ಲೆಯಲ್ಲಿ ಇತರ ಯಾವ ಕ್ಷೇತ್ರಗಳು ಆ ಕಾಲಘಟ್ಟದಲ್ಲಿ ಪ್ರವರ್ಧಮಾನಕ್ಕೆ ಬರದಿರುವುದು ತಿಳಿದುಬರುತ್ತದೆ.

ಕನಕಗಿರಿಯು ಸುಭದ್ರವಾದ ಕೋಟೆಯಿಂದ ರಕ್ಷಣೆ ಪಡೆದಿದ್ದರಿಂದ ಈ ಸಾಧನೆ ಸಾಧ್ಯವಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಒಟ್ಟಾರೆ, ಕೊಪ್ಪಳ ಜಿಲ್ಲೆಯಲ್ಲಿ ದೊರೆಯುವ ಶಾಸನಗಳು ರಾಜಧಾನಿಯ ಕಡೆಗೆ ಕೇಂದ್ರೀಕೃತವಾಗಿರುವುದು ಕಂಡುಬರುತ್ತದೆ. ಶಾಸನಗಳ ದಾನ ಮತ್ತು ಅವುಗಳ ಉದ್ದೇಶವನ್ನು ತಿಳಿಯುವ ಪ್ರಯತ್ನ ಈ ಮುಂದೆ ಮಾಡಲಾಗಿದೆ.

ಹರಿಹರನ ಶಾಸನಗಳು

ಕೊಪ್ಪಳ ಜಿಲ್ಲೆಯಲ್ಲಿ ಹರಿಹರನ ಕಾಲದ ನಾಲ್ಕು ಶಾಸನಗಳು ಪ್ರಸ್ತುತ ಪ್ರಕಟವಾಗಿದ್ದು ಅವುಗಳಲ್ಲಿ ಗಂಗಾವತಿ ತಾಲ್ಲೂಕಿನಲ್ಲಿ ಎರಡು ಶಾಸನಗಳು (Gvt. 21, 28), ಕೊಪ್ಪಳ (Kpl. 31) ಮತ್ತು ಯಲಬುರ್ಗ (Ylg. 48) ತಾಲ್ಲೂಕಿನಲ್ಲಿ ತಲಾ ಒಂದು ಶಾಸನ ದೊರೆತಿದೆ. ಈ ನಾಲ್ಕು ಶಾಸನಗಳ ವಸ್ತುವಿಷಯ ಮತ್ತು ಉದ್ದೇಶ ಮುಂದಿನಂತಿದೆ.

ಗಂಗಾವತಿ ತಾಲ್ಲೂಕು ಆನೆಗೊಂದಿಯಲ್ಲಿ ದೊರೆತಿರುವ ಈ ಶಾಸನವು ಜಿಲ್ಲೆಯಲ್ಲಿ ದೊರೆತಿರುವ ವಿಜಯನಗರ ಸಾಮ್ರಾಜ್ಯದ ಅರಸರ ಶಾಸನಗಳಲ್ಲಿ ಅತಿ ಪ್ರಾಚೀನವಾದದ್ದು. ಈ ಶಾಸನದ ಹೆಗ್ಗಳಿಕೆ ಎಂದರೆ ರಾಜನಾದ ಹರಿಹರನನ್ನು **ಸಮ್ಮದ್ರಾಜ ಹರಿಹರೇಶ್ವರ** ಎಂದು ಉಲ್ಲೇಖಿಸಿರುವುದು. ಶಾಸನದ ಉದ್ದೇಶ ದಾನಿಯಾದ ರಾಜನ ದಂಡನಾಯಕನಾದ ಬೈಚದಂಡನಾಯಕನು ತನ್ನ ಮಗ ಇರುಗಪನು ನಿರ್ಮಿಸಿದ ಚೈತ್ಯಾಲಯಕ್ಕೆ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಈ ಶಾಸನದಲ್ಲಿ ರಾಜನ ನೇರ ಕರ್ತವ್ಯದಲ್ಲಿದ್ದ ಅಧಿಕಾರಿ ಹಾಕಿಸಿದ ಶಾಸನವಾಗಿದ್ದು ರಾಜನನ್ನು ಉಲ್ಲೇಖಿಸಿದೆ. (ಗಂಗಾ: 21, ಕ್ರಿ.ಶ. 1342, ಏಪ್ರಿಲ್ 8)

ಶಾಸನದಲ್ಲಿ ರಾಜನನ್ನು ಶ್ರೀಮನ್ ಮಹಾಮಂಡಲೇಶ್ವರ, ಅರಿರಾಯ ವಿಭಾಡ, ಭಾಷೆಗೆ ತಪ್ಪುವ ರಾಯರ ಗಂಡ, ಸಮುದ್ರತ್ರಯಾಧಿಪತಿ, ಶ್ರೀ ವೀರ ಹರಿಹರ ಮಹಾರಾಜ ಎಂದು ಉಲ್ಲೇಖಿಸಿದ್ದು ರಾಜ ಮತ್ತು ಕೊಪ್ಪಳದ ಭವ್ಯಜನಂಗಳು ಅನಂತ ಕೀರ್ತಿಯ ಪ್ರಿಯ ಶಿಷ್ಯನಾದ ಸಿಂಹನಂದೀಚಾರ್ಯನ ನಿಶಿದಿಯನ್ನು ಸೇರಿ ಮಾಡಿಸಿದರೆಂದು ಹೇಳುತ್ತದೆ. ಇಲ್ಲಿ ಮಹಾಮಂಡಲೇಶ್ವರ ಬಿರುದು ಗಮನ ಸೆಳೆಯುತ್ತದೆ. (ಕೊಪ್ಪಳ, 31 ಕ್ರಿ.ಶ. 1346ರ ಅಕ್ಟೋಬರ್ 30)

ಪ್ರಸ್ತುತ ಶಾಸನವು ರಾಜನಾದ ಹರಿಹರನನ್ನು "ಶ್ರೀ ಹರಿಹರನಾಥ" ಎಂದು ಉಲ್ಲೇಖಿಸುತ್ತದೆ. ಆತನ ಬಿರುದುಗಳನ್ನು ಹೇಳುತ್ತದೆಯೇ ಹೊರತು, ರಾಜತ್ವದ ಅಂದರೆ ಮಹಾರಾಜ, ಮಹಾಮಂಡಲೇಶ್ವರ ಇತ್ಯಾದಿ ಪದವಿಗಳನ್ನು ಉಲ್ಲೇಖಿಸುವುದಿಲ್ಲ. ಈ ಶಾಸನದ ಮತ್ತೊಂದು ಮಹತ್ವವೆಂದರೆ ಸಾವಣ್ಣವೊಡೆಯನನ್ನು ಹರಿಹರನ ಮಗನೆಂದು ದಾಖಲಿಸಿದೆ. ಸಾವಣ್ಣನ ಅರಮನೆಯವರಾರೋ ಗತಿಸಿದ ಸಂದರ್ಭದಲ್ಲಿ ಆನೆಗೊಂದಿಯ ಕಪಿಲೇಶ್ವರ ದೇವರಿಗೆ

ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಅಲ್ಲದೆ ಆನೆಗೊಂದಿಗೆ ಹಸ್ತಿನಾಪುರವೆಂಬ ಹೆಸರಲ್ಲದೆ ಅಂದಿನ ದಿನಗಳಲ್ಲಿ ಭಾಸ್ಕರಕ್ಷೇತ್ರವೆಂದೂ ಹೆಸರಾಗಿದ್ದನ್ನು ಉಲ್ಲೇಖಿಸುತ್ತದೆ. (ಗಂಗಾ 28, 1349 ಸೆಪ್ಟೆಂಬರ್ 10.)

ಪ್ರಸ್ತುತ ಶಾಸನವು ಎರಡನೆ ಹರಿಹರನ ಆಡಳಿತಾವಧಿಯಲ್ಲಿ (ಕ್ರಿ.ಶ. 1377–1404) ಹೊರಡಿಸಲಾಗಿರುವುದರಿಂದ ಈ ಶಾಸನದಲ್ಲಿ ಉಲ್ಲೇಖಿತನಾದ ಶ್ರೀ ವೀರಪ್ರತಾಪಹರಿಹರ ಮಹಾರಾಯನು ಎರಡನೆಯ ಹರಿಹರನೆಂದು ಗ್ರಹಿಸಬೇಕಾಗುತ್ತದೆ. ಈ ಶಾಸನ ಸಾಂಸ್ಕೃತಿಕವಾಗಿ ಅತ್ಯಂತ ಮಹತ್ವದ್ದಾಗಿದೆ. ಪ್ರಾಯಶಃ ಮುಸಲ್ಮಾನರ ಧಾಳಿಗೆ ಒಳಗಾಗಿ ನಶಿಸಿದ್ದ ಕುಕ್ಕನೂರಿನ ಅಗ್ರಹಾರವನ್ನು ಈತನು ಸ್ಥಾಪಿಸಿದನು. ಚತುರ್ವೇದಾಧ್ಯಯನ ಸ್ಥಾಪನೆಗೆ ಮತ್ತು ಅಲ್ಲಿನ ಮಹಾಮಾಯಿ ದೇವಾಲಯದ ನಿತ್ಯೋತ್ಸವದಿಂದ – ಸಂವತ್ಸರೋತ್ಸವದವರೆಗಿನ ಎಲ್ಲಾ ಪರ್ವಗಳಿಗೆ, ಪೂಜೆಗಳಿಗೆ, ನವರಾತ್ರಿಯ ಕಾಲದ ಪೂಜೆಗಳಿಗೆ, ನವರಾತ್ರಿ ಕಾಲದ ಕುಮಾರಿಪೂಜೆ, ಸುವಾಸಿನಿ ಪೂಜೆ, ಚತುರ್ದಶಿಯ ಕರಗದ ಪೂಜೆಗೆ ಮುಂತಾದ ಕ್ರಿಯೆಗಳಿಗೆ ಕುಕನೂರಿನ ಸ್ಥಾಪನಾಪತಿಯಾದ ಕ್ರಿಯಾಶಕ್ತಿಗುರುಗಳ ನಿರೂಪದ ಮೇರೆಗೆ ದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ. (ಯಲ: 48, 1997ರ ಮೇ 31)

ಜಿಲ್ಲೆಯಲ್ಲಿ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಜಿಲ್ಲೆಯಲ್ಲಿ ವೈದಿಕ ಸಂಸ್ಕೃತಿಗೆ ನೀಡಿದ ಮೊದಲ ದಾನ ಶಾಸನ ಇದಾಗಿದೆ. ಅದೂ ಅಲ್ಲದೆ ವಿದ್ಯಾದಾನ ಮತ್ತು ವೇದಾಧ್ಯಯನಕ್ಕೆಂದೇ ನೀಡಿದ ಪ್ರಥಮ ಹಾಗೂ ಕೊನೆಯ ದಾನಶಾಸನ ಇದಾಗಿದೆ.

ಎರಡನೆ ಹರಿಹರ

ಈ ಶಾಸನವು ಅತ್ಯಂತ ಸಣ್ಣ ಶಾಸನವಾಗಿದ್ದು ಆರು ಸಾಲುಗಳನ್ನು ಒಳಗೊಂಡಿದೆ. ಸಂಸ್ಕೃತ ಭಾಷೆಯಲ್ಲಿರುವ ಈ ಶಾಸನವು ಕ್ರಿ.ಶ. 1382ರಲ್ಲಿ ಶ್ರೀಮಾನ್ ಹರಿಹರಾತ್ಮಜನಾದ ಕುಮಾರ ಕಂಪಭೂಪಾಲನು ತುಂಗಭದ್ರಾ ನದಿಗೆ ಸೋಪಾನಗಳನ್ನು ನಿರ್ಮಿಸಿದಂತೆ ದಾಖಲಿಸಿದೆ. ಕಾಲಘಟ್ಟದ ಆಧಾರದಲ್ಲಿ ಉಲ್ಲೇಖಿತ ಹರಿಹರನು ಎರಡನೆ ಹರಿಹರನಾಗುತ್ತಾನೆ. ಈವರೆಗೆ ಪ್ರಕಟಿತವಾಗಿರುವ ವಿಜಯನಗರ ಸಾಮ್ರಾಜ್ಯದ ಸಂಗಮ ಮನೆತನದ ವಂಶಾವಳಿಯಲ್ಲಿ ಕಂಪ ಭೂಪಾಲನನ್ನು ಒಂದನೇ ಬುಕ್ಕರಾಯನ ಮಗನೆಂದು ನಮೂದಿಸಲಾಗಿದೆ. ಆದರೆ ಶಾಸನ ನಿಖರವಾಗಿ ಹರಿಹರನ ಕುಮಾರನೆಂದು (ಆತ್ಮಜಃ) ಎಂದು ದಾಖಲಿಸುತ್ತದೆ. ಎರಡನೆಯ ಹರಿಹರನಿಗೆ ಕಂಪನೆಂಬ ಮಗನಿದ್ದನೆಂದು ತಿಳಿದುಬರುವ ಹಿನ್ನೆಲೆಯಲ್ಲಿ ಶಾಸನಗಳ ವಿಸ್ತಾರವಾದ ಅಧ್ಯಯನ ಈ ದಿಸೆಯಲ್ಲಿ ಅವಶ್ಯಕವಾಗಿ ವರ್ಣಿಸುತ್ತದೆ. (ಗಂಗಾ: 39, ಆನೆಗೊಂದಿ, 1382ರ ಮಾರ್ಚ್ 29)

ಎರಡನೇ ದೇವರಾಯನ ಮೂರು ಶಾಸನಗಳು ಜಿಲ್ಲೆಯಲ್ಲಿ ಲಭ್ಯವಾಗಿವೆ. ಇವುಗಳಲ್ಲಿ ಎರಡು ಶಾಸನಗಳು ಕಾಲ ನಿರ್ದೇಶಿತವಾಗಿದ್ದರೆ ಒಂದು ಶಾಸನ ಕಾಲವನ್ನು ಹೊಂದಿಲ್ಲದೆ ಇರುವುದರಿಂದ ಇದನ್ನು ಎರಡನೆ ದೇವರಾಯನದೆಂದು ಪರಿಗಣಿಸಲಾಗಿದೆ.

ಚಿಕ್ಕರಾಂಪುರದ ಈ ಶಾಸನವು ಶ್ರೀಮತ್ ವೀರಪ್ರತಾಪದೇವರು ಮಾನ್ಯಮಾಡಿದ ಗದ್ದೆ ಎಂದು ಮಾತ್ರ ಉಲ್ಲೇಖಿಸುತ್ತದೆ. (ಗಂಗಾ: 66)

ಕನಕಗಿರಿಯ ಶಾಸನ

ಈ ಶಾಸನವು ಜಿಲ್ಲೆಯ ವಿಜಯನಗರ ಸಾಮ್ರಾಜ್ಯದ ಅರಸರ ಶಾಸನಗಳಲ್ಲಿ ವಿಶಿಷ್ಟ ಶಾಸನವಾಗಿದೆ. ಒಂದೇ ಕಲ್ಲಿನಲ್ಲಿ ನಾಲ್ಕು ಅರಸರ ಶಾಸನಗಳನ್ನು ಒಂದಾದ ನಂತರ ಒಂದರಂತೆ, ಒಂದು ಮುಕ್ತಾಯವಾದ ನಂತರ

ಮತ್ತೊಂದು ಶಾಸನವನ್ನು ಪ್ರಾರಂಭಿಸಿ ಮುಂದುವರಿಸಲಾಗಿದೆ. ಅಲ್ಲದೆ ಶಾಸನದಲ್ಲಿ ನಾಲ್ಕು ವಿವಿಧ ದಿನಾಂಕಗಳಿವೆ. (ಗಂಗಾ: 80)

ಒಂದನೆಯ ದಿನಾಂಕ 1436ರ ಅಕ್ಟೋಬರ್ 21 ಆಗಿದ್ದು ಶಾಸನ ಪ್ರೌಢದೇವರಾಯ ಅಥವಾ ಎರಡನೇ ದೇವರಾಯನು ಕನಕಗಿರಿಯ ಶ್ರೀ ಲಕ್ಷ್ಮೀನಾರಸಿಂಹ ಸ್ವಾಮಿಯ ಅಮೃತಪಡಿಗೆ, ರಂಗಭೋಗ ಅಂಗಭೋಗಕ್ಕೆ ನೀಡಿದ ದಾನವನ್ನು ಉಲ್ಲೇಖಿಸುತ್ತದೆ.

ಎರಡನೆಯ ದಿನಾಂಕ 1488ರ ಜುಲೈ 31 ಆಗಿದ್ದು ಶಿಲಾಲೇಖವು ನರಸಿಂಗದೇವರಾಯ ಅಂದರೆ ಸಾಳುವ ನರಸಿಂಹನ ಕಾಲದ್ದಾಗಿದೆ. ಆತನು ಕನಕಗಿರಿಯ ಅಧಿದೇವನಿಗೆ ನೀಡಿದ ದಾನವನ್ನು ಉಲ್ಲೇಖಿಸುತ್ತದೆ.

ಮೂರನೆಯ ದಿನಾಂಕ 1512ರ ಜೂನ್ 26 ಆಗಿದ್ದು ಶಾಸನ ಪಾಠವು ತುಳುವ ಕೃಷ್ಣರಾಯನು ಕನಕಗಿರಿನಾಥ ಶ್ರೀ ಲಕ್ಷ್ಮೀನಾರಸಿಂಹನಿಗೆ ಕನಕಗಿರಿಯ ಹಲವಾರು ಸುಂಕ ತೆರಿಗೆ ಹಾಗೂ ಮೂರು ಗ್ರಾಮಗಳ ಆದಾಯವನ್ನು ದಾನ ಮಾಡಿದುದನ್ನು ಸೂಚಿಸುತ್ತದೆ.

ನಾಲ್ಕನೆಯ ದಿನಾಂಕ 1538ರ ಜನವರಿ 21ಕ್ಕೆ ಸೇರಿದ್ದು ಶಾಸನ ಅಚ್ಯುತದೇವರಾಯನು ಕನಕಗಿರಿನಾಥನಿಗೆ ಗದ್ದೆ ಇತ್ಯಾದಿಗಳ ಉತ್ಪತ್ತಿಯನ್ನು ಅಮೃತಪಡಿಗೆ ಅಂಗಭೋಗ-ರಂಗಭೋಗ, ಪರ್ವಗಳ ಆಚರಣೆಗೆ ನೀಡಿದ್ದನ್ನು ತಿಳಿಸುತ್ತದೆ.

ಪ್ರಸ್ತುತ ಶಾಸನದಲ್ಲಿ ನಾಲ್ಕು ವಿಭಿನ್ನ ದಿನಾಂಕಗಳಲ್ಲಿ ಮೂರು ವಿಭಿನ್ನ ಮನೆತನದ ಅರಸರು ದಾನ ನೀಡಿದ್ದಾರೆ. ಕನಕಗಿರಿನಾಥನ ಮಹಿಮೆ ಅವರೆಲ್ಲರನ್ನು ಒಂದೇ ಭಾವದಿಂದ ತನ್ನಡೆಗೆ ಸೆಳೆದು, ಅವರನ್ನು ತನ್ನ ಭಕ್ತರನ್ನಾಗಿಸಿಕೊಂಡ ಶ್ರೀ ಲಕ್ಷ್ಮೀನಾರಸಿಂಹನ ಮಹಿಮೆಯನ್ನು ಈ ಶಾಸನ ನಿರೂಪಿಸುತ್ತದೆ. ಹಾಗಾಗಿ, ಆ ಎಲ್ಲಾ ವಿವರಗಳನ್ನು ಇಲ್ಲಿಯೇ ನೀಡಲಾಗಿದೆ.

ಶ್ರೀ ವಿರೂಪಾಕ್ಷ

ಸಂಗಮ ವಂಶದ ದೊರೆ ವಿರೂಪಾಕ್ಷನ ಏಕೈಕ ಶಾಸನ ಜಿಲ್ಲೆಯಲ್ಲಿ ಲಭ್ಯವಿದೆ. ಈ ಶಾಸನವು ಕೊಪ್ಪಳ ತಾಲ್ಲೂಕಿನಲ್ಲಿ (ಕೊಪ್ಪಳ: 163) ದೊರೆತಿದೆ. ಅಚಲಾಪುರದಲ್ಲಿ ದೊರೆತಿರುವ ಈ ಶಾಸನವು ಶ್ರೀ ವಿರೂಪಾಕ್ಷ ಮಹಾರಾಯರು ಅಗೋರೆಯ ರಾಮನಾಯಕನ ಹರಿವಾಣದ ಪ್ರಸಾದಕ್ಕೆ ಹಂಪಾದೇವಿ ಹಳ್ಳಿಯ ಕೆರೆಯನ್ನು ಪಾಲಿಸಿದಂತೆ ಹೇಳಿದೆ.

ಸಾಳುವ ನರಸಿಂಹ

ಸಾಳುವ ನರಸಿಂಹನ ಏಕೈಕ ಶಾಸನ ದೊರೆತಿದ್ದು ಅದು ಕನಕಗಿರಿಯ ಶ್ರೀ ಲಕ್ಷ್ಮೀನಾರಸಿಂಹ ಸ್ವಾಮಿಗೆ ನೀಡಿದ ದಾನವನ್ನು ತಿಳಿಸುತ್ತದೆ.

ತುಳುವ ನರಸನಾಯಕ

ತುಳುವ ನರಸನಾಯಕನ ಎರಡು ಶಾಸನಗಳು ದೊರೆತಿದ್ದು ಅವು ಗಂಗಾವತಿ ತಾಲ್ಲೂಕಿನ ಚಿಕ್ಕರಾಮಾಪುರ (ಗಂಗಾ: 64) ಮತ್ತು ಸಾನಾಪುರ (ಗಂಗಾ: 69)ಗಳಲ್ಲಿ ದೊರೆತಿವೆ. ಇವು ನೇರವಾಗಿ ರಾಜನೆ ಮಾಡಿದ ದಾನಗಳಾಗಿವೆ.

ಚಿಕ್ಕರಾಮಾಪುರದ ಶಾಸನವು ನರಸನಾಯಕನು ಅಲ್ಲಿನ ಶ್ರೀ ಕಪಿಲೇಶ್ವರ ದೇವಾಲಯದ ಉತ್ತರ ದಿಕ್ಕಿನಲ್ಲಿದ್ದ ಹದಿನೈದು ಕೊಳಗ ಗದ್ದೆಯನ್ನು ದೇವರಿಗೆ ಮಾನ್ಯಮಾಡಿದ್ದನ್ನು ದಾಖಲಿಸಿದೆ. ಸಾನಾಪುರದ ಶಾಸನವು (ಗಂಗಾ: 69) ನರಸನಾಯಕನು ಸಿದ್ದ ದೇವರಿಗೆ ಆರು "ವರಹ" ಹಣವನ್ನು ದಾನ ಮಾಡಿದ್ದನ್ನು ದಾಖಲಿಸುತ್ತದೆ. ಇವೆರಡರಲ್ಲೂ ದಾನ ಉದ್ದೇಶ ಸ್ಪಷ್ಟವಾಗಿಲ್ಲ.

ಕೃಷ್ಣರಾಯ

ಕೃಷ್ಣರಾಯನ ಕಾಲದ ಎಂಟು ಶಾಸನಗಳು ಜಿಲ್ಲೆಯಲ್ಲಿ ದೊರೆತಿವೆ. ಅವುಗಳಲ್ಲಿ ಎರಡು ಗಂಗಾವತಿ ತಾಲ್ಲೂಕಿನಲ್ಲಿ, ಆರು ಶಾಸನಗಳು ಕೊಪ್ಪಳ ತಾಲ್ಲೂಕಿನಲ್ಲಿ ವರದಿಯಾಗಿವೆ. ಗಂಗಾವತಿ ತಾಲ್ಲೂಕಿನ ಎರಡು ಶಾಸನಗಳಲ್ಲಿ ಒಂದು ಕನಕಗಿರಿಯ ಶ್ರೀ ಲಕ್ಷ್ಮೀನರಸಿಂಹಸ್ವಾಮಿಯ ಆಲಯದಲ್ಲಿರುವ (ಗಂಗಾ: 80) ದಾನ ಶಾಸನವಾಗಿದೆ. ಗಂಗಾವತಿ ತಾಲ್ಲೂಕಿನ ಕೇಸರಹಟ್ಟಿಯ (ಗಂಗಾ: 73) ಮತ್ತೊಂದು ಶಾಸನದ ದಾನಿ ಬೇರೆಯಾಗಿದ್ದು ರಾಜನನ್ನು ಹೆಸರಿಸುವಲ್ಲಿ ಕೃಷ್ಣರಾಯನ ಹೆಸರನ್ನು ಉಲ್ಲೇಖಿಸಿದೆ. ಈ ದಾನಕ್ಕೆ ರಾಜನು ಪರೋಕ್ಷವಾಗಿ ಅಥವಾ ಪ್ರತ್ಯಕ್ಷವಾಗಿ ಪ್ರೇರಣೆ ಅಥವ ಕಾರಣಕರ್ತನಾಗಿಲ್ಲ. ಕ್ರಿ.ಶ. 1521ರ ಕೊಪ್ಪಳದ ವೆಂಕಟರಮಣ ಸ್ವಾಮಿ ಆಲಯದಲ್ಲಿರುವ (ಕೊಪ್ಪಳ: 39) ಶಾಸನದಲ್ಲಿ ಸಹ ರಾಜನನ್ನು ರಾಜತ್ವದ ಹಿನ್ನೆಲೆಯಲ್ಲಿ ಮತ್ತು ದಾನಿಗೆ ಅವನು ನಾಯಕತ್ವ ನೀಡಿದ ಹಿನ್ನೆಲೆಯಲ್ಲಿ ಪ್ರಸ್ತಾಪಿಸಲಾಗಿದೆಯೇ ಹೊರತು ದಾನಕ್ಕೆ ಪ್ರೇರಕನಾಗಿ ಉಲ್ಲೇಖಿಸಲಾಗಿಲ್ಲ. ಗೊಂಡಬಾಳುವಿನ ಕ್ರಿ. ಶ. 1512ರ ಶಾಸನದಲ್ಲಿ (ಕೊಪ್ಪಳ: 135) ಕೃಷ್ಣರಾಯನು ಗೊಂಡಬಾಳು ಅಗ್ರಹಾರವನ್ನು ಪ್ರಭಾಕರ ಎನ್ನುವ ಬ್ರಾಹ್ಮಣನಿಗೆ ಮಹಾದಾನವಾಗಿ ನೀಡಲಾಗಿದೆ. ಇಲ್ಲಿ ಸಹ ದಾನದ ಉದ್ದೇಶವನ್ನು ಸ್ಪಷ್ಟಪಡಿಸಿಲ್ಲ.

ಕಿಡಿದಾಳುವಿನ ಕ್ರಿ. ಶ. 1514ರ ಶಾಸನವು (ಕೊಪ್ಪಳ: 138) ಶ್ರೀ ಕೃಷ್ಣರಾಯನು ಹೊಸವೂರ ಶ್ರೀಮಹಾದೇವಿಯ ಅಮೃತಪಡಿಗೆ, ನೈವೇದ್ಯಕ್ಕೆ ಧಾರಾಪೂರ್ವಕವಾಗಿ ಕಿಡಿದಾಳು ಗ್ರಾಮವನ್ನು ನೀಡಿದ್ದನ್ನು ದಾಖಲಿಸಿದೆ. ದಾನದ ಉದ್ದೇಶ ಸ್ಪಷ್ಟವಾಗುವುದಿಲ್ಲ. ಗಿಣಿಗೇರಿಯ ಕ್ರಿ.ಶ. 1520ರ ಆನೆಗೊಂದಿಯ ವಿಶ್ವಕರ್ಮಮಠದ ತಾಮ್ರ ಶಾಸನವು (ಕೊಪ್ಪಳ: 139) ಆನೆಗೊಂದಿ ಸಂಸ್ಥಾನದ ರೂಢಾಚಾರ್ಯಮಠ ಮತ್ತು ಅಂತರವಳ್ಳಿಯ ಮೂರುರುಘಾವದಯ್ಯ ಮತ್ತು ನಿರಂಜನಯ್ಯನವರ ನಡುವಿನ ವಿವಾದದ ಚರ್ಚೆಯನ್ನು ವಸ್ತುವಾಗಿ ಹೊಂದಿದೆ. ಮೂರುರುಘಾವದಯ್ಯ ಮತ್ತು ನಿರಂಜನಯ್ಯನವರು ಆನೆಗೊಂದಿಗೆ ಬಂದು ಆನೆಗೊಂದಿಯ ರೂಢಾಮಠದ ಅಧಿಕಾರ ತಮ್ಮದೆಂದು ವಾದಿಸಿ, ಕಾಗದ ಪತ್ರ ನೀಡಲು ವಿಫಲವಾದಾಗ ರಾಜನಾದ ಕೃಷ್ಣರಾಯನು ತ್ರಿಮತಸ್ಥ ಬ್ರಾಹ್ಮಣರು, ಮಹಾಮಂಡಲೇಶ್ವರ ಬಂಗಾರು ತಿಮ್ಮರಾಜು, ದಳವಾಯಿಯವರು, ಆನೆಗೊಂದಿ ಮಠದ ಸದ್ಯೋಜಾತ ಸ್ವಾಮಿಗೆ ಮೂರುರುಘಾವದಯ್ಯನವರು ಮತ್ತು ನಿರಂಜನಯ್ಯನವರಿಂದ ಜಯಪತ್ರ ಬರೆಸಿಕೊಟ್ಟದ್ದನ್ನು ಅಲ್ಲದೆ, ವ್ಯಾಜ್ಯ ಮಾಡಿದ ಅಂತರವಳ್ಳಿಯವರು 300 ಗದ್ಯಾಣವನ್ನು ಸರ್ಕಾರಕ್ಕೆ ತಪ್ಪುಕಾಣಿಕೆಯಾಗಿ ನೀಡಿದ್ದನ್ನು ದಾಖಲಿಸಿದೆ. ಅಲ್ಲದೆ ಅಂತರವಳ್ಳಿಯವರು ಪರಂಪರೆಯಂತೆ ಆನೆಗೊಂದಿಯ ಮಠವನ್ನು ಮೂಲಮಠವೆಂದು ರೂಢಾಚಾರಗಳಿಗೆ ಈ ಮಠವೇ ಪ್ರಧಾನವೆಂದು ಒಪ್ಪಿಕೊಂಡದ್ದನ್ನು ದಾಖಲಿಸಿ ಧಾರ್ಮಿಕ ಕ್ಷೇತ್ರದಲ್ಲಿನ ವ್ಯಾಜ್ಯಗಳನ್ನು ರಾಜನು ತೀರ್ಮಾನಿಸುತ್ತಿದ್ದನ್ನು ಶಾಸನ ದಾಖಲಿಸಿದೆ.

ಬಂಡಿಹರ್ಲಾಪುರದ ಕ್ರಿ. ಶ. 1513ರ ಶಾಸನವು (ಕೊಪ್ಪಳ 100) ಶ್ರೀ ವಿಠಲದೇವರ ಅಮೃತಪಡಿಗೆ ದೇವರ ನೈವೇದ್ಯಕ್ಕೆ ಅಂಗರಂಗವೈಭೋಗ, ಮುಂತಾದ ಪೂಜಾಕಾರ್ಯಗಳಿಗೆ ತನ್ನ ತಾಯಿ ನಾಗಲಾದೇವಿ ಮತ್ತು ತಂದೆ ನರಸನಾಯಕರಿಗೆ ಪುಣ್ಯಪ್ರಾಪ್ತಿಯಾಗಲೆಂದು ದಾನ ನೀಡಿದ್ದನ್ನು ದಾಖಲಿಸಿದೆ.

ಹತೋಟಿ ಗ್ರಾಮದ ಕ್ರಿ. ಶ. 1515ರ (ಕೊಪ್ಪಳ 161) ಶಾಸನವು ಶ್ರೀ ಕೃಷ್ಣರಾಯರು, ಬಾಲಕೃಷ್ಣದೇವರ ಪ್ರತಿಷ್ಠೆಯ ಕಾಲದಲ್ಲಿ ದೇವರ ಅಮೃತಪಡಿಗೆ ನೈವೇದ್ಯಕ್ಕೆ, ಅಂಗರಂಗವೈಭವಕ್ಕೆ ಹಾಗು ಹಲವಾರು ಉತ್ಸವ ಪರ್ವಗಳಿಗೆ ಹುಲಿಗೆ ಮಾಗಣೆಯ ಅತ್ತಿವಟ್ಟಿ ಅಂಬಾಗ್ರಾಮದ ಸರ್ವಾದಾಯವನ್ನು ತಂದೆ ನರಸಣನಾಯಕರಾದಿಯಾಗಿ, ತಾಯಿ ನಾಗಲಾದೇವಿಯವರಿಗೆ ಧರ್ಮವಾಗಲೆಂದು ಸರ್ವಮಾನ್ಯವಾಗಿ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.

ಜಿಲ್ಲೆಯಲ್ಲಿ ದೊರೆತಿರುವ ಕೃಷ್ಣರಾಯನ ಕಾಲದ ಎಂಟು ಶಾಸನಗಳಲ್ಲಿ ಎರಡು ಶಾಸನಗಳಲ್ಲಿ ರಾಯನೆ ದಾನಿಯಾಗಿದ್ದು ದೇವತಾಕಾರ್ಯಕ್ಕಾಗಿ ಉದ್ದೇಶರಹಿತವಾಗಿ ದಾನ ಮಾಡಿದ್ದಾನೆ. ಗಂಗಾವತಿ ತಾಲ್ಲೂಕಿನ ಕನಕಗಿರಿಯ (ಗಂಗಾ: 80) ಮತ್ತು ಕೊಪ್ಪಳ ತಾಲ್ಲೂಕಿನ ಕಿಡಿದಾಳುವಿನ (ಕೊಪ್ಪಳ: 130) ಶಾಸನ ಈ ಬಗೆಯ ಶಾಸನಗಳಾಗಿವೆ. ಕೊಪ್ಪಳ ತಾಲ್ಲೂಕಿನ ಗೊಂಡಬಾಳುವಿನ ಶಾಸನ (ಕೊಪ್ಪಳ: 135) ಮಹಾದಾನ ಪ್ರಕ್ರಿಯೆಯಲ್ಲಿ ಉದ್ದೇಶ ಉಲ್ಲೇಖಿಸಿದೆ ಬ್ರಾಹ್ಮಣನಿಗೆ ಭೂದಾನ ಮಾಡಿದ್ದಾನೆ. ಇದು ಏಕಭೋಗ್ಯ ಅಗ್ರಹಾರವಾಗಿದ್ದಂತೆ ಕಂಡುಬರುತ್ತದೆ.

ಬಂಡಿಹರ್ಲಾಪುರ (ಕೊಪ್ಪಳ: 160) ಮತ್ತು ಹತೋಟಿ (ಕೊಪ್ಪಳ: 161) ಶಾಸನಗಳು ತಂದೆ ತಾಯಿಗೆ ಪುಣ್ಯವಾಗಲೆಂದು ವಿಠಲದೇವರಿಗೆ ಮತ್ತು ಬಾಲಕೃಷ್ಣದೇವರಿಗೆ ಕ್ರಮವಾಗಿ ದಾನ ನೀಡಿದ ಶಾಸನಗಳಾಗಿವೆ. ಕೇಸರಹಟ್ಟಿ (ಗಂಗಾ: 73) ಮತ್ತು ಕೊಪ್ಪಳದ (39) ಶಾಸನಗಳಲ್ಲಿ ಕೇವಲ ರಾಜನ ಅಧಿಕಾರದಿಂದಾಗಿ ಉಲ್ಲೇಖಿತನಾಗಿದ್ದಾನೆ. ಒಂದು ಶಾಸನದಲ್ಲಿ ರಾಜನಾಗಿ ನ್ಯಾಯಾಧೀಶನ ಸ್ಥಾನದಿಂದ ನ್ಯಾಯನಿರ್ಣಾಯಕನಾಗಿ ಉಲ್ಲೇಖಿಸಲ್ಪಟ್ಟಿದ್ದಾನೆ. ಇದನ್ನು ಕೊಪ್ಪಳ ತಾಲ್ಲೂಕಿನ ಗಣಿಗೇರಿಗ್ರಾಮದ (ಕೊಪ್ಪಳ: 139) ಶಾಸನ ದಾಖಲಿಸಿದೆ. ಒಟ್ಟಾರೆಯಾಗಿ ಕೃಷ್ಣರಾಯನ ದಾನ ಶಾಸನಗಳಲ್ಲಿ ಎರಡು ನೇರವಾಗಿ ತಂದೆ ತಾಯಿಗೆ ಪುಣ್ಯವಾಗಲೆಂದು ಮೂರು ಶಾಸನಗಳಲ್ಲಿ ದಾನಿಯಾಗಿ ಸ್ವಪುಣ್ಯ ಸಂಪಾದನೆಗೆ ಪರೋಕ್ಷವಾಗಿ ಕಾರಣನಾಗಿ, ಒಂದರಲ್ಲಿ ನ್ಯಾಯ ನಿರ್ಣಾಯಕನಾಗಿ, ಎರಡರಲ್ಲಿ ರಾಜನಾಗಿ ಉಲ್ಲೇಖಿತನಾಗಿದ್ದಾನೆ. ಇದರಿಂದ ಶಾಸನಗಳ ಉದ್ದೇಶ ವೈಯಕ್ತಿಕ ಪುಣ್ಯ ಸಾಧನೆಗೆ ಒತ್ತು ನೀಡಿತ್ತೇ ಹೊರತು, ಸಾರ್ವಜನಿಕ ಒಳಿತಿಗಾಗಿ ಸಮಾಜದ ಪುರೋಭಿವೃದ್ಧಿಗಾಗಿ ದಾನಮಾಡಿದುದಲ್ಲವೆಂಬುದು ಸ್ಪಷ್ಟವಾಗುತ್ತದೆ.

ಅಚ್ಯುತರಾಯ

ಅಚ್ಯುತ ಮಹಾರಾಯನ ಏಳು ಶಾಸನಗಳು ಜಿಲ್ಲೆಯಲ್ಲಿ ಕಂಡುಬಂದಿವೆ. ಅವುಗಳಲ್ಲಿ ಎರಡು ಯಲಬುರ್ಗಾ ತಾಲ್ಲೂಕಿನಲ್ಲಿ ಮತ್ತು ಐದು ಶಾಸನಗಳು ಗಂಗಾವತಿ ತಾಲ್ಲೂಕಿನಿಂದ ವರದಿಯಾಗಿವೆ. ಈತನ ಕಾಲದ ಪ್ರಥಮ ಶಾಸನ ಗಂಗಾವತಿ ತಾಲ್ಲೂಕಿನ ಕನ್ನೇರಮಡುವಿನ ಶಾಸನವಾಗಿದೆ (ಗಂಗಾ: 91). ಶಾಸನದ ಕಾಲ ಕ್ರಿ.ಶ. 1530 ಏಪ್ರಿಲ್ 12. ಶ್ರೀವೀರ ಅಚ್ಯುತದೇವರಾಯ ಮಹಾರಾಯನಿಗೆ ಪುಣ್ಯವಾಗಲೆಂದು ಸಾಳುವ ದೇವರಾಯನು ಕರುಮೂಡಿಗೆ ಯಲಬರಿಗೆಯ ಸೀಮೆಗೆ ಸಲುವ ಸೂಳೆಯ ಕೆರೆವೊಳಗಣ ಗದ್ದೆಯನ್ನು ಕನ್ನೇರುಮಡುವಿನ ಶ್ರೀ ಮರೇಶ್ವರ ದೇವರಿಗೆ ದಾನ ಬಿಟ್ಟನು. ಕ್ರಿ.ಶ. 1531ರ ಜನವರಿ 23ರ ಆನೆಗೊಂದಿಯ ಶಾಸನದಲ್ಲಿ (ಗಂಗಾ: 55) ಅಚ್ಯುತರಾಯನು ರಾಜನಾಗಿ ದಾಖಲಾಗಿದ್ದಾನೆ. ಈತನ ಆಳ್ವಿಕೆಯಲ್ಲಿ ಆನೆಗೊಂದಿಯ ಬಸವರಾಜ ದೇವರಿಗೆ ಕೋನಪ್ಪನಾಯಕನ ಮಗ ರಾಮಾದ್ಯೆಯ ಮತ್ತು ಪೆನುಗೊಂಡೆಯ ನಾಗೈಯನು ನಿತ್ಯನೈವೇದ್ಯಕ್ಕೆ ಭೂಮಿದಾನ ಮಾಡಿದ್ದನ್ನು ದಾಖಲಿಸಿದೆ.

ಆನೆಗೊಂದಿಯ ಕ್ರಿ.ಶ. 1533ರ ಜೂನ್ 6ರ ಶಾಸನವು (ಗಂಗಾ: 54) ಅಚ್ಯುತದೇವರಾಯ ಮಹಾರಾಯರಿಗೆ ಪುಣ್ಯವಾಗಲೆಂದು ಶ್ರೀ ಮಹೇಶನ ಗಂಡಿಗೆ ನೈವೇದ್ಯಕ್ಕಾಗಿ ಹೊಲ ನೀಡಿದ್ದನ್ನು ಉಲ್ಲೇಖಿಸುತ್ತದೆ. ಹನುಮನಾಳದ

ಕ್ರಿ.ಶ. 1530ರ ನವೆಂಬರ್ 27ರ ಶಾಸನವು (ಗಂಗಾ: 90) ಯಲಬರಿಗೆಯ ನಾರಸಿಂಹ ದೇವರಿಗೆ ಜೋಪನವೊಡೆಯನು ಅಚ್ಯುತರಾಯರಿಗೆ ಪುಣ್ಯವಾಗಲೆಂದು ನೀಡಿದ ದಾನವನ್ನು ಉಲ್ಲೇಖಿಸುತ್ತದೆ.

ಯಲಬುರ್ಗ ತಾಲ್ಲೂಕಿನ ಕಲ್ಲೂರು ಗ್ರಾಮದ ಶ್ರೀ ಕಲಿನಾಥ ದೇವಾಲಯದ ಆವರಣದಲ್ಲಿರುವ (ಯಲ: 14) ಶಾಸನವು ಕುಷ್ಟಗೆಯ ಗುಜಲ ಇಮ್ಮಡಿ ಮರನದಿ ನಾಯಕರ ಮಕ್ಕಳು ಮುಮ್ಮಡಿ ಮಂಗಪನಾಯಕರು, ನಾಹಯ್ಯನವರು ಈ ಹಿಂದೆ ನೀಡಿದ್ದ ದಾನ ಖಿಲವಾಗಿದ್ದರಿಂದ ಪುನಃ ಅಚ್ಯುತದೇವರಾಯರಿಗೆ ಪುಣ್ಯವಾಗಲೆಂದು ಕಲ್ಲೂರು ಶ್ರೀ ಕಲಿನಾಥದೇವರಿಗೆ ದಾನ ಬಿಟ್ಟಿದ್ದನ್ನು ಉಲ್ಲೇಖಿಸುತ್ತದೆ.

ಯಲಬುರ್ಗ ತಾಲ್ಲೂಕಿನ ಬಂಡಿಹಾಳ ಗ್ರಾಮದ ಕ್ರಿ. ಶ. 1537ರ ಶಾಸನವು (ಯಲ: 22) ರಾಜನಾಗಿ ಮಾತ್ರ ಅಚ್ಯುತದೇವರಾಯನನ್ನು ಉಲ್ಲೇಖಿಸುತ್ತದೆ. ಕನಕಗಿರಿಯ ಕ್ರಿ. ಶ. 1538ರ ಜನವರಿ 21ರ ಶಾಸನವು ಅಚ್ಯುತರಾಯನು ಶ್ರೀ ಲಕ್ಷ್ಮೀನಾರಸಿಂಹದೇವರಿಗೆ ಕುಷ್ಟಗಿ ಸೀಮೆಯಲ್ಲಿನ ಯಿಂಗಳದಹಾಳು ಗುಡ್ಡ ಗಂಗಾವತಿ ಸೀಮೆಯಲ್ಲಿನ ಅಚ್ಚುತರಾಯ ಯಲ್ಲಾಪುರ, ಸಿದ್ದನಹಾಳ, ಮತ್ತು ರಾಮಾಪುರ ನಾಲ್ಕು ಗ್ರಾಮಗಳ ಉತ್ಪತ್ತಿಯನ್ನು ದಾನ ನೀಡಿದ್ದಾಗಿ ಉಲ್ಲೇಖಿಸುತ್ತದೆ.

ಈ ಮೇಲೆ ಉಲ್ಲೇಖಿಸಲಾದ ಏಳು ಶಾಸನಗಳಲ್ಲಿ ಅಚ್ಯುತರಾಯನು ಎರಡು ಶಾಸನಗಳಲ್ಲಿ ಅಂದರೆ ಯಲಬುರ್ಗತಾಲ್ಲೂಕಿನ ಬಂಡಿಹಾಳಗದ ಶಾಸನ (ಯಲ: 22) ಮತ್ತು ಗಂಗಾವತಿ ತಾಲ್ಲೂಕಿನ ಆನೆಗೊಂದಿಯ ಶಾಸನದಲ್ಲಿ (ಗಂಗಾ: 55) ಕೇವಲ ರಾಜನಾಗಿ ಉಲ್ಲೇಖಿಸಲಾಗಿದೆ. ಗಂಗಾವತಿ ತಾಲ್ಲೂಕಿನ ಕನಕಗಿರಿ ಕ್ಷೇತ್ರದ ಶಾಸನದಲ್ಲಿ (ಗಂಗಾ: 80) ಅಚ್ಯುತರಾಯನು ಸ್ವತಃ ದಾನಿಯಾಗಿದ್ದಾನೆ. ಇನ್ನುಳಿದ ಶಾಸನಗಳಲ್ಲಿ ಅಂದರೆ ಕನ್ನೇರಮಡು (ಗಂಗಾ: 91) ಆನೆಗೊಂದಿ (ಗಂಗ: 54), ಹನುಮನಾಳ (ಗಂಗಾ: 90), ಮತ್ತು ಯಲಬುರ್ಗ ತಾಲ್ಲೂಕಿನ ಕಲ್ಲೂರಿನ (ಯಲ: 14) ಶಾಸನಗಳಲ್ಲಿ ಆತನ ಅಧಿಕಾರಿಗಳು ಅಚ್ಯುತರಾಯನಿಗೆ ಪುಣ್ಯವಾಗಲೆಂದು ಅವನಿಂದ ಉಪಕೃತವಾದದ್ದಕ್ಕೆ ಮಾಡಿದ ದಾನಗಳಾಗಿವೆ.

ಸದಾಶಿವರಾಯ

ಸದಾಶಿವರಾಯನ ಕಾಲದ ಹನ್ನೆರಡು ಶಾಸನಗಳು ಜಿಲ್ಲೆಯಲ್ಲಿ ಲಭ್ಯವಿದೆ. ಇವುಗಳಲ್ಲಿ ಯಲಬುರ್ಗ ತಾಲ್ಲೂಕಿನಲ್ಲಿ ಒಂದು, ಕುಷ್ಟಗಿಯಲ್ಲಿ ಎರಡು ಮತ್ತು ಗಂಗಾವತಿ ತಾಲ್ಲೂಕಿನಲ್ಲಿ ಒಂಬತ್ತು ಶಾಸನಗಳು ಲಭ್ಯವಾಗಿವೆ. ಆರು ಶಾಸನಗಳಲ್ಲಿ ಸದಾಶಿವರಾಯನು ಕೇವಲ ರಾಜನಾಗಿ ಅಂದರೆ ಆಳ್ವಿಕೆಯ ಕಾಲವನ್ನು ನಿರ್ದೇಶಿಸುವಲ್ಲಿ ಉಲ್ಲೇಖಿಸಲ್ಪಟ್ಟಿದ್ದಾನೆ. ಎರಡು ಶಾಸನಗಳಲ್ಲಿ ಕೇವಲ ಹೆಸರು ಮಾತ್ರ ಉಲ್ಲೇಖಿತವಾಗಿದೆ. ಬೇರೆಯ ವಿವರಗಳು ಲಭ್ಯವಿಲ್ಲ. ಒಂದು ಶಾಸನದಲ್ಲಿ ಸದಾಶಿವರಾಯನು ಸ್ವತಃ ದಾನಿಯಾಗಿ ಕಂಡುಬರುತ್ತಾನೆ. ಕ್ರಿ. ಶ. 1556ರ ಮಾರ್ಚ್ 27ರ ಆನೆಗೊಂದಿಯ ಶಾಸನದಲ್ಲಿ ಸದಾಶಿವರಾಯನು ಆನೆಗೊಂದಿಯ ಅಂಬಿಗನ ನಾಗಜೋಗಿ ಮತ್ತು ಬಸವಜೋಗಿಯವರಿಗೆ ಪಾಲಿಸಿದ ದಾನವನ್ನು ಉಲ್ಲೇಖಿಸುತ್ತದೆ. ಕೇವಲ ಮೂರು ಶಾಸನಗಳಲ್ಲಿ ದಾನ ನೀಡಿದ ಪುಣ್ಯದ ಫಲದ ಫಲಾನುಭವಿಯಾಗಿ ಉಲ್ಲೇಖಿಸಲ್ಪಟ್ಟಿದ್ದಾನೆ. ಇವುಗಳಲ್ಲಿ ಎರಡು ಶಾಸನಗಳು ಕುಷ್ಟಗಿಯಲ್ಲಿ ಮತ್ತು ಯಲಬುರ್ಗ ತಾಲ್ಲೂಕಿನಲ್ಲಿ ಒಂದರಂತೆ ಹಂಚಿಕೆಯಾಗಿವೆ. ಕುಕನೂರಿನ ಕ್ರಿ. ಶ. 1547ರ ಜೂನ್ 28ರ (ಯಲ: 42) ಶಾಸನದಲ್ಲಿ ಅಳಿಯರಾಮರಾಯನು ತನ್ನ ಊಳಿಗದ ಕೊಂಡೋಜನ ಬಿನ್ನಹವನ್ನು ಕೇಳಿ ಶ್ರೀ ಸದಾಶಿವರಾಯರಿಗೆ ಪುಣ್ಯವಾಗಲೆಂದು ನಾಯಂದರಿಗೆ ಅನ್ನು, ಫನ್ನು ಬಿಟ್ಟ–ಬಿಡಾರ ಮುಂತಾದವುಗಳ ವಿನಾಯಿತಿಯನ್ನು ನೀಡಿದಂತೆ ಉಲ್ಲೇಖಿಸಲಾಗಿದೆ. ಕುಷ್ಟಗಿ ತಾಲ್ಲೂಕಿನ, ಪುರಗ್ರಾಮದ ಕ್ರಿ. ಶ. 1547ರ ಡಿಸೆಂಬರ್ 27ರ (ಕುಷ್ಟಗಿ: 17) ಶಾಸನದಲ್ಲಿ ಶ್ರೀ ಸದಾಶಿವರಾಯರಿಗೆ ಆಯುಷ್ಯಾಭಿವೃದ್ಧಿಯಾಗಲೆಂದು ಬಯ್ಯಪನಾಯಕರ ಕೃಷ್ಣಪ್ಪನಾಯಕರಿಗೆ ಪುಣ್ಯವಾಗಬೇಕೆಂದು

ಶ್ರೀ ಪುರದ ಸೋಮೇಶ್ವರ ಮಹಾಲಿಂಗಗೆ ಅರ್ಕಾಚಿಯ ತಮ್ಮಪ ನಾಯಕರ ಮಕ್ಕಳು ವಿರುಪಣ್ಣ ನಾಯಕರು ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಕುಷ್ಟಗಿ ತಾಲ್ಲೂಕಿನ ತಾವರಗೆರೆ ಗ್ರಾಮದ ಕ್ರಿ. ಶ. 1547ರ ಶಾಸನವು (ಕುಷ್ಟಗಿ: 10) ರಾಮರಾಯನು ರಾಜನಾದ ಸದಾಶಿವರಾಯನಿಗೆ ಪುಣ್ಯವಾಗಲೆಂದು ತಾವರೆಕೆರೆಯ ತಿಮ್ಮೋಜ, ಕೊಂಡೋಜ, ಭದ್ರೋಜರ ಕೋರಿಕೆಯಂತೆ ತಾವರೆಗೆರೆ ಸೀಮೆಯ 130 ಗ್ರಾಮದ ನಾಯಿಂದರಿಗೆ ಅನ್ನು-ಪನ್ನು, ಬಿಟ್ಟಿ-ಬಿಡಾರವನ್ನು ಮನ್ನ ಮಾಡಿದ್ದನ್ನು ಉಲ್ಲೇಖಿಸುತ್ತದೆ.

ಸದಾಶಿವರಾಯ ರಾಜನಾಗಿ ಉಲ್ಲೇಖಿತನಾಗಿರುವ ಆರು ಶಾಸನಗಳ ಪೈಕಿ ಎರಡು ಶಾಸನಗಳಲ್ಲಿ ಅವನ ಕಾಲದ ಸೈನ್ಯಾಧಿಕಾರಿಯಾದ ತಿರುಮಲನು ದಾನಿಯಾಗಿದ್ದಾನೆ (ಗಂಗಾ 60 ಮತ್ತು 82). ಉಳಿದ ನಾಲ್ಕು ಶಾಸನಗಳಲ್ಲಿ ಒಂದು ಶಾಸನ (ಗಂಗಾ: 68)ದಲ್ಲಿ ಅಂದರೆ ಗಂಗಾವತಿ ತಾಲ್ಲೂಕಿನ ರಾಮದುರ್ಗದ ಶಾಸನದಲ್ಲಿ ರಾಮರಾಯನು ದಾನಿಯಾಗಿ ಕಂಡುಬರುತ್ತಾನೆ. ಕನ್ನೇರಮಡುವಿನ ಶಾಸನದಲ್ಲಿ (ಗಂಗಾ: 93) ಶ್ರೀರಂಗರಾಯ ಮತ್ತು ರಾಮರಾಜದೇವ ದಾನಿಗಳಾಗಿ ಕಂಡುಬರುತ್ತಾರೆ. ಉಳಿದ ಎರಡು ಶಾಸನಗಳಲ್ಲಿ ಅಂದರೆ ಕ್ರಿ. ಶ. 1550ರ ತಳಾರಘಟ್ಟದ ಶಾಸನದಲ್ಲಿ (ಗಂಗಾ: 37) ಮತ್ತು ಕನಕಗಿರಿಯ ಕ್ರಿ. ಶ. 1520ರ ಶಾಸನದಲ್ಲಿ (ಗಂಗಾ: 44) ಕ್ರಮವಾಗಿ ಆನೆಗೊಂದಿ ಹೊಳೆಯ 14 ಬೋವರು ಮತ್ತು 300 ಮಂದಿ ಅಂಬಿಗರು ಹಾಗೂ ದಳವಾಯಿ ಚಂಡತ್ರಯ್ಯ ಎಂಬ ವ್ಯಕ್ತಿ ಕ್ರಮವಾಗಿ ದಾನಿಗಳಾಗಿ ಕಂಡುಬರುತ್ತಾರೆ. ಈ ಯಾವ ಶಾಸನಗಳಲ್ಲಿಯೂ ರಾಜ ಪ್ರತ್ಯಕ್ಷವಾಗಿಯಾಗಲಿ, ಪರೋಕ್ಷವಾಗಿಯಾಗಲೀ ದಾನಿಯಾಗಿ ಅಥವ ದಾನದ ಪ್ರೇರಕಶಕ್ತಿಯಾಗಿ ಕಂಡುಬರದೇ ಕೇವಲ ರಾಜತ್ವದ ಉಲ್ಲೇಖದಿಂದ ಗಮನ ಸೆಳೆಯುತ್ತಾನೆ.

ಈ ವಿಜಯನಗರದ ಶಾಸನಗಳನ್ನು ಗಮನಿಸಿದಾಗ ಈ ಕಾಲದಲ್ಲಿ ಕೇವಲ ಎರಡು ಅಗ್ರಹಾರಗಳು ರಚನೆಯಾಗಿರುವುದು ಕಂಡುಬರುತ್ತದೆ. ಇದರಲ್ಲಿ ಕುಕನೂರಿನ ಅಗ್ರಹಾರ ಚತುರ್ವೇದ ಅಧ್ಯಯನಕ್ಕೆ ಮೀಸಲಾಗಿ ಪುನಃ ಸ್ಥಾಪಿತವಾದ ಅಗ್ರಹಾರವಾಗಿದ್ದು ಎರಡನೆಯ ಹರಿಹರನ ಕಾಲದಲ್ಲಿ ಕಾಳಾಮುಖ ಪಂಥದ ಗುರುವಾದ ಕ್ರಿಯಾಶಕ್ತಿ ಗುರುಗಳ ನಿರೂಪದಂತೆ ರಾಜನೇ ದಾನ ಮಾಡಿದ್ದಾಗಿದೆ. ಎರಡನೆಯ ಅಗ್ರಹಾರ ಕೃಷ್ಣರಾಯನ ಕಾಲದ ಮಹಾದಾನದ ಭಾಗವಾಗಿ ಏಕ ವ್ಯಕ್ತಿ ಅಗ್ರಹಾರವಾಗಿ ಗೊಂಡಬಾಳುವನ್ನು ಪ್ರಭಾಕರ ಎನ್ನುವ ಬ್ರಾಹ್ಮಣನಿಗೆ ನೀಡಿದ್ದಾಗಿದೆ. ಉಳಿದಂತೆ ದೇವಾಲಯಗಳಿಗೆ ನೀಡಿದ ದಾನಗಳು ಪ್ರಮುಖವೆನಿಸುತ್ತದೆ. ಅದರಲ್ಲೂ ಪುಣ್ಯಪ್ರಾಪ್ತಿಗೆ ಮಾತಾಪಿತೃಗಳ ಪುಣ್ಯಪ್ರಾಪ್ತಿಗೆ ನೀಡಿದ ದಾನಗಳೇ ಅಧಿಕವಾಗಿವೆ. ಸ್ವಧರ್ಮಸಾಧನೆ, ಸ್ವಪುಣ್ಯಾರ್ಜನೆ, ಅಥವಾ ಮಾತಾಪಿತೃಗಳಿಗೆ ರಾಜನ ಆರೋಗ್ಯಕ್ಕೆ ನೀಡಿದವು ಈ ಬಗೆಯ ದಾನಗಳು. ಸಮಾಜದ ಹಿತದೃಷ್ಟಿಯಿಂದ ನೀಡಿದ ದಾನಗಳು ಇಲ್ಲವೇ ಇಲ್ಲವೆಂದು ಹೇಳಬೇಕಾಗುತ್ತದೆ. ಅಧಿಕವಾಗಿರುವ ರಾಜನಿಂದ ಉಪಕೃತರಾದವರು ಆತನ ಸಹಾಯವನ್ನು ನಿರಂತರವಾಗಿ ಪಡೆಯಲು ಮಾಡಿದ ಪ್ರತ್ಯುಪಕಾರವಾಗಿ ತಿಳಿದುಬರುತ್ತದೆ. ನಾವಿದರಿಗೆ ನೀಡಿರುವ ಸವಲತ್ತುಗಳು ಅವರನ್ನು ರಾಜಕಾರ್ಯದಲ್ಲಿ ಗುಪ್ತಚರರಂತೆ ಬಳಸಲು ನೀಡಿದ್ದವುಗಳೆಂದು ತೋರುತ್ತದೆ. ಹಾಗಾಗಿ ದಾನಶಾಸನ ಉದ್ದೇಶ ಮತ್ತು ದಾನ ಪಡೆದವರ ಮಹತ್ವ ಅರಿಯುವ ಅಧ್ಯಯನ ಅಂದಿನ ಆಡಳಿತ ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲುವ ಆಕರವಾಗುತ್ತವೆಂದು ಭಾವಿಸಬಹುದಾಗಿದೆ.

ಆಕರ

ಡಾ॥ ದೇವರಕೊಂಡಾರೆಡ್ಡಿ, 1999, *ಕನ್ನಡ ವಿಶ್ವವಿದ್ಯಾನಿಲಯದ ಶಾಸನ ಸಂಪುಟ 2, ಕೊಪ್ಪಳ ಜಿಲ್ಲೆ*, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ

ಶ್ರೀಕೃಷ್ಣದೇವರಾಯ ಮತ್ತು ಉಮ್ಮತ್ತೂರು ಪಾಳೆಯಪಟ್ಟು ಸಂಬಂಧಗಳ ಪುನರವಲೋಕನ

ಡಾ॥ ಎ.ಎನ್. ಸುರೇಶ

ದಕ್ಷಿಣ ಭಾರತದ ದೀರ್ಘ ಇತಿಹಾಸದಲ್ಲೇ ಸಮರ್ಥನಾದ ಹಾಗೂ ಪ್ರಖ್ಯಾತನಾದ ಚಕ್ರವರ್ತಿ ಶ್ರೀಕೃಷ್ಣದೇವರಾಯ. ಈತನ ಆಗಮನದಿಂದ ಸಾಮ್ರಾಜ್ಯವು ಪ್ರಗತಿ ದಿಗಂತದಲ್ಲಿ ದೈತ್ಯಹೆಜ್ಜೆಗಳನ್ನಿಟ್ಟು ಮುನ್ನಡೆಯಿತು. ಕೃಷ್ಣದೇವರಾಯನು ದಕ್ಷ ಆಡಳಿತಗಾರ, ಮಹಾಸೇನಾನಿ ಮತ್ತು ಕಲಾ ಹಾಗೂ ಸಾಹಿತ್ಯ ಪೋಷಕನಾಗಿದ್ದು, ವಿಜಯನಗರದ ಏಳಿಗೆಗೆ ಬಹುಮುಖವಾಗಿ ಶ್ರಮಿಸಿದನು. ಕೃಷ್ಣದೇವರಾಯನ ರಾಜ್ಯಭಾರದ ಕಾಲಾವಧಿಯಲ್ಲಿ ವಿಜಯನಗರದ ಕೀರ್ತಿ ಪರಾಕಾಷ್ಠೆ ಮುಟ್ಟಿತು. ಅನೇಕ ವಿದ್ವಾಂಸರು ಭಾವಿಸಿರುವಂತೆ 1509ರ ಆಗಸ್ಟ್ 8ರ ಕೃಷ್ಣಜನ್ಮಾಷ್ಟಮಿಯಂದು ಕೃಷ್ಣದೇವರಾಯನಿಗೆ ಪಟ್ಟಾಭಿಷೇಕವಾಯಿತು. ಹಂಪಿಯ ಹತ್ತಿರವಿರುವ ಸಿಂಗನಾಯಕಹಳ್ಳಿಯಲ್ಲಿ ಇತ್ತೀಚೆಗೆ ದೊರೆತ ಶಾಸನ ಕ್ರಿ.ಶ. 1510 ಜನವರಿ 24ರಂದು ಪಟ್ಟಾಭಿಷೇಕವಾಯಿತು ಎಂದು ಉಲ್ಲೇಖಿಸುತ್ತದೆ.[1] ಕೃಷ್ಣದೇವರಾಯ ಅಧಿಕಾರಕ್ಕೆ ಬರಲು ಅವನ ಮಂತ್ರಿಯಾದ ಸಾಳುವ ತಿಮ್ಮರಸನು ಶ್ರಮಿಸಿದನು.

ಶ್ರೀಕೃಷ್ಣದೇವರಾಯನು ಪಟ್ಟಕ್ಕೆ ಬಂದಾಗ ಸುಮಾರು 25 ವರ್ಷ ವಯಸ್ಸಿನ ತರುಣನಾಗಿದ್ದನು. ಅವನ ಪಟ್ಟಾರೋಹದ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯ ರಾಜಕೀಯ ಪರಿಸ್ಥಿತಿಯು ಉತ್ತಮವಾಗಿರಲಿಲ್ಲ. ಬಹುಮನಿ ಸಾಮ್ರಾಜ್ಯವು ಐದು ಶಾಹಿ ರಾಜ್ಯಗಳಾಗಿ ಒಡೆದು ಬಿಜಾಪುರ ರಾಯಚೂರು ಕಡೆಯಿಂದ ಅಪಾಯದ ಸೂಚನೆಗಳಿದ್ದವು. ಒರಿಸ್ಸಾದ ಗಜಪತಿ ಪ್ರತಾಪರುದ್ರದೇವನು ವಿಜಯನಗರ ಸಾಮ್ರಜ್ಯದ ಈಶಾನ್ಯ ಭಾಗವನ್ನು ಆಕ್ರಮಿಸಲು ಸಿದ್ಧನಾಗುತ್ತಿದ್ದನು. ಪೋರ್ಚುಗೀಸರು ಪಶ್ಚಿಮ ಕರಾವಳಿಯಲ್ಲಿ ತಮ್ಮ ಹತೋಟಿ ಸ್ಥಾಪಿಸಲು ಸಿದ್ಧರಾಗಿದ್ದರು. ಹಿಂದೆ ಅನೇಕ ಸಾಮಂತರಾಜರುಗಳನ್ನೂ ಅವರು ಹತ್ತಿಕ್ಕಿದ್ದರೂ ಸಂಪೂರ್ಣವಾಗಿ ಪತನ ಹೊಂದಿರಲಿಲ್ಲ. ಉಮ್ಮತ್ತೂರಿನ ಪಾಳೇಯಗಾರನೂ ಮೈಸೂರು ಪ್ರಾಂತ್ಯದ ಹಲವಾರು ಪ್ರದೇಶವನ್ನು ಆಕ್ರಮಿಸಿಕೊಂಡಿದ್ದು ಸ್ವತಂತ್ರವಾಗಿ ವರ್ತಿಸುತ್ತಿದ್ದನು. ಇಂತಹ ಸಂದಿಗ್ಧ ಸಮಯದಲ್ಲಿ ದಿಗ್ವಿಜಯಕಾರ ಕೃಷ್ಣದೇವರಾಯನು ಎಲ್ಲಾ ರಾಜಕೀಯ ಸಮಸ್ಯೆಗಳನ್ನು ಯುಕ್ತಾಯುಕ್ತ ಪರ್ಯಾಲೋಚಿಸಿ ಸಾಮ್ರಾಜ್ಯದ ಎಲ್ಲಾ ಭಾಗಗಳಲ್ಲಿ ಸುಭದ್ರತೆ ನೆಲೆಸುವಂತೆ ಮಾಡಿದನು.[2] ಇದರಲ್ಲಿ ಉಮ್ಮತ್ತೂರಿನ ಪಾಳೇಗಾರನ ಬಂಡಾಯ ಸಮಸ್ಯೆಯನ್ನು ಹತ್ತಿಕ್ಕಿ, ಮೈಸೂರು ಪ್ರಾಂತ್ಯವನ್ನು ರಕ್ಷಿಸಿ, ದಕ್ಷ ಆಡಳಿತಗಾರರನ್ನು

ನೇಮಿಸಿ ಅಧಿಕಾರ ಸ್ಥಾಪಿಸಿದನು. ಕೃಷ್ಣದೇವರಾಯನ ಕಾಲದಲ್ಲಿ ಉಮ್ಮತ್ತೂರು ಮತ್ತು ವಿಜಯನಗರ ಸಾಮ್ರಾಜ್ಯದ ನಡುವೆ ಇದ್ದ ರಾಜ್ಯಾಧಿಕಾರದ ಸಂಬಂಧಗಳನ್ನು ವಿಶ್ಲೇಷಿಸಿ ವಿಮರ್ಶಿಸಲಾಗಿದೆ.

ಆಡಳಿತ ವ್ಯವಸ್ಥೆಗಾಗಿ ವಿಜಯನಗರ ಸಾಮ್ರಾಜ್ಯವನ್ನು ಅನೇಕ ಪ್ರಾಂತ್ಯಗಳಾಗಿ ವಿಂಗಡಿಸಲಾಗಿತ್ತು. ಅವುಗಳಲ್ಲಿ ರಾಜ್ಯ, ಮಂಡಲ, ನಾಡು, ಸೀಮೆ, ಚಾವಡಿಗಳೆಂದು ಕರೆಯುತ್ತಿದ್ದರು. ರಾಜ್ಯಗಳಲ್ಲಿ ನಾಡು, ಗ್ರಾಮ, ಸ್ಥಳ ಎಂಬ ಉಪವಿಭಾಗಗಳಿದ್ದವು. ಕರ್ನಾಟಕ ವಲಯದ ಪ್ರಾಂತ್ಯಗಳನ್ನು ರಾಜ್ಯಗಳೆಂದು ಕರೆದರೆ, ತಮಿಳುನಾಡಿನ ಪ್ರಾಂತ್ಯಗಳನ್ನು ಮಂಡಲಗಳೆಂದು ಕರೆಯುತ್ತಿದ್ದರು. ಸಾಮಾನ್ಯವಾಗಿ ರಾಜಮನೆತನಕ್ಕೆ ಸೇರಿದವರನ್ನು ಪ್ರಾಂತ್ಯಾಧಿಕಾರಿಯನ್ನಾಗಿ (ರಾಜ್ಯಪಾಲ) ನೇಮಿಸಲಾಗುತ್ತಿತ್ತು.[3]

ವಿಜಯನಗರ ಸಾಮ್ರಾಜ್ಯದಲ್ಲಿ ಪಾಳೆಗಾರರು ಸಣ್ಣ ಸಣ್ಣ ನಾಯಕರಾಗಿ ದಕ್ಷಿಣಾಪಥದ ಎಲ್ಲಾ ಕಡೆಗಳಲ್ಲೂ ಹರಡಿಕೊಂಡು ಪ್ರವರ್ಧಮಾನಕ್ಕೆ ಬಂದರು. ಇವರು ತಮ್ಮ ಸಣ್ಣಮಟ್ಟ ಪ್ರಾಂತ್ಯಗಳಲ್ಲಿ (ಪಾಳೆಯಪಟ್ಟು) ಸರ್ವತಂತ್ರ ಸ್ವತಂತ್ರರಾಗಿ ಪರಮಾಧಿಕಾರವನ್ನು ನಡೆಸುತ್ತಿದ್ದರು. ಈ ಪಾಳೇಗಾರರ ವಿದೇಶಾಂಗ ನೀತಿಯು ಕೇಂದ್ರದ ಅಧಿಕಾರದೊಡನೆ ಎಷ್ಟರಮಟ್ಟಿಗೆ ಹೆಣೆದುಕೊಂಡಿತ್ತೆಂದರೆ ಇವರ ಕ್ರಿಯಾತ್ಮಕ ಸಹಾಯವಿಲ್ಲದೆ ವಿಜಯನಗರ ಸಾಮ್ರಾಟರು ಹೊರ ಆಕ್ರಮಣವನ್ನು ಎದುರಿಸಿ ಶಾಂತಿ ಹಾಗೂ ಕಾನೂನನ್ನು ಸ್ಥಾಪಿಸಿ ವಿಸ್ತಾರವಾದ ತಮ್ಮ ಸಾಮ್ರಾಜ್ಯದಲ್ಲಿ ಕ್ಷೇಮಕರವಾದ ಆಡಳಿತ ವ್ಯವಸ್ಥೆಯನ್ನು ಬೆಳೆಸಲು ಸಾಧ್ಯವಾಗುತ್ತಿರಲಿಲ್ಲ. ಈ ಪಾಳೆಯಗಾರರು ತಮ್ಮ ಆಳ್ವಿಕೆಯ ಪ್ರದೇಶದಲ್ಲಿ ಕಂದಾಯ ವಸೂಲಿ ಮಾಡಿ ಕಾನೂನು ಮತ್ತು ನಿಯಮಗಳನ್ನು ಪಾಲಿಸಿ ತಮ್ಮ ಪ್ರದೇಶದ ಕ್ಷೇಮಪಾಲಕರಾಗಿದ್ದರು. ಇವರು ತಮ್ಮ ಪ್ರಜೆಗಳಿಂದ ರಾಜನಂತೆ ಗೌರವ ಮತ್ತು ಬಿರುದಾವಳಿಗಳನ್ನು ಧರಿಸುತ್ತಿದ್ದರು. ಪಾಳೆಯಗಾರರು ವಿಜಯನಗರ ಪ್ರಭುಗಳಿಗೆ ಕಪ್ಪಕಾಣಿಕೆಗಳನ್ನು ಮತ್ತು ಯುದ್ಧ ಸಮಯದಲ್ಲಿ ಸೈನ್ಯ ಸಹಾಯವನ್ನು ಮಾಡುತ್ತಿದ್ದರು. ಒಮ್ಮೊಮ್ಮೆ ಈ ಪಾಳೇಗಾರರು ವಿಜಯನಗರ ಅರಸರ ಪರಮಾಧಿಕಾರವನ್ನು ತ್ಯಜಿಸಿ ಸ್ವತಂತ್ರರಾಗಿ ರಾಜ್ಯ ಸ್ಥಾಪಿಸಿ ಅದನ್ನು ವಿಸ್ತರಿಸಲು ಪ್ರಯತ್ನಿಸುತ್ತಿದ್ದರು. ಮೈಸೂರು ಪ್ರಾಂತ್ಯದಲ್ಲಿ ಕಳಲೆ, ಉಮ್ಮತ್ತೂರು, ಚನ್ನಪಟ್ಟಣ, ಯಲಹಂಕ, ಹದಿನಾಡು, ಶಿವನಸಮುದ್ರ, ಶ್ರೀರಂಗಪಟ್ಟಣ, ತೆರಕಣಾಂಬಿ ಪಾಳೆಯಪಟ್ಟುಗಳಿದ್ದು ಮಹಾಮಂಡಲೇಶ್ವರ ಮಹಾಪ್ರಧಾನ ಎಂಬ ವಿಜಯನಗರದ ಅಧಿಕಾರಿಗಳು ಅವುಗಳ ಆಡಳಿತ ನೋಡಿಕೊಳ್ಳುತ್ತಿದ್ದರು. ಇವು ಶ್ರೀರಂಗಪಟ್ಟಣದ ಪ್ರಾಂತಾಧಿಕಾರಿ ವಿಜಯನಗರದ ಪ್ರತಿನಿಧಿಯ ಅಧೀನದಲ್ಲಿದ್ದವು.[4] ಈ ಪಾಳೆಯಪಟ್ಟುಗಳಲ್ಲಿ ಉಮ್ಮತ್ತೂರಿನ ನಾಯಕನು ಕೃಷ್ಣದೇವರಾಯನ ಕಾಲದಲ್ಲಿ ಕೇಂದ್ರದ ಪರಮಾಧಿಕಾರವನ್ನು ಕಳಚಿ ಸ್ವತಂತ್ರವಾಗಿ ಬಂಡಾಯವೆದ್ದು ಪೆನುಗೊಂಡೆ, ಶಿವನಸಮುದ್ರ, ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡು ರಾಜ್ಯಸ್ಥಾಪಿಸಲು ಪ್ರಯತ್ನಿಸಿದನು.[5]

ಚಾಮರಾಜನಗರ ಜಿಲ್ಲೆಯ ಉಮ್ಮತ್ತೂರು ಗ್ರಾಮ ವಿಜಯನಗರ ರಾಜರ ಕಾಲದ ಮಹತ್ವಪೂರ್ಣ ಪಾಳೆಗಾರಿಕಾ ಕೇಂದ್ರವಾಗಿದ್ದು, ಉಮ್ಮತ್ತೂರು ಒಡೆಯರ ಕುಲದೇವತೆ ಶ್ರೀ ಸೋಮೇಶ್ವರ. ಕೆಲಕಾಲ ಇವರು ಶಿವನಸಮುದ್ರ ಮತ್ತು ತೆರಕಣಾಂಬಿ ಪ್ರಾಂತ್ಯವನ್ನು ಆಳಿದ್ದಿರಬೇಕು. ಇವರ ವಂಶಾವಳಿ ಬಗ್ಗೆ *ಎಪಿಗ್ರಾಫಿಯ ಕರ್ನಾಟಿಕ* ಸಂಪುಟ ಮೂರರ ಪೀಠಿಕೆಯಲ್ಲಿ ತಿಳಿಸಲಾಗಿದೆ. ಇವರು 'ಮಹಾಮಂಡಲೇಶ್ವರ', 'ಗಜಬೇಂಟೆಕಾರ', 'ಪೆನುಗೊಂಡ ಚಕ್ರೇಶ್ವರ' ಎಂಬ ಬಿರುದುಗಳನ್ನು ಧರಿಸಿಕೊಂಡಿದ್ದರು.[6]

ಶ್ರೀಕೃಷ್ಣದೇವರಾಯನು ಬೀದರ್ ಮತ್ತು ಬಿಜಾಪುರದ ಮೇಲೆ ಯುದ್ಧ ಮಾಡುವಾಗ ಉಮ್ಮತ್ತೂರಿನ ಪಾಳೇಗಾರ ಗಂಗರಾಜನು ಸ್ವತಂತ್ರವಾಗಿ ವಿಜಯನಗರದ ವಿರುದ್ಧ ದಂಗೆಯೆದ್ದನು. ಶ್ರೀರಂಗಪಟ್ಟಣ ಮತ್ತು ಶಿವನಸಮುದ್ರದ

ದುರ್ಗಗಳು ಇವನ ಅಧೀನದಲ್ಲಿದ್ದವು. ಇವನು ವೀರನರಸಿಂಹನ ಆಳ್ವಿಕೆಯ ಕೊನೆಯಕಾಲದಿಂದಲೂ ವಿಜಯನಗರದ ಅಧೀನದಿಂದ ಸ್ವತಂತ್ರನಾಗಲು ಪ್ರಯತ್ನಿಸುತ್ತಿದ್ದನು. ಕೃಷ್ಣದೇವರಾಯನನ್ನು ಕಡೆಗಣಿಸಿ ಪೆನುಗೊಂಡದ ದುರ್ಗವನ್ನು ಆಕ್ರಮಿಸಿದನು. ಈ ಸಮಯದಲ್ಲಿ ಸಾಮ್ರಾಜ್ಯದ ಶಾಂತಿ ಸುವ್ಯವಸ್ಥೆಯನ್ನು ಸ್ಥಾಪಿಸಲು ಉಮ್ಮತ್ತೂರಿನ ಗಂಗರಾಜನ ವಿರುದ್ಧ ಶ್ರೀಕೃಷ್ಣದೇವರಾಯ ಯುದ್ಧಾರಂಭ ಮಾಡಿದನು. ಈ ಯುದ್ಧವು ಸುಮಾರು ಕ್ರಿ.ಶ. 1510ನೆಯ ಆಗಸ್ಟ್ ತಿಂಗಳಿಂದ ಪ್ರಾರಂಭವಾಗಿ ಕ್ರಿ.ಶ. 1512ರ ವರೆಗೂ ಮುಂದುವರಿದಿದ್ದಿತ್ತು. ಗಂಗರಾಜನ ಕೈಸೇರಿದ ಪೆನುಗೊಂಡೆಯ ಆಕ್ರಮಣದೊಡನೆ ಯುದ್ಧಾರಂಭವಾಯಿತು. ಈ ದುರ್ಗವನ್ನು ವಶಪಡಿಸಿಕೊಂಡ ಮೇಲೆ ಕೃಷ್ಣದೇವರಾಯನು ಉಮ್ಮತ್ತೂರನ್ನೂ ಗಂಗರಾಜನ ಮುಖ್ಯಸ್ಥಾನವಾದ ಶಿವನಸಮುದ್ರವನ್ನೂ ಆಕ್ರಮಿಸಿದನು. ಶಿವಸಮುದ್ರವನ್ನು ಹಿಡಿಯಲು ಸುಮಾರು ಒಂದು ವರ್ಷಕಾಲ ಶ್ರೀಕೃಷ್ಣದೇವರಾಯನು ಹೋರಾಡಬೇಕಾಯಿತು. ಈ ಸಮಯದಲ್ಲಿ ಗಂಗರಾಜನು ಪಲಾಯನ ಮಾಡಿ ಸೋಲಿನ ನಿರಾಸೆಯಿಂದ ಕಾವೇರಿ ನದಿಯಲ್ಲಿ ಹಾರಿ ಮೃತನಾದನು. ನಂತರ ಅವನ ರಾಜಧಾನಿಯನ್ನು ಶ್ರೀಕೃಷ್ಣದೇವರಾಯನು ವಶಪಡಿಸಿಕೊಂಡನು. ಈ ನೂತನ ರಾಜ್ಯವು ವಿಜಯನಗರ ಸಾಮ್ರಾಜ್ಯದ ಪ್ರಾಂತ್ಯವಾಯಿತು. ನಂತರ ಶ್ರೀರಂಗಪಟ್ಟಣವನ್ನು ಅದರ ರಾಜಧಾನಿಯನ್ನಾಗಿ (1513) ಮಾಡಿದನು.[7] ಈ ಪ್ರದೇಶದ ಆಡಳಿತವನ್ನು ನೋಡಿಕೊಳ್ಳಲು ತನ್ನ ಮಂತ್ರಿ ಸಾಳುವ ತಿಮ್ಮರಸನ ತಮ್ಮನಾದ ಸಾಳುವ ಗೋವಿಂದರಾಯನನ್ನು ಪ್ರಾಂತಾಧಿಕಾರಿಯನ್ನಾಗಿ ನೇಮಿಸಿದ್ದನು.[8] ಗಂಗರಾಜನಿಂದ ವಶಪಡಿಸಿಕೊಂಡ ಉಮ್ಮತ್ತೂರು ಪ್ರಾಂತ್ಯದ ಕೆಳಭಾಗದ ಆಡಳಿತವನ್ನು ಬೆಂಗಳೂರಿನ ಕೆಂಪೇಗೌಡನಿಗೂ ವಹಿಸಿದ್ದನು.[9]

ಶ್ರೀಕೃಷ್ಣದೇವರಾಯನು ಉಮ್ಮತ್ತೂರು ಮತ್ತು ಶ್ರೀರಂಗಪಟ್ಟಣದ ಮೇಲೆ ಅಧಿಕಾರ ನಿಯಂತ್ರಣ ಹೊಂದಲು ಹದಿನಾಡಿನ ಮೈಸೂರು ಒಡೆಯರು ಸಹಾಯ ಮಾಡಿದರು. ವಿದೇಶಿ ಪ್ರವಾಸಿಗರಾದ ಪಯಸ್ ಮತ್ತು ನ್ಯೂನಿಜ್ ತಿಳಿಸುವಂತೆ ಶ್ರೀರಂಗಪಟ್ಟಣದ ದುರ್ಗವನ್ನು ನೋಡಿಕೊಳ್ಳುತ್ತಿದ್ದ ಕುಮಾರ ವೀರಯ್ಯ ಕೃಷ್ಣದೇವರಾಯನ ಮಾವನಾಗಿದ್ದು, ತನ್ನ ಮಗಳಾದ ತಿರುಮಲಾಂಬೆಯನ್ನು ಕೃಷ್ಣದೇವರಾಯನಿಗೆ ವಿವಾಹ ಮಾಡಿದನು. ಈ ವೈವಾಹಿಕ ಸಂಬಂಧಗಳು ಈ ಪ್ರಾಂತ್ಯದ ಮೇಲೆ ಅಧಿಕಾರ ಸ್ಥಾಪಿಸಲು ಕಾರಣವಯಿತು. ಆತನ ಮಾವ ಕೂಡ ಉಮ್ಮತ್ತೂರು ವಿರುದ್ಧ ಹೋರಾಡಲು ಸೈನ್ಯ ಸಹಾಯ ಮಾಡಿದನು.[10] ಇದಲ್ಲದೆ ಉಮ್ಮತ್ತೂರು ಪಾಳೇಗಾರನ ಅಧೀನಕ್ಕೆ ಸೇರಿದ್ದ ಶ್ರೀರಂಗಪಟ್ಟಣದ ಕಾವೇರಿ ನದಿಯಿಂದ ಕೃಷಿಯೋಗ್ಯ ಪ್ರದೇಶವಾಗಿತ್ತು. ಮಧುರೆನಾಯಕರು ಶ್ರೀರಂಗಪಟ್ಟಣ ಪ್ರಾಂತ್ಯದ ಮೇಲೆ ಆಗಾಗ್ಗೆ ಆಕ್ರಮಣ ಮಾಡುವುದನ್ನು ತಡೆಯುವುದು ಹಾಗೂ ಆ ಪ್ರದೇಶಗಳ ಮೇಲೆ ಮುಖ್ಯವಾಗಿ ಕೊಂಗುನಾಡು ಮತ್ತು ತಮಿಳುನಾಡಿನ ಪ್ರದೇಶಗಳ ಮೇಲೆ ನಿಯಂತ್ರಣಹೊಂದುವುದು ಆಗಿದ್ದಿತ್ತು.

ಉಮ್ಮತ್ತೂರು ಪಾಲೆಯಪಟ್ಟಿನ ಮೇಲೆ ವಿಜಯನಗರದ ಕೇಂದ್ರಾಡಳಿತದ ಪರಮಾಧಿಕಾರವನ್ನು ಸ್ಥಾಪಿಸಿದ ಮೇಲೆ ಶಿರಪ್ರಧಾನನ ಆಡಳಿತ ಪ್ರಾರಂಭವಾದ ಮೇಲೆ ಉಮ್ಮತ್ತೂರಿನ ಆಡಳಿತವನ್ನು ಶ್ರೀಕೃಷ್ಣದೇವರಾಯನ ಹೆಸರು ಮತ್ತು ಶ್ರೇಷ್ಠತೆ ಮೇಲೆ ನಡೆಸಲಾಯಿತು. ಶ್ರೀಕೃಷ್ಣದೇವರಾಯನ ಮಂತ್ರಿ ಸಾಳುವ ತಿಮ್ಮರಸನು ತಮ್ಮ ದೊರೆ ಸಾಳುವ ನರಸಿಂಹವರ್ಮನ ಮಗ ಕೃಷ್ಣವರ್ಮನ ನಿರೂಪದಂತೆ ತಲಕಾಡಿನ ಕೀರ್ತಿನಾರಾಯಣ ದೇವರಿಗೆ ಕಾವಹಳ್ಳಿ ಗ್ರಾಮದ ಕಂದಾಯವನ್ನು ದಾನವಾಗಿ ನೀಡಿದನು.[11] ಇಲ್ಲಿ ಶ್ರೀಕೃಷ್ಣದೇವರಾಯನನ್ನು ಕೃಷ್ಣವರ್ಮನೆಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಉಮ್ಮತ್ತೂರು ಪಾಳೆಯಪಟ್ಟುವಿನಲ್ಲಿ ನಂಜನಗೂಡಿನಲ್ಲಿದ್ದ ಶ್ರೀ ರಾಘವೇಂದ್ರಸ್ವಾಮಿಗಳ ಮಠದ ವಿಬುದೇಂದ್ರ ಯತಿಗಳಿಗೆ ಕೃಷ್ಣದೇವರಾಯನು ಒರಿಸ್ಸಾದ ಗಜಪತಿ ಪ್ರತಾಪರುದ್ರನನ್ನು ಉದಯಗಿರಿಯಲ್ಲಿ ಸೋಲಿಸಿ ದುರ್ಗವನ್ನು ವಶಪಡಿಸಿಕೊಂಡ ನೆನಪಿಗಾಗಿ ಚಿಕ್ಕಕುಳ್ಳಿ ಗ್ರಾಮವನ್ನು ದತ್ತಿಯಾಗಿ ನೀಡಿದನು.[12] ಉಮ್ಮತ್ತೂರಿನ

ಮಹಾಪ್ರಧಾನವಾಗಿ ನೇಮಕಗೊಂಡ ಸಾಳುವ ಗೋವಿಂದರಾಜ ಒಡೆಯನು ಉಮ್ಮತ್ತೂರಿನ ತಿರುಮಲದೇವರಿಗೆ ಮತ್ತು ತಿರುಮಕೂಡಲು ಅಗಸ್ತ್ಯೇಶ್ವರ ದೇವರಿಗೆ ದಾನವನ್ನು ನೀಡಿದನು. ಈ ರೀತಿ ದಾನ ನೀಡುವಂತೆ ಕೃಷ್ಣದೇವರಾಯನ ಆಜ್ಞೆಯಾಗಿತ್ತು.[13] ಸಾಮಾನ್ಯವಾಗಿ ಹೊಸದಾಗಿ ವಶಪಡಿಸಿಕೊಂಡ ಅಥವಾ ಪರಮಾಧಿಕಾರವನ್ನು ಚಲಾಯಿಸಿದಾಗ ತಮ್ಮ ಅಧಿಕಾರದ ಪ್ರಾಧಾನ್ಯತೆಯನ್ನು ವ್ಯಕ್ತಪಡಿಸಲು ಹಾಗೂ ಆ ಪ್ರದೇಶದ ಜನಬೆಂಬಲಗಳಿಸಲು ಅವರ ಧಾರ್ಮಿಕ ಆಚರಣೆಗೆ ಬೆಂಬಲ ಪೋಷಣೆ ನೀಡುವುದು ರಾಜ್ಯಾಧಿಕಾರದ ಪ್ರತಿಪಾದನೆಯ ಸಂಕೇತವಾಗಿತ್ತು.

ಉಮ್ಮತ್ತೂರಿನ ಮಹಾಪ್ರಧಾನನಾಗಿ ನೇಮಕಗೊಂಡ ಸಾಳುವ ಗೋವಿಂದರಾಜನು ಉಮ್ಮತ್ತೂರಿನ ದೇವಾಲಯಗಳಿಗೆ ಭೂದಾನ ಮಾಡಿ ವಿಜಯನಗರ ಕೇಂದ್ರದ ಅಧಿಕಾರವನ್ನು ಪ್ರಬಲಗೊಳಿಸಿದನು. ತಿರುಮಕೂಡಲ ನರಸಿಂಹ ದೇವರು ಮತ್ತು ಅಗಸ್ತ್ಯೇಶ್ವರ ದೇವರಿಗೆ ಮೂಗೂರು ಸ್ಥಳದ ಹೊಸಪುರ ಗ್ರಾಮವನ್ನು ದಾನವಾಗಿ ನೀಡಿದನು. ಮರಡೀಪುರದ ಅಗ್ರಹಾರಕ್ಕೆ ಶ್ರೀಕೃಷ್ಣದೇವರಾಯನ ಶ್ರೇಯಸ್ಸಿಗೋಸ್ಕರ ಗ್ರಾಮದಾನವನ್ನು ಮಾಡಿದನು.[14]

ಉಮ್ಮತ್ತೂರು ಪಾಳೆಯಪಟ್ಟುವಿನಲ್ಲಿ ಕೃಷ್ಣದೇವರಾಯನ ಅಧಿಕಾರ ಸ್ಥಾಪನೆಯಾದ ಮೇಲೆ ಈ ಪ್ರಾಂತ್ಯದ ಕೆಲವು ಗ್ರಾಮಗಳ ಹೆಸರನ್ನು ಬದಲಾಯಿಸಿ ಕೃಷ್ಣದೇವರಾಯನ ಹೆಸರನ್ನು ಶಾಶ್ವತಗೊಳಿಸಲಾಯಿತು. ಶ್ರೀಕೃಷ್ಣದೇವರಾಯನೇ ಸ್ವತಃ ಟಿ. ನರಸೀಪುರದ ಸೋಸಲೆ ವ್ಯಾಸರಾಯಮಠದ ವ್ಯಾಸತೀರ್ಥ ಮುನಿಗಳಿಗೆ, ಜಕ್ಕರಾಜನಹಳ್ಳಿಯನ್ನು ಗ್ರಾಮದಾನವಾಗಿ ನೀಡುವಾಗ ಆ ಹಳ್ಳಿಗೆ 'ಕೃಷ್ಣರಾಯಪುರ' ಎಂದು ನಾಮಕರಣ ಮಾಡಿದನು. ಮರಡೀಪುರದ ಅಗ್ರಹಾರಕ್ಕೆ ಮರಡೀಪುರ ಗ್ರಾಮವನ್ನು ದಾನಮಾಡಿದಾಗಲೂ ಮರಡೀಪುರಕ್ಕೆ 'ಕೃಷ್ಣರಾಯಪುರ' ಎಂದು ಪುನಃ ನಾಮಕರಣ ಮಾಡಲಾಯಿತು. ಸಾಳುವ ಗೋವಿಂದ ರಾಜನು ಕಲಿಯೂರು ಗ್ರಾಮವನ್ನು ಬ್ರಾಹ್ಮಣರಿಗೆ ದಾನವಾಗಿ ನೀಡಿದಾಗ ಅದಕ್ಕೆ 'ಕೃಷ್ಣಾಪುರ' ಎಂದು ನಾಮಕರಣ ಮಾಡಿದನು. ಈ ದಾನಗಳೆಲ್ಲವನ್ನು ಹಂಪೆ ಪಂಪಾಕ್ಷೇತ್ರದ ವಿರೂಪಾಕ್ಷರ ದೇವರ ಸನ್ನಿಧಿಯಲ್ಲಿ ನೀಡಲಾಗುತ್ತಿತ್ತು. ಈ ಕಾರ್ಯಗಳೆಲ್ಲ ಉಮ್ಮತ್ತೂರಿನ ಮೇಲೆ ಕೃಷ್ಣದೇವರಾಯನ ಪರಮಾಧಿಕಾರವನ್ನು ಸೂಚಿಸುತ್ತದೆ.[15] ಇದಲ್ಲದೆ ನಾಡಿನ ಮುಖಂಡರು ವರ್ತಕರು ಕೂಡ ಕೃಷ್ಣದೇವರಾಯನ ಅಭಿವೃದ್ಧಿ ಶ್ರೇಷ್ಠತೆಯನ್ನು ಬಯಸಿ ಅವನ ಅಧಿಕಾರವನ್ನು ಮನ್ನಿಸಿ ದೇವಾಲಯಗಳಿಗೆ ಹಲವಾರು ದಾನಗಳನ್ನು ಮಾಡಿದ್ದಾರೆ. ಉಮ್ಮತ್ತೂರಿನ ಮಲ್ಲರಸ ಕಾರ್ಯಕರ್ತನು, ಪೊರಗಿ ಹಳ್ಳಿಯ ಸೋಮಣ್ಣ ಒಡೆಯನು, ಸೋಸಲೆ ಬಳಿಯ ಕನ್ನೆರಮಡು ಗ್ರಾಮಸ್ಥರು ಶ್ರೀಕೃಷ್ಣದೇವರಾಯನ ಶ್ರೇಯಾಭಿವೃದ್ಧಿಯನ್ನು ಬಯಸಿ ತಿರುಪತಿ ವೆಂಕಟೇಶ್ವರ ದೇವರಿಗೆ ಹಾಗೂ ಹಂಪಿಯ ವಿಠಲ ದೇವರಿಗೆ ದಾನವನ್ನು ನೀಡಿದ್ದಾರೆ.[16] ವಿಜಯನಗರ ಕೃಷ್ಣರಾಯನ ರಾಜ ವ್ಯಾಪಾರಿಯಾದ ಬೆಟ್ಟಪ್ಪಶೆಟ್ಟಿಯ ಅಣ್ಣ ಶರಣಪ್ಪ ಶೆಟ್ಟಿಯು ಸಾಳುವ ಗೋವಿಂದ ರಾಜನಿಂದ ಉಂಬಳಿ ಪಡೆದು ತಿರುಮಕೂಡಲು ಬಳಿಯ ಅಗಸ್ತ್ಯೇಶ್ವರ ದೇವಾಲಯದ ಸಮೀಪದಲ್ಲಿ ಪಾರ್ವತಿ ದೇವಾಲಯವನ್ನು ನಿರ್ಮಿಸಿದರು. ಪಾರ್ವತಿ ದೇವಿಯ ಅಮೃತಪಡಿಗೆ ಹೊನ್ನಾರೆ ಗ್ರಾಮವನ್ನು ದಾನವಾಗಿ ನೀಡಿದರು.[17]

ಉಮ್ಮತ್ತೂರು ಪ್ರಾಂತ್ಯದ ಗ್ರಾಮದಾನಗಳನ್ನು ಕೃಷ್ಣದೇವರಾಯನ ಕೇಂದ್ರಸ್ಥಳಕ್ಕೆ, ಅವನ ಆದೇಶದ ಮೇರೆಗೆ ದೇವರಿಗೆ ದಾನ ನೀಡುವುದು ಸಾಮಾನ್ಯವಾಗಿತ್ತು. ಇದು ಉಮ್ಮತ್ತೂರು ಪ್ರದೇಶವು ಕೃಷ್ಣದೇವರಾಯನ ಸಾರ್ವಭೌಮತ್ವವನ್ನು ಒಪ್ಪಿಕೊಂಡು ಸಾಮಂತರಾಗಿ ಹಾಗೂ ಅಧಿಕಾರಿಗಳಾಗಿದ್ದದು ತಮ್ಮ ಅಧಿಕಾರನಿಷ್ಠೆಯನ್ನು ತೋರಿಸುತ್ತದೆ. ಉಮ್ಮತ್ತೂರಿನ ಹಲವು ಗ್ರಾಮಗಳನ್ನು ಹಂಪಿ ವಿಠಲ ದೇವರಿಗೆ ನೀಡಿರುವುದು ವಿಶೇಷ.

ಕೃಷ್ಣದೇವರಾಯನು ತನ್ನ ಮಗನಾದ ತಿರುಮಲರಾಯನನ್ನು ರಾಜ್ಯದ ಉತ್ತರಾಧಿಕಾರಿಯನ್ನಾಗಿ ಗೊತ್ತುಮಾಡಿದ್ದರೂ, ಅವನು ಒಂದು ವರ್ಷ ಆಡಳಿತದಲ್ಲಿ ಮಂತ್ರಿ ಸಾಳುವ ತಿಮ್ಮರಸನ ಮಗನಿಂದ ವಿಷಪ್ರಾಶನದಿಂದ

ಮೃತನಾಗಿದ್ದನಷ್ಟೆ. ಆದ್ದರಿಂದ ಕೃಷ್ಣದೇವರಾಯನು ತನ್ನ ಮಲತಮ್ಮನಾದ ಅಚ್ಯುತರಾಯನನ್ನು ಉತ್ತರಾಧಿಕಾರಿಯನ್ನಾಗಿ ನೇಮಿಸಿದನು.[18] ಈ ಸಮಯದಲ್ಲಿ ಉಮ್ಮತ್ತೂರು ಪ್ರಾಂತ್ಯದ ಅಧಿಕಾರಿಯು ಅಚ್ಯುತರಾಯನ ಅಭಿವೃದ್ಧಿ ಶ್ರೇಷ್ಠತೆಯನ್ನು ಬಯಸಿ ದಾನಗಳನ್ನು ಮಾಡಿದ್ದಾರೆ. ಈ ಸಮಯದಲ್ಲಿ ಸಾಳುವ ಗೋವಿಂದರಾಜನು ತೆರಕಣಾಂಬಿಯ ನಾಯಕತ್ವವನ್ನು ಪಡೆದಿದ್ದಕ್ಕಾಗಿ ಹಂಪಿ (ಪಂಪಾಕ್ಷೇತ್ರ) ವಿರೂಪಾಕ್ಷ ದೇವರಿಗೆ ದಾನವನ್ನು ನೀಡಿರುವ ಶಾಸನಗಳು ದೊರೆತಿವೆ.[19]

ಶ್ರೀಕೃಷ್ಣದೇವರಾಯನ ಅಧಿಕಾರದ ಕಾಲವೆಂದರೆ, ಅವಿಚ್ಛಿನ್ನ ಯುದ್ಧ ವಿಜಯಗಳ ಕಾಲ. ತನ್ನ ಇಪ್ಪತ್ತು ವರ್ಷಗಳ ಅಧಿಕಾರಾವಧಿಯಲ್ಲಿ ಗೋದಾವರಿಯಿಂದ ಕನ್ಯಾಕುಮಾರಿವರೆಗಿನ ಸಮಸ್ತ ಪಾಳೆಯಗಾರಿಕೆಗಳನ್ನು ಕೃಷ್ಣದೇವರಾಯನು ತನ್ನ ಹಿಡಿತಕ್ಕೆ ತಂದುಕೊಂಡಿದ್ದನು. ಉಮ್ಮತ್ತೂರು ನಾಯಕರೊಡನೆ ರಾಜ್ಯಾಧಿಕಾರ ಸ್ಥಾಪಿಸುವಲ್ಲಿಯೂ ಶುಕ್ರನೀತಿಸಾರ, ಮನುಧರ್ಮಶಾಸ್ತ್ರ, ಕೌಟಿಲ್ಯನ ಅರ್ಥಶಾಸ್ತ್ರದಲ್ಲೂ ನಿರೂಪಿತವಾದ ರಾಜನೀತಿ ಸೂತ್ರಗಳನ್ನು ಬಳಸಿ ರಾಜ್ಯಭಾರ ಕ್ರಮವನ್ನು ರೂಪಿಸಿಕೊಂಡಿದ್ದನು. 'ಆಮುಕ್ತಮಾಲ್ಯ'ದ ಗ್ರಂಥದಲ್ಲೂ ಆತನ ಕಾಲದ ರಾಜನೀತಿಯು ಒಳಗೊಂಡಿದೆ. ಸಾಮ್ರಾಜ್ಯದ ಏಕತೆ ಮತ್ತು ದೃಢತೆಯನ್ನು ಸ್ಥಾಪಿಸುವಲ್ಲಿಯೂ ಉಮ್ಮತ್ತೂರಿನ ನಾಯಕರೊಂದಿಗಿನ ಸಂಬಂಧಗಳು ಮತ್ತು ಮಹಾಪ್ರಧಾನನಾಗಿ ಸಾಳುವ ಗೋವಿಂದರಾಜನು ಕೈಗೊಂಡ ರಾಜ್ಯಭಾರ ಕ್ರಮಗಳು ರಾಜನೀತಿ ಕೃಷ್ಣದೇವರಾಯನ ಪ್ರಜಾಧರ್ಮದ, ಸಾಮಾಜಿಕ ದೃಢತೆಯ ನಿದರ್ಶನಗಳನ್ನೂ ತೋರಿಸುತ್ತದೆ.

ಆಧಾರ ಗ್ರಂಥಗಳು ಮತ್ತು ಅಡಿಟಿಪ್ಪಣಿಗಳು

1. ಪರಮಶಿವಮೂರ್ತಿ, ಡಿ.ವಿ., *ಕೃಷ್ಣದೇವರಾಯನ ಶಾಸನಗಳು*, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2010, ಪು. 5–6
2. ಡಾ. ಕೃಷ್ಣರಾವ್ ಎಂ.ವಿ. ಮತ್ತು ಕೇಶವಭಟ್ಟ, *ಕರ್ನಾಟಕ ಇತಿಹಾಸ ದರ್ಶನ*, ಬೆಂಗಳೂರು, 1970, ಪು. 370.
3. T.V. Mahalingam, *Administration and Social Life Under Vijayanagara*, Part I, University of Madras, Madras, 1969, pp. 185-191.
4. *ಕರ್ನಾಟಕ ಪರಂಪರೆ* ಸಂಪುಟ–2, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 1970, ಪು. 518.
5. Ishwari Prasad, *History of Medieval India*, Allahabad, 1972, p. 432.
6. ಡಾ. ಕೃಷ್ಣರಾವ್, ಎಂ.ವಿ., *ಪೂರ್ವೋಕ್ತ*, ಪು. 492.
7. *ಅದೇ*, ಪು. 376.
8. *ಎಪಿಗ್ರಾಫಿಯಾ ಕರ್ನಾಟಿಕ*, ಸಂಪುಟ 4, ಚಾಮರಾಜನಗರ, ಶಾಸನ ಸಂಖ್ಯೆ 233.
9. Basavaraja K.R., *History and Culture of Karnataka,* Dharwad, 1984, p. 158.
10. Govindraj Dr., Some Aspects of Geography and the Fragmented Polity in Karnataka (16th-18th century), Article Presented in the 20th European Conference.
11. Satyanarayana A., *History of the Wodeyars of Mysore 1610-1748,* Mysore, 1996, pp. 13-14.
12. *ಎಪಿಗ್ರಾಫಿಯಾ ಕರ್ನಾಟಿಕ*, ಸಂಪುಟ 3, ನಂಜನಗೂಡು, ಶಾ.ಸಂ. 248.
13. *ಅದೇ*, ನಂಜನಗೂಡು, ಶಾ.ಸಂ. 110.
14. *ಅದೇ*, ನಂಜನಗೂಡು, ಶಾ.ಸಂ. 285.
15. *ಅದೇ*, ತಿ. ನರಸೀಪುರ, ಶಾ.ಸಂ. 2, 128, 132, 289.
16. *ಅದೇ*, ತಿ. ನರಸೀಪುರ, ಶಾ.ಸಂ. 105, 133, 225.
17. *ಅದೇ*, ತಿ. ನರಸೀಪುರ, ಶಾ.ಸಂ. 106 ಮತ್ತು ಸಂಪುಟ 4, ನಂಜನಗೂಡು, ಶಾ.ಸಂ. 143, 149.
18. *ಅದೇ*, ತಿ. ನರಸೀಪುರ, ಶಾ.ಸಂ. 26.
19. ಡಾ. ಕೃಷ್ಣರಾವ್ ಎಂ.ವಿ., *ಪೂರ್ವೋಕ್ತ*, ಪು. 388.

23

ವಿಜಯನಗರ ಸಾಮ್ರಾಜ್ಯದ ಆಡಳಿತದಲ್ಲಿ 'ವೇಂಠೆ' – ಒಂದು ವಿವೇಚನೆ

ಡಾ॥ ಪಿ. ವಿ. ಕೃಷ್ಣಮೂರ್ತಿ

ವಿಜಯನಗರದ ಅರಸರು ಆಡಳಿತದ ಅನುಕೂಲಕ್ಕಾಗಿ ತಮ್ಮ ಸಾಮ್ರಾಜ್ಯವನ್ನು ಅನೇಕ 'ರಾಜ್ಯ'ಗಳನ್ನಾಗಿ ವಿಂಗಡಿಸಿದ್ದರು. ಉದಾ: ಆರಗ ರಾಜ್ಯ, ಕಳಸ–ಕಾರ್ಕಳ ರಾಜ್ಯ, ಕೊಂಡುವೀಡು ರಾಜ್ಯ, ಕುಂದುರುಪೆ ರಾಜ್ಯ, ಗಂಡಿಕೋಟೆ ರಾಜ್ಯ, ಚಂದ್ರಗಿರಿ ರಾಜ್ಯ, ಚನ್ನಪಟ್ಟಣ ರಾಜ್ಯ, ಗುತ್ತಿ ರಾಜ್ಯ, ಮಂಗಳೂರು ರಾಜ್ಯ, ಮುಳಬಾಗಲು ರಾಜ್ಯ ಇತ್ಯಾದಿ. ಪ್ರತಿ ರಾಜ್ಯದಲ್ಲಿ ಅನೇಕ 'ಸೀಮೆ'ಗಳು ಇರುತ್ತಿದ್ದವು. ಪ್ರತಿ ಸೀಮೆಯಲ್ಲೂ ಅನೇಕ 'ಗ್ರಾಮ'ಗಳನ್ನೊಳಗೊಂಡಂಥ 'ಸ್ಥಳ' ಎಂಬ ವಿಶಿಷ್ಟ ಆಡಳಿತ ವಿಭಾಗಗಳು ಇದ್ದವು.[1]

ಒಟ್ಟಾರೆ ವಿಜಯನಗರ ಅರಸರ ಆಡಳಿತದಲ್ಲಿ ಮೇಲ್‌ಸ್ತರದಲ್ಲಿ ರಾಜ್ಯ ಮತ್ತು ಸೀಮೆಗಳು; ಕೆಳಸ್ತರದಲ್ಲಿ ಸ್ಥಳ ಮತ್ತು ಗ್ರಾಮ/ಉಪಗ್ರಾಮಗಳು ಇರುತ್ತಿದ್ದವು. ಇವೇ ವಿಜಯನಗರ ಸಾಮ್ರಾಜ್ಯದ ನಿರ್ದುಷ್ಟ ಆಡಳಿತ ಘಟಕಗಳು. ಆದರೆ ವಿಜಯನಗರ ಕಾಲದ ಶಾಸನಗಳನ್ನು ಅವಲೋಕಿಸಿದರೆ: ರಾಜ್ಯ, ಸೀಮೆ, ಸ್ಥಳಗಳ ಜೊತೆಜೊತೆಗೇ ವಳಿತ, ವೇಂಠೆ, ನಾಡು, ಮಾಗಾಣಿ, ಚಾವಡಿ, ಪಟ್ಟಡಿ ಮುಂತಾದವು ಅಲ್ಲಲ್ಲೇ ಕಂಡುಬರುತ್ತವೆ. ಇವುಗಳಲ್ಲಿ 'ವಳಿತ' ಎಂಬುದು ನ್ಯಾಯಾಡಳಿತಕ್ಕೆ ಸಂಬಂಧಿಸಿದ್ದೆಂದೂ 'ಚಾವಡಿ' ಎಂಬುದು ಕಂದಾಯಾಡಳಿತಕ್ಕೆ ಸಂಬಂಧಿಸಿದ್ದೆಂದೂ ಅವುಗಳ ಸೂಕ್ಷ್ಮ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.[2] ಪ್ರಸ್ತುತ ಆಡಳಿತ ಪ್ರಾದೇಶಿಕ ಘಟಕ 'ವೇಂಠೆ'ಯನ್ನು ಕುರಿತ ವಿವೇಚನೆ ಈ ಪ್ರಬಂಧದ ಆಶಯವಾಗಿದೆ.

'ವೇಂಠೆ' ಅಥವಾ 'ವೇಂಠೆಯ' ಎಂಬ ಆಡಳಿತ ಪ್ರದೇಶಸೂಚಕ ಶಬ್ದವು ಕಾಲಾನುಕ್ರಮದಲ್ಲಿ ವಿಜಯನಗರ ಶಾಸನಗಳಲ್ಲಿ ಉಲ್ಲೇಖಗೊಂಡಿರುವಂತೆ ಇಲ್ಲಿ ಪಟ್ಟಿ ಮಾಡಲಾಗಿದೆ:

1. ಲಕ್ಕುಂಡಿಯ ವೇಂಠೆ, 1379, ಒಂದನೇ ಹರಿಹರ
2. ಆರಗವೇಂಠೆ (ರಾ), 1384–1622, ಎರಡನೇ ಹರಿಹರ –ರಾಮದೇವರಾಯ,
3. ಉಚ್ಚಂಗಿವೇಂಠೆ, (ರಾ), 1394–1505, ಎರಡನೇ ಹರಿಹರ – ರಾಮದೇವರಾಯ
4. ಬೆಲುಗಳ ವೇಂಠೆ, 1417, ಎರಡನೇ ದೇವರಾಯ

5. ಚಂದ್ರಗುತ್ತಿ ವೇಂಠೆ (ರಾ), 1429–1430, ಎರಡನೇ ದೇವರಾಯ
6. ತೊರಿನಾಡವೇಂಠೆ, 1430, ಎರಡನೇ ದೇವರಾಯ;
7. ಸೊಂಡೇಕೊಪ್ಪ ವೇಂಠೆ, 1440, ಎರಡನೇ ದೇವರಾಯ
8. ಅರಂನವ್ವಾಲಿಕವೇಂಠೆ, 1448, ಮಲ್ಲಿಕಾರ್ಜುನ
9. ಧಾರವಾಡ ವೇಂಠೆ, 1448, ಮಲ್ಲಿಕಾರ್ಜುನ
10. ಮುಕ್ಕೊಂಡವೇಂಠೆ, 1452, ಮಲ್ಲಿಕಾರ್ಜುನ?
11. ಕುರ್ವಂಕನಾಡವೇಂಠೆ, 1453–1458, ಮಲ್ಲಿಕಾರ್ಜುನ–ಎರಡನೇ ದೇವರಾಯ
12. ಬಾರಕೂರು ವೇಂಠೆ (ರಾ), 1464–1577, ಮಲ್ಲಿಕಾರ್ಜುನ–ಒಂದನೇ ಶ್ರೀರಂಗರಾಯ
13. ಹದಿನಾಡವೇಂಠೆ, 1482–1514, ವಿರೂಪಾಕ್ಷ–ಕೃಷ್ಣದೇವರಾಯ;
14. ಮಕರವೇಂಠೆ, 1493, ಎರಡನೇ ನರಸಿಂಹ;
15. ಮಗರನಾಡವೇಂಠೆ, 1525–1636, ಕೃಷ್ಣರಾಯ–ವೆಂಕಟಪತಿರಾಯ;
16. ಕೊಪಣವೇಂಠೆ, 1514, ಕೃಷ್ಣರಾಯ;
17. ಬಂಕಾಪುರವೇಂಠೆ, 1527, ಕೃಷ್ಣರಾಯ;
18. ಅರಕೆರೆಯ ವೇಂಠೆ, 1528, ಕೃಷ್ಣರಾಯ;
19. ಸಾದಲಿವೇಂಠೆ, 1537, ಅಚ್ಯುತರಾಯ;
20. ಕೋಗಳಿವೇಂಠೆ, 1551–1780, ಸದಾಶಿವರಾಯ–ತಿಮ್ಮರಾಜಯ್ಯ;
21. ರಾಯದುರ್ಗವೇಂಠೆ (ರಾ), 1554–1626, ಸಬಾಶಿವರಾಯ–ರಾಮರಾಜ;
22. ವುರುವಕೊಂಡ ವೇಂಠೆ, 1556, ಸದಾಶಿವರಾಯ;
23. ಮುಗನಾಡವೇಂಠೆ, 1556, ಸದಾಶಿವರಾಯ;
24. ಹಟ್ಟಣವೇಂಠೆ, 1557, ಸದಾಶಿವರಾಯ;
25. ಕೋಟೆಕೆರೆವೇಂಠೆ, 1559, ಸದಾಶಿವರಾಯ;
26. ವೇಸರಾಲ ವೇಂಠೆ, 1584, ಒಂದನೇ ಶ್ರೀರಂಗದೇವರಾಯ.

ವಿಜಯನಗರ ಸಾಮ್ರಾಜ್ಯದ ಘಟಕಗಳ ಬಗ್ಗೆ ಆಳವಾಗಿ ಅಧ್ಯಯನ ನಡೆಸಿರುವ ಪ್ರಸಿದ್ಧ ಇತಿಹಾಸ ಹಾಗೂ ಶಾಸನತಜ್ಞರಾದ ಪ್ರೊ.ವೈ. ಸುಬ್ಬರಾಯಲು ಅವರು ವೇಂಠೆಯನ್ನು ಕುರಿತು ತಮ್ಮ ಒಂದು ಬರಹದಲ್ಲಿ[3] "ವೇಂಠೆ ಎಂಬುದು ವ್ಯಾಪಕವಾಗಿ ಕರ್ನಾಟಕ ಮತ್ತು ಆಂಧ್ರಭಾಗಗಳಲ್ಲಿ ಕಂಡುಬರುತ್ತದೆ. ಸಾಮಾನ್ಯವಾಗಿ ವೇಂಠೆ ಎಂಬುದು ಮೇಲ್‌ಸ್ತರದ ಆಡಳಿತ ಘಟಕ. ಅದರಲ್ಲಿ ನಾಡು, ಸೀಮೆಗಳು ಅಂತರ್ಗತವಾಗಿರುತ್ತವೆ. ಆದ್ದರಿಂದ ವೇಂಠೆಯನ್ನು 'ರಾಜ್ಯ'ಕ್ಕೆ ಪರ್ಯಾಯವಾಗಿ ತೆಗೆದುಕೊಳ್ಳುವುದರಲ್ಲಿ ತೊಂದರೆ ಏನು ಇಲ್ಲ" ಎಂದು ಅಭಿಪ್ರಾಯಪಟ್ಟಿದ್ದಾರೆ. ವಿಜಯನಗರದ ಅರಸರು ಹಿಂದೆ ಬಳಕೆಯಲ್ಲಿದ್ದ 'ನಾಡು' ಎಂಬುದಕ್ಕೆ ಪರ್ಯಾಯವಾಗಿ 'ಸೀಮೆ' ಎಂಬುದನ್ನು ವ್ಯಾಪಕವಾಗಿ ಬಳಕೆಗೆ ತಂದರು. ಇವರ ಕಾಲದಲ್ಲಿ ವಾಸ್ತವವಾಗಿ ಯಾವುದೇ ಹೊಸ 'ನಾಡು'ಗಳು ತಲೆಯೆತ್ತಲಿಲ್ಲ. ಆಗ್ಗೆ ಇದ್ದ 'ನಾಡು'ಗಳೇ ಕಾಲಾಂತರದಲ್ಲಿ 'ಸೀಮೆ'ಗಳಾಗಿ ರೂಪಾಂತರವಾಗಿರುವುದಕ್ಕೆ ವಿಪುಲ ಆಧಾರಗಳಿವೆ.

ಡಾ. ಎ.ವಿ. ವೆಂಕಟರತ್ನಂ ಅವರು ತಮ್ಮ 'ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರಕಾರ' ಎಂಬ ಕೃತಿಯಲ್ಲಿ[4] "ವೇಂಠೆ ರಾಜ್ಯದೊಳಗಿನ ಅಂತರ್ಭಾಗ, ಹಾಗೆಯೇ ಸೀಮೆ ಅಥವಾ ನಾಡುಗಳು ವೇಂಠೆಯೊಳಗೆ ಅಂತರ್ಗತವಾಗಿರುತ್ತದೆ. 'ವೇಂಠೆ' ಮತ್ತು 'ವಳಿತ'ಗಳು ಅಭಿನ್ನ" ಎಂದಿದ್ದಾರೆ. ವಿಜಯನಗರ ಅರಸರ ಕಾಲದ ಶಾಸನಗಳಲ್ಲಿ ಪ್ರಸಿದ್ಧವಾದ ಅನೇಕ ರಾಜ್ಯಗಳನ್ನು ವೇಂಠೆ ಎಂದೂ ಉಲ್ಲೇಖಿಸಿರುವುದು ಗಮನಿಸಿದರೆ, ಮಾನ್ಯ ವೆಂಕಟರತ್ನಂ ಅವರ ಅಭಿಪ್ರಾಯವು ಸಮರ್ಥನೀಯವಲ್ಲ ಎಂಬುದು ಸರ್ವವೇದ್ಯ.

ಸದ್ಯಕ್ಕೆ ಬೆಳಕು ಕಂಡಿರುವ ವಿಜಯನಗರ ಶಾಸನಗಳಲ್ಲಿ ಸುಮಾರು 26 ವೇಂಠೆಯಗಳು ಶಾಸನೋಕ್ತವಾಗಿರುವುದನ್ನು ಮೇಲೆ ಪಟ್ಟಿಮಾಡಲಾಗಿದೆ. ಅವುಗಳಲ್ಲಿ ಹಲವು ಕೇವಲ ಒಂದು ಬಾರಿ ಮಾತ್ರ ಶಾಸನೋಕ್ತವಾಗಿವೆ. ಅವು ಅನಂತರದಲ್ಲಿ ಶಾಸನಗಳಲ್ಲಿ ಕಂಡುಬರುವುದಿಲ್ಲ. ಈ 26 ವೇಂಠೆಗಳಲ್ಲಿ ಕೆಲವು 'ರಾಜ್ಯ'ದ ಕೇಂದ್ರಗಳಾಗಿದ್ದವು. ಉದಾ: ಆರಗವೇಂಠೆ, ಬಾರಕೂರು ವೇಂಠೆ, ಉಚ್ಚಂಗಿ ವೇಂಠೆ, ಚಂದ್ರಗುತ್ತಿ ವೇಂಠೆ ಇತ್ಯಾದಿ. ಇವು ರಾಜ್ಯದ ಕೇಂದ್ರಗಳಾಗಿಯೂ ವಿಜಯನಗರ ಸಾಮ್ರಾಜ್ಯದ ಆಡಳಿತದಲ್ಲಿ ಪ್ರಧಾನ ಪಾತ್ರ ವಹಿಸಿದ್ದುದು ಸರಿಯಷ್ಟೆ. ಆದರೆ ರಾಜ್ಯಗಳೆಂದು ಹೆಸರು ಪಡೆದಲ್ಲದೆ ವೇಂಠೆಗಳೆನಿಸಿಕೊಂಡಿರಲಿಲ್ಲ. ವಿಜಯನಗರ ಸಾಮ್ರಾಜ್ಯದಲ್ಲಿ 22ಕ್ಕೂ ಅಧಿಕ ಸಂಖ್ಯೆಯ ರಾಜ್ಯಗಳ ಹೆಸರುಗಳು ಕಾಲಾಂತರದಲ್ಲಿ ರೂಪುಗೊಂಡಿರುವುದನ್ನು ಶಾಸನಗಳಿಂದ ತಿಳಿಯುತ್ತದೆ.

ಈ ಹಿನ್ನೆಲೆಯಲ್ಲಿ 'ವೇಂಠೆ' ಎಂಬ ಪದದ ಅರ್ಥವನ್ನು ತಿಳಿಯಲು ಪ್ರಯತ್ನಿಸೋಣ. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟಿನಲ್ಲಿ 'ವೇಂಠೆ' ಎಂಬ ಪದದ ಉಲ್ಲೇಖವೇ ಕಂಡುಬರುವುದಿಲ್ಲ. ಆದರೆ 'ವೇಂಟೆ' ಎಂಬುದಕ್ಕೆ ಬೇಟೆ, ಮೃಗಬೇಟೆ ಎಂಬರ್ಥವನ್ನು ನೀಡಲಾಗಿದೆ. ಕನ್ನಡದಲ್ಲಿ 'ವೆಣ್ಟಣಿಸು' ಎಂಬ ಜ್ಞಾತಿಪದವೊಂದಿದ್ದು[5] ಅದಕ್ಕೆ to encircle; to be set; to cover; to pervade; to go everywhere; to occupy; to be encircled or surrounded, ಎಂಬ ಅರ್ಥಗಳಿರುವುದು ಕಂಡುಬರುತ್ತದೆ. ವೆಣ್ಟಣಿಸು>ವೆಣ್ಟಣ>ವೆಣ್ಟ ಎಂಬುವೇ ವೇಣ್ಠ>ವೇಂಠೆ ಪದದ ಮೂಲವಿದ್ದಿರಬೇಕೆಂದು ಪರಿಭಾವಿಸಿಕೊಂಡರೆ, ಮೇಲೆ ನೀಡಿರುವ ಅರ್ಥಗಳ ಹಿನ್ನೆಲೆಯಲ್ಲಿ ಯಾವುದೇ ಪ್ರದೇಶವನ್ನು ಸುತ್ತುವರಿದು ಆಕ್ರಮಿಸಿಕೊಳ್ಳಲ್ಪಟ್ಟ ಪ್ರದೇಶ ಅದೆಂದು ಅರ್ಥ ಹೊರಡುತ್ತದೆ. ಅಂದರೆ ವಿಜಯನಗರದ ಅರಸರು ತಮ್ಮ ಸಾಮ್ರಾಜ್ಯದ ವಿಸ್ತರಣೆಯ ಸಂದರ್ಭದಲ್ಲಿ, ವೆಂಟಣಿಸಿಕೊಂಡ, ಅದರಲ್ಲೂ ಮೊದಲಿಗೆ ವೆಣ್ಟಣಿಸಿಕೊಂಡ ಸ್ಥಳ-ಪ್ರದೇಶಗಳನ್ನು 'ವೇಂಠೆ'ಯ ಎಂದು ಸಂಕ್ಷಿಪ್ತವಾಗಿ ಕರೆಯುವುದರ ಮೂಲಕ ಗುರುತಿಸಿಕೊಂಡಿದ್ದರೆಂದು ತೋರುತ್ತದೆ.

ವಿಜಯನಗರ ಸಾಮ್ರಾಜ್ಯದ ಆರಂಭಕಾಲದ ಶಾಸನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೋಲಾರ, ಚಿಕ್ಕಮಗಳೂರು ಮತ್ತು ಅದಕ್ಕೆ ಹೊಂದಿಕೊಂಡಿರುವ ಕರಾವಳಿ ಹಾಗೂ ಹಾಸನ ಜಿಲ್ಲಾ ಪ್ರದೇಶಗಳಲ್ಲಿ ಮಾತ್ರ ಕಂಡುಬಂದಿದ್ದು, ಆ ಪ್ರದೇಶಗಳು ಯಾವುದೇ ಘರ್ಷಣೆಯಿಲ್ಲದೆ ವಿಜಯನಗರ ಸಂಸ್ಥಾಪನೆಯಲ್ಲಿ ಒಗ್ಗೂಡಿದ್ದ ಸಂಗತಿ ಗಮನ ಸೆಳೆಯುತ್ತದೆ. ಅಲ್ಲದೆ 'ವೇಂಠೆ' ಎಂದು ಕರೆಯಿಸಿಕೊಂಡಿರುವ ಸ್ಥಳ - ಪ್ರದೇಶಗಳು ಬಹುಮಟ್ಟಿಗೆ ಈ ಪ್ರದೇಶದ ಹೊರಗಿನವಾಗಿರುವುದನ್ನು ಕೂಡ ಗಮನಿಸಬಹುದಾಗಿದೆ. ಲಕ್ಕುಂಡಿವೇಂಠೆ, ಉಚ್ಚಂಗಿವೇಂಠೆ, ಚಂದ್ರಗುತ್ತಿವೇಂಠೆ, ತೊರೆನಾಡುವೇಂಠೆ, ಧಾರವಾಡವೇಂಠೆ, ಬಾರಕೂರುವೇಂಠೆ, ಹದಿನಾಡವೇಂಠೆ, ಮೊದಲಾದವುಗಳನ್ನು ಪ್ರಾಯಶಃ ಮೇಲೆ ಉಲ್ಲೇಖಿಸಿದ ವಿಜಯನಗರ ಸಂಸ್ಥಾಪನೆಗೆ ಕಾರಣರಾದ ಪ್ರದೇಶಗಳ ಸಾಮಂತ-ಮಾಂಡಲಿಕರ ನೆರವಿನಿಂದ ವೆಣ್ಟಣಿಸಿಕೊಂಡ ಪ್ರದೇಶಗಳೇ ಅವಾಗಿದ್ದವೆಂದು ತೋರುತ್ತದೆ. ಅವೆಲ್ಲವೂ ಸಂಗಮ ಅರಸರ ಕಾಲದ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ವೇಂಠೆಗಳಾಗಿರುವುದನ್ನು ಮನಗಾಣಬೇಕಾಗಿದೆ. ಮುಂದೆ ತುಳುವ ಅರಸರ ಕಾಲದಲ್ಲಿಯೂ

ಅನೇಕ ವೇಂಠೆಯಗಳ ಉಲ್ಲೇಖಗಳು ಬಂದಿವೆ. ಉದಾ: ಮಗರನಾಡವೇಂಠೆ, ಕೊಪಣವೇಂಠೆ, ಬಂಕಾಪುರವೇಂಠೆ, ಅರಕೆರೆಯವೇಂಠೆ, ಸಾದಲಿವೇಂಠೆ, ಕೋಗಳಿವೇಂಠೆ, ರಾಯದುರ್ಗವೇಂಠೆ, ಉರುವಕೊಂಡವೇಂಠೆ, ಮುಗನಾಡವೇಂಠೆ, ಕೋಟೆಕೆರೆವೇಂಠೆ, ಮುಂತಾದವು.

ಮೇಲೆ ಉಲ್ಲೇಖಿತ 'ವೇಂಠೆಯ'ಗಳಲ್ಲಿ ಬಹಳಷ್ಟು, ಸಂಗಮರ ಕಾಲದಲ್ಲೇ ವೆಣ್ಟಣೆಗೆ ಒಳಪಟ್ಟವು ಆಗಿರಬಹುದಾದರೂ ಶಾಸನಾಧಾರಗಳಿಲ್ಲ. ಸಂಗಮರ ಆಡಳಿತದ ಅಂತಿಮ ಮತ್ತು ತುಳುವರ ಆಡಳಿತದ ಪೂರ್ವದಲ್ಲಿ, ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯಲ್ಲಿ ಅರಾಜಕತೆ ತಾಂಡವವಾಡುತ್ತಿದ್ದುದರಿಂದ ಅವರ ಸಾಮ್ರಾಜ್ಯದ ಅನೇಕ ಸ್ಥಳ-ಪ್ರದೇಶಗಳಲ್ಲಿ ಆಯಾ ಪ್ರದೇಶದ ಸ್ಥಳೀಯ ಸಾಮಂತ-ಮಾಂಡಲಿಕರು ಪ್ರಬಲಿಸಿ ಅವಿಧೇಯರಾಗಿ ನಡೆದುಕೊಳ್ಳುತ್ತಿದ್ದರೆಂದು ತೋರುತ್ತದೆ. ಅಂತಹ ಸಂದರ್ಭದಲ್ಲಿ ತುಳುವ ವಂಶದ ಶ್ರೀಕೃಷ್ಣದೇವರಾಯನು ಸಾಮ್ರಾಜ್ಯದ ಸಿಂಹಾಸನಾಧಿಪತಿಯಾದ ಮೇಲೆ ತನ್ನ ನಿಷ್ಠುರ ನೆರವಿನೊಂದಿಗೆ ವೆಣ್ಟಣೆ ಕಾರ್ಯವನ್ನು (Operation) ನಡೆಸಿ ಆಡಳಿತಕ್ಕೆ ಒಳಪಡಿಸಿಕೊಂಡ ಕಾರಣದಿಂದಲೂ ಅವನ ಅವಧಿಯಲ್ಲಿ 'ವೇಂಠೆ'ಗಳು ಅಧಿಕ ಸಂಖ್ಯೆಯಲ್ಲಿ ಕಾಣಿಸಿಕೊಳ್ಳಲು ಕಾರಣವಾಗಿರಬೇಕೆಂದು ಊಹಿಸಬಹುದಾಗಿದೆ.

ಒಟ್ಟಾರೆ, ವಿಜಯನಗರ ಸಾಮ್ರಾಜ್ಯದ ಆಡಳಿತದಲ್ಲಿ ಆಡಳಿತ ಘಟಕ ಸೂಚಕವಾಗಿ ಕಂಡುಬರುವ 'ವೇಂಠೆ' ಎಂಬುದು ಅವರ ನಿರ್ದಿಷ್ಟ ಆಡಳಿತ ಘಟಕ ಸೂಚಿಯಾಗಿರಲಿಲ್ಲ. ಆದರೆ ಆ ಪ್ರದೇಶಗಳು ಅವರ ಸಾಮ್ರಾಜ್ಯದಲ್ಲಿ ವಿಲೀನಮಾಡಿಕೊಂಡ ಕಾರಣ ಸೂಚಕವಾಗಿ ಗುರುತುಪಟ್ಟಿ ಹೊಂದಿದ್ದವೆಂದು ಹೇಳಬಹುದಾಗಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

1. 'ಸ್ಥಳ' ಎಂಬುದು ವಿಜಯನಗರ ಅರಸರ ಆಡಳಿತಕ್ಕೆ ವಿಶಿಷ್ಟವಾದುದಾಗಿತ್ತು. ಏಕೆಂದರೆ ಇಲ್ಲಿನ ಪ್ರತಿಯೊಂದು 'ಸ್ಥಳ' ಎಂಬುವ ಆಡಳಿತ ಘಟಕದಲ್ಲಿ ಒಂದಕ್ಕಿಂತ ಹೆಚ್ಚು ಗ್ರಾಮಗಳು ಅಂತರ್ಗತವಾಗಿರುತ್ತಿದ್ದವು. ಸಾಮಾನ್ಯವಾಗಿ ಒಂದು ಸ್ಥಳದಲ್ಲಿ ಸುಮಾರು 7 ರಿಂದ 57 ಗ್ರಾಮಗಳಿದ್ದದ್ದು ಕಂಡುಬಂದಿದೆ. [*ಎಪಿಗ್ರಾಫಿಯಾ ಕರ್ಣಾಟಿಕ,* ಸಂ. IX (ರೈಸ್ ಆವೃತ್ತಿ), ಹಿರಿಯೂರು 88, ಮಸ್ಕಲ್ಲು, 1589] ಆದರೆ ಸಾಮಾನ್ಯವಾಗಿ ಏಳು ಅಥವಾ ಎಂಟು ಗ್ರಾಮಗಳನ್ನು ಒಳಗೊಂಡಿರುವಂತಹದೇ 'ಸ್ಥಳ'ವೆನ್ನಬಹುದು. 'ಅಷ್ಟಗ್ರಾಮಸೀಮಾ' ಎಂಬುದು ಸ್ಥಳದ ಪರಿಮಿತಿಗೆ ಸಂಬಂಧಪಟ್ಟಿರಬಹುದು. ಸ್ಥಳಕ್ಕೆ ಪರ್ಯಾಯವಾಗಿ 'ಸಂಮತು' ಎಂಬ ಪ್ರಯೋಗ ವಿಶೇಷವಾಗಿ ಅರವೀಡು ಅರಸರ ಕಾಲದ ಶಾಸನಗಳಲ್ಲಿ ಕಂಡುಬಂದಿದೆ. 'ಸ್ಥಳ' ಎಂಬುದು ಬಹುಮಟ್ಟಿಗೆ ಇಂದಿನ 'Firka'ದೊಂದಿಗೆ ಸರಿಹೊಂದುತ್ತದೆ.

2. ಡಾ. ಪಿ.ವಿ. ಕೃಷ್ಣಮೂರ್ತಿ, "ವಿಜಯನಗರ ಸಾಮ್ರಾಜ್ಯದ ಆಡಳಿತ ಘಟಕಗಳಲ್ಲಿ 'ವಳಿತ'ದ ಸ್ಥಾನ – ಒಂದು ಪರಿಶೀಲನೆ", *ವಿಜಯನಗರ ಅಧ್ಯಯನ,* ಸಂ. 13, ಮತ್ತು "ವಿಜಯನಗರ ಸಾಮ್ರಾಜ್ಯದ ಶಾಸನಗಳಲ್ಲಿ 'ಚಾವಡಿ' ಒಂದು ಪರಿಶೀಲನೆ", *ವಿಜಯನಗರ ಅಧ್ಯಯನ,* ಸಂ. 14, ಮೈಸೂರು, 2008 ಮತ್ತು 2010.

3. Prof. Y. Subbarayalu, *Mapping the Administrative Divisions of the Vijayanagar State,* Lecture Series-8, ICHR, Southern Regional Centre, Bangalore, p. 7.

4. ಡಾ. ಎ.ವಿ. ವೆಂಕಟರತ್ನಂ, *ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರಕಾರ,* ಮೈಸೂರು, 1974, ಪು. 23.

5. Kittel's *Kannada-English Dictionary,* University of Madras, Revised & Enlarged by Prof. M. Mariappa Bhat, Vol. IV, p. 1505, Madras, 1971.

24

ವಿಜಯನಗರ ಕಾಲದ ಕೆಲವು ಸುಂಕಗಳು ಮತ್ತು ತೆರಿಗೆಗಳು

ಡಾ॥ ಬಿ. ಆರ್. ಭಾರತೀ

ಯಾವುದೇ ರಾಜ್ಯದ ಆಡಳಿತವು ಸುಸೂತ್ರವಾಗಿ ನಡೆಯಬೇಕೆಂದರೆ[1] ಅದರ ಆದಾಯವು ಬಲವಾಗಿರಬೇಕು. ಈ ಆದಾಯಕ್ಕೆ ಮೂಲ ಆಕರ ಪ್ರಜೆಗಳ ಮೇಲೆ ವಿಧಿಸಲ್ಪಡುತ್ತಿದ್ದ ಹಲವಾರು ಬಗೆಯ ತೆರಿಗೆಗಳು. ತೆರಿಗೆಗಳ ಪರಿಕಲ್ಪನೆಯು ಸಾಮ್ರಾಜ್ಯದ ಪರಿಕಲ್ಪನೆಯಷ್ಟೇ ಪ್ರಾಚೀನವಾದುದು. ಆದರೆ ಕಾಲಕ್ಕನುಗುಣವಾಗಿ ಸಮಕಾಲೀನ ಆವಶ್ಯಕತೆಗಳಿಗೆ ಪೂರಕವಾಗಿ ತೆರಿಗೆಗಳ ಪ್ರಮಾಣ ಸ್ವರೂಪಗಳಲ್ಲಿ ಬದಲಾವಣೆಗಳಾಗುತ್ತಿದ್ದವು. ಇದೇ ರೀತಿ ವಿಜಯನಗರ ಕಾಲದಲ್ಲಿ ಹಲವಾರು ಹೊಸ ತೆರಿಗೆಗಳು ಪರಿಚಯಿಸಲ್ಪಟ್ಟವು. ಇದರೊಂದಿಗೆ ಆವರೆಗೂ ಪರಿಚಿತವಿದ್ದ ತೆರಿಗೆಗಳೂ ಮುಂದುವರಿದವು. ಇದಕ್ಕೆ ಹಲವಾರು ಕಾರಣಗಳಿವೆ. ಅವುಗಳಲ್ಲಿ ಮುಖ್ಯವಾಗಿ ಸಾಮ್ರಾಜ್ಯದ ವೈಶಾಲ್ಯ ಮತ್ತು ರಾಜಕೀಯ ಪರಿಸ್ಥಿತಿಗಳೆಂದರೆ ಉತ್ಪ್ರೇಕ್ಷೆಯಲ್ಲ. ಸ್ವಮತ ಸ್ವಧರ್ಮಗಳ ರಕ್ಷಣೆಯು ಅತ್ಯಗತ್ಯವಾಗಿತ್ತು. ಇವುಗಳಿಗಾಗಿ ಅಪಾರವಾದ ಹಣ ವ್ಯಯಮಾಡಬೇಕಾಗುತ್ತಿತ್ತು. ಇದಕ್ಕಾಗಿ ಹಲವು ಕೇಂದ್ರಗಳಲ್ಲಿ ಅಭಿವೃದ್ಧಿಯನ್ನು ಕಾಣಬೇಕಾಗಿತ್ತು. ಈ ಕಾರಣಕ್ಕೆ ಹಲವು ಉದ್ಯಮಗಳ ಬೆಳವಣಿಗೆಗೆ ದೊರೆಗಳು ಪ್ರೋತ್ಸಾಹವನ್ನಿತ್ತಿದ್ದರು. ಈ ಉದ್ಯಮಗಳ ಮೇಲಿನ ಮತ್ತು ಉತ್ಪನ್ನಗಳ ಮೇಲಿನ ತೆರಿಗೆಗಳು ರಾಜನ ಬೊಕ್ಕಸವನ್ನು ಶ್ರೀಮಂತಗೊಳಿಸಿತ್ತು. ಆ ಕಾಲದಲ್ಲಿ ಹೈಂದವಮತ ಸಂರಕ್ಷಣೆಯು ಇವರ ಮುಖ್ಯೋದ್ದೇಶವಾಗಿತ್ತೆಂದು ವಿದ್ವಾಂಸರಿಗೆ ತಿಳಿದ ಸಂಗತಿಯೇ ಆಗಿದೆ. ಹೀಗಾಗಿ ರಾಜ್ಯದಾದ್ಯಂತ ದೇವಾಲಯ ನಿರ್ಮಾಣಗಳು, ಅಲ್ಲಿ ನಡೆಸುವಂತಹ ಚಟುವಟಿಕೆಗಳು ಹೆಚ್ಚಿದವು. ಹೀಗಾಗಿ ಅವುಗಳ ಪೋಷಣೆಗೂ ತೆರಿಗೆಯನ್ನು ವಿಧಿಸಲಾಗಿತ್ತು. ಪ್ರಸ್ತುತ ಲೇಖನದಲ್ಲಿ ಕೆಲವು ತೆರಿಗೆಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ವಿಜಯನಗರ ಕಾಲದಲ್ಲಿ ಶಾಸನದಲ್ಲಿ ಕಂಡುಬರುವ ಸುಂಕಗಳು ಹೀಗಿವೆ: ಅಡಕೆ ಸುಂಕ, ಸ್ಥಳ ಸುಂಕ, ಮನೆವಣ, ಕಟಣಸುಂಕ, ಸಂತೆಸುಂಕ, ಹಸಿರುವಾಣಿ ಸುಂಕ, ಮಲಿಗೆಯ ಸುಂಕ, ಕಡಾಯ, ಒಕಲುಸುಂಕ, ಮದುವೆಯ ಸುಂಕ, ತಲೆವೊಜೀ ಸುಂಕ, ಪರಿಸುಂಕ, ಪಲಕಿ ಕೊಡುಗೆ, ಕಬ್ಬಿನ ಸುಂಕ, ವೊಜತರುವ ರೊಕ, ತಳವಾಜಿಕೆ ಸುಂಕ, ಸುತ್ತಿಗುತ್ತಿಗೆ, ಬೆಡುಗೆ, ಜೋಡಿಬಿರಾಡ ಮುಂತಾದವುಗಳು. ವಸ್ತು, ವೃತ್ತಿ, ಮನೆ, ಸ್ಥಳ ಮುಂತಾದವುಗಳ ಮೇಲೆ ಹಾಕುತ್ತಿದ್ದ ತೆರಿಗೆಗಳನ್ನು ವಸೂಲು ಮಾಡಲು ಸಂಬಂಧಿಸಿದ ಅಧಿಕಾರಿಗಳು ಇರುತ್ತಿದ್ದರು. ಸುಂಕದ ಕಟ್ಟೆಗಳಲ್ಲಿ ಸುಂಕದಧಿಕಾರಿಗಳು ತೆರಿಗೆಗಳನ್ನು ಸಂಗ್ರಹಿಸುತ್ತಿದ್ದರು.

ಸೀಗೆನಾಯಕನಹಳ್ಳಿಯ[2] ಶಾಸನದಲ್ಲಿ ಮಹಾರಾಜ ಕೃಷ್ಣರಾಯ ಮಹಾರಾಯನು ಶ್ರೀವಿರೂಪಾಕ್ಷ ದೇವರ ಅಮೃತಪಡಿಗೆ, ಅಂಗರಂಗಭೋಗಗಳಿಗೆ, ವಿವಿಧ ಉತ್ಸವಗಳಿಗೆ, ಮಹಾನೈವೇದ್ಯಕ್ಕೆ ತನ್ನ ಪಟ್ಟಾಭಿಷೇಕದಲ್ಲಿ ಸಿಂಹಾಸನದಲ್ಲಿ ಕುಳಿತು ಸಿಂಗೆನಾಯಕನಹಳ್ಳಿಯನ್ನು ದಾನ ಮಾಡಿದನು. ಅಲ್ಲಿನ ಕಾಡಾರಂಭ, ನೀರಾರಂಭ, ಕೊಟೆದ ರೊಕ, ಆದಾಯ, ಭತ್ತಾದಾಯ, ಸುಂಕಕಟ್ಟೆ, ತಳವಾರಿಕೆ, ಸಾಮ್ಯ, ಜೋಡಿ ಬಿರಾಡ ಮುಂತಾದವುಗಳನ್ನು ಸೇರಿಸಿ ದಾನ ನೀಡಲಾಗಿದೆ. ಬಿರಾಡ ಎಂದರೆ ಆಮದು ವಸ್ತುಗಳ ಮೇಲೆ ವಿಧಿಸುವ ಸುಂಕ, ಜೋಡಿ ಬಿರಾಡ ಎಂದರೆ ಬಹುಶಃ ವರ್ತಕರು ತರುವ ಮತ್ತು ತೆಗೆದುಕೊಂಡು ಹೋಗುವ ಎರಡೂ ಕಡೆಯ ಸುಂಕವನ್ನು ಒಮ್ಮೆಗೇ ಸಂಗ್ರಹಿಸುವುದಿರಬಹುದು.

ಗುಂಡ್ಲುಪೇಟೆ ತಾಲ್ಲೂಕು ತ್ರಿಯಂಬಕಪುರದ[2] ಶಾಸನದಲ್ಲಿ 'ತೆರಕಣಾಂಬೆಯ ಸೀಮೆಯ ಒಳಗೆ ತ್ರಿಯಂಬಕ ದೇವರಿಗೆ ಸರ್ವಮಾನ್ಯವಾಗಿ ಹಲವು ಗ್ರಾಮಗಳಿಂದ ತೆರಕಣಾಂಬೆಯ ಭಂಡಾರಕ್ಕೆ ಸಂದು ಬರುತಿದ ತೆಜೆಗೆಗಳು ಬೆಟ್ಟದ ಕಾವಲು ಬೋಗಾಜಿದೆಜೆಗೆ ಗಣಾಚಾರದೆರಿಗೆ ಕೋಜುಗಳ ತೆಜೆಗೆ ದಾಸುಗಳ ತೆರಿಗೆ ಆಹದೆಜೆಗೆ ಅಸಗರ ತೆಜೆಗೆ, ನಾಯಿಂದರೆ ತೆಜೆಗೆ ಕುಂಭಾರ ತೆಜೆಗೆ ಗಾಣದ ಸುಂಕ ಉಪಿಲಿಗ ಕಾವಲಿಸುಂಕ ಮಗ್ಗಸುಂಕ ಮಾದಾಜಿಕೆ ಸಿಯೂರ ವರ್ತನೆ ಮುಂತಾದ ತೆರಕಣಾಂಬೆಗೆ ಸಂದುಬರುತಿದ ಏನುಂಬಾದಾ ಸರ್ವತೆಜೆಗೆಯನು ಶ್ರೀವೀರಪ್ರತಾಪ ಕ್ರುಷ್ಣರಾಯರಿಗೆ ಪುಣ್ಯವಾಗಬೇಕೆಂದು ಕ್ರುಷ್ಣರಾಯರ ನಿರೂಪದಿಂದ ರಾಚಿರಾಜಯಗಳ ಸಾಳುವ ಗೋವಿಂದರಾಜಯಗಳು ತ್ರಿಯಂಬಕದೇವರಿಗೆ ಕರ್ಪೂರವೇಳೆಯ ಸಲುವಹಾಗೆ ಯೀ ಹೊಂನನು ತೆರಕಣಾಂಬೆಯ ಲೆಕ್ಕದೊಳಗೆ ಕುಳವನು ತಜೆಸಿ ಧಾರೆಯನೆಜೆದುಕೊಟ್ಟ' ಎಂದು ಶಾಸನವು ಉಲ್ಲೇಖಿಸಿದೆ. ಇದೇ ಶಾಸನದ ಪ್ರತಿ ಕೋಡಿಹಳ್ಳಿಯಲ್ಲಿದೆ.[3] ಇದರಲ್ಲಿ 'ವುಪಿಗೆ ಕಾವಲಿಸುಂಕ', 'ಕುಂಜನಕಾವಲಿಸುಂಕ' ಎನ್ನುವ ಇನ್ನು ಎರಡು ಸುಂಕಗಳ ಉಲ್ಲೇಖವಿದೆ.

ಮೇಲಿನ ಶಾಸನದಲ್ಲಿ ಉಲ್ಲೇಖಿಸಲಾಗಿರುವ ತೆರಿಗೆಗಳಲ್ಲಿ ಬೆಟ್ಟದ ಕಾವಲು ತೆರಿಗೆಯೆಂದರೆ ಬೆಟ್ಟದ ಬಳಿ ಇರುವ ದನ ಮೇಯುವ ಸ್ಥಳಕ್ಕೆ ಅಥವಾ ಕುರುಚಲು ಕಾಡಿಗೆ ಹಾಕುತ್ತಿದ್ದುದು. ಬೋಗಾಜಿನೆಂದರೆ ಲೋಹದ ಕೆಲಸ ಮಾಡುವ ಲೋಹಕಾರ ಅಥವಾ ಕಂಚುಗಾರನಾಗಿದ್ದು ಬಹುಶಃ ಈತನ ವೃತ್ತಿಯ ಮೇಲೆ ಹಾಕುತ್ತಿದ್ದ ತೆರಿಗೆಯ ಬೋಗಾಜಿ ತೆರಿಗೆಯಾಗಿರಬಹುದು. ಆಹದೆಜೆಗೆಯು ಆಹಳದೆರಿಗೆಯಾಗಿದ್ದು, ಇದನ್ನು ಕಮ್ಮಾರರಿಗೆ ಹಾಕಲಾಗುತ್ತಿತ್ತು. ಆಹಳ ಎಂದರೆ ಕಮ್ಮಾರಿಕೆ ಎಂದರ್ಥ. ಅಸಗರ ತೆಜೆಗೆಯು ಅಗಸರ ಅಥವಾ ಮಡಿವಾಳರ ಮೇಲೆ ಹಾಕುತ್ತಿದ್ದ ಸುಂಕವಾಗಿದೆ. ನಾಯಿಂದರ ತೆರಿಗೆಯನ್ನು ಕ್ಷೌರಿಕರ ಮೇಲೆ ಹಾಕಲಾಗುತ್ತಿತ್ತು. ಕುಂಬಾರದೆಜೆಗೆಯು ಹೆಸರೇ ಹೇಳುವಂತೆ ಕುಂಬಾರರ ಮೇಲೆ ವಿಧಿಸುತ್ತಿದ್ದ ತೆರಿಗೆಯಾಗಿದೆ. ಉಪಿಲಿಗ ಸುಂಕ ಅಥವಾ ಉಪಿನ ಕಾವಲಿಸುಂಕವು ಉಪ್ಪಿನ ಮಾಳದ ಮೇಲೆ ಹಾಕುತ್ತಿದ್ದ ಸುಂಕವಾಗಿದೆ. ಗಾಣದ ಸುಂಕವು ಗಾಣವನ್ನು ಉಪಯೋಗಿಸಿ ಕೆಲಸ ಮಾಡುವವರಿಗೆ ಅವರ ಬಳಿ ಇರುವ ಗಾಣದ ಮೇಲೆ ಹಾಕುತ್ತಿದ್ದ ಸುಂಕವಾಗಿದೆ. ಇದೇ ರೀತಿ ಮಗ್ಗದೆರೆಯು ನೇಯ್ಗೆಯಂತ್ರದ ಮೇಲೆ ವಿಧಿಸುತ್ತಿದ್ದ ಸುಂಕವಾದರೆ, ಮಾದಾಜಿಕೆಯು ಮಾದಿಗರು ನೀಡುತ್ತಿದ್ದ ಸುಂಕವಾಗಿದೆ. ಈ ಶಾಸನದಲ್ಲಿ ಹೇಳಿರುವ ಗಣಾಚಾರ ತೆರಿಗೆಯು ಯಾವ ಬಗೆಯ ಸುಂಕವೋ ತಿಳಿಯುವುದಿಲ್ಲ. ಹಾಗೆಯೇ ಕೋಜುಗಳ ತೆರಿಗೆಯ ಪ್ರಸ್ತಾಪವಿದೆ. ವಿಜಯನಗರ ಕಾಲದಲ್ಲಿ ಕೋಜಾಗಳ ಅಥವಾ ನಪುಂಸಕರ ಸಂಖ್ಯೆಯು ಹೆಚ್ಚಿದ್ದುದರಿಂದ ಅವರೇನಾದರೂ ತೆರಿಗೆ ನೀಡಬೇಕಾಗಿತ್ತೇ ಅಥವಾ ಇದು ಬೇರೆ ಯಾವುದಾದರೂ ತೆರಿಗೆಯೇ ಸ್ಪಷ್ಟವಾಗುವುದಿಲ್ಲ. ದಾಸುಗಳ ತೆರಿಗೆ ಮತ್ತು ಕುಂಜನ ಕಾವಲಿ ಸುಂಕಗಳನ್ನು ಯಾವುದರ ಮೇಲೆ ವಿಧಿಸುತ್ತಿದ್ದರೋ ತಿಳಿಯದು.

ಬೇರಂಬಾಡಿ[4] ಶಾಸನದಲ್ಲಿ 'ತೆರಕಣಾಂಬಿಯ ಹೊಂನಪ ಗಣಾಚಾರಿಗಳಿಗೆ ಕೂಟಾದತ ಕಾಳಾಂಚಿಯಾಗಿ ಕೊಟ ಕೊಡುಗೆ' ಎಂದಿದೆ. ಶಿವಪುರ[5]ದ ಶಾಸನದಲ್ಲಿ 'ಜಗಬೇಂಟೆಕಾರ ಸೋಮರಾಯ ವಡೆಯರ ಕೊಮಾರ

ದೇವರಾಜ ಒಡೆಯರು ಸುಜನಸುದ್ಧ ಶಿವಾಚಾರಸಂಪಂನರುಮಪ್ಪ ನಂಮ ಶ್ರೀಗುರು ರುದ್ರಾಕ್ಷಿ ಒಡೆಯರ ದಿವ್ಯಪಾದಂಗಳಿಗೆ ನಾಲು ಶರಣಾರ್ತ್ಥಿ ಮಾಡಿ ನಮಗೆ ರಾಯರು ಊರ ಬಳಿಯಲಿ ಕೊಟ್ಟ ಕುಡುಗನಾಡ ದೆರಕಣಾಂಬಿಯ ಸ್ಥಳದ ಗೊಂದಿಗನಹಳ್ಳಿಯ ಗ್ರಾಮದ . . . . . . ಆ ಗ್ರಾಮದ ಸಲುವ ಗದ್ದೆ ಬೆದ್ದಲು ತೋಟ ತುಡಿಕೆ ತಿವಳಿಮಾಳಿದೆಜ಼ಿ ಕುಂಬಾರದೆಜ಼ಿ ವಾರುದಳವಾಜಿಕೆ ಬೆಟ್ಟದಕಾವಲು ಸುಂಕ ಅನಾಮ ಅಂದಜಾವಿಕೆ ಮಾದುರಕೆ ಗಣಾಚಾರ'ಗಳನ್ನು ದಾನ ಮಾಡಿದ ಉಲ್ಲೇಖವಿದೆ. ಇಲ್ಲಿ ಉಲ್ಲೇಖಿಸಿರುವ ತಿವಳಿಮಾಳಿದೆಜ಼ಿ, ವಾರುದಳವಜಿಕೆ, ಅನಾಮ, ಅಂದಜಾವಿಕೆಗಳ ಬಗ್ಗೆ ತಿಳಿಯುವುದಿಲ್ಲ.

ಕ್ರಿ.ಶ. ೧೫೬೪ರ ಮಸಹಳ್ಳಿ[6]ಯ ಶಾಸನದಲ್ಲಿ ವಿಜಯಪುರಕ್ಕೆ ಸಲುವ ಮಸಹಳಿಗ್ರಾಮ ಕಾಲುವಳಿ ಮಙುಬೌಳೆಪುರ ೧ ಕೆಂಗಹಳುಪುರ ೧ ಯಿ ಮೂರು ಗ್ರಾಮವನು ನಿಮಗೆ ಸುತ್ತಿಗುತ್ತಿಗೆಯಾಗಿ ಕಲುಪಟೆಯಾಗಿ ಕೊಟೆವಾಗಿ ಯೀ ಮೞು ಗ್ರಾಮದ ಚತುಸಿಮೆವೊಳಗುಳ ಗದೆ ಬೆದಲು ತೋಟ ಆಡುಸುಂಕ ಯೇಸುಂಟಾದ ಸಕಲ ಆದಾಯವನು ಅನುಭವಿಸಿಕೊಂಡು ಬರುವುದಕ್ಕಾಗಿ ರಾಮರಾಜಮಹಾಅರಸುಗಳ ನಿರೂಪದಿಂದ ರುಸ್ತುಂಜಿಖಾನ್ ವೊಡೆಯರು ಕೊದತಿಯ ಹೊಂನ ಹಲಗೆವೊಡೆರೊಗೆ' ಕೊಟ್ಟುದ್ದನ್ನು ತಿಳಿಸುತ್ತದೆ. ಸುತ್ತಿಗುತ್ತಿಗೆಯೆಂಬುದು ವರ್ಷಕ್ಕೊಮ್ಮೆ ನೀಡಬೇಕಾದ ನಿಗದಿಯಾದ ಗುತ್ತಿಗೆಯ ಹಣವಾಗಿದೆ. ಇದು ಶ್ರೋತ್ರೀಯ ಗುತ್ತಗೆ ಎಂಬ ಪದದ ಮೂಲರೂಪವಾಗಿದೆ. ವೇದಾಧ್ಯಯನ ಮಾಡಿದ ಬ್ರಾಹ್ಮಣರಿಗೆ ತೆರಿಗೆ ಇಲ್ಲದಂತೆ ಕೊಟ್ಟ ಭೂಮಿಯ ಗೊತ್ತುವಳಿಯಾಗಿದೆ. ಪ್ರಸ್ತುತ ಶಾಸನದಲ್ಲಿ ಸುತ್ತಿಗುತ್ತಿಗೆಯಾಗಿ ೪೦ ಗದಾಣ್ಯವು ನಿಗದಿಯಾಗಿದೆ. ಇದು ಕಾಣಿಕೆ ಮತ್ತು ಬೆಡಿಗೆಗಳಿಂದ ಮುಕ್ತವಾಗಿದೆ ಎಂದು ಹೇಳಲಾಗಿದೆ. ಕಾಣಿಕೆ ಎಂಬುದು ಒಂದು ಚಿಕ್ಕ ನಾಣ್ಯವಾಗಿದ್ದು ಪಣದ 1/64 ಭಾಗವಾಗಿದೆ. ಇದು ರಾಜರಿಗೆ, ಅಧಿಕಾರಿಗಳಿಗೆ ನೀಡುವ ಉಡುಗೊರೆಯಾಗಿದೆ. ಬಿಡಿಗೆ ಬಹುಶಃ ಬೆಡುಗೆಯಾಗಿರಬಹುದು. ಬೆಡುಗೆಯೆಂದರೆ ಭೂಮಿಯ ಮೇಲೆ ಹಾಕುವ ಸಾಂಕೇತಿಕ ತೆರಿಗೆಯಾಗಿದೆ.

ಕ್ರಿ.ಶ. 1372ರ ಗುಂಡ್ಲುಪೇಟೆ[7] ಶಾಸನದಲ್ಲಿ 'ಶ್ರೀ ವೀರಬುಕ್ಕಣ್ಣವೊಡೆಯರ ಕುಮಾರ ಚಿಕ್ಕಪಂಪಣ್ಣವೊಡೆಯರು ಪ್ರಿಥ್ವಿರಾಜ್ಯಂಗೆಯ್ಯುತ್ತಿದ್ದಲ್ಲಿ ಗ್ರಾಮಾಧಿದೆಯ್ವವಾಗಿಹ ರಾಮನಾಥದೇವರ ಮಾಡಿದ ಧರ್ಮದ ಕ್ರಮವೆಂತೆಂದಡೆ ಆ ಪಾತ್ರಭೋಗಕ್ಕೆ ಪ್ರತಿ ವರುಷದಲ್ಲಿ ಕೊಡುವ ಗ ೩೦ಕ್ಕೆ ಮಾಡಿದ ನಿರ್ನ್ನಯ' ಎಂದು ಹೇಳಿ 'ಬಾರಿಯ್ಹೂರ ಶೂದ್ರರಲ್ಲಿ ಕಟ್ಟಿದ ಏರಿಂಗೆ ವ ೧ ಉಳಿದ . . ನು ಪ್ರಜೆಗಳು ಎಂನವರುತಂಮವರೆಂದೆನದೆ ವೊಕ್ಕಲಿಗೆ ವ ॥ ಗದ್ದೆಯಲಿ ಪ್ರತಿಭೋಗಕ್ಕೆ ಖಂಡುಗಕ್ಕೆ ಕೊ . . . . . ಗ ೩೦ ಮುಂ ಕಂದಾಯವಾಗಿ ನಡೆಸಿಕ್ಕೊಡುತ ಬಹೆಯ್" ಎನ್ನಲಾಗಿದೆ. ಇಲ್ಲಿ ವಿಜಯಾಪುರದ ಅಗ್ರಹಾರದ ಮಹಾಜನಗಳು ರಾಮನಾಥ ದೇವಾಲಯದ ಪಾತ್ರಭೋಗಕ್ಕಾಗಿ (ನರ್ತಕಿಯರ ಸೇವೆ) ೩೦ ಗದ್ಯಾಣಗಳನ್ನು ದಾನ ನೀಡಲಾಗಿದ್ದು ಇದರಲ್ಲಿ ಪ್ರತಿಯೊಬ್ಬರೂ ಏರಿಗೆ ಒಂದು ವರಹ ಒಕ್ಕಲಿನವರಿಗೆ ಅರ್ಧವರಹ ಎಂದು ಧಾನ್ಯದ ರೂಪದಲ್ಲಿ ಕೊಡಲು ತೀರ್ಮಾನಿಸಲಾಗಿದೆ. ಇದನ್ನು ಕಂದಾಯವೆಂದೇ ಪರಿಗಣಿಸಿದ್ದರು ಎಂಬುದು ವಿಶೇಷ. ಆದ್ದರಿಂದ ರಂಗಭೋಗದ ಪ್ರಮುಖ ಅಂಗವಾಗಿದ್ದ ಪಾತ್ರದವರ ಪೋಷಣೆಯನ್ನು ದೇವಾಲಯದವರು ಅಥವಾ ಆ ಸ್ಥಳದ ಜನರು ನಿರ್ವಹಿಸುತ್ತಿದ್ದರೆಂದು ಊಹಿಸಬಹುದಾಗಿದೆ. ಇದಕ್ಕೆ ಪೂರಕವಾಗಿ ಇದೇ ಊರಿನ ಇನ್ನೊಂದು ಶಾಸನದಲ್ಲಿ[8] 'ಪಂಚಾಳ ಹಟಾಲಕೋಟೆ, ತಿರುಕಣಂಬೆ ನಲುಉೂರು ಬಾಗೂರು ಇ ನಾಲ್ಕು ಆಹಳದ ಕಂಚಗಾಜಿರು ವೊಳಗದ ಸಮಸ್ತ ವೀರಪಂಚಾಳರು . . . . ಪಾತ್ರದ ಕೇತವ್ವೆಯು ಜೀವಿತಕ್ಕೆ ಪ್ರತಿಗ್ರಾಮಕ್ಕೆ ವರ್ಷಂಪ್ರತಿ ಬಡಗಿಗಳು '೧' ಅಕ್ಕಸಾಲಿಗರು, '೧' ಕಂಚಗಾರರು ಆಹಳಕ್ಕೆ '॥' ಇ ಪ್ರಕಾರದಲ್ಲೇ ಪ್ರತಿ ವರುಷ ಕೊಟ್ಟು' ಎಂದಿದೆ. ವಿಶೇಷವೆಂದರೆ ಇದನ್ನು ಮಾಡದವರು 'ಪಂಚಾಳಕ್ಕೆ ಹೊರಗು ಆಹಳಕ್ಕೆ ಹೊರಗು

ಸಮಯಕ್ಕೆ ಊ ನಾಡಿಗೂ ಹೊಜಿಗು' ಎನ್ನುವ ಎಚ್ಚರಿಕೆಯನ್ನು ನೀಡಿರುವುದರಿಂದ ಪಾತ್ರದವರ ಪೋಷಣೆಯ ಜವಾಬ್ದಾರಿ ಪ್ರಜೆಗಳದಾಗಿತ್ತು ಎನ್ನುವುದು ಸ್ಪಷ್ಟವಾಗುತ್ತದೆ. ಕೇತವ್ವೆ ಎಂಬುವಳ ಜೀವನ ನಿರ್ವಹಣೆಯ ಜವಾಬ್ದಾರಿಯನ್ನು ಹೊತ್ತರೂ ಆಕೆ ಕೂಡ ಅಲ್ಲಿನ ರಾಮನಾಥ ದೇವಾಲಯಕ್ಕೆ ಮತ್ತು ಅಲ್ಲಿನ ಕೆಲವು ನಿಯಮಗಳಿಗೆ ಬದ್ಧರಾಗಿರಬೇಕಾಗಿತ್ತು ಎನ್ನುವ ವಿಚಾರವೂ ಗಮನಾರ್ಹ. ಪಾತ್ರದವರಿಗೆ ಮತ್ತು ಕಲಾವಿದರಿಗೆ ನೀಡುವ ದಾನವನ್ನು ಪಾತ್ರಭೋಗ ದಾನವೆಂದು ಕರೆಯಲಾಗುತ್ತಿತ್ತು. ಇವರಿಗೂ ಸುಂಕಗಳನ್ನು ವಿಧಿಸಲಾಗುತ್ತಿತ್ತು ಎಂದು ತಿಳಿದುಬರುತ್ತದೆ.

ಕ್ರಿ.ಶ. 1513ರ ಕಡೇರಾಂಪುರ[9] ಶಾಸನದಲ್ಲಿ ಕೃಷ್ಣದೇವರಾಯನು ತಂದೆ ನರಸಣ್ಣನಾಯಕ ವೊಡೆಯರಿಗೆ ಮತ್ತು ತಾಯಿ ನಾಗಾಜಿದೇವಿ ಅಮ್ಮನವರಿಗೆ ಪುಣ್ಯವಾಗಲಿ ಎಂದು ಪ್ರಸನ್ನ ವಿರೂಪಾಕ್ಷ ದೇವರಿಗೆ ಕನ್ನಿಕಿಯ ಕಟ್ಟೆಯನ್ನು ದಾನ ನೀಡಿದ್ದಾನೆ. 'ಹುಟ್ಟಿದ ರೊಕ್ಕ ಆದಾಯ ಭತ ಆದಾಯ ತಳವಾರಿಕೆ ಸುಂಕ ಸಾಮ್ಯ ಜೋಡಿ ವಿರಾಡ ಕಟ್ಟೆ ರೊಕ್ಕ ಯೇನುಂಟಾದ ಆದಯವನೂ ಸರ್ವಮಾನ್ಯವಾಗಿ ನಡೆವ ಮರ್ಯಾದೆ'ಯಲ್ಲಿ ಕೊಡಬೇಕೆಂದು ಹೇಳಿದೆ. ಹಂಪಿಯ ಎರಡು ಮೂರು ಶಾಸನಗಳಲ್ಲಿ ಮತ್ತು ಬಂಡಿಹರ್ಲಾಪುರದ ಶಾಸನದಲ್ಲೂ ತಳವಾರಿಕೆ ಸುಂಕದ ಬಗ್ಗೆ ಮಾಹಿತಿಯಿದೆ.

ಮದುವೆಯ ಸುಂಕವನ್ನು ಎಲ್ಲ ವರ್ಣಗಳವರೂ ನೀಡಬೇಕಾಗಿತ್ತು. ಕೃಷ್ಣದೇವರಾಯನು ಮದುವೆಯ ಸುಂಕವನ್ನು ರದ್ದು ಮಾಡಿದ ಉಲ್ಲೇಖ ಕ್ರಿ.ಶ. 1510ರ ಯಾಳ್ಪಿ[10]ಯ ತ್ರುಟಿತ ಶಾಸನದಲ್ಲಿ ಕೃಷ್ಣದೇವರಾಯನಿಗೆ ಒಳಿತಾಗಬೇಕೆಂದು ಯಳಪೆ ಸೀಮೆಯ ಮದುವೆಯ ಸುಂಕವನ್ನು ಬಿಟ್ಟುಕೊಡುತ್ತಾನೆ. ದೊಡ್ಡಮಾಲೂರು[11] 'ತಿಂಮಪುರ ಗಂಗನಾಯನಿ ಕೊಡಕು ಚಿಟ್ಟಣ . . . . . ಬಾಲ . . . . ತಾತನ ಕೊಡಕು ಯೆಟ್ಲಿಗೊಳ ಕಸವನಿಕೊಡಕು ಬಸವಪಯ್ಯಾ ಮೂಗರು ಪ್ರಧಾನ ತಿಂಮದಾಸಯ್ಯ ಆದಪ್ಪನಾಯಡು ರಾಯಲಕು ಬಿಂನಪಂಚೇಸಿ ಪೆಂಡ್ಲಿಸುಂಕ ಸರ್ವ್ವಮಾಂ, ಸಾಮ್ಯಯಿಚ್ಚಿನ ಧರ್ಮ್ಮಶಾಸನ' ಎಂದು ತೆಲುಗಿನಲ್ಲಿದೆ. ಕೃಷ್ಣದೇವರಾಯನ ಬಳಿ ಬಿನ್ನಹವನ್ನು ಮಾಡಿ ಪೆನುಗೊಂಡೆ, ಗುತ್ತಿ, ಕರ್ನೂಲು, ಘಂಡಿಕೋಟೆ ಸ್ಥಳದ ಸಿದ್ಧವಟದ ಸಿದ್ಧಾಪುರ ಸೀಮೆ, ಚಂದ್ರಗಿರಿ ರಾಜ್ಯದ ನಾಗಮಂಗಲ, ಮುಳಬಾಗಿಲು ಸೀಮೆ, ರಾಯದುರ್ಗ ಸೀಮೆಯ ಮದುವೆಯ ಸುಂಕವನ್ನು ಪ್ರಧಾನ ತಿಂಮದಾಸಯ್ಯ ಆದಪ್ಪನಾಯುಡು ಎಂಬುವವನು ವಿನಾಯಿತಿ ನೀಡುತ್ತಾನೆ. ತಿಂಮಪುರ ಗಂಗನಾಯನಿಯ ಮಗ ಚಿಟ್ಟಣ್ಣ, ಯೆರ್ಲಗೊಲ್ಲ, ಕಸವನಿಯ ಮಗ ಬಸವಪರು ಕೋರಿಕೊಂಡಿದ್ದರಿಂದ ಈ ವಿನಾಯಿತಿಯನ್ನು ನೀಡಲಾಯಿತು. ಮಲೆಬೆನ್ನೂರಿನ[12] ಶಾಸನದಿಂದ ಮದುವೆಯ ಸುಂಕವನ್ನು ಅರಮನೆಗೆ ಸಲ್ಲಿಸುತ್ತಿದ್ದರೆಂದು ತಿಳಿದುಬರುತ್ತದೆ. ಉತ್ಥಾನ ದ್ವಾದಶಿಯ ದಿವಸ ಕೃಷ್ಣದೇವರಾಯನ ನಿರೂಪದ ಮೇರೆಗೆ ಮಲೆಯ ಬೆನ್ನೂರು ಸೀಮೆಯನ್ನು ಆಳುತ್ತಿದ್ದ ಗಜಪತಿ ಪ್ರತಾಪರುದ್ರನ ಮಗ ವೀರಭದ್ರನು ಅರಸನಿಗೆ, ತನಗೆ ಮತ್ತು ತನ್ನ ತಂದೆಗೆ ಒಳಿತಾಗಬೇಕೆಂದು ಮದುವೆಯ ಸುಂಕವನ್ನು ದಾನಮಾಡುತ್ತಾನೆ. ಹಾಗೆ ದಾನ ಮಾಡುವಾಗ ಮಲೆಬೆನ್ನೂರು ಮತ್ತು ಲಿಂಗದಹಳ್ಳಿ ಸೀಮೆಗಳ ಒಳಗೆ ನಡೆಯುವ ಮದುವೆಗಳಿಗೆ ಮಾತ್ರ ಅನ್ವಯಿಸುತ್ತದೆ. ಮದುವೆ ಸುಂಕವನ್ನು ವಿನಾಯಿತಿಗೊಳಿಸಿರುವ ಹಲವಾರು ಶಾಸನಗಳ ಉಲ್ಲೇಖವು ಕೃಷ್ಣದೇವರಾಯನ ಕಾಲದಲ್ಲೇ ದೊರಕುತ್ತದೆ.

ಕ್ರಿ.ಶ. 1527ರ ಯಗಟಿ[13] ಶಾಸನದಲ್ಲಿ ಬಯಿಪನಾಯಕನೆಂಬುವವನು ಕೃಷ್ಣದೇವರಾಯನಿಂದ ಅನುಮತಿಯನ್ನು ಪಡೆದು ಯಗಟೆ ಹತ್ತು ಸಾವಿರ ಸೀಮೆಯಲ್ಲಿ ನಡೆಯುವ ಶೂದ್ರರ ಮದುವೆಯ ಮೇಲಿನ ಸುಂಕವನ್ನು ವಿನಾಯಿತಿಗೊಳಿಸಿದನೆಂದು ದಾಖಲಿಸಿದೆ. ಕುಂಡಲಗುರಿಕೆ[14]ಯ ಶಾಸನದಲ್ಲಿ 'ಕೃಷ್ಣದೇವಮಹಾರಾಯರ ನಿರೂಪವಿಡಿದ

ಕೃಷ್ಣಮನಯಕರು ಹಾಕಿಸ್ತ ದಂರ್ಮಶ್ಯಾಸನ ನಲ್ಲೂರ ನಾಡಿಗೆ ಸಲುವ ಮಳಲೂರಸ್ಥಳದ ಕುಂದಲಗುಜುಕಿಯ ಗ್ರಾಮಗಳಿಗೆ ಆರೊಬ್ಬರು ಮದುವೆಯ ಮಾಡಿದರೂ ಸುಂಕವಿಲ್ಲ ಎಂದು ನಾಡಗವುಂಡಪಗಳ ಮುಂದಿಟ್ಟು ಹಾಕಿಸ್ತಾ ಧರ್ಮಶ್ಯಾಸನ' ಎಂದಿದೆ. ಇವುಗಳಿಂದ ತಿಳಿದುಬರುವುದೇನೆಂದರೆ ಮದುವೆಯ ಮೇಲಿನ ಸುಂಕವನ್ನು ಎಲ್ಲರೂ ಕೊಡಬೇಕಿತ್ತು. ಕೆಲವು ವಿಶೇಷ ಸಂದರ್ಭದಲ್ಲಿ ಕೆಲವು ಗ್ರಾಮಗಳು, ಕೆಲವು ದೊಡ್ಡ ಪ್ರದೇಶಗಳಿಗೆ ಅನ್ವಯವಾಗುವಂತೆ ವಿನಾಯಿತಿ ನೀಡಲಾಗುತ್ತಿತ್ತು ಎಂಬುದು. ಕನ್ನಡದಲ್ಲಿ ಮದುವೆ ಸುಂಕವೆಂದೂ ತೆಲುಗಿನಲ್ಲಿ ಪೆಂಡ್ಲಿ ಸುಂಕವೆಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.

ಕ್ರಿ.ಶ. 1528ರ ಮೇಲುಕೋಟೆ[15] ಶಾಸನದಲ್ಲಿ 'ಕೃಷ್ಣರಾಯ ಮಹಾರಾಯರೂ ನಮಗೆ ನಾಯಕತನಕ್ಕೆ ಪಾಲಿಸಿಹ ಶ್ರೀರಂಗಪಟ್ಟಣ ಸಿಂದಗಟ್ಟಿದ ಸೀಮೆಯಲ್ಲೂ ಗ್ರಾಮಗಳನೂ ಸಮರ್ಪಿಸಿದ ವಿವರ ಶ್ರೀರಂಗಪಟ್ಟಣದ ಸೀಮೆಯ ಕಾಮನಾಯಕನಹಳಿ ಗ್ರಾಮ ೧ ಕೆ ಗ ೫೫ ಸಿಂದಗಟ್ಟದ ಸೀಮೆಯ ಗೊಲ್ಲರಚಟ್ಟನಹಳಿಯ ಗ್ರಾಮ ೧ ಕಂ ಗ ೫೦ ಹೊಸ್ತಾಗಿ ಮೇಲುಗೋಟೆಯಲೂ ಸಾಗಿಸಿದ ಸಂಥೆಯ ಆಯಸ್ವಾಮ್ಯದಿಂದ ಗ ೭೦ ಸಿಂದಗಟಕೆ ಸಲುವೆ ತಳವಾಜಿಕೆಯಿಂದ ಗ ೨೬ ಹೊಗೆದೆಜಿಗೆಯಿಂದ ಗ ೩ ಉಭಯಂಗ ೨೯ ಪಟ್ಟಣದವರೆಗೆ ಸಲುವ ಸ್ಥಳಸುಂಕ ಅಡಕೆಯ ಸುಂಕ ಆಡದೆಜಿಗೆ ಸಹಾಸುಂಕ ಗ ೩೦ ರಾಯಸ್ತವರ್ತ್ತನೆ ಗ ೨೦ ಅಂತು ನಾನಾ ಬಗೆಯ ಗ ೨೫೪ ಅಕ್ಷರದಲೂ ಯಿಂನೂರ ಅಯಿವತ್ತನಾಲ್ಕು ವರಹನ ಸೀಮೆಯು ಕೃಷ್ಣರಾಯ ಮಹಾರಾಯರ ಅಪ್ಪಣೆಯಿಂದ ಕೃಷ್ಣರಾಯ ಮಹಾರಾಯರಿಗೆ ಪುಣ್ಯವಾಗಿ ರಥಸಪ್ತಮಿ ಪುಂಣ್ಯಕಾಲದಲೂ ಕಾವೇರಿ ತೀರದಲಿ ಸಹಿರಂಣ್ಯೋದಕ ದಾನಧಾರಾಪೂರ್ವಕವಾಗಿ ತ್ರಿವಾಚಾಧಾರೆಯನೆಱೆದು ಸಮಿರ್ಪಿಸಿದ' ವಿವರವಿದೆ. ಅದರಲ್ಲಿ ನಡೆಯಬೇಕಾದ ಸೇವೆಗಳ ವಿವರವಿದೆಯಾದರೂ ಪ್ರಸ್ತುತ ಸುಂಕಗಳ ಬಗ್ಗೆ ಗಮನ ಹರಿಸುವುದು ಮುಖ್ಯವಾಗಿದೆ. ಇಲ್ಲಿ ಅಡಕೆಯ ಹೇರಿನ ಮೇಲೆ ಹಾಕುತ್ತಿದ್ದ ಸುಂಕ, ನಿರ್ದಿಷ್ಟ ಸ್ಥಳದ ಮೇಲೆ ವಿಧಿಸುತ್ತಿದ್ದ ಸ್ಥಳಸುಂಕ ಕಮ್ಮಾರಿಕೆಯ ಮೇಲೆ ವಿಧಿಸುತ್ತಿದ್ದ ಹೊಗೆಜಿಯ ಬಗ್ಗೆ ದಾಖಲಾಗಿದೆ ಮತ್ತು ಜೂಜಿನ ಮೇಲೆ ಹಾಕುವ ತೆರಿಗೆಯಾದ ಅಡದೆರೆ, ಅರಸರ ಪತ್ರ ಬರೆಯುವ, ಕಾಲಕಾಲಕ್ಕೆ ಸಲ್ಲಿಸುವ ತಳವಾಜಿಕೆಯ ವೃತ್ತಿಯ ಮೇಲಿಂದ ಬರುವ ಸುಂಕ. ಹೀಗೆ ವಿವಿಧ ಸುಂಕಗಳ ಪರಿಚಯವನ್ನು ಈ ಶಾಸನವು ಮಾಡಿಕೊಡುತ್ತದೆ. ಶ್ರೀರಂಗಪಟ್ಟಣ[16]ದ ಶಾಸನದಲ್ಲಿಯೂ ಅಡಿಕೆಸುಂಕ, ಮಗ್ಗವುಮಾರ ಕಾಣಿಕೆ, ಹೊಟವಾಜು, ವೊಟ್ಟುಸುಂಕ. ನದಿ ದಾಟಲು ಉಪಯೋಗಿಸುವ ಹರಿಗೋಲುಗಳ ಮೇಲೆ ಸುಂಕ ವಿಧಿಸುತ್ತಿದ್ದು ವಿಜಯನಗರ ಕಾಲದ ಅನೇಕ ಶಾಸನಗಳಲ್ಲಿ ಕಂಡುಬರುತ್ತದೆ. ಕ್ರಿ.ಶ. 1513ರ ಹಂಪಿ[17]ಯ ಶಾಸನದಲ್ಲಿ ಹರಿಗೋಲು ಹಾಕುವ ಸ್ಥಳಗಳನ್ನು ಕೂಡ ಹೇಳಿದೆ. 'ಹೊಳೆಯಲೂ ಎತುವ ಹಜಿಗೋಲ ಹೊಳೆಯ ವಿವರಾ ವಿಠಲನ (ಬ)ಳಿ ಸಂಕಲಾಪುರದ ಹೊಳೆ ೧ ಹಂಪೆಯ ಹೊಳೆ ೧, ಕಾಳಗಟೆಯ ಹೊಳೆ ೧ ಹುಲಿಗೆಯ ಹೊಳೆ ೧ ಹೊಂನೂರ ಹೊಳೆ ೧ ಕೊರಗಲ ಹೊಳೆ ೧ ಅಂತು ಪಡುವಣ ಹೊಳೆ ೬ ಮೂಡಣ ಹೊಳೆ ಕಂಪಿಲೆಯ ಹೊಳೆ ೧ ಮುಷ್ಟೂರ ಹೊಳೆ ೧ ಉಭಯಂ ಪಡುವಣ ಹೊಳೆ ೨ . . . . (ಸುವರ್ನಾದಾಯ) . . . . ಕದ ಸೀಮೆಯಲೂ ಗೋಪಿಸೆಟಿಯ (ಹ)ಳಿಯ ಗ್ರಾ(ಮ) ೧ ಕಂಪಿಲೆಯ ಮೂಗಣೆಯಲೂ ಸಾಯಣಾಪುರದ ಗ್ರಾಮ ೧ ಗುಡದಸೀಮೆಲೂ ಬಿಳಿಯ ಬಾ(ವಿ)ಯ ಗ್ರಾಮ ೧ ಇ ಗ್ರಾಮಗಳಿಗೆ ಸಲುವ ಸಕಲ ಸುವರ್ನಾದಾಯ ಸಕಲ ಭತ್ತಾದಾಯ ಸ್ಥಳಸುಂಕ ತಳವಾಜಿಕೆ ಸಾಂಮ್ಯ ಹಾರಿಕಾ ಈ ಗ್ರಾಮಗಳ ಜೋಡಿ ಬಿರಾಡ ಕಾಲುವೆಯ ನೀರಬಿರಾಡ ಮೊದಲಾದ . . . .' ಮುಂತಾಗಿ ವಿವರವನ್ನು ನೀಡಿದೆ. ಇಂತಹ ಹರಿಗೋಲು ಹಾಕುವ ಸ್ಥಳಗಳಲ್ಲಿ ಸುವರ್ಣಾದಾಯವನ್ನು ಸಂಗ್ರಹಿಸಲಾಗುತ್ತಿತ್ತು. ಸುವರ್ಣಾದಾಯವೆಂದರೆ ಚಿನ್ನದ ರೂಪದಲ್ಲಿ ಬರುವ ಆದಾಯವಾಗಿದೆ.

ಸುವರ್ಣಾದಾಯವಲ್ಲದೆ ಭತ್ತಾದಾಯ, ಸ್ಥಳಸುಂಕ, ತಳವಾಜಿಕೆ ಸಾಮ್ಯ ಮುಂತಾದ ತೆರಿಗೆಗಳ ಪ್ರಸ್ತಾಪವೂ ಇದೆ. ಶಾಸನದಲ್ಲಿ ಹನ್ನೆರಡು ಹೊಳೆಗಳ ಹೆಸರುಗಳನ್ನು ನೀಡಲಾಗಿದೆ.

ಕ್ರಿ.ಶ. 1515ರ ಹಂಪಿ[18]ಯ ಶಾಸನದಲ್ಲಿ ಕೃಷ್ಣದೇವರಾಯನು ಉದಯಗಿರಿಯ ಮೇಲೆ ದಂಡೆತ್ತಿ ಹೋದ ಸಂದರ್ಭದಲ್ಲಿ ತಂದ ಬಾಲಕೃಷ್ಣನನ್ನು ಪ್ರಸ್ಥಾಪಿಸಿದ ಸಮಯದಲ್ಲಿ ನವರತ್ನಖಚಿತವಾದ ನಾನಾ ವಿಧದ ಆಭರಣಗಳನ್ನು, ಚಿನ್ನ ಮತ್ತು ಬೆಳ್ಳಿಯ ಉಪಕರಣಗಳನ್ನು ದಾನ ಮಾಡಿದ್ದಾನೆ, ಈ ಸಂದರ್ಭದಲ್ಲಿ 'ಸೋಲೂರ ಬಸವಪನಾಯಕ ಕಟೆದ ತಿಂಮಾಪುರದ ಗದ್ದೆ ಹದಿನಾಲ್ಕು ಖಂಡುಗ ಗದ್ದೆವೊಳಗಾಗಿ ಕರಣಿಕರ ಮಾನ್ಯ ಹಸುರುವಾಣಿ ಸುಂಕಯೆಂಬ ಸುಂಕ ರಾಮಾಪುರದ ಗ್ರಾಮ ೧ ಪಾರ್ಥಿವ ಸಂವಛರದ ಕಾರ್ತಿಕ ಶುದ ೧ ಲೂ ತೊಗಲುಗಲ್ಲ ಗ್ರಾಮವನು ಅನಂತಶಯನ ದೇವರಿಗೆ ಸಮರ್ಪಿಸಿದ' ಎಂಬುದಾಗಿ ವಿವರವಿದೆ. ಇದರಲ್ಲಿ ಹೇಳಿರುವ ಹಸುರುವಾಣಿ ಸುಂಕವೆಂಬುದು ಏನು ಎಂದು ತಿಳಿಯುವುದಿಲ್ಲ.

ಮೇಲೆ ಉದಾಹರಿಸಿರುವ ಸುಂಕಗಳಷ್ಟೇ ಅಲ್ಲದೆ ಅಂಗಡಿ ತೆರಿಗೆ, ಅರಮನೆಯ ಸುಂಕ, ಕಟುಂದೆಜೀ, ಗೋಮಾಳ ಸುಂಕ, ಮಾವಿನ ಬಿಟ್ಟಿಸುಂಕ, ಮೊಟ್ಟೆಸುಂಕ, ಹಂದಲದೆಜೀ, ಪಾತ್ರಭೋಗ ಹೆಚ್ಚುಂಕದ ಸುಂಕ, ಒಕ್ಕಲು ಸುಂಕ, ಬಿನುಗು, ಸಂತೆಸುಂಕ, ನಾಡಸೂಕ, ಮರಿಯಾದೆ ಮುಂತಾದ ಸುಂಕಗಳ ಬಗ್ಗೆ ವಿವರಿಸಿರುವ ಹಲವಾರು ಶಾಸನಗಳಿವೆ. ಸಂತೆಸುಂಕವು ಗೊತ್ತಾದ ಸ್ಥಳ ಹಾಗೂ ಕಾಲದಲ್ಲಿ ನಡೆಯುವ ವ್ಯಾಪಾರಕ್ಕಾಗಿ ಸೇರುವ ಜಾಗದ ಮೇಲೆ ಹಾಕುವ ತೆರಿಗೆಯಾಗಿದೆ. ಒಕ್ಕಲು ಸುಂಕವು ಮನೆ, ಕುಲ, ವ್ಯವಸಾಯ ಮಾಡುವ ಕುಟುಂಬದ ಮೇಲೆ ಹಾಕುವ ತೆರಿಗೆಯಾಗಿದೆ. ಪಾತ್ರಭೋಗವು ದೇವಾಲಯದಲ್ಲಿ ನಡೆಯುವ ನೃತ್ಯಸೇವೆ ಮಾಡುವವರಾಗಿದ್ದು ಅವರ ಮೇಲೆ ಕೂಡ ಸುಂಕ ವಿಧಿಸಲಾಗುತ್ತಿತ್ತು. ನಾಡಸುಂಕವು ನಾಡಿನ ಮೇಲೆ ಹಾಕುವ ತೆರಿಗೆಯಾಗಿದೆ. ಬಿನುಗು ಎಂಬುದು ಮನೆಕೆಲಸ ಮಾಡುವ ಕೆಳವರ್ಗದವರನ್ನು ಉಲ್ಲೇಖಿಸುತ್ತದೆ. ಇವರಿಗೂ ತೆರಿಗೆ ಸಲ್ಲಿಸಬೇಕಾದ ಜವಾಬ್ದಾರಿಯಿತ್ತು. ಮರಿಯಾದೆಯು ಒಂದು ಚಿಕ್ಕ ತೆರಿಗೆಯಾಗಿದೆ. ಮೊಟ್ಟೆಸುಂಕವು ಗಂಟುಮೂಟೆ ಹೊರುವವನ ಮೇಲೆ ಹಾಕುವ ತೆರಿಗೆ, ಭತ್ತದ ಪಿಂಡಿಯ ಮೇಲಿನ ತೆರಿಗೆಯಾಗಿದೆ. ಹಂದಲದೆಜೀಯು ಬಹುಶಃ ಹಂದಲದೆರೆಯಾಗಿರಬಹುದು. ಹಂದರಪಣವೆಂದರೆ ಸಮಾರಂಭಗಳಿಗೆ ಚಪ್ಪರ ಹಾಕುವಾಗ ನೀಡಬೇಕಾದ ತೆರಿಗೆಯಾಗಿದೆ. ಹೆಜ್ಜುಂಕವೆಂದರೆ ಒಂದು ಹಿರಿಯ ಸುಂಕವಾಗಿದೆ. ಅದರಲ್ಲೂ ಹೆಜ್ಜುಂಕದ ಸುಂಕವು ಇನ್ನೂ ದೊಡ್ಡ ಪ್ರಮಾಣದ ಸುಂಕವೆಂದು ಹೇಳಬಹುದು. ಅರಮನೆಯ ಸುಂಕವು ಅರಮನೆಗೆ ನೀಡಬೇಕಾಗಿದ್ದ ತೆರಿಗೆಯಾಗಿದೆ. ಅಂಗಡಿಗಳ ಮೇಲೆ ಹಾಕುವ ಸುಂಕವನ್ನು ಅಂಗಡಿ ಸುಂಕವೆಂದು ಕರೆಯಲಾಗಿದೆ. ದನಕರುಗಳ ಮೇವಿಗಾಗಿ ಬಿಟ್ಟಿರುವ ಸಾರ್ವಜನಿಕ ಹುಲ್ಲುಗಾವಲು ಗೋಮಾಳವಾಗಿದೆ. ಇಂತಹ ಭೂಮಿಯ ಮೇಲೆ ಹಾಕುತ್ತಿದ್ದ ಸುಂಕವನ್ನು ಗೋಮಾಳ ಸುಂಕವೆಂದು ಕರೆಯಲಾಗುತ್ತಿತ್ತು.

ಈ ರೀತಿಯಾಗಿ ಹಲವು ಬಗೆಯ ತೆರಿಗೆಗಳಿಂದ ಉತ್ಪನ್ನವಾದ ಆದಾಯದ ಮೂಲಕ ರಾಜ್ಯದ ಉಳಿದ ಚಟುವಟಿಕೆಗಳನ್ನು ಕೈಗೊಳ್ಳುತ್ತಿದ್ದರು. ಕೆಲವು ನಿರ್ದಿಷ್ಟ ತೆರಿಗೆಗಳಿಂದ ಅರಮನೆಯ ಊಳಿಗದವರಿಗೂ ಸೇನಾಪಡೆಯವರಿಗೂ ವೇತನಗಳನ್ನು ಕೊಟ್ಟಂತೆ ತಿಳಿಯುತ್ತದೆ. ತೆರಿಗೆಗಳೇ ಅಲ್ಲದೆ ಅದಕ್ಕೆ ಸಂಬಂಧಿಸಿದಂತೆ ದಂಡಗಳನ್ನು ವಿಧಿಸಿರುವ ಉಲ್ಲೇಖಗಳು ದೊರಕುತ್ತವೆ. ಇದು ಪ್ರಾಯಶಃ ತೆರಿಗೆಯನ್ನು ಕಟ್ಟದೆ ತಪ್ಪಿಸಿಕೊಳ್ಳುವವರ ಮೇಲೆ ವಿಧಿಸಿರಬಹುದು. ಹಲವು ಕಡೆ ತೆರಿಗೆಗಳ ನಿರ್ದಿಷ್ಟತೆಯನ್ನೂ ದಂಡದ ಸ್ವರೂಪವನ್ನು ವಿವರಿಸಿದ್ದರೂ ಹೆಚ್ಚು ಬಲಾತ್ಕಾರವಾಗಿ ಸಂಗ್ರಹಿಸುವ ಪ್ರಯೋಗ ಮಾಡಿದಂತೆ ಕಂಡುಬರುತ್ತದೆ. ಸಾಮಾನ್ಯ ಬ್ರಾಹ್ಮಣರಿಗೆ ಕುಶಲಕರ್ಮಿಗಳಿಗೆ ಕೊಟ್ಟಂತಹ ದಾನಗಳನ್ನು ಕರರಹಿತವಾಗಿ ಮಾಡಿರುವುದು ತಿಳಿದುಬರುತ್ತದೆ.

ವಿಜಯನಗರ ಸಾಮ್ರಾಜ್ಯವು ಶ್ರೀಮಂತಿಕೆಗೆ ಹೆಸರುವಾಸಿಯಾಗಿತ್ತು. ಇಲ್ಲಿ ಪೇಟೆ ಬೀದಿಗಳಲ್ಲಿ ಮುತ್ತು ರತ್ನಗಳನ್ನು ಮಾರುತ್ತಿದ್ದ ವಿಷಯವನ್ನು ವಿದೇಶೀ ಪ್ರವಾಸಿಗರೂ ಸಹ ದಾಖಲಿಸಿದ್ದಾರೆ. ಸಾಮಾನ್ಯವಾಗಿ ಇಂತಹ ಅಮೂಲ್ಯ ವಸ್ತುಗಳ ವ್ಯಾಪಾರ ನಡೆದಾಗ ಅದರ ತೆರಿಗೆಗಳು ಸಹ ಮೌಲ್ಯಕ್ಕೆ ತಕ್ಕಂತೆ ಹೆಚ್ಚಾಗೇ ಇರಬೇಕು. ಆದರೆ ಈ ತೆರಿಗೆಗಳನ್ನು ವಿವರಿಸಿರುವ ಶಾಸನಗಳು ಇನ್ನೂ ಗುರುತಿಸಿಲ್ಲ. ಶಾಸನಗಳ ಪಾಠವನ್ನು ಅಧ್ಯಯನ ಮಾಡುವಾಗ ತೆರಿಗೆಗಳಿಗೆ ಸಂಬಂಧಿಸಿದಂತೆ ಪಾರಿಭಾಷಿಕ ಶಬ್ದಗಳನ್ನು ಅರ್ಥೈಸುವುದು ಕಷ್ಟ. ಪ್ರಾಯಶಃ ಇವುಗಳಲ್ಲಿ ಇಂತಹ ತೆರಿಗೆಗಳನ್ನು ಹೆಸರಿಸಬಹುದು. ಇದನ್ನು ಸೂಕ್ತ ಅಧ್ಯಯನಗಳಿಂದ ಬೆಳಕಿಗೆ ತಂದರೆ ಇತಿಹಾಸ ರಚನೆಗೆ ಸಹಾಯಕವಾಗುತ್ತದೆ.

ಅಮೂಲ್ಯವಾದ ವಸ್ತುಗಳ ಮೇಲಿನ ತೆರಿಗೆಗಳ ಬಗ್ಗೆ ಚರ್ಚಿಸುವಾಗ ತರ್ಕಿಸಬಹುದಾದ ಅಂಶವೆಂದರೆ ಶಾಸನಗಳಲ್ಲಿ ದೊರಕುವ ತೆರಿಗೆಗಳಿಗೆ ಜನಸಾಮಾನ್ಯರ ದೈನಂದಿನ ಚಟುವಟಿಕೆಗಳಿಗೆ ಮತ್ತು ಸಾಮಾನ್ಯ ವೃತ್ತಿಗಳಿಗೂ ಹೆಚ್ಚಾಗಿ ಸಂಬಂಧಿಸಿರುತ್ತದೆ. ಆದರೆ ಈ ಅಮೂಲ್ಯ ವಸ್ತುಗಳ ಕ್ರಯ ವಿಕ್ರಯ ಯಾವ ರೀತಿ ಆಗುತ್ತಿತ್ತು ಮತ್ತು ಯಾವ ಮಾರ್ಗದವರಿಂದ ಆಗುತ್ತಿತ್ತು ಎಂಬುದು ತಿಳಿಯಬೇಕಾಗಿದೆ. ಪ್ರಾಯಶಃ ಇವುಗಳಿಗೆ ಅಂದು ಪ್ರಚಲಿತವಾಗಿದ್ದ ಸುವರ್ಣ ನಾಣ್ಯಗಳಲ್ಲೇ ತೆರಿಗೆಗಳನ್ನು ವಿಧಿಸಿರಬಹುದು ಅಥವ ಶಾಸನಗಳಲ್ಲಿ ಬಹಿರಂಗವಾಗಿ ಹೇಳುವ ಆವಶ್ಯಕತೆ ಇಲ್ಲದಿರುವುದರಿಂದ ಕೇವಲ ರಾಜ ಭಂಡಾರದ ಲೆಕ್ಕಪತ್ರಗಳಿಗೆ ಸೀಮಿತವಿದ್ದಿರಬಹುದು.

ಒಟ್ಟಾರೆ ಹೇಳುವುದಾದರೆ, ವಿಜಯನಗರ ಕಾಲದಲ್ಲಿ ಸಹ ಪೂರ್ವದ ರಾಜನೀತಿ ಗ್ರಂಥಗಳ ಆಧಾರದ ಮೇಲೆಯೇ ತೆರಿಗೆಗಳನ್ನು ರೂಪಿಸಿದ್ದು ಆವಶ್ಯಕತೆಗೆ ಅನುಗುಣವಾಗಿ ಕೆಲವು ಮಾರ್ಪಾಡುಗಳನ್ನು ಮತ್ತು ತೆರಿಗೆಗಳ ಹೊಸ ಪರಿಚಯವನ್ನು ಮಾಡಿದರು ಎನ್ನಬಹುದು. ಈ ತೆರಿಗೆಗಳ ಸೂಕ್ಷ್ಮ ಅಧ್ಯಯನದಿಂದ ಅಂದಿನ ಆರ್ಥಿಕ ಇತಿಹಾಸವನ್ನು ಸ್ಪಷ್ಟವಾಗಿ ರೂಪಿಸಬಹುದಾಗಿದೆ.

ಅಡಿ ಟಿಪ್ಪಣಿಗಳು

1. *ಕೃಷ್ಣದೇವರಾಯನ ಶಾಸನ ಸಂಪುಟ* 1, ಸಂ. 3, ಕ್ರಿ.ಶ. 1500.
2. *ಎ.ಕ.* 3, ಗುಪೇ 136, ಕ್ರಿ.ಶ. 1513.
3. *ಅದೇ*, 3, ಗುಪೇ 156, ಕ್ರಿ.ಶ. 1521.
4. *ಅದೇ*, 3, ಗುಪೇ 216, ಕ್ರಿ.ಶ. 1562.
5. *ಅದೇ*, 3, 176, ಕ್ರಿ.ಶ. 1469.
6. *ಅದೇ*, 3, ಗುಪೇ 23.
7. *ಅದೇ*, 3, ಗುಪೇ 12.
8. *ಅದೇ*, 3, ಗುಪೇ 17, ಕ್ರಿ.ಶ. 1372.
9. *ಕೆ.ಯು.ಇ.ಎಸ್.* 2, 235
10. *ಕೃ.ದೇ.ಶಾ.ಸಂ.* 1.7.
11. *ಅದೇ*, 1.11, ಕ್ರಿ.ಶ. 1510.
12. *ಅದೇ*, 1.76, ಕ್ರಿ.ಶ. 1515.
13. *ಎ.ಕ.* 12, ಕೆಡಿ, 190.
14. *ಅದೇ*, 10, ಸಿದ್ದ 79, ಕ್ರಿ.ಶ. 1523.
15. *ಅದೇ*, 6, ಪಾಂಡ ಕೆಡಿ. 134
16. *ಎ.ಕ.*, 10, ಶ್ರೀರಂಗಪಟ್ಟಣ 3, ಕ್ರಿ.ಶ. 1431.
17. *ಎಸ್.ಐ.ಐ.* 6, 277.
18. *ಕೆ.ಯು.ಇ.ಎಸ್.* 3, 74.

25

ವಿಜಯನಗರ ಪಟ್ಟಣದ ವಿಸ್ತಾರ : ಒಂದು ವಿಶ್ಲೇಷಣೆ

ಡಾ॥ ಶರಣಬಸಪ್ಪ ಕೋಲ್ಕಾರ

ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದ ವಿಜಯನಗರ ಪಟ್ಟಣ ಅತ್ಯಂತ ವೈಭವೋಪೇತವಾದ ನಗರವಾಗಿದ್ದಿತು. ಅದರ ಭವ್ಯತೆ ಹಾಗೂ ವಿಸ್ತಾರದ ಬಗೆಗೆ ಸಮಕಾಲೀನ ಪ್ರವಾಸಿಗರು ವರ್ಣಿಸಿದ್ದಾರೆ. ವಿಶೇಷವಾಗಿ ಕ್ರಿ.ಶ. 1420ರಲ್ಲಿ ಒಂದನೆ ದೇವರಾಯನ ಆಸ್ಥಾನಕ್ಕೆ ಭೇಟಿ ನೀಡಿದ್ದ ಇಟಲಿ ದೇಶದ ವೆನಿಸ್ ಪಟ್ಟಣದ ನಿಕೋಲೋಕೊಂಟಿ ವಿಜಯನಗರ ಪಟ್ಟಣದ ಕುರಿತಾಗಿ "ವಿಜಯನಗರ ಅತ್ಯಂತ ಭವ್ಯವಾಗಿದೆ. ಇದು ಬಹಳ ಕಡಿದಾದ ಪರ್ವತಗಳಿಗೆ ತೀರಾ ಸಮೀಪದಲ್ಲಿದೆ. ನಗರದ ಸುತ್ತಳತೆ ಅರವತ್ತು ಮೈಲಿ, ಸುತ್ತ ಕಟ್ಟಿರುವ ಕೋಟೆ ಪರ್ವತಗಳಷ್ಟು ಎತ್ತರವಾಗಿದ್ದು ಅವುಗಳ ಬುಡದಲ್ಲಿರುವ ಕಣಿವೆಗಳನ್ನು ಆಕ್ರಮಿಸಿಕೊಂಡಿವೆ. ಈ ನಗರದಲ್ಲಿ ಶಸ್ತ್ರಾಸ್ತ್ರಗಳಲ್ಲಿ ಪ್ರವೀಣರಾದ ತೊಂಬತ್ತು ಸಾವಿರ ಜನರಿದ್ದಾರೆಂದು ಅಂದಾಜು ಹಾಕಲಾಗಿದೆ...."[1] ಎಂದು ಮುಂತಾಗಿ ಬರೆದಿದ್ದಾನೆ. ಇಲ್ಲಿ ನಿಕೋಲೋಕೊಂಟಿ ವಿಜಯನಗರದ ವಿಸ್ತಾರ 60 ಮೈಲು ಇತ್ತು ಎಂದು ಹೇಳರುವುದು ಉತ್ಪ್ರೇಕ್ಷೆ ಎನಿಸುತ್ತದೆ. ಏಕೆಂದರೆ ಈ ವರೆಗೆ ನಡೆದ ಅಧ್ಯಯನಗಳನ್ವಯ ಹಂಪಿ ಸುತ್ತಮುತ್ತಲಿನ ವಿಜಯನಗರ ಕಾಲದ ಸ್ಮಾರಕಗಳು, ಅವಶೇಷಗಳನ್ನು ಪ್ರಧಾನವಾಗಿ ಅನುಲಕ್ಷಿಸಿ ವಿಜಯನಗರ ಪಟ್ಟಣ 25 ಕಿ.ಮೀ. ಸುತ್ತಳತೆಯನ್ನು ಹೊಂದಿದ್ದಿತು ಎಂದು ಗುರುತಿಸಲಾಗಿದೆ.[2] ಹಾಗಾಗಿ ನಿಕೋಲೋಕೊಂಟಿಯ ವಿವರಣೆಯ ಬಗೆಗೆ ಅನುಮಾನ ಉಂಟಾಗುವುದು ಸಹಜ. ಆದರೆ ಇಡೀ ಹಂಪಿ-ಆನೆಗುಂದಿ ಪರಿಸರವನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಅಲ್ಲಿಯ ಸ್ಮಾರಕಗಳು, ಐತಿಹ್ಯಗಳು, ಜನನಂಬಿಕೆಗಳು, ಸಾಹಿತ್ಯಿಕ ಹಾಗೂ ಕೈಫಿಯತ್ತುಗಳ ಉಲ್ಲೇಖಗಳನ್ನು ವಿಶ್ಲೇಸಿದಾಗ ವಿಜಯನಗರ ಪಟ್ಟಣ ಸಾಂಸ್ಕೃತಿಕವಾಗಿ ಸುಮಾರು 60 ಮೈಲು ವಿಸ್ತಾರವಾಗಿತ್ತೆಂಬುದು ಗೋಚರಿಸುತ್ತದೆ. ಹೀಗೆ ವಿಜಯನಗರ ಪಟ್ಟಣದ ವಿಸ್ತಾರವನ್ನು ಗುರುತಿಸುವ ವಿವೇಚನೆಯನ್ನು ಈ ಪ್ರಬಂಧ ಒಳಗೊಂಡಿದೆ.

ಹಿಂದಿನ ಅಧ್ಯಯನಗಳು ಹಾಗೂ ಮೇಲೆ ಸೂಚಿಸಿದ ಎಲ್ಲಾ ಆಕರಗಳನ್ನು ವಿಶ್ಲೇಷಿಸಿ ವಿಜಯನಗರ ಪಟ್ಟಣವನ್ನು ಮೂರು ವಲಯಗಳನ್ನಾಗಿ ವಿಂಗಡಿಸಬಹುದು. ಅವುಗಳೆಂದರೆ 1. ಕೋಟೆ ರಕ್ಷಿತ ವಲಯ ಅಥವಾ ಕೇಂದ್ರ ವಲಯ, 2. ನೈಸರ್ಗಿಕ ರಕ್ಷಿತವಲಯ (ಅಥವಾ ಕೇಂದ್ರ ನೆರೆ ವಲಯ), ಮತ್ತು 3. ಬಾಹ್ಯ ಅಥವಾ ತೆರೆದ ವಲಯ.

1. ಕೋಟೆ ರಕ್ಷಿತ ವಲಯ ಅಥವಾ ಕೇಂದ್ರವಲಯ : ಮೂಲ ವಿಜಯನಗರ ಹಾಗೂ ಅದರ ಉಪಪಟ್ಟಣಗಳನ್ನು ಒಳಗೊಂಡ ಪ್ರದೇಶವಾಗಿದೆ. ಇದರಲ್ಲಿ ತುಂಗಭದ್ರಾ ನದಿಯ ಬಲತೀರಕ್ಕೆ ಸಂಬಂಧಿಸಿದಂತೆ ಹಂಪಿ ವಿಭಾಗ ಮತ್ತು ಎಡತೀರಕ್ಕೆ ಸಂಬಂಧಿಸಿದಂತೆ ಆನೆಗುಂದಿ ವಿಭಾಗ ಎಂದು ಗುರುತಿಸಬಹುದು.

ಹಂಪಿ ವಿಭಾಗದಲ್ಲಿ ವಿರೂಪಾಕ್ಷ ದೇವಾಲಯವಿರುವ ಪಂಪಾಪುರ, ಹಜಾರರಾಮದೇವಾಲಯ ಪ್ರದೇಶದ ವಿಜಯನಗರ ರಾಜವಾಡೆ, ಬಾಲಕೃಷ್ಣ ಹಾಗೂ ಉದ್ದಾನ ವೀರಭದ್ರ ದೇವಾಲಯಗಳಿರುವ ಕೃಷ್ಣಾಪುರ, ಅಚ್ಯುತರಾಯ ಅಥವಾ ತಿರುವೆಂಗಳನಾಥ ದೇವಾಲಯ ಪ್ರದೇಶದ ಅಚ್ಯುತಾಪುರ, ವಿಜಯವಿಠಲ ದೇವಾಲಯವಿರುವ ವಿಠ್ಠಲಾಪುರ, ತಳವಾರಘಟ್ಟ ರಸ್ತೆಯ ಪೂರ್ವಕ್ಕೆ ಇರುವ ಗೋರಿ ಕೆಳಗಣಗ್ರಾಮ, ಕಮಲಾಪುರ, ಪಟ್ಟಾಭಿರಾಮದೇವಾಲಯವಿರುವ ಕೊಂಡಮರಸಯ್ಯನ ಪಾಳ್ಯ, ಅಲ್ಲಿಂದ ಪೂರ್ವಕ್ಕೆ ಹಂಪಿ ಪವರ ಹೌಸ್ ಇರುವ ವರದರಾಜಮ್ಮನ ಪಟ್ಟಣ, ಗೋರಿಗಳಿರುವ ಕಡ್ಡಿರಾಂಪುರ, ಮಲಪನಗುಡಿ, ಅನಂತಶಯನಗುಡಿ ಅಥವಾ ಸಾಲೆ ತಿರುಮಲರಾಯನ ನಗರ, ನಾಗೇನಹಳ್ಳಿ ಅಥವಾ ನಾಗಲಾಪುರ ಮತ್ತು ಹೊಸಪೇಟೆ.

ಈ ಎಲ್ಲಾ ಉಪಪಟ್ಟಣಗಳು ಬಿಡಿಯಾಗಿ ಕೋಟೆಗಳನ್ನು ಹೊಂದಿರದಿದ್ದರೂ ವಿಜಯನಗರದ ಒಂದು, ಎರಡು ಮತ್ತು ಮೂರನೇ, ನಾಲ್ಕನೇ ಕೋಟೆಯ ಸಾಲುಗಳ ಒಳಗೆ ಬರುತ್ತವೆ. ಇಡಿಯಾಗಿ ಈ ಎಲ್ಲಾ ಪಟ್ಟಣಗಳನ್ನು ಐದನೆಯ ಕೋಟೆಯ ಸಾಲು ಸುತ್ತುವರೆದಿದೆ. ಈ ಕೋಟೆಯು ತುಂಗಭದ್ರಾ ನದಿಯಿಂದ (ಪೂರ್ವದ ಕಡೆ) ಪ್ರಾರಂಭಗೊಂಡು ಪಟ್ಟಾಭಿರಾಮದೇವಾಲಯದ ಹತ್ತಿರ ಹಾದು ಕಮಲಾಪುರದ ರಾಯರ ಕೆರೆಯ ಹಿಂಭಾಗದಿಂದ ಸಾಗಿ ಮಲಪನಗುಡಿಯ ಮೂಲಕ ಹೊಸಪೇಟೆಯನ್ನು ಬಳಸಿಕೊಂಡು ಈಗಿನ ತುಂಗಭದ್ರಾ ಆಣೆಕಟ್ಟಿನ ಹಿಂಭಾಗದವರೆಗೂ ವಿಸ್ತರಿಸಿದೆ.[3]

ಆನೆಗುಂದಿ ವಿಭಾಗದಲ್ಲಿ ಆನೆಗುಂದಿ ಮಾತ್ರ ಕೋಟೆಯನ್ನು ಹೊಂದಿದೆ. ಮೊದಲನೆಯ ಕೋಟೆ ಮಾತ್ರ ಇಡೀ ಗ್ರಾಮವನ್ನು ಸುತ್ತುವರೆದಿದ್ದರೆ ಉತ್ತರದಿಕ್ಕಿನಲ್ಲಿ ಕೇವಲ ಎರಡು ಅಡ್ಡ ಕೋಟೆಗಳಿವೆ. ಹೀಗೆ ಹಂಪಿ ಮತ್ತು ಆನೆಗುಂದಿಯ ಈ ಕೋಟೆ ರಕ್ಷಿತ ಪ್ರದೇಶವು ಸುಮಾರು 25 ರಿಂದ 30 ಮೈಲು ಸುತ್ತಳತೆಯನ್ನು ಹೊಂದಿದೆ.

2. ನೈಸರ್ಗಿಕ ರಕ್ಷಿತ ವಲಯ ಅಥವಾ ಕೇಂದ್ರ ವಲಯ ನೆರೆ ಪ್ರದೇಶ : ಕೇಂದ್ರ ವಲಯಕ್ಕೆ ಸುತ್ತಲೂ ಹೊಂದಿಕೊಂಡಿರುವ ಈ ಪ್ರದೇಶ ಕೇಂದ್ರ ವಲಯದಿಂದ ಅಂದರೆ ಕೊನೆಯ ಸುತ್ತಿನ ಕೋಟೆಯಿಂದ ಸುತ್ತಲೂ ಸುಮಾರು 5 ರಿಂದ 10 ಕಿ.ಮೀ ವಿಸ್ತಾರವನ್ನು ಹೊಂದಿದೆ. ಇದು ಕೂಡ ರಾಜಧಾನಿಯ ಭಾಗವಾಗಿದ್ದರೂ ಇಲ್ಲಿ ಕೋಟೆಯನ್ನು ಕಟ್ಟಲಾಗಿಲ್ಲ. ಸುತ್ತಲೂ ಬೆಟ್ಟಗುಡ್ಡಗಳಿಂದ ಆವರಿಸಲ್ಪಟ್ಟು ನೈಸರ್ಗಿಕವಾಗಿ ರಕ್ಷಣೆಯನ್ನು ಇದು ಪಡೆದಿದೆ. ಆದರೆ ಈ ಬೆಟ್ಟ ಗುಡ್ಡಗಳ ಕಣಿವೆಗಳಿಂದ ಈ ಪ್ರದೇಶಕ್ಕೆ ಪ್ರವೇಶಿಸಬಹುದು. ಹಾಗಾಗಿ ವಿಜಯನಗರದರಸರು ಇಂಥ ಕಣಿವೆಗಳಲ್ಲಿ ದ್ವಾರಗಳನ್ನು ನಿರ್ಮಿಸಿ ಆ ದ್ವಾರದ ಎರಡು ಬದಿಯಲ್ಲಿ ಅವಶ್ಯವಿರುವಷ್ಟು ಮಾತ್ರ ಕೋಟೆ ಗೋಡೆಗಳನ್ನು ನಿರ್ಮಿಸಿದ್ದಾರೆ. ವಿಜಯನಗರದ ಸುತ್ತಲೂ ಇಂಥ ಆರು ಕಣಿವೆದ್ವಾರಗಳು ಇದ್ದವೆಂದು ಕಮಲಾಪುರದ ಕೈಫಿಯತ್ತು ಉಲ್ಲೇಖಿಸುತ್ತದೆ. ಅವುಗಳೆಂದರೆ,

1. ಪೂರ್ವ ದಿಕ್ಕಿಗೆ ರಾಮಸಾಗರ ಕಣಿವೆ ದರವಾಜ ಪಟ್ಟಣದ ಯಲ್ಲಮ್ಮನ ದೇವಸ್ಥಾನಕ್ಕೆ ಉತ್ತರ ಕೃಷ್ಣರಾಯರ ದಿವಾಣರ ಕೋಟೆಗೆ ಎರಡುವರೆ ಹರದಾರಿ ಇದ್ದಿತು.
2. ಪಶ್ಚಿಮ ದಿಕ್ಕಿಗೆ ಹರಪನಹಳ್ಳಿ ಸೀಮೆ ಹೊಸೂರು ತಾಲ್ಲೂಕು ಬೆನಕಾಪುರ ದರವಾಜ ಇಲ್ಲಿಗೆ ಎರಡು ಹರದಾರಿ.

3. ಉತ್ತರ ದಿಕ್ಕಿಗೆ ತುಂಗಭದ್ರ ತೀರದ ಆಚೆಗೆ ಆನೆಗೊಂದಿ ಎರಡು ಹರದಾರಿ ಮೇಲೆ ಬಸವಪಟ್ಟಣದ ದರವಾಜ ಇಲ್ಲಿಗೆ ಎರಡು ಹರದಾರಿ ಮೇಲೆ ಇದ್ದಿತು.
4. ದಕ್ಷಿಣ ದಿಕ್ಕಿಗೆ ವಡಿಗೆರ್ರೆ ಕೆರೆಬಳಿಯ ಕೋಟೆಗೆ ದರವಾಜ ಇಲ್ಲಿಗೆ ಎರಡೂವರೆ ಹರದಾರಿ.
5. ಆಗ್ನೇಯ ದಿಕ್ಕಿಗೆ ಉಪ್ಪಾರಹಳ್ಳಿ ಬಾಜಾರದ ದರವಾಜ ಇಲ್ಲಿಗೆ ಎರಡುವರೆ ಹರದಾರಿ.
6. ನೈರುತ್ಯ ದಿಕ್ಕಿಗೆ ಹರಪನಹಳ್ಳಿ ಸೀಮೆ ಹೊಸಪೇಟೆ ಆ ಕಡೆ ಜೋಳದರಾಶಿ, ಗುಡ್ಡರಾಯರ ಕಣಿವೆ ದರವಾಜ ಇಲ್ಲಿಗೆ ಎರಡು ಹರದಾರಿ.

ಈ ಆರು ಕಣಿವೆದ್ವಾರಗಳಲ್ಲಿ ಉತ್ತರ ದಿಕ್ಕಿನಲ್ಲಿ ಬಸವಪಟ್ಟಣದ್ವಾರ[5] ಹಾಗೂ ಪೂರ್ವದಿಕ್ಕಿನ ರಾಮಸಾಗರ ಕಣಿವೆ ದ್ವಾರಗಳು ಬೆಳಕಿಗೆ ಬಂದಿದ್ದು ಉಳಿದವುಗಳನ್ನು ಗುರುತಿಸಬೇಕಾಗಿದೆ.

ಇದೇ ವಲಯದಲ್ಲಿ ಪ್ರಾಚೀನ ಪಂಪಾಕ್ಷೇತ್ರದ ಚತ್ಸುಸ್ಸಿಮೆಯ ಎರಡು ಗಡಿ ಲಿಂಗ (ದೇವಸ್ಥಾನಗಳು)ಗಳು ಬರುತ್ತವೆ.[6] ಅವುಗಳಲ್ಲಿ ಪೂರ್ವ ದಿಕ್ಕಿನಲ್ಲಿರುವ ಬುಕ್ಕಸಾಗರ ಬಳಿಯ ಕನ್ನಿಕೇಶ್ವರ ಲಿಂಗ. ಇದರಿಂದ ಆಚೆ ಸುಮಾರು 5 ಕಿ.ಮೀ. ದೂರದಲ್ಲಿ ರಾಮಸಾಗರ ಕಣಿವೆದ್ವಾರವಿದೆ. ಅದೇ ರೀತಿ ದಕ್ಷಿಣ ದಿಕ್ಕಿನ ಜಂಬುನಾಥೇಶ್ವರ ಲಿಂಗ ಅಥವಾ ದೇವಾಲಯದ ಆಚೆಗೆ ವಡಿಗೆರೆ ಕೋಟೆಗೆ ದ್ವಾರವಿದೆ. ಇನ್ನು ಉತ್ತರದಿಕ್ಕಿನ ಗಂಗಾವತಿಯ ಮಲ್ಲಾಪುರ ಗ್ರಾಮದ ಬಳಿಯ ಬೆಟ್ಟದ ಮಾಣಿಭದ್ರೇಶ್ವರ ಲಿಂಗವು ಬಸವಪಟ್ಟಣದ ದ್ವಾರದಿಂದ ಹೊರಗೆ 2 ಕಿ.ಮೀ. ದೂರದಲ್ಲಿದೆ. ಅದೇ ರೀತಿ ಪಶ್ಚಿಮ ದಿಕ್ಕಿನಲ್ಲಿರುವ ಕೊಪ್ಪಳ ತಾಲ್ಲೂಕು ಶಿವಪುರದ ಬೆಟ್ಟದ ಸೋಮೇಶ್ವರ ಲಿಂಗವು ಕೂಡ ಹೊರಭಾಗದಲ್ಲಿದ್ದು ಸಾಕಷ್ಟು ದೂರದಲ್ಲಿದೆ.

ಈ ನೈಸರ್ಗಿಕ ರಕ್ಷಿತ ವಲಯದಲ್ಲಿ ಪೂರ್ವದ ರಾಮಸಾಗರ ಕಣಿವೆದ್ವಾರದ ಒಳಗೆ ವೆಂಕಟಾಪುರ, ನಲ್ಲಾಪುರ, ಬುಕ್ಕಸಾಗರ, ನಿಂಬಾಪುರ ಗ್ರಾಮಗಳಿವೆ. ಪಶ್ಚಿಮದ ಬೆನಕಾಪುರ ದ್ವಾರದ ಒಳಗೆ ಕಾಳಗಟ್ಟಿ, ಗುಡಿ ಓಬಳಾಪುರ, ಡಣಾಪುರ, ಸಿಂಗನಾಥನಹಳ್ಳಿಗಳಿವೆ. ಉತ್ತರದ ಬಸವಪಟ್ಟಣ ದ್ವಾರದ ಒಳಗೆ ರಾಂಪುರ, ಮಲ್ಲಾಪುರ, ಹನುಮನಹಳ್ಳಿ, ವಿರುಪಾಪುರಗಡ್ಡಿ, ಸಾಣಾಪುರ, ಅಂಜನಹಳ್ಳಿ ತಿರುಮಲಾಪುರ, ಕೃಷ್ಣಾಪುರ, ರಾಮದುರ್ಗ, ಬಸವನದುರ್ಗ, ಸಿಂಗನಗುಂಡು, ರಂಗಾಪುರ ಗ್ರಾಮಗಳಿವೆ. ದಕ್ಷಿಣದ ವಡಿಗೇರಿ ಕೋಟೆಗೆ ದ್ವಾರದ ಒಳಗೆ ಕೃಷ್ಣಾಪುರ, ಕೊಂಡನಾಯಕನಹಳ್ಳಿ ಗ್ರಾಮಗಳಿವೆ.

ಇಷ್ಟು ಗ್ರಾಮಗಳನ್ನು ಒಳಗೊಂಡಂತೆ ವಿಜಯನಗರದ ಸುತ್ತಳತೆಯು ಸುಮಾರು 30 ರಿಂದ 40 ಮೈಲುಗಳಾಗುತ್ತವೆ.

3. ಬಾಹ್ಯ ವಲಯ : ನೈಸರ್ಗಿಕ ರಕ್ಷಿತವಲಯದ ಹೊರಗಿನ ಸುತ್ತು ಪ್ರದೇಶವನ್ನು ವಿಜಯನಗರದ ಬಾಹ್ಯವಲಯವೆನ್ನಬಹುದು. ಈ ವಲಯದ ಗಡಿಯ ಬಗೆಗೂ ಕಮಲಾಪುರ ಕೈಫಿಯತ್ತಿನಲ್ಲಿ[7] ವಿವರವಿದೆ. ಅದರನ್ವಯ.

1. ಪೂರ್ವದಿಕ್ಕಿಗೆ ಕುರುಗೋಡು ಬಸವೇಶ್ವರ ಕೇತ್ರ, ಒಂಬತ್ತು ಹರಿದಾರಿ
2. ಪಶ್ಚಿಮದಿಕ್ಕಿಗೆ ಕೊಕ್ಕ ಸಮುದ್ರ ಮಹಾಲಕ್ಷ್ಮೀ ಕ್ಷೇತ್ರ, ಹನ್ನೆರಡು ಹರದಾರಿ
3. ಉತ್ತರ ದಿಕ್ಕಿಗೆ ಕನಕಗಿರಿ ನರಸಿಂಹಕ್ಷೇತ್ರ, ಎಂಟು ಹರದಾರಿ
4. ದಕ್ಷಿಣ ದಿಕ್ಕಿಗೆ ಸಂಡೂರು ಕುಮಾರಸ್ವಾಮಿ ಕ್ಷೇತ್ರ, ಹನ್ನೊಂದು ಹರದಾರಿ.

ಇವುಗಳಲ್ಲಿ ಕುರುಗೋಡಿನ ಬೃಹತ್ ನಂದಿಯನ್ನು ಹಂಪಿಯ ವಿರೂಪಾಕ್ಷ ದೇವರ ಅಭಿಮುಖನಂದಿ ಎಂದು ಹಾಗಾಗಿ ಕುರುಗೋಡಿನಿಂದಲೇ ಪಂಪಾಕ್ಷೇತ್ರವು ಆರಂಭಗೊಳ್ಳುವುದೆಂದು ಸ್ಥಳೀಯ ಜನಪದರ ನಂಬಿಕೆಯಾಗಿದೆ. ಇಲ್ಲಿಯ ಸಂಗಮೇಶ್ವರ ದೇವಾಲಯ ಸಂಗಮರ ಕಾಲದ ದೇವಾಲಯವೆಂಬ ಅಭಿಪ್ರಾಯವಿದೆ. ಈ ದೇವಾಲಯಕ್ಕೆ ಕೃಷ್ಣದೇವರಾಯನು ಮತ್ತು ಸದಾಶಿವದೇವರಾಯ ದಾನ ನೀಡಿದ ಬಗೆಗೆ ಕ್ರಿ.ಶ. 1543ರ ಕುರುಗೋಡು ಶಾಸನದಲ್ಲಿ ಉಲ್ಲೇಖವಿದೆ. ಹೀಗೆ ವಿಜಯನಗರದೊಂದಿಗೆ ನಿಕಟ ಸಂಬಂಧ ಹೊಂದಿರುವ ಕುರುಗೋಡು ಪೂರ್ವದ ಗಡಿಯಾಗಿತ್ತು.[8]

ಉತ್ತರ ದಿಕ್ಕಿನ ಕನಕಗಿರಿ ವಿಜಯನಗರದ ಸಾಮಂತರಾದ ಗುಜ್ಜಲವಂಶದ ಪಾಳೆಯಗಾರರ ರಾಜ್ಯವಾಗಿತ್ತು. ಇಲ್ಲಿಯ ಲಕ್ಷ್ಮೀನರಸಿಂಹ ದೇವಾಲಯದ ಮೂಲಭಾಗವು ಸಂಗಮ ದೊರೆ ಪ್ರೌಢದೇವರಾಯನ ಕಾಲದಲ್ಲಿ ನಿರ್ಮಾಣಗೊಂಡಿದ್ದು, ನರಸಿಂಹ ದೇವರಿಗೆ ಪ್ರೌಢ ದೇವರಾಯ, ನರಸಿಂಹದೇವರಾಯ, ಕೃಷ್ಣದೇವರಾಯ, ಅಚ್ಯುತದೇವರಾಯ ಗ್ರಾಮಗಳನ್ನು ದಾನಮಾಡಿದ ಸಂಗತಿಯನ್ನು ಕನಕಗಿರಿಯ ಶಾಸನಗಳು ವಿವರಿಸುತ್ತವೆ[9] ಮತ್ತು ಹಂಪಿ ವಿರುಪಾಕ್ಷ ದೇವಾಲಯದ ಉತ್ತರದಿಕ್ಕಿನ ದ್ವಾರಗೋಪುರವನ್ನು ಕನಕಗಿರಿ ದೊರೆ ನವಾಬ ಉಡಚಪ್ಪ ನಾಯಕನು ನಿರ್ಮಿಸಿದ್ದಾನೆ. ಅದಕ್ಕಾಗಿ ಅದಕ್ಕೆ ಕನಕಗಿರಿ ಹೊಸಪುರವೆಂದೇ ಕರೆಯುತ್ತಾರೆ.[10] ಹೀಗೆ ಹಂಪಿಗೂ – ಕನಕಗಿರಿಗೂ ನಿಕಟಸಂಬಂಧವಿದೆ.

ದಕ್ಷಿಣ ದಿಕ್ಕಿನ ಸಂಡೂರು ಕುಮಾರಸ್ವಾಮಿ ಕ್ಷೇತ್ರಕ್ಕೂ ಹಂಪಿಗೂ ಸಂಬಂಧವಿದೆಯೆಂದು ಅಲ್ಲಿಯ ಜನ ನಂಬುತ್ತಾರೆ. ಪಂಪಾಕ್ಷೇತ್ರದಿಂದಲೇ ಪಾರ್ವತಿ ದೇವಿ ಹಾಗೂ ಆಕೆಯ ಮಗ ಕುಮಾರಸ್ವಾಮಿ ದೇವದ್ವಾರ ಪರ್ವತಕ್ಕೆ ಬಂದು ನೆಲೆನಿಂತರೆಂದು ಸ್ಥಳೀಯರು ಹೇಳುತ್ತಾರೆ.[11]

ಪಶ್ಚಿಮ ದಿಕ್ಕಿನ ಕೊಕ್ಕಸಮುದ್ರ ಮಹಾಲಕ್ಷ್ಮೀ ಕ್ಷೇತ್ರ ಯಾವುದೆಂಬುದನ್ನು ಗುರುತಿಸಬೇಕಾಗಿದೆ. ಪ್ರಾಯಶಃ ಇದು ತುಂಗಭದ್ರಾ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆಯಾಗಿರಬಹುದೆಂದು ತೋರುತ್ತದೆ.

ಹೀಗೆ ಈ ಎಲ್ಲಾ ಪ್ರದೇಶಗಳನ್ನು ಒಳಗೊಂಡಂತೆ ವಿಜಯನಗರದ ಸುತ್ತಳತೆ ಸಾಂಸ್ಕೃತಿಕವಾಗಿ[12] ಸುಮಾರು 60 ಮೈಲು ಇದ್ದಿತೆಂದು ಸ್ಪಷ್ಟವಾಗಿ ಹೇಳಬಹುದು.

ಆಕರಗಳು

1. ವಿವೇಕ ರೈ, ಬಿ.ಎ., 2005, 'ನಿಕೊಲೊ–ದೆ–ಕೊಂತಿ' ಪು. 3–8, *ಪ್ರವಾಸಿ ಕಂಡ ವಿಜಯನಗರ*, ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಪಾಟೀಲ್ ಸಿ.ಎಸ್, 2006, 'ವಿಜಯನಗರದ ಕೋಟೆ', ಪು. 239–244, *ಹಂಪಿ ಸಂಪುಟ*, ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ಕೊಟ್ರಯ್ಯ, ಸಿ.ಟಿ.ಎಂ, 2006, 'ಹಂಪೆಯ ಶ್ರೀ ಶಾಸನಗಳು ಮತ್ತು ವಿಜಯನಗರ ಪಟ್ಟಣ', ಪು. 286–299, *ಹಂಪಿ ಸಂಪುಟ*, ಕನ್ನಡ ವಿ.ವಿ., ಹಂಪಿ.
4. ವಾಸುದೇವನ್, ಸಿ.ಎಸ್., ವಿಜಯನಗರ ಪಟ್ಟಣ ಮತ್ತು ಅದರ ಉಪನಗರಗಳು', ಪು. 300–307, *ಹಂಪಿ ಸಂಪುಟ*, ಕನ್ನಡ ವಿ.ವಿ., ಹಂಪಿ.
3. ಕೊಟ್ರೇಶ್. ಎಂ., 2006, 'ಹಂಪಿಯ ರಕ್ಷಣಾ ವಾಸ್ತು' ಪು. 245–271, *ಹಂಪಿ ಸಂಪುಟ*, ಕನ್ನಡ ವಿ.ವಿ., ಹಂಪಿ.
4. ಕಲಬುರ್ಗಿ, ಎಂ.ಎಂ.(ಸಂ), 1994, *ಕರ್ನಾಟಕದ ಕೈಫಿಯತ್ತುಗಳು*, ಕನ್ನಡ ವಿಶ್ವವಿದ್ಯಾಲಯ.

5. ಶರಣಬಸಪ್ಪ ಕೋಲ್ಕಾರ, 2010, 'ವಿಜಯನಗರದ ಉತ್ತರದಿಕ್ಕಿನ ಬಸವಪಟ್ಟಣದ್ವಾರ ಶೋಧನೆ', ಪು. 217–222, *ವಿಜಯನಗರ ಅಧ್ಯಯನ* ಸಂ. 14 ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

6. ಸಿದ್ದಲಿಂಗೇಶ್ವರ ಸ್ವಾಮಿಗಳು, 1983, *ಶ್ರೀ ಪಂಪಾಮಹಾತ್ಮೆ*, ಶ್ರೀಗುರು ವೃಷಭಾಶ್ರಮ, ಹೊಳಗುಂದಿ.

7. ಕಲಬುರ್ಗಿ, ಎಂ.ಎಂ., *ಪೂರ್ವೋಕ್ತ.*

8. ಮಹಾದೇವ, ಸಿ, 2002 'ಕುರುಗೋಡು ಚರಿತ್ರೆ', ಪು. 27–42, *ಕುರುಗೋಡು*, ಕನ್ನಡ ವಿಶ್ವವಿದ್ಯಾಲಯ, ಹಂಪಿ.

9. ಶರಣಬಸಪ್ಪ ಕೋಲ್ಕಾರ, 1997, 'ಕನಕಗಿರಿಯ ವಿಜಯನಗರ ಅರಸರ ಆರು ಅಪ್ರಕಟಿತ ಶಾಸನಗಳು', ಪು. 115–121, *ಸತ್ಯಶುದ್ಧಕಾಯಕ*, ಸಂ. 7–3–4 ಚಿತ್ರದುರ್ಗ.

10. ಶರಣಬಸಪ್ಪ ಕೋಲ್ಕಾರ, 2000, 'ಹಂಪಿ ವಿರೂಪಾಕ್ಷ ದೇವಾಲಯದ ಕನಕಗಿರಿ ಗೋಪುರದ ನಿರ್ಮಾಣ ಕಾಲ ಮತ್ತು ಕರ್ತೃ–ಒಂದು ಪರಿಶೀಲನೆ', ಪು. 44–46, *ವಿಜಯನಗರ ಅಧ್ಯಯನ*, ಸಂ. 5, ಪ್ರಾ.ಮ.ಸಂ. ನಿರ್ದೇಶನಾಲಯ, ಮೈಸೂರು.

11. ಕ್ಷೇತ್ರ ಕಾರ್ಯದಲ್ಲಿ ತಿಳಿದ ಸಂಗತಿ.

12. ಸಾಂಸ್ಕೃತಿಕ ವಿಸ್ತಾರದ ಕಲ್ಪನೆಯನ್ನು ಜನರ ಭಾವನಾತ್ಮಕ ನೆಲೆಯಲ್ಲಿ ಪರಿಭಾವಿಸುವುದು.

26

ಪ್ರೌಢದೇವರಾಯನ ಕಾಲದ ಕಾವ್ಯಗಳಲ್ಲಿ ವಿಜಯನಗರದ ವರ್ಣನೆ

ಡಾ॥ ಮಲ್ಲಿಕಾರ್ಜುನ ಕುಂಬಾರ

ಪ್ರಪಂಚದ ಗಮನವನ್ನು ತನ್ನೆಡೆಗೆ ಸೆಳೆದ, ವಿಶ್ವವಿಖ್ಯಾತ ವಿಜಯನಗರದ ಚರಿತ್ರೆಯಲ್ಲಿ ಬಹುಖ್ಯಾತಿಯನ್ನು ಹೊಂದಿದ ಅರಸರಲ್ಲಿ ಪ್ರೌಢದೇವರಾಯ ಅಥವಾ ಇಮ್ಮಡಿ ದೇವರಾಯನ ಹೆಸರು ಚಿರಸ್ಥಾಯಿಯಾಗಿದೆ. ವಿಜಯನಗರವನ್ನು ಆಳಿದ (1424–49) ಸಂಗಮ ವಂಶದವರಲ್ಲಿ ಈತನು ಪ್ರಸಿದ್ದನಾದ ದೊರೆ. ಈತನ ಆಳ್ವಿಕೆಯ ಅವಧಿಯನ್ನು ಸುವರ್ಣಯುಗವೆಂದೇ ಕರೆಯಲಾಗುತ್ತದೆ. ಈ ಅವಧಿಯಲ್ಲಿ ಸುಮಾರು ಮುನ್ನೂರು ಶಾಸನಗಳು, ವಿದೇಶಿ ಪ್ರವಾಸಿಗರ ಬರಹಗಳು, ಮತ್ತು ಸಾಹಿತ್ಯಕೃತಿಗಳನ್ನು ಗಮನಿಸಿದಾಗ ಕಲೆ, ಸಾಹಿತ್ಯಗಳಿಗೆ ಈ ಅರಸನು ನೀಡಿದ ಅಗಾಧವಾದ ಪ್ರೋತ್ಸಾಹವನ್ನು ಗಮನಿಸಿದರೆ ಈತನು ಅಸಾಮಾನ್ಯನಾದ ದೊರೆಯಾಗಿದ್ದನು. ಆ ಕಾಲದ ಸಾಹಿತ್ಯವು ಓದಿ ಹರ್ಷಪಡುವ ಸಾಹಿತ್ಯವಲ್ಲ. ಅದು ಸಾಹಿತ್ಯೇತರ ಕಾರಣಗಳಿಗಾಗಿ ಜನಾಂಗ ಸಂಸ್ಕೃತಿಯ ಧಾರ್ಮಿಕ ಶ್ರದ್ಧೆ, ಸಾಮಾಜಿಕ ಪುರೋಭಿವೃದ್ಧಿಯ ಮಾನವ ಕಲ್ಯಾಣ ಚಿಂತನೆಯ ವಿವಿಧ ಮಹತ್ತರ ಕಾರ್ಯ ಸಾಧನೆಗಳ ದೃಷ್ಟಿಯಿಂದ ಚಿಂತನಶೀಲ ಸಾಹಿತ್ಯ.

ಆ ಕಾಲದ ಸಾಹಿತ್ಯವು ವಿಜಯನಗರವನ್ನು ನಿಜವಾದ ಅರ್ಥದಲ್ಲಿ ವಿಜಯಕಲ್ಯಾಣ ನಗರವನ್ನಾಗಿಸಿದ ಮಹೋನ್ನತ ಪ್ರತಿಭಾಸೃಷ್ಟಿಯ ಮೇರುಸಾಹಿತ್ಯವಾಗಿದೆ. ವಿಜಯನಗರ ಸಾಮ್ರಾಜ್ಯದಲ್ಲಿ ಸರ್ವಧರ್ಮಗಳ ಸಮನ್ವಯತೆಯ ಬೀಜವನ್ನು ಬಿತ್ತಿ, ತನ್ನ ಸೈನ್ಯದಲ್ಲಿ ಮತ್ತು ಆಡಳಿತದಲ್ಲಿ ಮುಸ್ಲಿಂರಿಗೆ ಅವಕಾಶವನ್ನು ನೀಡಿದ ಮೊದಲಿಗನೆಂಬ ಹೆಗ್ಗಳಿಕೆಗೆ ಪ್ರೌಢದೇವರಾಯ ಪಾತ್ರನಾಗಿದ್ದಾನೆ. ಈ ಅವಧಿಯಲ್ಲಿ ಅತ್ಯುತ್ತಮವಾದ ಸುಮಾರು ಇಪ್ಪತ್ತಕ್ಕೂ ಹೆಚ್ಚು ಮಂತ್ರಿಗಳು ಈತನ ಆಸ್ಥಾನದಲ್ಲಿದ್ದರೆಂದು ಶಾಸನಗಳು ಹೇಳುತ್ತವೆ. ಸ್ವರ್ಗಾಧಿಪತಿಯಾದ ಇಂದ್ರನು ತನ್ನ ವೈಭವಸಹಿತನಾಗಿ "ಭೂವಿನುತ ವಿಜಯ ಕಲ್ಯಾಣ"ಕ್ಕೆ ಬಂದನೋ ಎಂಬಂತೆ ದೇವರಾಯನು ಜನ್ಮವನ್ನೆತ್ತಿ, ವಿಜಯನಗರದ ವೈಭವವನ್ನು ಹೆಚ್ಚಿಸಿದನಂತೆ. ಆ ಕಾಲದ ಕವಿ ವಿರೂಪಾಕ್ಷ ಪಂಡಿತನು ತನ್ನ ಚನ್ನಬಸವ ಪುರಾಣದ ಕಾಲಜ್ಞಾನ ಸಂಧಿಯಲ್ಲಿ 'ಹರಿಹರನ ವಂಶದಲ್ಲಿಯೇ ಮುಂದೆ ಪ್ರೌಢರಾಯನು ವಿದ್ಯಾನಗರವನ್ನಾಳುವನು. ಒಮ್ಮೆ ದೇವೇಂದ್ರನು ಕೈಲಾಸದಲ್ಲಿ ವಿಕಟಾಂಗನಾದ ಗಣೇಶ್ವರನೊಬ್ಬನನ್ನು ಕಂಡು ಕಟುಕಿಯಾಡಲು ಅವನಿಂದ ಶಾಪಗ್ರಸ್ತನಾಗಿ ಭೂಲೋಕಕ್ಕೆ ಬಂದನೆಂದು' ಪ್ರೌಢರಾಯನ ಪೂರ್ವವೃತ್ತಾಂತವನ್ನು ಹೇಳುತ್ತಾನೆ.

ವಿಜಯನಗರ ಸಿಂಹಾಸನವನ್ನು ಏರುವ ಪೂರ್ವದಲ್ಲಿ ಶ್ರೀವಿರೂಪಾಕ್ಷ ದೇವಾಲಯಕ್ಕೆ ಸುತ್ತಾಲಯ ಮತ್ತು ಗೋಪುರಗಳಿರಲಿಲ್ಲ. ಅವುಗಳನ್ನು ನಿರ್ಮಿಸಿ, ಗೋಪುರದ ಮಧ್ಯದ ತೇರುಬೀದಿಯಲ್ಲಿದ್ದ ಗಿಡಗಂಟಿಗಳನ್ನು ತೆಗೆಯಿಸಿ, ಬೀದಿಯನ್ನು ಸಮಗೊಳಿಸಿ ವಿರೂಪಾಕ್ಷನ ತೇರು ಸುಗಮವಾಗಿ ಸಾಗುವಂತೆ ಮಾಡಿದನು. ಬೀದಿಯ ಎರಡು ಪಕ್ಕದಲ್ಲಿ ಹಣ್ಣು-ಹೂವಿನ ಗಿಡಗಳನ್ನು ನೆಡಿಸಿದನು. ಇಂಥ ಘನತರವಾದ ವ್ಯಕ್ತಿತ್ವವನ್ನು ಹೊಂದಿದ ದೇವರಾಯನನ್ನು ಚರಿತ್ರೆಕಾರರು ಅಷ್ಟಾಗಿ ಗಮನಿಸಿಲ್ಲವೆಂದು ಕಾಣುತ್ತದೆ. ಇದಕ್ಕೆ ಕಾರಣ ವಿಜಯನಗರದ ಚರಿತ್ರೆಯನ್ನು ನೀಡಿದ ವಿದೇಶಿ ಬರಹಗಾರರಿಗೆ ಮತ್ತು ದೇಶೀಯ ಚರಿತ್ರೆಗಾರರಿಗೆ ಮೊದಲಿನ ಸಂಗಮ ವಂಶದ ಮನೆತನಗಳ ಬಗ್ಗೆ ಹೆಚ್ಚಿನ ಮಾಹಿತಿಯು ದೊರೆಯಲಾರದ್ದು. ಆದರೆ ಈ ವಂಶದ ಅರಸರು ಕಟ್ಟಿದ ಸೌಧದ ಮೇಲೆ ಮುಂದಿನ ಅರಸರು ತಮ್ಮ ಸಾಧನೆಯನ್ನು ಸಾಧಿಸಿದರು.

ತುಂಗಭದ್ರೆಯ ತೀರ ಅದೆಷ್ಟೋ ಕನ್ನಡ ಕವಿಗಳ ಸಂಚಾರಭೂಮಿಯಾಗಿದೆ. ವಿಜಯನಗರ ಸಾಮ್ರಾಜ್ಯದ ಪರಮಾಭಿಮಾನಿಯಾಗಿದ್ದ ಪ್ರೌಢರಾಯನ ಪ್ರಧಾನ ಅಮಾತ್ಯ, ದಂಡಾಧೀಶ, ಎಲ್ಲ ಸಹೃದಯರ ಚರಣಾಂಬುಜಕ್ಕೆ ಶರಣೆಂದ ಲಕ್ಕಣ್ಣದಂಡೇಶನು 'ಶಿವತತ್ತ್ವಚಿಂತಾಮಣಿ' ಎನ್ನುವ ಅನರ್ಘ್ಯ ಕೃತಿರತ್ನ ರಚಿಸಿದನು. ಈತನು ವಿಜಯನಗರವನ್ನು

ಪರಹಿತದ ಬೀಡು, ಸತ್ಯದ ನುಡಿಯ ನಡುನಾಡು
ಕರುಣಾಬ್ದಿಯಿಕ್ಕೆ, ಕಾಮಿತ ಸುಖದ ತೆಕ್ಕೆ, ಶಶಿ
ಧರನ ಸಾಮರ್ಥ್ಯದಾಗರ, ಸದಾಚಾರ ಸದ್ಭಕ್ತಿಗಳ ಜನ್ಮಭೂಮಿ
ಪರತರ ಶಿವಾನುಭವಿಗಳ ಪರಿಮಿತ ಗೃಹಂ
ಪರಿಕಿಪರಿಗಿದು ವಿಜಯ ಕಲ್ಯಾಣವಾದುದೀ
ಧರೆಯರಿಯೆ ದೇವರಾಜೇಂದ್ರಪುರವೆಂಬವರ ಚರಣಾಂಬುಜಕ್ಕೆ ಶರಣು

ಎನ್ನುತ್ತಾ ಇಂತಹ ವಿಜಯ ಕಲ್ಯಾಣ ನಗರದ ಉಜ್ವಲ ವೈಭದ ಮಹಿಮೆಯನ್ನು ತನ್ನ ಕಾವ್ಯದಲ್ಲಿ ಕಟ್ಟಿದ ಲಕ್ಕಣ್ಣ ದಂಡೇಶನ 'ಚರಣಾಂಬುಜಕ್ಕೆ ಶರಣು ಶರಣಾರ್ಥಿ' ಎನ್ನಲೇಬೇಕು. ಮುಂದುವರಿದು

ನಿಜಭುಜ ಪರಾಕ್ರಮದಿ ಮೂರುರಾಯರೆನಿಪ್ಪ
ಗಜಘಂಟೆಗಳಂ ವಿದಾರಿಸಿ ಪಂಚಮುಖನಾಗಿ
ಸಜನರಂ ಪರಿರಕ್ಷಿಸುತ ಶಿವಾರ್ಚಕರಿಗನಿಶಂ ಸಮಾಧಾನವಿತ್ತು
ವೃಜಿನಹರ ಪಂಪಾವಿರೂಪಾಕ್ಷ ಚರಣಮಂ
ಭಜಿಸುತಂ ವಿಜಯಕಲ್ಯಾಣಪುರದೊಳು ಮೆರೆವ
ವಿಜಯನೆನೆ ದೇವರಾಜೇಂದ್ರನಿರುವರಿವವರ ಚರಣಾಂಬುಜಕ್ಕೆ ಶರಣು

ಎನ್ನುತ್ತಾನೆ. ಈ ರಾಜನ ಕಾಲಕ್ಕೆ ವಿಜಯನಗರವು ಕೇವಲ ವಿಜಯನಗರವಾಗಿ ಉಳಿಯದೇ ಕನ್ನಡ ಜನಾಂಗದ ಸಮಷ್ಟಿ ಕಲ್ಯಾಣವನ್ನು ಬಯಸಿದ ವಿಜಯ ಕಲ್ಯಾಣ ಎನ್ನುವ ಕೀರ್ತಿಯನ್ನು ಪಡೆಯಿತು ಎಂದು ಮನದುಂಬಿ ಹಾಡಿ ಹೊಗಳುತ್ತಾನೆ. ಈತನು ವಿಜಯನಗರಿಯನ್ನು ವಿಜಯ ಕಲ್ಯಾಣಪುರವೆಂದು ಪ್ರತಿಷ್ಠಾಪಿಸಿದ ಮಹಾನುಭಾವ ! ಕವಿ ಲಕ್ಕಣ್ಣ ದಂಡೇಶನನ್ನು ಆಗ ವಿಜಯನಗರಕ್ಕೆ ಭೇಟಿ ನೀಡಿದ ಪರ್ಷಿಯಾದೇಶದ ರಾಯಭಾರಿ ಅಬ್ದುಲ್ ರಝಾಕ್‌ನು ಮನದುಂಬಿ ಹೊಗಳುತ್ತಾ, ಕೆಲವು ಮುತ್ತಿನಂತಹ ಮಾತುಗಳನ್ನು ಈತನ ಬಗ್ಗೆ ಬರೆದಿದ್ದಾನೆ.

ಕವಿಯು ತನ್ನ ಒಡೆಯ ದೇವರಾಯನ ವೈಭವವನ್ನು ಭಾವತುಂಬಿ ಬಣ್ಣಿಸುವಲ್ಲಿ ತನ್ಮಯನಾಗುತ್ತಾನೆ :

ದೇವಲೋಕದ ಸಕಲ ವೈಭವಂಗಳು ಸಹಿತ
ಭೂವಿನುತ ವಿಜಯ ಕಲ್ಯಾಣಪುರಕೆಯ್ತಂದು
ಭಾವಜ ವಿದಾರಿ ಪಂಪಾವಿರೂಪಾಕ್ಷ ಭವನದ ನಾಲ್ಕುದೆಸೆಗಳಲ್ಲಿ
ತೀವಿ ಕಿಕ್ಕಿರಿಗಿರಿದ ಮಣಿಗಳಸ ಕೋಟಿಗಳ
ಲಾವಣ್ಯತರ ಗೋಪುರಂಗಳಂ ರಚಿಸಿದಂ
ಶ್ರೀ ವೀರದೇವರಾಜೇಂದ್ರನೆಂದರಿವವರ ಚರಣಾಂಬುಜಕ್ಕೆ ಶರಣು

ಎಂದು ಹೊಗಳುತ್ತಾನೆ. ಪಂಪಾಕ್ಷೇತ್ರದ ವರ್ಣನೆ, ತುಂಗಭದ್ರೆ, ವಿಜಯನಗರಕ್ಕೆ ಸಂಬಂಧಿಸಿ ಬರೆದ ಪದ್ಯಗಳನ್ನು ಗಮನಿಸಿದರೆ ಕವಿ ಈ ಸಂದರ್ಭದಲ್ಲಿ ಹರಿಹರನ ಪಂಪಾಕ್ಷೇತ್ರದ ರಗಳೆಯನ್ನು ಕೂಡ ಮೀರಿಸುತ್ತದೆ. ವಿಜಯನಗರದ ಸುತ್ತಲಿನ ಕೆಲವು ಊರುಗಳಾದ ಬುಕ್ಕಸಾಗರ, ಶಿವಪುರ, ಕಾಮಲಾಪೂರ, ಗಂಗಾವತಿಪುರ, ಜಂತಗಲ್ಲು, ಸಂಗಮಪುರ, ವಿಪ್ರಪುರ, ಪ್ರಸನ್ನಪುರ, ಕಳಸಪುರ, ಸಿಂಗೆನಾಯಕಪುರ, ಶೀಲವಂತಪುರ, ಅಮರಾವತಿ, ಬಸವಪುರ, ಹರಿಹರಪುರ, ವಿರುಪಾಪುರ, ರಾಮಾಪುರ, ಆನೆಗುಂದಿ, ಇತ್ಯಾದಿ ಊರವರ ಭಕ್ತಿಯ ವೈಶಿಷ್ಟ್ಯವನ್ನು ನಿರೂಪಿಸುತ್ತಾನೆ.

ಅದೇ ಕಾಲದ ಮತ್ತೊಬ್ಬ ಕವಿ ಸಿದ್ದನಂಜೇಶನು ಪ್ರೌಢರಾಯನ ಓಲಗದ ಚಿತ್ರವನ್ನು ತನ್ನ 'ಗುರುರಾಜಚರಿತ್ರೆ'ಯಲ್ಲಿ ಅರಸನ ಆಸ್ಥಾನದಲ್ಲಿ ವಿವಿಧ ಭಾಷಾ ಕವಿಗಳು, ಗಮಕಿಗಳಿದ್ದ ಬಗ್ಗೆ ಬಣ್ಣಿಸಿದ್ದಾನೆ.

ಕವಿ ಗಮಕಿ ವಾದಿ ವಾಗ್ಮಿಗಳ ಬಿಲ್ಲುಲಿಯೆಸೆಯೆ
ಅವನೀಶರಿಷ್ಟ ಸಾವಂತ ಮನ್ನೆಯರು ಬಾಂ
ಧವ ಮಂತ್ರಿಗಳು ಮಂಡಲಿಕ ಮುಕುಟ ವರ್ಧನರು ಎಡಬಲ ದೊಳೋಲೈಸಲು
....
ದೇವರಾಜವರೇಣ್ಯ ರತ್ನಪೀಠದೊಳು ಕುಳಿತಿರಲು........'

ಅದೇ ಕಾಲದ ಚಂದ್ರಶೇಖರನೆಂಬ ಕವಿಯು 'ಪಂಪಾಸ್ಥಾನ ವರ್ಣನಂ' ಮತ್ತು 'ಶಂಕರ ಶತಕ' ಎಂಬ ಎರಡು ಕೃತಿಗಳನ್ನು ರಚಿಸಿದ್ದಾನೆ. ಪಂಪಾಸ್ಥಾನ ವರ್ಣನಂ ಕೃತಿಯನ್ನು ಕನ್ನಡದ ತೀರ್ಥ ಪ್ರಬಂಧವೆಂದು ಕರೆಯುತ್ತಾರೆ. ಅದರಲ್ಲಿ

ಕರಮೆಸೆವ ಹೇಮಕೂಟಮೆ
ವರಪೀಠಮದಾಗೆ ಸೌಧರತ್ನ ಮಯೂಖ
ಸ್ಫುರಣಂ ಜ್ಯೋತಿರ್ಲಿಂಗದ
ಪರಿಯಿಂ ಥಳಥಳಿಸಿ ಮೆರೆವುದಭವನಭವನಂ

ಎನ್ನುತ್ತಾ ಹೇಮಕೂಟವೇ ಪೀಠ. ಸೌಧರತ್ನ ಪ್ರಕಾಶದ ಸ್ಫೂರಣ ಸಾಕಾರದ ವಿರೂಪಾಕ್ಷಲಿಂಗವೇ ಜ್ಯೋತಿರ್ಲಿಂಗವೆನ್ನುತ್ತಾನೆ. ಕವಿಯು ಪಂಪಾಕ್ಷೇತ್ರದ ಹಿರಿಮೆಯನ್ನು ಹೊಗಳುವಲ್ಲಿ ತನ್ನ ಮನಸ್ಸನ್ನು ಮುಡುಪಾಗಿಸಿದ್ದಾನೆ. ವಿಜಯನಗರವೆಂದರೆ ಕೈಲಾಸವೆಂದು ಹೇಳುತ್ತಾ, ಪಂಪಾಕ್ಷೇತ್ರದ ಪೂರ್ವ ಪಶ್ಚಿಮ ದಕ್ಷಿಣ ದ್ವಾರಗಳಲ್ಲಿ ಕಿನ್ನರೇಶ್ವರ, ಜಂಬುಕೇಶ್ವರರು ಪರಿವಿಡಿಯ ದ್ವಾರಪಾಲಕರಾಗಿ ನೆಲಸಿದ್ದಾರೆ. ತವನಿಧಿ ದೇವತೆಯಾಗಿ ಪಂಪಾಭವಾನಿಯು ಇಲ್ಲಿ

ವಾಸವಾದದ್ದರಿಂದ ಇದು ಪಂಪಾಕ್ಷೇತ್ರವೆಂದು ಹೆಸರು ಪಡೆದಿದೆ. ಈ ಕ್ಷೇತ್ರದ ಪರಿಧಿಯಲ್ಲಿ ಇರುವ ಅನಂತತೀರ್ಥಗಳನ್ನು, ಪುಣ್ಯಾಶ್ರಮಗಳನ್ನು, ತಪೋವನಗಳನ್ನು ಕವಿಯು ಭಕ್ತಿಭಾವದಿಂದ ಸ್ತುತಿಸಿದ್ದಾನೆ. ಪಂಪಾತೀರದ ಬಳಿವಿಡಿದು ತರೆ, ಸುಳಿಯುರ್ಬು, ಬೊಬ್ಬುಳಿಕೆ, ಪಾವಸೆಯಿಂದ ಹರಿಯುವ ತುಂಗಭದ್ರೆಯು ವಿರೂಪಾಕ್ಷನ ಸಾನಿಧ್ಯದಿಂದ ಪಾವನತೆಯನ್ನು ಪಡೆದಿದೆ. ಆ ಜಲ ರಸಪೂರವಾದ ಭಕ್ತಿಯ ಮಡು, ಶಾಂತಿ ರಸವು ಸಂಚಯವಾಗಿ ಕವಿಗೆ ಕಂಡಿದೆ.

ತುಂಗಭದ್ರೆಯ ತೆಂಕಣಾಭಿಮುಖವಾಗಿ ಕಾಣಿಸುವ ಋಷ್ಯಮೂಕ, ಮಾತಂಗ, ಹೇಮಕೂಟ ಪರ್ವತಗಳನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಾ, ಅಲ್ಲಿ ಸಾಕ್ಷಾತ್ ವಿರೂಪಾಕ್ಷನೇ ನೆಲಸಿದ ಹೇಮಕೂಟಾಚಲ ಪರಿಸರದ ಸಸ್ಯಾವಳಿ, ಪಶು ಪಕ್ಷಿ, ಮೃಗಸಂಕುಳ, ಪುಷ್ಪವಾಟಿಕೆಗಳನ್ನು ವಿವರಿಸುವದು ಒಂದಲ್ಲ ನೂರಾರು !, ದಾಳಿಂಬೆ, ಪಲಸು, ಪಕ್ಕೆ, ವಲಸು, ಪಾದರಿ, ಈಳೆ, ಹೇರೀಳೆ, ಕಿತ್ತಳೆ, ತೆಂಗು, ಚೆಂದೆಂಗು, ನಿಂಬೆ, ನೆಲ್ಲಿ, ಕಿರುನೆಲ್ಲಿ, ಅರನೆಲ್ಲಿ, ಮಾವು, ಮುತ್ತುಗ, ಕಡವ, ಅಣಿಲೆ, ಅತ್ತಿ, ನೇರಿಲು, ಕಿರುನೇರಲು, ಅರನೇರಲು, ಜಂಬುನೇರಲ, ತಾರೆ, ಬೋರೆ, ಕಕ್ಕೆ, ಬಿಕ್ಕೆ, ಕಲ್ಲುಬಾಳೆ, ಕರ್ಪುರಬಾಳೆ, ಆಲ, ಕೆಂಜಾಲ, ಹೊನ್ನೆ, ಸುರಹೊನ್ನೆ, ರುದ್ರಾಕ್ಷಿ, ಭದ್ರಾಕ್ಷಿ, ಜೀವರಕ್ಷೆ, ಸಂಪಿಗೆ, ನಾಗ, ಶೋಕೆ, ಅಶೋಕೆ, ಜಾಲ, ವಟ್ಟಿಜಾಲ, ತಾಳೆ, ಬಿಳಿದಾಳೆ, ಕೆಂದಾಳೆ, ಹಂದಾಳೆ, ಅಂಕೋಲೆ, ಗುಗ್ಗಲ, ಇತ್ಯಾದಿ ಪಲತರದ ಪೆರ್ಮರಗಳನ್ನು ಹೆಸರಿಸುತ್ತಾನೆ. ಅದಲ್ಲದೆ ರಾಜನ ಕಾಲದ ಪುಷ್ಪವಾಟಿಕೆಯನ್ನು 'ಋತುಗಳ ಸೆಜ್ಜೆ ತುಂಬಿಗಳ ಜೇವಣಸಾಲೆ ಮನೋಜನಸ್ತ್ರ ಸಂತತಿಯ ಸಮುದ್ಭವಸ್ಥಲಿ ಕುಮಾರ ಸಮೀರಣನಾಡುವಂಗಣಂ ರತಿಯ ಲತಾಗೃಹಂ ನೆಗಳ್ದ ಕಂಪಿನದೊಂದು ಕರಂಡಮೆನ್ನದಿನ್ನತಿಶಯಮಾಗಿ ಬಣ್ಣಿಸುವೆನಲ್ಲಿಯ ಪುಷ್ಪವಾಟಿಕೆಯಂ' ಎಂದು ವರ್ಣಿಸುತ್ತಾನೆ. ಪಂಪಾನಗರವನ್ನು 'ಸೊಂಪು ಪೆಂಪುವಿನಿಂಪುಗೊಂಡ ಪಂಪಾನಗರಿ ಸಿರಿಗೆಡೆ, ವಾಣಿಗೆ ಸಭಾಗೃಹ, ಸಮಸ್ತ ವಸ್ತುಗಳ ನೆಲೆ, ಪೆರ್ಮೆಗೆತವರ್ಮನೆ, ಶಿವಭಕ್ತಿಗೆ ಬೀಡು' ಎನ್ನುತ್ತಾನೆ. ಇದೇ ಸಂದರ್ಭದಲ್ಲಿ ಪಂಪಾಪುರಿಯ ವಾರನಾರಿ ನಿಕರವನ್ನು ಮೆರೆದಪ್ಪಿ ವರ್ಣಿಸುತ್ತಾನೆ. 'ನಟ್ಟ, ನಟ್ಟವಿಗ, ಗೋಷ್ಠಿಕಾರ, ನಗೆಗಾರ, ನುಡಿಗಾರನ್ನು ಮನ್ನಿಸಿ, ಬಿಂಕಬಿನ್ನಾಣದಿಂದ, ಜಾತಿ ಜಾಣ್ಮೆಯಿಂದ ಕೂಡಿದ ನಾರಿನಿಕರ ಏರು ಜವ್ವನದಲ್ಲಿ ರಾಗರಸ, ಸಾಗರದೋಳೋಲಾಡಿ ಬಂದು, ನಾದ ಮೂರ್ತಿಯಾದ ವಿರೂಪಾಕ್ಷನ' ಮುಂದೆ ನರ್ತನಕ್ಕೆ ಅಣಿಯಾಗುತ್ತಾರೆ. ಅಂದು ದೇವಾಲಯದಲ್ಲಿ ಪ್ರತ್ಯಕ್ಷವಾಗಿ ನಡೆಯುತ್ತಿದ್ದ ರಂಗಭೋಗವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾನೆ. ವಿರೂಪಾಕ್ಷನ ಆಸ್ಥಾನದ ನರ್ತನ ಸೇವೆಯನ್ನು ವರ್ಣಿಸುವಾಗ ಈತ ಹೇಳುವ ವಾದ್ಯವಾದಕರು, ದೇಶೀಗಾರ್ತಿಯರು, ಆಡಿತೋರಿದ ಮಾತಂಗಿ, ಯೋಗಿಣಿ, ಶಿಖರಿ ಮುಂತಾದ ನರ್ತನ ರೂಪಗಳನ್ನು, ಜಿಂದು, ಚಕ್ಕಡಿ, ಕವಿಲು, ಗಜಲು, ಬೈತು ಇತ್ಯಾದಿ ಆಟಗಳ ವಿವರಣೆಯನ್ನು ನೀಡುತ್ತಾನೆ. ಈ ಎಲ್ಲ ವಿಷಯಗಳು ಅಧ್ಯಯನಕಾರರಿಗೆ ಗಮನಾರ್ಹ ಆಕರಗಳಾಗುತ್ತವೆ.

ಹದಿನೈದನೆಯ ಶತಮಾನದ ಉತ್ತರಾರ್ಧದಲ್ಲಿದ್ದ 'ಅದೃಶ್ಯ'ನೆಂಬ ಕವಿಯು ತನ್ನ 'ಪ್ರೌಢರಾಯನ ಕಾವ್ಯ'ದಲ್ಲಿ ಪ್ರೌಢರಾಯನ ರಾಜಧಾನಿಯನ್ನು ವರ್ಣಿಸುವ ರೀತಿ ಅನನ್ಯವಾಗಿದೆ. 'ವಿಜಯನಗರವು ಸುಂದರವಾದ ಹೆಣ್ಣಿನ ಮುತ್ತಿನ ಮೂಗುತಿಯಂತೆ ಹೊಳೆಯುತ್ತಿತ್ತು. ಆದಿಶೇಷನು ತನ್ನ ಹೆಡೆಯನ್ನು ಎತ್ತಿ ನೋಡುವನೋ ಏನೋ ಎನ್ನುವಂತೆ ಕೋಟೆಯ ತೆನೆಗಳು ಎದ್ದು ಕಾಣಿಸುತ್ತಿದ್ದವು. ಇಂದ್ರನ ಅಮರಾವತಿಗಿಂತ ಎತ್ತರದಲ್ಲಿ ತಾವೇನು ಕಡಿಮೆ ಎನ್ನುವಂತೆ ಸುತ್ತಲಿನ ಕೊತ್ತಳಗಳು ಶೋಭಿಸುತ್ತಿದ್ದವು. ತಮ್ಮ ಅರಸನನ್ನು ಯಾರಿಂದಲೂ ಸೋಲಿಸಲು ಸಾಧ್ಯವಿಲ್ಲವೆಂದು ಸ್ವರ್ಗಕ್ಕೆ ಕೈಎತ್ತಿ ಹೇಳುತ್ತಿವೆ ಎನ್ನುವಂತೆ ರತ್ನಖಚಿತವಾದ ಗೋಪುರಗಳು ಹೊಳೆಯುತ್ತಿದ್ದವು. ಸೂರ್ಯಚಂದ್ರ ಬೀದಿಗಳು, ಅದರ ಬದಿಯಲ್ಲಿ ರಾರಾಜಿಸುವ ಅಂಗಡಿಗಳು ಇದ್ದವು. ನಗರದ ಎಲ್ಲ ಕಡೆಯಲ್ಲಿ ಜಾಣರು, ಭಾಗ್ಯಶಾಲಿಗಳು, ವಿವೇಕಿಗಳು, ಬಿಲ್ಲುಬಾಣಗಳಲ್ಲಿ ನಾಲ್ಕು ದೆಸೆಗೆ ಪರಿಣಿತಿಯುಳ್ಳವರು, ಭಾಷೆಯ ಭಾವವನ್ನು

ಅರಿತವರು, 64 ಕಲೆಗಳಲ್ಲಿ ಪರಿಣಿತಿಯನ್ನು ಹೊಂದಿದವರು, ಭಾಳಾಕ್ಷನಾದ ಶಿವನನ್ನು ಆರಾಧನೆಯನ್ನು ಮಾಡುತ್ತಿದ್ದವರು ಇದ್ದರೇ ವಿನಃ ನಗರದಲ್ಲಿ ಖುಲ್ಲರು, ಮೂರ್ಖರು ಮುಖಹೀನರು, ಕಪಟರು ಇರಲಿಲ್ಲ'ವೆಂದು ಹೇಳುತ್ತಾ, ಇಂತಹ ಸುಂದರವಾದ ನಗರದಲ್ಲಿ ಪ್ರೌಢಭೂವರನು ಚಂದ್ರನಂತೆ ರಾರಾಜಿಸುತ್ತಿದ್ದನು.

ಕವಿ ರುದ್ರನೆಂಬವನು ತನ್ನ 'ಕರಸ್ಥಲ ನಾಗಿದೇವನ ಚರಿತ್ರೆ'ಯಲ್ಲಿ ವಿದ್ಯಾನಗರಿಯಲ್ಲಿ ಕುಹಕ ಬುದ್ಧಿಯವರಿಲ್ಲ, ಇಲ್ಲಿರುವವರು ರುದ್ರಭಕ್ತರು, ಘನಶಿದ್ದರು, ಶುದ್ದಸಜ್ಜನರು, ಶೀಲವಂತರು ಮಾತ್ರ ಎನ್ನುತ್ತಾನೆ. ಈತನು ಅದೃಶ್ಯ ಕವಿಯ ಹೋಲಿಕೆಯನ್ನೆ ನೀಡುತ್ತಾನೆ.

ಮೋದಿಯ ರುದ್ರನೆಂಬ ಕವಿಯು ತನ್ನ 'ನೂರೊಂದು ವಿರಕ್ತರ ಕಾವ್ಯ'ದಲ್ಲಿ –

ತೋರ ಮೌಕ್ತಿಕ ಮಾಣಿಕ್ಯ ಗೋ ಮೇದಕಂ
ಸಾರ ವಜ್ರ ವೈಢೂರ್ಯ ನೀಲಗಳಂ
ಮಾರುತಿಹ ಹೊರೆ ಹೀರಂಗಡಿಯ ಸಾಲ್ಗಳಂ........

ಮುತ್ತು ರತ್ನಗಳನ್ನು ಬಯಲಿನಲ್ಲಿಯೇ ರಾಶಿರಾಶಿಯಾಗಿ ಹರಡಿಕೊಂಡು ವ್ಯಾಪಾರ ಮಾಡುತ್ತಿದ್ದ ವೈಭವದ ಚಿತ್ರಣವನ್ನು ವಿದೇಶಿ ಪ್ರವಾಸಿಗ ಅಬ್ದುಲ್ ರಝಾಕನು ಪ್ರೌಢರಾಯನ ರಾಜಧಾನಿಯ ವೈಭವವನ್ನು ವರ್ಣಿಸುವ ರೀತಿಯಲ್ಲಿ ವರ್ಣಿಸುತ್ತಾನೆ.

ಗಜಬೇಂಟೆಕಾರ, ಪರಮೇಶ್ವರ ವೀರಪ್ರತಾಪ, ಮಹಾಮಂಡಳೇಶ್ವರ, ಪಶ್ಚಿಮ ಸಮುದ್ರಾಧಿಪತಿ, ಅರಿರಾಯ ವಿಭಾಡನೆಂದು ಹಲವಾರು ಬಿರುದನ್ನು ಗಳಿಸಿದ ಪ್ರೌಢರಾಯನ ಆಳ್ವಿಕೆಯು 'ನಭೂತೋ ನಭವಿಷ್ಯತಿ' ಎನ್ನುವಂತಿತ್ತು. ಆಗ ನೂರೊಂದು ವಿರಕ್ತರು, ಮಗ್ಗೆಯ ಮಾಯಿದೇವರಂತಹ ಷಟ್‌ಸ್ಥಲ ನಿರ್ಣಾಯಕರು, ವಚನ ಸಂಕಲನಕಾರರಾದ ಮಹಾಲಿಂಗದೇವ, ಜಕ್ಕಣ್ಣ, ಟೀಕೆ-ವಾಖ್ಯಾನಕಾರರಾದ ಕಲ್ಲುಮಠದ ಪ್ರಭುದೇವರು, ಕುಮಾರ ಬಂಕನಾಥ, ಶ್ರೀಗಿರೀಂದ್ರ, ವೀರಶೈವ ಹೆಸರಾಂತ ಕವಿಗಳಾದ ಚಾಮರಸ, ಲಕ್ಕಣ್ಣ ದಂಡೇಶ, ಚಂದ್ರಕವಿ, ಕ್ರಿಯಾಶಕ್ತಿ, ಜೈನ ಕವಿಗಳಾದ ಭಾಸ್ಕರ, ಕಲ್ಯಾಣ ಕೀರ್ತಿ, ಚಂದ್ರಮ, ಜಿನದೇವಣ್ಣ, ವಿಜಯಣ್ಣ, ಮತ್ತು ಇಳೆಯ ಜಾಣರು ಮೆಚ್ಚುವಂತೆ ಕೃಷ್ಣ ಕಥೆಯನ್ನು ಹೇಳಿದ ಬ್ರಾಹ್ಮಣ ಕವಿಗಳ ಶಿರೋರತ್ನ ಕುಮಾರವ್ಯಾಸನಂತಹ ದಿಗ್ಗಜ ಕವಿಗಳು ಈತನ ಆಳ್ವಿಕೆಯಲ್ಲಿದ್ದರು. ಸಾಹಿತ್ಯ, ಸಾಂಸ್ಕೃತಿಕ, ಧಾರ್ಮಿಕ ಹಿರಿಮೆಯನ್ನು ಮೆರೆದ ಇಮ್ಮಡಿ ದೇವರಾಯನ ಕಾಲದಲ್ಲಿ ವಿದೇಶಿ ಪ್ರವಾಸಿಗರಾದ ನಿಕೊಲೊ-ಡಿ-ಕೊಂಟಿ (ಇಟಲಿ), ಅಬ್ದುಲ್ ರಝಾಕ್(ಪರ್ಷಿಯಾ), ಫೆರ್ನಾವೊ ನ್ಯೂನಿಜ್ (ಪೋರ್ತುಗಲ್ಲ) ರವರು ಭೇಟಿ ನೀಡಿ, ರಾಜನ ವೈಭವವನ್ನು ತಮ್ಮ ಬರಹದಲ್ಲಿ ದಾಖಲಿಸಿದ್ದಾರೆ.

ಇತಿಹಾಸವೆನ್ನುವದು ಕೇವಲ ಗತಕಾಲದ ಬೂದಿಯ ಬುಟ್ಟಿಯಲ್ಲ. ಆ ಕಾಲಖಂಡದ ಚಾರಿತ್ರಿಕ ಸಾಂಸ್ಕೃತಿಕ ಪ್ರಜ್ಞೆ, ಇದು ಜನಾಂಗ ಸಂವರ್ಧನೆಗೆ ಮಹತ್ವದ ದ್ರವ್ಯ, ಈ ಹಿನ್ನೆಲೆಯಲ್ಲಿ ಪ್ರೌಢರಾಯನ ಆಳ್ವಿಕೆಯು ಸಾಹಿತ್ಯಕ್ಕೆ ಹೊಸಮಾರ್ಗ ಕಲ್ಪಿಸಿ, ಅರಮನೆ-ಗುರುಮನೆಗಳಿಂದ ಏಕಕಾಲದಲ್ಲಿ ಹೊರಬಂದ ಕನ್ನಡದ ಉಜ್ವಲ ಸಾಹಿತ್ಯಿಕ ಪರಂಪರೆಗೆ ಅದು ನಿದರ್ಶನವಾಗಿದೆ. ಸಾಹಿತ್ಯದಲ್ಲಿ ಸೃಷ್ಟಿ ಕ್ರಿಯೆಯೊಡನೆ ಅನುಸೃಷ್ಟಿ ಕ್ರಿಯೆಯೂ ಅಷ್ಟೇ ಮಹತ್ವದ್ದು ಎಂಬ ವಿಚಾರ ವಿಮರ್ಶೆಗೆ ಪ್ರೌಢರಾಯನ ಕಾಲ ಒಂದು ಮಾದರಿಯಾಗಿದೆ.

ಹಂಪಿ ಕೃಷ್ಣ ದೇವಾಲಯದ ಶಾಸನಗಳ ಮಣಿಮಂಟಪ ಯಾವುದು?

ಡಾ॥ ಎಸ್. ಎನ್. ಶಿವರುದ್ರಸ್ವಾಮಿ

ದಕ್ಷಿಣ ಭಾರತದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯವು ಮಹತ್ವಪೂರ್ಣವಾದ ಹಾಗೂ ಪ್ರಕಾಶಮಾನವಾದ ಕಾಲಘಟ್ಟ. ಈ ಸಾಮ್ರಾಜ್ಯದ ಹದಿನಾರನೇ ಶತಮಾನದ ಎರಡು ಮತ್ತು ಮೂರನೇ ದಶಕಗಳಲ್ಲಿದ್ದ ಕೃಷ್ಣರಾಯನ ಆಳ್ವಿಕೆ (1509–1529) ನಿಜಕ್ಕೂ ವಿಲಕ್ಷಣವಾದುದು. ಇದರ ಹಿಂದಿನ ದಶಕಗಳಲ್ಲಿ ವಿಜಯನಗರ ಸಾಮ್ರಾಜ್ಯ ರಾಜಕೀಯವಾಗಿ ಹಿನ್ನಡೆಯನ್ನು ಅನುಭವಿಸಿತ್ತು. ಸಂಗಮ ವಂಶದ ಕೊನೆಯ ಅರಸರ ದುರ್ಬಲ ಆಡಳಿತ ನಿರ್ವಹಣೆ, ಸಾಳುವ ಅರಸರ ಅಕಾಲಿಕ ಮರಣ (ಕೊಲೆಯೋ ಅಥವಾ ಸಹಜ ಸಾವೋ ಇಲ್ಲಿ ಅಪ್ರಕೃತ) ಮತ್ತು ಸಾಮ್ರಾಜ್ಯದ ಅಧಿಕಾರ ಸಾಳುವರಿಂದ ತುಳುವ ಅರಸರಿಗೆ ಹಸ್ತಾಂತರವಾದದ್ದು – ಇವುಗಳಿಂದ ಸಾಮ್ರಾಜ್ಯದ ಘನತೆ–ಪ್ರತಿಷ್ಠೆ ಕುಗ್ಗತೊಡಗಿತ್ತು. ಇಂತಹ ಅತಂತ್ರ ರಾಜಕೀಯ ಪರಿಸ್ಥಿತಿ ನಿಲುಗಡೆ ಆದದ್ದು ತುಳುವ ಅರಸನಾದ ಕೃಷ್ಣದೇವರಾಯ ಅಧಿಕಾರಕ್ಕೆ ಬಂದ ನಂತರ.

ಕೃಷ್ಣರಾಯ ನಿರಂತರವಾಗಿ ದಿಗ್ವಿಜಯವನ್ನು ಗಳಿಸಿ, ವಿಜಯನಗರ ಸಾಮ್ರಾಜ್ಯವನ್ನು ವಿಸ್ತರಿಸಿದ ಹಾಗೂ ಬಲಗೊಳಿಸಿದ. ಅವುಗಳ ನೆನಪಿಗಾಗಿ ದೇವಾಲಯಗಳನ್ನು ನಿರ್ಮಿಸಿದ. ಸಾಹಿತ್ಯ, ಕಲೆಗಳನ್ನು ಒಳಗೊಂಡಂತೆ ಸಾಮ್ರಾಜ್ಯದಲ್ಲಿ ಸರ್ವತೋಮುಖವಾದ ಪ್ರಗತಿ ಉಂಟಾಯಿತು. ಕೃಷ್ಣದೇವರಾಯ ಅಧಿಕಾರಕ್ಕೆ ಬಂದ ಕೆಲಕಾಲದ ನಂತರ ಅವನ ಆಕ್ರಮಣಗಳು ಆರಂಭವಾದವು. ಅವನು ಕ್ರಿ.ಶ. 1513ರಲ್ಲಿ ಒರಿಸ್ಸದ ಗಜಪತಿ ಪ್ರತಾಪರುದ್ರನ ಮೇಲೆ ದಂಡೆತ್ತಿ ಹೊರಟ.[1] ಇವರಿಬ್ಬರ ನಡುವೆ ಯುದ್ಧ 1519ರ ವರೆಗೂ ಮುಂದುವರೆದು ಅಂತ್ಯವಾಯಿತು. ಉತ್ತಮ ಆಯಕಟ್ಟಿನ ಸ್ಥಾನಗಳಲ್ಲಿದ್ದ ಉದಯಗಿರಿ ಮತ್ತು ಕೊಂಡುವೀಡು ದುರ್ಗಗಳನ್ನು ಗಜಪತಿ ಅರಸರು ಸಂಗಮ ವಂಶದ ಆಳ್ವಿಕೆಯ ಅಂತ್ಯದಲ್ಲಿ ವಿಜಯನಗರ ಸಾಮ್ರಾಜ್ಯದಿಂದ ಕಿತ್ತುಕೊಂಡಿದ್ದರು.[2] ಇವುಗಳನ್ನು ಮರಳಿ ಪಡೆಯುವುದು ವಿಜಯನಗರ ಸಾಮ್ರಾಟರ ಆಕಾಂಕ್ಷೆ ಆಗಿತ್ತು. ತುಳುವ ವಂಶದ ನರಸನಾಯಕ ಇವುಗಳನ್ನು ಗೆದ್ದುಕೊಳ್ಳಲು ಉತ್ಕಟೇಚ್ಛೆಯನ್ನು ವ್ಯಕ್ತಪಡಿಸಿದ್ದ. ಇದು ಕೈಗೂಡಿದ್ದು ಅವನ ಮಗ ಕೃಷ್ಣರಾಯನ ಕಾಲದಲ್ಲಿ. ಇವನು ಒರಿಸ್ಸದ ಗಜಪತಿಗಳ ಮೇಲೆ ಕ್ರಿ.ಶ. 1513ರಲ್ಲಿ ಯುದ್ಧವನ್ನು ಕೈಗೊಂಡ. ಮರುವರ್ಷ 1514ರ ಜೂನ್ 9ರಂದು ಉದಯಗಿರಿ ದುರ್ಗ ಇವನ ವಶವಾಯಿತು.[3] ಕೃಷ್ಣದೇವರಾಯನು ಉದಯಗಿರಿಯ ಯುದ್ಧಗಳಲ್ಲಿ ಪಾಲ್ಗೊಂಡು, ಕ್ರಿ.ಶ. 1515ರ

ಫೆಬ್ರವರಿಯಲ್ಲಿ ವಿಜಯನಗರಕ್ಕೆ ಹಿಂದಿರುಗಿದ. ಅಲ್ಲಿರುವಾಗಲೇ ಉದಯಗಿರಿಯ ಬಾಲಕೃಷ್ಣ ದೇವಾಲಯದ ಪೂಜಾಮೂರ್ತಿಯಿಂದ ಆಕರ್ಷಿತನಾಗಿರಬೇಕು. ಈ ಮೂರ್ತಿಯನ್ನು ತಂದು ಕ್ರಿ.ಶ. 1515ರ ಫೆಬ್ರವರಿ 16ರಂದು ಹಂಪಿಯ ಕೃಷ್ಣದೇವಾಲಯದ **ಮಣಿಮಂಟಪ**ದಲ್ಲಿ ಪ್ರತಿಷ್ಠಾಪಿಸಿದ.[4] ಇದು ಯುದ್ಧದ ಗೆಲುವಿನ ಸೂರೆ ಅಲ್ಲ;[5] ಕೃಷ್ಣನ ಮೇಲಿನ ಭಕ್ತಿ ಮತ್ತು ವ್ಯಾಮೋಹದಿಂದ. ಅಲ್ಲಿನ ದೇವಾಲಯದ ಪರಿಸರದಿಂದ ಅರಸನು ಆಕರ್ಷಿತನಾಗಿದ್ದ. ಉದಯಗಿರಿಯ ಕೃಷ್ಣದೇವಾಲಯದ ಪುಷ್ಕರಣಿಯಂತೆಯೇ ಹಂಪಿಯ ಕೃಷ್ಣದೇಗುಲದ ಪುಷ್ಕರಣಿ ನಿರ್ಮಾಣವಾಗಿರುವುದು ಗಮನಿಸಬೇಕಾದ ಸಂಗತಿ. ಇನ್ನು ಅನುಸರಿಸಿ, ಅನಂತರದ ಕಾಲದಲ್ಲಿ ಹಂಪಿಯ ಉನ್ನತ ದೇವಾಲಯಗಳ ಪುಷ್ಕರಣಿಗಳು ರಚನೆ ಆದಂತೆ ಕಂಡುಬರುತ್ತದೆ.

ಹಂಪಿಯ ಕೃಷ್ಣದೇವಾಲಯದ ಸಂಕೀರ್ಣದಲ್ಲಿ ಉದಯಗಿರಿಯಿಂದ ತಂದ ಬಾಲಕೃಷ್ಣನ ಪ್ರತಿಮೆ ಪ್ರತಿಷ್ಠಾಪನೆ ಆಗಿರುವ **ಮಣಿಮಂಟಪ** ಯಾವುದು? ಅದೇ ರೀತಿ ಪ್ರತಿಷ್ಠಾಪನೆ ಆದ ಬಾಲಕೃಷ್ಣನ ಮೂರ್ತಿಯ ಸ್ವರೂಪ ಯಾವುದು? ಇವುಗಳನ್ನು ನಿರ್ಧರಿಸುವ ಪ್ರಯತ್ನವನ್ನು ಮಾಡಲಾಗಿದೆ.

ಮಣಿಮಂಟಪದ ಪರಿಕಲ್ಪನೆ ಮೂಡಿದ್ದು ಶ್ರೀವೈಷ್ಣವರಲ್ಲಿ. ಅದರ ರಚನೆ–ಸ್ವರೂಪ ಹದಿಮೂರನೇ ಶತಮಾನಕ್ಕಿಂತ ಹಿಂದೆ ಹೋಗುವುದಿಲ್ಲ.[6] 'ವಾತುಲಾಗಮ', 'ವಿಮಾನಾರ್ಚನ ಕಲ್ಪ', 'ಪುರುಷೋತ್ತಮ ಸಂಹಿತ', 'ವಾತುಲಶುದ್ಧ ಆಗಮ' ಗ್ರಂಥಗಳು ಮಣಿಮಂಟಪದ ಸ್ವರೂಪದ ಬಗ್ಗೆ ಮಾಹಿತಿಯನ್ನು ನೀಡುತ್ತವೆ. ಮಣಿಮಂಟಪವು ದೇವಾಲಯದ ಸಂಕೀರ್ಣದಲ್ಲಿ ಮುಖ್ಯದೇಗುಲದ ಮುಂದೆ, ಅದರ ಪ್ರಧಾನ ಅಕ್ಷರೇಖೆಯ ಮೇಲೆ ರಚನೆ ಆಗಿರುತ್ತದೆ. ವಿಷ್ಣುವಿನ ವಾಹನವಾದ ಗರುಡನನ್ನು ಈ ಮಂಟಪದಲ್ಲಿ ಗರ್ಭಗುಡಿಯ ಮೂರ್ತಿಗೆ ಅಭಿಮುಖವಾಗಿ ಪ್ರತಿಷ್ಠಾಪಿಸಬೇಕೆಂದು ಆಗಮಗಳು ತಿಳಿಸುತ್ತವೆ. ಮಣಿಮಂಟಪವನ್ನು ಪ್ರತ್ಯೇಕವಾಗಿ ನಿರ್ಮಿಸುವುದಾದರೆ ಪ್ರಧಾನ ದೇಗುಲದ ಉತ್ತರಭಾಗದಲ್ಲಿ ನಿರ್ಮಿಸಬೇಕೆಂದು ಶಾಸ್ತ್ರಗ್ರಂಥಗಳು ತಿಳಿಸುತ್ತವೆ. ಮಣಿಮಂಟಪವನ್ನು ಮುಕ್ತಾಗ್ರಾಸಗಳಿಂದ (ಅಥವಾ ಮುತ್ತಿನ ಮೂಲೆಗಳಿಂದ) ಅಲಂಕರಿಸಿರುತ್ತಾರೆ. ಈ ಮಾಹಿತಿಯನ್ನು ಮೇಲಿನ ಗ್ರಂಥಗಳು ತಿಳಿಸುತ್ತವೆ. ತಿರುಮಲ–ತಿರುಪತಿ ಶಾಸನದಲ್ಲಿ ಮಣಿಮಂಟಪವನ್ನು 'ತಿರುಮಣಿ ಮಂಟಪ'[7], 'ತಿರುಮಹಾಮಣಿಮಂಟಪ',[8] 'ತಿರುಮಾಮಣಿಮಂಟಪ'[9] ಎಂದು ಕರೆಯಲಾಗಿದೆ. ತಿರುಮಲ–ತಿರುಪತಿಯ ವೇಂಗಡಂ ದೇವಾಲಯದ ತಿರುಮಾಮಣಿಮಂಟಪದಲ್ಲಿ ಗರುಡಾಳ್ವಾರನನ್ನು ಪ್ರತಿಷ್ಠಾಪಿಸಲಾಗಿದೆ.[10] ಇದು ಗರುಡಮಂಟಪವೂ ಆಗುತ್ತದೆ. ಇದು ಆಯತಾಕಾರವಾಗಿ ಅಥವಾ ಚೌಕಾಕಾರವಾಗಿ ಇರಬಹುದು. ಇದನ್ನು ಪುಷ್ಪಮಂಟಪ ಎಂದೂ ಕರೆಯಲಾಗಿದೆ. ಮಣಿಮಂಟಪದಲ್ಲಿ ದೇಗುಲದ ಉತ್ಸವಮೂರ್ತಿಗಳನ್ನು ಇಡಲು ತಿರುಪತಿಯಲ್ಲಿ ಬಳಸಲಾಗಿದೆ. ಇದೇ ದೇವಸ್ಥಾನದಲ್ಲಿ ಮಣಿಮಂಟಪವು ಕಲ್ಯಾಣಮಂಟಪವಾಗಿ ಬಳಕೆ ಆಗಿರುವುದುಂಟು.

ಕಲ್ಯ ಮತ್ತು ಶ್ರವಣಬೆಳಗೊಳದ ಶಾಸನಗಳಲ್ಲಿ ಮಣಿಮಂಟಪವನ್ನು ವೈಕುಂಠದಲ್ಲಿ ವಿಷ್ಣುವಿನ ಆವಾಸಸ್ಥಾನವೆಂದು ತಿಳಿಸಲಾಗಿದೆ.[11] ಇದನ್ನು ವೈಕುಂಠದಲ್ಲಿ ವಿಷ್ಣುವಿನ ದರ್ಶನ ಪಡೆಯಲು ಬರುವವರಿಗಾಗಿ ಇರುವ ರಚನೆಯಾಗಿಯೂ ಬಳಸಲಾಗುತ್ತಿತ್ತೆಂದು ಶಾಸ್ತ್ರಗ್ರಂಥಗಳು ತಿಳಿಸುತ್ತವೆ.[12] ಮಣಿಮಂಟಪವನ್ನು *ಮಣಿಮುತ್ತುಗಳಿಂದ ಅಲಂಕರಿಸಲಾಗಿರುವ ವೈಷ್ಣವ ಮೂರ್ತಿಗಳನ್ನು ಪ್ರತಿಷ್ಠಾಪಿಸುವ ಮಂಟಪ ಎಂದು ಅರ್ಥೈಸಬಹುದು.*

ಈ ಹಿನ್ನೆಲೆಯಲ್ಲಿ ಹಂಪಿಯ ಕೃಷ್ಣದೇವಾಲಯದ ಸಂಕೀರ್ಣದಲ್ಲಿ ಮಣಿಮಂಟಪವನ್ನು ಗುರುತಿಸಬಹುದು. ದೇವಾಲಯದ ಮಹಾರಂಗಮಂಟಪದ ಮುಂದೆ, ಅದರ ಮುಖ್ಯ ಅಕ್ಷರೇಖೆಯಲ್ಲಿ ತೆರೆದ ಆಯತಾಕಾರದ ಮಂಟಪವಿದೆ.

ಇದು ಗರುಡಮಂಟಪವಾಗಿತ್ತು. ಈ ದೃಷ್ಟಿಯಿಂದ ಇದೂ ಮಣಿಮಂಟಪವೇ. ಇಲ್ಲಿ ಉದಯಗಿರಿಯಿಂದ ತಂದ ಬಾಲಕೃಷ್ಣನ ಪ್ರತಿಮೆಯನ್ನು ಇಡಲು ಅವಕಾಶವಿಲ್ಲ. ಗರ್ಭಗೃಹದ ಮೂಲಮೂರ್ತಿಗೆ ಅಭಿಮುಖವಾಗಿ ಅಂತಹದ್ದೇ ದೇವಮೂರ್ತಿಯನ್ನು ದೇವಾಲಯದ ಮುಂದೆ ಪ್ರತಿಷ್ಠಾಪಿಸಲು ಶಾಸ್ತ್ರಗ್ರಂಥಗಳಲ್ಲಿ ಅವಕಾಶವಿಲ್ಲ ಹಾಗೂ ಅಂತಹ ಉದಾಹರಣೆ ಆಚರಣೆಯಲ್ಲಿ ಎಲ್ಲೂ ಇಲ್ಲ. ಬಾಲಕೃಷ್ಣನನ್ನು ಪ್ರತಿಷ್ಠಾಪಿಸಿದ ಸಂಗತಿಯನ್ನು ತಿಳಿಸುವ ಶಾಸನ ದೇವಾಲಯದ ಮಹಾರಂಗಮಂಟಪದ ಮುಂದಿದೆ. ಅದರ ಪ್ರತಿಯನ್ನು ದೇವಾಲಯದ ಉತ್ತರ ದಿಕ್ಕಿನಲ್ಲಿರುವ ಮಂಟಪದ ಮೇಲೆ ಕೆತ್ತಲಾಗಿದೆ. ಮಣಿಮಂಟಪವೆಂದರೆ ಮುತ್ತಿನ ಮಾಲೆಗಳಿಂದ ಅಲಂಕೃತವಾದ ಹಾಗೂ ಮುಖ್ಯದೇಗುಲದ ಉತ್ತರ ಭಾಗದಲ್ಲೂ ಈ ಮಂಟಪ ಇರಬಹುದೆಂದು ಶಾಸ್ತ್ರಗ್ರಂಥಗಳು ತಿಳಿಸುವುದರಿಂದ ಈ ಮಂಟಪವನ್ನೇ ಮಣಿಮಂಟಪ ಎಂದು ನಿಸ್ಸಂಶಯವಾಗಿ ಗುರುತಿಸಬಹುದು.

* * * * *

ಇನ್ನು ಉದಯಗಿರಿಯಿಂದ ತಂದ ಈ ಬಾಲಕೃಷ್ಣನ ಪ್ರತಿಮೆ ಹೇಗಿತ್ತು ಎಂಬುದು ಚರ್ಚಿಸಬೇಕಾದ ಮತ್ತೊಂದು ಪ್ರಮುಖ ಸಂಗತಿ. ಇದನ್ನು ಸಕಾರಣವಾಗಿ ಕಲ್ಪಿಸುವ ಹಾಗೂ ಸಾಂದರ್ಭಿಕ ಅಂಶಗಳಿಂದ ನಿರ್ಧರಿಸಬೇಕು.


ಹಂಪಿಯ ಕೃಷ್ಣದೇವಾಲಯದ ಗರ್ಭಗೃಹದ ಮೂಲೆಯಲ್ಲಿ ವಿರೂಪಗೊಂಡ ಬಾಲಕೃಷ್ಣ ವಿಗ್ರಹ ಬಿದ್ದಿತ್ತು. ಇದೇ ಉದಯಗಿರಿಯಿಂದ ತಂದ ಬಾಲಕೃಷ್ಣನ ವಿಗ್ರಹವಾಗಿರಬಹುದೆಂದು ಲಾಂಗ್‌ಹರ್ಸ್ಟ್‌ನು 1916–17ರ ಪುರಾತತ್ವ ವರದಿಯಲ್ಲಿ ಅಭಿಪ್ರಾಯ ಪಡುತ್ತಾನೆ.[13] ಇದು ನಿಜಕ್ಕೂ ಬಾಲಕೃಷ್ಣನ ಮೂರ್ತಿ ಆಗಿರದೆ ವಯಸ್ಸಾದ ಹುಡುಗನಂತಿದೆ. ಇದು ದೇವಾಲಯ ನಿರ್ಮಾಣವಾದಾಗ ರಚನೆ ಆದ ಮೂಲವಿಗ್ರಹ ಆಗಿರುವ ಸಾಧ್ಯತೆ ಇದೆ. ಇದು ಖಂಡಿತವಾಗಿಯೂ ಉದಯಗಿರಿಯಿಂದ ತಂದ ಬಾಲಕೃಷ್ಣನ ವಿಗ್ರಹ ಆಗಿರಲಾರದು. ಈ ವಿಗ್ರಹವನ್ನು ಮದ್ರಾಸ್‌ಗೆ ಸಾಗಿಸಿ, ಅಲ್ಲಿನ ಮ್ಯೂಸಿಯಮ್‌ನಲ್ಲಿ ಇಡಲಾಗಿದೆ ಎಂದು ಅವನೇ ತಿಳಿಸುತ್ತಾನೆ.[14] ಮದ್ರಾಸ್ ಮ್ಯೂಸಿಯಮ್‌ನಲ್ಲಿ ಈ ವಿಗ್ರಹಕ್ಕಾಗಿ ಶೋಧನೆ ಮಾಡಲಾಯಿತು. ಈಗ ಈ ವಿಗ್ರಹ ಅಲ್ಲಿಲ್ಲ.

ಉದಯಗಿರಿಯ ಬಾಲಕೃಷ್ಣ ದೇವಾಲಯವನ್ನು ಅಲ್ಲಿನ ಸಣ್ಣಗುಡ್ಡದ ಮೇಲೆ ನಿರ್ಮಿಸಲಾಗಿದೆ. ಇದನ್ನು ಹದಿನೈದನೇ ಶತಮಾನದ ಆರಂಭದಲ್ಲಿ ರಚಿಸಲಾಗಿದೆ.[15] ದೇವಾಲಯದ ಕಂಬಗಳು ಮತ್ತು ಅಲ್ಲಿನ ಹೊರ ಭಿತ್ತಿಗಳ ಮೇಲೆ ಹಾಗೂ ದೇವಕೋಷ್ಠಗಳಲ್ಲಿ ಒಂದೇತೆರನಾದ ಬಾಲಕೃಷ್ಣನ ಮೂರ್ತಿಗಳನ್ನು ರಚಿಸಲಾಗಿದೆ. ಅವುಗಳಲ್ಲಿ ಒಂದೇತೆರನಾದ ಬಾಲಕೃಷ್ಣನ ಮೂರ್ತಿಗಳು ಅಧಿಕ ಸಂಖ್ಯೆಯಲ್ಲಿ ದೊರೆಯುತ್ತವೆ. ಇಲ್ಲಿ ಬಾಲಕೃಷ್ಣ ಬಲಗೈಲಿ ಬೆಣ್ಣೆಯನ್ನು ಹಿಡಿದು, ಎಡಗೈಯನ್ನು ನೆಲಕ್ಕೆ ಊರಿ, ಕಾಲುಗಳ ಮೇಲೆ ತೆವಳುತ್ತಿರುವಂತೆ ಚಿತ್ರಿಸಲಾಗಿದೆ. ಬಾಲಕೃಷ್ಣ ಎನ್ನುವುದಕ್ಕೆ ಇದು ತಕ್ಕ ಚಿತ್ರಣವಾಗುತ್ತದೆ. ಇಲ್ಲಿ ಒಂದು ಸೂಕ್ಷ್ಮ ಸಂಗತಿಯನ್ನು ಗಮನಿಸಬಹುದು. ಸಾಮಾನ್ಯವಾಗಿ ದೇವಕೋಷ್ಠಗಳಲ್ಲಿರುವ ವಿಗ್ರಹಗಳು ದೊಡ್ಡದಾಗಿರುತ್ತವೆ. ಈ ವಿಗ್ರಹಗಳನ್ನು ಒಳಗೊಂಡಂತೆ, ದೇವಾಲಯದಲ್ಲಿ ಚಿತ್ರಿತವಾಗಿರುವ ಎಲ್ಲ ವಿಷ್ಣುವಿನ ವಿವಿಧ ವಿಗ್ರಹಗಳಿಗಿಂತ ಈ ತೆರನಾದ ಬಾಲಕೃಷ್ಣನ ಉಬ್ಬುಕೆತ್ತನೆಗಳು ಉನ್ನತವಾಗಿ ಮತ್ತು ದೊಡ್ಡದಾಗಿ ಚಿತ್ರಿತವಾಗಿವೆ. ಬಾಲಕೃಷ್ಣನ ಉಬ್ಬುಗೆತ್ತನೆಯ ಶಿಲ್ಪಗಳಿಗೆ ವಿಶೇಷ ಪ್ರಾಮುಖ್ಯ ನೀಡಿದಂತೆ ಕಂಡುಬರುತ್ತದೆ. ಈ ಸೂಕ್ಷ್ಮ ಅಂಶವನ್ನು ಲಾಂಗ್‌ಹರ್ಸ್ಟ್ ಸಹ ಗುರುತಿಸುತ್ತಾನೆ. ಬಾಲಕೃಷ್ಣನ ಈ ಉಬ್ಬುಗೆತ್ತನೆಯನ್ನು ಅನುಸರಿಸಿ ಮೂಲ ವಿಗ್ರಹ ರಚನೆ ಆಗಿರಬೇಕು. ಈ ವಿಗ್ರಹವನ್ನೇ ಕೃಷ್ಣರಾಯ ಹಂಪಿಗೆ ತಂದ ಕೃಷ್ಣದೇವಾಲಯದ ಮಣಿಮಂಟಪದಲ್ಲಿ ಪ್ರತಿಷ್ಠಾಪಿಸಿದ.


ಹಂಪಿಯ ದೇಗುಲಗಳಲ್ಲಿ ವಿರೂಪಾಕ್ಷ, ಕೃಷ್ಣ, ವಿಠ್ಠಲ, ಅಚ್ಯುತ – ಮುಂತಾದ ಕೆಲವೇ ದೇಗುಲಗಳನ್ನು ಉನ್ನತ (major) ದೇವಾಲಯಗಳೆಂದು ಕರೆಯುವುದುಂಟು. ವಿರೂಪಾಕ್ಷ ದೇಗುಲ ವಿಜಯನಗರ ಸಾಮ್ರಾಜ್ಯದ ಕಾಲದ ಉದ್ದಕ್ಕೂ ರಚನೆ ಆಗಿದೆ. ಹಂಪಿ ಮತ್ತು ಅದರ ಪರಿಸರದಲ್ಲಿ ನಿರ್ಮಾಣವಾಗಿರುವ ಉನ್ನತ ದೇವಾಲಯಗಳಲ್ಲಿ ಕಾಲದ ದೃಷ್ಟಿಯಿಂದ ಕೃಷ್ಣದೇವಾಲಯವೇ ಮೊದಲನೆಯದು. ಇದರ ನಿರ್ಮಾಣದ ಮೇಲೆ ಉದಯಗಿರಿಯ ಬಾಲಕೃಷ್ಣ ದೇವಾಲಯದ ಪ್ರಭಾವ ಇರುವ ಸಾಧ್ಯತೆ ಇದೆ. ಈ ದೇಗುಲದ ಪುಷ್ಕರಣಿಯಂತೆಯೇ ಹಂಪಿಯ ಕೃಷ್ಣದೇವಾಲಯದ ಪುಷ್ಕರಣಿ ಇದೆ. ಈ ಎರಡು ಪುಷ್ಕರಣಿಗಳ ಮಧ್ಯದಲ್ಲಿ ವಸಂತಮಂಟಪವಿದೆ. ಮುಂದೆ ನಿರ್ಮಾಣವಾದ ಉನ್ನತ ದೇವಾಲಯಗಳಲ್ಲಿ ಪುಷ್ಕರಣಿ ಕಡ್ಡಾಯ ಎಂಬಂತೆ ರಚನೆ ಆಗಿದೆ. ಅವುಗಳು ಹಂಪಿಯ ಕೃಷ್ಣದೇವಾಲಯದ ಪುಷ್ಕರಣಿಯನ್ನು ಹೋಲುತ್ತವೆ.

ಅಡಿ ಟಿಪ್ಪಣಿಗಳು


1. Prabhat Mukherjee, *History of the Gajapatis Kings of Orissa,* Calcutta, 1953, pp. 55-60.
2. Hemavathi, P., *The Life and Times of Tuluva Narasimharaya,* Madras, 1944, pp. 38-41.
3. *Nellore District Inscriptions,* Vol. III, No. 31 and 41; *Inscriptions of Vijayanagara Rulers*-ICHR, II, No. 134.
4. *SII.,* Vol. IV, 254 and 255.
5. Longhurst, A.H., *Annual Reports,* Archaeological: Report, Southern Circle, 1916-17, pp. 28-30.
6. ಇದರ ಬಗ್ಗೆ ವಿಸ್ತೃತವಾದ ಶಾಸ್ತ್ರ ಗ್ರಂಥಗಳ ಮಾಹಿತಿಯನ್ನು ಚರ್ಚೆಯ ಮೂಲ ನೀಡಿದವರು ಡಾ. ಅನುರಾಧ ಅವರು, ಅವರಿಗೆ ನನ್ನ ಕೃತಜ್ಞತೆಗಳು.
7. *TTDI,* Vol. III, No. 123.
8. *Ibid.,* Vol. I, No. 195.
9. *TDI,* Vol. II, No. 18; Vol. IV, No. 46.
10. Ramachandra Rao, S.K., *The Hill-Shrine of Vengada,* Bangalore, 1993, Pp. 179-186.
11. *EC.,* II, 475.
12. Ramachandra Rao, S.K., *Ibid.*
13. Longhurst, A.H., *Ibid.*
14. Longhurst, A.H. *Ibid.*




ಕೃಷ್ಣ ದೇವಸ್ಥಾನ, ಉದಯಗಿರಿ



ಕೃಷ್ಣ ದೇವಸ್ಥಾನ, ಉದಯಗಿರಿ ಮತ್ತು ಪುಷ್ಕರಣಿ



ಕೃಷ್ಣ ದೇವಸ್ಥಾನದ ಪೂರ್ವದ ಗೋಡೆ



ಕೃಷ್ಣ ದೇವಸ್ಥಾನದ ಪಶ್ಚಿಮದ ಗೋಡೆ

28

ಹಂಪಿ ಪರಿಸರದ ಮಾರ್ಕಂಡೇಯನ ನಿರೂಪಣಾತ್ಮಕ ಶಿಲ್ಪಗಳು

ಡಾ॥ ಸಿ. ಎಸ್. ವಾಸುದೇವನ್

ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ ವಿಜಯನಗರಪಟ್ಟಣ ಅಥವಾ ಇಂದಿನ ಹಂಪಿಯಲ್ಲಿರುವ ವಿರೂಪಾಕ್ಷ ದೇವಾಲಯದ ಪೂರ್ವ ಭಾಗದಲ್ಲಿರುವ ಮುಖ್ಯ ಗೋಪುರದ್ವಾರದ ಎಡಭಿತ್ತಿಯಲ್ಲಿ ಮಾರ್ಕಂಡೇಯನ ಕಥಾನಕವನ್ನು ನಿರೂಪಿಸುವ ನಿರೂಪಣಾತ್ಮಕ ಉಬ್ಬುಶಿಲ್ಪವಿದೆ.[1] ಸಾಮ್ರಾಜ್ಯದ ಪ್ರಾರಂಭಿಕ ದಿನಗಳಲ್ಲಿ ನದಿಯ ಎಡದಂಡೆಯಲ್ಲಿರುವ ಆನೆಗೊಂದಿಯು ರಾಜಧಾನಿಯಾಗಿತ್ತು. ಇದನ್ನು ಹಸ್ತಿನಾವತಿ ಎಂದು ಕರೆಯಲಾಗುತ್ತಿತ್ತು, ನಂತರದಲ್ಲಿ ರಾಜಧಾನಿಯನ್ನು ಅಲ್ಲಿಂದ ಬಲದಂಡೆಯಲ್ಲಿರುವ ಪಂಪಾಕ್ಷೇತ್ರಕ್ಕೆ ವರ್ಗಾಯಿಸಿ ಅದಕ್ಕೆ ವಿಜಯನಗರಪಟ್ಟಣ ಎಂದು ನಾಮಕರಣ ಮಾಡಲಾಯಿತು. ಇದಕ್ಕೆ ಕಾಲಕ್ರಮದಲ್ಲಿ ಹಂಪಿ ಅಥವಾ ಹಂಪೆ ಎಂಬ ಹೆಸರು ಬಂದಿತು. ಅಂದಿನ ಶಾಸನಗಳು ರಾಜಧಾನಿಯನ್ನು ವಿಜಯನಗರಪಟ್ಟಣ, ವಿದ್ಯಾನಗರ, ಭಾಸ್ಕರಕ್ಷೇತ್ರ ಮತ್ತು ಪಂಪಾಕ್ಷೇತ್ರ ಎಂದು ಉಲ್ಲೇಖಿಸುತ್ತವೆ. ಆದರೆ ವಿಜಯನಗರಪಟ್ಟಣ ಎಂಬ ಹೆಸರು ಅಧಿಕವಾಗಿ ಉಲ್ಲೇಖವಾಗಿರುವುದರಿಂದ ಇದು ಅತ್ಯಂತ ಜನಪ್ರಿಯ ಹೆಸರೆಂದು ತಿಳಿಯಬಹುದು.[2] ವಿದೇಶೀಯರ ಪ್ರವಾಸಿ ಕಥಾನಕಗಳು ಹಂಪೆಯ ಬಗೆಗೆ ಸಾಕಷ್ಟು ಮಾಹಿತಿಯನ್ನು ನೀಡುತ್ತವೆ. ಇದರೊಂದಿಗೆ ವಿಜಯನಗರಪಟ್ಟಣವನ್ನು ಆವರಿಸಿದ್ದ ಕೋಟೆಯನ್ನು ಸಹ ಉಲ್ಲೇಖಿಸುತ್ತವೆ.

ಹಂಪಿಯಲ್ಲಿರುವ ವಿರೂಪಾಕ್ಷ ಅಥವಾ ಪಂಪಾವತಿ ದೇವಾಲಯವು ಪ್ರಾಚೀನ ಕಾಲದಿಂದಲೂ ಅತ್ಯಂತ ಪೂಜನೀಯವಾಗಿರುವ ದೇವಾಲಯವಾಗಿದೆ.[3] ಸುಂದರ ಪ್ರಾಕೃತಿಕ ತಾಣದಲ್ಲಿರುವ ತುಂಗಭದ್ರಾ ನದಿಯ ದಕ್ಷಿಣ ದಡದಲ್ಲಿ ಹಾಗೂ ಹೇಮಕೂಟ ಬೆಟ್ಟದ ಉತ್ತರ ತಪ್ಪಲಲ್ಲಿ ವಿರೂಪಾಕ್ಷ ದೇವಾಲಯವಿದೆ. ಲಂಬಾಕಾರದ ದೇವಾಲಯದ ಸಮುಚ್ಚಯದಲ್ಲಿ ಎರಡು ವಿಶಾಲ ಪ್ರಾಂಗಣಗಳೊಂದಿಗೆ ಅನೇಕ ವಾಸ್ತು ನಿರ್ಮಿತಿಗಳಿವೆ. ಸಂಪೂರ್ಣ ದೇವಾಲಯವು ಪ್ರಾಕಾರ ಗೋಡೆಯಿಂದ ಆವೃತವಾಗಿದೆ. ಗರ್ಭಗೃಹದ ಪ್ರಾಚೀನತೆಯನ್ನು ಕ್ರಿ.ಶ. 8–9ನೇ ಶತಮಾನಕ್ಕೆ ಒಯ್ಯಬಹುದಾಗಿದೆ. ವಿಜಯನಗರಕ್ಕೆ ಕ್ರಿ.ಶ. 1520ರಲ್ಲಿ ಭೇಟಿ ನೀಡಿದ ಡೊಮಿಂಗೊ ಪಯಾಸ್‌ನು ತನ್ನ ಬರಹದಲ್ಲಿ ಈ ದೇವಾಲಯದ ಪೂರ್ಣ ವಿವರಣೆಯನ್ನು ಮನೋಜ್ಞವಾಗಿ ನೀಡಿದ್ದಾನೆ. ಆದ್ದರಿಂದ ಅಂದಿನ ಕಾಲದಿಂದಲೇ ಈ ದೇವಾಲಯವು ಸಾಕಷ್ಟು ಪ್ರಸಿದ್ಧಿಯನ್ನು ಪಡೆದಿತ್ತು. ಇಂದಿಗೂ ಅದು ಹಂಪಿಯ ಪ್ರಮುಖ ಆಕರ್ಷಣೆಯ ಕೇಂದ್ರ ಬಿಂದುವಾಗಿದೆ. ಪೂರ್ವದಲ್ಲಿರುವ ಎತ್ತರದ ಗೋಪುರ ಪ್ರವೇಶದ್ವಾರವು ದೇವಾಲಯದ ಮೊದಲ ಒಳ ಪ್ರಾಂಗಣಕ್ಕೆ ದಾರಿ

ಮಾಡಿಕೊಡುತ್ತದೆ. ಇಲ್ಲಿರುವ ಇನ್ನೊಂದು ಕಿರುಗೋಪುರ ಪ್ರವೇಶದ್ವಾರದ ಮೂಲಕ ಎರಡನೆಯ ಒಳ ಪ್ರಾಂಗಣವನ್ನು ತಲುಪಬಹುದು. ಈ ಭಾಗದಲ್ಲಿ ಗರ್ಭಗೃಹ, ದೇವಿಯ ಸನ್ನಿಧಾನ ಮತ್ತು ಇತರೆ ದೇವತೆಗಳ ಗುಡಿಗಳಿವೆ. ಪೂರ್ವದಲ್ಲಿರುವ ಎತ್ತರದ ಗೋಪುರವು 9 ಅಂತಸ್ತುಗಳ 52 ಮೀಟರ್ ಎತ್ತರದ ರಚನೆ. ಗೋಪುರದ ಕೆಳಭಾಗವು ಎರಡು ಅಂತಸ್ತುಗಳ ಕಲ್ಲಿನ ರಚನೆಯಾದರೆ, ಪ್ರಸ್ತರದ ಮೇಲಿನ ಭಾಗವು ಇಟ್ಟಿಗೆ ಮತ್ತು ಗಾರೆಯ ರಚನೆಯಾಗಿದೆ. ಗೋಪುರದಲ್ಲಿರುವ ಕೋಣೆಗಳಲ್ಲಿ ಪ್ರಾಚೀನ ಕಾಲದ ಘನಗಾತ್ರದ ಚೌಕಾಕಾರ ಕಂಬಗಳಿವೆ. ಕಂಬದ ಕೆಳಭಾಗದಲ್ಲಿ ಎಲೆ ಮತ್ತು ಬಳ್ಳಿಯ ಅಲಂಕರಣಗಳು ಕಂಡುಬರುತ್ತವೆ. ಬೋಧಿಕೆಗಳ ಬದಲಿಗೆ ಶಿಲಾಫಲಕಗಳಿವೆ. ಈ ಗೋಪುರವನ್ನು ವಿಜಯನಗರದ ಅರಸ ಇಮ್ಮಡಿ ದೇವರಾಯನ (ಕ್ರಿ.ಶ. 1422–46) ಅಧಿಕಾರಿಯಾದ ಪ್ರೋಲುಗಂಟಿ ತಿಪ್ಪ ನಿರ್ಮಿಸಿದನೆಂದು ಸಾಹಿತ್ಯಿಕ ಉಲ್ಲೇಖಗಳಿವೆ. ಇದನ್ನು ಕ್ರಿ.ಶ. 1510ರಲ್ಲಿ ಕೃಷ್ಣದೇವರಾಯನು ಜೀರ್ಣೋದ್ಧಾರ ಮಾಡಿಸಿದನು. ಗೋಪುರದ ಕೆಳಗಿರುವ ಕಲ್ಲಿನ ಕಟ್ಟಡದ ಭಿತ್ತಿಯಲ್ಲಿ ಮೂರು ಉಬ್ಬುಶಿಲ್ಪಗಳಿವೆ. ಅವುಗಳಲ್ಲಿ ಎರಡು ಲೌಕಿಕ ಶಿಲ್ಪಗಳಾದರೆ ಮತ್ತೊಂದು ಮಾರ್ಕಂಡೇಯನ ಕಥಾನಕವನ್ನು ನಿರೂಪಿಸುವ ನಿರೂಪಣಾತ್ಮಕ ಉಬ್ಬು ಶಿಲ್ಪಶಿಲಾಫಲಕವಾಗಿದೆ.

ಮಾರ್ಕಂಡೇಯನು ಪ್ರಾಚೀನ ಋಷಿಗಳಲ್ಲಿ ಒಬ್ಬನಾಗಿದ್ದು, ಅವನು ಹಿಂದೂ ಪರಂಪರೆಯಲ್ಲಿ ಭೃಗು ಋಷಿಯ ಕುಲಕ್ಕೆ ಸೇರಿದವನಾಗಿದ್ದಾನೆ. ಹಲವಾರು ಪುರಾಣಗಳಲ್ಲಿ ಉಲ್ಲೇಖಿತವಾಗಿರುವಂತೆ, ಮಾರ್ಕಂಡೇಯನು ಶಿವ ಮತ್ತು ವಿಷ್ಣುವಿನ ಪರಮಭಕ್ತ. ಹದಿನೆಂಟು ಮುಖ್ಯ ಪುರಾಣಗಳಲ್ಲಿ ಮಾರ್ಕಂಡೇಯ ಪುರಾಣವು ಒಂದಾಗಿದೆ. ಈ ಪುರಾಣವು ಜೈಮಿನಿ ಮತ್ತು ಮಾರ್ಕಂಡೇಯರ ನಡುವೆ ನಡೆದ ಸಂವಾದದಂತೆ ಇದೆ. ಭಾಗವತ ಪುರಾಣದ ಹಲವಾರು ಅಧ್ಯಾಯಗಳು ಅವನ ಪ್ರಾರ್ಥನೆ ಮತ್ತು ಸಂವಾದವನ್ನು ಒಳಗೊಂಡಿದೆ. ಮಾರ್ಕಂಡೇಯ ಪುರಾಣವು ಯಾವುದೇ ನಿರ್ದಿಷ್ಟ ಪಂಥ ಅಥವಾ ಧರ್ಮಕ್ಕೆ ಸೀಮಿತವಾಗಿರದೆ, ಶಿವ ಮತ್ತು ವಿಷ್ಣುವಿನ ಹಾಗೂ ಇತರೆ ದೇವ ದೇವತೆಗಳ ವಿವರಗಳು ನಿಷ್ಪಕ್ಷಪಾತವಾಗಿವೆ. ಜೈಮಿನಿಯು ಮಾರ್ಕಂಡೇಯನಿಗೆ ನಾಲ್ಕು ಪ್ರಶ್ನೆಗಳನ್ನು ಕೇಳುವ ಸಂದರ್ಭದಿಂದ ಪುರಾಣವು ಪ್ರಾರಂಭವಾಗುತ್ತದೆ. ಪುರಾಣವು ಒಟ್ಟು 134 ಅಧ್ಯಾಯಗಳನ್ನು ಹೊಂದಿದೆ. 50–97ರವರೆಗಿನ ಅಧ್ಯಾಯಗಳು 14 ಮನ್ವಂತರಗಳನ್ನು (ಮನುವಿನ ಕಾಲಚಕ್ರ) ವಿವರಗಳನ್ನು ಹೊಂದಿದೆ. ಅವುಗಳಲ್ಲಿರುವ 13 ಅಧ್ಯಾಯಗಳನ್ನು (ಅಧ್ಯಾಯ ಸಂಖ್ಯೆ 78–90) ಒಟ್ಟುಗೂಡಿಸಿ 'ದೇವಿಮಹಾತ್ಮೆ' ಎಂದು ಕರೆಯಲಾಗುತ್ತದೆ. ಪುರಾಣಗಳಲ್ಲಿ ಉಲ್ಲೇಖಿತವಾಗಿರುವ ರಾಜವಂಶಗಳ ವಂಶಾವಳಿಗಳ ವಿವರಣೆಗಳು ಅಧ್ಯಾಯ ಸಂಖ್ಯೆ 108–133ರಲ್ಲಿದೆ. ಮಾರ್ಕಂಡೇಯನನ್ನು ಮಹಾಭಾರತವು ಉಲ್ಲೇಖಿಸುತ್ತದೆ. ಮಾರ್ಕಂಡೇಯನನ್ನು ಹಿಂದುಗಳೆಲ್ಲರೂ ಗೌರವಾದರಗಳನ್ನು ತೋರಿ ಆರಾಧಿಸುತ್ತಾರೆ.

ಚಿರಂಜೀವಿಯಾದ ಮಾರ್ಕಂಡೇಯ ಮುನಿಯ ಹೆಸರನ್ನು ಅನೇಕ ಸ್ಥಳಗಳಿಗೆ ಇಡಲಾಗಿದೆ. ಉತ್ತರದ ಯಮುನೋತ್ರಿಗೆ ಹೋಗುವ ದಾರಿಯಲ್ಲಿ ಉತ್ತರ ಭಾರತದಲ್ಲಿರುವ ಉತ್ತರಾಖಂಡ್ ರಾಜ್ಯದ ಉತ್ತರಕಾಶಿ ಜಿಲ್ಲೆಯಲ್ಲಿ ಇರುವ ಒಂದು ಸ್ಥಳವನ್ನು ಮಾರ್ಕಂಡೇಯ ತೀರ್ಥ ಎಂದು ಗುರುತಿಸಲಾಗಿದೆ. ಮುನಿಯು ಮಾರ್ಕಂಡೇಯ ಪುರಾಣವನ್ನು ಇಲ್ಲಿ ರಚಿಸಿದನೆಂದು ನಂಬಲಾಗಿದೆ. ಕರ್ನಾಟಕದ ಕೋಲಾರ ಜಿಲ್ಲೆಯ ಒಕ್ಕಲೇರಿ ಊರ ಸಮೀಪ ಇರುವ ಬೆಟ್ಟಕ್ಕೆ ಮಾರ್ಕಂಡೇಯ ಬೆಟ್ಟವೆಂದು ಹೆಸರಿಸಲಾಗಿದೆ. ಇದೇ ಜಿಲ್ಲೆಯಲ್ಲಿರುವ ಒಂದು ದೇವಾಲಯ ಮತ್ತು ನೀರು ಸಂಗ್ರಾಹಕವನ್ನು ಸಹ ಇದೇ ಹೆಸರಿನಿಂದ ಕರೆಯಲಾಗುತ್ತದೆ. ಒಕ್ಕಲೇರಿಯಿಂದ ಪ್ರಾರಂಭಗೊಳ್ಳುವ ಒಂದು ತೊರೆಯು ಒಕ್ಕಲೇರಿ ಬೆಟ್ಟದಿಂದ (ಕೋಲಾರ ತಾಲ್ಲೂಕು) ಮತ್ತು ಮತ್ತೊಂದು ತೊರೆಯು ಟೇಕಲ್

ಬೆಟ್ಟದಿಂದ (ಮಾಲೂರು ತಾಲ್ಲೂಕು) ಆರಂಭಗೊಂಡು ಬೂದಿಕೋಟೆ ಬಳಿ ಎರಡೂ ಸೇರಿ ಮಾರ್ಕಂಡೇಯ ನದಿಯಾಗಿ ಹರಿಯುತ್ತದೆ. ದಕ್ಷಿಣಾಭಿಮುಖವಾಗಿ ಘಟ್ಟದಿಂದ ಹರಿಯುತ್ತಾ ತಮಟಮಕನಪಳ್ಳಿಯ ಬಳಿ ಜಲಪಾತವಾಗಿ ಧುಮುಕಿ ವೃಷಭಾವತಿ ನದಿಯನ್ನು ಸೇರಿ ಕರ್ನಾಟಕವನ್ನು ತೊರೆದು ತಮಿಳುನಾಡಿನ ಹೊಸೂರನ್ನು ಪ್ರವೇಶಿಸುತ್ತದೆ. ಅಂತಿಮವಾಗಿ ಪೆನ್ನಾರ ಅನ್ನು (ಪೊನ್ನೈಯರ್) ಸೇರುತ್ತದೆ. ಉತ್ತರ ಕರ್ನಾಟಕದ ಬೆಳಗಾವಿ ಜಿಲ್ಲೆಯಲ್ಲಿ ಹರಿಯುವ ಘಟಪ್ರಭಾ ನದಿಯ ಉಪನದಿಗೆ ಮಾರ್ಕಂಡೇಯ ನದಿ ಎಂದು ಕರೆಯಲಾಗುತ್ತದೆ. ಈ ನದಿಯು ಒಂದು ಜಲಪಾತವನ್ನು ಸೃಷ್ಟಿಸುತ್ತದೆ. ಇದು ಪ್ರವಾಸಿಗರ ಪ್ರಮುಖ ಆಕರ್ಷಣೆಯ ತಾಣವಾಗಿದೆ.

ಮಾರ್ಕಂಡೇಯನ ವೃತ್ತಾಂತವನ್ನು ಇಲ್ಲಿ ಗಮನಿಸುವುದು ಸೂಕ್ತವಾಗುತ್ತದೆ. ಒಮ್ಮೆ ಶಿವನು ಕೋಪೋದ್ರಿಕ್ತನಾಗಿ ಕಾಲ (ಯಮ), ಮರಣದ ದೇವತೆಯ ಎದೆಗೆ ಒದ್ದ ಪ್ರಸಂಗವನ್ನು ಪುರಾಣಗಳು ಉಲ್ಲೇಖಿಸುತ್ತವೆ.[4] ಅದು ಈ ರೀತಿಯಾಗಿದೆ. ಮೃಕಂಡು ಮುನಿಯು ಬಹು ವರ್ಷಗಳ ಕಾಲ ಸಂತಾನವಿಲ್ಲದೆ ಇದ್ದು, ಸಂತಾನಾಪೇಕ್ಷತೆಗಾಗಿ ತಪಸ್ಸನ್ನು ಆಚರಿಸುತ್ತಾನೆ. ಶಿವನು ಅವನ ತಪಸ್ಸಿಗೆ ಮೆಚ್ಚಿ ನಿನಗೆ ನಿಷ್ಪ್ರಯೋಜಕರಾದ ಅನೇಕ ಮಕ್ಕಳು ಬೇಕೆ? ಅಥವಾ ಹದಿನಾರು ವಯಸ್ಸು ಆಯುಷ್ಯವುಳ್ಳ ಒಬ್ಬ ಬುದ್ಧಿವಂತ ಮಗನನ್ನು ಕರುಣಿಸಲೋ ಎಂದು ಕೇಳುತ್ತಾನೆ. ಮುನಿಯು ಹದಿನಾರು ವಯಸ್ಸಿನ ಸುಪುತ್ರ ಮಾತ್ರ ಸಾಕೆಂದು ತಿಳಿಸುತ್ತಾನೆ. ಕಾಲಕ್ರಮದಲ್ಲಿ ಮುನಿ ಪತ್ನಿ ಮಾನಸ್ವಿನಿಗೆ ಗಂಡುಮಗು ಜನಿಸುತ್ತದೆ. ಅವನಿಗೆ ಮಾರ್ಕಂಡೇಯ ಎಂದು ಹೆಸರಿಡುತ್ತಾರೆ. ಮಗು ದೊಡ್ಡವನಾಗುವಾಗಲೇ ಬುದ್ಧಿವಂತನಾಗುತ್ತಾನೆ. ಅವನು ಬುದ್ಧಿಮತ್ತೆಯು ಅಪಾರವಾಗಿದ್ದರೂ ಅವನ ತಂದೆ ತಾಯಿಗಳು ಅವನ ಅಲ್ಪ ಆಯುಷ್ಯವನ್ನು ಕುರಿತು ದುಃಖಿತರಾಗಿಯೇ ಇರುತ್ತಾರೆ. ಏಕೆಂದರೆ ಅವನ ಆಯುಸ್ಸು ಹದಿನಾರು ವರ್ಷಗಳು ಮಾತ್ರ. ಮಾರ್ಕಂಡೇಯನಿಗೆ ಅವನ ಅಲ್ಪ ಆಯುಷ್ಯದ ವಿಷಯವು ತಿಳಿದುಬರುತ್ತದೆ. ಇದನ್ನರಿತ ಮಾರ್ಕಂಡೇಯನು ಶಿವನ ಪೂಜೆಯಲ್ಲಿ ನಿರತನಾದನು. ಇದರ ನಿಮಿತ್ತವಾಗಿ ಅವನು ಶಿವನ ದೇವಾಲಯಗಳಿಗೆ ಯಾತ್ರೆಯನ್ನು ಹೊರಡುತ್ತಾನೆ. ನಂಬಿಕೆ ಮತ್ತು ಪರಂಪರೆಯಲ್ಲಿ ಬಂದಿರುವಂತೆ ಅವನು ತಿರುಕ್ಕಡವೂರು (ತಮಿಳುನಾಡು) ತಲುಪಿ ಅಲ್ಲಿರುವ ಲಿಂಗದ ಪೂಜೆಯಲ್ಲಿ ಮಗ್ನನಾಗುತ್ತಾನೆ. ಅವನ ಆಯುಸ್ಸು ಮುಗಿಯುವ ವೇಳೆಗೆ ಯಮನು ತನ್ನ ಕಿಂಕರರಿಗೆ (ಸೇವಕರಿಗೆ) ಮಾರ್ಕಂಡೇಯನ ಪ್ರಾಣವನ್ನು ತರಲು ಕಳುಹಿಸುತ್ತಾನೆ. ಆದರೆ ಕಿಂಕರರಿಗೆ ಮಾರ್ಕಂಡೇಯನ ಪ್ರಾಣವನ್ನು ತೆಗೆಯಲು ಸಾಧ್ಯವಾಗದ್ದನ್ನು ಅವರುಗಳು ಯಮನಿಗೆ ತಿಳಿಸುತ್ತಾರೆ. ಯಮನು ತಾನೇ ಬಂದು ಮಾರ್ಕಂಡೇಯನ ಆಯುಸ್ಸನ್ನು ಪೂರ್ತಿಗೊಳಿಸಲು ಮುಂದಾಗುತ್ತಾನೆ. ಮಾರ್ಕಂಡೇಯನ ಜೀವವನ್ನು ಬಲಾತ್ಕಾರದಿಂದ ಸೆಳೆಯಲು ಪ್ರಯತ್ನಿಸಿ ತನ್ನ ಪಾಶವನ್ನು ಮಾರ್ಕಂಡೇಯನತ್ತ ಬೀಸುತ್ತಾನೆ. ಮಾರ್ಕಂಡೇಯನು ಶಿವಲಿಂಗವನ್ನು ಅಪ್ಪಿಕೊಂಡು ಧ್ಯಾನದಲ್ಲಿರುತ್ತಾನೆ. ಈ ಸಂದರ್ಭದಲ್ಲಿ ಯಮನು ಬೀಸಿದ ಪಾಶವು ಆಕಸ್ಮಿಕವಾಗಿ ಶಿವಲಿಂಗವನ್ನು ತಾಕುತ್ತದೆ. ಆಗ ಶಿವನು ಕೋಪೋದ್ರಿಕ್ತವಾಗಿ ಲಿಂಗದಿಂದ ಪ್ರಕಟವಾಗಿ ಯಮನ ಎದೆಗೆ ಒದೆಯುತ್ತಾನೆ. ಇದರಿಂದ ಯಮನ ಜೀವವೇ ಹೋದಂತಾಗುತ್ತದೆ. ಆಗ ಯಮನಿಗೆ ತನ್ನ ತಪ್ಪಿನ ಅರಿವಾಗತೊಡಗುತ್ತದೆ. ಶಿವಭಕ್ತರ ಜೀವವನ್ನು ಸಾಮಾನ್ಯ ಲೌಕಿಕ ಜನರ ಪ್ರಾಣದಷ್ಟು ಸುಲಭವಾಗಿ ತೆಗೆಯಲು ಸಾಧ್ಯವಿಲ್ಲವೆಂಬುದನ್ನು ಯಮನು ಮನಗಾಣುತ್ತಾನೆ. ಸಾಮಾನ್ಯ ಜನರಿಗೆ ವಿಧಿಸಲಾಗುವ ಕ್ರಮಗಳನ್ನು ಶಿವಭಕ್ತರಿಗೆ ಅನ್ವಯಿಸಲು ಸಾಧ್ಯವಿಲ್ಲವೆಂದು ಯಮನು ಅರಿತು ತನ್ನ ತಪ್ಪನ್ನು ಕ್ಷಮಿಸಲು ಶಿವವನ್ನು ಬೇಡುತ್ತಾನೆ. ಆಗ ಶಿವನು ಯಮನನ್ನು ಕ್ಷಮಿಸಿ, ಮಾರ್ಕಂಡೇಯನಿಗೆ ಎಂದಿಗೂ ಹದಿನಾರು ವಯಸ್ಸಿನವನಾಗಿಯೇ 'ಚಿರಂಜೀವಿಯಾಗು' ಎಂದು ಹರಸಿದನು. ಅಂದಿನಿಂದ ಮಾರ್ಕಂಡೇಯನು ಹದಿನಾರು ವರ್ಷದವನಾಗಿ ಚಿರಂಜೀವಿಯಾಗಿ ಅಮರನಾಗಿ ಉಳಿದುಬಂದಿರುವನು.[5] ಶಿವನು ಯಮ ಅಥವಾ

ಕಾಲನನ್ನು ದಂಡಿಸಿದವನಾದ್ದರಿಂದ ಕಾಲಾರಿಮೂರ್ತಿಯೆಂದು ಕರೆಸಿಕೊಳ್ಳುತ್ತಾನೆ. ಈ ಸುಂದರ ಕಥಾ ಪ್ರಸಂಗವನ್ನು ಚಿತ್ರಕಲೆ ಮತ್ತು ಮೂರ್ತಿಕಲೆಗಳಲ್ಲಿ ಅನೇಕ ದೇವಾಲಯಗಳಲ್ಲಿ ತೋರಲಾಗುತ್ತದೆ. ಈ ಪ್ರಸಂಗವು ತಮಿಳುನಾಡಿನಲ್ಲಿರುವ ತಂಜಾವೂರು ಜಿಲ್ಲೆಯಲ್ಲಿರುವ ತಿರುಕ್ಕಡವೂರಿನಲ್ಲಿ ಜರುಗಿತು ಎಂದು ನಂಬಲಾಗಿದೆ.[6] ಮಹಾಮೃತ್ಯುಂಜಯ ಸ್ತೋತ್ರವನ್ನು ಮಾರ್ಕಂಡೇಯನು ರಚಿಸಿದನು ಎನ್ನಲಾಗುತ್ತದೆ.

ನರಸಿಂಹ ಪುರಾಣವು ಸಹ ಮೇಲೆ ಉಲ್ಲೇಖಿಸಿದ ಪ್ರಸಂಗವನ್ನು ಅದೇ ರೀತಿಯಾಗಿ ನಿರೂಪಿಸುತ್ತದೆ. ಆದರೆ ಈ ನಿರೂಪಣೆಯಲ್ಲಿ ಮಾರ್ಕಂಡೇಯನು ಮೃತ್ಯುಂಜಯ ಸ್ತೋತ್ರವನ್ನು ಪಠಿಸಿದ ನಂತರ ವಿಷ್ಣುವು ಮಾರ್ಕಂಡೇಯನನ್ನು ರಕ್ಷಿಸುತ್ತಾನೆ. ಭಾಗವತ ಪುರಾಣದಂತೆ, ಭೂಮಿಯು ಜಲದಿಂದ ಆವೃತವಾಗಿ ಮುಳುಗುವ ಸಂದರ್ಭ ಉಂಟಾದಾಗ ಮಾರ್ಕಂಡೇಯನು ವಿಷ್ಣುವಿನ ಮೊರೆ ಹೋಗಿ ರಕ್ಷಿಸಲು ಕೋರುತ್ತಾನೆ. ಆಗ ವಿಷ್ಣುವು ಮಗುವಾಗಿ ಎಲೆಯ ಮೇಲೆ ತೇಲುತ್ತಾ ಬಂದು ಮಾರ್ಕಂಡೇಯನಿಗೆ ದರ್ಶನ ನೀಡಿ, ತಾನು ಕಾಲ ಮತ್ತು ಮರಣ ಎಂದು ಸೃಷ್ಟಿಯ ನಿಯಮವನ್ನು ಮಾರ್ಕಂಡೇಯನಿಗೆ ತಿಳಿಸುತ್ತಾನೆ. ನಂತರ ಮುನಿಗೆ, ವಿಷ್ಣುವು ತನ್ನ ಬಾಯಿಯಲ್ಲಿ ಹೋಗಿ ಜಲಪ್ರಳಯದಿಂದ ರಕ್ಷಿಸಿಕೊಳ್ಳಲು ತಿಳಿಸುತ್ತಾನೆ. ಮಾರ್ಕಂಡೇಯನು ಮಗುವಿನ ಹೊಟ್ಟೆಯನ್ನು ಪ್ರವೇಶಿಸಿದಾಗ ಅಲ್ಲಿ ಎಲ್ಲಾ ಪ್ರಪಂಚಗಳನ್ನು, ಸಪ್ತ ಪ್ರದೇಶಗಳನ್ನು ಮತ್ತು ಸಪ್ತ ಸಾಗರಗಳನ್ನು ಕಾಣುತ್ತಾನೆ. ಪರ್ವತಗಳು ಮತ್ತು ಅನೇಕ ರಾಜ್ಯಗಳನ್ನು ಸಹ ಕಾಣುತ್ತಾನೆ. ಅಂತೆಯೇ ಎಲ್ಲಾ ಜೀವ ರಾಶಿಗಳನ್ನು ನೋಡಿ ಅವನಿಗೆ ಏನು ಮಾಡಬೇಕೆಂದು ತಿಳಿಯದೆ ವಿಷ್ಣುವನ್ನು ಮತ್ತೇ ಪ್ರಾರ್ಥಿಸಿಕೊಳ್ಳುತ್ತಾನೆ. ಅವನು ಪ್ರಾರ್ಥಿಸಲು ಆರಂಭಿಸಿದಾಗ, ವಿಷ್ಣುವಿನ ಬಾಯಿಂದ ಹೊರಬರುತ್ತಾನೆ. ವಿಷ್ಣುವು ಪ್ರತ್ಯಕ್ಷನಾಗಿ ಮುನಿಯನ್ನು ಆಶೀರ್ವದಿಸುತ್ತಾನೆ. ಮುನಿಯು ವಿಷ್ಣುವಿನೊಂದಿಗೆ ಒಂದು ಸಾವಿರ ವರ್ಷಗಳ ಕಾಲ ಇರುತ್ತಾನೆ. ಆ ಸಂದರ್ಭದಲ್ಲಿ ಮುನಿಯು 'ಬಾಲಮುಕುಂದಾಷ್ಟಕಮ್' ಅನ್ನು ರಚಿಸುತ್ತಾನೆ. ದುರ್ಗಾದೇವಿಯು ಮಹಿಷಾಸುರನನ್ನು ಕೊಂದು ವಿಜಯಿಯಾದುದನ್ನು 'ದೇವಿ ಮಹಾತ್ಮ್ಯಮ್' ಅಥವಾ 'ದೇವಿ ಮಹಾತ್ಮೆ'ಯು ವಿವರಿಸುತ್ತದೆ. ಇದು ಮಾರ್ಕಂಡೇಯ ಪುರಾಣದ ಭಾಗವಾಗಿ ಪುರಾಣವಾಗಿಯೇ ರೂಪುಗೊಂಡಿದೆ. ಇದು ಕ್ರಿ.ಶ. ಸುಮಾರು 400–500ರಲ್ಲಿ ಸಂಸ್ಕೃತ ಭಾಷೆಯಲ್ಲಿ ರಚಿತವಾಗಿದ್ದು, ಇದನ್ನು ಮಾರ್ಕಂಡೇಯನು ರಚಿಸಿದನು ಎನ್ನಲಾಗುತ್ತದೆ.

ಪ್ರತಿಮಾಶಾಸ್ತ್ರದ ವಿವರಗಳು

ಮಾರ್ಕಂಡೇಯನ ಪ್ರತಿಮೆಯ ಬಗೆಗೆ ವಿವಿಧ ಆಗಮಗಳು ವಿವರಿಸುತ್ತವೆ. ಸಾಮಾನ್ಯವಾಗಿ ವಿವರಣೆಯನ್ನು ಶಿವನ ಕಾಲಾರಿಮೂರ್ತಿಯ ವಿವರಣೆಯೊಂದಿಗೆ ನೀಡಲಾಗಿದೆ. ಸ್ವತಂತ್ರವಾಗಿ ಮಾರ್ಕಂಡೇಯನ ವಿವರಗಳು ಕಂಡುಬರುವುದಿಲ್ಲ. ಬಹುತೇಕ ಆಗಮಗಳು ಶಿವನ ಕಾಲಾರಿಮೂರ್ತಿಯ ವಿವರ ನೀಡಿದ ತರುವಾಯವೇ ಮಾರ್ಕಂಡೇಯನ ವಿವರಗಳನ್ನು ನೀಡುತ್ತವೆ. ಇವರಿಬ್ಬರ ವಿವರಣೆಗಳೊಂದಿಗೆ ಯಮನ ಕುರಿತ ವಿವರಣೆಗಳನ್ನು ಆಗಮಗಳು ನೀಡುತ್ತವೆ. ಮೂರು ಆಗಮಗಳಾದ ಅಂಶುಮದ್ಭೇದಾಗಮ, ಕಾಮಿಕಾಗಮ ಮತ್ತು ಕಾರಣಾಗಮಗಳು ಮಾರ್ಕಂಡೇಯ, ಶಿವನ ಕಾಲಾರಿಮೂರ್ತಿ ಮತ್ತು ಯಮನ ಪ್ರತಿಮಾಶಾಸ್ತ್ರದ ವಿವರ ಮತ್ತು ಲಕ್ಷಣಗಳನ್ನು ನೀಡುತ್ತವೆ.

ಅಂಶುಮದ್ಭೇದಾಗಮದಂತೆ ಕಾಲಾರಿಮೂರ್ತಿಯ ಬಲಗಾಲು ಪದ್ಮಪೀಠದ ಮೇಲೆ ಇದ್ದು, ಶಿವನ ಎಡಗಾಲು ಯಮನ ಎದೆಗೆ ತಗುಲುವಂತೆ ಇರಬೇಕು. ಶಿವನಿಗೆ ಮೂರು ಕಣ್ಣುಗಳು, ಕ್ರೂರವಾದ ಕೋರೆಹಲ್ಲುಗಳು, ರುಂಡಯುಕ್ತ,

ಜಟಾಮಕುಟಗಳು ಇದ್ದು, ನಾಲ್ಕು ಅಥವಾ ಎಂಟು ಕೈಗಳಿರುತ್ತವೆ. ನಾಲ್ಕು ಕೈಗಳ ಶಿಲ್ಪವಾಗಿದ್ದರೆ, ಒಂದು ಬಲ ಕೈಯಲ್ಲಿ ಕಿವಿಯವರೆಗೆ ಎತ್ತಿ ಹಿಡಿದ ಶೂಲವಿರಬೇಕು ಎಂದಿದೆ. ಮತ್ತೊಂದು ಬಲಗೈ ಪರಶುವನ್ನು ಹಿಡಿದಿದ್ದರೆ, ಇನ್ನೊಂದು ಬಲಗೈ ವರದ ಹಸ್ತವಾಗಿರುತ್ತದೆ. ಹಿಂದಿನ ಎಡಗೈ 'ವಿಸ್ಮಯ ಹಸ್ತ'ವಾಗಿರುತ್ತದೆ. ಶಿಲ್ಪವು ಅಷ್ಟಭುಜದ್ದಾಗಿದ್ದರೇ ಬಲಗೈಯಲ್ಲಿ ಶೂಲ, ಪರಶು, ವಜ್ರ ಮತ್ತು ಖಡ್ಗಗಳಿರುತ್ತವೆ. ಈ ಶಿಲ್ಪದ ಎರಡು ಎಡಗೈಗಳಲ್ಲಿ ಖೇಟಕ (ಗುರಾಣಿ) ಮತ್ತು ಪಾಶವಿರುತ್ತದೆ. ಮತ್ತೆರಡು ಕೈಗಳು ಕ್ರಮವಾಗಿ ವಿಸ್ಮಯಹಸ್ತ ಮತ್ತು ಸೂಚಿಹಸ್ತಗಳಾಗಿರುತ್ತವೆ. ಈ ಶಿಲ್ಪವು ರಕ್ತವರ್ಣವಾಗಿದ್ದು, ಸರ್ವಾಭರಣಯುಕ್ತವಾಗಿರುತ್ತದೆ.[7]

ಈ ಶಿಲ್ಪದಲ್ಲಿನ ಯಮನ ಮೂರ್ತಿಯು ಎರಡು ಕೈಗಳು ಮತ್ತು ಕಾಲುಗಳನ್ನು ಹೊಂದಿರುತ್ತಾನೆ. ಅವನು ಕೋರೆಹಲ್ಲು ಹೊಂದಿದ್ದು, ತಲೆಯಲ್ಲಿ ಕರಂಡಮಕುಟವನ್ನು ಧರಿಸಿರುತ್ತಾನೆ. ಇವನ ಒಂದು ಕೈಯಲ್ಲಿ ಪಾಶವಿದ್ದು ಎರಡು ಕೈಗಳಿಂದ ಶಿವನಿಗೆ ನಮಸ್ಕರಿಸುತ್ತಿರುತ್ತಾನೆ. ದೇಹವು ರಕ್ತವರ್ಣದ್ದಾಗಿದ್ದು ಭಯಭೀತನಂತೆ ಚಿತ್ರಿಸಬೇಕು. ಇವನು ಶಿವನ ಕರುಣೆಗಾಗಿ ಅವನನ್ನು ನೋಡುತ್ತಿರುತ್ತಾನೆ.

ಅಂಶುಮದ್ಭೇದಾಗಮದ ಈ ಮೇಲಿನ ವಿವರಣೆಯನ್ನು ಕಾಮಿಕಾಗಮವು ಮತ್ತಷ್ಟು ವಿಸ್ತರಿಸಿ ವಿವರಗಳನ್ನು ನೀಡುತ್ತದೆ. ಕಾಮಿಕಾಗಮದಂತೆ ಶಿವನ ಬಲಗಾಲು ಯಮನನ್ನು ಒದೆಯುತ್ತಿದ್ದು, ಎಡಗಾಲು ಭೂಮಿಸ್ಥಿತ ಪಾದವಾಗಿದೆ. ಶಿವನ ಬಲಗೈಗಳಲ್ಲಿ ಶೂಲ, ಪರಶುಗಳಿದ್ದು, ಎಡಗೈಗಳಲ್ಲಿ ಪಾಶ ಮತ್ತು ಸೂಚಿಹಸ್ತಗಳಾಗಿರುತ್ತವೆ. ಶಿವನ ಕಣ್ಣುಗಳ ನೋಟವು ಯಮನೆಡೆಗೆ ನೆಟ್ಟಿದ್ದು ಶಿವನ ಕೈಯಲ್ಲಿನ ತ್ರಿಶೂಲವು ಯಮನ ಕೊರಳಿಗೆ ಚುಚ್ಚಿರುತ್ತದೆ. ಈ ಶಿಲ್ಪದಲ್ಲಿ ಯಮನು ಮೂರ್ಛೆಗೊಂಡು ಕೆಳಗೆ ಬಿದ್ದಂತೆ ಚಿತ್ರಿಸಬೇಕು. ಯಮನು ರಕ್ತವರ್ಣದವನಾಗಿದ್ದು, ಕೋರೆಹಲ್ಲುಗಳು ಇರುತ್ತವೆ. ಯಮನ ಶಿಲ್ಪದ ಪ್ರಮಾಣವು ಶಿವನ ನಾಭಿಯವರೆಗೆ ಮಾತ್ರ ಇರಬೇಕು ಮತ್ತು ಯಮನಿಗೆ ನವತಾಳದ ಬಿಂಬವಾಗಿ ಚಿತ್ರಿಸಬೇಕು ಎಂದಿದೆ. ಇವೆಲ್ಲವೂ ನವ-ತಾಳ ಮಾಪನಕ್ಕೆ ಅನುಗುಣವಾಗಿ ಇರಬೇಕು ಎಂದಿದೆ.[8]

ಕಾಮಿಕಾಗಮದಲ್ಲಿರುವ ಇನ್ನೊಂದು ವಿವರಣೆಯಂತೆ ಮಾರ್ಕಂಡೇಯನು ಪೂಜಿಸುತ್ತಿದ್ದ ಲಿಂಗದಿಂದ ಶಿವನು ಉದ್ಭವಿಸಿದಂತೆ ಇದ್ದು, ಬಳಿಯಲ್ಲಿ ನೆಲದ ಮೇಲೆ ಯಮನು ಬಿದ್ದಿರುತ್ತಾನೆ. ಇಂತಹ ಶಿಲ್ಪರಚನೆಯಲ್ಲಿ ಶಿವನ ಆಕಾರವು, ಲಿಂಗೋದ್ಭವಮೂರ್ತಿಯಂತೆಯೇ ಇರುತ್ತದೆ. ಶಿವನ ದೇಹವು ಭಸ್ಮದಿಂದ (ವಿಭೂತಿ) ಆವೃತವಾಗಿರುತ್ತದೆ. ಅವನ ಬಳಿಯಲ್ಲಿ ಮಾರ್ಕಂಡೇಯನ ಶಿಲ್ಪವು ಬೊಗಸೆಯಲ್ಲಿ ಹೂವನ್ನು ಹಿಡಿದು, ಶಿವನಿಗೆ ಅರ್ಪಿಸಲು ಸಿದ್ಧವಿರುವಂತೆ ಬಿಡಿಸಬೇಕು. ಮಾರ್ಕಂಡೇಯನ ಮುಖದಲ್ಲಿ ಭೀತಿಯ ಭಾವನೆ ಇರಬೇಕು.

ಶಿವನ ಶಿಲ್ಪದಲ್ಲಿ ತೋರುವ ಮುಂದಿನ ಎರಡು ಕೈಗಳು ತ್ರಿಶೂಲವನ್ನು ಕೆಳಮುಖವಾಗಿ ಚಾಚಿರುವಂತೆ ಕಟಕ ಹಸ್ತದಲ್ಲಿ ತೋರಬೇಕು ಎಂದು ಕಾರಣಾಗಮವು[9] ಉಲ್ಲೇಖಿಸುತ್ತದೆ.[10] ಈ ಪ್ರಕಾರ ಕಟಕಹಸ್ತವನ್ನು ಲೋಹದ (ಕಂಚಿನ) ಶಿಲ್ಪಗಳಲ್ಲಿ ತೋರುವ ಕ್ರಮ ವಾಡಿಕೆಯಲ್ಲಿದೆ. ಇಂತಹ ಲೋಹದ ಶಿಲ್ಪಗಳಲ್ಲಿ ದೇವತೆಯು ಆಯುಧೋಪಕರಣಗಳನ್ನು ಇರಿಸಲಾಗುತ್ತದೆ. ಆಯುಧೋಪಕರಣಗಳನ್ನು ಪ್ರತ್ಯೇಕವಾಗಿ ಎರಕ ಹೊಯ್ಯಲಾಗುತ್ತದೆ. ಅಂತಹ ವಿವಿಧ ಆಯುಧಗಳನ್ನು ಸಂದರ್ಭಾನುಸಾರ ಬಳಸಲಾಗುತ್ತದೆ. ಲೋಹದ ಮೂರ್ತಿಶಿಲ್ಪಗಳನ್ನು ಉತ್ಸವದ ಸಂದರ್ಭದಲ್ಲಿ ಬಳಸಲಾಗುತ್ತದೆ.

ಕಾಲಾರಿಮೂರ್ತಿಯ ಐದು ಉದಾಹರಣೆಗಳನ್ನು ಚಿತ್ರಸಹಿತವಾಗಿ ಗೋಪಿನಾಥರಾವ್ ಅವರು ನೀಡಿರುತ್ತಾರೆ. ಮೊದಲನೆಯ ಉದಾಹರಣೆಯು ಕಾಲಾರಿಮೂರ್ತಿಯ ರೇಖಾಚಿತ್ರವಾಗಿದೆ. ಇದು ಎಲ್ಲೋರದ ದಶಾವತಾರ

ಗುಹಾ ದೇವಾಲಯದಲ್ಲಿದೆ.[11] ಈ ಶಿಲಾಫಲಕದಲ್ಲಿ ಶಿವನು ಲಿಂಗದಿಂದ ಉದ್ಭವವಾಗಿ ಬರುತ್ತಿದ್ದು, ಅವನ ಎರಡು ಕೈಗಳಿಂದ ದಪ್ಪವಾದ ಹಿಡಿಕೆಯುಳ್ಳ ತ್ರಿಶೂಲವನ್ನು ಹಿಡಿದು ಯಮನ ಹೊಟ್ಟೆಗೆ ಚುಚ್ಚುತ್ತಿದ್ದಾನೆ. ಶಿವನ ಬಲಗೈಯೊಂದು ಕಟ್ಯಾವಲಂಬಿತ ಹಸ್ತವಾಗಿದ್ದು, ಎಡಗೈ ವಿಸ್ಮಯ ಹಸ್ತವಾಗಿದೆ. ಶಿವನ ಮಂಡಿಯ ಕೆಳಗಿನ ಕಾಲಿನ ಭಾಗವು ಲಿಂಗದೊಳಗೆ ಸೇರಿದಂತೆ ಇದ್ದು, ಎಡಗಾಲು ಯಮನನ್ನು ಒದೆಯುತ್ತಿದೆ. ಶಿವನು ಸಕಲ ಆಭರಣಗಳಿಂದ ಕೂಡಿದವನಾಗಿದ್ದಾನೆ. ಯಮನು ಕೆಳಗೆ ಬೀಳುತ್ತಿದ್ದು, ಬಲಗೈ ಎತ್ತಿ ಶಿವನನ್ನು ಸ್ತುತಿಸುತ್ತಿದೆ. ಯಮನ ಎಡಗೈಯಲ್ಲಿನ ಪಾಶವು ಮಾರ್ಕಂಡೇಯನ ಕೊರಳನ್ನು ಸುತ್ತಿಕೊಂಡಿದೆ. ಮಾರ್ಕಂಡೇಯನು ಲಿಂಗದ ಮುಂದೆ ಮುಂಡಿಯೂರಿ ಕುಳಿತು ಕೈಗಳನ್ನು ಮಂಡಿಯ ಮೇಲೆ ಇರಿಸಿದ್ದಾನೆ.

ಎರಡನೆಯ ಶಿಲ್ಪವು ಎಲ್ಲೋರದ ಕೈಲಾಸ ದೇವಾಲಯದಲ್ಲಿದೆ.[12] ಇದು ಮೇಲೆ ವಿವರಿಸಿದ ಶಿಲ್ಪವನ್ನು ಹೋಲುತ್ತದೆ. ಈ ಶಿಲ್ಪದಲ್ಲಿ ಯಮನು ಶಿವನನ್ನು ಸ್ತುತಿಸುತ್ತಾ ನಿಂತಿರುವಂತೆ ತೋರಲಾಗಿದೆ. ಅವನ ಒಂದು ಕೈ ಮೇಲೆತ್ತಿದ್ದರೆ, ಇನ್ನೊಂದರಲ್ಲಿ ಪಾಶವನ್ನು ಮಾರ್ಕಂಡೇಯನತ್ತ ಬೀರಿದ್ದನ್ನು ತೋರಿದೆ. ಶಿವನು ಲಿಂಗೋದ್ಭವನಾಗಿರುವಂತೆ ತೋರಲಾಗಿದ್ದು ಲಿಂಗದ ಮುಂದೆ ನಿರೂಪಿಸಿರುವ ಮಾರ್ಕಂಡೇಯನ ಶಿಲ್ಪದ ರುಂಡಭಾಗವು ಪ್ರಸ್ತುತ ನಶಿಸಿದೆ. ಶಿವನು ಯಮನನ್ನು ತನ್ನ ಕಾಲಿನಿಂದ ಒದ್ದು ತನ್ನ ಶೂಲದಿಂದ ಆವೇಶಭರಿತನಾಗಿ ತಿವಿಯುತ್ತಿರುವಂತೆ ಅತ್ಯಂತ ಮನೋಜ್ಞವಾಗಿ ತೋರಲಾಗಿದೆ.

ಮೂರನೆಯ ಉದಾಹರಣೆಯನ್ನು ತಮಿಳುನಾಡಿನ ತಂಜಾವೂರು ಜಿಲ್ಲೆಯಲ್ಲಿರುವ ಪಟ್ಟೀಶ್ವರಂನಲ್ಲಿರುವ[13] ಕಾಲಾರಿಮೂರ್ತಿಯ ಉದಾಹರಣೆಯನ್ನು ನೀಡಿರುತ್ತಾರೆ. ಇದರ ನಿರೂಪಣಾ ಶೈಲಿಯು ಮೇಲೆ ವಿವರಿಸಿರುವುದಕ್ಕಿಂತ ಕೊಂಚ ಭಿನ್ನವಾಗಿದೆ. ಕೆಳಗೆ ಬಿದ್ದಿರುವ ಯಮನ ಮೇಲೆ ಶಿವನು ತನ್ನ ಎಡಗಾಲನ್ನು ಇರಿಸಿ ತನ್ನ ಬಲಗಾಲಿನಿಂದ ಯಮನ ಎದೆಗೆ ಒದೆಯುತ್ತಿರುವಂತೆ ತೋರಲಾಗಿದೆ. ಅವನ ಕೈಯಲ್ಲಿ ಬಿಲ್ಲನ್ನು ಕೆಳಮುಖವಾಗಿ ಹಿಡಿದಿದ್ದು, ಪರಶು, ಮೃಗ ಮತ್ತು ಕಪಾಲಗಳನ್ನು ಹಿಡಿದಿರುವನು. ಶಿವನ ಭಾಗದಲ್ಲಿ ಮಾರ್ಕಂಡೇಯನು ಅಂಜಲಿ ಮುದ್ರೆಯಲ್ಲಿ ಶಿವನನ್ನು ಸ್ತುತಿಸುತ್ತಿರುವಂತೆ ತೋರಲಾಗಿದೆ.

ನಾಲ್ಕನೆಯ ಉದಾಹರಣೆಯು ತಿರುಚ್ಚೆಟ್ಟಾಂನ್‌ಗುಡಿಯ ದೇವಾಲಯದಲ್ಲಿರುವ ಕಾಲಾರಿ ಮೂರ್ತಿಯ ವಿವರಗಳನ್ನು ನೀಡಿರುತ್ತಾರೆ.[14] ಇದು ಪಟ್ಟೀಶ್ವರಂನಲ್ಲಿರುವ ಕಾಲಾರಿಮೂರ್ತಿಯನ್ನು ಹೋಲುತ್ತದೆ. ಆದರೆ ಇವರೆಡರ ವ್ಯತ್ಯಾಸವೆಂದರೆ, ಪಟ್ಟೀಶ್ವರಂನಲ್ಲಿ ಶಿವನು ತನ್ನ ಬಲಗಾಲಿನಿಂದ ಯಮನನ್ನು ಒದೆಯುವಂತಿದ್ದರೆ ತಿರುಚ್ಚೆಟ್ಟಾಂನ್‌ಗುಡಿಯಲ್ಲಿನ ಶಿಲ್ಪದಲ್ಲಿ ತನ್ನ ಎಡಗಾಲಿನಿಂದ ಯಮನನ್ನು ಒದೆಯುತ್ತಿದ್ದಾನೆ. ಬಲಗಾಲನ್ನು ಯಮನ ದೇಹದ ಮೇಲಿರಿಸಿದ್ದಾನೆ. ಪಟ್ಟೀಶ್ವರಂನಲ್ಲಿ ಎಡಗಾಲನ್ನು ಎದೆಯ ಮೇಲಿರಿಸಿದ್ದಾನೆ. ತಿರುಚ್ಚೆಟ್ಟಾಂನ್‌ಗುಡಿಯಲ್ಲಿ ಯಮನ ತಲೆಯು ಶಿವನ ಎಡಭಾಗಕ್ಕೆ ತೋರಿಸಿದರೆ, ಪಟ್ಟೀಶ್ವರಂನಲ್ಲಿ ಬಲಭಾಗಕ್ಕೆ ತೋರಲಾಗಿದೆ. ಐದನೆಯ ಉದಾಹರಣೆಯು ಮಧುರೈನ ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಅಂದಿದ್ದ ಎಕ್ಸಿಕ್ಯೂಟಿವ್ ಇಂಜನಿಯರ್ ಆದ ಆರ್.ಎಫ್. ಸ್ಟೋನಿಯವರ ಸಂಗ್ರಹದಲ್ಲಿದ್ದ ಕಂಚಿನ ಕಾಲಾರಿಮೂರ್ತಿಯ ಛಾಯಾಚಿತ್ರವಾಗಿದೆ.[15] ಇದರಲ್ಲಿ ಶಿವನು ಲಿಂಗದಿಂದ ಉದ್ಭವವಾಗಿ ಬಂದು ಯಮನನ್ನು ಒದೆಯುವಂತೆ ಕಾಲುಗಳನ್ನು ತೋರಲಾಗಿದೆ. ಯಮನ ವಿಗ್ರಹವು ಇಲ್ಲ. ಅದನ್ನು ಪ್ರತ್ಯೇಕವಾಗಿ ಎರಕ ಹೊಯ್ದು ಅದನ್ನು ಈ ಪ್ರತಿಮೆಯ ಜೊತೆಗೆ ಸೇರಿಸಲಾಗುತ್ತದೆ. ಶಿವನ ಹಿಂದಿರುವ ಎರಡು ಕೈಗಳು ಪರಶು ಮತ್ತು ಮೃಗವನ್ನು ಹಿಡಿದಿದೆ. ಮುಂದಿರುವ ಎರಡು ಕೈಗಳು ತ್ರಿಶೂಲವನ್ನು ಹಿಡಿಯಲು ಸೂಕ್ತವಾಗಿರುವಂತೆ ತೋರಲಾಗಿದೆ.

ಕಾಲಾರಿಮೂರ್ತಿಯ ಇನ್ನಷ್ಟು ಶಿಲ್ಪಗಳನ್ನು ಕುರಿತ ಮಾಹಿತಿಯನ್ನು ವಸಂತಲಕ್ಷ್ಮಿಯವರು ನೀಡಿರುತ್ತಾರೆ.[16] ಚಾಮರಾಜನಗರದ ಚಾಮರಾಜೇಶ್ವರ ದೇವಾಲಯದ ಪರಿವಾರ ಆಲಯದಲ್ಲಿ ಕಾಲಾರಿಮೂರ್ತಿಯಿದೆ. ಇದರಲ್ಲಿ ಮಾರ್ಕಂಡೇಯನು ಶಿವನನ್ನು ಪೂಜಿಸುತ್ತಾ ಲಿಂಗದ ಬಲಭಾಗದಲ್ಲಿ ನಿಂತಿದ್ದಾನೆ. ಕೈಯಲ್ಲಿ ಬೊಗಸೆ ತುಂಬಾ ಹೂವನ್ನು ಹಿಡಿದಿರುವನು. ಇವನ ಸೊಂಟ ಭಾಗಕ್ಕೆ ಪಾಶವನ್ನು ಹಾಕಿ ಎಳೆಯುತ್ತಿರುವ ಯಮನ ಶಿಲ್ಪವು ಲಿಂಗದ ಎಡಭಾಗಕ್ಕಿದೆ. ಯಮನು ಎರಡು ಕೈಗಳಿಂದ ಬಿಗಿಯಾಗಿ ಪಾಶವನ್ನು ಸೆಳೆಯುತ್ತಿರುವಂತೆ ತೋರಲಾಗಿದೆ. ಲಿಂಗದಿಂದ ಉದ್ಭವಿಸಿರುವ ಶಿವನು ತನ್ನ ಮುಂದಿನ ಎರಡು ಕೈಗಳಿಂದ ತ್ರಿಶೂಲವನ್ನು ಹಿಡಿದಿದ್ದು, ಯಮನ ಕೊರಳಿಗೆ ಚುಚ್ಚುತ್ತಿದ್ದಾನೆ. ಶಿವನ ಮುಖದಲ್ಲಿ ಕಣ್ಣುಗಳನ್ನು ದುಂಡಗೆ ಬಿಡಿಸಿದ್ದು, ರೌದ್ರಾವೇಶವನ್ನು ತೋರುತ್ತಲಿದೆ. ಶಿವನ ಎಡಗಾಲಿನಿಂದ ಯಮನನ್ನು ಒದೆಯುತ್ತಿದ್ದಾನೆ. ಯಮಧರ್ಮರಾಯನ ಕತ್ತು ಹೆದರಿ ಹಿಂದಕ್ಕೆ ಸರಿದಂತೆ ತೋರಲಾಗಿದೆ. ಈ ಸುಂದರ ವಿಗ್ರಹಕ್ಕೆ ವಲ್ಲಿ ಪ್ರಭಾವಳಿಯನ್ನು ಬಿಡಿಸಿದ್ದು, ಲಿಂಗದ ಪೀಠದ ಕೆಳಗೆ ವೃಷಭವನ್ನು ಕೆತ್ತಲಾಗಿದೆ. ಇಂತಹ ಇನ್ನೊಂದು ಶಿಲ್ಪವು ನಂಜನಗೂಡಿನ ಶ್ರೀ ಕಂಠೇಶ್ವರ ದೇವಾಲಯದ ಒಳಪ್ರಾಕಾರದಲ್ಲಿದೆ. ತುಮಕೂರಿನ ಸಿದ್ಧೇಶ್ವರ ದೇವಾಲಯದ ಒಳಭಿತ್ತಿಯಲ್ಲಿ ಕಾಲಹರಿ ಶಿವನ ಸುಂದರ ಗಾರೆಯ ಶಿಲ್ಪವಿದೆ.

ವಾರಾಣಾಸಿಯಲ್ಲಿರುವ ಭಾರತ ಕಲಾಭವನ ವಸ್ತುಸಂಗ್ರಹಾಲಯದಲ್ಲಿ ಕ್ರಿ.ಶ. 18ನೇ ಶತಮಾನಕ್ಕೆ ಸೇರಿದ ಮಾರ್ಕಂಡೇಯನ ಪ್ರಸಂಗವನ್ನು ತೋರುವ ವರ್ಣಚಿತ್ರವಿದೆ. ಇದರಲ್ಲಿ ಶಿವನು ಲಿಂಗದಿಂದ ಹೊರಬಂದು ಮಾರ್ಕಂಡೇಯನನ್ನು ಆಶೀರ್ವದಿಸುತ್ತಿದ್ದಾನೆ. ಮಾರ್ಕಂಡೇಯನು ಶಿವನನ್ನು ಹೂವುಗಳಿಂದ ಪೂಜಿಸಿ ಅಂಜಲಿ ಮುದ್ರೆಯಲ್ಲಿದ್ದಾನೆ. ಶಿವನು ಯಮನನ್ನು ತ್ರಿಶೂಲದಿಂದ ಆಕ್ರಮಣ ಮಾಡುತ್ತಿದ್ದಾನೆ. ಯಮನು ಕೌಪೀನಧಾರಿಯಾಗಿದ್ದಾನೆ. ಈ ಪ್ರಸಂಗವು ಸುಂದರ ಪ್ರಕೃತಿಯ ತಾಣದಲ್ಲಿ, ಬೆಟ್ಟಗುಡ್ಡಗಳ ಪ್ರದೇಶದಲ್ಲಿ ನಡೆಯುತ್ತಿರುವಂತೆ ತೋರಲಾಗಿದೆ. ಇಲ್ಲಿ ಯಾವುದೇ ದೇವಾಲಯ ಅಥವಾ ಮಂಟಪವನ್ನು ತೋರಿಲ್ಲ.

ನಿರೂಪಣಾ ಫಲಕದ ವಿಶ್ಲೇಷಣೆ

ವಿರೂಪಾಕ್ಷ ದೇವಾಲಯದಲ್ಲಿರುವ ಶಿಲಾಫಲಕವು ಮೇಲೆ ವಿವರಿಸಿರುವ ಎಲ್ಲಾ ಫಲಕ ಮತ್ತು ಶಿಲ್ಪಗಳಿಗಿಂತ ಭಿನ್ನವಾಗಿದೆ. ಬಹುಪಾಲು ಫಲಕಗಳು ಶಿವನ ಕಾಲಾರಿಮೂರ್ತಿಯನ್ನು ತೋರುತ್ತವೆಯಾದರೂ, ಅದಕ್ಕೆ ಸಂಬಂಧಿಸಿದ ಪ್ರಸಂಗ ಅಥವಾ ಸನ್ನಿವೇಶಗಳನ್ನು ಗೌಣವಾಗಿ ಅಥವಾ ಅಷ್ಟು ಪ್ರಾಮುಖ್ಯತೆಯನ್ನು ನೀಡದೆ ತೋರಲಾಗುತ್ತದೆ. ಸುರೇಶ್‌ರವರು ಈ ನಿರೂಪಣಾತ್ಮಕ ಶಿಲ್ಪದ ಕುರಿತು ಉಲ್ಲೇಖಿಸಿದ್ದರೂ, ಅದನ್ನು ಶಿವನ ಕಾಲಾರಿಮೂರ್ತಿ ಎಂದು ಪರಿಗಣಿಸಿ ವಿವರಣೆಯನ್ನು ನೀಡಿರುತ್ತಾರೆ. ಪ್ರಾಸಂಗಿಕವಾಗಿ ಮಾರ್ಕಂಡೇಯನ ಕಥಾಪ್ರಸಂಗವನ್ನು ಉಲ್ಲೇಖಿಸಿದ್ದಾರೆ. ನಿರೂಪಣಾತ್ಮಕ ಶಿಲ್ಪದ ಪೂರ್ಣ ಅರ್ಥ ವಿವರಣೆ ಮತ್ತು ವಿಶ್ಲೇಷಣೆಯನ್ನು ಮಾಡಿರುವುದಿಲ್ಲ.[17]

ಈ ನಿರೂಪಣಾತ್ಮಕ ಶಿಲ್ಪವು ಮಾರ್ಕಂಡೇಯನ ಸಂಪೂರ್ಣ ವೃತ್ತಾಂತವನ್ನು ಬಿಂಬಿಸುತ್ತದೆ. ಈ ಫಲಕದಲ್ಲಿ ಯಮನು ಕಾರ್ಯಪ್ರವೃತ್ತವಾಗಿರುವಂತೆ ಎರಡು ಬಾರಿ ತೋರಲಾಗಿದೆ. ಉಳಿದ ಯಾವುದೇ ಫಲಕಗಳಲ್ಲಿ ಯಮನನ್ನು ಎರಡು ಬಾರಿ ತೋರಿಲ್ಲ. ಯಮನನ್ನು ಫಲಕದ ಎಡಭಾಗದಲ್ಲಿ ಮಾರ್ಕಂಡೇಯನತ್ತ ಪಾಶವನ್ನು ಬೀಸುತ್ತಿರುವಂತೆ ತೋರಲಾಗಿದೆ. ಇದು ಅಂಶುಮದ್ಭೇದಾಗಮದ ಉಲ್ಲೇಖದಂತಿದೆ. ಅವನು ಬೀಸಿರುವ ನಾಗಪಾಶದಲ್ಲಿ ನಾಗನ/ಸರ್ಪದ ಹೆಡೆಯಿರುವುದನ್ನು ಕಾಣಬಹುದು. ನಾಗದ ಬಾಲದ ಭಾಗವು ಲಿಂಗ ಮತ್ತು ಮಾರ್ಕಂಡೇಯನನ್ನು ಸ್ಪರ್ಶಿಸಿರುವಂತೆ ತೋರಲಾಗಿದೆ. ಯಮನು ತನ್ನ ಎತ್ತಿದ ಬಲಕೈಯಲ್ಲಿ ತ್ರಿಶೂಲದಂತಹ ಆಯುಧವನ್ನು ಹಿಡಿದು

ಬಾಲಕನತ್ತ ಗುರಿಯಾಗಿಸಿರುವಂತೆ ಇದೆ. ಅವನು ಧೋತಿ ಧರಿಸಿ, ಕೆಲವು ಆಭರಣಗಳನ್ನು ಧರಿಸಿರುವನು. ಅವನು ಮಕುಟ ಧರಿಸಿಲ್ಲ. ಅವನು ಬಲಗಾಲನ್ನು ಮುಂದಿರಿಸಿದ್ದಾನೆ. ಯಮನನ್ನು ಈ ರೀತಿಯಾಗಿ ನಿರೂಪಿಸಿರುವುದು, ಅವನು ಮಾರ್ಕಂಡೇಯನ ಪ್ರಾಣವನ್ನು ತೆಗೆಯಲು ಬಂದಿರುವ ಉದ್ದೇಶವು ನಿಚ್ಚಳವಾಗಿದೆ. ಅವನು ತನ್ನ ಕೈಯಲ್ಲಿ ಹಿಡಿದಿರುವ ಎಲ್ಲಾ ವಸ್ತುಗಳು ಪ್ರಯೋಗ ಮುದ್ರೆಯಲ್ಲಿವೆ. ಇದು ಚಲನಶೀಲತೆಯನ್ನು ತೋರುತ್ತವೆ. ಒಟ್ಟಾರೆಯಾಗಿ ಒಂದು ಕಾರ್ಯಪ್ರವೃತ್ತತೆಯನ್ನು ಯಮನ ಶಿಲ್ಪವು ತೋರುತ್ತದೆ. ಅವನು ಧರಿಸಿರುವ ವಸ್ತ್ರ ಮತ್ತು ಆಭರಣಗಳು ವಿಜಯನಗರ ಕಾಲದ ಶಿಲ್ಪಗಳಲ್ಲಿ ಕಂಡುಬರುವ ವಸ್ತ್ರಾಭರಣಗಳನ್ನು ಹೋಲುತ್ತದೆ. ಅದರಲ್ಲಿಯೂ ಮುಖ್ಯವಾಗಿ ಸೊಂಟದ ಭಾಗದಲ್ಲಿ ತೋರಲಾಗಿರುವ ಧೋತಿಯ ನೆರಿಗೆ.

ಮಾರ್ಕಂಡೇಯನನ್ನು ಯಮನ ಪಕ್ಕದಲ್ಲಿ ತೋರಲಾಗಿದ್ದು, ಅವನು ಲಿಂಗವನ್ನು ಪೂಜಿಸುತ್ತಿದ್ದಾನೆ. ತನ್ನ ಎರಡು ಕೈಗಳಿಂದ ಲಿಂಗವನ್ನು ತಬ್ಬಿ ಹಿಡಿದಿದ್ದಾನೆ. ಲಿಂಗವು ಪ್ರಧಾನವಾಗಿದ್ದು ಅದು ಮಂಟಪದಲ್ಲಿರುವಂತೆ ತೋರಲಾಗಿದೆ. ಈ ಮಂಟಪವು ಒಂದು ಕಿರುದೇವಾಲಯದ ಪ್ರತಿರೂಪವಾಗಿದೆ. ಅದರಲ್ಲಿ ಅಧಿಷ್ಠಾನ, ಕಂಬ ಮತ್ತು ಶಿಖರಗಳಿವೆ. ಈ ಮಂಟಪದ ನಿರೂಪಣೆಯನ್ನು ನಾವು ದೇವಾಲಯದ ಪ್ರತಿರೂಪವೆಂದು ಪರಿಗಣಿಸಿ ಅದು ತಿರುಕ್ಕಡವೂರ್‌ನ ದೇವಾಲಯವೆಂದು ಪರಿಗಣಿಸಬಹುದು. ಏಕೆಂದರೆ ತಿರಕ್ಕಡವೂರ್ ದೇವಾಲಯದಲ್ಲಿ ಮಾರ್ಕಂಡೇಯನಿಗೆ ಶಿವನು ಪ್ರತ್ಯಕ್ಷನಾಗಿದ್ದು ಮತ್ತು ಅವನು ಕಾಲಾರಿಮೂರ್ತಿಯಾಗಿ ಯಮನನ್ನು ದಂಡಿಸಿದನೆಂಬ ಬಲವಾದ ಪ್ರತೀತಿಯ ಹಿನ್ನೆಲೆಯಲ್ಲಿ ಮಂಟಪವನ್ನು ದೇವಾಲಯವೆಂದು ಭಾವಿಸಬಹುದು. ಮಂಟಪವನ್ನು ಉಬ್ಬುಶಿಲ್ಪದಲ್ಲಿ ತೋರಲಾಗಿದೆಯಾದ್ದರಿಂದ, ದೇವಾಲಯದ ಪೂರ್ಣ ವಾಸ್ತು ವಿವರಗಳನ್ನು ಗುರುತಿಸಲು ಸಾಧ್ಯವಿಲ್ಲ. ಶಿಲಾಫಲಕದಲ್ಲಿ ದೊರಕುವ ಅತ್ಯಲ್ಪ ಜಾಗದಲ್ಲಿ ಶಿಲ್ಪಿಯೂ ಸಾಂಕೇತಿಕವಾಗಿ ವಿಷಯವನ್ನು ನಿರೂಪಿಸಿದ್ದಾನೆ. ಆದ್ದರಿಂದ ಇಲ್ಲಿರುವ ಮಂಟಪವನ್ನು ನಾವು ಯಾವುದೇ ಅನುಮಾನಗಳಿಲ್ಲದೆ ತಿರುಕ್ಕಡವೂರು ದೇವಾಲಯವೆಂದು ಗುರುತಿಸಬಹುದು. ಇಲ್ಲಿ ತೋರಿರುವ ಲಿಂಗದಲ್ಲಿ ಸಾಮಾನ್ಯವಾಗಿ ಕಂಡುಬರುವ ಎಲ್ಲಾ ಭಾಗಗಳಿವೆ.

ಮಂಟಪದ ಬಲಭಾಗದಲ್ಲಿ ಶಿವನನ್ನು ಕಾಲಾರಿಮೂರ್ತಿಯಾಗಿ ತೋರಲಾಗಿದೆ. ಅವನು ನಾಲ್ಕು ಕೈಗಳನ್ನು ಹೊಂದಿದ್ದು, ತನ್ನ ಕಾಲುಗಳಿಂದ ಯಮನನ್ನು ತುಳಿಯುತ್ತಲಿದ್ದಾನೆ. ಶಿವನ ನಾಲ್ಕು ಕೈಗಳಲ್ಲಿನ ಮೇಲಿನ ಬಲ ಮತ್ತು ಎಡಗೈಗಳು ಕಟಕ, ಹಸ್ತದಲ್ಲಿ (ಹಿಕ್ಕಸೂತ್ರ) ತ್ರಿಶೂಲವನ್ನು ಹಿಡಿದು ಯಮನ ಕುತ್ತಿಗೆಯ ಬಳಿ ಇರಿಸಿದ್ದಾನೆ. ಅವನು ಜಟಾಮಕುಟಧಾರಿಯಾಗಿದ್ದಾನೆ. ಆದರೆ ಆ ಜಟಾಮಕುಟವು ಕಿರೀಟ ಮಕುಟದಂತೆ ತೋರುತ್ತದೆ. ಯಮನು ಸಾಷ್ಟಾಂಗವಾಗಿ ಕೆಳಗೆ ಬಿದ್ದಿದ್ದು, ಅಂಜಲಿ ಮುದ್ರೆಯಲ್ಲಿದ್ದಾನೆ. ಶಿವನು ತನ್ನ ಬಲಗಾಲನ್ನು ಸ್ವಲ್ಪ ಎತ್ತಿದ್ದಾನೆ ಹಾಗೂ ಎಡಗಾಲು ಯಮನ ಮೇಲಿದೆ. ಶಿವನ ಕೆಳಭಾಗದ ಬಲ ಮತ್ತು ಎಡಗೈಗಳು ಸ್ವಲ್ಪ ಮಾತ್ರ ಕಾಣಸಿಗುತ್ತವೆ. ಉಳಿದ ಭಾಗಗಳು ನಶಿಸಿವೆ. ಶಿವನು ತಾನು ಧರಿಸುವ ಆಭರಣಗಳನ್ನು ಧರಿಸಿದ್ದಾನೆ. ಶಿವನು ರೌದ್ರಾವೇಶವನ್ನು ಹೊಂದಿದವನಾದರೂ ಅವನು ಅತ್ಯಂತ ಸುಂದರವಾಗಿ ನರ್ತಿಸುತ್ತಿರುವಂತೆ ಶಿಲ್ಪಿಯು ಇಲ್ಲಿ ತೋರಿದ್ದಾನೆ. ಈ ಭಂಗಿಯು ಬಾದಾಮಿಯಲ್ಲಿರುವ ನಟರಾಜನ ಶಿಲ್ಪವನ್ನು ನೆನಪಿಸುತ್ತದೆ. ಶಿವನು ತನ್ನ ಆಯುಧಗಳನ್ನು ಯಮನತ್ತ ಆವೇಶದಲ್ಲಿ ಪ್ರಯೋಗಿಸುತ್ತಿರುವುದು ಸುಂದರವಾಗಿ ಮೂಡಿಬಂದಿದೆ. ಈ ಫಲಕದಲ್ಲಿ ಶಿವ ಮತ್ತು ಯಮರನ್ನು ಕಾಮಿಕಾಗಮದಂತೆ ಕೆತ್ತಲಾಗಿದೆ. ಇದರಲ್ಲಿ ಶಿವನು ಲಿಂಗದಿಂದ ಬಂದು ಯಮನನ್ನು ಕೊಲ್ಲುವಂತೆ ತೋರಿಲ್ಲ. ಉಳಿದ ಫಲಕಗಳಲ್ಲಿ ಲಿಂಗದಿಂದ ಬಂದು ಯಮನನ್ನು ಕೊಲ್ಲುವಂತೆ ತೋರಿಸಲಾಗಿದೆ. ತ್ರಿಶೂಲವನ್ನು ತಲೆಕೆಳಗೆ ಅಥವಾ ಕೆಳಮುಖವಾಗಿ ಕೇತಕ ಮುದ್ರೆಯಲ್ಲಿ ಹಿಡಿದಿರುವುದನ್ನು ನಿರೂಪಿಸಿರುವುದು ಕಾರಣಾಗಮದಂತೆ.

ಕಾಲಾರಿಮೂರ್ತಿಯ ಶಿಲ್ಪವನ್ನು ಲೋಹದಲ್ಲಿ (ಕಂಚು) ತೋರಬೇಕಾದಲ್ಲಿ ಅದನ್ನೂ ಕರಣಾಗಮದ ಉಲ್ಲೇಖದಂತೆ ಮಾರ್ಕಂಡೇಯ ಮತ್ತು ಯಮರನ್ನು ಹೊರತುಪಡಿಸಿ ಕೇವಲ ಕಾಲಾರಿಮೂರ್ತಿಯನ್ನು ತೋರಲಾಗುತ್ತದೆ.

ನಿರೂಪಣಾತ್ಮಕ ಶಿಲಾಫಲಕವು ಮಾರ್ಕಂಡೇಯನ ಪ್ರಸಂಗವನ್ನು ನಿರೂಪಿಸುವ ಏಕಮೇವ ವಿಶಿಷ್ಟ ಶಿಲಾಫಲಕವಾಗಿದೆ. ಇದರಲ್ಲಿ ಯಮನನ್ನು ಎರಡು ಬಾರಿ ತೋರಲಾಗಿದೆ. ಇಂತಹ ಉದಾಹರಣೆಗಳು ಬೇರೆ ಫಲಕಗಳಲ್ಲಿ ಕಂಡುಬರುವುದಿಲ್ಲ. ಈ ಫಲಕದಲ್ಲಿ ಮೂರು ಕ್ರಿಯೆಗಳನ್ನು ತೋರಲಾಗಿದೆ. ಅವುಗಳು ಮಾರ್ಕಂಡೇಯನತ್ತ ಯಮನು ಪಾಶವನ್ನು ಬೀಸುವುದು, ಮಾರ್ಕಂಡೇಯನು ಶಿವಲಿಂಗವನ್ನು ತಬ್ಬಿ ಹಿಡಿದು ಕುಳಿತಿರುವುದು ಆಗ ಯಮನ ಪಾಶವು ಮಾರ್ಕಂಡೇಯ ಮತ್ತು ಲಿಂಗವನ್ನು ಸ್ಪರ್ಶಿಸುವುದು. ಲಿಂಗ ಮತ್ತು ಬಾಲಕ ದೇವಾಲಯ ಅಥವಾ ಮಂಟಪದಲ್ಲಿ ಕುಳಿತಿರುವ ದೃಶ್ಯ ಫಲಕದ ಮಧ್ಯಭಾಗವನ್ನು ಆವರಿಸಿದೆ. ಮತ್ತು ಫಲಕದ ಬಲಭಾಗದ ತುದಿಯಲ್ಲಿ ಶಿವನು ಕಾಲಾರಿಮೂರ್ತಿಯಾಗಿ ಯಮನನ್ನು ತುಳಿಯುತ್ತಿರುವಂತೆ ಕೆತ್ತಲಾಗಿದೆ. ಫಲಕದಲ್ಲಿರುವ ಶಿಲ್ಪಗಳು ಫಲಕದಲ್ಲಿ ಏಕರೂಪವಾಗಿ ವಿಸ್ತರಿಸಿದ್ದು ಒಂದು ರೀತಿಯ ಸಮತೋಲನತೆಯನ್ನು ಫಲಕಕ್ಕೆ ನೀಡಿದೆ. ಫಲಕದಲ್ಲಿ ದೊರಕುವ ಅಥವಾ ಲಭ್ಯವಿರುವ ಸ್ಥಳವನ್ನು ಶಿಲ್ಪಿಯು ಅತ್ಯಂತ ಜಾಣ್ಮೆಯಿಂದ ಉಪಯೋಗಿಸಿಕೊಂಡಿದ್ದಾನೆ.

ಈ ಪುರಾಣ ಪ್ರಸಂಗವನ್ನು ಶಿಲ್ಪಿಯು ಶಿಲಾಫಲಕಕ್ಕೆ ಹಸ್ತಾಂತರಿಸುವಾಗ ಎಲ್ಲಾ ಅಂಶಗಳೊಂದಿಗೆ ಆಗಮಗಳ ಉಲ್ಲೇಖಗಳನ್ನು ಪರಿಗಣಿಸಿ ಕೆತ್ತಿರುವನು. ಮೂರು ಆಗಮಗಳಲ್ಲಿ ಉಲ್ಲೇಖಿತವಾಗಿರುವ ವಿವರಣೆಗಳಿಗೆ ಅನುಗುಣವಾಗಿಯೇ ಶಿವ, ಯಮ ಮತ್ತು ಮಾರ್ಕಂಡೇಯ ಶಿಲ್ಪಗಳನ್ನು ಕೆತ್ತಲಾಗಿದೆ. ಆಗಮಗಳಲ್ಲಿ ಉಲ್ಲೇಖಿತವಾಗಿರುವ ಎಲ್ಲಾ ಅಂಶಗಳಿಲ್ಲದಿದ್ದರೂ, ಕೆಲವು ಅಂಶಗಳನ್ನು ಇಲ್ಲಿನ ಫಲಕದಲ್ಲಿ ಶಿಲ್ಪಿಯು ಅಳವಡಿಸಿದ್ದಾನೆ. ಕೆಲವೊಂದು ನಂಬಿಕೆ ಮತ್ತು ಐತಿಹ್ಯಗಳನ್ನು ಸಹ ಫಲಕದಲ್ಲಿ ಅಳವಡಿಸಿದ್ದಾನೆ. ಶಿವನು ಕಾಲಾರಿಮೂರ್ತಿಯ ರೂಪವನ್ನು ತಳೆದು ಯಮನನ್ನು ಒದ್ದು, ಮಾರ್ಕಂಡೇಯನಿಗೆ ಚಿರಂಜೀವಿಯಾಗಿರಲು ಹರಸಿ, ಆಶೀರ್ವದಿಸಿದ ಸ್ಥಳವಾದ ತಿರುಕ್ಕಡವೂರಿನ ದೇವಾಲಯವನ್ನು ಮಂಟಪ ರೂಪದಲ್ಲಿ ಶಿಲ್ಪಿಯು ತೋರಿದ್ದಾನೆ. ಇದು ನಂಬಿಕೆಯ ವಿಚಾರವಾಗಿದೆ. ಎಲ್ಲೋರದಲ್ಲಿರುವ ಶಿಲ್ಪದಲ್ಲಿ ತಿರುಕ್ಕಡವೂರಿನ ದೇವಾಲಯವನ್ನು ಸಾಂಕೇತಿಕವಾಗಿಯೂ ಸಹ ತೋರಿಲ್ಲ. ಈ ಶಿಲಾಫಲಕವನ್ನು ಕಾಲಾರಿಮೂರ್ತಿಯ ಫಲಕ ಎನ್ನುವುದಕ್ಕಿಂತಲೂ ಕಾಲಾರಿಮೂರ್ತಿಯ ಪ್ರಸಂಗದ ನಿರೂಪಣಾತ್ಮಕ ಉಬ್ಬುಶಿಲ್ಪವೆಂದು ಕರೆಯುವುದು ಅಥವಾ ಮಾರ್ಕಂಡೇಯ ನಿರೂಪಣಾತ್ಮಕ ಶಿಲಾಫಲಕವೆಂದು ಹೆಚ್ಚು ಸೂಕ್ತ ಮತ್ತು ಸಮಂಜಸ.

ಮಾರ್ಕಂಡೇಯನ ಕಥಾ ಪ್ರಸಂಗವನ್ನು ನಿರೂಪಿಸುವ ಉಬ್ಬುಶಿಲ್ಪಗಳು ಹಂಪಿ ಪರಿಸರದ ಸೌಮ್ಯಸೋಮೇಶ್ವರ ದೇವಾಲಯದ ಕಂಬಗಳಲ್ಲಿವೆ. ಸೌಮ್ಯಸೋಮೇಶ್ವರ ದೇವಾಲಯವು ತುಂಗಭದ್ರಾ ನದಿ ಬಲದಂಡೆಯ ಮೇಲೆ, ಪ್ರಾಚೀನ ನಿಂಬಾಪುರದ ಕಪಿಲಾಶ್ರಮದ ಬಳಿ, ತಳವಾರಘಟ್ಟದಿಂದ ವೆಂಕಟಾಪುರಕ್ಕೆ ತೆರಳುವ ಮಾರ್ಗದ ಎಡಬದಿಯಲ್ಲಿರುವ ತೆಂಗಿನ ತೋಟದಲ್ಲಿದೆ. ಪ್ರಸ್ತುತ ಈ ದೇವಾಲಯದ ಪಕ್ಕದ ಜಮೀನು ಜಿಂದಾಲ್ ಉಕ್ಕು ಕಾರ್ಖಾನೆಯ ಅಧೀನದಲ್ಲಿದೆ. ಈ ದೇವಾಲಯವನ್ನು ಜಿಂದಾಲ್ ಸಂಸ್ಥೆಯವರು ಜೀರ್ಣೋದ್ಧಾರ ಮಾಡುವ ಯೋಜನೆಯನ್ನು ಹಮ್ಮಿಕೊಂಡಿದ್ದಾರೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಒಂದು ಶಾಸನವಿದೆ.[18] ಸೋಮೇಶ್ವರ ದೇವಾಲಯವನ್ನು ರಾಮಪಣ್ಣ ಎಂಬುವವನು ಕಟ್ಟಿಸುತ್ತಾನೆ. ಶಾಸನದ ವಿವರಗಳು ಇಂತಿವೆ. ಶಾಸನವು ತ್ರುಟಿತವಾಗಿದ್ದು, ಶಾಲಿವಾಹನ ಶಕವರ್ಷ 1377, ಪ್ರಮಾದಿ ಸಂವತ್ಸರ, ಪೌಷ, ಬ. 7, ಶುಕ್ರವಾರ ಎಂದು ಉಲ್ಲೇಖಿಸುತ್ತದೆ. ಇದು ಕ್ರಿ.ಶ. 31–12–1455ಕ್ಕೆ ಸರಿ ಹೊಂದುತ್ತದೆ. ಆದರೆ ಆ ವರ್ಷ ಯುವ ಸಂವತ್ಸರವಾಗಿರುವುದಿಲ್ಲ. ಪ್ರೌಢದೇವರಾಯನ

ಕಾಲದ ಈ ಶಾಸನವು ಯದುವಂಶದ ಸಂಗಮದಿಂದ ವಂಶಾವಳಿಯನ್ನು ಆರಂಭಿಸುತ್ತದೆ. ಸಂಗಮನ ಮಗ ಬುಕ್ಕ, ಇವರ ಮಗ ಹರಿಹರ, ಇವನ ಮಗ ದೇವರಾಯ, ಇವನ ಮಗ ಮಲ್ಲಿಕಾರ್ಜುನ, ಇವನ ಮಗ ಪ್ರೌಢದೇವರಾಯ. ಇವನು ರಾಜಧಾನಿ ವಿಜಯನಗರದಲ್ಲಿ ಆಳುತ್ತಿದ್ದು, ತುಂಗಭದ್ರೆಯ ದಕ್ಷಿಣ ತೀರದ ಕುಮಾರಗಿರಿ ಅಗ್ರಹಾರದ ಬಳಿ ಸೋಮಲಾಪುರದಲ್ಲಿ ಹೊಸದಾಗಿ ಪ್ರತಿಷ್ಠೆಯಾದ ಸೌಮ್ಯಸೋಮೇಶ್ವರ ದೇವರ ಪೂಜೆಗಾಗಿ ಗ್ರಾಮವೊಂದನ್ನು ನೀಡುತ್ತಾನೆ. ಗ್ರಾಮದ ಎಲ್ಲೆಗಳನ್ನು ಶಾಸನ ತಿಳಿಸುತ್ತದೆ. ಸೋಮೇಶ್ವರ ದೇವಾಲಯವನ್ನು ರಾಯಪಣ್ಣ ಎಂಬುವವನು ಕಟ್ಟಿಸುತ್ತಾನೆ. ದೇವಾಲಯದ ಉಸ್ತುವಾರಿಯನ್ನು ಹುಲಿಗೆರೆಯ ಮಂಗಣ್ಣ ಅಯ್ಯನ ಮಗ ನಾಗಣ್ಣ ಅಯ್ಯನಿಗೆ ನೀಡುತ್ತಾನೆ. ಈ ಶಾಸನವನ್ನು ಮುದ್ದಣ್ಣಾಚಾರ್ಯನ ಮಗ ವೀರಣ ಬರೆದನೆಂದು ಶಾಸನ ದಾಖಲಿಸಿದೆ.

ದೇವಾಲಯವು ಪೂರ್ವಾಭಿಮುಖವಾಗಿದ್ದು, ಕಣಶಿಲೆಯಿಂದ ನಿರ್ಮಿಸಲಾಗಿದೆ. ದೇವಾಲಯದಲ್ಲಿ ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗಗಳಿವೆ. ನವರಂಗದಲ್ಲಿ ಪೂರ್ವ, ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ಪ್ರವೇಶದ್ವಾರಗಳಿವೆ. ಗರ್ಭಗೃಹವು ಚೌಕಾಕಾರವಾಗಿದ್ದು, ಈಗ ಅದರಲ್ಲಿ ಯಾವುದೇ ಮೂರ್ತಿಶಿಲ್ಪಗಳಲ್ಲಿ ಗರ್ಭಗೃಹದ ಮೇಲೆ ತ್ರಿತಳಗಳ ಗಾರೆಯ ಶಿಖರವಿದೆ. ದ್ರಾವಿಡ ಶೈಲಿಯ ವಿಮಾನವು ಸಾಕಷ್ಟು ಶಿಥಿಲವಾಗಿದೆ. ಪ್ರಸ್ತರ ಭಾಗದವರೆಗೆ ಕಲ್ಲಿನಿಂದ ನಿರ್ಮಿಸಲಾಗಿದೆ. ದೇವಾಲಯದ ಮುಂಭಾಗ ಕಲ್ಲಿನ ಧ್ವಜಸ್ತಂಭವಿದೆ. ಗುಡಿಯ ಸುತ್ತಲೂ ಇದ್ದ ವಾಸ್ತು ನಿರ್ಮಿತಿಗಳು ಶಿಥಿಲಗೊಂಡು ನಾಶವಾಗಿದೆ. ಪ್ರಧಾನ ದೇಗುಲದ ಪಕ್ಕದಲ್ಲಿ ಉತ್ತರಕ್ಕೆ ಇದ್ದ ದೇವಿಯ ಆಲಯ ಈಗ ಸಂಪೂರ್ಣವಾಗಿ ಬಿದ್ದು ನಶಿಸಿದೆ. ಅದರ ವಾಸ್ತು ಅವಶೇಷಗಳನ್ನು ಕಾಣಬಹುದು. ದೇವಾಲಯದ ದಕ್ಷಿಣಕ್ಕೆ ಪ್ರವೇಶಮಂಟಪವು ಇದೆ. ಈ ದೇವಾಲಯಕ್ಕೆ ಪ್ರಾಕಾರ ಗೋಡೆಯಿದ್ದು, ಈಗ ಅದು ನಾಶವಾಗಿದೆ. ಅದರ ಪಳೆಯುಳಿಕೆಗಳನ್ನು ಈಗಲೂ ಕಾಣಬಹುದು.

ದೇವಾಲಯದ ನವರಂಗದಲ್ಲಿ ನಾಲ್ಕು ಕಂಬಗಳಿವೆ. ಈ ಕಂಬದಲ್ಲಿ ಕೆಳಗೆ ಮತ್ತು ಮೇಲೆ ಎರಡು ಕಾಂಡದ ಭಾಗಗಳಿವೆ. ಅದರ ಮೇಲ್ಭಾಗದಲ್ಲಿ ಫಲಕ, ಬೋದಿಗೆಗಳಿವೆ. ಕಂಬದ ಒಟ್ಟು ಎಂಟು ಭಾಗಗಳಲ್ಲಿ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಆದ್ದರಿಂದ ಇದನ್ನು ಚಿತ್ರಕಾಂಡ ಕಂಬವೆಂದು ಕರೆಯಬಹುದು. ನವರಂಗದ ಎರಡು ಕಂಬಗಳಲ್ಲಿ, ಅಂದರೆ ಎಡಭಾಗದ ಎರಡು ಕಂಬಗಳ ಕೆಳಭಾಗದ ನಾಲ್ಕು ಕಾಂಡ ಮತ್ತು ಮೇಲ್ಭಾಗದ ಕಾಂಡದ ನಾಲ್ಕು ಮುಖಗಳಲ್ಲಿಯೂ ಕೆಲವು ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಮೇಲ್ನೋಟಕ್ಕೆ ಈ ಶಿಲ್ಪಗಳು ಬಿಡಿ ಶಿಲ್ಪಗಳಾಗಿ ಕಂಡಬರುತ್ತವೆ.[19] ಆದರೆ ಇವುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಈ ಉಬ್ಬುಶಿಲ್ಪಗಳು ಒಂದಕ್ಕೊಂದು ಪೂರಕವಾಗಿ ಕಥಾಪ್ರಸಂಗವನ್ನು ನಿರೂಪಿಸುವ ಕಥಾನಕ ಉಬ್ಬುಶಿಲ್ಪಗಳಾಗಿವೆ. ನವರಂಗದ ಎರಡು ಕಂಬಗಳಲ್ಲಿ ಮಾರ್ಕಂಡೇಯ ಅಥವಾ ಕಾಲಾರಿಮೂರ್ತಿ ಶಿವನ ಕಥಾಪ್ರಸಂಗವನ್ನು ನಿರೂಪಿಸಲಾಗಿದೆ. ವಿರೂಪಾಕ್ಷ ದೇವಾಲಯದ ಮುಂಭಾಗದಲ್ಲಿರುವ ಉಬ್ಬುಶಿಲ್ಪವು ಏಕ ಶಿಲಾಫಲಕವಾಗಿದ್ದು ಮತ್ತು ಮಾರ್ಕಂಡೇಯನ ಕಥಾ ವೃತ್ತಾಂತವನ್ನು ತಿಳಿಸುತ್ತದೆ. ಆದರೆ ಸೌಮ್ಯಸೋಮೇಶ್ವರ ದೇವಾಲಯದಲ್ಲಿ ಕಂಬಗಳ ಭಾಗದಲ್ಲಿ ಬಿಡಿಬಿಡಿಯಾಗಿ ಉಬ್ಬು ಶಿಲ್ಪಗಳಿವೆ. ಇವುಗಳ ನಡುವಿನ ಸಂಬಂಧವನ್ನು ನಾವು ಕಂಬಗಳನ್ನು ಪ್ರದಕ್ಷಿಣೆ ಮಾಡಿದಾಗ ಮಾರ್ಕಂಡೇಯನ ಕಥಾವೃತ್ತಾಂತವನ್ನು ಅರಿಯಬಹುದು. ಇಲ್ಲಿನ ಉಬ್ಬುಶಿಲ್ಪಗಳಲ್ಲಿ ಮೃಕಂಡು ಮುನಿಯು ಮಕ್ಕಳಿಗಾಗಿ ತಪಸ್ಸು ಮಾಡುತ್ತಿರುವುದು, ಮಾರ್ಕಂಡೇಯನು ತನ್ನ ಅಲ್ಪ ಆಯುಷ್ಯವನ್ನು ತಿಳಿದು ತಾಯಿ ಮಾನಸ್ವಿನಿಯ ಆಶೀರ್ವಾದ ಪಡೆಯುತ್ತಿರುವುದು, ನಂತರ ಶಿವಲಿಂಗವನ್ನು ಅಪ್ಪಿಕೊಂಡಿರುವುದು, ಯಮನ ಕಿಂಕರನು ಪಾಶದೊಂದಿಗೆ ಬರುತ್ತಿರುವುದು, ನಂತರ ಯಮನು ಒಂದು ಬುಟ್ಟಿಯನ್ನು ತರುತ್ತಿರುವುದು, ಯಮನು ನಾಗಪಾಶ ಬೀಸುತ್ತಿರುವುದು, ಶಿವನು ಕಾಲಾರಿಮೂರ್ತಿಯಾಗಿ ತ್ರಿಶೂಲವನ್ನು

ಕಟಕಹಸ್ತದಲ್ಲಿರಿಸಿಕೊಂಡು ಪ್ರಯೋಗಿಸುತ್ತಿರುವುದು, ಶಿವನು ಶಾಂತನಾಗಿ ಕುಳಿತು ಮಾರ್ಕಂಡೇಯನ ತಲೆ ಮೇಲೆ ಕೈಯಿರಿಸಿ ಚಿರಂಜೀವಿಯಾಗು ಎಂದು ಆಶೀರ್ವದಿಸುತ್ತಿರುವುದು ಮತ್ತು ಶಿವನು ಶಾಂತನಾಗಿ ಕುಳಿತು ಯಮನನ್ನು ಕ್ಷಮಿಸುತ್ತಿರುವ ಉಬ್ಬು ಶಿಲ್ಪಗಳಿವೆ. ಕೊನೆಯದರಲ್ಲಿ ಯಮನು ಶಿವನ ಕಾಲ ಬಳಿ ಕುಳಿತಿದ್ದಾನೆ. ಅವನ ಕಿರೀಟವು ಅಸ್ತವ್ಯಸ್ತವಾಗಿದ್ದು, ವಿಸ್ಮಯ ಮುದ್ರೆಯನ್ನು ತೋರುತ್ತಿದ್ದಾನೆ. ಶಿವನು ಅವನನ್ನು ಕ್ಷಮಿಸುತ್ತಿರುವಂತೆ ಶಿಲ್ಪಿಯು ಸುಂದರವಾಗಿ ಮೂಡಿಸಿದ್ದಾನೆ. ಸುಮಾರು ಹತ್ತು ಬಿಡಿ ಉಬ್ಬುಶಿಲ್ಪಗಳಲ್ಲಿ ಮಾರ್ಕಂಡೇಯ-ಕಾಲಾರಿಮೂರ್ತಿಯ ಸಂಪೂರ್ಣ ಕಥಾವೃತ್ತಾಂತವನ್ನು ಶಿಲ್ಪಿಯು ಅತ್ಯಂತ ಮನಮನೋಹಕವಾಗಿ ನಿರೂಪಿಸಿದ್ದಾನೆ. ಇಲ್ಲಿ ದೇವಾಲಯ (ತಿರುಕ್ಕಡವೂರ್) ಅಥವಾ ಮಂಟಪದ ರಚನೆ ಇರುವುದಿಲ್ಲ.

ಒಟ್ಟಿನಲ್ಲಿ ಹೇಳುವುದಾದರೆ, ಕಂಬಗಳಲ್ಲಿ ಒಂದು ಕಥಾ ವೃತ್ತಾಂತವನ್ನು ತೋರಿರುವುದು ಗಮನಾರ್ಹ. ವಿಜಯನಗರ ಕಾಲದ ದೇವಾಲಯಗಳ ಕಂಬಗಳಲ್ಲಿರುವ ಉಬ್ಬುಶಿಲ್ಪಗಳನ್ನು ಸ್ವತಂತ್ರವಾಗಿ ಅಥವಾ ಬಿಡಿಶಿಲ್ಪವಾಗಿ ಪರಿಗಣಿಸದೇ ಉಳಿದ ಕಂಬಗಳಲ್ಲಿ ಇರುವ ಶಿಲ್ಪಗಳೊಂದಿಗೆ ಹೋಲಿಸಿ, ತುಲನಾತ್ಮಕವಾಗಿ ಅಭ್ಯಸಿಸಿ ಅಲ್ಲಿ ಶಿಲ್ಪಿಯು ನಿರೂಪಿಸಿರಬಹುದಾದ ವಿಚಾರಗಳನ್ನು ಅರಿಯಲು ಪ್ರಯತ್ನಿಸಬೇಕು.[20] ಒಂದು ವೇಳೆ ಅಂತಹ ಯಾವುದೇ ನಿರೂಪಣೆಯು ಕಂಡುಬರದಿದ್ದರೆ, ಅಂತಹ ಬಿಡಿ ಶಿಲ್ಪಗಳನ್ನು ಬಿಡಿ ಶಿಲ್ಪಗಳೆಂದು ವಿವರಿಸಬಹುದು. ಹಂಪಿ ಪರಿಸರದಲ್ಲಿರುವ ದೇವಾಲಯಗಳು, ಮಂಟಪ, ಕಂಬ ಮತ್ತು ಇತರೆ ವಾಸ್ತು ಅವಶೇಷಗಳನ್ನು ಕೂಲಂಕಷ ಅಧ್ಯಯನಕ್ಕೆ ಒಳಪಡಿಸಿದರೆ ನಮಗೆ ಪುರಾಣ, ಆಗಮ, ಐತಿಹ್ಯ, ನಂಬಿಕೆಗಳು ಮತ್ತು ಇತಿಹಾಸಕ್ಕೆ ಸಂಬಂಧಿಸಿದ ಹಲವಾರು ಕಥಾವಸ್ತುಗಳು ಮತ್ತು ಆಧಾರಗಳು ದೊರಕುವುದರಲ್ಲಿ ಯಾವುದೇ ಸಂಶಯವಿಲ್ಲ.

ಅಡಿಟಿಪ್ಪಣಿಗಳು

1. ವಾಸುದೇವನ್, ಸಿ.ಎಸ್, 'ಮಾರ್ಕಂಡೇಯ ನರೇಟಿವ್ ಪ್ಯಾನೆಲ್ ಫ್ರಂ ಹಂಪಿ', *ಪ್ರೊಸೀಡಿಂಗ್ಸ್ ಆಫ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್*, XVIIIನೇ ಸೆಷನ್ಸ್, 2009, ವಾರಣಾಸಿ, 2010, ಪು. 153–161, 2010.
2. ವಾಸುದೇವನ್, ಸಿ.ಎಸ್, 'ದಿ ವಿಜಯನಗರಪಟ್ಟಣ ಅಂಡ್ ಇಟ್ಸ್ ಸಬರ್‌ಬ್ಸ್ – ಎ ಸ್ಟಡಿ', *ಶ್ರೀಪುಷ್ಪಾಂಜಲಿ* (ರೀಸೆಂಟ್ ರಿಸರ್ಚ್‌ಸ್ ಇನ್ ಪ್ರಿಹಿಸ್ಟರಿ, ಪ್ರೊಟೋಹಿಸ್ಟರಿ, ಆರ್ಟ್, ಆರ್ಕಿಟೆಕ್ಚರ್, ನ್ಯೂಮಿಸ್‌ಮಾಟಿಕ್ಸ್, ಐಕನೋಗ್ರಾಫಿ ಅಂಡ್ ಎಪಿಗ್ರಾಫಿ); *ಡಾ. ಸಿ.ಆರ್. ಶ್ರೀನಿವಾಸನ್ ಕಮಮೊರೇಷನ್ ವಾಲ್ಯೂಮ್*, (ಸಂ.) ಕೆ.ವಿ. ರಮೇಶ್ ಮತ್ತು ಇತರರು, ಸಂ. II, ಪು. 384–387.
3. *ದೇವಕುಂಜರಿ*, ಹಂಪಿ (ಮರುಮುದ್ರಣ), 1983, ಪು. 53–59.
4. *ಗೋಪಿನಾಥರಾವ್*, ಟಿ.ಎ, *ಎಲಿಮೆಂಟ್ಸ್ ಆಫ್ ಹಿಂದೂ ಐಕನೋಗ್ರಾಫಿ*, ಸಂ. II, ಭಾಗ I, ಪು. 156–164; ಸುರೇಶ್ ಕೆ.ಎಂ, *ಸ್ಕಲ್ಪ್‌ಚರಲ್ ಆರ್ಟ್ ಆಫ್ ಹಂಪಿ*, ಪು. 51–52.
5. ಚಿರಂಜೀವಿ ಎಂಬ ಪದವು 'ಚಿರಂ' (ದೀರ್ಘ, ನಿರಂತರ) ಮತ್ತು 'ಜೀವಿ' (ಬದುಕಿದ, ಬದುಕಿರುವ) ಎಂಬ ಪದಗಳ ಸಂಯುಕ್ತ ರೂಪವಾಗಿ ರಚನೆಗೊಂಡಿದೆ. ಹಿಂದೂ ಪುರಾಣ ಸಾಹಿತ್ಯದ ಅನೇಕ ಪುರಾಣಗಳು ಮತ್ತು ಮಹಾಭಾರತ ಮತ್ತು ರಾಮಾಯಣಗಳಲ್ಲಿ ಉಲ್ಲೇಖಿತವಾಗಿರುವಂತೆ ಏಳು ಜನ ದೈವೀ ಶಕ್ತಿಯುಳ್ಳ ಅಮರರು ಇದ್ದಾರೆ. ಅವರುಗಳನ್ನು ಸಪ್ತ-ಚಿರಂಜೀವಿಗಳೆಂದು ಕರೆಯಲಾಗುತ್ತದೆ. ಇದರ ಅರ್ಥವು ಈ ಏಳು ಜನರು ಸಾವಿಲ್ಲದ ಶಾಶ್ವತವಾಗಿರುವ ಅಮರರು. ಮೃತ್ಯುಲೋಕವಾದ ಭೂಮಿಯಲ್ಲಿ, ಅವರಿಗೆ ಮರಣವಿಲ್ಲದ ಅಮರ್ತ್ಯರುಗಳು. ಇವರು ಪ್ರಾಚೀನ ಯುಗಗಳಾದ ಸತ್ಯಯುಗ, ತ್ರೇತಾಯುಗ, ದ್ವಾಪರಯುಗದಿಂದ ಬದುಕುಳಿದಿದ್ದು, ಕಲಿಯುಗದಲ್ಲಿಯೂ ಅವರು ಜೀವಿಸಿದ್ದಾರೆ ಎಂಬ ಪ್ರತೀತಿಯಿದೆ. ಇವರನ್ನು ಪ್ರತಿನಿತ್ಯ ನೆನಪಿಸುವ ಶ್ಲೋಕವಿದ್ದು, ಅದರ ಪಠಣೆಯು ಜನರಿಗೆ ಅದೃಷ್ಟ, ಕೀರ್ತಿ ಮತ್ತು ದೀರ್ಘಾಯುಷ್ಯವನ್ನು ನೀಡುತ್ತದೆ ಎಂಬ ನಂಬಿಕೆಯಿದೆ. ಆ ಶ್ಲೋಕ ಅಥವಾ ಮಂತ್ರವು ಈ ರೀತಿಯಾಗಿದೆ: "ಅಶ್ವತ್ಥಾಮಃ ಬಲಿವ್ಯಾಸೋ ಹನುಮಾಂಶ್ಚ

ವಿಭೀಷಣಃ । ಕೃಪಃ ಪರಶುರಾಮಶ್ಚ ಸಪ್ತ್ಯತೇ ಚಿರಂಜೀವಿನಃ ॥ ಇದರ ಅರ್ಥವು ಅಶ್ವತ್ಥಾಮ, ಬಲಿರಾಜ, ವೇದವ್ಯಾಸ, ಹನುಮಂತ, ವಿಭೀಷಣ (ರಾವಣನ ತಮ್ಮ), ಕೃಪಾಚಾರ್ಯ ಮತ್ತು ಪರಶುರಾಮ ಇವರುಗಳು ನಶ್ವರ ಮತ್ತು ಸಾವಿನಿಂದ ಹೊರತುಪಡಿಸಿದವರುಗಳಾಗಿದ್ದಾರೆ. ಈ ಏಳು ಚಿರಂಜೀವಿಗಳ ವಿವರ ಇಂತಿವೆ:

(1) ಮಹಾಬಲಿ – ಈತನು ಸತ್ಯವಂತ. ಅಸುರರಿಗೆ ರಾಜನಾಗಿದ್ದು, ಮೂರು ಲೋಕಗಳಾದ ಸ್ವರ್ಗ, ಭೂಮಿ ಮತ್ತು ಪಾತಾಳಗಳನ್ನು ಜಯಿಸಿದ್ದವನಾಗಿದ್ದು, ನಂತರ ಅವುಗಳನ್ನು ಬಲವಂತವಾಗಿ ವಾಮನನಿಗೆ ನೀಡುತ್ತಾನೆ.

(2) ಪರಶುರಾಮ – ಇವನು ವಿಷ್ಣುವಿನ ಅವತಾರ.

(3) ವಿಭೀಷಣ – ಇವನು ರಾವಣನ ತಮ್ಮ. ರಾವಣನ ಮರಣಾನಂತರ ಲಂಕೆಗೆ ರಾಜನಾಗಿ ರಾಮನಿಂದ ಪಟ್ಟಾಭಿಷಿಕ್ತನಾಗುತ್ತಾನೆ.

(4) ಹನುಮಂತ – ಇವನು ರಾಮನ ನೆಚ್ಚಿನ ಭಂಟ.

(5) ವ್ಯಾಸ – ಮಹಾಭಾರತವನ್ನು ರಚಿಸಿದ ಮುನಿ ಹಾಗು ಈ ಕಾವ್ಯದಲ್ಲಿ ಉಲ್ಲೇಖಿತನಾಗುತ್ತಾನೆ.

(6) ಕೃಪಾಚಾರ್ಯ – ಮಹಾಭಾರತದಲ್ಲಿ ಉಲ್ಲೇಖಿತವಾಗಿರುವ ಯುವರಾಜರ ಗುರುಗಳು; ಮತ್ತು

(7) ಅಶ್ವತ್ಥಾಮ – ಪಾಂಡವರಲ್ಲಿ ಒಬ್ಬನಾದ ಅರ್ಜುನನ ಮೊಮ್ಮಗನ ಹತ್ಯಾ ಪ್ರಯತ್ನ ಮತ್ತು ಪಾಂಡವರ ಐವರು ಮಕ್ಕಳ ಹತ್ಯೆಯನ್ನು ಮಾಡಿದ್ದರಿಂದ ನಿರಂತರ ದುಃಖವನ್ನು ಹಾಗು ಏಕಾಂತತೆಯನನ್ನು ಅನುಭವಿಸುವಂತೆ ಶಾಪಗ್ರಸ್ತನಾದವನು.

ಈ ಮೇಲೆ ಉಲ್ಲೇಖಿಸಿದವರೊಂದಿಗೆ ಹಲವಾರು ಚಿರಂಜೀವಿಗಳಿದ್ದಾರೆ. ಅವರುಗಳಲ್ಲಿ ಜಾಂಬವಂತ ಮತ್ತು ಮಾರ್ಕಂಡೇಯ ಋಷಿಗಳು ಇರುವರು.

6. ಶಿವನು ಯಮನನ್ನು ಕೊಲ್ಲುವ ಐತಿಹ್ಯ ಸನ್ನಿವೇಶವನ್ನು ಲೋಹದಲ್ಲಿ ನಿರೂಪಿಸಿ ಅದನ್ನು ತಮಿಳುನಾಡಿನ ತಂಜಾವೂರು ಜಿಲ್ಲೆಯಲ್ಲಿರುವ ತಿರುಕ್ಕಡವೂರು ಎಂಬ ಊರಲ್ಲಿ ಪೂಜಿಸಲಾಗುತ್ತಿದೆ. ಇಲ್ಲಿನ ದೇವಾಲಯದ ಪ್ರಧಾನ ದೇವತೆಯು ಅಮೃತಘಟೇಶ್ವರ ಮತ್ತು ದೇವಿಯ ಹೆಸರು ಅಭಿರಾಮಿ. ಈ ದೇವಾಲಯಕ್ಕೆ ಸಹಸ್ರಾರು ಮಂದಿ ಭೇಟಿ ನೀಡಿ ತಮ್ಮ ಷಷ್ಟ್ಯಬ್ದ್ಯಪೂರ್ತಿ ವಿವಾಹವನ್ನು (60ನೇ ಹುಟ್ಟುಹಬ್ಬದ ಸಂದರ್ಭದಲ್ಲಿ) ಆಚರಿಸಿಕೊಳ್ಳುತ್ತಾರೆ. ಇಲ್ಲಿ ಈ ರೀತಿಯಾಗಿ ವಿವಾಹವಾಗುವುದರಿಂದ ಮುಖ್ಯ ದೇವತೆಯ ಅನುಗ್ರಹ ಪಡೆದು ದೀರ್ಘಕಾಲ ಜೀವಿಸಲಾಗುವುದು ಎಂಬ ನಂಬಿಕೆಯಿದೆ. ಶಿವನು ರೌದ್ರಾಕಾರವಾಗಿ ದುಷ್ಟ ಶಕ್ತಿಗಳನ್ನು ನಿಗ್ರಹಿಸಿದ ಎಂಟು 'ವೀರಾಟ್ಟ' (ರೌದ್ರ) ಸ್ಥಳ ಮತ್ತು ದೇವಾಲಯಗಳಲ್ಲಿ ಒಂದಾಗಿದೆ.

7. ಗೋಪಿನಾಥರಾವ್, ಟಿ.ಎ., *ಪೂರ್ವೋಕ್ತ*, ಪು. 158–158 ; ಸುರೇಶ್ ಕೆ.ಎಂ., *ಪೂರ್ವೋಕ್ತ*, ಪು. 51 ; ವಸಂತಲಕ್ಷ್ಮಿ ಕೆ, *ಕರ್ನಾಟಕದ ಶೈವ ಶಿಲ್ಪಗಳು*, ಪು. 64–67.

8. *ಅದೇ*, ಪು. 159–161; *ಅದೇ*, ಪು. 51.

9. *ಅದೇ*, ಪು. 161; *ಅದೇ*, ಪು. 51; ವಸಂತಲಕ್ಷ್ಮಿ ಕೆ, *ಪೂರ್ವೋಕ್ತ*, ಪು. 66.


10. ಲೋಹದ ಮೂರ್ತಿಶಿಲ್ಪದಲ್ಲಿ ಕಟಕಹಸ್ತವನ್ನು ತೋರಲಾಗುತ್ತದೆ. ದೇವತೆಯ ವಿವಿಧ ಆಯುಧ ಮತ್ತು ವಸ್ತುಗಳನ್ನು ಹಸ್ತದಲ್ಲಿ ಸೇರಿಸಲು ಅನುಕೂಲವಾಗುವಂತೆ ರಚಿಸಲಾಗುತ್ತದೆ. ಭಕ್ತರ ಇಚ್ಛೆಗೆ ಅನುಗುಣವಾಗಿ ವಿವಿಧ ಆಯುಧೋಪಕರಣಗಳನ್ನು ದೇವತೆಯ ಕಟಕಹಸ್ತದಲ್ಲಿ ಸೇರಿಸಲಾಗುತ್ತದೆ. ಉದಾಹರಣೆಗೆ ದೇವರ ಪಕ್ಕದಲ್ಲಿರಿಸುವ ದೇವಿಯ ಮೂರ್ತಿಶಿಲ್ಪದಲ್ಲಿನ ಒಂದು ಹಸ್ತವನ್ನು ಕಟಕಹಸ್ತದಲ್ಲಿ ತೋರಲಾಗುವುದು. ಇದರಲ್ಲಿ ದಿನಂಪ್ರತಿ ಹೂವನ್ನು ಇರಿಸಲು ಅನುಕೂಲವಾಗುತ್ತದೆ. ರಾಮ ಮತ್ತು ಲಕ್ಷ್ಮಣರನ್ನು ಸಹ ಈ ಹಸ್ತವಿರುವಮತೆ ತೋರಲಾಗುವುದು. ಅದರಲ್ಲಿ ಬಿಲ್ಲು ಮತ್ತು ಬಾಣವನ್ನು ಸೇರಿಸಲಾಗುವುದು. ವೀಣಾಧರ ದಕ್ಷಿಣಾಮೂರ್ತಿಯ ಶಿಲ್ಪದಲ್ಲಿ ವೀಣೆಯನ್ನು ಸೇರಿಸಲಾಗುವುದು.

11. ಗೋಪಿನಾಥರಾವ್, ಟಿ.ಎ., *ಪೂರ್ವೋಕ್ತ*, ಪು. 161–162; ನೋಡಿ ರೇಖಾಚಿತ್ರ ಸಂ. XXXIV.

12. *ಅದೇ*, ಪು. 162; ನೋಡಿ ಛಾಯಾಚಿತ್ರ ಸಂ. XXXV, ರೇಖಾಚಿತ್ರ ಸಂ. 1.

13. *ಅದೇ*, ಪು. 162–163; ನೋಡಿ ಛಾಯಾಚಿತ್ರ ಸಂ. XXXV, ರೇಖಾಚಿತ್ರ ಸಂ. 2.


14. *ಅದೇ*, ಪು. 163; ನೋಡಿ ಛಾಯಾಚಿತ್ರ ಸಂ. XXXVI, ರೇಖಾಚಿತ್ರ ಸಂ. 1.
15. *ಅದೇ*, ಪು. 163; ನೋಡಿ ಛಾಯಾಚಿತ್ರ ಸಂ. XXXVI, ರೇಖಾಚಿತ್ರ ಸಂ. 2.
16. ವಸಂತಲಕ್ಷ್ಮಿ ಕೆ, *ಪೂರ್ವೋಕ್ತ*, ಪು. 66–67.
17. ಸುರೇಶ್ ಕೆ.ಎಂ., *ಪೂರ್ವೋಕ್ತ*, ಪು. 52.
18. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* 3: *ಹಂಪಿ ಶಾಸನಗಳು*, ಸಂ. 398; ಎ.ಆರ್., ಸಂ. 24, 1903; *ಎಸ್.ಐ.ಐ*, ಸಂ. IX, ಭಾಗ II, ಸಂ. 553; *ಎಸ್.ಐ.ಐ*, ಸಂ. XVII, ಭಾಗ II, ಸಂ. 26; ವಿಜಯನಗರ ಶಾಸನ ಸಂ. 403.
19. ಕೊಟ್ರಯ್ಯ, ಸಿ.ಟಿ.ಎಂ, ಬುಕ್ಕಸಾಗರದ ದೇವಾಲಯದಲ್ಲಿರುವ ಕೆಲವು ಉಬ್ಬುಶಿಲ್ಪಗಳನ್ನು ಅಧ್ಯಯನ ಮಾಡಿ ಅವುಗಳ ಶೈವ ಶರಣರ ಕಥಾ ಪ್ರಸಂಗಗಳನ್ನು ದಾಖಲಿಸುವ ಉಬ್ಬುಶಿಲ್ಪಗಳೆಂದು ಗುರುತಿಸಿರುವರು. ಶೈವ ಸಾಹಿತ್ಯದಲ್ಲಿರುವ ಪ್ರಸಿದ್ಧ ಕಥೆಗಳು, ಐತಿಹ್ಯಗಳು ಮತ್ತು ಪರಂಪರೆಯಲ್ಲಿರುವ ಕಥಾ ಪ್ರಸಂಗಗಳನ್ನು ಶಿಲ್ಪಿಯು ಸುಂದರವಾಗಿ ಕಲ್ಲಿನಲ್ಲಿ ನಿರೂಪಿಸಿರುವುದನ್ನು ತೋರಿಸಿಕೊಟ್ಟಿದ್ದಾರೆ. ನೋಡಿ ಕೊಟ್ರಯ್ಯ, ಸಿ.ಟಿ.ಎಂ, 'ಬುಕ್ಕಸಾಗರದ ಶಿಲ್ಪಗಳಲ್ಲಿ ಶೈವ/ವೀರಶೈವ ಶರಣರು', *ವಿಜಯನಗರ ಅಧ್ಯಯನ*, ಸಂ. 3, ಪು. 1–21.
20. ವಾಸುದೇವನ್, ಸಿ.ಎಸ್., ಹಂಪಿ ಪರಿಸರದ ಪಂಚಲಿಂಗಗಳು, *ವಿಜಯನಗರ ಅಧ್ಯಯನ*, ಸಂ. 12, ಪು. 231–243; 'ಹಂಪಿಯ ಅಪರೂಪದ ಪಂಚಮುಖಲಿಂಗ', *ವಿಜಯನಗರ ಅಧ್ಯಯನ*, ಸಂ. 15, ಪು. 151–177.



**ಮಾರ್ಕಂಡೇಯನ ನಿರೂಪಣಾತ್ಮಕ ಶಿಲಾಫಲಕ,
ವಿರೂಪಾಕ್ಷ ದೇವಾಲಯ, ಹಂಪಿ.**




ಕಾಲಾರಿಮೂರ್ತಿಯ ಶಿಲ್ಪ, ಕೈಲಾಸ ದೇವಾಲಯ, ಎಲ್ಲೋರ
(ಕೃಪೆ: ಗೋಪಿನಾಥರಾವ್, ಟಿ.ಎ, ಎಲಿಮೆಂಟ್ಸ್ ಆಫ್ ಹಿಂದೂ ಐಕನೋಗ್ರಾಫಿ)



ಕಾಲಾರಿಮೂರ್ತಿಯ ಉಬ್ಬುಶಿಲಾ ಫಲಕದ ರೇಖಾಚಿತ್ರ, ದಶಾವತಾರ ಗುಹಾ ದೇವಾಲಯ, ಎಲ್ಲೋರ
(ಕೃಪೆ: ಗೋಪಿನಾಥರಾವ್, ಟಿ.ಎ, ಎಲಿಮೆಂಟ್ಸ್ ಆಫ್ ಹಿಂದೂ ಐಕನೋಗ್ರಾಫಿ)



ಕಾಲಾರಿಮೂರ್ತಿಯ ಶಿಲ್ಪ, ಪಟ್ಟೀಶ್ವರಂ, ತಮಿಳುನಾಡು
(ಕೃಪೆ: ಗೋಪಿನಾಥರಾವ್, ಟಿ.ಎ, ಎಲಿಮೆಂಟ್ಸ್ ಆಫ್ ಹಿಂದೂ ಐಕನೋಗ್ರಾಫಿ)




ಕಾಲಾರಿಮೂರ್ತಿಯ ಶಿಲ್ಪ, ತಿರುಚೆಟ್ಟಾಂಗುಡಿ, ತಮಿಳುನಾಡು
(ಕೃಪೆ: ಗೋಪಿನಾಥರಾವ್, ಟಿ.ಎ, ಎಲಿಮೆಂಟ್ಸ್ ಆಫ್ ಹಿಂದೂ ಐಕನೋಗ್ರಾಫಿ)




ಆರ್.ಎಫ್. ಸ್ಟೋನಿಯವರ ಸಂಗ್ರಹದಲ್ಲಿದ್ದ ಕಂಚಿನ ಕಾಲಾರಿಮೂರ್ತಿಯ ಛಾಯಾಚಿತ್ರ
(ಕೃಪೆ: ಗೋಪಿನಾಥರಾವ್, ಟಿ.ಎ, ಎಲಿಮೆಂಟ್ಸ್ ಆಫ್ ಹಿಂದೂ ಐಕನೋಗ್ರಾಫಿ)



ಅಮೃತಘಟೇಶ್ವರ ಮೂರ್ತಿಯ ಕಂಚಿನ ಶಿಲ್ಪ, ತಿರುಕ್ಕಡವೂರು, ತಂಜಾವೂರು ಜಿಲ್ಲೆ, ತಮಿಳುನಾಡು
(ಕೃಪೆ: ಟೆಂಪಲ್‌ನೆಟ್.ಕಾಮ್)



ಅಮೃತಘಟೇಶ್ವರ ದೇವಾಲಯ, ಗೋಪುರದ ನೋಟ, ತಿರುಕ್ಕಡವೂರು, ತಂಜಾವೂರು ಜಿಲ್ಲೆ, ತಮಿಳುನಾಡು



ಮಾರ್ಕಂಡೇಯನು ಶಿವಲಿಂಗವನ್ನು ಅಪ್ಪಿಕೊಂಡಿರುವುದು, ಸೌಮ್ಯಸೋಮೇಶ್ವರ ದೇವಾಲಯ, ಹಂಪಿ




ಶಿವನು ಮಾರ್ಕಂಡೇಯನನ್ನು ಆರ್ಶೀವದಿಸುತ್ತಿರುವುದು,
ಸೌಮ್ಯಸೋಮೇಶ್ವರ ದೇವಾಲಯ, ಹಂಪಿ



ಯಮನು ಪಾಶದೊಂದಿಗೆ ಬರುತ್ತಿರುವುದು,
ಸೌಮ್ಯಸೋಮೇಶ್ವರ ದೇವಾಲಯ, ಹಂಪಿ



ಯಮನು ಶಿವನ ಪಾದದ ಹತ್ತಿರ
ಕುಳಿತಿರುವುದು, ಸೌಮ್ಯಸೋಮೇಶ್ವರ
ದೇವಾಲಯ, ಹಂಪಿ.



ಶಿವನು ತನ್ನ ತ್ರಿಶೂಲವನ್ನು
ಪ್ರಯೋಗಿಸುತ್ತಿರುವುದು,
ಸೌಮ್ಯಸೋಮೇಶ್ವರ ದೇವಾಲಯ, ಹಂಪಿ

29

ಹಂಪೆಯ ವಿರೂಪಾಕ್ಷ ದೇವಾಲಯ ಸಂಕೀರ್ಣದಲ್ಲಿರುವ ಭುವನೇಶ್ವರಿ ಮತ್ತು ಹಂಪಾದೇವಿ ದೇವಾಲಯಗಳು

ಡಾ॥ ಜಗದೀಶ

ವಿರೂಪಾಕ್ಷ ದೇವಾಲಯ ಸಂಕೀರ್ಣವು ಆವರಣ ಗೋಡೆಯಿಂದ ಸುತ್ತುವರಿಯಲ್ಪಟ್ಟಿದೆ. ಆ ಆವರಣ ಗೋಡೆಯ ಉತ್ತರ ದ್ವಾರದ ಮುಖಾಂತರ ಹೊರ ಬಂದು ಮನ್ಮಥ ಪುಷ್ಕರಣಿ ಮತ್ತು ವಿಜಯನಗರ ಕಾಲಕ್ಕಿಂತಲೂ ಹಿಂದಿನ ಕಾಲದ ದೇವಾಲಯಗಳನ್ನು ಇಕ್ಕೆಲದಲ್ಲಿ ಹಾಯ್ದು ತುಂಗಭದ್ರಾ ನದಿಯನ್ನು ತಲುಪಬಹುದು.

ವಿರೂಪಾಕ್ಷ ದೇವಾಲಯ ಸಂಕೀರ್ಣದಲ್ಲಿರುವ ಹೊಯ್ಸಳ ಕಾಲದ ಭುವನೇಶ್ವರಿ ಮತ್ತು ಹಂಪಾದೇವಿ ದೇವಾಲಯಗಳು ಬೇರೆ ಕಡೆ ಇದ್ದವು. ಅವುಗಳನ್ನು ಇಲ್ಲಿ ತಂದು ಜೋಡಿಸಲಾಗಿದೆ ಎಂಬ ಅಭಿಪ್ರಾಯವನ್ನು *ಹಂಪಿ ಶಾಸನ ಸಂಪುಟ*ದಲ್ಲಿ ಡಾ॥ ದೇವರಕೊಂಡಾರೆಡ್ಡಿಯವರು ಉಲ್ಲೇಖಿಸಿದ್ದಾರೆ.

ಈ ಎರಡು ದೇವಾಲಯಗಳನ್ನು ವೀಕ್ಷಿಸಿದರೆ ವಿಜಯನಗರಪೂರ್ವ, ಹೊಯ್ಸಳ ಕಾಲದ ಅಂಗಗಳನ್ನು ಜೋಡಿಸಿರುವುದು ಕಂಡು ಬರುತ್ತದೆ. ಭುವನೇಶ್ವರಿ ಮತ್ತು ಪಂಪಾದೇವಿ ದೇವಾಲಯಗಳ ನವರಂಗದಲ್ಲಿನ ನೆಲಹಾಸಿನಲ್ಲಿ ವ್ಯತ್ಯಾಸವಿದೆ. ಅಲ್ಲದೆ ಮೇಲ್ಛಾವಣಿಯಲ್ಲಿನ ತೊಲೆಗಳ ವಿಜಯನಗರ ಕಾಲದ ತೊಲೆಗಳಾಗಿ ಕಂಡುಬರುತ್ತವೆ. ಭುವನೇಶ್ವರಿ ದೇವಾಲಯದ ಪೂರ್ವದ ಕಡೆ ತಳನೆಲೆಯಲ್ಲಿರುವ ಗುಲಗಂಜಿ ಮಾಧವ ದೇವಾಲಯವಿದೆ. ಇದು ಸುಮಾರು ಎಂಟು ಅಡಿ ಆಳದಲ್ಲಿದೆ.

ಉತ್ತರ ದ್ವಾರದ ಹೊರಗಡೆ ಎಡಭಾಗದಲ್ಲಿ ಗಣಪತಿ, ಚಂದ್ರಶೇಖರ, ಶಂಕರೇಶ್ವರ, ನಾಗನಂದೀಶ್ವರ ಮತ್ತು ದುರ್ಗಾ ದೇವಾಲಯ ಅಲ್ಲದೆ ಇನ್ನೂ ಎರಡು ದೇವಾಲಯಗಳಿವೆ. ಈ ದೇವಾಲಯಗಳೆಲ್ಲವೂ ಒಂದೇ ನೆಲಮಟ್ಟದಲ್ಲಿವೆ.

ಹಂಪೆಯ ವಿರೂಪಾಕ್ಷ ದೇವಾಲಯವನ್ನು ವಿಸ್ತರಿಸಿ ಅದರ ಸುತ್ತಲೂ ಆವರಣ ಗೋಡೆ ಮತ್ತು ಪೌಳಿಯನ್ನು ನಿರ್ಮಿಸುವ ಸಂದರ್ಭದಲ್ಲಿ ಮಾಧವ ದೇವಾಲಯವನ್ನು ಒಳಗೆ ಮಾಡಿಕೊಂಡು ಎತ್ತರದ ಪೌಳಿಯ ಅಂಕಣಗಳ ನೆಲಹಾಸಿನಿಂದ ಇಳಿಯಲು ಮೆಟ್ಟಿಲುಗಳನ್ನು ಒದಗಿಸಲಾಗಿದೆ. ಪ್ರಾಯಶಃ ಭುವನೇಶ್ವರಿ ಮತ್ತು ಹಂಪಾದೇವಿ ದೇವಾಲಯಗಳು ಪೌಳಿಯ ನೆಲಹಾಸಿನ ಮಟ್ಟಕ್ಕೆ ಹೊಂದಿಕೆಯಾಗದ ಕಾರಣ ಅವುಗಳನ್ನು ಎತ್ತರಿಸಿ

ಮರುಜೋಡಿಸಿರಬೇಕು. ಹೊಯ್ಸಳ ಕಾಲದ ದೇವಾಲಯ ಅಧಿಷ್ಠಾನದ ಅಂಗಗಳಲ್ಲಿ ವಿಜಯನಗರ ಕಾಲದ ಅಕ್ಷರ ಮತ್ತು ಅಂಕೆಗಳನ್ನು ಬಳಸಿರುವುದು ಮರು ಜೋಡಣೆಯ ಕುರುಹಾಗಿ ಕಾಣಬಹುದು. ಉದಾಹರಣೆಗೆ ಅಧಿಷ್ಠಾನದ ತ್ರಿಪಟ್ಟೆ ಕುಮುದದಲ್ಲಿ 9, 10, 11, 12 ಅಂಕೆಗಳನ್ನು ಕಾಣಬಹುದು. ಅಲ್ಲದೆ **ಉ** ಅಕ್ಷರ ಮತ್ತು ಮೆಟ್ಟಿಲ ಭಾಗದಲ್ಲಿ **ಅರ್ದತಂ** ಎಂಬ ಶಬ್ದ ಬಳಸಲಾಗಿದೆ. 10 **ಹಂಪಾದೇವಿ** ಮತ್ತು 13 **ಭುವನೇಶ್ವರಿ** ಎಂಬ ಲಘು ಶಾಸನದಲ್ಲಿ ಹಂಪಾದೇವಿ ಹೆಸರಿರುವ ಕಲ್ಲು ಗ್ರ್ಯಾನೈಟು ಆಗಿದೆ ಮತ್ತು ಭುವನೇಶ್ವರಿ ಹೆಸರಿನ ಕಲ್ಲು ಹಳೆಯದಾಗಿದೆ. ಹೊಯ್ಸಳ ಕಾಲದ ಎರಡು ತಿರುಗಣೆ ಕಂಬಗಳನ್ನು ಗೋಡೆಯಲ್ಲಿ ಅಳವಡಿಸಿರುವುದನ್ನು ಕಾಣಬಹುದು. ಈ ಗೋಡೆಯಲ್ಲಿ ಇಸ್ಲಾಂ ಶೈಲಿಯ ಸಣ್ಣ ಗೂಡುಗಳನ್ನು ಕೂಡ ಕಾಣಬಹುದು.

ಈ ಲಘುಶಾಸನಗಳು ದೇವಾಲಯ ಪುನರ್ ನಿರ್ಮಾಣವಾಗಿರುವುದನ್ನು ದೃಢಪಡಿಸುತ್ತವೆ. ಪ್ರಾಯಶಃ ಈ ಎರಡೂ ದೇವಾಲಯಗಳು ಅದೇ ಆವರಣದಲ್ಲಿಯೇ ಇದ್ದವು. ಅವುಗಳನ್ನು ಎತ್ತರಿಸಿ ಪುನಃ ನಿರ್ಮಿಸಲಾಗಿದೆ. ವಿರೂಪಾಕ್ಷ ದೇವಾಲಯದ ನವರಂಗದಲ್ಲಿನ ಎರಡು ತೊಲೆಗಳನ್ನು ಕೂಡ ಇದೇ ದೃಷ್ಟಿಯಿಂದ ಪರಿಶೀಲಿಸಬಹುದಾಗಿದೆ.

ವಿಜಯನಗರ ಕಾಲದ ಸಂಯುಕ್ತ ಸ್ತಂಭಗಳು

ಡಾ॥ ಜಿ. ಮನೋಜ

ದೇವಾಲಯಗಳ ನಿರ್ಮಾಣವು ವಿಜಯನಗರದ ಕಾಲದಲ್ಲಿ ಅತ್ಯಧಿಕವಾಗಿ ನಡೆಯುತ್ತಿತ್ತು. ದಕ್ಷಿಣ ಭಾರತದಾದ್ಯಂತ ಪಸರಿಸಿದ್ದ ಈ ಸಾಮ್ರಾಜ್ಯದಲ್ಲಿ ಎಲ್ಲೆಡೆಗಳಲ್ಲೂ ನಿರಂತರವಾಗಿ ಈ ಕಾರ್ಯವು ನಡೆಯುತ್ತಿತ್ತು. ಇದರಲ್ಲಿ ಚಕ್ರವರ್ತಿಗಳಷ್ಟೇ ಸಮ ಉತ್ಸಾಹದಿಂದ ಸ್ಥಳೀಯ ಪಾಳೆಯಗಾರರು ಸಹ ಭಾಗವಹಿಸಿದರು. ಎಲ್ಲ ಕಾಲಗಳಂತೆ ಈ ಕಾಲದಲ್ಲಿಯೂ ದೇವದಾಸಿಯರು, ವರ್ತಕರು ಮೊದಲಾದವರು ಇದಕ್ಕೆ ಬೆಂಬಲವಾಗಿದ್ದರು. ಈ ಕಾಲದಲ್ಲಿ ಸ್ಥಳಪುರಾಣಗಳಿಗೂ ಸ್ಥಳೀಯ ದೇವತೆಗಳಿಗೂ ಪ್ರಾಬಲ್ಯ ಹೆಚ್ಚಿದ್ದರಿಂದ ದೇವಾಲಯ ವಾಸ್ತುನಿರ್ಮಾಣಗಳಲ್ಲಿ ಕೆಲವೊಂದು ಹೊಸ ಅಂಶಗಳನ್ನು ಕಾಣಬಹುದು.

ವಿಜಯನಗರದ ಶಿಲ್ಪಿಗಳು ಅನುಕೂಲದ ದೃಷ್ಟಿಯಿಂದ ಚೋಳದ್ರಾವಿಡ ಶೈಲಿಯನ್ನು ತಮ್ಮ ದೇವಾಲಯಗಳಿಗೆ ಅಳವಡಿಸಿದ್ದರು. ಈ ಶೈಲಿಯು ಸರಳವಾಗಿದ್ದರೂ ಗಾಂಭೀರ್ಯತೆಯಿಂದ ಕೂಡಿ ನೋಟಕರ ದೃಷ್ಟಿಗೆ ಆಕರ್ಷಣೀಯವಾಗಿತ್ತು. ದೇವಾಲಯದ ಚಟುವಟಿಕೆಗಳಲ್ಲಿ ಹಲವಾರು ಉತ್ಸವ ವಿಧಿಗಳು ಹೊಸದಾಗಿ ಸೇರಿದ್ದರಿಂದ ಅವುಗಳ ಆಚರಣೆಗೆ ಮಂಟಪಗಳ ನಿರ್ಮಾಣವನ್ನು ಮಾಡಲು ಪ್ರಾರಂಭಿಸಿದರು. ವಿವಿಧ ಉತ್ಸವಗಳನ್ನು ಪ್ರತ್ಯೇಕವಾದ ಮಂಟಪಗಳಲ್ಲಿ ಅಥವಾ ಒಂದೇ ಮಂಟಪಗಳಲ್ಲಿ ವಿವಿಧ ಉತ್ಸವಗಳನ್ನು ಆಚರಿಸಲಾಗುತ್ತಿತ್ತು. ಮಂಟಪಗಳ ಸಂಖ್ಯೆ ಸಾಮಾನ್ಯವಾಗಿ ದೇವಾಲಯದ ವಿಸ್ತಾರ, ಇರುವ ಸ್ಥಳ ಇತ್ಯಾದಿ ಅಂಶಗಳ ಆಧಾರದ ಮೇಲೆ ನಿರ್ಧರಿಸಲಾಗುತ್ತಿತ್ತು. ಪ್ರಮುಖ ಕೇಂದ್ರಗಳಲ್ಲಿ, ರಾಜಾಶ್ರಯದಲ್ಲಿ ನಿರ್ಮಾಣವಾಗುತ್ತಿದ್ದ ದೇವಾಲಯಗಳು ಪ್ರತ್ಯೇಕವಾದ ಮಂಟಪಗಳನ್ನು ಹೊಂದಿರುತ್ತಿದ್ದವು. ಸ್ಥಳಾಭಾವವಿರುವ ದೇವಾಲಯಗಳಲ್ಲಿ ವಿಶಾಲವಾದ ಮಹಾಮಂಟಪವನ್ನು ನಿರ್ಮಿಸಿ ಅಲ್ಲಿಯೇ ಎಲ್ಲ ಉತ್ಸವಗಳನ್ನು ನೇರವೇರಿಸಲಾಗುತ್ತಿತ್ತು.

ಮಂಟಪಗಳೆಂದರೆ ಬಹುಪಾಲು ತೆರೆದ ಕಟ್ಟಡಗಳಾಗುತ್ತಿದ್ದುದರಿಂದ ಇವುಗಳಲ್ಲಿ ಸ್ತಂಭಗಳ ಸಂಯೋಜನೆಯು ಅಧಿಕವಾಗಿಯೇ ಇರುತ್ತಿತ್ತು. ಮಂಟಪವು ಸಾಮಾನ್ಯವಾಗಿ ತ್ರಿವರ್ಗಗಳನ್ನು ಹೊಂದಿರುತ್ತಿದ್ದವು. ಬಹಳ ಅಪರೂಪವಾಗಿ ಷಡ್ವರ್ಗಗಳನ್ನು ಹೊಂದಿರುವಂತ ಮಂಟಪಗಳನ್ನು ಕಾಣಬಹುದು. (ತ್ರಿವರ್ಗಗಳೆಂದರೆ ಅಧಿಷ್ಠಾನ, ಭಿತ್ತಿ ಮತ್ತು ಪ್ರಸ್ತರಗಳು ಮಾತ್ರ ಇರುವವುದು. ಷಡ್ವರ್ಗಗಳೆಂದರೆ ಈ ಮೂರರೊಂದಿಗೆ ಗ್ರೀವ, ಶಿಖರ ಮತ್ತು

ಸ್ತೂಪಿಗಳನ್ನು ಹೊಂದಿರುತ್ತವೆ.) ಮಂಟಪಗಳು ತೆರೆದ ಕಟ್ಟಡಗಳಾದ ಕಾರಣ ಭಿತ್ತಿಯ ಬದಲಿಗೆ ಸ್ತಂಭಗಳನ್ನು ಹೇಳಬೇಕಾಗುವುದು. ಹೀಗಾಗಿ ಸ್ತಂಭಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತದೆ. ಇಂತಹ ಮಂಟಪಗಳಲ್ಲಿ ಸಂಯೋಜಿಸಲ್ಪಟ್ಟ ಸ್ತಂಭಗಳ ವಿಶ್ಲೇಷಣೆಯನ್ನು ಪ್ರಸ್ತುತ ಲೇಖನದಲ್ಲಿ ಮಾಡಲಾಗಿದೆ. ವಾಚಕರ ಗಮನಕ್ಕಾಗಿ ಮಂಟಪಗಳ ಪ್ರಕಾರಗಳನ್ನು ಹೆಸರಿಸಲಾಗಿದೆ. ದೇವಾಲಯ ಸಂಕೀರ್ಣದಲ್ಲಿ ಸಾಮಾನ್ಯವಾಗಿ ಕಂಡುಬರುವ ಮಂಟಪಗಳೆಂದರೆ ಮಹಾಮಂಟಪ, ವಾಹನಮಂಟಪ, ರಂಗಮಂಟಪ, ವಸಂತೋತ್ಸವ ಮಂಟಪ, ಕಲ್ಯಾಣ ಮಂಟಪ, ಡೋಲೋತ್ಸವ ಮಂಟಪ ಮತ್ತು ದೇವಾಲಯ ಸಂಕೀರ್ಣದ ಹೊರಗೆ ಕಾಣಸಿಗುವ ಉತ್ಸವ ಮಂಟಪಗಳು.

ಮೇಲೆ ಹೇಳಲ್ಪಟ್ಟ ಮಂಟಪಗಳಲ್ಲಿ ಸ್ತಂಭಗಳನ್ನು ಹೇರಳವಾದ ಸಂಖ್ಯೆಯಲ್ಲಿ ಬಳಸುತ್ತಿದ್ದರೆಂದು ಈಗಾಗಲೇ ವಿವರಿಸಿದೆ. ಇಂತಹ ಸ್ತಂಭಗಳ ಪೈಕಿ ಪ್ರಮುಖವಾಗಿ ಬಳಸಲ್ಪಡುತ್ತಿದ್ದ ಸ್ತಂಭಗಳೆಂದರೆ ಚಿತ್ರಖಂಡ ಸ್ತಂಭ ಮತ್ತು ಸಂಯುಕ್ತ ಸ್ತಂಭಗಳು. ಸಂಯುಕ್ತ ಸ್ತಂಭಗಳು ವಿಜಯನಗರ ಕಾಲದ ವಿಶೇಷವಾದ ಕೊಡುಗೆಯೆಂದು ಹೇಳುವುದರಲ್ಲಿ ಆಕ್ಷೇಪಣೆಯೇನೂ ಇಲ್ಲ. ದಕ್ಷಿಣ ಭಾರತದಾದ್ಯಂತ ಇವರ ಕಾಲದಲ್ಲಿ ನಿರ್ಮಿತವಾದ ಮತ್ತು ಸೇರ್ಪಡೆಯಾದ ಮಂಟಪಗಳಲ್ಲಿ ಸಂಯುಕ್ತ ಸ್ತಂಭಗಳು ಕಾಣಸಿಗುವುದು. ಆದರೆ ಸೂಕ್ಷ್ಮ ಅಧ್ಯಯನಗಳಿಂದ ಈ ಸಂಯುಕ್ತ ಸ್ತಂಭಗಳ ನಿರ್ಮಾಣಕ್ಕೆ ಸ್ಫೂರ್ತಿಯಾದ ಪೂರ್ವದ ಕೆಲವು ಉದಾಹರಣೆಗಳು ದೊರಕುತ್ತವೆ. ಅವುಗಳ ವಿವರಣೆಗಳನ್ನು ಮತ್ತು ಅವುಗಳಿಂದಾದ ಬೆಳವಣಿಗೆಯನ್ನು ಗುರುತಿಸಿ ನಂತರ ವಿಜಯನಗರ ಕಾಲದಲ್ಲಿದ್ದ ಸಂಯುಕ್ತ ಸ್ತಂಭಗಳ ಪ್ರಕಾರಗಳನ್ನು ಚರ್ಚಿಸಲಾಗಿದೆ.

ಸಂಯುಕ್ತಸ್ತಂಭ, ಹೆಸರೇ ಸೂಚಿಸುವಂತೆ 'ಹೊಂದಿರುವ ಸ್ತಂಭ' ಎಂಬ ಅರ್ಥಕೊಡುತ್ತದೆ. ಅಂದರೆ ಈ ಸ್ತಂಭವು ಯಾವುದೋ ಒಂದು ವಿಶೇಷವಾದ ಅವಯವವನ್ನು ಹೊಂದಿದೆ ಎಂದರ್ಥ. ಸಂಯುಕ್ತ ಸ್ತಂಭದಲ್ಲಿ ಎರಡು ಪ್ರಕಾರಗಳನ್ನು ಗುರುತಿಸಬಹುದು. ಮೊದಲನೆಯ ಪ್ರಕಾರದಲ್ಲಿ ಸಂಯುಕ್ತಸ್ತಂಭದ ದಿಂಡಿಗೆ ಹೊಂದಿಕೊಂಡಂತೆ ಶಿಲ್ಪಗಳನ್ನು ಕಾಣಬಹುದು. ಇಂತಹ ಶಿಲ್ಪಗಳಲ್ಲಿ ಜಿಗಿಯುತ್ತಿರುವ ವ್ಯಾಳ, ಸಿಂಹ ಮತ್ತು ಅಶ್ವಗಳನ್ನು ಸಂಯೋಜಿಸಿರುವುದು ಸಾವಿರಾರು ಸಂಖ್ಯೆಗಳಲ್ಲಿ ಕಾಣಸಿಗುತ್ತದೆ. ಇವುಗಳನ್ನು ಕ್ರಮವಾಗಿ ವ್ಯಾಳಕಾಂತ, ಸಿಂಹಕಾಂತ ಮತ್ತು ಅಶ್ವಕಾಂತ ಸ್ತಂಭಗಳೆಂದು ಕರೆಯಲಾಗುವುದು. ಎರಡನೆಯ ಪ್ರಕಾರದ ಸ್ತಂಭವೆಂದರೆ ಪ್ರಧಾನದಿಂಡಿನೊಂದಿಗೆ ಉಪಸ್ತಂಭಗಳನ್ನು ಹೊಂದಿರುತ್ತವೆ. ಪ್ರಧಾನದಿಂಡು ಯಾವಾಗಲೂ ಚಿತ್ರಖಂಡ ವರ್ಗಕ್ಕೆ ಸೇರಿದ್ದು, ಉಪಸ್ತಂಭಗಳು ವಿಷ್ಣುಕಾಂತ ಅಥವಾ ಸೌಮ್ಯಕಾಂತ ವರ್ಗಕ್ಕೆ ಸೇರಿರುತ್ತವೆ. ವಿಶೇಷವೆಂದರೆ ವಿಜಯನಗರ ಕಾಲದಲ್ಲಿ ಬಳಸಲ್ಪಡುತ್ತಿದ್ದ ಕಂಬಗಳು ಚಿತ್ರಖಂಡಸ್ತಂಭಗಳೇ ಆಗಿದ್ದವು. ಈ ಸ್ತಂಭಗಳಿಗೆ ಕುಂಭ, ತಡಿ, ಮಂಡಿ ಫಲಕಗಳನ್ನು ಉಪಯೋಗಿಸುತ್ತಿರಲಿಲ್ಲ. ಸ್ತಂಭದ ಮೇಲೆ ನೇರವಾಗಿ ಪುಷ್ಪಪೋತಿಕಗಳನ್ನು ಯೋಜಿಸುತ್ತಿದ್ದರು. ಆದರೆ ಉಪಸ್ತಂಭಗಳು ಮಾತ್ರ ಪೀಠ, ದಂಡ, ಕುಂಭ, ಫಲಕ ಮೊದಲಾದ ಎಲ್ಲಾ ಅವಯವಗಳನ್ನು ಹೊಂದಿರುತ್ತವೆ. ಈ ಉಪಸ್ತಂಭಗಳ ಸಂಖ್ಯೆ ಒಂದರಿಂದ ಎಂಟರವರೆಗೆ ಇರಬಹುದೆಂದು ಶಾಸ್ತ್ರಗಳು ಹೇಳುತ್ತವೆ.

ಕೆಲವು ಪೂರ್ವರೂಪಗಳು

ಬೇಲೂರು ಚೆನ್ನಕೇಶವ ದೇವಾಲಯದಲ್ಲಿ ಸಂಯುಕ್ತ ಸ್ತಂಭದ ಪೂರ್ವರೂಪಗಳೆಂದು ಹೇಳಬಹುದಾದ ಕೆಲವು ಸ್ತಂಭಿಕೆಗಳು ದೊರಕುತ್ತವೆ. ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ, ಕ್ರಿ.ಶ. 1117ರಲ್ಲಿ ನಿರ್ಮಾಣವಾದ

ಈ ದೇವಾಲಯದ ಸುತ್ತಲೂ ದೇವಖುಲಿಕೆಗಳನ್ನು ಕಾಣಬಹುದು. ಈ ದೇವಖುಲಿಕೆಗಳು ಷಡ್ವರ್ಗಯುತ ವಿಮಾನದ ಚಿಕಣಿ ಮಾದರಿಯಂತಿರುತ್ತವೆ. ಇವುಗಳ ದ್ವಾರದ ಇಕ್ಕೆಲಗಳಲ್ಲಿ ಜಿಗಿಯುತ್ತಿರುವ ಸಿಂಹಗಳನ್ನೊಳಗೊಂಡ ಸ್ತಂಭಿಕೆಗಳನ್ನು ಕಾಣಬಹುದು. ಈ ಸ್ತಂಭಿಕೆಗಳು ಎಲ್ಲಾ ರೀತಿಯಲ್ಲು ಸಿಂಹಕಾಂತ ಸ್ತಂಭವನ್ನು ಹೋಲುತ್ತವೆ. (ಚಿತ್ರ-01) ಪ್ರಾಯಶಃ ವಿಜಯನಗರದ ಶಿಲ್ಪಿಗಳಿಗೆ ಬೃಹದಾಕಾರದ ಸಿಂಹಕಾಂತ ಸ್ತಂಭಗಳ ನಿರ್ಮಾಣಕ್ಕೆ ಈ ಸ್ತಂಭಿಕೆಗಳು ಸ್ಫೂರ್ತಿಯೆಂದರೆ ಅತಿಶಯೋಕ್ತಿಯಾಗಲಾರದು. ಏಕೆಂದರೆ ವಿಜಯನಗರ ಸ್ಥಾಪನೆಗೆ ಪೂರ್ವದಲ್ಲಿ ವೇಲಾಪುರವು ರಾಜಾಧಾನಿಯಾಗಿತ್ತು. ಅಲ್ಲದೆ ಬುಕ್ಕರಾಯರು ಸಹ ಈ ದೇವಾಲಯಕ್ಕೆ ಭೇಟಿಯಿತ್ತು ಅಲ್ಲಿಯ ಐದು ತಲದ ಗೋಪುರವನ್ನು ನಿರ್ಮಾಣವನ್ನು ಮಾಡಿದ್ದು ಶಾಸನಗಳಿಂದ ತಿಳಿದುಬರುತ್ತದೆ. ಹೀಗಾಗಿ ರಾಜಧಾನಿಯಾದ ವೇಲಾಪುರದಲ್ಲಿ ವಾಸವಾಗಿದ್ದ ಓಜರು ಬುಕ್ಕರಾಯನೊಂದಿಗೆ ವಿಜಯನಗರಕ್ಕೆ ಬಂದಿರಬಹುದು. ಹೀಗಾಗಿ ಕಣಶಿಲೆಯಲ್ಲೂ ಯಥಾಶಕ್ತಿ ಸೂಕ್ಷ್ಮತೆಯಿಂದ ಕೊರೆದಿರುವುದನ್ನು ಕಾಣಬಹುದು.

ವಿಕ್ರಮಪುರ (ಇಂದಿನ ತಿರುಚಿರಾಪಳ್ಳಿಯ ಕಣ್ಣಾನೂರು) ಹೊಯ್ಸಳರ ಎರಡನೆಯ ರಾಜಧಾನಿಯಾಗಿತ್ತು. ಇಲ್ಲಿ ವೀರಸೋಮೇಶ್ವರನ ಕಾಲದಲ್ಲಿ ಹೊಯ್ಸಳೇಶ್ವರ ದೇವಾಲಯವನ್ನು ನಿರ್ಮಿಸಿದನು. ಈ ದೇವಾಲಯದ ಗೂಢಮಂಟಪದಲ್ಲೂ ಮತ್ತು ಮುಖಮಂಟಪದಲ್ಲೂ ನಾಲ್ಕು ನಾಲ್ಕು ಕಂಬಗಳನ್ನು ಕಾಣಬಹುದು. ಇವುಗಳಲ್ಲಿ ಗೂಢಮಂಟಪದ ನಾಲ್ಕು ಕಂಬಗಳು ಮತ್ತು ಮುಖಮಂಟಪದ ಮಧ್ಯದ ಎರಡು ಕಂಬಗಳು ಭದ್ರಕಾಂತಸ್ತಂಭಗಳು. ಈ ಸ್ತಂಭಗಳು ಮುಂದಿನ ಸಂಯುಕ್ತಸ್ತಂಭದ ಬೆಳವಣಿಗೆಗೆ ಕಾರಣವಾಗಿರಬಹುದು. ಮುಖಮಂಟಪದ ಎರಡು ತುದಿಗಳಲ್ಲಿ ನಿರ್ಮಿಸಿರುವ ಸ್ತಂಭಗಳು ನಾಲ್ಕು ಉಪಸ್ತಂಭಗಳ ಪ್ರಧಾನದಿಂಡಿಗೆ ಸೇರಿಕೊಂಡಂತೆ ಕೆತ್ತಲಾಗಿದೆ. (ಚಿತ್ರ 02) ಇದು ನಂದೀಶಕಾಂತಕ್ಕೆ ಸಮೀಪವಾಗಿದೆ. ಇದೇ ಮುಂದುವರೆದು ಪ್ರಧಾನಸ್ತಂಭದಿಂದ ಉಪಸ್ತಂಭವನ್ನು ಇಡಿಯಾಗಿ ಬೇರ್ಪಡಿಸಿರುವ ಸಾಧ್ಯತೆಗಳು ಹೆಚ್ಚು. ಇಲ್ಲಿಗೂ ಬುಕ್ಕರಾಯನ ತಮ್ಮನಾದ ಕಂಪಣನು ಮಧುರೆಗೆ ಹೋಗುವ ಮಾರ್ಗದಲ್ಲಿ ಭೇಟಿಯಿತ್ತದ್ದು ಶಾಸನಗಳಿಂದ ತಿಳಿದು ಬರುತ್ತದೆ. ಒಟ್ಟಾರೆ ವಿಜಯನಗರ ಕಾಲದಲ್ಲಿ ಪಕ್ವವಾಗಿ ಬೆಳೆದು ಅಸಂಖ್ಯಾತವಾಗಿ ಬಳಸಲ್ಪಟ್ಟ ಈ ಸ್ತಂಭಗಳು ಹೊಯ್ಸಳರ ಕಾಲದಲ್ಲಿಯೇ ಅಂಕುರಿಸಿತ್ತು ಎನ್ನಬಹುದು.

ವಿಜಯನಗರ ಕಾಲದ ಸಂಯುಕ್ತಸ್ತಂಭಗಳು

ವ್ಯಾಲಕಾಂತ ಸ್ತಂಭ

ಈ ಸ್ತಂಭದಲ್ಲಿ ಪ್ರಧಾನ ಚಿತ್ರಖಂಡ ದಿಂಡಿಗೆ ಹೊಂದಿಕೊಂಡಂತೆ ವ್ಯಾಲವನ್ನು ಕೆತ್ತಿರುತ್ತಾರೆ. ವ್ಯಾಲ ಎನ್ನುವುದು ಒಂದು ಪೌರಾಣಿಕ ಪ್ರಾಣಿ. ಇದು ಪ್ರಾಣಿವರ್ಗದಲ್ಲಿಯೇ ಅತ್ಯಂತ ಬಲಶಾಲಿಯೆಂದು ಸೂಚಿಸುವುದಕ್ಕೆ ಹುಲಿಯ ದೇಹ, ಸಿಂಹದ ಮುಖ ಮತ್ತು ಆನೆಯ ಸೊಂಡಿಲನ್ನು ತೋರಿಸಿರುತ್ತಾರೆ. ಸಾಮಾನ್ಯವಾಗಿ ಈ ವ್ಯಾಲಗಳು ಮುಂಗಾಲುಗಳೆರಡನ್ನು ಎತ್ತಿ ಜಿಗಿಯುತ್ತಿರುವಂತೆ ಕೆತ್ತಲಾಗಿರುತ್ತದೆ. ವ್ಯಾಲಗಳು ಮುಂಗಾಲುಗಳಿಂದ ತಮ್ಮ ಸೊಂಡಿಲನ್ನು ಹಿಡಿದಿರುವಂತೆ ಚಿತ್ರಿಸಿರುತ್ತಾರೆ. (ಚಿತ್ರ 03–04) ಕೆಲವೊಮ್ಮೆ ಇವುಗಳ ಮೇಲೆ ಸವಾರರನ್ನು ಚಿತ್ರಿಸಿರುತ್ತಾರೆ. ವ್ಯಾಲಕಾಂತದಲ್ಲಿ ಇದು ಅಪರೂಪ. ಗಮನಾರ್ಹವಾದ ಅಂಶವೆಂದರೆ ರಾಜಧಾನಿಯಾದ ಹಂಪಿಯ ಪರಿಸರದಲ್ಲಿ ದೊರಕುವುದೆಲ್ಲವೂ ವ್ಯಾಲಕಾಂತ ಸ್ತಂಭಗಳೆ. ಇದು ರಾಜಧಾನಿಯ ಅಜೇಯತ್ವವನ್ನು ಸೂಚಿಸುತ್ತಿರಬಹುದು.

ಸಿಂಹಕಾಂತ ಸ್ತಂಭ

ಈ ವರ್ಗದ ಕಂಬಗಳು ಮೇಲಿನ ವ್ಯಾಲಕಾಂತ ಕಂಬದಂತೆಯೆ ಇರುತ್ತದೆ. ಇದರಲ್ಲಿ ವ್ಯಾಲಿಗೆ ಬದಲಾಗಿ ಸಿಂಹಗಳನ್ನು ಕಾಣಬಹುದು. (ಚಿತ್ರ 05) ಕೆಲವು ಸಿಂಹಕಾಂತ ಸ್ತಂಭಗಳಲ್ಲಿ ಸಿಂಹದ ಬಾಯೊಳಗೆ ಚಲಿಸುವ ಕಲ್ಲಿನ ಚೆಂಡುಗಳನ್ನು ಶಿಲ್ಪಿಗಳು ಕೆತ್ತಿರುತ್ತಾರೆ. ಇದು, ಅವರ ಶಿಲ್ಪನೈಪುಣ್ಯದ ಪ್ರದರ್ಶನಕ್ಕಾಗಿ. (ಚಿತ್ರ 06)

ಅಶ್ವಕಾಂತ ಸ್ತಂಭ

ಅಶ್ವಕಾಂತ ಸ್ತಂಭದಲ್ಲಿ ಜಿಗಿಯುತ್ತಿರುವ ಕುದುರೆಗಳನ್ನು ಚಿತ್ರಿಸಿರುತ್ತಾರೆ. ವಿಜಯನಗರದ ಸಾಮ್ರಾಜ್ಯದ ದಕ್ಷಿಣದ ಪ್ರದೇಶಗಳಲ್ಲಿ ಅಶ್ವಕಾಂತ ಸ್ತಂಭಗಳು ಹೇರಳವಾಗಿ ದೊರಕುತ್ತವೆ. (ಚಿತ್ರ-07) ಈ ಅಶ್ವಗಳ ಮೇಲೆ ಸವಾರರು ಇರುತ್ತಾರೆ. ಕೆಲವೊಮ್ಮೆ ಇವರು ಪ್ರಹರಣ ಆಯುಧಗಳಿಂದ ಯುದ್ಧಮಾಡುವಂತೆಯೋ ಬೇಟೆಯಾಡುವಂತೆಯೋ ಚಿತ್ರಿಸಲಾಗಿರುತ್ತದೆ. ಅಶ್ವಕಾಂತ ಸ್ತಂಭದ ಪೀಠದಲ್ಲಿ ಬೇಟೆಯ ದೃಶ್ಯಗಳನ್ನು ನೋಡಬಹುದು. ಹಂಪಿಯಲ್ಲಿ ಇಂತಹ ಸ್ತಂಭಗಳು ನಾಲ್ಕೇ ನಾಲ್ಕು ದೊರಕುತ್ತವೆ. ಕೆಲವು ದೇವಾಲಯಗಳಲ್ಲಿ ಕುದುರೆಯನ್ನು ಇಡಿಯಾಗಿ ವಿಗ್ರಹದಂತೆ ಕೆತ್ತದೆ, ಕೇವಲ ಉಬ್ಬುಶಿಲ್ಪದಂತೆ ಕೆತ್ತಿರುವ ಉದಾಹರಣೆಗಳು ದೊರಕುತ್ತವೆ. ಇಂತಹ ಸ್ತಂಭಗಳನ್ನು ಇವರ ಕಾಲಕ್ಕೆ ಸೇರಿದ, ತಮಿಳುನಾಡಿನ ಸೇನ್ದಮಂಗಲದ ವರದರಾಜಪ್ಪೇರುಮಾಳ್ ದೇವಾಲಯದ ಮಹಾಮಂಟಪದಲ್ಲಿ ನೋಡಬಹುದು. (ಚಿತ್ರ 08)

ಉಪಸ್ತಂಭಗಳುಳ್ಳ ಸಂಯುಕ್ತಸ್ತಂಭಗಳು

ಉಪಸ್ತಂಭಗಳ ವಿವರಣೆಯನ್ನು ವಿಶ್ವಕರ್ಮ ವಾಸ್ತುವಿದ್ಯಾ ಮತ್ತು ಮಾನಸಾರ ಗ್ರಂಥಗಳು ನೀಡುತ್ತವೆ. ಮಾನಸಾರದಲ್ಲಿ ಒಂದರಿಂದ ಕ್ರಮವಾಗಿ ಎಂಟರವರೆಗೆ ಉಪಸ್ತಂಭಗಳನ್ನು ಒದಗಿಸಬಹುದು ಎಂದಿದೆ. ಆದರೇ ಕೆಲವು ಪ್ರಕಾರಗಳಿಗೆ ಮಾತ್ರ ಹೆಸರುಗಳನ್ನು ಹೇಳಲಾಗಿದೆ. ಅಲ್ಲದೆ ಅವು ಸಾಮಾನ್ಯ ಸ್ತಂಭಗಳ ರೀತಿಯಲ್ಲಿಯೇ ಇರುವವು. ಆದರೇ ವಿಶ್ವಕರ್ಮ ವಾಸ್ತುವಿದ್ಯೆಯ ವಿವರಣೆಯು ಹೆಚ್ಚು ಸ್ಪಷ್ಟವಾಗಿದೆ. ಮುಂದಕ್ಕೆ ಇಲ್ಲಿ ನೀಡಲಾದ ಹೆಸರುಗಳು ಈ ಗ್ರಂಥದ್ದೇ ಆಗಿದ್ದು, ಅವಶ್ಯವಿದ್ದ ಕಡೆ ಆಕರದೊಂದಿಗೆ ಹೆಸರುಗಳನ್ನು ಬಳಸಲಾಗಿದೆ.

ಉಪಸ್ತಂಭಗಳನ್ನು ಕೆತ್ತುವಾಗ ಅವುಗಳಿಗೂ ಎಲ್ಲಾ ಅವಯವಗಳನ್ನು ರೂಪಿಸಬೇಕೆಂದು ಉಕ್ತವಾಗಿದೆ. ಆದ್ದರಿಂದಲೇ ಪೀಠದಿಂದ ಫಲಕದವರೆಗು ಎಲ್ಲಾ ಅಂಗಗಳನ್ನು ಕಾಣಬಹುದು. ಗಮನಾರ್ಹವೆಂದರೆ ಉಪಸ್ತಂಭಗಳ ಪೀಠದಲ್ಲಿ ಪದ್ಮಪತ್ರಗಳನ್ನೂ ಸಿಂಹಗಳನ್ನೂ ಅಲಂಕಾರಕ್ಕಾಗಿ ಕೆತ್ತಬೇಕೆನ್ನಲಾಗಿದೆ. ಇದನ್ನು ವಿಜಯನಗರದ ಶಿಲ್ಪಿಗಳು ಬಹಳ ಚತುರತೆಯಿಂದ ನಿರ್ವಹಿಸಿರುವರು. ಪ್ರಧಾನ ಸ್ತಂಭದ ಪೀಠಭಾಗದಲ್ಲಿ ಕುಳಿತ ಸಿಂಹಗಳನ್ನು ಮತ್ತು ಅದೇ ಪೀಠದ ಉಪಾಂಗಗಳಲ್ಲಿ ಪದ್ಮದಳಗಳನ್ನು ಅಚ್ಚುಕಟ್ಟಾಗಿ ಕೆತ್ತಿರುತ್ತಾರೆ. (ಚಿತ್ರ 09)

ಈ ಹಿಂದೆಯೇ ಹೇಳಿದಂತೆ ಶಾಸ್ತ್ರಗ್ರಂಥಗಳು ಒಂದು ಉಪಸ್ತಂಭದಿಂದ ಎಂಟು ಉಪಸ್ತಂಭಗಳವರೆಗೆ ಸಂಯೋಜಿಸಬಹುದೆಂದು ಹೇಳುತ್ತವೆ. ಇದಕ್ಕೆ ಅನುಗುಣವಾದ ಉದಾಹರಣೆಗಳು ವಿಜಯನಗರ ಕಾಲದಲ್ಲಿ ಹೇರಳವಾಗಿ ಕಾಣಬಹುದು. ಒಂದು ಉಪಸ್ತಂಭ ಉಳ್ಳ ಸಂಯುಕ್ತ ಸ್ತಂಭವನ್ನು ಸುಪ್ರತೀಕಾಂತ ಎಂದು ಕರೆಯಲಾಗಿದೆ. ಈ ವರ್ಗಕ್ಕೆ ಸೇರಿದೆ ಸ್ತಂಭಗಳನ್ನು ಮಹಾಮಂಟಪಗಳಲ್ಲಿ ಉಪಯೋಗಿಸುತ್ತಿದ್ದರು. ಸಾಮಾನ್ಯವಾಗಿ ಪ್ರಧಾನದಿಂಡಿನಿಂದ ಇದು ಸಂಪೂರ್ಣವಾಗಿ ಬಿಡಿಸಿ ಕೆತ್ತಲಾಗುತ್ತಿತ್ತು. (ಚಿತ್ರ 10) ಆದರೆ ಅಪರೂಪಕ್ಕೆ

ಸೇರಿಕೊಂಡಂತೆ ಕೆತ್ತಿರುವ ಉದಾಹರಣೆಗಳು ದೊರಕುತ್ತವೆ. ಕಮಲಾಪುರದ ಪಟ್ಟಾಭಿರಾಮ ದೇವಾಲಯದಲ್ಲಿ, ತಮಿಳುನಾಡಿನ ತಾರಮಂಗಳದಲ್ಲಿರುವ ದೇವಾಲಯದಲ್ಲಿ ಇಂತಹ ಸ್ತಂಭಗಳನ್ನು ಕಾಣಬಹುದು. (ಚಿತ್ರ 11) ಈ ರೀತಿ ಪೂರ್ಣವಾಗಿ ಬಿಡಿಸದೆ ಕೆತ್ತಿರುವ ಸಂಯುಕ್ತ ಸ್ತಂಭಗಳಲ್ಲಿ ಉಪಸ್ತಂಭಕ್ಕೂ ಪ್ರಧಾನದಿಂಡಿಗು ಮಧ್ಯದಲ್ಲಿ ಜಾಲಕವನ್ನೂ ಸಹ ಕೆತ್ತುತ್ತಿದ್ದರು. ಇದಕ್ಕೆ ತಮಿಳುನಾಡಿನ ತಿರುಚೆಂದೂರಿನ ಅರ್ಧನಾರೀಶ್ವರ ದೇವಾಲಯದ ಮಹಾಮಂಟಪ ಮತ್ತು ತಾರಮಂಗಲದ ಕೈಲಾಸನಾಥ ದೇವಾಲಯದ ಪ್ರಾಕಾರ ಮಂಟಪದ ಕಂಬಗಳನ್ನು ಉದಹರಿಸಬಹುದು. (ಚಿತ್ರ 12)

ಎರಡು ಉಪಸ್ತಂಭಗಳುಳ್ಳ ಸಂಯುಕ್ತಸ್ತಂಭವನ್ನು ಸೂರ್ಯಕಾಂತ ಎನ್ನುತ್ತಾರೆ. ಇಂತಹ ಸ್ತಂಭಗಳ ಉದಾಹರಣೆ ನಮಗೆ ಹೆಚ್ಚಾಗೆ ದೊರಕುವುದಿಲ್ಲ. ಕಮಲಾಪುರದ ಪಟ್ಟಾಭಿರಾಮ ದೇವಾಲಯ ಮತ್ತು ತಾರಮಂಗಲದ ಕೈಲಾಸನಾಥ ದೇವಾಲಯದ ಕಂಬಗಳನ್ನು ಉದಹರಿಸಬಹುದು. (ಚಿತ್ರ 13)

ಮೂರು ಉಪಸ್ತಂಭಗಳುಳ್ಳ ಸಂಯುಕ್ತಸ್ತಂಭಗಳ ಬಗ್ಗೆ ನಮಗೆ ಶಾಸ್ತ್ರಗಳಲ್ಲಿ ವಿವರಣೆ ಸಿಗುವುದಿಲ್ಲ. ಮಾನಸಾರದಲ್ಲಿ ಮೂರು ಉಪಸ್ತಂಭಗಳನ್ನು ಸಂಯೋಜಿಸಬಹುದು ಎಂದು ಹೇಳುತ್ತದೆಯೇ ಹೊರತು ಹೆಸರಿಸುವುದಿಲ್ಲ. ಆದರೆ ವಿಜಯನಗರ ಕಾಲದ ದೇವಾಲಯಗಳಲ್ಲಿ ಈ ಪ್ರಕಾರದ ಸ್ತಂಭಗಳು ಹೇರಳವಾಗಿ ಕಾಣುತ್ತವೆ. (ಚಿತ್ರ 14) ಸಾಮಾನ್ಯವಾಗಿ ಮಹಾಮಂಟಪಗಳ ತುದಿಯಲ್ಲಿ ಇಂತಹ ಸ್ತಂಭಗಳನ್ನು ಸಂಯೋಜಿಸಿರುವುದನ್ನು ಕಾಣಬಹುದು. ಸುಮಾರು 16ನೆಯ ಶತಮಾನದ ಹೊತ್ತಿಗೆ ನಿರ್ಮಾಣವಾದ ಮಂಟಪಗಳಲ್ಲಿ ಒಳಮುಖವಾಗಿ ಮುಂಚಾಚಿಕೊಂಡಂತಹ ಮೂರು ಉಪಸ್ತಂಭಗಳುಳ್ಳ ಸಂಯುಕ್ತಸ್ತಂಭಗಳನ್ನೂ ಕಾಣಬಹುದು. ಇಂತಹ ಉದಾಹರಣೆಗಳನ್ನು ತಮಿಳುನಾಡಿನ ತನ್ಕರೈಕ್ಕೋಟ್ಟೈ ರಾಮನ ದೇವಾಲಯದ ಮಹಾಮಂಟಪ ಮತ್ತು ಕಮಲಾಪುರದ ಪಟ್ಟಾಭಿರಾಮ ದೇವಾಲಯದ ರಂಗಮಂಟಪದಲ್ಲಿ ಕಾಣಬಹುದು. (ಚಿತ್ರ 15–16) ತಿರುಚೆಂಗೋಡು ಕೈಲಾಸನಾಥ ದೇವಾಲಯ ಮತ್ತು ಕಮಲಾಪುರದ ಪಟ್ಟಾಭಿರಾಮ ದೇವಾಲಯಗಳ ಮಹಾಮಂಟಪದಲ್ಲಿರುವ ಸಂಯುಕ್ತಸ್ತಂಭಗಳಲ್ಲಿ ಮೂರು ಉಪಸ್ತಂಭಗಳನ್ನು ಬಿಡಿಸದೆ ಸೇರಿಕೊಂಡಂತೆಯೆ ಕೆತ್ತಿದ್ದಾರೆ. (ಚಿತ್ರ 17–18)

ನಾಲ್ಕು ಉಪಸ್ತಂಭಗಳುಳ್ಳ ಸಂಯುಕ್ತ ಸ್ತಂಭಗಳನ್ನು ಬ್ರಾಹ್ಮಣಕಾಂತ ಸಂಯುಕ್ತಸ್ತಂಭಗಳೆನ್ನುತ್ತಾರೆ. ಮಾನಸಾರವು ಇದನ್ನು ಬ್ರಹ್ಮಕಾಂತವೆಂದೇ ಕರೆದಿದೆ. ಈ ಸ್ತಂಭದಲ್ಲಿ ಪ್ರಧಾನವಾದ ಸ್ತಂಭಕ್ಕೆ ನಾಲ್ಕು ಮುಖಗಳಲ್ಲೂ ಒಂದೊಂದು ಉಪಸ್ತಂಭವನ್ನು ಸಂಯೋಜಿಸಿರುತ್ತಾರೆ. ಇಂತಹ ಉದಾಹರೆಣೆಗಳು ದೊರಕುವುದು ಬಹಳ ವಿರಳ. ಕಮಲಾಪುರದ ಪಟ್ಟಾಭಿರಾಮ ಮಂದಿರದ ರಂಗಮಂಟಪದಲ್ಲಿ ಈ ವರ್ಗದ ಸ್ತಂಭಗಳ ಎರಡು ಉದಾಹರಣೆಗಳನ್ನು ನೋಡಬಹುದು. ವಿಖ್ಯಾತವಾದ ವಿಜಯವಿಠಲ ದೇವಾಲಯದ ಮಹಾಮಂಟಪದಲ್ಲಿ ಇಂತಹ ಉದಾಹರಣೆಗಳನ್ನು ಕಾಣಬಹುದು. (ಚಿತ್ರ 19–20)

ಎಂಟು ಉಪಸ್ತಂಭಗಳನ್ನುಳ್ಳ ಸಂಯುಕ್ತಸ್ತಂಭವನ್ನು ಮೇರುಕಾಂತಸ್ತಂಭವೆಂದು ಕರೆಯುತ್ತಾರೆ. ಆಗಮಗಳಲ್ಲಿ ದೊರಕುವ ಅತಿ ಹೆಚ್ಚಿನ ಉಪಸ್ತಂಭಗಳ ಸಂಖ್ಯೆಯಿದು. ಪ್ರಧಾನಸ್ತಂಭದ ಸುತ್ತಲೂ ಈ ಉಪಸ್ತಂಭಗಳನ್ನು ದಿಕ್ಕಿಗೆ ಎರಡರಂತೆ ಕೆತ್ತಲಾಗಿರುತ್ತದೆ. ಆದರೆ ಹಂಪಿಯ ವಿಜಯವಿಠಲ ದೇವಾಲಯದ ಮಹಾಮಂಟಪದಲ್ಲಿ ಕಾಣಬರುವ ಸಂಯುಕ್ತಸ್ತಂಭವು ಹನ್ನೆರಡು ಉಪಸ್ತಂಭಗಳನ್ನು ಹೊಂದಿದೆ. (ಚಿತ್ರ 21) ಇದು ಬಹಳ ವಿಶೇಷವಾದ

ಅಂಶವಾಗಿದೆ. ವಾಸ್ತುಗ್ರಂಥಗಳಲ್ಲಿ ಮತ್ತು ಆಗಮಗಳಲ್ಲಿ ಮೇರು, ಮಂದರ ಮೊದಲಾದ ಕುಲಪರ್ವತಗಳ ಹೆಸರಿನಿಂದ ಗುರುತಿಸಲ್ಪಡುವ ಸಂಯುಕ್ತಸ್ತಂಭಗಳ ವಿವರಣೆಗಳಲ್ಲಿ ಇದರ ವಿವರಣೆಯಿದ್ದು ಪಾಠ ನಷ್ಟವಾಗಿರಬಹುದು. ಆದ್ದರಿಂದ ಇದರ ಹೆಸರನ್ನು ನಿಖರವಾಗಿ ಹೇಳುವುದು ಕಷ್ಟಸಾಧ್ಯ.

ಹದಿನಾರನೆಯ ಶತಮಾನದ ಹೊತ್ತಿಗೆ ಇವರಿಂದ ನಿರ್ಮಿಸಲ್ಪಡುತ್ತಿದ್ದ ಸಂಯುಕ್ತಸ್ತಂಭಗಳಲ್ಲಿ ಪ್ರಧಾನ ದಿಂಡಿಗೆ ಹೊಂದಿಕೊಡಂತೆ ಮೂರ್ತಿಶಿಲ್ಪಗಳನ್ನು ಸಂಯೋಜಿಸಿರುವುದನ್ನು ಕಾಣುತ್ತೇವೆ. ಈ ಪದ್ಧತಿಗೆ ಪ್ರಾಚೀನತಮ ಉದಾಹರಣೆಗಳನ್ನು ಐಹೋಳೆಯ ದುರ್ಗಾದೇವಾಲಯ ಮತ್ತು ಪಟ್ಟದಕಲ್ಲಿನ ಪಾಪನಾಥ ದೇವಾಲಯಗಳಲ್ಲಿ ಕಾಣಬಹುದು (7/8ನೆಯ ಶತಮಾನ). ಹನ್ನೆರಡನೆಯ ಶತಮಾನದ ಬೇಲೂರಿನ ಚನ್ನಕೇಶವ ದೇವಾಲಯದ ಮೋಹಿನೀ ಶಿಲ್ಪವನ್ನೂ ಈ ಗುಂಪಿಗೆ ಸೇರಿಸಬಹುದು. ಆದರೇ ವಿಜಯನಗರದ ಶಿಲ್ಪಿಗಳು ಇದನ್ನು ಹೆಚ್ಚಿನ ಸಂಖ್ಯೆಯಲ್ಲಿ ಬಳಸಿರುವುದನ್ನು ಕಾಣುತ್ತೇವೆ. ದೇವಾಲಯದ ಮಹಾಮಂಟಪಗಳಲ್ಲಿ ಮಧ್ಯಭಾಗವನ್ನು ಆವರಿಸಿದಂತೆ ಸ್ತಂಭಗಳನ್ನು ನಿರ್ಮಿಸಿರುತ್ತಾರೆ. ಈ ಸ್ತಂಭಗಳ ಒಳಮುಖಗಳಲ್ಲಿ ದೇವತೆಗಳ, ಋಷಿಮುನಿಗಳ, ಭಕ್ತರ ಮತ್ತು ದೊರೆಗಳ ಮೂರ್ತಿಶಿಲ್ಪಗಳನ್ನು ಕೆತ್ತಿರುತ್ತಾರೆ. (ಚಿತ್ರಗಳು 22-23-24) ಈ ಶಿಲ್ಪಗಳು ಸುಮಾರು ಎರಡು ಅಡಿಯಿಂದ ಎಂಟು ಅಡಿಗಳವರೆಗೂ ಎತ್ತರವಿರುತ್ತದೆ.

ತಮಿಳುನಾಡಿನ ಮಧುರೈ ತೆಂಕಾಸಿಗಳಲ್ಲಿ ಬೃಹತ್ತಾದ ಶಿಲ್ಪಗಳನ್ನು ಕಾಣಬಹುದು. ತಾರಮಂಗಲದ ಕೈಲಾಸನಾಥ ದೇವಾಲಯದಲ್ಲಿ ಮೊದಲನೆಯ ಪ್ರಾಕಾರದ ಭದ್ರಕ ಸ್ತಂಭಗಳಲ್ಲಿ ಇಂತಹ ಶಿಲ್ಪಗಳನ್ನು ನೋಡಬಹುದು. ಆಂಧ್ರಪ್ರದೇಶದ ಲೇಪಾಕ್ಷಿಯಲ್ಲಿನ ಮಹಾಮಂಟಪವನ್ನೂ ಉದಹರಿಸಬಹುದು. ಭಿಕ್ಷಾಟನಾಮೂರ್ತಿ, ಗಂಗಾಧರಮೂರ್ತಿ, ವಿಷ್ಣು, ಕೋದಂಡರಾಮ ಮೊದಲಾದ ಶಿಲ್ಪಗಳನ್ನು ಕಾಣಬಹುದು. ವಿಶೇಷವೆಂದರೆ ಎಲ್ಲ ಮಹಾಮಂಟಪಗಳಲ್ಲೂ ರತೀಮನ್ಮಥರ ಶಿಲ್ಪಗಳನ್ನು ಪ್ರತ್ಯಕ್ಷವಾಗಿ ಕೆತ್ತಿರುತ್ತಾರೆ. (ಚಿತ್ರ 25-26) ಪ್ರಾಯಶಃ ಮಹಾಮಂಟಪಗಳಲ್ಲಿ ಕಲ್ಯಾಣೋತ್ಸವಗಳು ನಡೆಯುತ್ತಿದ್ದುದರಿಂದ ಈ ರೀತಿ ಅಲಂಕರಿಸಿರಬಹುದು. ಇಂತಹ ಶಿಲ್ಪಸಮೂಹದಲ್ಲಿ ಕಾಣಬರುವ ಮತ್ತೊಂದು ಶಿಲ್ಪವೆಂದರೆ ಸ್ಥಳೀಯ ಪಾಳೆಗಾರರು ಮತ್ತು ಅವರ ಪರಿವಾರದವರು. ತಮಿಳುನಾಡಿನ ಮಧುರೈ ಮೀನಾಕ್ಷಿ ದೇವಾಲಯ, ತಿರುಚೆಂಗೂಡಿನ ಅರ್ಧನಾರೀಶ್ವರ ದೇವಾಲಯ ಮೊದಲಾದ ಕಡೆ ಈ ರೀತಿ ಸ್ಥಳೀಯ ಪಾಳೇಗಾರರ ಮತ್ತು ಅವರ ಅರಸಿಯರ ಶಿಲ್ಪಗಳನ್ನು ಕಾಣಬಹುದು. (ಚಿತ್ರ 27)


ಈ ಸಂಯುಕ್ತ ಸ್ತಂಭಗಳನ್ನು ಹಿಂದೆಯೆ ಹೇಳಿದಂತೆ ಮಹಾಮಂಟಪ, ಕಲ್ಯಾಣಮಂಟಪ, ವಸಂತಮಂಟಪಗಳಲ್ಲೂ ಬಳಸಲಾಗುತ್ತಿತ್ತು. ಇವುಗಳ ನಿರ್ಮಾಣದಲ್ಲು ಒಂದು ಕ್ರಮವನ್ನು ಅನುಸರಿಸಿರುವುದನ್ನು ಕಾಣಬಹುದು. ಸಾಮಾನ್ಯವಾಗಿ ಮಂಟಪದ ಹೊರಗಿನ ಸಾಲಿನಲ್ಲಿ ಮಾತ್ರ ಸಂಯುಕ್ತಸ್ತಂಭಗಳನ್ನು ನಿರ್ಮಿಸುತ್ತಿದ್ದರು. ಈ ಸಾಲಿನ ಮಧ್ಯದ ಎರಡು ಸ್ತಂಭಗಳು ವ್ಯಾಲಕಾಂತ ಅಶ್ವಕಾಂತ ಅಥವಾ ಸಿಂಹಕಾಂತ ಸ್ತಂಭಗಳಾಗಿರುತ್ತಿದ್ದವು. ತುದಿಗಳಲ್ಲಿರುವಂತಹ ಸ್ತಂಭಗಳು ಮೂರು ಉಪಸ್ತಂಭಗಳುಳ್ಳ ಸಂಯುಕ್ತಸ್ತಂಭಗಳಾಗಿರುತ್ತಿತ್ತು. ಇನ್ನು ಈ ಎರಡೂ ಪ್ರಕಾರದ ಸ್ತಂಭಗಳ ಮಧ್ಯದಲ್ಲಿ ಒಂದು ಉಪಸ್ತಂಭವುಳ್ಳ ಸಂಯುಕ್ತ ಸ್ತಂಭವನ್ನು ನಿರ್ಮಿಸುತ್ತಿದ್ದರು. ಈ ಶಿಲ್ಪಗಳು ಮತ್ತು ಉಪಸ್ತಂಭಗಳನ್ನು ದೇವಾಲಯದ ಅಂಗಳಕ್ಕೆ ಅಭಿಮುಖವಾಗಿ ಕೆತ್ತಲಾಗುತ್ತಿತ್ತು. ಇಂತಹ ಸಂಯುಕ್ತಸ್ತಂಭಗಳಲ್ಲಿ ಕಾಣುವ ಮತ್ತೊಂದು ವಿಶೇಷವೆಂದರೆ ಪ್ರಧಾನ ಸ್ತಂಭಕ್ಕೂ ಮಧ್ಯಸೇರಿದಂತೆ ಜಾಲಕಗಳನ್ನು ಕೊರೆದಿರುವುದು, ಕಣಶಿಲೆಯಾದರು ಇದನ್ನು ಬಹಳ ಸಮರ್ಥವಾಗಿ ವಿಜಯನಗರದ ಶಿಲ್ಪಿಗಳು ನಿರ್ವಹಿಸಿದ್ದಾರೆ.

(ಚಿತ್ರ 12) ಹದಿನಾರನೇ ಶತಮಾನದಲ್ಲಿ ಮಹಾಮಂಟಪಕ್ಕೆ ಸೇರಿದಂತೆ ನಿರ್ಮಾಣಗೊಳ್ಳುತ್ತಿದ್ದ ಪಾತಾಲಾಂಕಣದಲ್ಲಿ ಎರಡು ಹಂತಗಳುಳ್ಳ ಸಂಯುಕ್ತಸ್ತಂಭಗಳನ್ನು ನಿರ್ಮಿಸಿರುವುದು ಕಾಣಬಹುದು. ಇದು ಸಾಮಾನ್ಯವಾಗಿ ಅದರ ಎತ್ತರಕ್ಕೆ ಅನುಗುಣವಾಗಿರಲೆಂದು ಹೀಗೆ ನಿರ್ಮಿಸುತ್ತಿದ್ದರು. (ಚಿತ್ರ 28)

ವಿಜಯನಗರ ಕಾಲದ ಸಂಯುಕ್ತ ಸ್ತಂಭಗಳ ಬಗ್ಗೆ ಚರ್ಚಿಸುವಾಗ ವಿಠಲ ದೇವಾಲಯದ ಪ್ರಸ್ತಾಪವನ್ನು ಮಾಡದೆ ಮುಂದುವರೆಯುವುದು ದುಸ್ಸಾಧ್ಯ. ಈ ದೇವಾಲಯದ ಮಹಾಮಂಟಪದ ಸ್ತಂಭ ಅತ್ಯಂತ ಉತ್ತಮ ಕೆಲಸಗಾರಿಕೆಯನ್ನು ಪ್ರತಿಬಿಂಬಿಸುತ್ತವೆ. ಇಲ್ಲಿ ಶಿಲ್ಪಿಯು ತನ್ನ ಕಲ್ಪನೆಯನ್ನು ಸಂಪೂರ್ಣವಾಗಿ ಪಸರಿಸಿ ಎಲ್ಲೆಗಳನ್ನು ಮೀರಿದ್ದಾರೆಂದರೆ ಸುಳ್ಳಲ್ಲ. ಮಂಟಪದ ಆಕಾರಕ್ಕೆ ಅವಶ್ಯಕತೆಗೆ ಅನುಗುಣವಾಗಿ, ವಿಶೇಷವಾದರು ದೃಷ್ಟಿಗೆ ಸಹ್ಯವಾಗಿ ಆಕರ್ಷಕವಾಗಿ ನಿರ್ಮಿಸಲಾದ ಸ್ತಂಭಗಳಾಗಿವೆ. ಇಲ್ಲಿ ಶಾಸ್ತ್ರೋಕ್ತವಾದ ಬ್ರಾಹ್ಮಣ ಕಾಂತ ಸ್ತಂಭವನ್ನು ಗಮನಿಸಿದರೂ, ಶಾಸ್ತ್ರದ ಪರಿಮಿತಿಯನ್ನು ಮೀರಿದ ಕಾಲ್ಪನಿಕ ಪ್ರಕಾರಗಳೇ ಹೆಚ್ಚು. ಇಂತಹ ಶಿಲ್ಪಯ ಚಾತುರ್ಯದಿಂದ ನಿರ್ಮಿಸಲ್ಪಟ್ಟ ಸ್ತಂಭಗಳನ್ನು ಮಿಶ್ರಕ ಸ್ತಂಭಗಳೆನ್ನಬಹುದು. ಇವುಗಳ ವಿವರಣೆಯನ್ನು ಇಲ್ಲಿ ನೀಡುವುದು ಅಸಾಧ್ಯ.

ಶಾಸ್ತ್ರಗಳು ಎಷ್ಟೇ ನಿಯಮಗಳನ್ನು ಹೇಳಿದರು ಶಿಲ್ಪಿಗೆ ತನ್ನದೇ ಆದ ಸ್ವಾತಂತ್ರ್ಯವಿರುತ್ತಿತ್ತು. ಇದು ಎಲ್ಲ ಕಾಲಗಳಿಗೂ ಅನ್ವಯಿಸುತ್ತದೆ. ವಿಜಯನಗರ ಕಾಲದ ಶಿಲ್ಪಿಗಳಿಗೂ ವಿಶೇಷವಾದ ಕಾಲ್ಪನಿಕ ಶಕ್ತಿಯಿದ್ದುದರಿಂದ ಅದರ ಪ್ರಯೋಜನವನ್ನು ಸಕ್ರಿಯವಾಗಿ ತೋರಿಸಿದ್ದಾರೆ. ಈ ಮಂಟಪದಲ್ಲಿ ಮೂಲೆಗಳಲ್ಲಿ ಏಳರಿಂದ ಹನ್ನೆರಡು ಉಪಸ್ತಂಭಗಳುಳ್ಳ ಸಂಯುಕ್ತಸ್ತಂಭಗಳನ್ನು ಕಾಣಬಹುದು. ಇವುಗಳ ಜೋಡನೆ ಕೆಲವೊಮ್ಮೆ ಶಿವಕಾಂತ, ಸ್ಕಂದಕಾಂತ, ಮೇರುಕಾಂತಗಳೊಂದಿಗೆ ಸುಪ್ರತೀಕಾಂತ ಪ್ರಕಾರಗಳನ್ನು ಮಿಶ್ರ ಮಾಡಿರುವಂತೆ ಭಾಸವಾಗುತ್ತದೆ. (ಚಿತ್ರ 29) ಇಕ್ಕೆಲಗಳಲ್ಲೂ ಎರಡೆರಡು ಉಪಸ್ತಂಭಗಳಿದ್ದರೆ ಅದನ್ನು ಕೈಲಾಸಕಾಂತ ಎನ್ನಲಾಗಿದೆ. ಈ ಮಹಾಮಂಟಪದಲ್ಲಿ ಅಂತಹ ಹಲವು ಸ್ತಂಭಗಳಿಗೆ ವ್ಯಾಳಕಾಂತವನ್ನೋ ಅಥವಾ ಮೂರ್ತಿಶಿಲ್ಪಗಳಿಂದ ಕೂಡಿದ ಮಿಶ್ರ ಜಾತಿಯ ಕೈಲಾಸಕಾಂತ ಎನ್ನಬಹುದು. (ಚಿತ್ರ 30) ಮಂಟಪದ ವಿಶಾಲಕ್ಕೆ ಹೊಂದುವಂತೆ ಬೃಹದಾಕಾರದ ಮಿಶ್ರಕ ಸಂಯುಕ್ತಸ್ತಂಭಗಳನ್ನು ಸಹ ಕಾಣಬಹುದು. ಮಧ್ಯದ ಸಾಲಿನಲ್ಲಿ ನಿರ್ಮಿತವಾದ ಇಂತಹ ಸ್ತಂಭಗಳು ಎರಡು ಮುಖಗಳಲ್ಲೂ ವ್ಯಾಲಕಾಂತವನ್ನು ಹೊಂದಿರುವ ಕೈಲಾಸಕಾಂತವಾಗಿದೆ. (ಚಿತ್ರ 31) ಇನ್ನೂ ಹಲವಾರು ಕ್ರಮಜೋಡಣೆ ಮತ್ತು ಸಂಯೋಜನೆಯಿಂದ ಇಲ್ಲಿಯ ಮಹಾಮಂಟಪವನ್ನು ಅಲಂಕರಿಸಲಾಗಿದೆ. (ಚಿತ್ರ 32–33) ಅವೆಲ್ಲವನ್ನು ಸಚಿತ್ರವಾಗಿ ವಿವರಿಸುವುದು ಪ್ರಸ್ತುತ ಲೇಖನದಲ್ಲಿ ಶ್ರಮಸಾಧ್ಯವಾಗುವುದು. ಆದ್ದರಿಂದ ಮುಖ್ಯವಾದ ಅಂಶಗಳನ್ನು ಸಚಿತ್ರವಾಗಿ ಉದಹರಿಸಲಾಗಿದೆ. ಇಲ್ಲಿಯ ಸಂಯುಕ್ತ ಸ್ತಂಭಗಳಲ್ಲಿ ಮತ್ತೊಂದು ಗಮನಾರ್ಹ ಅಲಂಕರಣವೆಂದರೆ ಪ್ರಧಾನ ಚಿತ್ರಖಂಡ ದಿಂಡಿಗೆ ಭದ್ರಕಸ್ತಂಭವನ್ನು ಕೆತ್ತಲಾಗಿದೆ. (ಚಿತ್ರ 34) ಈ ಭದ್ರಕಸ್ತಂಭಗಳು ಸಹ ವಿಷ್ಣುಕಾಂತ, ಶ್ರೀಕರ ಮೊದಲಾದ ಪ್ರಕಾರಗಳಾಗಿದ್ದು ಕುಂಭ, ಮಂಡಿಗಳನ್ನು ಹೊಂದಿರುವುದು ಕಾಣಬಹುದು.


ಈ ರೀತಿಯಾಗಿ ದೇವಾಲಯ ನಿರ್ಮಾಣಕಾರ್ಯವನ್ನೇ ಬೃಹತ್ಪ್ರಮಾಣದಲ್ಲಿ ಕೈಗೊಂಡು ಆಡಳಿತ ಮೊದಲಾದವುಗಳ ಕಡೆಗೆ ಕೊಟ್ಟಷ್ಟೇ ಪ್ರಾಧಾನ್ಯವನ್ನು ಕೊಟ್ಟು ನಿರ್ಮಿಸುತ್ತಿದ್ದ ವಿಜಯನಗರದ ಅರಸರ ಪೋಷಣೆಯಲ್ಲಿ ಇಂತಹ ವಾಸ್ತುವಿಶೇಷಗಳು ಆವಿರ್ಭವಿಸಿದವು. ಕಣಶಿಲೆಯಂತಹ ಕಠಿಣ ಮಾಧ್ಯಮವನ್ನು ಬಳಸಿಯು ಸೂಕ್ಷ್ಮವಾದ ಕೆತ್ತನೆಯನ್ನೂ ಜಾಲಕಗಳನ್ನು ನಿರ್ಮಿಸಿರುವ ವಿಜಯನಗರದ ಶಿಲ್ಪಿಗಳು ನಿಜಕ್ಕೂ ಶ್ಲಾಘನೀಯರು.



ಚಿತ್ರ 1



ಚಿತ್ರ 3




ಚಿತ್ರ 2



ಚಿತ್ರ 4




ಚಿತ್ರ 5




ಚಿತ್ರ 7




ಚಿತ್ರ 6



ಚಿತ್ರ 8



ಚಿತ್ರ 9




ಚಿತ್ರ 11



ಚಿತ್ರ 10



ಚಿತ್ರ 12




ಚಿತ್ರ 13



ಚಿತ್ರ 15




ಚಿತ್ರ 14




ಚಿತ್ರ 16




ಚಿತ್ರ 17



ಚಿತ್ರ 18



ಚಿತ್ರ 19




ಚಿತ್ರ 20



ಚಿತ್ರ 21



ಚಿತ್ರ 23



ಚಿತ್ರ 22



ಚಿತ್ರ 24



ಚಿತ್ರ 25




ಚಿತ್ರ 26




ಚಿತ್ರ 27




ಚಿತ್ರ 28




ಚಿತ್ರ 29




ಚಿತ್ರ 30




ಚಿತ್ರ 32



ಚಿತ್ರ 31



ಚಿತ್ರ 33



ಚಿತ್ರ 34

ಹಂಪಿಯ ವಿಶಿಷ್ಟ ಹರಿಹರ ಶಿಲ್ಪ

ಹೇಮಾವತಿ ಶಿ. ಮೆಣಸಗಿ

ಭಾರತೀಯ ಇತಿಹಾಸ ರಚನೆಯಲ್ಲಿ ಕಲೆ ವಾಸ್ತುಶಿಲ್ಪಕ್ಕೆ ಮಹತ್ವವಾದ ಸ್ಥಾನವನ್ನು ನೀಡಲಾಗಿದೆ. ಅದರಲ್ಲಿ ಮೂರ್ತಿಶಿಲ್ಪಗಳು ಸಿಂಹಪಾಲನ್ನು ಪಡೆದುಕೊಂಡಿವೆ ಎನ್ನಬಹುದು. ಲೌಕಿಕ ಮೂರ್ತಿಶಿಲ್ಪಗಳಿಗಿಂತ ಧಾರ್ಮಿಕ ಮೂರ್ತಿಶಿಲ್ಪಗಳೇ ಹೆಚ್ಚು ಕಂಡುಬರುವ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಇವು ಆಯಾ ಕಾಲದ ಧರ್ಮ ಮತ್ತು ಅದರ ಬೆಳವಣಿಗೆಯನ್ನು ತಿಳಿಸಿಕೊಡುತ್ತವೆ. ನಮ್ಮ ಭಾರತದಲ್ಲಿ ಕಂಡುಬರುವ ಎರಡು ಪ್ರಮುಖ ಧರ್ಮಗಳೆಂದರೆ ಶೈವ, ವೈಷ್ಣವ ಪ್ರಾಚೀನ ಕಾಲದಿಂದಲೂ ಒಂದಕ್ಕೊಂದು ಸ್ಪರ್ಧಿಸುತ್ತ ಬಂದ ಈ ಎರಡೂ ಧರ್ಮಗಳು ತಮ್ಮ ತಮ್ಮ ಮೂರ್ತಿಶಿಲ್ಪಗಳ ಪ್ರತಿಮಾ ಲಕ್ಷಣಗಳಲ್ಲಿ ಬದಲಾವಣೆಗಳನ್ನು ಕಂಡುಕೊಳ್ಳುತ್ತ ಸಾಗಿದವು. ಧರ್ಮ ಸಮನ್ವಯತೆಯನ್ನು ತೋರಲು ಹುಟ್ಟಿಕೊಂಡ ರೂಪವೇ ಹರಿಹರ ಶಿಲ್ಪ. ಹರಿಹರನ ಬಗ್ಗೆ ಮೊದಲ ಉಲ್ಲೇಖ ಬರುವುದೇ ಹರಿವಂಶದಲ್ಲಿ, ನಂತರದ ಉಲ್ಲೇಖಗಳು ಮತ್ಸ್ಯ, ಕೂರ್ಮ ಮತ್ತು ಸ್ಕಂದ ಪುರಾಣದಲ್ಲಿ ದೊರೆಯುತ್ತವೆ. ಪ್ರಾಚೀನ ಹರಿಹರ ಶಿಲ್ಪವನ್ನು ಬಾದಾಮಿಯ ಮೊದಲ ಗುಹಾಂತರ ದೇವಾಲಯದಲ್ಲಿ ಕಾಣಬಹುದು.[1]

ಬಾದಾಮಿ ಚಾಲುಕ್ಯರ ನಂತರ ಹೊಯ್ಸಳ ಹಾಗೂ ವಿಜಯನಗರ ಕಾಲದಲ್ಲಿ ಇಂಥ ಶಿಲ್ಪಗಳನ್ನು ಕಾಣಬಹುದು. ಪ್ರಸ್ತುತ ಲೇಖನವು ವಿಜಯನಗರದ ಹಂಪಿಯಲ್ಲಿ ದೊರೆತ ವಿಶಿಷ್ಟ ಹರಿಹರ ಶಿಲ್ಪದ ಕುರಿತದ್ದಾಗಿದೆ.

ಹಂಪಿಯು ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದು, ಶಾಸನಗಳಲ್ಲಿ ವಿಜಯನಗರ ಪಟ್ಟಣ, ವಿದ್ಯಾನಗರ, ಪಂಪಾಕ್ಷೇತ್ರ, ಭಾಸ್ಕರ ಕ್ಷೇತ್ರ, ವಿರೂಪಾಕ್ಷಪುರ ಮುಂತಾದ ಹೆಸರುಗಳಿಂದ ಕರೆಯಲ್ಪಟ್ಟಿದೆ. ಹಂಪಿಯು ಕಲೆ ಮತ್ತು ವಆಸ್ತುಶಿಲ್ಪಕ್ಕೆ ವಿಶ್ವಪ್ರಸಿದ್ಧಿ ಪಡೆದ ಪ್ರವಾಸಿ ಸ್ಥಳ. ಇಲ್ಲಿಯೂ ಶೈವ, ವೈಷ್ಣವ ಮತ್ತು ಜೈನ ಧರ್ಮೀಯರು ನೆಲೆಸಿದ್ದುದನ್ನು ಶಾಸನಗಳು ಮತ್ತು ದೇವಾಲಯ ರಚನೆಗಳು ದೃಢಪಡಿಸಿವೆ. ಅದರಲ್ಲೂ ಶೈವ ಮತ್ತು ವೈಷ್ಣವ ಪಂಥಗಳು ಪರಾಕಾಷ್ಠೆಯ ಸ್ಥಿತಿಯಲ್ಲಿದ್ದವು. ಆದರೂ ಸಂಘರ್ಷಗಳಿಂದ ಮುಕ್ತವಾಗಿರಲಿಲ್ಲ. ಇದಕ್ಕೆ ಕೃಷ್ಣದೇವರಾಯನ ಕಾಲದ ಎರಡು ಶಾಸನಗಳು[2] ಪುರಾವೆಯನ್ನು ಒದಗಿಸುತ್ತವೆ.

ತಮಿಳುನಾಡಿನ ನಾಗಲಾಪುರಂನಲ್ಲಿ ದೊರೆತ ಈ ಎರಡು ಶಾಸನಗಳು ಶೈವ ಮತ್ತು ವೈಷ್ಣವರ ಸಂಘರ್ಷವನ್ನು ತಿಳಿಸುತ್ತವೆ. ಕೃಷ್ಣದೇವರಾಯ ಮತ್ತು ವಿರುಪಣ್ಣಯ್ಯರು ನಾಗಲಾದೇವಿಯ ಅರಮನೆಪುರದಲ್ಲಿ ವೇದಗಿರಿ ಪೆರುಮಾಳ

ದೇವಾಲಯಕ್ಕೆ ದಾನ ನೀಡಿದ ಎಲ್ಲೆ ಕಲ್ಲುಗಳನ್ನು ಸ್ಥಳೀಯರು ಅಥವಾ ಶೈವ ಧರ್ಮೀಯರು ಅಡ್ಡಪಡಿಸಿ ಕಿತ್ತುಹಾಕುತ್ತಾರೆ. ಇವರಿಗೆ ದಂಡ ಹಾಕಿದ ಹಣ ಮತ್ತು ಅರಸನು ಈ ಹಿಂದೆ ನೀಡಿದ್ದ ಕಟ್ಟಳೆಯನ್ನು ಪುನಃ ವಿಧಿಸಿ ದೇವಾಲಯದ ಪೂಜೆ ಪುನಸ್ಕಾರಗಳು ಸಾಂಗವಾಗಿ ನಡೆಸಬೇಕೆಂದು ಮರುದಾನ ನೀಡಿರುವ ವಿಷಯವನ್ನು ಶಾಸನವು ತಿಳಿಸುತ್ತದೆ.

ಕೃಷ್ಣದೇವರಾಯನ ಕಾಲದಲ್ಲಿ ನಡೆದ ಶೈವ–ವೈಷ್ಣವರ ಇಂಥ ಸಂಘರ್ಷಗಳನ್ನು ಪರಿಹರಿಸಲು ಹಾಗೂ ಪ್ರಜೆಗಳಲ್ಲಿ ಧರ್ಮ ಸಮನ್ವಯತೆಯನ್ನು ಮೂಡಿಸಲು ಬಹುಶಃ ಈ ಕೆಳಗೆ ವಿವರಿಸಲ್ಪಟ್ಟ ವಿಶಿಷ್ಟ ಹರಿಹರ ಶಿಲ್ಪಗಳನ್ನು ಕೆತ್ತಿರಬಹುದು. ಈ ಹರಿಹರ ಶಿಲ್ಪವು ಹಂಪಿಯ ರಂಗದೇವಾಲಯದ ಎದುರು ಅನತಿ ದೂರದಲ್ಲಿರುವ ಒಂದು ಮಂಟಪದ ಕಂಬದಲ್ಲಿದೆ. ಈ ಮಂಟಪದ ಎಂಟು ಕಂಬಗಳು ಸುಸ್ಥಿತಿಯಲ್ಲಿದ್ದು ಸುಂದರ ಶಿಲ್ಪಗಳ ಕೆತ್ತನೆಯಿಂದ ಕೂಡಿವೆ. ಪೂರ್ವ ದಿಕ್ಕಿನಿಂದ ಎರಡನೇ ಕಂಬದ ಪಶ್ಚಿಮ ಮುಖದ ಕೆಳಭಾಗದಲ್ಲಿ ಈ ವಿಭಿನ್ನ ಹರಿಹರ ಶಿಲ್ಪವನ್ನು ಕೆತ್ತಲಾಗಿದೆ. ಈ ಶಿಲ್ಪದ ಪ್ರತಿಮಾ ಲಕ್ಷಣಗಳೆಂದರೆ, ಈ ಶಿಲ್ಪವು ಸಮಭಂಗಿಯಲ್ಲಿ ನಿಂತಿದ್ದು, ಕಿರೀಟಮುಕುಟ ಧರಿಸಿದೆ. ಚತುರ್ಭುಜಗಳನ್ನು ಹೊಂದಿದ ಇದರ ಬಲಭಾಗದ ಕೆಳಗಿನ ಕೈಯು ವರದಹಸ್ತದಲ್ಲಿದ್ದು, ಮೇಲಿನ ಕೈಯಲ್ಲಿ ಎರಡು ಬೆರಳುಗಳ ಮಧ್ಯೆ ತ್ರಿಶೂಲವನ್ನು ಹಿಡಿದಿರುವಂತೆ ಹಾಗೂ ಎಡಭಾಗದಲ್ಲಿನ ಕೆಳ ಕೈಯು ಕಟ್ಯವಲಂಬಿತ ಹಸ್ತದಲ್ಲಿದ್ದು ಮೇಲಿನ ಕೈಯಲ್ಲಿ ಎರಡು ಬೆರಳುಗಳ ಮಧ್ಯೆ ಡಮರುವನ್ನು ಹಿಡಿದಂತೆ ಕಂಡರಿಸಲಾಗಿದೆ. ಕರ್ಣದಲ್ಲಿ ಕುಂಡಲಗಳು, ಕಂಠದಲ್ಲಿ ಹಾರಗಳು, ಎದೆಯ ಭಾಗದಲ್ಲಿ ಚನ್ನವೀರ ಹಾಗೂ ಉದ್ದನೆಯ ವನಮಾಲಾ ಮತ್ತು ಧೋತಿಯನ್ನು ಧರಿಸಿದಂತೆ ಕೆತ್ತಲಾಗಿದೆ.

ಶಿಲ್ಪದ ಕೆತ್ತನೆಯ ಶೈಲಿಯನ್ನು ಗಮನಿಸಿದರೆ ಇದು ಬಹುಶಃ 15 ಅಥವಾ 16ನೇ ಶತಮಾನದಲ್ಲಿ ಕೆತ್ತಿರಬಹುದಾದ ಶಿಲ್ಪ ಎಂದು ಹೇಳಬಹುದು. ಕೈಯಲ್ಲಿ ಹಿಡಿದಿರುವ ಆಯುಧಗಳನ್ನು ನೋಡಿದಾಕ್ಷಣ ಇದೊಂದು ಶಿವನ ಶಿಲ್ಪ ಎಂದೆನಿಸುತ್ತದೆ. ಆದರೆ ಸೂಕ್ಷ್ಮವಾಗಿ ಗಮನಿಸಿದರೆ ಶಿಲ್ಪದ ವಿಶೇಷತೆ ಗೋಚರಿಸುತ್ತದೆ. ವಿಶೇಷತೆ ಎಂದರೆ ವಿಷ್ಣುವಿನ ರೂಪಗಳಲ್ಲಿ ಒಂದಾದ ವೆಂಕಟೇಶನ ರೂಪಕ್ಕೆ ಶಿವನ ಆಯುಧಗಳನ್ನು ತೋರಿಸುವುದು. ಆದರೆ ಈ ಆಯುಧಗಳನ್ನು ಹೊರತುಪಡಿಸಿ ಶಿಲ್ಪವನ್ನು ಗಮನಿಸಿದರೆ ಇದು ವೆಂಕಟೇಶನ ಶಿಲ್ಪ ಎಂದು ಹೇಳಬಹುದು. ವೆಂಕಟೇಶನ ಮುಖ್ಯ ಲಕ್ಷಣಗಳಾದ ಕಿರೀಟಮುಕುಟ, ಆಭರ್ಣಗಳು, ಚನ್ನವೀರ, ವರದ ಹಸ್ತ ಮತ್ತು ಕಟ್ಯವಲಂಬಿತ ಹಸ್ತ. ಉದ್ದನೆಯ ವನಮಾಲಾ ಮತ್ತು ಧೋತಿ ಇವೆಲ್ಲವುಗಳನ್ನು ಈ ಶಿಲ್ಪದಲ್ಲಿ ಕಾಣಬಹುದು.

ಆದರೆ ಮೇಲಿನ ಎಲ್ಲ ಅಂಶಗಳನ್ನು ಒಟ್ಟಾರೆಯಾಗಿ ಗಮನಿಸಿದಾಗ ಇದೊಂದು ವಿಶಿಷ್ಟ ಹರಿಹರ ಶಿಲ್ಪ ಎಂದು ತಿಳಿಯುತ್ತದೆ. ಈ ಶಿಲ್ಪದಲ್ಲಿ ಮುಂದಿನ ಭಾಗವನ್ನು ವೆಂಕಟೇಶನ ರೂಪವನ್ನು ಹಾಗೂ ಹಿಂದಿನ ಭಾಗದಲ್ಲಿ ಶಿವ ರೂಪವನ್ನು ತೋರಿಸಿದ್ದಾರೆ. ಈ ಶಿಲ್ಪವನ್ನು ಮಧ್ಯದಲ್ಲಿ ವಿಭಾಗಿಸಿ ನೋಡಿದಾಗ ಹರಿಹರ ಶಿಲ್ಪ ಗೋಚರಿಸುತ್ತದೆ. ಇದೇ ಈ ಶಿಲ್ಪದ ವಿಶೇಷತೆ ಎನ್ನಬಹುದು. ಏಕೆಂದರೆ ಸಾಮಾನ್ಯವಾಗಿ ಹರಿಹರ ಶಿಲ್ಪವನ್ನು ದೇಹದ ಅರ್ಧಭಾಗ ಹರಿಯ ರೂಪ ಇನ್ನರ್ಧ ಭಾಗವನ್ನು ಹರನ ರೂಪದಲ್ಲಿ ತೋರಿಸಲಾಗುತ್ತದೆ. ಹೀಗೆ ಹಿಂದೆಮುಂದೆ ಹರಿಹರರನ್ನು ಕಂಡರಿಸಿರುವುದು ತುಂಬಾ ವಿರಳ. ಆದ್ದರಿಂದ ಹಂಪಿಯಲ್ಲಿ ದೊರೆತ ಈ ಶಿಲ್ಪ ಅಪರೂಪದ್ದೆಂದು ಹೇಳಬಹುದು. ಇಲ್ಲಿ ಇನ್ನೊಂದು ಗಮನಿಸಬಹುದಾದ ಅಂಶವೆಂದರೆ ವಿಷ್ಣುವಿನ ಪ್ರಾಧಾನ್ಯತೆಯನ್ನು ತೋರಿಸಿರುವುದು. ಮೇಲೆ ಹೇಳಿದ ವಿವರಣೆಗಳಿಂದ ಶಿವನ ಲಕ್ಷಣಗಳಿಗಿಂತ ವಿಷ್ಣುವಿನ ಲಕ್ಷಣಗಳು ಹೆಚ್ಚು ಇರುವುದು ತಿಳಿಯುತ್ತದೆ. ಇದಕ್ಕೆ ರಂಗ ದೇವಾಲಯವು ಈ ಶಿಲ್ಪವಿರುವ ಮಂಟಪಕ್ಕೆ ಸಮೀಪವಿರುವುದೇ ಕಾರಣವಾಗಿರಬಹುದು. ಅದೇನೇ ಕಾರಣಗಳಿದ್ದರೂ ಹಂಪಿ ಪರಿಸರದಲ್ಲಿ ದೊರೆತ ಈ ಶಿಲ್ಪವು ವಿಶಿಷ್ಟ ಮತ್ತು ಅಪರೂಪದ್ದೆಂದು ಹೇಳಬಹುದು.

ಅಡಿ ಟಿಪ್ಪಣಿಗಳು

1. ಸುರೇಶ ಕೆ.ಎಂ., "ಹಂಪಿಯ ಪರಿಸರದಲ್ಲಿ ಹರಿಹರ ಶಿಲ್ಪಗಳು ಹಾಗೂ ದೇವಾಲಯ", *ವಿಜಯನಗರ ಅಧ್ಯಯನ*, ಸಂಪುಟ 11, ಪು. 199.
2. ಪರಮಶಿವಮೂರ್ತಿ ಡಿ.ವಿ. (ಸಂ.), *ಕೃಷ್ಣದೇವರಾಯನ ಶಾಸನಗಳು*, ಸಂ. 1, ಶಾ.ಸಂ. 358, 1359, ಪು. 678–681.



ಹರಿಹರ ಶಿಲ್ಪ, ಹಂಪಿ

ಕಾಲದ ನೀರ್ಥಡಿ ರಂಗನಾಥ ದೇವಾಲಯದ ಮೂರ್ತಿಶಿಲ್ಪಗಳು

ಡಾ. ಶಕುಂತಲ ಎನ್.

ಪ್ರಾಗೈತಿಹಾಸಿಕ ಕಾಲದಿಂದ ಆಧುನಿಕ ಕಾಲದವರೆಗೂ ತನ್ನದೇ ಆದ ಭೌಗೋಳಿಕ ಹಾಗೂ ಚಾರಿತ್ರಿಕ ಮಹತ್ವವನ್ನು ಹೊಂದಿರುವ ಚಿತ್ರದುರ್ಗ ಜಿಲ್ಲೆಯಲ್ಲಿ ಮೌರ್ಯರಿಂದ ಹಿಡಿದು ಮೈಸೂರು ಒಡೆಯರ ಕಾಲದವರೆಗೆ ಅನೇಕ ರಾಜಮನೆತನಗಳು ಆಳ್ವಿಕೆ ನಡೆಸಿ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಅಂತಹವರಲ್ಲಿ ಕ್ರಿ.ಶ. 1336ರಿಂದ 1565ರವರೆಗೆ ಸುದೀರ್ಘವಾಗಿ ಆಳ್ವಿಕೆ ನಡೆಸಿದ ಕರ್ನಾಟಕದ ಹೆಸರಾಂತ ಮನೆತನವಾದ ವಿಜಯನಗರದ ಅರಸರು ಪ್ರಾರಂಭದಿಂದಲೇ ಜಿಲ್ಲೆಯ ಮೇಲೆ ವಿಶೇಷ ಆಸಕ್ತಿ ಹೊಂದಿ, ಅಲ್ಲಿ ರಾಜಕೀಯ ಅಧಿಕಾರವನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದ್ದರು. ಪರಿಣಾಮವಾಗಿ ಚಿತ್ರದುರ್ಗ ಜಿಲ್ಲೆಯನ್ನು ತಮ್ಮ ಸಾಮ್ರಾಜ್ಯದ ಭಾಗವನ್ನಾಗಿಸಿಕೊಂಡು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಆಳ್ವಿಕೆ ನಡೆಸಿದರು. ಕ್ರಿ.ಶ. 1356ರಿಂದ ಅಳಿಯ ರಾಮರಾಯನ ಕಾಲದವರೆಗಿನ ಅನೇಕ ಶಾಸನಗಳು ಜಿಲ್ಲೆಯಲ್ಲಿ ದೊರೆತಿದ್ದು, ಅವುಗಳಲ್ಲಿ ಸುಮಾರು 50 ಶಾಸನಗಳು ದೇವಾಲಯಗಳಿಗೆ ಸಂಬಂಧಿಸಿದವುಗಳಾಗಿವೆ.[1] ಇವು ದೇವಾಲಯಗಳ ನಿರ್ಮಾಣ, ಬಿಂಬ ಪ್ರತಿಷ್ಠಾಪನೆ, ವಿಸ್ತರಣೆ, ಜೀರ್ಣೋದ್ಧಾರ, ದೇವಾಲಯಕ್ಕೆ ನೀಡಿದ ದಾನ-ದತ್ತಿ ಮುಂತಾದವುಗಳ ಬಗ್ಗೆ ತಿಳಿಸುತ್ತವೆ. ಇವರ ಕಾಲದಲ್ಲಿ ಜಿಲ್ಲೆಯಲ್ಲಿ ಕೆಲವು ದೇವಾಲಯಗಳು ನಿರ್ಮಾಣವಾಗಿದ್ದರೆ, ಮತ್ತೆ ಕೆಲವು ದುರಸ್ತಿಗೊಂಡವು ಹಾಗೂ ಅನೇಕ ಭಾಗಗಳು ವಿಸ್ತರಣೆಗೊಂಡವು.[2]

ಚಿತ್ರದುರ್ಗದ ಪ್ರದೇಶದಲ್ಲಿ ವಿಜಯನಗರ ಕಾಲದ ವಾಸ್ತು ಮತ್ತು ಶಿಲ್ಪಕಲೆಯನ್ನು ಬಿಂಬಿಸುವ ಅನೇಕ ದೇವಾಲಯಗಳಲ್ಲಿ ನೀರ್ಥಡಿಯ ಶ್ರೀರಂಗನಾಥಸ್ವಾಮಿ ದೇವಾಲಯ ಮುಖ್ಯವಾದುದು. ಚಿತ್ರದುರ್ಗ-ದಾವಣಗೆರೆ ನಡುವಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಭರಮಸಾಗರದ ಹತ್ತಿರದ ಲಕ್ಕೇಮತ್ತೇನಹಳ್ಳಿ ಕ್ರಾಸಿನಿಂದ 2 ಕಿ.ಮೀ. ದೂರದಲ್ಲಿರುವ ನೀರ್ಥಡಿ ಗ್ರಾಮವು ಬಹು ಪ್ರಾಚೀನ ಕಾಲದಿಂದಲೂ ಒಂದು ಪವಿತ್ರ ಧಾರ್ಮಿಕ ಕೇಂದ್ರವಾಗಿತ್ತು. ಬೆಟ್ಟದ ತಪ್ಪಲಿನ ಪ್ರದೇಶದಲ್ಲಿರುವ ಈ ಗ್ರಾಮವನ್ನು ಹಾಗೂ ಅಹೋಬಲನರಸಿಂಹಸ್ವಾಮಿ ದೇವಾಲಯವನ್ನು ವಿಜಯನಗರದಿಂದ ವಲಸೆ ಬಂದ ವಿರೂಪಾಕ್ಷ ಜೋಯಿಸರು ಚಿತ್ರದುರ್ಗ ಪಾಳೆಯಗಾರರ ಮೂಲಪುರುಷನಾದ ಚಿತ್ರನಾಯಕರೊಂದಿಗೆ ಸೇರಿ ಕ್ರಿ.ಶ. 16ನೆಯ ಶತಮಾನದಲ್ಲಿ ನಿರ್ಮಿಸಿದನೆಂದು ಹೇಳಲಾಗುತ್ತದೆ.[3] ನಂತರ ಈ ದೇವಾಲಯದಲ್ಲಿ ಸಾಲಿಗ್ರಾಮ ಪ್ರತಿಷ್ಠಾಪನಾ ಸಮಯದಲ್ಲಿ ಶ್ರೀರಂಗನಾಥಸ್ವಾಮಿ ಉದ್ಭವವಾದಾಗ ಮತ್ತಿತಿಮ್ಮಣ್ಣನಾಯಕ ಶ್ರೀರಂಗನಾಥಸ್ವಾಮಿಯ

ಮೂರ್ತಿಯನ್ನು ಪ್ರತಿಷ್ಠಾಪಿಸಿದನೆಂದು ತಿಳಿದುಬರುತ್ತದೆ.[4] ಆದರೆ ಕ್ರಿ.ಶ. 1634ರಲ್ಲಿ ದಿಲಾವರ್‌ಖಾನನ ದಂಡು ಈ ದೇವಾಲಯವನ್ನು ಹಾಗೂ ದೇವರ ವಿಗ್ರಹವನ್ನು ಧ್ವಂಸಮಾಡಿತೆಂದು, ಆಗ ಬಿಚ್ಚುಗತ್ತಿ ಭರಮಣ್ಣನಾಯಕ ತುರುಕರೊಂದಿಗೆ ಸಂಧಾನ ಮಾಡಿಕೊಂಡು ಕ್ರಿ.ಶ. 1698ರಲ್ಲಿ ದೇವಾಲಯವನ್ನು ಮತ್ತೆ ದುರಸ್ತಿಗೊಳಿಸಿ ದೇವರನ್ನು ಪುನರ್‌ಪ್ರತಿಷ್ಠಾಪಿಸಿ ಎಮ್ಮೆಹಟ್ಟಿ ಗ್ರಾಮವನ್ನು ಉಂಬಳಿ ನೀಡಿ ಶಾಸನ ಹಾಕಿಸಿದನು.[5]

ಶಿಲ್ಪಗಳು: 'ಶಿಲ್ಪ' ಎನ್ನುವ ಪದವು 'ಮೂರ್ತಿಶಿಲ್ಪ' ಎಂಬ ಅರ್ಥದಲ್ಲಿ ರೂಢಿಗತವಾಗಿದ್ದರೂ, ಅದಕ್ಕೆ ತನ್ನದೇ ಆದ ಖಚಿತಾರ್ಥವಿದೆ. ಅಮರಸಿಂಹನ ಅಮರಕೋಶದಲ್ಲಿ 'ಶಿಲ್ಪಕರ್ಮ ಕಲಾಧಿಕಂ' ಅಂದರೆ ಕರ್ತೃವಿನ ಅಧಿಕ ಕೌಶಲ್ಯಗಳನ್ನೊಳಗೊಂಡ ಕರ್ಮ ಅಥವಾ ಕ್ರಿಯೆಗೆ 'ಶಿಲ್ಪ'ವೆಂದು ಕರೆಯಲಾಗಿದ್ದು, ಇದು ತಾಂತ್ರಿಕ ಪರಿಣಿತಿಯನ್ನು ಅಪೇಕ್ಷಿಸುತ್ತದೆಂಬ ವಿವರಣೆಯಿದೆ.[6] ಆದರೆ ಫಣೀಂದ್ರನಾಥಬೋಸರವರು 'ಶಿಲ್ಪಶಾಸ್ತ್ರ'ವೆಂಬ ಪದವನ್ನು 'ವಾಸ್ತು' ಹಾಗೂ 'ಪ್ರತಿಮಾಶಾಸ್ತ್ರ' ಅಥವಾ 'ಮೂರ್ತಿಶಾಸ್ತ್ರ' ಎರಡರನ್ನೊಳಗೊಂಡಂತೆ ವಿವರಿಸಿದ್ದಾರೆ. ಹಾಗಾಗಿ 'ಶಿಲ್ಪ' ಎಂಬ ಪದವನ್ನು ವಾಸ್ತುಶಿಲ್ಪ ಹಾಗೂ ಮೂರ್ತಿಶಿಲ್ಪಕ್ಕೂ ಬಳಸಲಾಗುತ್ತದೆ.

ವಿಜಯನಗರ ಅಥವಾ ಹಂಪಿಯ ದೇವಾಲಯಗಳೆಂದಾಕ್ಷಣ ನಮ್ಮ ಕಲ್ಪನೆಗೆ ಬರುವುದು ಎತ್ತರವಾದ ಪ್ರವೇಶಮಹಾದ್ವಾರ, ಪ್ರಾಕಾರಗೋಡೆ, ವಿಶಾಲವಾದ ಪ್ರಾಂಗಣ, ಪ್ರಾಕಾರಮಂಟಪಗಳು, ಬೃಹತ್ ದೇವಾಲಯ ಮುಂತಾದವು. ಹಾಗೆಯೇ ನೀರ್ಥಡಿ ರಂಗನಾಥಸ್ವಾಮಿ ದೇವಾಲಯವು ಕಲೆ ಮತ್ತು ವಾಸ್ತುಶಿಲ್ಪದ ದೃಷ್ಟಿಯಿಂದ ಅತ್ಯಂತ ಭವ್ಯ ಹಾಗೂ ಕಲಾತ್ಮಕವಾಗಿದ್ದು, ಹಂಪಿಯ ದೇವಾಲಯಗಳಂತೆ ಬಹುತೇಕ ವಾಸ್ತುಭಾಗಗಳನ್ನು ಹೊಂದಿದೆ. ಆದರೆ ಮೇಲ್ನೋಟಕ್ಕೆ ಹಂಪಿಯ ದೇವಾಲಯಗಳಂತೆ ಕಂಡುಬಂದರೂ, ಅವುಗಳನ್ನು ವಿಶಾಲತೆ ಹಾಗೂ ವೈಭವಯುತವಾಗಿಲ್ಲ. ಬಹುಶಃ ತಮ್ಮ ಅಧೀನ ಸಾಮಂತರು ದೊರೆಗಳ ಒತ್ತಾಸೆಯಿಂದ ತಮ್ಮ ಆರ್ಥಿಕ ಇತಿಮಿತಿಗೆ ಅನುಗುಣವಾಗಿ ದೊರೆಗಳ ಕಲಾಶೈಲಿಯನ್ನು ಅನುಕರಣೆ ಮಾಡಿ ಸ್ಥಳೀಯ ಶಿಲ್ಪಿಗಳಿಂದ ನಿರ್ಮಿಸಿದ್ದಾರೆಂದು ತಿಳಿಯಬಹುದಾಗಿದೆ. ದೇವಾಲಯವು ಪ್ರಮುಖವಾಗಿ ಗರ್ಭಗೃಹ, ಅಂತರಾಳ, ಅರ್ಧಮಂಟಪ, ಸಭಾಮಂಟಪ, ಮುಖಮಂಟಪ, ಪ್ರಾಕಾರ, ಪ್ರವೇಶ ಮಹಾದ್ವಾರ ಮಂಟಪ, ದೀಪಸ್ತಂಭಗಳನ್ನು ಹೊಂದಿದೆ. ದೇವಾಲಯದಲ್ಲಿ ಅನೇಕ ಸುಂದರವಾದ ಶಿಲ್ಪಗಳಿವೆ. ಮೂರ್ತಿಶಿಲ್ಪಗಳಲ್ಲಿ ಸಾಮಾನ್ಯವಾಗಿ ಉಬ್ಬುಶಿಲ್ಪಗಳು, ಬಿಡಿಶಿಲ್ಪಗಳು, ಗಾರೆಶಿಲ್ಪಗಳು, ಲೋಹಶಿಲ್ಪಗಳು ಹಾಗೂ ಕಾಷ್ಠಶಿಲ್ಪಗಳನ್ನು ಕಾಣಬಹುದು. ಆದರೆ, ಈ ದೇವಾಲಯದಲ್ಲಿ ಉಬ್ಬುಶಿಲ್ಪಗಳು ಮತ್ತು ಬಿಡಿಶಿಲ್ಪಗಳು ಕಂಡುಬರುತ್ತವೆ. ಅವುಗಳಲ್ಲಿ ಅಧಿಷ್ಠಾನ, ಭಿತ್ತಿ, ಶಿಖರ ಹಾಗೂ ಕಂಬಗಳ ಮೇಲೆ ಉಬ್ಬುಶಿಲ್ಪಗಳಿದ್ದರೆ, ಗರ್ಭಗೃಹ, ಅರ್ಧಮಂಟಪದ ಉತ್ತರ ಮತ್ತು ದಕ್ಷಿಣ ದಿಕ್ಕುಗಳ ಕೊಠಡಿಗಳಲ್ಲಿ ಬಿಡಿಶಿಲ್ಪಗಳನ್ನು ಕಾಣಬಹುದು. ಉಬ್ಬುಶಿಲ್ಪಗಳಲ್ಲಿ ಅಲೌಕಿಕ ಅಥವಾ ಧಾರ್ಮಿಕ ಶಿಲ್ಪಗಳು ಹೆಚ್ಚಾಗಿದ್ದು, ಅಪರೂಪವಾಗಿ ನೃತ್ಯಗಾತಿಯರ, ಸಂಗೀತಗಾರರ, ವಾದ್ಯಗಾರರ, ಮಿಥುನಶಿಲ್ಪಗಳ, ಜಟ್ಟಿಗಳು, ಬೇಟೆಗಾರರ ಮುಂತಾದ ಲೌಕಿಕ ಶಿಲ್ಪಗಳು ಕಂಡುಬರುತ್ತವೆ. ಅದರಲ್ಲೂ ಅಲೌಕಿಕ ಶಿಲ್ಪಗಳಲ್ಲಿ ವೈಷ್ಣವ ಶಿಲ್ಪಗಳೇ ಹೆಚ್ಚಾಗಿದ್ದು, ಅಪರೂಪವಾಗಿ ಬೇಡರಕಣ್ಣಪ್ಪ, ಭೈರವ, ಲಿಂಗಕ್ಕೆ ಹಾಲೆರೆಯುತ್ತಿರುವ ಹಸುಗಳಂತಹ ಶೈವಪಂಥದ ಶಿಲ್ಪಗಳು ಕಂಡುಬರುತ್ತವೆ. ಅವುಗಳನ್ನು ಈ ಕೆಳಕಂಡಂತೆ ಅಧ್ಯಯವ ಮಾಡಬಹುದಾಗಿದೆ.

ಗರ್ಭಗೃಹದ ಅಧಿಷ್ಠಾನವು ಹಂಪಿಯ ವಿಜಯವಿಠ್ಠಲ ದೇವಾಲಯದ ಅಧಿಷ್ಠಾನದಂತೆ ಶಿಷ್ಟ ಪ್ರಕಾರದಲ್ಲಿದ್ದು ಆಕರ್ಷಕವಾಗಿದೆ. ಜಗತಿ, ಉಪಾನ, ಪದ್ಮ, ಗಳ, ಹಾರ, ಕಂಠ, ಕುಮುದ ಹಾಗೂ ಪ್ರತಿಬಂಧಗಳಿಂದ ಕೂಡಿದ್ದು ತುಂಬಾ ವಿಶಿಷ್ಟವಾದ ಹಾಗೂ ಪರಿಪೂರ್ಣವಾದ ಅಧಿಷ್ಠಾನವಾಗಿದೆ. ಸಾಮಾನ್ಯವಾಗಿ ಹಂಪಿಯ ದೇವಾಲಯಗಳ ಅಧಿಷ್ಠಾನಗಳಲ್ಲಿ ಒಂದೆರಡು ಸಾಲುಗಳಲ್ಲಿ ಉಬ್ಬುಶಿಲ್ಪಗಳು ಕಂಡುಬಂದರೆ, ಇಲ್ಲಿನ ಅಧಿಷ್ಠಾನದ ಎಲ್ಲಾ ಭಾಗಗಳಲ್ಲಿ

ಉಬ್ಬುಶಿಲ್ಪಗಳನ್ನು ಕಡೆದಿರುವುದೇ ಒಂದು ವಿಶೇಷ. ಈ ಶಿಲ್ಪಗಳ ಪ್ರಮಾಣಬದ್ಧತೆ, ಅಂಗಾಂಗಗಳ ರಚನೆ ಪರಿಪೂರ್ಣವಾಗಿದ್ದು ಹಂಪಿಯ ಯಾವುದೇ ದೇವಾಲಯಗಳ ಅಧಿಷ್ಠಾನಗಳಿಗಿಂತ ಕಡಿಮೆಯಿಲ್ಲ. ಅಧಿಷ್ಠಾನದ ತೀರಾ ಕೆಳಗಿನ ಗಳಭಾಗದಲ್ಲಿ ಹೆಚ್ಚಾಗಿ ಆನೆಗಳ ವಿವಿಧ ಚಟುವಟಿಕೆಗಳಿಗೆ ಸಂಬಂಧಿಸಿದ ಉಬ್ಬುಶಿಲ್ಪಗಳಿವೆ. ಆನೆಗಳ ಸಾಲು, ಆನೆಗಳನ್ನು ಪಳಗಿಸುತ್ತಿರುವುದು, ಗಜಕಾಳಗ, ಆನೆಗಳನ್ನು ಬಂಧಿಸಿ ಕರೆದೊಯ್ಯುತ್ತಿರುವ ವ್ಯಕ್ತಿಗಳು, ವ್ಯಕ್ತಿಯೊಬ್ಬನ್ನು ವಧಿಸುತ್ತಿರುವ ಆನೆಗಳು, ಪರಸ್ಪರ ಹೋರಾಡುತ್ತಿರುವ ಸಿಂಹಗಳು, ಟಗರಿನ ಕಾಳಗದಂತಹ ಆಕರ್ಷಕವಾದ ಉಬ್ಬುಶಿಲ್ಪಗಳಿವೆ. ಎರಡನೆಯ ಗಳ ಭಾಗದಲ್ಲಿ ಅಶ್ವಕ್ಕೆ ಸಂಬಂಧಿಸಿದ ವಿವಿಧ ರೀತಿಯ ಚಟುವಟಿಕೆಯ ಉಬ್ಬುಶಿಲ್ಪಗಳಿದ್ದು, ಅವುಗಳಲ್ಲಿ ಅಶ್ವಗಳ ಸಾಲು ಹಾಗೂ ವಿಜಯವಿಠ್ಠಲ ದೇವಾಲಯದಲ್ಲಿರುವಂತೆ ಗಡ್ಡಧಾರಿಗಳಾದ ಅರಬ್‌ದೇಶದ ಅಶ್ವವ್ಯಾಪಾರಿಗಳ ಶಿಲ್ಪಗಳು ಗಮನಸೆಳೆಯುತ್ತವೆ. ಮೂರನೆಯ ಗಳಭಾಗದಲ್ಲಿ ಕೋಲಾಟದ ಸ್ತ್ರೀಯರ ಶಿಲ್ಪಗಳಿದ್ದು, ತಮ್ಮ ನೃತ್ಯಭಂಗಿಯ ಮೈಮಾಟ, ಕೇಶಾಲಂಕಾರ, ಆಭರಣ ಮತ್ತು ವಸ್ತ್ರವಿನ್ಯಾಸದಿಂದ ಎಲ್ಲರ ಗಮನ ಸೆಳೆಯುತ್ತವೆ. ಹಾಗೆಯೇ ಉಪಾನದ ತುದಿಯಲ್ಲಿ ಸಿಂಹ, ಕಪಿ, ಟಗರು, ಮನುಷ್ಯರ ವಿವಿಧ ಭಂಗಿಯ ವಿನೋದದ ಉಬ್ಬುಶಿಲ್ಪಗಳನ್ನು ಬಿಡಿಸಿರುವುದು ಇಲ್ಲಿನ ಅಧಿಷ್ಠಾನದ ವಿಶೇಷ ಎನ್ನಬಹುದು. ಇಲ್ಲಿ ಗಮನಿಸಬಹುದಾದ ಪ್ರಮುಖ ಅಂಶವೆಂದರೆ ಅಧಿಷ್ಠಾನದ ಮೇಲಿರುವ ಶಿಲ್ಪಗಳೆಲ್ಲ ಲೌಕಿಕಕ್ಕೆ ಸಂಬಂಧಿಸಿದ ಶಿಲ್ಪಗಳಾಗಿವೆ.

ಗರ್ಭಗೃಹದ ಹೊರಭಾಗದ ಭಿತ್ತಿಯು ಅತ್ಯಂತ ಆಕರ್ಷಕವಾಗಿದ್ದು ಅನೇಕ ರೀತಿಯ ಮನುಷ್ಯರ, ಪ್ರಾಣಿಗಳ, ಅಲಂಕೃತ ಆಕೃತಿಗಳ ಉಬ್ಬುಶಿಲ್ಪಗಳನ್ನು ಹೊಂದಿದೆ. ಇಲ್ಲಿರುವ ಶಿಲ್ಪಗಳಲ್ಲಿ ಕುದುರೆಗಳನ್ನು ಪಳಗಿಸುತ್ತಿರುವ, ಸವಾರರ ಹಾಗೂ ಸೈನಿಕರ ಸ್ಫುಟವಾದ ಉಬ್ಬುಶಿಲ್ಪಗಳು ಪ್ರಮಾಣಬದ್ಧ ರಚನೆಗಳಾಗಿದ್ದು, ಸೂಕ್ಷ್ಮ ಅಲಂಕರಣೆಗಳಿಂದ ಕೂಡಿವೆ. ಅಲ್ಲದೇ ಕುದುರೆಗಳ ಮತ್ತು ವ್ಯಕ್ತಿಗಳ ಶಿಲ್ಪಗಳು ವಿವಿಧ ಆಭರಣ ಮತ್ತು ವೈವಿಧ್ಯಮಯ ವೇಷಭೂಷಣಗಳಿಂದ ಅಲಂಕೃತಗೊಂಡಿವೆ. ಜನತೆ ನೃತ್ಯಗಾತಿಯರ, ಕೋಲಾಟದ ಸ್ತ್ರೀಯರ, ಮೃದಂಗವಾದ್ಯಗಾರರ, ಸಾಲುಮಂಟಪಗಳಲ್ಲಿ ಕುಳಿತಿರುವ ಯತಿಗಳ, ದಂಪತಿಗಳ ಹಾಗೂ ಪೌರಾಣಿಕ ಘಟನೆಗಳಿಗೆ ಸಂಬಂಧಿಸಿದ ವಿವಿಧ ಉಬ್ಬುಶಿಲ್ಪಗಳು ಅತ್ಯಂತ ಮನಮೋಹಕವಾಗಿದ್ದು, ವಿಜಯನಗರ ಕಾಲದ ಶಿಲ್ಪಗಳ ರಚನೆಯ ಸೂಕ್ಷ್ಮತೆಗೆ ಹಿಡಿದ ಕನ್ನಡಿಯಾಗಿವೆ. ಭಿತ್ತಿಯ ಮೇಲಿನ ಕಪೋತದ ತಳದ ಊರ್ಧ್ವಬಲಭಾಗದಲ್ಲಿ ಮೊಗ್ಗಿನ ಸಾಲುಗಳ ರಚನೆಯನ್ನು ಬಿಡಿಸಲಾಗಿದ್ದು ಕೈಪಿಡಿಯಲ್ಲಿ ಕೀರ್ತಿಮುಖವನ್ನು, ಅದರ ಬಾಯಿಂದ ಹೊರಟಿರುವ ಹಾರಗಳ ರಚನೆಯ ಉಬ್ಬುಶಿಲ್ಪಗಳನ್ನು ಕಾಣಬಹುದು. ಆದರೆ ಇಲ್ಲಿನ ಭಿತ್ತಿಯ ಮೇಲಿನ ಉಬ್ಬುಶಿಲ್ಪಗಳು ಶಿಷ್ಟಪ್ರಕಾರದಲ್ಲಿದ್ದರೂ, ಹೊಯ್ಸಳ ಮತ್ತು ಚಾಲುಕ್ಯರ ಕಾಲದ ದೇವಾಲಯಗಳ ಭಿತ್ತಿಗಳ ಮೇಲಿರುವಂತೆ ದೊಡ್ಡ ಪ್ರಮಾಣದಲ್ಲಿಲ್ಲ. ಬದಲಿಗೆ ಅಧಿಷ್ಠಾನಗಳಲ್ಲಿರುವ ಶಿಲ್ಪಪಟ್ಟಿಕೆಯಂತೆ ಕಪೋತದ ತಳಭಾಗದಲ್ಲಿ ಭಿತ್ತಿಯ ಮೇಲೆ ಸಾಲಾಗಿ ಒಂದು ಪಟ್ಟಿಕೆಯಲ್ಲಿವೆ. ಸಂಪೂರ್ಣವಾಗಿ ಶಿಲೆಯಿಂದಲೇ ನಿರ್ಮಾಣವಾಗಿರುವ ಶಿಖರವು ದ್ವಿತಲದಲ್ಲಿದೆ. ಪ್ರತಿ ತಲದಲ್ಲೂ ದೇವಕೋಷ್ಠಗಳಿದ್ದು, ಅವುಗಳಲ್ಲಿ ವಿಷ್ಣುವಿನ ಶಿಲ್ಪಗಳನ್ನು ಬಿಡಿಸಲಾಗಿದೆ.

ಭಿತ್ತಿಯ ನಂತರ ಉಬ್ಬುಶಿಲ್ಪಗಳು ಹೆಚ್ಚಿರುವ ವಾಸ್ತುಭಾಗವೆಂದರೆ ಕಂಬಗಳು, ದೇವಾಲಯಗಳಲ್ಲಿ ಛತ್ತುಗಳನ್ನು ಹೊತ್ತು ನಿಂತಿರುವ ಕಂಬಗಳು ಆಧಾರ ಭಾಗಗಳಾದರೂ ಅವುಗಳನ್ನು ಕಲಾತ್ಮಕಗೊಳಿಸಿ ಒಂದು ಪ್ರಮುಖ ವಾಸ್ತುಭಾಗಗಳನ್ನಾಗಿ ಬಿಂಬಿಸಿರುವ ಸಂಗತಿ ಎಲ್ಲಾ ಪ್ರಾಚೀನ ದೇವಾಲಯಗಳಿಂದ ವೇದ್ಯವಾಗುತ್ತದೆ. ವಿಜಯನಗರ ಕಾಲದ ಕಂಬಗಳ ವಿಶಿಷ್ಟ ಶೈಲಿಯಾದ ದ್ವಿಕಾಂಡ ಅಥವಾ ಸಂಯೋಗ ಸ್ತಂಭಗಳನ್ನು ಇಲ್ಲಿನ ದೇವಾಲಯದ ಸಭಾಮಂಟಪ ಹಾಗೂ ಮುಖಮಂಟಪಗಳಲ್ಲಿ ಕಾಣಬಹುದಾಗಿದೆ. ಇಂತಹ ಕಂಬಗಳು ಹಂಪಿಯ ವಿರೂಪಾಕ್ಷ,

ವಿಜಯವಿಠ್ಠಲ, ಬಾಲಕೃಷ್ಣ ಮುಂತಾದ ದೇವಾಲಯಗಳಲ್ಲಿ ಕಂಡುಬರುತ್ತವೆ. ರಂಗನಾಥಸ್ವಾಮಿ ದೇವಾಲಯದ ಸಭಾಮಂಟಪ ಮತ್ತು ಅದರ ಉತ್ತರ–ದಕ್ಷಿಣ ದಿಕ್ಕುಗಳ ಪ್ರವೇಶ ಮಂಟಪಗಳು, ಭಿತ್ತಿಯಲ್ಲಿನ ಅರ್ಧಗಂಬಗಳು, ಮುಖಮಂಟಪ ಹಾಗೂ ಮುಖಮಂಟಪದ ಮುಂದಿನ ಶಿಲಾತೋರಣದ ಕಂಬಗಳ ಮೇಲೆ ಅನೇಕ ಆಕರ್ಷಕವಾದ ಉಬ್ಬುಶಿಲ್ಪಗಳಿವೆ. ಈ ಶಿಲ್ಪಗಳು ಪ್ರಮುಖವಾಗಿ ಶೈಲಿಯ ದೃಷ್ಟಿಯಿಂದ ವಿಜಯನಗರದಂತೆ ಶಿಷ್ಟಪ್ರಕಾರದಲ್ಲಿ ಹಾಗೂ ಪಾಳೆಯಗಾರರ ಪ್ರಾದೇಶಿಕ ಶೈಲಿಗಳಲ್ಲಿವೆ. ವಿಷಯದಿಂದ ಧಾರ್ಮಿಕವಾಗಿ ಶೈವ, ವೈಷ್ಣವ, ಲೌಕಿಕವಾಗಿ ರಾಜ-ರಾಣಿಯರ, ವಾದ್ಯಗಾರರ, ಮಿಥುನಶಿಲ್ಪಗಳು ಸಿಂಹ, ಹಂಸ, ಕಪಿ, ಮುಂತಾದ ಪ್ರಾಣಿಗಳ ಉಬ್ಬುಶಿಲ್ಪಗಳು ಕಂಡುಬರುತ್ತವೆ. ಆದರೆ ಹಂಪಿಯ ದೇವಾಲಯಗಳ ಕಂಬಗಳಲ್ಲಿ ಕಂಡುಬರುವಂತೆ ಇಲ್ಲಿಯೂ ವೈಷ್ಣವ ಶಿಲ್ಪಗಳೆ ಹೆಚ್ಚಾಗಿದ್ದು, ತೀರಾ ವಿರಳವಾಗಿ ಶೈವ ಶಿಲ್ಪಗಳಿವೆ. ಲೇಖನದ ವ್ಯಾಪ್ತಿಯ ಪರಿಮಿತಿಯಿಂದ ಆ ಎಲ್ಲಾ ಶಿಲ್ಪಗಳ ಪಟ್ಟಿಯನ್ನು ನೀಡಲು ಸಾಧ್ಯವಿಲ್ಲ. ಹಾಗಾಗಿ ಪ್ರಮುಖವಾದ ಕೆಲವು ಶಿಲ್ಪಗಳ ವಿವರಣೆ ಮಾತ್ರ ನೀಡಲಾಗಿದೆ. ಅವುಗಳಲ್ಲಿ ವೇಣುಗೋಪಾಲ, ಲಕ್ಷ್ಮೀನರಸಿಂಹ, ಕಾಳಿಂಗಮರ್ದನಕೃಷ್ಣ, ಪೂತನಿಸಂಹಾರದ ಕೃಷ್ಣ, ವಿಷ್ಣು, ಹಾಗೂ ಗರುಡರ ಶಿಲ್ಪಗಳು ಪರಿಪೂರ್ಣ ಕೆತ್ತನೆ, ನೀಳತೆ ಮತ್ತು ಹೆಚ್ಚು ಕುಸುರಿಯ ಅಲಂಕರಣೆಯಿಂದ ಗಮನಸೆಳೆಯುತ್ತವೆ.

ಹಂಪಿಯ ದೇವಾಲಯಗಳಲ್ಲಿರುವಂತೆ ಕಾಳಿಂಗಮರ್ದನಕೃಷ್ಣನ ಶಿಲ್ಪದ ಒಂದು ಸಾಮಾನ್ಯ ರೂಪ ಪದೇ ಪದೇ ಕಂಡುಬರುತ್ತದೆ. ಆದರೆ ಇಲ್ಲಿ ಆ ರೂಪಕ್ಕಿಂತ ವಿಭಿನ್ನವಾದ ಶೈಲಿ ಮತ್ತು ಭಂಗಿಯಿಂದ ಅಪರೂಪದ್ದೆನಿಸುತ್ತದೆ. ನೀಳವಾದ ಕಿರೀಟಮುಕುಟ, ಮೈತುಂಬ ವಿವಿಧ ಆಭರಣಗಳು, ಹಾವನ್ನು ಹಿಡಿದ ಭಂಗಿ ಎಲ್ಲವೂ ಭಿನ್ನವಾಗಿವೆ. ಅದರಂತೆ ಒಂದು ರೀತಿಯಲ್ಲಿ ಸವ್ಯ–ಲಲಿತಾಸನದಲ್ಲಿ ಕುಳಿತಿರುವ ನರಸಿಂಹನ ಶಿಲ್ಪವು ವಿಭಿನ್ನವಾಗಿದ್ದು, ತ್ರಿಭಂಗಿಯಲ್ಲಿದೆ. ಮುಖ ಎಡಕ್ಕೆ ವಾಲಿದ್ದು, ತೊಡೆಯ ಮೇಲೆ ಲಕ್ಷ್ಮೀ ಆಸೀನಳಾಗಿದ್ದಾಳೆ. ಹಂಪಿಯ ಪ್ರಸಿದ್ಧ ಲಕ್ಷ್ಮೀನರಸಿಂಹನ ವಿಗ್ರಹ ಮತ್ತು ಅದೇ ರೀತಿಯ ಕಂಬಗಳ ಮೇಲಿನ ಶಿಲ್ಪಗಳ ರೂಪಕ್ಕಿಂತ ವಿಭಿನ್ನವೆನಿಸುತ್ತದೆ. ಹಾಗೆಯೆ ಪೂತನಿ ಸಂಹಾರದ ದೃಶ್ಯವೊಂದು ವಿಶೇಷವಾಗಿದ್ದು, ಪೂತನಿ ರಾಕ್ಷಸಿಯ ಸ್ತನ್ಯಪಾನ ಮಾಡಿದ ಬಾಲಕೃಷ್ಣ ಆಕೆಯ ಶಕ್ತಿಯನ್ನೆಲ್ಲಾ ಹೀರಿದಾಗ ಅಸ್ಥಿಪಂಜರದಂತೆ ತೋರುವ ಆಕೆಯ ಬಡಕಲು ದೇಹವನ್ನು ಸಮರ್ಪಕವಾಗಿ ತೋರಿಸಲಾಗಿದೆ.[8] ಅದೇ ರೀತಿ ಭೈರವ, ಬೇಡರಕಣ್ಣಪ್ಪನ ಶಿಲ್ಪಗಳು ಪರಿಪೂರ್ಣವಾಗಿದ್ದು, ಭೈರವನ ತಲೆಯ ಮೇಲೆ ಟೊಪ್ಪಿಗೆ ಮಾದರಿಯ ಕೇಶವಿನ್ಯಾಸವಿರುವುದು ಅಪರೂಪದ್ದೆನಿಸುತ್ತದೆ. ಬಹುಶಃ ಇದು ಪಾಳೆಯಗಾರರ ಪ್ರಾದೇಶಿಕ ಕಲ್ಪನೆಯ ಫಲವೆಂದು ತಿಳಿಯಬಹುದಾಗಿದೆ. ಭೈರವನ ಕೈಯಲ್ಲಿರುವ ರುಂಡದಿಂದ ಸುರಿಯುತ್ತಿರುವ ರಕ್ತವನ್ನು ಕುಡಿಯುತ್ತಿರುವ ನಾಯಿಯ ಭಂಗಿಯನ್ನು ವಿಭಿನ್ನವಾಗಿ ರೂಪಿಸಲಾಗಿದೆ.[9] ವಿಜಯನಗರ ಕಾಲದ ವೈಷ್ಣವ ದೇವಾಲಯಗಳಲ್ಲಿ ಹೆಚ್ಚಾಗಿ ಕಂಡುಬರುವ ಮತ್ತೊಂದು ಶಿಲ್ಪವೆಂದರೆ ರಾಮಾನುಜಾಚಾರ್ಯರದು. ದಂಡಿಯನ್ನು ಕಂಕುಳದಲ್ಲಿ ಹಿಡಿದು, ಅಂಜಲಿಬದ್ಧರಾಗಿರುವ ರಾಮಾನುಜಾಚಾರ್ಯರ ಶಿಲ್ಪವು ಈ ದೇವಾಲಯದ ಕಂಬದಲ್ಲಿದೆ. ಇವುಗಳ ಜತೆಗೆ ತಾಯಿ ಮಗುವನ್ನು ಎತ್ತಿಕೊಂಡಿರುವ, ಗಿಳಿಯೊಂದಿಗೆ ಮಾತನಾಡುತ್ತಿರುವ ಸ್ತ್ರೀ, ಗೋಪಿಕೆಯರ ವಸ್ತ್ರಾಪಹರಣ, ಬೆಣ್ಣೆ ಕದಿಯುತ್ತಿರುವ ಕೃಷ್ಣನನ್ನು ಹಿಡಿಯುವಾಗ ಲಂಗ ಜಾರಿ ಬಿದ್ದಿರುವ ಗೋಪಿಕೆ, ನೃತ್ಯಭಂಗಿಯ ಸ್ತ್ರೀ ತನ್ನ ಹಿಮ್ಮಡಿಯನ್ನು ಮುಟ್ಟುತ್ತಿರುವುದು (ಇದು ನಾಟ್ಯದಲ್ಲಿ ಯೋಗಭಂಗಿಯ ಸಂಯೋಗವನ್ನು ತೋರಿಸುತ್ತದೆ) ಮುಂತಾದವು ಮನಮೋಹಕವಾಗಿವೆ.

ಸಭಾಮಂಟಪದ ದಕ್ಷಿಣ ದಿಕ್ಕಿನ ಪ್ರವೇಶ ಮಂಟಪದ ಕಂಬದಲ್ಲಿರುವ ಗೋಪಾಲಕೃಷ್ಣನ ಶಿಲ್ಪವು ಅತ್ಯಂತ ಆಕರ್ಷಕವಾಗಿದ್ದು, ಅದರ ಬಲಬದಿಯಲ್ಲಿ ಹಸು, ಎಡಬದಿಯಲ್ಲಿ ಸಿಂಹಶಿಲ್ಪಗಳಿದ್ದು, ಕೊಳಲಿನ ಗಾನಕ್ಕೆ ನರ್ತಿಸುತ್ತಿರುವ

ಸಿಂಹ ಶಿಲ್ಪದ ದೃಶ್ಯ ಮನೋಜ್ಞವಾಗಿದೆ. ಹಾಗೆಯೇ ಉತ್ತರ ದಿಕ್ಕಿನ ಪ್ರವೇಶ ಮಂಟಪದ್ವಾರದ ಎಡ ಮತ್ತು ಬಲ ಭಿತ್ತಿಯ ಮೂಲೆಗಳಲ್ಲಿರುವ ಸ್ತ್ರೀಯರ ಮನಮೋಹಕ ಉಬ್ಬುಶಿಲ್ಪಗಳು ಲತಾ ಬಳ್ಳಿಗಳ ವೃಕ್ಷವನ್ನು ಹಿಡಿದು ನಿಂತಿವೆ. ಈ ಶಿಲ್ಪಗಳು ತ್ರಿಭಂಗಿಯಲ್ಲಿದ್ದು ಬಳುಕುವ ನೀಳವಾದ ಶರೀರವನ್ನು ಹೊಂದಿವೆ. ಇವುಗಳ ಕೇಶಾಲಂಕಾರ, ಆಭರಣ ಹಾಗೂ ವಸ್ತ್ರವಿನ್ಯಾಸವೂ ಅಮೋಘವಾಗಿದ್ದು, ಅವುಗಳ ಕುಚಭಾಗಗಳು ಎದ್ದು ಕಾಣುವಂತೆ ಕಡೆದಿರುವುದು ಈ ಶಿಲ್ಪಗಳ ವಿಶೇಷ. ಸಭಾಮಂಟಪ, ಅದರ ಉತ್ತರ–ದಕ್ಷಿಣ ದಿಕ್ಕುಗಳ ಪ್ರವೇಶ ಮಂಟಪಗಳ ಹಾಗೂ ಮುಖಮಂಟಪಗಳ ದ್ವಾರಗಳ ಇಕ್ಕೆಲಗಳಲ್ಲಿರುವ ವೈಷ್ಣವ ದ್ವಾರಪಾಲಕರುಗಳ ಉಬ್ಬುಶಿಲ್ಪಗಳು ತ್ರಿಭಂಗಿಯಲ್ಲಿದ್ದು ಕಿರೀಟಮುಕುಟವನ್ನು ಹೊಂದಿವೆ. ಸಾಮಾನ್ಯವಾಗಿ ಎಲ್ಲಾ ದ್ವಾರಪಾಲಕರುಗಳ ಶಿಲ್ಪಗಳು ಚತುರ್ಭುಜಗಳನ್ನು ಹೊಂದಿದ್ದರೆ, ಸಭಾಮಂಟಪದ ಉತ್ತರ ಬದಿಯ ಬಾಗಿಲ ಇಕ್ಕೆಲಗಳಲ್ಲಿರುವ ದ್ವಾರಪಾಲಕರುಗಳ ಉಬ್ಬುಶಿಲ್ಪಗಳು ದ್ವಿಬಾಹುಗಳನ್ನು ಹೊಂದಿರುವುದು ಕುತೂಹಲಕಾರಿಯಾಗಿದೆ. ಎಲ್ಲಾ ದ್ವಾರಬಂಧಗಳ ಲಲಾಟಬಿಂಬಗಳಲ್ಲಿರುವ ಗಜಲಕ್ಷ್ಮಿ ಶಿಲ್ಪಗಳು ಸಹ ಆಕರ್ಷಕವಾಗಿವೆ. ಆದರೆ ಅರ್ಧಮಂಟಪದ ಲಲಾಟ ಬಿಂಬದಲ್ಲಿ ಅಂಬೆಗಾಲುಕೃಷ್ಣನ ಉಬ್ಬುಶಿಲ್ಪವಿದೆ.

ಪ್ರಾಕಾರ ಗೋಡೆಯ ಭಿತ್ತಿಯ ಮೇಲೆ ಅಲ್ಲಲ್ಲಿ ಮೀನು, ಹಾವು, ಆನೆ, ಸೂರ್ಯ, ಚಂದ್ರ ಮುಂತಾದ ಉಬ್ಬುಶಿಲ್ಪಗಳು ಕಂಡುಬರುತ್ತವೆ. ಇದಾದ ನಂತರ ಉಬ್ಬುಶಿಲ್ಪಗಳು ಕಂಡುಬರುವ ಭಾಗವೆಂದರೆ ಪ್ರವೇಶ ಮಹಾದ್ವಾರದ ಮುಂಭಾಗದಲ್ಲಿ ದೇವಾಲಯದ ಎದುರಿಗೆ ಎತ್ತರವಾದ ಗರುಡಗಂಬವಿದ್ದು, ಶಾಸ್ತ್ರಗಳಲ್ಲಿ ಇದನ್ನು ದೀಪಸ್ತಂಭ ಎಂದು ಕರೆಯಲಾಗುತ್ತದೆ. ಕಾರ್ತೀಕ ದೀಪೋತ್ಸವದ ಸಂದರ್ಭದಲ್ಲಿ ಕುಂಭದೀಪವನ್ನು ಈ ಸ್ತಂಭದ ಮೇಲ್ಭಾಗದಲ್ಲಿ ಹೊತ್ತಿಸಬೇಕೆಂದು ಶಾಸ್ತ್ರಗಳಲ್ಲಿ ನಿರ್ದೇಶನವಿದೆ.[10] ಈ ಸ್ತಂಭದ ಪೀಠದಲ್ಲಿ ಗರ್ಭಗೃಹದ ದೇವರಿಗೆ ಅಭಿಮುಖವಾಗಿ ಹದಿನೈದು ಜೋಡಿ ದಂಪತಿ (ಭಕ್ತಪರಿವಾರ)ಗಳ ಉಬ್ಬುಶಿಲ್ಪಗಳಿದ್ದು, ದೇವಾಲಯಕ್ಕೆ ಸಂಬಂಧಿಸಿದ ನಾಯಕ ಮನೆತನದ ಕುಟುಂಬ ಪರಿವಾರದವರ ಶಿಲ್ಪಗಳಾಗಿವೆ. ಶಿಷ್ಟಪ್ರಕಾರದಲ್ಲಿರುವ ಈ ಶಿಲ್ಪಗಳು ಅಂಜಲಿಮುದ್ರೆಯಲ್ಲಿ ನಿಂತಭಂಗಿಯಲ್ಲಿವೆ. ಮೂರು ಸಾಲುಗಳಲ್ಲಿ ಕಡೆದಿರುವ ಈ ಉಬ್ಬುಶಿಲ್ಪಗಳಲ್ಲಿ ಮೇಲಿನ ಸಾಲಿನಲ್ಲಿ ಇಬ್ಬಿಬ್ಬರು ಪತ್ನಿಯರನ್ನು ಒಳಗೊಂಡ ನಾಲ್ಕು ಕುಟುಂಬಗಳ ಉಬ್ಬುಶಿಲ್ಪಗಳಿದ್ದರೆ, ಮಧ್ಯದ ಸಾಲಿನಲ್ಲಿ ಏಕಪತ್ನಿಯರನ್ನು ಹೊಂದಿದ ನಾಲ್ಕು ದಂಪತಿಗಳ ಹಾಗೂ ಇಬ್ಬರು ಪತ್ನಿಯರನ್ನು ಹೊಂದಿದ ಒಂದು ಕುಟುಂಬದ ಉಬ್ಬುಶಿಲ್ಪಗಳು, ಕೆಳಗಿನ ಸಾಲಿನಲ್ಲಿ ಏಕಪತ್ನಿಯರನ್ನು ಹೊಂದಿದ ಆರು ದಂಪತಿಗಳ ಉಬ್ಬುಶಿಲ್ಪಗಳಿವೆ. ಇವುಗಳ ಕೇಶವಿನ್ಯಾಸ, ಮೈಮೇಲಿನ ಆಭರಣಗಳು ಮತ್ತು ವಸ್ತ್ರಗಳು ಆಕರ್ಷಕವಾಗಿದ್ದು, ಸಮಕಾಲೀನ ಸಂಗತಿಯನ್ನು ಬಿಂಬಿಸುತ್ತವೆ. ಈ ಶಿಲ್ಪಗಳಿಂದ ತಿಳಿದುಬರುವ ಮತ್ತೊಂದು ಸಂಗತಿಯೆಂದರೆ ಆ ಕಾಲದ ರಾಜಕುಟುಂಬದಲ್ಲಿ ಆಚರಣೆಯಲ್ಲಿದ್ದ ಏಕಪತ್ನಿತ್ವ ಹಾಗೂ ಬಹುಪತ್ನಿತ್ವ ಪದ್ಧತಿಗಳು.

ಬಿಡಿಶಿಲ್ಪಗಳಲ್ಲಿ ಪ್ರಮುಖವಾದವುಗಳೆಂದರೆ ಗರ್ಭಗೃಹದ ಶ್ರೀರಂಗನಾಥಸ್ವಾಮಿಯ ಶಿಲ್ಪ. ಅರ್ಧಮಂಟಪದ ದಕ್ಷಿಣ ಕೊಠಡಿಯಲ್ಲಿರುವ ಲಕ್ಷ್ಮಿ ಹಾಗೂ ಉತ್ತರದ ಕೊಠಡಿಯಲ್ಲಿರುವ ಹದಿಮೂರು ಜನ ವೈಷ್ಣವ ಆಳ್ವಾರರುಗಳ ಶಿಲ್ಪಗಳು. ಗರ್ಭಗೃಹದ ಶ್ರೀರಂಗನಾಥಸ್ವಾಮಿಯ ಶಿಲ್ಪವು ನಾಲ್ಕು ಅಡಿ ಎತ್ತರವಾಗಿದ್ದು, ಕಪ್ಪುಶಿಲೆಯಿಂದ ರಚನೆಯಾಗಿದೆ. ಈ ಶಿಲ್ಪವು ಚತುರ್ಭುಜಗಳನ್ನು ಹೊಂದಿದ್ದು, ಮೇಲಿನ ಎಡಗೈಯಲ್ಲಿ ಶಂಖ, ಬಲಗೈಯಲ್ಲಿ ಚಕ್ರಗಳಿದ್ದರೆ, ಕೆಳಗಿನ ಎಡಗೈ ವರದಹಸ್ತ, ಬಲಗೈ ಅಭಯಹಸ್ತವಾಗಿದೆ. ಪ್ರತಿಮಾಲಕ್ಷಣಗಳ ಪ್ರಕಾರ ಇದನ್ನು ವರದರಾಜ (ಜನಾರ್ದನ)ನ ಶಿಲ್ಪವೆಂದು ಹೇಳಲಾಗಿದೆ. ವಿವಿಧ ಹಾರಗಳಿಂದ ಅಲಂಕೃತಗೊಂಡಿರುವ ಶಿಲ್ಪವು ಕಾಲಿನಲ್ಲಿ ಕಡಗಗಳನ್ನು ಹೊಂದಿದೆ. ಪೀಠದಲ್ಲಿ ಅರಳಿದ ಕಮಲವನ್ನು ಬಿಡಿಸಲಾಗಿದ್ದು, ಪ್ರಭಾವಳಿಯಲ್ಲಿ ಕೀರ್ತಿಮುಖದ ಅಲಂಕರಣೆಯಿದೆ.

ಗರ್ಭಗೃಹದ ನಂತರದ ಅರ್ಧಮಂಟಪದ ದಕ್ಷಿಣಕ್ಕೆ ಲಕ್ಷ್ಮಿಯ ಚಿಕ್ಕ ಗುಡಿಯಿದೆ. ಶ್ರೀರಾಮಾನುಜಾಚಾರ್ಯರ ಸಂಪ್ರದಾಯದ ಪ್ರಕಾರ ಶ್ರೀ ಅಥವಾ ಮಹಾಲಕ್ಷ್ಮೀಗೆ ಒಂದು ಪ್ರತ್ಯೇಕವಾದ ಆಲಯವನ್ನು ಪ್ರಧಾನ ದೇವಾಲಯದ ಒಳಗೆ ಕಟ್ಟುವುದು ಆರಂಭವಾಯಿತು. ಏಕೆಂದರೆ ಶ್ರೀವೈಷ್ಣವ ಧರ್ಮದ ಪ್ರಕಾರ ಶ್ರೀ ಅಥವಾ ಮಹಾಲಕ್ಷ್ಮೀಗೆ ವಿಷ್ಣುವಿಗೆ ಸಮಾನವಾದ ಸ್ಥಾನವನ್ನು ನೀಡಲಾಗಿದೆ. ಆಗಮಶಾಸ್ತ್ರಗಳ ಪ್ರಕಾರ ನಾರಾಯಣನ ವಕ್ಷಸ್ಥಲದಲ್ಲಿರುವ ಲಕ್ಷ್ಮಿಗೆ ಯೋಗಲಕ್ಷ್ಮಿ ಎಂದೂ, ಪಾರ್ಶ್ವದಲ್ಲಿ ನಿಂತಿರುವ ಲಕ್ಷ್ಮಿಗೆ ಭೋಗಲಕ್ಷ್ಮಿ ಎಂದೂ, ಪ್ರತ್ಯೇಕ ಆಲಯದಲ್ಲಿರುವ ಲಕ್ಷ್ಮಿಗೆ ವೀರಲಕ್ಷ್ಮಿ ಎಂದೂ ಕರೆಯಲಾಗುತ್ತದೆ.[12] ಆ ದೃಷ್ಟಿಯಲ್ಲಿ ಈ ಶಿಲ್ಪವು ವೀರಲಕ್ಷ್ಮಿಯ ಸ್ವರೂಪದ್ದಾಗಿದ್ದು, ಪೀಠದ ಮೇಲೆ (ಸೀರೆ ಮುಚ್ಚಿರುವುದರಿಂದ ಆಸನ ತಿಳಿದುಬರುತ್ತಿಲ್ಲ. ಬಹುಶಃ ಸವ್ಯಲಲಿತಾಸನದಲ್ಲಿರಬಹುದು) ಕುಳಿತಿದ್ದಾಳೆ. ಚತುರ್ಭುಜಗಳನ್ನು ಹೊಂದಿರುವ ಶಿಲ್ಪವು ಮೇಲಿನ ಎರಡೂ ಕೈಗಳಲ್ಲಿ ಕಮಲದ ಮೊಗ್ಗುಗಳನ್ನು ಹಿಡಿದಿದ್ದು, ಕೆಳಗಿನ ಬಲಗೈ ಅಭಯಹಸ್ತ, ಎಡಗೈ ವರದ ಹಸ್ತವಾಗಿದೆ. ಸುತ್ತಲೂ ಪ್ರಭಾವಳಿಯಿದ್ದು, ಮೇಲ್ಭಾಗದಲ್ಲಿ ಕೀರ್ತಿಮುಖದ ಅಲಂಕರಣೆಯಿದೆ. ಕಿರೀಟ, ಕುಂಡಲಗಳನ್ನು ಧರಿಸಿದ್ದಾಳೆ. ಉಳಿದಂತೆ ಸೀರೆಯನ್ನು ಮೈತುಂಬಾ ಸುತ್ತಿರುವುದರಿಂದ ಉಳಿದ ಆಭರಣಗಳು ಗೋಚರಿಸುತ್ತಿಲ್ಲ. ಇದು ಸ್ಪಷ್ಟವಾಗಿ ವೀರಲಕ್ಷ್ಮಿಯ ಪ್ರತಿಮಾಲಕ್ಷಣಗಳಾಗಿದ್ದು ಈ ಮೇಲೆ ತಿಳಿಸಿದ ವಿಷಯಗಳನ್ನು ಸಮರ್ಥಿಸುತ್ತದೆ.[13] ಈ ವಿಗ್ರಹದ ಆಭರಣಗಳು ಹಾಗೂ ಮುಖದ ಲಕ್ಷಣಗಳನ್ನು ಗಮನಿಸಿದರೆ, ಇದು ವಿಜಯನಗರದ ಕಲಾಶೈಲಿಗೆ ಹೊಂದಾಣಿಕೆಯಾಗುತ್ತದೆ. ಆದರೆ ಆ ಶಿಲ್ಪಗಳಂತೆ ರಚನೆಯಲ್ಲಿ ಪ್ರಮಾಣಬದ್ಧತೆ ಕಂಡುಬರುವುದಿಲ್ಲ.

ಅರ್ಧ ಮಂಟಪದ ಉತ್ತರದ ಕೊಠಡಿಯಲ್ಲಿರುವ ಹದಿಮೂರು ಜನ ಆಳ್ವಾರರುಗಳ ಶಿಲ್ಪಗಳಲ್ಲಿ ಹನ್ನೆರಡು ವೈಷ್ಣವ ಆಳ್ವಾರುಗಳ, ಒಂದು ವಿಶ್ವಕ್ಸೇನನ ಶಿಲ್ಪವಾಗಿವೆ. ಶ್ರೀವೈಷ್ಣವ ಧರ್ಮದ ಸ್ಪಷ್ಟ ಪ್ರಭಾವ ಹೊಯ್ಸಳರ ಕಾಲಕ್ಕೆ ದೇವಾಲಯಗಳಲ್ಲಿ ಕಂಡುಬರುವುದಾದರೂ, ಆಳ್ವಾರರುಗಳ ವಿಗ್ರಹಗಳು ಹೊಯ್ಸಳ ಶೈಲಿಯಲ್ಲಿ ಕಂಡುಬಂದಿಲ್ಲ. ಮುಂದೆ ವಿಜಯನಗರ ಕಾಲಕ್ಕೆ ಆಳ್ವಾರರುಗಳ ವಿಗ್ರಹಗಳ ಪ್ರತಿಷ್ಠೆಯು ಶ್ರೀವೈಷ್ಣವ ದೇವಾಲಯಗಳಲ್ಲಿ ಒಂದು ಪ್ರಮುಖ ಅಂಗವಾಗಿ ಕಂಡುಬರುತ್ತದೆ. ಆಳ್ವಾರರುಗಳ ಶಿಲ್ಪಗಳು ಭಕ್ತವಿಗ್ರಹಗಳಾಗಿದ್ದು, ಆಗಮಶಾಸ್ತ್ರಗಳಲ್ಲಿ ಇವರ ಲಕ್ಷಣಗಳನ್ನು ಪ್ರಮುಖವಾಗಿ ಚರ್ಚಿಸಿಲ್ಲದಿದ್ದರೂ, ಸಂಪ್ರದಾಯ ಗ್ರಂಥಗಳಲ್ಲಿ ಬರುವ ಕಥೆಗಳ ಆಧಾರದ ಮೇಲೆ ಇವರನ್ನು ಗುರುತಿಸಬೇಕಾಗುತ್ತದೆ. ಆಳ್ವಾರರುಗಳು ಸಾಮಾನ್ಯವಾಗಿ ಯಾವುದೇ ಜಾತಿ ಅಥವಾ ಪಂಥದ ಮೇಲೆ ಪೂಜೆಗೆ ಅರ್ಹರಾಗಿಲ್ಲವೆಂಬುದು ಗಮನಿಸಬೇಕಾದ ಅಂಶ. ಸಂಪ್ರದಾಯಗಳಲ್ಲಿ ಆಳ್ವಾರರುಗಳನ್ನು ನಾರಾಯಣನ ವಿವಿಧ ಆಯುಧಗಳಿಂದ ಜನಿಸಿದವರು ಹಾಗೂ ಅವರು ನಿತ್ಯಸೂರಿಗಳು ಅಂದರೆ ವೈಕುಂಠದಲ್ಲಿ ಸರ್ವದಾ ಭಗವಂತನೊಡನೆ ವಾಸಿಸುವವರು ಎಂದು ಕರೆಯಲಾಗಿದೆ. ವೈಷ್ಣವ ಸಂಪ್ರದಾಯದಲ್ಲಿ ಆಳ್ವಾರರುಗಳ ಜತೆಗೆ ವಿಶ್ವಕ್ಸೇನನನ್ನು ಸಹ ಪ್ರತಿಷ್ಠಾಪಿಸಲಾಗಿರುತ್ತದೆ. ಇವರ ಕಥೆಗಳ ಆಧಾರದ ಮೇಲೆ ನಮ್ಮಾಳ್ವಾರ್ ಗೌಡರಾದರೆ, ತಿಪ್ಪಣಾಳ್ವರ್ ಅಸ್ಪೃಶ್ಯ ಜಾತಿಗೆ (ಅಂತ್ಯ) ಸೇರಿದವರಾಗಿದ್ದರು. ಹೀಗೆ ಅವರ ಕಥೆಗಳ ಆಧಾರದ ಮೇಲೆ ಇವರ ಶಿಲ್ಪಗಳನ್ನು ಗುರುತಿಸಬೇಕಾಗುತ್ತದೆ. ರಂಗನಾಥಸ್ವಾಮಿ ದೇವಾಲಯದಲ್ಲಿರುವ ಆಳ್ವಾರರುಗಳ ಶಿಲ್ಪಗಳನ್ನು ಪೊಯ್‌ಹೈಆಳ್ವಾರ್, ಪೂದತ್ತಾಳ್ವಾರ್, ಮಧುರಕವಿಆಳ್ವಾರ್, ಕುಲಶೇಖರಾಳ್ವಾರ್, ಭಟರ್‌ಪಿರಾನ್‌ಆಳ್ವಾರ್ (ಪೆರಿಯಾಳ್ವಾರ್), ನಮ್ಮಾಳ್ವಾರ್, ತಿರುಪ್ಪಾಣಾಳ್ವಾರ್, ತಿರುಮಂಗೈಆಳ್ವಾರ್, ಆಂಡಾಳ್ (ಏಕಮಾತ್ರ ಹೆಣ್ಣು ಆಳ್ವಾರ್), ತೊಂಡರಡಿಪ್ಪೊಡಿಯಾಳ್ವಾರ್, ತಿರುಮಳಿಶೈಆಳ್ವಾರ್ ಹಾಗೂ ವಿಶ್ವಕ್ಸೇನನ ವಿಗ್ರಹಗಳೆಂದು ಗುರುತಿಸಲಾಗಿದೆ.

ಒಟ್ಟಾರೆಯಾಗಿ ಈ ದೇವಾಲಯದ ಶಿಲ್ಪಗಳ ಅಧ್ಯಯನದಿಂದ ತಿಳಿದುಬರುವುದೇನೆಂದರೆ ಮೊದಲನೆಯದಾಗಿ ವಿಜಯನಗರ ಕಾಲದಲ್ಲಿ ದೇವಾಲಯಗಳ ರಚನೆ ಹೆಚ್ಚಾಗಿ ಪಟ್ಟಣಕೇಂದ್ರಿತವಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲಿ

ನಿರ್ಮಾಣ ಕಡಿಮೆ. ಆದರೆ ತಮ್ಮ ದೊರೆಗಳ ಒತ್ತಾಸೆಯಿಂದ ಅಧೀನ ಸಾಮಂತರು ಅಷ್ಟು ವೈಭವವಾಗಿ ಹಾಗೂ ಕಲಾತ್ಮಕವಾಗಿಯಲ್ಲದಿದ್ದರೂ ಸ್ಥಳೀಯ ಶಿಲ್ಪಿಗಳಿಂದ ದೊರೆಗಳ ಕಲಾಶೈಲಿಯನ್ನು ಅನುಕರಣೆ ಮಾಡಿ ತಮ್ಮ ಆರ್ಥಿಕ ಇತಿಮಿತಿಯಲ್ಲಿ ನಿರ್ಮಿಸಿದ್ದಾರೆ. ಅಂತಹ ದೇವಾಲಯಗಳಲ್ಲಿ ಇದೂ ಒಂದು. ಆದರೂ ಇದು ಹೆಚ್ಚು ಶಿಷ್ಟ ಪ್ರಕಾರದ ಶಿಲ್ಪಗಳನ್ನು ಹೊಂದಿದ್ದು, ವಿಜಯನಗರ ಶೈಲಿಯ ಶಿಷ್ಟಪರಂಪರೆ ಕೊನೆಗೊಳ್ಳುವ ಸಂದರ್ಭವನ್ನು ಈ ದೇವಾಲಯದ ಶಿಲ್ಪಗಳಲ್ಲಿ ಗುರುತಿಸಬಹುದು. ಎರಡನೆಯದಾಗಿ, ಇಲ್ಲಿನ ಕೆಲವು ಶಿಲ್ಪಗಳು ಆಕಾರ, ಸೌಂದರ್ಯ, ಆಭರಣಗಳು, ವಸ್ತ್ರವಿನ್ಯಾಸ ಹಾಗೂ ಪ್ರಮಾಣಬದ್ಧತೆಯಲ್ಲಿ ಹಂಪಿಯ ಶಿಲ್ಪಗಳ ಶೈಲಿ ಮತ್ತು ಲಕ್ಷಣಗಳಿಗೆ ಸಾಮ್ಯತೆಯನ್ನು ಹೊಂದಿದ್ದರೂ, ಬಹುತೇಕ ಶಿಲ್ಪಗಳು ಸಾಮಾನ್ಯ ಹಾಗೂ ಸರಳವಾಗಿವೆ. ಈ ಶಿಲ್ಪಗಳನ್ನು ಸಹ ಗ್ರಾನೈಟ್ ಶಿಲೆಯಿಂದ ಕಡೆದಿದ್ದರೂ ಅಂಗಾಂಗಗಳ ರಚನೆಯಲ್ಲಿ ಪ್ರಮಾಣಬದ್ಧತೆಯಲ್ಲಿ ಕುಬ್ಜ, ದಪ್ಪ ಹಾಗೂ ಒರಟು ರಚನೆಗಳಿಂದ ಕೂಡಿವೆ. ಆದರೂ ಹಂಪಿಯ ಶಿಲ್ಪಗಳಂತೆ ಕೆಲವು ಸ್ತ್ರೀಶಿಲ್ಪಗಳ ವಸ್ತ್ರವಿನ್ಯಾಸ ಮತ್ತು ಆಭರಣಗಳನ್ನು ಅತ್ಯಂತ ಸ್ಫುಟವಾಗಿ ಪರಿಚಯ ಮಾಡಿಕೊಡುವಲ್ಲಿ ಸಫಲವಾಗಿವೆ.

ಮೂರನೆಯದಾಗಿ, ಹಂಪಿಯ ದೇವಾಲಯಗಳಲ್ಲಿನ ಉಬ್ಬುಶಿಲ್ಪಗಳು ಚಪ್ಪಟೆ ಅಥವಾ ಸಮತಟ್ಟಾಗಿದ್ದರೆ, ಇಲ್ಲಿನ ಶಿಲ್ಪಗಳು ಬಿಡಿಶಿಲ್ಪಗಳಂತೆ ರಚಿತಗೊಂಡಿರುವುದು ಒಂದು ವಿಶೇಷ. ಅಲ್ಲದೇ ಹಂಪಿಯ ಉಬ್ಬುಶಿಲ್ಪಗಳಲ್ಲಿ ಲೌಕಿಕ ಮತ್ತು ಅಲೌಕಿಕ ಶಿಲ್ಪಗಳು ಸಮಪ್ರಮಾಣದಲ್ಲಿ ಕಂಡುಬಂದರೆ, ಈ ದೇವಾಲಯದಲ್ಲಿ ಅಲೌಕಿಕ ಶಿಲ್ಪಗಳೇ ಹೆಚ್ಚಾಗಿದ್ದು, ಅಪರೂಪವಾಗಿ ಲೌಕಿಕ ಶಿಲ್ಪಗಳು ಕಂಡುಬರುತ್ತವೆ. ನಾಲ್ಕನೆಯದಾಗಿ, ಇಲ್ಲಿನ ಅಧಿಷ್ಠಾನದ ಪ್ರತಿಯೊಂದು ಭಾಗಗಳನ್ನು ಶಿಲ್ಪಗಳಿಂದ ಅಲಂಕೃತಗೊಳಿಸಿರುವುದು ಹಾಗೂ ಶಿಲ್ಪಗಳು ಅತ್ಯಂತ ಆಕರ್ಷಕ ಮತ್ತು ಸ್ಫುಟವಾಗಿ ರಚಿತಗೊಂಡಿರುವುದು ವಿಶೇಷವಾಗಿದೆ. ಹಾಗೆಯೇ ಗರ್ಭಗೃಹದ ಭಿತ್ತಿಯ ಮೇಲಿನ ಉಬ್ಬುಶಿಲ್ಪಗಳು ಶಿಷ್ಟಪ್ರಕಾರದಲ್ಲಿದ್ದರೂ, ಹೊಯ್ಸಳ ಮತ್ತು ಚಾಲುಕ್ಯರ ಕಾಲದ ದೇವಾಲಯಗಳ ಭಿತ್ತಿಗಳ ಮೇಲಿರುವಂತೆ ದೊಡ್ಡ ಪ್ರಮಾಣದಲ್ಲಿರದೆ, ಅಧಿಷ್ಠಾನಗಳಲ್ಲಿರುವ ಶಿಲ್ಪಪಟ್ಟಿಕೆಯಂತೆ ಕಪೋತದ ತಳಭಾಗದಲ್ಲಿ ಸಾಲಾಗಿ ಒಂದು ಪಟ್ಟಿಕೆಯಲ್ಲಿದೆ. ಐದನೆಯದಾಗಿ, ಈ ದೇವಾಲಯದಲ್ಲಿರುವ ಆಳ್ವಾರರುಗಳ ಶಿಲ್ಪಗಳು ವಿಜಯನಗರ ಕಾಲದ ಇತರೇ ಭಾಗಗಳಲ್ಲಿ ಕಂಡುಬರುವ ಆಳ್ವಾರರುಗಳ ಶಿಲ್ಪಗಳಂತೆ ರಚನೆಯಲ್ಲಿ ಏಕರೂಪತೆಯನ್ನು ಪ್ರಕಟಮಾಡುತ್ತವೆ. ಆರನೆಯದಾಗಿ, ಇದು ವೈಷ್ಣವ ದೇವಾಲಯವಾದರೂ ಹಂಪಿಯ ದೇವಾಲಯಗಳಲ್ಲಿ ಕಂಡುಬರುವಂತೆ ಅಪರೂಪಕ್ಕೆ ಇಲ್ಲಿಯೂ ಬೇಡರಕಣ್ಣಪ್ಪ, ಭೈರವ, ಲಿಂಗಕ್ಕೆ ಹಾಲೆರೆಯುತ್ತಿರುವ ಹಸು ಮುಂತಾದ ಶೈವಪಂಥದ ಶಿಲ್ಪಗಳು ಕಂಡುಬರುತ್ತವೆ. ಈ ಅಂಶದಿಂದ ಪ್ರಮುಖವಾಗಿ ತಿಳಿದುಬರುವುದೇನೆಂದರೆ ವಿಜಯನಗರದ ಅರಸರು ವೈಷ್ಣವ ಧರ್ಮದ ಅನುಯಾಯಿಗಳಾಗಿದ್ದರೂ, ಶೈವ ಧರ್ಮಕ್ಕೂ ಸಮಾನ ಪ್ರಾಶಸ್ತ್ಯ ನೀಡಿ ಧಾರ್ಮಿಕ ಸಹಿಷ್ಣುತಾ ಮನೋಭವನೆಯನ್ನು ಹೊಂದಿದ್ದರೆಂದು ವೇದ್ಯವಾಗುತ್ತದೆ. ಅಂತಿಮವಾಗಿ ಹೇಳುವುದಾದರೆ, ಈ ದೇವಾಲಯದ ಬಾಹ್ಯವಿನ್ಯಾಸವು ಹೊಯ್ಸಳರ ನಂದಿತಾವರೆಯ ಅಮೃತಲಿಂಗ, ಮಾಣಿಕೇಶ್ವರ, ಹರಿಹರದ ಹರಿಹರೇಶ್ವರ, ಹೊಸಪೇಟೆ ತಾಲ್ಲೂಕಿನ ತಿಮ್ಮಲಾಪುರದ ವೇಣುಗೋಪಾಲ, ಹಂಪಿಯ ಹಜಾರರಾಮ, ವಿಜಯವಿಠ್ಠಲ ದೇವಾಲಯಗಳನ್ನು ಹೋಲಿದರೂ, ಆ ದೇವಾಲಯಗಳಲ್ಲಿ ಕಂಡುಬರುವ ಪ್ರೌಢತೆ ಹಾಗೂ ಕುಸುರಿ ಕೆತ್ತನೆಗಳು ಇಲ್ಲಿನ ಹೆಚ್ಚು ಶಿಲ್ಪಗಳಲ್ಲಿ ಕಂಡುಬರುತ್ತವೆ. ಹಾಗಾಗಿ ಕೆಲವು ಶಿಲ್ಪಗಳು ಶಿಷ್ಟಪ್ರಕಾರದಲ್ಲಿದ್ದರೆ ಮತ್ತೆ ಕೆಲವು ಸ್ಥಳೀಯ ಲಕ್ಷಣಗಳನ್ನೊಳಗೊಂಡಿವೆ. ಆದರೂ ವಿಜಯನಗರ ಕಾಲದ ಶಿಲ್ಪಗಳ ರಚನೆಯನ್ನು ಈ ದೇವಾಲಯದಲ್ಲಿ ಕಾಣಬಹುದಾಗಿದೆ.

ಅಡಿ ಟಿಪ್ಪಣಿಗಳು

1. ಅಪರ್ಣ ಕೂ.ಸ., "ಚಿತ್ರದುರ್ಗ ಜಿಲ್ಲೆಯ ವಿಜಯನಗರ ಕಾಲದ ದೇವಾಲಯಗಳ ವಾಸ್ತು ಮತ್ತು ಮೂರ್ತಿಶಿಲ್ಪ", ಬಾ.ರಾ. ಗೋಪಾಲ್ (ಸಂ.), *ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ*, 2005, ಪು. 196.
2. ಅಪರ್ಣ ಕೂ.ಸ., *ಪೂರ್ವೋಕ್ತ, ಅದೇ*, 2005, ಪು. 196.
3. ಶಂಕರಯ್ಯ ಅ.ರಾ., ನೀರ್ಥಡಿ ರಂಗನಾಥ ದೇವಾಲಯ, *ಚಂದ್ರವಳ್ಳಿ*, ಎಂ.ವಿ. ಶ್ರೀನಿವಾಸ್, ಲಕ್ಷ್ಮಣ್ ತೆಲಗಾವಿ (ಸಂ.), 1976, ಪು. 157.
4. ಗಿರಿಜ ಟಿ, *ಚಿತ್ರದುರ್ಗ ಜಿಲ್ಲಾ ದರ್ಶಿನಿ*, 1991, ಪು. 549.
5. *ಎ.ಕ.*, ಸಂ. 11, ದಾವಣಗೆರೆ 164 ಮತ್ತು ಅ.ರಾ. ಶಂಕರಯ್ಯ, *ಪೂರ್ವೋಕ್ತ, ಅದೇ*, ಪು. 157.
6. ಪ್ರಭಾಕರ ಎಂ.ಎಸ್., 1999, *ದೇವಾಲಯಗಳ ವಾಸ್ತುಚಂದ್ರಿಕೆ*, ಪು. 4.
7. ಫಣೀಂದ್ರನಾಥ್ ಬೋಸ್., *ಪ್ರಿನ್ಸಿಪಲ್ ಆಫ್ ಇಂಡಿಯನ್ ಶಿಲ್ಪಶಾಸ್ತ್ರ*, 1978, ಪು. 8.
8. ರಾಮಚಂದ್ರರಾವ್ ಎಸ್.ಕೆ., *ಮೂರ್ತಿಶಿಲ್ಪದ ನೆಲೆ-ಹಿನ್ನೆಲೆ*, 1975, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
9. ರಾಜಶೇಖರಪ್ಪ ಬಿ., 2001, *ಇತಿಹಾಸ ಕಥನ*, ಪು. 55-58 (ಕಾಪಾಲಿಕ ಅಥವಾ ನಾಥ ಪಂಥವು ಭಾರತದ ಅತ್ಯಂತ ಪ್ರಾಚೀನವಾದ ಒಂದು ಶೈವಪಂಥವಾಗಿತ್ತು. ಈ ಪಂಥದವರು ಶಿವನ ಉಗ್ರರೂಪವಾದ ಭೈರವನನ್ನು ಆರಾಧಿಸುತ್ತ ಅವನ ಲಾಂಛನಗಳಾದ ತ್ರಿಶೂಲ, ನರಕಪಾಲಗಳನ್ನು ಹಿಡಿದಿರುತ್ತಿದ್ದರು. ಇವರು ಶ್ಮಶಾನದಂಥ ಕಡೆಗಳಲ್ಲಿದ್ದು ಯೋಗಸಾಧನೆ, ಗೌಪ್ಯವಾದ ತಾಂತ್ರಿಕ ಆಚರಣೆ, ಭೈರವೀ ಸಾಧನೆ ಮಾಡುತ್ತಿದ್ದರು. ಭೈರವನನ್ನು ಯೋಗೀನಾಥ, ಯೋಗೀಶ್ವರ, ಸಿದ್ಧನಾಥ, ಸಿದ್ಧೇಶ್ವರ ಎಂದೂ, ಅವನ ಉಪಾಸಕರಾದ ಪುರುಷನನ್ನು ಯೋಗಿಗಳು, ಜೋಗಿಗಳು, ಕಾಪಾಲಿಕರು, ಕಪಾಲಿಗಳು ಎಂದೂ, ಸ್ತ್ರೀಯರನ್ನು ಯೋಗಿನಿ, ಜೋಗಿಣಿ, ಕಾಪಾಲಿಕೆಯರು ಎಂದೂ ಕರೆಯುತ್ತಿದ್ದರು. ಕರ್ನಾಟಕದಲ್ಲಿ ಭೈರವನ ವಿಗ್ರಹ, ಭೈರವ ಪಾದಶಿಲ್ಪ ಹಾಗೂ ದೇವಾಲಯಗಳ ನಿರ್ಮಾಣ ಸ್ಥಾಪನೆ, ಕೆತ್ತನೆ ಕಲ್ಯಾಣ ಚಾಲುಕ್ಯ, ಹೊಯ್ಸಳ ಮತ್ತು ವಿಜಯನಗರ ಕಾಲದಲ್ಲಿ ಹೆಚ್ಚು ಆದಂತೆ ಕಂಡುಬರುತ್ತದೆ.)
10. *ಈಶ್ವರ ಸಂಹಿತಾ, ಪಾದ್ಮ ಸಂಹಿತಾ.*
11. ಸುರೇಶ ಬಿ., *ಚಿತ್ರದುರ್ಗ-ದಾವಣಗೆರೆ ಜಿಲ್ಲೆಗಳ ಪುರಾತತ್ವ ಅಧ್ಯಯನ*, 2002, ಪು. 219-220.
12. *ಈಶ್ವರ ಸಂಹಿತಾ*, ಅಧ್ಯಾಯ-7, ಪು. 7-15, *ವಿಹಗೇಂದ್ರ ಸಂಹಿತಾ*, 2, ಪು. 10-12.
13. *ವಿಶ್ವಕ್ಸೇನ ಸಂಹಿತಾ*, ಪು. 20, 255, 261.

33

ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರ ಕಾಲದ ರಕ್ಷಣಾ ವಾಸ್ತು ರಚನೆಗಳು

ಡಾ॥ ಎಸ್. ತಿಪ್ಪೇಸ್ವಾಮಿ

ಕರ್ನಾಟಕದ ಮಧ್ಯಭಾಗದಲ್ಲಿರುವ ಚಿತ್ರದುರ್ಗ ಜಿಲ್ಲೆಯು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಸಂಸ್ಕೃತಿಗಳನ್ನು ಬೆಸೆಯುವ ಕೊಂಡಿಯಂತಿದೆ. ಭೂನಕ್ಷೆಯಲ್ಲಿ ಉತ್ತರ ಅಕ್ಷಾಂಶ $14^{0}15$ ಮತ್ತು $74^{0}24$ ಪೂರ್ವ ರೇಖಾಂಶದಲ್ಲಿದ್ದು ಸಮುದ್ರಮಟ್ಟದಿಂದ 2560 ಅಡಿ ಎತ್ತರದಲ್ಲಿದೆ. ಚಿತ್ರದುರ್ಗ ಬೆಟ್ಟದ ಸುತ್ತಲೂ ಹಬ್ಬಿರುವ ಗುಡ್ಡದ ಸಾಲುಗಳು ಅಲ್ಲಲ್ಲಿ ಮೇಲೆದ್ದಿರುವ ಶಿಖರಗಳು, ರಕ್ಷಣಾ ಸಾಮರ್ಥ್ಯವನ್ನು ಹೆಚ್ಚಿಸಿ ಕೋಟೆಯಂತೆ ರಕ್ಷಿಸಿವೆ. ಬೆಟ್ಟಗುಡ್ಡಗಳು ನಿಸರ್ಗವು ನೀಡಿದ ಉಚಿತ ನೈಸರ್ಗಿಕ ಸಂಪನ್ಮೂಲಗಳಾಗಿವೆ. ಇವು ಮಾನವ ಜೀವನದಲ್ಲಿ ಕೆಲವೊಮ್ಮೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಪ್ರಭಾವ ಬೀರುವುದನ್ನು ಗಮನಿಸಬಹುದಾಗಿದೆ.

ಕರ್ನಾಟಕವನ್ನಾಳಿದ ಬಹುತೇಕ ಮನೆತನಗಳು ಈ ಭಗದಲ್ಲಿ ಆಳ್ವಿಕೆ ನಡೆಸಿರುವುದನ್ನು ಇತಿಹಾಸದ ಪುಟಗಳಲ್ಲಿ ಕಾಣಬಹುದು. ವಿಶೇಷವಾಗಿ ವಿಜಯನಗರ ಅರಸರು ಚಿತ್ರದುರ್ಗ ಜಿಲ್ಲೆಯ ಪ್ರದೇಶವನ್ನು ತಮ್ಮ ಸಾಮ್ರಾಜ್ಯದ ಒಂದು ಭಾಗವನ್ನಾಗಿಸಿಕೊಂಡು ಆಡಳಿತ ನಡೆಸಿದ್ದಾರೆ. ಈ ಪ್ರದೇಶವು ವಿಜಯನಗರದ ಆಸೆ, ಆಕಾಂಕ್ಷೆ ಹಾಗೂ ಧ್ಯೇಯೋದ್ದೇಶಗಳನ್ನು ಪೂರೈಸುವ ಬಹುಮುಖ್ಯವಾದ ಘಟಕವಾಗಿತ್ತು. ಏಕೆಂದರೆ ವಿಜಯನಗರದ ಅರಸರು ತಮ್ಮ ಸಾಮ್ರಾಜ್ಯವನ್ನು ಹೆಚ್ಚಾಗಿ ದಕ್ಷಿಣ ಭಾರತದಲ್ಲಿ ವಿಸ್ತರಿಸಿದ್ದರು. ರಕ್ಷಣಾ ದೃಷ್ಟಿಯಿಂದ ಹಂಪಿ ಮತ್ತು ಕರ್ನಾಟಕದ ದಕ್ಷಿಣ ಭಾಗದ ಮಧ್ಯೆ ಇರುವ ವಿಸ್ತಾರವಾದ ಈ ಭೂಪ್ರದೇಶವನ್ನು ಸಹಜವಾಗಿಯೇ ಅವರು ರಾಜಕೀಯ ಹಾಗೂ ಸೈನಿಕ ನೆಲೆಯನ್ನಾಗಿಸಿಕೊಂಡಿದ್ದರು. ಕ್ರಿ.ಶ, 1354 ರಿಂದ ಪ್ರತ್ಯಕ್ಷವಾಗಿಯು ನಂತರ ಕ್ರಿ.ಶ. 1568 ರವರೆಗೆ ಪರೋಕ್ಷವಾಗಿಯೂ ಅಧಿಕಾರ ನಡೆಸಿರುವುದನ್ನು ಇಲ್ಲಿ ದೊರಕಿರುವ ನೂರಾರು ಶಾಸನಗಳು ದೃಢಪಡಿಸುತ್ತವೆ.[1]

ಲೇಖನದ ಶೀರ್ಷಿಕೆ ಹೇಳುವಂತೆ ಇದು ಚಿತ್ರದುರ್ಗ ಜಿಲ್ಲೆಯಲ್ಲಿರುವ ವಿಜಯನಗರ ಕಾಲದ ರಕ್ಷಣ ವಾಸ್ತುರಚನೆಗಳನ್ನು ಮತ್ತು ಅವುಗಳ ವಾಸ್ತು ವೈಶಿಷ್ಟ್ಯತೆಯನ್ನು ಕುರಿತ ಲೇಖನವಾಗಿದೆ. ವಾಸ್ತವವಾಗಿ ಇಲ್ಲಿ ರಕ್ಷಣೆ ಎಂಬುದು ಕೋಟೆಯಾಗಿದೆ. ಕೋಟೆ ಮುಖ್ಯವಾಗಿ ರಾಜ್ಯ ಮತ್ತು ರಾಜನಿಗೆ ರಕ್ಷಣೆಯೊದಗಿಸುವ ಸ್ಥಳವಾಗಿದೆ. ಯುದ್ಧ ತಂತ್ರ ಮತ್ತು ರಕ್ಷಣಾ ದೃಷ್ಟಿಯಿಂದ ನಿರ್ಮಿಸಿರುವ ಇಂತಹ ಸ್ಮಾರಕಗಳು ಅಂದಿನ ಮಾನವನ ಜೀವನ ವಿಧಾನಕ್ಕೆ ಸಾಕ್ಷಿಯಾಗಿವೆ. ಸ್ಥಳೀಯ ಇತಿಹಾಸದ ಪುನಾರಚನೆಯ ಪ್ರಮುಖ ಸಾಮಗ್ರಿಗಳಾಗಿರುವ ರಕ್ಷಣಾ ಸ್ಮಾರಕಗಳು

ಅಂದಿನ ವೈಭವದ ಬದುಕಿಗೆ ಹಿಡಿದ ಕನ್ನಡಿಗಳಾಗಿವೆ. ಈ ಪರಿಸರದ ಬದುಕು, ಸಾಂಸ್ಕೃತಿಕ ವಿಚಾರ, ಆಳ್ವಿಕೆಯ ಸಾಮರ್ಥ್ಯ, ಮತ್ತಿತರೆ ವಿಚಾರಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ. ಅಲ್ಲದೆ ಕಾಲಘಟ್ಟದಲ್ಲಿ ಆದ ವಾಸ್ತುರಚನೆ ಮತ್ತು ವಿನ್ಯಾಸವನ್ನು ಪರಿಚಯಿಸುವುದರೊಂದಿಗೆ ಸ್ಥಳೀಯ ಸಂಪನ್ಮೂಲಗಳ ಸದ್ಬಳಕೆಯ ಯಜಮಾನಿಕೆಯನ್ನು ಸಂಕೇತಿಸುತ್ತವೆ.

ಸಾಮಾನ್ಯವಾಗಿ ವಿಜಯನಗರ ಸಾಮ್ರಾಜ್ಯವು ಸದಾ ನೆರೆಹೊರೆಯ ರಾಜ್ಯಗಳೊಂದಿಗೆ ಯುದ್ಧದಲ್ಲಿ ತೊಡಗಿರುತ್ತಿದ್ದ ಮಿಲಿಟರಿ ಆಡಳಿತವಾಗಿತ್ತು. ಹಾಗಾಗಿ ಆಡಳಿತದ ಸಮಗ್ರತೆಯನ್ನು, ಪ್ರಭುತ್ವವನ್ನು ರಕ್ಷಿಸಿಕೊಳ್ಳಲು ಅದು ಎಲ್ಲಾ ರೀತಿಯಿಂದಲೂ ಸಜ್ಜಾಗತೊಡಗಿತು. ಈ ನಿಟ್ಟಿನಲ್ಲಿ ಸೈನ್ಯವನ್ನು ಕಟ್ಟುವುದು, ಕೋಟೆಗಳನ್ನು ನಿರ್ಮಿಸುವುದು ಅವರ ಪ್ರಧಾನ ಅಂಶಗಳಲ್ಲಿ ಮುಖ್ಯವಾದವು. ಇಡೀ ದಕ್ಷಿಣ ಭಾರತದಲ್ಲಿ ಏಕ ಚಕ್ರಾಧಿಪತ್ಯದ ಆಡಳಿತವನ್ನು ಸ್ಥಾಪಿಸಿದ್ದ ವಿಜಯನಗರ ಅರಸರಿಗೆ ಬೃಹತ್ ಸೈನ್ಯವನ್ನು ಕಟ್ಟುವುದು ಕೇಂದ್ರದಲ್ಲಿದ್ದ ರಾಜನೊಬ್ಬನಿಗೇ ಸಾದ್ಯವಿರಲಿಲ್ಲ. ಈ ಸಲುವಾಗಿಯೇ ವಿಜಯನಗರ ಅರಸರು ಅಧಿಕಾರವನ್ನು ವಿಕೇಂದ್ರಿಕರಿಸಿದರು. ಈ ವಿಕೇಂದ್ರಿಕರಣ ಆಡಳಿತದ ವಿಶಿಷ್ಠ ವ್ಯವಸ್ಥೆಯೇ 'ಅಮರನಾಯಕ' ಅಥವಾ 'ನಾಯಂಕರ ಪದ್ಧತಿ'. ನಾಯಕ ಅಥವಾ ಅಮರನಾಯಕ ಅರಸನು ನಿರ್ಧಿಷ್ಟಪಡಿಸಿದ ಸೈನಿಕ ಸೇವೆಯನ್ನು ಸಲ್ಲಿಸಬೇಕಾದ ಸಾಮಂತ ಅಧಿಕಾರಿಗಳಾಗಿದ್ದರು. ಇವರು ದ್ರವ್ಯ ಮತ್ತು ಸೈನಿಕ ಸೇವೆನ್ನು ಸಲ್ಲಿಸಲು ಇಂತಿಷ್ಟು ಭೂಮಿಯನ್ನು ಉಂಬಳಿಯಾಗಿ ಪಡೆಯುತ್ತಿದ್ದರು. ಭೂಮಿಯ ಉತ್ಪತ್ತಿಗೆ ಅನುಗುಣವಾಗಿ ಸೈನ್ಯವನ್ನು ಸಲಬೇಕಾಗಿದ್ದಿತು.[2]

ಅಮರನಾಯಕರಿಗೆ ನೀಡಿದ ಭೂಮಿಗೆ ಅಮರಂ ಎಂದು ಕರೆಯುತ್ತಿದ್ದರು. ರಾಜಕೀಯ, ಆಡಳಿತ, ಆರ್ಥಿಕ ಮತ್ತು ನ್ಯಾಯ ಅಧಿಕಾರಗಳು ತಮ್ಮ ಅಮರಂ ಪ್ರದೇಶ ವ್ಯಾಪ್ತಿಗೆ ಅನ್ವಯಿಸುವಂತೆ ದೊರಕುತ್ತಿದ್ದವು. ಈ ಅಮರನಾಯಕ ವ್ಯವಸ್ಥೆಯು ಅವರ ಭೌಗೋಳಿಕ ಸ್ಥಾನ, ಗಾತ್ರ ಮತ್ತು ಸಂಪನ್ಮೂಲಗಳ ಮೇಲೆ ನಿರ್ಧರಿತವಾಗುತ್ತಿತ್ತು. ಇಂತಹ ಭೂದಾನವನ್ನು ಅಮರಮಾಗಣಿ, ಅಮರನಾಯಕ ಮುಂತಾದ ಹೆಸರುಗಳಿಂದ ಕರೆಯುತ್ತಿದ್ದರು. ಅಮರನಾಯಕರಿಗೆ ತಮ್ಮ ಪ್ರದೇಶದಲ್ಲಿ ಕೋಟೆಗಳನ್ನು ಕಟ್ಟಲು ಹಾಗೂ ಸೇನೆಯನ್ನು ಇಟ್ಟುಕೊಳ್ಳಲು ಅವಕಾಶವಿದ್ದುದು ಗಮನಾರ್ಹ.[3] ಈ ಪದ್ಧತಿಯ ಆಧಾರದ ಮೇಲೆ ಈ ಜಿಲ್ಲೆಯಲ್ಲಿ ಅನೇಕ ಪ್ರದೇಶಗಳನ್ನು ಅಮರನಾಯಕರಿಗೆ ಕೊಡಲಾಗಿತ್ತು. ಅಂತಹ ಅಮರನಾಯಕತ್ವ ಪಡೆದ ಮನೆತನಗಳು ಜಿಲ್ಲೆಯಲ್ಲಿ ಚಿತ್ರದುರ್ಗ, ಹರತಿ, ಹಟ್ಟಿ, ಮತ್ತಿನಾಡುಗಳಾಗಿವೆ. ಇವರು ವಿಜಯನಗರದ ಸಾಮಂತರಾಗಿ ಆಳ್ವಿಕೆ ನಡೆಸಿರುವುದು ಕಂಡುಬರುತ್ತದೆ.[4]

ವಿಜಯನಗರದ ಅರಸರು ಸಾಮ್ರಾಜ್ಯವನ್ನು ರಾಜ್ಯ, ವಳಿತ, ವೇಂಟೆ, ನಾಡು, ಸೀಮೆ, ಚಾವಡಿ, ಮಾಗಣಿ, ಸಂಮತ್ತು, ಹೋಬಳಿ, ಕಸುಬೆ ಮುಂತಾದ ಪ್ರಾದೇಶಿಕ ವಿಭಾಗಗಳನ್ನು ಸ್ಥಾಪಿಸಿಕೊಂಡು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ್ದರೆಂಬುದನ್ನು ಅವರ ಕಾಲದಲ್ಲಿ ದೊರೆತ ಶಾಸನಗಳಿಂದ ತಿಳಿದುಬರುತ್ತದೆ. ರಾಜ್ಯ ಎಂಬ ಪದವು ಅವರು ಆಳುತ್ತಿದ್ದ ರಾಜ್ಯಗಳಿಗೂ, ಸಾಮ್ರಾಜ್ಯದ ಕಾಲದಲ್ಲಿ ಅಂತರ್ಗತವಾಗಿದ್ದ ವಿವಿದ ದೇಶ ಭಾಗಗಳಿಗೂ ಅನ್ವಯವಾಗುತ್ತಿತ್ತು. ಈ ರಾಜ್ಯಗಳಿಗೆ ಮುಖ್ಯ ನಗರಗಳು ದುರ್ಗಗಳೇ ಆಗಿದ್ದುದು ಗಮನಾರ್ಹ.[5]

ವಿಜಯನಗರ ಆಡಳಿತಾವಧಿಯಲ್ಲಿ ಚಿತ್ರದುರ್ಗ ಪ್ರದೇಶದಲ್ಲಿ 12 ಸೀಮೆಗಳು, 19 ಸ್ಥಳಗಳು ಹಾಗೂ 6 ನಾಡುಗಳು ಅಸ್ತಿತ್ವದಲ್ಲಿದ್ದವು.[6] ಸೀಮೆಗಳಲ್ಲಿ ಪ್ರಮುಖವಾಗಿ ರಾಮಗಿರಿ, ಜಾಜೂರು, ಚಿತ್ರಹಳ್ಳಿ, ದುಮ್ಮಿ, ಬಾಗೂರು, ಬೂದಿಹಾಳು, ಮತ್ತೋಡು, ಹಿರಿಯೂರು, ಗುಂಟನೂರು, ದೊಡ್ಡೇರಿ, ನವಬಕುವಾಡ ಮತ್ತು ಹೊಳಲ್ಕೆರೆ ಸೀಮೆಗಳು ಮುಖ್ಯವಾಗಿದ್ದವು. ಸ್ಥಳಗಳಲ್ಲಿ ಅರಳಿಹಾಳ, ಕುರುಬರಹಳ್ಳಿ, ಗೌಡನಹಳ್ಳಿ, ತವನಿಧಿ, ನಂದನಸೋಮ, ನುಲಿಯನೂರು,

ಬಗ್ಗನಡು, ಮಧ್ವಸಮುದ್ರ, ಮಲೆಯನೂರು, ಇಕ್ಕನೂರು, ಲಕ್ಕಿಹಳ್ಳಿ, ಹರತಿ ಮತ್ತು ಹೊಸೂರು ಮುಖ್ಯವಾಗಿವೆ. ಅಂಕಸಮುದ್ರ, ವೇಣುಕಲ್ಲುಗುಡ್ಡ, ಗೋಸಿಕೆರೆ, ಚಿಂಮತ್ತನಕಲ್ಲು, ಚಿತ್ರಹಳ್ಳಿ ನಾಡುಗಳಲ್ಲಿ ಮುಖ್ಯವಾದವುಗಳೆಂದು ಹೇಳಲಾಗಿದೆ.[7]

ಮೇಲ್ಕಂಡ ವಿಭಾಗಗಳಲ್ಲದೆ ಬಾಗೂರು ವಳಿತ, ಕೋಟೆಕೆರೆಯ ವೇಂಟೆ, ಬಯಕಾರ ರಾಮಪ್ಪನ ಮಾಗಣಿ, ಧರ್ಮಪುರ ಸಂಮತ್ತು, ಚಿಮ್ಮತ್ತನೂರವಿತ್ತಿ ಇನ್ನು ಮುಂತಾದ ಆಡಳಿತ ವಿಭಾಗಗಳು ಜಿಲ್ಲೆಯಾದ್ಯಂತ ಕಂಡುಬರುತ್ತವೆ. ಈಗ ವಿಜಯನಗರ ಅರಸರು ಚಿತ್ರದುರ್ಗ ಜಿಲ್ಲೆಯಾದ್ಯಂತ ಆಡಳಿತದ ವಿಭಾಗಗಳನ್ನು ಸ್ಥಾಪಿಸಿಕೊಂಡರಲ್ಲದೆ, ಕೋಟೆ–ಕೊತ್ತಲುಗಳನ್ನು ಸಹ ನಿರ್ಮಿಸಿದ್ದಾರೆ. ಆ ಮೂಲಕ ದಕ್ಷಿಣದ ದಾಳಿಗಳನ್ನು ತಡೆಗಟ್ಟಲು ಕ್ರಮ ತೆಗೆದುಕೊಂಡಿರುವುದು ಕಂಡುಬರುತ್ತದೆ. ಹೀಗೆ ವಿಜಯನಗರ ಅರಸರು ಈ ಜಿಲ್ಲೆಯಲ್ಲಿ ರಕ್ಷಣಾ ಸ್ಮಾರಕಗಳನ್ನು ಸ್ಥಾಪಿಸಿರುವುದರ ಹಿಂದಿನ ಉದ್ದೇಶ ಸುವ್ಯವಸ್ಥಿತವಾದ ಹಾಗೂ ಕ್ರಮಬದ್ಧವಾದ ಆಡಳಿತವನ್ನು ಸ್ಥಾಪಿಸುವುದೇ ಆಗಿತ್ತು ಎನ್ನುವುದು ಸ್ಪಷ್ಟವಾಗುತ್ತದೆ.

ವಾಸ್ತವವಾಗಿ ಕೋಟೆ ಎಂದರೆ ರಕ್ಷಣಾ ಆವರಣವುಳ್ಳ ಪ್ರದೇಶ ಎಂದರ್ಥ. ಮುಖ್ಯವಾಗಿ ರಾಜ್ಯ ಹಾಗೂ ರಾಜನಿಗೆ ರಕ್ಷಣೆ ಒದಗಿಸುವ ಮಹತ್ವವಾದ ಸ್ಥಳವಾಗಿದೆ. ರಕ್ಷಣಾವಾಸ್ತು ಶಿಲ್ಪವು ಬೆಳೆದು ಬಂದ ಬಗೆಯನ್ನು ಇತಿಹಾಸದುದ್ದಕ್ಕೂ ಗಮನಿಸಬಹುದು. ಈ ನಿಟ್ಟಿನಲ್ಲಿ ವಿಜಯನಗರದ ಅರಸರು ರಕ್ಷಣಾ ವಾಸ್ತುರಚನೆ ಮತ್ತು ಶಸ್ತ್ರಾಸ್ತ್ರಗಳ ಬಳಕೆಯಲ್ಲಿ ವಿನೂತನ ಪ್ರಯೋಗಗಳನ್ನು ಚಿತ್ರದುರ್ಗ ಭಾಗದಲ್ಲಿ ನಡೆಸಿದರೆನ್ನಬಹುದು. ಚಿತ್ರದುರ್ಗವು ಅವರ ರಕ್ಷಣಾವಾಸ್ತು ರಚನೆಗಳ ಪ್ರಯೋಗಶಾಲೆಯಾಯಿತೆಂದೇ ಹೇಳಬಹುದು. ಅಂದು ಬಳಕೆಯಲ್ಲಿದ್ದ ಬಿಲ್ಲು, ಬಾಣ, ಕತ್ತಿ, ಗುರಾಣಿಗಳ ಮದ್ಯದಲ್ಲಿ ಮಹಮದಿಯರ ಪ್ರವೇಶದಿಂದಾಗಿ ಅವರು ಬಳಸುತ್ತಿದ್ದ ಸಿಡಿಮದ್ದಿನ ಪ್ರಯೋಗಗಳನ್ನು ವಇಜಯನಗರದವರು ಅಳವಡಿಸಿಕೊಳ್ಳುವ ಅನಿವಾರ್ಯತೆಯುಂಟಾಯಿತು. ಸಿಡಿಮದ್ದಿನ ಉಪಕರಣಗಳಾದ ಬಂದೂಕು ಮತ್ತು ಪಿರಂಗಿಗಳಿಗೆ ಜಗ್ಗದಂತಹ ಕೋಟೆ–ಕೊತ್ತಲುಗಳನ್ನು ನಿರ್ಮಾಣ ಮಾಡಬೇಕಾದ ಅನಿವಾರ್ಯತೆಯುಂಟಾಯಿತು. ಈ ಕಾರ್ಯ ಸಾದಿಸಲು ವಿಶೇಷವಾಗಿ ಗಿರಿದುರ್ಗಗಳಿಗೆ ಪ್ರಾಶಸ್ತ್ಯ ನೀಡಲಾಯಿತು. ಕಾರಣ ಕೋಟೆಗಳನ್ನು ಕಟ್ಟಲು ಉಚಿತ ಸಂಪನ್ಮೂಲಗಳು ಬೆಟ್ಟಪ್ರದೇಶದಲ್ಲಿ ಹೇರಳವಾಗಿ ಸಿಗುತ್ತಿದ್ದವಲ್ಲದೆ ಎತ್ತರವಾದ ಪ್ರದೇಶದಿಂದ ಶತ್ರುಗಳನ್ನು ಸುಲಭವಾಗಿ ಸದೆ ಬಡಿಯಬಹುದಾಗಿದ್ದರ ಹಿನ್ನೆಲೆಯಲ್ಲಿ ಗಿರಿಪ್ರದೇಶದಲ್ಲಿ ರಕ್ಷಣಾವಾಸ್ತು ರಚನೆಗಳು ನಿರ್ಮಾಣಗೊಂಡವು.

ಹೀಗೆ ರಾಜ್ಯರಕ್ಷಣೆಯ ಅನಿವಾರ್ಯದ ಕ್ರಮದಿಂದಾಗಿ ವಇಜಯನಗರದ ಅರಸರು ಮತ್ತು ಅವರ ಮಾಂಡಲೀಕರು ನಿರ್ಮಿಸಿದ ರಕ್ಷಣಾವಾಸ್ತು ರಚನೆಗಳು ಜಿಲ್ಲೆಯಾದ್ಯಂತ ಕಂಡುಬಂದಿವೆ. ಇವುಗಳಲ್ಲಿ ಅನೇಕ ಸ್ಮಾರಕಗಳು ನಾಶವಾಗಿವೆಯಾದರೂ ನಿಯಮಬದ್ಧವಾದ ರಕ್ಷಣಾವಾಸ್ತುರಚನೆಯಿಂದ ಕೂಡಿದ ಕೆಲವು ಸಮಾರಕಗಳು ಈ ಭಾಗಗಳಲ್ಲಿ ನಾಶವಾಗದೇ ಹಾಗೆಯೇ ಉಳಿದಿವೆ. ಇಂತಹ ಸ್ಮಾರಕಗಳಲ್ಲಿ ಕೆಲವು ತಮ್ಮ ಮೂಲಸ್ವರೂಪವನ್ನು ಕಳೆದುಕೊಂಡಿದ್ದರೂ ಸಹ ಅಧ್ಯಯನಕ್ಕೆ ಯಾವುದೇ ಕೊರತೆ ಇಲ್ಲ. ಸಮಸ್ಯೆ ಎಂದರೆ ವಿಜಯನಗರ ಮತ್ತು ಅವರ ಸಾಮಂತರ ಅವಧಿಯಲ್ಲಿ ನಿರ್ಮಾಣವಾಗಿದ್ದ ಅನೇಕ ಕೋಟೆಗಳು ಪಾಳೆಯಗಾರರ ಅವಧಿಯಲ್ಲಿ ಮಾರ್ಪಾಟಾಗಿರುವುದರಿಂದ ನಿರ್ಧಿಷ್ಠವಾಗಿ ಕೆಲವು ಕಡೆ ಗುರುತಿಸುವುದು ಕಷ್ಟವಾದರೂ ಶಾಸನ, ಸಾಹಿತ್ಯ ಹಾಗು ಕೆಲವು ಲಕ್ಷಣಗಳ ಆಧಾರದ ಮೇಲೆ ಗುರುತಿಸಬಹುದಾಗಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರ ಕಾಲದ ರಕ್ಷಣಾ ವಾಸ್ತು ರಚನೆಯ ಲಕ್ಷಣಗಳು.

1. ಎತ್ತರವಾದ ಕೋಟೆ ಗೋಡೆ.
2. ಗೋಡೆಗಳ ಹೊರಮೈ ಮೇಲ್ಮುಖವಾಗಿ ಕಿರಿದಾಗುತ್ತಾ ಹೋಗುತ್ತದೆ.
3. ಕಲ್ಲುಗಳು ಬೆಣೆಯಾಕಾರದಲ್ಲಿದ್ದು ಅಗಲವಾದ ನುಣುಪು ಮಾಡಿದ ಹೊರಮೈ, ಕಿರಿದಾಗುತ್ತಾ ಹೋಗುವ ಒಳ ಮೈ ಹೊಂದಿದೆ.
4. ಯಾವುದೇ ಗಾರೆ ಸಹಾಯವಿಲ್ಲದೆ ಕಲ್ಲುಗಳ ಜೋಡಣೆ.
5. ಗೋಡೆಗಳ ಹೊರಭಾಗದಲ್ಲಿ ಉದ್ದಕ್ಕೂ ಮಣ್ಣಿನ ದಂಡೆಯಿರುವುದು.
6. ಗೋಡೆಗಳ ಸುತ್ತಲೂ ಕಂದಕಗಳ ನಿರ್ಮಾಣ.
7. ಹೆಬ್ಬಾಗಿಲುಗಳ ಪಕ್ಕದಲ್ಲಿ ದಿಡ್ಡಿಬಾಗಿಲುಗಳ ರಚನೆ.
8. ಗೋಡೆ ಗೋಡೆಗಳ ಮುಂದಕ್ಕೆ ಚಾಚಿರುವ ಚೌಕಾಕಾರದ/ವೃತ್ತಾಕಾರದ ಕೊತ್ತಲಗಳು.
9. ಗುಡ್ಡ ಕಣಿವೆಗಳ ಮದ್ಯ ಸಂಪರ್ಕ ಸಾಧಿಸಲು ವೀಕ್ಷಣಾ ಗೋಪುರಗಳು.
10. ಕೊತ್ತಲ ಹಾಗು ಕೋಟೆ ಗೋಡೆಗಳಲ್ಲಿ ವ್ಯಾಪಕವಾದ ಬಂದೂಕು ರಂಧ್ರಗಳು ಮತ್ತು ಪಿರಂಗಿ ಗೂಡುಗಳು.
11. ಆಡಳಿತ ಕೇಂದ್ರಗಳ ಸುತ್ತಲೂ ರಕ್ಷಣಾ ಗೋಡೆಗಳು.

ಸಾಮಾನ್ಯವಾಗಿ ಜಿಲ್ಲೆಯಾದ್ಯಂತ ವ್ಯಾಪಕವಾಗಿ ನಿರ್ಮಾಣಗೊಂಡ ಕೋಟೆಗಳಲ್ಲಿ ಮೇಲ್ಕಂಡ ಲಕ್ಷಣಗಳನ್ನು ಕಾಣಬಹುದಾಗಿದೆ. ಮೇಲೆ ಚರ್ಚಿಸಿದಂತೆ ವಿಜಯನಗರ ಅರಸರು ಜಿಲ್ಲೆಯಲ್ಲಿ ಸ್ಥಾಪಸಿದ್ದ ಆಡಳಿತ ಘಟಕಗಳು ಸುತ್ತಾ ರಕಷಣೆಯ ದೃಷ್ಠಿಯಿಂದ ರಕ್ಷಣಾಗೋಡೆಗಳನ್ನು ನಿರ್ಮಿಸುತ್ತಿದ್ದರೆಂದು ಹೇಳಲಾಗಿದೆ.[8] ಈ ಅಂಶವನ್ನು ಜಿಲ್ಲೆಯಲ್ಲಿನ ಅವರ ಶಾಸನಗಳೂ ಸಹ ದೃಢಪಡಿಸುತ್ತವೆ.[9] ಈ ಹಿನ್ನೆಲೆಯಲ್ಲಿ ಗ್ರಾಮರಕ್ಷಣಾಕೋಟೆಗಳ ಕಲ್ಪನೆ ಹೆಚ್ಚಾಗಿ ಬೆಳೆದು ಬಂದದ್ದು ಇವರ ಅವಧಿಯಲ್ಲಿಯೇ ಎಂದು ಹೇಳಬಹುದು.

ಈ ಜಿಲ್ಲೆಯಲ್ಲಿ ವಿಜಯನಗರದ ಆಡಳಿತ ಕೇಂದ್ರ ಬೆಮ್ಮತ್ತನಕಲ್ಲು ಆಗಿದ್ದಿತು. ಚಿತ್ರದುರ್ಗ ಬೆಟ್ಟದ ಮೇಲಿರುವ ಸಂಪಿಗೆ ಸಿದ್ಧೇಶ್ವರ ದೇವಾಲಯದಲ್ಲಿರುವ ಕ್ರಿ.ಶ. 1355 ಮತ್ತು 1356ರ ಒಂದನೇ ಬುಕ್ಕರಾಯನ ಶಾಸನಗಳು ವಇಜಯನಗರ ಸಾಮ್ರಾಜ್ಯದ ಪ್ರತಿನಿಧಿಯಾಗಿ ಬೆಮ್ಮತ್ತನಕಲ್ಲು ನಾಡನ್ನು ಮಲ್ಲಿನಾಥ ಒಡೆಯನು ಆಳುತ್ತಿದ್ದನೆಂಬುದನ್ನು ಸೂಚಿಸುತ್ತವೆ. ಅಲ್ಲದೆ ಈ ಎರಡು ಶಾಸನಗಳಲ್ಲಿ ಕೋಟೆಯ ಬಗ್ಗೆ ವಿವರಗಳಿವೆ. ಅಗಳುಗಳು, ಆಳ್ವೇರಿಗಳು, ಬತೇರಿಗಳು, ಕೊತ್ತಲಗಳು, ಒಡ್ಡುಗಳು, ಭಾವುಟದ ದಿನ್ನೆಗಳು ಹೇರಳವಾಗಿವೆ. ಇಂತಹ ಕೋಟೆಯನ್ನು ಏನೆಂದು ವರ್ಣಿಸಲಿ, ಸ್ವಸೇನೆಗೂ, ಶತ್ರುಸೇನೆಗೂ ವಜ್ರಕೋಟೆಯಂತೆ ತೋರುವುದು ಎಂದು ಕೋಟೆಯನ್ನು ವರ್ಣಿಸಲಾಗಿದೆ.[10] ಈ ಶಾಸನದಲ್ಲಿ ಮಲ್ಲಿನಾಥ ಒಡೆಯನಿಗೆ ನಡುಗೋಂಟೆ ಮಲ್ಲ ಎಂಬ ಬಿರುದು ಇರುವುದು ಕಂಡುಬರುತ್ತದೆ, ನಡುಕೋಂಟೆಗೆ ನಡೆದಾಡುವಕೋಟೆ ಎಂಬ ಅರ್ಥವಿದೆ.[11] ಈ ಮಲ್ಲಿನಾಥನು ಕೋಟೆಯ ಕೆಲವು ಮುಖ್ಯ ದ್ವಾರಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಕ್ರಿ.ಶ. 1356ರ ಸುಮಾರಿನಲ್ಲಿ ಸಂಪಿಗೆ ಸಿದ್ಧೇಶ್ವರ ದೇವಾಲಯದ ಪ್ರವೇಶ ದ್ವಾರ ಮಂಟಪ, ಅದರ ಮುಂದಿನ ಉಯ್ಯಾಲೆ ಕಂಭ ಮತ್ತು ಹಿಡಂಭೇಶ್ವರ ದೇವಾಲಯದ ಶಿಖರ ನಿರ್ಮಾಣ ಮೊದಲಾದ ಕಾರ್ಯಗಳನ್ನು ಮಾಡಿರುವುದು ತಿಳಿದುಬರುತ್ತದೆ.[12] ಮಲ್ಲಿನಾಥ ಒಡೆಯ ತನ್ನ ತಾಯಿ ಹೆಸರಿನಲ್ಲಿ ಚಿತ್ರದುರ್ಗ

ಸಮೀಪವಿರುವ ಮಲ್ಲಾಪುರ ಜೋಡಿಕೆರೆಯನ್ನು ನಿರ್ಮಿಸಿದ್ದಾನೆಂದು ಹೇಳಲಾಗಿದೆ. ಹಿಡಂಬೇಶ್ವರ ದೇವಾಲಯದಲ್ಲಿನ ಶಾಸನವು ವಿಜಯನಗರ ವೀರ ಪ್ರತಾಪದೇವರಾಯನ ಮಗ ವೀರಮಲ್ಲಣ ಒಡೆಯನು ಮಹಾಮಂಡಲೇಶ್ವರನಾಗಿ ಬೆಮ್ಮತ್ತನಕಲ್ಲು ಪಟ್ಟಣದಲ್ಲಿ ಆಳುತ್ತಿದ್ದಾಗ ಇದೇ ದೇವಾಲಯದ ದಕ್ಷಿಣ ದ್ವಾರಕ್ಕೆ ಕಲ್ಲುಗೋಪುರ ಕಟ್ಟಿಸಿದನೆಂದು ತಿಳಿಸುತ್ತದೆ. ಈಗಲೂ ಈ ಗಾಳಿಗೋಪುರಗಳು ಆ ಕಾಲದ ಜೀವಂತ ಸಾಕ್ಷಿಗಳಾಗಿವೆ.

ಚಿತ್ರದುರ್ಗ ಕೋಟೆಯ ಕಾಮನ ಬಾಗಿಲು ಅಥವ ಹುಲಿಮುಖದ ಬಾಗಿಲ ರಚನೆಯು ಸಹ ವಿಜಯನಗರ ಶೈಲಿಯನ್ನೇ ಹೋಲುತ್ತದೆ. ಗೋಡೆಗೆ ಬಳಸಿರುವ ಕಲ್ಲುಗಳ ವಿನ್ಯಾಸ, ದ್ವಾರರಚನೆ, ಗೋಡೆ ಮೇಲಿರುವ ಶಿಲ್ಪಗಳು, ಭಾರಿ ಗಾತ್ರದ ಕಂದಕ, ಕೊತ್ತಲುಗಳ ನಿರ್ಮಾಣ ವಿಜಯನಗರ ಕೋಟೆಯ ರಚನೆಯನ್ನು ಹೋಲುತ್ತಿರುವುದು ಗಮನಾರ್ಹ. ಅಲ್ಲದೆ ಈ ದ್ವಾರದ ಸಮೀಪವಿರುವ ಮತ್ತೊಂದು ಬಾಗಿಲ ಬಳಿಯಿರುವ ಗುಂಡಿನಲ್ಲಿ "ಶ್ರೀ ವೀರಭದ್ರ ಕೊತ್ತಳ" ಎಂಬರ್ಥದ ಒಂದು ಸಣ್ಣ ಶಾಸನವಿದೆ. ಈ ಶಾಸನವು ಕ್ರಿ.ಶ. 16ನೇ ಶತಮಾನದ್ದು. ಇದರಿಂದ ವಿಜಯನಗರ ಕಾಲಕ್ಕೆ ಕೋಟೆಯ ಕೆಲವು ಭಾಗಗಳು ಕಟ್ಟಲ್ಪಟ್ಟವು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.[13] ಕೋಟೆ ಕೊತ್ತಲಗಳನ್ನು ತಮ್ಮ ಇಷ್ಟ ದೈವಗಳ ಹೆಸರಿನಲ್ಲಿ ಕರೆಯುತ್ತಿದ್ದರೆಂಬ ಸಂಗತಿಯು ಈ ಶಾಸನದಿಂದ ದೃಢಪಡುತ್ತದೆ. ಈಗ ಚಿತ್ರದುರ್ಗಬೆಟ್ಟ ಪ್ರದೇಶದಲ್ಲಿ ವಿಜಯನಗರ ಕಾಲದ ರಕ್ಷಣಾ ವಾಸ್ತುರಚನೆಗಳ ನಿರ್ಮಾಣಗಳು ಕಂಡುಬರುತ್ತವೆ. ಇದೇ ರೀತಿಯ ರಚನೆಗಳು ಮೊಳಕಾಲ್ಮೂರು, ಬೂದಿಹಾಳ್, ವೇಣುಕಲ್ಲುಗುಡ್ಡ, ಬ್ರಹ್ಮಗಿರಿ ಮುಂತಾದ ಕಡೆ ಕಂಡುಬರುತ್ತದೆ.

ಹರತಿಯ ತಿಪ್ಪರಾಜನು ವಿಜಯನಗರ ಪ್ರಾರಂಭದ ದೊರೆಗಳಾದ ಹಕ್ಕ-ಬುಕ್ಕರ ಸೈನ್ಯದಲ್ಲಿ ಪ್ರಮುಖ ದಳಪತಿಯಾಗಿದ್ದನು. ಈತನ ಶೌರ್ಯ, ಸಾಹಸ ಹಾಗು ಪರಾಕ್ರಮಗಳನ್ನು ಮೆಚ್ಚಿದ ಬುಕ್ಕರಾಯನು ವೇದಾವತಿ ತೀರದ ಬಹು ಭೂ ಭಾಗವನ್ನೆಲ್ಲಾ ಜಾಗೀರಾಗಿ ಕೊಟ್ಟನು. ಇದೇ ಸಂದರ್ಭದಲ್ಲಿ ತಿಪ್ಪರಾಜನು ತಮ್ಮ ಪೂರ್ವಿಕರ ಹೆಸರಿನಲ್ಲಿ ಅನೇಕ ಊರುಗಳನ್ನು ಸ್ಥಾಪಿಸಿದನು. ಹೀಗೆ ಸ್ಥಾಪಿತವಾದ ಗ್ರಾಮಗಳಲ್ಲಿ ಹರತಿ ಕೋಟೆಯು ಒಂದು.[14] ಈತನ ತರುವಾಯ ಅಧಿಕಾರಕ್ಕೆ ಬಂದ ನಾಯಕರುಗಳೆಲ್ಲಾ ವಿಜಯನಗರ ಅರಸರ ಸಾಮಂತರಾಗಿ, ಅಮರನಾಯಕರಾಗಿ ಹರತಿಕೋಟೆಯು ಸೇರಿದಂತೆ ಸುತ್ತಮುತ್ತ ಅನೇಕ ಗ್ರಾಮಗಳನ್ನು ಸ್ಥಾಪಿಸಿ ಅವುಗಳಿಗೆ ರಕ್ಷಣಾತ್ಮಕವಾಗಿ ಕೋಟೆಕೊತ್ತಲುಗಳನ್ನು ನಿರ್ಮಿಸಿದ ಉಲ್ಲೇಖಗಳು ಕಂಡುಬರುತ್ತವೆ. ಯರಬಳ್ಳಿ, ದೊಡ್ಡೇರಿ, ಗೋಸಿಕೆರೆ, ಐಮಂಗಲ, ಕೋಟೆಕೆರೆ, ಪರಶುರಾಂಪುರ, ಖಂಡೇನಹಳ್ಳಿ, ಶಿಡ್ಲೈನಕೋಟೆ. ಸೂಗೂರು, ವೇಣೂಕಲ್ಲುಗುಡ್ಡಗಳಲ್ಲಿ ಇಂದಿಗೂ ಕೋಟೆ ಕೊತ್ತಲುಗಳ ಅವಶೇಷಗಳನ್ನು ಕಾಣಬಹುದು. ಕ್ರಿ.ಶ. 1511ರ ತಾಮ್ರಶಾಸನವೊಂದು ಸಿಡ್ಲೈನಕೋಟೆ, ಹೆಮಂಡಿಹಾಳು, ಮಾರೇನಹಳ್ಳಿಗ್ರಾಮಗಳು ಹರತಿ ಸ್ಥಳಕ್ಕೆ ಸೇರದ್ದವೆಂಬ ಮಾಹಿತಿಯನ್ನು ತಿಳಿಸುತ್ತದೆ.[15] ಹಾಗೆಯೇ ಸಿಡ್ಲೈನಕೋಟೆ ಗ್ರಾಮದ ಶಾಸನವೊಂದು ಆ ಕಾಲಕ್ಕಾಗಲೇ ಕೋಟೆ ಇದ್ದ ಮಾಹಿತಿಯನ್ನು ನೀಡುತ್ತದೆ. ಈಗಲೂ ಆ ಗ್ರಾಮದಲ್ಲಿ ಕೋಟೆಯ ಅವಶೇಷಗಳನ್ನು ಕಾಣಬಹುದಾಗಿದೆ. ಅಲ್ಲದೆ ಈ ಗ್ರಾಮದ ಪಕ್ಕದಲ್ಲಿರುವ ವೇದಾವತಿ ನದಿ ದಂಡೆ ಮೇಲೆ ವಿಜಯನಗರ ಶೈಲಿಯ ಬ್ರಹ್ಮದೇವರ ದೇವಾಲಯವಿರುವುದು ಅವರ ಆಳ್ವಿಕೆಯನ್ನು ದೃಢಪಡಿಸುತ್ತವೆ.[16]

ಹಿರಿಯೂರು ತಾಲ್ಲೂಕಿನ ಸೂಗೂರು ಮತ್ತು ಖಂಡೇನಹಳ್ಳಿಗಳಲ್ಲಿರುವ ವಿಜಯನಗರ ಕಾಲದ ಶಾಸನಗಳು ಆ ಗ್ರಾಮಕ್ಕೆ ನಾಲ್ಕುನಿಟ್ಟಿನ ಬುರುಜುಗಳನ್ನು ನಿರ್ಮಿಸಿ ಕೋಟೆಯನ್ನು ನಿರ್ಮಿಸಿದುದರ ಬಗ್ಗೆ ಮಾಹಿತಿಯನ್ನು ನೀಡುತ್ತಿರುವುದು ಗಮನಾರ್ಹ.[17] ಇದರಿಂದ ವಿಜಯನಗರ ಕಾಲಕ್ಕಾಗಲೇ ಪ್ರತಿ ಗ್ರಾಮಕ್ಕೂ ರಕ್ಷಣೆಯ ದೃಷ್ಟಿಯಿಂದ ಗ್ರಾಮದ ಸುತ್ತ ರಕ್ಷಣಾಗೋಡೆಗಳನ್ನು ನಿರ್ಮಿಸುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಮೇಲೆ ಚರ್ಚಿಸಿದಂತೆ

ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರದ ಅರಸರು ಸ್ಥಾಪಿಸಿದ ಪ್ರಾದೇಶಿಕ ವಿಭಾಗಗಳನ್ನು ಕೋಟೆಯಿಂದ ಭದ್ರಪಡಿಸುತ್ತಿದ್ದರೆನ್ನಬಹುದು. ಗ್ರಾಮ ಕೋಟೆಗಳು ಗ್ರಾಮದ ನಾಗರೀಕರನ್ನು ಹಾಗು ಸಂಪತ್ತನ್ನು ರಕ್ಷಿಸುತ್ತಿದ್ದವು. ಊರಿಗೊಂದೇ ಹೆಬ್ಬಾಗಿಲೆಂಬಂತೆ ಗ್ರಾಮದ ಒಳ ಮತ್ತು ಹೊರ ಪ್ರದೇಶಗಳು ಒಂದೇ ಬಾಗಿಲಿನ ಮೂಲಕವೇ ನಡೆಯುತ್ತಿತ್ತು. ರಾತ್ರಿ ವೇಳೆ ಹೆಬ್ಬಾಗಿಲನ್ನು ಮುಚ್ಚಿ ಸರದಿಯೋಪಾದಿಯಲ್ಲಿ ಕಾವಲು ಕಾಯುವಂತ ವ್ಯವಸ್ಥೆಯಿತ್ತು. ಈ ಎಲ್ಲಾ ಕೋಟೆಗಳ ಮದ್ಯ ಸಂಪರ್ಕ ಸಾಧಿಸಲು ಮಧ್ಯ ಮಧ್ಯ ವೀಕ್ಷಣಾಗೋಪುರ ಅಥವ ಕಾವಲು ಗೋಪುರಗಳನ್ನು ಸಾಮ್ರಾಜ್ಯದಾದ್ಯಂತ ಸ್ಥಾಪಿಸಿರುವುದು ಕಂಡುಬರುತ್ತದೆ.

ಕಣಜನಹಳ್ಳಿ ಕೋಟೆಯ ಮಧ್ಯಭಾಗದಲ್ಲಿ ನಿರ್ಮಿಸಿರುವ ತವಗ ಎಂಬ ಬುರುಜು 63 ಮೀ. ಸುತ್ತಳತೆ ಇದ್ದು, 12 ಮೀ. ಎತ್ತರದಲ್ಲಿದೆ. ಇದಕ್ಕೆ ಹತ್ತಲು 25 ಮೆಟ್ಟಿಲುಗಳಿವೆ. ತವಗ ಎಂದರೆ ಕೋಟೆಯಲ್ಲಿ ಫಿರಂಗಿ ಮೊದಲಾದವುಗಳನ್ನು ಇಡುವುದಕ್ಕಾಗಿ ಮಾಡಿದ ವಿಶಿಷ್ಟ ಜಗಲಿ ಎಂದು ಕರೆಯಲಾಗಿದೆ. ಇಂತಹ ಬುರುಜುಗಳು ಮದ್ದಿನಮನೆಗಳಾಗಿ ಕಾರ್ಯ ನಿರ್ವಹಿಸಿರುವುದಕ್ಕೆ ಈ ಬುರುಜು ಉತ್ತಮಮ ಉದಾಹರಣೆಯಾಗಿದೆ. ಇದೇ ರೀತಿ ಹಿರಿಯೂರು ತಾಲ್ಲೂಕಿನ ಲಕ್ಕಿಹಳ್ಳಿ ಕೋಟೆಯ ಮಧ್ಯಭಾಗದಲ್ಲಿರುವ ಬುರುಜು ಚಚ್ಚೌಕಾರವಾಗಿದೆ. ಚಚ್ಚೌಕಾರವಾಗಿರುವ ಈ ಬುರುಜಿನ ಮೇಲ್ಭಾಗದಲ್ಲಿ ಮತ್ತೆ ಹತ್ತು ಅಡಿ ಎತ್ತರದವರೆಗಿನ ವೃತ್ತಾಕಾರವಾದ ಬುರುಜನ್ನು ನಿರ್ಮಿಸಲಾಗಿದೆ. ಈ ಬುರುಜು ಪೂರ್ವಪಶ್ಚಿಮವಾಗಿ 17 ಮೀ. ಇದ್ದು, ಉತ್ತರದಕ್ಷಿಣದಲ್ಲಿ 20 ಮೀ. ವಿಸ್ತಾರವಾಗಿದ್ದು, 15 ಮೀ. ಎತ್ತರವಾಗಿದೆ. ಮೊಳಕಾಲ್ಮೂರು ತಾಲ್ಲೂಕಿನ ಪರ್ತೆನಹಳ್ಳಿಯ ಕಾವಲುಬುರುಜು 45 ಮೀ. ಸುತ್ತಳತೆ ಹೊಂದಿದ್ದು, 30 ಅಡಿ ಎತ್ತರವಾಗಿದೆ. ಹಿರೇಕಂದವಾಡಿಯ ಕಾವಲುಗೋಪುರ 50 ಮೀ. ವಿಸ್ತಾರವಾಗಿದ್ದು, 15 ಮೀ. ಎತ್ತರವಾಗಿದೆ. ಈ ಗೋಪುರಕ್ಕೆ ಪೂರ್ವಪಶ್ಚಿಮದಲ್ಲಿ ಎರಡು ಬಾಗಿಲುಗಳಿವೆ. ಸಾಮಾನ್ಯವಾಗಿ ಈ ಎಲ್ಲಾ ಬುರುಜುಗಳಲ್ಲಿ ಎರಡು ಹಂತದ ಕೋವಿಕಿಂಡಿಗಳಿವೆ.[18] ವಿಜಯನಗರ ತರುವಾಯ ಈ ಭಾಗದಲ್ಲಿ ಅಧಿಕಾರಕ್ಕೆ ಬಂದ ಚಿತ್ರದುರ್ಗದ ಪಾಳೆಯಗಾರರು ಈ ವ್ಯವಸ್ಥೆಯನ್ನು ಮುಂದುವರೆಸುವ ಮೂಲಕ ರಕ್ಷಣಾವಾಸ್ತುಶಿಲ್ಪ ಗಟ್ಟಿಯಾಗಿ ನಿಲ್ಲಲು ಕಾರಣಕರ್ತರಾದರು. ಚಾರಿತ್ರಿಕ ದೃಷ್ಟಿಯಿಂದ ಮಹತ್ವಪಡೆದ ಇಂತಹ ರಚನೆಗಳು ಸಂಪೂರ್ಣ ಹಾಳಾಗುವುದಕ್ಕೂ ಮುನ್ನ ಅವುಗಳನ್ನು ದಾಖಲಿಸಿ ಸಮಗ್ರ ಅದ್ಯಯನ ನಡೆಸಬೇಕಾಗಿರುವುದು ಅನಿವಾರ್ಯವಾಗಿದೆ.

ಆಕರ ಗ್ರಂಥಗಳು

1. ಕೃಷ್ಣಮೂರ್ತಿ ಪಿ.ವಿ., ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, *ಚಿತ್ರದುರ್ಗ ಜಿಲ್ಲೆಯ ವಿಜಯನಗರ ಕಾಲದ ಆಡಳಿತ ವಿಭಾಗಗಳು,* ಕಲಬುರ್ಗಿ ಎಂ.ಎಂ. (ಸಂ.), ಪು. 215–229.
2. ಸೋಮಶೇಖರ್ ಎಸ್.ವೈ., 2009, *ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ,* ಪು. 80.
3. *ಕರ್ನಾಟಕ ಚರಿತ್ರೆ ಸಂಪುಟ* 3, ಪು. 95.
4. ಶಿವಣ್ಣ ಕೆ.ಎಸ್. 1976, *ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರ ಅರಸರ ಆಳ್ವಿಕೆ,* ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ., ಲಕ್ಷ್ಮಣ್ ತೆಲಗಾವಿ (ಸಂ.), ಪು. 61.
5. ಕೃಷ್ಣಮೂರ್ತಿ ಪಿ.ವಿ., 1987, *ಚಿತ್ರದುರ್ಗ ಜಿಲ್ಲೆಯ ಚಾರಿತ್ರಿಕ ಭೂಗೋಳ,* ಹರಿತಿಸಿರಿ, ಲಕ್ಷ್ಮಣ್ ತೆಲಗಾವಿ (ಸಂ.), ಪು. 275–407.
6. ತಿಪ್ಪೇಸ್ವಾಮಿ ಎಸ್., 2004, *ರಕ್ಷಣಾ ವಾಸ್ತುಶಿಲ್ಪ – ಚಿತ್ರದುರ್ಗ ಜಿಲ್ಲೆ* (ಅಪ್ರಕಟಿತ ಮಹಾಪ್ರಬಂಧ), ಪು. 43.
7. *ಅದೇ,* ಪು. 44.
8. ಶಿವಶಂಕರ ಎಂ.ಎಲ್., ಚೆನ್ನಬಸಪ್ಪ ಎಸ್.ಪಾಟೀಲ್., 1997, *ವಿಜಯನಗರ ಸಾಮ್ರಾಜ್ಯದಲ್ಲಿ ನಗರ ಬೆಳವಣಿಗೆ;* ನಾಗರಾಜ್ ಬಿ.ಎಸ್., *ವಿಜಯನಗರ ಅಧ್ಯಯನ,* ಸಂ. 2, ಪು. 96.

9. *ಎ.ಕ.*, ಸಂ. 11, ಹಿರಿಯೂರು–36, 39.

10. ಶ್ರೀನಿವಾಸ ಶರ್ಮ ಎಚ್.ಪಿ., 1979, ಚಿತ್ರದುರ್ಗದ ಏಳು ಸುತ್ತಿನ ಕೋಟೆ, *ಐತಿಹಾಸಿಕ ಚಿತ್ರದುರ್ಗ*, ಲಕ್ಷ್ಮಣ್ ತೆಲಗಾವಿ, ವೆಂಕಣ್ಣಾಚಾರ್ ಕೆ. (ಸಂ.), ಪು, 75.

11. ರಾಜಶೇಖರಪ್ಪ ಬಿ., 1979, ಚಿತ್ರದುರ್ಗದ ಪ್ರಮುಖ ಶಾಸನಗಳು, *ಐತಿಹಾಸಿಕ ಚಿತ್ರದುರ್ಗ*, ಲಕ್ಷ್ಮಣ್ ತೆಲಗಾವಿ, ವೆಂಕಣ್ಣಾಚಾರ್ ಕೆ. (ಸಂ.), ಪು, 49.

12. ಲಕ್ಷ್ಮಣ್ ತೆಲಗಾವಿ, 1979, ಚಿತ್ರದುರ್ಗದ ಸಂಕ್ಷಿಪ್ತ ಇತಿಹಾಸ, *ಐತಿಹಾಸಿಕ ಚಿತ್ರದುರ್ಗ*, ಲಕ್ಷ್ಮಣ್ ತೆಲಗಾವಿ, ವೆಂಕಣ್ಣಾಚಾರ್ ಕೆ. (ಸಂ.), ಪು, 2–3.

13. ರಾಜಶೇಖರಪ್ಪ ಬಿ., 2001, *ದುರ್ಗಶೋಧನ*, ಪು. 114.

14. ಚಿತ್ರಲಿಂಗಯ್ಯ, ಎಂ.ವಿ., 1987, *ಹರತಿ ಪಾಳೇಗಾರರ ಮೂಲ ವಂಶಾವಳಿ: ಒಂದು ವ್ಯಾಸಂಗ*, ಹರತಿಸಿರಿ, ಲಕ್ಷ್ಮಣ್ ತೆಲಗಾವಿ (ಸಂ.), ಪು. 290.

15. ಕೃಷ್ಣಮೂರ್ತಿ ಪಿ.ವಿ., ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, *ಚಿತ್ರದುರ್ಗ ಜಿಲ್ಲೆಯ ವಿಜಯನಗರ ಕಾಲದ ಆಡಳಿತ ವಿಭಾಗಗಳು*, ಕಲಬುರ್ಗಿ ಎಂ.ಎಂ. (ಸಂ.), ಪು. 229.

16. *ಎ.ಕ.*, ಸಂ. 11, ಹಿರಿಯೂರು–23.

17. *ಅದೇ*, ಹಿರಿಯೂರು–36, 39.

18. ತಿಪ್ಪೇಸ್ವಾಮಿ ಎಸ್., 2004, *ರಕ್ಷಣಾ ವಾಸ್ತುಶಿಲ್ಪ – ಚಿತ್ರದುರ್ಗ ಜಿಲ್ಲೆ* (ಅಪ್ರಕಟಿತ ಮಹಾಪ್ರಬಂಧ) ಪು. 276.

34

ವಿಜಯನಗರ ಕಾಲದ ಶಾಸನೋಕ್ತ ಯಿಡುವಾಣಿ ಬಸದಿ


ಜಯದೇವಪ್ಪ ಜೈನಕೇರಿ

ಕರ್ನಾಟಕದ ಶಿವಮೊಗ್ಗ ಜಿಲ್ಲೆ ಸಾಗರ(ತಾ) ಕಾರ್ಗಲ್ ಬಳಿ ಯಿಡುವಾಣಿ ಗ್ರಾಮವಿದೆ. ಇಲ್ಲಿರುವ ಐತಿಹಾಸಿಕವಾಗಿ ಪ್ರಾಮುಖ್ಯತೆ ಪಡೆದಿರುವ ಪಾರ್ಶ್ವನಾಥ ಬಸದಿ ತೀವ್ರ ಅನಾಥವಾಗಿ ಅಳಿವಿನಂಚಿನಲ್ಲಿದೆ. ಈ ಪ್ರಾಂತ್ಯದಲ್ಲಿ ಜೈನ ಅರಸರು 7–8ನೇ ಶತಮಾನದಿಂದ ಆಳಿದ್ದಾರೆ. ಹೊಂಬುಜದ ಸಾಂತರರು, ಹಾಡುವಳ್ಳಿ ಅರಸರು, ಗೇರುಸೊಪ್ಪೆಯ ಚೆನ್ನಭೈರಾದೇವಿ ಮುಂತಾದವರು ಆಳಿದ್ದಾರೆ. ಈ ಬಸದಿಯ ಅಧ್ಯಯನಕ್ಕೆ ಶಾಸನಾಧಾರವಿದೆ. ಈಗ ಬಸದಿಯಲ್ಲಿ ಮೂರ್ತಿಶಿಲ್ಪ ಕಾಣೆಯಾಗಿದೆ. ಪಾಣಿಪೀಠ ಮಾತ್ರ ಇದೆ.


ಬಸದಿಯ ಆವರಣದಲ್ಲಿರುವ ಶಿಲಾಶಾಸನ ವಿಜಯನಗರ ಅರಸು ಶ್ರೀ ವಿರುಪಾಕ್ಷನ ಕಾಲಕ್ಕೆ ಸೇರಿದೆ. ಶಾ.ಶ. 1395 ನಂದನ ಸಂವತ್ಸರ ಕ್ರಿ.ಶ. 1473ಕ್ಕೆ ಸೇರಿದೆ. ಈ ಪಾರ್ಶ್ವನಾಥ ಬಸದಿಯನ್ನು ಕಟ್ಟಿಸಿದವನು ವಿಜಯನಗರ ಅರಸರ ಕಾಲದಲ್ಲಿ ಈ ಪ್ರಾಂತ್ಯವನ್ನು ಆಳುತ್ತಿದ್ದ ಬೈಯಿರಂಣನಾಯ್ಕರು ತಮ್ಮ ಒಡೆಯನಿಗೆ ಹಾಗೂ ತನಗೆ ಪುಣ್ಯ ಹಾಗೂ ಯಶೋವೃದ್ಧಿಯಾಗಲೆಂದು ಯಿಡುವಾಣಿಯಲ್ಲಿ ಪಾರ್ಶ್ವನಾಥ ಬಸದಿಯನ್ನು ಕಟ್ಟಿಸಿ, ನಿತ್ಯಪೂಜೆ ಅಮೃತಪಡಿ, ಎರಡುಹೊತ್ತಿನ ಹಾಲಧಾರೆ, ಮೃತ್ಯುಂಜಯ ಚಕ್ರ ಪೂಜೆ, ಪಂಚಾಮೃತ ಸಿದ್ಧ ಚಕ್ರ ಪೂಜೆ, ಸಿದ್ಧರ ಧಾರೆ, ಮುಂತಾದ ಸೇವೆಗಳಿಗೆ ದಾನ ನೀಡಿದ ಉಲ್ಲೇಖವಿದೆ. ಸೋಮ ಸೂರ್ಯಗ್ರಹಣ ಕಾಲದಲ್ಲಿ ಬಸದಿಯಂ ಕಟ್ಟಿಸಿ ಭೂದಾನ ನೀಡಿರುವ ವಿವರಗಳು ಇವೆ. ಈ ಬಸದಿಯ ಆವರಣದಲ್ಲಿ ವಾಧೀಂದ್ರ ವಿಶಾಲತೀರ್ಥ ಭಟ್ಟಾರಕ ಸ್ವಾಮಿಗಳು ಇದ್ದ ಉಲ್ಲೇಖವಿದೆ.

ಈ ಬಸದಿಯ ಆವರಣದಲ್ಲಿ ಒಂದು ಮುಕ್ಕೊಡೆ ಶಾಸನವಿದೆ. ಇದು ಜೈನರಿಗೆ ನೀಡಿದ ಭೂಮಿಯನ್ನು ಗುರುತಿಸುವ ಗಡಿಕಲ್ಲು. ಇದರಲ್ಲಿ ಸೂರ್ಯ–ಚಂದ್ರ ಮತ್ತು ಮೂರು ಕೋಡೆಗಳು ಒಂದರ ಮೇಲೊಂದಿರುವಂತೆ ಕೆತ್ತಲಾಗಿದೆ. ಇವು ಜೈನರ ಸಮ್ಯಕ್‌ಜ್ಞಾನ, ಸಮ್ಯಕ್‌ಚಾರಿತ್ರ್ಯ ಮತ್ತು ಸಮ್ಯಕ್‌ತತ್ವಗಳನ್ನು ಪ್ರತಿಪಾದಿಸುತ್ತದೆ.


ವಾಸ್ತು ಕಲೆಯ ದೃಷ್ಟಿಯಿಂದ ಪರಿಶೀಲಿಸಿದರೆ ಜೈನ ಬಸದಿಗಳಲ್ಲಿ ಎರಡು ವಿಧ: ಚತುರಸ್ರಾಕಾರ ಮತ್ತು ಆಯತಾಕಾರ. ಗರ್ಭಗೃಹ, ಅಂತರಾಳ, ಪ್ರದಕ್ಷಿಣಾಪಥ, ಮಂಟಪ ಮುಖಮಂಟಪಗಳಿಂದ ಕೂಡಿರುತ್ತವೆ. ಮುಂಭಾಗದಲ್ಲಿ ಮಾನಸ್ತಂಭವಿರುತ್ತದೆ. ಯಿಡುವಾಣಿಯ ಪಾರ್ಶ್ವನಾಥ ತೀರ್ಥಂಕರ ಬಸದಿಯ ವಾಸ್ತು ವಿನ್ಯಾಸ ಆಯತಾಕಾರವಾಗಿದೆ. ಗರ್ಭಗೃಹ, ಮುಖಮಂಟಪ ಒಳಗೊಂಡಿದೆ. ಈಗ ಜಂಬಿಟ್ಟಿಗೆಯ ಗೋಡೆ ಮತ್ತು ಹೆಂಚಿನ ಮಾಡು ಇದೆ. ಬಸದಿಯ ಹೊರ ಆವರಣದಲ್ಲಿ ವಿವಿಧ ಮೂರ್ತಿಯ ಶಿಲ್ಪಗಳು ಗಡಿಕಲ್ಲುಗಳು ಅನಾಥವಾಗಿವೆ. ವಿಜಯನಗರ ಕಾಲಕ್ಕೆ ಸೇರಿದ ಈ ಯಿಡುವಾಣಿ ಪಾರ್ಶ್ವನಾಥ ಬಸದಿಯ ಸಂರಕ್ಷಣೆಯಾಗಬೇಕಾಗಿದೆ.




ಯಿಡುವಾಣಿ ಬಸದಿಯ ಒಂದು ನೋಟ



ಯಿಡುವಾಣಿ ಬಸದಿಯ ಪಾರ್ಶ್ವ ನೋಟ



ಶಿಲಾ ಶಾಸನ



ಶಿಲಾ ಶಾಸನ

35

ಕರ್ನಾಟಕದಲ್ಲಿ ಹನುಮನ ಪರಿಕಲ್ಪನೆ, ವಿಶೇಷವಾಗಿ ಹಂಪಿಯ ಯಂತ್ರೋದ್ಧಾರ ಹನುಮನ ಚೇತನ

ಡಾ॥ ಎಸ್.ಕೆ. ಜೋಶಿ

ಕರ್ನಾಟಕವು ಹನುಮನ ತಾಣ. ಈ ರಾಜ್ಯದಲ್ಲಿ ಇದ್ದಷ್ಟು ಹುಮಂತನ ದೇವಾಲಯಗಳು ಭಾರತದ ಇನ್ನಾವುದೇ ರಾಜ್ಯಗಳಲ್ಲಿ ಕಾಣುವುದಿಲ್ಲ. ಆದಾಗಿ ಈ ಪ್ರದೇಶದ ಹನುಮನ ತಾಣಗಳನ್ನು ಇಲ್ಲಿ ಹೆಸರಿಸಲಾಗಿದೆ.

ಶ್ರೀ ವ್ಯಾಸರಾಯರು (ಶ್ರೀ ಕೃಷ್ಣದೇವರಾಯನ ಗುರು) 700 ಹನುಮನ ದೇವಸ್ಥಾನಗಳನ್ನು ಕಟ್ಟಿಸಿದರು. ಅವರು ಸ್ಥಾಪಿಸಿದ ಹನುಮನಿಗೆ ಬಾಲಕ್ಕೆ 'ಗಂಟೆ' ಇರುತ್ತದೆ. ಇದು ವಾಸ್ತುವಿಶೇಷ.

ಕರ್ನಾಟಕದ ವಿಶೇಷ ಹನುಮರು

ಹಂಪಿಯ ಯಂತ್ರೋದ್ಧಾರ ಹನುಮ

ಈ ಹನುಮ ಹಂಪಿಯ ಚಕ್ರತೀರ್ಥದ ಅಂಚಿನಲ್ಲಿರುವ ಕೋದಂಡಸ್ವಾಮಿಯ ಬಲಬದಿಗೆ ಎದ್ದುನಿಂತ ಎತ್ತರದ ಸಪಾಟಾದ ಬಂಡೆಗಲ್ಲಿನ ಮೇಲೆ ಕೊರೆಯಲಾಗಿದೆ. ಇದು ಹೊಸಪೇಟೆಯಿಂದ ಉತ್ತರಕ್ಕೆ ಸುಮಾರು 20 ಕಿ.ಮೀ. ದೂರದಲ್ಲಿದೆ. ಕಾಲ 16ನೆಯ ಶತಮಾನ. ಕೊರೆಯಿಸಿದವರು ಶ್ರೀಕೃಷ್ಣದೇವರಾಯನ ಕಾಲದ ರಾಜಗುರುಗಳು ಹಾಗೂ ಯತಿಗಳು ಆದ ಶ್ರೀ ವ್ಯಾಸರಾಯರು. ಈ ಯಂತ್ರೋದ್ಧಾರಕ ಹನುಮನನ್ನು ವ್ಯಾಸರಾಯರು ಹೇಗೆ ಬಂಧಿಸಿದರು ಎಂಬುದನ್ನು ವಿಶದವಾಗಿ ಬೇರೊಂದು ಪರಿಚ್ಛೇದದಲ್ಲಿ ಹೇಳಲಾಗಿದೆ.

ಕದರಮಂಡಲಗಿಯ ಕಾಂತೇಶ

ಇದು ಬ್ಯಾಡಗಿ ತಾಲ್ಲೂಕು, ಹಾವೇರಿ ಜಿಲ್ಲೆಯಲ್ಲಿದೆ. ಉತ್ತರ ಕರ್ನಾಟಕದ ಮೂವರು ಜಾಗ್ರತ ಹನುಮರು. ಕದರಮಂಡಲಗಿಯ ಕಾಂತೇಶ, ಶಿಕಾರಿಪುರದ (ಶಿವಮೊಗ್ಗ ಜಿಲ್ಲೆ) ಭ್ರಾಂತೇಶ ಹಾಗೂ ಸಾತೇನಹಳ್ಳಿಯ (ಹಾವೇರಿ ಜಿಲ್ಲೆ) ಶಾಂತೇಶ. ಈ ಮೂವರನ್ನೂ ಒಂದೇ ದಿನದಲ್ಲಿ ದರ್ಶಿಸಿದವರು ಪುಣ್ಯ ಪಡೆಯುತ್ತಾರೆಂದು ಪ್ರತೀತಿ. ಕದರ

ಮಂಡಲಗಿಯ ಕಾಂತೇಶನಿಗೂ ಕರ್ನಾಟಕದ ಸುಪ್ರಸಿದ್ಧ ದಾಸರಾದ ಶ್ರೀ ಕನಕದಾಸರಿಗೂ ಅವಿನಾಭಾವ ಸಂಬಂಧ. ಕನಕದಾಸರು ತಿರುಪತಿಗೆ ಭೆಟ್ಟಿಯಿತ್ತಾಗ, ದಾರಿಯಲ್ಲಿ ಈ ಕದರಮಂಡಲಗಿಯ ಕಾಂತೇಶನನ್ನು ಭೆಟ್ಟಿಯಾಗಲಿಲ್ಲವೆಂದು ತಿಳಿದ ತಿರುಪತಿ ತಿಮ್ಮಪ್ಪನು 'ನಾನು ಕದರಮಂಡಲಗಿಯಲ್ಲಿಯೇ ಇದ್ದೆ. ನೋಡದೇ ನೀನು ಇಷ್ಟೂ ದೂರ ಏಕೆ ಬಂದೆ? ಹೋಗಿ ಅಲ್ಲಿ ನನ್ನನ್ನು ಹುಡುಕು' ಎಂದು ಆದೇಶವಿತ್ತಂತಾಯಿತು. ಜಿಜ್ಞಾಸುವಾಗಿ ಮರಳಿದ ಶ್ರೀ ಕನಕದಾಸರು ಕದರಮಂಡಲಗಿಯಲ್ಲಿ ಶ್ರೀ ವೆಂಕಟೇಶನ ಮೂರ್ತಿಯನ್ನೂ ಹುಡುಕಿ ತೆಗೆದರು. ಹಾಗೂ ಅದನ್ನು ವೈಭವೋಪೇತವಾಗಿ ಪ್ರತಿಷ್ಠಾಪಿಸಿದರು. ಅಂದಿನಿಂದ ಇಂದಿನವರೆಗೂ ಕದರಮಂಡಲಗಿಯ ಕಾಂತೇಶ ಹಾಗೂ ಇಲ್ಲಿಯ ವೆಂಕಟೇಶ ಈರ್ವರೂ ಕರ್ನಾಟಕದ ಪಂಡಿತ ಸಾಮರರಿಗೂ ಕೃಪೆಯನ್ನು ನೀಡುತ್ತ ಬಂದಿದ್ದಾರೆ. ಈ ಹನುಮನ ಕಾಲ ಸುಮಾರು 400–500 ವರುಷಗಳ ಹಿಂದಿನದು.

ಯತ್ಪಾದಪದ್ವಂ । ಶರಣಾಗತಾನಾಂ ।
ಸಂಸಾರ ಸಿಂಧೋಸ್ತರಣ್ಯೈ ಕಪೋತಂ ।
ಶ್ರೀ ಲಕ್ಷ್ಮಿ ದೇವಿಂ ಕುಲಸ್ವಾಮಿನಂ ಚ
ಶ್ರೀ ವೆಂಕಟೇಶಂ ಶಿರಸಾ ನಮಾಮಿ

ಮಹಾಪಾದೋರು ಹಸ್ತಾಯ । ಮಹಾಕುಕ್ಷಿಮತೇ ಎಚ ।
ಮಹೋರಃ ಕಂಠವಕ್ತ್ರಾಯ । ಮಹಾನೇತ್ರಾಯತೇ ನಮಃ ॥
ಭಿದುರಾಭೇದ್ಯ ಹನವೆ । ಚತುರಾಸ್ಯ ಪದಾಪ್ತಯೇ ।
ಕದರಮಂಡಲಗಿ ಭೀಮಾಯ । ಸುಂದರಾಂಗಯತೆ ನಮಃ ॥

ಮಹಾತ್ಮಾ ಹಿರೇ ಆಚಾರ್ಯ

ಸಾತೇನಹಳ್ಳಿ ಶಾಂತೇಶ

ಹರಿದಾಸಪಂಥವು ಉದಯಹೊಂದಿ ಶ್ರೀ ನರಹರಿತೀರ್ಥ, ಶ್ರೀಪಾದ ರಾಜ, ಶ್ರೀ ವ್ಯಾಸತೀರ್ಥ, ಶ್ರೀವಾದಿರಾಜತೀರ್ಥ ಮೊದಲಾದ ವ್ಯಾಸಕೂಟ ಹಾಗೂ ದಾಸಕೂಟಗಳ ಸಂಗಮದ ಪೂರ್ಣಫಲವಾಗಿ ಜಗತ್ತಿಗೆ ನೀಡಿತು. ಶ್ರೀ ಪುರಂದರ ದಾಸ, ಕನಕದಾಸ, ವಿಜಯದಾಸ, ಗೋಪಾಲದಾಸ, ಜಗನ್ನಾಥದಾಸ, ಪ್ರಸನ್ನವೆಂಕಟದಾಸ, ಪ್ರಾಣೇಶದಾಸ, ಮಹಿಪತಿದಾಸ, ಶ್ರೀಶವಿಠ್ಠಲದಾಸ, ಗೋವಿಂದದಾಸ, ಮೊದಲಾದ ದಾಸಾಗ್ರಣಿಗಳು ಹರಿಯನ್ನು, ಹನುಮನನ್ನೂ ಹಾಡಿ ಹೊಗಳಿದ್ದಾರೆ. ಇವರ ಕೃತಿಗಳು ಗ್ರಂಥಸ್ಥ ಹಾಗೂ ಸಂಸ್ಕೃತಮಯ ಭಾಷೆಯಾಗಿತ್ತು. ಇದರ ಜೊತೆಗೆ ಜಾನಪದ ಭಕ್ತಿ ಸಾಹಿತ್ಯವೂ ಕೂಡ ಬೆಳೆದು ಬಂದಿತು. ಇದಕ್ಕೊಂದು ನಿದರ್ಶನವಾಗಿ ಸಾತೇನಹಳ್ಳಿಯ ಶಾಂತೇಶನನ್ನೂ ಒಂದು ಜನಪದ ಸಾಹಿತ್ಯದ ಕೃತಿ ಹೀಗೆ ವರ್ಣಿಸುತ್ತದೆ.

ಉದ್ದಿನಕಾಳಷ್ಟು ಮುದ್ದು ಸಾಂತೇನಹಳ್ಳಿ
ತಿದ್ದಿ ಕಟ್ಟಿಸಿದ ಗುಡಿಪೇಳಿ । ಯಲ್ಲಿರುವ
ಗೆಜ್ಜೆ ಕಾನ ಹನುಮ ಬಲು ಚೆಲುವಾ ॥

ಇದೊಂದು ವಿಶೇಷತೆಯನ್ನು ಹೇಳಬೇಕಾದರೆ ಶ್ರೀ ಸಾತೇನಹಳ್ಳಿಯ ಶಾಂತೇಶನನ್ನು ಕುರಿತಾದ ಭಕ್ತಿ ಗೀತೆಗಳು 'ದಂಡಿಗೆ'ಗಳೆಂದು ಪ್ರಸಿದ್ಧವಾಗಿವೆ.

ಶಿಕಾರಿಪುರದ ಭ್ರಾಂತೇಶ

ಈತನ ದೇವಾಲಯವು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿದೆ. ಅದಾಗಲೇ ಹೇಳಿದಂತೆ ಕದರಮಂಡಲಗಿಯ ಕಾಂತೇಶ, ಸಾತೇನಹಳ್ಳಿಯ ಶಾಂತೇಶ, ಶಿಕಾರಿಪುರದ ಭ್ರಾಂತೇಶರು ಉತ್ತರ ಕರ್ನಾಟಕದ ಅತ್ಯಂತ ಪ್ರಸಿದ್ಧ ಹನುಮ ತ್ರಯರು. ಹನುಮನಿಲ್ಲದ ಹಳ್ಳಿಯಿಲ್ಲ. ಹಾಗೆ ನೋಡಿದಲ್ಲಿ ಹನುಮಂತನು ಜನಸಂರಕ್ಷಕ ದೇವ. ಶುಧ್ಧ ಸಂಸ್ಕಾರ, ಕರ್ಮ ಸಂಪನ್ನ, ವೇದ ಪಾರಂಗತ, ತೇಜಸ್ವಿ, ಸಾಹಸಿ, ಸಾಧಕ, ಗಾಯಕ, ನಾಯಕ, ಶೌರ್ಯ, ಧೈರ್ಯ, ದಕ್ಷತೆ, ಪರಾಕ್ರಮ ಹಾಗೂ ನಿಸ್ಸೀಮ ಭಕ್ತಿ. ಇವು ಹನುಮನ ಗುಣಮೌಲ್ಯಗಳು. ಈ ಗುಣಗಳನ್ನು ಮತ್ತಾವ ದೇವರುಗಳಲ್ಲಿ ಕಾಣಬಹುದು?

ಒಂದು ಪ್ರಾದೇಶಿಕ ಕಥನ ಹೇಳುವಂತೆ ಹುಚ್ಚೂರಾಯರೆಂಬ ಹನುಮನ ಆರಾಧಕರು ಈ ಗುಡಿ ಕಟ್ಟಿಸಿದ್ದರಿಂದ ಇವನಿಗೆ 'ಭ್ರಾಂತೇಶ'ನೆಂಬ ಹೆಸರು ಬಂದಿದೆ. ಸಾವಿರಾರು ಭಕ್ತರು ದೂರ ದೂರದಿಂದ ಬಂದು ಇವನಿಗೆ ನಡೆದುಕೊಳ್ಳುತ್ತಾರೆ. ಇಷ್ಟ ಪೂರೈಸಿಕೊಳ್ಳುತ್ತಾರೆ.

ಯಲಗೂರಿನ ಯಲಗೂರೇಶ

ಬಿಜಾಪುರ ಜಿಲ್ಲೆಯ ಮುದ್ದೇ ಬಿಹಾಳ ತಾಲ್ಲೂಕಿನ ಯಲಗೂರೇಶನು ಕೃಷ್ಣಾ ತೀರದಲ್ಲಿದ್ದಾನೆ. ಈ ಹನುಮನು ಸುತ್ತಲಿನ ಏಳು ಊರುಗಳಿಗೆ ಸಂಬಂಧಪಟ್ಟಿರುವುದರಿಂದ ಈತನಿಗೆ ಏಳುರೇಶ ಅಥವಾ ಯಲಗೂರೇಶ ಎಂಬ ಹೆಸರು ಪ್ರತೀತವಾಯಿತು.

ಮಧ್ಯಯುಗದ ಕಾಲದಲ್ಲಿ ಹಿಂದೂ ಧರ್ಮಕ್ಕೆ ಗ್ಲಾನಿಯಾದ ಪ್ರಸಂಗದಲ್ಲಿ ಮೂರ್ತಿಭೇದಕನೋರ್ವನು ಈ ಸುಂದರ ಮೂರ್ತಿಯನ್ನು ತುಂಡರಿಸಿ ನದಿ ಪಾತ್ರದಲ್ಲಿ ಚೆಲ್ಲಿದನು. ಪರಂಪರೆಯ ಪೂಜಾರಿಗಳಿಗೆ ಅವರ ಚರಿತಾರ್ಥವೇ ಕಷ್ಟವಾಯಿತು. ಅರ್ಚಕರ ಪ್ರಾರ್ಥನೆಯ ಮೇರೆಗೆ ಈ ಪ್ರಾಣದೇವನು ಸ್ವಪ್ನದಲ್ಲಿ ಬಂದು ಆ ತುಂಡುಗಳನ್ನೆಲ್ಲ ಶೇಖರಿಸಿ ಗರ್ಭಗುಡಿಯಲ್ಲಿ ಏಳು ಕೊಡ ಹಾಲು ತುಪ್ಪ ಮುಂತಾದ ಪಂಚಾಮೃತದ ವಸ್ತುಗಳನ್ನು ಅಲ್ಲಿ ಇರಿಸಿ ಏಳು ದಿನಗಳವರೆಗೆ ಗರ್ಭಗುಡಿಯ ಬಾಗಿಲನ್ನು ಭದ್ರವಾಗಿ ಹಾಕಿಬಿಡಿ. ಯಾವ ಕಾರಣಕ್ಕೂ ಏಳು ದಿನಗಳವರೆಗೆ ಬಾಗಿಲನ್ನು ತೆಗೆಯಬಾರದು. ಎಂಟನೆಯ ದಿನ ನನ್ನ ಸರ್ವಾಂಗಪೂರ್ಣವಾದ ಮೂರ್ತಿಯು ನಿಮಗೆ ಕಾಣಿಸುವದು. ಆದರೆ ಆ ಅರ್ಚಕನಿಂದ ಒಂದು ಪ್ರಮಾದವಾಯಿತು. ಅವಧಿ ಮುಗಿಯುವ ಪೂರ್ವದಲ್ಲಿ ಒಂದು ದಿನ ಮೊದಲೇ ಗರ್ಭಗುಡಿಯಿಂದ ಹೊರಟ ಗಂಭೀರ ಶಬ್ದಕ್ಕೆ ಹೆದರಿ ಆ ಅರ್ಚಕನು ಬಾಗಿಲನ್ನು ತೆರೆದನು. ವಿಗ್ರಹವೇನೋ ಪೂರ್ತಿಯಾಗಿತ್ತು. ಆದರೆ ಅಲ್ಲಲ್ಲಿ ಬಿರುಕುಗಳು ಉಳಿದುಕೊಂಡಿದ್ದವು. ಮೂಗು ಇರಲಿಲ್ಲ. ಶಿಕಾರಪುರದ ಭಕ್ತನಲ್ಲಿ ಆ ಮೂಗು ಇರುವದೆಂದು ಅದನ್ನು ತಂದು ಅದರ ಸ್ಥಳದಲ್ಲಿ ಸುಮ್ಮನೆ ಇಟ್ಟರೆ ಸರಿಯಾಗಿ ಹೊಂದಿಕೊಳ್ಳುವುದೆಂದು ಸ್ವಪ್ನದಲ್ಲಿ ಆದೇಶವಾದ್ದರಿಂದ ಆ ಪೂಜಾರಿಯು ಹಾಗೆ ಮಾಡಲಾಗಿ ಆ ಮೂರ್ತಿಯು ಯಥಾಸ್ಥಿತಿಗೆ ಬಂದಿತು. ಇದು ಕರ್ಣೋಪಕರ್ಣವಾಗಿ ಬಂದ ಒಂದು ಐತಿಹ್ಯ.

ಈ ದೇವಾಲಯ ಸುಮಾರು 15-16 ಶತಮಾನಗಳಲ್ಲಿ ನಿರ್ಮಿತವಾಗಿದ್ದು ಅದರ ವಾಸ್ತುಶಿಲ್ಪವು ಆ ಕಾಲದ ಪ್ರಭಾವವನ್ನು ಹೊಂದಿದೆ. ಕ್ರಿ.ಶ. 1650ರಲ್ಲಿ ಮಹಿಪತಿದಾಸರ ಹಿರಿಯ ಮಕ್ಕಳು ಈ ಕ್ಷೇತ್ರವನ್ನು ಸಂದರ್ಶಿಸಿದುದನ್ನು ತಮ್ಮ ಕೀರ್ತನೆಯಲ್ಲಿ ಸ್ತುತಿಸಿದ್ದಾರೆ. ಈ ಗುಡಿಯ ಪರಿಸರದಲ್ಲಿ ಶಿಲಾ ಶಾಸನಗಳು (15ನೇ ಶತಮಾನ), ಶಿವಲಿಂಗ ವಿಗ್ರಹಗಳು, ಸೂರ್ಯನಾರಾಯಣನ ಮೂರ್ತಿ ದೊರೆಯುತ್ತವೆ. ಇವು ಯಲಗೂರಿನ ಪ್ರಾಚೀನತೆಯನ್ನು ತಿಳಿಸುತ್ತವೆಯಲ್ಲದೇ ಕೃಷ್ಣಾ ತೀರದ ಕೃಪಾಸಾಗರನಾದ ಯಲಗೂರೇಶನ ಈ ಊರು ಅಗ್ರಹಾರವಾಗಿತ್ತೆಂದು ತಿಳಿಸುತ್ತವೆ.

ಶ್ರೀ ಕುಪ್ಪಿಭೀಮ, ಕಸಬಾ, ಲಿಂಗಸುಗೂರು

ರಾಯಚೂರು ಜಿಲ್ಲೆಯ ಕಸಬಾ ತಾಲ್ಲೂಕು, ಲಿಂಗಸುಗೂರು ತಾಣದಲ್ಲಿ 'ಶ್ರೀ ಕುಪ್ಪಿಭೀಮ' ನಾಮದ ಹನುಮನ ಪ್ರಸಿದ್ಧ ದೇವಾಲಯವಿದೆ. 'ಕುಪ್ಪಿ'ಯು ಲಿಂಗಸುಗೂರಿನ ಒಂದು ಅವನತಿಗೊಂಡ ಗ್ರಾಮಭಾಗ. ಶ್ರೀ ವ್ಯಾಸರಾಯರು (16ನೇ ಶತಮಾನ) ಸ್ಥಾಪಿಸಿದ ಈ ಹನುಮನ ಮೂರ್ತಿ. ಇದು ಕುಪ್ಪಿಭೀಮ, ಕುಪ್ಪಿರಾಯ, ಕುಪ್ಪೇರಾಯ, ಕುಪ್ಪಿಸ್ವಾಮಿ, ಭೀಮ, ಬಲಭೀಮ, ಆಂಜನೇಯ ಹಾಗೂ ಹನುಮಂತ ಮುಂತಾದ ಹೆಸರುಗಳಿಂದ ಕರೆಯಲ್ಪಡುತ್ತಿದೆ. (ಚಿತ್ರ ನೋಡಿ)

ಚೌಕಾದ ಪ್ರಾಂಗಣವು, ಕಮಾನು ಕಮಾನುಗಳುಳ್ಳ ಕಾರಿಡಾರ್‌ನಿಂದ (ಪೌಳಿ) ಚೌಕಾಕೃತಿಯ ವಿನ್ಯಾಸದಲ್ಲಿ ಅಳವಡಿಸಲ್ಪಟ್ಟಿದ್ದು, ದಕ್ಷಿಣ ದಿಕ್ಕಿನ ಪ್ರವೇಶದ್ವಾರದಿಂದ (ಇದು ವಿಜಯನಗರ ಪ್ರವೇಶ ಗೋಪುರದಂತಿದೆ), ಒಳಹೋಗುವ ಅವಕಾಶ ನೀಡುತ್ತದೆ. ಮಧ್ಯದಲ್ಲಿ ಕುಪ್ಪಿಭೀಮನ ದೇವಾಲಯವಿದೆ. ಸರಳವಾದ ಅಧಿಷ್ಠಾನದ ಮೇಲೆ ಸಭಾಮಂಟಪ ಹಾಗೂ ಗರ್ಭಗೃಹ ನಿಂತಿವೆ. ಇಂಡೋಸ್ಯಾರಸೆನಿಕ್ ವಾಸ್ತುಕಲೆ ಇದಾಗಿದೆ. ಹೈದರಾಬಾದ್ ಕರ್ನಾಟಕದಲ್ಲಿ ಈ ತರಹದ ವಾಸ್ತುಶೈಲಿಯ ಹಿಂದು ದೇವಾಲಯಗಳು ಬಹಳಷ್ಟು ಹರಡಿಕೊಂಡಿವೆ. ಎಷ್ಟೋ ದೇವಾಲಯಗಳು ಶಿಖರದ ಬದಲಾಗಿ ಗುಮ್ಮಟಗಳನ್ನು ಹೊಂದಿವೆ. (ಡಾ. ಅಮರೇಶ್ ಯತಗಲ್, ಕಸಬಾ, ಲಿಂಗಸಗೂರಿನ ಅಧಿದೈವ ಶ್ರೀ ಕುಪ್ಪಿಭೀಮ).

ಅಭಿನವ ಪ್ರಾಣೇಶದಾಸರಿಂದ ರಚಿತ ಸುಳಾದಿಯು ಕುಪ್ಪಿಭೀಮನನ್ನು ವರ್ಣಿಸುತ್ತದೆ:

ಗುರುವ್ಯಾಸರಾಯರ ಕರಕಂಜದಿಂದ ಸ್ಥಾಪಿ ।
ಸಿರುವ ವಿಗ್ರಹ ಕುಪ್ಪಿ-ಭೀಮರಾಯ ।
ಅರಿತು ಭಜಿಪರಿಗೆ ಪರಗತಿಯನ್ನೀವ ।
ನಿರುತ ಸೇವಿಪರಿಗಿಷ್ಟಾರ್ಥಗರೆವ ।
ಕರುಣಾಳು ಅಭಿನವ ಪ್ರಾಣೇಶ ವಿಠ್ಠಲನ ।
ಚರಣವಾರಿಜ ಭೃಂಗ ನತದಯಾಪಾಂಗಾ ॥

ಶ್ರೀ ಆಂಜನೇಯ ತುಳಸಿಗಿರೀಶ, ತುಳಸೀಗಿರಿ

ಇದು ತುಳಸೀಗಿರಿ, ಬಾಗಲಕೋಟೆ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ಇದೆ. ಸುಕ್ಷೇತ್ರ ತುಳಸೀಗಿರಿಯ ಮಾರುತೇಶನ ಪಾವನಸ್ಥಾನ. ಕದಂಬ ಕುಲದೈವ ತಿರುಮಲೇಶ ಮಾರುತಿಯಾಗಿ ತುಳಸೀಗಿರಿ ವನದಲ್ಲಿ ನೆಲೆಸಿದ. ಶ್ರೀ ರಾಮನ ಪರಮ ಭಕ್ತ, ಪವನಸುತ. ಶ್ರೀ ಮಾರುತೇಶ ಜಾತಿ ಜಂಜಡ ಮೀರಿದ ಶ್ರೀಸಾಮಾನ್ಯರ ಆರಾಧ್ಯದೈವ, ಜಾತ್ಯತೀತ ದೈವ. ಸ್ವಾತಂತ್ರ್ಯವೀರ ಸಿಂಧೂರ ಲಕ್ಷ್ಮಣನ ಆರಾಧ್ಯ ದೈವ.

ಅಹೋಬಲಗಿರಿ, ವೆಂಕಟಗಿರಿ ನಡುವೆಯೆ ತುಳಸಿಗಿರಿ
ನೀರ ಬೂದಿಹಾಳ ದೇಶಾಯಿಯವರಿಗೊಲಿದು
ಕೃಷ್ಣರಾಯರ ನೀತಿ ನಿರ್ಮಲ ಭಕ್ತಿಗೆ,
ವೆಂಕಟರಮಣ ನೀ ಬಂದೆ ತುಳಸಿಗಿರಿಯಲಿ ನಿಂದೆ,

ಬಳಗಾನೂರ ಬಸವ ನಿನ್ನ ಮೋಡಿಗೆ ಸೋತ....,
ಸಿಂಧೂರ ನರಸಮ್ಮಳ ಹರಕೆಯನ್ನು ಸ್ವೀಕರಿಸಿ,
ಸಿಂಧೂರ ಲಕ್ಷ್ಮಣಗೆ ಜನ್ಮವ ಕೊಟ್ಟೆ....,
ದುಷ್ಟರ ಸಂಹರಿಸಲು ತೆಂಗಿಡಿಯನಿಟ್ಟೆ.

ಕಾಡಿನ ಸೊಕ್ಕಿನ ಧನಿಕರ ಲಚುಮ
ಸಾರಿ ಸಂಪತ್ತು ದೋಚಿದ
ಬಿಡದೆ ನೀಡಿದ ಕಡುಬಡವರಿಗೆ
ದೋಚಿದೆ ಸಂಪತ್ತು ಮುದದಿಂದ

ವೀರನ ಹೋರಾಟ ಹೀಗೆ ನಡೆಯಿತು
ಜಮಖಂಡಿ ಸಂಸ್ಥಾನ ನಡುಗಿತು
ದಾರಿ ಕಾಣದೆ ಆಂಗ್ಲರ ದೊರೆಗೆ
ಲಚುಮನ ಹಿಡಿಯಲು ಬೇಡಿತು.

ಎಲ್ಲೆ ಇರಲಿ ವೀರ ಲಚುಮ
ಶನಿವಾರ ಬರುತ್ತಿದ್ದ, ತಪ್ಪದೆ
ಸೋದರ ಮಾವನ ತೆಗ್ಗಿ ಊರಿಗೆ
ವೀರ ಲಕ್ಷ್ಮಣ ಬಂದ, ಭೇದ ಗುಣದ
ತೆಗ್ಗಿ ನಾಯಕ ಆಂಗ್ಲರ ಸಂಚಿಗೆ ಸೋತ್ಹೋದ

ತೋಟದ ಊಟ ಬಾ ಎಂದ
ಶೋಧಿಸಿ ಲಚುಮನ ತಾಯತವನ್ನು
ತಪ್ಪಿಸಿದನು ಅವನ ಕೊರಳಿಂದ

ನರಿಗುಣದ ಹೇಸಿ ಜನರು
ಹುಲಿಗೆ ಬಲಿಯ ಹಾಕಿದರು
ಸರಸಿ ಕಂದೀಲ ಬೆಳಕನು ತೋರಿಸಿ,
ಲಚುಮಗೆ ಗುಂಡು ಹಾರಿಸಿದರು

ಕರಗಳ ಮುಗಿದು ಲಚುಮನ ಪ್ರಾಣ
ತುಳಸಿಗಿರೀಶನ ಸೇರಿತ್ತು..." (ಲೇ. ಅಮರಪ್ರಿಯ)

ಹಂಪಿಯ ಯಂತ್ರೋದ್ಧಾರ ಹನುಮ: ಒಂದು ವೈಷಿಕತೆಯ ಸಮೀಕ್ಷೆ

ನಮಾಮಿ ದೋಹಂ ರಾಮಸ್ಯ
ಸುಖದಂಚ ಸುರದ್ರುಮಂ

ವಾಸಿನಂ ಚಕ್ರ–ತೀರ್ಥಸ್ಯ
ದಕ್ಷಿಣಸ್ತು ಗಿರೌಸದಾ

ತುಂಗಾಂಬೋಧಿ ತರಂಗಸ್ಯ
ವಾತೇನ ಪರಿಶೋಭಿತಂ
ವ್ಯಾಸತೀರ್ಥ ಯತೀಂದ್ರೇಣ
ಪೂಜಿತಂ ಪ್ರಣವಾನ್ವಿತಂ ॥

ಈ ರೀತಿಯಾಗಿ ಶ್ರೀ ವ್ಯಾಸರಾಯರು ಹದಿನಾರನೆಯ ಶತಕದಲ್ಲಿ ತುಂಗಭದ್ರೆಯ ಸೀತಲವಾಯು ಲಹರಿಗಳಿಂದ ನೀಡುವ ದಡದಲ್ಲಿ ನೆಲೆಸಿರುವ ಯಂತ್ರೋದ್ಧಾರ ಹನುಮನನ್ನು ಸ್ತುತಿಸಿ, ಪಾವನಗೊಳಿಸಿದ ಪುಣ್ಯಭೂಮಿ ಹಂಪಿ.

ಪಟ್ಟಾಭಿರಾಮನ ಪರಿಸರದಲ್ಲಿ, ಅರ್ಧಚಂದ್ರಾಕಾರವಾಗಿ ಮುನ್ನಡೆದ ತುಂಗಭದ್ರೆಯ 'ಚಕ್ರತೀರ್ಥದಲ್ಲಿ', ಪ್ರತಿದಿನ ಮಿಂದು ಶುಚಿಯಾಗಿ ಪೂಜೆಗೈವಾಗ, ಮೈಮರೆದು ವ್ಯಾಸರಾಯರು ಹಾಡುವ ನುಡಿ ಅದು. ಶ್ರೀವ್ಯಾಸರಾಯರು ಕೃಷ್ಣದೇವರಾಯನ (ಕ್ರಿ.ಶ. 1510–1529), ಸಮಕಾಲೀನರು. ತನ್ನ ಇಡೀ ಸಾಮ್ರಾಜ್ಯವನ್ನೇ ದಾನವಾಗಿ ಕೊಟ್ಟು ವಿಜಯನಗರದ ಸಿಂಹಾಸನದಲ್ಲಿ ವ್ಯಾಸರಾಯರನ್ನು ಕುಳ್ಳಿರಿಸಿ ಶ್ರೀಕೃಷ್ಣದೇವರಾಯನು ಪೂಜಿಸಿದ ವಿಷಯವು ಇತಿಹಾಸಪ್ರಸಿದ್ಧ.

"ತಾಪಸಿಗೆ ತಪಸಿನ ಚಿಂತೆ
ದೇವನೊಲಿವನೋ ಇಲ್ಲವೊ ಎಂದೆಂಬ ಚಿಂತೆ,
ರಾಜ್ಯದ ಪರಿಪಾಲನೆ ರಾಜಂಗಲ್ಲದೆ, ಚಿಂತೆ
ಮುನಿಗಲ್ಲ !" (ದಾಸಸಾಹಿತ್ಯ)

ಎಂಬ ವ್ಯಾವಹಾರಿಕ ವ್ಯಾಖ್ಯೆಯನ್ನು ಹೇಳಿ, ವ್ಯಾಸರಾಯರು ಶ್ರೀ ಕೃಷ್ಣದೇವರಾಯನಿಗೆ, ಆತ ಕೊಟ್ಟ ಸಾಮ್ರಾಜ್ಯ ದಾನವನ್ನೇ ಮರಳಿ ಕೊಟ್ಟು ಆಶೀರ್ವದಿಸಿದರು. ಇಲ್ಲಿ ಗುರುವೂ ಶ್ರೇಷ್ಠ. ಆತನ ಶಿಷ್ಯನೂ ಶ್ರೇಷ್ಠ. ಇತಿಹಾಸದಲ್ಲಿ ರಾಜ್ಯಗಳ ಸಂಸ್ಥಾಪನೆಗಳು, ಗುರುಗಳ ಮಾರ್ಗದರ್ಶನದಲ್ಲಿ ಶೂರ ಶಿಷ್ಯರಿಂದ ಆಗಿವೆ. ಕೌಟಿಲ್ಯ–ಚಂದ್ರಗುಪ್ತ, ವಿದ್ಯಾರಣ್ಯ–ಹಕ್ಕಬುಕ್ಕರು, ರಾಮದಾಸ–ಶಿವಾಜಿ ಇತ್ಯಾದಿ ಕೆಲವು ನಿದರ್ಶನಗಳು.

ದಾಸ ಸಾಹಿತ್ಯ

ಭಾರತದ ಮಧ್ಯಯುಗೀನ ಐತಿಹಾಸಿಕ ಕಾಲದಲ್ಲಿ ಪರಕೀಯ ತತ್ವಗಳ, ಧಾರ್ಮಿಕ ನೀತಿಗಳ, ನಡುವಳಿಕೆಯ ಈ ನೆಲಕ್ಕೆ ಅರಿಯದಂಥವು, ಶಕ್ತಿಗಳು ಹೊಸ ಸಾಂಪ್ರದಾಯಕವಾದ, ಸನಾತನವಾದ ಭಾರತದ ಸಾಮಾಜಿಕ ಮೌಲ್ಯಗಳಿಗೆ ಕುಠಾರವಾದವು. ತತ್‌ಪರಿಣಾಮವಾಗಿ, ದಾಸರು ಸಂತರು, ಶರಣರು, ತಾಪಸಿಗರು, ಯತಿಗಳು ಹಾಗೂ ಧರ್ಮಗುರುಗಳು ಮುಂಬಂದು, ನಿಷ್ಕ್ರಿಯೆ ಆಗುತ್ತಿದ್ದ ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಪರಂಪರೆಗಳನ್ನು ಪುನರುಜ್ಜೀವನಗೊಳಿಸಿದುದು ಇತಿಹಾಸ ಹೇಳುತ್ತದೆ.

ಅಂಥ ಮಹಾಮಹಿಮರಿಂದ ನಿರ್ಮಿತವಾದ ಸಂತವಾಣಿ, ದಾಸಸಾಹಿತ್ಯ ಹಾಗೂ ವಚನಸಾಹಿತ್ಯಗಳು ಜನಸಾಮಾನ್ಯರಲ್ಲಿ ಹಾಸುಹೊಕ್ಕಾಗಿ ನುಸುಳಿ, ಜ್ಞಾನೋದಯವನ್ನು ಉಂಟುಮಾಡಿದವು. ಶ್ರೀ ವ್ಯಾಸರಾಯರ ದಾಸ

ಸಾಹಿತ್ಯ ಕೂಡ ಅಮೋಘ. ಅಂಥ ಅಮೂಲ್ಯ ಸಾಹಿತ್ಯವು ಅವರಿಂದ ಹೊರಬಂದುದು ಈ ಯಂತ್ರೋದ್ಧಾರ ಹನುಮನ ಅಡಿಗಳಲ್ಲಿಯೇ ಎಂದು ಅವರೇ ವಿನಮ್ರ ಭಾವದಿಂದ ಹೇಳಿಕೊಂಡಿದ್ದಾರೆ.

ಯಂತ್ರೋದ್ಧಾರ ಹಂಪಿಯ ಹನುಮ

ಭಾರತದ ಧಾರ್ಮಿಕ ಆಕಾಶದಲ್ಲಿ ದೇವತೆಗಳು ಅನಂತ. ಅವರ ಹೊಳಪುಗಳೂ ಅನಂತ. ಅವರೆಲ್ಲರ ಆರಾಧಕರೂ ಅನಂತ ಅನಂತಕೋಟಿ. ಪ್ರತಿಯೊಂದು ದೇವತೆಯ ಆರಾಧನೆಗಾಗಿ ಬೇರೆ ಬೇರೆ ಯಂತ್ರಗಳಿವೆ, ಸೂತ್ರಗಳಿವೆ, ಸ್ತೋತ್ರಗಳಿವೆ, ಚಿಹ್ನೆಗಳಿವೆ ಹಾಗೂ ಮಾರ್ಗಗಳಿವೆ. ಆ ಯಂತ್ರಗಳ ಮಾಧ್ಯಮದಿಂದ, ಆಯಾ ದೇವತೆಗಳನ್ನು ವಲಿಸಿಕೊಳ್ಳುವ ಶಕ್ತಿಯನ್ನು ಸಾಧಕರು ಪಡೆಯುತ್ತಿದ್ದು, ಬೇರೆ ಬೇರೆ ರೇಖಾ ವಿನ್ಯಾಸಗಳಲ್ಲಿ ಆ ದೇವತೆಗಳನ್ನು ಕೂಡ ಬೇರೊಟ್ಟಿನಲ್ಲಿ ಹಾಕಿ, ಬಂಧಿಸುವ ಶಕ್ತಿಯು ಭಕ್ತನಲ್ಲಿ ಉದ್ಭವಿಸುತ್ತದೆ. ಇಂಥ ಪ್ರಸಂಗವು ಯಂತ್ರೋದ್ಧಾರ ಆಂಜನೇಯನಲ್ಲೂ ಹಾಗೂ ಅವನ ಪರಮಭಕ್ತ ಶ್ರೀ ವ್ಯಾಸರಾಯರಲ್ಲಿಯೂ ಜರುಗಿದ ಈ ಪ್ರತೀತಿ ಜನಜನಿತ.

ಅದು ಹೀಗೆ: ವ್ಯಾಸರಾರು ಪ್ರತಿದಿನ ಹಂಪಿ ಚಕ್ರತೀರ್ಥದಲ್ಲಿ ಸ್ನಾನಗೈದು, ಒದ್ದೆಯ ಮಡಿಯುಟ್ಟು ಆಂಜನೇಯನ ಪೂಜೆಗೈದು ಪ್ರತಿದಿನ ಪ್ರತ್ಯಕ್ಷನಾಗುತ್ತಿದ್ದ ಅವನಿಗೆ ಹಣ್ಣು ಹಂಪಲುಗಳನ್ನು ಬುಟ್ಟಿ ತುಂಬ ತಿನ್ನಿಸುತ್ತಿದ್ದರಂತೆ. ತದನಂತರ ಆ ಆಂಜನೇಯ ಅದೃಶ್ಯನಾಗುತ್ತಿದ್ದನು. ಈ ಆಶ್ಚರ್ಯದ ಸಂಗತಿಯನ್ನು ನೋಡುವ ತವಕವು ವ್ಯಾಸರಾಯರ ಶಿಷ್ಯವರ್ಗಕ್ಕೆ ಹುಟ್ಟಿತು. ಕೆಲವು ನಾಸ್ತಿಕರೂ ಇದರ ಬಗ್ಗೆ ಕಾತುರರಾಗಿದ್ದರು. ಹೀಗಿರುವಾಗ, ಹಣ್ಣು ಹಂಪಲುಗಳನ್ನು ತಿನ್ನುವಾಗ ಶ್ರೀ ವ್ಯಾಸರಾಯರನ್ನು ಹೊರತಾಗಿ ಮತ್ತಾರಾದರೂ ಆ ಸ್ಥಳದಲ್ಲಿ ಆಗಮಿಸಿದರೆ ಈ ಆಂಜನೇಯನು ಅದೃಶ್ಯನಾಗುತ್ತಿದ್ದನು. ಎಲ್ಲರಿಗೂ ದರ್ಶನ ಕೊಡಲು ಆತನಿಗೆ ಶ್ರೀ ವ್ಯಾಸರಾಯರು ಬೇಡಿಕೊಂಡರೂ ಪ್ರಯೋಜನವಾಗಲಿಲ್ಲ. ಯಾರಾದರೂ ಅಲ್ಲಿ ಬಂದರೆ ಮಂಗಮಾಯವಾಗುತ್ತಿದ್ದ ಈ ಆಂಜನೇಯ.

ಭಕ್ತ ಶಕ್ತ, ದೇವ ನಿಶ್ಶಕ್ತ

ಆಂಜನೇಯನ ಈ ದೃಶ್ಯ-ಅದೃಶ್ಯಗಳ ಸ್ಥಿತಿಗಳಿಗೆ ಬೇಸರಿಸಿ ಆತನನ್ನು ಶಾಶ್ವತವಾಗಿ ಹಿಡಿಯಬೇಕೆಂದು ಶ್ರೀ ವ್ಯಾಸರಾಯರು ಹನುಮನು ಹಣ್ಣು ತಿನ್ನುತ್ತಿರುವಾಗ ಅವನಿಗೆ ತಿಳಿಯದಂತೆ, ಯಂತ್ರ ವಿನ್ಯಾಸದ ಗೆರೆಗಳನ್ನು ಅವನ ಸುತ್ತ ಎಳೆದು, ಅವನನ್ನು ಬಂದಿಯನ್ನಾಗಿ ಮಾಡಿದರು. ಆಂಜನೇಯನಿಗೆ ಆ ಯಂತ್ರದಿಂದ ಬಿಡಿಸಿಕೊಳ್ಳಲಾಗಲಿಲ್ಲ. ಅದೇ ಸಮಯದಲ್ಲಿ ಸಮೀಪದಲ್ಲಿ ಇದ್ದಂಥ ಶಿಷ್ಯವರ್ಗ ಹಾಗೂ ಇನ್ನಿತರರು ಆಂಜನೇಯನನ್ನು ಪ್ರತ್ಯಕ್ಷ ನೋಡಿ ಧನ್ಯರಾದರಂತೆ, ಕುಣಿದಾಡಿದರಂತೆ, ಜೀವನ ಸಾರ್ಥಕವಾಯಿತೆಂದು ಉದ್ಗರಿಸಿದ್ದರಂತೆ.

ಹಂಪಿಯ ಯಂತ್ರೋದ್ಧಾರ ಆಂಜನೇಯ : ಕರ್ನಾಟಕದ ಸುಂದರ ಭಿತ್ತಿಶಿಲ್ಪ

ಈಗಲೂ ಪಟ್ಟಾಭಿರಾಮನ ದೇವಾಲಯದ ಪಶ್ಚಿಮಕ್ಕೆ, ಚಕ್ರತೀರ್ಥದ ಹಂಪಿಯ ತುಂಗಭದ್ರೆಯ ತಟದಲ್ಲಿ, ಕಡಿದಾದ ಬಂಡೆಗಲ್ಲಿನ ಮೇಲೆ ಹನುಮ ಹಾಗೂ ಆತನ ಸುತ್ತ ಕೊರೆದ (ಜಾಮಿತಿ) ಯಂತ್ರವನ್ನು ಈಗಲೂ ನೋಡಲೂಬಹುದು. ಬಹಳ ಸುಂದರವಾದ ಕೆತ್ತನೆಯದು. ಹೊರ ವರ್ತುಲದಲ್ಲಿ ಒಂದರ ಬಾಲವನ್ನು ಮತ್ತೊಂದು ಹಿಡಿದ ಮಂಗಗಳ ಸುಂದರ, ನಗೆ ಬರುವ, ನಗೆ ತರುವ ಸಾಲು. ಅದರ ಮಧ್ಯದ ಎರಡು ವರ್ತುಲಗಳಲ್ಲಿ ಫಲ

ಪುಷ್ಪಗಳ ಅಂದವಾದ ಕೆತ್ತನೆ ಇದೆ. ಅರ್ಧ ಮಧ್ಯದಲ್ಲಿ, ನಕ್ಷತ್ರದಾಕೃತಿಯಲ್ಲಿ ಕೊರೆದ ಯಂತ್ರದಲ್ಲಿ (ಚಿತ್ರ ನೋಡಿ) ಆಂಜನೇಯನು ಬಂದಿಯಾಗಿರುವ ದೃಶ್ಯವಿದೆ. ಈ ಮೂರ್ತಿಯು ಎದುರು ಮುಖವಾಗಿದ್ದು ಭಾರತದಲ್ಲಿಯೇ ಅತಿ ವಿರಳ.

ಭಾರತೀಯ ಮೂರ್ತಿಶಾಸ್ತ್ರದ ಆಧಾರದ ಮೇಲೆ, ಈ ಶಿಲ್ಪದ ಬಗ್ಗೆ ಹೇಳಬೇಕಾದರೆ, ಇದು 16ನೇ ಶತಮಾನದ ಮಧ್ಯದಲ್ಲಿ ನಿರ್ಮಿತಿಯಾಗಿರಲು ಸಾಕು. ಶ್ರೀ ವ್ಯಾಸರಾಯರು ಆನೆಗೊಂದಿಯ ಸಮೀಪದಲ್ಲಿಯ ನಡುಗಡ್ಡೆ-ನವವೃಂದಾವನದಲ್ಲಿ ಸಮಾಧಿಸ್ಥರಾದ ಮೇಲೆ, ಈ ಆಂಜನೇಯನ ಮಹತ್ವ ಮತ್ತಷ್ಟು ಬೆಳೆದಿರಲು ಬೇಕು.

ಈಗ್ಗೆ, ಐದು ಶತಮಾನಗಳು ಸಂದಿವೆ. ಅಂದಿನಿಂದ ಇಂದಿನವರೆಗೆ (1510-2010) ಈ ಆಂಜನೇಯನು ಉದಿಸಿ, ಪ್ರತಿವರುಷವು ಸಹಸ್ರಾರು ಹನುಮ ಭಕ್ತರು ತಮ್ಮ ಇಷ್ಟ ಅಭೀಷ್ಟಗಳನ್ನು ಪೂರೈಸಿಕೊಂಡುದು ಸತ್ಯಸಂಗತಿ. ಪ್ರತಿ ವರ್ಷವು ಹಂಪಿಯಲ್ಲಿ ದವನದ ಹುಣ್ಣಿಮೆಯಂದು ಆತನ ಉತ್ಸವ ಜರುಗುತ್ತಿದೆ. ಈ ಸಲ ದಿ. 30 ಮಾರ್ಚ್ 2010ರಂದು ಅದು ನಡೆಯಿತು.

ಅಂತತಃ ಒಂದು ಹನುಮ ಸ್ತೋತ್ರ:
"ಬುದ್ಧಿರ್ಬಲಂ ಯಶೋದ್ಧೈರ್ಯಂ
ನಿರ್ಭಯತ್ವಂ ಅರೋಗತಃ
ಅಜಾಡ್ಯಂ ವಾಕ್‌ಪಟುತ್ವಂ ಚ
ಹನುಮಂತ ಸ್ಮರಣಾತ್ ಭವೇತ್".

ಧರ್ಮ ಮತ್ತು ವಿಜ್ಞಾನಗಳ ಸಂಗಮ, ಈ ಯಂತ್ರದ ವೈಶೇಷಿಕತೆ

ಪರಿಶೀಲನೆ: ಹಂಪಿಯ ಯಂತ್ರೋದ್ಧಾರ ಹನುಮನ ಸುತ್ತ ಕೊರೆಯಲ್ಪಟ್ಟ ಯಂತ್ರವು ಭಕ್ತನ ಭಕ್ತಿ ಹಾಗೂ ದೇವನ ಶಕ್ತಿಗಳ ದ್ವಂದ್ವತೆಯ ಚಿಹ್ನೆಯಾಗಿದೆ. ಗೆಲವು-ಸೋಲುಗಳ ಚಿಹ್ನೆ ಭಕ್ತನು ದೇವನಿಗಿಂತ ಬಲಶಾಲಿ, ಆತನು ದೇವನನ್ನೂ ಕಟ್ಟಿಹಾಕಬಲ್ಲ. ಬಂಧಿಸಬಲ್ಲನೆಂಬುದು ಅದರ ಅರ್ಥ.

ಹನುಮನ ಸುತ್ತ ಕೊರೆದ ರೇಖೆಗಳಲ್ಲಿ ಎರಡು ತ್ರಿಕೋನಗಳ ಜೋಡಣೆಯ ಮಹತ್ವ ಅಡಗಿದೆ. ಒಂದು ತ್ರಿಕೋನವು ತನ್ನ ಅಡಿರೇಖೆಯ ಮೇಲೆ ನಿಂತು ಊರ್ಧ್ವಮುಖಿಯಾಗಿ ತನ್ನ ಇನ್ನೆರಡು ಬಾಹುಗಳಲ್ಲಿ ಮೇಲೇರುತ್ತ ಶಿಖರ ಬಿಂದುವಿನಲ್ಲಿ (Apex point) ಒಂದಾಗಿದೆ. ಇನ್ನೊಂದು ತ್ರಿಕೋನವು ತಲೆಪಟ್ಟಿಕೆಯನ್ನು ಆಧಾರಮಾಡಿಕೊಂಡು, ತನ್ನ ಎರಡು ಬಾಹುಗಳನ್ನು ಕೆಳಗೆ (ಚಿತ್ರ ನೋಡಿ) ಇಳಿಸುತ್ತ ಅಧೋಬಿಂದುವಿನಲ್ಲಿ ಕೂಡಿದೆ (Down point).

ಹೀಗೆ, ತದ್ವಿರುದ್ಧ ದಿಸೆಯಲ್ಲಿ ಮೂಡಿದ ಮುಖ್ಯ ಎರಡು ತ್ರಿಕೋನಗಳು ಒಂದನ್ನೊಂದು ತಳಕು ಮಳಕಾಗಿ, ಹನುಮನ ಸುತ್ತ ಷಟ್‌ಸ್ಥಲ (ಆರು ಭುಜಗಳ ಜಾಮಿತಿ) ಆಕೃತಿಯಾಗಿದೆ. ಈ ಪ್ರತಿಯೊಂದು ಭುಜವು ವರ್ತುಲದ ಆರನೆಯ ಒಂದು ಭಾಗವಾಗಿದೆ (Sextant i.e. sixth part of a circle). ಈ ಸಮಾನ ಉದ್ದನೆಯ ರೇಖೆಗೆ ಅಡಿರೇಖೆಯನ್ನಾಗಿ (Base line) ಮಾಡಿ, ಅಷ್ಟೇ ಅಳತೆಯುಳ್ಳ ಬಾಹು ರೇಖೆಗಳನ್ನು ಮುಂದೆ ಎಳೆದು, ಆರು ಸಮಭುಜ ತ್ರಿಕೋನಗಳನ್ನಾಗಿಸಿದೆ. ಈ ಪ್ರತಿಯೊಂದು ತ್ರಿಕೋನದ ಶಿಖರಬಿಂದುವಿನಲ್ಲಿ ಹಾಯ್ದು ಹೋಗುವ ಪರೀಘ ರೇಖೆಯು ಒಂದು ವರ್ತುಲವನ್ನಾಗಿ ಮಾಡಿದೆ.

ಹೀಗೆ ಷಟ್‌ಕೋನ, ತ್ರಿಕೋನಗಳು ಹಾಗೂ ವರ್ತುಲಗಳನ್ನು ಹೆಣೆದುಕೊಂಡಿರುವ ಸಂಯುಕ್ತಾಕೃತಿಯ (complex figure) ಒಂದು ಅಗಮ್ಯ ಜಾಮಿತಿ ಆಗಿದ್ದು, ಅದರಿಂದ ಒಳಗಿನಿಂದ ಪಾರಾಗಿ ಹೊರಹೋಗಲು ಬರುವುದೇ ಇಲ್ಲ. ಇದೊಂದು ಯಂತ್ರ, ಜಾಮಿತಿ, ವಿಜ್ಞಾನ ಹಾಗೂ ಆಧ್ಯಾತ್ಮಗಳ ತಳಕು ಮಳಕು, ಇಲ್ಲಿ ಹಂಪಿಯ ಈ ಯಂತ್ರೋದ್ಧಾರದ ಹನುಮನ ಭಿತ್ತಿ ಚಿತ್ರದಲ್ಲಿ (Bas relief) ಸಂಗಮವಾಗಿವೆ.

ಇಂಥ ವಿನ್ಯಾಸಗಳು, ಶಿಲ್ಪಶಾಸ್ತ್ರದ ಪುಸ್ತಕಗಳಾದ ಅರ್ಥಶಾಸ್ತ್ರ, ಮಯಮತ, ಮಾನಸಾರಗಳಲ್ಲಿ ನಮೂದಿಸಲಾಗಿದೆ. ರಕ್ಷಣಾ ವಾಸ್ತುವಿನ ವಿಶೇಷ ಜ್ಞಾನದ ಈ ಪ್ರಾಚೀನ ಗ್ರಂಥಗಳಿವೆ; ಅವುಗಳಲ್ಲಿ ಯುದ್ಧಕಲೆ, ಯುದ್ಧಯಂತ್ರ, ತಂತ್ರಗಳನ್ನೂ ವಿವರಸಲಾಗಿದೆ. ರಾಜಧಾನೀಯ, ದ್ರೋಣ, ಖರ್ವಟ ದುರ್ಗಗಳ ಪ್ರಕಾರಗಳಲ್ಲೂ ಈ ತರಹದ ರಕ್ಷಣಾ ತಂತ್ರ ಯಂತ್ರಗಳ ವಿಜ್ಞಾನವಿದೆ, ವಿನ್ಯಾಸವಿದೆ. ಮಹಾಭಾರತದ ಚಕ್ರವ್ಯೂಹ ಈ ಸಮಯದಲ್ಲಿ ಜ್ಞಾಪಕಕ್ಕೆ ಬರುತ್ತದೆ. ಅದರ ವಿನ್ಯಾಸವೂ ವೈರಿಗಳನ್ನು ಭ್ರಮೆಗೊಳಿಸುವಂತಿದೆ.

ಹೀಗೆ, ಹಂಪಿ ಯಂತ್ರೋದ್ಧಾರ ಹನುಮನ ವಿನ್ಯಾಸ ನೋಡಿದರೆ, ನನಗೆ ಹೊಳೆದ ಕೆಲವು ವಾಸ್ತುವಿಚಾರಗಳನ್ನು ಇಲ್ಲಿ ಮೇಲೆ ಹೇಳಿದೆ ಅಷ್ಟೆ. ಇದು ಸಂಶೋಧಕರಿಗೊಂದು ದರ್ಶನವಿದು.

ಹನುಮನ ಗುಣಮೌಲ್ಯಗಳು

'ಆ ಜಲಧಿಯನೆ ಜಿಗಿದ ಹನುಮನುದಿಸಿದ ನಾಡು ಕರ್ನಾಟಕ' ಎಂದು ಹನುಮನು ಹುಟ್ಟಿದ ನಾಡು ಕನ್ನಡ ನಾಡು' ಎಂದು ಹುಯಿಲ್‌ಗೋಳ್ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು...' ಪ್ರಸ್ತಾಪಿಸುತ್ತ, ಅಂಜಲಿ ಹನುಮನ ತಾಯಿ ಹಾಗೂ ಕೇಸರಿ ತಂದೆ, ವಾಲಿ-ಸುಗ್ರೀವರ ರಾಜ್ಯದ ರಾಜಧಾನಿ ಕಿಷ್ಕಿಂಧೆಯಾಗಿತ್ತು (ಈಗಿನ ಹಂಪಿ). ಆ ರಾಜ್ಯದ ಕಪಿ ಸೈನ್ಯದ ಸೇನಾಪತಿ ಹನುಮ.


ಅರ್ಜುನನು ದ್ವಾಪರಯುಗದ ಮಹಾಭಾರತದ ನಾಯಕನಾಗಿದ್ದರೆ, ಹನುಮನು ತತ್ಪೂರ್ವದ ತ್ರೇತಾಯುಗದ ರಾಮಾಯಣದ ನಾಯಕ ಆಗಿದ್ದನು. ಹನುಮಂತನ ಗುಣ ವಿಶೇಷಗಳನ್ನು ಹೇಳುವುದಾದರೆ:

* ಭಾರತದ ಪ್ರಪ್ರಥಮ ಸೇತು ಅಭಿಯಂತ
* ಕರ್ನಾಟವು ಈಗಲೂ ಕೂಡ ಇಂಜಿನೀಯರುಗಳ ಪ್ರಾಂತವೆಂಬ ಖ್ಯಾತಿ
* ಗಿಡಮೂಲಿಕೆಗಳ ಔಷಧಿ ಗುಣಗಳನ್ನರಿತ ವೈದ್ಯ. ಏಕೆಂದರೆ ಆತ ಹಣ್ಣು ಹಂಪಲುಗಳನ್ನು ತಿಂದು, ಆಯ್ದು ವ್ಯಕ್ತಿ, ಸಂಜೀವಿನಿ ಪರ್ವತ ಎತ್ತಿ ತಂದ ಶಕ್ತ.
* 'ಸೂಕ್ಷ್ಮದೇಹಿ', 'ಸ್ಥೂಲದೇಹಿ'ಯಾಗುವ ದೈಹಿಕ ಬದಲಾವಣೆ ಮಾಡುವ ಯೋಗಪಟು, ಯೋಗಪುರುಷ.
* ಉದ್ದನೆಯ ಹಾಗೂ ಎತ್ತರದ ಜಿಗಿತದ ಆಟಗಾರ
* ಸಾಗರವ ಹಾರಿದ ಪ್ರಬುದ್ಧ
* ಸ್ವಾಮಿನಿಷ್ಠ, ಪರಮಭಕ್ತ. 'ಒಡೆಯ ರಾಮನಿಲ್ಲದ ತಾಣವಿಲ್ಲ' ಎಂಬ ದೇವವಿಶ್ವಾಸದ ವ್ಯಕ್ತಿ ಭಕ್ತ, ಸಂಗೀತಗಾರ ಕೂಡ.
* ಬ್ರಹ್ಮಚರ್ಯ ಪರಿಪಾಲಕ, ಬಲವಂತ, ಗುಣವಂತ
* ನಿಸ್ವಾರ್ಥ ಬದುಕು (ವಾಲಿ ಸುಗ್ರೀವರ ತರುವಾಯ ರಾಜನಾಗಬಹುದಿತ್ತು)
* ಯುದ್ಧಕಲೆ ಬಲ್ಲ ಸೇನಾನಿ (ಲಂಕೆಯ ರಾಮ-ರಾವಣರ ಯುದ್ಧಕ್ಕಾಗಿ ಕಪಿಗಳಿಗೆ ತರಬೇತಿ ನೀಡಿದನು.)

* ಪ್ರಾಣದೇವ (ಪ್ರಾಣವಾಯು) ಎಂದು ಹೆಸರು ಪಡೆದಿದ್ದಾನೆ.
* ಸಪ್ತ ಅಮರರಲ್ಲಿ ಹನುಮನೊಬ್ಬ (ಅಶ್ವತ್ಥಾಮೋ ಬಲಿರ್ವ್ಯಾಸೋ, ಹನುಮಂತ, ವಿಭೀಷಣಶ್ಚೈವ ಪರಶುರಾಮೋ ಕೃಪಾ ಇವ ಸಪ್ತೇತಿ ಚಿರಂಜೀವಿನಃ)

ಆಧಾರ ಗ್ರಂಥಗಳು

1. *ಜಿಲ್ಲಾ ಗೆಝೆಟಿಯರ್ಸ್*, ಜಿಲ್ಲೆಗಳು: ಬೆಳಗಾವಿ, ಬಿಜಾಪುರ, ಧಾರವಾಡ, ಉ.ಕನ್ನಡ, ಗುಲಬರ್ಗಾ, ರಾಯಚೂರು, ಚಿತ್ರದುರ್ಗ, ಬೆಂಗಳೂರು ಹಾಗೂ ಬೆಂಗಳೂರು ಗ್ರಾಮಾಂತರ.
2. ಡಾ. ಅಮರೇಶ ಯತಗಲ್, *ಕಸಬಾ ಲಿಂಗಸುಗೂರಿನ ಅಧಿದೈವ ಶ್ರೀ ಕುಪ್ಪಿಭೀಮ*, ಅದಿತಿ ಪ್ರಕಾಶನ, ಲಿಂಗಸುಗೂರು, 2008.
3. ಶ್ರೀ ಶಾಮರಾವ್ ಖಂಡೇರಾವ್, ಗಜೇಂದ್ರಗಡ, *ಶ್ರೀ ಯಲಗೂರೇಶ ಚರಿತ್ರೆ*, ಪ್ರಕಾಶಕರು: ಜಿ.ಎಂ. ಪರ್ವತೀಕರ, ಪತ್ರಿಕಾ ಏಜೆಂಟರು, ವರದಿಗಾರರು, ಬಾಗಲಕೋಟೆ.
4. ಶ್ರೀ ಸ್ವಾಭೀ. ಕದರಮಂಡಲಗಿ, *ಶ್ರೀ ಶಾಂತೇಶ ವಿಜಯ*, ಆಶಾ ಗ್ರಾಫಿಕ್ಸ್, ಕುಮಾರ ಪಟ್ಟಣ, ರಾಣಿಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆ.
5. ರಜತ ವರ್ಷ ಸ್ಮರಣ ಸಂಚಿಕೆ, ಪ್ರ: ರಾ.ಗು.ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ದೇವಸ್ಥಾನ ಕಮಿಟಿ, *ಪಾವನ*, ಸ್ಮರಣ ಸಂಚಿಕೆ, ಬೆಂಗಳೂರು, 1993–94.
6. ರಾಗಿ ಗುಡ್ಡದ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ದೇವಸ್ಥಾನ ಕಮಿಟಿ (ಪ್ರ), ರಾಗಿಗುಡ್ಡದ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ದೇವಸ್ಥಾನ, ಬೆಂಗಳೂರು–9
7. *ಶ್ರೀ ಅಮರಪ್ರಿಯ ಹೋತಪೀಠ*, ಶ್ರೀ ಓಂ ಪ್ರಕಾಶ ಎಚ್ ಪಾಟೀಲ, *ಶ್ರೀ ಆಂಜನೇಯ ತುಳಸೀಗಿರೀಶ*, ಶ್ರೀ ಮಾರುತಿ ಪ್ರಕಾಶನ, ಸುಕ್ಷೇತ್ರ, ತುಳಸೀಗಿರಿ, ಬಾಗಲಕೋಟೆ ತಾಲ್ಲೂಕು ಮತ್ತು ಜಿಲ್ಲೆ, 1991.




ಹಂಪಿ: ಯಂತ್ರೋದ್ಧಾರಕ ಹನುಮ
ಕದರಮಂಡಲಗಿಯ: ಕಾಂತೇಶ,
ಶಿಕಾರಿಪುರ: ಭ್ರಾಂತೇಶ
ಸಾತೇನ ಹಳ್ಳಿ: ಶಾಂತೇಶ
ಲಿಂಗಸಗೂರಿ: ಕುಪ್ಪಭೀಮಾಂಜನೇಯ
ಯಲಗೂರಿ: ಯಲಗೇಶ, ಬಿಜಾಪುರ ಜಿಲ್ಲೆ
ಕುರುಬಗಚ್ಚಿ (ಧಾರವಾಡ): ಹನುಮಪ್ಪ

ಬೆಂಗಳೂರು: ರಾಗೀ ಗುಡ್ಡದ ಪ್ರಸನ್ನ ಆಂಜನೇಯ
ತುಳಸೀಗೇರಿ (ಬಾಗಲಕೋಟೆ ಜಿಲ್ಲೆ): ಆಂಜನೇಯ
ಬಾದಾಮಿ: ಕೊತ್ತಳದ ಹನುಮ
ಬಾಗಲಕೋಟೆ: ಕೊತ್ತಳದ ಹನುಮಪ್ಪ
ಧಾರವಾಡ: ನುಗ್ಗೀಕೇರಿ ಹನುಮ
ಕೆಂಗಲ್ ಹನುಮ
ಕಾರ್ಕಳ ಹನುಮ



ಕದರಮಂಡಲಗಿ ಶ್ರೀ ಕಾಂತೇಶ



ಶ್ರೀ ಯಲಗೂರೇಶ




ಶ್ರೀ ಆಂಜನೇಯ ತುಳಸಿಗಿರೀಶ



ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯ



ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯದ ಮುಖದ್ವಾರ (ಬೆಂಗಳೂರು)




ಹಸಿರು ಹಿನ್ನೆಲೆಯಲ್ಲಿ ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯದ ದೇಗುಲ (ಬೆಂಗಳೂರು)

36

ದರೆಗುಡ್ಡೆಯ ವಿಠಲ ಸೋಮನಾಥೇಶ್ವರ ದೇವಾಲಯ

ಡಾ|| ಟಿ. ಮುರುಗೇಶಿ – ಶ್ರೀಮತಿ ಜಯಲಕ್ಷ್ಮಿ ಜಿ.

ಮಂಗಳೂರು ಜಿಲ್ಲೆ, ಮಂಗಳೂರು ತಾಲ್ಲೂಕಿನಲ್ಲಿರುವ ದರೆಗುಡ್ಡೆ ಗ್ರಾಮದಲ್ಲಿರುವ ವಿಠಲ ಸೋಮನಾಥೇಶ್ವರ ದೇವಾಲಯ, ಪಶ್ಚಿಮ ಘಟ್ಟದ ತಪ್ಪಲಲ್ಲಿರುವ ಒಂದು ದೇವಾಲಯ. ಈ ದೇವಾಲಯದ ವಾಸ್ತು ವಿಜಯನಗರದ ವಾಸ್ತು ಶೈಲಿಯಲ್ಲಿದೆ. ಬಾರಕೂರು ಮತ್ತು ಕಾರ್ಕಳದಲ್ಲಿರುವ ವಿಜಯನಗರದ ವಾಸ್ತು ಶೈಲಿಗೆ ನಿಕಟವಾಗಿದೆ.



ಪೂರ್ವಾಭಿಮುಖವಾಗಿರುವ ಈ ದೇವಾಲಯ, ಚೌಕಾಕಾರದ ತಲವಿನ್ಯಾಸವನ್ನು ಹೊಂದಿದ್ದು, ಒಂದು ಗರ್ಭಗೃಹ, ಒಂದು ಅಂತರಾಳವನ್ನು ಒಳಗೊಂಡಿದೆ. ಗರ್ಭಗೃಹದ ಪ್ರವೇಶದ್ವಾರದ ಎರಡೂ ಬದಿಗಳಲ್ಲಿ ವ್ಯಾಳಿ ಮುಖದ ಕಲ್ಲುಗಳಿವೆ. ದೇವಾಲಯದ ಭಿತ್ತಿಯನ್ನು ದೊಡ್ಡ ಹಾಸುಗಲ್ಲುಗಳನ್ನು ಉಪಯೋಗಿಸಿ ರಚಿಸಲಾಗಿದ್ದು, ಅಲಂಕಾರ ರಹಿತವಾಗಿವೆ. ಭಿತ್ತಿಯಲ್ಲಿನ ಅರೆಗಂಭಗಳ ಬೋದಿಗೆಯ ಭಾಗ ತೋರಣ ಶೈಲಿಯಲ್ಲಿದೆ. ಭಿತ್ತಿಯ



ಮೇಲ್ಭಾಗದಲ್ಲಿ ಇಳಿಜಾರಾದ ಹಾಸುಗಲ್ಲಿನ ಮೇಲ್ಹಾವಣಿಯ ಮುಚ್ಚಣಿಕೆಯಿದೆ. ಈ ಮುಚ್ಚಣಿಕೆಯ ನಾಲ್ಕು ದಿಕ್ಕಿನ ಮೂಲೆಗಳಲ್ಲಿ ಒಳಗೆ ಇಳಿದ ನೀರು ಹರಿದು ಬರಲು, ಕಲ್ಲಿನ ಕಾಲುವೆಗಳನ್ನು ಜೋಡಿಸಲಾಗಿದೆ. ಇದರ ಮೇಲ್ಭಾಗದಲ್ಲಿ ಅರೆಗೋಡೆ ಅಥವಾ ಪ್ಯಾರಾಪಟ್ ವಾಲ್ ಇದೆ. ಅರೆಗೋಡೆಗಳ ಮೇಲೆ ವಿವಿಧ ವಿನ್ಯಾಸದ ಹೂವುಗಳಿವೆ ಅದರ ಮೇಲೆ ಮತ್ತೊಂದು ಮಾಳಿಗೆಯನ್ನು ನಿರ್ಮಿಸಿ ಇಳಿಜಾರಾದ ಮೇಲ್ಹಾವಣಿಯನ್ನು ಮಾಡಲಾಗಿದೆ.

ಗರ್ಭಗೃಹದ ಹೊರಗೆ ಒಂದು ತೀರ್ಥ ಮಂಟಪವಿದ್ದು, ಹೊರ ಸುತ್ತಿನ ಪ್ರದಕ್ಷಿಣಾ ಪಥದೊಂದಿಗೆ ಆವರಣದ ಗೋಡೆಯಿದೆ. ಗರ್ಭಗೃಹದ ಎದುರಿಗೆ ಎತ್ತರವಾದ ಧ್ವಜಸ್ತಂಭವಿದೆ. ಧ್ವಜಸ್ತಂಭದ ನೆಲಮಟ್ಟದಿಂದ ಸುಮಾರು ಮೂರು ಅಡಿ ಕೆಳಗೆ ದೇವಾಲಯದ ವಾಸ್ತುವನ್ನು ನಿರ್ಮಿಸಲಾಗಿದೆ. ಇಡೀ ವಾಸ್ತುವನ್ನು ಪಕ್ಕದಲ್ಲೇ ದೊರೆಯುವ ನೀಸ್ ಶಿಲೆಯಿಂದ ರಚಿಸಲಾಗಿದೆ.



ಚರ್ಚೆ

ದೇವಾಲಯ ಸ್ಥಳೀಯ ಅರಸು ಮನೆತನದವರಿಂದ ನಿರ್ಮಿಸಿದ್ದರೂ, ದೇವಾಲಯದ ಶೈಲಿ ವಿಜಯನಗರದ ಶೈಲಿಯಲ್ಲಿದೆ. ದೇವಾಲಯದ ಪ್ರಾಕಾರದ ಮೂಲೆಯಲ್ಲಿರುವ ಶಾಸನದ ಮೇಲಿರುವ ಉಬ್ಬುಶಿಲ್ಪ ವಿಶಿಷ್ಟವಾಗಿದೆ. ಮೂರು ಹಂತದ ಪಿರಮಿಡ್ ಶೈಲಿಯಲ್ಲಿರುವ ಈ ಶಿಲ್ಪ ದೇವಾಲಯದ ಪ್ರತಿಕೃತಿಯ ಪ್ರತೀಕವಾಗಿರಬಹುದೇ? ಈ

ದೇವಾಲಯ ಯಾವಾಗ ನಿರ್ಮಾಣವಾಗಿದೆ ಎನ್ನುವುದು ಖಚಿತವಾಗಿ ತಿಳಿಯದಿದ್ದರೂ, ವಿಜಯನಗರ ಕಾಲದಲ್ಲಿ ಪುನರ್ ನಿರ್ಮಾಣವಾಗಿದೆ. ಇಲ್ಲಿನ ಜೀರ್ಣವಾಗಿರುವ ನಂದಿ ಮತ್ತು ದ್ವಿಬಾಹು, ಕರಂಡ ಮುಕುಟಧಾರಿಯಾಗಿರುವ ಎಡಮುರಿ ಗಣೇಶನ ಶಿಲ್ಪಗಳು ಈ ದೇವಾಲಯ 8–9ನೆಯ ಶತಮಾನದ ದೇವಾಲಯವೆಂಬುದನ್ನು ಸೂಚಿಸುತ್ತವೆ. ಆದರೆ ವಿಜಯನಗರದ ವಾಸ್ತು ವಿನ್ಯಾಸದಲ್ಲಿರುವ ಈಗಿನ ದೇವಾಲಯ, ವಿಜಯನಗರದ ಸಂಸ್ಕೃತಿ ಪುನರ್ ನಿರ್ಮಾಣದ ಅವರ ತೀವ್ರಾಸಕ್ತಿಯ ಉತ್ತಮ ಉದಾಹರಣೆಯಾಗಿದೆ. ಈ ದೇವಾಲಯದ ಸಮೀಪದ ಗದ್ದೆಯೊಂದರಲ್ಲಿರುವ ವಿಜಯನಗರದ ಶಾಸನ ದೇವಾಲಯಕ್ಕೆ ನೀಡಿದ ದತ್ತಿಗಳನ್ನು ದಾಖಲಿಸುತ್ತದೆ. ಇದು ಕೂಡ ಈ ದೇವಾಲಯ ವಿಜಯನಗರದ ಕಾಲದಲ್ಲಿಯೇ ಪುನರ್ ನಿರ್ಮಾಣವಾಗಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಆದರೆ ವಿಠಲ ಎಂಬ ಹೆಸರು ಹೇಗೆ ಬಂತೆನ್ನುವುದು ಇನ್ನೂ ನಿಗೂಢವಾಗಿದೆ.

ವಿಜಯನಗರ ಚಿತ್ರಕಲೆಯ ಪರಂಪರೆ ಮತ್ತು ಲಕ್ಷಣಗಳು

ಡಾ॥ ಎಸ್. ಸಿ. ಪಾಟೀಲ

ಕರ್ನಾಟಕದಲ್ಲಿ ಬಹುದೊಡ್ಡ ಚಿತ್ರಕಲಾ ಪರಂಪರೆಯೊಂದು ಚಾಲುಕ್ಯರ ಕಾಲದಲ್ಲಿ, ಅದರಲ್ಲೂ ವಿಶೇಷವಾಗಿ ಬಾದಾಮಿ ಚಾಲುಕ್ಯರ ಕಾಲದಲ್ಲಿ, ಬೆಳೆದುಬಂದಿದ್ದು ಒಂದು ಘಟ್ಟವಾದರೆ, ಇನ್ನೊಂದು ಘಟ್ಟ ಅಷ್ಟೇ ಪ್ರಬಲವಾದ ರಾಜಮನೆತನ ವಿಜಯನಗರ ಅರಸುಮನೆತನ. ಈ ಎರಡು ರಾಜಮನೆತನಗಳು ಕರ್ನಾಟಕದ ಕೀರ್ತಿಯನ್ನು ಕರ್ನಾಟಕೇತರ ಪ್ರದೇಶಗಳಲ್ಲಿ ವಿಶೇಷವಾಗಿ ದಕ್ಷಿಣ ಭಾರತದುದ್ದಕ್ಕೂ ಇವರು ರಾಜ್ಯಭಾರವನ್ನು ವಿಸ್ತರಿಸಿಕೊಂಡರು. ಹಾಗೆಯೇ ಅಲ್ಲೆಲ್ಲಾ ನಿರ್ಮಿಸಿದ ಅಸಂಖ್ಯಾತ ದೇವಾಲಯಗಳು ಚಿತ್ರ, ಶಿಲ್ಪ ಮುಂತಾದವು ಇಂದಿಗೂ ಕುರುಹುಗಳಾಗಿ ನಮ್ಮೆದುರಿಗೆ ಇವೆ. ಚಾಲುಕ್ಯರ ಕಾಲದ 2ನೇ ಪುಲಕೇಶಿ ಮಂಗಲೇಶರ ಕಾಲದಲ್ಲಿ ಲಲಿತಕಲೆಗೆ ಬಹುದೊಡ್ಡ ಆಶ್ರಯ ಸಿಕ್ಕಿತು. ಜಗತ್‌ಪ್ರಸಿದ್ದ ಅಜಂತಾ ಗುಹೆಯ 1 ಮತ್ತು 2ನೆಯ ಗುಹೆಯ ಚಿತ್ರಗಳೆಲ್ಲ ಎರಡನೆಯ ಪುಲಕೇಶಿಯ ಕಾಲದಲ್ಲಿ ಅವನ ಪೋಷಣೆಯಲ್ಲಿ ನಿರ್ಮಾಣವಾಗಿರುವುದನ್ನು ಈಗಾಗಲೇ ವಿದ್ವಾಂಸರು ಗುರುತಿಸಿದ್ದಾರೆ. ಮಂಗಲೇಶನು ಬಾದಾಮಿಯ 4ನೆಯ ಗುಹೆಯನ್ನು ಕ್ರಿ.ಶ. 578–579ರ ಶಾಸನ ತಿಳಿಸುವಂತೆ 12 ವರ್ಷ ಈ ಗುಹೆಯನ್ನು ನಿರ್ಮಿಸಿ ಅಲ್ಲಿ ಅದನ್ನು ವರ್ಣ ಚಿತ್ರಗಳಿಂದ ಅಲಂಕರಿಸಿದ್ದು ಇನ್ನೂ ಅದರ ಕುರುಹುಗಳು ಇವೆ.

ಹಾಗೆಯೇ ವಿಜಯನಗರ ಸಾಮ್ರಾಜ್ಯದ ಶ್ರೀಕೃಷ್ಣದೇವರಾಯ ಮತ್ತು ಪ್ರೌಢದೇವರಾಯರು ಲಲಿತಕಲೆಗಳಿಗೆ ಕೊಟ್ಟ ಪ್ರೋತ್ಸಾಹ ಎರಡನೆಯ ಬಹುದೊಡ್ಡ ರಾಜಮನೆತನದ ಪೋಷಣೆಯಾಗಿದೆ. ಬಾದಾಮಿ ಚಾಲುಕ್ಯರ ವೈಭವ ಮತ್ತೆ ನಾವು ವಿಜಯನಗರ ಸಾಮ್ರಾಜ್ಯದಲ್ಲಿ ಕಾಣುತ್ತೇವೆ. ಲಲಿತಕಲೆಗಳ ಬೆಳವಣಿಗೆಯಲ್ಲಿ ಈ ಎರಡು ರಾಜಮನೆತನಗಳು ನೀಡಿದ ಕೊಡುಗೆ ಕಲಾ ಪೋಷಣೆ ಕರ್ನಾಟಕದ ಚಿತ್ರಶಿಲ್ಪಕಲೆ ಚರಿತ್ರೆಯಲ್ಲಿ ಅವಿಸ್ಮರಣೀಯ ಎರಡು ದೊಡ್ಡ ಘಟ್ಟಗಳು. ಮೊದಲಿನದು ಚಾಲುಕ್ಯ ಪರಂಪರೆಯ ಶೈಲಿಯಾದರೆ, ಎರಡನೆಯದು ವಿಜಯನಗರ ಪರಂಪರೆಯ ಶೈಲಿ.

ಬಾದಾಮಿ ಚಾಲುಕ್ಯರ ಪರಂಪರೆಯ ಮುಂದುವರಿಕೆಯಾಗಿ ಕಲ್ಯಾಣ ಚಾಲುಕ್ಯ ಪರಂಪರೆಯ ಬೆಳವಣಿಗೆಯಾಯಿತು. ಹಾಗೆಯೇ ವಿಜಯನಗರ ಪರಂಪರೆಯು ಮುಂದುವರಿಕೆಯಾಗಿ ವಿಜಯನಗರೋತ್ತರ ಚಿತ್ರಶಿಲ್ಪಕಲಾ ಪರಂಪರೆ ಬಹುದೊಡ್ಡ ಪ್ರಮಾಣದಲ್ಲಿ ಬೆಳೆದುಬಂದಿದ್ದು ಕಾಕತಾಳೀಯವೆನ್ನಬಹುದು. ಉತ್ತರ

ಕರ್ನಾಟಕದ ಈ ಎರಡು ದೊಡ್ಡ ಪರಂಪರೆಯ ವಾರಸುದಾರರು ನಾವು ಎಂದು ಹೇಳಿಕೊಳ್ಳುವುದರಲ್ಲಿ ಹಿಂದೆ ಸರಿಯಬೇಕಿಲ್ಲ.

ಪ್ರಸ್ತುತ ವಿಜಯನಗರ ಚಿತ್ರಕಲಾ ಪರಂಪರೆಯ ಪ್ರಮುಖ ಲಕ್ಷಣಗಳನ್ನು ಕುರಿತು ಇಲ್ಲಿ ವಿವೇಚನೆಯನ್ನು ಮಾಡಲಾಗಿದೆ.

ವಿಜಯನಗರ ಚಿತ್ರ ಶೈಲಿಯ ಪರಿಪೂರ್ಣತೆಯನ್ನು ಹಂಪೆಯ ವಿರೂಪಾಕ್ಷ ದೇವಾಲಯದ ಮುಂದಿನ ಕಲ್ಯಾಣ ಮಂಟಪದ ಮೇಲ್ಛಾವಣಿಯಲ್ಲಿ ಚಿತ್ರಿತವಾದ ಭಿತ್ತಿಚಿತ್ರಗಳಲ್ಲಿ ಇರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಶ್ರೀ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ನಿರ್ಮಾಣಗೊಂಡ ಈ ಕಲ್ಯಾಣ ಮಂಟಪದಲ್ಲಿ ಅಸಂಖ್ಯಾತ ಭಿತ್ತಿಚಿತ್ರಗಳನ್ನು ರಚಿಸಲಾಗಿದೆ. ರಾಮಾಯಣ, ಮಹಾಭಾರತ, ಭಾಗವತ ಮತ್ತಿತರ ಹಿಂದೂ ಪುರಾಣಗಳಿಂದ ಆಯ್ದ ವಿಷಯಗಳನ್ನು ಇಲ್ಲಿ ಚಿತ್ರಕಲೆಗೆ ಬಳಸಿಕೊಳ್ಳಲಾಗಿದೆ.

ಶಿಲ್ಪಕಲೆ ಮತ್ತು ವಾಸ್ತುಶಿಲ್ಪದಂತೆ ಚಿತ್ರಕಲೆಯೂ ಅಭಿವೃದ್ಧಿ ಹೊಂದಿತು. ಈ ಮುಂಚಿನ ಕಾಲದವು ನಮಗೆ ಹೆಚ್ಚು ಪ್ರಾಪ್ತವಾಗಿಲ್ಲ. ವಿಜಯನಗರದ ಅರಸರು ಚಿತ್ರಕಲಾ ಕೌಶಲ್ಯತೆಗೆ ಉದಾರ ಆಶ್ರಯ ನೀಡಿದ್ದರೆಂಬುದಕ್ಕೆ ಹಂಪೆಯ ವಿರೂಪಾಕ್ಷ ದೇವಾಲಯ, ಲೇಪಾಕ್ಷಿಯ ವೀರಭದ್ರ, ಸೋಮಪಾಳ್ಯಮ್‌ನಲ್ಲಿಯ ಚೆನ್ನಕೇಶವ, ಆನೆಗೊಂದಿಯ ಹುಚ್ಚಪ್ಪಯ್ಯ ಮಠ, ಕಂಚಿಯ ವರದರಾಜ, ತಿಳಿವಿಳಿಮಲೈನ ಶಿವದೇವಾಲಯ, ತಿರುಪರಕುಂಡ್ರಮ್‌ನ ಜೈನಬಸದಿ, ತಿರುಮಲೈನ ಕುಂದಾಣಿಜಿನಾಲಯ, ತಂಜಾವೂರಿನ ಬೃಹದೇಶ್ವರ, ಚಿದಂಬರಂನ ಶಿವಕಾಮಸುಂದರಿ ದೇವಾಲಯಗಳಲ್ಲಿ ಇಂದಿಗೂ ಸಾಕ್ಷ್ಯಾಧಾರಗಳಿವೆ. ಇವಲ್ಲದೆ ಚಿಪ್ಪರಗಿ, ತಿರುಪತಿ, ಕದಿರಿ, ರಾಯಕೋಟೆ, ಕುಂಭಕೋಣಂ, ಶ್ರೀರಂಗಂ, ತಿರುವಣ್ಣಾಮಲೈ, ಕಾಳಹಸ್ತಿ, ತಾಡಪತ್ರಿ ದೇವಾಲಯಗಳಲ್ಲೂ ಈ ಕಾಲದ ಚಿತ್ರಕಲೆಯನ್ನು ನೋಡಬಹುದು. ಸಂರಕ್ಷಣೆಯಿಲ್ಲದಾದ್ದರಿಂದ ಇವುಗಳ ಪೂರ್ಣ ಚಿತ್ರಕಲೆ ಇಂದು ಲಭ್ಯವಿಲ್ಲವಾಗಿದೆ.

ವಿಜಯನಗರದ ಚಿತ್ರಕಲೆಯಲ್ಲಿ ಇನ್ನೊಂದು ದೇವಾಲಯ ಲೇಪಾಕ್ಷಿ ಪ್ರಮುಖವಾದುದಾಗಿದೆ. ಇಲ್ಲಿನ ವೀರಭದ್ರ ದೇವಾಲಯದ ಆವರಣದಲ್ಲಿ ಹಸಿರು, ಹಳದಿ, ನೀಲಿ, ಕಪ್ಪು, ಕೆಂಪು ಬಣ್ಣಗಳಲ್ಲಿ ದೇವತೆಗಳ, ಸಾಮಂತರ, ಸುಂದರ ಸ್ತ್ರೀಯರ, ಹೂಬಳ್ಳಿಗಳ ದೃಶ್ಯಗಳು ಮನೋಜ್ಞವಾಗಿ ಚಿತ್ರಿತವಾಗಿವೆ. ಕಾಲಾಂತರದಲ್ಲಿ ಕೆಂಪು, ಕಪ್ಪು ಬಣ್ಣಗಳು ಮಾತ್ರ ಪ್ರಧಾನವಾಗಿದ್ದು ಉಳಿದ ಬಣ್ಣಗಳು ಮಸುಕಾಗಿವೆ. ಇಲ್ಲಿನ ಪೌರಾಣಿಕ ದೃಶ್ಯಗಳಲ್ಲಿ ಪ್ರಮುಖವಾದವು ಗಿರಿಜಾ ಕಲ್ಯಾಣ, ರಾಮಪಟ್ಟಾಭಿಷೇಕ, ಮೋಹಿನಿ ಭಸ್ಮಾಸುರ, ಉಮಾ-ಮಹೇಶ್ವರ, ತ್ರಿಪುರಸಂಹಾರ ದೃಶ್ಯ, ಅರ್ಧನಾರೀಶ್ವರ, ದ್ರೌಪದಿ ಕಲ್ಯಾಣ, ಭೂಕೈಲಾಸ, ವೀರಭದ್ರೇಶ್ವರ; ಅಪ್ಸರೆಯರಾದ ರಂಭಾ, ಊರ್ವಶಿ, ಮೋಹಿನಿ ಮತ್ತು ಉಮಾ, ಗಿರಿಜಾ ಮೊದಲಾದವರ ಕೇಶಾಲಂಕಾರಗಳು, ಪುಷ್ಪಾಲಂಕಾರಗಳು, ವಿವಿಧ ವಸ್ತ್ರಾಲಂಕಾರಗಳು, ಆಭರಣಗಳು ಅತ್ಯಂತ ಮನೋಜ್ಞವಾಗಿ ಚಿತ್ರಿತವಾಗಿವೆ. ಅರ್ಜುನನ ತಪೋಭಂಗ ದೃಶ್ಯದಲ್ಲಿ ಪಶು ಪಕ್ಷಿಗಳು (ಚಿಗರೆ, ಹಂದಿ, ಮೊಲ ಇತ್ಯಾದಿ) ಚಿತ್ರಿತವಾಗಿವೆ. ಮತ್ತೊಂದು ದೃಶ್ಯದಲ್ಲಿ ವಿಷ್ಣುವಿನ ದಶಾವತಾರಗಳು ಮನೋಜ್ಞವಾಗಿ ಚಿತ್ರಿಸಲ್ಪಟ್ಟಿವೆ. ಇವಲ್ಲದೆ ಅಂದಿನ ಶಸ್ತ್ರಾಸ್ತ್ರಗಳು ವೈವಿಧ್ಯಮಯವಾಗಿ ಚಿತ್ರಿತವಾಗಿವೆ.

ಚಿತ್ರರಚನೆಯ ಕಾಲದ ವಿವೇಚನೆ

ಈಗಾಗಲೇ ಹಲವಾರು ಜನರು ಈ ಕಲ್ಯಾಣ ಮಂಟಪದ ಭಿತ್ತಿ ಚಿತ್ರರಚನೆಯ ಕಾಲದ ಕುರಿತು ತಮ್ಮದೇ ಆದ ಅಭಿಪ್ರಾಯಗಳನ್ನು ನೀಡಿದ್ದಾರೆ. ಈ ಚರ್ಚೆ ಇನ್ನೂ ನಡೆಯುತ್ತಲೇ ಇದೆ. ಹಂಪೆಯ ಈ ವರ್ಣ ಚಿತ್ರಗಳ

ಕುರಿತು ಸಿ.ಟಿ.ಎಂ. ಕೊಟ್ರಯ್ಯನವರು[1] 1959ರಲ್ಲಿ ಮತ್ತು 1978ರಲ್ಲಿ ಇಂಗ್ಲೀಷ್ ಮತ್ತು ಕನ್ನಡದಲ್ಲಿ ಎರಡು ಲೇಖನಗಳನ್ನು ಬರೆದಿದ್ದಾರೆ. ಅವರು ಕ್ರಿ.ಶ. 1510 ರಿಂದ ಕ್ರಿ.ಶ. 1565ರ ಒಳಗೆ ಚಿತ್ರಗಳು ರಚನೆಯಾಗಿವೆ ಎಂದು ಅಭಿಪ್ರಾಯಪಡುತ್ತಾರೆ. ಕೃಷ್ಣದೇವರಾಯನು ಕ್ರಿ.ಶ. 1510ರಲ್ಲಿ ಈ ರಂಗಮಂಟಪವನ್ನು ಕಟ್ಟಿಸಿದ್ದಾನೆ ಮತ್ತು ಕ್ರಿ.ಶ. 1565ರಲ್ಲಿ ವಿಜಯನಗರ ಪತನವಾಗಿರುವುದನ್ನು ಉಲ್ಲೇಖಿಸಿ ಮೇಲೆ ತಿಳಿಸಿದ ಅವಧಿಯಲ್ಲಿ ಇಲ್ಲಿ ಚಿತ್ರರಚನಾಕಾರ್ಯ ನಡೆದಿರುವ ಸಾಧ್ಯತೆಯನ್ನು ವ್ಯಕ್ತಪಡಿಸಿದ್ದಾರೆ. ಆರ್. ಎಸ್. ಸಾಲತೊರೆಯವರು[2] ವಿಜಯನಗ*ಣ* ಆರ್ಟ್ ಎಂಬ ತಮ್ಮ ಪುಸ್ತಕದಲ್ಲಿ ವೀರಮಾನಪ್ಪ ಒಡೆಯನ ಕಾಲದ ಮಂಟಪದಲ್ಲಿ ಚಿತ್ರಗಳಿರುವುದರಿಂದ ಮಂಟಪದ ಕಾಲ ಕ್ರಿ.ಶ. 1347ರಲ್ಲಿಯೇ ಚಿತ್ರಗಳನ್ನು ಬರೆಯಿಸಲಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಸಿ. ಶಿವರಾಮಮೂರ್ತಿಯವರು ಕ್ರಿ.ಶ. 15ನೆಯ ಶತಮಾನಕ್ಕೆ ಸೇರಿಸುತ್ತಾರೆ. ಇವರಿಗಿಂತ ಭಿನ್ನವಾಗಿ ಎಸ್. ರಾಜಶೇಖರ ಅವರು 17ನೆಯ ಶತಮಾನಕ್ಕೆ, ಶ್ರೀಮತಿ ಎ.ಎಲ್. ದೆಲ್ಲಾಸಿ ಕೋಲಾರವರು 18–19ನೇ ಶತಮಾನಕ್ಕೆ ಒಯ್ಯುತ್ತಾರೆ. ಶ್ರೀರಂಗಪಟ್ಟಣ ಮೈಸೂರು ಶೈಲಿಯನ್ನು ಅನುಸರಿಸಿ ಡಾ. ಅ.ಲ. ನರಸಿಂಹನ್‌ರವರು, ಡಾ. ಎಸ್. ರಾಜಶೇಖರ ಅವರ ಅಭಿಪ್ರಾಯಕ್ಕೆ ಇವರೂ ಬರುತ್ತಾರೆ. ಕೋವಿಯ ಬಳಕೆ ಸೈನ್ಯದಲ್ಲಿದ್ದು ಅವು 17ನೆಯ ಶತಮಾನದಲ್ಲಿ ಬಳಕೆಯಾದ ಕುರಿತು ಹೇಳುತ್ತಾರೆ. ಎಸ್. ವೆಂಕಟೇಶ ಅವರು ಡಾ. ಅ.ಲ. ನರಸಿಂಹನ್ ಅವರ ವಾದವನ್ನೇ ಪುಷ್ಟೀಕರಿಸಿದ್ದಾರೆ. ಡಾ. ಶಿವರಾಮ ಕಾರಂತರು ಇವು ಕೃಷ್ಣದೇವರಾಯನ ಕಾಲದವು ಆದರೆ ಅವುಗಳ ಮೇಲೆ ಮತ್ತೆ ಪುನಃ ಚಿತ್ರರಚನೆಯಾದ ಕಾರಣ ಅವುಗಳ ಕಾಲ ತೊಡಕಾಗಿದೆ ಎನ್ನುತ್ತಾರೆ. ಡಾ. ಯಾದಪ್ಪ ಪರದೇಶಿಯವರು ಇವು ಕೃಷ್ಣದೇವರಾಯನ ಕಾಲದಲ್ಲಿ ನಿರ್ಮಾಣವಾದ ರಂಗಮಂಟಪ ಆ ಕಾಲದಲ್ಲಿಯೇ ರಚನೆಯಾದ ಕುರಿತು ಅನೇಕ ವಿವರ ನೀಡುತ್ತಾರೆ. ಡಾ. ಆರ್. ಎಚ್. ಕುಲಕರ್ಣಿ ಇದೇ ಅಭಿಪ್ರಾಯಪಡುತ್ತಾರೆ. ನನ್ನ ಅಭಿಪ್ರಾಯವು ಇದೇ ಆಗಿದೆ. ಅಂದರೆ ಕ್ರಿ.ಶ. 1510ರಿಂದ 1565ರ ವರೆಗಿನ ಕಾಲದಲ್ಲಿ ಈ ಚಿತ್ರಗಳು ರಚನೆಯಾಗಿವೆ. ಚಿತ್ರದ ಮೇಲೆ ಮತ್ತೆ 17–18ನೆಯ ಶತಮಾನದಲ್ಲಿ ಚಿತ್ರ ಬರೆಸಿರುವುದರಿಂದ ಚಿತ್ರದಲ್ಲಿ ಆಯಾಕಾಲದ ಅಂಶಗಳು ಅಲ್ಲಿ ಚಿತ್ರಣಗೊಂಡಿವೆ.

ಈ ಮಂಟಪವನ್ನು 1509ರಲ್ಲಿ ತನ್ನ ಪಟ್ಟಾಭಿಷೇಕದ ಸಂದರ್ಭದಲ್ಲಿ ಕೃಷ್ಣದೇವರಾಯ ಕಟ್ಟಿಸಿದ್ದಾನೆ. ಕೃಷ್ಣದೇವರಾಯ ಸ್ವತಃ ಕಲಾವಿದನಾಗಿದ್ದ ಕುರಿತು ವಿದ್ವಾಂಸರು ಈಗಾಗಲೇ ಚರ್ಚಿಸಿದ್ದಾರೆ. ಈ ಕಲಾನುಗುಣ ಸಹಜವಾಗಿ ಭಿತ್ತಿ ಚಿತ್ರ ನಿರ್ಮಾಣ ಮಾಡಿಸಿರುವ ಸಾಧ್ಯತೆ ಇದೆ. 1443ರಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ ಅಬ್ದುಲ್ ರಜಾಕ್ ಆ ಕಾಲದ ಚಿತ್ರದ ಬಗ್ಗೆ ಅವನು ಮಂಗಳೂರಿನಿಂದ ಹಂಪಿಯ ಕಡೆಗೆ ಬರುವಾಗ ಬೆತಾರ್ ಎಂಬಲ್ಲಿಯ ದೇವಾಲಯವೊಂದರಲ್ಲಿ ಚಿತ್ರಗಳಿದ್ದ ಬಗ್ಗೆ ಬರೆಯುತ್ತಾನೆ. ಇಲ್ಲಿ ಚಿತ್ರಿಸಿರುವ ಅಸಂಖ್ಯಾತ ಚಿತ್ರಗಳನ್ನು ಒಂದು ತಿಂಗಳಾದರೂ ಡಮಾಸ್ಕ ಅಥವಾ ಟೆಫೆಟಾ ಬಟ್ಟೆಯ ಮೇಲೆ ಬಿಡಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುತ್ತಾನೆ. ಕಟ್ಟಡದ ಬುಡದಿಂದ ತುದಿಯವರೆಗೂ ಒಂದು ಅಂಗುಲದಷ್ಟು ಜಾಗವಿಲ್ಲದಂತೆ ಚಿತ್ರ ರಚಿಸಿದ್ದನ್ನು ಹೇಳುತ್ತಾನೆ.

ರಾಜರ ಅಂತಃಪುರವನ್ನು ಅನೇಕ ಚಿತ್ರಗಳಿಂದ ಅಲಂಕರಿಸುತ್ತಿದ್ದರು. ದೂರದ ವಿದೇಶಗಳ ಜನರ ಜೀವನವನ್ನು ಚಿತ್ರಿಸುವಂತಹ ಚಿತ್ರಗಳು ಅಲ್ಲಿದ್ದು ಅವುಗಳನ್ನು ನೋಡುವುದರಿಂದ ರಾಣಿಯರು ಒಂದೊಂದು ದೇಶದ ರೀತಿ ನೀತಿಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತಿತ್ತೆಂದು ಹೇಳುತ್ತಾನೆ. ಹಾಗೆಯೇ ಮುಂದುವರಿದು ಅಂತಃಪುರದ ನೃತ್ಯ ಶಾಲೆಯಲ್ಲಿ ನೃತ್ಯದ ವಿವಿಧ ಭಂಗಿಗಳನ್ನು ಚಿತ್ರಿಸಲಾಗಿತ್ತೆಂದೂ ಮತ್ತು ರಾಜನ ದರ್ಬಾರು ಮಂದಿರದ ಗೋಡೆಗಳ ಮೇಲೆ ಬಿಲ್ಲು ಬಾಣಗಳನ್ನು ಹಿಡಿದಿರುವ ನಾರಿಯರ ಚಿತ್ರಗಳನ್ನು ರಾಜಾಧಿಕಾರಿಗಳು

ಮತ್ತು ದೇವದಾಸಿಯರು ವಾಸಿಸುವ ಮನೆಗಳುಳ್ಳ ರಸ್ತೆಗಳ ಪಕ್ಕದಲ್ಲಿ ಸಿಂಹ, ಹುಲಿ ಮೊದಲಾದವುಗಳ ಚಿತ್ರಗಳನ್ನು ಬರೆದಿಡಲಾಗುತ್ತಿತ್ತೆಂದು ಅಬ್ದುಲ್ ರಜಾಕ್ ಹೇಳುತ್ತಾನೆ. ಇವು ಜೀವಂತ ಪ್ರಾಣಿಗಳಂತೆ ಕಾಣುತ್ತಿದ್ದುವೆಂಬುದು ಅವನ ಹೇಳಿಕೆ.

ಕ್ರಿ.ಶ. 1520ರಲ್ಲಿ ಶ್ರೀಕೃಷ್ಣದೇವರಾಯನ ಕಾಲದಲ್ಲಿ ಭೇಟಿ ನೀಡಿದ ಪೆಯಿಸ್ ಹೇಳುವಂತೆ ಅರಮನೆಯ ಹೆಬ್ಬಾಗಿಲಿನ ಅಕ್ಕ ಪಕ್ಕಗಳಲ್ಲಿ ಎರಡು ಪೂರ್ಣಾಕೃತಿ ಚಿತ್ರಗಳನ್ನು ಇಡಲಾಗಿದ್ದಿತಂತೆ. ಅವುಗಳಲ್ಲಿ ಒಂದು ಕೃಷ್ಣದೇವರಾಯನದು, ಇನ್ನೊಂದು ಆತನ ತಂದೆಯದು. ಆ ಚಿತ್ರಗಳ ಸ್ವರೂಪವನ್ನು ಆತನ ಮಾತುಗಳಲ್ಲೇ ನೋಡಬಹುದು: At the entrance at the door out side are two images painted like life and drawn in their manner which are these. The one in the right is the father of this king and the one on the left is to this king (crisno rec). The father was dark and gentleman of fine from stout, than the son is they stand with their apparel and such raiment as they wear or used to wear.

ಇಲ್ಲಿ ತಂದೆ ಮಕ್ಕಳ ಚಿತ್ರವನ್ನು ವರ್ಣಿಸಿದ್ದಲ್ಲದೇ ರಾಜನ ಅಂತಃಪುರದಲ್ಲಿ ಅನೇಕ ಚಿತ್ರಗಳಿದ್ದುದನ್ನು ತಿಳಿಸುತ್ತಾನೆ. ಆಯಾ ಕಾಲದ ಸಾಹಿತ್ಯ ಕೃತಿಗಳಲ್ಲಿ ಉದಾ: *ಭರತೇಶ ವೈಭವ, ಮೋಹನ ತರಂಗಿಣಿ, ಜಗನ್ನಾಥ ವಿಜಯ* ಗ್ರಂಥಗಳಲ್ಲಿ ಸಹ ಈ ಭಿತ್ತಿ ಚಿತ್ರಕಲೆಯ ಪ್ರಸ್ತಾಪವಿರುವುದನ್ನು ಡಾ. ಎನ್. ವೆಂಕಟರಮಣಯ್ಯ ತಮ್ಮ ಗ್ರಂಥ *ಸ್ಟಡೀಸ್ ಇನ್ ದಿ ಹಿಸ್ಟರಿ ಆಫ್ ಥರ್ಡ್ ಡೈನೆಸ್ಟಿ* ವಿಜಯನಗರದಲ್ಲಿ ಉಲ್ಲೇಖಿಸಿದ್ದಾರೆ.

It was customary to almost all clasess of people to adorn their house with painted pictures. The favourite subjects which attracted the attention of the artists were usally stories from Hindu mythology. They filled their drawing rooms and bedrooms with amorous pictures representing love sence from stories of Rati Manmatha, Rambha Nalakubra, Urvasi-Pururva, Menake Vishwamitra, Gopika Krishna etc.

ಇದನ್ನು ನೋಡಿದರೆ ರಾಜನ ಆಸ್ಥಾನಗಳಲ್ಲಿ ಅಂತಃಪುರಗಳಲ್ಲಿ ಮಾತ್ರವಲ್ಲದೆ ಜನಜೀವನದಲ್ಲಿ ಸಹ ಚಿತ್ರಕಲೆ ಪ್ರಧಾನ ಪಾತ್ರವಹಿಸುತ್ತೆಂದು ತಿಳಿಯುತ್ತದೆ.

ಕಲಾನಾಂ ಪ್ರವರಂ ಚಿತ್ರಂ ಧರ್ಮಕಾಮಾರ್ಥ ಮೋಕ್ಷದಂ ಮಾಂಗಲ್ಯಂ
ಪ್ರಥಮಂ *ಚೈತದ್ಗೃಹೇತ್ ಪ್ರತಿಷ್ಟಿತಮ್*– (ಮಾರ್ಕಂಡೇಯ ಪುರಾಣ).

ಕಲೆಗಳಲ್ಲಿ ಚಿತ್ರಕಲೆ ಶ್ರೇಷ್ಠವಾದುದು, ಧರ್ಮ, ಅರ್ಥ, ಕಾಮ, ಮೋಕ್ಷಕ್ಕೆ ಸಾಧನವಾದುದು, ಮನೆಯಲ್ಲಿ ಮಂಗಳಕರವೆಂದು ಗೃಹದೇವತೆಯನ್ನು ಸಂತೃಪ್ತಿಪಡಿಸುವ ಸಾಧನವೆಂದರ್ಥ.

ಚಿತ್ರ ಹಿ ಸರ್ವ ಶಿಲ್ಪನಾಂ ಮುಖಾ ಲೋಕಸ್ಯ ಚ ಪ್ರಿಯಮ್ (ಸಮರಾಂಗನ ಸೂತ್ರಧಾರ) ಶಿಲ್ಪಗಳಲ್ಲಿ ಚಿತ್ರವೇ ಪ್ರಮುಖವಾದುದು ಪ್ರಿಯವಾದುದೆಂದು ವಿವರಣೆಯಿದೆ.

ಕ್ರಿ.ಶ. 1134 ಮತ್ತು 1135ರ ಶ್ರವಣಬೆಳಗೊಳದ ಶಾಸನಗಳು–ದಕ್ಷಿಣದ ಬೆಳಗೊಳದಲ್ಲಿ ಬಸದಿಯೊಂದರ ಭಿತ್ತಿ ಚಿತ್ರದ ಪ್ರಶಂಸೆ ಶಾಸನದಲ್ಲಿದೆ. ದಕ್ಷಿಣ ಬೆಳ್ಗಳದಲ್ಲಿ ಉತ್ತರದ ಕೊಪ್ಪಳದಲ್ಲಿ ಬಹು ಚಿತ್ರ ಭಿತ್ತಿಯಂ ನೋಡಿದರಂ ಮನಂಗೊಳಿಸುವ ಬಸದಿಗಳು ಇದ್ದುದಾಗಿ ತಿಳಿಸುತ್ತವೆ.

"ಸರ್ವ ಕಲಾನ್ತಾಳ್ವ ಚಿತ್ರಕಲಾಭಿಜ್ಞೇನ ವಿಶ್ವಕರ್ಮಾಚಾರ್ಯ" ಎಂಬ ವ್ಯಾಖ್ಯೆಗಳು ಚಿತ್ರಕಲೆಯ ಮಹತ್ವವನ್ನು ತಿಳಿಸುತ್ತವೆ. ಈ ಹಿನ್ನೆಲೆಯಲ್ಲಿ ಭಿತ್ತಿಚಿತ್ರ ಪರಂಪರೆ ಕರ್ನಾಟಕದಲ್ಲಿ ಬೆಳೆದುಬಂದಿದೆ. ವಿಜಯನಗರ ಭಿತ್ತಿಚಿತ್ರಕಲೆಯ ಪ್ರಮುಖವಾದ ಲಕ್ಷಣಗಳನ್ನು ಇಲ್ಲಿ ಈ ಮುಂದಿನಂತೆ ವಿವರಿಸಬಹುದಾಗಿದೆ.

ವಿಜಯನಗರ ಚಿತ್ರಕಲೆಯ ಪ್ರಮುಖ ಲಕ್ಷಣಗಳು

1. ದೇವಾಲಯದ ಭಿತ್ತಿಚಿತ್ರಗಳು ಮೇಲ್ಛಾವಣಿಯ ಚಿತ್ರಗಳಲ್ಲಿ ದೊಡ್ಡ ದೊಡ್ಡ ಪಟ್ಟಿಕೆಗಳನ್ನಾಗಿ ಮಾಡಿಕೊಂಡು ಚಿತ್ರರಚನೆ ಮಾಡಲಾಗಿದೆ.
2. ತೊಲೆಗಳ ಮೇಲಿನ ಚಿತ್ರಗಳನ್ನು ಚಿಕ್ಕ ಚಿಕ್ಕ ಪಟ್ಟಿಕೆಗಳ ಮೂಲಕ ಚಿತ್ರಿಸಿದ್ದಾರೆ. ಈ ರೀತಿಯಾದ ವಿಂಗಡಣೆ ವಿಜಯನಗರ ಚಿತ್ರಶೈಲಿಯ ಒಂದು ಪ್ರಮುಖ ಲಕ್ಷಣವಾಗಿದೆ.
3. ಭಿತ್ತಿ ಚಿತ್ರಣದಲ್ಲಿ ಕಂಡುಬರುವ ಇನ್ನೊಂದು ಲಕ್ಷಣವೆಂದರೆ ಹೆಚ್ಚಾಗಿ ಚಿತ್ರಗಳಲ್ಲಿಯ ವ್ಯಕ್ತಿಗಳು, ಆಕೃತಿಗಳು ಪಾರ್ಶ್ವಮುಖವಾಗಿ ಚಿತ್ರಣಗೊಂಡಿವೆ. ಎದುರು ಮುಖದ ಚಿತ್ರಣಗಳಿದ್ದರೂ ಹೆಚ್ಚಿನ ಪ್ರಾಶಸ್ತ್ಯ ಪಾರ್ಶ್ವಮುಖಕ್ಕೆ ಸಂದಿದೆ. ಸ್ಥಳೀಯ ಜನಪದ ಚಿತ್ರಕಲೆಯಾದ ತೊಗಲು ಗೊಂಬೆಯ ಚಿತ್ರಶೈಲಿಯನ್ನು ನೆನಪಿಗೆ ತರುತ್ತದೆ.
4. ಚಿತ್ರಗಳನ್ನು ಚಿಕ್ಕ ಚಿಕ್ಕ ಚೌಕಗಳನ್ನು ಮಾಡಿಕೊಂಡು ಅದರಲ್ಲಿ ಚಿತ್ರ ರಚಿಸಿದ್ದಾರೆ. ಈ ಚೌಕಗಳಿಗೆ ಹೂ ಬಳ್ಳಿಯ ಚಿತ್ರಣವಿದೆ.
5. ಪ್ರಾಣಿಗಳ ಕಣ್ಣುಗಳನ್ನು ಮನುಷ್ಯರ ಕಣ್ಣುಗಳಂತೆ ಚಿತ್ರಿಸಿದ್ದಾರೆ.
6. ಇಲ್ಲಿ ಬಳಕೆಗೊಂಡಿರುವ ವರ್ಣಗಳು ಕಪ್ಪು, ಕೆಂಪು, ಬೂದು, ಹಸಿರು, ನೀಲಿ ಪ್ರಮುಖವಾಗಿ ಕಂಡುಬರುತ್ತದೆ.
7. ವಿಜಯನಗರ ಚಿತ್ರಗಳು 2ಡಿ ದ್ವಿಯಾಮ ಘನಾಕೃತಿಯವುಗಳಾಗಿವೆ.
8. ಶಿಲ್ಪಶಾಸ್ತ್ರ ಗ್ರಂಥಗಳನ್ನು ಆಧರಿಸಿದ ಮತ್ತು ಅಲ್ಲಿ ತಿಳಿಸಿದ ಲಕ್ಷಣಗಳನ್ನು ಈ ಚಿತ್ರಗಳು ಹೊಂದಿದೆ.
9. ವಿಜಯನಗರ ಚಿತ್ರಗಳಿಗೆ ರೇಖೆಯೇ ಪ್ರಧಾನ ಅಂಶವಾಗಿದೆ. ಮೊದಲು ರೇಖಾಚಿತ್ರಣ ಮಾಡಿ ನಂತರದಲ್ಲಿ ವರ್ಣಗಳನ್ನು ಲೇಪನ ಮಾಡುವ ಪದ್ಧತಿಯನ್ನು ಕಾಣಬಹುದು.
10. ದೇವತಾ ಚಿತ್ರಗಳ ಎಡಬಲ ಬದಿಯಲ್ಲಿ ಅವರಿಗೆ ಸೇರಿದ ಪರಿವಾರ ಅಥವಾ ಪರಿಚಾರಕರ ಆಕೃತಿಗಳ ಸಮೂಹವನ್ನೇ ಚಿತ್ರಿಸಲಾಗಿದೆ.
11. ಶಿವ ಪಾರ್ವತಿಯನ್ನು ಎಡಗಡೆಯ ತೊಡೆಯ ಮೇಲೆ ಕುಳ್ಳಿರಿಸಿಕೊಂಡಿರುವುದು ವಿಷ್ಣು ಲಕ್ಷ್ಮೀಯನ್ನು ಎಡ ತೊಡೆಯ ಮೇಲೆ ಕುಳ್ಳಿರಿಸಿಕೊಂಡಿರುವುದು. ಹಾಗೆ ಬ್ರಹ್ಮ ಸರಸ್ವತಿಯನ್ನು ಎಡ ತೊಡೆಯ ಮೇಲೆ ಕುಳ್ಳಿರಿಸಿಕೊಂಡ ಭಂಗಿಯ ಚಿತ್ರಣ ಇಲ್ಲಿ ವಿಶೇಷವಾಗಿದೆ.
12. ದೇವತಾ ಮೂರ್ತಿಗಳ ಮುಂದೆ ಅವರ ವಾಹನಗಳನ್ನು ವಿಶೇಷವಾಗಿ ಚಿತ್ರಣ ಮಾಡಲಾಗಿದೆ. ಉದಾ: ಅಗ್ನಿ, ಕುಬೇರ, ಮಕರ, ಈಶಾನ, ಇಂದ್ರ, ವಾಯು, ಇತ್ಯಾದಿ ಇಂದ್ರನ ವಾಹನ ಅಜ (ಆಡು), ಯಮನ ವಾಹನ ಕೋಣ ಇತ್ಯಾದಿ.
13. ಪುರುಷ ದೇವತೆಗಳಿಗೆ ವಿಶೇಷವಾಗಿ ಮೀಸೆಯಿರುವುದು ಇಲ್ಲಿನ ವೈಶಿಷ್ಟವಾಗಿದೆ. ಹಾಗೆಯೇ ಸ್ತ್ರೀ ದೇವತೆಗಳಿಗೆ ಮೂಗಿನಲ್ಲಿ ನತ್ತು ಇರುವುದು ವಿಶೇಷವಾಗಿದೆ.

14. ಪ್ರಾಣಿ ಮತ್ತು ಮಾನವರ ಮಿಶ್ರದೇಹದ ರಚನೆ ಇಲ್ಲಿ ಕಂಡುಬರುವ ಇನ್ನೊಂದು ಲಕ್ಷಣ.
15. ದಶಾವತಾರದ ಚಿತ್ರಗಳಲ್ಲಿ ಕಥಾನಿರೂಪಣೆಗೆ ಬದಲಾಗಿ ಆಯುಧ ಮತ್ತು ಸಂಕೇತಗಳಿಂದಲೇ ಆಯಾ ಅವತಾರಗಳನ್ನು ಚಿತ್ರಿಸಲಾಗಿದೆ.
16. ಚೌಕಗಳ ಮೇಲೆ ತೇರಿನಾಕೃತಿ ಗೋಪುರಗಳ ಆಕೃತಿಗಳನ್ನು ಚಿತ್ರಣಮಾಡಿದ್ದಾರೆ.
17. ರಾಮಾಯಣ, ಮಹಾಭಾರತ, ಶಿವಪುರಾಣದ ದೇವತೆಗಳೆಲ್ಲರಿಗೂ ಕಿರೀಟಗಳನ್ನು ಹಾಕಿ ಚಿತ್ರಿಸಲಾಗಿದೆ.
18. ವಿಜಯನಗರ ಚಿತ್ರಕಲೆಯಲ್ಲಿ ಕಿರುರೂಪಚಿತ್ರಕಲಾ ಪರಂಪರೆಗೆ ಹೊಸ ಆಯಾಮ ದೊರೆತಿದೆ.
19. ಚಿತ್ರಗಳ ಆಕಾರದಲ್ಲಿ ದುಂಡುತನವಿಲ್ಲದೆ ಚಪ್ಪಟೆ ನಿರೂಪಣೆಯೇ ಪ್ರಮುಖವಾಗಿದೆ.
20. ವಿಜಯನಗರ ಚಿತ್ರಗಳ ಇನ್ನೊಂದು ಪ್ರಮುಖ ಲಕ್ಷಣವೆಂದರೆ ಜಾನಪದದ ಮುಗ್ಧತೆ ಶಿಷ್ಟಪದದ ಕ್ಲಿಷ್ಟತೆಯನ್ನು ಹೊಂದಿವೆ.
21. ಒಂದೇ ಕಥೆಯ ಹಲವು ಮುಖ್ಯ ಘಟನೆಗಳನ್ನು ಆಯ್ಕೆ ಮಾಡಿ ಅಂಕಣಗಳನ್ನಾಗಿ ಭಿತ್ತಿಯನ್ನು ವಿಭಜಿಸಿಕೊಂಡು ಧಾರಾವಾಹಿಯ ಹಾಗೆ ಚಿತ್ರಣ ಮಾಡಲಾಗಿದೆ.
22. ವ್ಯಕ್ತಿ ಮತ್ತು ಪ್ರಾಣಿಗಳ ಕಣ್ಣುಗಳನ್ನು ದೊಡ್ಡದಾಗಿ ಚಿತ್ರಣ ಮಾಡಿದ್ದು ಕಣ್ಣುಗಳೇ ಪ್ರಧಾನವಾಗಿ ಕಾಣುವಂತೆ ಮಾಡಲಾಗಿದೆ.
23. ಭಿತ್ತಿ ಚಿತ್ರಣದಲ್ಲಿ ಚಿತ್ರಣಗೊಂಡ ವ್ಯಕ್ತಿಗಳು ನೀಳಕಾಯವನ್ನು ಹೊಂದಿದ್ದು ನಿಲುವಿನಲ್ಲಿ ಆಕರ್ಷಕ ಭಂಗಿಯಿದೆ. ಅಲ್ಲದೆ ಕೋಮಲತೆ, ಪ್ರಶಾಂತತೆ, ಅಚಲತೆ ಮೊಂತಾದ ಭಾವಗಳನ್ನು ಇಲ್ಲಿ ಸ್ಮರಿಸುವಂತೆ ಚಿತ್ರಗಳನ್ನು ರಚಿಸಲಾಗಿದೆ.
24. ಎದೆ, ಚಿಕ್ಕಗಲ್ಲ, ಚೂಪಾದ ಮೂಗು, ಚಿಕ್ಕತುಟಿ, ಚಿಕ್ಕಗಾತ್ರದ ಕತ್ತು, ಸಣ್ಣನಡು, ಮತ್ತು ಉದ್ದನೆಯ ಕಾಲು ಇಲ್ಲಿಯ ಚಿತ್ರಗಳ ವಿಶೇಷ ಲಕ್ಷಣಗಳಾಗಿವೆ.
25. ಆಕೃತಿಗಳಲ್ಲಿನ ಚಿತ್ರಗಳ ವ್ಯಕ್ತಿಗಳು ಸೊಂಟದವರೆಗೆ ನೇರವಾಗಿದ್ದು ಸೊಂಟದ ಮೇಲಿನ ಭಾಗ ಮುಂದೆ ಚಾಚಿದಂತೆ ಚಿತ್ರಿಸಲಾಗಿದೆ.
26. ಚಿತ್ರಗಳಲ್ಲಿ ಕಂಡುಬರುವ ಇನ್ನೊಂದು ಪ್ರಮುಖ ಲಕ್ಷಣವೆಂದರೆ ಒಂದು ಕೆಳರೇಖೆಯ ಮೇಲೆಯೇ ವಿವಿಧ ಭಂಗಿಯಲ್ಲಿ ಆಕೃತಿಗಳನ್ನು ರಚಿಸಿ ಅವುಗಳಿಗೆ ನಾಟಕೀಯವಾದ ಜೀವವನ್ನು ತುಂಬಿ ದೃಶ್ಯದಲ್ಲಿ ಸಂಯೋಜನೆಗೆ ಅರ್ಥ ಬರುವಂತೆ ಚಿತ್ರಿಸಿರುವುದು ಗಮನಾರ್ಹ ಅಂಶವಾಗಿದೆ.
27. ಚಿತ್ರಗಳಲ್ಲಿ ಶ್ರೀಮಂತವಾದ ಉಡುಪು ಆಭರಣಗಳು ಅಲಂಕರಣಗೊಂಡಿವೆ.
28. ನೈಸರ್ಗಿಕವಾದ ಬಣ್ಣಗಳ ಲೇಪನ ಹೆಚ್ಚಾಗಿ ಈ ಭಿತ್ತಿ ಚಿತ್ರಗಳಲ್ಲಿ ಕಂಡುಬರುತ್ತದೆ.

ಅಡಿಟಿಪ್ಪಣಿಗಳು

1. (ಅ). ಸಿ.ಟಿ.ಎಂ. ಕೊಟ್ರಯ್ಯ : *ಹೇಮಕೂಟ*, ಪತ್ರಿಕೆ ಸಂ. 3, ಸಂಚಿಕೆ 9, ಪುಟ 2–20, ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಮಠ, ಹಂಪಿ, 1978.

   (ಬ) C.T.M. Kotraiah : Vijayanagara Paintings at Virupaksha Tepmle, Hampi, *QJMS,* II Jan 1959, pp. 231-232

2. R.N. Saletore : *Vijayanagar Art,* p. 220.

38

ವಿಜಯನಗರೋತ್ತರ ಕಾಲದ ತೊಗಲು ಗೊಂಬೆ

ಡಾ. ಮೋಹನರಾವ್ ಬಿ. ಪಂಚಾಳ್

ಬಳ್ಳಾರಿ ಪ್ರದೇಶದಲ್ಲಿ ವಿಜಯನಗರ ಸಾಮ್ರಾಜ್ಯವು ಸ್ಥಾಪನೆಗೊಂಡ ನಂತರ ಕಲೆ, ಸಾಹಿತ್ಯ, ಸಂಗೀತಗಳಲ್ಲದೇ ವ್ಯವಸಾಯ ಮತ್ತು ರಾಜಕೀಯಗಳು ಬದಲಾವಣೆಗೊಂಡಿರುವುದನ್ನು ಇತಿಹಾಸಕಾರರು ಗುರುತಿಸಿದ್ದಾರೆ. "ಕಂಸಾಳೆ, ನಂದಿಕೋಲು, ಡೊಳ್ಳುಕುಣಿತ, ಕಿನ್ನಾಳ ಕಲೆ ಮತ್ತು ತೊಗಲುಗೊಂಬೆಯಾಟಗಳಂತಹ ಜನಪದ ಮತ್ತು ಕರಕುಶಲಕಲೆಗಳಿಗೆ, ವಿಶೇಷ ಮನ್ನಣೆ ದೊರೆತಿದೆ."[1] ಹೀಗೆ ಬೆಳೆದು ಬಂದ ಬಳ್ಳಾರಿ ಪ್ರದೇಶದ ತೊಗಲು ಗೊಂಬೆಯಾಟ ಇಂದು ರಾಷ್ಟ್ರೀಯ-ಅಂತರಾಷ್ಟ್ರೀಯ ಮನ್ನಣೆ ಪಡೆದುಕೊಂಡಿದೆ.

ಕರ್ನಾಟಕದಲ್ಲಿ ತೊಗಲುಗೊಂಬೆಯಾಟವು ಪ್ರಮುಖವಾಗಿ ಅಲೆಮಾರಿ, ಶಿಳ್ಳೆಕ್ಯಾತ ಜನಾಂಗಕ್ಕೆ ಸೇರಿದ ಒಂದು ಜನಪ್ರಿಯ ಕಲಾ ಪ್ರಕಾರವಾಗಿದೆ. ಬಳ್ಳಾರಿ ಪ್ರದೇಶದಲ್ಲಿ "ಕೀಳ್ಳೆಕ್ಯಾತರನ್ನು ಗೊಂಬೆಯವರು ಹಾಗೂ ಚಿತ್ರಮರಾಠರು" ಎಂಬ ಹೆಸರಿನಿಂದಲೂ ಕರೆಯುತ್ತಾರೆ. ತೊಗಲುಗೊಂಬೆಯಾಟ ಉತ್ತರ ಕರ್ನಾಟಕ ಭಾಗದಲ್ಲಿ "ಬಡಗಲ ಪಾಯ", ದಕ್ಷಿಣ ಕರ್ನಾಟಕದಲ್ಲಿ "ತೆಂಕಲ ಪಾಯ" ಮತ್ತು ಕರ್ನಾಟಕದ ಆಂಧ್ರ ಗಡಿಭಾಗದಲ್ಲಿ "ಮೂಡಲ ಪಾಯ"ವೆಂದು ಹೀಗೆ ಪ್ರಾಂತ್ಯಾನುಸಾರವಾಗಿ ಮೂರು ಭಾಗವಾಗಿ ವಿಂಗಡಿಸಿ[2] ಚರ್ಚಿಸಲಾಗುತ್ತದೆ.

ಗುಲಬರ್ಗಾದಲ್ಲಿ "ಕಟಬರಾಟ", ಗೊಂಬೆಯಾಟ; ಧಾರವಾಡ-ಬಳ್ಳಾರಿ ಭಾಗದಲ್ಲಿ ಕಿಳ್ಳಿಕೇತರಾಟ; ಬೆಳಗಾವಿ-ಕಾರವಾರ ಭಾಗದಲ್ಲಿ "ಚಿತ್ರ ಮರಾಠಿಗರು" "ಕಥಾನಾಯಕರು" ಎಂದು ಹಳೆ ಮೈಸೂರ ಭಾಗದಲ್ಲಿ "ಗೊಂಬೆರಾಯರಾಟ" ಆಂಧ್ರದ ಗಡಿಭಾಗ ಬಳ್ಳಾರಿ, ಕೋಲಾರ, ರಾಯಚೂರ ಮತ್ತು ಬೀದರ ಜಿಲ್ಲೆಗಳಲ್ಲಿ "ತೋಲುಬೊಮ್ಮಲಾಟ" ಎಂಬ ಹಲವಾರು ಪದನಾಮಗಳಿಂದ ತೊಗಲುಗೊಂಬೆಯಾಟವನ್ನು ಕರೆಯುತ್ತಾರೆ.

ಇದಕ್ಕಿಂತಲೂ ಪೂರ್ವದಲ್ಲಿ ಚಕ್ಕಳಗೊಂಬೆ ಆಟ - ಚಿತ್ತಾರ ಗೊಂಬೆಯಾಟ ಎಂದು ಕರ್ನಾಟಕದಲ್ಲಿ ಹೆಸರಿಸುತ್ತಿದ್ದುದುಂಟು. ಮಹಾರಾಷ್ಟ್ರದಲ್ಲಿ 'ಕಟ್‌ಪುತಲಿ', ತಮಿಳಿನಲ್ಲಿ 'ಸೂತ್ರ ಬೊಮ್ಮೈ', ಮಳಯಾಳಂನಲ್ಲಿ 'ಪ್ರಾವೈಕ್ಕೊತ್ತು', ಆಂಧ್ರದಲ್ಲಿ 'ತೋಲುಬೊಮ್ಮಲಾಟ', ಕೇರಳದಲ್ಲಿ ತೋಲುಪವಕೂತು, ಓರಿಸ್ಸಾದಲ್ಲಿ 'ರಾವಣಛಾಯ' ಎಂಬ ಹೆಸರುಗಳಿಂದ ತೊಗಲುಗೊಂಬೆಯಾಟವನ್ನು ಕರೆಯಲಾಗುತ್ತದೆ.[3] ಕಲೆ, ಸಾಹಿತ್ಯ ಮತ್ತು ಸಂಗೀತ ಮೂರರ ಸಂಗಮದಿಂದ ಅಭಿವ್ಯಕ್ತಗೊಳ್ಳುವ ಈ ಅಪರೂಪದ ಜನಪದ ಚಿತ್ರಕಲೆಯು ಪುರಾತನ ಇತಿಹಾಸವೊಂದಿದೆ.

ಈ ಕಲೆ ಅತೀ ಪ್ರಾಚೀನವೆಂದು ಭರತ ಖಂಡದಲ್ಲೇ ಅದು ಹುಟ್ಟಿದೆ ಎಂದು ಅಭಿಪ್ರಾಯಗಳಿವೆ. ಗೊಂಬೆಯಾಟ ಚೈನಾದಲ್ಲಿ ಪ್ರಾಚೀನ ಕಾಲದಿಂದಲೂ ರಾಜರ ಅಸ್ಥಾನದಲ್ಲಿ ಇದ್ದಿತ್ತೆಂಬುದನ್ನು ಒಂದು ಗಾದೆಯು ತಿಳಿಸುತ್ತದೆ. ಜಪಾನಿನ ಪ್ರಾಚೀನ ಸಾಹಿತ್ಯದಲ್ಲಿ ಕೂಡ ತೊಗಲುಗೊಂಬೆಯಾಟದ ಬಗೆಗೆ ಪ್ರಸ್ತಾಪ ಬರುವುದೆಂಬುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಕ್ರಿ.ಪೂ. ಮೂರನೆಯ ಶತಮಾನದಲ್ಲಿಯೇ ತೊಗಲುಗೊಂಬೆಯಾಟವು ಆಂಧ್ರದಲ್ಲಿ ಪ್ರಚಲಿತದಲ್ಲಿದ್ದುದಕ್ಕೆ ಆಧಾರಗಳಿವೆ. ಆ ಕಲೆ ಶಾತವಾಹನ, ಪಲ್ಲವ, ಚಾಳುಕ್ಯ, ಕಾಕತೀಯ, ರಾಜರ ಕಾಲದಲ್ಲಲ್ಲದೇ ವಿಜಯನಗರ, ತಂಜಾವೂರ್ ರಾಜರುಗಳ ಕಾಲದಲ್ಲಿ ಅತ್ಯಂತ ಉನ್ನತ ಸ್ಥಿತಿಯನ್ನು ಪಡೆದು ಪ್ರಾಚೀನ ರೇವುಪಟ್ಟಣಗಳಾದ ಜೀಮಾನೀ ಪಟ್ಟಣ, ಕೋರಂಗಿ, ವಾಂಡ್ರೇವು ಇವುಗಳ ಮೂಲಕ ವಿದೇಶಗಳಿಗೆ ತೆರಳಿದ ಭಾರತೀಯರೊಡನೆ ಅಗ್ನಿಯ ಏಷಿಯಾವನ್ನು ಪ್ರವೇಶಿಸಿದವು ಎಂದು ಅಭಿಪ್ರಾಯವಿದೆ.

ಅಲ್ಲಿಂದ ಆ ಕಲೆ ಪಶ್ಚಿಮಾಭಿಮುಖವಾಗಿ ಪರ್ಷಿಯಾ, ಟರ್ಕಿ ದೇಶಗಳನ್ನು ಹಾಯ್ದು ಗ್ರೀಸ್ ಪ್ರದೇಶವನ್ನು ಪ್ರವೇಶಿಸಿತ್ತು. ಗ್ರೀಸ್‌ನಲ್ಲೇ ಹೊಸರೂಪ ತಳೆದು ಉತ್ತರ ಆಫ್ರಿಕಾದಲ್ಲಿ ಮುಸ್ಲಿಮ್ ದೇಶಗಳಿಗೆ, ಹದಿನೇಳನೆಯ ಶತಮಾನದಲ್ಲಿಯೂ ಇಟಲಿಗೆ ಅದರ ವಿಪ್ಲವ ಕಾಲದಲ್ಲಿಯೂ ಪಸರಿಸಿದಲ್ಲದೇ ಅಲ್ಲಿಂದ ಮುಂದೆ ಫ್ರಾನ್ಸಿಗೂ ಹರಡಿತು ಎಂಬ ಅಭಿಪ್ರಾಯವಿದೆ. ಹತ್ತು-ಹನ್ನೊಂದನೆಯ ಶತಮಾನಗಳ ಕಾವ್ಯಗಳಲ್ಲೂ ತೊಗಲುಗೊಂಬೆ ಇದ್ದುದಕ್ಕೆ ಆಧಾರಗಳಿವೆ. ಕೆಲವರು ತೊಗಲುಗೊಂಬೆಯಾಟದ ಪ್ರಾಚೀನತೆಯನ್ನು ಭಗವದ್ಗೀತೆಯ ಕಾಲಕ್ಕೆ ಅಂದರೆ ಕ್ರಿ.ಪೂ. 3000 ಸಾವಿರ ವರ್ಷಗಳ ಹಿಂದಕ್ಕೆ ಕೊಂಡೊಯ್ಯಬಹುದಾಗಿದೆ ಎಂಬುವುದಾಗಿ ತಿಳಿಸುತ್ತಾರೆ.[4] ಇಂತಹ ಐತಿಹಾಸಿಕ ಹಿನ್ನೆಲೆ ಹೊಂದಿದ "ತೊಗಲುಗೊಂಬೆ ಚಿತ್ರಕಲೆ ಮುಂದುವರೆದ ರೂಪವೇ ಇಂದಿನ ಚಲನಚಿತ್ರ ಮತ್ತು ದೂರದರ್ಶನಗಳೆನ್ನಬಹುದು."[5]

ತೊಗಲುಗೊಂಬೆಯಾಟದ ಪ್ರದರ್ಶನ

ತೊಗಲುಗೊಂಬೆಯಾಟವು ದೃಶ್ಯಕಲಾ ಪ್ರದರ್ಶನ, ಜನಪದ ಸಂಗೀತ, ಸಾಹಿತ್ಯ ಕಲೆಗಳೊಂದಿಗೆ ಅಭಿವ್ಯಕ್ತಗೊಳ್ಳುವ ವಿಶೇಷವಾದ ಜನಪದ ಕಲೆಯಾಗಿದೆ. ಹೆಚ್ಚಾಗಿ ಈ ಜನಪದ ಕಲಾ ಪ್ರದರ್ಶನವನ್ನು ರಾತ್ರಿ ಹೊತ್ತು ಅಂದರೆ ಕತ್ತಲಲ್ಲಿ ಮಾತ್ರ ಪ್ರದರ್ಶಿಸುವ ಅಪರೂಪದ ಕಲೆಯಾಗಿದೆ. ಇದರ ಪ್ರದರ್ಶನಕ್ಕೆ ಸುಮಾರು 10-12 ಕಲಾವಿದರ ಅವಶ್ಯಕತೆವಿರುತ್ತದೆ. ಕಲಾವಿದರು ಪ್ರಥಮ ಹಂತದಲ್ಲಿ ಸುಮಾರು 4x7 ಅಡ್ಡಿ ಸುತ್ತಳತೆಯ ಚಿಕ್ಕ ಕತ್ತಲು ಕೋಣೆಯನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ಈ ಕೋಣೆಗೆ ಮೂರು ಗೋಡೆ ಮತ್ತು ಮೇಲ್ಛಾವಣಿ ಹಾಗೂ ಪ್ರದರ್ಶನಗೊಳ್ಳುವ ಗೋಡೆಯ ಕೆಳಭಾಗದಲ್ಲಿ 3 ಅಡಿ ಭಾಗಗಳನ್ನು ಮಾಡಿಕೊಂಡು ಕೋಣೆಯನ್ನು ಕಪ್ಪು ಬಟ್ಟೆಯಿಂದ ಆವರಿಸುವರು. ಪ್ರವೇಶಿಸಿಗೊಳ್ಳುವ 4 ಅಡಿ ಭಾಗಕ್ಕೆ ಪಾರದರ್ಶಕವಾದ ಬಿಳಿ ಬಟ್ಟೆ (ಧೋತ್ರ) ಕಟ್ಟುವರು.

ಹೀಗೆ ಸಿದ್ಧಪಡಿಸಿದ ಕೋಣೆಯಲ್ಲಿ ಚಿಮಣಿ ದೀಪ ಅಥವಾ ವಿದ್ಯುತ್ ಬಲ್ಬ್‌ನ ಬೆಳಕನ್ನು ಚೆಲ್ಲುವರು. ಕೋಣೆಯೊಳಗಿನಿಂದ ಬಿಳಿ ಬಟ್ಟೆಯ ಮೂಲಕ ಪ್ರೇಕ್ಷಕರ ಕಡೆಗೆ ಬೆಳಕಿನ ಕಿರಣಗಳು ಕಾಣುತ್ತವೆ. ಬೆಳಕಿನ ಕಿರಣಗಳ ಮಧ್ಯದಲ್ಲಿ ಅಂದರೆ ಬಟ್ಟೆಗೆ ಹತ್ತಿ ಕಲಾವಿದರು ತೊಗಲು ಗೊಂಬೆಯಾಟಗಳನ್ನು ಕೋಣೆಯೊಳಗಿನಿಂದ ಆಡಿಸುವರು. ಗೊಂಬೆಗಳನ್ನು ಪ್ರದರ್ಶಿಸುವ ಕಲಾವಿದರು ಉದ್ದವಿರುವ ಬಿದಿರಿನ ಕಟ್ಟಿಗೆಯನ್ನು ಹಿಡಿದು ಪ್ರೇಕ್ಷಕರಿಗೆ ಕಾಣದಂತೆ ಆಟವನ್ನು ಪ್ರದರ್ಶಿಸುತ್ತಾರೆ. ಕೋಣೆಯೊಳಗಿನ ಇನ್ನುಳಿದ ಕಲಾವಿದರು ವಿಷಯಕ್ಕೆ ಅನುಗುಣವಾದ ಗೊಂಬೆಗಳನ್ನು ನೀಡುವರು. ಕೋಣೆಯ ಮುಂಭಾಗದಲ್ಲಿ ಕುಳಿತು ಕಲಾವಿದರು ಹಾಡು ಹಾಡುತ್ತ-ವಾದ್ಯಗಳನ್ನು ಬಾರಿಸುವರು.

ಪೌರಾಣಿಕ, ಧಾರ್ಮಿಕ ವಸ್ತು ವಿಷಯಕ್ಕೆ ತಕ್ಕ ಜನಪದ ಸಂಗೀತ ನೀಡುವುದರೊಂದಿಗೆ ಜನರಿಗೆ ಮನರಂಜನೆಯನ್ನು ನೀಡುತ್ತಾರೆ. ಪ್ರಖರವರ್ಣಗಳಿಂದ ಕತ್ತಲಲ್ಲಿ ಪ್ರದರ್ಶನಗೊಳ್ಳುವ ಈ ಜನಪದ ತೊಗಲುಗೊಂಬೆಯಾಟವು ನೋಡುಗರನ್ನು ಮಂತ್ರಮುಗ್ಧರನ್ನಾಗಿಸುತ್ತದೆ.

ತೊಗಲು ಗೊಂಬೆಯಾಟದ ವಸ್ತುವಿಷಯ

ಬಳ್ಳಾರಿ ಜಿಲ್ಲೆಯಲ್ಲಿ ತೊಗಲುಗೊಂಬೆಯಾಟವು ಗಣಪತಿಯ ಪ್ರಾರ್ಥನೆ ಮತ್ತು ಸರಸ್ವತಿಯ ಸ್ತುತಿಯೊಂದಿಗೆ ಆರಂಭಗೊಳಿಸುವರು. ಕರ್ನಾಟಕದ ಬಯಲಾಟಗಳಲ್ಲಿ ಬಳಸುವ ಕಥಾವಸ್ತುಗಳಾದ ರಾಮಾಯಣ, ಮಹಾಭಾರತ, ಭಾಗವತಗಳಿದ ಆಯ್ಕೆಮಾಡಿದ ಪುರಾಣ ವಸ್ತುವಿಷಯಗಳು ಈ ತೊಗಲುಗೊಂಬೆಯಾಟದ ವಸ್ತುವಿಷಯಗಳಾಗಿವೆ. ಭೀಮ, ದುರ್ಯೋಧನ, ರಾವಣರಂತಹ ಪಾತ್ರಗಳು ಹೆಚ್ಚಾಗಿ ಕೆಂಪು, ಕಪ್ಪು ಬಣ್ಣಗಳಿಂದ, ಕ್ಷಾತ್ರ-ಶೌರ್ಯದ ಭಾವನೆಗಳನ್ನು ಮೂಡಿಸುತ್ತವೆ. ಹಿಡಿಂಬೆ, ಶೂರ್ಪನಖಿಯರ ಪಾತ್ರಗಳು ಕುರೂಪಿಯಾಗಿ, ರಾಮ, ಕೃಷ್ಣ, ಅರ್ಜುನ, ಧರ್ಮರಾಯ ಮುಂತಾದ ಪಾತ್ರಗಳ ಗೊಂಬೆಗಳು ಅಂದವಾಗಿರುತ್ತವೆ. ಯುದ್ಧದ ರಥಗಳು, ಆನೆ, ಕುದುರೆ ಮುಂತಾದ ಪ್ರಾಣಿಗಳ ಗೊಂಬೆಗಳು ನೋಡುವರ ಮನಸೆಳೆಯುತ್ತವೆ. ವೇಷಭೂಷಣಗಳಿಂದ ನಿರ್ಮಿಸಿದ ಹೆಣ್ಣುಮಕ್ಕಳ ಗೊಂಬೆಗಳು ಆಕರ್ಷಣೀಯವಾಗಿರುತ್ತವೆ. ಅವು ಸಂದರ್ಭಾನುಸಾರವಾಗಿ ಪ್ರದರ್ಶಿಸಲ್ಪಡುತ್ತವೆ. ಪ್ರಮುಖವಾಗಿ ತೊಗಲುಗೊಂಬೆಯಾಟದಲ್ಲಿ ರಚಿಸಿದ ಬಂಗಾರಕ್ಕೆ, ಕಿಳ್ಯಕ್ಯಾತನೆಂಬ ಎರಡು ಚಿತ್ರದ ಆಕೃತಿಗಳು ವಿಶೇಷವಾಗಿರುತ್ತವೆ. ಇವುಗಳು ನಗ್ನರೂಪದಲ್ಲಿರುವುದು ವಿಶೇಷವಾಗಿದೆ.

ತೊಗಲುಗೊಂಬೆಗಳ ರಚನಾ ವಿಧಾನ

ಬಳ್ಳಾರಿ ಜಿಲ್ಲೆಯಲ್ಲಿ ತೊಗಲುಗೊಂಬೆ ಚಿತ್ರ ರಚಿಸಲು ಜಿಂಕೆ ಚರ್ಮದ ತೊಗಲು ಒಣಗಿದ ನಂತರ ಕೆತ್ತಿ ಶುಭ್ರಗೊಳಿಸಿ ಪಾರದರ್ಶಕವಾಗಿ ಮಾಡುತ್ತಾರೆ. ಇದು ಇನ್ನುಳಿದ ಚರ್ಮಗಳಿಗಿಂತಲೂ ಬಹಳ ದಿನ ಬಾಳಿಕೆ ಬರುತ್ತದೆ, ಹಾಗೂ ಇದು ಪವಿತ್ರ-ಶ್ರೇಷ್ಠವಾದದೆಂದು ಕಿಳ್ಯಕ್ಯಾತರ ನಂಬಿಕೆಯಾಗಿದೆ. ಹೀಗಾಗಿ ಜಿಂಕೆ ಚರ್ಮವನ್ನೇ ತೊಗಲುಗೊಂಬೆಯಾಟದ ವರ್ಣ ಸಂಯೋಜನೆಗಾಗಿ ಹೆಚ್ಚಾಗಿ ಬಳಸುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಜಿಂಕೆ ಚರ್ಮ ಕಾನೂನುಬಾಹಿರವಾಗಿರುವುದರಿಂದ ಮೇಕೆಯ ಚರ್ಮವನ್ನು ಈಗ ಬಳಸುತ್ತಿದ್ದಾರೆ.

ಚಿತ್ತಾರ ರಚನೆಗೆ ಬಳಸುವ ತೊಗಲು ಸಿದ್ಧತೆ ಮಾಡಿಕೊಳ್ಳುವುದೊಂದು ವಿಭಿನ್ನವಾದ ವಿಧಾನವಾಗಿದೆ. ಪ್ರಥಮವಾಗಿ ಜಿಂಕೆ ಚರ್ಮವನ್ನು ಗಿಡಮೂಲಿಕೆ ಔಷಧಿಗಳೊಂದಿಗೆ ಬಿಸಿನೀರಿನಲ್ಲಿ ನೆನೆಸುವರು. ಕೆಲವು ದಿವಸಗಳ ನಂತರ ಚರ್ಮದ ಮೇಲಿನ ಕೂದಲುಗಳನ್ನು ಚರ್ಮದಿಂದ ಉಜ್ಜಿ-ಉಜ್ಜಿ ಬೇರ್ಪಡಿಸುವುದು. ಚರ್ಮ ಇನ್ನೂ ಒದ್ದೆ ಇರುವಾಗಲೇ ಮಂಚದ ನಾಲ್ಕು ಕಾಲುಗಳಿಗೆ ಕಟ್ಟಿ ನೆರಳಿನಲ್ಲಿ ಒಣಗಿಸುವರು. ಮಂಚಕ್ಕೆ ಕಟ್ಟಿ ಒಣಗಿಸವುದರಿಂದ ತೊಗಲೂ ಸಂಕುಚಿತಗೊಳ್ಳುವುದಿಲ್ಲ. ಅದು ಪಾರದರ್ಶಕವಾದ ಪ್ಲಾಸ್ಟಿಕ್‌ನಂತೆ ಭಾಸವಾಗುತ್ತದೆ. ಈಗ ಇದು ಚಿತ್ರರಚನೆಗೆ ಸಿದ್ಧಗೊಂಡಂತೆ. ಕಲಾವಿದರು ಹೇಗೆ ಕ್ಯಾನ್ವಾಸಿನ ಮೇಲೆ ಚಿತ್ರರಚಿಸುತ್ತಾರೇ ಹಾಗೆ ಕೀಳ್ಯಕ್ಯಾತ ಅನುಭವಸ್ಥ ಕಲಾವಿದರು ತೊಗಲಿನ ಮೇಲೆ ವೈವಿಧ್ಯಮಯವಾದ ಚಿತ್ರಗಳನ್ನು ರಚಿಸುವರು.

ಹೀಗೆ ಹದವಾದ ಚರ್ಮದ ಮೇಲೆ ಮೊದಲು ಚೂಪಾದ ಮೂಳೆ ಅಥವಾ ಡಬ್ಬಣಗಳಿಂದ ಬೇಕಾದ ಆಕೃತಿಗಳನ್ನು ರಚಿಸುವರು. ತೊಗಲಿನ ಮೇಲೆ ರಚಿಸಿದ ರೇಖಾಚಿತ್ತಾರವನ್ನು ಹೊರತುಪಡಿಸಿ ಬೇಡವಾದ ಭಾಗವನ್ನು

ಕತ್ತರಿಸಿ ಆಕೃತಿಯಿಂದ ಬೇರ್ಪಡಿಸುವರು. ಒಟ್ಟು ತೊಗಲುಗೊಂಬೆಗಳನ್ನು ಎರಡು ರೀತಿಯಲ್ಲಿ ಕಾಣುತ್ತೇವೆ. ಇಡಿ ಚಿತ್ತಾರ ಒಂದೇ ಕಾಣುವದೊಂದಾರೆ ಇನ್ನೊಂದು ಬಿಡಿ-ಬಿಡಿಭಾಗಗಳಲ್ಲಿ ತೊಗಲುಗೊಂಬೆಗಳನ್ನು ಕಾಣುತ್ತೇವೆ. ಕೈ, ಕಾಲು, ಮುಖ, ದೇಹ ಹೀಗೆ ವಿವಿಧ ಭಾಗಗಳನ್ನು ಬಿಡಿ-ಬಿಡಿಯಾಗಿ ಕತ್ತರಿಸಿ ಅವುಗಳನ್ನು ಒಂದಕ್ಕೊಂದು ದಾರದಿಂದ ಹೊಲಿಯುವರು, ಆಭರಣಗಳಿರುವ ಸ್ಥಳಗಳಲ್ಲಿ ರಂದ್ರಗಳನ್ನು ಮಾಡಿರುತ್ತಾರೆ.

ಹೀಗೆ ಕತ್ತರಿಸಿದ ಆಕೃತಿಗೆ ಕಪ್ಪು, ಕಂದುಕಪ್ಪು ವರ್ಣಗಳಿಂದ ಹೊರಮೈ ರೇಖೆಗಳನ್ನು ಎಳೆದು ಅವುಗಳಲ್ಲಿ ಒಂದೊಂದಾಗಿ ವರ್ಣ ಸಂಯೋಜನೆಗೊಳಿಸುವರು. ತೊಗಲುಗೊಂಬೆಯ ಮೇಲೆ ಚಿತ್ರರಚನೆಗೆ ಬಳಸುವ ವರ್ಣಗಳು ನೈಸರ್ಗಿಕ ಮೂಲಗಳಿಂದ ತಯಾರಿಸಿಕೊಂಡಿರುತ್ತಾರೆ. ವಸ್ತುವಿಷಯಕ್ಕೆ ಅನುಗುಣವಾಗಿ ನೀಲಿ, ಹಸಿರು, ಕೆಂಪು, ಹಳದಿ, ಮದರಂಗಿ, ಬಿಳಿ, ಕಪ್ಪು ವರ್ಣಗಳನ್ನು ಪ್ರಮುಖವಾಗಿ ಬಳಸುವುದನ್ನು ಕಾಣುತ್ತೇವೆ.

ಚಿತ್ರರಚನೆಗೆ ರಾಸಾಯನಿಕ ವರ್ಣಗಳಿಗಿಂತಲೂ ನೈಸರ್ಗಿಕ ಮೂಲ ವರ್ಣಗಳನ್ನು ಬಳಸುವುದಕ್ಕೆ ಪ್ರಮುಖವಾದ ಎರಡು ಕಾರಣಗಳಿವೆ. ಒಂದು ಶಿಳ್ಳೆಕ್ಯಾತರಿಗೆ ತಮಗೆ ಬೇಕಾದ ಪ್ರಖರವಾದ ನಿರ್ದಿಷ್ಟವಾದ ವರ್ಣಗಳು ರಾಸಾಯನಿಕ ವರ್ಣಗಳಲ್ಲಿ ದೊರೆಯದೆ ಇರುವುದು, ನೈಸರ್ಗಿಕ ವರ್ಣಗಳು ಬಹಳ ದಿನಗಳ ಕಾಲ ತಮ್ಮ ಪ್ರಖರತೆ ಕಳೆದುಕೊಳ್ಳುವುದಿಲ್ಲವೆಂಬುವುದು ಮತ್ತೊಂದು ಕಾರಣವಾಗಿದೆ.

ಹೀಗೆ ರಚನೆ ಮಾಡಿದ ತೊಗಲುಗೊಂಬೆಗಳ ನಡುವೆ ಉದ್ದ ಬಿದಿರಿನ ಕಟ್ಟಿಗೆಯನ್ನು ಸಂಯೋಜನೆಗೊಳಿಸುತ್ತಾರೆ. ಕೆಳಗೆ ಉದ್ದವಾಗಿ ಬಿದಿರು ಕಡ್ಡಿಯನ್ನು ಬಿಟ್ಟಿರುವರು. ಆ ಕಡ್ಡಿಯ ಸಹಾಯದಿಂದಲೇ ಪರದೆಯ ಮೇಲೆ ಚಿತ್ರದ ತೊಗಲುಗೊಂಬೆಯಾಟಗಳನ್ನು ಪ್ರದರ್ಶಿಸಲಾಗುವುದು. ಗೊಂಬೆ ಬಿಳಿ ಪರದೆ ಮೇಲೆ ಕಂಡರೂ ಆ ಚಿತ್ರದ ಆಟ ತೋರಿಸುವ ಕಲಾವಿದ ಮಾತ್ರ ಪ್ರೇಕ್ಷಕರ ಕಣ್ಣಿಗೆ ಬೀಳುವುದಿಲ್ಲ. ಹೀಗೆ ವಿಶಿಷ್ಟರೀತಿಯಲ್ಲಿ ಈ ಆಟವೂ ಪ್ರದರ್ಶನಗೊಳ್ಳುತ್ತದೆ. ಆಟ ಮುಗಿದ ನಂತರ ಬಾವುಲಿ ಎಂಬ ಬಿದಿರು ಪೆಟ್ಟಿಗೆಯಲ್ಲಿ ಸಂರಕ್ಷಿಸಿಡುವರು.

ಬಳ್ಳಾರಿ ಜಿಲ್ಲೆಯ ತೊಗಲುಗೊಂಬೆ ಆಟದ ಕುರಿತಾದ ನಂಬಿಕೆಗಳು

1. ಮಳೆ ಬಾರದೆ ಇದ್ದಾಗ ತೊಗಲುಗೊಂಬೆ ಆಟವಾಡಿಸಿದರೆ ಮಳೆ ಬರುತ್ತೆಂಬುದು ಜನಸಾಮಾನ್ಯರ ನಂಬಿಕೆಯಾಗಿದೆ.
2. ತೊಗಲುಗೊಂಬೆಯಾಟ ಆಡಿಸುವುದರಿಂದ ದನಕರುಗಳಿಗೆ ರೋಗ ನಿವಾರಣೆಯಾಗುತ್ತದೆ.
3. ತೊಗಲುಗೊಂಬೆಯಾಟದ ಪೆಟ್ಟಿಗೆಯನ್ನು ಪೂಜಿಸುವುದರಿಂದ ಕಿಳ್ಳೆಕ್ಯಾತರ ಜನಾಂಗದವರು ಸಮೃದ್ಧರಾಗಿರುತ್ತಾರೆ.
4. ಅಮಾವಾಸ್ಯೆ-ಹುಣ್ಣಿಮೆಗಳಂದು ಪೆಟ್ಟಿಗೆಯಲ್ಲಿನ ತೊಗಲುಗೊಂಬೆಗಳು ಕುಣಿಯುತ್ತವೆ. ಹೀಗಾಗಿ "ಬಾವುಲಿ"(ಪೆಟ್ಟಿಗೆ)ಯನ್ನು ಫಲಪುಷ್ಪಗಳಿಂದ ಪೂಜಿಸುತ್ತಾರೆ.
5. ಆರ್ಥಿಕ ಸ್ಥಿತಿ ಹದಗೆಟ್ಟಾಗ ಅಥವಾ ರೋಗ ಬಂದಾಗ ತೊಗಲುಗೊಂಬೆಯನ್ನು ಮಾಡಿಸಿ ಹರಕೆ ಹೊತ್ತು ದೇವರಿಗೆ ಕಾಣಿಕೆ ನೀಡುವುದರಿಂದ ಎಲ್ಲಾ ಸರಿಹೋಗುತ್ತದೆ.

ಪ್ರಸಾರ ಮಾಧ್ಯಮ ಮತ್ತು ಆಧುನೀಕರಣ ಪ್ರಭಾವದಿಂದಾಗಿ ಜನಪದ ಕಲೆಗಳು ನಾಶದ ಅಂಚಿನಲ್ಲಿರುವುದನ್ನು ಇಂದು ನಾವು ಕಾಣುತ್ತೇವೆ. ಇಂತಹ ಪರಿಸ್ಥಿತಿಯಲ್ಲಿಯೂ ಇಂದು ಜನಪದ ಕಲಾವಿದರು ಇದರ ಅಸ್ತಿತ್ವವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಪರಿಶ್ರಮ ಪಡುತ್ತಿರುವುದನ್ನು ಕಾಣುತ್ತೇವೆ. ಪೌರಾಣಿಕ ಧಾರ್ಮಿಕ ವಸ್ತುವಿಷಯಗಳೂ ರೂಪಾಂತರಿಸಿಕೊಂಡು ಸಮಕಾಲೀನ ಸಂದರ್ಭಕ್ಕೆ ಹೊಂದಿಕೊಳ್ಳಬೇಕಾಗಿದೆ.

ದೆಹಲಿ ಕ್ರಾಫ್ಟ್ ಮ್ಯುಸಿಯಂನಲ್ಲಿ ತಿಂಗಳಿಗೊಮ್ಮೆ ಜನಪದ ಕಲಾವಿದರಿಗೆ ಒಂದು ತಿಂಗಳಕಾಲ ದೆಹಲಿಯಲ್ಲಿ ಉಳಿದುಕೊಳ್ಳಲು ಈಗಲೂ ಅವಕಾಶ ನೀಡುತ್ತಿದೆ. ಅನೇಕ ಸಂಘಸಂಸ್ಥೆಗಳು ಭಾರತದಲ್ಲಿ ಇಂತಹ ಅವಕಾಶ ನೀಡುತ್ತಿದ್ದರೂ ಎಲ್ಲಾ ಕಲಾವಿದರಿಗೆ ಇದರ ಮೇಲೆ ಉಪಜೀವನ ಮಾಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಅನೇಕ ಜನಪದ ಕಲಾವಿದರು ತಮ್ಮ ಮೂಲವೃತ್ತಿಯನ್ನು ಬಿಟ್ಟು ಮತ್ತೊಂದೆಡೆ ಉಪಜೀವನಕ್ಕಾಗಿ ಸಾಗಬೇಕಾದ ಪ್ರಸಂಗ ನಿರ್ಮಾಣವಾಗಿದೆ.

ಅನೇಕ ಖ್ಯಾತ ಸಂಶೋಧಕರು ತೊಗಲುಗೊಂಬೆಯಾಟದ ಕಲಾವಿದರ ಮತ್ತು ಕಲೆಯ ಕುರಿತು ಲೇಖನಗಳು ಮತ್ತು ಪುಸ್ತಕಗಳನ್ನು ಪ್ರಕಟಿಸಿರುವುದನ್ನು ಕಾಣುತ್ತೇವೆ. ಅದರಲ್ಲಿ 'ಕರ್ನಾಟಕ ಜನಪದ ಚಿತ್ರಕಲೆ' ಎಂಬ ಸಂಶೋಧನಾ ಮಹಾಪ್ರಬಂಧದಲ್ಲಿ ತೊಗಲುಗೊಂಬೆಯಾಟದ ಕುರಿತು ವಿಸ್ತಾರವಾಗಿ ಡಾ. ಎಸ್. ಸಿ. ಪಾಟೀಲರವರು ಅಧ್ಯಯನ ಮಾಡಿದ್ದಾರೆ. ಕಲಾವಿದ ಎಂ.ಎಸ್.ನಂಜುಂಡರಾವ್ ಅವರು ತೊಗಲುಗೊಂಬೆ ಚಿತ್ತಾರಗಳ ಪ್ರದರ್ಶನಕ್ಕೆ ವಸ್ತು ಸಂಗ್ರಹಾಲಯವನ್ನು ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಸ್ಥಾಪಿಸಿ ಸಂರಕ್ಷಿಸಿರುವುದು ಹೆಮ್ಮೆಯ ಸಂಗತಿ. ಹಾಗೆಯೇ 'ಕರ್ನಾಟಕ ತೊಗಲುಗೊಂಬೆ' ಎಂಬ ವರ್ಣರಂಜಿತವಾದ ಪುಸ್ತಕವನ್ನು ಪ್ರಕಟಿಸಿದ್ದಾರೆ. ಡಾ. ಶಶಿಕಲಾ ಹೂಗಾರ ಅವರು ಈ ಕಲೆಯ ಕುರಿತಾಗಿ ಕನ್ನಡ ವಿಶ್ವವಿದ್ಯಾಲಯದಿಂದ ಸಂಶೋಧನೆ ಮಾಡಿ ಪಿಎಚ್.ಡಿ ಪದವಿಯನ್ನು ಪಡೆದುಕೊಂಡಿದ್ದಾರೆ.

ಭಾರತೀಯ ಪುರಾತನ ಎಲ್ಲ ದೃಶ್ಯಕಲೆಗಳಲ್ಲಿ ಬಳಸುವ ಮೂಲ ವರ್ಣಗಳನ್ನು ಇಲ್ಲಿಯೂ ಕಾಣಬಹುದು. ಒಟ್ಟಾರೆ, ಬಳ್ಳಾರಿ ಜಿಲ್ಲೆಯಲ್ಲಿ ನಾಶದ ಅಂಚಿನಲ್ಲಿರುವ ಇಂತಹ ಅಪರೂಪದ ತೊಗಲುಗೊಂಬೆ ಚಿತ್ತಾರ ಮತ್ತು ಆಟವನ್ನು ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಬಳ್ಳಾರಿ ಜಿಲ್ಲೆಯ ಡಿ. ಯದ್ರಮ್ಮನಹಳ್ಳಿಯ ದೊಡ್ಡಬರಮಪ್ಪ ಮತ್ತು ಪರಿವಾರ ಹಾಗೂ ಬಳ್ಳಾರಿಯ ಬೆಳಗಲ್ಲು ವೀರಣ್ಣನವರು ಈ ಕಲೆಯನ್ನು ಜಗತ್ತಿನಾದ್ಯಂತ ಪ್ರದರ್ಶಿಸಿದ್ದಾರೆ. ಈಗಲೂ ಬೆಳಗಲ್ಲು ವೀರಣ್ಣನವರು ತೊಗಲುಗೊಂಬೆಯಾಟಕ್ಕೆ ಹೊಸ ಮೆರುಗನ್ನು ತಂದಿದ್ದಾರೆ. ಸಮಕಾಲೀನ ವಿಷಯಗಳನ್ನು ಕುರಿತು ಗೊಂಬೆ ತಯಾರಿಸಿ ದೂರದರ್ಶನ ಮಾಧ್ಯಮದಲ್ಲಿ ಪ್ರದರ್ಶಿಸುತ್ತಿರುವುದು ಒಂದು ಆಶಾಯದಾಯಕವಾದ ಸಂಗತಿಯಾಗಿದೆ. ಇತ್ತೀಚೆಗೆ ರಾಷ್ಟ್ರೀಯ ಮಟ್ಟದ ತೊಗಲುಗೊಂಬೆಯಾಟದ ಉತ್ಸವವನ್ನು ಬಳ್ಳಾರಿಯಲ್ಲಿ ತುಂಬ ಯಶಸ್ವಿಯಾಗಿ ನೆರವೇರಿಸಿದ್ದು ಗಮನಾರ್ಹ ಅಂಶವೆಂದೇ ಹೇಳಬೇಕಾಗುತ್ತದೆ.

ಅಡಿ ಟಿಪ್ಪಣಿಗಳು

1. ಎಂ. ಎಸ್. ನಂಜುಂಡರಾವ್, *ಕರ್ನಾಟದ ತೊಗಲುಗೊಂಬೆ,* 2000, ಪು. 26.
2. ಶಶಿಕಲಾ ಹೂಗಾರ್, *ನಿಜದ ನೆಲೆ,* 2003, ಪು. 192.
3. ಡಾ. ಎಸ್. ಸಿ. ಪಾಟೀಲ, *ಕರ್ನಾಟಕ ಜನಪದ ಚಿತ್ರಕಲೆ,* 1993, ಪು. 172.
4. ಹಿ.ಚಿ. ಬೋರಲಿಂಗಯ್ಯ (ಸಂ), *ಕರ್ನಾಟಕ ಜನಪದ ಕಲೆಗಳ ಕೋಶ,* 1996 ಪು. 276–277.
5. ಪಿ. ಆರ್. ತಿಪ್ಪೇಸ್ವಾಮಿ, (ಸಂ) *ಕಲಾಕೋಶ,* 1994 ಪು. 177.
6. ಡಾ. ಎಸ್. ಸಿ. ಪಾಟೀಲ, *ಕರ್ನಾಟಕ ಜನಪದ ಚಿತ್ರಕಲೆ,* 1993, ಪು. 172.

39

ಹರಿಹರದ ಶಾಸನಗಳಲ್ಲಿ ಜಲ ನಿರ್ವಹಣೆ

ಡಾ. ಹರಿಹರ ಶ್ರೀನಿವಾಸರಾವ್

ವಿಜಯನಗರದ ಅರಸರು ನಾಡಿನ ಅಭಿವೃದ್ಧಿಗೆ ಸಂಪತ್ತನ್ನು ಕ್ರೋಢೀಕರಿಸುವಾಗ ನೀರಾವರಿಯ ಮುಖ್ಯ ಅಂಶಗಳನ್ನು ಆಧರಿಸಿ ಕೃಷಿಗೆ ಮಹತ್ವ ನೀಡಿದ್ದರು. ನೀರಿನ ಗರಿಷ್ಠ ಪ್ರಮಾಣದ ಉಪಯೋಗ ಪಡೆಯಲು ಅಣೆಕಟ್ಟು, ಕೆರೆ, ಕಟ್ಟೆ, ಕುಂಟೆ, ಬಾವಿಗಳಂತಹ ಜಲ ಆಕರಗಳ ನಿರ್ಮಾಣಕ್ಕೆ ಅನೇಕ ರೀತಿಯಲ್ಲಿ ಪ್ರೋತ್ಸಾಹಿಸಿದರು. ಈ ಉದ್ದೇಶದಿಂದಲೇ ವಿವಿಧ ರೀತಿಯ ನೀತಿ ನಿಯಮಗಳನ್ನು ರೂಪಿಸಿದರು. *ಫಲಾನುಭವಿಗಳಿಗೆ ಹೊರೆಯಾಗದ ರೀತಿಯಲ್ಲಿಯೇ, ನೀರ ತೆರಿಗೆಯನ್ನು ಸಂಗ್ರಹಿಸುವಾಗ ಆಯಾಸ್ಥಳಗಳಲ್ಲಿ ದೊರೆಯುವ ಸಂಪನ್ಮೂಲಗಳನ್ನೇ ಬಳಸಿಕೊಂಡದ್ದೂ ಒಂದು ಉತ್ತಮ ಅಂಶವೇ ಆಗಿದೆ.* ತುಂಗಭದ್ರೆ ಮತ್ತು ಅದರ ಉಪನದಿಯಾದ ಹರಿದ್ರಾ (ಇಂದಿನ ಬ್ಯಾಲದಹಳ್ಳಿ ಹಳ್ಳ) ನದಿಯ ಜಲ ಬಳಸಿಕೊಳ್ಳುವ ನಿಟ್ಟಿನಲ್ಲಿ ಹರಿಹರದ ಮಹಾಜನರು ಹಾಕಿಕೊಂಡ ರಚನಾತ್ಮಕ ಜಲಾಭಿವೃದ್ಧಿಯ ಕಾರ್ಯಗಳನ್ನು, ಅಲ್ಲಿಯ ಶಾಸನೋಕ್ತ ನಿರ್ಣಯಗಳನ್ನು ಈ ಪ್ರಬಂಧದಲ್ಲಿ ಸ್ಥಳೀಯ ಮಾದರಿಯಾಗಿ ವಿವರಿಸಲಾಗಿದೆ. ಹರಿದ್ರಾ ನದಿಯಿಂದ ಉಂಟಾಗುತ್ತಿದ್ದ ನೆರೆಯನ್ನು ವ್ಯವಸಾಯಕ್ಕೆ ತಿರುಗಿಸಿಕೊಂಡ ಇನ್ನೊಂದು ಅಪರೂಪದ ಉದಾಹರಣೆಯನ್ನು ಹರಿಹರದ ಶಾಸನಗಳು ಪ್ರಮುಖವಾಗಿ ದಾಖಲಿಸಿವೆ. ನೆರೆ ನೀರನ್ನು ಬಳಸಿ ಒಣಬೇಸಾಯದ ಭೂಮಿಯಲ್ಲಿ ನೀರಾವರಿ ಬೆಳೆಗಳಾದ ಭತ್ತ, ಅಡಿಕೆ, ಎಲೆ ತೋಟಗಳನ್ನಾಗಿ ಪರಿವರ್ತಿಸಿ ಅದರಿಂದ ಕೃಷಿಯನ್ನು ಹೆಚ್ಚಿಸಿದುದೂ ಗಮನಾರ್ಹವೇ ಆಗಿದೆ.

ಹರಿಹರವು ಕರ್ನಾಟಕದ ದಾವಣಗೆರೆ ಜಿಲ್ಲೆಯ ತಾಲ್ಲೂಕು ಕೇಂದ್ರವಲ್ಲದೇ ಧಾರ್ಮಿಕ, ಐತಿಹಾಸಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನೂ ಹೊಂದಿದ್ದು, ಕಲ್ಯಾಣದ ಚಾಲುಕ್ಯ, ಹೊಯ್ಸಳ, ಉಚ್ಚಂಗಿಯ ಪಾಂಡ್ಯ, ವಿಜಯನಗರ ಇತ್ಯಾದಿ ರಾಜವಂಶದವರ ಕೊಡುಗೆಗಳನ್ನು ಇಲ್ಲಿಯ ಶಾಸನಗಳು ವಿವರಿಸುತ್ತವೆ. ಈ ಊರಿಗೆ "ಕೂಡಲೂರು" ಎಂದು ಹೆಸರಿತ್ತೆಂದು ದಾವಣಗೆರೆ 61ನೇ ಶಾಸನದಿಂದ (ಕ್ರಿ.ಶ.1143) ತಿಳಿದುಬರುತ್ತದೆ. ಇದು ನದಿಗಳು ಕೂಡುವ ಸಂಗಮದ ಸ್ಥಳನಾಮ ಸೂಚಿಯಾಗಿದೆ. ಬಿ.ಎಲ್. ರೈಸರು *ಎಪಿಗ್ರಾಫಿಯಾ ಕರ್ನಾಟಿಕಾ* ಸಂಪುಟ 11ರ ಮುನ್ನುಡಿಯಲ್ಲಿ ಬರೆದಿರುವಂತೆ ......*ಹರಿಹರೇಶ್ವರದೇವಸ್ಥಾನದ ಸುತ್ತಮುತ್ತಲಿರುವ ಶಾಸನಗಳು ಸಾಕಷ್ಟು ವಿಸ್ತಾರವಾಗಿ ವಿವರಗಳನ್ನು ಹೊಂದಿವೆ........ತುಂಗಭದ್ರಾನದಿಗೆ ನಿರ್ಮಿಸಲಾದ ಅಣೆಕಟ್ಟು, ಅದು ಒಡೆದುಹೋಗಿ ಪುನಃ ನಿರ್ಮಾಣ ಮಾಡಿದ್ದು, ಅಚ್ಯುತರಾಯನು ನಿಧಿಯೊಂದನ್ನ ಸ್ಥಾಪಿಸಿದ್ದು ಇವು ಅತ್ಯುತ್ತಮ ರಚನೆಯಾಗಿವೆ.*

ವಿವರಣೆ

ಈ ಶಾಸನಗಳನ್ನು ಹೆಚ್.ಎಂ. ಶಂಕರನಾರಾಯಣರಾವ್, ಡಾ. ಜಿ. ಎಸ್. ದೀಕ್ಷಿತ್, ಸಿ. ಟಿ. ಎಂ. ಕೊಟ್ರಯ್ಯ ಮತ್ತು ಇತರರು ಪ್ರಸ್ತಾಪಿಸಿದ್ದಾರೆ. ಆದರೆ ಇಲ್ಲಿಯ ಇನ್ನಷ್ಟು ವಿವರಗಳು ಹೀಗಿವೆ:

ಹರಿಹರದ ಶಾಸನಗಳನ್ನು ಕಲ್ಲು ಮತ್ತು ತಾಮ್ರ ಪಟ ಎರಡರ ಮೇಲೆಯೂ ಕೊರೆಯಲಾಗಿದೆ. ತಾಮ್ರ ಪಟಗಳು ಈಗ ದೊರೆಯುತ್ತಿಲ್ಲ. ಆದರೆ ಬಿ.ಎಲ್ ರೈಸರು ಸಂಗ್ರಹಿಸಿರುವಂತೆಯೇ ಶಿಲಾಶಾಸನಗಳು ಇದ್ದು, ಅವುಗಳಲ್ಲಿ ಕೆಲವು ಪದಗಳು ಮಾತ್ರ ಅಳಿಸಿ ಹೋಗಿವೆ. ಇವುಗಳ ಭಾಷೆ ಸಂಸ್ಕೃತ ಮತ್ತು ಕನ್ನಡ. ಸಂಸ್ಕೃತವನ್ನು ಕನ್ನಡ ಲಿಪಿಯಲ್ಲಿ ಬರೆಯಲಾಗಿದೆ. ದೇವಸ್ಥಾನದ ದಕ್ಷಿಣದ್ವಾರದ ಹೊರಬದಿಗೆ ಶಾಸನಗಳು ಕಂಡುಬರುತ್ತವೆ. ಮಹಾಜನರು, ಹರಿಹರೇಶ್ವರ ದೇವರು (ದೇವಸ್ಥಾನದ ಅಧಿಕಾರಿಗಳು) ಹಾಗೂ ನೀರಾವರಿ ವ್ಯವಸ್ಥೆಯಿಂದ ಪ್ರಯೋಜನ ಪಡೆಯುವ ಫಲಾನುಭವಿಗಳ ಮಧ್ಯೆಮಾಡಿಕೊಂಡ ಜಂಟಿ ಒಪ್ಪಂದವನ್ನು "ವ್ಯವಹಾರ"ವೆಂದೇ ಕರೆಯಲಾಗಿದೆ. ಸಾಮಾನ್ಯವಾಗಿ ವಿಜಯನಗರದ ಪೂರ್ವ ಅರಸರು ಹಂಪೆಯ ಶ್ರೀವಿರೂಪಾಕ್ಷನ ಹೆಸರಿನಲ್ಲಿ ದಾನ ನೀಡುತ್ತಿದ್ದರು. ಆದರೆ ಇಲ್ಲಿ ಒಪ್ಪಂದವೇರ್ಪಟ್ಟಿರುವುದು ಹರಿಹರೇಶ್ವರನ ಹೆಸರಿನಲ್ಲಿ ಎನ್ನುವುದೂ ಗಮನಾರ್ಹವೇ ಆಗಿದೆ. ಶಾಸನದ ಕಾಲವು ಸ್ಪಷ್ಟವಾಗಿ ಕ್ರಿ.ಶ.1410ಕ್ಕೆ ಸರಿಹೊಂದುವುದರಿಂದ, 600 ವರ್ಷಗಳಷ್ಟು ಹಿಂದಿನ "ಪ್ರವಾಹ ನಿಯಂತ್ರಣ"ದ ಲಿಖಿತ ದಾಖಲೆ ಇದಾಗಿದೆ. ಜಲವಿಜ್ಞಾನಿಗಳ ಪ್ರಕಾರ ಒಂದು ನದಿಯ ನೈಸರ್ಗಿಕ ಬದಲಾವಣೆ, ಪ್ರವಾಹ, ಇತ್ಯಾದಿಗಳನ್ನು ತಿಳಿಯಲು 250 ವರ್ಷಗಳಷ್ಟು ಹಿಂದಿನ ದಾಖಲೆಗಳು ಬೇಕು. ಇಲ್ಲಿ ನಮಗೆ ಅದಕ್ಕೂ ಹಿಂದಿನ ದಾಖಲೆಗಳಿರುವುದು ಕಂಡುಬರುತ್ತದೆ. ಭಾರತದ ಜಲ ಪರಿವೀಕ್ಷಣೆ, ನೀರಿನ ಹರಿವು, ಅವುಗಳಲ್ಲಿ ಉಂಟಾಗುವ ಪ್ರವಾಹ, ಮಣ್ಣಿನ ಹಾಗೂ ನೀರಿನ ಗುಣ ಪರೀಕ್ಷೆ ಇತ್ಯಾದಿಗಳಿಗೆಂದೇ ಇರುವ ಕೇಂದ್ರೀಯ ಜಲ ಆಯೋಗದವರು, ಹರಿದ್ರಾ ನದಿಗೆ, ಹರಿಹರದಿಂದ ಮೇಲ್ಭಾಗದ 8 ಕಿ.ಮೀ. ಅಂತರದ, ಬ್ಯಾಲದಹಳ್ಳಿಯಲ್ಲಿ ಹೈಡ್ರಲಾಜಿಕಲ್ ಅಬ್ಸರ್‌ವೇಟರಿಯೊಂದನ್ನು ಪ್ರಾರಂಭಿಸಿರುವುದು ಇತ್ತೀಚೆಗೆ ಅಂದರೆ 1985ರಲ್ಲಿ ಎಂಬ ಮಾಹಿತಿ ಗಮನಾರ್ಹ.

ವಿಜಯನಗರದರಾಜ ವೀರಪ್ರತಾಪರಾಯನು ಶಕವರುಷ 1332ರ (ಕ್ರಿ.ಶ.1410) ವಿಕೃತಿನಾಮ ಸಂವತ್ಸರದ ಹುಣ್ಣಿಮೆಯಾದ ಎರಡು ದಿನಗಳ ನಂತರ, ಸೋಮವಾರದ ಭಾದ್ರಪದ ಮಾಸದಲ್ಲಿ, ಹರಿಹರದ ಮಹಾಜನರು ಮತ್ತು ದೇವರ ನಡುವೆ ಏರ್ಪಡಿಸಿದ ಒಪ್ಪಂದದ ವಿವರಗಳು ಹೀಗಿವೆ.

ದೇವಸ್ಥಾನದ ಅಧಿಕಾರಿಗಳು ಹರಿಹರೇಶ್ವರನ ಸ್ವಾಧೀನದಲ್ಲಿರುವ ಭೂಮಿಯಲ್ಲಿ ಅಣೆಕಟ್ಟನ್ನು ನಿರ್ಮಿಸಬೇಕು. ಅದು ದೇವರ ಒಡೆತನಕ್ಕೆ ಸೇರಿರುವಷ್ಟು ಭೂಮಿಯ ವಿಸ್ತೀರ್ಣವೆಲ್ಲವನ್ನು ಒಳಗೊಂಡಿರಬೇಕು. ಆದಾಯದ ಎರಡು ಭಾಗ (2/3)ವನ್ನು ದೇವರು (ದೇವಸ್ಥಾನದ ಅಧಿಕಾರಿಗಳು) ಅನುಭವಿಸಬೇಕು; ಮತ್ತು 1/3ನೇ ಅಂಶವನ್ನು ಮಹಾಜನರು ಯಾವುದೇ ತೆರಿಗೆ ಇಲ್ಲದೆ (ಸರ್ವಮಾನ್ಯವಾಗಿ) ಅಣೆಕಟ್ಟಿಗೆ ಕಾಲುವೆಗಳನ್ನು ನಿರ್ಮಿಸಿದ ಮಹಾಜನರು ಸೂರ್ಯ ಚಂದ್ರರಿರುವವರೆಗೆ ಅನುಭವಿಸುತ್ತಾರೆ. ಬ್ರಾಹ್ಮಣರು (ದೇವಸ್ಥಾನದ ಅಧಿಕಾರಿಗಳು) ಅವರ 1/3ನೇ ಅಂಶದಲ್ಲಿ ಜಗನ್ನಾಥನ ಮಗನಾದ ಬುಳ್ಳಪನಿಗೆ 2 ಖಂಡುಗ ಭತ್ತ ಬೆಳೆಯುವಷ್ಟು ಭೂಮಿಯನ್ನ ಆತನು ಅಣೆಕಟ್ಟನ್ನು ನಿರ್ಮಿಸಿದುದಕ್ಕಾಗಿ ನೀಡಬೇಕು. ಕಾಲುವೆಯ ನೀರನ್ನು 2/3 ಭಾಗ ಹರಿಹರೇಶ್ವರ (ದೇವಸ್ಥಾನದ ಅಧಿಕಾರಿಗಳು), ಮತ್ತು 1/3 ಭಾಗ ಮಹಾಜನರು ಹಂಚಿಕೊಳ್ಳಬೇಕು. ಆ ಕಾಲುವೆಯ ಕೆಳಗೆ ತೋಡಲಾಗುವ ಬಾವಿ, ಕಟ್ಟಿಸುವ ಕೆರೆಗಳು ಅಥವಾ ನದಿಯ ಇತರೆ ಕಾರ್ಯಗಳಿಂದ ಬರಬಹುದಾದ ಖರ್ಚುವೆಚ್ಚಗಳನ್ನು ಇದೇ ಪ್ರಮಾಣದಲ್ಲಿ ಹಂಚಿಕೊಳ್ಳಬೇಕು.

ಅಣೆಕಟ್ಟನ್ನು ಬನ್ನಿಕೋಡು ಎನ್ನುವಲ್ಲಿ ಕಟ್ಟಬೇಕು. ಕಾಲುವೆಯ ಕೆಳಗೆ ಹನಗವಾಡಿ, ಹರಿಹರದ ಮೂಲಕ ಗಂಗನರಸಿಯವರೆಗೆ ಹರಿಯುವತನಕ ತೆಗೆಯಬೇಕು. ಈಗಿನ ಹರಿಹರ ತಾಲ್ಲೂಕು ನಕ್ಷೆಯ ಪ್ರಕಾರ ಈ ಬೇಸಾಯದ ಭೂಮಿಯ ವಿಸ್ತೀರ್ಣವು 33,000 ಹೆಕ್ಟೇರ್ ಪ್ರದೇಶವಾಗುತ್ತದೆ (ತಾಲ್ಲೂಕು ನಕ್ಷೆ ನೋಡಿ). ದಾವಣಗೆರೆ 23ನೇ ಶಾಸನ ತಿಳಿಸುವಂತೆ ಅಣೆಕಟ್ಟಿನ ಉದ್ಘಾಟನೆಗೆ ಮುನ್ನ "ಅಂಗ ಪ್ರದಕ್ಷಿಣೆ" ಎನ್ನುವ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ಇದನ್ನು ನಡೆಸಿಕೊಟ್ಟವನು ಈ ಕಾರ್ಯದಲ್ಲಿ ನಿಸ್ಸೀಮನಾಗಿದ್ದ ಶಂಕರಭಟ್ಟ. ಇದಕ್ಕಾಗಿ ಆತನಿಗೆ 4 ಮಣುವಿನ(?) ಕೊಳಗ ಭತ್ತ ಬೆಳೆಯುವ ಭೂಮಿಯನ್ನು ದಾನವಾಗಿ ನೀಡಲಾಯಿತು. ಈ ಶಾಸನವನ್ನು ಬರೆದವನ ಹೆಸರು ಬಾಯಣಾಚಾರ್ಯ. ಈತನು ಮಲ್ಲಿಕಾರ್ಜುನಾಚಾರ್ಯನ ಮಗ. ಇದಕ್ಕಾಗಿ ಆತನಿಗೆ 8 ಮಣುವಿನ ಕೊಳಗ ಗದ್ದೆಯನ್ನು ದಾನ ನೀಡಲಾಗಿದೆ. ಜಗನ್ನಾಥನು ರಾಜನಾದ ದೇವರಾಜ ಮತ್ತು ಆತನ ಮಂತ್ರಿ ನಾಗಪ್ಪನಿಗೆ ಅಣೆಕಟ್ಟು ಕಟ್ಟುವ ಕೋರಿಕೆಯನ್ನು ಸಲ್ಲಿಸಿದ್ದ. ರಾಜಾಜ್ಞೆ ಪಡೆದ ನಂತರ ತನ್ನ ಮಗನಾದ ಮಂತ್ರಿ ಬುಳ್ಳಪನಿಗೆ ಕಾರ್ಯ ನಿರ್ವಹಣೆಯ ಜವಾಬ್ದಾರಿ ನೀಡಿದ.

ಅಣೆಕಟ್ಟು ಎಲ್ಲ ಸಂಕಷ್ಟಗಳನ್ನು ಎದುರಿಸಿ ನೂರಾರು ಜನರಿಗೆ ವ್ಯವಸಾಯಕ್ಕೆ ಮತ್ತು ಇತರ ಜೀವನೋಪಾಯಕ್ಕೆ ದಾರಿಯಾಯಿತು. ಆದರೆ 14 ವರ್ಷಗಳ ನಂತರ ಕ್ರಿ.ಶ. 1424ರಲ್ಲಿ ಬಂದ ಅನಿರ್ದಿಷ್ಟ, ಆಕಸ್ಮಿಕ ಪ್ರವಾಹದಿಂದಾಗಿ ಬುಳ್ಳಪನು ಕಟ್ಟಿದ ಅಣೆಕಟ್ಟು ಒಡೆದುಹೋಯಿತು. ಮುಂದಿನ ವಿವರವನ್ನು ದಾವಣಗೆರೆ ಶಾಸನಸಂಖ್ಯೆ 29 ಹೀಗೆ ವಿವರಿಸುತ್ತದೆ.

ಹರಿಹರದ ಬ್ರಾಹ್ಮಣರು, ಮಹಾಜನರೂ ಸಭೆ ಸೇರಿ ಒಡೆದು ಹೋದ ಹರಿದ್ರಾ ನದಿಯ ಅಣೆಕಟ್ಟನ್ನು ಮತ್ತೆ ಸರಿಪಡಿಸುವ ಪುಣ್ಯಪುರುಷನು ಯಾರೆಂದು ವಿಚಾರಣೆ ನಡೆಸಿದರು. ಚಾಮನೃಪಾಲ ಎನ್ನುವ ಅನೇಕ ಶಾಸ್ತ್ರಕೋವಿದ ಮತ್ತು ಅಣೆಕಟ್ಟುಗಳನ್ನ ನಿರ್ಮಿಸುವುದರಲ್ಲಿ ಪರಿಣತಿಯನ್ನು ಹೊಂದಿದ್ದವನನ್ನು ಈ ಮಹತ್ಕಾರ್ಯಕ್ಕೆ ಒಪ್ಪಿಸಲಾಯಿತು. ಶಾಸನವು ಉಲ್ಲೇಖಿಸುವ ಎರಡನೆಯ ಮಹತ್ವದ ಸಂಗತಿಯೆಂದರೆ ಅಣೆಕಟ್ಟಿನ ಪುನರ್ ನಿರ್ಮಾಣಕ್ಕೆ ಆಗುವ ಖರ್ಚೆಲ್ಲವನ್ನೂ ಬುಳ್ಳಪನೇ ವಹಿಸಿಕೊಂಡುದು. ಇದು ಆತನ "ಜನಸೇವಾ ಮನೋಭಾವವನ್ನು" ಬಿಂಬಿಸುತ್ತದೆ. ಈಗಿನ ಕಾಲದಲ್ಲಿ ಇಂತಹ ಜನಪರ ಕಾಳಜಿ ಹೊಂದಿರುವ ಎಷ್ಟು ಜನ ಮಂತ್ರಿಗಳು ಸಿಕ್ಕಾರು? ಇಷ್ಟಲ್ಲದೇ ಬುಳ್ಳಪನು ವ್ಯವಸಾಯದ ಇನ್ನಷ್ಟು ಅಭಿವೃದ್ಧಿಗೆ ಕಾರಣವಾಗುವಂತೆ ನೀರಾವರಿಯಲ್ಲದ ಒಣಭೂಮಿ ಮತ್ತು ಹೊಸದಾಗಿ ನಿರಾವರಿ ಕೈಗೊಳ್ಳುವಂತಹ ಭೂಮಾಲೀಕರಿಗೆ ವಿಶೇಷ ಅನುದಾನ ನೀಡಿದುದನ್ನು ಶಾಸನವು ಉಲ್ಲೇಖಿಸಿದೆ.

ಸಾರಾಂಶ

ಈ ಪ್ರಬಂಧವು ಹರಿಹರೇಶ್ವರ, ಅಲ್ಲಿಯ ಮಹಾಜನರು, ವೀರ ಪ್ರತಾಪರಾಯ ಮತ್ತು ಫಲಾನುಭವಿಗಳ ನಡುವೆ ನಡೆದ "ವ್ಯವಹಾರವನ್ನು" ತೇದಿಸಹಿತ ನಿಖರವಾಗಿ ಗುರುತಿಸಿವೆ.

ಇಂದಿನ ಆಧುನಿಕ ಜಲಶಾಸ್ತ್ರ (ಹೈಡ್ರಾಲಜಿ)ದ ಪ್ರಕಾರ ಪ್ರವಾಹ ಅಥವಾ ನೆರೆಯ ವಿವರ ಹೀಗಿದೆ: ನೆರೆಯು ಭಾರೀ ಮಳೆಯಿಂದಾಗಿ, ಅಣೆಕಟ್ಟುಗಳು ಅಥವಾ ಇತರ ಜಲಾಕರಗಳು ಒಡೆದು ಹೋಗುವ ಕಾರಣದಿಂದ; ದೊಡ್ಡ ದೊಡ್ಡ ಅಲೆಗಳು ಉಂಟಾದಾಗ ಅಥವಾ ಮಂಜು ಕರಗಿ ನೀರಾಗುವುದರಿಂದ ಉಂಟಾಗುತ್ತದೆ. ಇಂತಹ ಜಲ ಪ್ರಕೋಪದಿಂದಾಗಿ ಆಸ್ತಿ, ಜನ, ಪ್ರಾಣಿಗಳ ಮುಳುಗಡೆ, ಭೂ ಕೊರೆತ ಉಂಟಾಗಿ ಜೈವಿಕ ನಷ್ಟ ಉಂಟಾಗುತ್ತದೆ. ಈ ನಷ್ಟವು ಸೇತುವೆ, ಅಣೆಕಟ್ಟು, ಕೆರೆಕಟ್ಟೆಗಳು, ಕೃತಕವಾಗಿ ನೆರೆ ತಡೆಯಲು ರಚಿಸಿದ ಕಾಲುವೆ ಇತ್ಯಾದಿಗಳನ್ನು

ಒಳಗೊಂಡಿರುತ್ತದೆ. ಹರಿಹರದ ಹತ್ತಿರ ಕಟ್ಟಿದ ಅಣೆಕಟ್ಟು, ನಂತರ ಅದು ಒಡೆದುಹೋಗಿ ಪುನರ್ನಿರ್ಮಾಣಗೊಂಡಿರುವದು ಆಧುನಿಕ ಜಲಶಾಸ್ತ್ರದ ವ್ಯಾಖ್ಯಾನದಂತೆಯೇ ಇದ್ದು, ಕರ್ನಾಟಕದಲ್ಲಿ ಇಂತಹ ನೆರೆ ನಿರ್ವಹಣೆಯ ಕಾರ್ಯವನ್ನು ಕಾರ್ಯಗತ ಗೊಳಿಸಿದ್ದ ಉದಾಹರಣೆಯನ್ನು ಇಲ್ಲಿಯ ಶಾಸನಗಳು ದಾಖಲಿಸಿವೆ.

ನೆರೆ ಪರಿಹಾರಕ್ಕೆ ಹರಿಹರದ ಜನರನ್ನೇ ಬಳಸಿಕೊಂಡು ಒಂದು ಸ್ಥಳೀಯ ವ್ಯವಸ್ಥೆಯನ್ನು ರೂಪಿಸಿರುವುದು. ನೆರೆಯಿಂದ ಉಂಟಾದ ಕಷ್ಟ-ನಷ್ಟಗಳನ್ನು ರಾಜ, ಮಂತ್ರಿಗಳು ಕೇಳುವ ಸದಿಚ್ಛೆಯನ್ನು ಹೊಂದಿದ್ದು ಅದಕ್ಕೆ ತಕ್ಕ ಪರಿಹಾರೋಪಾಯದಲ್ಲಿ ಸಹಕರಿಸಿದ್ದುದು; ಹರಿದ್ರಾ ನದಿಯ ಅಣೆಕಟ್ಟನ್ನು ಉದ್ಘಾಟಿಸಿದುದು ಕ್ರಿ.ಶ. 1410ರಲ್ಲಿ ಮತ್ತು ಅದು ಕ್ರಿ.ಶ.1424ರಲ್ಲಿ ಒಡೆದುಹೋಯಿತು ಎಂಬ 600 ವರ್ಷಗಳ ಹಿಂದಿನ ಮಾಹಿತಿಯನ್ನು ಶಾಸನಗಳು ನೀಡುತ್ತವೆ.


ಈಗ ಅಣೆಕಟ್ಟಾಗಲೀ ಅಥವಾ ಹಿಂದೆ ನಿರ್ಮಿಸಿದ್ದ ಕಾಲುವೆಗಳಗಲೀ ಕಂಡುಬರುವುದಿಲ್ಲ. ಆದರೆ ಅದನ್ನು ಕಟ್ಟಿದ್ದು ಬನ್ನಿಕೋಡಿನ ಹತ್ತಿರ. ಈ ಊರು ಹರಿಹರದ ಮೇಲ್‌ಭಾಗದಿಂದ ಸು.18 ಕಿ.ಮೀ ದೂರದಲ್ಲಿದೆ. ಅಣೆ ಕಟ್ಟಿನ ವ್ಯಾಪ್ತಿಯಲ್ಲಿ ಬರುವ ಬನ್ನಿಕೋಡು, ಹರಿಹರ, ಹನಗವಾಡಿ, ಗಂಗನರಸಿ ಪ್ರದೇಶವು ಇಂದಿನ ತಾಲ್ಲೂಕು ನಕ್ಷೆಯ ಪ್ರಕಾರ 33,000 ಹೆಕ್ಟೇರ್ ಆಗುತ್ತದೆ (ನಕ್ಷೆ ನೋಡಿ). ಗಂಗನರಸಿಯ ಕೆರೆ ಇಂದಿಗೂ ಇದೆ. ಆದರೆ ಕೆರೆಯು ಪ್ರವಾಹದ ನೀರಿಗೆ ಬದಲಾಗಿ ಭದ್ರಾ ಜಲಾಶಯದ ನೀರನ್ನು ಹೊಂದಿದೆ.

ನಕ್ಷೆಯಲ್ಲಿ ತೋರಿಸಿರುವ ಏರು ತಗ್ಗು(ಕಾಂಟೂರು) ಸಂಖ್ಯೆಗಳನ್ನು ಗಮನಿಸಿದಾಗ ಹಿಂದಿನವರಿಗೆ ನೀರಿನ ಹರಿವಿನ ಗುರುತ್ವಾಕರ್ಷಣೆ ಮತ್ತು ಭೂಮಿಯ ರಚನೆಯ ವಿನ್ಯಾಸಜ್ಞಾನ (ಜಿಯೋಗ್ರಾಫಿಕಲ್ ನಾಲೆಡ್ಜ್) ಇತ್ತೆಂದು ಸ್ಪಷ್ಟವಾಗುತ್ತದೆ.

ನೆರೆಗೆ ಕಟ್ಟಿದ್ದ ಕಾಲುವೆಯ ಕೆಲವು ಭಾಗಗಳ ಕುರುಹುಗಳು ಹರಿಹರದಲ್ಲಿ ಕ್ರಿ.ಶ. 1980ರವರೆಗೂ ಕಂಡು ಬರುತ್ತಿದ್ದವು. ಆದರೆ ಈಗ ಆ ಭಾಗವು ಹರಿಹರ-ಶಿವಮೊಗ್ಗ ರಸ್ತೆಯ ಚರಂಡಿಯಾಗಿ (ಕು)ರೂಪಿತವಾಗಿದೆ. ಆದರೆ ಇಲ್ಲಿಯ ಕೆಲವು ಭಾಗವನ್ನು ಇಂದಿಗೂ "ಹಳ್ಳದ ಕೇರಿ" ಎಂದೇ ಕರೆಯುತ್ತಾರೆ.

ಶಾಸನಗಳು ಅಣೆಕಟ್ಟಿನ ರಚನೆಯ ಬಗೆಗೆ ಏನನ್ನೂ ಹೇಳುವುದಿಲ್ಲ. ಆದರೆ ಬುಳ್ಳಪ, ಚಾಮರಾಜರನ್ನು ವಿಶೇಷವಾಗಿ ಹೊಗಳುತ್ತವೆ. ಇದು ಅವರ ಮಾನವೀಯ ಗುಣಗಳ ಉತ್ಪ್ರೇಕ್ಷೆ ಎನಿಸಿದರೂ, 600 ವರುಷಗಳ ಹಿಂದೆ ಇಂತಹ "ಇಬ್ಬರು ಜಲಶಾಸ್ತ್ರ ನಿಪುಣರು" ಇದ್ದರೆನ್ನುವುದನ್ನು ಸ್ಪಷ್ಟವಾಗಿ ಪರಿಚಯಿಸಿರುವುದು ಹೆಮ್ಮೆಯ ಸಂಗತಿಯಾಗಿದೆ.

ಹೀಗೆ ಪೂರ್ವ ವಿಜಯನಗರದ ಕಾಲದಲ್ಲಿ ನೆರೆಯಿಂದ ಉಂಟಾಗುವ ಹೆಚ್ಚಿನ ನೀರನ್ನು ಬಳಸಿ ಒಣಭೂಮಿಯನ್ನು ನೀರಾವರಿಗೆ ಪರಿವರ್ತಿಸುವ ಇಂತಹ "ಜಲ ನಿರ್ವಹಣೆಯ ಪದ್ಧತಿ" ಇತ್ತೆಂದು ಹರಿಹರದ ಶಾಸನಗಳು ಪ್ರಸ್ತಾಪಿಸುತ್ತವೆ.



ಹರಿಹರ ತಾಲ್ಲೂಕು ನಕ್ಷೆಯಲ್ಲಿರುವ ಶಾಸನೋಕ್ತ ಊರುಗಳು

ಅನಂತರಾಜಸಾಗರ

ತಿರುಮಲೆ ಶ್ರೀರಂಗಾಚಾರ್ಯ

ವಿಜಯನಗರ ಸಾಮ್ರಾಜ್ಯ ವೈಭವ ಕೇವಲ ದೇವಾಲಯಗಳ-ಭವ್ಯ ಶಿಲ್ಪಕಲಾ ಸೌಂದರ್ಯದ, ಇಲ್ಲವೇ ಅಚ್ಚರಿಮೂಡಿಸುವ ಕಲ್ಲಿನ ರಥಗಳಂತಹ ಸೃಷ್ಟಿ ರೂಪಗಳು ಮಾತ್ರವೇ? ಇಲ್ಲವೇ ವಿಜಯನಗರ ಸಾಮ್ರಾಜ್ಯ ಇಡೀ ದಕ್ಷಿಣ ಪರ್ಯಾಯ ದ್ವೀಪದ ವಿಸ್ತಾರವನ್ನು ತನ್ನ ವ್ಯಾಪ್ತಿಗೆ ಅಡಗಿಸಿಕೊಂಡದ್ದೇ, ವಿಜಯನಗರ ರಾಜಧಾನಿಯಲ್ಲಿ ರಸ್ತೆಗಳಲ್ಲಿ ಮುತ್ತು ರತ್ನಗಳನ್ನು ಸೇರು-ಪಾವುಗಳಲ್ಲಿ ಅಳೆದು ಮಾರುತ್ತಿದ್ದರೆಂಬ ಅತಿಶಯೋಕ್ತಿಯ ಮಾತುಗಳೇ? ಇವೆಲ್ಲ ಕತೆ-ಕಾದಂಬರಿಗಳಿಗೆ ತುಂಬಬಹುದಾದ ಸರಕು. ಇತಿಹಾಸದ ಕಕ್ಷೆಗೆ ಇವು ಸಲ್ಲದು. ಆ ವರ್ಣನೆಗಳ ಹಿಂದಿರುವ-ಹಿನ್ನೆಲೆಯ ವೈಜ್ಞಾನಿಕ-ತಾತ್ವಿಕ ಯಾಂತ್ರಿಕ-ಕಲ್ಪನಾ ವಿಶೇಷಗಳತ್ತ ನೋಡುವುದೇ ಅವುಗಳ ಇತಿಹಾಸದ ಸಾರ್ಥಕತೆ.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಹಿಂದೆ ಪರಂಪರಾಗತ ಭಾರತೀಯ ತತ್ವ-ದರ್ಶನ-ಧರ್ಮ ಇವೆಲ್ಲ ಆದರ್ಶಗಳೂ ಇದ್ದದ್ದು ಸತ್ಯ. ಆ ನೆಲೆಯಲ್ಲಿಯೇ ಆ ಸಾಮ್ರಾಜ್ಯ ಮುನ್ನಡೆಯುವ ದಾರಿ ಹಿಡಿಯಿತು. ಯಾವುದಕ್ಕೆ ಆದ್ಯತೆ ಕೊಟ್ಟಿತು? ಈ ನೆಲೆಯಲ್ಲಿ ಗಮನಹರಿಸಿದಾಗ ಆ ಕಾಲದ ವಿವೇಕ-ವಿಚಾರಪರತೆ, ಔಚಿತ್ಯ ಪ್ರಜ್ಞೆ, ಪ್ರಾಚೀನ ಪರಂಪರೆಯಲ್ಲಿ ಅವರು ಇಟ್ಟಿದ್ದ ನಂಬಿಕೆ, ವಿಶ್ವಾಸ ಇವೆಲ್ಲ ಅಚ್ಚರಿಮೂಡಿಸುತ್ತದೆ.

ಹಂಪಿ ಉತ್ಸವದ ಸಂದರ್ಭಕ್ಕೆ ಯಾವ ಬಗ್ಗೆ ಬರೆಯೋಣವೆಂಬ ಯೋಚನೆಯಲ್ಲಿ ಹಳೆಯ ದಾಖಲೆಗಳತ್ತ ನೋಡುತ್ತಿದ್ದಾಗ ತಿ.ತಾ. ಶರ್ಮರ ಬರಹದ ಒಂದು ಟಿಪ್ಪಣಿ ಗಮನ ಸೆಳೆಯಿತು. "ಅನಂತರಾಜ ಸಾಗರ!" ದೊಡ್ಡ ಕೆರೆ; ಕಡಪ ಜಿಲ್ಲೆಯಲ್ಲಿದೆ. ಆ ಕುರಿತ ಅವರ ಟಿಪ್ಪಣಿ ಇದು:

ಕಡಪಜಿಲ್ಲೆ ಬದವೆಲು ತಾಲ್ಲೂಕಿನ ಪೊರಮಾಮಿಳ್ಳ ಗ್ರಾಮದ ಜೀರ್ಣ ಭೈರವ ದೇವಾಲಯದ ಎದುರಲ್ಲಿ ನಟ್ಟ ಎರಡು ಕಲ್ಲು ಹಲಗೆಗಳಲ್ಲೊಂದು ಶಾಸನವಿದೆ. 117 ಪಾದಗಳ ಶಾಸನ, ಸಂಸ್ಕೃತ, ಪಧ್ಯಾತ್ಮಕ

ವಿಜಯನಗರ ಮೊದಲನೆ ರಾಜಮನೆತನದ ಮೊದಲನೆ ಬುಕ್ಕನ ಮಗ ಭಾಸ್ಕರ ಅಥವಾ ಭವದೂರನೆಂಬವ ಪೂರ್ವಭಾಗದ ಮಾಂಡಲಿಕನಾಗಿ ಉದಯಗಿರಿಯಲ್ಲಿ ಆಳುತ್ತಿದ್ದ. ಅವನು "ಅನಂತರಾಜ ಸಾಗರ"ವನ್ನು ನಿರ್ಮಿಸಿದ. ಕೆರೆಗಳನ್ನು ಕಟ್ಟಿಸುವುದು, ಭಾವಿಗಳನ್ನು ಸವೆಸುವುದು, ನಾಲಾ ಕಾರ್ಯಗಳನ್ನು ಕೈಗೊಳ್ಳುವುದು ಪ್ರಾಚೀನ ಭಾರತದಲ್ಲಿ ಜೀವನದ ಪರಮ ಧರ್ಮವಾಗಿದ್ದಂತೆ ಕಂಡುಬರುತ್ತದೆ.

"ಹೇಮಾದ್ರಿ ಕೃತಿ ಮಾರ್ಗೇಣ
ಕುರ್ವ(ನ್ದ್ವಾ)ನಾನ್ಯನೇಕಶಃ !
ಜಲದಾನ ಪ್ರಸಂಗೇನ
ಶ್ರುತವಾನ್ ಫಲಮುತ್ತಮಂ ॥22॥

ಅಪೋವಾ ಇದಗುಂಸರ್ವ
ಮಿತ್ಯಾಮ್ನಾಯ ಪ್ರಮಾಣತಃ ।
ಜಲಾದೇವಾನ್ನ ಸಂಭೂತಿ
ರನ್ನಂ ಬ್ರಹ್ಮೇತಿಚ ಶೃತಃ ॥23॥

ಚರಾಚರ ಜಗದ್ಬೀಜಂ
ಜಲಮೇವ ನ ಸಂಶಯಃ
ಕಿಂ ಪುನರ್ಬಹುನೋಕ್ತೇನ
ಜಲಾಧಿಕ್ಯಂ ವದಾಮ್ಯಹಂ ॥24॥

ಗಂಗಾಧರೋ ಹರಸ್ಯೋಪಿ
ವಿಷ್ಣುರಂಭೋಧಿ ಮಂದಿರಃ
ಬ್ರಹ್ಮಾ ಜಲಜ ಸಂಭೂತ
ಸ್ತಸ್ಮಾತನಿರ್ವಾಧಿಕಂ ಜಲಂ ॥25॥

ಪ್ರಪಾ ಕೂಪಶ್ಚ ವಾಪೀಚ
ಕುಲ್ಯಾ ಪದ್ಮಾಕರಸ್ತಥಾ ।
ಉತ್ತರೋತ್ತರ ತಸ್ತೇಷಾಂ
ಕೋಟಿಕೋಟ್ಯಾಧಿಕಂ ಫಲಂ ॥26॥

ಚರಾಚರ ಜಗದ್ರಕ್ಷಾ
ಯತ್ತಟಾಕಾಂಬುನಾ ಭುವಿ ।
ತಸ್ಯ ಪುಣ್ಯಫಲಂ ವಕ್ತು
ಮಶಕ್ತಃ ಕಮಲಾಸನಃ ॥27॥

ಇತ್ಯುತ್ತಮಂ ಫಲಂ ಶ್ರುತ್ವಾ
ಭವದೂರ ಮಹೀಪತಿಃ ।
ತಟಾಕಮಾತೃಕಾಮುರ್ವೀಂ
ಧರ್ಮಾತ್ಮಾ ಕರ್ತುಮುದ್ಯತಃ ॥28॥

'ಚರಾಚರ ಜಗದ್ವೀಜಂ ಜಲಮೇವ ನಸಂಶಯಃ' ಎಂಬ ಒಂದು ಮಾತೇ ಸಾಕು ! ಜಲಸೌಕರ್ಯ ಕಲ್ಪಿಸುವುದು ಮಹಾಧರ್ಮವೆಂದು ಹಿಂದಿನವರು ಭಾವಿಸಿ ವರ್ತಿಸಿದುದರಲ್ಲಿ ಏನಿದೆ ಆಶ್ಚರ್ಯ. "ಜಲದಿಂದಲೇ ಅನ್ನ. ಅನ್ನವೇ ಬ್ರಹ್ಮ" ಎಂತಹ ದೃಷ್ಟಿ ! ಇಹ-ಪರಗಳ ಬಾಂಧವ್ಯ ಕಲ್ಪನೆ, ಊಹಾತೀತ !

ಈ ಕೆರೆಯನ್ನು ಕಟ್ಟಿಸಲು ಎರಡು ವರ್ಷಗಳು ಹಿಡಿದವು. ಪ್ರತಿದಿನವೂ ಒಂದು ಸಾವಿರ ಮಂದಿ ಕೆಲಸ ಮಾಡಿದರು. ಕಟ್ಟೆ ತೂಬುಗಳಿಗಾಗಿ ಕಲ್ಲು ತರಲು ಒಂದು ನೂರು ಗಾಡಿಗಳನ್ನು ನೇಮಿಸಿದ್ದರಂತೆ !!

"ಧನಧಾನ್ಯವ್ಯಯ ಸ್ವಾತ್ರ
ಸಂಖ್ಯಾನ್ಯೈವತು ವಿದ್ಯತೆ"

ಆದ ವೆಚ್ಚಕ್ಕೆ ಲೆಕ್ಕವೇ ಇಲ್ಲವಂತೆ ! ಇಲ್ಲಿ ಇನ್ನೊಂದಂಶವನ್ನೂ ತಿಳಿಸುವುದು ಸೂಕ್ತವೆನಿಸುತ್ತದೆ. ತಟಕ ನಿರ್ಮಾಣದಲ್ಲಿ ಹನ್ನೆರಡು ಅಂಗಗಳುಂಟೆಂದೂ, ಮುಂದಿನವರ ಉಪಕಾರಕ್ಕಾಗಿ ಅವುಗಳನ್ನಿಲ್ಲಿ ಕೊಡಲಾಗಿದೆಯೆಂದೂ ಶಾಸನದಲ್ಲಿ ಹೇಳಿದೆ.

"ಧರ್ಮಾಢ್ಯೋ ಧನವಾನ್ ಸುಖೀ
ಸ್ಥಿಯಶೋ ದ್ರವ್ಯಾಭಿಲಾಷೀ ನೃಪಃ
ಪಾಥಶ್ಯಾಸ್ತ್ರ ವಿದಗ್ರಜಶ್ಚ ದೃಢಮೃ
ತ್ಸಂಶೋಭಿತಾ ಚೋರ್ವರಾ,
ಪಾಧುರ್ಯಾಂಬುವಹ ತ್ರಿಯೋಜನ ನದೀ
ತದ್ಯೋಗ ಖಂಡೋ ಗಿರಿಃ
ಸೇತುಸ್ತತ್ರ ವಿನಿರ್ಮಿತೋ ಘನ ಶಿಲಾ
ಮಿತ್ಯಲ್ಪ ದೀರ್ಘ ಸ್ಥಿರ"
"ಶೃಂಗೌ ಬಾಹ್ಯ ಫಲ ಸ್ಥಿರಾ ಪರಿಹೃತೌ
ವಿಸ್ತೀರ್ಣ ನಿಮ್ನೋದರಂ
ಉದ್ವಾಯಾಮ ದೃಷತ್ಸ್ವನಿಶ್ಚ ನಿಕಟ
ಕ್ಷೇತ್ರಂ ಫಲಾಢ್ಯಂ ಸಮಂ,
ಅದ್ರಿ ಸ್ಥಾನ ದೃಢ ಭ್ರಮಾ ಜಲಗತಿ,
ಸ್ತತ್ಕರ್ಮಮತ್ಯವ್ರಜ,
ಶ್ವೇದೃಗ್ ದ್ವಾದಂ ಸಾಧನೈಶ್ಚ ಸುಲಭಃ
ಶ್ರೇಷ್ಠಸ್ತಟಾಕೋ ಭುವಿ" ॥

ಹಾಗೆಯೇ ಆರು ದೋಷಗಳನ್ನು ಸೂಚಿಸಲಾಗಿದೆ:

ಸೇತೋಶ್ಚ ಜಾಲಂ
ಜಲಮೂಷರೋರ್ವೀ

ದ್ವಿರಾಜ ಸಂಘಾ, ವಥ
ಮಧ್ಯಕೂರ್ಮಂ
ಅಲ್ಪಾಂಬು ಭೂಮಿ
ಸ್ತರ ಮಲ್ಪ ಭೂಮಿ
ಸ್ತೋಯಾಧಿಕಂ ಚಾತ್ರ
ಹಿ ದೋಷ ಷಟ್ಕಂ"

ಹದಿನಾಲ್ಕನೆಯ ಶತಮಾನದ ದಕ್ಷಿಣ ಭಾರತದ ಜೀವವಿಜ್ಞಾನ ಚಿತ್ರಕ್ಕಿದೊಂದು ಉದಾಹರಣೆ.

"ಧರ್ಮೋ ರಕ್ಷತಿ ರಕ್ಷಿತಃ" ಇದು ಭಾರತದ ಸನಾತನ ಜೀವನಧರ್ಮದ ಆದರ್ಶ. 'ಧರ್ಮ' ಎಂಬ ಮಾತಿನ ಅರ್ಥವ್ಯಾಪ್ತಿ, ಮೂಲ "ಜಾತಿ" ಎಂದಲ್ಲ; ನಿಸರ್ಗ ಪ್ರಕೃತಿ ಸಿದ್ಧವಾದ ಸಹಜತೆ; ಅದೇ ನಿಯಮ, ವಿಧಿ, ನೀತಿ, ಇತ್ಯಾದಿ. ಅದೇ "ಧರ್ಮ" ಪದದ ವ್ಯಾಖ್ಯೆ. ವಿಜಯನಗರ ಸಾಮ್ರಾಜ್ಯದ ಹುಟ್ಟಿನ ಆದರ್ಶ-ಅಪೇಕ್ಷೆಗಳು ಭಾರತೀಯ ಪರಂಪರೆಯ ಆರ್ಷೇಯ ಆದರ್ಶ ಜೀವನ ಸಂಸ್ಕೃತಿಯನ್ನು ಉಳಿಸಿ ಕಾಪಾಡುವುದೇ ಆಗಿತ್ತು. ಈ ಸಂಕಲ್ಪದ ನೆಲೆಯ ಅದು ನಂಬಿ ನಡೆದ ಹಾದಿ "ಲೋಕಾಸ್ಸಮಸ್ತಾಸ್ಸುಖಿನೋಭವಂತು" ಎಂಬ ಆದರ್ಶದ್ದು. ಜೀವಲೋಕಕ್ಕೆ ನೀರು ಅತ್ಯಗತ್ಯ. "ಆಪಃ ಪುನಂತು ಪೃಥಿವೀಂ ಪೃಥ್ವೀ ಪೂತಾ ಪುನಾತು ಮಾಂ" - ಎಂದು ಪ್ರತಿಯೊಬ್ಬನೂ ನಿತ್ಯ ಆತ್ಮ ಸಂಕಲ್ಪ ಮಾಡಿಕೊಳ್ಳುತ್ತಿದ್ದ ಭಾರತದಲ್ಲಿ ಅದು ಅವನ ದಿನನಿತ್ಯದ ಮೊದಲ ಮಂತ್ರ ಆಗಿತ್ತು. ಅದರಂತೆ ವಿಜಯ ನಗರದ ಪ್ರಭುಪರಂಪರೆ ದೇಶಕ್ಕೆ ಎಲ್ಲೆಡೆ ನೀರು ದೊರಕಿಸುವ ಕೆಲಸಕ್ಕೆ ತೊಡಗಿತು.

ದಕ್ಷಿಣ ಭಾರತದ ಕಕ್ಷೆಯಲ್ಲಿ ಪ್ರಾಚೀನ ಕಾಲದ ಕೆರೆಗಳ ನಿರ್ಮಾಣದತ್ತ ಗಮನ ಹರಿಸಿದಾಗ ಭಾರತದಲ್ಲೇ ಅತ್ಯಂತ ಪ್ರಾಚೀನ-ಪ್ರಥಮ ನಿರ್ಮಿತಕೆರೆ, ಸೌರಾಷ್ಟ್ರದಲ್ಲಿ ಕ್ಷಾತ್ರಪ ರುದ್ರದಾಮನ್ ಕಟ್ಟಿಸಿದ್ದು. ಇದಾದ ಮೇಲೆ "ತಟಾಕ"ಗಳನ್ನು ನಿರ್ಮಿಸಿದವರು ಶಾತವಾಹನರು. ಪ್ರಸ್ತುತ "ಅನಂತರಾಜಸಾಗರ" ಕೆರೆ ಇರುವ ಕಡಪ ಜಿಲ್ಲೆಯ ಸನಿಹದಲ್ಲೇ, ಪಕ್ಕದಲ್ಲೇ ಬಳ್ಳಾರಿ ಜಿಲ್ಲೆ. ಅಲ್ಲಿ ಚಿನ್ನ ಕಡಬೂರು ಎಂಬ ಹಳ್ಳಿಯ ಹತ್ತಿರ "ಮ್ಯಾಕದೋಣಿ" ಎಂಬ ಗ್ರಾಮ. ಅಲ್ಲಿ ಬಟ್ಟ ಬಯಲಿನಲ್ಲಿದ್ದ ಒಂದು ದೊಡ್ಡ ಕಲ್ಲುಗುಂಡು. ಕೆಂಬಣ್ಣದ ಕಲ್ಲು. ಅದರ ಮೇಲೆ ಬ್ರಾಹ್ಮೀ ಅಕ್ಷರಗಳ ಶಾಸನವೊಂದು ಪತ್ತೆ ಆಯಿತು. ನಾಲ್ಕು ಸಾಲುಗಳಲ್ಲಿ ಶಾಸನ ಬರೆದಿತ್ತು. (ಆ ಗ್ರಾಮ ಅದೋಣಿಗೆ ಉತ್ತರಕ್ಕೆ ನಾಲ್ಕು ಮೈಲಿ ದೂರದಲ್ಲಿದೆ)

ಸಿದ್ಧಂ ॥ ರಾಜ್ಞೋ ಸಾತವಾಹನಾನಾಂ ಸಿರಿ ಪುಲು ಮಾವಿಸ ಸವ 8 ಹೇಮ 2 ದಿವ1
[ಮಸ] ಮಹಾ ಸೇನಾಪತಿಸ ಖಂದ [ನಾ] ಕಸ ಜನಪದೇ ಸ [ಾ]ತವಾಹನಿ ಹಾರೇ
ಮಿಕಸ ಕುಮಾರದತಸ ಗಾಮೇ ವೇಪುರಕೆ ವಥವೇನ ಗಹಪತಿಕೇನ [ಕೊಂ] ತಾನಂ
ತಳಾಕಂ ಖಾನಿತಂ ॥ [*E.I.,* Vol. XIV, No. 9]

ಶಾತವಾಹನರ ಈ ಕೆರೆ ಈಗ ಕಣ್ಮರೆಯಾಗಿದೆಯಾದರೂ ಶಾಸನದ ದಾಖಲೆ ಪ್ರಾಮಾಣಿಕ. ಇಲ್ಲಿ ಕೆರೆ ಇದ್ದದ್ದು ಸತ್ಯ. ಇಲ್ಲಿ ಹೇಳಿರುವ "ಪುಲುಮಾವಿ" "ವಾಸಿಷ್ಠೀಪುತ್ರ ಸಿರಿ ಪುಲಮಾವಿ" ಎಂದು ಗುರುತಿಸಲಾಗಿದೆ. ಅವನ ಕಾಲ ಕ್ರಿ.ಶ. 135 (ಶಕವರ್ಷ 213).

ಈ ಹಿನ್ನೆಲೆಯನ್ನು ಗಮನಿಸಿದಾಗ ಭಾಸ್ಕರಭವದೂರನ ಕೆರೆಯ ಸ್ಥಾನ ನಿರ್ಧಾರದ ಔಚಿತ್ಯವನ್ನು ಮೆಚ್ಚಬೇಕಾಗುತ್ತದೆ. ವಿಜಯನಗರ ಸಾಮ್ರಾಜ್ಯದ ಆರಂಭಕಾಲದಲ್ಲೇ ಕೈಗೊಂಡ ಈ ಜನಹಿತ-ಜಲ ವಿತರಣ ಕಾರ್ಯ ಇಂದಿಗೂ ಸಾಗುತ್ತಿದೆ !

ಆಧುನಿಕ ತಂತ್ರಜ್ಞಾನದ ನೆಲೆಯಲ್ಲಿ ಈ ಹಿಂದಿನ ಬೃಹತ್ ನಿರ್ಮಿತ "ಅನಂತರಾಜಸಾಗರ" ತಂತ್ರ ವಿಧಿ-ವಿಧಾನಗಳ ನೆಲೆಯಲ್ಲಿ ಇಂದಿನ ಅಧ್ಯಯನಶೀಲರಿಗೆ ಒಂದು ಮುಖ್ಯ ಮಾದರಿಯೆಂದು ಒಪ್ಪಬೇಕು. ಪ್ರಸ್ತುತ ತಂತ್ರಜ್ಞಾನ ಶಿಕ್ಷಣದಲ್ಲಿ ಇಂತಹ ನಿರ್ಮಿತಿಗಳ ಪರಾಮರ್ಶೆಗೆ ಸೂಕ್ತ ಕ್ರಮ ಕೈಗೊಳ್ಳಬೇಕು.

ವಿಜಯನಗರ ಸಾಮ್ರಾಜ್ಯದ ಕಾಲವನ್ನು "ಪ್ರಾಚೀನ ಭಾರತದ ಪುನರುಜ್ಜೀವನ ಕಾಲ" ಎಂದು ಅನೇಕರು ಗುರುತಿಸುತ್ತಾರೆ. ಆ ಸಾಮ್ರಾಜ್ಯದ ಉದಯವೇ ಭಾರತದ ಪ್ರಾಚೀನ ಜೀವನ ಸಂಸ್ಕೃತಿಯ ಪುನರುದ್ದೀಪನೆಯ ಮುಖ್ಯ ಆದರ್ಶವಾಗಿತ್ತೆಂದು ಹಲವರ ಅಭಿಪ್ರಾಯ. ಈ ವಿಶ್ಲೇಷಣೆಗಳ ಔಚಿತ್ಯಕ್ಕೆ ಕಾರಣವಿಲ್ಲದೆ ಇಲ್ಲ; ದಕ್ಷಿಣ ಭಾರತದ ಇತಿಹಾಸ ಒಂದು ಹೊಸ ಸಂಕಲ್ಪ-ಸಾಧನೆಯತ್ತ ಮುನ್ನಡೆದ ಪರ್ವಕಾಲ ಅದೆಂದು ಹೇಳಿದರೂ ತಪ್ಪಾಗದು. ಪ್ರಾಚೀನತೆಯ ಆದರ್ಶದಲ್ಲಿ ನಂಬಿಕೆಯ ನೋಟ; ಭವ್ಯ ಭವಿಷ್ಯದ ಸೃಷ್ಟಿ ಸಂಕಲ್ಪ - ಇದೇ ಆ ಜನಪದದ ಆದರ್ಶವಾಗಿದ್ದದ್ದು.

ಮಾನವ ಜೀವನ ಇತಿಹಾಸ - ಅವನು ತನ್ನ ಬದುಕಿಗಾಗಿ ಸುಖವಸತಿಯ ತಾಣವನ್ನು ಹುಡುಕುತ್ತ ಹೋದದ್ದು; ನೀರಿನ ಸೌಕರ್ಯ ಇರುವಲ್ಲಿ ನೆಲೆ ನಿಂತದ್ದು - ಇದೆಲ್ಲ ಪ್ರಾಚೀನ ಹೆಜ್ಜೆಗಳು. ನಾಗರಿಕತೆಯನ್ನು ಕಂಡುಕೊಂಡ ಅದೇ ಮಾನವ ನೆಮ್ಮದಿಯ ಬದುಕಿಗೆ ಪ್ರಕೃತಿಯ ಸ್ಥಿತಿ-ಗತಿಗಳನ್ನು ಹೊಂದಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗಿದ. ಈ ಪ್ರಯತ್ನ ಶೀಲತೆಯ ಫಲವೇ ಮನೆ-ಮಠ; ತೋಟ-ತುಡಿಕೆ; ಕೆರೆ, ಬಾವಿ-ಇತ್ಯಾದಿಗಳೆಲ್ಲ. ಈ ಹಿನ್ನೆಲೆಯಲ್ಲಿ ವಿಜಯನಗರ ಸಾಮ್ರಾಜ್ಯ ಇಟ್ಟ ಮೊದಲ "ಜನವಸತಿ ನಿರ್ಮಾಣ ಸಾಹಸದ" ಶಿಲಾ ಶಾಸನವೊಂದರ ಸ್ಥೂಲ ಪರಾಮರ್ಶೆ ಇದು.

ಮಲ್ಲಿಕಾಫರನ ದಂಡೆಯಾತ್ರೆಯಲ್ಲಿ ದಕ್ಷಿಣ ಭಾರತದಲ್ಲಿ ಪ್ರಭುತ್ವ ನಡೆಸಿದ್ದ ಅನೇಕ ರಾಜವಂಶಗಳು ಅವನ ವಿಜಯದಲ್ಲಿ ಮಣ್ಣುಗೂಡಿದವು. ದೇವಗಿರಿ ಯಾದವರಿಂದ ಆರಂಭವಾಗಿ ಓರಂಗಲ್ಲಿನ ಕಾಕತೀಯರು, ದೋರಸಮುದ್ರದ ಹೊಯ್ಸಳರು - ಏಕಕಾಲದಲ್ಲಿ ನೆಲಕಚ್ಚಿ ಇಡೀ ದಕ್ಷಿಣಭಾರತ ಇಸ್ಲಾಮೀ ಪ್ರಭುತ್ವಕ್ಕೆ ಮಣಿಯಬೇಕಾಯಿತು. ಈ ದುಃಖ ಪರಿಸ್ಥಿತಿಯೇ ವಿಜಯನಗರದ ಹುಟ್ಟಿಗೆ "ನಾಂದಿ".

ಹೊಸಸಾಮ್ರಾಜ್ಯ ಸ್ಥಾಪನೆಯ ಸಂಕಲ್ಪ ಸಿದ್ಧಿಗೆ ಮೊದಲು ಜನತೆಯ ನೆಮ್ಮದಿಯ ಜೀವನ್ಕೆ ದಾರಿಮಾಡಬೇಕು; ಅನ್ನ-ನೀರು-ವಸತಿ ಭದ್ರವಾಗಬೇಕು. ಅದಕ್ಕೆ ನಿರಾತಂಕವಾದ ಜಲಸೌಕರ್ಯ ಅತ್ಯಗತ್ಯವಾದದ್ದು. ಇದನ್ನು ಗುರುತಿಸಿಯೇ ಆ ಸಾಮ್ರಾಜ್ಯ ಸ್ಥಾಪನೆಯ ಕಾಲಕ್ಕೇ ಸಿಂಹಾಸನವೇರಿದ ಸಂಗಮ ವಂಶದ ಬುಕ್ಕರಾಯನ ಮಗ, 2ನೇ ಹರಿಹರನ ತಮ್ಮಭಾಸ್ಕರ ಭವದೂರ, ಸಾಮ್ರಾಜ್ಯದ ಪೂರ್ವಭಾಗದ ಪ್ರಾಂತದಲ್ಲಿ ರಾಜಪ್ರತಿನಿಧಿಯಾಗಿ ಉದಯಗಿರಿಯಲ್ಲಿ ನೆಲೆನಿಂತು ಆಳುತ್ತಿದ್ದ. ದಗ್ಧವಾಗಿ ಹೋಗಿದ್ದ ಸಾಮ್ರಾಜ್ಯ ವಿಸ್ತಾರವನ್ನು ಮತ್ತೆ ಸುಸ್ಥಿತಿಗೆ ತರುವತ್ತ ಆ ಕಾಲಘಟ್ಟದಲ್ಲಿ ಕೈಗೊಂಡ ಪುನರ್ನಿರ್ಮಾಣ ಕಾರ್ಯಗಳು ಗಮನಾರ್ಹವಾಗುತ್ತವೆ. ಮುಸಲ್ಮಾನರ ಧಾಳಿಯಲ್ಲಿ ಭಗ್ನ ಭಂಗವಾಗಿ ಹೋಗಿದ್ದ ದೇವಾಲಯಗಳ ಜೀರ್ಣೋದ್ಧಾರ ಒಂದು ಕಡೆ; ದಿಕ್ಕೆಟ್ಟು ಹೋಗಿದ್ದ ಜನಜೀವನಕ್ಕೆ ನೆಮ್ಮದಿ ನೆಲೆಗೊಳಿಸುವ ಕರ್ತವ್ಯ; ನಿರಾಪದ ಜೀವನಕ್ಕೆ ಅಗತ್ಯವಾದ ವೃತ್ತಿ ಅನುಕೂಲಗಳನ್ನು ದೊರಕಿಸುವುದು ಇನ್ನೊಂದು ಕಡೆ; ಎಲ್ಲ ಕಡೆ

ಕುಡಿಯಲು ನೀರು, ಪ್ರಮುಖವಾಗಿ ವ್ಯವಸಾಯಕ್ಕೆ – ಅನ್ನ ಬೆಳೆಯುವುದೆ ಅತಿಮುಖ್ಯ. "ಅನ್ನವೇ ಪರಬ್ರಹ್ಮ" ಎಂದು ಭಾರತೀಯ ಪರಂಪರಾಗತ ಧರ್ಮ ಸಂಹಿತೆಯ ಸಂದೇಶ. "ಈ ಅನ್ನವನ್ನು ಹೆಚ್ಚು ಹೆಚ್ಚಾಗಿ ಬೆಳೆಯಿರಿ; ಅನ್ನವನ್ನು ಬಿಸುಡಬೇಡಿ; ಅನ್ನವನ್ನು ಹಳಿಯಬೇಡಿ" – ಎಂದೆಲ್ಲ ಉಪನಿಷತ್ತು ಹೇಳುತ್ತದೆ. ಆ ಆದರ್ಶ ಸಾಧನೆಯತ್ತ ವಿಜಯನಗರ ಸಂಕಲ್ಪ ಮಾಡಿದ್ದು; ಜಲದಾನಕ್ಕಿಂತ ಮಿಗಿಲಾದ ಧರ್ಮಕಾರ್ಯ ಬೇರೆ ಯಾವುದೂ ಇಲ್ಲವೆಂದು ಆ ಕಾರ್ಯಸಾಧನೆಗೆ, ರಾಜಪ್ರತಿನಿಧಿ ಭಾಸ್ಕರ ಭವದೂರ ಕ್ರಿಯಾಶೀಲನಾದ; ಕೆಲಸ ಆರಂಭಿಸಲು ಆಜ್ಞೆ ಮಾಡಿದ. ಸಾಮ್ರಾಜ್ಯದ ದಕ್ಷಿಣ ಪೂರ್ವಭಾಗ, ಹೆಚ್ಚು ಮಳೆಯಾಗದ ಒಣಪ್ರದೇಶ. ವ್ಯವಸಾಯಕ್ಕೆ ನೀರಿನ ಸೌಲಭ್ಯವಿಲ್ಲದೆ ಸಾಧ್ಯವೇ ಇಲ್ಲ. ಮಳೆಯನ್ನು ನಂಬಿ ಬೆಳೆ ಬೆಳೆಯುವುದು ಕನಸು. ಅದಕ್ಕಾಗಿ ಅಲ್ಲಿ ಭವದೂರ ಒಂದು ದೊಡ್ಡ ಕೆರೆ ಕಟ್ಟಿಸಲು ನಿರ್ಧರಿಸಿದ. ಜನಕ್ಕೆ ಕಡಿಯುವ ನೀರಿಗೂ, ಬೇಸಾಯಕ್ಕೆ ಅಗತ್ಯ ನೀರಾವರಿಗೂ ಅನುಕೂಲವಾಗುವಂಥ "ಅನಂತರಾಜಸಾಗರ"ವೆಂಬ ದೊಡ್ಡ ಕೆರೆಯ ನಿರ್ಮಾಣಕ್ಕೆ ಆಜ್ಞೆ ಮಾಡಿದ.

ಆಂಧ್ರ ಪ್ರದೇಶದ ಕಡಪ ಜಿಲ್ಲೆ ಬದವೇಲು ತಾಲ್ಲೂಕು ಪೊರುಮಾಮಿಳ್ಳ ಎಂಬ ಗ್ರಾಮದಲ್ಲಿ ಜೀರ್ಣಸ್ಥಿತಿಯ ಭೈರವ ದೇವಾಲಯದ ಎದುರಿಗಿದ್ದ ಎರಡು ಕಲ್ಲು ಹಲಗೆಗಳಲ್ಲಿ ಕೊರೆಯಲಾಗಿದ್ದ ಶಾಸನವನ್ನು ಗುರುತಿಸಿ, ಅದರ ಒತ್ತಚ್ಚನ್ನು 1903ರಲ್ಲಿ ಮದರಾಸಿನಲ್ಲಿದ್ದ ಪುರಾಲೇಖ ಇಲಾಖೆಯು ತೆಗೆದು ತನ್ನ 1907–08ರ ವಾರ್ಷಿಕ ವರದಿಯಲ್ಲಿ ಭಾಗ II, ಪುಟ 235ರಲ್ಲಿ ಪ್ರಕಟಿಸಿದೆ.

ಶಾಸನವು ಸನಿಹದಲ್ಲೇ ಇರುವ "ಅನಂತರಾಜಸಾಗರ" ನಿರ್ಮಾಣದ ಪೂರ್ಣ (ತಾಂತ್ರಿಕ) ಮಾಹಿತಿಯನ್ನು ಒಳಗೊಂಡಿದೆ. ಕೆರೆಯ ನಿರ್ಮಾಣಕ್ಕೆ ಪ್ರಶಸ್ತವಾದ ಜಾಗವನ್ನು ಆಯ್ಕೆಮಾಡುವುದರಿಂದ ಆರಂಭಿಸಿ, ಪ್ರಕೃತಿ ಸಹಜವಾಗಿದ್ದ ಬೆಟ್ಟಗಳ ಸಾಲನ್ನೂ ಬಳಸಿಕೊಂಡು, ಅವುಗಳ ಮಧ್ಯೆ ಅಡ್ಡ ಕಟ್ಟೆಯನ್ನು ನಿರ್ಮಿಸಿ ವಿಶಾಲ ವಿಸ್ತಾರದಲ್ಲಿ ನೀರು ನಿಲ್ಲುವಂತೆ ಮಾಡಲಾಗಿದೆ. ಈ ಕೆರೆಯು ಶಾಸನ ಇರುವಲ್ಲಿಂದ ಸುಮಾರು ಎರಡು ಮೈಲಿ ದೂರದಲ್ಲಿದೆ. ಕಟ್ಟೆಯು 4,500 ಅಡಿಗಳ ಉದ್ದ ಇದ್ದು, ಬೆಟ್ಟಗಳನ್ನೂ ಒಳಗೊಂಡು 14,000 ಅಡಿಗಳ ಉದ್ದ ಇದೆ. ಕೆರೆಯ ಆಳವಾದ ಭಾಗದಲ್ಲಿ ಕಟ್ಟೆಯ ತಳಭಾಗ 150 ಅಡಿ ಅಗಲವಿದ್ದು ಮೇಲ್ಭಾಗ 12 ಅಡಿ ಅಗಲವಾಗಿದೆ. ಪಾಯವು 33 ಅಡಿ ಆಳದ್ದಾಗಿದೆ. ಮಣ್ಣಿನ ಈ ಕಟ್ಟೆಯನ್ನು ಕಡಪ ಕಲ್ಲುಗಳಿಂದ ಮುಚ್ಚಿ ಭದ್ರಪಡಿಸಲಾಗಿದೆ. ಕಟ್ಟೆಗೆ ನಾಲ್ಕು ತೂಬುಗಳಿವೆ.

ಕೆರೆಯ ನಿರ್ಮಾಣಕ್ಕೆ "ಹೇಮಾದ್ರಿ ಪಂಥಿ" ಎಂಬ ಶಾಸ್ತ್ರ ಗ್ರಂಥವನ್ನು ಮೂಲಾಧಾರವನ್ನಾಗಿ ಬಳಸಲಾಗಿದೆ. ಈ "ಹೇಮಾದ್ರಿ ಪಂಥಿ" ದೇವಗಿರಿ ಯಾದವರ ಮಂತ್ರಿಯೂ ಆಗಿದ್ದ ಮೇಧಾವಿ, ಕವಿ–ತಂತ್ರಜ್ಞ, ಹೇಮಾದ್ರಿ ಬರೆದ ಶಾಸ್ತ್ರ ವಿಧಿವಿಧಾನ ಗ್ರಂಥ. ಇಂದಿಗೂ ಮಹಾರಾಷ್ಟ್ರದಲ್ಲಿ ಈ ಮಾರ್ಗದಲ್ಲೇ ದೇವಾಲಯ ನಿರ್ಮಾಣವಾಗುತ್ತದೆ. ಪ್ರಸಿದ್ಧವಾದ ಕೊಲ್ಹಾಪುರದ ಮಹಾಲಕ್ಷ್ಮಿ ದೇವಾಲಯ "ಹೇಮಾದ್ರಿಪಂಥಿ" ಶೈಲಿಯದು. ದೇವಗಿರಿ ಯಾದವರ ಆಶ್ರಯದಲ್ಲಿದ್ದ ಶಾರ್ಙ್ಗದೇವನೆಂಬಾತ ಬರೆದ ಪ್ರಸಿದ್ಧ "ಸಂಗೀತ ರತ್ನಾಕರ" ಗ್ರಂಥವೇ "ಕರ್ನಾಟಕ ಸಂಗೀತ"ದ ಆಧಾರ ಗ್ರಂಥ. ಇದು ಪ್ರಾಸಂಗಿಕ ವಿಚಾರವಷ್ಟೆ; ಆಸಕ್ತರ ಗಮನ ಸೆಳೆಯಲು ಉಲ್ಲೇಖಿಸಲಾಗಿದೆ.

ದೇವಗಿರಿ ಯಾದವರ ಆಳ್ವಿಕೆಗೆ ಗುಲಬರ್ಗಾ, ಬಿಜಾಪುರ ಮತ್ತು ಬೀದರ್ ಜಿಲ್ಲೆಗಳು ಒಂದು ಕಾಲಕ್ಕೆ ಒಳಪಟ್ಟಿದ್ದದ್ದು, ಸೇವುಣರು ಮೂಲತಃ ಕರ್ನಾಟಕರೆಂಬುದು ನಿರ್ವಿವಾದದ ಸಂಗತಿ. ಪ್ರಾಚೀನ ಭಾರತದ ತಂತ್ರವಿಜ್ಞಾನ ಗ್ರಂಥಗಳು ಎಷ್ಟೋ ಇವೆ. ಭಾರತೀಯ ಪ್ರಕೃತಿ ಅನ್ವೇಷಣಾ ವಿಚಾರವಿಚಕ್ಷತೆ, ಆನ್ವಯಿಕವಾದ ತಂತ್ರವಿಧಾನಗಳನ್ನು ಗುರುತಿಸಬೇಕಾದ ಕೆಲಸ ಆಗಬೇಕಾಗಿದೆ. ಆ ಕಾಲದ ಮಿತಿಯಲ್ಲಿ ನಡೆದ ವೈಜ್ಞಾನಿಕ ಅನ್ವೇಷಣೆ ಈಗ ಯಾರಿಂದ

ಮುಂದೆ ಸಾಗಬೇಕು? ಪಾಶ್ಚಾತ್ಯರತ್ತಲೇ ನೋಡುತ್ತ ನಾವು ಕೊಡಬೇಕೇ, ಇಲ್ಲವೇ ಸ್ವವಿವೇಕ–ವಿವೇಚನೆಯಲ್ಲಿ, ಸ್ವಶಕ್ತಿ ಸಂಪನ್ನರಾಗಬೇಕೇ? ಎಂಬ ಪ್ರಶ್ನೆ ಜನತೆಯ ಮುಂದೆ ನಿಲ್ಲುತ್ತದೆ. ಜಲ ಸಮ್ಮರ್ದ, ಕಟ್ಟೆಯ ಧಾರಣಶಕ್ತಿ, ಇತ್ಯಾದಿಯಾದ ವೈಜ್ಞಾನಿಕ ವಿಚಾರಗಳ ಅಧ್ಯಯನ ದೇಶಗಲ್ಲಿ ಸ್ವತಂತ್ರವಾಗಿ ನಡೆಯಬೇಕಲ್ಲವೇ? "ಅನಂತರಾಜಸಾಗರ" ನಿರ್ಮಾಣವಾದದ್ದು ಶಾಸನೋಕ್ತ ಶಕ 1291 (ಗತ) ಕಲಿಯುಗ 4470. ಸೌಮ್ಯ ಸಂವತ್ಸರದಲ್ಲಿ ಅದು 15, ಅಕ್ಟೋಬರ್ ಸೋಮವಾರ ಕ್ರಿ.ಶ. 1369ರಂದು, ಇಂದಿಗೆ 720 ವರ್ಷಗಳ ಹಿಂದೆ. ನಿರ್ಮಾಣಗೊಂಡ ದೊಡ್ಡ ಕೆರೆ ಅದು. ಪೂರ್ಣ ಭಾರತೀಯ ತಂತ್ರಜ್ಞಾನ–ಮಾನವಶಕ್ತಿ ಸಂಪನ್ಮೂಲದ ಸೃಷ್ಟಿ !

ಶಾಸನವಿರುವ ಪೊರುಮಾಮಿಳ್ಳ ಗ್ರಾಮಕ್ಕೆ ಪೂರ್ವದ ಕಡೆ ಎರಡು ಮೈಲಿ ಆಚೆಗಿದೆ ಈ "ಅನಂತರಾಜಸಾಗರ" ಕೆರೆ ಅಂಡಾಕಾರವಾಗಿ ಹೆಚ್ಚು ನೀಳವಾಗಿ ಏಳು ಮೈಲಿಗಳ ಉದ್ದವಿದ್ದು ಮಧ್ಯಭಾಗ ಎರಡೂವರೆ ಮೈಲಿ ಅಗಲವಾಗಿದೆ. ಕೆರೆ ಕಟ್ಟೆ ಪಶ್ಚಿಮದ ಕಡೆ ಸಾಲು ಬೆಟ್ಟಗಳಿಂದ ಕೂಡಿದ್ದು ಉತ್ತರ–ದಕ್ಷಿಣವಾಗಿ ಪೊರುಮಾಮಿಳ್ಳದಿಂದ ಬದಮೇಲುವರೆಗೆ ಸಾಗಿದೆ. ಕೆರೆಯು ಶ್ರೀಪರ್ವತ (ಶ್ರೀ ಶೈಲ)ದ ದಕ್ಷಿಣಕ್ಕೆ ಪವಿತ್ರವೂ ಪ್ರಸಿದ್ಧವೂ ಆದ ಆಹೋಬಲಕ್ಕೆ ಪೂರ್ವಕ್ಕೆ 18 ಮೈಲಿಗಳ ದೂರದಲ್ಲಿದೆ. ಕೆರೆಗೆ ಮಳೆಗಾಲದ ನೀರಿನ ಆಸರೆಯ ಜೊತೆಗೆ ಮಲ್ದೇವಿ ಎಂಬ ಹೊಳೆಯೊಂದು ಹರಿದು ಬಂದು ಸೇರುತ್ತದೆ. ಶಾತವಾಹನರ ಅನಂತರ, ನದಿಗಳ ಆಸರೆ, ಮಳೆ ಆಸರೆ ನಂಬಿರುವ ದಕ್ಷಿಣ ಭಾರತದ ವ್ಯಾಪ್ತಿಯಲ್ಲಿ ನಿರ್ಮಾಣಗೊಂಡ ಬೃಹತ್ ಕೆರೆ ಇದು ಎಂಬುದು ಗಮನಾರ್ಹ. ಆಧುನಿಕ ಪಾಶ್ಚಾತ್ಯ ತಂತ್ರ–ಯಂತ್ರ ವಿಧಾನಗಳ ನೆರವಿನಿಂದ ಈಗ ಬೃಹತ್ ಜಲಸಾಗರಗಳು ನಿರ್ಮಾಣಗೊಂಡಿವೆ. ಕಲ್ಲು–ಕಬ್ಬಿಣ ಸಿಮೆಂಟು ಬಳಕೆಯಾಗುತ್ತಿದೆ. ಆಗ್ಗೆ ಕಟ್ಟೆ ಕಟ್ಟಿದ್ದು ಬರಿ ಮಣ್ಣಿನಲ್ಲಿ–ಕಲ್ಲಿನಲ್ಲಿ ! ತಲೆ ಮೇಲೆ ಕಲ್ಲು ಮಣ್ಣು ಹೊತ್ತು ಜನ ದುಡಿದು ಕಟ್ಟಿದ್ದು ! ಇಂದಿಗೂ ಅದು ಸುಸ್ಥಿತಿಯಲ್ಲಿದೆ. ಸಾವಿರಾರು ಎಕರೆ ಜಮೀನುಗಳಿಗೆ ನೀರುಣಿಸುತ್ತಿದೆ. ಜನಕ್ಕೆ ಕುಡಿಯಲು ನೀರನ್ನು ಪೂರೈಸುತ್ತಿದೆ.

41

ವಿಜಯನಗರ ಅರಸರ ಶಾಸನಗಳಲ್ಲಿ ಸಿರಾ ತಾಲ್ಲೂಕಿನ ಕೆರೆ ನೀರಾವರಿ

ಡಾ॥ ಎನ್. ನಂದೀಶ್ವರ

ಸಮಸ್ತ ಜೀವಕೋಟಿಗೆ ನೀರೇ ಆಧಾರ. ಜಲವಿಲ್ಲದೆ ಜಗವಿಲ್ಲ. ಸಸ್ಯಕುಲ, ಮಾನವಕುಲ ಹಾಗೂ ಪ್ರಾಣಿಗಳ ದೈನಂದಿನ ಚಟುವಟಿಕೆಗಳಿಗೆ ನೀರು ಅತ್ಯವಶ್ಯಕ. ಪ್ರಪಂಚದಲ್ಲಿ ಲಭ್ಯವಿರುವ ಒಟ್ಟು ನೀರಿನಲ್ಲಿ ಸಿಹಿನೀರು ಕೇವಲ ಶೇ 2.61 ರಷ್ಟು ಮಾತ್ರ. ಈ ಅಲ್ಪ ಪ್ರಮಾಣದ ನೀರನ್ನು ಎಷ್ಟರ ಮಟ್ಟಿಗೆ ಜೋಪಾನ ಮಾಡಿ ಸಂರಕ್ಷಿಸಿಕೊಳ್ಳಬೇಕೆಂಬುದನ್ನು ಅರಿಯುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ. ಸಿರಾ ತಾಲ್ಲೂಕಿನಲ್ಲಿ ದೊಡ್ಡ ಜೀವನದಿಗಳಿಲ್ಲ. ಕೆಲವಾರು ಸಣ್ಣ ನದಿಗಳೂ ಅನೇಕ ದೊಡ್ಡ ಹಳ್ಳಗಳೂ ಬೆಟ್ಟಗುಡ್ಡಗಳಲ್ಲಿ ಹುಟ್ಟಿ ಅನೇಕ ಕೆರೆಕಟ್ಟೆಗಳಿಗೆ ನೀರನ್ನು ಒದಗಿಸುತ್ತವೆ. ಈ ನದಿ ಹಳ್ಳಗಳು ಬೇಸಿಗೆ ಮತ್ತು ಅಭಾವ ಕಾಲದಲ್ಲಿ ಬತ್ತಿರುತ್ತವೆ. ಮಳೆಗಾಲದಲ್ಲಿ ಮಾತ್ರ ನೀರುಣಿಸುತ್ತವೆ. ಸುವರ್ಣಮುಖಿ ಈ ತಾಲ್ಲೂಕಿನ ಮುಖ್ಯ ನದಿಯಾಗಿದೆ. ಈ ನದಿಯಿಂದ ಈ ತಾಲ್ಲೂಕಿನ ವ್ಯವಸಾಯಕ್ಕೆ ಸ್ವಲ್ಪ ಮಟ್ಟಿನ ಅನುಕೂಲವಾಗಿದೆ. ಈ ನದಿಗೆ ಅಡ್ಡಲಾಗಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಬೋರನಕಣಿವೆಯಲ್ಲಿ ಅಣೆಕಟ್ಟೆಯನ್ನು 1882–1892ರಲ್ಲಿ ಬರಗಾಲದ ಕಾಮಗಾರಿಯಾಗಿ ನಿರ್ಮಿಸಲಾಗಿದೆ. ಮೆಕಂಜಯವರ ಮೈಸೂರು ಭೂವೈಜ್ಞಾನಿಕ ಹಾಗೂ ಸಂಖ್ಯಾ ಪರಿಶೀಲನಾ ಸಮೀಕ್ಷೆ ವರದಿಯಂತೆ 1799–1806ರಲ್ಲಿ 36 ದೊಡ್ಡ ಕೆರೆಗಳು, 172 ಚಿಕ್ಕ ಹಾಗೂ ಹಾಳಾದ ಕೆರೆಗಳಿದ್ದವೆಂದು ತಿಳಿದುಬರುತ್ತದೆ. ಇಂದು ಸಿರಾ ತಾಲ್ಲೂಕಿನಲ್ಲಿ 195 ಕೆರೆಗಳಿವೆ. ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಕೆರೆಗಳನ್ನು ಹೊಂದಿದ ತಾಲ್ಲೂಕಾಗಿದೆ. ತಾಲ್ಲೂಕಿನ ಕಳ್ಳಂಬೆಳ್ಳ, ಎಲಿಯೂರು, ಲಕ್ಷ್ಮೀಸಾಗರ, ಚಿಕ್ಕಸಂದ್ರ, ಬ್ರಹ್ಮಸಂದ್ರ, ಬೋರಸಂದ್ರ, ಮಾಗೋಡು, ದೊಡ್ಡ ಅಗ್ರಹಾರ, ಭೂಪಸಂದ್ರ, ಚಂಗಾವರ, ಸಿರಾ, ರಾಮಲಿಂಗಾಪುರ, ಬುಕ್ಕಾಪಟ್ಟಣ ಮತ್ತು ಚಿರತಹಳ್ಳಿ ಮುಂತಾದ ದೊಡ್ಡ ಕೆರೆಗಳಿವೆ.

ವಿಜಯನಗರದ ಪ್ರೌಢಪ್ರತಾಪದೇವರಾಯನ ಕಾಲದಲ್ಲಿ ರಚಿತವಾದ ಹಂಪೆಯ ಶಾಸನದಲ್ಲಿ[1] (*ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* 3, ಬಳ್ಳಾರಿ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಶಾಸನ ಸಂ. 69) ಬರುವ ಒಂದು ಪದ್ಯ ಸಾಮಾಜಿಕ ಜೀವನಕ್ಕೆ ಹಿನ್ನೆಲೆಯಾಗಿರಬೇಕಾದ ಉದಾತ್ತ ಸಂಸ್ಕೃತಿಯನ್ನು ಅರ್ಥವತ್ತಾಗಿ ಸೂಚಿಸುತ್ತದೆ. ಪ್ರೌಢಪ್ರತಾಪದೇವರಾಯನ ಮಂತ್ರಿ ಲಕ್ಷ್ಮೀಧರಾಮಾತ್ಯನು ಮಹಾಗಣಪತಿಯನ್ನು ಸ್ಥಾಪಿಸಿ ಅದಕ್ಕೆ ದತ್ತಿಯನ್ನು ಬಿಟ್ಟ ಸಂಗತಿ ಈ ಶಾಸನದಲ್ಲಿ ಬಂದಿದೆ. ಲಕ್ಷ್ಮೀಧರನು ಮಗುವಾಗಿದ್ದಾಗ ಅವನ ತಾಯಿ ಹಾಲೆರೆಯುತ್ತಾ ಅದರೊಂದಿಗೆ ಉದಾತ್ತವಿಚಾರದ ಸಂಸ್ಕೃತಿಯನ್ನು ರಕ್ತಗತವಾಗುವಂತೆ ಎರೆದಳೆಂಬುದನ್ನು ಶಾಸನದ ಕವಿ ಹೀಗೆ ಹೇಳಿದ್ದಾನೆ.

ಕೆಱೆಯಂ ಕಟ್ಟಿಸು, ಬಾವಿಯಂ ಸವಸು, ದೇವಾಗಾರಮಂ ಮಾಡಿಸ
ಜ್ಜೆಱೆಯೊಳ್ಸಿಲ್ಕಿದನಾಥರಂ ಬಿಡಿಸು, ಮಿತ್ರರ್ಗಿಂಬುಕೆಯಿ ನಂಬಿದ
ರ್ಗ್ಗಱೆವೆಟ್ಟಾಗಿರು, ಶಿಷ್ಟರಂ ಪೊರೆಯೆನುತ್ತಿಂತೆಲ್ಲವಂ ಪಿಂದೆ ತಾಂ
ಯೆಂಜದಳ್ಪಾಲೆಱೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ ॥

ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು, ದೇವಾಲಯಗಳನ್ನು ನಿರ್ಮಿಸು, ಬಂಧನಕ್ಕೆ ಸಿಕ್ಕ ಅನಾಥರನ್ನು ಬಿಡಿಸು, ಸ್ನೇಹಿತರಿಗೆ ಸಹಾಯಕನಾಗು, ನಂಬಿದವರಿಗೆ ಆಶ್ರಯದಾತನಾಗು, ಸತ್ಪುರುಷರನ್ನು ರಕ್ಷಿಸು ಎಂದು ಮುಂತಾಗಿ ಅವನ ಕಿವಿಯಲ್ಲಿ ಹೇಳುತ್ತಾ ಹಾಲನ್ನು ಹಾಕಿದಳಂತೆ ಅವನ ತಾಯಿ ! ಎಂತಹ ಅರ್ಥವತ್ತಾದ ಕಲ್ಪನೆ ಕವಿಯದು ! ಲಕ್ಷ್ಮೀಧರಾಮಾತ್ಯನ ಎಲ್ಲ ಸತ್ ಕಾರ್ಯಗಳ ಹಿಂದೆ ಆ ಮಹಾತಾಯಿಯ ಮಹದಾಶಯದ ಆಶೀರ್ವಾದ ಅಮೃತರೂಪದಲ್ಲಿ ರಕ್ತಗತವಾಗಿ ನಿಂತಿರಬೇಕೆಂದು ಹೇಳಿದ ಕವಿ ನಮ್ಮ ಸಂಸ್ಕೃತಿಯ ತಿರುಳನ್ನೇ ಮುಂದೆ ಇಟ್ಟಿದ್ದಾನೆ. ಅಂತಹ ತಾಯಿ ಇಂತಹ ಪುತ್ರ, ಇವರಿಂದ ತಾನೆ ಸಾಮಾಜಿಕ ಜೀವನ ಹಸನಾಗುವುದು !

ಇಂತಹ ಸದಾ ಬರಗಾಲದ ಪ್ರದೇಶದಲ್ಲಿ ವಿಜಯನಗರದ ಅರಸರು ಅನೇಕ ಕೆರೆಗಳನ್ನು ಹೊಸದಾಗಿ ಕಟ್ಟಿಸುವುದರ ಜೊತೆಗೆ ಹಳೆಯ ಕೆರೆಗಳನ್ನು ಜೀರ್ಣೋದ್ಧಾರಗೊಳಿಸಿದ್ದಾರೆ.

ಸಿರಾ ತಾಲ್ಲೂಕಿನಲ್ಲಿ ಮೊದಲಿಗೆ ಕ್ರಿ.ಶ. 788ರಲ್ಲಿ ಗಂಗ ಅರಸರ ಶ್ರೀಪುರುಷನ ಶಾಸನ[3] ದೊರೆಯುತ್ತದೆ. ಗಂಗರಸ ಶ್ರೀಪುರುಷನು ಈ ಹಲ್ಲೂರು ಗ್ರಾಮದ ಕರೆಯನ್ನು ಕಟ್ಟಿಸಿ, ಶಾಸನವನ್ನು ನೆಟ್ಟಂತೆ ಹೇಳಲಾಗಿದೆ. ಈ ಕೆರೆಯನ್ನು ಅದ್ದೆಪರನೆಂಬವನು ಕಟ್ಟಿದನೆಂದು ಹೇಳಲಾಗಿದೆ. ಗ್ರಾಮದ ಜನರು ಒಂದು ಕೆರೆಯನ್ನು ಕಟ್ಟಿಸಿ, ಕಿರು ತೆರಿಗೆ ಮನ್ನಾ ಮಾಡಿದ ಬಗ್ಗೆ ಶಾಸನವು ತಿಳಿಸುತ್ತದೆ. ಇದು ಸಿರಾ ತಾಲ್ಲೂಕಿನ ಅತಿ ಪ್ರಾಚೀನ ಶಾಸನ. ನಂತರ ನೊಳಂಬರ ಕಾಲಕ್ಕೆ ಸೇರಿದ 18 ಶಾಸನಗಳು ದೊರೆಯುವುದರ ಜೊತೆಗೆ ಬರಗೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ನಿರ್ವಹಿಸಿದರು.

ದೊಡ್ಡಬಾಣಗೆರೆಯ ಕ್ರಿ.ಶ. 1337 ಏಪ್ರಿಲ್ 20ರ ಕಾಲದ ಶಾಸನವು[2] ಮಹಾಸಾಮಂತಾಧಿಪತಿ ಒಳಕಲ್ಲ ಬೊಮ್ಮನಾಯಕ ನಿಡಗಲ್ಲು ರಾಜ್ಯವನ್ನು ಆಳುತ್ತಿರುವ ಸಮಯದಲ್ಲಿ, ಅವರ ಪಾದಪದ್ಮೋಪಜೀವಿ ಗುಡೇಕೋಟೆಯ (ಕೂಡ್ಲಗಿ ತಾಲ್ಲೂಕು) ಪಾಳೆಗಾರರ ಬೈರ ಅರಸ ಚೋಳ ಸುಪುತ್ರರು ಕೇಸರಸ ವಿಜಯ ಅರಸುಗಳು ಹಿರಿಯ (ದೊಡ್ಡ) ಬಾಣಗೆರೆಯ ಕೆರೆಯ ಕಟ್ಟಿಸಿ, ಆ ಗೌಡಗಳಿಗೆ ಕೊಟ್ಟ ಕೊಡುಗೆ, ಹಿರಿಯ-ಪಾಲಿ ಗೌಡನ ಬೊಮ್ಮಗೌಡನಿಗೆ ಮಾದಿಸೆಟ್ಟಿಯ ಮಗ ಚಿಲೆಶೆಟ್ಟಿಗೆ ರಾಮಿಶೆಟ್ಟಿಯ ಕೇತಿ ಶೆಟ್ಟಿಗೆ ದೆಸಿರಶೆಟ್ಟಿಯ ಮಗ ಸಿದ್ದ ನಾತಂಗೆ ಸುರಗೌಡನ ಕೇತಗೌಡಗೆ ಶಾನುಭೋಗ ದಾಸಣ್ಣರಿಗೆ ಬ್ರಹ್ಮಪುರಿ ಬೊಮ್ಮಣ್ಣಗೆ ಗದ್ದೆಗಳನ್ನು ಮಾನ್ಯ ಕೊಟ್ಟ ಶಾಸನವಾಗಿರುತ್ತದೆ.

ಗ್ರಾಮಗಳ ಸರಹದ್ದುಗಳನ್ನು ಸೂಚಿಸುವಾಗ ಕೆರೆ ಕುಂಟೆಗಳನ್ನು ಹೆಸರಿಸುತ್ತಿದ್ದನ್ನು ಕಾಣಬಹುದು. ಹುಲಿಕುಂಟೆ ಹೋಬಳಿ ಚಿಕ್ಕಬಾಣಗೆರೆ ಕೆರೆ ಹಿಂದಿನ ಗದ್ದೆಯಲ್ಲಿನ ಶಾಸನವು[3] (ಕ್ರಿ.ಶ. 1341ನೇ ಅಕ್ಟೋಬರ್ 17) ವಿಜಯನಗರದ ಮಹಾಸಾಮಂತ ನಿಡುಗಲ್ಲು ಗಂಗನಾಯಕನ ಮಗ ಬೊಮ್ಮನಾಯಕರು - ತಿಪ್ಪಯ್ಯನಾಯಕರ ಮಗ ಮಾಕೆಯನಾಯ್ಕಗೆ ಚಿಕ್ಕಬಾಣಗೆರೆಗೆ ಸೇರಿದ ಮಾಗಣಿ ಭೂಮಿಯ ತೆರಿಗೆ(ಕಂದಾಯ)ಗಳು ವಸೂಲಾಗಬೇಕಾದ ಹಳೆಯ ಬಾಕಿಗಳ ಸಮೇತ ಮುಂದೆ ಬರಬೇಕಾದ ಹಳೆಯ ಬಾಕಿಗಳ ಸಮೇತ ಸರ್ವಮಾನ್ಯವಾಗಿ 'ಗೊಡಗಿ' ಎಂಬ ಗ್ರಾಮವನ್ನು ದಾನಕೊಟ್ಟಿದ್ದನ್ನು ಉಲ್ಲೇಖಿಸುತ್ತದೆ. ಈ ಗ್ರಾಮಕ್ಕೆ ಸರಹದ್ದು ಪೂರ್ವ ದಿಕ್ಕಿನಲ್ಲಿ ಕಡವದಕುಂಟೆ, ನೇರಲಕಟ್ಟೆ ಏರಿ

ಬಡಗದಲ್ಲಿ ಬರಗೂರು ಗಡಿಯ ನಡುವೆ ಹೆರಸಯ್ಯನ ಮೂರು ಕಲುವು, ಬಸುರಿಯಕುಂಟೆ, ಪಡವ ದಿಕ್ಕಿನಲ್ಲಿ ಒಡಕುಂಟೆ, ಸವತರಗುಂಟೆ, ಹುಲಿಕುಂಟೆ.

ಗ್ರಾಮಗಳನ್ನು ನಿರ್ಮಾಣವಾಗಬೇಕಾದರೆ ಕೆರೆ ನಿರ್ಮಿಸುವುದು ಮುಖ್ಯ. ಇಂತಹ ವಿಷಯವನ್ನು ಸಿರಾದ ಹಲವಾರು ಶಾಸನಗಳು ತಿಳಿಸುತ್ತವೆ. ಕಳ್ಳಂಬೆಳ್ಳ ಹೋಬಳಿ ಶೀಬಿ ಅಗ್ರಹಾರದ ಪಟೇಲ್ ನರಸಿಂಹಯ್ಯನ ವಶದಲ್ಲಿದ್ದ ತಾಮ್ರಶಾಸನ[4] (ಕ್ರಿ.ಶ. 1403 ಆಗಸ್ಟ್ 2, ಗುರುವಾರ) ವಿಜಯನಗರ ಸಾಮ್ರಾಜ್ಯದ ದಂಡನಾಯಕನಾದ ಇರುಗುಪ್ಪ ದಂಡನಾಥನು ಪೆನುಗೊಂಡೆಯಲ್ಲಿ ಆಳ್ವಿಕೆ ಮಾಡುತ್ತಿದ್ದಾಗ ಚೇಳೂರು ನಾಡಿಗೆ ಸೇರಿದ ಸಿಬೂರು (ಸೀಬಿಯ) ಸೀಮೆಯ ಅಡವಿಯೊಳಗೆ ಆನೆಬಿದ್ದಜರಿಯ ಗಂಗಣ್ಣ ಆ ಚರ್ಥತ್ ಸೀಮೆಯ ಗೌಡ ನಾಯಕರು, ಮಾನಿಸರ, ಪೋಚನೋಜ್ಜರ ಮಕ್ಕಳು ಅಪ್ಪಯ್ಯಬಟ್ಟರು ಕೆರೆಯನ್ನು ಕಟ್ಟಿಸಿದರು. ಆ ಕೆರೆಯ ಹಿಂದಿನ ಗದ್ದೆಯನ್ನು ಚಂದ್ರಮೌಳೇಶ್ವರ ಸನ್ನಿಧಿಯಲ್ಲಿ ನರಸಿಂಹ ಹಾಗೂ ಬ್ರಾಹ್ಮಣರಿಗೆ ದಾನ ಮಾಡಿದರು ಮತ್ತು ಅದನ್ನು ಸರ್ವಮಾನ್ಯ ಅಗ್ರಹಾರವನ್ನಾಗಿ ಮಾಡಿ ತನ್ನ ಒಡೆಯನಾದ ಹರಿಹರನ ಹೆಸರಿನಲ್ಲಿ ಹರಿಹರಪುರ ಎಂದು ನಾಮಕರಣ ಮಾಡಿದನು. ಈ ಶಾಸನದಲ್ಲಿ ಹರಿಹರ ರಾಯರು ಪೆನುಗೊಂಡೆಯಿಂದ ರಾಜ್ಯವನ್ನಾಳುತ್ತಿದ್ದಂತೆ ತಿಳಿಸಿರುವುದು ಗಮನಾರ್ಹ ಸಂಗತಿ. ಏಕೆಂದರೆ ಆ ಕಾಲಕ್ಕಾಗಲೇ ಪೆನುಗೊಂಡೆ ವಿಜಯನಗರದ ಒಂದು ಉಪರಾಜಧಾನಿಯಾಗಿ ರೂಪುಗೊಂಡಿತ್ತೆಂಬುದನ್ನು ಗಮನಿಸಬಹುದಾಗಿದೆ.

ಕಲಿಸೆಟ್ಟಿಹಳ್ಳಿಯ (ಸು. ಕ್ರಿ.ಶ. 1445ರ ಜನವರಿ 14) ಶಾಸನವು[5] ವಿಜಯನಗರದ ಅರಸ ಬುಕ್ಕರಾಯನು ರಾಜ್ಯವನ್ನಾಳುತ್ತಿರುವ ಸಮಯದಲ್ಲಿ ಅವನ ಭಾವಮೈದುನನಾದ ಸೋಮನಾಯಕನ ಕೈಯಲ್ಲಿ (ಅವನ ಹಸ್ತದಿಂದ) ಕಲಿಸೆಟ್ಟಿಯು ಶಂಕು ಸ್ಥಾಪನೆ ಮಾಡಿಸಿ ಕೆರೆ ಮತ್ತು ಒಂದು ಶಿವಾಲಯವನ್ನು ಕಟ್ಟಿಸಿದನು. ಆದುದರಿಂದ ಈ ಗ್ರಾಮಕ್ಕೆ ಕಲಿಸೆಟ್ಟಿಹಳ್ಳಿ ಎಂದು ಹೆಸರಾಯಿತು. ಆದರೆ ಈ ಶಿವ ದೇವಾಲಯ ಯಾವುದೆಂದು ಗ್ರಾಮಕ್ಕೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ಕಂಡುಬರಲಿಲ್ಲ.

ಸಿರೊದಡವು ಗ್ರಾಮದ (ಸು. ಕ್ರಿ.ಶ. 1510) ಶಾಸನವು[6] ಗುಜ್ಜನಡುವಿನ (ಗುಜ್ಜನಾಡು) ಪರ್ವತಾರಾಧ್ಯ ಒಡೆಯರಿಗೆ ಅವರ ಶಿಷ್ಯರಾದ ತರೂರು ಕುಮಾರ ಒಡೆಯರ ಮಗ ಚಿಕ್ಕಣ್ಣನು ಸಿರಾದಡುವು ಕೆರೆ ಹಿಂದೆ ಗದ್ದೆಯನ್ನು ದಾನವಾಗಿ ಕೊಟ್ಟಂತೆಯೂ ಈ ಶಾಸನ ತಿಳಿಸುತ್ತದೆ. ಇದಕ್ಕೆ ಸಾಕ್ಷಿಯಾಗಿ ಗೌಡ ಶಾನುಭೋಗನನ್ನು ಊರ ಮುಖ್ಯರನ್ನು ತಿಳಿಸಲಾಗಿದೆ.

ಸಿರೊದಡವಿನ ಶಾಸನವು[7] (ಕ್ರಿ.ಶ. 1512 ಅಕ್ಟೋಬರ್ 15), ಸಿರವದೊಡವಿನಲಿ ಕೆರೆಯ ಕಟ್ಟಿಸಿದ್ದಕ್ಕೆ ಶ್ರೀ ಮನ್ಮಮಹಾಮಂಡಲೇಶ್ವರ ವೀರ ಹಿರಿಯ ಮಲ್ಲಯ ಒಡೆಯರು ಓಭಳಪ ಒಡೆಯರು ರಾಮಯ್ಯಗಳಿಗೆ ಗಂ 10, ಖ 1 ಗದೆಯನ್ನು ಕಡು ಕೊಡುಗೆ ದತ್ತಿಯಾಗಿ ನೀಡಿದ ವಿವರ.

ತಡಕಲೂರು ಮಧ್ಯದಲ್ಲಿ ಬೇವಿನಮರದ ಜಗತಿಕಟ್ಟೆಯ ಮುಂದೆ ಚಿಕ್ಕ ಗುಂಡಿನ ಮೇಲೆ ಶಾಸನವು[8] ಕ್ರಿ.ಶ. 1540 ಅಕ್ಟೋಬರ್ ಕಾಲದ್ದಾಗಿದ್ದು, ಸದಾಶಿವರಾಯರು ವಿಜಯನಗರ ಸಾಮ್ರಾಜ್ಯವನ್ನು ಆಳುತ್ತಿದ್ದ ಸಮಯದಲ್ಲಿ ಅವನ ಮಹಾಮಂಡಲೇಶ್ವರನಾದ ಅಪ್ರತಿಮಮಲ್ಲ, ಮಹಾಬಲ ಚಂಗಯ್ಯದೇವರಸನು ತಡಕಲೂರು ಶಿವನೇಗೌಡನ ಮಗ ಪನ್ನಪ್ಪನಿಗೆ ತಡಕಲೂರು ಕೆರೆಯ ತೂಬನ್ನು ಕಟ್ಟಿಸಿದ್ದಕ್ಕೆ ಆ ಕೆರೆಯ ತೂಬನ್ನು ಕಟ್ಟಿಸಿದ್ದಕ್ಕೆ ಆ ಕೆರೆಯ ಹಿಂದೆ ಗದ್ದೆಯನ್ನು ಮಾನ್ಯವಾಗಿ ಕೊಟ್ಟು ಪುತ್ರ ಪೌತ್ರ ಪರಂಪರೆಯಾಗಿ ಆಚಂದ್ರಾರ್ಕ ಸ್ಥಾಯಿ (ಸೂರ್ಯ ಚಂದ್ರ)

ಅನುಭವಿಸಿಕೊಂಡು ಹೋಗುವುದು. ವಿಠಲರಾಜರು ಮತ್ತು ತಿರುಮಲರಾಯರು ಶಿವನೇಗೌಡನ ಅಮರ ನಾಯಕತನಕ್ಕೆ ಮೆಚ್ಚಿ ಕೊಟ್ಟ ದಾನ ಎಂದು ತಿಳಿದುಬಂದಿದೆ.

ಬರಗೂರು ಗ್ರಾಮದ (ಕ್ರಿ.ಶ. 1544ರ ಅಕ್ಟೋಬರ್ 17) ಶಾಸನವು[9] ವಿಜಯನಗರ ಸಾಮ್ರಾಜ್ಯವನ್ನು ಚಕ್ರವರ್ತಿ ಸದಾಶಿವರಾಯನು (ತುಳುವ) ಆಳುತ್ತಿದ್ದ ಸಮಯದಲ್ಲಿ ಅವನ ಮಹಾಮಂಡಳೇಶ್ವರನಾದ ನಿಡಗಲ್ಲು ರಾಮರಾಜಯ್ಯ ವೀರತೇಶ್ವರ ದೇವನು ಆಳುತ್ತಿದ್ದ ಬರಗೂರು ಕೆರೆಯ ಕೆಳಗಿನ ಗದ್ದೆಯನ್ನು ತೆರಿಗೆ ಕಾಣಿಕೆ ಪಂಚಾದಾಯಗಳನ್ನು ಸಹಿತವಾಗಿ ಹನ್ನೆರಡು ಕೈವಾಡದವರಿಗೆ ದಾನ ಕೊಟ್ಟ ಶಾಸನ. ಇದಕ್ಕೆ ತಪ್ಪಿದವರು ಗೋಹತ್ಯೆ, ಶಿಶುಹತ್ಯೆ ಮಾಡಿದ ಪಾಪಕ್ಕೆ ಹೋಗುವರು ಹಾಗೂ ಹಜಾಮರ ಮಕ್ಕಳಾಗಿ ಹುಟ್ಟುವರು.

ಕೆರೆಕಟ್ಟೆಗಳನ್ನು ಒಡೆದಾಗ ಅದನ್ನು ದುರಸ್ತಿ ಮಾಡುವುದರ ಬಗ್ಗೆ ತಿಳಿಸುತ್ತದೆ. ಒಂದು ವೇಳೆ ದುರಸ್ತಿ ಮಾಡಿಸದಿದ್ದರೆ ಯಾವ ತೊಂದರೆ ಅಥವಾ ಶಾಪಕ್ಕೆ ತುತ್ತಾಗುತ್ತಾರೆಂದು ತಿಳಿಸುತ್ತದೆ. ವಾಜರಹಳ್ಳಿಯ ಹಳೇಕಟ್ಟೆ ಏರಿಕೆಳಗೆ ಬಿದ್ದಿರುವ ಕಲ್ಲು ಶಾಸನವು[10] ಸು. ಕ್ರಿ.ಶ. 1577 ನಿಡಗಲ್ಲು ಚಿಕ್ಕತಿಮ್ಮನಾಯಕ ಕಾಲದಲ್ಲಿ ಬರಗೂರು ಅಗ್ರಹಾರದ ತಿಮ್ಮನಾಯ್ಕನು ಕುಂಟೆ ಒಡೆದಿರಲು, ಅದಕ್ಕೆ ಮಣ್ಣನ್ನು ಹಾಕಿ ಕಟ್ಟೆ ದುರಸ್ತಿ ಮಾಡಲು ಹೆಂಜೇರಿನ ಬೊಮ್ಮಯ್ಯಗೌಡ, ತಿಮ್ಮಗೌಡರವರಿಗೆ ಕೆಲವು ಭೂಮಿಗಳನ್ನು ಮಾನ್ಯವಾಗಿ ಕೊಟ್ಟ ವಿಷಯವನ್ನು ತಿಳಿಸುತ್ತದೆ.

ಹೊಸೂರು ಗ್ರಾಮದ ಮುದ್ದೇನಹಳ್ಳಿ ದಾರಿಯಲ್ಲಿ ಓಬಳಿಗನ ಹೊಲದಲ್ಲಿನ ಶಾಸನವು[11] (ಕ್ರಿ.ಶ. 1605) ಶ್ರೀ ವೆಂಕಟಪತಿರಾಯರ ಕಾರ್ಯಕರ್ತೆಯರಾದ ಹರತಿಯ ಸಿದ್ದಣ್ಣ ನಾಯಕರು ದಳವಣ್ಣ ನಾಯಕರಿಗೆ ಹೊಸೂರು ಕೆರೆಯಿಂದೆ ಲಿಂಗಮುದ್ರೆ ಕಲ್ಲು ಹಾಕಿಸಿ, ಒಂದು ಖಂಡುಗದ ಗದ್ದೆಯನ್ನು ಕೊಡುಗೆಯಾಗಿ ಕೊಟ್ಟರು.

ಸಿರಾದಲ್ಲಿ ಇರುವ ಅವಧೂತ ಶಾಮಾಚಾರ್ಯರ ಮಕ್ಕಳು ಹನುಮಂತಾಚಾರ್ಯರ ವಶದಲ್ಲಿದ್ದ ತಾಮ್ರಶಾಸನ[12] (ಕ್ರಿ.ಶ. 1621ರ ಮಾರ್ಚ್ 22) ಆತ್ರೇಯ ಗೋತ್ರದ-ಆಪಸ್ತಂಭಸೂತ್ರದ-ಯಜುಶ್ಶಾಖಾಧ್ಯಾಯಿಗಳಾದ ಶ್ರೀ ಮನ್ಮಹಾಮಂಡಳೇಶ್ವರ ಹರತಿ ಸಿಂಹಾಸನಾಂಕ ಸರಜಾ ಕೃಷ್ಣಪ್ಪರಾಜರವರ ಮಗ ರಂಗಪ್ಪರಾಜ, ಇವನ ಮಗನಾದ ಕಸ್ತೂರಿ ರಂಗಪ್ಪ ರಾಜರವರು ಕೌಂಡಿನ್ಯಗೋತ್ರದ ಆಪಸ್ತಂಬಸೂತ್ರದ ಯಜುಶ್ಶಾಖಾಧ್ಯಾಯಿಗಳಾದ ತಿರುಮಲ ದೀಕ್ಷಿತರ ಪುತ್ರರಾದ ಸಿಂಹಾದಿ ಭಟ್ಟರ ಪುತ್ರರಾದ ನರಸಿಂಹ ಜೋಯಿಸರಿಗೆ ನಮ್ಮ ಪಿತೃಗಳಿಗೆ ಸ್ವರ್ಗಾದಿ ಭೋಗಗಳಾಗಬೇಕೆಂದು, ಕೊಟ್ಟಂತಾ ರಾಯದುರ್ಗಪೇಟೆಗೆ ಸಲ್ಲುವ ದೇವಣ ಸೀರ್ಯದ ಸೀಮೆಗೆ ಸಲ್ಲುವ ರತ್ನಗಿರಿ ಸೀಮೆಯ ಬಡವನಹಳ್ಳಿ ಹೋಬಳಿಯ ಕೂನನಹಳ್ಳಿ ಗ್ರಾಮಕ್ಕೆ ಸಲ್ಲುವ ಪರಿಸರದ ಭೂಮಿ ಎರೆನೆಲ, ಕೆಂಪುನೆಲ, ಕಾಡಾರಂಭ-ನೀರಾರಂಭ (ಬೆದಲು ಬೇಸಾಯ, ನೀರಾವರಿ ಬೇಸಾಯ) ಅಣೆಅಚ್ಚುಕಟ್ಟು ಏತಗೊಡೆ (ಏತದ ಗುಂಡಿ) ಕೆರೆ, ಕಾಲುವೆ, ಕಪಿಲೆ, ಸಹ ಅನುಭವಿಸಿಕೊಂಡು ಬರಲುಳ್ಳವರೆಂದು ಬರೆದುಕೊಟ್ಟ ದಾನ ಶಾಸನ.

ಅಡಿಟಿಪ್ಪಣಿಗಳು

1. *ಎಪಿಗ್ರಾಫಿಯಾ ಕರ್ನಾಟಿಕ*, ಸಂಪುಟ 12, ತುಮಕೂರು ಜಿಲ್ಲೆ, ಸಿರಾ 123.
2. ಅದೇ, ಸಿರಾ 8.
3. ಅದೇ, ಸಿರಾ 10.
4. ಅದೇ, ಸಿರಾ 95.
5. ಅದೇ, ಸಿರಾ 100.

6. *ಅದೇ*, ಸಿರಾ 111.
7. *ಅದೇ*, ಸಿರಾ 110.
8. ಡಾ. ಎನ್. ನಂದೀಶ್ವರ, *ಸಿರಾ ತಾಲ್ಲೂಕಿನ ಸ್ಮಾರಕಗಳು ಹಾಗೂ ಶಾಸನಗಳು*, ಪೂರ್ಣಚಂದ್ರ ತೇಜಸ್ವಿ ಪ್ರಕಾಶನ, ಸಿರಾ, 2008, ಸಂಖ್ಯೆ 47.
9. *ಎಪಿಗ್ರಾಫಿಯಾ ಕರ್ನಾಟಿಕ*, ಸಂಪುಟ 12, ತುಮಕೂರು ಜಿಲ್ಲೆ, ಸಿರಾ 41.
10. *ಅದೇ*, ಸಿರಾ 18.
11. *ಅದೇ*, ಸಿರಾ 61.
12. *ಅದೇ*, ಸಿರಾ 64.

42

ವಿಜಯನಗರ ಕಾಲದಲ್ಲಿ ರಾಯಲುಸೀಮೆ ಪ್ರದೇಶದ ನೀರಾವರಿ

ಡಾ|| ಟಿ. ವಿ. ನಾಗರಾಜ

'ರಾಯಲುಸೀಮೆ'ಯ 'ರಾಯಲು' ವಿಜಯನಗರದ ರಾಯರನ್ನು ಪ್ರತಿನಿಧಿಸಿದರೆ, 'ಸೀಮೆ' ಒಂದು ಆಡಳಿತ ವಿಭಾಗದ ಹೆಸರಾಗಿದೆ. ಆಂಧ್ರಪ್ರದೇಶದ ಮೂರು ಪ್ರದೇಶಗಳಾದ ತೆಲಂಗಾಣ, ರಾಯಲುಸೀಮೆ ಮತ್ತು ಕರಾವಳಿ ಆಂಧ್ರಗಳಲ್ಲಿ ಒಂದಾಗಿದೆ. ಈ ಪ್ರದೇಶದಲ್ಲಿ ಅನಂತಪುರ, ಕಡಪಾ, ಕರ್ನೂಲ್, ಚಿತ್ತೂರು ಮತ್ತು ಕರ್ನಾಟಕದ ಬಳ್ಳಾರಿಯನ್ನು ಒಳಗೊಂಡಂತೆ 'ರಾಯಲಸೀಮಾ' ಎಂದು ಗುರುತಿಸಲ್ಪಟ್ಟಿತ್ತು. ಈ ಪ್ರದೇಶವು ವಿಜಯನಗರ ಸಾಮ್ರಾಜ್ಯದ ಕೊನೆಯ ರಾಜರುಗಳ ಕಾಲದಲ್ಲಿ ಆಯಕಟ್ಟಿನ ಸ್ಥಳಗಳಾಗಿದ್ದವು. ಬಳ್ಳಾರಿ ವಿಜಯನಗರದ ರಾಜಧಾನಿಯಾಗಿದ್ದರೆ, ಪೆನುಗೊಂಡೆ (ಅನಂತಪುರ ಜಿಲ್ಲೆ) ಮತ್ತು ಚಂದ್ರಗಿರಿ (ಚಿತ್ತೂರು ಜಿಲ್ಲೆ) ಅರವೀಡು ವಂಶದ ರಾಜಧಾನಿಗಳಾಗಿದ್ದವು. ತಾಳೀಕೋಟೆಯ ಯುದ್ಧಾನಂತರ ಎರಡೂ ಕೇಂದ್ರಗಳು ಪ್ರಾಮುಖ್ಯ ಪಡೆದವು. ವಿಜಯನಗರದ ಸಾಮ್ರಾಜ್ಯ ಕೊನೆಯ ದಿನಗಳು ಹಾಗು 1565ರ ತಾಳಿಕೋಟೆಯ ಕದನಾನಂತರ ರಾಜರುಗಳು ಈ ರಾಯಲಸೀಮೆಯನ್ನು ಅವಲಂಬಿಸಬೇಕಾಗಿತ್ತು. ಹೀಗಾಗಿ ರಾಜಕೀಯ ಮಹತ್ವ ಪಡೆದಿತ್ತು.

ರಾಯಲುಸೀಮೆ ವಿಜಯನಗರ ಸಾಮ್ರಾಜ್ಯದ ಕೇಂದ್ರವಲಯವಾಗಿದ್ದಿತು. ಬೆಟ್ಟಗುಡ್ಡಗಳಿಂದ ಆವೃತವಾಗಿರುವ ಈ ಪ್ರದೇಶದಲ್ಲಿ ಹಲವಾರು ಮುಖ್ಯ ನದಿಗಳು ಹಾಗು ಉಪನದಿಗಳು ಹರಿವನ್ನು ಹೊಂದಿವೆ. ಕೃಷ್ಣಾ ನದಿಯಲ್ಲದೆ, ಪೆನ್ನಾರ್, ನಗರಿ, ತುಂಗಭದ್ರಾ, ಹುಂದ್ರಿ, ಪಾಪಾಗ್ನಿ, ಚಿತ್ರಾವತಿ, ಗುಂಡ್ಲಕಮ್ಮ, ಅರನಿಯಾರ್, ಸುವರ್ಣಮುಖಿ ಅಲ್ಲದೆ ಹಲವಾರು ಸಣ್ಣ-ಪುಟ್ಟ ಹಳ್ಳಗಳೂ ಹರಿಯುತ್ತಿವೆ. ಚರಿತ್ರೆಯ ಉದ್ದಕ್ಕೂ ತೀವ್ರ ಕ್ಷಾಮ ಮತ್ತು ಬರಗಾಲಗಳಿಗೆ ತುತ್ತಾಗಿವೆ. ಬಿಸಿಲಿನ ಬೇಗೆಗೆ ಸುಡುವ ರಾಯಲಸೀಮೆ ಭೌಗೋಳಿಕ ಮತ್ತು ಹವಾಮಾನದ ದೃಷ್ಟಿಯಿಂದ ಪ್ರತಿಕೂಲ ಸ್ಥಿತಿ ಹೊಂದಿದೆ. ಈ ಪ್ರದೇಶದ ಸರಾಸರಿ ಮಳೆಯ ಪ್ರಮಾಣ ವಾರ್ಷಿಕ 750 ಮಿ.ಮಿ. ಮಾತ್ರ ಈ ಹಿನ್ನೆಲೆಯಲ್ಲಿ ಮಧ್ಯಕಾಲಿನ ಸಾಮ್ರಾಜ್ಯವಾದ ವಿಜಯನಗರ ಕೃಷಿ ಆರ್ಥಿಕತೆಗೆ ಪೋಷಕವಾದ ನೀರಾವರಿ ಚೌಕಟ್ಟನ್ನು ವ್ಯವಸ್ಥಿತವಾಗಿ ಬೆಳೆಸಿಕೊಂಡು ಬಂದಂತಹ ಅಭಿಪ್ರಾಯಗಳ ಚೌಕಟ್ಟಿನಲ್ಲಿ, ರಾಜಕೀಯವಾಗಿ ಆಯಕಟ್ಟಿನ ಪ್ರದೇಶವಾದ ರಾಯಲುಸೀಮಾ ಪ್ರದೇಶದ ನೀರಾವರಿ ವ್ಯವಸ್ಥೆಯನ್ನು ಶಾಸನಗಳ ಆಧಾರದಲ್ಲಿ ಪರಿಶೀಲಿಸುವ ಪ್ರಯತ್ನವನ್ನು ಪ್ರಸ್ತುತ ಲೇಖನದಲ್ಲಿ ಮಾಡಲಾಗಿದೆ.

ರಾಯಲುಸೀಮಾ ಪ್ರದೇಶದಲ್ಲಿ ಹಲವು ದೊಡ್ಡ ಪ್ರಮಾಣದ ವಿಶೇಶವಾಗಿ ಪ್ರಭುತ್ವ ಪ್ರಾಯೋಜಿತ ಹಾಗೂ ತಾಂತ್ರಿಕ ಕೌಶಲ್ಯ ಅಪೇಕ್ಷಿತವಾದ ನೀರಾವರಿ ಕಾಮಗಾರಿಗಳು ಕಂಡುಬರುತ್ತವೆ. ನೀರಾವರಿ ಸೌಲಭ್ಯದ ವಿಸ್ತರಣೆಗಾಗಿ ಕಾಲುವೆಗಳ ಕಟ್ಟೆಗಳ ನಿರ್ಮಾಣ, ತೂಬು, ಕೋಡಿ ಕಾಮಗಾರಿಗಳು ಮಹತ್ವ ಪಡೆದಿವೆ. ಈ ಪ್ರದೇಶದಲ್ಲಿ ನೀರಾವರಿ ಸೌಲಭ್ಯಗಳ ಪರಿಸರದಲ್ಲಿ ಗ್ರಾಮನೆಲೆಗಳು ಕೇಂದ್ರೀಕೃತಗೊಂಡಿರುವುದು ಅಧ್ಯಯನಗಳಿಂದ ದೃಢಪಟ್ಟಿದೆ. ಕೃಷಿ ಅರ್ಥ ವ್ಯವಸ್ಥೆ ಮತ್ತು ನೀರಾವರಿ ಚೌಕಟ್ಟು ಈ ಭಾಗದಲ್ಲಿ ಪೂರ್ಣ ಹೊಂದಾಣಿಕೆಯ ಸ್ವರೂಪ ಹೊಂದಿರುವುದು ಗಮನಾರ್ಹ. ವಿಜಯನಗರದ ಕಾಲದಲ್ಲಿ 'ಸೂಕ್ಷ್ಮ ನೀರಾವರಿ' (Micro Irrigation Works) ಹಾಗು 'ಸಮಗ್ರ ನೀರಾವರಿ' (Macro Irrigation Works) ರಾಯಲುಸೀಮಾ ಪ್ರದೇಶದಲ್ಲಿ ಕಂಡುಬರುತ್ತವೆ.

ರಾಯಲುಸೀಮೆ ಪ್ರದೇಶದಲ್ಲಿ ನಿರ್ಮಾಣಗೊಂಡ ನೀರಾವರಿ ಚೌಕಟ್ಟಿನಲ್ಲಿ ಕೆರೆಗಳು ಪ್ರಧಾನವಾಗಿವೆ. ಮಧ್ಯಕಾಲೀನ ರಾಜ್ಯಾಡಳಿತ ವ್ಯವಸ್ಥೆಯಲ್ಲಿ ನೀರಾವರಿ ಕಾಮಗಾರಿಗಳ ನಿರ್ಮಾಣ, ಪುಣ್ಯದ ಕಾರ್ಯಗಳಲ್ಲಿ ಒಂದಾಗಿದ್ದಿತು. ಹೀಗಾಗಿ ರಾಜರು, ರಾಜಕುಟುಂಬದವರು ನೀರಾವರಿ ಕಾಮಗಾರಿಗಳನ್ನು ಪ್ರಾಯೋಜಿಸಿರುವುದು ಕಂಡುಬರುತ್ತದೆ. ಕರ್ನೂಲು ಜಿಲ್ಲೆಯ ಪಾತಿಕೊಂಡ ತಾಲ್ಲೂಕಿನ ರಟ್ನದ ಕ್ರಿ.ಶ. 1349ರ ಶಾಸನದಲ್ಲಿ ದಂಡನಾಯಕ ರಾಯರಸ ಕೆರೆ ನಿರ್ಮಿಸಿದ್ದನ್ನು ದಾಖಲಿಸಿದೆ.[1] ಅನಂತಪುರ ಜಿಲ್ಲೆಯ ಬುಕ್ಕಾಪಟ್ಟಂನ ಕ್ರಿ.ಶ. 1364ರ ಶಾಸನದಲ್ಲಿ ಚಿಕ್ಕ ಒಡೆಯರ್ 'ಕ್ರೊತ್ತಿಚೆರುವು' ಎಂಬ ಕೆರೆ ಕಟ್ಟಿಸಿರುವುದು ದಾಖಲಾಗಿದೆ.[2] ಕಡಪಾ ಜಿಲ್ಲೆಯ ಒಡ್ವಲ್ ತಾಲ್ಲೂಕಿನ ಪೊರುಮಬುಲ್ಲಾ ಕ್ರಿ.ಶ. 1369ರ ಶಾಸನದಲ್ಲಿ ಮಂತ್ರಿ ಭಾಸ್ಕರ ಕೆರೆ ಕಟ್ಟಿಸಿದುದನ್ನು ವಿವರಿಸಿದೆ.[3] ಪೆನುಗೊಂಡ ತಲ್ಲೂಕಿನ ಕ್ರಿ.ಶ. 1382ರ ಬುಕ್ಕರಾಯಪುರಂ ಶಾಸನದಲ್ಲಿ ಮಂತ್ರಿ ವಾಸುದೇವ ಎಂಬುವವರು ಕೆರೆ ನಿರ್ಮಿಸಿದ್ದನ್ನು ಉಲ್ಲೇಖಿಸಿದೆ. ತಿರುಪತಿಯ ಕ್ರಿ.ಶ. 1467ರ ಶಾಸನದಲ್ಲಿ ಸಾಳುವ ಮಹಾಮಂಡಲೇಶ್ವರ ನರಸಿಂಗಯ್ಯ ಕೆರೆ ತೋಡಿಸಿದ್ದನ್ನು ದಾಖಲಿಸಿದೆ.[4] ಶ್ರೀಶೈಲಂನ ಕ್ರಿ.ಶ. 1469ರ ಶಾಸನದಲ್ಲಿ ಮಹಾಮಂಡಲೇಶ್ವರ ಸಾಳುವ ಪರ್ವತಯ್ಯ 'ಗಂಗಸಮುದ್ರ' ಎಂಬ ಕೆರೆ ಕಟ್ಟಿಸಿದುದನ್ನು ಉಲ್ಲೇಖಿಸಿದೆ.[5] ತಿರುಪತಿಯ ಕ್ರಿ.ಶ. 1473ರ ಶಾಸನದಲ್ಲಿ ಸಾಳುವ ನರಸಿಂಹರಾಜ 'ನರಸಿಂಗರಾಯಕೋನೇರಿ' ನಿರ್ಮಿಸಿದ್ದನ್ನು ದಾಖಲಿಸಿದೆ. ಪುಲಿವೆಂಡ್ಲ ತಾಲ್ಲೂಕಿನ ಕ್ರಿ.ಶ. 1494ರ ಶಾಸನದಲ್ಲಿ ನರಸನಾಯಕ ಕೆರೆ ನಿರ್ಮಿಸಿದ್ದನ್ನು ಉಲ್ಲೇಖಿಸಿದೆ.[6] ಉರುವಕೊಂಡದ ಕ್ರಿ.ಶ. 1516ರ ಶಾಶನದಲ್ಲಿ ಕಟ್ಟಿಗೆ ತಿಪ್ಪಯ್ಯ ಮತ್ತು ಅಮರದ ತಿಮ್ಮರಸ ಎಂಬುವರು ಕೆರೆ ನಿರ್ಮಿಸಿದುದನ್ನು ದಾಖಲಿಸಿದೆ.[7] ಶ್ರೀಶೈಲಂನ ಕ್ರಿ.ಶ. 1518ರ ಶಾಸನದಲ್ಲಿ ಪರ್ವತಯ್ಯ ಮತ್ತು ಅವನ ಪತ್ನಿ ಕೆರೆ ನಿರ್ಮಿಸಿದುದ್ದನ್ನು ಉಲ್ಲೇಖಿಸಿದೆ.[8]

ಮದನಪಲ್ಲಿ ಶಾಸನದಲ್ಲಿ (ಕ್ರಿ.ಶ. 1526) ವ್ಯಾಸರಾಯರು 'ವ್ಯಾಸಸಮುದ್ರ' ಎಂಬ ಕೆರೆ ನಿರ್ಮಿಸಿದುದನ್ನು ದಾಖಲಿಸಿದೆ.[9] ಕಡಪಾ ಜಿಲ್ಲೆಯ ಲೆಬಕರ ಶಾಸನದಲ್ಲಿ ಅಚ್ಯುತರಾಯನ ಇಬ್ಬರು ಅಧಿಕಾರಿಗಳಾದ ತಿಮ್ಮರಸ ಮತ್ತು ಬಾಚರಸ ಕೆರೆ ನಿರ್ಮಿಸಿದುದನ್ನು ಉಲ್ಲೇಖಿಸಿದೆ.[10] ಕರ್ನೂಲ್ ಜಿಲ್ಲೆಯ ಮಿಡುತೂರಿನ ಕ್ರಿ.ಶ. 1547ರ ಶಾಸನದಲ್ಲಿ ಮಹಾಮಂಡಲೇಶ್ವರ ಕೊನಯ್ಯದೇವ ಎಂಬುವನು ಕೆರೆ ಕಟ್ಟಿಸಿದುದನ್ನು ಉಲ್ಲೇಖಿಸಿದೆ.[11] ಕಲ್ಯಾಣದುರ್ಗ ತಾಲ್ಲೂಕು ಶ್ರೀರಂಗಪುರದ ಕ್ರಿ.ಶ. 1584ರ ಶಾಸನದಲ್ಲಿ ಶ್ರೀರಂಗಯ್ಯ ಎಂಬುವರು ಕೆರೆ ನಿರ್ಮಿಸಿದರು ಎಂದು ದಾಖಲಿಸಿದೆ.[12] ಕಡಪಾ ಜಿಲ್ಲೆಯ ಸಿದ್ದರಾತಂನ ಕ್ರಿ.ಶ. 1605ರ ಶಾಸನದಲ್ಲಿ ಮಾಟ್ಲಿಯ ಮುಖ್ಯಸ್ಥ ಅನಂತ ಎಂಬುವನು ಕೆರೆ ನಿರ್ಮಿಸಿದುದನ್ನು ದಾಖಲಿಸಿದೆ.[13]

ಈ ಹಿನ್ನೆಲೆಯಲ್ಲಿ ರಾಯಲುಸೀಮೆ ಪ್ರದೇಶದ ನೀರಾವರಿ ಕೆರೆಗಳು ಪ್ರದಾನವಾಗಿ ಕಂಡುಬರುತ್ತವೆ. ವಿಜಯನಗರ ಸಾಮ್ರಾಜ್ಯದ ಆರಂಭದಲ್ಲೇ ನಿರ್ಮಾಣ ಕಾರ್ಯಗಳು ಕಂಡುಬಂದು, ನಿರಂತರವಾಗಿ ಮುಂದುವರಿದಿವೆ. ಬಹುತೇಕ

ಕರೆ ನಿರ್ಮಾಣ ಕಾರ್ಯಗಳಲ್ಲಿ ಸ್ಥಳೀಯ ಹಂತದ ಆಡಳಿತಾಧಿಕಾರಿಗಳು, ವ್ಯಕ್ತಿಗಳು, ನೇರವಾಗಿ ಪಾಲ್ಗೊಂಡಿರುವುದು ಕಂಡುಬರುತ್ತದೆ. ರಾಜ್ಯದ ನೇರ ಪ್ರಾಯೋಜಕತ್ವ ಕಂಡುಬರದಿದ್ದರೂ, ಪರೋಕ್ಷವಾಗಿ ಹಲವು ರಿಯಾಯಿತಿಗಳು ಪ್ರೋತ್ಸಾಹದಾಯಕವಾಗಿ ಕಂಡುಬಂದಿವೆ. ಸ್ಥಳೀಯ ಹಂತದ ಕೌಶಲ್ಯ, ಒಡ್ಡುಗಳ ನಿರ್ಮಾಣ, ಕಲ್ಲಿನ ಕೆಲಸ, ತೂಬುಗಳ ಜೋಡಣೆ ಮುಂತಾದವು ಕಾರ್ಯನಿರ್ವಹಿಸಿವೆ. ಹಾಗಾಗಿ ನೀರಾವರಿ ವ್ಯವಸ್ಥೆ, ರಾಯಲ ಸೀಮೆಯ ಪ್ರದೇಶದಲ್ಲಿ ಭೌಗೋಳಿಕ ಮತ್ತು ಮಳೆಯ ಸೌಲಭ್ಯಗಳಿಗೆ ಪೂರಕವಾಗಿ ಬೆಳೆದುಬಂದಿರುವುದು ಕಂಡುಬರುತ್ತದೆ.

ರಾಯಲುಸೀಮೆ ಪ್ರದೇಶದಲ್ಲಿ ನೀರಾವರಿ ಚೌಕಟ್ಟಿನ ಮುಖ್ಯಭಾಗವಾಗಿ ಕಾಲುವೆಗಳು ಕಾರ್ಯನಿರ್ವಹಿಸಿವೆ. ಕಾಲುವೆಗಳ ನಿರ್ಮಾಣ ಮಾತ್ರವಲ್ಲದೆ, ಅವುಗಳ ದುರಸ್ತಿ ಹಾಗು ನೀರಾವರಿ ಜಾಲಗಳ ಸಂಪರ್ಕಕ್ಕೆ ಕಾಲುವೆಗಳನ್ನು ತೋಡಿಸಿದ ಉಲ್ಲೇಖ ಇದ್ದು, ಇಲ್ಲಿ ಬಳಕೆಯಾಗಿರುವ ತಂತ್ರಜ್ಞಾನ ಮತ್ತು ಪರಿಣಿತಿ ಗಮನ ಸೆಳೆಯುತ್ತದೆ. ಪೆನುಗೊಂಡೆಯ ಕ್ರಿ.ಪೂ. 1389ರ ಶಾಸನದಲ್ಲಿ "ಜಲಸೂತ್ರದಾರ" ನಿಂಗಯ್ಯ ಭಟ್ಟ ಎಂಬುವನು ಶಿರವೂರು ಕೆರೆಗೆ ಕಾಲುವೆಯೊಂದನ್ನು ನಿರ್ಮಿಸಿದ್ದನ್ನು ದಾಖಲಿಸಿದೆ.[14] ಹಿಂದೂಪುರ ತಾಲ್ಲೂಕಿನ ಮಾದಿಶೆಟ್ಟಿಪಲ್ಲಿಯ ಶಾಸನದ ಪ್ರಕಾರ ಪೆದ್ದಬೋಯಿ ಮತ್ತು ಚಿನ್ನಬೋಯಿ ಎಂಬುವರು ಕಟ್ಟುಕಾಲುವೆ (Feeder Channel) ಒಂದನ್ನು ನಿರ್ಮಿಸಿದರು.[15] ಕೆರೆಗೆ ಹೆಚ್ಚುವರಿ ನೀರು ಹರಿದುಬರುವಂತೆ ಪೂರಕ ಕಾಲುವೆ ನಿರ್ಮಿಸುವ ತಂತ್ರಜ್ಞಾನ ಬಳಕೆಯಾಗಿರುವುದು ಕಂಡುಬರುತ್ತದೆ. ಚಂದ್ರಗಿರಿ ತಾಲ್ಲೂಕಿನ ತಿರುಮಲದ ಶಾಸನದಲ್ಲಿ ಮಲ್ಲಣ್ಣಗಲ್ ಎಂಬುವನು ಹಳೆಯ ಕಾಲುವೆಯನ್ನು ಪುನಶ್ಚೇತನಗೊಳಿಸಿ, ಹೊಸದಾಗಿ ಮಡಾರಿ ನದಿಯಿಂದ ಅವಿಬಾಟಿ ನದಿಗೆ ಕಾಲುವೆ ತೋಡಿಸಿದನು. ಅಂದಿನ ಕಾಲಕ್ಕೆ ಎರಡು ಜಲ ಧಾರೆಗಳಿಗೆ ಸಂಪರ್ಕ ಕಲ್ಪಿಸುವ ಕಾಲುವೆ ತೋಡಿಸಿದುದು ಗಮನಾರ್ಹ.[16] ಪೆನುಗೊಂಡೆಯ ಶಾಸನವೊಂದರಲ್ಲಿ ಬೊಮ್ಮಲದೇವಿ (ರಾಜಮನೆತನದ ಮಹಿಳೆ) ತಿರುಮಣಿ ಕೆರೆಗೆ ಕಾಲುವೆಯೊಂದನ್ನು ನಿರ್ಮಿಸಿದಳೆಂದು, ಈ ಮೂಲಕ ಕಾಲುವೆಯಂತಹ ಕಾಮಗಾರಿಗಳು ರಾಜಮನೆತನದ ಪ್ರಾಯೋಜಕತ್ವ ಪಡೆದದ್ದು ದಾಖಲಾಗಿದೆ.[17] ಕ್ರಿ.ಶ. 1450ರ ಶಾಸನದಲ್ಲಿ ಚೆನ್ನಕೇಶವದಾಸರ್ ಎಂಬುವರು ಲಿಯಂಡಿಪಲ್ಲಿಯ ಪರಿಸರದಲ್ಲಿ ಈಗಾಗಲೇ ಇರುವ ಕಾಲುವೆಯನ್ನು ವಿಸ್ತರಿಸಿ, ಅವಿಲಾಳ ಕೆರೆಗೆ ನೀರನ್ನು ಪೂರೈಸಲು ಕಾಲುವೆ ತೋಡಿಸಿರುವುದು ದಾಖಲಾಗಿದೆ.[18] ಕ್ರಿ.ಶ. 1469ರ ತಿರುಮಲದ ಶಾಶನದಲ್ಲಿ ರಾಮಾನುಜಕೂಟದ ನಿರ್ವಾಹಕರೊಬ್ಬರು ಎರಡು ನೀರಾವರಿ ಕಾಲುವೆಗಳನ್ನು ತೋಡಿಸಿರುವುದು ದಾಖಲಾಗಿದೆ.[19]

ಕ್ರಿ.ಶ. 1467ರ ಶಾಸನ (ತಿರುಮಲದ) ನರಸಿಂಹರಾಯನ ಮಡದಿ (ರಾಣಿ) ಶ್ರೀ ರಂಗಾಂಭಾದೇವಿ ಕಾಲುವೆ ತೋಡಿಸಿರುವುದನ್ನು ದಾಖಲಿಸಿದೆ.[20] ಕ್ರಿ.ಶ. 1463ರ ತಿರುಮಲದ ತಿರುಪತಿ ಶಾಸನದಲ್ಲಿ ಮಹಾಮಂಡಲೇಶ್ವರ ಮೇದಿನಿಮೀಸರಗಂಡ, ಕೊಟ್ಟೂರಿ ಸಾಲುವ ತಿಮ್ಮರಾಜದೇವ ಮಹಾರಾಜರು ಜಂಟಿಯಾಗಿ ಕಾಲುವೆ ಕಾಮಗಾರಿ ಕೈಗೊಂಡಿದ್ದನ್ನು ದಾಖಲಿಸಿದೆ.[21] ಪ್ರಾಯಶಃ ಇಲ್ಲಿನ ಕಾಮಗಾರಿಗೆ ಹೆಚ್ಚಿನ ಸಂಪನ್ಮೂಲ ಬಳಕೆಯಾಗಿರಬಹುದಾಗಿದ್ದು, ಆಡಳಿತ ವರ್ಗದವರು ತೊಡಗಿಸಿಕೊಂಡಿರುವುದು ಗಮನಾರ್ಹ ಅಂಶವಾಗಿದೆ. ಕ್ರಿ.ಶ. 1516ರ ತಾಡಪತ್ರಿ ತಾಲ್ಲೂಕಿನ ಪೆಂಡೆಕಲ್ಲಿ ಶಾಸನದಲ್ಲಿ ಅಪ್ಪಯ್ಯ ಮತ್ತು ಗೋಪಯ್ಯ "ದೇವಲ ಕಾಲುವ" ಎಂಬ ಕಾಲುವೆ ನಿರ್ಮಿಸಿದುದನ್ನು ದಾಖಲಿಸಿದೆ.[22] ಕ್ರಿ.ಶ. 1524ರ ಮದನಪಲ್ಲಿಯ ಶಾಸನದಲ್ಲಿ 'ಪೆದ್ದಕಾಲುವೆ' ಎಂಬ ಕಾಲುವೆ ನಿರ್ಮಾಣ ಕುರಿತು ಪ್ರಸ್ತಾಪ ಇದೆ.[23]

ಈ ಭಾಗದ ನೀರಾವರಿ ಚೌಕಟ್ಟಿನಲ್ಲಿ ನೀರಿನ ಹಂಚಿಕೆ ಕುರಿತಂತೆ, ಕಾಲುವೆ ನಿರ್ಮಾಣದ ಸಂದರ್ಭದಲ್ಲಿ ಉಂಟಾದ ಭಿನ್ನಾಭಿಪ್ರಾಯಗಳನ್ನು ಅಧಿಕಾರಿ ಮತ್ತು ದೇವಾಲಯದ ಸ್ಥಾನಿಕರು ಭದ್ರತಾ ಹಣ ಪಡೆದು, ಕಾಮಗಾರಿ

ಕೈಗೊಂಡು, ನಿರ್ವಹಿಸಿದ್ದನ್ನು ತಿರುಮಲದ ಶಾಸನವೊಂದು ದಾಖಲಿಸಿದೆ.[24] ಹಲವು ಸಂದರ್ಭಗಳಲ್ಲಿ ಕೃಷಿಗಾಗಿ ಕೆರೆ ನೀರನ್ನು ಬಳಸಿಕೊಳ್ಳುವ ಹಕ್ಕನ್ನು ಮಾರಾಟಮಾಡಿರುವುದು ಇದೆ, ಹಾಗು ದೇವಾಲಯ ಮತ್ತು ಗ್ರಾಮಸ್ಥರ ನೀರಿನ ಬಳಕೆಯನ್ನು ಭೂಮಿಗಳ ಹಿನ್ನೆಲೆಯಲ್ಲಿ ಹಂಚಿಕೆ ಮಾಡಿಕೊಂಡಿರುವುದು ದಾಖಲಾಗಿದೆ.[25] ಒಂದು ಕೆರೆಯ ಬಹುಪಾಲು ನೀರನ್ನು ದೇವಾಲಯದ ಸ್ವಾಮ್ಯದ ಭೂಮಿಗೆ ಒದಗಿಸಿರುವುದು ಕಂಡುಬಂದಿದೆ.[26]

ರಾಯಲುಸೀಮಾ ಪ್ರದೇಶದಲ್ಲಿ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಕಾಲಘಟ್ಟದಲ್ಲಿ ದುರಸ್ತಿ ನಿರ್ವಹಣಾ ಕಾಮಗಾರಿಗಳು ಮಹತ್ವ ಪಡೆದಿವೆ. ಕ್ರಿ.ಶ. 1459ರ ತಿರುಮಲದ ಇರುಕೋಲಿಯ ಶಾಸನದಲ್ಲಿ ಕುಪ್ಪರ್ ಎಂಬುವರು 1000 ಪಣವನ್ನು ದತ್ತಿಯಾಗಿ ಹೂಡಿ, ಆ ದತ್ತಿಯ ಆದಾಯದಲ್ಲಿ ಕೆರೆ ದುರಸ್ತಿಗಾಗಿ ದತ್ತಿ ನೀಡಿರುವುದು ಗಮನಸೆಳೆಯುತ್ತದೆ.[27] ಕ್ರಿ.ಶ. 1534ರ ಅನಂತಪುರ ಜಿಲ್ಲೆಯ ಭೂಪಸಮುದ್ರದ ಶಾಸನವೊಂದರಲ್ಲಿ ಬಸವಶಟ್ಟಿ ಎಂಬುವನು ಅಲ್ಲಿನ ಕೆರೆ ದುರಸ್ತಿಗೊಳಿಸಿದ್ದನ್ನು ದಾಖಲಿಸಿದೆ.[28] ಮಡಕಶಿರಾ ತಾಲ್ಲೂಕಿನ ಬೂದಿಲಿಯ ಕ್ರಿ.ಶ. 1539ರ ಶಾಸನದಲ್ಲಿ ಚಿಕ್ಕನರಸಪ್ಪಯ್ಯ ಎಂಬುವನು ಕೆರೆ ದುರಸ್ತಿ ಮಾಡಿಸಿದ್ದನ್ನು ದಾಖಲಿಸಿದೆ.[29] ಇದೇ ತಾಲ್ಲೂಕಿನ ತಮ್ಮಡಿಹಳ್ಳಿ ಶಾಸನದಲ್ಲಿ ಚೆನ್ನಗೌಂಡ ಮತ್ತು ತಮ್ಮಗೌಂಡ ಎಂಬುವರು ಜಂಟಿಯಾಗಿ ಒಡೆದ ಕೆರೆಯ ಕಟ್ಟೆಯನ್ನು ದುರಸ್ತಿಗೊಳಿಸಿರುವುದು ಕಂಡುಬಂದಿದೆ.[30] ಅನಂತಪುರ ಜಿಲ್ಲೆಯ ದೊಡ್ಡಿಗಟ್ಟು ಶಾಸನದಲ್ಲಿ ಮಾಲಿಗೌಂಡ, ಪರಸನಗೌಂಡ ಹಾಗು ತಿರುಮಲಯ್ಯರಾವ್ ಎಂಬುವರು ಕೆರೆ ದುರಸ್ತಿ ಮಾಡಿಸಿರುವುದು ದಾಖಲಾಗಿದೆ.[31] ರಾಯದುರ್ಗ ತಾಲ್ಲೂಕಿನ ಮೇಲಂಜಿಯ ಶಾಸನದಲ್ಲಿ ಮಹಾಮಂಡಲೇಶ್ವರ ಕಾಮರಾಜು ವಿಠ್ಠಲರಾಜ, ತಿರುಮಲರಾಜಯ್ಯದೇವ ಮಹಾರಾಜಯ್ಯ ಎಂಬುವರು ಯಲಿಹಂಜಿ ಮತ್ತು ಸೋಮಲಪುರ ಪಾಳೆಯದಲ್ಲಿ ಸಂಗ್ರಹಿತ ದಂಡದ ಹಣವನ್ನು ಕೆರೆ ದುರಸ್ತಿಗಾಗಿ ವಿನಿಯೋಗಿಸಿರುವುದು ದಾಖಲಾಗಿದೆ.[32] ಒಡವೇಲ್ ತಾಲ್ಲೂಕಿನ ತಲ್ಲಿಪಾಡು ಶಾಸನದಲ್ಲಿ ಪೆದ್ದ ಓಬಳನಾಯಿಡು ಅಲ್ಲಿನ ತೂಬನ್ನು ದುರಸ್ತಿಗೊಳಿಸಿದ್ದನ್ನು ದಾಖಲಿಸಿದೆ.[33]

ಕ್ರಿ.ಶ. 1522ರ ಅನಂತಪುರಂ ಜಿಲ್ಲೆಯ ಬೈರುಸಮುದ್ರದ ಶಾಸನದಲ್ಲಿ 'ನೂಯಿ', 'ಯಾತಂ', 'ಗೂಡ', 'ಗಾರೆಮ್', 'ಕಂಪಿಲಿ', 'ಕಾಲುವ', 'ಚೆರೆಂವು', 'ಕುಂಟ' ಎಂಬ ನೀರಾವರಿಸಂಬಂಧಿತ ಪದಗಳು ಉಲ್ಲೇಖಗೊಂಡಿದ್ದು ನೀರಾವರಿ ವ್ಯವಸ್ಥೆಗೆ ಕನ್ನಡಿ ಹಿಡಿಯುತ್ತಿವೆ.[34]

'ರಾಯಲಿಸೀಮೆ' ಸಾಮ್ರಾಜ್ಯದ ಕೇಂದ್ರವಲಯವಾಗಿದ್ದರೂ, ಆಡಳಿತ ಕೇಂದ್ರಗಳ ಸುತ್ತ ನೀರಾವರಿ ಕಾಮಗಾರಿಗಳು ರಾಜ್ಯದ ಪ್ರಯೋಜಕತ್ವ ಪಡೆದವು. ಉಳಿದಂತೆ ರಾಯಲುಸೀಮೆ ಪ್ರದೇಶದಲ್ಲಿ ಸ್ಥಳೀಯ ಆಡಳಿತಗಾರರು, ಅಧಿಕಾರಿಗಳು, ವ್ಯಕ್ತಿಗಳು ನೀರಾವರಿ ವ್ಯವಸ್ಥೆಯ ನಿರ್ಮಾಣ ಮತ್ತು ನಿರ್ವಹಣೆಯನ್ನು ಕೈಗೊಂಡಿರುವುದು ಕಂಡುಬರುತ್ತಿದೆ. ಅಗ್ರಹಾರ ಮತ್ತು ದೇವಾಲಯಗಳು ಸಹ ನೀರಾವರಿ ಚೌಕಟ್ಟಿನ ನಿರ್ಮಾಣ ಮತ್ತು ನಿರ್ವಹಣೆಯಲ್ಲಿ ಪ್ರಧಾನ ಪಾತ್ರ ವಹಿಸಿರುವುದು ಗಮನಾರ್ಹ. ಈ ಭಾಗದಲ್ಲಿ ಸಂಗಮ ವಂಶದ ಹರಿಹರ-ಬುಕ್ಕರ ಕಾಲದಿಂದಲೇ ಹಲವು ನೀರಾವರಿ ಕಾಮಗಾರಿಗಳಿಗೆ ಶಾಸನೋಕ್ತ ಮಾಹಿತಿ ಇದ್ದು, ಅದು ಕೃಷ್ಣರಾಯನ ಕಾಲದಲ್ಲಿ ವ್ಯಾಪಕತೆ ಪಡೆದುಕೊಳ್ಳುತ್ತದೆ. ಈ ಪರಂಪರೆ ವಿಜಯನಗರೋತ್ತರ ಕಾಲಘಟ್ಟದಲ್ಲಿ ಮುಂದುವರಿದಿದೆ. ಜೀವನದಿ ಕೃಷ್ಣಾದ ಹರಿವು ಈ ಭಾಗದ ಕೆಲವು ಪ್ರದೇಶಗಳನ್ನಾದರು ಹಸಿರುಗೊಳಿಸಿವೆ.

ಅಡಿ ಟಿಪ್ಪಣಿಗಳು

1. *A.R.I.E.,* 1963-64, No. 45, p. 26.
2. *S.I.I.,* Vol. XVI, No. 1, p. 1 (AR No. 503 of 1906).
3. *Ep.Ind.,* Vol. XIV, No. 4, pp. 97-109; *Inscriptions of Andhra Pradesh,* Cuddapah Dist, Vol. II, pp. 10-14.
4. *S.I.I.,* Vol. IX, Part II, No. 462, pp. 473-474 (AR No. 762 of 1916).
5. *Topographical List II,* Kurnool, 469, p. 956.
6. *I.A.P.C.,* Vol. II, No. 54, pp. 63-64 (AR No. 29 of 1966).
7. *S.I.I.,* Vol. IX, Part II, No. 501, pp. 515-516 (AR No. 412 of 1920).
8. *A.R.I.E.,* 1915, No. 12.
9. *Ep.Ind.* Vol. XXXI, No. 21, pp. 139-162.
10. Brown C.P., *Local Records,* No. 44, pp. 238-240.
11. *S.I.I.,* Vol. XVI, No. 161, pp. 169-170 (AR No. 409 of 1926).
12. *S.I.I.,* Vol. IX, Part II, No. 688, p. 679 (AR No. 23 of 1928)
13. *S.I.I.,* Vol. XVI, No. 309, p. 316 (AR No. 564 of 1915).
14. *Ep.Car.,* Vol. X, Gb. 6, p. 228
15. *S.I.I.,* Vol. XVI, No. 14, p. 15 (AR No. 819 of 1917).
16. *T.T.D.I.,* Vol. I, No. 94 (No. 92: T.T.), pp. 185-186.
17. *Ep.Car.,* 1905, Vol. X, Bg. 70, pp. 291-294.
18. *T.T.D.I.,* Vol. V, No. 224, (No. 29 G.I.) pp. 241-243.
19. *Ibid.,* Vol. II, No. 43 (No. 52, T.T), pp. 76-78.
20. *Ibid.,* Vol. II, No. 75 (No. 341 T.T.), 41-42.
21. *Ibid.,* Vol. II, No. 17 (No. 69 T.T.), pp. 72-73
22. *A.R.I.E.,* 1964-65, No. 40, p. 54
23. *A.R.I.E.,* 1906, No. 207, p. 24.
24. *T.T.D.I.,* Vol. I, No. 224.
25. *A.R.I.E.,* 1910, No. 295.
26. *A.R.I.E.,* 1951-52, No. 78.
27. *T.T.D.I.,* Vol. II, No. 9 (No. 162 T.T.), pp. 13-14.
28. *Inscriptions of Andhra Pradesh,* Tirupathi, 1968, No. 157, p. 15.
29. *S.I.I.,* Vol. IX, Part II, No. 291, pp. 604-505.
30. *Ibid.*, Part II, No. 597, p. 609.
31. *Ibid.*, Part II, No. 643, p. 640.
32. *S.I.I.,* Vol. XVI, No. 213, pp. 219-220.
33. *A.R.S.I.,* Ep. 1941-42, No. 491, p. 135.
34. *A.R.S.I.,* 1950, No. 712.

ಹಂಪಿ ಶಾಸನಗಳಲ್ಲಿ ವರ್ತಕರು.

ಎನ್. ಎಸ್. ವೀರೇಶ್ ಉತ್ತಂಗಿ

ಒಂದು ನಾಡು ಅಥವಾ ರಾಜ್ಯ ಅಭಿವೃದ್ಧಿಯಾಗಬೇಕಾದರೆ ವ್ಯಾಪಾರ ವಹಿವಾಟು ಇರಲೇಬೇಕು. ಅಂದರೆ ಉತ್ಪಾದನೆ ಮತ್ತು ಮಾರಾಟ, ಲಾಭ, ನಷ್ಟ, ಸಾಮಾನ್ಯವಾಗಿ ಇರಲೇಬೇಕಾಗುತ್ತದೆ. ಉತ್ಪಾದನೆಯಾದ ವಸ್ತುಗಳು, ಸಾಧನ-ಸಲಕರಣೆಗಳು, ಆಹಾರಧಾನ್ಯಗಳು ಮುಂತಾದವುಗಳನ್ನು ರಿಯಾಯ್ತಿ ದರದಲ್ಲಿ ಕೊಂಡುಕೊಂಡು ಅಗತ್ಯ ಮತ್ತು ಅನಿವಾರ್ಯ ಇದ್ದ ಕಡೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದು ಅಥವಾ ಅಂದು ನಿಗದಿಯಾದ ಬೆಲೆಗೆ ಮಾರಾಟ ಮಾಡುವುದು ವ್ಯಾಪಾರವೆನಿಸುತ್ತದೆ. ಈ ವ್ಯವಹಾರ ಮಾಡುವವರನ್ನು ವ್ಯಾಪಾರಿಗಳು ಅಥವಾ ವರ್ತಕರೆಂದು ಕರೆಯಲಾಗುತ್ತದೆ. ಅಲ್ಲದೆ ಶೆಟ್ಟಿ (ಸೆಟ್ಟಿ)ಗಳೆಂದೂ ಕರೆಯುತ್ತಾರೆ. ವಿಜಯನಗರ ಸಾಮ್ರಾಜ್ಯವು ಜಗದ್ವಿಖ್ಯಾತವಾದದ್ದು ವ್ಯಾಪಾರದಿಂದ ಎಂಬುದು ಗಮನಾರ್ಹ ಅಂಶ. ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪಿಯಲ್ಲಿ ನಾಲ್ಕಾರು ಬಜಾರುಗಳಿದ್ದವು. ಅವುಗಳಲ್ಲಿ ದವಸದಂಗಡಿಗಳು, ಎಲೆ ಅಡಿಕೆ (ಪಾನ್ ಸುಪಾರಿ), ಮುತ್ತು, ರತ್ನ, ವಜ್ರ, ವೈಡೂರ್ಯ, ಬಟ್ಟೆಗಳು ಮುಂತಾದ ವಸ್ತುಗಳನ್ನಿಟ್ಟು ಮಾರುತ್ತಿದ್ದರೆಂದು ವಿದೇಶಿ ಪ್ರವಾಸಿಗರ ಬರವಣಿಗೆ, ಹಂಪಿಯ ಕೆಲವು ಶಾಸನಾಧಾರಗಳಿಂದ ತಿಳಿದುಬರುತ್ತದೆ. ಈ ಮೇಲಿನ ಎಲ್ಲಾ ವಸ್ತು ಸಾಮಗ್ರಿಗಳನ್ನು ಕೊಂಡುಕೊಳ್ಳುವಿಕೆ ಮಾಡುತ್ತಿದ್ದರು ವರ್ತಕರು. ಇವರುಗಳನ್ನು ಕುರಿತು ಹಂಪಿಯ ಹತ್ತಾರು ಶಾಸನಗಳು ದಾಖಲಿಸಿವೆ.

ಪ್ರಸ್ತುತ ಲೇಖನವು ಹಂಪಿ ಶಾಸನಗಳಲ್ಲಿ ಕಂಡುಬರುವ ವರ್ತಕರನ್ನು ಕುರಿತು ವಿಶ್ಲೇಷಿಸಿದೆ. ಹಂಪಿ ಶಾಸನಗಳು ಅನೇಕ ವರ್ತಕರನ್ನು ದಾಖಲಿಸಿವೆ. ಈ ವರ್ತಕರನ್ನು ಸ್ಥಳೀಯ ವರ್ತಕರು, ಪರಸ್ಥಳದ ವರ್ತಕರು, ಶೈವ ವರ್ತಕರು ಹಾಗೂ ವೈಷ್ಣವ ವರ್ತಕರು ಎಂದು ವಿಭಜಿಸಬಹುದು. ಆದರೆ ಈ ಲೇಖನದಲ್ಲಿ ಕೇವಲ ಸ್ಥಳೀಯ ವರ್ತಕರು ಹಾಗೂ ಪರಸ್ಥಳದ ವರ್ತಕರೆಂದು ವಿಭಜಿಸಿ ವಿಶ್ಲೇಷಿಸಲಾಗಿದೆ.

ಸ್ಥಳೀಯ ವರ್ತಕರು: ಇವರು ಹಂಪಿಯವರೇ ಆಗಿದ್ದಾರೆ. ಅಥವಾ ಬೇರೆ ಕಡೆಯಿಂದ ಬಂದು ಹಂಪಿಯಲ್ಲಿ ನೆಲೆಸಿ ವ್ಯಾಪಾರದಲ್ಲಿ ತೊಡಗಿರುವ ಸಾಧ್ಯತೆಯಿದೆ. ಇವರುಗಳು ಹಂಪಿಯ ಕೃಷ್ಣಾಪುರ ಪೇಟೆ, ಪಾನ್ ಸುಪಾರಿ ಬಜಾರು, ವಿರೂಪಾಕ್ಷಪುರ, ವಿಠಲಾಪುರ ಮುಂತಾದ ಕಡೆಗಳಲ್ಲಿ ವ್ಯಾಪಾರ ವಹಿವಾಟು ಮಾಡಿದಂತೆ ಕಂಡುಬರುತ್ತದೆ. ಅಲ್ಲದೆ ಹಂಪಿಯ ಅನೇಕ ದೇವರಿಗೆ ದಾನ ಬಿಟ್ಟ ವಿಚಾರವನ್ನು ಶಾಸನವು ದಾಖಲಿಸುತ್ತವೆ.

ತಳವಾರಘಟ್ಟದ ಬಳಿಯ ಮಂಟಪದ ಕಂಬದ ಮೇಲೆ ಇರುವ ಕಾಲದ ಉಲ್ಲೇಖವಿಲ್ಲದ ಶಾಸನವು "ಶ್ರೀ ಬಸವಂರಾಜದೇವರ ಹರಿವಾ ೧ಕೆ ಚೆಂಮುರಿಸೆಟಿಯ ಮಗ ಮಾರಪ ಸೆಟಿಯರು .... ಪ್ರತಾಪ ಗ ೧೦೦ ವ್ರಿತಿಯ ಕೊಂಡು ಕೊಟನು"[1] ಎಂದು ದಾಖಲಿಸಿದೆ. ಈ ಶಾಸನದ ಪ್ರಕಾರ ಚೆಂಮುರಿಶೆಟ್ಟಿಯ ಮಗ ಮಾರಪಶೆಟ್ಟಿ ಸ್ಥಳೀಯ ಮಠಾಧೀಶನಾದ ಬಸವರಾಜದೇವರಿಗೆ 100 ಪ್ರತಾಪ ಗದ್ಯಾಣ ದಾನ ನೀಡಿದ ವಿಷಯ ತಿಳಿದು ಬರುತ್ತದೆ. ಇವರ ಸ್ಥಳದ ಉಲ್ಲೇಖವಿಲ್ಲದ ಕಾರಣ ಸ್ಥಳೀಯರಾಗಿರಬಹುದು ಇವರು. ವಿಠಲ ದೇವಲಯಕ್ಕೆ ಹೋಗುವ ದಾರಿಯಲ್ಲಿ ನದಿ ದಂಡೆಯ ಹತ್ತಿರ ಇರುವ ದೇವಾಲಯದ ಎದುರು ಇಳಿಜಾರಾದ ಬಂಡೆಯ ಮೇಲಿನ ಕ್ರಿ.ಶ. 1386ರ ವೀರಹರಿಹರರಾಯನ ಕಾಲದ ಶಾಸನವು "ಶ್ರೀ ವೀರಬುಕ್ಕರಾಯನ ಕುಮಾರ ಶ್ರೀ ವೀರಹರಿಹರರಾಯನು .... ಶಕವರುಷ ೧೩೦೮ನೆಯ ಕ್ಷಯ ಸಂವತ್ಸರದ ಮಾಘ ಸು. ೫ .... ಸಂನಂಜೆನಾಥನು ಆ ದೇವರ ಸಿವಾಲಯವ ಮಾಡಿಸಿದಾತನು ಭಯಿರಿ ಸೆಟ್ಟಿಯ ಮಗ ಸುಂಕದ ಹಿರಿಯತಂಮನು ಚಿಕ್ಕ ತಂಮಗೆ ಮಂಗಳ ಮಹಾಶ್ರೀ..."[2] ಎಂದು ದಾಖಲಿಸಿದೆ. ಕ್ರಿ.ಶ. 1386ರಲ್ಲಿ ಬುಕ್ಕರಾಯನ ಮಗ ಹರಿಹರರಾಯನ ಕಾಲದಲ್ಲಿ ಭಯಿರಿಶೆಟ್ಟಿಯ ಮಗ ಸುಂಕದ ಹಿರಿಯತಮ್ಮ ಮತ್ತು ಚಿಕ್ಕ ತಮ್ಮರು ಪಂಪಾಕ್ಷೇತ್ರದಲ್ಲಿ ಸಂನಂಜೆನಾಥನ ಶಿವಾಲಯವನ್ನು ಕಟ್ಟಿದ ವಿಷಯ ತಿಳಿಸುತ್ತದೆ.

ಮತಂಗ ಪರ್ವತದ ಪೂರ್ವಕ್ಕೆ ಹಿಂದು-ಮುಸ್ಲಿಂ ಶೈಲಿಯ ಕಟ್ಟಡದ ಹತ್ತಿರ, ತುರ್ತು ಕಾಲುವೆಯ ದಕ್ಷಿಣಕ್ಕಿರುವ ಬಂಡೆಯ ಮೇಲೆ ಇರುವ ಕ್ರಿ.ಶ. 1406ರ ಶಾಸನವು "....ಪಾರ್ಥಿವ ಸಂ. ಪುಷ್ಯ ಬ ೭ ಸೋ ಬ್ಯಾಪಾರಿ ರಾಮಿಸೆಟ್ಟಿಯ ಮಗ ಬೆಂಮಿಸೆಟಿ ಸ್ವಗ(ರ್ಗ)ಸ್ತನಾದನು । ಸಾಯಿಸೆಟಿ ಬರಸಿದನು....."[3] ಎಂದು ದಾಖಲಿಸಿದೆ. ಅಂದರೆ ಪಾರ್ಥಿವ ಸಂವತ್ಸರದ ಪುಷ್ಯ ಬ. 7 ಸೋಮವಾರದಂದು ವ್ಯಾಪಾರಿ ರಾಮಿಸೆಟ್ಟಿಯ ಮಗ ಬೆಮ್ಮಿಸೆಟ್ಟಿ ನಿಧನಹೊಂದಿದ ನೆನಪಿಗಾಗಿ ಸಾಯಿಸೆಟ್ಟಿ ಶಾಸನ ಬರೆಸಿದ್ದನ್ನು ತಿಳಿಸುತ್ತದೆ. ಬೆಮ್ಮಿಶೆಟ್ಟಿಯು ಹಂಪಿಯ ಪ್ರಸಿದ್ಧ ವರ್ತಕನಾಗಿರಬಹುದಾಗಿದೆ.

ವಿರೂಪಾಕ್ಷ ದೇವಾಲಯದ ಕೃಷ್ಣರಾಯ ಗೋಪುರದ ದಕ್ಷಿಣಕ್ಕಿರುವ ಪ್ರಾಕಾರದ ಗೋಡೆಯ ಮೇಲೆ ಇರುವ ಕ್ರಿ.ಶ. 1529ರ ಕೃಷ್ಣದೇವರಾಯನ ಕಾಲದ ಶಾಸನವು ".... ವಿರೋಧಿ ಸಂವತ್ಸರದ ಭಾದ್ರಪದ ಶು ೧ ಗು ಲು ಶ್ರೀಮತು ಕಂಪಿನಿಸೆಟಿಯರು ಪಿಚಾರಿ ಸೆಟಿಯರು ಆ ದಾಯದ್ಯರು ಮಕಳು ಮುಂತಾದವರೆಲರೂ ವೊಳಕೋಟೆಯ ರೆಂಮುಜಿಡಿಯ ಬಳಿಯ ಮಡುವಿನ ಹೊಲನೂ ಗದೆ ಸಹ.......... ಶ್ರೀ ವಿರೂಪಾಕ್ಷ ದೇವರಿಗೆ ಏಕಾಂತದ ಪರಮಾಂವಂಕೆ ಸಮರ್ಪಿಸಿದು..........."[4] ಎಂದು ಉಲ್ಲೇಖಿಸಿದೆ. ಶ್ರೀ ವಿರೂಪಾಕ್ಷದೇವರ ಏಕಾಂತದ ಸೇವೆಗಾಗಿ ವಿರೋಧಿ ಸಂವತ್ಸರದ ಭಾದ್ರಪದ ಶು 1 ರಂದು ಕಂನಿಶೆಟ್ಟಿ ಪಿಚಾರಿಶೆಟ್ಟಿ ಮತ್ತು ಅವರ ದಾಯಾದಿಗಳ ಮಕ್ಕಳು ಸೇರಿ ವೊಳಕೋಟೆಯ ರೆಂಮುಜೆಡಿಯ ಬಳಿಯ ಮಡುವಿನ ಹೊಲಗದ್ದೆಯನ್ನು ನೀಡಿರುವುದನ್ನು ಶಾಸನ ದಾಖಲಿಸಿದೆ. ಇವರು ಸ್ಥಳೀಯರಾಗಿದ್ದರಿಂದ ಹೊಲಗದ್ದೆಯನ್ನು ದಾನ ನೀಡಲು ಸಾಧ್ಯವಾಗಿದೆ.

ವಿಠಲದೇವಾಲಯದ ಗರ್ಭಗೃಹದ ಉತ್ತರದ ಅಧಿಷ್ಠಾನದಲ್ಲಿ ಇರುವ ಅಚ್ಯುತದೇವರಾಯನ ಕಾಲದ ಕ್ರಿ.ಶ. 1534ರ ಶಾಸನವು "ಜಯಸಂವಛರದ ಶ್ರಾವಣ ಶು. ೧೨........ ಶ್ರೀ ವಿಠಲದೇವರ ಸ್ತಾನದಲು ಆವರಣದ ಒಳಗೆ

ಬಡಗಣ ಭಾಗದಲು....... ವಾಣಿಜ್ಯವೈಶ್ಯನಗರದ
ಶೆಟ್ಟಣದರುಶಿಗೋತ್ರದ ಅಧಿಕಾರಿಯ ತಿಪ್ಪಿಸೆಟ್ಟಿರ ಮಗ

> ಗಂಧದ ತಿಪ್ಪಿಸೆಟ್ಟಿಯರು ಅಚ್ಚುತರಾಯ ಮಹಾರಾಯರಿಗೆ
> ಪು(೦)ಣ್ಯವಾಗಬೇಕೂ ಎಂದು ಪ್ರತಿಷ್ಠೆಯ ಮಾಡಿದ
> ಆಳ್ವಾರದೇವರು ೧೨ ತಿರುಕಚಿನಂಬಿಯಾಳ್ವಾರು ೧
> ಉಭಯಂ ದೇವರು ಹದಿಮೂರು ದೇವರಿಗೆ ನಿತ್ಯದೀಪಾರಾಧನೆ ನೈವೇದ್ಯ....."[5]

ಎಂದು ದಾಖಲಿಸಿದೆ. ಈ ಶಾಸನವು ವಿಠಲದೇವಾಲಯದ ಆವರಣದ ಒಳಗೆ ದಕ್ಷಿಣ ಭಾಗದಲ್ಲಿ ಕಟ್ಟಿದ್ದ ನಾಲ್ಕು ಅಂಕಣದೊಳಗೆ 13 ಆಳ್ವಾರರ ಮೂರ್ತಿಗಳನ್ನು ಅಚ್ಚುತರಾಯನಿಗೆ ಪುಣ್ಯವಾಗಬೇಕೆಂದು ಗಂಧದ ತಿಪ್ಪಿಶೆಟ್ಟಿ ಪ್ರತಿಷ್ಠಾಪಿಸಿ ದಾನ ಬಿಟ್ಟಿದ್ದನ್ನು ವಿವರಿಸುತ್ತದೆ. ಅಲ್ಲದೆ ಹಂಪಿಯಲ್ಲಿ ವಾಣಿಜ್ಯ ವೈಶ್ಯನಗರವಿತ್ತು. ಅದರ ಅಧಿಕಾರಿ ಶೆಟ್ಟಣದರು ಶಿಗೋತ್ರದ ತಿಪ್ಪಿಶೆಟ್ಟಿ ಎಂಬುವನಿದ್ದ ಎಂದು ಉಲ್ಲೇಖಿಸಿದೆ. ವ್ಯಾಪಾರಿಗಳು ಅಥವಾ ವರ್ತಕರು ಹೆಚ್ಚಾಗಿ ವಾಸಿಸುತ್ತಿದ್ದ ಭಾಗವನ್ನು ಅಥವಾ ಎಲ್ಲಾ ತರಹದ ವ್ಯಾಪಾರ ನಡೆಯುತ್ತಿದ್ದ ಕಾರಣ ಅದನ್ನು ವಾಣಿಜ್ಯ ವೈಶ್ಯನಗರವೆಂದು ಕರೆದಿರುವ ಸಾಧ್ಯತೆ ಇದೆ. ಈ ವಾಣಿಜ್ಯ ವೈಶ್ಯನಗರದ ಸಾಧಕ–ಬಾಧಕವನ್ನು ತಿಪ್ಪಿಶೆಟ್ಟಿ ಎಂಬ ಅಧಿಕಾರಿ ನಿರ್ವಹಿಸುತ್ತಿದ್ದ. ಈತನ ಮಗ ಗಂಧದ ತಿಪ್ಪಿಶೆಟ್ಟಿ ಗಂಧದ ವ್ಯಾಪಾರಿಯಾಗಿದ್ದಂತೆ ತೋರುತ್ತದೆ.

ಕೋದಂಡರಾಮ ದೇವಾಲಯದ ಹಿಂಬದಿಯ ವಿಷ್ಣು ದೇವಾಲಯದ ಪ್ರವೇಶದ ಎರಡೂ ಕಡೆಯಲ್ಲಿನ ಕ್ರಿ.ಶ. 1556ರ ಸದಾಶಿವರಾಯನ ಕಾಲದ ಶಾಸನವು

> ".... ಶ್ರೀ ಜಯಾಭ್ಯುದಯ ಶಾಲಿವಾಹನ ಶಕವರ್ಷಂಬುಲು
> ೧೪೭೮ ಆಗುನೇಟಿ ನಲ ಸಂವತ್ಸರ ಕಾರ್ತಿಕ ಶುಧ ೧೨......
> ಶ್ರೀ ಸದಾಶಿವದೇವ ಮಹಾರಾಯಲು ಪೃಥ್ವೀರಾಜ್ಯಂ ಚೇಯುಚುಂಡುಂಗಾಮ
> ಕೋದಂಡಋಷಿಗೋತ್ರಂ ಅಪ್ಪಿಶೆಟ್ಟಿಗಾರಿ ಪೌತ್ರುಡೈನ ಪಾಪಿಶೆಟ್ಟಿಗಾರಿ ಧಂ
> ರ್ಮ ಪತ್ನಿ ಪಾಟಮಗಾರು ಕೊಮಾರಡು ತಿರುವಳಶೆಟ್ಟಿ ಸೇವ...."[6]

ಈ ಶಾಸನವು ಸದಾಶಿವರಾಯನ ಆಳ್ವಿಕೆಯ ಕಾಲದಲ್ಲಿ ಕೋದಂಡಋಷಿಗೋತ್ರದ ಅಪ್ಪಿಶೆಟ್ಟಿಯ ಮೊಮ್ಮಗನೂ, ಪಾಪಿಶೆಟ್ಟಿ ಮತ್ತು ಪಾಟಮ್ಮನ ಮಗನೂ ಆದ ತಿರುಮಳಶೆಟ್ಟಿ ಎಂಬುವನು ವೆಂಕಟೇಶ್ವರ ದೇವರಿಗೆ ಮಾಡಿದ ಸೇವೆ ಕುರಿತು ವಿವರಿಸುತ್ತದೆ. ಈ ಶಾಸನದಲ್ಲಿ ಸ್ಥಳದ ಉಲ್ಲೇಖವಿಲ್ಲದ ಕಾರಣ ತಿರುಮಳಶೆಟ್ಟಿ ಸ್ಥಳೀಯ ಪ್ರಭಾವಿ ವ್ಯಕ್ತಿಯಾಗಿರಬಹುದಾಗಿದೆ.

ಕೃಷ್ಣಸ್ವಾಮಿ ದೇವಾಲಯದ ಈಶಾನ್ಯಕ್ಕೆ ವಿರೂಪಾಕ್ಷ ದೇವಾಲಯಕ್ಕೆ ಹೋಗುವ ಹಳೆ ರಸ್ತೆಯ ಪಶ್ಚಿಮಕ್ಕಿರುವ ಬಂಡೆಯ ಮೇಲೆ ಇರುವ ಕ್ರಿ.ಶ. 15–16ನೇ ಶತಮಾನದ ಶಾಸನವು "ಪಟ್ಟಣಸ್ವಾಮಿ ಚೆನಿಸೆಟಿಯರು ಚೆಂನವಡೆರಿಗೆ, ಬಸವಂಣವೊಡೆರಿಗೆ ಪರುವತದೇವರಿಗೆ ಕಂಚಿಗೆ ಕೊಟ್ಟ ಸ್ವಸ್ತೆಯಿಧರ್ಮ..."[7] ಎಂದಿದೆ. ಪಟ್ಟಣಸ್ವಾಮಿಯಾದ ಚಿನಿಶೆಟ್ಟಿಯು ಚೆನ್ನವಡೆಯ, ಬಸವಣ್ಣವೊಡೆಯ ಪರುವತದೇವರು ಮತ್ತು ಕಂಚಿಗೆ ಕೊಟ್ಟ ದಾನವನ್ನು ಕುರಿತು ವಿವರಿಸುತ್ತದೆ. ಇದಲ್ಲದೆ ಮತಂಗದೇವರ ಗುಹೆಯ ಮೇಲಿನ ಬಂಡೆಯಲ್ಲಿನ ಕಾಲದ ಉಲ್ಲೇಖವಿಲ್ಲದ ಶಾಸನವು "ಪರಿಧಾಮಿ ಸಂವತ್ಸರದ ಪಾಲ್ಗುಣ........ ಸೆಟ್ಟಿ ಬಯಿಸೆಟ್ಟಿ ಬರಮಿಸೆಟ್ಟಿ ಕೊಟ್ಟ ಬಂಮಿಸೆಟಿ ....ಸೆಟ್ಟಿ ಕೊಟ ರಾಮಸೆಟ್ಟಿ ....."[8] ಎಂದಿದೆ. ಪರಿಧಾವಿ ಸಂವತ್ಸರದ ಪಾಲ್ಗುಣ ಮಾಸದಲ್ಲಿ ಬಯಿಶೆಟ್ಟಿ, ಬರಮಿಶೆಟ್ಟಿ, ರಾಮಶೆಟ್ಟಿಯರು ಬಹುಶಃ ಮತಂಗದೇವರಿಗೆ ದಾನಕೊಟ್ಟ ವಿವರ ನೀಡುತ್ತದೆ.

ಈ ಶಾಸನಗಳಲ್ಲದೆ ಹಂಪಿಯ ಒಂದೆರಡು ಶಾಸನಗಳು ಹಂಪಿಯಲ್ಲಿ ವಾಣಿಜ್ಯ ನಗರ ಮತ್ತು ಅಲ್ಲಿನ ಜನರ ಬಗ್ಗೆ ಉಲ್ಲೇಖಿಸಿವೆ. ಹಜಾರರಾಮ ದೇವಾಲಯದ ಬೀದಿಯಲ್ಲಿ ಎರಡು ಅಂತಸ್ತಿನ ಮಂಟಪದ ಮೇಲಿನ ಅಂತಸ್ತಿನ ತೊಲೆಯ ಮೇಲಿರುವ ಕ್ರಿ.ಶ. ಸು. 16ನೇ ಶತಮಾನದ ಶಾಸನವು

"ಶ್ರೀರಗುನಾಥನಕಿ ವಾಣಿಜವಯಿಸೆಲಯಿನ ನಗರವಾರಿ ಸದಾಸೇವ ಶ್ರೀಮಂಟಪಂ....."[9]

ರಘುನಾಥ ದೇವರಿಗೆ ವಾಣಿಜ್ಯ ವೈಶ್ಯನಗರದ ನಿವಾಸಿಗಳು ಮಂಟಪ ಕಟ್ಟಿಸಿರುವುದನ್ನು ತಿಳಿಸುತ್ತದೆ. ಅಂದರೆ ಇಲ್ಲಿ ವರ್ತಕರು ಬಹುಸಂಖ್ಯೆಯಲ್ಲಿದ್ದು ಅವರಿಗಾಗಿ ವಾಣಿಜ್ಯ ವೈಶ್ಯನಗರವನ್ನು ಕಟ್ಟಿಸಲಾಗಿತ್ತು. ಈ ಮಾತನ್ನು ಕೃಷ್ಣಾಪುರಪೇಟೆ ಪರಿಸರದ ಎರಡು ಶಾಸನಗಳು (ಹಂಪಿಯಲ್ಲಿ ಅನೇಕ ವರ್ತಕರಿದ್ದ ಬಗ್ಗೆ) ದೃಢಪಡಿಸುತ್ತವೆ. ಚಂಡಿಕೇಶ್ವರ ದೇವಾಲಯದಲ್ಲಿ ಮುರಿದು ಬಿದ್ದಿರುವ ಸದಾಶಿವರಾಯನ ಕಾಲದ ಕ್ರಿ.ಶ. 1545ರ ಶಾಸನವು ".... ಹಿರಿಯ ಕಾಲುವೆಯ ಚತ್ರಕೆ ದವಸವ ಹಾಕುವ ಬೇಹಾರಿಗಳೂ ದೇವರ ಅಮ್ರುತಪಡಿಗೆ[ವರ್ತ]ನ(ಽ)ಧ(ಂ)ರ್ಮ ಮುಂತಾಗಿ ಬಿಟ್ಟದು...."[10] ಎಂದಿದೆ. ದಳವಾಯಿ ಜಂಗಮಯ್ಯನು ಕೃಷ್ಣಾಪುರ ಪೇಟೆಯ ಹಿರಿಯ ಕಾಲುವೆಯ ಛತ್ರದ ಬಳಿ ಕಟ್ಟಿಸಿದ ದೇವಾಲಯದ ಛತ್ರ ಮತ್ತು ದೇವರ ಅಮೃತಪಡಿಗೆ ವ್ಯಾಪಾರಿಗಳು ದವಸಗಳನ್ನು ದತ್ತಿಬಿಟ್ಟ ವಿಚಾರ ತಿಳಿಸುತ್ತದೆ. ಹಾಗೆಯೇ ಇದೇ ಅರಸನ ಕಾಲದ (1545) ಉದ್ದಾನ ವೀರಭದ್ರ ದೇವಾಲಯದ ಪಶ್ಚಿಮಕ್ಕಿರುವ ಎರಡು ಶಾಸನಗಳು "......ಕೃಷ್ಣಾಪುರದ ಪೇಟೆಯಲು ಮೂಲೆವೀಸ ನಾನಾಹೇರು ೧ ಕ್ಕೆ ಸಲುಉದು ಕಾಸು ೧ ಸೋಮವಾರದಲು ಅಂಗಡಿ ೧ ಕೆ ಸಲುವ ಕಾಸು ೧ [ಅ]ಚುತಾಪುರ ಪೇಟೆಯಲು ಮೂಲೆವೀಸ ಒಳಹೇರು ೧ ಕೆ ಸಲುಉದು ಕಾಸು ೧ ಮ(ಂ)ಗಳವಾರದಲೂ ಅಂಗಡಿ ೧ ಕೆ ಸಲುವ ಕಾಸು ೧ [॥] ......[11] ಎಂದು ದಾಖಲಿಸಿದೆ. ದಳವಾಯಿ ಜಂಗಮಯ್ಯನು ಪ್ರತಿಷ್ಠಾಪಿಸಿದ ಮುದುವೀರಣ್ಣನ ಛತ್ರದಲ್ಲಿ ದಿನನಿತ್ಯ ನಡೆಯುವ ದಾಸೋಹದ ವೆಚ್ಚಕ್ಕಾಗಿ ಅಂದರೆ ಅಕ್ಕಿ, ಹೆಸರು, ತುಪ್ಪ, ಎಣ್ಣೆ, ಮೆಣಸು, ಉಪ್ಪು ಮುಂತಾದವುಗಳಿಗೆ ನಾನಾಹೇರಿನ ವ್ಯಾಪಾರಿಗಳು ಹೇರು 1 ಕ್ಕೆ 1 ಕಾಸನ್ನು ಸೋಮವಾರದ ಅಂಗಡಿಯವರು ಅಂಗಡಿಗೆ 1 ಕಾಸನ್ನು ಮಂಗಳವಾರದ ಅಂಗಡಿಯವರು ಅಂಗಡಿಗೆ 1 ಕಾಸನ್ನು ನೀಡಿರುವ ವಿಷಯ ತಿಳಿದುಬರುತ್ತದೆ. ಈ ಎರಡೂ ಶಾಸನಗಳು ವರ್ತಕರ ಹೆಸರುಗಳನ್ನು ಉಲ್ಲೇಖಿಸದೆ, ನಾನಾ ವ್ಯಾಪಾರಿಗಳು ದಾನ ನೀಡಿರುವುದನ್ನು ಉಲ್ಲೇಖಿಸಿವೆ. ಅಂದರೆ ಹಂಪಿಯಲ್ಲಿ ನಾನಾ ವ್ಯಾಪಾರದ ವರ್ತಕರು ನೆಲೆಸಿದ್ದರೆಂದು ತಿಳಿದುಬರುತ್ತದೆ.

ವಿರೂಪಾಕ್ಷ ದೇವಾಲಯದ ದಕ್ಷಿಣಕ್ಕಿರುವ ಸಣ್ಣ ದೇವಲಯದ ನೆಲಕ್ಕೆ ಹಾಕಿರುವ ಕಲ್ಲಿನ ಮೇಲೆ ಹಾಗೂ ಕೃಷ್ಣಸ್ವಾಮಿ ದೇವಾಲಯದ ಈಶಾನ್ಯಕ್ಕೆ ವಿರೂಪಾಕ್ಷ ದೇವಾಲಯಕ್ಕೆ ಹೋಗುವ ಹಳೆರಸ್ತೆಯ ಪಶ್ಚಿಮಕ್ಕಿರುವ ಬಂಡೆಯ ಮೇಲಿರುವ ಶಾಸನಗಳು "ವೈಶ್ಯ"[12] ಎಂದು ದಾಖಲಿಸಿವೆ. ಈ ಶಾಸನಗಳು ವರ್ತಕ ಸಮುದಾಯಕ್ಕೆ ಸೇರಿದ ವ್ಯಕ್ತಿಗಳನ್ನು ಉಲ್ಲೇಖಿಸಿದಂತಿದೆ. ಇವು ಕ್ರಿ.ಶ. 16ನೇ ಶತಮಾನಕ್ಕೆ ಸೇರಿದ ಶಾಸನಗಳಾಗಿವೆ.

ಈವರೆಗಿನ ಶಾಸನಗಳು ಸ್ಥಳೀಯ ವರ್ತಕರು ದೇವಾಲಯ ಕಟ್ಟಿಸಿದ್ದು, ದಾಸೋಹಕ್ಕೆ ದಾನಬಿಟ್ಟದ್ದು ಮುಂತಾದ ಅಂಶಗಳನ್ನು ಕುರಿತು ದಾಖಲಿಸಿವೆ. ಹಾಗೆಯೇ ಪರಸ್ಥಳದ ವರ್ತಕರು ಸಹ ಹಂಪಿಯ ದೇವರುಗಳಿಗೆ ದಾನ ಬಿಟ್ಟಿರುವುದು ಶಾಸನಗಳಿಂದ ತಿಳಿದುಬರುತ್ತದೆ.

2. ಪರಸ್ಥಳದ ವರ್ತಕರು: ಇವರು ಬೇರೆ ಪ್ರದೇಶದವರಾಗಿದ್ದು, ಹಂಪಿಗೆ ಬಂದು ಇಲ್ಲಿ ನೆಲೆಸಿಯೋ ಅಥವಾ ಪ್ರವಾಸ ಬಂದೋ ಅಥವಾ ತೀರ್ಥಯಾತ್ರೆ ಬಂದು ಇಲ್ಲಿನ ದೇವರುಗಳಿಗೆ ದಾನಬಿಟ್ಟದ್ದು ಹಾಗೂ ಮಂಟಪ ಕಟ್ಟಿಸಿದ್ದನ್ನು ಇಲ್ಲಿನ (ಹಂಪಿಯ) ಶಾಸನಗಳಿಂದ ತಿಳಿದುಬರುತ್ತದೆ.

ಮತಂಗಪರ್ವತದ ಪೂರ್ವಕ್ಕೆ ತುರ್ತಾಕಾಲುವೆಯ ದಕ್ಷಿಣಕ್ಕಿರುವ ಬಂಡೆಯ ಮೇಲೆ ಇರುವ ಶಾಸನವು "ವಿಭವ ಸಂವತ್ಸರದ ಶ್ರಾವಣ ಶು ೬ ದೇವಸೆಟಿಯ ಮಗ ತರಿಸಿಗಿರಿ ವೀರಣಗಳ ಧರ್ಮ"[13] ಎಂದು ಉಲ್ಲೇಖಿಸಿದೆ.

ಈ ಶಾಸನವು ವಿಭವ ಸಂವತ್ಸರ ಶ್ರಾವಣ ಶುದ್ಧ 5ರಂದು ತರಿಸಿಗಿರಿಯ ದೇವಶೆಟ್ಟಿಯ ಮಗ ವೀರಣ್ಣನ ಧರ್ಮ ಎಂದಿದೆ. ಇಲ್ಲಿ 'ತರಿಸಿಗಿರಿ' ಎಂಬುದು ಒಂದು ಊರಾಗಿದ್ದು ಹಂಪಿ ಪರಿಸರಕ್ಕೆ ಹೊರತಾಗಿದೆ. ಆ ಗ್ರಾಮದ ವೀರಣ್ಣನು ಏನೋ ದಾನ ಬಿಟ್ಟಂತೆ (ಬಹುಶಃ ಮತಂಗ ವೀರಭದ್ರರಿಗೆ ಇರಬೇಕು) ಶಾಸನ ತಿಳಿಸುತ್ತದೆ.

ಇದೇ ರೀತಿ ವಿರೂಪಾಕ್ಷ ದೇವಾಲಯದ ವಾಯವ್ಯಕ್ಕೆ ನದಿಯ ದಂಡೆಯಲ್ಲಿ ಹಳೆಯ ಸ್ನಾನಘಟ್ಟದ ಹತ್ತಿರ ಮಂಟಪದ ಎದುರು ಬಂಡೆಯ ಮೇಲಿರುವ ಕಾಲದ ಉಲ್ಲೇಖವಿಲ್ಲದ ಶಾಸನವು

"..... ವಿಜಯ ಸಂವತ್ಸರ ಚೈತ್ರ ಶು 5 ಅಪುಣ್ಯ
ಸೀಲಗೋತ್ರಂ ಯೆಕೆಹಳ್ಳಿ ರತಿಕಂಜ ಬೋವಿಸೆಟಿ ಕೊಡ್ಕು
ಸಿರಿಗಿಸೆಟಿ ಪೆಂಡ್ಲಾಮು ಮಾ(ಟ)ಂಮ ಸೇಯಂಚಿನ
ಹಂಪೆಸ್ಥಳಂ ದೇವಾದುಲ ವುಯ್ಯಾಲ ಕಂಭಾಲು ಶ್ರೀ ...."[14] ಎಂದು ಉಲ್ಲೇಖಿಸಿದೆ.

ತೆಲುಗು ಭಾಷೆಯ ಈ ಶಾಸನವು ವಿಜಯ ಸಂವತ್ಸರದ ಚೈತ್ರ ಶುದ್ಧ 5ರಂದು ಯೆಕೆಹಳ್ಳಿಯ ಬೋವಿಶೆಟ್ಟಿಯ ಮಗ ಸಿರಿಗಿಶೆಟ್ಟಿಯ ಪತ್ನಿ ಮಾಟಮ್ಮಳು ಹಂಪಿಯಲ್ಲಿ ಉಯ್ಯಾಲೆ ಕಂಬಗಳನ್ನು ಮಾಡಿಸಿದಂತೆ ತಿಳಿಸುತ್ತದೆ. ಮಾಟಮ್ಮ ಸಿರಿಗಿಶೆಟ್ಟಿಯ ಪತ್ನಿ, ಸಿರಿಗಿಶೆಟ್ಟಿ ಬೋವಿಶೆಟ್ಟಿಯ ಮಗ ಇವರದು ಮಾತೃಭಾಷೆ ತೆಲುಗು. ಸಹಜವಾಗಿಯೇ ಇವರು ತಮ್ಮ ಮಾತೃಭಾಷೆಯಲ್ಲಿ ಶಾಸನ ಹಾಕಿಸಿದ್ದಾರೆ. ಇವರ ಯೆಕೆಹಳ್ಳಿಯು ತೆಲುಗು ಪ್ರದೇಶಕ್ಕೆ ಸೇರಿರಬಹುದಾಗಿದೆ. ಬಹುಶಃ ಇವರು ಹಂಪಿಗೆ ವಿರೂಪಾಕ್ಷನ ದರ್ಶನಕ್ಕೆ ಬಂದು ಉಯ್ಯಾಲೆ ಕಂಬಗಳನ್ನು ಮಾಡಿಸಿರುವ ಸಾಧ್ಯತೆ ಇದೆ. ಅಥವಾ ಹರಕೆ ತೀರಿಸಲು ಉಯ್ಯಾಲೆ ಕಂಬ ಮಾಡಿಸಿರಬಹುದು.

ಹಾಗೆಯೇ ಕೃಷ್ಣಸ್ವಾಮಿ ದೇವಾಲಯದ ಈಶಾನ್ಯಕ್ಕೆ ವಿರೂಪಾಕ್ಷ ದೇವಾಲಯಕ್ಕೆ ಹೋಗುವ ಹಳೆ ರಸ್ತೆಯ ಪಶ್ಚಿಮಕ್ಕಿರುವ ಬಂಡೆಯ ಮೇಲಿರುವ ಶಾಸನವು "ತಿರುಪತಿ ಬೆಹರಿ ಗಂಧಂ ಬಸುವಯ್ಯ ಶೇವ"[15] ಎಂದು ದಾಖಲಿಸಿರುವುದನ್ನು ಕಾಣಬಹುದು. ತೆಲುಗು ಭಾಷೆಯ ಈ ಶಾಸನವು ತಿರುಪತಿಯ ಗಂಧದ ವ್ಯಾಪಾರಿ ಬಸವಯ್ಯನ ದಾನವನ್ನು ಉಲ್ಲೇಖಿಸುತ್ತದೆ. ಗಂಧದ ವ್ಯಾಪಾರಿಯಾದ ಈತ ಹಂಪಿಗೆ ವ್ಯಾಪಾರಕ್ಕೆ ಬಂದು ಬಂದ ಲಾಭದಲ್ಲಿ ಈತ ಇಲ್ಲಿನ ಯಾವುದೋ ದೇವರಿಗೆ ದಾನ ಬಿಟ್ಟಿರುವುದನ್ನು ಗಮನಿಸಬಹುದು. ಈ ಶಾಸನವು ಕ್ರಿ.ಶ. 15-16ನೇ ಶತಮಾನಕ್ಕೆ ಸೇರಿದ್ದಾಗಿದೆ.

ಹೀಗೆ ಹಂಪಿ ಶಾಸನಗಳಲ್ಲಿ ಕಂಡುಬರುವ ವರ್ತಕರು ವಿರೂಪಾಕ್ಷದೇವರಿಗೆ, ವಿಠಲದೇವರಿಗೆ, ವೆಂಕಟೇಶ್ವರ ದೇವರಿಗೆ ಮತ್ತು ಇತರ ದೇವರಿಗೆ ದಾನ ಬಿಟ್ಟಿರುವುದನ್ನು ಕಾಣಬಹುದು. ಅಲ್ಲದೆ ಮೂರ್ತಿಪ್ರತಿಷ್ಠಾಪನೆ, ಮಂಟಪ ನಿರ್ಮಾಣ, ಉಯ್ಯಾಲೆ ಕಂಬಗಳ ನಿರ್ಮಾಣ ಮಾಡಿರುವುದನ್ನು ಗಮನಿಸಬಹುದಾಗಿದೆ. ವಿಜಯನಗರದ ಅರಸರು ವ್ಯಾಪಾರಿಗಳು ಇರುವ ಸ್ಥಳಕ್ಕೆ ವಾಣಿಜ್ಯವೈಶ್ಯನಗರ ಎಂದು ಕರೆದಿರುವುದನ್ನು ಗಮನಿಸಿದರೆ ವ್ಯಾಪಾರಿಗಳು ಹಂಪಿಯಲ್ಲಿ ತುಂಬಾ ಪ್ರಬಲರಾಗಿದ್ದರೆಂದು ಭಾವಿಸಬಹುದಾಗಿದೆ. ಅಲ್ಲದೆ ಅರಸರು ವಾಣಿಜ್ಯ-ವಹಿವಾಟುಗಳಿಗೆ ಪ್ರೋತ್ಸಾಹಿಸಿದ್ದರಿಂದಲೇ ವಿಜಯನಗರ ಸಾಮ್ರಾಜ್ಯ ಉನ್ನತಿ ಪಡೆದು ವಿಶ್ವವನ್ನೇ ತನ್ನತ್ತ ಸೆಳೆಯಿತೆಂದು ಹೇಳಬಹುದಾಗಿದೆ. ವ್ಯಾಪಾರ ಮತ್ತು ವರ್ತಕರಿಂದ ವಿಜಯನಗರವು ಸಮೃದ್ಧವಾಗಿ ರೂಪುಗೊಂಡಿತೆಂದು ಹೇಳಲು ಸಾಧ್ಯವಿದೆ.

ಅಡಿ ಟಿಪ್ಪಣಿಗಳು.

1. ದೇವರಕೊಂಡಾರೆಡ್ಡಿ ಮತ್ತು ಇತರರು (ಸಂ.), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ 3*, ಹಂಪಿ ಶಾಸನಗಳು. ಪು. 176, ಶಾ.ಸಂ. 224.
2. *ಅದೇ*, ಪು. 118, ಶಾ.ಸಂ. 147.
3. *ಅದೇ*, ಪು. 221, ಶಾ.ಸಂ. 304.
4. *ಅದೇ*, ಪು. 17, ಶಾ.ಸಂ. 27.
5. *ಅದೇ*, ಪು. 143–144, ಶಾ.ಸಂ. 89.
6. *ಅದೇ*, ಪು. 110, ಶಾ.ಸಂ. 136.
7. *ಅದೇ*, ಪು. 65, ಶಾ.ಸಂ. 72.
8. *ಅದೇ*, ಪು. 100, ಶಾ.ಸಂ. 120
9. *ಅದೇ*, ಪು. 206, ಶಾ.ಸಂ. 275.
10. *ಅದೇ*, ಪು. 83, ಶಾ.ಸಂ. 83.
11. *ಅದೇ*, ಪು. 85, ಶಾ.ಸಂ. 84.
12. *ಅದೇ*, ಪು. 15, 64, ಶಾ.ಸಂ. 31, 71.
13. *ಅದೇ*, ಪು. 222, ಶಾ.ಸಂ. 308.
14. *ಅದೇ*, ಪು. 5, ಶಾ.ಸಂ. 9.
15. *ಅದೇ*, ಪು. 64, ಶಾ.ಸಂ. 30.

44

ವಿಜಯನಗರದಲ್ಲಿ ಬಡತನ

ಶ್ರೀಧರ ಪಿಸ್ಸೆ

ವಿಜಯನಗರ ಸಾಮ್ರಾಜ್ಯ ಸಮೃದ್ಧ ಸಂಪತ್ತಿನಿಂದ ತುಂಬಿ ತುಳುಕಿ ಶ್ರೀಮಂತವಾಗಿತ್ತು. ಮುತ್ತು, ರತ್ನ, ವಜ್ರ, ವೈಢೂರ್ಯ, ಬೆಳ್ಳಿ, ಬಂಗಾರಗಳನ್ನು ಬೀದಿ ಬೀದಿಗಳಲ್ಲಿ ರಾಶಿ ಹಾಕಿ ಮಾರಾಟ ಮಾಡಲಾಗುತ್ತಿತ್ತು. ಚಿನ್ನದ ನಾಣ್ಯಗಳು ಚಲಾವಣೆಯಲ್ಲಿದ್ದ ಸುವರ್ಣಯುಗವಾಗಿತ್ತು. ಇಡೀ ದಕ್ಷಿಣ ಭಾರತವನ್ನು ವ್ಯಾಪಿಸಿದ್ದ ಮಧ್ಯಕಾಲೀನ ಯುಗದ ಏಕೈಕ ಮಹಾಸಾಮ್ರಾಜ್ಯವಾಗಿತ್ತು. ಎರಡುನೂರು ವರ್ಷಗಳಿಗೂ ಹೆಚ್ಚು ಕಾಲ ಮುಸ್ಲಿಮರ ದಾಳಿಯನ್ನು ಉತ್ತರದ ತುಂಗಭದ್ರೆಯ ನದಿಯಾಚೆಗೆ ಯಶಸ್ವಿಯಾಗಿ ಹಿಮ್ಮೆಟ್ಟಿಸಿದ ಏಕೈಕ ಹಿಂದೂ ಸಾಮ್ರಾಜ್ಯವಾಗಿತ್ತು. ಇಂಥ ಸಂಪತ್ತು ತುಂಬಿದ್ದ ಸಾಮ್ರಾಜ್ಯವನ್ನು ಮುಸ್ಲಿಮರು ಆರು ತಿಂಗಳ ಕಾಲ ಇಲ್ಲಿನ ಸಂಪತ್ತನ್ನು ಲೂಟಿ ಮಾಡಿ ದೇವಾಲಯಗಳನ್ನು ನಾಶ ಮಾಡಿದರು. ಹೀಗೆಲ್ಲ ವಿಜಯನಗರ ಕುರಿತ ಪ್ರತೀತಿ ಇಂದಿಗೂ ಕನ್ನಡ ನಾಡಿನಲ್ಲಿ ಜನಜನಿತವಾಗಿದೆ.

ಪಾಶ್ಚಾತ್ಯ ಮತ್ತು ಭಾರತೀಯ ಇತಿಹಾಸಕಾರರು ಮಧ್ಯಕಾಲೀನ ಯುಗದಲ್ಲಿ ಭಾರತಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರ ಕಥನಗಳನ್ನೇ ಬಹುಪಾಲು ಆಧರಸಿ ವಿಜಯನಗರ ಸಾಮ್ರಾಜ್ಯದ ಭವ್ಯತೆಯನ್ನು ಅಭಿಮಾನ ಹುಟ್ಟುವಂತೆ ಚಿತ್ರಿಸಿದ್ದಾರೆ. ಜೊತೆಗೆ ಭಾರತೀಯ ಚರಿತ್ರೆಕಾರರು ಪರಂಪರೆಯ ಹೆಮ್ಮೆಯ ಭಾಗವಾಗಿ ಸನಾತನ ಊಳಿಗಮಾನ್ಯ ಸಂಸ್ಕೃತಿಯನ್ನು ಮೆರೆಸಿದ್ದರೆ, ಪಾಶ್ಚಾತ್ಯ ಚರಿತ್ರೆಕಾರರು ಭಾರತೀಯ ಹಿಂದೂ ಮುಸ್ಲಿಂ ಸಮುದಾಯಗಳ ನಡುವೆ ಅನೈಕ್ಯತೆಯನ್ನೂ ಬಿತ್ತಿದ್ದಾರೆ. ಭಾರತೀಯ ಸಮಾಜ ಪ್ರಾಚೀನ, ಮಧ್ಯಕಾಲೀನ, ಆಧುನಿಕ ಹೀಗೆ ಯಾವುದೇ ಕಾಲಮಾನದ್ದಾಗಿರಲಿ ಅದು ಬಹುಸಮುದಾಯಗಳ ಒಕ್ಕೂಟವಾಗಿದೆ. ಶ್ರಮಿಕ ಸಮುದಾಯಗಳು ಬಹುಸಂಖ್ಯೆಯಲ್ಲಿದ್ದರೂ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಭಾರೀ ಹಿಂದುಳಿದ ಸ್ಥಿತಿಯಲ್ಲಿ ದಾರಿದ್ರ್ಯದ ಕಟ್ಟಕಡೆಯ ಸ್ಥಿತಿಗೆ ಸೇರಿವೆ. ಶಿಷ್ಟ ಸಮಾಜದ ಬಹುಸಂಖ್ಯಾತ ಶ್ರಮಿಕ ಸಮುದಾಯಗಳು ಮಾತ್ರವಲ್ಲದೆ ಊರಾಚೆಗಿನ ಸಮುದಾಯಗಳೂ ಒಳಗೊಂಡಿವೆ. ಅವು ಈ ಎರಡೂ ಬಗೆಯ ಇತಿಹಾಸ ಬರವಣಿಗೆಯ ಉದ್ದೇಶ ಮತ್ತು ವೈಧಾನಿಕತೆಯಿಂದ ಹೊರಗುಳಿದಿವೆ. ಚರಿತ್ರೆಯ ಪುಟಗಳಲ್ಲಿ ರಾಜರು, ರಾಜಾಶ್ರಿತರು, ರಾಜ ಪೋಷಕರು, ರಾಜನ ಆಡಳಿತಾಧಿಕಾರಿಗಳು, ಸೇನಾಧಿಕಾರಿಗಳು, ರಾಜನ ಆಕ್ರಮಣಗಳು, ವ್ಯಾಪಾರಿಗಳು, ಶ್ರೀಮಂತರು, ಭೂಮಾಲಿಕರ ಹೊರತು ಶ್ರಮಿಕ ಸಮುದಾಯಗಳ ಕುರಿತು ಒಂದೆರಡು ವಾಕ್ಯಗಳಿಗಿಂತ ಹೆಚ್ಚೇನೂ ಕಂಡುಬರುವುದಿಲ್ಲ. ಹಾಗಾಗಿ ವಿಜಯನಗರ

ಕುರಿತ ಪ್ರಚಲಿತ ಪ್ರತೀತಿ ಬಹುಮಟ್ಟಿಗೆ ಇತಿಹಾಸದ ಪುಟಗಳಲ್ಲಿ ಕಂಡುಬರುವ ವಿವರಗಳ ಸ್ಥೂಲ ಪ್ರತಿಬಿಂಬವೆಂದೇ ಹೇಳಬಹುದು.

ಈ ಬಗೆಯಲ್ಲಿ ಅನುಮಾನ ಹುಟ್ಟಲು ಕಾರಣವಾದ ಅಂಶವನ್ನು ಪರಿಶೀಲಿಸಬಹುದು.

ರಾಬರ್ಟ್ ಸಿವೆಲ್ ತನ್ನ *'ಎ ಫರ್‌ಗಾಟನ್ ಎಂಪೈರ್'* ಗ್ರಂಥದಲ್ಲಿ ರಕ್ಕಸತಂಗಡಿ ಯುದ್ಧದಲ್ಲಿ ರಾಮರಾಯನ ತಲೆಕಡಿಸಿದ ನಂತರ ವಿಜಯನಗರದಲ್ಲಿ ಮೂರುದಿನಗಳಲ್ಲಿ ನಡೆದ ಮೂರು ಬಗೆಯ ಲೂಟಿಗಳನ್ನು ಕೌಟೊನನ್ನು ಆಧರಿಸಿ ಪ್ರಸ್ತಾಪಿಸಿದ್ದಾನೆ.

ಯುದ್ಧದಿಂದ ಸೋತು ಹಿಂದಿರುಗಿದ ಮೊದಲ ದಿನ ರಾಜರಾಯನ ಸೋದರ ತಿರುಮಲ ಮತ್ತು ಅವನ ಸಂಬಂಧಿಕರು ಸಿಂಹಾಸನನಿಷ್ಠ ಸೈನಿಕರ ಬೆಂಗಾವಲಿನಲ್ಲಿ ಅರಮನೆಯ ನೂರು ದಶಲಕ್ಷ ಪೌಂಡುಗಳಿಗಿಂತ ಅಧಿಕ ಬೆಲೆಯ ಬಂಗಾರ, ವಜ್ರಗಳು ಮತ್ತು ಬೆಲೆಯುಳ್ಳ ಹರಳುಗಳು, ರಾಜಲಾಂಛನಗಳು, ರತ್ನಖಚಿತ ಸಿಂಹಾಸನ ಮೊದಲಾದವನ್ನು ಐನೂರೈವತ್ತು ಆನೆಗಳ ಮೇಲೆ ಹೊರೆಸಿಕೊಂಡು ದಕ್ಷಿಣದ ಪೆನುಕೊಂಡೆ ಕೋಟೆಗೆ ಓಡಿಹೋದನು. (ಪು. 211, 212)

ಮರುದಿನ ಬ್ರಿಂಜಾರಿ, ಲಂಬಾಡಿ, ಕುರುಬ ಮುಂತಾದವರ ದರೋಡೆ ಪಂಗಡಗಳು ಮತ್ತು ಕಾಡು ಜನರ ತಂಡಗಳು ವಿಜಯನಗರದಲ್ಲಿ ಆರು ಬಾರಿ ಉಗ್ರಾಣಗಳನ್ನು ಮತ್ತು ಅಂಗಡಿಗಳನ್ನು ಲೂಟಿಮಾಡಿದರು. (ಪು. 212)

ಯುದ್ಧ ಗೆದ್ದ ಮುಸಲ್ಮಾನರು ನಂತರ ಐದು ತಿಂಗಳ ಕಾಲ ಇಡೀ ವಿಜಯನಗರದ ಸಂಪತ್ತನ್ನು ಲೂಟಿ ಮಾಡಿ ನಾಶಗೊಳಿಸಿದರು. ಮಾತ್ರವಲ್ಲದೆ, ಬ್ರಾಹ್ಮಣರು ದಿನನಿತ್ಯ ಭೇಟಿ ನೀಡುವ ಜನರಿಂದ ಕಾಣಿಕೆ ಮತ್ತು ಹಣ ಪಡೆಯುತ್ತಿದ್ದ ಹಾಗೂ ರಾಜರು ಮತ್ತು ದೊರೆಗಳು, ವರ್ತಕರು ಮತ್ತು ಭೂಮಾಲಿಕರು ಸಮೃದ್ಧ ಕಾಣಿಕೆ ಅರ್ಪಿಸುತ್ತಿದ್ದ ದೇವಾಲಯಗಳಲ್ಲಿ ಸಂಪತ್ತು ಪ್ರತಿವರ್ಷವೂ ಹೆಚ್ಚುತ್ತಿದ್ದು, ಮೊದಲಬಾರಿಗೆ ಅವನ್ನು ಕೊಳ್ಳೆ ಹೊಡೆದ ಮುಸ್ಲಿಮರು ನೂರು ಸಾವಿರ ಪೌಂಡು ಬೆಲೆಯ ಬಂಗಾರವನ್ನು ಹೊತ್ತೊಯ್ದರು. (ಪು. 212 ಮತ್ತು 412)

ಇವು ಮಾತ್ರವಲ್ಲದೆ ವಿಜಯನಗರದಲ್ಲಿ ಶೈವ ಮತ್ತು ವೈಷ್ಣವ ಮತಗಳು ಪ್ರಬಲವಾಗಿದ್ದು, ಇವೆರಡರ ನಡುವೆ ಪ್ರಾಬಲ್ಯ ಮೆರೆಯುವ ವಿಷಯದಲ್ಲಿ ಸ್ಪರ್ಧೆಯುಂಟಾಗಿ ವೈಮನಸ್ಯ ಬೆಳೆದಿತ್ತು. ವಿಜಯನಗರಕ್ಕೆ ಯುದ್ಧದಲ್ಲಿ ಸೋಲುಂಟಾದ ಸಂದರ್ಭದಲ್ಲಿ ಇವೆರಡು ಮತಗುಂಪುಗಳ ನಡುವೆ ತೀವ್ರ ತಿಕ್ಕಾಟವಾಗಿ ಹಂಪೆಯ ಮೂಲ ವಿರೂಪಾಕ್ಷ ದೇವಾಲಯ ಮತ್ತು ಹೆಬ್ಬಂಡೆಯ ಮೇಲೆ ಕೊರೆದ ಮೂರ್ತಿಗಳಿರುವ ದೇವಾಲಯಗಳು, ಶಾಕ್ತ ದೇವಾಲಯಗಳು ಹೊರತುಪಡಿಸಿ ಉಳಿದೆಲ್ಲವೂ ಲೂಟಿಯಾಗಿ ನಾಶವಾದವು ಎಂದು ಹೇಳಲಾಗುತ್ತದೆ. ಇದಕ್ಕೆ ಇತಿಹಾಸ ಪುಟಗಳಲ್ಲಿ ಯಾವ ಸಮರ್ಥನೀಯ ಆಧಾರಗಳು ಇಲ್ಲವಾಗಿ ಘಟಿಸಿದ್ದಿರಬಹುದಾದ ವೈದಿಕ ಮತಗಳ ನಡುವಿನ ಸಂಘರ್ಷ ಮುಗುಮ್ಮಾಗಿ ಮುಸ್ಲಿಮರ ದಾಳಿ ಮತ್ತು ಲೂಟಿಯ ಭಾಗವಾಗಿ ಸೇರ್ಪಡೆ ಹೊಂದಿರುವ ಸಾಧ್ಯತೆಯಿದೆ.

ಇವುಗಳಲ್ಲಿ ರಾಜಮನೆತನದ ಪರಿವಾರ ಅರಮನೆಯ ಸಂಪತ್ತನ್ನು ದೋಚಿಕೊಂಡು ಹೋದುದನ್ನು ದರೋಡೆ/ ಲೂಟಿಯೆಂದೆ ಪರಿಗಣಿಸಬೇಕಾಗುತ್ತದೆ. ಅರಮನೆಯ ಸಂಪತ್ತು ಸಾಮಾನ್ಯ ಜನರಿಂದ ವಸೂಲಾದ ಕಂದಾಯದ ಭಾಗವಾಗಿದ್ದು ನಾಡನ್ನು ಆಳುವ ಮತ್ತು ಕಾಪಾಡುವ ಜನರ ಸೌಲಭ್ಯಕ್ಕಾಗಿ ಮೀಸಲಾಗಿತ್ತು. ಒಮ್ಮೆ ಯುದ್ಧ ಸೋತ

ರಾಜಮನೆತನ ನಾಡನ್ನು ಆಳುವ ಮತ್ತು ಕಾಪಾಡುವ ಹಕ್ಕನ್ನು ಕಳೆದುಕೊಳ್ಳುತ್ತದೆ. ಊಳಿಗಮಾನ್ಯ ವ್ಯವಸ್ಥೆಯಲ್ಲಿ ಸೋತ ರಾಜನ ಸಮಸ್ತವೂ ರಾಜ್ಯ ಗೆದ್ದವನ ಪಾಲಾಗುತ್ತದೆ. ಸೋತ ರಾಜ ಪರಿವಾರದವರು ಅರಮನೆಯ ಸಂಪತ್ತನ್ನು ಸ್ವಂತದ್ದಾಗಿ ಭಾವಿಸಿ, ತನಗೆ ಸಾಗಿಸಲು ಸಾಧ್ಯವಾದಷ್ಟನ್ನು ತನ್ನದಾಗಿಸ್ಕಿಕೊಳ್ಳಲು ಹೊತ್ತೊಯ್ದಿತು.

ಗೆದ್ದ ಮುಸ್ಲಿಂ ರಾಜರಿಗೆ ಸ್ವಮತ ಸ್ಥಾಪನೆ-ಪರಮತ ಖಂಡನೆ ಮತ್ತು ವಿಜಯನಗರದ ಸಂಪತ್ತಿನ ಮೇಲೆ ಕಣ್ಣಿತ್ತು. ಅದುವರೆಗೂ ಸೋಲಿಸಲಾಗದಿದ್ದ ವಿಜಯನಗರ ಸಾಮ್ರಾಜ್ಯವನ್ನು ಅವರು ಹೇಗೋ ಒಮ್ಮೆ ಸೋಲಿಸಿದ್ದು ಪೂರ್ತಿಯಾಗಿ ಮಣಿಸಬೇಕಿತ್ತು. ಅಲ್ಲದೆ ಯುದ್ಧ ಗೆದ್ದ ತಮ್ಮ ಸೈನಿಕರನ್ನು ಸಂತೋಷಪಡಿಸುವ ಉದ್ದೇಶದಿಂದಲೂ ಅವರು ಲೂಟಿ ಮಾಡಲು ಉತ್ತೇಜಿಸಿದುದು ಕಂಡುಬರುತ್ತದೆ. ವೈದಿಕ ಮತಗಳು ಕೂಡ ಮುಸ್ಲಿಂ ಧರ್ಮದಂತೆ ಸ್ವಮತ ಪ್ರತಿಪಾದನೆ ಮತ್ತು ಪರಮತ ಖಂಡನೆಯ ನೀತಿಯನ್ನು ಅನುಸರಿಸುತ್ತಿದ್ದುದರಿಂದ ಅವುಗಳ ನಡುವೆ ತಾರಕಕ್ಕೇರಿದ್ದ ಸಂಘರ್ಷವನ್ನು ತಳ್ಳಿಹಾಕಲಾಗದು. ಆ ಸಂದರ್ಭದಲ್ಲಿ ನಡೆದಿದ್ದಿರಬಹುದಾದ ವಿರೋಧಿ ದೇವಾಲಯಗಳ ಧ್ವಂಸ ಮತ್ತು ಲೂಟಿಗಳು ಮತೀಯ ಮನಸ್ಥಿತಿಗೆ ಅನುಗುಣವಾಗಿಯೇ ಇರುವಂತೆ ಕಾಣುತ್ತದೆ.

ಆದ್ದರಿಂದ ಇವೆಲ್ಲವಕ್ಕಿಂತ ಸಮಾಜದ ಕೆಳವರ್ಗಗಳಿಗೆ ಸೇರಿದ ಬ್ರಿಂಜಾರಿ, ಲಂಬಾಡಿ, ಕುರುಬ ಮತ್ತು ಕಾಡು ಜನರ ತಂಡಗಳು ರಾಜನಿಲ್ಲದ ವಿಜಯುನಗರದಲ್ಲಿ ಆರು ಬಾರಿ ಲೂಟಿ ಮಾಡಿದುದು ಭಿನ್ನ ಬಗೆಯ ಸಂಗತಿಯಾಗಿ ಕಾಣುತ್ತದೆ. ವಿಜಯನಗರ ಸಾಮ್ರಾಜ್ಯ ಬಹುಸಂಪತ್ತಿನಿಂದ ಕೂಡಿತ್ತೆಂದು ಹೇಳಲಾಗಿದ್ದು ಆ ಸಾಮ್ರಾಜ್ಯದ ಎಲ್ಲ ಸಮುದಾಯಗಳು ಶ್ರೀಮಂತವಾಗಿದ್ದಿರಬೇಕು ಎಂಬುದು ಸಾಮಾನ್ಯ ಅಭಿಪ್ರಾಯ. ಆದರೆ ಶಿಷ್ಟ ಸಮಾಜದ ಕೆಳಸಮುದಾಯಗಳು ಮತ್ತು ಊರಾಚೆ ವಾಸಮಾಡುತ್ತಿದ್ದ ಜನ ಸಮುದಾಯಗಳು ಯುದ್ಧ ಸೋತ ರಾಜ್ಯದಲ್ಲಿ ಲೂಟಿ ಮಾಡಿದವು ಎಂದು ಹೇಳಿದರೆ ಅವರ ಆರ್ಥಿಕ ಸ್ಥಿತಿ ಉತ್ತಮವಾಗಿರಲಿಲ್ಲ ಎಂದೇ ಧ್ವನಿತವಾಗುತ್ತದೆ. ದಮನಿತ ವರ್ಗಗಳಿಗೆ ಸೇರಿದ ಈ ಸಮುದಾಯಗಳು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಅಸಹಾಯಕರಾಗಿದ್ದಿರಬೇಕು. ಹಾಗಾಗಿ ಅರಾಜಕತೆ ಉಂಟಾಗಿದ್ದ ಸಂದರ್ಭದಲ್ಲಿ ಅವು ತಮ್ಮ ಅವಕಾಶವನ್ನು ಬಳಸಿಕೊಂಡಿದ್ದಿರಬಹುದು. ನಿರ್ಗತಿಕರು, ಹಸಿವಿನ ಶೂಲೆ ತಾಳದವರು ಮಾತ್ರ ಲೂಟಿ ದರೋಡೆಯಂಥ ಅಕ್ರಮ ಸಂಪಾದನೆಗೆ ಮುಂದಾಗಲು ಸಾಧ್ಯ. ಹಾಗಾಗಿಯೇ ಈ ಜನತೆ ಅಕ್ಕಿ, ಗೋಧಿ, ಮುಸುಕಿನ ಜೋಳ, ಜವೆ, ಅವರೆ, ಹಸಿಕಡಲೆ, ಬೇಳೆಕಾಳು, ಹುರುಳಿ ಮತ್ತಿತರ ಧಾನ್ಯಗಳ ದಾಸ್ತಾನು (ಪು. 262)ಗಳಿದ್ದ ಮಳಿಗೆ ಅಂಗಡಿಗಳ ಮೇಲೆ ದಾಳಿ ನಡೆಸಿದ್ದು ಗಮನಾರ್ಹವಾಗಿದೆ. ಹಾಗಿದ್ದಲ್ಲಿ ವಿಜಯನಗರ ಕಾಲದಲ್ಲಿ ತೀವ್ರ ಸ್ವರೂಪದ ಕಡುಬಡತನ ಸಾಮಾಜಿಕ ಸಮಸ್ಯೆಯ ರೂಪ ಪಡೆದಿತ್ತೆ? ಇದು ಕುತೂಹಲ ಹುಟ್ಟಿಸುವ ಅಂಶವಾಗಿದೆ.

ವಿಜಯನಗರದ ಸಂಪದ್ಭರಿತ ಕಾಲದಲ್ಲಿ ಸಂಪತ್ತು ಯಾವ ಯಾವ ಸಮುದಾಯಗಳಲ್ಲಿ ಸಂಗ್ರಹವಾಗಿತ್ತು? ಬಡತನದ ಸ್ವರೂಪ ಹೇಗಿತ್ತು? ಬಡತನ ಯಾವ ವರ್ಗದ ಜನರನ್ನು ಹೆಚ್ಚು ಕಾಡಿಸಿತ್ತು? ಅವರ ಜೀವನ ವಿಧಾನವೇನು? ಅವರ ಸಾಮಾಜಿಕ ಸ್ವರೂಪ ಯಾವ ಬಗೆಯದು? ಬಡವರ ಆದಾಯ ಮೂಲಗಳೇನು? ಅವರ ಕಸುಬು ಏನಾಗಿತ್ತು? ವಿಜಯನಗರದ ಬೀದಿಗಳಲ್ಲಿ ಮುತ್ತು, ರತ್ನ, ವಜ್ರ, ವೈಢೂರ್ಯಗಳನ್ನು ಬಳ್ಳದಿಂದ ಅಳೆದು ಮಾರಾಟ ಮಾಡುತ್ತಿದ್ದ, ಚಿನ್ನದ ತಟ್ಟೆಯಲ್ಲಿ ಊಟ ಮಾಡುತ್ತಿದ್ದ ಚಿತ್ರಗಳ ನಡುವೆ ಇಂಥ ಪ್ರಶ್ನೆಗಳು ನಮ್ಮನ್ನು ಮತ್ತೊಂದು ದಿಕ್ಕಿಗೆ ಎಳೆದೊಯ್ಯುತ್ತವೆ. ವಿಜಯನಗರ ಚರಿತ್ರೆಯ ಬಹುಪಾಲು ಪಠ್ಯಗಳು ಆ ಸಾಮ್ರಾಜ್ಯದ ಗತವೈಭವವನ್ನೇ ಕಟ್ಟಿಕೊಟ್ಟಿರುವ ಹಿನ್ನೆಲೆಯಲ್ಲಿ ಅಂದಿನ ಕಾಲದಲ್ಲಿದ್ದಿರಬಹುದಾದ ಬಡವರ ಸ್ಥಿತಿಗತಿಗಳನ್ನು ಹುಡುಕುವುದು ಮತ್ತು

ಕಟ್ಟಿಕೊಡುವುದು ಮುಖ್ಯವಾಗಿದೆ. ಅಲ್ಲದೆ ಮಧ್ಯಯುಗದ ಸಂಸ್ಕೃತಿಯನ್ನು ಅರಿಯುವಲ್ಲಿ ವಿಜಯನಗರ ಕಾಲದ ಬಡತನ ಅಂದಿನ ವೈಭವದಷ್ಟೆ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಹಾಗಾಗಿ ವಿಜಯನಗರದ ಬಡತನದ ಸ್ವರೂಪವನ್ನು ಅರಿಯುವುದು ಇಲ್ಲಿನ ಉದ್ದೇಶವಾಗಿದೆ.

ಎ.ಎನ್. ಲಾಂಗ್‌ಹರ್ಸ್ಟ್ ತನ್ನ *'ಹಂಪಿ ರ್‍ಯೂನ್ಸ್'* ಕೃತಿಯಲ್ಲಿ ದೇವಸ್ಥಾನಗಳು, ಅರಮನೆಗಳು ಮತ್ತು ನಾಗರಿಕ ಭವನಗಳು ಅದ್ದೂರಿಯಾಗಿ ಕಟ್ಟಲಾಗಿತ್ತು. ವಾಸಗೃಹಗಳೂ, ಖಾಸಗಿಮನೆಗಳೂ ತೀರಾ ಸರಳ ಸಾಧಾರಣವಾಗಿದ್ದಿರಬೇಕು ಆದರೆ ಆ ಬಗ್ಗೆ ದೊರೆತಿರುವುದು ಕೇವಲ ತೇರುಬೀದಿಯ ಹಾಳುಬೀಳು ಮಾತ್ರ ತೀರ ಬಡವರ ಮನೆಗಳಂತೂ ಕೊಳಕಿನ ಮುದ್ದೆಯಾಗಿ ಇವತ್ತಿನ ದೊಡ್ಡ ನಗರಗಳ ಕೊಳಚೆ ಪ್ರದೇಶಗಳನ್ನು ನೆನಪಿಗೆ ತರುವಂತಿದ್ದವು (ಪು. 105–7) ಎಂದು ಹೇಳುತ್ತಾನೆ. ಲಾಂಗ್‌ಹರ್ಸ್ಟ್‌ನಿಗೆ ವಿಜಯನಗರದಲ್ಲಿದ್ದ ಬಡವರ ದಾರುಣ ಜೀವನ ಕಣ್ಣು ಕಟ್ಟಿದೆ. ಆದರೆ ಅವರು ಸಮಾಜದ ಯಾವ ಸಮುದಾಯಗಳಿಗೆ ಸೇರದವರೆಂಬ ಅರಿವು ಅವನಿಗಿದ್ದಂತೆ ಇಲ್ಲ.

ಪೋರ್ಚುಗೀಸ್ ಪ್ರವಾಸಿಗ ಡಾರ್ಟೆ ಬಾರ್ಬೋಸಾ ತನ್ನ *'ದಿ ಬುಕ್ ಆಫ್ ಡಾರ್ಟೆ ಬಾರ್‌ಬೋಸಾ'* ಎಂಬ ಪ್ರವಾಸ ಕಥನದಲ್ಲಿ, ಸಾಮಾನ್ಯ ಜನರ ಮನೆಗಳು ಹುಲ್ಲುಹೊದಿಸಿದವಾಗಿತ್ತು. ಅದನ್ನು ಅವರವರ ವೃತ್ತಿಗಳಿಗೆ ಅನುಗುಣವಾಗಿ ವಿಂಗಡಿಸಲಾಗಿತ್ತು. ಉದ್ದ ಬೀದಿಯ ಅಕ್ಕಪಕ್ಕದಲ್ಲಿ ಅಗಲವಾದ ಅಂಗಳದಿಂದ ಅವು ಕೂಡಿತ್ತು ಎನ್ನುತ್ತಾನೆ. ಅವನು ಸ್ಪಷ್ಟವಾಗಿ ಕೆಳಸಮುದಾಯಗಳ ಕೇರಿಗಳನ್ನು ಕುರಿತು ವಿವರಣೆ ನೀಡಿದ್ದಾನೆ. ಆದರೂ ಅದು ಭಾರತೀಯ ಸಮಾಜದ ಏಣಿಶ್ರೇಣಿ ವ್ಯವಸ್ಥೆಗೆ ಅನುಗುಣವಾಗಿ ಖಚಿತವಾಗಿಲ್ಲ.

ಎ.ಬಿ. ಸಾಲತೊರೆ ತಮ್ಮ *'ವಿಜಯನಗರ ಸಾಮ್ರಾಜ್ಯದ ರಾಜಕೀಯ ಮತ್ತು ಸಾಮಾಜಿಕ ಜೀವನ'* ಕೃತಿಯಲ್ಲಿ 'ವಿಜಯನಗರ ಕಾಲದಲ್ಲಿ ಶ್ರೇಣಿಗಳು ಹಿಂದಿನ ಯಾವ ಶತಮಾನಕ್ಕಿಂತಲೂ ಹೆಚ್ಚಿನ ಸಂಘಟನೆಯನ್ನೂ ಪ್ರಭಾವವನ್ನೂ ಪಡೆದಿದ್ದವೆಂದು ಹೇಳಬಹುದು. ಶ್ರೇಣಿಗಳ ಸದಸ್ಯರನ್ನು ವೀರಬಣಜಿಗರೆಂದು ಕರೆಯಲಾಗುತ್ತಿತ್ತು. ಅವರು ಬಲವತ್ತರವಾದ ಪ್ರಭಾವವುಳ್ಳವರೇ ಆಗಿದ್ದರು. ಅವರಲ್ಲಿ ಹಿರಿಯ ವ್ಯಾಪಾರಿಯನ್ನು "ವಡ್ಡ ವ್ಯವಹಾರಿ". ಎಂದು ಕರೆಯುತ್ತಿದ್ದರು. ಇನ್ನೊಬ್ಬನನ್ನು "ಪಟ್ಟಣಸ್ವಾಮಿ" ಎನ್ನುತ್ತಿದ್ದರು. ಆ ಶ್ರೇಣಿಗಳ ಕೆಲ ಅತ್ಯುಚ್ಚ ಸರಕಾರೀ ಅಧಿಕಾರಿಗಳಿಗೆ "ಪೃಥ್ವೀಶೆಟ್ಟಿ" ಎಂಬ ಪದವಿ ಬಿರುದುಗಳನ್ನು ದಯಪಾಲಿಸುತ್ತಿದ್ದವು. ಶ್ರೇಣಿಗಳ ಧುರೀಣರು ರಾಜ್ಯಾಲಯದಲ್ಲಿಯೂ ಸಹ ಬಲವಾದ ಹಿಡಿತವುಳ್ಳವರಾಗಿದ್ದಂತೆ ಕಂಡುಬರುತ್ತದೆ. ಶ್ರೇಣಿ ಧುರೀಣರು ಸರ್ಕಾರಕ್ಕೆ ಅರ್ಜಿ ಸಲ್ಲಿಸಿದಂತೆ ಅದು ಹೊಸಪಟ್ಟಣಗಳನ್ನು ನಿರ್ಮಿಸಿತು. ಅಲ್ಲದೆ ಶ್ರೇಣಿಯ ಪ್ರಮುಖರು ಸರಕಾರದಿಂದ ಕೆಲ ಕರವಿನಾಯಿತಿಯನ್ನೂ ಪಡೆದರು' [ಉದ್ಧೃತ – ಕೆ.ಎಲ್. ಗೋಪಾಲಕೃಷ್ಣಯ್ಯ, ಕೀರ್ತನೆಗಳಲ್ಲಿ ಸಾಮಾಜಿಕ ನಿಲುವು, ಪು. 304–305, (ಸಂ.) ಎಚ್.ಎನ್. ಮುರಳೀಧರ, ಈ ಪರಿಯ ಸೊಬಗು, 2010, ಪ್ರಸಾರಾಂಗ, ಕವಿಹಂ, ವಿದ್ಯಾರಣ್ಯ] ಎಂದು ಹೇಳಿದ್ದಾರೆ. ಜಾತಿ ವ್ಯವಸ್ಥೆಯ ಮಧ್ಯಮ ಕ್ರಮಾಂಕದಲ್ಲಿ ಬರುವ ವ್ಯಾಪಾರಿ ವರ್ಗ ವಿಜಯನಗರ ಕಾಲದಲ್ಲಿ ಈ ಹಿಂದಿಗಿಂತ ಶ್ರೀಮಂತವಾಗಿತ್ತು. ಅದು ಆಡಳಿತ ವ್ಯವಸ್ಥೆಯೊಂದಿಗೆ ಲಾಭದಾಯಕ ಸಂಬಂಧ ಹೊಂದಿತ್ತು. ಇವರು ತನ್ನ ಸಮಕಾಲೀನ ಶ್ರೀಮಂತ ಸಮಾಜದಲ್ಲಿ ಸಮಪಾಲು ಪಡೆದ ಜನವರ್ಗವಾಗಿತ್ತು.

ವಿಜಯನಗರದ ಕಾಲದಲ್ಲಿ ಜಾತಿ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿತ್ತು ಎಂದು ಹೇಳಲಾಗಿದೆ. ಈ ವ್ಯವಸ್ಥೆಯಲ್ಲಿ ಮೇಲುವರ್ಗಗಳು ಆಳುವ ವರ್ಗಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದವು ಮತ್ತು ಸ್ವಕೇಂದ್ರಿತ ನೀತಿಯನ್ನು ಅನುಸರಿಸಿದ್ದವು. ಹಾಗಾಗಿ ಅಂದಿನ ಕಾಲದಲ್ಲಿ ದೇವಾಲಯಗಳ ಸಮಾಜೋ–ಆರ್ಥಿಕ ಕೇಂದ್ರಗಳಾಗಿ

ರೂಪಿತವಾಗಿದ್ದವು. ಈ ಹಿನ್ನೆಲೆಯಲ್ಲಿ ವಿಜಯನಗರದ ದೇವಾಲಯಗಳು ಕ್ರೋಡಿಕೃತ ಸಂಪತ್ತಿನ ಕೇಂದ್ರಗಳಾಗಿದ್ದವು. ಸಂಪತ್ತಿನ ಉಪಭೋಗದಲ್ಲಿ ಆಳುವ ಸಮಾಜೋ-ರಾಜಕೀಯ ವರ್ಗಗಳು ಸಿಂಹಪಾಲು ಹೊಂದಿದ್ದವು. ಈ ಮಾತನ್ನು ಟೊಮಿಂಗ್ ಪಯೇಸ್‌ನ ಬಣ್ಣನೆ ಸಮರ್ಥಿಸುತ್ತದೆ: "ಬಂಗಾರದ ಗಿಲೀಟು ಮಾಡಿದ ತಾಮ್ರ ಹೊದಿಸಿದ ಚಿಕ್ಕ ಪಾವಟಿಗೆಗಳಿವೆ. ಅಲ್ಲಿಂದ ಮೇಲಿನವರೆಗೆ ಪೂರ್ತಿ ಬಂಗಾರದ ಪದರು ಕೂಡಿಸಲಾಗಿದೆ... ದ್ವಾರಮಂಟಪವಿದೆ. ಅದರ ಮೇಲೆ ಮಾಣಿಕ್ಯ, ವಜ್ರ ಇತರ ಎಲ್ಲ ಬೆಲೆಯುಳ್ಳ ಹರಳುಗಳು ಮತ್ತು ಮುತ್ತುಗಳ ಕೆಲಸವಿದೆ. ದ್ವಾರಮಂಟಪದ ಮೇಲೆ ಎರಡು ಸುವರ್ಣ ಲೋಲಕಗಳಿವೆ. ಈ ಕೋಣೆಯಲ್ಲಿ ಒಂದು ಮಂಚವಿದೆ. ಅದರ ಕಾಲುಗಳು ದ್ವಾರಮಂಟಪದಂತೆಯೆ ಇವೆ. ಅಡ್ಡಪಟ್ಟಿಗಳನ್ನು ಬಂಗಾರದಿಂದ ಹೊದಿಸಲಾಗಿತ್ತು." ಹಾಗೆಯೇ "... ಮೂರು ಬಂಗಾರದ ಕಡಾಯಿಗಳನ್ನು ಕಂಡೆವು. ಅವುಗಳು ಎಷ್ಟು ದೊಡ್ಡವಿದ್ದವೆಂದರೆ ಪ್ರತಿಯೊಂದರಲ್ಲಿ ಅರ್ಧ ಆಕಳು ಬೇಯಿಸಬಹುದಿತ್ತು. ಅವುಗಳೊಂದಿಗೆ ಬಹಳ ದೊಡ್ಡ ಬೆಳ್ಳಿಯ ಕಡಾಯಿಗಳು ಮತ್ತು ಕೆಲವು ಚಿಕ್ಕ ಹಾಗೂ ಕೆಲವು ದೊಡ್ಡ ಬಂಗಾರದ ಪಾತ್ರೆಗಳಿದ್ದವು." ಇದು ವಿಜಯನಗರದ ಅರಮನೆಯ ಬಣ್ಣನೆಯ ಸಣ್ಣ ಉದಾಹರಣೆ. ಅಲ್ಲಿ ಮರ ಕಲ್ಲು ಮಣ್ಣು ಕಬ್ಬಿಣ ಮತ್ತಿತರ ಲೋಹಗಳ ಬದಲಿಗೆ ಚಿನ್ನವನ್ನು ಬಳಸಲಾಗಿತ್ತು. ಅಂದು ಆಳುವ ವರ್ಗಗಳ ಜೀವನ ವಿಧಾನದಲ್ಲಿ ಸಂಪತ್ತಿನ ದುಂದುಬಳಕೆ ಯಥೇಚ್ಛವಾಗಿತ್ತು.

ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಅಸ್ಪೃಶ್ಯರು ಊರ ಹೊರಗೆ ವಾಸಿಸುತ್ತಿದ್ದರು. ನಡುಹಗಲಿನಲ್ಲಿ ಮಾತ್ರ ಅವರಿಗೆ ಊರು ಪ್ರವೇಶ ಮಾಡುವ ನಿಯಮವಿತ್ತು. ಅವರು ಪುರಪ್ರದೇಶ ಮಾಡುವ ಸಂದರ್ಭದಲ್ಲಿ ಸಂಬೋಳಿ ಎಂದು ಅರಚುತ್ತ ಕೋಲು ಕುಟ್ಟುತ್ತ, ತಮ್ಮ ಬರುವಿಕೆ ಬಗ್ಗೆ ಅಚ್ಚರಿಕೆ ನೀಡಬೇಕಿತ್ತು. ಹಾಗೆ ಕುಟ್ಟಿಕೊಂಡು ಬರುವ ಕೋಲಿಗೆ 'ಸಂಬೋಳಿ ಗೋಲು' ಎನ್ನಲಾಗುತ್ತಿತ್ತು. ಈ ಸೂತಕಾಚರಣೆ ಕೆಳಜಾತಿಗಳ ಮೇಲೆ ಬಹಿಷ್ಕೃತ ಜೀವನ ಹೇರುವ ಮೂಲಕ ಅವರ ಹಕ್ಕುಗಳನ್ನು ಜೀವಿತಾವಧಿ ಪೂರ್ತಿ ಕಸಿದುಕೊಂಡಿತ್ತು. ಅವರ ಮೇಲೆ ಹೊರಸಲಾಗಿದ್ದ ಮುಟ್ಟದ, ನೆರಳು ಬೀಳದ ಮತ್ತು ನೋಡದ ಬಹಿಷ್ಕಾರವನ್ನು ಬಹಿಷ್ಕೃತರೇ ತಮ್ಮ ಸ್ವಹಿತ ದೃಷ್ಟಿಕೋನದಿಂದ ಪಾಲನೆ ಮಾಡಬೇಕಿತ್ತು. ಸಂಬೋಳಿ ಆಚರಣೆಯನ್ನು ಅಂದು ಅಸ್ಪೃಸ್ಯರು ಸಾರ್ವಜನಿಕ ಪ್ರದೇಶಗಳ ಸ್ವಚ್ಛತೆ ಮಾಡುವ ಭಾಗವಾಗಿ ಆಚರಿಸುತ್ತಿದ್ದು, ಅವರ ಸಾಮಾಜಿಕ ಜೀವನ ಅಧೋಗತಿಯಲ್ಲಿದ್ದುದರ ಸಂಕೇತವಾಗಿತ್ತು. ಅವರ ಆರ್ಥಿಕ ಜೀವನ ಆಧುನಿಕ ಜಾಡಮಾಲಿಗಳ ಸ್ಥಿತಿಯನ್ನು ಹೋಲುತ್ತದೆ. ಆಧುನಿಕ ಭಾರತದ ಇಂದಿನ ಸಂದರ್ಭದಲ್ಲೂ ಅಸ್ಪೃಶ್ಯತೆ ಜೀವಂತವಾಗಿದೆ. ಮೀಸಲಾತಿ ಸೌಲಭ್ಯ ದೊರೆತು ಐದು ದಶಕಗಳು ಕಳೆದರೂ ಅಸ್ಪೃಶ್ಯರ ಆರ್ಥಿಕ ಸ್ಥಿತಿ ಸಂಪೂರ್ಣ ಸುಧಾರಿಸಿಲ್ಲ. ಮಲವನ್ನು ಮೈಮೇಲೆ ಸುರಿದುಕೊಂಡು ತಮ್ಮ ಹೀನ ಸ್ಥಿತಿಯ ವಿರುದ್ಧ ಪ್ರತಿಭಟನೆ ನಡೆಸುವ ಹಂತ ತಲುಪಿದೆ. ಇಂದಿನ ಸ್ಥಿತಿಗೆ ಹೋಲಿಸಿದರೆ, ಊಹಿಸಲೂ ಸಾಧ್ಯವಿಲ್ಲದಂಥ ಅವರ ಅಂದಿನ ಸ್ಥಿತಿ ಅಸಹನೀಯವೂ ದಯನೀಯವೂ ಆಗಿತ್ತು ಎಂದೇ ಹೇಳಬೇಕು. ಹಾಗೆಯೇ ಅಂದು ಗುಲಾಮರು, ಸೂಳೆದೆರೆ ಕಟ್ಟಲಾಗದಂಥ ಕಡುಬಡತನದಲ್ಲಿದ್ದ ಮಹಿಳೆಯರ ಬಗ್ಗೆಯೂ ಪ್ರಸ್ತಾಪಗಳಿವೆ.

ವಿಜಯನಗರದ ಸಾಮ್ರಾಜ್ಯದ ಆರ್ಥಿಕ ವ್ಯವಸ್ಥೆ ಸಂಪೂರ್ಣವಾಗಿ ಬೇಸಾಯನ್ನು ಅವಲಂಬಿಸಿತ್ತು ಎಂದು ಹೇಳಲಾಗಿದೆ. ಮೆಕ್ಕೆಜೋಳ, ಹತ್ತಿ, ಕಬ್ಬು, ಬತ್ತ, ಗೋಧಿ, ತೆಂಗು, ಎಲೆ, ಅಡಕೆ, ಅರಿಸಿನ, ಮೆಣಸು, ಜೀರಿಗೆ, ಬೇಳೆ ಕಾಳುಗಳು ಮುಂತಾದವನ್ನು ಬೆಳೆಯಲಾಗುತ್ತಿತ್ತು. ದೊಡ್ಡ ಪ್ರಮಾಣದಲ್ಲಿ ಹತ್ತಿಯನ್ನು ಬೆಳೆದು ಸಾಮ್ರಾಜ್ಯದ ಬಟ್ಟೆ ತಯಾರಿಕಾ ಕೇಂದ್ರಗಳಿಗೆ ಒದಗಿಸಲಾಗುತ್ತಿತ್ತು. ಭೂ ಕಂದಾಯ ಸಾಮ್ರಾಜ್ಯದ ಮುಖ್ಯ ಮೂಲ ಆದಾಯವಾಗಿತ್ತು. ಭೂ ಕಂದಾಯ ಭೂಮಿಯ ಫಲವತ್ತತೆಯನ್ನು ಅನುಸರಿಸಿ ಸಾಮ್ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ

ಪ್ರಮಾಣದಲ್ಲಿತ್ತೆಂದು ತಿಳಿದುಬರುತ್ತದೆ. ಸಾಮಾನ್ಯವಾಗಿ ಭೂಕಂದಾಯ ಕೃಷಿ ಉತ್ಪನ್ನದ 1/6 ಭಾಗದಷ್ಟು, ಕೆಲವು ವೇಳೆ 1/4ರಷ್ಟು ನೀಡಬೇಕಿತ್ತು. ಆದರೆ ಬ್ರಾಹ್ಮಣರು ಮತ್ತು ದೇವಾಲಯಗಳ ಭೂಮಿಗೆ 1/20 ರಿಂದ 1/30 ಭಾಗದ ಉತ್ಪನ್ನ ಭೂಕಂದಾಯವಾಗಿ ಇರುತ್ತಿತ್ತು. ರೈತ ಸಮುದಾಯ ಅನೇಕ ಬಗೆಯ ಸಮಸ್ಯೆಗಳನ್ನು ಎದುರಿಸಿದ ಪರಿಣಾಮವಾಗಿ ವಸಾಹತು ಮತ್ತು ವಸಾಹತೋತ್ತರ ಕಾಲದಲ್ಲಿ ರೈತ ಹೋರಾಟಗಳು ನಡೆದಿವೆ. ಅದು ವಸಾಹತುಪೂರ್ವ ಕಾಲದ ಸಣ್ಣಪುಟ್ಟ ರಾಜ್ಯಗಳು ಮತ್ತು ಸಾಮ್ರಾಜ್ಯಗಳಲ್ಲಿದ್ದ ಸ್ಥಿತಿಯ ಮುಂದುವರೆದ ಭಾಗವಾಗಿದ್ದಿರಬೇಕು. ವಿಜಯನಗರ ಸಾಮ್ರಾಜ್ಯದ ಕಾಲದಲ್ಲೂ ನೂರಾರು ರೈತ ದಂಗೆಗಳು ನಡೆದವೆಂದು ತಿಳಿದುಬರುತ್ತದೆ. ಅಂದಿನ ಕಾಲದಲ್ಲಿ ರೈತ ಸಮುದಾಯ ಎದುರಿಸಿದ ಸಮಸ್ಯೆಗಳು, ಅವರ ಆರ್ಥಿಕ ಸ್ಥಿತಿಗತಿಗಳು ಅಧ್ಯಯನಕ್ಕೆ ಒಳಪಡಬೇಕಾದ ವಿಷಯವಾಗಿದೆ.

ಇದು ಶಿಷ್ಟ ಸಮಾಜದ ಸ್ಥೂಲ ಸಮಾಜೋ-ಆರ್ಥಿಕ ಸ್ಥಿತಿ ಎನ್ನಬಹುದು. ಆದರೂ ಶಿಷ್ಟ ಸಮಾಜದ ಹಿಂದುಳಿದ ಮತ್ತು ಕೆಳಸಮುದಾಯಗಳು ಮತ್ತು ಊರಾಚೆ ಜೀವಿಸುತ್ತಿದ್ದ ಸಮುದಾಯಗಳು ಉಂಟುಮಾಡಿಕೊಂಡಿದ್ದ ಆರ್ಥಿಕ ಜೀವನದ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಆದರೆ ವಿಜಯನಗರ ಕಾಲದಲ್ಲಿ ಜೀವಿಸಿದ್ದ ಕನಕ-ಪುರಂದರರು ತಮ್ಮ ರಚನೆಗಳಲ್ಲಿ ನೀಡುವ ಚಿತ್ರಣ ಅಧಿಕೃತವಾದದ್ದೆ ಆಗಿದೆ. ಅವರು ಭಾಗವತರಾಗಿ ಸಾಮ್ರಾಜ್ಯದ ಉದ್ದಗಲಕ್ಕೂ ತಿರುಗಿದರೂ ಒಟ್ಟು ಸಮಾಜದ ನಿಕಟ ಸಂಪರ್ಕ ಪಡೆದಿದ್ದವರೂ ಆಗಿದ್ದರು.

ಕನಕದಾಸರ 'ಮೋಹನ ತರಂಗಿಣಿ'ಯ 19ನೆಯ ಅಧ್ಯಾಯ 'ಅನಿರುದ್ಧನ ಬೇಟೆ' ನವರಸ ಬಣ್ಣನೆಯ ಭಾಗವಾಗಿ ಇದೆ. ಅನಿರುದ್ಧನು ಬೇಟೆಗೆ ಹೋದಾಗ ಅವನ ಸೈನಿಕ ಪಡೆ ಅವನನ್ನು ಹಿಂಬಾಲಿಸಿ ಕಾಡಿನಲ್ಲಿ ಬೇಟೆಯಲ್ಲಿ ಭಾಗವಹಿಸುತ್ತದೆ. ಅದರ ವಿವರಗಳು ಹೀಗಿವೆ: ನಿಗಳವ ತಾಳ್ದ ಕಾಲ್ವೆಂಟೆಕಾರರು ಕೂಡಿ ಮೃಗಯಾತ್ರೆಗೆ ತೆರಳಿದರು (6) ಕಾಲುವೇಗದ 'ಶುನಿ'ವಿಡಿದ ಕಿರಾತರು ಸಾಲಿಟ್ಟು ನಡೆದರೊಗ್ಗಿನಲಿ (10) ಚಿಮ್ಮುವ ಕನಕದಂಡದ ಚಮರದ ಬೇಡರಿಮ್ಮೆಯ್ಯೊಳೊದವಿ-ತೊಗ್ಗಿನಲಿ (11) ಬೆಟ್ಟುವ ಕಾಲ್ಗಟ್ಟಿಗೆ ಕಾಲ್ಗೆದಾಳ್ದಡಗಟ್ಟುವ ಬೇಡರೈದಿದರು (17) ಬೇಸರದೈತರ್ಪ ಬೇಡರಿರ್ದರು ಮಹಿಷಾಸುರ ಬಹುರೂಪಿನಂತೆ (29) ಬೇಡರು ಬಿಗಿದ ಬಿಲ್ಗೋಲಿಂದಲಿಸುವ ಕೈವಾಡವ ಕಂಡು ತನ್ನದಟ (31) ಬಿದ್ದುದ ವಿಹಗೇಶ ಬೀಳುವ ನೆಲದೆ ನಿಂದಿರ್ದ ಕಿರಾತರೋಟಿದರು (37) ಮಸಿವಣ್ಣದ ಬೇಡರಡವಿಯೊಳ್ ಪೊಕ್ಕು ನಿಟ್ಟಿಸಿದರು ನೀರಜ ವನವ (51). ಈ ಬಣ್ಣನೆಯಲ್ಲಿ ಬೇಡರ ಪಡೆ ಬೇಟೆಯ ಉಜ್ಜುಗದಲ್ಲಿ ವ್ಯಕ್ತಪಡಿಸಿರುವ ಉತ್ಸಾಹ, ಹುಮ್ಮಸ್ಸು, ಸಂಭ್ರಮದ ಭಾವನೆಗಳು ಹಂಪಿಯ ಸುತ್ತಮುತ್ತಲಿನ ಇಂದಿನ ಕಾಲದ ಬೇಡ (ವಾಲ್ಮೀಕಿ) ಜನತೆ ಯುಗಾದಿಯ ಕರಿಹಬ್ಬದಿನದಂದು ಬೇಟೆಯಾಡಿದ ಮಿಕಗಳ ಮೆರವಣಿಗೆಯಲ್ಲಿನ ಮನಸ್ಥಿತಿಯನ್ನು ಹೋಲುತ್ತದೆ. ಇಂದಿನ ಹೊಸಪೇಟೆ ಮತ್ತು ಕೊಪ್ಪಳ ಸುತ್ತಮುತ್ತಲ ಪ್ರದೇಶಗಳಲ್ಲಿ ಬೇಡ (ವಾಲ್ಮೀಕಿ) ಮತ್ತು ಕುರುಬ ಸಮುದಾಯಗಳೇ ಪ್ರಮುಖ ಸಮುದಾಯಗಳಾಗಿದ್ದು ಅಂದಿಗೂ ಅನ್ವಯವಾಗುವ ವಾಸ್ತವಾಂಶವಾಗಿದೆ. ಕನಕದಾಸರು ತಮ್ಮ ಕಾವ್ಯದಲ್ಲಿ ಬೇಡರ ಬಗ್ಗೆ ನೀಡಿರುವ ಮಾಹಿತಿ ಅಂದಿನ ಬೇಡ (ವಾಲ್ಮೀಕಿ) ಸಮುದಾಯದ ಸ್ಥಿತಿಗತಿಗಳನ್ನು ತಿಳಿಸುತ್ತದೆ. ಬಹುಸಂಖ್ಯಾತರಾಗಿದ್ದ ಅವರು ವಿಜಯನಗರದ ಸೈನಿಕ ಪಡೆಯಲ್ಲಿ ಸೇವೆ ಸಲ್ಲಿಸುತ್ತಿದ್ದರೆಂದು ಇದರಿಂದ ತಿಳಿಯಬಹುದು. ಅಂದು ರಾಜನಿಂದ ನೇಮಕವಾಗಿ ನಿಗದಿತ ಸಂಬಳ ಪಡೆಯುತ್ತಿದ್ದ ಸೈನಿಕರು ಮತ್ತು ಯುದ್ಧ ಕಾಲದಲ್ಲಿ ಸೈನಿಕರಾಗಿ ಹೋರಾಡಿ ಲಾಭದಾಯಕ ಇನಾಮು ಪಡೆಯಲು ಸಾವಿನ ಹಂಗು ತೊರೆದು ಹೋರಾಡುವ ಸೈನ್ಯಪಡೆ ಎಂದು ಎರಡು ವಿಧವಿತ್ತು. ಅಂದಿನ ಬೇಡ (ವಾಲ್ಮೀಕಿ) ಸಮುದಾಯದ ಪಡೆ ಯಾವ ಬಗೆಯದಾಗಿತ್ತು ಮತ್ತು ಅವರ ಆರ್ಥಿಕ ಸ್ಥಿತಿ ಹೇಗಿತ್ತು ಎಂಬ ಸ್ಪಷ್ಟ ಮಾಹಿತಿ ಅಧ್ಯಯನದಿಂದ ದೊರೆಯಬೇಕಿದೆ.

ಅನಿರುದ್ಧನು ಸೈನ್ಯದೊಡನೆ ಹೊರಟು ಮುಂಬನದಲ್ಲಿದ್ದ ಬುಡಕಟ್ಟು ನೆಲೆಸಿದ್ದ ಪ್ರದೇಶಕ್ಕೆ ಬಂದು ಬುಡಕಟ್ಟು ಮಹಿಳೆಯರಾದ ಚಿಂಚಿತಿಯರ ಆಟಗಳನ್ನು ನೋಡಲು ಬರುತ್ತಾನೆ. ಅಲ್ಲಿ ಆ ಮಹಿಳೆಯರು ಗಜದಂತ ಮುಸಲದಿಂದ ಬಿದಿರಕ್ಕಿ ಕುಟ್ಟುತ್ತಿರುವುದನ್ನು ಕಾಣುತ್ತಾನೆ. ಯವ್ವನ ತುಂಬಿದ ಆ ಮಹಿಳೆಯರ ಗುಂಪು 'ರಂಗುನೀಲದ ಪುತ್ತಳಿಗಳಂತೆ' ಕಂಡಿದ್ದಾರೆ. ಅವರ ಬಣ್ಣನೆಯನ್ನು ಕವಿ ಹೀಗೆ ಮಾಡಿದ್ದಾನೆ: ಪಾಡುವರ್ ಕೆಲರು ಪೆರ್ಮೊರದೊಳಕ್ಕಿಯನಿಕ್ಕಿ ಮಾಡುವರ್ ಕೆಲರು ಬೇಂಟೆಗಳ ನೋಡುವರ್ ಕೆಲರು ಬಿಲ್ಗೋಲಾಂತು ನಿಂದುದು ಬೇಡವೆಣ್ಗಳು ಕಣ್ಗೆ ರಮಿಸಿ (70) ತೋರ ನುಣ್ಮೊಲೆಯೆದೆ ದಿಗಿಲಾಂತು 'ಪತ್ರೋಪ' ಹಾರವ ತಂದಿತ್ತರವಗೆ (72) ಬಿದಿರಕ್ಕಿಯಿನಿ ಜೇನುತುಪ್ಪ ಕರ್ಜುರ ದ್ರಾಕ್ಷಿ ಬದರಿ ಮುಂತಾದ ಸತ್ಫಲವ ಉದುರಿದ ಕಳಿವಣ್ಣ ಪೊಟ್ಟಣಗಳ ತಂದು ಇದಿರಿಕ್ಕಿದರು ಮೇಲ್ಮೇಲೆ (73) ಕಾಡೆಮ್ಮೆಯ ಕೋಡು ವರಹದಂತಿಯ ದಾಡೆ ನಾಡೆ ಶಾರ್ದೂಲ ಸಿಂಹಗಳ ಗೂಢ ಪಾದಾಂಗುಳಿ ನಖ ಭೇರುಂಡನ ರೂಢ ಪೆರ್ಗರಿಯಿತ್ತರೊಲಿದು (74) ನೆರೆಯದ ಕಡಿಮೆಗೆ ತಮ್ಮ ಕಣ್ಮನವ ಕೈ ಸೆರೆಗೊಟ್ಟರಡವಿಗಾತಿಯರು (78) ರತಿ ವಿಶ್ವರೂಪಾಂತು ಜಯಸಿ ಬಂದಂತೆ ಚಿಂಚಿತಿಯರೊಪ್ಪಿದರು ಬಿಲ್ವಿಡಿದು (83) ಬಟ್ಟಬಲ್ಮೊಲೆಯ ಚಿಂಚಿತಿಯರಟ್ಟುಳಿ ಬೆನ್ನ ಬಿಟ್ಟುದಿಲ್ಲೆಂದಳಲಿದರು (84) ಬಳ್ಳಾರಿ ಮತ್ತು ನಲ್ಲೂರು ಜಿಲ್ಲೆಗಳಲ್ಲಿ ಚೆಂಚು ಬುಡಕಟ್ಟು ಇಂದಿಗೂ ಕಂಡುಬರುತ್ತದೆ. ವಿಜಯನಗರದ ಶಿಲ್ಪಗಳಲ್ಲಿ ಕೆತ್ತನೆ ಮಾಡಿರುವ ಬಿಲ್ಲುಗಾತಿಯರು ಚೆಂಚು ಬುಡಕಟ್ಟಿನ ಮಹಿಳೆಯರೆಂದೂ ಚೆಂಚುಲಕ್ಷ್ಮಿಯರೆಂದೂ ತಿಳಿದುಬರುತ್ತದೆ. ಚಿಂಚಿತಿಯರು ಚೆಂಚು ಬುಡಕಟ್ಟಿನ ಮಹಿಳೆಯರಾಗಿದ್ದು, ತಮ್ಮಲ್ಲಿಗೆ ಬಂದ ರಾಜನಿಗೆ ಪತ್ರೋಪ ಹಾರವನ್ನು ಹಾಕಿ ಸ್ವಾಗತ ನೀಡುತ್ತಾರೆ. ನಂತರ ಅವರು ಕಾಡಿನಲ್ಲಿ ಸಂಗ್ರಹಿಸಿದ ಆಹಾರ ಮತ್ತು ಕಾಡಿನಲ್ಲಿ ಸಾಹಸ ಮೆರೆದು ಬೇಟೆಯಾಡಿ ಪಡೆದ ಕ್ರೂರ ಪ್ರಾಣಿಗಳ ವಿಶಿಷ್ಟ ವಸ್ತುಗಳನ್ನು ಅರ್ಪಿಸುತ್ತಾರೆ. ಅವರು ಸಮರ್ಪಿಸಿದ ಆಹಾರ ಪದಾರ್ಥಗಳಲ್ಲಿ ಬಿದರಕ್ಕಿ ಜೇನುತುಪ್ಪ ಖರ್ಜೂರ ದ್ರಾಕ್ಷೆ ಬದರಿ ಮುಂತಾದ ಸತ್ಫಲಗಳು ಮತ್ತು ಉದುರಿದ ಕಳಿತ ಹಣ್ಣುಗಳಿದ್ದು ಗಮನಿಸತಕ್ಕದ್ದಾಗಿದೆ. ಬಿದರಕ್ಕಿ ಬರಗಾಲದಲ್ಲಿ ಪಸಲು ಬಿಡುವ ಧಾನ್ಯವಾಗಿದೆ. ವಿಜಯನಗರದಲ್ಲಿ ದಾಸ್ತಾನು ಮಾಡುತ್ತಿದ್ದ ಮತ್ತು ಬಳಸುತ್ತಿದ್ದ ಅಕ್ಕಿ ಗೋಧಿ ಜವೆ ಬೇಳೆ ಕಾಳು ಮತ್ತಿತರ ದವಸ ಧಾನ್ಯಗಳ ಬಳಕೆಯೆ ಬುಡಕಟ್ಟುಗಳಲ್ಲಿ ಇರಲಿಲ್ಲವೆಂಬುದು ಮುಖ್ಯ. ಇಂಥ ಕಾಡು ಜನತೆಗೆ ಕಾಡಿನಲ್ಲಿ ಬರ ಬಂದು ಆಹಾರ ಉತ್ಪಾದನೆಯಿಲ್ಲದೆ ಕಾಡು ಫಲಾಹಾರಗಳು ಸಂಗ್ರಹವಾಗದೆ ಇದ್ದ ಸಂದರ್ಭಗಳಲ್ಲಿ ಗೆಡ್ಡೆ ಗೆಣಸು ಕಂದು ಮೂಲಗಳನ್ನು ಅಗೆದು ತಿಂದು ಹಸಿವು ನೀಗಿಸುವುದು ದಾರುಣವೂ ಅನಿವಾರ್ಯವೂ ಆಗಿತ್ತು. ಅದಕ್ಕೂ ಕೊರತೆಯುಂಟಾದಾಗ ನಗರಗಳಲ್ಲಿ ದಾಸ್ತಾನು ಮಾಡಿರುವ ಧಾನ್ಯಗಳನ್ನು ಪಡೆಯಬೇಕಿತ್ತು. ಆದರೆ ಅದನ್ನು ಪಡೆಯಲು ಅಗತ್ಯವಾದ ಹಣಕಾಸಿನ ವ್ಯವಹಾರ ಮತ್ತು ಸಂಪತ್ತಿನ ಶೇಖರಣೆ ಇಲ್ಲದ ಹಣಕಾಸು ಹೀನ ಸ್ಥಿತಿಯಲ್ಲಿ ಅವರು ಹಸಿವನ್ನು ಹಿಂಗಿಸಿಕೊಳ್ಳುವುದು ಹೇಗೆ? ಈ ಸ್ಥಿತಿ ವಿಜಯನಗರದಲ್ಲಿ ಆರು ಬಾರಿ ಉಗ್ರಾಣಗಳನ್ನು ಮತ್ತು ಅಂಗಡಿಗಳನ್ನು ಲೂಟಿ ಮಾಡಿದ ಬ್ರಿಂಜಾರಿಗಳು, ಲಂಬಾಡಿಗಳು, ಕುರುಬ ಮುಂತಾದ ಪಂಗಡಗಳು ಮತ್ತು ಕಾಡು ಜನರ ತಂಡಗಳ ಸ್ಥಿತಿಯೂ ಆಗಿತ್ತು. ಹಾಗಿದ್ದಲ್ಲಿ ವಿಜಯನಗರದ ಸಂಪತ್ತು ಬಹುಸಮುದಾಯಗಳ ಅಗತ್ಯವನ್ನು ಪೂರೈಸದಿದ್ದಲ್ಲಿ ಮತ್ತು ಕೆಲವರು ಊಳಿಗದವರೂ ಮತ್ತೆ ಕೆಲವರು ಒಡೆಯರೂ ಆಗಿ ಸಂಪತ್ತಿನ ಅಸಮಾನ ಹಂಚಿಕೆಯಾದಲ್ಲಿ ಇಡೀ ಸಾಮ್ರಾಜ್ಯ ಸಂಪದ್ಭರಿತವಾಗಿತ್ತು ಎಂಬ ಕಲ್ಪನೆಯನ್ನು ಅನ್ವಯಿಸುವುದು ಹೇಗೆ ಸರಿ?

ಕನಕದಾಸರ 'ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' (ಕ.ಸಾ.ದ.–178) ಜೀವನದ ಮೂಲ ಅವಶ್ಯಕತೆಯಾದ ಅನ್ನ, ಬಟ್ಟೆ ಮತ್ತು ಸೂರಿನ ಸಮಸ್ಯೆ ವಿಜಯನಗರದ ಬಹುಪಾಲು ಸಮುದಾಯಗಳ ಸಮಸ್ಯೆಯಾಗಿತ್ತು

ಎಂದು ಕಾಣಿಸಿದೆ. ಅಂದು 'ಕೊಟ್ಟಣವನು ಕುಟ್ಟಿಕೊಂಡು ಕಟ್ಟಿಗೆಯನು ಹೊತ್ತುಕೊಂಡು ಕಷ್ಟ ಮಾಡಿ ಬದುಕುವುದು' ಮತ್ತು 'ಕುಂಟೆ ತುದಿಗೆ ಕೊರಡು ಹಾಕಿ ಹೆಂಟೆ ಮಣ್ಣು ಸಮನು ಮಾಡಿ ರೆಂಟೆ ಹೊಡೆದು ಬೆಳೆಸುವುದು' ಸಾಮಾನ್ಯವಾಗಿತ್ತು. ಸಮಾಜದಲ್ಲಿ ನೆಲೆಸಿದ್ದ ಜೀವನ ವೃತ್ತಿಗಳೆಲ್ಲ ಶ್ರಮಜೀವಿಗಳಿಗೆ ಅವರ ಶ್ರಮಕ್ಕೆ ತಕ್ಕ ಭೌತಿಕ ಫಲವಾಗಿ ಸಂಪತ್ತು ದೊರೆಯದಂತೆ ಮಾಡಿಸುವ ವೃತ್ತಿಗಳಾಗಿದ್ದವು. ಈ ಸಾಮಾಜಿಕಾಂಶ ಬೌದ್ಧಿಕ ಶರಣಾಗತಿ ಮತ್ತು ಭೌತಿಕ ಶರಣಾಗತಿಯನ್ನೂ ಉಂಟುಮಾಡಿತ್ತು. ಕೆಳಜಾತಿಯವರನ್ನು ಪರರ ಸೇವೆಗೆ, ದಾಸ್ಯವೃತ್ತಿಗೆ, ಊಳಿಗತನಕ್ಕೆ ಮಾತ್ರ ಯೋಗ್ಯರನ್ನಾಗಿಸಿತ್ತು. ಬಂಟನಾಗಿ ಬಾಗಿಲ ಕಾಯ್ವೆ ಹರಿಯ/ವೈಕುಂಠದ ಸೊಂಪಿನ ದಾಸರ ಮನೆಯ/ ಎಂಜಲ ಹರಿವಾಣಂಗಳ ಬೆಳಗುವೆ/ಸಂಜೆಗೆ ಪಂಜಿನ ದಾಸನಾಗಿರುವೆ/ಮೀಸಲೂಳಿಗವ ನಾ ಮಾಡಿಕೊಂಡಿರುವೆ/ ಶೇಷ ಪ್ರಸಾದವ ನಾ ಮಾಡಿಕೊಂಡಿರುವೆ (ಕ.ಸಾ.ದ.4–74). ಕಸ ಗುಡಿಸುವ, ರಂಗೋಲಿ ಹಾಕುವ, ರತ್ನಗಂಬಳಿ ಹಾಸುವ ಮತ್ತು ಮಡಚಿಡುವ ಮನೆಗೆಲಸದ ಕಾಯಕ ದಾಸ್ಯತನದಿಂದ ಕೂಡಿ ಕೆಳಜಾತಿಗಳ ದಾರಿದ್ರ್ಯವೇ ಆಗಿತ್ತು.

ಪುರಂದರದಾಸರು ನಾಡಿನ ಸಂಚಾರದ ಸಮಯದಲ್ಲಿ ಕಂಡುಕೊಂಡ ವಾಸ್ತವ ಸಂಗತಿ – ಹಸಿವು ಮತ್ತು ಬಟ್ಟೆಗಳು ಸಮಸ್ಯೆಗಳು. 'ಲಂಗೋಟಿ ಬಲುವೊಳ್ಳೆದಣ್ಣ' (ಪು.ಪ. 273) ಅಂಥದೊಂದು ರಚನೆಯಾಗಿದೆ. ಬಡವರು, ಬೈರಾಗಿಗಳು, ಕಳ್ಳರು, ಬ್ರಾಹ್ಮಣರು, ಭಿಕ್ಷುಕರು, ಮಠದಯ್ಯ ಮೊದಲಾದ ಸಮಾಜದ ನಾನಾ ಜನವರ್ಗಗಳ ಉಡುಗೆ, ಭಿಕ್ಷುಗಾರರ ಆರ್ಥಿಕ ಸ್ಥಿತಿಗತಿ, ಅಂದಿನ ಕಾಲದಲ್ಲಿ ಸಾಕ್ಷರಹೀನತೆ, ಬಡತನ, ಅಧಿಕಾರಹೀನಸ್ಥಿತಿಯ ಸಂಕೇತವಾಗಿದ್ದ ಲಂಗೋಟಿ ಬಡವರ ಜನಜೀವನದ ಭಾಗವಾಗಿತ್ತು. ಹಾಗೆಯೇ 'ಈ ಗ್ರಾಮದಲಿ ವಾಸ ಇರುವುದೆ ಪ್ರಯಾಸ' ವಿಜಯನಗರ ಸಾಮ್ರಾಜ್ಯದ ಗ್ರಾಮದಲ್ಲಿದ್ದ ದುಸ್ತರ ಸ್ಥಿತಿಯ ದಾಖಲೆಯಾಗಿದೆ

ಈ ಗ್ರಾಮದಲಿ ವಾಸ ಇರುವುದೆ ಪ್ರಯಾಸ

ಹೊನ್ನು ಹಣಗಳು ಇಲ್ಲ ಇರುವುದಕೆ ಸ್ಥಳವಿಲ್ಲ
ತನ್ನವರು ತನಗೆ ಎಂಬುವರು ಇಲ್ಲ
ಬೆನ್ನು ತೊಕ್ಕಂಬದಕೆ ಮತ್ತೆ ಸೋದರರಿಲ್ಲ
ಇನ್ನಿಲ್ಲ ಇಹವಿಲ್ಲ ಪರವಿಲ್ಲವಲ್ಲ

ದುಡುಕಿ ಕೆಡುಕನಿಗೂರು ಒಡವೆಯುಳ್ಳವಗೂರು
ಒಡಲಾಸೆಗೆ ತಿರುಗಿ ತಿಂಬುವಗೆ ಊರು
ಬಿಡದೆ ಪರವಸ್ತುಗಳ ಅಪಹರಿಸವವಗೂರು
ಕಡು ಪಾಪಿ ಕಪಟಿಯಾದವಗೀ ಊರು

ಎನ್ನ ಮನದುಬ್ಬವ ಆರಿಗುಸಿರಲೊ ದೇವ
ಚೆನ್ನಕೇಶವ ನನ್ನ ಚರಣವನ್ನು
ಇನ್ನು ನಂಬಿದೆನಯ್ಯ ಪುರಂದರವಿಠಲ
ಬಿನ್ನಪವ ನೀ ಕೇಳಿ ಎನ್ನ ಸಲಹಯ್ಯ (ಪು.ಸಾ.ದ. 3–158)

ವಿಜಯನಗರ ಸಾಮ್ರಾಜ್ಯ ಸಂಪದ್ಭರಿತವಾಗಿದ್ದು ಹೊರದೇಶಗಳೊಂದಿಗೆ ವ್ಯಾಪಾರ ವಹಿವಾಟು ನಡೆಯುತ್ತಿತ್ತು. ಹಂಪೆಯ ಸಾಲು ಮಂಟಪಗಳಲ್ಲಿ ದವಸ ಧನ್ಯ ಮುತ್ತು ಹವಳಗಳನ್ನು ರಾಶಿ ಹಾಕಿ ಮಾರಲಾಗುತ್ತಿತ್ತು. ವಿಜಯನಗರ

ಕಾಲದಲ್ಲಿ ಆರ್ಥಿಕ ಚಟುವಟಿಕೆಗಳಲ್ಲಿ ಉಂಟಾದ ಹೆಚ್ಚಳದಿಂದಾಗಿ ಗ್ರಾಮಗಳು ಪಟ್ಟಣಗಳಾಗಿಯೂ ಪಟ್ಟಣಗಳು ನಗರಗಳಾಗಿಯೂ ಬೆಳವಣಿಗೆ ಕಂಡವು. ಅದರ ಪರಿಣಾಮವಾಗಿ ಸಂಚಾರಿ ಮಾರುಕಟ್ಟೆಗಳಾದ ಸಂತೆಗಳು ಸಂಘಟಿತವಾದವು. ವಿಜಯನಗರದ ಸಾಮ್ರಾಜ್ಯ ಆರ್ಥಿಕವಾಗಿ ಸುಭದ್ರ ಸ್ಥಿತಿಯಲ್ಲಿತ್ತು. ಆದರೆ ವಿಜಯನಗರದ ಗ್ರಾಮಗಳಲ್ಲಿ ಇತರ ಸಾಮಾಜಿಕ ಸಮಸ್ಯೆಗಳಿಗೆ ಕಾರಣವಾಗುವ ಮಟ್ಟಿಗೆ ಬಡತನ ತೀವ್ರತರವಾಗಿ ಅಡರಿಕೊಂಡಿತ್ತು. ಇಲ್ಲಿನ ಜನ ತಮ್ಮ ಬಡತನದ ಬೇಗೆಯನ್ನು ಪರಿಹರಿಸಿಕೊಳ್ಳಲು ಅನುಸರಿಸಿದ ಮಾರ್ಗ ನಾಗರಿಕ ಸಮಾಜದ ರೀತಿಯದಲ್ಲ. ಅವರ ಹಸಿವಿನ ಶೂಲೆ ಅವರನ್ನು ಕೆಡುಕರನ್ನಾಗಿ, ಕಳ್ಳರನ್ನಾಗಿ, ಸುಳ್ಳರನ್ನಾಗಿ, ಕಪಟಿಗಳನ್ನಾಗಿ, ಊರೂರು ತಿರುಗಿ ಹೊಟ್ಟೆ ಹೊರೆಯುವಂತೆ, ಒಡವೆ–ವಸ್ತು ಹೊಂದುವಂತೆ ಮಾಡಿತ್ತು. ಸಿವೆಲ್‌ನ ಮಾತಿನಲ್ಲಿ ಹೇಳುವುದಾದರೆ ದರೋಡೆಗಾರರು/ಲೂಟಿ ಮಾಡುವವರನ್ನಾಗಿ ರೂಪಿಸಿತ್ತು. ದುಡಿಮೆಯಿಲ್ಲದೆ ಜೀವನ ಸಾಗಿಸಲು ಹೆಣಗುತ್ತಿದ್ದ ಮತ್ತು ಅಡ್ಡದಾರಿ ಹಿಡಿದು ಕಷ್ಟಪಡುತ್ತಿದ್ದ ಇಂಥ ಜನರ ಸ್ಥಿತಿ ದಾರುಣವಾಗಿತ್ತು. ಈ ಹಿನ್ನೆಲೆಯಲ್ಲಿ ರಾಜಧಾನಿಕೇಂದ್ರಿತ ವೈಭವವನ್ನು 'ಲೊಳಲೊಟ್ಟೆ' ರಚನೆ ನಿರಾಕರಿಸಿದೆ.

ಲೊಳಲೊಟ್ಟೆ ಎಲ್ಲಾ ಲೊಳಲೊಟ್ಟೆ
ಆನೆ ಕುದುರೆ ಒಂಟೆ ಲೊಳಲೊಟ್ಟೆ
ಬಲು ಸೇನಾ ಭಂಡಾರವು ಲೊಳಲೊಟ್ಟೆ
ಮಾನಿನಿಯರ ಸಂಗ ಲೊಳಲೊಟ್ಟೆ
ದೊಡ್ಡ ಕ್ಷೋಣೀಶನೆಂಬುದು ಲೊಳಲೊಟ್ಟೆ

ಮುತ್ತು ಮಾಣಿಕ್ಯ ಲೊಳಲೊಟ್ಟೆ
ಚಿನ್ನ ಛತ್ರಚಾಮರ ಧ್ವಜ ಲೊಳಲೊಟ್ಟೆ
ಸುತ್ತಗಲಕೋಟೆ ಲೊಳಲೊಟ್ಟೆ
ಮತ್ತೆ ಉತ್ತಮ ಪ್ರಭುತ್ವ ಲೊಳಲೊಟ್ಟೆ

ಕಂಟಕರೆಂಬೋರು ಲೊಳಲೊಟ್ಟೆ
ನಮ್ಮ ನೆಂಟರು ಇಷ್ಟರು ಲೊಳಲೊಟ್ಟೆ
ಉಂಟಾದ ಗುಣನಿಧಿ ಪುರಂದರವಿಠಲನ
ಬಂಡನಾಗದವ ಲೊಳಲೊಟ್ಟೆ

ಚರಿತ್ರೆ ಮತ್ತು ಪರಂಪರೆಯಲ್ಲಿ ಅಂದಿನ ಸುಭದ್ರ ಸೈನ್ಯ ವ್ಯವಸ್ಥೆ, ಕಾಮಜೀವನಕ್ಕೆ ನೀಡಿದ್ದ ಮಹತ್ವ, ದೊಡ್ಡ ಸಾಮ್ರಾಜ್ಯದ ಹಿರಿಮೆ, ಮುತ್ತು ಮಾಣಿಕ್ಯಗಳ ವ್ಯಾಪಾರ ವಹಿವಾಟು, ಏಳುಸುತ್ತಿನ ಸುಭದ್ರ ಕೋಟೆ, ಉತ್ತಮ ಪ್ರಭುತ್ವ, ಮುಸ್ಲಿಂ ವೈರಿಗಳು, ಸಾಮಾಜಿಕ ಸಂಬಂಧಗಳನ್ನೆಲ್ಲ ಪ್ರಸ್ತಾಪಿಸಿದೆ. ಅವು ಹೊಂದಿರುವ ಮೌಲ್ಯವ್ಯವಸ್ಥೆಯಲ್ಲಿ ಕಂಡುಬರುತ್ತಿದ್ದ ವಾಸ್ತವದ ಭಿನ್ನನೆಲೆಯನ್ನು ಸ್ಥಾಪಿಸಿದೆ. ಸ್ಥಾಪಿಸಿದೆ. ಅಂದಿನ ರಾಜಕೀಯ ವ್ಯವಸ್ಥೆ ಕುರಿತ ನಿರಾಸೆ ಆಡಳಿತ ವ್ಯವಸ್ಥೆಯ ಜನಪರ ವಿರೋಧಿ ನಿಲುವನ್ನು ಧ್ವನಿಸುತ್ತದೆ. ಇಡೀ ವ್ಯವಸ್ಥೆಯ ಟೊಳ್ಳುತನ ಅಭಿವ್ಯಕ್ತವಾಗಿದೆ. ಜನಪರವಲ್ಲದ ವ್ಯವಸ್ಥೆಯ ವಿಫಲತೆಯನ್ನು ತಾತ್ವಿಕ ಮಟ್ಟದಲ್ಲಿ ಎತ್ತಿ ಹಿಡಿದಿದೆ.

ಬಡತನವೆಂದರೆ ಸಂಪತ್ತು ಇಲ್ಲದಿರುವಿಕೆ ಆಗಿರದೆ ಪಡೆಯದಿರುವಿಕೆ ಅಥವಾ ಪಡೆಯುವ ಅವಕಾಶ ಇಲ್ಲದಿರುವಿಕೆಯೆ ಆಗಿದೆ. ಜೀವನದ ಮೂಲಭೂತ ಆವಶ್ಯಕತೆಗಳನ್ನು ಪೂರೈಸಿಕೊಳ್ಳುವ ಶಕ್ತಿ ಪಡೆದುಕೊಳ್ಳದಿರುವುದು,

ಮತ್ತು ಜೀವನಾವಶ್ಯಕ ವಸ್ತುಗಳು ಮಾರುಕಟ್ಟೆಯಲ್ಲಿ ದೊರಕಿದರೂ ಅವನ್ನು ಪಡೆದುಕೊಳ್ಳುವಲ್ಲಿ ಬಲಹೀನತೆ ಉಂಟಾಗಿರುವುದು ದಾರಿದ್ರ್ಯದ ಕಲ್ಪನೆಯಾಗಿದೆ. ಬಡತನಕ್ಕೂ ಸಮಾಜದಲ್ಲಿ ನೆಲೆಸಿರುವ ಅಸಮಾನತೆ ಅಥವಾ ಆಚರಣೆಯಲ್ಲಿರುವ ತಾರತಮ್ಯ ನೀತಿಗೂ ಪರಸ್ಪರ ಸಂಬಂಧವಿದೆ. ಸ್ವಾತಂತ್ರ್ಯದ ಕಲ್ಪನೆಗೂ ಸಮಾಜದಲ್ಲಿ ಮೈತಳೆದಿರುವ ಬಡತನದ ಸ್ವರೂಪಕ್ಕೂ ಸಂಬಂಧವಿದೆ. ಇದು ಸಾಂಸ್ಕೃತಿಕ ಆಶಯಗಳಿಗೆ ಸಂಬಂಧಪಟ್ಟ ಸಮಸ್ಯೆಯಾಗಿದ್ದು, ಸಂಪತ್ತು ಸಮಾಜದಲ್ಲಿ ಎಲ್ಲರಿಗೂ ಸಮಾನ ಹಂಚಿಕೆಯ ಅವಕಾಶ ಇಲ್ಲದಿದ್ದ ದ್ಯೋತಕವಾಗಿದೆ.

ಇದು ವಿಜಯನಗರ ಸಮೃದ್ಧ ಸಂಪತ್ತಿನಿಂದ ತುಂಬಿತುಳುಕಿ ವೈಭವದಿಂದ ಮೆರೆದಿದ್ದ ಹಾಗೆಯೇ ಕಡು ಬಡತನದಿಂದಲೂ ನರಳಿದ್ದಕ್ಕೆ ಸೂಚಕವಾಗಿದೆ. ಸಾಮ್ರಾಜ್ಯದ ಈ ಎರಡು ಮುಖಗಳು ತಾಳಿಕೋಟೆ ಯುದ್ಧ ನಂತರದ ಹಲವು ಬಗೆಯ ಲೂಟಿಗಳಿಗೆ ಕಾರಣವಾಗಿರುವಂತಿದೆ.

ಆಧಾರಗ್ರಂಥಗಳು

1. ರಾಬರ್ಟ್ ಸಿವೆಲ್ (ಅನು: ಸದಾನಂದ ಕನವಳ್ಳಿ), *ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ (ವಿಶೇಷ ಆವೃತ್ತಿ), 2010.
2. ಕೆ. ಶ್ರೀಕಂಠಯ್ಯ, *ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ*, ಗೀತಾ ಬುಕ್ ಹೌಸ್, ಮೈಸೂರು, 1992.
3. ಜಿ.ಜಿ. ಮಂಜುನಾಥನ್ (ಸಂ.), *ಕನಕ ಸಾಹಿತ್ಯ ದರ್ಶನ ಸಂಪುಟ–3, ಮೋಹನ ತರಂಗಿಣಿ*, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, 1999.
4. ಸುಧಾಕರ (ಸಂ.), *ಕನಕ ಸಾಹಿತ್ಯ ದರ್ಶನ ಸಂಪುಟ–4, ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು*, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, 1999.
5. ಎ.ವಿ. ನಾವಡ, ಗಾಯಿತ್ರಿ ನಾವಡ (ಸಂ.), *ಸಾವಿರಾರು ಕೀರ್ತನೆಗಳು*, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, 2000.
6. ಆರ್.ಆರ್. ದಿವಾಕರ (ಸಂ.), *ಕರ್ನಾಟಕದ ಪರಂಪರೆ ಸಂಪುಟ–2*, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006.
8. ಎಚ್.ಎಸ್. ಮುರಳೀಧರ (ಸಂ), 2010, *ಈ ಪರಿಯ ಸೊಬಗು*, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, 2010.
8. ಎಸ್.ಕೆ. ರಾಮಚಂದ್ರರಾವ್ (ಸಂ.), *ಪುರಂದರರ ಸಾಹಿತ್ಯ ದರ್ಶನ ಸಂಪುಟ–3*, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, 1985.
9. Duarte Barbosa, *The book of Duarte Barbosa: An Account of the Countries Bordering on the Indian Ocean and Their Inhabitants*, Asian Educational Services, New Delhi, 1989.
10. A.N. Longhurst, *Hampi Ruins*, Asian Educational Services, India, 1998.
11. Mahalingam T.V., *Administration and Social Life under Vijayanagar Empire*, University of Madras, 1940.
12. Mahalingam T.V., *Economic Life in the Vijayanagar Empire*, University of Madras, 1951.

ಗದಗ ಜಿಲ್ಲೆಯಲ್ಲಿ ವಿಜಯನಗರ ಕಾಲದ ಸಾಂಸ್ಕೃತಿಕ ಚಟುವಟಿಕೆಗಳು

ಡಾ॥ ಅಪ್ಪಣ್ಣ ಎನ್. ಹಂಜೆ

ಪೀಠಿಕೆ

ಕನ್ನಡನಾಡಿನ ಇತಿಹಾಸ ಮತ್ತು ಸಂಸ್ಕೃತಿಯೊಂದಿಗೆ ಹಾಸುಹೊಕ್ಕಾಗಿ ಸಾಗಿ ಬಂದಿರುವ ಗದಗ ಜಿಲ್ಲೆಯ ಭೂಪ್ರದೇಶದ ಪೌರಾಣಿಕ, ಪ್ರಾಗೈತಿಹಾಸಿಕ ಮತ್ತು ಐತಿಹಾಸಿಕ ವೈಶಿಷ್ಟ್ಯಗಳು ಗಮನಾರ್ಹವಾಗಿವೆ. ಈ ಪ್ರದೇಶದ ಮಣ್ಣಿನಲ್ಲಿ ಅಗೋಚರವಾದ ಶಕ್ತಿಯಿದೆ. ಹಾಗಾಗಿಯೇ ಇಲ್ಲಿ ಅನೇಕ ಅತಿಶಯವಾದ ಜೀವಂತಪವಾಡ ಸದೃಶಗಳು ಜರುಗಿವೆ. ಇವು ಇಂದಿಗೂ ಅವಿಚ್ಛಿನ್ನವಾಗಿ ಮುಂದುವರೆದಿವೆ. 1999ರಲ್ಲಿ ಗದಗ, ನರಗುಂದ, ಮುಂಡರಗಿ, ರೋಣ, ಶಿರಹಟ್ಟಿ ತಾಲ್ಲೂಕುಗಳನ್ನು ಒಳಗೊಂಡು ನೂತನ ಜಿಲ್ಲೆಯಾಗಿ ರೂಪಿತವಾಗಿರುವ ಈ ಪ್ರದೇಶವು ಒಟ್ಟು 4,657.2 ಚ.ಕಿ.ಮೀ. ವಿಸ್ತೀರ್ಣ ಹೊಂದಿದೆ. ಇದು ಸಮುದ್ರಮಟ್ಟದಿಂದ 648.00 ಅಡಿ ಎತ್ತರದಲ್ಲಿದೆ. ಈ ಜಿಲ್ಲೆಯಲ್ಲಿ 321 ಗ್ರಾಮಗಳಿವೆ. ಇದರ ಉತ್ತರಕ್ಕೆ ಬಾಗಲಕೋಟ, ಪೂರ್ವಕ್ಕೆ ಕೊಪ್ಪಳ, ಆಗ್ನೇಯಕ್ಕೆ ಬಳ್ಳಾರಿ, ದಕ್ಷಿಣಕ್ಕೆ ಹಾವೇರಿ, ಪಶ್ಚಿಮಕ್ಕೆ ಧಾರವಾಡ, ವಾಯವ್ಯಕ್ಕೆ ಬೆಳಗಾವಿ ಜಿಲ್ಲೆಗಳು ಮೇರೆಗಳಾಗಿವೆ. ಇಲ್ಲಿಯ ನೈಸರ್ಗಿಕ ಸಂಪದ್ಭರಿತ ಸಂಪನ್ಮೂಲಗಳು ಮತ್ತು ಹಿತಮಿತವಾದ ಹವಾಮಾನವು ಇತಿಹಾಸಪೂರ್ವ ಕಾಲದ ವಿವಿಧ ಶಿಲಾಯುಗ ಸಂಸ್ಕೃತಿಗಳನ್ನು ಮತ್ತು ಇತಿಹಾಸ ಕಾಲದ ಬಹುತೇಕ ಅರಸು ಮನೆತನಗಳನ್ನು ಆಕರ್ಷಿಸಿ ಆಶ್ರಯವೊಡ್ಡಿವೆ.

ಗದಗ ಜಿಲ್ಲೆಯಲ್ಲಿ ವಿಜಯನಗರ ಮನೆತನದ ಆಳರಸಾದಿಯಾಗಿ ಅಧಿಕಾರಿಗಳು ಸರ್ವಧರ್ಮಗಳ ದೇವಾಲಯಗಳು, ಕೆರೆ–ಬಾವಿಗಳು, ಅರವಟ್ಟಿಗೆಗಳ ನಿರ್ಮಾಣ, ಜೀರ್ಣೋದ್ಧಾರ, ಅವುಗಳ ನಿರ್ವಹಣೆಗೆ ಮತ್ತು ವಿವಿಧ ಸಾಂಸ್ಕೃತಿಕ ಚಟುವಟಿಕೆಗಳಿಗೆ ಉದಾರವಾಗಿ ದಾನ–ದತ್ತಿಗಳನ್ನು ಕೊಡಮಾಡಿ ಸಾಮರಸ್ಯವನ್ನು ಮೆರೆದಿದ್ದಾರೆ. ಆ ಮನೆತನಕ್ಕೆ ಸಂಬಂಧಿಸಿದಂತೆ ಇದುವರೆಗೆ ಈ ಜಿಲ್ಲೆಯ ಗದಗ ತಾಲ್ಲೂಕಿನಲ್ಲಿ ಇಪ್ಪತ್ತು, ಶಿರಹಟ್ಟಿ ತಾಲ್ಲೂಕಿನಲ್ಲಿ ಇಪ್ಪತ್ತು, ರೋಣ ತಾಲ್ಲೂಕಿನಲ್ಲಿ ಹದಿಮೂರು, ನರಗುಂದ ತಾಲ್ಲೂಕಿನಲ್ಲಿ ಮೂರು, ಮುಂಡರಗಿ ತಾಲ್ಲೂಕಿನಲ್ಲಿ ಹತ್ತು – ಹೀಗೆ ಒಟ್ಟು ಅರವತ್ತಾರು ಶಾಸನಗಳು ಬೆಳಕಿಗೆ ಬಂದಿವೆ. ಜೊತೆಗೆ ಆ ಕಾಲದಲ್ಲಿ ಜೀರ್ಣೋದ್ಧಾರವಾಗಿರುವ ಕೆಲವು ದೇವಾಲಯಗಳು ಮತ್ತು ವಿವಿಧ ಸಂದರ್ಭಗಳಲ್ಲಿ (ಯುದ್ಧ ಇತ್ಯಾದಿ) ಹೋರಾಡುತ್ತ ವೀರಮರಣವನ್ನಪ್ಪಿದ ವೀರರ ವೀರಗಲ್ಲುಗಳು, ಆ ವೀರರ ಪತ್ನಿಯರು ಸಹಗಮನ ಮತ್ತು ಅನುಗಮನದಿಂದ ಪ್ರಾಣತ್ಯಾಗ ಮಾಡಿದ

ಮಹಾಸತಿಗಲ್ಲುಗಳು ಅನೇಕ ಗ್ರಾಮಗಳಲ್ಲಿ ಗೋಚರಿಸುತ್ತವೆ. ಹಾಗೆಯೇ ಅಂದು ಅರಸರ ಅಧೀನದಲ್ಲಿ ಈ ಜಿಲ್ಲೆಯ ಆಡಳಿತವನ್ನು ನಿರ್ವಹಿಸುತ್ತಿದ್ದ ಅಧಿಕಾರಿಗಳು, ನಾಯಕರು ಮತ್ತು ಪ್ರಜೆಗಳು ಪ್ರತಿಷ್ಠಾಪಿಸಿದ ವಿವಿಧ ಧರ್ಮಗಳ ಶಿಲ್ಪಗಳೂ ಕೆಲವು ಗ್ರಾಮಗಳಲ್ಲಿವೆ. ಅಂದು ಕೆಲವು ಜೈನ ಮುನಿಗಳು ಮತ್ತು ಶ್ರಾವಕರು ಸಲ್ಲೇಖನವ್ರತದಿಂದ ಸಮಾಧಿಮರಣವನ್ನಪ್ಪಿದ ಪರೋಕ್ಷ ವಿನಯಾರ್ಥವಾಗಿ ನಿಲ್ಲಿಸಿದ ನಿಶಿಧಿಗಲ್ಲುಗಳೂ ಕೆಲವು ಗ್ರಾಮಗಳಲ್ಲಿ ಕಾಣುತ್ತವೆ. ದೇವಾಲಯಗಳು, ಮಠಗಳು ಮತ್ತು ಆಚಾರ್ಯರಿಗೆ ದಾನ ಮಾಡಿದ ಭೂಮಿಯ ಚಕ್‌ಬಂದಿಯನ್ನು ಗುರುತಿಸಲು ನಾಲ್ಕೂ ಮೂಲೆಗಳಲ್ಲಿ ನಿಲ್ಲಿಸಿದ ಲಿಂಗಮುದ್ರೆ, ವಾಮನಮುದ್ರೆಗಲ್ಲುಗಳೂ ವಿವಿಧೆಡೆಗಳಲ್ಲಿ ಕಂಡುಬರುತ್ತವೆ. ಇವೆಲ್ಲವೂ ವಿಜಯನಗರ ಮನೆತನದ ಆಳ್ವಿಕೆಯ ಸಂದರ್ಭದಲ್ಲಿ ಗದಗ ಜಿಲ್ಲೆಯ ಆಡಳಿತ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಇತಿಹಾಸವನ್ನು ಪುನಾರಚಿಸಲು ಪ್ರಾಥಮಿಕ ಆಕರಗಳಾಗಿವೆ. ಆ ಕಾಲದಲ್ಲಿ ಈ ಜಿಲ್ಲೆಯಲ್ಲಿ ರಚಿತವಾಗಿರುವ ಕೃತಿ-ಕಾವ್ಯಗಳೂ ಪೂರಕ ಮಾಹಿತಿಯನ್ನು ಒದಗಿಸುತ್ತವೆ.

ಆಡಳಿತ ವ್ಯವಸ್ಥೆ

ವಿಜಯನಗರ ಅರಸರು ಪ್ರಜೆಗಳ ಕ್ಷೇಮದಲ್ಲಿ ತಮ್ಮ ಅಭ್ಯುದಯವನ್ನು ಕಾಣುವ ಉದಾತ್ತ ಧ್ಯೇಯವನ್ನು ಹೊಂದಿದ್ದರು. ಇವರು ತಮ್ಮ ಸಾಮ್ರಾಜ್ಯದಾದ್ಯಂತ ಏಕ ರೀತಿಯ ಆಡಳಿತ ವ್ಯವಸ್ಥೆಯನ್ನು ರೂಪಿಸಿದ್ದರು. ವಿಶಾಲವಾದ ಸಾಮ್ರಾಜ್ಯದಲ್ಲಿ ವ್ಯವಸ್ಥಿತ ಆಡಳಿದ ಅನುಕೂಲಕ್ಕಾಗಿ ಸಾಮ್ರಾಜ್ಯವನ್ನು ರಾಜ್ಯ, ಮಂಡಲ, ಪಾಳೆಯಪಟ್ಟುಗಳು, ಮಾಗಣಿ, ಸೀಮೆ, ನಾಡು, ಕಂಪಣ, ಒಳಿತ ಇತ್ಯಾದಿಯಾಗಿ ವಿಂಗಡಿಸಿ ಅಧಿಕಾರದ ವಿಕೇಂದ್ರೀಕರಣವನ್ನು ಮಾಡಿದ್ದರು. ಅವುಗಳ ಆಡಳಿತ ನಿರ್ವಹಣೆಗೆ ಯುವರಾಜರು, ಮಹಾಮಂಡಳೇಶ್ವರರು, ಸಾಮಂತರು, ನಾಯಕರು, ನಾಡಪ್ರಭುಗಳು, ನಾಡಗೌಡರು, ಒಡೆಯರು ಮೊದಲಾದವರನ್ನು ನೇಮಿಸುತ್ತಿದ್ದರು. ಅಂತಹ ಕೆಲವು ಸೀಮೆಗಳು ಗದಗ ಜಿಲ್ಲೆಯ ಕೆಲವು ಶಾಸನಗಳಲ್ಲಿ ಪ್ರಸ್ತಾಪವಾಗಿವೆ. ಹಾಗಾಗಿ ಈ ಜಿಲ್ಲೆಯು ಅಂದು ವಿವಿಧ ಸೀಮೆಗಳಲ್ಲಿ ಅಂತರ್ಗತವಾಗಿತ್ತೆಂಬುದು ದೃಢಪಡುತ್ತದೆ. ಇಮ್ಮಡಿ ಹರಿಹರನ ಆಳ್ವಿಕೆಯ ಕಾಲದಲ್ಲಿ ಗದಗ ನಗರವು 'ಪಂಪಹಸ್ತಿನಾವತಿ' ಪ್ರಾಂತಕ್ಕೆ ಸೇರಿದ 'ಲಕ್ಕುಂಡಿವೆಂಠೆ' ಎಂಬ ಪ್ರಾಂತದಲ್ಲಿನ ತೊರಗಲ್ಲ ನಾಡಿನ ಅರವತ್ತಾರು ಗ್ರಾಮಗಳಲ್ಲಿ ಒಂದು ವಿಭಾಗವಾಗಿತ್ತು. ಈ ವಿಭಾಗವು ಅಂದು 'ಗದುಗುದೇಶ' ಎಂದು ಕರೆಯಲ್ಪಡುತ್ತಿತ್ತು.

ಈ ಜಿಲ್ಲೆಯ ಲಕ್ಷ್ಮೇಶ್ವರದ ಕ್ರಿ.ಶ. 1353ರ ಶಾಸನದಲ್ಲಿ ಒಂದನೆಯ ಹರಿಹರ, ಡಂಬಳ, ಅಬ್ಬಿಗೇರಿಯ ಕ್ರಿ.ಶ. 1379ರ, ಕಳಕಪ್ಪನಗುಡ್ಡ, ಲಕ್ಷ್ಮೇಶ್ವರ, ಕಣವಿಯ ಕ್ರಿ.ಶ. 1408ರ ಶಾಸನಗಳಲ್ಲಿ ಇಮ್ಮಡಿ ಹರಿಹರ, ಲಕ್ಷ್ಮೇಶ್ವರದ ಕ್ರಿ.ಶ. 1412ರ ಮತ್ತು 1432ರ ಶಾಸನಗಳಲ್ಲಿ ಒಂದನೆಯ ದೇವರಾಯ, ಸವಡಿಯ ಕ್ರಿ.ಶ. 1431ರ, ಮುಳಗುಂದದ ಕ್ರಿ.ಶ. 1420ರ ಮತ್ತು ಕಲ್ಲೂರದ ಶಾಸನಗಳಲ್ಲಿ ಇಮ್ಮಡಿ ದೇವರಾಯ, ಗದುಗಿನ ಕ್ರಿ.ಶ. 1520ರ, ಗಾಡಗೋಳಿಯ ಶಾಸನಗಳಲ್ಲಿ ಕೃಷ್ಣದೇವರಾಯ, ಗದುಗಿನ ಕ್ರಿ.ಶ. 1539ರ, 1540ರ ಶಾಸನಗಳಲ್ಲಿ ಅಚ್ಯುತರಾಯ, ಸೊರಟೂರು, ಲಕ್ಷ್ಮೇಶ್ವರ, ಕೋಟವುಮಚಗಿ, ಕೊಣ್ಣೂರು, ಸಂಕದಾಳ, ಹೊಂಬಳದ ಕ್ರಿ.ಶ. 1547ರ ಶಾಸನಗಳಲ್ಲಿ ಸದಾಶಿವರಾಯನ ಪ್ರಸ್ತಾಪಗಳಿವೆ. ಈ ಅರಸರ ಅಧೀನದಲ್ಲಿ ಕೆಲವು ಮಾಂಡಳಿಕರು ಮತ್ತು ಅಧಿಕಾರಿಗಳು ಈ ಜಿಲ್ಲೆಯ ಆಡಳಿತವನ್ನು ನಿರ್ವಹಿಸುತ್ತಿದ್ದರೆಂಬುದು ಸಮಕಾಲೀನ ಶಾನಸಗಳು ಮತ್ತು ಅಹೋಬಲದ 'ವಿರೂಪಾಕ್ಷ ವಸಂತೋತ್ಸವ ಚಂಪೂ' ಕೃತಿಯಲ್ಲಿ ನಿರೂಪಣೆಗಳಿವೆ. ಅಂತಹ ಅಧಿಕಾರಿಗಳಲ್ಲಿ ಸಾಯಿನಾಯಕ ದೇವೆನಾಯಕ, ವಿಧರಸ, ಬಾಗಿಲವಾಡದ ತಿಪನನಾಯಕ, ಚವುಡಯ್ಯ ನಾಯಕ, ತಿಮ್ಮಪನಾಯಕಯ್ಯ, ನಾಯನಪ್ಪನಾಯಕ, ವೆಂಗಲಪ್ಪನಾಯಕ, ಭಂಡಿವಾಡೆ

ನಾಯಕರು, ಚಿಕ್ಕಕೆರೆಯ ನಾಯಕ, ಶಿವರಾಮ ಒಡೆಯ, ಗುಜಳ ಪರಿಸುನಾಯಕ, ಹಾವನೂರ ಲಕಮಗೌಡ, ವಡವಿಯ ನಾಯಕಗೌಡ, ಮುರಾರಿನಾಥ ನಾಯಕ, ಚೌಡನಾಯಕ ಪ್ರಮುಖರಾಗಿದ್ದಾರೆ. ಇವರು ಆಡಳಿತ ನಿರ್ವಹಣೆಯ ಜೊತೆಗೆ ಅರಸರ ನಿರ್ದೇಶನದ ಮೇರೆಗೆ ವಿವಿಧ ಧರ್ಮದ ದೇವಾಲಯಗಳು ಮತ್ತು ಕೆರೆ-ಬಾವಿಗಳು ಜೀರ್ಣೋದ್ಧಾರವನ್ನು ಕೈಗೊಳ್ಳುವುದರೊಂದಿಗೆ ವಿವಿಧ ಧಾರ್ಮಿಕ-ಸಾಮಾಜಿಕ ಚಟುವಟಿಕೆಗಳು, ಆಚಾರ್ಯರು, ಮಹಾಜನರಿಗೆ ದಾನ-ದತ್ತಿಗಳನ್ನು ಕೊಡಮಾಡಿದ್ದಾರೆ.

ಸಾಮಾಜಿಕ ವ್ಯವಸ್ಥೆ

ವಿಜಯನಗರ ಆಳ್ವಿಕೆಯ ಕಾಲದಲ್ಲಿ ಜಾತಿ ಮತ್ತು ವರ್ಗ ಪದ್ಧತಿ ರೂಢಿಯಲ್ಲಿತ್ತು. ಸಾಮ್ರಾಜ್ಯಾದ್ಯಂತ ಸ್ಮಾರ್ತರು, ಮಾಧ್ವರು, ಶ್ರೀವೈಷ್ಣವರು, ಕುರುಬರು, ನಾಯಕರು, ಗೌಡರು, ಕಮ್ಮಾರರು, ನಾಯಿಡುಗಳು, ನಾವಿದರು, ಬಡಗಿಗಳು, ಕಮ್ಮಾರರು, ಚಮ್ಮಾರರು, ನೇಕಾರರು, ಅಕ್ಕಸಾಲಿಗರು, ಗಾಣಿಗರು, ಆದಿದ್ರಾವಿಡರು, ಮುಸ್ಲಿಂರು, ಜೈನರು, ವೀರಶೈವರು, ಕ್ರೈಸ್ತರು ಅಗಸರು, ಬಣಜಿಗರು ಮೊದಲಾದವರಿದ್ದರು. ಪರಸ್ಪರರಲ್ಲಿ ತಾರತಮ್ಯಗಳಿದ್ದರೂ ಸಾಮಾಜಿಕವಾಗಿ ಸೌಹಾರ್ದತೆಗೆ ಭಂಗ ಬಂದಿರಲಿಲ್ಲ. ಆಯಾ ಜಾತಿ ಮತ್ತು ವರ್ಗದವರು ತಮ್ಮ ತಮ್ಮ ಆಚರಣೆಗಳು, ಸಂಪ್ರದಾಯಗಳು ಮತ್ತು ಹಕ್ಕುಬಾಧ್ಯತೆಗಳನ್ನು ಸ್ವಪ್ರತಿಷ್ಠೆಯಿಂದ ಉಳಿಸಿಕೊಂಡುಬರುತ್ತಿದ್ದರು. ಗದಗ ಜಿಲ್ಲೆಯಲ್ಲಿ ಮಹಾಜನರು (ಬ್ರಾಹ್ಮಣರು) ಉನ್ನತ ಗೌರವಯುತವಾದ ಸ್ಥಾನಮಾನಗಳನ್ನು ಪಡೆದಿದ್ದರು. ಸಮಾಜದಲ್ಲಿ ಸ್ತ್ರೀಯರಿಗೆ ಗೌರವಾನ್ವಿತ ಸ್ಥಾನಮಾನಗಳಿದ್ದಿತಾದರೂ ಅವರ ವಲಯ ಪರಿಮಿತವಾಗಿದ್ದಿತ್ತು. ಕೆಲವು ಸ್ತ್ರೀಯರು ಪ್ರತಿಭಾವಂತರಾಗಿದ್ದು ಸಮಾಜದಲ್ಲಿ ಕೀರ್ತಿಗಳಿಸಿದ್ದರು.

ಧಾರ್ಮಿಕ ವ್ಯವಸ್ಥೆ

ವಿಜಯನಗರ ಅರಸರು ಧರ್ಮಸಹಿಷ್ಣುರಾಗಿದ್ದರು. ಸಾಮ್ರಾಜ್ಯಾದ್ಯಂತ ವೀರಶೈವ, ಶ್ರೀವೈಷ್ಣವ, ಜೈನ, ಮುಸ್ಲಿಂ, ಕ್ರೈಸ್ತ ಮೊದಲಾದ ಧರ್ಮಗಳು ಯಾವ ಬಾಧಕವಿಲ್ಲದೆ ಅಸ್ತಿತ್ವದಲ್ಲಿದ್ದವು. ಆಳರಸರು ಮತ್ತು ಅಧಿಕಾರಿಗಳ ಆಶ್ರಯ-ಪ್ರೋತ್ಸಾಹ ಎಲ್ಲ ಧರ್ಮಗಳಿಗೂ ಏಕರೂಪವಾಗಿದ್ದಿತ್ತು. ಆದರೂ ಗದಗ ಜಿಲ್ಲೆಯಲ್ಲಿ ಕೆಲವು ಸಂದರ್ಭಗಳಲ್ಲಿ ವೀರಶೈವರು, ಜೈನರು, ಮುಸ್ಲಿಂರು ತಮ್ಮ ತಮ್ಮ ಧರ್ಮದ ಶ್ರೇಷ್ಠತೆಯನ್ನು ದೃಢಪಡಿಸಲು ಮತ್ತು ವಲಯವನ್ನು ವಿಸ್ತರಿಸಿಕೊಳ್ಳಲು ಪರಸ್ಪರ ವ್ಯಾಜ್ಯ ಮತ್ತು ಸಂಘರ್ಷಣೆಗಳಲ್ಲಿ ತೊಡಗಿದ್ದ ಕುರಿತಾಗಿ ಶಾಸನಾಧಾರಗಳಿವೆ. ಲಕ್ಷ್ಮೇಶ್ವರದಲ್ಲಿ ಕ್ರಿ.ಶ. 1538ರಲ್ಲಿ ಶಂಖ ಬಸದಿಯ ಜೈನರಿಗೂ ಮತ್ತು ಸೋಮನಾಥ ದೇವಾಲಯದ ಶೈವರಿಗೂ ತಲೆದೋರಿದ ವ್ಯಾಜ್ಯವನ್ನು ನಿರ್ಣಯಿಸಿದ ಕುರಿತಾಗಿ ಸ್ಥಳೀಯ ಶಾಸನದಲ್ಲಿ ಪ್ರಸ್ತಾಪವಿದೆ. ಮುಳಗುಂದದ ಬೆಟ್ಟದ ಮೇಲಿರುವ ಪಾರ್ಶ್ವನಾಥ ಬಸದಿಗೆ ಕ್ರಿ.ಶ. 1600ರಲ್ಲಿ ದುಷ್ಟರೂ ಮೂರ್ಖರೂ ಆದ ತುರುಕರು ಬೆಂಕಿಹಚ್ಚಿ ಸುಟ್ಟರು. ಇದರಿಂದಾಗಿ ಬಸದಿಯ ತೊಲೆಕಂಬಗಳು ಸುಟ್ಟು ಗೋಡೆಗಳೆಲ್ಲ ನಾಶವಾದವು. ಆ ಸಂದರ್ಭದಲ್ಲಿ ಬಸದಿಯಲ್ಲಿದ್ದ ದೇಶಿಗಣಾಗ್ರೇಶ್ವರರೂ ವಜ್ರದಂತಹ ಬಲಪಂತರೂ ಪೊಡವಿಗೆ ಪ್ರಖ್ಯಾತರೂ ಆದ ಸಹಸ್ರಕೀರ್ತಿ ಮುನಿಗಳು ಮಡಿದರು. ನಾಶವಾದ ಬಸದಿಯನ್ನು ಕುಲಕರಣಿ ನಾಗಭೂಪನ ಧರ್ಮಪತ್ನಿ ಬನದಾಂಬಿಕೆ ಎಂಬಾತಳು ಕ್ರಿ.ಶ. 1675ರಲ್ಲಿ ಜೀರ್ಣೋದ್ಧಾರ ಮಾಡಿಸಿದಳು. ಈ ಬಸದಿಯ ಪಕ್ಕದಲ್ಲಿರುವ ಚಂದ್ರಪ್ರಭನಾಥ ಬಸದಿಗೆ ಪಂಚಕಲ್ಯಾಣ ಮಾಡಿಸಿದಳು. ತನ್ನ ಪತಿಯೊಂದಿಗೆ ಲಕ್ಷದೀಪರಥೋತ್ಸವ ನೆರವೇರಿಸಿದಳೆಂದು ಸ್ಥಳೀಯ ಶಾಸನಗಳಲ್ಲಿ ನಿರೂಪಣೆಗಳಿವೆ. ಹಾಗಾಗಿ ವಿಜಯನಗರ ಅರಸರು ಮತ್ತು ಅಧಿಕಾರಿಗಳು ಈ ಜಿಲ್ಲೆಯಲ್ಲಿ ಸಕಲ ಧರ್ಮೀಯರಿಗೂ ಧಾರ್ಮಿಕ ಹಾಗೂ

ಸಾಮಾಜಿಕ ಚಟುವಟಿಕೆಗಳಿಗೆ ದಾನ-ದತ್ತಿಗಳನ್ನು ಕೊಡಮಾಡಿ ಪರಸ್ಪರರಲ್ಲಿ ಧರ್ಮಸಮನ್ವಯತೆ ಮತ್ತು ಸಾಮರಸ್ಯತೆಯನ್ನು ಕಲ್ಪಿಸಲು ವಿಶೇಷವಾಗಿ ಪ್ರಾಧಾನ್ಯ ಕೊಟ್ಟಿದ್ದರು.

ದಾನ-ದತ್ತಿಗಳು

ವಿಜಯನಗರ ಮನೆತನದ ಅರಸರು ಮತ್ತು ಅಧಿಕಾರಿಗಳು ಗದಗ ಜಿಲ್ಲೆಯಲ್ಲಿ ವಿವಿಧ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಉದಾರವಾಗಿ ದಾನ-ದತ್ತಿಗಳನ್ನು ಕೊಟ್ಟಿದ್ದಾರೆ. ಅವುಗಳಲ್ಲಿ ಆನಂದನಿಧಿದಾನ, ಭೂದಾನ, ಹೊನ್ನದಾನ, ಸುವರ್ಣದಾನ, ಏತದಾನ, ಹಣದಾನ, ಗ್ರಾಮದಾನ, ಸುಂಕದಾನ, ತೋಟದಾನ ಪ್ರಮುಖವಾಗಿವೆ. ಅಚ್ಯುತರಾಯನು 'ಆನಂದನಿಧಿ' ದಾನಕ್ಕೆ ವಿಶೇಷ ಪ್ರಾಶಸ್ತ್ಯ ಕೊಟ್ಟಿದ್ದನು. ಈ ದಾನವನ್ನು ವಿಶೇಷ ಸಮಾರಂಭಗಳು ಮತ್ತು ಯುದ್ಧಗಳಲ್ಲಿ ಜಯವನ್ನು ಪಡೆದ ಸಂತೋಷದ ಸಂದರ್ಭದಲ್ಲಿ ಹಾಗೂ ಸಾಮ್ರಾಜ್ಯದ ಪ್ರಗತಿ ಮತ್ತು ಉನ್ನತಿಗಾಗಿ ಬ್ರಾಹ್ಮಣರಿಗೆ ಕೊಡಲಾಗುತ್ತಿತ್ತೆಂದು ಹೇಮಾದ್ರಿಯ 'ಚತುರ್ವರ್ಗ ಚಿಂತಾಮಣಿ' ಕೃತಿಯಲ್ಲಿ ನಿರೂಪಣೆಯಿದೆ. ಈ ದಾನವನ್ನು ಮಾಡುವುದರಿಂದ ದೀರ್ಘಾಯುಷ್ಯ, ಆರೋಗ್ಯ ಮತ್ತು ಸಾಮ್ರಾಜ್ಯಶಾಹಿ ಪ್ರಭುತ್ವಗಳು ಸಿದ್ಧಿಸುತ್ತವೆ ಎಂಬ ಕಲ್ಪನೆಯಿತ್ತು. ಆನಂದನಿಧಿ ದಾನದ ಕುರಿತಾಗಿ ನಾಡಿನಾದ್ಯಂತ ಇದುವರೆಗೆ ಒಂಬತ್ತು ಶಾಸನಗಳು ಬೆಳಕಿಗೆ ಬಂದಿವೆ. ಅವುಗಳಲ್ಲಿ ಗದಗ ಜಿಲ್ಲೆಯಲ್ಲಿಯೇ ಮೂರು ಶಾಸನಗಳಿವೆ. ಗದುಗಿನ ಕ್ರಿ.ಶ. 1539ರ ಶಾಸನದಲ್ಲಿ ಅಚ್ಯುತರಾಯನು ತುಂಗಭದ್ರಾ ನದಿ ತೀರದ ಭಾಸ್ಕರ ಕ್ಷೇತ್ರದ ವಿಠಲದೇವರ ಸನ್ನಿಧಾನದಲ್ಲಿ ವಿಷ್ಣುವಿನ ಭಕ್ತಿಗಾಗಿ ಬ್ರಾಹ್ಮಣರಿಗೆ ಆನಂದನಿಧಿ ದಾನವನ್ನು ಮಾಡಿದನೆಂದು ಪ್ರಸ್ತಾಪವಿದೆ. ಈ ಜಿಲ್ಲೆಯಲ್ಲಿ ವಿಜಯನಗರ ಆಳರಸಾದಿಯಾಗಿ ಅಧಿಕಾರಿಗಳು ಮತ್ತು ಸಮಕಾಲೀನ ಪ್ರಜೆಗಳು ದೇವಾಲಯಗಳು, ಕೆರೆಗಳು, ಬಾವಿಗಳು, ಅರವಟ್ಟಿಗೆಗಳು, ಸೀಮಾನಿರ್ಣಯ, ಸ್ಥಾನಾಚಾರ್ಯರು, ವಿದ್ವಾಂಸರು, ಬ್ರಾಹ್ಮಣರಿಗೆ ವಿವಿಧ ದಾನ-ದತ್ತಿಗಳನ್ನು ಕೊಡಮಾಡಿದ ವಿವರಗಳು ಗದಗ ತಾಲ್ಲೂಕಿನ ಕಣವಿ, ಗದಗ, ನೀಲಗುಂದ, ಬೆಂತೂರು, ಮುಳಗುಂದ, ಸೊರಟೂರು, ಹರ್ಲಾಪುರ, ಹುಯಿಲಗೋಳ, ಸಿರಹಟ್ಟಿ ತಾಲ್ಲೂಕಿನ ದೇವಿಹಾಳ, ಬೆಳ್ಳಟ್ಟಿ, ಲಕ್ಷ್ಮೇಶ್ವರ, ರೋಣ ತಾಲ್ಲೂಕಿನ ಅಬ್ಬಿಗೇರಿ, ಕರಕಿಕಟ್ಟಿ, ಉಣಚಗೇರಿ, ಕಳಕಪ್ಪನಗುಡ್ಡ, ಗಾಡಗೋಳಿ, ಯಾವಗಲ್ಲ, ರೋಣ, ಸವಡಿ, ಮುಂಡರಗಿ ತಾಲ್ಲೂಕಿನ ಆಲೂರು, ಬಾಗೇವಾಡಿ, ಡೋಣಿ, ಬ್ಯಾಲವಾಡಗಿ, ಮುಂಡರಗಿ, ಕಲಕೇರಿ, ವಿಠಲಾಪುರ ಶಾಸನಗಳಲ್ಲಿ ನಿರೂಪಿತವಾಗಿವೆ.

ಸದಾಶಿವರಾಯನ ಕಾಲದ ಕುರ್ತುಕೋಟಿ, ಸೊರಟೂರು, ಹೊಂಬಳ, ಲಕ್ಷ್ಮೇಶ್ವರ, ಕೊಣ್ಣೂರು, ಸುಂಕದಾಳದ ಶಾಸನಗಳಲ್ಲಿ ನಾವಿದರ ಪ್ರತಿನಿಧಿಗಳಾದ ಮಲ್ಲೋಜ, ಚಂದೋಜ, ತಿಮ್ಮೋಜರಿಗೆ ವಿಶೇಷವಾಗಿ ದಾನ-ದತ್ತಿಗಳನ್ನು ಕೊಡುವುದರೊಂದಿಗೆ ಅವರ ಸಮುದಾಯವನ್ನು ಕೆಲವು ತೆರಿಗೆಗಳಿಂದ ವಿನಾಯಿತಿಗೊಳಿಸಿದ ಪ್ರಸ್ತಾಪಗಳಿವೆ. ಪ್ರಾಚೀನ ಕಾಲದಿಂದಲೂ ಸಾಮಾಜಿಕ ವ್ಯವಸ್ಥೆಯಲ್ಲಿ ನಾವಿದರ (ಕ್ಷೌರಿಕರು) ಪಾತ್ರ ಮುಖ್ಯವಾಗಿದೆ. ಅಂದು ಇವರು ಆರ್ಥಿಕವಾಗಿ ಸದೃಢವಾಗಿರಲಿಲ್ಲ. ಆದರೂ ಅಪರೂಪಕ್ಕೆ ದೇವಾಲಯಗಳನ್ನು ನಿರ್ಮಿಸಿ ದಾನ-ದತ್ತಿಗಳನ್ನು ಕೊಡಮಾಡಿದ ನಿದರ್ಶನಗಳಿವೆ. ಪ್ರಸಂಗ ಬಂದಾಗ ಇವರೂ ಕೂಡ ಯುದ್ಧಗಳಲ್ಲಿ ಭಾಗವಹಿಸಿ ವೀರಮರಣವನ್ನಪ್ಪುತ್ತಿದ್ದರು. ವಿಜಯನಗರ ಮನೆತನದ ಆಳ್ವಿಕೆಯ ಕಾಲಾವಧಿಯಲ್ಲಿ ನಾವಿದ ಸಮುದಾಯದ ಪ್ರತಿನಿಧಿಗಳು (ತಿಮ್ಮೋಜ, ಕೊಂಡೋಜ, ಭದ್ರೋಜ, ರಾಮೋಜ, ಮಾದೋಜ, ರಂಗೋಜ, ಸಿದ್ಧೋಜ, ನಾಗೋಜ ಇತ್ಯಾದಿ) ಆಳರಸರಲ್ಲಿ ತಮ್ಮ ಸಮುದಾಯವನ್ನು ತೆರಿಗೆಗಳಿಂದ ಮುಕ್ತಗೊಳಿಸಬೇಕೆಂದು ವಿನಂತಿಸಿಕೊಳ್ಳುತ್ತಿದ್ದರು. ಅಂತಾಗಿ ಸದಾಶಿವರಾಯನು ನಾವಿದರ ಬಿನ್ನಹ ಮತ್ತು ಅವರ ಕೇಶಕರ್ತನದ ಕಲಾಚಾತುರ್ಯಕ್ಕೆ ಮೆಚ್ಚಿ ಅವರನ್ನು

ಕೆಲವು ತೆರಿಗೆಗಳಿಂದ ವಿನಾಯಿತಿಗೊಳಿಸಿದ ಕುರಿತಾಗಿ ನಾಡಿನಾದ್ಯಂತ ಇದುವರೆಗೂ ನಲವತ್ತಕ್ಕೂ ಹೆಚ್ಚು ಶಾಸನಾಧಾರಗಳು ದೊರೆತಿವೆ.

ವಾಸ್ತು ಮತ್ತು ಶಿಲ್ಪಕಲಾ ವೈಭವ

ವಿಜಯನಗರ ಮನೆತನದ ಆಳ್ವಿಕೆಯ ಕಾಲಾವಧಿಯಲ್ಲಿ ಗದಗ ಜಿಲ್ಲೆಯಲ್ಲಿ ದೇವಾಲಯಗಳ ನಿರ್ಮಾಣ, ಜೀರ್ಣೋದ್ಧಾರ, ಶಿಲ್ಪಗಳ ಪ್ರತಿಷ್ಠಾಪನೆ ಮತ್ತು ದಾನ-ದತ್ತಿಗಳ ಪರಂಪರೆಯ ಚಟುವಟಿಕೆಗಳು ಲಕ್ಷ್ಮೇಶ್ವರ, ಮುಳಗುಂದ, ಗದಗ, ಕಲ್ಲೂರು, ಕಳಸಾಪುರ, ಹುಯಿಲಗೋಳ, ಬೆಂತೂರು, ಸೊರಟೂರು, ಹರ್ಲಾಪುರ, ನೀಲಗುಂದ, ಕರಕಿಕಟ್ಟಿ, ದೇವಿಹಾಳ, ಬೆಳ್ಳಟ್ಟಿ, ರೋಣ, ಸವಡಿ, ಕೊಟವುಮಚಗಿ, ನಾಗಸಮುದ್ರ, ಚಿಕ್ಕನರಗುಂದ, ಸೋಮಾಪುರ, ಕಲಕೇರಿ, ಕೋರಲಹಳ್ಳಿ, ಗುಮ್ಮಗೋಳ, ಮುಂಡರಗಿ, ಶಿರೂರು, ಹಿರೇವಡ್ಡಟ್ಟಿ, ಅಬ್ಬಿಗೇರಿ, ಕಳಕಪ್ಪನಗುಡ್ಡ, ಝಾವಗಲ್ಲ, ಆಲೂರು, ಡೋಣಿ, ಬ್ಯಾಲವಾಡಗಿ, ಹೊಂಬಳ, ಕೊಣ್ಣೂರು, ಸುಂಕದಾಳ, ಉಣಚಗೇರಿ, ಬೆಳ್ಳಟ್ಟಿ, ಮಾಗಡಿ, ಹೊಸೂರು, ಕದಡಿ, ಕಿರಟಗೇರಿ, ಕುರ್ತಕೋಟಿ, ನಾರಾಯಣಪುರ, ನೀರಲಗಿ, ಮಲ್ಲಸಮುದ್ರ, ಹಳೇಬೆನಕಾಪುರ, ಕಣವಿ, ಅಬ್ಬಿಗೇರಿ, ವೆಂಕಟಾಪುರ, ಗಾಡಗೋಳಿ, ಬೆಳವಣಿಕೆ ಮೊದಲಾದೆಡೆಗಳಲ್ಲಿ ಗೋಚರಿಸುತ್ತವೆ. ಕಲ್ಯಾಣದ ಚಾಳುಕ್ಯ ಮನೆತನದ ಕಾಲಾವಧಿಯಲ್ಲಿ ನಿರ್ಮಾಣವಾಗಿದ್ದ ಲಕ್ಷ್ಮೇಶ್ವರ, ಮುಳಗುಂದ, ಗದಗ, ಸವಡಿ, ಮೇವುಂಡಿ, ಸೊರಟೂರು, ಮಾಗಡಿ ಮೊದಲಾದೆಡೆಯ ಕೆಲವು ದೇವಾಲಯಗಳು ವಿಜಯನಗರ ಮನೆತನದ ಕಾಲಾವಧಿಯಲ್ಲಿ ಜೀರ್ಣೋದ್ಧಾರವಾಗಿವೆ. ಈ ಸಂದರ್ಭದಲ್ಲಿ ಕೆಲವು ಹೊಸ ಹೊಸ ಜೋಡಣೆಗಳಿಂದ (ಮುಖಮಂಟಪ, ಮಹಾಮಂಟಪ, ಪ್ರಾಕಾರ, ಗೋಪುರ, ಜಗತಿ, ಮೆಟ್ಟಿಲು, ವ್ಯಾಪಾರ ಮಳಿಗೆ ಇತ್ಯಾದಿ) ಈ ದೇವಾಲಯಗಳ ವಾಸ್ತು ಸಂಕೀರ್ಣಗಳು ವಿಸ್ತೃತವಾಗಿವೆ. ಲಕ್ಷ್ಮೇಶ್ವರದ ಸೋಮೇಶ್ವರ ಮತ್ತು ಮುಳಗುಂದದ ಸಿದ್ಧೇಶ್ವರ ದೇವಾಲಯಗಳ ಮುಂಭಾಗದ ರಾಜಬೀದಿಯುದ್ದಕ್ಕೂ ಪಾರ್ಶ್ವಗಳಲ್ಲಿ ಎತ್ತರವಾದ ಜಗತಿಯ ಮೇಲೆ ಚಿಕ್ಕ ಚಿಕ್ಕ ವ್ಯಾಪಾರ ಮಳಿಗೆಗಳನ್ನು (ಬಜಾರುಗಳು) ನಿರ್ಮಿಸಲಾಗಿತ್ತು. ದುರದೃಷ್ಟವಶಾತ್ ಆ ಮಳಿಗೆಗಳೆಲ್ಲವೂ ನಾಶವಾಗಿವೆ. ಈ ರೀತಿ ದೇವಾಲಯಗಳ ಮುಂಭಾಗದ ರಾಜಬೀದಿಗಳುದ್ದಕ್ಕೂ ಪಾರ್ಶ್ವಗಳಲ್ಲಿ ವ್ಯಾಪಾರ ಮಳಿಗೆಗಳನ್ನು ನಿರ್ಮಿಸಿದ್ದ ನಿದರ್ಶನಗಳು ಹಂಪಿಯನ್ನು ಹೊರತುಪಡಿಸಿದರೆ ಬೇರೆಡೆಯಲ್ಲಿ ಕಾಣುವುದಿಲ್ಲ.

ಕನ್ನಡ ನಾಡಿನಲ್ಲಿ ಹನುಮಾನ ದೇವಾಲಯಗಳ ನಿರ್ಮಾಣ, ಶಿಲ್ಪಗಳ ಪ್ರತಿಷ್ಠಾಪನೆ, ಆರಾಧನೆ ದೋರಸಮುದ್ರದ ಹೊಯ್ಸಳ ಮನೆತನದ ಉತ್ತರಾರ್ಧದಿಂದೀಚೆಗೆ ಪ್ರಾರಂಭವಾಯಿತು. ಆ ಪರಂಪರೆ ವಿಜಯನಗರ ಅರಸರ ಆಳ್ವಿಕೆಯ ಕಾಲದಲ್ಲಿ ಪ್ರಸಿದ್ಧಿಗೆ ಬಂದಿತು. ಈ ಕಾಲದಲ್ಲಿ ಸೈನಿಕರಲ್ಲಿ ರಾಜಭಕ್ತಿ ಮತ್ತು ಸಾಹಸದ ಕಾರ್ಯಾಸಕ್ತಿಯನ್ನು ಮೂಡಿಸಲು ಸಾಮ್ರಾಜ್ಯಾದ್ಯಂತ ಹನುಮಾನ ದೇವಾಲಯಗಳ ನಿರ್ಮಾಣ ಮತ್ತು ಶಿಲ್ಪಗಳ ಪ್ರತಿಷ್ಠಾಪನೆ ಸರ್ವೆಸಾಮಾನ್ಯವಾಯಿತು. ಗದಗ ಜಿಲ್ಲೆಯ ಕದಡಿ, ಕಿರಟಗೇರಿ, ಕುರ್ತುಕೋಟಿ, ನಾಗಸಮುದ್ರ, ನಾರಾಯಣಪುರ, ಸೋಮಾಪುರ, ನೀರಲಗಿ, ಮಲ್ಲಸಮುದ್ರ, ಹಳೇಬೆನಕಾಪುರ, ಮುಳಗುಂದ, ನೀಲಗುಂದ, ಅಸುಂಡಿ, ತಾಮ್ರಗುಂಡಿ, ನಾಗರಹಳ್ಳಿ, ರೋಣ, ಗಾಡಗೋಳಿ, ರಾಜೂರು, ಲಕ್ಕುಂಡಿ, ಹಿರೇವಡ್ಡಟ್ಟಿ ಮೊದಲಾದ ಗ್ರಾಮಗಳಲ್ಲಿ ವಿಜಯನಗರ ಮನೆತನದ ಅರಸರು ಮತ್ತು ಅಧಿಕಾರಿಗಳು ಹನುಮಾನ ದೇವಾಲಯಗಳನ್ನು ನಿರ್ಮಿಸಿ ದಾನ-ದತ್ತಿಗಳನ್ನು ಕೊಟ್ಟಿರುವ ಕುರುಹುಗಳಿವೆ. ಅವುಗಳಲ್ಲಿ ಕೃಷ್ಣದೇವರಾಯನ ಕಾಲದಲ್ಲಿ ನಿರ್ಮಾಣವಾದ ಗಾಡಗೋಳಿಯ ಹನುಮಾನ ದೇವಾಲಯ ಮತ್ತು ಬದವಿಯ ಮಲರಸನು ಭೂದಾನ ಮಾಡಿರುವ ರೋಣದ ಹನುಮಾನ ದೇವಾಲಯಗಳು ಪ್ರಮುಖವಾಗಿವೆ.

ಗಾಡಗೋಳಿಯ ದೇವಾಲಯದ ರಚನೆಯಲ್ಲಿ ಕಟ್ಟಿಗೆಯನ್ನು ಬಳಸಲಾಗಿತ್ತು. ಆ ಕಟ್ಟಿಗೆಯ ಅವಶೇಷಗಳು (ಸ್ತಂಭಗಳು. ಜಂತಿ, ತೊಲೆಗಳು, ಬೋದಿಗೆಗಳು, ಪಲ್ಲಕ್ಕಿ ಇತ್ಯಾದಿ) ಇಂದಿಗೂ ಉಳಿದುಬಂದಿವೆ. ಕೃಷ್ಣದೇವರಾಯನ ಕಾಲದಲ್ಲಿ ಹುಬ್ಬಳ್ಳಿ ತಾಲ್ಲೂಕಿನ ಶಿರಗುಪ್ಪಿ ಗ್ರಾಮದಲ್ಲಿ ನಿರ್ಮಾಣವಾದ ಹನುಮಾನ ದೇವಾಲಯವು ಇಂದಿಗೂ ಉಳಿದು ಬಂದಿದೆ. ಈ ದೇವಾಲಯದ ರಚನೆಯಲ್ಲಿಯೂ ಕಟ್ಟಿಗೆಯನ್ನು ಬಳಸಲಾಗಿದೆ. ಇದರ ಸಭಾಮಂಟಪದ ವಿತಾನದ ತೊಲೆಯ ಮೇಲಿರುವ ಶಾಸನವು ಗಮನಾರ್ಹವಾಗಿದೆ. ವಿಜಯನಗರ ಮನೆತನದ ಕಾಲದಲ್ಲಿ ಗದಗ ಜಿಲ್ಲೆಯಲ್ಲಿ ನಿರ್ಮಾಣವಾದ ಗುಮ್ಮಗೋಳದ ಗೋಣೀಬಸವೇಶ್ವರ ಮತ್ತು ಡಂಬಳದ ಸಿದ್ಧಲಿಂಗೇಶ್ವರ ಮಠಗಳು ಇಂದಿಗೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ. ಗೋಣಿಬಸವೇಶ್ವರ ಮಠದ ವಾಸ್ತು ಸಮುಚ್ಚಯ ತುಂಬಾ ವೈವಿಧ್ಯಮಯವಾಗಿದೆ.

ಈ ಜಿಲ್ಲೆಯಲ್ಲಿ ವಿಜಯನಗರ ಮನೆತನದ ಆಳ್ವಿಕೆಯ ಕಾಲಾವಧಿಯಲ್ಲಿ ಜೈನ, ಶ್ರೀವೈಷ್ಣವ, ವೀರಶೈವ, ಶಾಕ್ತ, ಗಾಣಪತ್ಯ ಮೊದಲಾದ ಧರ್ಮ-ಪಂಥಗಳ ಅನೇಕ ಶಿಲ್ಪಗಳು ಪ್ರತಿಷ್ಠಾಪಿತವಾಗಿವೆ. ಅವುಗಳಲ್ಲಿ ಶಿವಲಿಂಗ, ಗಣೇಶ, ವೀರಭದ್ರ, ವೀರನಾರಾಯಣ, ಹನುಮಾನ, ಕಾಳಿಕಾ, ಮಹೇಶ್ವರಿ, ಉಮಾಮಹೇಶ್ವರ, ವೆಂಕಟೇಶ್ವರ, ವರಾಹ, ಮಹಿಷಾಸುರಮರ್ದಿನಿ (ಹೊಳಲಮ್ಮ) ಇತ್ಯಾದಿ ಶಿಲ್ಪಗಳು ಗಮನೀಯವಾಗಿವೆ. ಗದುಗಿನ ವೀರನಾರಾಯಣ ದೇವಾಲಯದ ಮುಖಮಂಟಪದ ಸ್ತಂಭಗಳ ಮೇಲಿರುವ ಕೃಷ್ಣ, ನರಸಿಂಹ, ಹನುಮಾನ, ಗರುಡ, ಕೀರ್ತಿಮುಖ ಮೊದಲಾದ ಉಬ್ಬುಶಿಲ್ಪಗಳು ಮನಮೋಹಕವಾಗಿವೆ. ಚಿಂಚಲಿಯಲ್ಲಿ ಬಂಡೆಯ ಮೇಲಿರುವ ವೀರಭದ್ರ, ಭೈರವ, ಪಾದಮುದ್ರೆ, ತೀರ್ಥಂಕರ, ನಂದಿ, ಛಾಯಾಚಂದ್ರನಾಥ ಮೊದಲಾದ ರೇಖಾಚಿತ್ರಗಳು ಅಪರೂಪವಾಗಿವೆ. ಮುಂಡರಗಿಯ ಬೆಟ್ಟದ ಮೇಲ್ಭಾಗದಲ್ಲಿ ಹಾಸುಬಂಡೆಯ ಮೇಲಿರುವ ನೂರಾರು ಶಿವಲಿಂಗಗಳ ಸಮುಚ್ಚಯವು ಗಮನಾರ್ಹವಾಗಿದೆ. ಚಿಂಚಲಿಯಲ್ಲಿ ಬಂಡೆಯ ಮೇಲೆ ವಿಜಯನಗರ ಮನೆತನದ ಕಾಲಾವಧಿಯಲ್ಲಿ ಚಿತ್ರಿಸಿರುವ ಲಜ್ಜಾಗೌರಿಯ ಅಪರೂಪದ ರೇಖಾಚಿತ್ರವಿದೆ.

ಲೋಕೋಪಯೋಗಿ ಚಟುವಟಿಕೆಗಳು

ವಿಜಯನಗರ ಅರಸರು ಮತ್ತು ಅವರ ಅಧೀನದಲ್ಲಿ ಆಡಳಿತವನ್ನು ನಿರ್ವಹಿಸುತ್ತಿದ್ದ ಅನೇಕ ಅಧಿಕಾರಿಗಳು ಗದಗ ಜಿಲ್ಲೆಯಲ್ಲಿ ವಿವಿಧ ಲೋಕೋಪಯೋಗಿ ಚಟುವಟಿಕೆಗಳನ್ನು ಕೈಗೊಂಡಿದ್ದಾರೆ. ಮುದೇನಗುಡಿಯಲ್ಲಿ ಮುರಾರಿನಾಥ ನಾಯಕನ ಪುತ್ರ ಬಾವಿಯನ್ನು ನಿರ್ಮಿಸಿದ್ದಾನೆ. ಜ್ಯಾಗಿನಕೇರಿಯಲ್ಲಿ ಚಿಕ್ಕಣ್ಣ ಉಪಾಧ್ಯಾಯನ ಪುತ್ರ ಗೋಪಣ್ಣ ಕೆರೆಯ ತೂಬು ನಿರ್ಮಾಣ ಮಾಡಿಸಿದ್ದಾನೆ. ಇಮ್ಮಡಿ ಹರಿಹರನ ಕ್ರಿ.ಶ. 1379ರ ಕೋರಲಹಳ್ಳಿಯ ತಾಮ್ರಪಟ ಶಾಸನದಲ್ಲಿ ತುಂಗಭದ್ರಾ ನದಿಗೆ ಅಡ್ಡಲಾಗಿ ಸೇತುವೆ ಕಟ್ಟಿ ಸಂಪರ್ಕ ಸಾಧಿಸಲಾಗಿದ್ದ ವಿವರವಿದೆ. ಈ ಸ್ಥಳವು ಹಂಪೆಯ ಆಚೆಗೆ ರಾಜ್ಯ ಸಂಪರ್ಕ ಸಾಧಿಸುವ ಮೊದಲಕಟ್ಟೆ (ಮದಲಗಟ್ಟೆ) ಆಗಿತ್ತೆಂಬುದು ತುಂಬಾ ಮುಖ್ಯವಾದ ವಿಚಾರವಾಗಿದೆ. ಈ ಸೇತುವೆ ವಿಜಯನಗರ ಕಾಲದ ಲೌಕಿಕ ವಾಸ್ತುಕಲೆಯ ಅಧ್ಯಯನಕ್ಕೆ ಮಹತ್ವದ್ದೆನಿಸಿದೆ.

ಉಪಸಂಹಾರ

ಇದುವರೆಗಿನ ಈ ಮೇಲಿನ ಅವಲೋಕನದಿಂದ ವಿಜಯನಗರ ಮನೆತನದ ಸಾಂಸ್ಕೃತಿಕ ಅಧ್ಯಯನಕ್ಕೆ ಗದಗ ಜಿಲ್ಲೆಯ ಕೊಡುಗೆ ಅಪಾರವೆಂಬುದು ಮನದಟ್ಟಾಗುತ್ತದೆ. ವಿಜಯನಗರ ಮನೆತನದ ಕಾಲಾವಧಿಯಲ್ಲಿ ಈ ಜಿಲ್ಲೆಯ ಕೆಲವರು ಇತರೆಡೆಯಲ್ಲಿ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದಾರೆ. ಹಾಗೆಯೇ ಕೆಲವರು ದೇವಾಲಯಗಳ ನಿರ್ಮಾಣ, ಜೀರ್ಣೋದ್ಧಾರ, ಶಿಲ್ಪಗಳ ಪ್ರತಿಷ್ಠಾಪನೆ, ದಾನ-ದತ್ತಿಗಳು, ಸಮಾಜಸೇವೆ ಇತ್ಯಾದಿ ಸಾಂಸ್ಕೃತಿಕ ಚಟುವಟಿಕೆಗಳನ್ನು

ಕೈಗೊಂಡಿದ್ದಾರೆ. ಅವರಲ್ಲಿ ಮುಂಡರಗಿ ತಾಲ್ಲೂಕಿನ ವಿಠಲಾಪುರದ ಭಿಷ್ಟಪ್ಪಯ್ಯ ಮಹಾಪುರುಷ (ಕ್ರಿ.ಶ. 1608–1698) ಎಂಬಾತನು ಪ್ರಮುಖನಾಗಿದ್ದಾನೆ. ಈತನು ಮುಸ್ಲಿಮರ ದಬ್ಬಾಳಿಕೆಯಿಂದ ನಲಗುತ್ತಿದ್ದ ಅಂದಿನ ಸಮಾಜದಲ್ಲಿ ಜನತೆಗೆ ಸಾಮಾಜಿಕ, ಧಾರ್ಮಿಕ ಭದ್ರತೆಯನ್ನು ನೀಡಲು ರಸಶಾಸ್ತ್ರ, ಲೋಹಶಾಸ್ತ್ರ, ಆಯುರ್ವೇದ, ವಾಸ್ತುಕಲೆ, ಯೋಗ, ಆಧ್ಯಾತ್ಮ, ತಂತ್ರಶಾಸ್ತ್ರ ಮೊದಲಾದ ವಿಧಾನಗಳನ್ನು ಆರಿಸಿಕೊಂಡು ಅವುಗಳಲ್ಲಿ ಪಾಂಡಿತ್ಯ ಪಡೆದಿದ್ದನು. ಹಂಪೆಯ ವಿರೂಪಾಕ್ಷ ದೇವಾಲಯದ ಮುಖ್ಯ ಗೋಪುರವನ್ನು ಮತ್ತು ಬಳ್ಳಾರಿ ಜಿಲ್ಲೆಯ ಸೋಗಿ, ಕೊಪ್ಪಳ ಜಿಲ್ಲೆಯ ರಂಗಾಪುರ, ತಾಮ್ರಗುಂಡಿ, ದಾವಣಗೆರೆ ಜಿಲ್ಲೆಯ ಶಂಕರಲಿಂಗಗಡ್ಡಿ, ಗದಗ ಜಿಲ್ಲೆಯ ಬಿದಿರಹಳ್ಳಿ, ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಹಲಸಿ, ಹಾವೇರಿ ಜಿಲ್ಲೆಯ ಗಳಗನಾಥ, ಮೇವುಂಡಿ, ಧಾರವಾಡ ಜಿಲ್ಲೆಯ ಆರೆಬಸವನಕೊಪ್ಪ, ಭೋಗೆನಾಗರಕೊಪ್ಪ, ಅಂಬ್ಲಿಕೊಪ್ಪ, ಕುಂದಗೋಳ, ಕಮಡೊಳ್ಳಿ, ಗುಡಿ ಮೊದಲಾದ ಕೆಲವು ಗ್ರಾಮಗಳಲ್ಲಿ ದೇವಾಲಯಗಳ ನಿರ್ಮಾಣ ಮತ್ತು ಜೀರ್ಣೋದ್ಧಾರ, ಲಿಂಗಗಳ ಪ್ರತಿಷ್ಠಾಪನೆ ಕೈಗೊಂಡಿದ್ದಾನೆ. ಹಾಗೆಯೇ ವಿಠಲಾಪುರದಲ್ಲಿರುವ ವಿಠ್ಠಲ ದೇವಾಲಯವನ್ನೂ ಜೀರ್ಣೋದ್ಧಾರಪಡಿಸಿದ್ದಾನೆ. ಈ ದೇವಾಲಯದಲ್ಲಿ ಪೀಠದ ಮೇಲೆ ಪ್ರಲಂಬಾಸನದಲ್ಲಿ ಆಸೀನನಾಗಿರುವ ಯತಿಯ ಶಿಲ್ಪವಿದೆ. ಇದು ಭಿಷ್ಟಪ್ಪಯ್ಯನ ಶಿಲ್ಪವೆಂದು ಐತಿಹ್ಯವಿದೆ. ಭಿಷ್ಟಪ್ಪಯ್ಯನ ವಂಶಸ್ಥರು ಈಗಲೂ ವಿಠಲಾಪುರದಲ್ಲಿದ್ದಾರೆ. ಇವರು ವಿಠ್ಠಲ ದೇವಾಲಯದ ಅರ್ಚಕರಾಗಿದ್ದಾರೆ. ಭಿಷ್ಟಪ್ಪಯ್ಯನ ವಂಶಸ್ಥರಾದ ಶ್ರೀ ಎಸ್.ಡಿ. ಮಹಾಪುರುಷ ಅವರ ಮನೆಯಲ್ಲಿ ಭಿಷ್ಟಪ್ಪಯ್ಯನಿಗೆ ಸಂಬಂಧಪಟ್ಟ ಕನ್ನಡ, ಸಂಸ್ಕೃತ, ಮರಾಠಿ, ಮೋಡಿಲಿಪಿ ದಾಖಲೆಗಳಿವೆ. ಭಿಷ್ಟಪ್ಪಯ್ಯ ಆಸ್ಥೆಯಿಂದ ತಯಾರಿಸಿದ ಪಾದರಸ ಲಿಂಗಗಳಲ್ಲಿ ಅತ್ಯಂತ ದೊಡ್ಡದಾದ ಮತ್ತು ಬಂಗಾರದಂಥ ಹೊದಿಕೆಯಿಂದ ಕೂಡಿ ವಿಶಿಷ್ಟವಾದ ಮಹಾಲಿಂಗೇಶ್ವರ ಹೆಸರಿನ ಪಾದರಸ ಲಿಂಗವು ಈಗ ಭಿಷ್ಟಪ್ಪಯ್ಯನ ವಂಶಸ್ಥರ ಒಡೆತನದಲ್ಲಿದೆ. ಇವುಗಳ ವ್ಯವಸ್ಥಿತವಾದ ಅಧ್ಯಯನದೆಡೆಗೆ ಹರಿಹರ ಶ್ರೀನಿವಾಸರಾವ್, ವಸುಂಧರಾ ದೇಸಾಯಿ, ಎಸ್.ಡಿ. ಮಹಾಪುರುಷ ಮೊದಲಾದವರು ಗಮನಹರಿಸಿದ್ದಾರೆ.

ವಿಜಯನಗರ ಮನೆತನದ ಅರಸರಿಗೂ ಮತ್ತು ಬಹಮನಿ ಸುಲ್ತಾನರು, ವಿಜಾಪುರದ ಆದಿಲ್‌ಷಾಹಿ ಮನೆತನದ ಅರಸರಿಗೂ ತುಂಗಭದ್ರಾ–ಕೃಷ್ಣಾ ನದಿಗಳ ಮಧ್ಯದ 'ದೋ–ಆಬ್' ಪ್ರದೇಶದ ಮೇಲೆ ಹಿಡಿತವನ್ನು ಸಾಧಿಸಲು ಪದೇ ಪದೇ ಯುದ್ಧಗಳು ಜರುಗುತ್ತಿದ್ದವು. ಆ ಯುದ್ಧಗಳಲ್ಲಿ ಸಾವಿರಾರು ಸೈನಿಕರು ಹೋರಾಡುತ್ತ ವೀರಮರಣವನ್ನಪ್ಪಿದ್ದಾರೆ. ಆ ವೀರರ ಪರೋಕ್ಷ ವಿನಯಾರ್ಥವಾಗಿ ವೀರಗಲ್ಲುಗಳನ್ನು ನಿಲ್ಲಿಸಲಾಗುತ್ತಿತ್ತು. ಆ ಕಾಲದಲ್ಲಿ ಗದಗ ಜಿಲ್ಲೆಯ ಅನೇಕ ವೀರರೂ (ದುವೆನಾಯಕ, ಬುಳಿಶೆಟ್ಟಿಯ ಕೇಶಪ್ಪ, ನಾಗರಸ, ತಿಮ್ಮಣ ಇತ್ಯಾದಿ) ವಿವಿಧ ಯುದ್ಧಗಳಲ್ಲಿ ಹೋರಾಡುತ್ತ ಮರಣವನ್ನಪ್ಪಿದ್ದಾರೆ. ಅವರ ವಿನಯಾರ್ಥವಾಗಿ ನಿಲ್ಲಿಸಿದ ವೀರಗಲ್ಲುಗಳು ಎಕ್ಲಾಸಪುರ, ಮುಳಗುಂದ, ಕರಟಗೇರಿ, ಶಿರುಂಜ, ಕಣವಿ, ಲಕ್ಷ್ಮೇಶ್ವರ, ಮಾಗಡಿ, ಹಾಳಹುಲ್ಲೂರು, ಸಂದಿಗವಾಡ, ಕರಮಡಿ, ಹುಯಿಲಗೋಳ, ಸೊರಟೂರು, ಡೋಣಿ, ಕಲಕೇರಿ, ಶಿರೋಳ, ಚಿಕ್ಕಮಣ್ಣೂರು, ಮೇವುಂಡಿ, ಗುಮ್ಮಗೋಳ, ಜಕ್ಕಲಿ, ಹೊಸೂರ ಮೊದಲಾದ ಗ್ರಾಮಗಳಲ್ಲಿ ಗೋಚರಿಸುತ್ತವೆ. ಡೋಣಿಯ ವೀರಗಲ್ಲಿನಲ್ಲಿ ವೀರನು ಕೈಯಲ್ಲಿ ಕೋವಿಯನ್ನು (ಬಂದೂಕು) ಹಿಡಿದಿದ್ದಾನೆ. ಇದರಿಂದ ವಿಜಯನಗರ ಕಾಲದಲ್ಲಿ ಯುದ್ಧ ಮತ್ತಿತರ ಹೋರಾಟಗಳಲ್ಲಿ ಬಳಸುತ್ತಿದ್ದ ವಿವಿಧ ಆಯುಧಗಳಲ್ಲಿ ಕೋವಿ ಸಾಮಾನ್ಯವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ವಿಜಯನಗರ ಮನೆತನದ ಕಾಲದಲ್ಲಿ ಕಮ್ಮಟದುರ್ಗದ ವೀರಕಂಪಿಲರಾಯ ಮತ್ತು ಹರಿಯಲಾದೇವಿ ದಂಪತಿಗಳ ಪುತ್ರ ಗಂಡುಗಲಿ ಕುಮಾರರಾಮನು ಪ್ರಮುಖ ಸೈನ್ಯಾಧಿಕಾರಿಯಾಗಿದ್ದನು. ಆತನ ವಿನಯಾರ್ಥವಾಗಿ ಅನೇಕ ದೇವಾಲಯಗಳು ನಿರ್ಮಾಣವಾಗಿವೆ.

ಕೆಲವು ಶಿಲ್ಪಗಳೂ ಪ್ರತಿಷ್ಠಾಪಿತವಾಗಿವೆ. ಹಾಗೆಯೇ ಕೆಲವು ವೀರಗಲ್ಲುಗಳನ್ನೂ ನಿಲ್ಲಿಸಲಾಗಿದೆ. ಈ ಜಿಲ್ಲೆಯ ಎಕ್ಲಾಸಪುರ, ಸುಂಕದಾಣ, ಶಿರುಂಜ ಗ್ರಾಮಗಳಲ್ಲಿ ಕುಮಾರರಾಮನ ವೀರಗಲ್ಲು ಮತ್ತು ಶಿಲ್ಪಗಳಿವೆ. ಎಕ್ಲಾಸಪುರದ ವೀರಗಲ್ಲಿನಲ್ಲಿ ಕುಮಾರರಾಮನು ಕೈಯಲ್ಲಿ ಈಟಿಯನ್ನು ಹಿಡಿದುಕೊಂಡು ಕುದುರೆಸವಾರಿಮಾಡುತ್ತಿದ್ದಾನೆ. ಈತನ ಹಿಂಬದಿಯಲ್ಲಿ ಸೇವಕನೊಬ್ಬನು ಈತನಿಗೆ ಛತ್ರಿಯನ್ನು ಹಿಡಿದುಕೊಂಡು ನಿಂತಿದ್ದಾನೆ. ವಿಜಯನಗರ ಮನೆತನದ ಕಾಲಾವಧಿಯಲ್ಲಿ ಪತಿಯ ಮರಣದ ತರುವಾಯ ಆತನ ಪತ್ನಿ ಸಹಗಮನ ಪದ್ಧತಿಯನ್ನು ಆಚರಿಸುವುದು ಸಾಮಾನ್ಯವಾಗಿತ್ತು. ಗದಗ ಜಿಲ್ಲೆಯಲ್ಲಿಯೂ ಆ ಕಾಲದಲ್ಲಿ ಕೆಲವು ಸ್ತ್ರೀಯರು (ನಾಗಾಯಿ ಇತ್ಯಾದಿ) ಈ ಪದ್ಧತಿಯಿಂದ ಮರಣವನ್ನಪ್ಪಿದ್ದಾರೆ. ಅವರ ವಿನಯಾರ್ಥವಾಗಿ ನಿಲ್ಲಿಸಿದ ಮಹಾಸತಿಗಲ್ಲುಗಳು ಕೆಲವು ಗ್ರಾಮಗಳಲ್ಲಿವೆ. ಗದಗ, ಮುಳಗುಂದ, ಲಕ್ಷ್ಮೇಶ್ವರ ಮೊದಲಾದೆಡೆಗಳಲ್ಲಿ ಆ ಕಾಲದ ಮೇರೆಗಲ್ಲುಗಳಿವೆ.

ವಿಜಯನಗರ ಮನೆತನದ ಕಾಲಾವಧಿಯಲ್ಲಿ ಗದಗ ಜಿಲ್ಲೆಯಲ್ಲಿ ದೇವಾಲಯಗಳ ನಿರ್ಮಾಣದೊಂದಿಗೆ ಕೆಲವು ಪ್ರಾಚೀನ ದೇವಾಲಯಗಳ ಜೀರ್ಣೋದ್ಧಾರ ಕಾರ್ಯವೂ ಜರುಗಿದೆ. ಈ ಸಂದರ್ಭದಲ್ಲಿ ಹಲವು ಹೊಸ ಹೊಸ ವಾಸ್ತು ಸೇರ್ಪಡೆಗಳಾಗಿವೆ. ಈ ಎರಡೂ ಬಗೆಯ (ನಿರ್ಮಾಣ ಮತ್ತು ಜೀರ್ಣೋದ್ಧಾರ) ದೇವಾಲಯಗಳ ವಾಸ್ತು ಲಕ್ಷಣಗಳು ಗಮನಾರ್ಹವಾಗಿವೆ. ಹಾಗೆಯೇ ಆ ಕಾಲದಲ್ಲಿ ವಿವಿಧ ಧರ್ಮಗಳ ಶಿಲ್ಪಗಳು ಪ್ರತಿಷ್ಠಾಪಿತವಾಗಿವೆ. ಇವು ಸಮಕಾಲೀನ ಪ್ರತಿಮಾ ಲಕ್ಷಣಗಳು ಮತ್ತು ಆಚಾರ-ವಿಚಾರಗಳು, ನಂಬುಗೆ-ಸಂಪ್ರದಾಯಗಳ ಅಧ್ಯಯನಕ್ಕೆ ಮಹತ್ವದ್ದಾಗಿವೆ. ಹಾಗಾಗಿ ಈ ಜಿಲ್ಲೆಯ ಪ್ರತಿಯೊಂದು ಗ್ರಾಮದಲ್ಲಿ ವ್ಯವಸ್ಥಿತ ಕ್ಷೇತ್ರಕಾರ್ಯವನ್ನು ಕೈಗೊಂಡು ವಿಜಯನಗರ ಮನೆತನಕ್ಕೆ ಸಂಬಂಧಿಸಿದಂತೆ ಶಾಸನಗಳು, ದೇವಾಲಯಗಳು, ಶಿಲ್ಪಗಳು, ಸ್ಮಾರಕಗಲ್ಲುಗಳು, ಲೌಕಿಕ ಸ್ಮಾರಕಗಳು, ಸ್ಥಳಪುರಾಣಗಳು, ಐತಿಹ್ಯಗಳು, ದಾಖಲೆಗಳು ಮೊದಲಾದವುಗಳನ್ನು ಒಂದೆಡೆಗೆ ಸಂಗ್ರಹಿಸಿ ವಸ್ತುನಿಷ್ಠ ತಲಸ್ಪರ್ಶಿ ಸಮಗ್ರ ಸಾಂಸ್ಕೃತಿಕ ಅಧ್ಯಯನ ಕೈಗೊಳ್ಳಲು ಅವಕಾಶವಿದೆ. ಹಾಗೆಯೇ 'ವಿಠಲಾಪುರದ ಭಿಷ್ಟಪ್ಪಯ್ಯನ ಸಾಂಸ್ಕೃತಿಕ ಕೊಡುಗೆಗಳು' ಎಂಬ ವಿಷಯದ ಕುರಿತಾಗಿ ಪ್ರೌಢ ಅಧ್ಯಯನವನ್ನು ಕೈಗೊಳ್ಳಲು ಸಾಕಷ್ಟು ಪುರಾತತ್ವ ಮತ್ತು ಸಾಹಿತ್ಯಿಕ ಆಕರಗಳು ಲಭ್ಯವಿವೆ. ಈ ನಿಟ್ಟಿನಲ್ಲಿ ಪ್ರಸ್ತುತ ಸಂಲೇಖನವು ದಿಕ್ಸೂಚಿಯಾಗಿದೆ.

ಆಧಾರ ಕೃತಿಗಳು ಮತ್ತು ಲೇಖನಗಳು

1. ಕಣ್ಣನ್ ಕೆ.ಎಸ್., *ಅಹೋಬಲನ ವಿರೂಪಾಕ್ಷ ವಸಂತೋತ್ಸವ ಚಂಪೂ,* 2001, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

2. ಕಲಬುರ್ಗಿ ಎಂ.ಎಂ. (ಸಂ.), *ಧಾರವಾಡ ಜಿಲ್ಲೆಯ ಶಾಸನ ಸೂಚಿ,* 1975, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

3. ಕಾಮತ, ಸೂರ್ಯನಾಥ (ಸಂ.), *ಧಾರವಾಡ ಜಿಲ್ಲೆಯ ಗೆಜೆಟಿಯರ್,* 1995, ಬೆಂಗಳೂರು.

4. ಕೆರಿಮನಿ ಸಿ.ವಿ. (ಪ್ರ.ಸಂ.), *ಬೆಳ್ವೊಲ ಬೆಳಕು* (ಗದುಗಿನಲ್ಲಿ ಜರುಗಿದ ಅಖಿಲ ಭಾರತ 76ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಚಿಕೆ, 2010), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

5. ಗೋಗಿ ಹನುಮಾಕ್ಷಿ ಮತ್ತು ರಾಠೋಡ ಪಿ.ಕೆ., *ಡಂಬಳ : ಸಾಂಸ್ಕೃತಿಕ ಅಧ್ಯಯನ,* 2008, ಲಿಂಗಾಯತ ಅಧ್ಯಯನ ಸಂಸ್ಥೆ, ಗದಗ.

6. ಗೋಪಾಲ ಆರ್. (ಸಂ.), *ಗದಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,* 2006, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

7. ದುರುಗಪ್ಪ ಎಂ.ಕೆ., "ಬದಲಾವಣೆಯ ನೆಲೆಯಲ್ಲಿ ಕುಮಾರರಾಮ ದೇವಾಲಯಗಳು", *ಇತಿಹಾಸ ದರ್ಶನ*, ಸಂ. 22, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, 2008, ಪು. 180–184.

8. ನರೇಗಲ್ಲ ಎಂ.ಎಸ್., *ಉತ್ತರ ಗದಗ ಜಿಲ್ಲೆಯ ಶಾಸನಗಳು: ಒಂದು ಅಧ್ಯಯನ*, 2009, ರವಿರಶ್ಮಿ ಪ್ರಕಾಶನ, ಗದಗ.

9. ನಾರಣಾಪುರ ಚಂದ್ರಶೇಖರ, *ಕರ್ನಾಟಕದ ವೀರಶೈವ ಮಠಗಳು*, 2002, ಗೆಳೆಯ ಪ್ರಕಾಶನ, ಚಿಕ್ಕಮಗಳೂರು.

10. ಪಾಡಿಗಾರ ಶ್ರೀನಿವಾಸ, "ನಾವಿದ ಕಲೆಗೊಂದು ಸಂಮಾನ", *ವಿಜಯನಗರ ಅಧ್ಯಯನ*, ಸಂ. 3, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 1998, ಪು. 76–81.

11. ಪಾಡಿಗಾರ ಶ್ರೀನಿವಾಸ, "ವಿಜಯನಗರ ಕಾಲದ ಲಕ್ಷ್ಮೇಶ್ವರದ ಎರಡು ಜಯಪತ್ರ ಶಾಸನಗಳು", *ವಿಜಯನಗರ ಅಧ್ಯಯನ*, ಸಂ. 7, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2002, ಪು. 87–96.

12. ಬಾಲಸುಬ್ರಣ್ಯ, ವಾಸುದೇವನ್ ಸಿ.ಎಸ್. ಮತ್ತು ನಾಯಕ ರಮೇಶ, *ಕರ್ನಾಟಕ ದೇವಾಲಯ ಕೋಶ: ಗದಗ ಜಿಲ್ಲೆ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007.

13. ವಸುಂಧರಾ ದೇಸಾಯಿ ಮಹಾಪುರುಷ, "ಹಂಪಿಯ ಮುಖ್ಯ ಗೋಪುರ ನಿರ್ಮಾತೃ ಶ್ರೀ ಭಿಷ್ಟಪ್ಪಯ್ಯ ಮಹಾಪುರುಷ", *ಇತಿಹಾಸ ದರ್ಶನ*, ಸಂ. 22, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, 2008, ಪು. 291–299.

14. ವಸುಂಧರಾ ದೇಸಾಯಿ ಮಹಾಪುರುಷ, "ರಂಗಾಪುರ ಸಂಸ್ಥಾನ ಮಠಾಧೀಶ್ವರ ಮಹಾದೇವಪ್ಪಯ್ಯ ಅವರಿಗೆ ಸನ್ಮಾನಗಳು, ಪತ್ರಗಳು", *ಇತಿಹಾಸ ದರ್ಶನ*, ಸಂ. 25, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, 2010, ಪು. 379–382.

15. ವಸ್ತ್ರದ ಚಂದ್ರಶೇಖರ ಮತ್ತು ಗೊಳಸಂಗಿ ಅರ್ಜುನ (ಸಂ.), *ಕ್ರತುಪುರ* (ಗದಗ ಜಿಲ್ಲಾ 3ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಗ್ರಂಥ), ಗದಗ, 2008.

16. ಸಿಖಾ ಸಿ (ಪ್ರ.ಸಂ.), *ಲಕ್ಕುಂಡಿ ಉತ್ಸವ ಸ್ಮರಣ ಸಂಚಿಕೆ*, ಲಕ್ಕುಂಡಿ ಉತ್ಸವ ಸಮಿತಿ, ಗದಗ, 2008.

17. ಹಂಜೆ ಅಪ್ಪಣ್ಣ ಎನ್., "ಕೃಷ್ಣದೇವರಾಯನ ಶಿರಗುಪ್ಪಿಯ ಶಾಸನ", *ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ*, ಸಂ. 84/2, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಏಪ್ರಿಲ್/ಜೂನ್, 2006, ಪು. 15–16.

18. ಹರಿಹರ ಶ್ರೀನಿವಾಸರಾವ್, "ವಿಠ್ಠಲಾಪುರದ ಅಪ್ರಕಟಿತ ಕಂಚಿನ ಶಾಸನ", *ಇತಿಹಾಸ ದರ್ಶನ*, ಸಂ. 10, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, 1995, ಪು. 83–86.

19. ಹರಿಹರ ಶ್ರೀನಿವಾಸರಾವ್, "ವಿಠ್ಠಲಾಪುರದ ಭಿಷ್ಟಪ್ಪಯ್ಯನವರ ಮನೆತನದ ಎರಡನೆಯ ಅಪ್ರಕಟಿತ ಕಂಚಿನ ಶಾಸನ", *ಇತಿಹಾಸ ದರ್ಶನ*, ಸಂ. 22, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, 2008, ಪು. 67–68.

20. ಹರಿಹರ ಶ್ರೀನಿವಾಸರಾವ್, "ಭಿಷ್ಟಪ್ಪಯ್ಯನವರ ಮನೆತನದ ದಾಖಲೆಗಳಲ್ಲಿ ಇನಾಂ ಕಮಿಷನರ್ ಹೆಚ್. ಬರ್ಡ್‌ವುಡ್", *ಇತಿಹಾಸ ದರ್ಶನ*, ಸಂ. 10, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, 2010, ಪು. 390–394.

21. ಹಾಜವಗೋಳ ಧನವಂತ, *ಮುಳುಗುಂದನಾಡು: ಒಂದು ಅಧ್ಯಯನ*, ಮಹಾದೇವಿ ಪ್ರಕಾಶನ, ಧಾರವಾಡ, 2004.

ವಿಜಯನಗರ ಕಾಲದ ತೀರ್ಥಯಾತ್ರಾ ಸ್ಥಳಗಳು

ಡಾ॥ ಸಿ. ಎನ್. ಕೋಳಿಗುಡ್ಡೆ – ಡಾ॥ ಬಿ. ಸಿ. ರಾಕೇಶ

ಕ್ರಿ.ಶ. 14ರಿಂದ 17ನೇ ಶತಮಾನದಲ್ಲಿ ಕನ್ನಡ ನಾಡಿಕ ಸಂಸ್ಕೃತಿ ಶ್ರೀಮಂತಗೊಳಿಸಿದ ಪ್ರಸಿದ್ಧ ಅರಸೊತ್ತಿಗೆ ವಿಜಯನಗರ ಸಾಮ್ರಾಜ್ಯದ್ದು. ಕ್ರಿ.ಶ. 1336ರಲ್ಲಿ ಸಂಗಮವಂಶದ ಹರಿಹರ, ಬುಕ್ಕರಾಯರಿಂದ, ವಿದ್ಯಾರಣ್ಯ ಗುರುಗಳ ಮಾರ್ಗದರ್ಶನದಲ್ಲಿ ಸ್ಥಾಪಿಸಲ್ಪಟ್ಟಿತು. ಇವರು ಹೊಯ್ಸಳ ದೊರೆ ಮುಮ್ಮಡಿ ವೀರಬಲ್ಲಾಳನ ಮಾಂಡಲಿಕರಾಗಿದ್ದರೆಂದೂ ಮಹಮ್ಮದೀಯರ ಧಾಳಿ ಎದುರಿಸಲು ಹರಿಹರ, ಬುಕ್ಕರಿಗೆ ಹೊಯ್ಸಳರು ಬೆಂಬಲನೀಡಿ ಪ್ರೋತ್ಸಾಹಿಸಿದರೆಂದೂ ತಿಳಿದುಬರುತ್ತದೆ.

ವಿಜಯನಗರ ದೊರೆಗಳು ಕನ್ನಡ ನಾಡು, ನುಡಿಗೆ ಸಲ್ಲಿಸಿರುವ ಅಪಾರ ಪ್ರೋತ್ಸಾಹ, ಪ್ರೀತಿ, ಗೌರವ ಗಮನಿಸಿದರೆ ಇವರು ಮೂಲತಃ ಕನ್ನಡಿಗರೇ ಎಂದು ಧೈರ್ಯವಾಗಿ ಹೇಳಬಹುದು. ಇವರ ಹೆಚ್ಚು ಶಾಸನಗಳು ಕನ್ನಡದಲ್ಲಿ "ಶ್ರೀ ವಿರೂಪಾಕ್ಷ" ಅಂಕಿತ ಹೊಂದಿರುವುದು ತಿಳಿದುಬರುತ್ತದೆ.

ಹಂಪೆ ಇಂದು ತುಂಗಭದ್ರಾ ನದಿ ತೀರದಲ್ಲಿರುವ ಒಂದು ಹಳ್ಳಿ. ಒಂದು ಕಾಲದಲ್ಲಿ ಇದು ಸುಪ್ರಸಿದ್ಧ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದು, 9 ಚದರ ಮೈಲಿ ವಿಸ್ತಾರಹೊಂದಿ ಭಾರತದಲ್ಲಿ ಅತ್ಯಂತ ಶ್ರೀಮಂತ ಪ್ರದೇಶವಾಗಿದ್ದು. ಈಗ ಇಲ್ಲಿ ಪಾಳುಬಿದ್ದ ಕೋಟೆ ಕೊತ್ತಲ, ಹಾಳಾದ ಬೀದಿಗಳು, ಭಗ್ನ ಅರಮನೆ ಅವಶೇಷಗಳು, ದೇವಾಲಯಗಳು ಕಂಡುಬರುತ್ತವೆ. ಪೂರ್ವದಲ್ಲಿ ಕಿಷ್ಕಿಂದೆ ಎಂದೂ, ನಂತರದಲ್ಲಿ ಪಂಪಾಕ್ಷೇತ್ರವೆಂದೂ ಕರೆಯಲಟ್ಟಿತು. ಹಂಪೆಯನ್ನು 1336ರಲ್ಲಿ ಒಂದನೆಯ ಹರಿಹರನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದನು. ವಿಜಯನಗರ ಅರಸರು ರಾಜ್ಯವನ್ನು, ರಾಜಧಾನಿಯನ್ನು, ವಿರೂಪಾಕ್ಷ ದೇವಾಲಯವನ್ನು ಕಾಲಕಾಲಕ್ಕೆ ವಿಸ್ತರಿಸುತ್ತಾ ಬಂದರು. ಕ್ರಿ.ಶ. 1509ರಿಂದ 1529ರವರೆಗೆ 20 ವರ್ಷ ಆಳಿದ ಶ್ರೀಕೃಷ್ಣದೇವರಾಯನು ಪ್ರಸಿದ್ಧನಾದ ಚಕ್ರವರ್ತಿ. ಈತನ ಕಾಲ ಕರ್ನಾಟಕದ ಸುವರ್ಣಯುಗ, ವಿಜಯನಗರ ಸಾಮ್ರಾಜ್ಯದ ಅತ್ಯಂತ ಉನ್ನತಿಯ ವಿಸ್ತಾರದ ಕಾಲ. ಈ ಕಾಲದಲ್ಲಿ ವಿಜಯನಗರಕ್ಕೆ ಬಂದ ವಿದೇಶಿ ಪ್ರವಾಸಿಗರೂ ತಮ್ಮ ಪ್ರವಾಸಕಥನಗಳಲ್ಲಿ ಸಾಮ್ರಾಜ್ಯದ ವೈಭವ ಸಂಪತ್ತುಗಳನ್ನು ಚಿತ್ರಿಸಿ ದಾಖಲಿಸಿದ್ದಾರೆ.

ಕರ್ನಾಟಕದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯದ ಸುಮಾರು 230 ವರ್ಷಗಳ ಆಳ್ವಿಕೆ ಒಂದು ಪರ್ವಕಾಲ. ಸಮೃದ್ಧ ಸಾಧನ ಸಂಪತ್ತು, ದಕ್ಷ ಆಡಳಿತ, ಸುವ್ಯಸ್ಥಿತ ವ್ಯವಸ್ಥೆ, ಶಾಂತಿ ನೆಮ್ಮದಿ ಜೀವನ ಒಳಗೊಂಡ ರಾಜ್ಯದಲ್ಲಿ

ವಿದ್ಯೆ, ಸಾಹಿತ್ಯ, ಸಂಗೀತ, ನೃತ್ಯ, ಲಲಿತ ಕಲೆಗಳಿಗೆ ಪ್ರೋತ್ಸಾಹ ನೀಡಿ, ವಿದೇಶಗಳೊಂದಿಗೆ ವ್ಯಾಪಾರ ಮತ್ತು ರಾಯಭಾರ ಸಂಬಂಧಗಳನ್ನಿಟ್ಟುಕೊಂಡು, ಪ್ರಬಲವಾದ ಸೇನಾ ಬಲಹೊಂದಿ ಸಾಮಂತ ರಾಜರ ಸಹಕಾರದಿಂದ ಸಾಮ್ರಾಜ್ಯವಾಳಿದರು. ಈ ಕಾಲದ ಶಿಲ್ಪಕಲೆ, ವಾಸ್ತುಶಿಲ್ಪ ದೇವಾಲಯಗಳು ವ್ಯಾಪಾರ ಮಳಿಗೆಗಳನ್ನು ವಿವರಿಸುವುದರೊಂದಿಗೆ, ಮುತ್ತು ರತ್ನಗಳನ್ನು ಬಳ್ಳದಲ್ಲಿ ಅಳೆದು ಮಾರುತ್ತಿದ್ದದನ್ನು ಇತಿಹಾಸಕಾರರು ದಾಖಲಿಸಿದ್ದಾರೆ.

ಈ ಸಾಮ್ರಾಜ್ಯದ (ವಿಜಯನಗರ) ಅರಸರಾದ ಹರಿಹರ ಬುಕ್ಕರಾಯರು, ಸೇರಿದಂತೆ ಕೆಲವು ಅರಸರು ಯಾತ್ರೆ ಕೈಗೊಂಡ ಉಲ್ಲೇಖಗಳಿವೆ. ಅವರುಗಳಲ್ಲಿ ಪ್ರಮುಖವಾಗಿ ಇಮ್ಮಡಿ ಹರಿಹರ, ಇಮ್ಮಡಿದೇವರಾಯ, ಸಾಳುವ ನರಸಿಂಹ, ಅಚ್ಯುತರಾಯ, ರಾಮರಾಯ ಮುಂತಾದವರು ತೀರ್ಥಯಾತ್ರೆಗಳನ್ನು ಕೈಗೊಂಡು ಮುಂದಿನ ಅರಸರಿಗೆ ದಾರಿದೀಪವಾಗಿದ್ದಾರೆ.

ತೀರ್ಥ ಎಂದರೆ ಪವಿತ್ರವಾದ ಜಲ, ಪುಣ್ಯಕ್ಷೇತ್ರ ಎಂದಾಗುತ್ತದೆ. ಇಲ್ಲಿ ಪುಣ್ಯಕ್ಷೇತ್ರಗಳಿಗೆ ಹೋಗಿ ಬರುವಿಕೆಯನ್ನು ಅಥವಾ ಪವಿತ್ರ ಸ್ಥಳಗಳ ದರ್ಶನಕ್ಕಾಗಿ ಮಾಡುವ ಯಾತ್ರೆಯನ್ನು ತೀರ್ಥಯಾತ್ರೆ ಎನ್ನಲಾಗಿದೆ. ಈ ತೀರ್ಥಯಾತ್ರೆಯ ಉಗಮ ಹಾಗೂ ವಿಕಾಸವನ್ನು ಚಾರಿತ್ರಿಕವಾಗಿ ತಿಳಿಸುವುದು ಕಷ್ಟ. ಹಿಂದೂ ಧರ್ಮವು ತೀರ್ಥಯಾತ್ರೆಯ ಕಲ್ಪನೆಯನ್ನು ದೇಶಸಂಚಾರ ಮಾಡುತ್ತಿದ್ದ ಬೌದ್ಧ ಶ್ರವಣರಿಂದ ಪಡೆಯಿತೆಂದು ಕೆಲವರು ಅಭಿಪ್ರಾಯಪಡುತ್ತಾರೆ.

ವಿಜಯನಗರ ಅರಸರು ಮತ್ತು ಅವರ ಸಾಮಂತರು ಮೇಲಿಂದ ಮೇಲೆ ಧಾರ್ಮಿಕ ಯಾತ್ರೆಗಳನ್ನು ಕೈಗೊಳ್ಳುತ್ತಿದ್ದರು. ಚಿದಂಬರಂ, ಶ್ರೀಕಾಕುಲಂ, ಕಾಳಹಸ್ತಿ, ವೆಂಕಟಾದ್ರಿ (ತಿರುಪತಿ), ಕಾಂಚಿ, ಶ್ರೀಶೈಲ, ತಿರುವಣ್ಣಮೈತ್ರಿ, ಹರಿಹರ, ಅಹೋಬಲಂ, ಸಂಗಮೇಶ್ವರ, ಗೋಕರ್ಣ, ಉಳವಿ, ಬಾದಾಮಿಯ ಬನಶಂಕರಿ, ಶ್ರೀರಂಗಂ, ಕುಂಭಕೋಣಂ ಮಹಾನಂದಿ, ಅನಂತಶಯನಂ, ತ್ರಿವೇದ್ರಂ, ರಾಮೇಶ್ವರ ಮುಂತಾದ ಕ್ಷೇತ್ರಗಳು ಸುಪ್ರಸಿದ್ಧ ಯಾತ್ರಾಸ್ಥಳಗಳಾಗಿದ್ದವು. ಹಿಂದೂ ಯಾತ್ರಾ ಸ್ಥಳಗಳಿಗೆ ಭೇಟಿ ನೀಡಿ ಉದಾರವಾಗಿ ದಾನಧರ್ಮಗಳನ್ನು ಮಾಡಿದ ಸಂದರ್ಭಗಳು ಅಪಾರವಾಗಿದೆ ಎಂದಾಗ ಧರ್ಮದ ಬಗೆಗೆ ಇವರಿಗಿರುವ ಮಹದಾಸೆಯನ್ನು ಅಳೆಯಲಾಗದು. ಅವರು ಕೈಗೊಂಡ ಯಾತ್ರೆಗಳ ಸಂಪೂರ್ಣ ವಿವರಗಳನ್ನು ಇಲ್ಲಿ ನೀಡಲಾಗಿದೆ.

1. ಕುಂಭಕೋಣಂ

ಶ್ರೀ ಕೃಷ್ಣದೇವರಾಯನು ಕೈಗೊಂಡ ಯಾತ್ರಾ ಸ್ಥಳಗಳ ಪೈಕಿ ಇದು ಸಹ ಮಹತ್ವವಾದುದು. ಇದು ತಮಿಳುನಾಡಿನಲ್ಲಿದೆ. ಕುಂಭಮೇಳ ಇಲ್ಲಿ ಪ್ರಸಿದ್ಧವಾದುದು. ಜೈತ್ರಯಾತ್ರೆಯಲ್ಲಿ ಪಡೆದ ವಿಜಯದ ಸಂಕೇತವಾಗಿ ಇವನು 1517 ಫೆಬ್ರವರಿ 6ರಂದು ಮಹಾಮುಖಂ ಉತ್ಸವದ ಸಂದರ್ಭದಲ್ಲಿ ಕುಂಭಕೋಣಂಗೆ ಯಾತ್ರೆ ಹೋಗಿ ದಾನ ದತ್ತಿ ಕಾರ್ಯಗಳನ್ನು ಉದಾರವಾಗಿ ಮಾಡಿದನೆಂಬುದು ಹಮನಾರ್ಹ.

2. ಶ್ರೀಕಾಕುಳಂ

ಶ್ರೀಕಾಕುಳಂ ಎಂಬ ಯಾತ್ರಾಸ್ಥಳವು ಆಂಧ್ರಪ್ರದೇಶದ ಕೃಷ್ಣಾ ಜಿಲ್ಲೆಯಲ್ಲಿದೆ. ಕೃಷ್ಣದೇವರಾಯನು ಕಳಿಂಗದ ದಿಗ್ವಿಜಯದಿಂದ ಹಿಂದಿರುಗುವ ಮುನ್ನ ಶ್ರೀಕಾಕುಳಂನ ತೆಲುಂಗರಾಯ ದೇವರನ್ನು ದರ್ಶನ ಮಾಡಿ, ಸಕಲ ಆಭರಣಗಳು, ಅಗತ್ಯವಾದ ವಸ್ತುಗಳನ್ನು ದೇವರಿಗೆ, ಕಾಣಿಕೆಯಾಗಿ ಅರ್ಪಿಸಿದನು.

3. ತಿರುಪತಿ

ಭಾರತ ಮತ್ತು ಆಂಧ್ರ ಪ್ರದೇಶದ ಪ್ರಸಿದ್ಧ ಯಾತ್ರಾ ಸ್ಥಳಗಳಲ್ಲಿ ತಿರುಪತಿಯು ಒಂದಾಗಿದೆ. ಈ ತಿರುಪತಿಗೆ ಕೃಷ್ಣದೇವರಾಯ ಏಳು ಬಾರಿ ಯಾತ್ರೆ ಕೈಗೊಳ್ಳುವ ಸಂಗತಿ ಗಮನಾರ್ಹವಾದುದು. ಪ್ರತಿ ಯಾತ್ರೆಗೂ ಒಂದೊಂದು ಗುರಿ ಉದ್ದೇಶ ಇತ್ತೆಂಬುದನ್ನು ನಿರಾಕರಿಸುವಂತಿಲ್ಲ. ಇವನ ಮೊದಲ ಯಾತ್ರೆ ಆರಂಭವಾದದ್ದು ಹೀಗೆ: ಎಮ್ಮೆತ್ತೋರಿನ ಮೇಲೆ ಗಳಿಸಿದ ವಿಜಯಕ್ಕಾಗಿ 1513ರ ಫೆಬ್ರವರಿ 10ರಂದು ತನ್ನ ರಾಣಿಯರಾದ ಚಿನ್ನಾದೇವಿ ಮತ್ತು ತಿರುಮಲಾದೇವಿಯರೊಡನೆ ತಿರುಮಲೆಗೆ ಯಾತ್ರೆ ಕೈಗೊಂಡು ಅಪಾರ ಕಾಣಿಕೆಗಳನ್ನು ಸಲ್ಲಿಸುತ್ತಾನೆ.

ಮೂರನೇ ಯಾತ್ರೆಯನ್ನು 1513ರ ಜೂನ್ 13ರಂದು ಕೈಗೊಳ್ಳುತ್ತಾನೆ. ರಾಯನು ತನ್ನ ತಂದೆ ನರಸನಾಯಕ ಮತ್ತು ತಾಯಿ ನಾಗಜಮ್ಮನ ಧರ್ಮವೆಂದು ವೇಂಗಡದೇವರಿಗೆ ನವರತ್ನಖಚಿತವಾದ ಆಭರಣಗಳನ್ನು ದಾನ ಮಾಡಿ, ತಂದೆ ತಾಯಿಯವರ ಹೆಸರಿನಲ್ಲಿ ತ್ರೈಮಾಸ ವತ್ಸರತೋತ್ಸವ ನಡೆಸುವಂತೆ ಮಾಡಿ ಚತ್ರಾವತಿ, ತರೂರು ಮತ್ತು ಕರಕಂಬುಡು ಗ್ರಾಮಗಳನ್ನು ದಾನಮಾಡಿದನು. ಈ ಯಾತ್ರೆ ಕೈಗೊಂಡುದರ ಹಿನ್ನೆಲೆ ಒರಿಸ್ಸಾದ ಗಜಪತಿಯನ್ನು ಹೆದರಿಸಿ ಹಿಮ್ಮೆಟ್ಟಿಸಿದ ಸಂಕೇತವಾಗಿ ದೇವರಿಗೆ ಕೃತಜ್ಞತಾ ಮನೋಭಾವ ಸಲ್ಲಿಸುವುದಾಗಿತ್ತು.

1514ರ ಜುಲೈ 6ರಂದು ಕೃಷ್ಣದೇವರಾಯ ರಾಣಿಯರಾದ ಪಟ್ಟಮಹಿಷಿ ತಿರುಮಲಾದೇವಿ ಮತ್ತು ಹೃದಯೇಶ್ವರಿ ಚಿನ್ನಾದೇವಿಯರೊಂದಿಗೆ ತಿರುಪತಿಗೆ ನಾಲ್ಕನೇ ಯಾತ್ರೆಯನ್ನೂ ಕೈಗೊಂಡನು. ಇದಕ್ಕೆ ಕಾರಣ ಉದಯಗಿರಿ ದುರ್ಗವನ್ನು ಹಿಡಿದ ಮೇಲೆ ಕೃಷ್ಣದೇವರಾಯನೂ ಅವನ ರಾಣಿಯರಾದ ತಿರುಮಲಾದೇವಿಯೂ ಚಿನ್ನಾದೇವಿಯೂ ರಾಜಧಾನಿಗೆ ಮರಳಿ ಬರುತ್ತಾ, ದಾರಿಯಲ್ಲಿ ತಿರುಪತಿಗೆ ಬಂದು ಅಧಿಷ್ಠಾತೃ ಶ್ರೀವೆಂಕಟೇಶ್ವರ ದೇವರಿಗೆ ಕೃತಜ್ಞತಾರೂಪದ ಪೂಜೆ ಸಲ್ಲಿಸಿದರು.

ಐದನೆಯ ಯಾತ್ರೆ 1515ರ ಜೂನ್‌ನಲ್ಲಿ ಕೈಗೊಂಡರು ಡಾ. ಎ.ವಿ. ವೆಂಕಟರತ್ನಂ ಅವರು ಕೃಷ್ಣದೇವರಾಯನ ಈ ಭೇಟಿಯನ್ನು ಕ್ರಿ.ಶ. 1517 ಎಂದು ತಿಳಿಸುತ್ತಾರೆ. ತಾನು ಕೈಗೊಂಡ ಜೈತ್ರಯಾತ್ರೆಯಲ್ಲಿ ದಿಗ್ವಿಜಯಶಾಲಿಯಾಗಿ ಕೆಲವು ಅರಸರನ್ನು ಸದೆಬಡಿದು ಗಿರಿ ಮಾರ್ಗಕೋಟೆ ಕೊತ್ತಲಗಳು ಮುಂತಾದ ಎಲ್ಲ ಸ್ಥಳಗಳನ್ನು ವಶಪಡಿಸಿಕೊಂಡು ವಿಜಯನಗರಕ್ಕೆ ಹಿಂದಿರುಗಿದನು.

1518ರ ಅಕ್ಟೋಬರ್ 16ರಂದು ತನ್ನ ಪಟ್ಟಮಹಿಷಿ ತಿರುಮಲಾದೇವಿಯೊಂದಿಗೆ ರಾಯನು ಆರನೇ ಯಾತ್ರೆ ಕೈಗೊಂಡ ಇವಳು ಗಂಡು ಮಗುವಿಗೆ ಜನ್ಮವಿತ್ತ ಕಾರಣ ಯಾತ್ರೆಗೆ ಹೋಗಬೇಕಾಯಿತು. ಮತ್ತು ತನ್ನ ಮನೆದೇವರಾದ ಶ್ರೀ ವೆಂಕಟೇಶ್ವರನ ಆವಾಸಸ್ಥಾನದ ಹೆಸರಿನ ಮೇಲೆ ಆ ಮಗುವಿಗೆ ತಿರುಮಲ ಎಂದು ನಾಮಕರಣ ಮಾಡಿದನು.

4. ಅಮರಾವತಿ

ಅಮರಾವತಿ ಚಾರಿತ್ರಿಕ ಮತ್ತು ಧಾರ್ಮಿಕವಾಗಿ ಮಹತ್ವ ಪಡೆದ ಕ್ಷೇತ್ರ. ತೌಲವ ಅಥವಾ ತುಳುವ (ತಳವಾರ) ವಂಶದ ಕೃಷ್ಣದೇವರಾಯ ಅನೇಕ ಬಾರಿ ಇಲ್ಲಿಗೆ ಯಾತ್ರೆ ಕೈಗೊಳ್ಳುತ್ತಾನೆ. ಇವನು ಮಹಾನ್ ಜೈತ್ರಯಾತ್ರೆಯಲ್ಲಿ ವಿಜಯಶಾಲಿಯಾದ ಪ್ರಯುಕ್ತ ಈ ಅಮರೇಶ್ವರನನ್ನು ದರ್ಶನ ಮಾಡಲು 1515ರ ಜುಲೈ 8ರಂದು ಬರುತ್ತಾನೆ. ಎರಡನೆಯ ಬಾರಿ ಯಾತ್ರೆಯನ್ನು 1515ರ ಅಕ್ಟೋಬರ್‌ನಲ್ಲಿ ಕೊಂಡವೀಡುವಿನ ಮೇಲೆ ಪಡೆದ ವಿಜಯದ ಸಂಕೇತವಾಗಿ ತನ್ನ ಪರಿವಾರದವರೊಡನೆ ಧರಣಿಕೂಟದ ಮೂಲಕ ಅಮೇರೇಶ್ವರನನ್ನು ಸಂದರ್ಶಿಸಿ ಹಿಂದಿರುಗುವ

ಮುನ್ನ ತುಲಾಪುರುಷವನ್ನು ನಡೆಸಿದನು. ಅವನ ರಾಣಿಯರು ರತ್ನಧೇನು ಮತ್ತು ಸಪ್ತಸಾಗರ ಎಂಬ ಧರ್ಮಗಳನ್ನು (ದಾನ) ಮಾಡಿದರು. ಅಂದು ರಾಯನು ಅಮರೇಶ್ವರದಿಂದ ಶ್ರೀಶೈಲಕ್ಕೆ ಯಾತ್ರೆ ಕೈಗೊಂಡನು. ಆಂಧ್ರದ ಪ್ರಸಿದ್ಧ ಸ್ಥಳಗಳಿಗೆ ಬೇಗ ತಲುಪಲು ಇದು ಮಧ್ಯ ಸ್ಥಳವಾಗಿತ್ತು. ಪ್ರಯಾಣದಲ್ಲಿ ತಂಗಲು ಅನುಕೂಲವಾಗಿತ್ತು. ರಾಯನು ಕೃಷ್ಣವೇಣಿ ನದಿ ತೀರದಲ್ಲಿ ಅಮರೇಶ್ವರ ದೇವರ ಸನ್ನಿಧಿಯಲ್ಲಿ ತುಲಾಪುರುಷ ಮಹಾದಾನ ಮಾಡಿ ಚಿನ್ನಾದೇವಿಯರ ಕೈಯಲ್ಲಿ ರತ್ನಧೇನು ಮಹಾಧಾನವನ್ನು ತಿರುಮಲಾದೇವಿ ಅಮ್ಮನವರ ಕೈಯಲ್ಲಿ ಸಪ್ತಸಾಗರ ಮಹಾದಾನವನ್ನು ಮಾಡಿ, ಶ್ರೀ ಪರ್ವತಕ್ಕೆ ಹೋಗುತ್ತಾನೆ.

5. ಶ್ರೀಶೈಲ

ದಕ್ಷಿಣ ಭಾರತದಲ್ಲಿ ಧಾರ್ಮಿಕವಾಗಿ ಶ್ರೀಶೈಲ ಬಹು ಮಹತ್ವ ಪಡೆದ ಯಾತ್ರಾಸ್ಥಳವಾಗಿದೆ. ಶಿಲಾಯುಗದಿಂದ ಇಂದಿನವರೆಗೆ ಜನಾಂಗಿಕ ಅಧ್ಯಯನ ಮತ್ತು ಇತರ ಎಲ್ಲಾ ಅಧ್ಯಯನದ ಶಿಸ್ತುಗಳ ದೃಷ್ಟಿಯಿಂದ ಆಕರ್ಷಣೆಗೊಳಗಾಗಿದೆ. ಶ್ರೀಶೈಲ ಇಂತಹ ಯಾತ್ರಾಸ್ಥಳಕ್ಕೆ ಈ ಹಿಂದೆ ವಚನಕಾರ್ತಿ ಅಕ್ಕಮಹಾದೇವಿ ಇತರ ಪುಣ್ಯಪುರುಷರು ಸಂದರ್ಶಿಸಿದ್ದು ಗಮನಾರ್ಹ. ಕೃಷ್ಣದೇವರಾಯ 1515ರ ಜುಲೈ 25 ಬುಧವಾರ ಶ್ರಾವಣ ಹಾಗೂ ಚಂದ್ರಗ್ರಹಣದಂದು ರಾಣಿಯರೊಡಗೂಡಿ ಶ್ರೀ ಮಲ್ಲಿಕಾರ್ಜುನನ ಸಂದರ್ಶನ ಪಡೆದನು.

1515ರ ಜುಲೈ 25ರ ಯಾತ್ರೆಗೆ ಹಿನ್ನೆಲೆಯೆಂದರೆ ರಾಯನು ಪೂರ್ವದ ದಿಗ್ವಿಜಯದಲ್ಲಿ ಉದಯರಾಗಿ, ಆದ್ದಂಕಿ, ಮಿನಿಕೊಂಡ, ಬೆಲ್ಲಕೊಂಡ, ನಾಗಾರ್ಜುನಕೊಂಡ ತೆಂಗೇಡಕೇತವರ ಮೊದಲಾದ ಗಿರಿದುರ್ಗ, ಸ್ಥಳದುರ್ಗಗಳನ್ನು ವಶಪಡಿಸಿಕೊಂಡುದಲ್ಲದೇ, ಧರಣಿಕೋಟೆ, ಅಮರೇಶ್ವರನನ್ನು ಸಂದರ್ಶಿಸಿ, ತುಲಾಪುರುಷ ಮಾಡಿ ಶ್ರೀ ಪರ್ವತಕ್ಕೆ ಭೇಟಿ ನೀಡಿದ ಸಂಗತಿ ಶಾಸನಗಳಿಂದ ತಿಳಿದುಬರುವುದು. ರಾಯನು 1515ರ ಅಕ್ಟೋಬರ್‌ನಲ್ಲಿ ತನ್ನ ರಾಣಿಯರೊಂದಿಗೆ ಶ್ರೀಶೈಲಕ್ಕೆ ತೆರಳಿ ಮಲ್ಲಿಕಾರ್ಜುನ ದೇವರಿಗೆ ಅನೇಕ ಆಭರಣಗಳಲ್ಲದೆ ಗ್ರಾಮಗಳನ್ನು ದೇವರ ಕಾರ್ಯಕ್ಕೆಂದು ಬಿಟ್ಟುಕೊಟ್ಟನು. ಚೈತ್ರಯಾತ್ರೆಯಲ್ಲಿ ಕಂಡ ಶುಭಲಕ್ಷಣಕ್ಕಾಗಿ ಈ ಯಾತ್ರೆ ಕೈಗೊಂಡಿರಬೇಕು.

6. ಕಾಳಹಸ್ತಿ

ಕಾಳಹಸ್ತಿ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಚಂದ್ರಗಿರಿ ತಾಲೂಕಿನಲ್ಲಿರುವ ಪ್ರಸಿದ್ಧ ಯಾತ್ರಾಸ್ಥಳವಾಗಿದೆ. ರಾಯನು 1513ರ ಜೂನ್ 16ರಂದು ತಿರುಮಲೆಗೆ ಭೇಟಿ ನೀಡಿ ಅಂದೇ ಕಾಳಹಸ್ತಿಯಲ್ಲಿನ ಪ್ರಸಿದ್ಧ ಶಿವದೇವಾಲಯವಾದ ಕಾಳಸ್ತೇಶ್ವರನಿಗೆ ಅನೇಕ ಆಭರಣಗಳನ್ನು, ಬಂಗಾರದ ತಟ್ಟೆಗಳನ್ನು ಮತ್ತು ಗ್ರಾಮಗಳನ್ನು ಅರ್ಪಿಸಿದನಲ್ಲದೆ ಸುವರ್ಣಮುಖಿ ನದಿ ದಡದ ಮೇಲೆ ಬೃಹತ್ ಗೋಪುರವನ್ನೇ ಕಟ್ಟಿಸಿದನು.

ಈ ರೀತಿ ರಾಯನು ಯಾತ್ರೆ ಕೈಗೊಳ್ಳುವಾಗ ತನ್ನ ಸಾಮಂತರನ್ನು, ರಾಣಿವಾಸದವರನ್ನು, ಬೇಡ ಸಾಮಂತರನ್ನು, ಅರಮನೆಯ ನಿಯೋಗಿಗಳನ್ನು ಕರೆದುಕೊಂಡು ಹೋಗುತ್ತಿದ್ದನು. ಜೊತೆಗೆ ಹೋದ ಅಧಿಕಾರಿಗಳನ್ನು ಒಪ್ಪಂದ, ಕಾಣಿಕೆಗಳನ್ನು ಸಂಗ್ರಹಿಸಲು ಕಳುಹಿಸುತ್ತಿದ್ದನು. ಇವನು ತೀರ್ಥಯಾತ್ರೆಗಳಿಂದ ರಾಜ್ಯವಿಸ್ತಾರ ಶಾಂತಿಪಾಲನೆ ಕಲಹಗಳ ನಿವಾರಣೆ ಇತರ ಅನಿಶ್ಚಿತ ಪ್ರಸಂಗಗಳನ್ನು ತೊಡೆದು ಹಾಕಿ ಶಾಂತಿ ನೆಲೆಸಲು ಕಾರಣನಾದನಲ್ಲದೆ, ಸಾಮ್ರಾಜ್ಯದ ಕೀರ್ತಿ, ಗೌರವ, ಖ್ಯಾತಿ ಪ್ರಶಂಸೆಗಳು ಉತ್ತುಂಗಶಿಖರ ಮೆಟ್ಟಲು ಅವಿರತ ಶ್ರಮಿಸಿದ ಮಹಾನಾಯಕನಾಗಿ ಕಂಡು ಬರುತ್ತಾನೆ.

ಆಧಾರ ಗ್ರಂಥಗಳು

1. ಪ್ರೊ. ಎಸ್.ಕೆ. ರಾಮಚಂದ್ರಾರಾವ್, *ತಿರುಪತಿ ತಿಮ್ಮಪ್ಪ*, 1980, ಪು. 101.
2. ಪ್ರೊ. ಜಿ. ವೆಂಕಟಸುಬ್ಬಯ್ಯ, *ಕನ್ನಡ ನಿಘಂಟು* (ನಾಲ್ಕನೇ ಸಂಪುಟ), 1979, ಪು. 3522.
3. ಹರಿದಾಸ ಭಟ್ಟಾಚಾರ್ಯ, *ಯುಗಯಾತ್ರೀ ಭಾರತೀಯ ಸಂಸ್ಕೃತಿ* (ನಾಲ್ಕನೆಯ ಸಂಪುಟ – ಧರ್ಮಗಳು), 1988, ಪು. 381.
4. ಸದ್ಯೋಜಾತ ಸ್ವಾಮೀಜಿ, *ವಿಜಯನಗರ ಕಾಲದ ಧಾರ್ಮಿಕ ಜೀವನ*, 1971, ಪು. 52.
5. ಪ್ರೊ. ಎಸ್.ಕೆ. ರಾಮಚಂದ್ರರಾವ್, *ಪೂರ್ವೋಕ್ತ*, ಪು. 137.
6. ಎಂ.ವಿ. ಕೃಷ್ಣರಾವ್ ಮತ್ತು ಕೇಶವಭಟ್ಟ, *ಕರ್ನಾಟಕದ ಇತಿಹಾಸ ದರ್ಶನ*, 1970, ಪು. 380.
7. ನೋಡಿ: ಡಾ. ಎ.ವಿ. ವೆಂಕಟರತ್ನಂ, *ಲೋಕಲ್ ಗವರ್ನಮೆಂಟ್ ಇನ್ ದಿ ವಿಜಯನಗರ ಎಂಪೈರ್*, 1972, ಪು. 137.

ರಾಯ ಸಂಸ್ಕೃತಿ

ಕುಂ. ಬಾ. ಸದಾಶಿವಪ್ಪ

'ಸಂಸ್ಕೃತಿ' ಅರ್ಥ Culture ಎಂಬುವ ಆಂಗ್ಲ ಸಂವಾದಿ ಪದ ಬಳಕೆಯಲ್ಲಿದ್ದು, ಇದನ್ನು ಅಭ್ಯಾಸ ನಡವಳಿಕೆ, ವರ್ತನೆ, ಆಚಾರ, ವಿಚಾರ, ಶೀಲ ಸ್ವಭಾವ ಎಂದು ಹೇಳಬಹುದು. ಅಂತರಂಗ ಶುದ್ಧಿಗೂ ಸಂಸ್ಕೃತಿ ಎಂದು ಹೇಳುವರು. ಜೀವನ ಸ್ವರೂಪವನ್ನು ನಿರ್ಧರಿಸುವ ಆಂತರಿಕ ಸೌಂದರ್ಯವೂ ಹೌದು. ಸ್ಪೆನ್ಸರ್‌ನು ಸಂಸ್ಕೃತಿಯಲ್ಲಿ ಜೀವಂತಿಕೆಯ ಹಾಗೂ ನಾಗರಿಕತೆಯಲ್ಲಿ ಅವಸಾನದ ಅವಸ್ಥೆಗಳನ್ನು ತಿಳಿಸುವನು. Culture is living one, civilization is dying one. ಮ್ಯಾಥ್ಯೂ ಅರ್ನಾಲ್ಡನು The culture is then properly described not as having its origin in the love of perfection. ಪರಿಪೂರ್ಣತೆಯ ಬಯಕೆಯೇ ಸಂಸ್ಕೃತಿಯ ಉಗಮ ಸ್ಥಾನ. 'ಕನ್ನಡ ನಿಘಂಟು' ಪ್ರಕಾರ ಬುದ್ಧಿ ವಿಕಾಸ, ಮಾನಸಿಕ ಪಕ್ವತೆ, ಒಳ್ಳೆಯತನವೇ ಸಂಸ್ಕೃತಿ. ಒಂದು ದೇಶದ, ರಾಜ್ಯದ ಜನಾಂಗದ ಮಾನಸಿಕ ಸಾಧನೆ. ಜೀವನವು ಲಯಬದ್ಧವಾಗಿ ಒಪ್ಪಂದದಿಂದ ಶೋಭಿಸಬೇಕು. ಹೀಗೆ ಜನಾಂಗೀಯ ಗ್ರಾಮೀಣ ನಗರ ಬುಡಕಟ್ಟು ಸಂಸ್ಕೃತಿ; ಬಹುಮುಖ ಸಂಸ್ಕೃತಿ, ದೇಶೀಯ ವಿದೇಶೀಯಗಳೆಂದು ವ್ಯಾಖ್ಯಾನಿಸುವರು. ಬಿಡಿ ಬಿಡಿ ವ್ಯಕ್ತಿಗಳಿಂದ ಇಡೀ ಸಮಾಜ ಸೃಷ್ಟಿಯಾಗುವುದು. ಸಮಾಜದಿಂದ ರಾಜ್ಯ, ದೇಶವಿದೇಶಗಳೂ ಕಂಡುಬರುತ್ತವೆ. ಆದ್ದರಿಂದ ಪ್ರಾಚೀನರು ಯಥಾ ರಾಜ ತಥಾ ಪ್ರಜ ಎಂದು ಹೇಳುತ್ತಿದ್ದರು. ಇದರ ಹಿನ್ನೆಲೆಯಲ್ಲಿ ವಿಜಯನಗರದ ರಾಯ ಸಂಸ್ಕೃತಿಯನ್ನು ಕುರಿತು ಚರ್ಚಿಸೋಣ. 'ರಾಯ' ಎಂದರೆ ಅರಸ, ರಾಜ, ದೊರೆ, ಒಡೆಯ, ಯಜಮಾನ, ಸ್ವಾಮಿ, ಸಾಹೇಬ, ಇತ್ಯಾದಿ ಅರ್ಥಗಳು ಉಂಟಾಗುತ್ತವೆ. ಇದು ಗೌರವಸೂಚಕ ಪದವೂ ಹೌದು.

ಹಿಂದಿನ ಕಾಲದಲ್ಲಿ ಜಿಲ್ಲಾ, ತಾಲ್ಲೂಕುಗಳಿಂದ ಹಳ್ಳಿಗಳಿಗೆ ಅಧಿಕಾರಿಗಳು, ಆಪ್ತರು ಬಂಧುಗಳು ಆಗಮಿಸಿದರೆ ಅವರಿಗೆ ರಾಯರು ಬಂದಿರುವರು, ಅವರನ್ನು ಕಾಣಬೇಕೆಂದು ಹೇಳುತ್ತಿದ್ದರು. ಈಗಲೂ ಕೆಲ ಪ್ರದೇಶದಲ್ಲಿ ಈ ಮಾತು ಕೇಳಿ ಬರುತ್ತಿದೆ. ಇದು ವಿಜಯನಗರದ ರಾಯರ ಸಂಸ್ಕೃತಿ. ಈಗ ಅವರ ಬಗ್ಗೆ ಅವರ ಸುಸಂಸ್ಕೃತಿಯ ಬಗ್ಗೆ ತಿಳಿಯೋಣ:

1. ಶೃಂಗೇರಿಯ ಬಳಿಯ ಕಲಾಸಹಳ್ಳಿಯೇ ಸಂಗಮ ರಾಯರ ಮೂಲಸ್ಥಳವಿರಬೇಕೆಂದು ಪಿ.ಬಿ. ದೇಸಾಯಿ ಅವರು ಊಹಿಸುವರು.

2. ಕನಕಗಿರಿ ಗೋಪುರದ ಕೆಳಗೆ ಇರುವ ಶಾಸನದಲ್ಲಿ ಸಂಗಮನು ಯದುವಂಶದವನೆಂದು ಹೇಳಿ ಅವನ ಮಕ್ಕಳು (1) ಹರಿಹರ (2) ಬುಕ್ಕರೆಂದಿದೆ.
3. ಹರಿಹರ, ಬುಕ್ಕರು ಭದ್ರಾನದಿ ಸಂಗಮದ ಕೂಡ್ಲಿಯಿಂದ ಹರಿಹರದವರೆಗಿನ ಪ್ರದೇಶದವರು ಹೊಯ್ಸಳರ ದುಸ್ಥಿತಿಯಲ್ಲಿ ಆಡಳಿತ ಸೂತ್ರಗಳ್ನು ಕೈಗೆತ್ತಿಕೊಂಡಿರಲು ಸಾಧ್ಯ ಎಂದು ಡಾ॥ ದೇವರ ಕೊಂಡಾರೆಡ್ಡಿಯವರು ಊಹಿಸುವರು.

1336ರಲ್ಲಿ ವಿದ್ಯಾನಗರ-ವಿಜಯನಗರ ರಾಜ್ಯ ಉದಯಿಸಿ (1) ಸಂಗಮ (2) ಸಾಳ್ವ (3) ತುಳು (4) ಅರವೀಡು ಮನೆತನಗಳಿಂದ 17ನೇ ಶತಮಾನದವರೆಗೂ, 24 ಜನ ಪ್ರಮುಖ ಅರಸರಿಂದ ವಿಜೃಂಭಿಸಿತು. ಮಧ್ಯ 1565ರಲ್ಲಿ ತಾಳಿಕೋಟೆ ಕಾಳಗದಲ್ಲಿ ಸೋಲು ಪಡೆದು ಮುಂದಿನ ಕಾಲದಲ್ಲಿ ಆನೆಗೊಂದಿ, ಚಂದ್ರಗಿರಿ, ಪೆನುಗೊಂಡೆ, ಕೇಂದ್ರಗಳಿಂದ ಆಳ್ವಿಕೆ ನಡೆಸಿದರು.

ಸಂಗಮ ವಂಶದ ಮೊದಲ ಹರಿಹರನು ಅನೇಕ ಯುದ್ಧಗಳನ್ನು ಮಾಡಿ ಅನೇಕ ಕೋಟೆಗಳನ್ನು ಗೆದ್ದನು. ಬಾರಕೂರಿನಲ್ಲಿ 1339-40ರಲ್ಲಿ ಕೋಟೆ ನಿರ್ಮಿಸಿದನು. ಇವನ ಒಡೆತನವನ್ನು ಹೊನ್ನಾವರದ ಮುಸ್ಲಿಂ ಸುಬೇದಾರನು ಒಪ್ಪಿಕೊಂಡನು. ಹಿಂದೂ ಶಕ್ತಿಗಳ ಬಲವನ್ನು ಸಂಘಟಿಸಿದನು. ದೋರಸಮುದ್ರದ ಮಧ್ಯ ರಾಜ್ಯವು ವಶವಾಯಿತು. ಹರಿಹರ ಮತ್ತು ಅವನ ಸೋದರರು ಯದುವಂಶವೆಂದೂ ಕುರುಬರೆಂದೂ ಪಂಡಿತಚರ್ಚೆ ಮುಂದುವರಿದಿದೆ. ಬುಕ್ಕರಾಯನು 1356ರಲ್ಲಿ ವಿದ್ಯಾರಣ್ಯವನ್ನು ಕಾಶಿಯಿಂದ ಬರಮಾಡಿಕೊಂಡನೆಂದು ಶೃಂಗೇರಿಯ ಒಂದು ಕಡತದಿಂದ ಗೊತ್ತಾಗುವುದು.

1. ಪಿ.ಬಿ.ದೇಸಾಯಿ ಪ್ರಕಾರ ಸಂಗಮ ಮತ್ತು ಮಡದಿ ಶಾರದೆಯವರಿಗೆ ಐದು ಜನ ಗಂಡು ಮಕ್ಕಳು. ಅವರು (1) ಹರಿಹರ (2) ಕಂಪಣ್ಣ (3) ಬುಕ್ಕ (4) ಮಾರಪ್ಪ (5) ಮುದ್ದಣ್ಣ
2. ಚಾಮರಾಜನಗರ ತಾಲೂಕಿನ ಹೊಮ್ಮ ಶಾಸನದ ಪ್ರಕಾರ ಸಂಗಮನ ತಂದೆ ಬುಕ್ಕ ಭೂಪಾಲ, ತಾಯಿ ಕಾಮಾಯಿ. ಈ ದಂಪತಿಗಳಿಗೆ (1) ಹರಿಹರ (2) ಕಂಪಣ್ಣ (3) ಬುಕ್ಕ (4) ಮಾರಪ್ಪ (5) ಮುದ್ದಣ್ಣ (5) ಮಾರಪ್ಪ ಎಂಬ ಮಕ್ಕಳಿದ್ದರು. ಇಮ್ಮಡಿ ಹರಿಹರನ ಗದುಗಿನ ತಾಮ್ರ ಶಾಸನ ಪ್ರಕಾರ ಶಾಲಿವಾಹನ ಶಕ 1301 ರಾಯನು ಅಲ್ಪಕಾಲದಲ್ಲಿಯೇ ರಾಜ್ಯ ವಿಸ್ತರಿಸಿದನು ಎಂದಿದೆ.

ಬುಕ್ಕ ರಾಯನ ಕಾಲದಲ್ಲಿ ರಾಮಾನುಜರಿಂದ ಜೈನರಿಗೆ ಹೆಚ್ಚು ಹಿಂಸೆ ಆಯಿತು. ಜೈನರು 1368 ರಲ್ಲಿ ಬುಕ್ಕರಾಯನಲ್ಲಿ ದೂರನ್ನಿತ್ತರು. ಆಗ ಬುಕ್ಕರಾಯನು ಜೈನರ ಕೈಯನ್ನು ಶ್ರೀವೈಷ್ಣವರ ಕೈಯಲ್ಲಿರಿಸಿ "ವೈಷ್ಣವರ ದರ್ಶನಕ್ಕೂ ಜೈನರ ದರ್ಶನಕ್ಕೂ ಭೇದವಿಲ್ಲ .... ವೈಷ್ಣವರೂ ಜೈನರೂ ಒಂದು ಭೇದವಾಗಿ ಕಾಣಲಾಗದು" ಎಂದು ತೀರ್ಪಿತ್ತನು.

ಬುಕ್ಕರಾಯನು ಕೃಷ್ಣೆಯಿಂದ ರಾಮೇಶ್ವರದವರೆಗೂ ಸಾಮ್ರಾಜ್ಯ ವಿಸ್ತರಿಸಿದನು.

ಸಂಗಮ ಮನೆತನ

1) ಹರಿಹರರಾಯ
2) ಬುಕ್ಕರಾಯ

3) ಇಮ್ಮಡಿ ಹರಿಹರರಾಯ
4) ಇಮ್ಮಡಿ ಬುಕ್ಕರಾಯ
5) ಇಮ್ಮಡಿ ವಿರೂಪಾಕ್ಷ
6) ದೇವರಾಯ
7) ವೀರ ವಿಜಯರಾಯ
8) ಇಮ್ಮಡಿ ದೇವರಾಯ
9) ಮಲ್ಲಿಕಾರ್ಜುನ
10) ಮುಮ್ಮಡಿ ವಿರೂಪಾಕ್ಷ

ಸಾಳುವ ಮನೆತನ

1) ನರಸಿಂಹರಾಯ
2) ಇಮ್ಮಡಿ ನರಸಿಂಹರಾಯ

ತುಳು ಮನೆತನ

1) ನರಸ ನಾಯಕರಾಯ
2) ವೀರ ನರಸಿಂಹರಾಯ
3) ಶ್ರೀ ಕೃಷ್ಣದೇವರಾಯ
4) ಅಚ್ಯುತದೇವರಾಯ
5) ಸದಾಶಿವರಾಯ–ಅಳಿಯರಾಮರಾಯ

ಅರವೀಡು ಮನೆತನ

1) ತಿರುಮಲರಾಯ
2) ಶ್ರೀರಂಗರಾಯ
3) ವೆಂಕಟಪತಿ ದೇವರಾಯ
4) ಇಮ್ಮಡಿ ವೆಂಕಟಪತಿ ದೇವರಾಯ
5) ಮುಮ್ಮಡಿ ಶ್ರೀರಂಗರಾಯ
6) ನಾಲ್ವಡಿ ರಾಮದೇವರಾಯ
7) ಮುಮ್ಮಡಿ ವೆಂಕಟಪತಿರಾಯ

ಅರವೀಡು ಮನೆತನಕ್ಕೆ ಕರ್ನಾಟಕ ಮನೆತನವೆಂದು ಕರೆದರು. ಈ ಮನೆತನದಲ್ಲಿ ಏಳು ಜನ ರಾಯರು: ಒಟ್ಟು ಆಳ್ವಿಕೆ ಅವಧಿ–112 ವರ್ಷಗಳು.

ವಿಜಯನಗರದ ಪ್ರಮುಖ ಅರಸರು ಒಟ್ಟು 24 ಜನರು – ಅವರಲ್ಲಿ ಐದು ಜನರನ್ನು ಹೊರತುಪಡಿಸಿ ಉಳಿದವರು ಸಮರ್ಥರು.

ಈ ಪಟ್ಟಣವು (ಹಂಪಿಯು) ರೋಮನಗರದಂತೆ ಭವ್ಯವಾಗಿದ್ದಿತೆಂದು ಯಾತ್ರಿಕರ ಹೇಳಿಕೆಯಾಗಿದೆ. ಈಗ ಪಟ್ಟಣದ ಬಾಗಿಲು ಮತ್ತು ಬಾವಿಗಳನ್ನು ಅವುಗಳ ಶಾಸನಗಳನ್ನು ಪರಿಶೀಲಿಸೋಣ.

ಹಂಪಿಯ ಬಾಗಿಲುಗಳು

1. **ಕೋಟೆ ಶಂಕರ ದೇವರ ಬಾಗಿಲು** : ಇದು ವಿರೂಪಾಕ್ಷ ದೇವಾಲಯದ ವಾಯವ್ಯ ದಿಕ್ಕಿಗೆ ಕಮಲಾಪುರ–ಹಂಪಿ ರಸ್ತೆಯ ಪೂರ್ವಕ್ಕೆ ದೊಡ್ಡ ಗುಂಡಿನ ಮೇಲಿನ ಶಾಸನದಲ್ಲಿ ಕೋಟೆ ಶಂಕರ ದೇವರ ಬಾಗಿಲು ಎಂದು ಉಲ್ಲೇಖಿಸಿದೆ. ಶಂಕರಗುಡಿ ಹತ್ತಿರವಿರುವುದರಿಂದ ಈ ಹೆಸರಿನಿಂದ ಅದನ್ನು ಕರೆದಿರಬೇಕು.
2. **ಹೊದೆಯ ಬಾಗಿಲು** : ದಿಡ್ಡಿ ಮಾಗಾಣಿ ಪ್ರದೇಶದ ಹೊದೆಯ ಬಾಗಿಲಿನ ವಾಯವ್ಯಕ್ಕೆ ಬಾಳೆ ತೋಟದಲ್ಲಿನ ಗುಂಡಿನ ಮೇಲಿನ ಶಾಸನ. ಹೊದಯ ಎಂದರೆ ಇಳಿಜಾರು. ಆದ್ದರಿಂದ ಈ ಪ್ರದೇಶಕ್ಕೆ ಆ ಹೆಸರು ಬಂದಿರಬಹುದು.
3. **ಸಿಂಗಾರದ ಹೆಬ್ಬಾಗಿಲು** : ಕ್ರಿ.ಶ. 1513ರ ಶಾಸನದ ಪ್ರಕಾರ ಆನೆ ಶಾಲೆಯ ಹಿಂಭಾಗದಲ್ಲಿ ಇದರ ಉತ್ತರಕ್ಕಿರುವ ಚಿಕ್ಕ ಬೆಟ್ಟದ ಮೇಲಿರುವ ಬಾಗಿಲು.
4. **ಬೇಟೆಕಾರರ ಹೆಬ್ಬಾಗಿಲು** : ಕ್ರಿ.ಶ. 1380ರ ಶಾಸನದ ಪ್ರಕಾರ ಹರಿಹರ ಮಹಾರಾಯ ಮನೆಯ ಎಡವಂಕದ ಬೇಟೆಕಾರ ಮಲಗೆಯ ನಾಗಯ್ಯನ ಬಧ್ಧೆಯ ನಾಗಯ್ಯನ ಬೇಟೆಕಾರನ ಹೆಬ್ಬಾಗಿಲು ಪೂರ್ವಕ್ಕೆ ಮೈಲಾರ ದೇವರನ್ನು ಪ್ರತಿಷ್ಠಾಪಿಸಿದೆ. ಅದರ ಆಗ್ನೇಯಕ್ಕೆ ಒರತೆಯ ಕೊಂಡವನ್ನು ಮಾಡಿಸಿದನೆಂದು ತಿಳಿಯುತ್ತದೆ.
5. **ಸೋಮವಾರದ ಬಾಗಿಲು** : ಆನೆಯ ಸಾಲಿನ ಹಿಂದಿನ ಜೈನ ಬಸದಿಯ ಸಮೀಪದ ಸೋಮವಾರ ಬಾಗಿಲಿನ ಉತ್ತರಕ್ಕಿರುವ ಬೆಟ್ಟದ ಮೇಲಿನ ಗುಂಡಿನ ಮೇಲಿರುವ ಶಾಸನ ಸೋಮವಾರದ ಬಾಗಿಲನ್ನು ಮತ್ತು ಬೆಟ್ಟದ ಸೋಮಯದೇವ ಕೊತ್ತಳವನ್ನು ತಿಳಿಸುವುದು.
6. **ಉದಯಗಿರಿ ಬಾಗಿಲು** : ಕ್ರಿ.ಶ. 1554ರ ಶಾಸನದ ಪ್ರಕಾರ ಉದಯಗಿರಿ ಬಾಗಿಲನ್ನು ತಿಳಿಸಿ ವಿಜಯನಗರದ ಮೂಡುಗಡೆ ಕಮಲಾಪುರದಿಂದ ಕಂಪ್ಲಿಗೆ ಹೋಗುವ ರಸ್ತೆಯ ಬದಿಯಲ್ಲಿದೆ. ಇದನ್ನು ಎರಡು ಗುಡ್ಡಗಳ ಮಧ್ಯದಲ್ಲಿ ರಚಿಸಲಾಗಿದೆ. ಇದರ ಪಕ್ಕದ ದೇವಾಲಯ ಹಾಳಾಗಿದೆ.
7. **ಉಪ್ಪರಿಗೆ ಬಾಗಿಲು** : ಕ್ರಿ.ಶ. 1557ರ ಶಾಸನದ ಪ್ರಕಾರ ರಾಜಬೀದಿಯ ಪಡುದಿಕ್ಕಿಗೆ ಇದ್ದ ಉಪ್ಪರಿಗೆ ಬಾಗಿಲನ್ನು ಉಲ್ಲೇಖಿಸಿದೆ. ಇದರ ಮೇರೆಯನ್ನು ಶಾಸನ ತಿಳಿಸುತ್ತದೆ.
8. **ಕೊಠಾರದ ಬಾಗಿಲು** : ಕ್ರಿ.ಶ. 1455ರ ಶಾಸನದ ಪ್ರಕಾರ ಕೊಠಾರದ ಬಾಗಿಲು ಎಂದಿದೆ. ಇದು ಉಗ್ರಾಣಕ್ಕೆ ಸಂಬಂಧಿಸಿದ ಬಾಗಿಲು.
9. **ಪೆನುಗೊಂಡೆ ಬಾಗಿಲು** : ಕ್ರಿ.ಶ. 1540ರ ಶಾಸನದ ಪ್ರಕಾರ ಪೆನುಗೊಂಡೆ ಬಾಗಿಲು ಎಂದಿದೆ. ಇದರ ಬಳಿ ರಘುನಾಥ ದೇವರನ್ನು ಸ್ಥಾಪಿಸಿರುವರು. ಇದಕ್ಕೆ ಸಣ್ಣಕ್ಕಪ್ಪನ ಅಗಸೆ ಎಂದು ಸ್ಥಳೀಯರು ಗುರುತಿಸುವರು. ಇಲ್ಲಿ ಮೂರು ದೇವಾಲಯಗಳಿದ್ದು ಒಂದನ್ನು ಅಚ್ಯುತರಾಯ ನಿರ್ಮಿಸಿದ್ದುದಕ್ಕೆ ಶಾಸನವಿದೆ.

ಹಂಪೆಯ ಬಾವಿಗಳು

1) ನೀರಾವರಿಗೆ 2) ಜನರ ದಾಹ ತಣಿಸಲು 3) ದೇವರ ಪೂಜಾಕಾರ್ಯಕ್ಕಾಗಿ ತೋಟಗಳ ಏತದಿಂದ – ಕಪಲಿಯಿಂದ ಪೈರುಗಳಿಗೆ ನೀರುಣಿಸುವುದಕ್ಕಾಗಿ ರಾಯರು ಬಾವಿಗಳನ್ನು ತೋಡಿಸಿದರು.

1. **ಮಹಾದೇವಿಯಕ್ಕ ಬಾವಿ :** ವಿರೂಪಾಕ್ಷ ಪೇಟೆಯ ಕೊನೆ ನಂದಿ ಮಂಟಪದ ದಕ್ಷಿಣಕ್ಕೆ ಬಂಡೆಯ ಮೇಲಿನ ಒಂದು ಶಾಸನ ದೊಡ್ಡ ಗುಂಡಿನಿಂದ ಈ ಬಾವಿ ಮುಚ್ಚಿದೆ. ಇದರ ಕೆಳಗಿನ ಬಾವಿಗೆ ಕೆಳಬಾವಿಯೆಂದು ಕರೆದಿದೆ. ಹೆಸರು ಶಾಸನದಲ್ಲಿದ್ದು ಬಾವಿ ಮುಚ್ಚಿದೆ.
2. **ಬಿಳಿಯ ಬಾವಿ :** ವಿಠಲ ಸ್ವಾಮಿ ದೇವಾಲಯದ ಮಂಟಪದ ದಕ್ಷಿಣ ಗೋಡೆಯಲ್ಲಿ ಕ್ರಿ.ಶ. 1513ರ ಒಂದು ಶಾಸನ ಗುಡದ ಸೀಮೆಯ ಬಿಳಿಯ ಬಾವಿ ಎಂದು ಉಲ್ಲೇಖಿಸಿದೆ.
3. **ನಾಡಬಾವಿ–ಕಪಿಲೆಯ ಬಾವಿ :** ಕಮಲಾಪುರ ಪ್ರಾಚ್ಯವಸ್ತು ಸಂಗ್ರಹಾಲಯದ ಬಳಿ ರಸ್ತೆ ಬದಿಯಲ್ಲಿದೆ. ಕ್ರಿ.ಶ. 1531ರ ಶಾಸನ ಕುಂತೂರು ಎತಿರಾಯ ದೇವಗಳ ಅಯ್ಯಗಳ ಅಗೆಸಿದ ಕಪಿಲೆಯ ಬಾವಿ.
4. **ಅಗಸರ ಬಾವಿ :** ಕ್ರಿ.ಶ. 1559ರ ಶಾಸನ ವಿಠಲ ದೇವಾಲಯದ ತೇರು ಬೀದಿಯಲ್ಲಿದ್ದಿತೆಂದು ಶಾಸನ ತಿಳಿಸುವುದು.
5. **ಅಶ್ವತ್ಥ ಬಾವಿ :** ಕ್ರಿ.ಶ. 1390 ರ ಶಾಸನ ಪ್ರಕಾರ ಕ್ರಿಯಾಶಕ್ತಿ ವೊಡೆಯರ ಶಿಷ್ಯ ಭಕ್ತರ ನಾಗಪ್ಪ ಮಾಡಿಸಿದ ಬಾವಿ.
6. **ಅರೆ ಶಂಕರ ಬಾವಿ :** ಈಗ ತಳವಾರ ಘಟ್ಟ ಬಾಗಿಲೆಂದು ಕರೆಯುವ ಬಾಗಿಲಿನ ಮೂಲ ಹೆಸರು ಅರೆಶಂಕರ ಬಾಗಿಲು ಕ್ರಿ.ಶ. 1559ರ ಒಂದು ಶಾಸನ ಉಲ್ಲೇಖಿಸುತ್ತದೆ.
7. **ಬೆನಕನ ಬಾವಿ :** ಕ್ರಿ.ಶ. 1411ರ ಶಾಸನದ ಪ್ರಕಾರ ನರಹರಿ ದೇವಗಳು ಕಟ್ಟಿಸಿದ ಬಾವಿ ಎಂದಿದೆ.
8. **ಲಿಂಗಬಾವಿ :** ಬೇಟೆಕಾರರ ಹೆಬ್ಬಾಗಿಲ ಈಶಾನ್ಯ ದಿಕ್ಕಿಗಿರುವ ಬಾವಿ. ಇದು ಈಗ ಕಾಣಸಿಗುವುದಿಲ್ಲ.
9. **ಧರ್ಮಶಾಲಾದ ಪಕ್ಕದ ಬಾವಿ :** ಕ್ರಿ.ಶ. 1439ರ ಶಾಸನದ ಪ್ರಕಾರ ಇದನ್ನು ಅಹಮದ್ ಖಾನ್ ಎಂಬುವ ಓರ್ವ ಮುಸ್ಲಿಂ ಅಧಿಕಾರಿ ಅವನ ಒಡೆಯ ಎರಡನೆಯ ದೇವರಾಯನ ಪುಣ್ಯ ಸ್ಮರಣೆಗಾಗಿ ಕಟ್ಟಿಸಿದನು, ಇದು ಈಗಲೂ ಚೆನ್ನಾಗಿದೆ.
10. ಮಾಲ್ಯವಂತ ಪರ್ವತದ ಈಶಾನ್ಯಕ್ಕೆ ತುರ್ತು ಕಾಲುವೆಯ ಬಲದಂಡೆ ಒಡ್ಡಿನ ಮೇಲಿನ ಗುಂಡಿನ ಮೇಲಿರುವ ಕ್ರಿ.ಶ. 1558ರ ಶಾಸನ ಒಂದು ಬಾವಿಯನ್ನು ಉಲ್ಲೇಖಿಸಿದೆ.

1509ರಲ್ಲಿ ಪಟ್ಟಕ್ಕೆ ಬಂದ ಶ್ರೀಕೃಷ್ಣದೇವರಾಯನ ಕಾಲ ಸುವರ್ಣಯುಗ. ದಕ್ಷಿಣ ಭಾರತದ ಎಲ್ಲಾ ಭಾಗವೂ ರಾಯರ ವಶವಾಯಿತು. ಕಂಚಿ ಪಟ್ಟಣವು ವಿಜಯನಗರದ ಉಪ ರಾಜಧಾನಿಯಾಗಿದ್ದಿತು.

ಹಂಪಿಯಲ್ಲಿ ಮಹಾನವಮಿ ದಿಬ್ಬವೆಂದು ಕರೆಯುವ ಒಂದು ಕಟ್ಟೆಯಿದೆ.

ಪೂರ್ವ ಪಶ್ಚಿಮವಾಗಿ 80 ಅಡಿ ಉದ್ದವಾಗಿಯೂ, ಉತ್ತರ ದಕ್ಷಿಣ 80 ಅಡಿ ಅಗಲವಾಗಿಯೂ 22 ಅಡಿ ಎತ್ತರವಾಗಿಯೂ ಇದ್ದು ಚೌಕಾಕಾರವಾಗಿದೆ. ಶ್ರೀ ಕೃಷ್ಣದೇವರಾಯನು ಒರಿಸ್ಸಾ ರಾಜ್ಯವನ್ನು ಜಯಿಸಿದ ಬಳಿಕ ಇಲ್ಲಿಗೆ ಬಂದು ಅದರ ನೆನಪಿಗಾಗಿ ಈ ಕಟ್ಟೆಯನ್ನು ನಿರ್ಮಿಸಿದನು. ಈ ಕಟ್ಟೆಯ ವರ್ಣನೆಯನ್ನು ಪೋರ್ಚಗೀಸ್ ರಾಯಭಾರಿ ಚೆನ್ನಾಗಿ ವರ್ಣಿಸಿರುವನು. ಇದನ್ನು ನೋಡಿದಾಗ ಹಜಾರ ರಾಮಸ್ವಾಮಿ ಗುಡಿಯ ನೆನಪು ಉಂಟಾಗುವುದು. ಇದರ ಸುತ್ತು ಉಬ್ಬುಚಿತ್ರಗಳು, ಬೇಟೆ ದೃಶ್ಯ, ನೃತ್ಯ ಭಂಗಿ, ಪೌರಾಣಿಕ ಚಿತ್ರ, ಆನೆಗಳು, ಮೆರವಣಿಗೆ, ಅಂದು ಆಸನದಲ್ಲಿ ಕುಳಿತ ವ್ಯಕ್ತಿಗೆ ಬೇರೊಬ್ಬಬಾಗಿ ನಮಸ್ಕರಿಸುವುದು; ಅವನ ಪರ್ಷಿಯನ್ ಟೋಪಿ, ಮೊನಚಾದ ಗಡ್ಡ ಕಾಣುವುದು. ಇದರಿಂದ ಲಾಂಗ್‌ಹರ್ಸ್ಟ್ ಹೇಳಿಕೆಯ ಪ್ರಕಾರ ಅರಸರ ಆಸ್ಥಾನಕ್ಕೆ ಭೇಟಿ ಕೊಟ್ಟ ಪರದೇಶದ

ರಾಯಭಾರಿಯನ್ನು ಈ ವೇದಿಕೆಯಲ್ಲಿ ಚಿತ್ರಿಸಲಾಗಿದೆ ಎಂದು ಗ್ರಹಿಸಬಹುದು. ಇದರ ಮತ್ತೊಂದು ಭಾಗದಲ್ಲಿ ಹೋಳಿ ಹಬ್ಬದ ದೃಶ್ಯ ಕಾಣುವುದು.

ಈ ಕಟ್ಟೆಯ ಮೇಲೆ ದೇವರ ಉತ್ಸವಮೂರ್ತಿ, ಅದರ ಪಕ್ಕ ಗುರುಗಳು ಅರಸರು ಕುಳಿತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸುತ್ತಿದ್ದರು.

ಗೆದ್ದ ಕುಸ್ತಿಪಟುಗಳು, ಕಲಾವಿದರು, ಕವಿಗಳಿಗೆ ಪ್ರಶಸ್ತಿಪತ್ರಗಳನ್ನು ವಿತರಿಸುತ್ತಿದ್ದರು. ಶಿವರಾತ್ರಿ ಮತ್ತು ದಸರಾ ಹಬ್ಬಗಳಲ್ಲಿ ಈ ಕಾರ್ಯಕ್ರಮಗಳು ನಡೆಯುತ್ತಿದ್ದುವು. ಇದೇ ವಿಜಯನಗರದವರ ಸಾಮಂತ ಅರಸರಾದ ಮೈಸೂರು ಅರಸರವರು ದಸರಾ ಉತ್ಸವವನ್ನು ಮುಂದುವರಿಸಿ ಪ್ರತಿ ವರ್ಷ ಆಚರಿಸುವರು.

ವಿಜಯ ನಗರದ ರಾಯರ ನಾಣ್ಯಗಳು

ನಾಣ್ಯದ ಮುಮ್ಮುಖ: ವೃಷಭ ಗಜ, ಗಂಡಭೇರುಂಡ, ಶಿವ ಪಾರ್ವತಿ ವಿಷ್ಣು, ಲಕ್ಷ್ಮಿ ವೆಂಕಟೇಶ ಚಿತ್ರಗಳು.

ಹಿಂದಿನ ಮುಖ: ಅರಸನ ಹೆಸರು ಹೆಸರಿನ ಹಿಂದೆ ಶ್ರೀ ಮತ್ತು ಪ್ರತಾಪ ಅಂಕಿತಗಳು.

ಇವರ ಆಡಳಿತವಲ್ಲಿ ಅಕ್ಕಿ, ಸಕ್ಕರೆ, ಬಟ್ಟೆಗಳನ್ನು ಮಲಯ, ಬರ್ಮಾ, ಚೀನಾ, ಪರ್ಷಿಯಾ, ಅರೇಬಿಯಾ, ಪೋರ್ಚುಗಲ್, ದಕ್ಷಿಣ ಆಫ್ರಿಕಾಗಳಿಗೆ ಕಳಿಸುತ್ತಿದ್ದರು. ಮಂಗಳೂರು, ಬಾರ್‌ಕೂರ್, ಭಟ್ಕಳ, ಹೊನ್ನಾವರಗಳು ಪ್ರಮುಖ ಬಂದರುಗಳಾಗಿದ್ದುವು. ಗದ್ಯಾಣಗಳೆಂಬ ಚಿನ್ನದ ನಾಣ್ಯಗಳು ಚಲಾವಣೆಯಲ್ಲಿದ್ದುವು. ವಿಜಯನಗರಕ್ಕೆ ಭೇಟಿ ಕೊಟ್ಟ ಪರದೇಶದ ಯಾತ್ರಿಕರಾದ (1) ನಿಖಲೊಕೊಂಟಿ (2) ಅಬ್ದುಲ್ ರಜಾಕ್ (3) ಧೂರ್ತೆ (4) ಬಾರ್ಬೋಸ್, (5) ಪೇಯಿಸ ಮೊದಲಾದವರು ಪಟ್ಟಣವನ್ನು ಕಣ್ಣಾರೆ ಕಂಡು ಆನಂದಿಸಿ ಮೆಚ್ಚಿಕೆಯನ್ನು ವ್ಯಕ್ತಪಡಿಸಿರುವರು. ರಾಯರು ವಿದ್ಯಾರಣ್ಯ ಗುರುಗಳ ಮಠಕ್ಕೆ ಕೆಲ ಆಭರಣಗಳನ್ನು ಕೊಟ್ಟಿರುವುರು.

1) ಬೆಳ್ಳಿ ಆಭರಣಗಳು
2) ಬಂಗಾರದ ಆಭರಣಗಳು
3) ಬಂಗಾರದ ಕಿರೀಟದ ತೂಕ 1572 ಗ್ರಾಂ, ನಿವ್ವಳ ತೂಕ – 1432 ಗ್ರಾಂ

ಶ್ರೀ ವಿರೂಪಾಕ್ಷ ದೇವರಿಗೆ ಕೊಟ್ಟ ಬಂಗಾರದ ಆಭರಣ ಕಿರೀಟದ ಒಟ್ಟು ತೂಕ = 4500 ಗ್ರಾಂ 24 ಕ್ಯಾರೆಟ್ಟು ಬಂಗಾರ ಅದರ ಬೆಲೆ. ಕರ್ಣ ಕುಂಡಲ 6, ಕೆಂಪು ಪದ್ಮರಾಗ, 12 ವಜ್ರಗಳು, 11 ಸಣ್ಣ ಕೆಂಪು ಪದ್ಮರಾಗಗಳು (ಒರಟು), 43 ಕೆಂಪು ಪದ್ಮರಾಗಗಳು ಹಣೆಗೆ ಧರಿಸುವುವು. 30 ಒರಟು ವಜ್ರಗಳು, ಪದಕದಲ್ಲಿ 3 ಕೆಂಪು ಪದ್ಮರಾಗಗಳು, ಒಂದು ನೀಲ ಪದ್ಮರಾಗ, ಒಟ್ಟು 64 ಪದ್ಮರಾಗಗಳು, 49 ಒರಟು ವಜ್ರಗಳು ಶ್ರೀ ವಿರೂಪಾಕ್ಷ ದೇವರ ಕಿರೀಟದಲ್ಲಿ ಶೋಭಿಸುವವು. ಕ್ರಿ.ಶ. 1980 ಏಪ್ರಿಲ್ 5ರಂದು ಗೊತ್ತುಪಡಿಸಿದ ದರ ಆಗ ದರ ಹೀಗಿತ್ತು 10 ಗ್ರಾಂ ಚಿನ್ನದ ಬೆಲೆ ರೂ. 1340.

ಈ ಆಭರಣಗಳನ್ನು ಹಕ್ಕ ಬುಕ್ಕರ ಕಾಲದಲ್ಲಿ ಶ್ರೀ ವಿದ್ಯಾರಣ್ಯರಿಗೆ ಕೊಟ್ಟರೆ, ಶ್ರೀ ವಿರೂಪಾಕ್ಷ ದೇವರಿಗೆ ಶ್ರೀ ಕೃಷ್ಣದೇವರಾಯನು ಕೊಟ್ಟನೆಂದು ಹೇಳುವರು. ಮೇಲಿನ ಆಭರಣಗಳನ್ನು ಶಿವರಾತ್ರಿ ಮಾರ್ಚಿ ಏಪ್ರಿಲ್ ತಿಂಗಳಲ್ಲಿ ನಡೆಯುವ ಫಲಪೂಜೆ ಕಾರ್ಯಕ್ರಮದಲ್ಲಿ ದೇವರಿಗೂ ಮತ್ತು ವಿದ್ಯಾರಣ್ಯರಿಗೂ ಧರಿಸುವರು. ಕಾರ್ಯಕ್ರಮ

ಮುಗಿದ ಕೂಡಲೇ ಪೊಲೀಸ್ ಬಂದೋಬಸ್ತು ಮೂಲಕ ಹೊಸಪೇಟೆ ತಾಲ್ಲೂಕು ಖಜಾನೆಗೆ ಸಾಗಿಸಿ, ಅಲ್ಲಿಯೇ ಭದ್ರಪಡಿಸುವರು. ಈ ವಿವರ ಕಛೇರಿ ಅಧಿಕಾರಿಗಳಿಂದ ದೊರೆಯಿತು.

ಕ್ರಿ.ಶ. 1914 ರಲ್ಲಿ ಚಂದ್ರಗಿರಿಯ ರಾಜನ ದಳದಲ್ಲಿ ವಜ್ರಗಳಿಂದ ತುಂಬಿದ ಮೂರು ದೊಡ್ಡ ಪೆಟಾರಿಗಳಿದ್ದುವೆಂದು ಬ್ಯಾರಡಸ್ ಹೇಳಿರುವನು. ಪ್ರಮುಖ ಗಣಿಗಳು ಕೃಷ್ಣಾ ನದಿಯ ಉತ್ತರ ದಡದ ಮೇಲೆ ಮತ್ತು ಕರ್ನೂಲು ಹಾಗೂ ಅನಂತಪುರ ಪ್ರದೇಶಗಳಲ್ಲಿ ವಜ್ರ ಕರೂರಿನಲ್ಲಿ ವಜ್ರಗಳು ದೊರೆಯುತ್ತಿದ್ದುವು. ಇವು ಗೋಲ್ಕೊಂಡದ ಗಣಿಗಳೆಂದು ಪ್ರಸಿದ್ಧಿ ಪಡೆದಿದ್ದುವು.

1. ಸಂಗಮ ಮನೆತನ

ಸಂಗಮರು ಅಚ್ಚಕನ್ನಡಿಗರು. ಅವರ ಜನ್ಮ ಸ್ಥಳ ಅಭಿಮಾನ, ಸಂಬಂಧಗಳು ಎಲ್ಲವೂ ಕರ್ನಾಟಕದಲ್ಲಿ. ಗಂಗಾದೇವಿಯು 'ಮಧುರಾ ವಿಜಯ'ದಲ್ಲಿ ಬುಕ್ಕರಾಯನನ್ನು ಕುರಿತು "ಕರ್ನಾಟಕ ಲೋಕ ನಯನೋತ್ಸವ ಪೂರ್ಣ ಚಂದ್ರಃ" ಎಂದು ಹೇಳಿರುವಳು.

ವಿನುಕೊಂಡ ವಲ್ಲಭರಾಯನಿಂದ ರಚಿಸಲ್ಪಟ್ಟ *ಕ್ರೀಡಾಭಿರಾಮಂ* ಎಂಬುವ ತೆಲುಗು ಗ್ರಂಥದಲ್ಲಿ ಬುಕ್ಕರಾಯನನ್ನು ಕರ್ಣಾಟಕ ಕ್ಷಿತಿನಾಥ ಎಂದು ತಿಳಿಸಲಾಗಿದೆ.

ಆಂಧ್ರ ಕವಿಯಾದ ಶ್ರೀನಾಥನು ಇಮ್ಮಡಿ ದೇವರಾಯನನ್ನು ಕರ್ಣಾಟ ಕ್ಷಿತಿಪಾಲ ಎಂದು ಹೇಳಿರುವನು.

2. ಸಾಳುವ ಮನೆತನ

ಪೀನ ವೀರಭದ್ರನ *ಸಪ್ತಾಂಗ ಪದ್ಧತಿ* ಎಂಬ ತೆಲುಗು ಗ್ರಂಥ ಕಾವ್ಯದಲ್ಲಿ ಸಾಳುವ ನರಸಿಂಹನು ರಾಯ ಮೂವರ ಗಂಡ ಎಂದಿದೆ. ಸಾಳುವ ಇಮ್ಮಡಿ ನರಸಿಂಹನ ಕಾಲದ ರಾಮನ ಜಿಲ್ಲೆಯ ಒಂದು ಶಾಸನದಲ್ಲಿ ಕನ್ನಡಿಗರ ರಾಜ್ಯವೆಂದು ಹೇಳಿರುವುದಾಗಿದೆ.

3. ತುಳು ಮನೆತನ

ಕೃಷ್ಣದೇವರಾಯನಿಗೆ 'ಕನ್ನಡ ರಾಜ್ಯ ರಮಾರಮಣ' ಎಂಬುವ ಬಿರುದು ಇದ್ದಿತು. ಕೃಷ್ಣದೇವರಾಯ ವಿರಚಿತ *ಅಮುಕ್ತ ಮಾಲ್ಯ*ದಲ್ಲಿ 'ಕರ್ಣಾಟಕ ಧರಾ' ಎಂದು ಹೇಳಿದೆ.

ನಂದಿ ತಿಮ್ಮಯ್ಯನ *ಪಾರಿಜಾತಾಪಹರಣಮು* ಎಂಬುವ ತೆಲುಗು ಕಾವ್ಯದಲ್ಲಿ ಕೃಷ್ಣದೇವರಾಯನನ್ನು ಕುರಿತು 'ಶ್ರೀ ಕರ್ಣಾಟ ಮಹೀಶ' ಎಂದು ತಿಳಿಸಿದೆ.

ಕೃಷ್ಣದೇವರಾಯನ *ಜಾಂಬುವತಿ ಕಲ್ಯಾಣಂ* ಎಂಬುವ ಸಂಸ್ಕೃತ ನಾಟಕದಲ್ಲಿ ವಿರೂಪಾಕ್ಷ ದೇವರಿಗೆ 'ಕರ್ಣಾಟ ರಾಜ್ಯ ರಕ್ಷಾಮಣಿ' ಎಂದು ಸಂಬೋಧಿಸಲಾಗಿದೆ.

ಸಾಳುವ ತಿಮ್ಮ *ಚಂಪೂ ಭಾರತ ಟೀಕೆ*ಯಲ್ಲಿ ಕೃಷ್ಣ ದೇವರಾಯನನ್ನು 'ಕರ್ಣಾಟೇಶ್ವರ ಶ್ರೀ ಕೃಷ್ಣರಾಯ' ಎಂದು ಕರೆಯಲಾಗಿದೆ.

4. ಅರವೀಡು ಮನೆತನ

ವಸುಚರಿತ್ರ ತೆಲುಗು ಕಾವ್ಯದಲ್ಲಿ ಅಳಿಯ ರಾಮರಾಯನು ಕರ್ಣಾಟಕ ರಾಜ್ಯವನ್ನು ಮತ್ತೆ ಸ್ಥಾಪಿಸಿದನು ಎಂದು ಹೇಳಿದೆ.

ಅರವೀಡು ಮನೆತನದ ವೆಂಕಟಪತಿರಾಯನ ಶಾಸನದಲ್ಲಿ (ಕ್ರಿ.ಶ. 1601) ಆ ವಂಶದ ಪೂರ್ವಜರ ಬಗ್ಗೆ ಹೇಳುವಾಗ ಚಾಳುಕ್ಯ ರಾಜ, ಬಿಜ್ಜಳ ವೀರ ಹೇಮಾಳಿ ರಾಯ (ಪೆರ್ಮಾನಡಿರಾಯ 6ನೇ ವಿಕ್ರಮ) ಕರ್ಣಾಟ ಸಿಂಹಾಸನವನ್ನು ತನ್ನ ವಶಮಾಡಿಕೊಂಡನು ಎಂದಿದೆ.

ಮಾಟ್ಲ ಅನಂತನ ಸಿದ್ಧಾಂತದ ಕ್ರಿ.ಶ. 1605 ಶಾಸನದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಅಖಿಲ ಕರ್ಣಾಕ ಸಿಂಹಾಸನಾಧೀಶ್ವರ ಎಂದು ಉಲ್ಲೇಖಿಸಿದೆ.

ತಂಜಾವೂರು ನಾಯಕರ ಮಂತ್ರಿಯಾದ ಗೋವಿಂದ ದೀಕ್ಷಿತನ ಮಗ ಯಜ್ಞ ದೀಕ್ಷಿತನು ರಚಿಸಿದ *ಸಾಹಿತ್ಯ ರತ್ನಾಕರ* ಸಂಸ್ಕೃತ ಗ್ರಂಥದಲ್ಲಿ ವೆಂಕಟಪತಿ ದೇವರಾಯ, ಮುಮ್ಮಡಿ ಶ್ರೀ ರಂಗರನ್ನು ಕುರಿತು 'ಕರ್ನಾಟಕ ಭೂಪತಿ' ಮತ್ತು 'ಕರ್ನಾಟ ನೃಪ' ಎಂದು ಬರೆದಿದೆ.

ಆಕರಗಳು

1. *ಎಸ್.ಐ.ಐ.*, ಸಂಪುಟಗಳು 9–10.
2. *ಹಂಪಿ ಶಾಸನಗಳು*, ಕನ್ನಡ ವಿ.ವಿ., ಶಾಸನ ಸಂಪುಟ–3.
3. ಡಾ॥ ಪಿ.ಬಿ. ದೇಶಾಯಿ, *ವಿಜಯನಗರ ಸಾಮ್ರಾಜ್ಯ*.
4. *ಮರೆತು ಹೋದ ಮಹಾಸಾಮ್ರಾಜ್ಯ*, ಅನು: ಸದಾನಂದ ಕನವಳ್ಳಿ.
5. ಡಾ॥ ಅ. ಸುಂದರರ ಲೇಖನ.
6. *The New Cambridge History of India*.
7. *ಕರ್ನಾಟಕ ಪರಂಪರೆ : ಮಧ್ಯಕಾಲ ಮತ್ತು ಆಧುನಿಕ ಕಾಲ*, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ.

48

ವಿಜಯನಗರ ಕಾಲದ ಕನ್ನೇರಮಡು ಗ್ರಾಮ: ಒಂದು ವಿಶ್ಲೇಷಣೆ

ಡಾ॥ ಎಂ. ಕೆ. ದುರುಗಪ್ಪ

ವಿಜಯನಗರ ಕಾಲದ ಅನೇಕ ಗ್ರಾಮಗಳು ಹಾಳಾಗಿಹೋಗಿವೆ. ಅಂತಹ ಪಾಳುಬಿದ್ದ ಗ್ರಾಮಗಳ ಸಾಲಿಗೆ ಸೇರುವ ಕಂನೇರಮಡು ಗ್ರಾಮವೂ ಒಂದು. ಈ ಗ್ರಾಮವು ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕು ಕನಕಗಿರಿ ಸಮೀಪದಲ್ಲಿದೆ. ಈ ಊರು ಈಗ ಹಾಳೂರು ಮತ್ತು ಹೊಸೂರು ಎಂದು ಕರೆಯುತ್ತಾರೆ. ಈ ಹಳೆ ಊರನ್ನು ಒಂದು ಸುತ್ತು ಹಾಕಿ ಬಂದರೆ ಸುಮಾರು ಎಂಟು ನೂರು ವರ್ಷಗಳ ಹಿಂದಿನ ಕುರುಹುಗಳು ಇಲ್ಲಿ ಸಿಗುತ್ತವೆ. ವಿಜಯನಗರ ಅರಸರು ಮತ್ತು ಸ್ಥಳೀಯ ನಾಯಕರಿಂದ ಗುರುತಿಸಲ್ಪಟ್ಟ ಈ ಗ್ರಾಮವೊಂದಕ್ಕೆ ಇಂತಹ ದುರ್ಗತಿ ಬಂದಿದೆಯೆಂದರೆ ನಂಬಲು ಅಸಾಧ್ಯ ಆದರೂ ನಂಬಲೇಬೇಕಾದ ಸ್ಥಿತಿ ನಮ್ಮ ನಡುವೆ ಇದೆ.

ಗಂಗಾವತಿಂದ ಕನಕಗಿರಿ, ಅಲ್ಲಿಂದ ಕನ್ನೇರಮಡುವಿಗೆ ದಾರಿ ಇದೆ. ಈಗ ಹೊಸ ಊರಿನಲ್ಲಿ ಸುಮಾರು ನೂರಕ್ಕೂ ಹೆಚ್ಚು ಮನೆಗಳಿವೆ. ಇಲ್ಲಿನ ಜನರು ತಮ್ಮ ಊರಿನ ಬಗ್ಗೆ ತಿಳಿದಿರುವುದು ಒಂದೇ ಒಂದು ವಿಷಯ. ಅದೇನೆಂದರೆ ನಮ್ಮೂರಿನಲ್ಲಿ ಬಹಳಷ್ಟು ಬಂಗಾರವಿತ್ತು ಎಂದು. ಸುತ್ತಮುತ್ತಲ ಗ್ರಾಮದವರು ಮತ್ತು ದೂರದ ಊರಿನ ನಿಧಿಗಳ್ಳರು ಇಲ್ಲಿನ ಹಾಳೂರು ಪ್ರದೇಶದಲ್ಲಿನ ದೇವಾಲಯ ಮತ್ತು ಶಿಲಾಶಾಸನಗಳ ಮುಂಭಾಗದಲ್ಲಿ ತಗ್ಗು ತೆಗೆಯುವ ಮೂಲಕ ಇಲ್ಲಿನ ಅನೇಕ ಸ್ಮಾರಕಗಳನ್ನು ಹಾಳು ಮಾಡಿ ಮತ್ತು ಅನೇಕ ವಿಗ್ರಹಗಳನ್ನು ಛಿದ್ರ ಮಾಡಿದ್ದಾರೆ.

ಕನ್ನೇರಮಡು ಗ್ರಾಮವನ್ನು ಶಿಲಾಶಾಸನದಲ್ಲಿ ಕಂನೇರಮಡು ಎಂದು ಕರೆಯಲಾಗಿದೆ. ಈ ಊರನ್ನು ಈ ಮೊದಲು ಹೊನ್ನಿನಮಡು ಎಂದು ಕರೆಯುತ್ತಿದ್ದರೆಂದು ಸ್ಥಳೀಯರು ಹೇಳುತ್ತಾರೆ. ಈ ಸ್ಥಳವು ಮಡುವು ಪ್ರದೇಶವಾಗಿದೆ. ಈ ಸ್ಥಳದ ಸಮೀಪದಲ್ಲಿ ಜಕ್ಕೇರಮಡು, ಬೊಮ್ಮನಾಳಮಡು, ತಾಯಮ್ಮಮಡು ಎಂಬ ಪ್ರದೇಶಗಳಿರುವುದು ಇದನ್ನು ಪುಷ್ಟೀಕರಿಸುತ್ತವೆ. ಈ ಪ್ರದೇಶ ತಗ್ಗುಪ್ರದೇಶವಾಗಿದೆ ಮತ್ತು ನೀರಿನಿಂದ ಆವೃತವಾಗಿದೆ. ಮಡು ಎಂದರೆ ನದಿ, ಹೊಳೆ, ಆಳವಾಗಿ ನೀರು ನಿಲ್ಲುವ ಸ್ಥಳ, ನೀರಿರುವ ಆಳವಾದ ತಗ್ಗು ಪ್ರದೇಶ ಎಂದು ಹೇಳಲಾಗಿದೆ. ಕಂ ಎಂದರೆ ಕೆಂಪು, ನೀರು ಪದವು ನೇರ ಆಗಿರಬೇಕು. ಹೀಗಾಗಿ ಕೆಂಪು ನೀರಿನಮಡು ಕ್ರಮೇಣ, ಕಂನೆರಮಡು ಆ ನಂತರ ಕನ್ನೇರಮಡು ಆಗಿರಬೇಕೆಂದು ಕಾಣಿಸುತ್ತದೆ. ಇಲ್ಲಿನ ಮಡುವಿನಲ್ಲಿ ನಿಲ್ಲುವ ನೀರು ಹಾಗೂ ಮೇಲಿಂದ ಮಡುವಿಗೆ ಹರಿದು ಬರುವ ನೀರು ಕೆಂಪು ಬಣ್ಣದಲ್ಲಿರುತ್ತದೆ.

ಕನ್ನೇರಮಡು ಹಳೆ ಊರಿನಲ್ಲಿ ಒಟ್ಟು ಐದು ಶಿಲಾ ಶಾಸನಗಳಿವೆ ಹಾಗೂ ಇನ್ನೂ ಕೆಲವು ಹಾಳಾದಂತೆ ಕಾಣುತ್ತವೆ ಮತ್ತು ಈ ಊರನ್ನು ದಾನ ಮಾಡಿದ ತಾಮ್ರಶಾಸನವೊಂದು ಮೈಸೂರು ಜಿಲ್ಲೆ ಟಿ. ನರಸೀಪುರ ತಾಲ್ಲೂಕ ಸೋಸಲೆ ಗ್ರಾಮದಲ್ಲಿ ದೊರೆತಿದೆ. ಈ ಎಲ್ಲಾ ಶಿಲಾ ಶಾಸನಗಳಿಂದ ಈ ಊರಿನ ಬಗ್ಗೆ ಅನೇಕ ಮಾಹಿತಿಗಳು ದೊರೆಯುತ್ತವೆ. ಈ ಕನ್ನೇರಮಡು ಹಾಳೂರಿನಲ್ಲಿ ಅಗಸಿಹನುಮಪ್ಪ. ಅಮರೇಶ್ವರ, ಪಂಚಲಿಂಗಲೇಶ್ವರ, ದುರ್ಗಾ, ದ್ಯಾಮಮ್ಮ, ಬಸವಣ್ಣ, ತಾಯಮ್ಮ, ಮಲೆಯಮ್ಮ, ಯಲ್ಲಮ್ಮ, ಕರಿಯಮ್ಮ, ಕೊಲ್ಮಿಹನುಮಂತ, ಉಡೇವು ತಾಯಮ್ಮ, ಸುಂಕ್ಲಮ್ಮ, ಉದ್ಧಾನ ಹನುಮಂತ, ಬೀರಲಿಂಗೇಶ್ವರ (ಸಿದ್ಧರಾಮ), ಏಳುಮುಖದ ಹನುಮಂತ, ಕೆಂಚಮ್ಮ ಮುಂತಾದ ಅನೇಕ ದೇವಾಲಯಗಳಿವೆ ಎಂದು ಸ್ಥಳೀಯರು ಹೇಳುತ್ತಾರೆ. ಆದರೆ, ಬಹಳಷ್ಟು ದೇವಾಲಯಗಳು ನಮಗೆ ನೋಡಲಿಕ್ಕೇ ಸಿಗುವುದಿಲ್ಲ, ಅವೆಲ್ಲಾ ಹಾಳಾಗಿಹೋಗಿವೆ. ಈಗ ನಮಗೆ ನೋಡಲು ಅಲ್ಪ ಸ್ವಲ್ಪ ಅಳಿದುಳಿದ ಅವಶೇಷಗಳಿರುವ ಸ್ಥಳಗಳೆಂದರೆ ಅಗಸಿಹನುಮಪ್ಪ, ಪಂಚಲಿಂಗೇಶ್ವರ, ಪಟ್ಟದಯಲ್ಲಮ್ಮ, ಉಡೇವುತಾಯಮ್ಮ, ಕರಿಯಮ್ಮ, ಮಲೆಯಮ್ಮ ದೇವಾಲಯ ಮುಂತಾದವುಗಳು.

ಈಗಿನ ಹೊಸ ಕನ್ನೇರಮಡು ಊರಿನ ಪಶ್ಚಿಮಕ್ಕೆ ಇರುವ ಹಳೆ ಕಂನೇರಮಡು ಗ್ರಾಮದಲ್ಲಿ ಜನವಸತಿ ಇರುವುದಿಲ್ಲ. ಇಲ್ಲಿನ ಅಗಸಿಹನುಮಪ್ಪ, ದುರ್ಗಾ, ಬೀರಲಿಂಗೇಶ್ವರ, ಕರಿಯಮ್ಮ, ಪಟ್ಟದಯಲ್ಲಮ್ಮ, ಮಲೆಯಮ್ಮ ಮುಂತಾದ ದೇವಾಲಯಗಳಿಗೆ ಮಾತ್ರ ಜನರು ಪೂಜೆ ಮಾಡುವುದನ್ನು ಮಾತ್ರ ಕಾಣಬಹುದು. ಇನ್ನುಳಿದ ಹಾಳೂರು ಪ್ರದೇಶದ ದೇವಾಲಯಗಳ ಸ್ಥಳದಲ್ಲಿರುವ ಭಗ್ನ ವಿಗ್ರಹಗಳಿಗೆ ಪೂಜೆಯೇ ಸಲ್ಲುವುದಿಲ್ಲ. ಅವುಗಳನ್ನು ಆಗಾಗ ಸ್ಥಳಾಂತರಿಸುತ್ತಾ ಅವುಗಳಿದ್ದ ಜಾಗವನ್ನು ನಿಧಿಗಾಗಿ ಅಗೆಯಲಾಗಿದೆ. ನಿಂತ ಶಿಲಾಶಾಸನಗಳ ಕಲ್ಲುಗಳನ್ನು, ನಾಗ ಶಿಲ್ಪಗಳನ್ನು ನೆಲದ ಮೇಲೆ ಮಲಗಿಸಿದ್ದಾರೆ. ಬೃಹತ್ ಗುಂಡಿನ ಮೇಲೆ ಕೆತ್ತಲಾಗಿದ್ದ ನಾಗಶಿಲ್ಪ ಗುಂಡನ್ನು ನಿಧಿ ಆಸೆಗಾಗಿ ಬುಲ್ಡೋಜರ್‌ನಿಂದ ಬೋರಲು ಹಾಕಿದ್ದಾರೆ. ಅಗಸಿಹನುಮಪ್ಪ ದೇವರ ಮುಂದಿನ ಗರುಡ ಕಂಬವನ್ನು ಬುಡಸಮೇತ ಬುಲ್ಡೋಜರ್‌ನಿಂದ ಕಿತ್ತು ಹಾಕಿದ್ದು ಕಂಡುಬರುತ್ತದೆ. ಈ ದೇವಾಲಯದ ಪಕ್ಕದಲ್ಲಿದ್ದ ಮತ್ತು ವಿಜಯನಗರ ಅರಸ ಅಚ್ಯುತದೇವರಾಯನಿಗೆ ಪುಣ್ಯವಾಗಲೆಂದು ಇಲ್ಲಿನ ಅಮರೇಶ್ವರ ದೇವಾಲಯಕ್ಕೆ ಭೂಮಿಯನ್ನು ದಾನ ಮಾಡಿದ ಬಗ್ಗೆ ಶಿಲಾಶಾಸನ ಮಾಹಿತಿ ನೀಡುತ್ತದೆಯಾದರೂ ಆ ಅಮರೇಶ್ವರ ದೇವಾಲಯ ಎಲ್ಲಿದೆ ಎಂದು ಇಡೀ ಹಳೆ ಊರನ್ನೆಲ್ಲಾ ಹುಡುಕಿದರೂ ಸಿಗುವುದಿಲ್ಲ. ಊರಿನ ಹಿರಿಯರು ಅಗಸಿಹನುಮಪ್ಪನ ದೇವಾಲಯದ ಈಶಾನ್ಯಕ್ಕೆ ಅಮರೇಶ್ವರ ದೇವಾಲಯವಿತ್ತು ಎಂದು ಹೇಳುತ್ತಾರೆ ಆದರೆ ಅಲ್ಲಿ ಯಾವುದೇ ಕುರುಹುಗಳಿಲ್ಲ. ಆದರೂ ಇಲ್ಲಿ ಅಮರೇಶ್ವರ ದೇವಾಲಯವಿತ್ತು ಎನ್ನುವುದಕ್ಕೆ ಈ ಹನುಮಪ್ಪ ದೇವಾಲಯದ ಮುಂದಿನ ಶಿಲಾಶಾಸನವೇ ಆಧಾರವಾಗಿದೆ. ಅಗಸಿಹನುಮಪ್ಪ ದೇವಾಲಯದ ಪಕ್ಕದಲ್ಲಿ ಕಲ್ಲುಮಂಟಪವಿದೆ, ಇದನ್ನು ಸ್ಥಳಿಯರು ಕಲ್ಲುಮಂಚ ಎನ್ನುತ್ತಾರೆ, ಇಲ್ಲಿನ ಹನುಮಪ್ಪ ವಿಗ್ರಹಕ್ಕೆ ಪೂಜೆ ಕಡಿಮೆ ಎಂದು ಕಾಣಿಸುತ್ತದೆ. ಈ ಹನುಮಪ್ಪನನ್ನು ಹೋರಗೈ ಹನುಮಪ್ಪ ಎಂದು ಕರೆಯುತಾರೆ. ಬಾಲದ ಹೊರಗೆ ಹನುಮಪ್ಪನ ಅಭಯಹಸ್ತವಿದೆ ಆದ್ದರಿಂದ ಬೇರೆ ಊರಿನವರಿಗೆ ಈ ಹನುಮಪ್ಪಪ್ರಿಯ ಎನ್ನುತ್ತಾರೆ ಸ್ಥಳಿಯರು. ಈ ಹನುಮಪ್ಪ ದೇವಾಲಯದ ಎಡ ಭಾಗವೇ ಊರಿನ ಅಗಸಿ, ಇದರ ಎಡ ಭಾಗದಲ್ಲಿ ವುಡೇವು ಎಂದು ಹೇಳುವ ಮಣ್ಣಿನ ದಿಬ್ಬವೊಂದಿದೆ. ಹೊಸ ಊರಿನಿಂದ ಹಳೆ ಊರಿಗೆ ಹೋಗುವ ದಾರಿಯಲ್ಲಿ ಸಿಗುವ ದುರ್ಗಾ ಮತ್ತು ಬೀರಲಿಂಗೇಶ್ವರ ದೇವಾಲಯಗಳು ತುಂಬಾ ಹೊಸದಾಗಿ ಕಟ್ಟಲ್ಪಟ್ಟಿವೆ. ಇಲ್ಲಿ ಹಳೆಯ ಯಾವ ವಿಗ್ರಹಗಳನ್ನು ಕಾಣುವುದಿಲ್ಲ. ಆದರೆ ರಸ್ತೆ ಬದಿ ಕಾಣುವ ಒಂದು ಕಲ್ಲು ಗೋರಿ ಬಗ್ಗೆ ತಿಳಿದಂತೆ, ಈ ಹಿಂದೆ ಟಿಪ್ಪುಸುಲ್ತಾನ ಈ ಭಾಗದಲ್ಲಿ ಧಾಳಿ ಮಾಡಿದಾಗ ಅವನ ಸೈನಿಕನೊಬ್ಬ ಇಲ್ಲಿ ಮರಣ

ಹೊಂದಿದನು, ಅವನ ಗೋರಿಯೇ ಇದು, ನಾಲ್ಕೈದು ವರ್ಷಗಳಿಗೊಮ್ಮೆ ಮೈಸೂರಿನಿಂದ ಇಲ್ಲಿಗೆ ಕೆಲವು ಮುಸ್ಲೀಮ್ ಕುಟುಂಬಗಳು ಬಂದು ಮುಸ್ಲೀಮ್ ಸಂಪ್ರದಾಯದಂತೆ ಪೂಜೆ ಮಾಡಿಕೊಂಡು ಹೋಗುತ್ತಾರೆ, ಅವರ ವಂಶದವನೊಬ್ಬ ಈ ಸ್ಥಳದಲ್ಲಿ ಮಡಿದನೆಂದು ಅವರು ಹೇಳುತ್ತಾರೆಂದು ಸ್ಥಳೀಯರು ತಿಳಿಸುತ್ತಾರೆ.

ಹಳೆ ಊರಿನ ಅಗಸಿಯನ್ನು ದಕ್ಷಿಣಾಭಿಮುಖವಾಗಿ ದಾಟಿ ಮುಂದೆ ಹೋದಾಗ ಪಕ್ಕದಲ್ಲಿಯೇ ಬಸವಣ್ಣ ದೇವಾಲಯ ಇತ್ತೆಂದು ಕಲ್ಲು ಕಂಬಗಳು ಬಿದ್ದ ಸ್ಥಳವನ್ನು ಸ್ಥಳೀಯರು ತೋರಿಸುತ್ತಾರೆ. ಈ ಕಂಬವೊಂದರಲ್ಲಿ ಸೂರ್ಯ, ಚಂದ್ರ ಉಬ್ಬು ಶಿಲ್ಪವಿದ್ದು ಆರು-ಏಳು ಅಕ್ಷರಗಳ ಶಾಸನವಿದ್ದಂತೆ ಕಾಣಿಸುತ್ತದೆ. ಮತ್ತೇನು ದೇವಾಲಯದ ಅವಶೇಷಗಳು ಅಲ್ಲಿ ಕಾಣುವುದಿಲ್ಲ. ಇಲ್ಲಿನ ಬಸವ ವಿಗ್ರಹವನ್ನು ಕುದ್ರಿಮೋತಿ ಮಂಗಳೂರಿನವರು ತೆಗೆದುಕೊಂಡು ಹೋಗಿ ಮಂಗಳೇಶ ಎಂದು ಪೂಜಿಸುತ್ತಿದ್ದಾರೆಂದು ಸ್ಥಳೀಯರು ಹೇಳುತ್ತಾರೆ. ಪಕ್ಕದಲ್ಲಿಯೇ ಇರುವ ಕಲ್ಲುತುಂಡುಗಳ ಗುಂಪನ್ನು ದ್ಯಾಮಮ್ಮ ದೇವಿ ಎಂದು ಪೂಜಿಸುತ್ತಾರೆ. ಅಲ್ಲಿಯೂ ದೇವಾಲಯದ ಕುರುಹುಗಳು ಉಳಿದಿಲ್ಲ. ನಂತರ ಹಳ್ಳವನ್ನು ದಾಟಿ ಮುಂದೆ ಹೋದಾಗ ಪಟ್ಟದಯಲ್ಲಮ್ಮದೇವಿ ಎಂದು ಗುಂಡುಕಲ್ಲಿನ ಮೇಲಿರುವ ಹೆಣ್ಣುಶಿಲ್ಪವೊಂದನ್ನು ಪೂಜಿಸುತ್ತಾರೆ. ಈ ದೇವಿಯ ಮುಂದಿನ ಎಡಭಾಗದಲ್ಲಿ ಗುಂಡುಕಲ್ಲಿನ ಮೇಲೆ ಶಿಲಾ ಶಾಸನವೊಂದನ್ನು ಕೆತ್ತಲಾಗಿದೆ. ಈ ಯಲ್ಲಮ್ಮದೇವಿ ಇರುವ ಹಿಂದಿನ ಪ್ರದೇಶದಲ್ಲಿ ಹೆಸರಿಲ್ಲದ ಮರವೊಂದು ಇದೆ. ಈ ಮರದ ಪಶ್ಚಿಮಕ್ಕೆ ಗುಂಡುಕಲ್ಲಿನ ಮೇಲೆ ಸೂರ್ಯ ಚಂದ್ರ ಮತ್ತು ಒಂದು ಸಾಲಿನ ಶಾಸನವಿದೆ. ಈ ಸ್ಥಳದ ಮುಂಭಾಗದಲ್ಲಿ ಮಲೆಯಮ್ಮದೇವಿ ಎಂದು ಪೂಜಿಸುವ ನಾಗಶಿಲ್ಪವಿರುವ ಕಲ್ಲು ತುಂಡುಗಳಿವೆ ಮತ್ತು ಇದರ ಪಕ್ಕವೇ ಬಿಸಿಲಿಲ್ಲದ ಬಾವಿ ಇದೆ. ಈ ಮಲೆಯಮ್ಮ ರಾಮದುರ್ಗದ ಹೆಣ್ಣು ಮಗಳು. ಅದು ಈಕೆಯ ತವರು ಮನೆ ಆದ್ದರಿಂದ ಅಲ್ಲಿಂದ ಜನರು ವರ್ಷಕ್ಕೊಮ್ಮೆ ಇಲ್ಲಿಗೆ ಬಂದು ಪೂಜೆ ಮಾಡಿಕೊಂಡು ಹೋಗುತ್ತಾರೆ ಎಂದು ಇಲ್ಲಿಯ ಜನರು ಹೇಳುತ್ತಾರೆ. ಈ ಮಲೆಯಮ್ಮದೇವಿ ಹಿಂಭಾಗದಲ್ಲಿ ಗುಂಡುಕಲ್ಲಿನ ಮೇಲೆ ಪುಟ್ಟದಾದ ಒಳಗೈ ಹನುಮಂತ ಉಬ್ಬು ಶಿಲ್ಪವಿದೆ. ಇಂತಹದೇ ಒಂದು ಉಬ್ಬುಶಿಲ್ಪ ಅಗಸಿಹನುಮಪ್ಪ ಗುಡಿ ಮುಂದೆ ಇದೆ. ಇಲ್ಲಿಂದ ಪಶ್ಚಿಮಕ್ಕೆ ಹೋದಾಗ ಅಲ್ಲಿ ಗುಂಡು ಕಲ್ಲಿನ ಮೇಲೆ ವೀರನ ಶಿಲ್ಪವೊಂದು ಇದ್ದು ಪಕ್ಕದಲ್ಲಿ ಶಾಸನವಿದೆ. ಈ ಶಾಸನವು ಭರಮಣ್ಣ ಎಂಬುವನು ಕುದುರೆ ದಳದೊಡನೆ ಹೋರಾಡಿ ಸತ್ತನೆಂದು ತಿಳಿಸುತ್ತದೆ. ಈ ಶಿಲ್ಪದ ಪಶ್ಚಿಮಕ್ಕೆ ಪಂಚಲಿಂಗೇಶ್ವರ ದೇವಾಲಯವಿತ್ತೆಂದು ಹೇಳಲಾಗುತ್ತದೆ. ಈ ದೇವಾಲಯವಿದ್ದ ಸ್ಥಳದ ಗರ್ಭಗೃಹದಲ್ಲಿ ಲಿಂಗ ಮತ್ತು ಅದರ ಕೆಳಗಿನ ಪಾಣಿಪಟ್ಟಲು ಮಾತ್ರವಿದ್ದು ಸುತ್ತಲೂ ಚೌಕ ಆಕಾರದ ಹಾಳಾದ ಕಲ್ಲು ಕಟ್ಟಡವಿದೆ ಮತ್ತು ದೇವಾಲಯದ ಪ್ರವೇಶ ದ್ವಾರದ ಎಡ ಮತ್ತು ಬಲ ಕಲ್ಲು ಕಟ್ಟಡವಿದ್ದ ಕುರುಹುಗಳಿವೆ. ಹಾಗೂ ದೇವಾಲಯದ ಪ್ರವೇಶದ ಮುಂಭಾಗದಲ್ಲಿ ಚಿಕ್ಕ ಮಂಟಪಗಳಿದ್ದ ಹಾಗೆ ಕಾಣುವ ಕಲ್ಲು ಹೊದಿಕೆಗಳಿವೆ ಮತ್ತು ದೇವಾಲಯದ ಸುತ್ತ ಗೋಡೆ ಇರುವ ಕುರುಹುಗಳಿವೆ. ಈ ಸ್ಥಳದಲ್ಲಿ ಇನ್ನುಳಿದ ನಾಲ್ಕು ಲಿಂಗಗಳನ್ನು ನಿಧಿಗಳ್ಳರು ಎತ್ತಿಕೊಂಡು ಹೋಗಿದ್ದಾರೆ ಎಂದು ಸ್ಥಳೀಯರು ಹೇಳುತ್ತಾರೆ ಆದರೆ ಒಂದು ಲಿಂಗವಿರುವ ಗರ್ಭಗೃಹ ಕುರುಹು ಕಟ್ಟಡ ಮಾತ್ರ ಇಲ್ಲಿ ಕಾಣಸಿಗುತ್ತದೆ. ಇಲ್ಲಿನ ಒಂದು ಗುಂಡು ಕಲ್ಲಿನ ಮೇಲೆ ಶಾಸನವಿದೆ. ಈ ಶಾಸನದ ಮಾಹಿತಿ ಲಭ್ಯವಾಗಿಲ್ಲ. ಶಾಸನದ ಮೇಲಿನ ಶಂಕು, ನಾಮ, ಚಕ್ರ ನೋಡಿದರೆ ಇದು ಈ ದೇವಾಲಯದ ನಂತರದ್ದು ಎಂದು ಹೇಳಬಹುದು. ಈ ಪ್ರದೇಶದಲ್ಲಿ ಕೈತೋಟವಿದ್ದ ಬಗ್ಗೆ ಮತ್ತು ಏಳು ಬಾವಿಗಳಿದ್ದವೆಂದು ಹೇಳಲಾಗಿದೆ. ಪಂಚಲಿಂಗೇಶ್ವರ ದೇವಾಲಯದ ಪಶ್ಚಿಮಕ್ಕೆ ಕರಿಯಮ್ಮ ದೇವಾಲಯವಿದೆ, ಈ ದೇವಾಲಯದ ಗರ್ಭಗೃಹದಲ್ಲಿ ಗುಂಡು ಕಲ್ಲಿನ ಮೇಲೆ ಸ್ತ್ರೀ ಉಬ್ಬು ಶಿಲ್ಪವಿದ್ದಂತೆ ಕಾಣುತ್ತದೆ. ಬಲಗೈಯಲ್ಲಿ ತ್ರಿಶೂಲ ಮತ್ತು ಎಡಗೈಯಲ್ಲಿ ಡಮರುಗವಿದೆ. ಈ ದೇವಾಲಯದ ಕಟ್ಟಡ

ಮತ್ತು ಶಿಖರ ಶೀರಾ ಇತ್ತೀಚಿನವು. ಈ ದೇವಾಲಯದ ಮುಂಭಾಗವೇ ಕನ್ನೇರಮಡು ಹಳೆ ಕೆರೆಯಾಗಿದೆ. ಈ ಕೆರೆಯು ಬಹಳ ವರ್ಷಗಳ ಹಿಂದೆಯೇ ಒಡೆದುಹೋಗಿದೆ. ಕೆರೆಯ ಬಲದಿಬ್ಬದಲ್ಲಿ ಅಸ್ಥಿಪಂಜರಗಳು ಈಗಲೂ ದೊರೆಯುತ್ತವೆ ಎಂದು ಸ್ಥಳೀಯರು ಹೇಳುವುದರಿಂದ ಈ ಪ್ರದೇಶವು ಊರಿನ ಶ್ಮಶಾನ ಭೂಮಿಯಾಗಿರಬಹುದು ಎಂದು ತಿಳಿಯಬಹುದು. ಕನ್ನೇರಮಡು ಹೊಸ ಊರಿನಿಂದ ರಾಂಪುರಕ್ಕೆ ಹೋಗುವ ದಾರಿಯಲ್ಲಿ ಕನ್ನೇರಮಡು ಹಳೆ ಕಲ್ಲಿನ ಕೆರೆ ಕಾಣಿಸುತ್ತದೆ. ಈ ಕೆರೆಯು ಒಡೆದು ಹೋಗಿದ್ದು ಎರಡು ವಡ್ಡುಗಳಾಗಿ ಕಾಣಿಸುತ್ತದೆ. ನಡುವೆ ನೀರು ಹರಿಯುತ್ತದೆ. ಈ ಕೆರೆಯ ಮುಂಭಾಗದ ಗುಡಗದ್ದೆ ಪ್ರದೇಶದಲ್ಲಿ ಹನುಮಂತದೇವರು ಇದ್ದಾನೆ. ಈ ಕೆರೆಯ ಹಿನ್ನೀರು ಪ್ರದೇಶದಲ್ಲಿ ಜಕ್ಕೇರಮಡು ಸ್ಥಳದಲ್ಲಿ ಏಳುಮುಖದ ಹನುಮಂತ ವಿಗ್ರಹವಿದೆಯೆಂದು ಅಲ್ಲಿ ಯಾವತ್ತು ಏಳು ಮುಖಗಳು ಕಾಣಿಸುವುದಿಲ್ಲ ಎಂದು ತಿಳಿಸುತ್ತಾರೆ.

ಊರಿನ ಐತಿಹಾಸಿಕ ಮಹತ್ವ

ಈ ಕಂನೇರಮಡು ಗ್ರಾಮದಲ್ಲಿ ಒಟ್ಟು ಐದು ಶಿಲಾಶಾಸನಗಳು ದೊರೆತಿವೆ. ಈ ಶಾಸನಗಳು ಕ್ರಿ.ಶ. 15ನೇ ಶತಮಾನಕ್ಕೆ ಸೇರಿವೆ. ಈ ಊರಿನ ದಕ್ಷಿಣಕ್ಕೆ ರಾಂಪುರ ರಸ್ತೆಯ ಪಕ್ಕದ ಕೆರೆ ಏರಿಯ (ವಡ್ಡು) ಪಕ್ಕದ ಗುಂಡುಕಲ್ಲಿನಲ್ಲಿದೆ. ಈ ಶಾಸನವನ್ನು ಕ್ರಿ.ಶ. 25-03-1506 ಬುಧವಾರದಂದು ತಿಂತಣಿಯ ಗುಜ್ಜಲ ಬೊಮ್ಮಣನಾಯಕನ ಮಗ ಲಖಿಮಣನಾಯಕ ಮತ್ತು ಬೊಮ್ಮನಾಗತಿಯರು ಕಲ್ಲು ಕೆರೆಯನ್ನು ಕಟ್ಟಿಸಿದ ಬಗ್ಗೆ ತಿಳಿಸುತ್ತದೆ. ಹಾಳೂರಿನ ಹನುಮಂತನ ದೇವಾಲಯದ ಮುಂದೆ ಬಿದ್ದಿರುವ ಶಾಸನ 12-04-1530 ರಲ್ಲಿ ಸಾಳ್ವ ದೇವರಾಯನು ಅಚ್ಯುತದೇವರಾಯನಿಗೆ ಪುಣ್ಯವಾಗಲೆಂದು ಕನ್ನೇರಮಡು ಅಮರೇಶ್ವರ ದೇವರಿಗೆ ಯಲಬುರ್ಗಿ ಸೀಮೆಯ ಸೂಳೆಕೆರೆಯ ಇಕ್ಕುಳದ ಗದ್ದೆಯನ್ನು ಸೇನಬೋವ ಮಾಳಯ್ಯನು ದೇವರ ಅಂಗರಂಗಭೋಗ ಅಮೃತಪಡಿ ನೈವೇದ್ಯಕ್ಕೆ ಸಮರ್ಪಿಸಿದನು. ಈ ಶಾಸನ ಬರೆದವರು ಮಂಗರಸ ಎಂದು ತಿಳಿದುಬರುತ್ತದೆ. ಪಟ್ಟದ ಯಲ್ಲಮ್ಮದೇವಿ ಇರುವ ಸ್ಥಳದ ಹಿಂಭಾಗದಲ್ಲಿರುವ ಶಾಸನವನ್ನು ಕ್ರಿ. ಶ. 22-11-1547ರಲ್ಲಿ ಸದಾಶಿವರಾಯನು ವಿಜಯನಗರವನ್ನು ಆಳುತ್ತಿದ್ದಾಗ ಅವನ ಕಾರ್ಯಕ್ಕೆ ಕರ್ತನಾದ ಶ್ರೀರಂಗರಾಜ ರಾಮರಾಜದೇವ ಮಹಾ ಅರಸನು ಕ್ಷೌರಿಕರಾದ ತಿಮ್ಮೋಜ, ಕೊಂಡೋಜ, ಭದ್ರೋಜರಿಗೆ ಏನೋ ನೀಡಿದ ಬಗ್ಗೆ ತಿಳಿಸುತ್ತದೆ. ಈ ಶಾಸನದ ಉಳಿದ ಭಾಗ ನೆಲದೊಳಗೆ ಸೇರಿಕೊಂಡಿದೆ. ಇದೇ ತಿಮ್ಮೋಜ ಕೊಂಡೋಜರಿಗೆ ಕ್ರಿ. ಶ. 24-5-1551ರಲ್ಲಿ ಅಳಿಯ ತಿರುಮಲರಾಜನು ಕನಕಗಿರಿಯಲ್ಲಿ ಬಿಟ್ಟಿ-ಬಿರಾಡ, ಅನ್ನು-ಪನ್ನ ಮುಂತಾದ ತೆರಿಗೆಗಳನ್ನು ಬಿಟ್ಟಂತೆ ಮಾಹಿತಿನೀಡುವ ಶಿಲಾಶಾಸನವೊಂದು ಕನಕಗಿರಿಯ ಪೇಟೆ ಬಸವಣ್ಣ ದೇವಾಲಯದ ಪಕ್ಕದ ಘಂಡುಕಲ್ಲಿನಲ್ಲಿದೆ. ಈ ತಿಂಮೋಜ, ಕೊಂಡೋಜ, ಭದ್ರೋಜ ಎಂಬುವರು ಕನಕಗಿರಿಯ ಸಮೀಪದ ತಾವರಗೆರೆಯವರು ಹಾಗೂ ನಾವಿಂದ ಪ್ರಮುಖರೆಂದು ತಾವರಗೆರೆ ವೀರಭದ್ರ ದೇವಾಲಯದ ಬಳಿ ಇರುವ ಶಿಲಾಶಾಸನವೊಂದು ತಿಳಿಸುತ್ತದೆ. ಈ ಶಾಸನವು ಕ್ರಿ. ಶ. 23-07-1547ರಲ್ಲಿ ಅಳಿಯ ರಾಮರಾಜದೇವನು ತಾವರಕೆರೆಯ ತಿಂಮೋಜ, ಭದ್ರೋಜ, ಕೊಂಡೋಜ ಇವರ ಬಿನ್ನಹವನು ಕೇಳಿ ತಾವರಕೆರೆಯ ಸೀಮೆಯ 130 ಗ್ರಾಮಗಳ ಕ್ಷೌರಿಕರಿಗೆ ಅಂನು ಪನ್ನು ಬಿಟ್ಟಿ ಬಿರಡ ಎಲ್ಲವನ್ನು ಮನ್ನಾ ಮಾಡಿದನೆಂದು ತಿಳಿಸುತ್ತದೆ. ಪಂಚಲಿಂಗೇಶ್ವರ ದೇವಾಲಯವಿರುವ ಸ್ಥಳದಲ್ಲಿ ಗುಂಡುಕಲ್ಲಿನ ಮೇಲೆ ವೀರನಶಿಲ್ಪ ವತ್ತು ಶಾಸನವಿದೆ. ಈ ವೀರನ ಶಿಲ್ಪಕ್ಕೆ ಕಲ್ಲು ಮಂಟಪ ಮಾಡಿ ನೆರಳು ಮಾಡಿದಂತೆ ಕಾಣಿಸುತ್ತದೆ. ಇಲ್ಲಿನ ಶಾಸನವು ಖರೆಕುಲದ ಸಂಕಣ್ಣನ ಮಗ ಬರಮಣ್ಣ ಕುದುರೆ ದಳದೊಡನೆ ಹೋರಾಡಿ ಮಡಿದಂತೆ ತಿಳಿಸುತ್ತದೆ. ಪಂಚಲಿಂಗೇಶ್ವರ ದೇವಾಲಯದ ಗರ್ಭಗೃಹದ ಹಿಂಭಾಗದ ಗುಂಡುಕಲ್ಲಿನ ಶಾಸನವು ಪ್ರಕಟವಾಗಿಲ್ಲ, ಈ ಶಾಸನವು ಏಳು ಸಾಲುಗಳಲ್ಲಿದೆ ಮತ್ತು ಶಾಸನದ ಮೇಲ್ಭಾಗದಲ್ಲಿ

ಶಂಖ, ನಾಮ, ಚಕ್ರಗಳನ್ನು ಹೊಂದಿದೆ. ಈ ಶಾಸನವನ್ನು ಓದುವುದು ತುಂಬಾ ಕಷ್ಟವೆಂದು ಮೇಲ್ನೋಟದಲ್ಲಿ ಎದ್ದುಕಾಣುತ್ತದೆ. ಕಾರಣ ಅಷ್ಟೊಂದು ವಿರೂಪವಾಗಿದ್ದು ಅಕ್ಷರಗಳು ಅಳಿಸಿಹೋಗಿವೆ. ಅದರೂ ಕೆಲವೊಂದು ಅಕ್ಷರಗಳನ್ನು ಓದಲಾಗಿ ಇದು ತಿಂತಣಿ ಗುಜ್ಜಲ ಬಂಮಣ್ಣ ನಾಯಕನ ಮಗ ಲಕುಮಣ್ಣನಾಯಕನು ಇಲ್ಲಿನ ದೇವಾಲಯಕ್ಕೆ ಏನೋ ದಾನ ನೀಡಿದಂತಹ ಮಾಹಿತಿಯನ್ನು ತಿಳಿಯಬಹುದು. ಮೈಸೂರು ಜಿಲ್ಲೆ ಟಿ. ನರಸೀಪುರ ತಾಲ್ಲೂಕು ಸೋಸಲೆ ತಾಮ್ರಶಾಸನವು ಕ್ರಿ. ಶ. 18-02-1521 ಸೋಮವಾರದಲ್ಲಿ ಕೃಷ್ಣದೇವರಾಯನು ಬ್ರಹ್ಮಣತಿರ್ಥರ ಶಿಷ್ಯನಾದ ವ್ಯಾಸತೀರ್ಥರಿಗೆ ಕನಕಗಿರಿದೇಶದ ಕಂನೇರಮಡು ಗ್ರಾಮವನ್ನು ದಾನವಾಗಿ ನೀಡಿದನು, ಈ ಶಾಸನದ ಕವಿ ಸಭಾಪತಿ, ಲಿಪಿಕಾರ ಮಲ್ಲಣಾಚಾರ್ಯನ ಮಗನಾದ ವೀರಣಾಚಾರ್ಯ ಎಂದು ತಿಳಿಸುವುದು.

ಮೇಲಿನ ಶಿಲಾಶಾಸನಗಳನ್ನು ನೋಡಲಾಗಿ ಕನ್ನೇರಮಡು ಐತಿಹಾಸಿಕ ಪ್ರಸಿದ್ಧಿಯನ್ನು ಪಡೆದ ಸ್ಥಳವಾಗಿದ್ದು ವಿಜಯನಗರ ಅರಸರ ಕಾಲದಲ್ಲಿ ಈ ಸ್ಥಳವು ಗುರುತಿಸಲ್ಪಟ್ಟಿತ್ತು. ಕನಕಗಿರಿ ನಾಯಕರು ವಿಜಯನಗರ ಅರಸರ ಅಧೀನದಲ್ಲಿದ್ದರೆಂದು ಮತ್ತು ಈ ಕಾಲಕ್ಕೆ ಕನಕಗಿರಿ ರಾಜ್ಯವೆಂದು ಹೆಸರಾಗಿತ್ತು ಎಂದು ತಿಳಿಯುವುದು. ಸ್ಥಳೀಯ ನಾಯಕರಿಗೆ, ವ್ಯಕ್ತಿಗಳಿಗೆ ಕೆರೆ ಕಟ್ಟೆಗಳನ್ನು ಕಟ್ಟಿಸುವ ಅವಕಾಶವನ್ನು ವಿಜಯನಗರ ಅರಸರು ನೀಡಿದ್ದರೆಂದು ತಿಳಿಯುತ್ತದೆ. ಯುದ್ಧದಲ್ಲಿ ಹೋರಾಡಿ ಮಡಿದ ವೀರರಿಗೆ ಹೆಚ್ಚಿನ ಗೌರವ ಸಿಗುತ್ತಿತ್ತು ಎಂದು ಇಲ್ಲಿನ ವೀರಶಿಲ್ಪಕ್ಕೆ ಕಲ್ಲುಮಂಟಪ ಮಾಡಿರುವುದರಿಂದ ತಿಳಿಯಬಹುದು. ಧಾರ್ಮಿಕ ಪ್ರಮುಖ ನೆಲೆಯಾಗಿರಬೇಕು, ಅಷ್ಟೊಂದು ದೇವಾಲಯಗಳು ಇಲ್ಲಿವೆ. ಶೈವ ಮತ್ತು ವೈಷ್ಣವ ನೆಲೆಯಾಗಿತ್ತು. ವಿಜಯನಗರದಷ್ಟೇ ಹಾಳಾಗಿಹೋಗಿದೆ. ಕ್ಷೌರಿಕ ವೃತ್ತಿ ಕುಲಕ್ಕೆ ದಾನ ದತ್ತಿ ನೀಡುವ ಸಂಪ್ರದಾಯವನ್ನು ತಿಳಿಯಬಹುದು. ರಾಜರ ಕಲ್ಯಾಣ, ಪುಣ್ಯಕ್ಕಾಗಿ ಭೂದಾನ ನೀಡಿದ ವಿಷಯ ತಿಳಿಯುವುದು. ಅಮರೇಶ್ವರ ದೇವಾಲಯ ಇಲ್ಲಿನ ಪ್ರಮುಖ ದೇವಾಲಯವೆಂದು ತಿಳಿಯಬಹುದು. ದುರದೃಷ್ಟವೆಂದರೆ ಈ ದೇವಾಲಯ ಇರುವಿಕೆ ಕೇವಲ ಶಾಸನಕ್ಕೆ ಸೀಮಿತವಾಗಿದೆ. ಈಗ ಈ ದೇವಾಲಯವಿಲ್ಲ. ಧಾರ್ಮಿಕವಾಗಿ, ಆರ್ಥಿಕವಾಗಿ ಈ ಪ್ರದೇಶ ಶ್ರೀಮಂತವಾಗಿರಬಹುದು, ಹೀಗಾಗಿ ಹಾಳಾಗಿರಬಹುದು. ಏಕೆಂದರೆ, ವಿಜಯನಗರ ನಂತರ ಹಾಳಾದ ಪ್ರದೇಶಗಳೆಲ್ಲಾ ಆರ್ಥಿಕವಾಗಿ ಮತ್ತು ಧಾರ್ಮಿಕವಾಗಿ ಬಲಷ್ಠವಾದವುಗಳೇ ಆಗಿವೆ. ಇಲ್ಲಿ ಅನೇಕ ಹನುಮಪ್ಪ ದೇವರ ವಿಗ್ರಹಗಳು ಕಾಣುವುದರಿಂದ ಆ ದೇವರ ಆರಾಧನೆಯ ಪ್ರಮುಖ ಕೇಂದ್ರವಾಗಿರಬಹುದು.

ಆಕರ ಗ್ರಂಥಗಳು

1. ದೇವರ ಕೊಂಡಾರೆಡ್ಡಿ (ಸಂ) 1999, *ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ 2, ಕೊಪ್ಪಳ ಜಿಲ್ಲೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಡಾ. ಡಿ. ವಿ. ಪರಮಶಿವಮೂರ್ತಿ (ಸಂ), 2010, *ಕೃಷ್ಣದೇವರಾಯನ ಶಾಸನಗಳು*, ಸಂಪುಟ 1, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ಕ್ಷೇತ್ರ ಕಾರ್ಯದಲ್ಲಿ ಕಂಡುಕೊಂಡ ಅನುಭವ ಮತ್ತು ಕನ್ನೇರಮಡು ಗ್ರಾಮದ ಶಿಕ್ಷಕರಾದ ಹೊಳೆಯಪ್ಪ ಹಾಗೂ ದೇವಪ್ಪ, ಬಸವರಾಜ ಮುಂತಾದವರು ನೀಡಿದ ಮಾಹಿತಿ.




ವೀರನ ಶಿಲ್ಪ



ವೀರನ ಶಿಲ್ಪಕ್ಕೆ ನೆರಳು ಮಂಟಪ



ಪಂಚಲಿಂಗೇಶ್ವರ (ಹಳೆ ಊರು, ಕನ್ನೇರಮಡು)



ಹಳೆ ಊರು ಅಗಸಿಹನುಮಪ್ಪ (ಕನ್ನೇರಮಡು)




ಹಳೆ ಊರು ಕಲ್ಲುಮಂಟಪದಿಂದ ದುರ್ಗಾ ದೇವಾಲಯದ ನೋಟ




ಅಗಸಿಹನುಮಪ್ಪ ದೇವಾಲಯದ ಮುಂದಿನ ಗರುಡಗಂಬ




ಅಗಸಿಹನುಮಪ್ಪ ದೇವಾಲಯದ ಮುಂದೆ ಬಿದ್ದಿರುವ ಶಿಲಾಶಾಸನದತ್ತ ನೋಟ



ಅಗಸಿಹನುಮಪ್ಪ ದೇವಾಲಯದ ಮೆಟ್ಟಿಲು ಮತ್ತು ಅಧಿಷ್ಠಾನ




ಕನ್ನೇರಮಡು ಹಳೆ ಊರು ಅಗಸಿ



ಟಿಪ್ಪುಸುಲ್ತಾನನ ಸೈನಿಕನೊಬ್ಬನ ಗೋರಿ(?)



ಅಗಸಿಹನುಮಪ್ಪನ ದೇವಾಲಯದ ಮುಂದೆ ಬಿದ್ದಿರುವ ಕಂಬಗಳು



ಪಂಚಲಿಂಗೇಶ್ವರ ದೇವಾಲಯದ ಪ್ರವೇಶದ್ವಾರ

ವಿಜಯನಗರ ಕಾಲದಲ್ಲಿ ಮಹಿಳೆಯರು

ಡಾ|| ಎಚ್. ಈ. ಬಸವರಾಜಪ್ಪ

ಪ್ರಸ್ತುತ ಲೇಖನದಲ್ಲಿ ವಿಜಯನಗರ ಕಾಲದ ಶಾಸನಗಳಲ್ಲಿ ಮಹಿಳೆಯರನ್ನು ಕುರಿತು ವಿವೇಚಿಸಲಾಗಿದೆ. ವಿಜಯನಗರ ಕಾಲದ ರಾಜರು ಮಾತ್ರವಲ್ಲ. ಮಹಿಳೆಯರು ವಿವಿಧ ಕಲ್ಯಾಣ ಕಾರ್ಯಗಳಿಗೆ ಉದಾರ ಹಸ್ತದಿಂದ ಧನಸಹಾಯ ನೀಡಿದ್ದರು. ಸಮಾಜದ ಎಲ್ಲಾ ಸ್ತರಗಳ ಸದಸ್ಯರೂ ಎಲ್ಲ ಧರ್ಮಗಳಿಗೂ ಉದಾರ ಪೋಷಣೆಯನ್ನು ನೀಡಿದ್ದರಲ್ಲಿ ಆಶ್ಚರ್ಯವಿಲ್ಲ. ಇದೇ ರೀತಿಯಾದ ದಾನ ಧರ್ಮಾದಿ ಸತ್ಕಾರ್ಯಗಳಲ್ಲಿ ಮಹಿಳೆಯರೂ ತೊಡಗಿದ್ದರು ಎಂಬುದಕ್ಕೆ ಶಾಸನಗಳು ಸ್ಪಷ್ಟ ಆಧಾರಗಳನ್ನು ಕೊಡುತ್ತವೆ. ಈ ಆರೋಗ್ಯಕರ ಧಾರ್ಮಿಕ ಮನೋಭಾವವು ದೇವಾಲಯಗಳ ನಿರ್ಮಾಣ ಮತ್ತು ದುರಸ್ತಿ, ಕೆರೆ, ಬಾವಿ ನಿರ್ಮಾಣ ಮತ್ತು ಮಠಗಳಿಗೆ, ಬ್ರಾಹ್ಮಣರಿಗೆ, ಅಗ್ರಹಾರಗಳಿಗೆ ಮತ್ತಿತರ ಧಾರ್ಮಿಕ ಸಂಸ್ಥೆಗಳಿಗೆ ದಾನಗಳನ್ನು ಕೊಡುವುದು, ಛತ್ರಗಳು, ಕೊಳಗಳು ಮೊದಲಾದ ಸಾರ್ವಜನಿಕ ಉಪಯೋಗದ ಕಾರ್ಯಗಳನ್ನು ಕೈಗೊಳ್ಳುವುದು. ವಿವಿಧ ದಾನಗಳು ಮತ್ತಿತರ ಜನೋಪಯೋಗಿ ಕಾರ್ಯಗಳನ್ನು ಶಾಸನಗಳು ಪ್ರಶಂಸಿಸುತ್ತವೆ. ವಿಜಯನಗರ ಕಾಲದ ಮಹಿಳೆಯರು ಆರ್ಥಿಕ ದೃಷ್ಟಿಯಿಂದ ಉತ್ತಮ ಸ್ಥಿತಿಯಲ್ಲಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಅಂದರೆ ತಮ್ಮ ಐಶ್ವರ್ಯವನ್ನು ಜನಕಲ್ಯಾಣಕ್ಕಾಗಿ ಬಳಸಬೇಕೆಂಬ ಬಯಕೆ ಅವರಲ್ಲಿದ್ದದು ನಿಜಕ್ಕೂ ಪ್ರಶಂಸನೀಯ. ಈ ಕಾಲಾವಧಿಯಲ್ಲಿ ಕೆಲವು ಮಹಿಳೆಯರು ಆರ್ಥಿಕವಾಗಿ ಸಬಲರಾಗಿದ್ದರು. ವಿಜಯನಗರ ಕೇಂದ್ರೀಕೃತ ವ್ಯವಸ್ಥೆಯಲ್ಲಿದ್ದರೂ ಗ್ರಾಮ ಹಂತದಿಂದ ಪ್ರಾಂತ್ಯಗಳವರೆಗೂ ಭೂಹಿಡುವಳಿಗಳ ಹಂಚಿಕೆಯಲ್ಲಿ ಪ್ರಾಂತ್ಯಾಧಿಕಾರಿಗಳು ಪ್ರಮುಖ ಪಾತ್ರವಹಿಸುತ್ತಿದ್ದರು. ಇದು ವಿಕೇಂದ್ರೀಕರಣದ ಒಂದು ಪ್ರಾಯೋಗಿಕ ಉದಾಹರಣೆಯಾಗಿದೆ. ಈ ಹಿನ್ನೆಲೆಯಲ್ಲಿ ಬರ್ಟನ್ ಸ್ಟೈನ್‌ರವರು ವಿಜಯನಗರ ಸಾಮ್ರಾಜ್ಯವನ್ನು ತುಂಡು ರಾಜ್ಯಗಳ ಒಕ್ಕೂಟವೆಂದು ಹೇಳಿರುವುದನ್ನು ನಾವು ಗಮನಿಸಬೇಕು. ರಾಜಕೀಯ ಪರಮಾಧಿಕಾರವು ತುಂಡು, ತುಂಡಾಗಿ ಒಡೆದು ಹೋಗಿರುವುದು ಕರ್ನಾಟಕದಲ್ಲಿ ಮಧ್ಯಯುಗದ ನಿಯಂತ್ರಣದ ಆಡಳಿತ ವ್ಯವಸ್ಥೆ ಉದಯಿಸಲು ದಾರಿಮಾಡಿಕೊಟ್ಟಿತ್ತು. ಆ ಬಗ್ಗೆ ಶಾಸನಗಳು ವಿವರವಾದ ಮಾಹಿತಿ ನೀಡುತ್ತವೆ. ಈ ದೃಷ್ಟಿಯಿಂದ ವಿಜಯನಗರ ರಾಣಿಯರಿಗಿಂತ ಪ್ರಾಂತ್ಯಾಧಿಕಾರಿಗಳ ಪತ್ನಿಯರು ಹೆಚ್ಚು ಸ್ವತಂತ್ರರಾಗಿದ್ದರು.

ಆ ಕಾಲದ ಶಾಸನಗಳು ಸಾಹಿತ್ಯಕ ಆಕರಗಳು ಹೇಳುವಂತೆ ಸರಕಾರದ ಭೂ ಒಡೆತನ ಹಾಗೂ ಖಾಸಗಿ ಒಡೆತನವೂ ಜೊತೆ ಜೊತೆಯಾಗಿ ಇದ್ದುದನ್ನು ದೃಢಪಡಿಸುತ್ತವೆ. ಸಂಪೂರ್ಣವಾಗಿ ರಾಜನ ಒಡೆತನ ಎಂಬುದಿರಲಿಲ್ಲ.

ವಿಜಯನಗರ ಸರ್ಕಾರವು ಧಾರ್ಮಿಕ ಸಂಸ್ಥೆಗಳಿಗೆ ಮತ್ತು ವ್ಯಕ್ತಿಗಳಿಗೆ ಭೂ ಕಂದಾಯವನ್ನು ದಾನವಾಗಿ ವಹಿಸಿ ಕೊಡುವುದುಂಟು, ಹಾಗೆ ವಹಿಸಿರುವುದನ್ನು ಹೇಳುವ ಶಾಸನಗಳು ಕಂಡುಬರುತ್ತವೆ. ಯಾರಿಗೆ ವಹಿಸಿಕೊಡಲಾಗಿದೆ ಅವರು ನೇರವಾಗಿ ರೈತರೊಂದಿಗೆ ವ್ಯವಹಾರ ಮಾಡಿಕೊಳ್ಳಬಹುದಾಗಿತ್ತು. ಬುಕ್ಕರಾಯನ ಸೊಸೆ ಗಂಗಾದೇವಿ ಸಂಸ್ಕೃತದಲ್ಲಿ *ಮಧುರಾ ವಿಜಯಂ* ಅಥವಾ *ವೀರ ಕಂಪಣ ರಾಯಚರಿತ* ಗ್ರಂಥವನ್ನು ಬರೆದಿದ್ದಾಳೆ. ಇದರಲ್ಲಿ ವಿಜಯನಗರ ಪಟ್ಟಣದ ವೈಭವಪೂರ್ಣ ವರ್ಣನೆ ಬಂದಿದೆ. ಹೀಗಾಗಿ ವೀರಕಂಪಣರಾಯನ ಕಾಲಕ್ಕೆ ನಗರ ಬೆಳೆದಿರಬೇಕೆಂದು ತೋರುತ್ತದೆ. ಬುಕ್ಕನ ಪ್ರಧಾನ ರಾಣಿ ಅಂದರೆ ಕಂಪಣನ ತಾಯಿಯ ಹೆಸರು ದೇವಾಯಿ ಎಂದು ತಿಳಿದುಬರುತ್ತದೆ. ಇದರಲ್ಲಿ ಕಂಪಣನ ಅಂತಃಪುರದ ಸ್ತ್ರೀಯರ ವರ್ಣನೆಯನ್ನು ಮಾಡುವಾಗಲೆಲ್ಲಾ ಕುಂತಳ ಸ್ತ್ರೀಯರೆಂದು ಕರೆದಿರುವುದು. ತಿರುಮಲಾಂಬಾ ಬರೆದ *ವರದಾಂಬಿಕಾ ಪರಿಣಯ* ಚಂಪೂ ಗ್ರಂಥವೂ ಚಾರಿತ್ರಿಕ ವಿಷಯವನ್ನು ಕಾವ್ಯಶೈಲಿಯಲ್ಲಿ ನಿರೂಪಿಸಿದ್ದಾಳೆ.

ನರಸನಾಯಕನಿಗೆ ಮೂವರು ಪತ್ನಿಯರಿದ್ದರು ತಿಪ್ಪಾಜಿ, ನಾಗಲಾ ಮತ್ತು ಓಬಾಂಬಾ. ಮೊದಲ ಇಬ್ಬರಿಗೆ ಒಬ್ಬೊಬ್ಬರು ಪುತ್ರರು. ವೀರನರಸಿಂಹ ಮತ್ತು ಕೃಷ್ಣದೇವರಾಯ (ತಿರುಮಲಾಂಭಾ, ಚಿನ್ನಾದೇವಿ) ಓಬಾಂಬೆಗೆ ಅಚ್ಯುತ ಮತ್ತು ರಂಗ. ವಿಜಯನಗರ ಕಾಲದ ಮಹಿಳೆಯರು ಕೇವಲ ಸುಖಭೋಗಗಳಲ್ಲಿ ಮನರಂಜನೆಯಲ್ಲಿ ಕಾಲಕಳೆಯುವುದು ಅವರಿಗಿದ್ದ ಕೆಲಸವಾಗಿತ್ತು ಎಂಬುದು ತಪ್ಪು. ಕೃಷ್ಣದೇವರಾಯ, ಅಚ್ಯುತರಾಯ ಮತ್ತು ರಾಮರಾಯರು ತಮ್ಮ ಅರಮನೆಯ ಮಹಿಳೆಯರಿಗೆ ಗಾಯನವನ್ನು ಕಲಿಸಲು ಪ್ರಖ್ಯಾತ ಸಂಗೀತ ವಿದ್ವಾಂಸರನ್ನು ನೇಮಿಸಿಕೊಳ್ಳುತ್ತಿದ್ದರು. ಅಚ್ಯುತರಾಯನ ಅರಮನೆಯಲ್ಲಿ ಚಿತ್ರಮಯವಾದ ಒಂದು ನರ್ತನ ಶಾಲೆಯಿತ್ತು. ಅಲ್ಲಿ ರಾಣಿಯರಿಗೆ ಮತ್ತು ವೇಶ್ಯೆಯವರಿಗೆ ಸಂಗೀತ ನೃತ್ಯವನ್ನು ಕಲಿಸಲಾಗುತ್ತಿತ್ತು.

ವಿಜಯನಗರ ರಾಜರು, ಪಾಳೆಗಾರರು, ಸಾಮಂತರು, ಗಣ್ಯವರ್ಗದ ಶ್ರೀಮಂತರು ಸಾಮಾನ್ಯವಾಗಿ ಪಿತೃಪ್ರಧಾನ ಕುಟುಂಬ ವ್ಯವಸ್ಥೆಯನ್ನು ಹೊಂದಿದ್ದರು. ಸಾಮಾನ್ಯವಾಗಿ ಅವರು ಬಹುಪತ್ನಿತ್ವವನ್ನು ಆಚರಿಸುತ್ತಿದ್ದರು. ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಮಾತೃಪ್ರಧಾನ ಕುಟುಂಬ ಪದ್ಧತಿಯಿತ್ತು. ಅದನ್ನು ಅಳಿಯಸಂತಾನ ಎಂದು ಕರೆಯುತ್ತಿದ್ದರು. ರಾಣಿಯರು ಸೇರಿದಂತೆ ಶ್ರೀಮಂತ ಮತ್ತು ಗಣ್ಯ ವರ್ಗಕ್ಕೆ ಸೇರಿದ ಬಹುತೇಕ ಮಹಿಳೆಯರು ತಮ್ಮ ಗೃಹಕಾರ್ಯಕ್ಕೆ ಅಷ್ಟೇ ಸೀಮಿತರಾಗದೆ, ಕುಟುಂಬದ ಇತರ ಸದಸ್ಯರೊಂದಿಗೆ ಸಂಸಾರಕ್ಕೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳಲ್ಲಿಯೂ ಪಾಲ್ಗೊಳ್ಳುತ್ತಿದ್ದರು. ಇದೇ ಕಾಲಾವಧಿಯ ಕೆಳದಿಯ ರಾಣಿ ಚೆನ್ನವೀರಮ್ಮಾಜಿಯೂ ವೀರಭದ್ರ ದೇವಾಲಯಕ್ಕೆ ಶಿಖರ-ರಂಗಮಂಟಪ-ಧ್ವಜಸ್ತಂಭ ಸ್ಥಾಪನೆ ಮಾಡಿದ್ದಳು. ಜೊತೆಗೆ ಹಲವು ದಾನದತ್ತಿಗಳನ್ನು ನೀಡಿದ್ದಳು. ಇದೇ ಕಾಲದ ಮತ್ತೊಬ್ಬ ರಾಣಿ ವೀರಾಜಮ್ಮಣ್ಣಿ ಸಮರ್ಥ ಆಡಳಿತಗಾರ್ತಿಯೆಂದು ಹೆಸರು ಪಡೆದಿದ್ದಳು. ವಿಜಯನಗರ ಕಾಲದ ತುಳುನಾಡಿನಲ್ಲಿ ಸಮಾಜದ ಒಂದು ವರ್ಗವು ಮಹಿಳೆಯರಿಗೆ ನೀಡಿದ ಗೌರವದ ಸ್ಥಾನವನ್ನು ಸೂಚಿಸುತ್ತದೆ. ಕರಾವಳಿ ಭಾಗದ ಭೈರವದೇವಿ, ಅಬ್ಬಕ್ಕದೇವಿ ಸಮರ್ಥ ಮಹಿಳೆಯರೆಂದು ಹೆಸರು ಪಡೆದಿದ್ದರು. ಪುರಂದರದಾಸರಂತೂ ಹೆಣ್ಣಿನ ವೈವಿಧ್ಯಮಯ ಚಿತ್ರಣವನ್ನು ಕೊಟ್ಟಿದ್ದಾರೆ. "ಸತಿಗೆ ಸ್ವಾತಂತ್ರವ ಕೊಡದಿರಿ, ಮತಿಗೆಟ್ಟ ಭ್ರಮೆಯ ಬಿಡದಿರಿ" ಎಂಬ ಮಾತಿನಿಂದ ಪುರಂದರದಾಸರಿಗೆ ಸ್ತ್ರೀಯರ ಬಗೆಗೆ ಒಳ್ಳೆಯ ಅಭಿಪ್ರಾಯವಿಲ್ಲ ಎಂದು ಹೇಳಲಾಗದು. "ಆದುದ್ದೆಲ್ಲ ಒಳಿತೇ ಆಯಿತು....." ಎಂಬ ಕೀರ್ತನೆಯಲ್ಲಿ ಒಬ್ಬ ವ್ಯಕ್ತಿಯ ಮಾನಸಿಕ ವಿಕಾಸಕ್ಕೆ ಹೆಂಡತಿ ಹೇಗೆ ನೆರವಾಗಬಲ್ಲಳು ಎಂಬುದನ್ನು ಹೇಳುತ್ತಾರೆ. "ರಮಣನಿಲ್ಲದ ನಾರಿ ಪರರ ಕಣ್ಣಿಗೆ ಮಾರಿ ....." ಎಂಬ ಹಾಡಿನಲ್ಲಿ ವಿಧವೆಯರ ಬಗೆಗೆ ಸಮಾಜ ಹಾಗೂ ಕುಟುಂಬ ವರ್ತಿಸುವ ಬಗೆಯನ್ನು ದಾಸರು ಬಹಳ ಅನುಕಂಪದಿಂದ

ಹೇಳಿದ್ದಾರೆ. ಹೆಂಡತಿ ಸಂಸಾರದಲ್ಲಿ ಮುಖ್ಯ ಪಾತ್ರವಹಿಸುತ್ತಾಳೆ. ಕುಟುಂಬದಲ್ಲಿರುವ ಜನರ ನಡುವೆ ಸೌಹಾರ್ದ ವಾತಾವರಣವಿರಬೇಕು. ಅವಿಭಕ್ತ ಕುಟುಂಬದಲ್ಲಿ ಸರಸ–ವಿರಸಗಳಿಗೆ ಕೊರತೆ ಇಲ್ಲ. ಆದರೆ ಎಷ್ಟೇ ಕಷ್ಟ ನಷ್ಟಗಳಿದ್ದರೂ ಈ ಬಂಧನವನ್ನು ಮುಂದುವರೆಸಿಕೊಂಡು ಬರುತ್ತಿರುವ ಭಾರತೀಯ ಚಿತ್ತವೃತ್ತಿ ಪ್ರಶಂಸಾರ್ಹವಾದುದು. ಇದೇ ವಿಷಯವನ್ನು ವಿಜಯನಗರ ಕಾಲದಲ್ಲಿದ್ದ ಕನಕದಾಸರು, ಪುರಂದರದಾಸರು ಸಮಾಜವನ್ನು ತಿದ್ದುವ ಪ್ರಯತ್ನ ಮಾಡಿದ್ದಾರೆ.

ವಿಜಯನಗರ ರಾಣಿಯರು ಶ್ರೀಮಂತ ವರ್ಗಕ್ಕೆ ಸೇರಿದ ಮಹಿಳೆಯರು ಕೆಲವು ಪ್ರತಿಭಾವಂತ ಮಹಿಳೆಯರಾಗಿದ್ದರು. ಆರ್ಥಿಕವಾಗಿಯೂ ಸಬಲರಾಗಿದ್ದರು. ಅವರು ಅಗ್ರಹಾರಗಳಿಗೆ, ದೇವಾಲಯಗಳಿಗೆ, ಕೆರೆ, ಬಾವಿ, ಇನ್ನಿತರ ಸಾರ್ವಜನಿಕ ಕೆಲಸಗಳಿಗೆ ಉದಾರವಾದ ದಾನ–ದತ್ತಿಗಳನ್ನು ನೀಡಿರುವುದನ್ನು ಶಾಸನಗಳು ತಿಳಿಸುತ್ತವೆ. ವಿಜಯನಗರ ಅವಧಿಯ ಒಂದು ಶಾಸನವು ಬಾವಿ ಕಟ್ಟಿಸುವುದು ಒಂದು ಪುಣ್ಯ ಕಾರ್ಯವೆಂದೇ ನಿರೂಪಿಸಿದೆ. ಈ ದಿಶೆಯಲ್ಲಿ ರಾಜ್ಯದ ಮಂತ್ರಿಯಾಗಿದ್ದ ಲಕ್ಷ್ಮಣ ಅಮಾತ್ಯನಿಗೆ ಅವನ ತಾಯಿಯ ಉಪದೇಶ ಕೆರೆಯಂ ನಿರ್ಮಿಸು ಬಾವಿಯಂ ಸವೆಯಿಸು ಎಂಬುದನ್ನು ಸ್ಮರಿಸಬಹುದು. ಹಾಗೆಯೇ ಪೋರ್ಚುಗೀಸ ಪ್ರವಾಸಿಗನಾದ ಫರ್‌ನಾವೋನ್ಯೂನಿಜ್ ಎಂಬುವನು ಹೀಗೆ ವರ್ಣಿಸಿದ್ದಾನೆ. ರಾಜನು ತನ್ನ ರಾಣಿಯ ಹೆಸರಿನಲ್ಲಿ ಒಂದು ಪಟ್ಟಣವನ್ನೇ ಕಟ್ಟಿಸಿ ಅದಕ್ಕೆ ನಾಗಲಾಪುರ ಎಂದು ಕರೆದು ಈ ನಾಗಲಾಪುರದ ಸುತ್ತ ಭದ್ರವಾದ ಗೋಡೆಯನ್ನು ನಿರ್ಮಿಸಿದ್ದಾನೆ ಎಂಬುದನ್ನು ಗಮನಿಸಬಹುದು. ಈ ಮೇಲಿನ ವಿಚಾರಗಳನ್ನು ಗಮನಿಸಿದರೆ ಅಂದಿನ ರಾಣಿಯರು ಸಹ ಆಡಳಿತ ವ್ಯವಸ್ಥೆ ಮೇಲೆ ಪ್ರಭಾವ ಬೀರುತ್ತಿದ್ದುದನ್ನು ಸ್ಪಷ್ಟವಾಗಿ ಗುರುತಿಸಬಹುದು.

ಈ ಶಾಸನವು ಕ್ರಿ.ಶ. 1425ರಲ್ಲಿ ಈ ಶಾಸನದಲ್ಲಿ ದೇವರಾಯ ಮಹಾರಾಯನೆಂದು ಹೊಗಳಿದೆ. ಈ ದೇವರಾಯ ಮಹಾರಾಯನ ನಿಜಸೇವಕನಾದ ಬೊಪ್ಪದೇವನು ವಿರುಪಂಣನ ಮಗನಾದ ತಿರುಮಲರಾಯನಿಗೆ ಮತ್ತು ತಮ್ಮ ತಾಯಿ ದೇಮಾಯಮ್ಮಳಿಗೆ, ನಾಗಯ್ಯಮ್ಮಳಿಗೆ ಅಕ್ಕನಾದ ತಿರುಮಲೆ ದೇವಮ್ಮನಿಗೆ ಪುಣ್ಯವಾಗಲಿಯೆಂದು ಮಾಂಪೊರಿ ಭರಮದೇವರ ಗುಡಿಯ ಪಶ್ಚಿಮ ಭಾಗದಲ್ಲಿ ತಮ್ಮ ಸೇವಕ ವೇಮುಲ ತಿಪ್ಪಿನಾಯಿನಿಯ ಕೈಯಲ್ಲಿ ಗೋಪುರವನ್ನು ಕಟ್ಟಿಸುತ್ತಾನೆ.

ಹಾಗೆಯೇ ಅರಗದ ರಾಜ್ಯವನ್ನು ಸಿರಿಗಿರಿನಾಥ ಒಡೆಯರು ಕ್ರಿ.ಶ. 1427ರಲ್ಲಿ ಆಳುತ್ತಿರುವಾಗ ಅರಗದ ವೇಂಠೆಯ ಸಾಂತಳಿಗೆ ನಾಡಿನ ಸಿರಿಯಂಮ ಹೆಗ್ಗಡೆ ಬೊಂಮಣ ಹೆಗ್ಗಡೆ ಹಾಗೂ ಸಮಸ್ತ ನಾಡವರು ಕೂಡಿಕೊಂಡು ಹೆಬ್ಬರಡಿಯ ಹರಿಯಕ್ಕ ನಾಯಕಿತ್ತಿಗೆ ಅರವಳ್ಳಿಯ ಭೂಮಿಯನ್ನು ಕ್ರಯ ದಾನವಾಗಿ ನೀಡುವರು. ಈ ಭೂಮಿಯ ಮೇರೆಯನ್ನು ಶಾಸನದಲ್ಲಿ ವಿವರವಾಗಿ ಸೂಚಿಸಿದೆ. ಅದಕ್ಕಾಗಿ ಎಂಬತ್ತೈದು ಹೊನ್ನನ್ನು ಪಡೆದ ವಿವರವು ಶಾಸನದಲ್ಲಿದೆ. ಇದಕ್ಕೆ ಸಾಕ್ಷಿಗಳಾಗಿ ಮುನಿಊರ ಮಠ ಪುರುಷೋತ್ತಮ ತೀರ್ಥಶ್ರೀಪಾದಂಗಳು, ದೇವೇಂದ್ರತೀರ್ಥಶ್ರೀಪಾದಂಗಳು ಹಾಲಮತ್ತೂರ ವಿಸ್ಸಂಣ್ಣಧಿಕಾರಿಗಳು, ಮಿನಿಊರ ಭೊಂಮಣ ಹೆಬ್ಬಾರರು ಕೂಡಲ ಮಾವಂಣ್ಣ ಹೆಗ್ಗಡೆಯರು. ಹೆಬ್ಬರಡಿಯ ಅಪ್ಪಣ್ಣ ಹೆಗ್ಗಡೆಯರು ಹಾಜರಿದ್ದರು. ಈ ದಾನಪತ್ರವನ್ನು ಬರೆದವರು ಸೇನಬೋವ ವಿಠಣ್ಣ ಎಂಬುವನು. ಶಾಸನದಲ್ಲಿ ಹಲವಾರು ದೇವರುಗಳನ್ನು ಸ್ಮರಿಸಲಾಗಿದೆ. ಇದೇ ದಿನ ಅಮರೇಶ್ವರತೀರ್ಥ ಶ್ರೀಪಾದಂಗಳಿಗೆ ಹೆಬ್ಬರಡಿಯ ಹರಿಯಕ್ಕ ನಾಕಿತ್ತಿಯು (ಕ್ರಯದಾನ ಪಡೆದವಳು) ಮಠದ ಹತ್ತಿರ ಛತ್ರವನ್ನು ಕಟ್ಟಿಸಲು ಮತ್ತು ಯತಿಗಳ ಜನಕ್ಕೆ, ಪರದೇಶಿ ಬ್ರಾಹ್ಮಣರಿಗೆ ಹಾಗೂ ಅಡುಗೆಯವರಿಗಾಗಿ ತಾನು ಕ್ರಯವಾಗಿ ಕೊಂಡ ಭೂಮಿಯನ್ನು ಧಾರೆಯೆರೆಯುತ್ತಾಳೆ (*ಎ.ಕ.* XII, ಕೊಪ್ಪ, 22). ಪಂಡಿತಾಚಾರ್ಯರ ಶಿಷ್ಯಳಾದ ದೇವರಾಯಮಹಾರಾಯನ ರಾಣಿ ಭೀಮಾದೇವಿಯು

ಶಾಂತಿನಾಥನ ಪ್ರತಿಮೆಯನ್ನು ಮಾಡಿಸಿದಳೆಂಬ ವಿಷಯ ಈ ಶಾಸನದಲ್ಲಿದೆ. ಈ ಭೀಮಾದೇವಿಯು ಇಮ್ಮಡಿ ದೇವರಾಯನ ಎರಡನೆಯ ರಾಣಿಯಾಗಿದ್ದಾಳೆ.

ಕ್ರಿ.ಶ. 1430ರ ಗೋವೆ ಚಂದ್ರಗುತ್ತಿಯ ರಾಜ್ಯವನ್ನು ಭಂಡಾರದ ಆರ್ಯಪ್ಪಗಳ ಮಗನಾದ ಹಂಪಿಯರಾಯನು ಆಳುತ್ತಿದ್ದಾಗ ಪೊಸಗುಂದದ ಸೋಮಯದೇವರ ಸ್ಥಾನೀಕರಾದ ಸೋವಿರಸನು ಪೊಸಗುಂದದ ಮೇಲೆ ಧಾಳಿಯನ್ನು ಮಾಡಿದಾಗ ಆ ಪೊಸಗುಂದದ ದನ ಮೋಳಿ ಹಂನೆ ಕರೆಯ ಸಾತಗಲುಡನ ಮಗ ಕೆಂಚಗಲುಡ ಹೋರಾಡಿ ಮಡಿಯುತ್ತಾನೆ. ಇವನಿಗೆ ವೀರಗಲ್ಲು ನಡೆಸಲು ಮೂರು ಖಂಡುಗ ಹೊಲವನ್ನು ದಾನವಾಗಿ ನೀಡಲಾಗಿದೆ. ಈ ಭೂಮಿಯನ್ನು ನೀಡಿದವರು ನಾಗಗಲುಡ, ಕಾಮಗಲುಡ ಮತ್ತು ನಾಗರಸಿಯರು ಈ ವೀರಗಲ್ಲನ್ನು ನಿರ್ಮಿಸಿದವರು. ಇದೇ ರೀತಿ ದೇವರಾಯನ ಹೆಂಡತಿ ಕಮಲದೇವಿಯರ ನಿರೂಪದಿಂದ ಲಕುಮಣ ಒಡೆಯರು ಬಿದರೆಯ ಕಲಿನಾಥದೇವರ ಸೇವೆಗಾಗಿ ಬಿದರೆಯ ಕೆರೆಯ ಹಿಂದೆ ಐದು ಖಂಡುಗ ಗದ್ದೆಯನ್ನು ಧಾರೆಯರೆಯುತ್ತಾರೆ. ಈ ದಾನವನ್ನು ಪಂಪಾಕ್ಷೇತ್ರ ವಿರುಪಾಕ್ಷದೇವರ ಸನ್ನಿಧಿಯಲ್ಲಿ ನೀಡಿದಂತೆ ಶಾಸನ ತಿಳಿಸುತ್ತದೆ. ಪ್ರೌಢದೇವರಾಯನ ರಾಣಿ ಕಮಲದೇವಿಯ ಹೆಸರಿನಲ್ಲಿ ಹಂಪಿಯ ಸಮೀಪ ಕಮಲಾಪೂರ ಎಂಬ ಪಟ್ಟಣವಿದೆ. (*ಎ.ಕ.* VII, ಶಿಕಾರಿಪುರ, 40)

ಕ್ರಿ.ಶ. 1434ರಲ್ಲಿ ರಾಯಪ್ಪ ಒಡೆಯರ ಮಗ ಸಿರಿಗನಾಥ ಒಡೆಯರು, ಅರಗದ ರಾಜ್ಯವನ್ನು ಆಳುತ್ತಿರುತ್ತಾರೆ. ಈ ಅವಧಿಯಲ್ಲಿ ಮದವಳಿಗೆ ನಾಡಿನ ಮೇಗರವಳ್ಳಿ ಗ್ರಾಮದ ಹೆಗಡೆಯ ಅಳಿಯ ಭೈರಣ ಹೆಗಡೆ, ಸಂಕ ಹೆಗಡೆ ಇನ್ನೂ ಮುಂತಾದವರು ಕೂಡಿ ಸರ್ವಾನುಮತದಿಂದ ದೇವಂಣಆರಾಧ್ಯರಿಗೆ ಭೂದಾನವನ್ನು ನೀಡಿದ ವಿಷಯ ಶಾಸನದಲ್ಲಿದೆ. ಇವರಲ್ಲದೇ ತೈಲಪ ಹೆಗಡೆಯವರ ಅಳಿಯ ನಾಗಪ ಹೆಗಡೆಯವರು ಮತ್ತು ಅವರ ಹಲವು ಮಕ್ಕಳು ಮತ್ತು ಅಳಿಯಂದಿರು ಕೂಡಿಕೊಂಡು ತೈಲಪ ಹೆಗಡೆಯ ಸೊಸೆ ನಾಗಮ್ಮ ಹೆಗಡತಿಗೆ ಬಳುವಳಿಯಾಗಿ ಬಂದ ಮದವಳಿಗೆ ನಾಡಿದ ಅಣಪವಳ್ಳಿ ಗ್ರಾಮವನ್ನು ದೇವಣ್ಣ ಆರಾಧ್ಯರಿಗೆ ದಾನ ನೀಡುವರು. (*ಎಂ.ಎ.ಆರ್.* 1934, 58)

ಕ್ರಿ.ಶ. 1466ರಲ್ಲಿ ಅಕ್ಕದೇವಿ ಎಂಬ ಉತ್ತಮ ಕುಲದ ಮಹಿಳೆ ಉಡ್ಯೆಯರ್ ದೇವರಸ ಊಡ್ಯೆಯರರ ಆದೇಶದಂತೆ ತನ್ನ ಮಗಳು ಮಹಾದೇವಿ ಕೆರೆಯ ಹೂಳನ್ನು ತೆಗೆಸಿ ಮತ್ತೊಂದು ಬ್ರಾಹ್ಮಣ ನಿವೇಶನಕ್ಕೆಂದೇ ಸರ್ವಕಾಲೀನ ವ್ಯವಸ್ಥೆ ಮಾಡಿದ್ದಳು. ಈ ಕಾರ್ಯದ ವೆಚ್ಚಕ್ಕೆ ಮೂರು ಬಗೆಯಲ್ಲಿ ಧನ ಸಂಗ್ರಹಿಸಬೇಕು ಎಂಬ ಏರ್ಪಾಡಿನಂತೆ ಹಳ್ಳಿಗರಿಂದ ಅಲ್ಪ ಪ್ರಮಾಣದಲ್ಲಿ ನೆಲ್ಲುಸಂಗ್ರಹ ಎರಡನೆಯದಾಗಿ ಕೆರೆಯ ಮೀನು ಮಾರಾಟದಿಂದ ಬಂದ ಹಣ ಹಾಗೂ ಮೀನುಗಾರಿಕೆಯ ಗುತ್ತಿಗೆ ಪಡೆದವರಿಂದ ಹಣ ಸಂಗ್ರಹ ಮಾಡಬಹುದಾಗಿದೆ ಎಂದು ವಿವರಿಸಲಾಗಿದೆ (*ಎ.ಕ.* V, BL. 175, K. 301).

ಅದೇ ರೀತಿ 1551ರ ಶಾಸನದಲ್ಲಿ ಪೋತನಾಯಕನೆಂಬುವನು ತನ್ನ ತಂಧೆ, ತಾಯಿ ಮತ್ತು ಲಿಂಗಮ್ಮಳಿಗೆ ಪುಣ್ಯವಾಗಲಿಯೆಂದು ಹನುಮಂತನ ಮೂರ್ತಿಯನ್ನು ಪ್ರತಿಷ್ಠೆ ಮಾಡಿದ ವಿಷಯವನ್ನು ಶಾಸನ ಸೂಚಿಸುತ್ತದೆ. ಕ್ರಿ.ಶ. 1467ರಲ್ಲಿ ಸಾಳುವ ನರಸಿಂಗರಾಯ ಒಡೆಯರ ಧರ್ಮಪತ್ನಿ ಶ್ರೀರಂಗಾಂಬದೇವಿಯಮ್ಮ ಎಂಬಾಕೆ "ಕಾಸಕ್ಕಾಲುವೈ" ಎಂಬ ಕಾಲುವೆಯನ್ನು ಮಾವಂದೂರು ಬಳಿಯ ಚಿಲುಮೆಯಿಂದ ಅದಿತ್ಯನಪಲ್ಲಿ ಜಮೀನುಗಳಿಗೆ ನೀರುಣಿಸಲೆಂದೇ ನಿರ್ಮಿಸಿದಳು. ಅದೇ ರೀತಿ ಬಳ್ಳಾರಿ ಜಿಲ್ಲೆಯ ಕುರುಗೋಡು ಹಳ್ಳಿಯ ಶಾಂತಮಲ್ಲಿಕಾರ್ಜುನ ದೇವಾಲಯದ

ಬಾವಿಯನ್ನು ಮಲ್ಲಪ್ಪ ನಾಯಕನೆಂಬ ಅಧಿಕಾರಿಯ ಪತ್ನಿ ಮಲ್ಲಮ್ಮ ಬಲಕುಂದಿ ಅಧಿಕಾರಿಯಾದ ಮಾದಪ್ಪನಾಯಕನ ಮಗಳು ದುರಸ್ತಿ ಮಾಡಿಸಿದ್ದನ್ನು ವಿವರಿಸುತ್ತದೆ. ಹೀಗೆ ರಿಪೇರಿ ಮಾಡಿಸಿದ ಬಾವಿಯನ್ನು ಮಲ್ಲಿಕಾರ್ಜುನ ದೇವಾಲಯದ ಹೂವಿನ ತೋಟದ ಉಪಯೋಗಕ್ಕೆಂದು ಕ್ರಿ.ಶ. 1512ರಲ್ಲಿ ದಾನ ಮಾಡಲಾಗಿತ್ತು. ಕ್ರಿ.ಶ. 1534ರ ಒಂದು ಶಾಸನವು ಮಹಾಮಂಡಳೇಶ್ವರ ಸಳಕರಾಜ ಪೆರಿಯ ತಿರುಮಲಯ್ಯದೇವನ ರಾಣಿಯಾದ ಕೊಮ್ಮ ಅಮ್ಮನ್ 1300 ನರಪಣಂ ಬಂಗಾರದ ನಾಣ್ಯಗಳನ್ನು ದೇವಸ್ಥಾನದ ಹಳ್ಳಿಗಳ ಕೆರೆ, ಕಾಲುವೆಗಳ ಅಭಿವೃದ್ಧಿಗೆ ಮೀಸಲಾಗಿ ಇರಿಸಲಾಗಿತ್ತೆಂದು ತಿಳಿಸುತ್ತಾಳೆ. ಅದೇ ರೀತಿ ಒಂದು ಹಬ್ಬದ ಆಚರಣೆಯನ್ನು ಉಲ್ಲೇಖಿಸಲಾಗಿದೆ. ಹೀಗೆ ತೊಡಗಿಸಿ ಬಂದ ಲಾಭದ ಹಣದಲ್ಲಿ ಉತ್ಸವವನ್ನು ಆಚರಿಸಿ ಅನ್ನದಾನ ಹಾಗೂ ಇತರ ಕಟ್ಟಳೆಗಳನ್ನು ಆಚರಿಸಲಾಗುತ್ತಿತ್ತು. ಬಯಕಾರ ರಾಮಪ್ಪ ಸದಾಶಿವದೇವರಾಯನ ಕಾಲದಲ್ಲೂ ಅವನು ಅನೇಕ ಕರೆಗಳನ್ನು ಕಟ್ಟಿಸುತ್ತಾನೆ. ತನ್ನ ಹೆಂಡತಿ ಹೆಸರಿನಲ್ಲಿ ನೆಡುತೋಪುಗಳನ್ನು ಹಾಕಿಸುತ್ತಾನೆ. (ಹೊಸಪೇಟೆ, ಸಂ. 17) 1506ರಲ್ಲಿ ಕನಕಗಿರಿ ಬೊಮ್ಮನಾಗಿತಿ ಕಲ್ಲುಕೆರೆಯನ್ನು ಕಟ್ಟಿಸಿದ ಉಲ್ಲೇಖವಿದೆ. ಕ್ರಿ.ಶ. 1668ರಲ್ಲಿ ಕನಕಗಿರಿ ಯಿಂಮಡಿ ಮುಡುಸಿನಾಯಕನ ಹೆಂಡತಿ ಕನಕಮ್ಮಳು ಬಾವಿಯನ್ನು ಕಟ್ಟಿಸಿದ್ದಂತೆ ತಿಳಿಯುತ್ತದೆ. (ಗಂಗಾವತಿ, ಸಂ. 89–89ಎ)

ಕ್ರಿ.ಶ. 1599ರ ಶೃಂಗಾರ ಹಳ್ಳಿಯ ಶೃಂಗಾರ ಸಾಗರವನ್ನು ಶೃಂಗಾರಮ್ಮ ನಿರ್ಮಿಸಿದಳಂತೆ. ಅವಳು ನಾಟಕ ಕಲೆಯಲ್ಲಿ ಪ್ರಸಿದ್ಧಿ ಪಡೆದಿದ್ದಳು. ಹೀಗಾಗಿ ನಾಟಕ ಶೈಲಿಯ ಶೃಂಗಾರಮ್ಮ ಕಟ್ಟಿಸಿದ ಕೆರೆಯ ಬಳಿ ಇದ್ದ ಹಳ್ಳಿಗೆ ಶೃಂಗಾರ ಸಾಗರವೆಂದು ಕರೆಯಲಾಯಿತು. ಕ್ರಿ.ಶ. 1603ರಲ್ಲಿ ಒಂದು ಶಾಸನವು ಸಾದರ ದಿನ್ನೆಯಲ್ಲಿ ಮೋಲುಸಾನಿ ಎಂಬುವಳು ಒಂದು ಬಾವಿಯನ್ನು ನಿರ್ಮಿಸಿದಳು. ಒಬ್ಬ ಮಹಿಳೆಯು ಸಾರ್ವಜನಿಕ ಸೇವೆಗಾಗಿ ಇಬ್ಬರು ವ್ಯಕ್ತಿಗಳಿಗೆ ಗೌಡಿಕೆ ನೀಡಿದ್ದಳು. ಇವರು ಅದನ್ನು ಹಂಚಿಕೊಂಡಿದ್ದನ್ನು ಹೇಳುವ ಶಾಸನವಿದೆ. ವಿಜಯನಗರ ಆಡಳಿತ ವಿಕೇಂದ್ರೀಕರಣವಾಗಿ ಪ್ರಾಂತೀಯ ಆಡಳಿತ ವ್ಯವಸ್ಥೆಯಲ್ಲಿ ಸಾಮಾನ್ಯವಾಗಿ ಮಹಿಳೆಯರು ಸಾರ್ವಜನಿಕ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಈ ಮೂಲಕ 16ನೇ ಶತಮಾನದ ನಂತರದಲ್ಲಿ ಮಹಿಳೆಯರ ಸ್ಥಿತಿಗತಿಯಲ್ಲಿ ಸಾಕಷ್ಟು ಬದಲಾವಣೆಗಳು ಪ್ರಾರಂಭವಾಗಿದ್ದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಅಡಿ ಟಿಪ್ಪಣಿಗಳು

1. *ಎಸ್.ಐ.ಐ.*. XVI, ಸಂ. 28 (ಮೋಪೂರು-ಪುಲಿವೆಂಡ್ಲ ತಾಲ್ಲೂಕು, ಕಡಪ ಜಿಲ್ಲೆ, ಆಂಧ್ರಪ್ರದೇಶ, ಭೈರವೇಶ್ವರ ಗುಡಿಯ ಪಶ್ಚಿಮ ಗೋಪುರದ ಹಿಂದೆ ಬಿದ್ದಿರುವ ಶಾಸನ).
2. *ಎ.ಕ.*, VII, ಶಿಕಾರಿಪುರ, ಸಂ. 40, ಚಿಕ್ಕಬೆಳಗುಂಜಿ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.
3. *ಅದೇ*, XII, ಸಂ. 56, ಕಲ್ಲೇಶ್ವರ ದೇವಸ್ಥಾನ, ಗುಬ್ಬಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ.
4. *ಎಂ.ಎ.ಆರ್.*, 1934-35, ವೇಗರಹಳ್ಳಿ, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.
5. *ಎ.ಆರ್.ಎಸ್.ಐ.*, ಈಪಿ, 1941-42, ಸಂ. 125.
6. *ಎ.ಕ.*, II, ಸಂ. 200, ಶ್ರವಣಬೆಳಗೊಳ, ಹಾಸನ ಜಿಲ್ಲೆ.
7. ಭಂಡಾರಿ ಕೆ.ಎಂ., *ಎ ಕಲ್ಚರಲ್ ಸ್ಟಡೀ ಆಫ್ ನಾರ್ಥ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್*, ಮೈಸೂರು ವಿಶ್ವವಿದ್ಯಾಲಯ, 1987.
8. ಡಾ. ಡಿ.ವಿ. ಪರಮಶಿವಮೂರ್ತಿ, ಸಂಪಾದಕರು, *ಪ್ರೌಢದೇವರಾಯನ ಶಾಸನಗಳು*, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007.
9. ಜಯಸ್ವಾಲ್ ಪಿ, *ಹಿಂದೂ ಪಾಲಿಟಿ*, 2ನೇ ಆವೃತ್ತಿ, ಪು. 349; ಯು.ಎನ್. ಘೋಷಾಲ್, *ದಿ ಆಗ್ರೇರಿಯನ್ ಸಿಸ್ಟಮ್ ಇನ್ ಏನ್ಷಂಟ್ ಇಂಡಿಯಾ*, ಪು. 89.

10. ಇಜೆ ಸ್ವಾನ್ಲಿ, *ಡ್ಯೂರಟ್ ಬಾರ್ಬೋಸಾ*, ಲಂಡನ್, ಪು. 276.

11. ಗಂಗಾವತಿ, *ಬಸ್ರಿಹಾಳ*, ಸಂ. 89, (3–4), ಪು. 68–72; *ಐ.ಕೆ.*, III, ನಂ 405.

12. ಗಂಗಾವತಿ, *ಕನ್ನೇರುಮಡು*, ಸಂ 90ಎ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಶಾಸನ ಸಂಪುಟ 3.

13. ಪ್ರೊ. ಕೆ.ಎಸ್. ಶಿವಣ್ಣ, ಸಂಪುಟ ಸಂಪಾದಕರು, *ಕರ್ನಾಟಕ ಚರಿತ್ರೆ ಸಂಪುಟ–3*, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997.

14. ಡಾ. ಅಕ್ಕಮಹಾದೇವಿ, *ಪುರಂದರದಾಸರ ಮತ್ತು ಅನ್ನಮಾಚಾರ್ಯರ ಕೀರ್ತನೆಗಳ ಸಾಂಸ್ಕೃತಿಕ ಅಧ್ಯಯನ*, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1989.

15. ಸಿ.ಟಿ.ಎಂ. ಕೊಟ್ರಯ್ಯ, *ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ*, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2001.

16. Mahalingam T.V., *Administrative and Social Life under Vijayangar*, Madras, 1975.

ವಿಜಯನಗರ ಕಾಲದಲ್ಲಿ ವಸ್ತ್ರವಿನ್ಯಾಸ ಮತ್ತು ತಯಾರಿಕೆ

ಡಾ|| ಎಂ. ವಿ. ಶ್ರೀನಿವಾಸ್

ವಸ್ತ್ರವಿನ್ಯಾಸ ಮತ್ತು ಬಟ್ಟೆ ತಯಾರಿಕೆ ನಾಗರಿಕತೆಯ ಬೆಳವಣಿಗೆಯನ್ನು ಸೂಚಿಸುವ ಒಂದು ಪ್ರಮುಖ ಅಂಶ. ಪ್ರಾಚೀನ ಕಾಲದಿಂದಲೂ ಮನುಷ್ಯ ವಿವಿಧ ವಸ್ತುಗಳಿಂದ ವಿವಿಧ ರೀತಿಯ ಉಡುಪುಗಳನ್ನು ತಯಾರಿಸಿಕೊಂಡು ಬರುತ್ತಿದ್ದಾನೆ. ನಾಗರಿಕತೆ ಬೆಳೆಯುತ್ತಾ ಬಂದಂತೆ ತನ್ನ ಉಡುಗೆತೊಡುಗೆಗಳು ಅಂದವಾಗಿರುವಂತೆ ಅನುಕೂಲವಾಗಿರುವಂತೆ ಮಾಡಿಕೊಳ್ಳುವ ಕಲೆಯನ್ನೂ ರೂಢಿಸಿಕೊಂಡು ಬಂದಿದ್ದಾನೆ. ಬಟ್ಟೆಯ ತಯಾರಿಕೆ ಮತ್ತು ಬಳಕೆ ಸಾಮಾಜಿಕ ಜೀವನದ ಅಧ್ಯಯನಕ್ಕೆ ಸಹಾಯಕವಾಗಿರುವಂತೆ ಆರ್ಥಿಕ ಅಭಿವೃದ್ಧಿಯನ್ನು ಸೂಚಿಸುವ ಸಂಗತಿಯೂ ಆಗಿದೆ.

ವಿಜಯನಗರದ ವಿವಿಧ ಭಾಗಗಳಲ್ಲಿ ಹತ್ತಿಯನ್ನು ಬೆಳೆಯಲಾಗುತ್ತಿತ್ತು. ಹತ್ತಿಯಿಂದ ನೂಲನ್ನು ತೆಗೆದು, ಬಟ್ಟೆಯನ್ನು ನೇಯುವ ಕೇಂದ್ರಗಳು ರಾಜ್ಯದಾದ್ಯಂತ ಇದ್ದವೆಂದು ಟೆವೆರ್ನಿಯರ್ ತಿಳಿಸುತ್ತಾನೆ. ಹತ್ತಿ ಬೆಳೆಯುವ ಕಾರ್ಯ, ಬೀಜವನ್ನು ನೆಡುವುದು, ಗಿಡ ಬೆಳೆಸಿ ಹತ್ತಿಯನ್ನು ಬಿಡಿಸಿಕೊಳ್ಳುವ ಕಾರ್ಯವನ್ನು ರೈತ ಅತ್ಯಂತ ಎಚ್ಚರಿಕೆಯಿಂದ ನಿರ್ವಹಿಸುತ್ತಿದ್ದನು. ಅನಂತರ ಹತ್ತಿಯನ್ನು ಶುದ್ಧಮಾಡುವ ಗಿನ್ನಿಂಗ್ ಕೆಲಸವನ್ನು ಕೆಲವು ಅನುಭವಿಗಳು ಮಾಡುತ್ತಿದ್ದರು. ಆಂಧ್ರ ಮತ್ತು ಕೆಲವು ಪ್ರದೇಶಗಳಲ್ಲಿ ದೂದೆಕುಲದವರು ಈ ಕೆಲಸವನ್ನು ಮಾಡುತ್ತಿದ್ದರು.

ಹತ್ತಿಯಿಂದ ಬೀಜಗಳನ್ನು ತೆಗೆದು ಅದನ್ನು ಹದಗೊಳಿಸುವ ಕಾರ್ಯವನ್ನು ಸ್ತ್ರೀಯರು ತಮ್ಮ ಮನೆಗಳ ಪಡಸಾಲೆಗಳಲ್ಲಿನ ಕಲ್ಲುಗಳ ಮೇಲೆ ದಪ್ಪಕಲ್ಲಿನಿಂದ ಹೊರಳಿಸುತ್ತಾ ಹತ್ತಿಯನ್ನು ತಯಾರಿಸುತ್ತಿದ್ದರು. ಅನಂತರ ಗಂಡಸರು ನೂಲನ್ನು ತೆಗೆದು ನೇಕಾರರಿಗೆ ನೂಲಬಟ್ಟೆ ನೇಯಲು ಕೊಡುತ್ತಿದ್ದರು.

ಬಟ್ಟೆಯನ್ನು ವಿವಿಧ ವರ್ಗಗಳ ಜಾತಿಗಳ ಜನರು ಬಟ್ಟೆ ನೇಯುತ್ತಿದ್ದರು. ನೇಕಾರರು ಆಂಧ್ರದಲ್ಲಿ ಮಾಲ ಜಾತಿಯವರು ಕಪ್ಪು ಬಟ್ಟೆಗಳನ್ನು ನೇಯುತ್ತಿದ್ದರು. ಕೆಲವು ಬಾರಿ ಕೆಂಪು ಬಿಳಿ ಅಂಚುಗಳುಳ್ಳ ಬಟ್ಟೆಯನ್ನು ನೇಯುತ್ತಿದ್ದರು. ಮಾಲ ಸ್ತ್ರೀಯರು ಹತ್ತಿಯನ್ನು ಬಿಡಿಸಿ, ನೂಲು ತೆಗೆಯುತ್ತಿದ್ದರು. ಅದನ್ನು ಗಂಡಸರು ನೇಯುತ್ತಿದ್ದರು. ಶೂದ್ರರು ಬಟ್ಟೆಯನ್ನು ನೇಯುತ್ತಿದ್ದರೆಂದು ಕಾಪುಗಳು ಅಂದರೆ ಸ್ಥಳೀಯ ರೈತವರ್ಗದವರು ಹತ್ತಿಯನ್ನು ಬೆಳೆದು ನೇಯ್ಗೆಗೆ ನೀಡುತ್ತಿದ್ದರೆಂದೂ ಎಡ್ಗರ್ ಥರ್‌ಸ್ಟನ್ ತಿಳಿಸುತ್ತಾರೆ. ಬಟ್ಟೆಗಳಿಗೆ ಬಣ್ಣಕಟ್ಟುವ ಮಡ್ಡಿಯವರು ರಂಗರಾಜುಗಳು

ಬಲಿಜರೂ ಮಾಡುತ್ತಿದ್ದರು. ರೇಷ್ಮೆ ಅಂಚುಳ್ಳ ರವಿಕೆಗಳನ್ನು ರಫ್ತು ಮಾಡುವುದಕ್ಕಾಗಿ ತಯಾರಿಸುತ್ತಿದ್ದರು. ಮಹಮದೀಯ ನೇಕಾರರು, ಜಮಖಾನಗಳನ್ನೂ ಪೇಟಗಳನ್ನೂ ನೇಯುತ್ತಿದ್ದರು. ಇವರು ಕಂಬಳಿಗಳನ್ನೂ ಮಂಚಗಳಿಗೆ ಪಟ್ಟಿಗಳನ್ನೂ ತಯಾರಿಸುತ್ತಿದ್ದರು.

ಕಚ್ಚಾರೇಷ್ಮೆ, ರೇಷ್ಮೆ ನೂಲು, ರೇಷ್ಮೆ ಬಟ್ಟೆ, ವೆಲ್ವೆಟ್ ಮತ್ತು ಚಿನ್ನದ ದಾರವನ್ನು ಚೀನ ಮತ್ತು ಆಗ್ನೇಯ ಏಷ್ಯದೇಶಗಳಿಂದ ತರಿಸಿಕೊಳ್ಳುತ್ತಿದ್ದರು. ಇವುಗಳನ್ನು ಶ್ರೀಮಂತರ ಉಡುಪುಗಳಿಗೆ, ಅವರ ಗುಡಾರ, ಪಟ್ಟಿಗಳಿಗೆ ಉಪಯೋಗಿಸುತ್ತಿದ್ದರು. ಬಂಗಾಳದ ಮೂಂಗಾ ರೇಷ್ಮೆಯನ್ನು ಪುರುಷರೂ ಸ್ತ್ರೀಯರೂ ತಮ್ಮ ಉಡುಪುಗಳಿಗೆ ಬಳಸುತ್ತಿದ್ದರು. ಇಂಗ್ಲೆಂಡಿನಿಂದ ವಿವಿಧ ಬಣ್ಣಗಳ ಉಣ್ಣೆಬಟ್ಟೆಗಳನ್ನು ತರಿಸಿಕೊಳ್ಳುತ್ತಿದ್ದರು. ಇವುಗಳನ್ನು ಉಡುಪುಗಳಲ್ಲದೆ ಪಲ್ಲಕ್ಕಿಗಳು, ಕುದುರೆ ಮೇಲಿನ ದಿಂಬುಗಳಿಗೆ ಬಳಸುತ್ತಿದ್ದರು.

ಸಾಮಾನ್ಯವಾಗಿ ಹಿಂದೂ ಮತ್ತು ಮುಸ್ಲಿಮರ ನಡುವೆ ಉಡುಪಿನಲ್ಲಿ ಅಷ್ಟು ವ್ಯತ್ಯಾಸವಿರಲಿಲ್ಲ. ವಿಲಿಯಂ ಫ್ರಾನ್ಸಿಸ್ ಎಂಬ ಲೇಖಕ ಮುಸಲ್ಮಾನರು ಹಿಂದೂಗಳಂತೆ ಉಡುಪುಗಳನ್ನು ಧರಿಸುತ್ತಿದ್ದರು ಎಂದು ಹೇಳಿದ್ದಾನೆ. ಅನೇಕ ಶತಮಾನಗಳಿಂದಲೂ ಜನರು ಒಂದೇ ರೀತಿಯ ಸರಳವಾದ ಉಡುಪುಗಳನ್ನು ಧರಿಸುತ್ತಿದ್ದರು. ಗಂಡಸರು, ಒಳ ಉಡುಪು, ಸೊಂಟದ ಮೇಲ್ಭಾಗದ ಬಟ್ಟೆ ಮತ್ತು ಪೇಟವನ್ನು ಧರಿಸುತ್ತಿದ್ದರು. ಸಾಮಾನ್ಯವಾಗಿ ಬಿಳಿಬಣ್ಣದ ಪೇಟಗಳನ್ನು ಉಪಯೋಗಿಸುತ್ತಿದ್ದರು. ಅಧಿಕಾರಿಗಳು ವರ್ತಕರು, ಶ್ರೀಮಂತರು ಪೇಟಗಳನ್ನು ಧರಿಸುತ್ತಿದ್ದರು. ಪೇಟಗಳಲ್ಲಿ ಎರಡು ವಿಧಗಳಿದ್ದವು. ಒಂದನೆಯದು ತೆಳುವಾದ ಬಿಳಿಯ ಬಟ್ಟೆಯನ್ನು ತಲೆಗೆ ಸುತ್ತುವುದು ಅಥವಾ ಸುತ್ತಿದ ಬಟ್ಟೆಯನ್ನು ಪೇಟದ ರೀತಿಯಲ್ಲಿ ತಲೆಗೆ ಸುತ್ತಿಕೊಳ್ಳುವುದು. ದೋತಿಗಳ ಮೇಲೆ ಅಂಗಿಗಳನ್ನು ಕೆಲವರು ಮಾತ್ರ ಧರಿಸುತ್ತಿದ್ದರು. ಈ ಅಂಗಿಗಳಿಗೆ ಬಾರಾಬಂದಿಯೆಂಬ ನಾಲ್ಕು ಗಂಟುಗಳಿರುತ್ತಿದ್ದವು. ಆದರೆ ಸಾಮಾನ್ಯ ಜನರು ತಮ್ಮ ಮೈಮೇಲೆ ಒಂದು ಚಾದರವನ್ನು ಹಾಕಿಕೊಳ್ಳುವುದು ರೂಢಿಯಾಗಿದ್ದಿತು.

ಆಂಧ್ರಪ್ರದೇಶದಲ್ಲಿನ ಶ್ರೀಮಂತ ರೆಡ್ಡಿಯರು ಪಟ್ಟಪಟ್ಟೆಯ ಪೇಟಗಳನ್ನು ಧರಿಸುತ್ತಿದ್ದರು. ಹೆಗಲ ಮೇಲೆ ಕಪ್ಪು ಪಟ್ಟೆಯ ಉದ್ದನೆಯ ಬಟ್ಟೆ ಹಾಕಿಕೊಳ್ಳುತ್ತಿದ್ದರು. ಕಾಲಿಗೆ ಅವರು ಚಪ್ಪಲಿಗಳನ್ನು ಧರಿಸುತ್ತಿದ್ದರು. ಕೆಲವು ವೇಳೆ ಅವರು ಪೈಜಾಮಗಳನ್ನು ಧರಿಸುತ್ತಿದ್ದರು. ಸಣ್ಣ ಸಣ್ಣ ನಾಯಕರು, ಉದ್ದದ ಪೇಟ, ಮೇಲಂಗಿ ಹಾಗೂ ಕರವಸ್ತ್ರವನ್ನು ಇಟ್ಟುಕೊಳ್ಳುತ್ತಿದ್ದರು.

ಕುತುಬ್ ಷಾಹಿಗಳ ಆಳ್ವಿಕೆಯಲ್ಲಿ ಮುಸಲ್ಮಾನರು ಸಾಮಾನ್ಯವಾಗಿ ಕುರಾವಿ ಮತ್ತು ಕಾಬಾಗಳನ್ನು ಧರಿಸುತ್ತಿದ್ದರು. ಆದರೆ ಕಾಲಕಳೆದಂತೆ ಸುಲ್ತಾನರು ಸ್ಥಳೀಯ ಉಡುಪುಗಳನ್ನೇ ಧರಿಸಲು ಆರಂಭಿಸಿದರು. ಗೋಲ್ಕೊಂಡದ ಕುತುಬ್ ಷಾ, ತೆಲುಗು ದೊರೆಗಳಂತೆ ಬಟ್ಟೆಗಳನ್ನು ಧರಿಸಿಕೊಳ್ಳುತ್ತಿದ್ದರು. ಟಾವರ್ನಿಯರ್, ದಖನ್ನಿನ ಶ್ರೀಮಂತರು ಹಿಂದಿನ ತುರ್ಕಿ ಮಾದರಿಯ ಉಡುಪುಗಳನ್ನು ಬಿಟ್ಟು ಹೊಸರೀತಿಯ ಬಟ್ಟೆಗಳನ್ನು ಉಡಲಾರಂಭಿಸಿದರು ಎಂದು ಹೇಳಿದ್ದಾನೆ. ಸುಲ್ತಾನನು ಆಸ್ಥಾನದ ಪ್ರಮುಖರೂ ಭುಜದ ಮೇಲೆ ಒಂದು ಅಂಗರಖವನ್ನು ಚೌಬಂದನ್ನು ಧರಿಸುತ್ತಿದ್ದರು. ತಲೆಗೆ ಪಗ್ರಿ ಪೇಟವನ್ನು ಧರಿಸಿ ಕಾಲಿನ ಮುಂಭಾಗದಲ್ಲಿ ಬಾಗಿದ್ದು ಆತಷಾಹಿ ಚಪ್ಪಲಿಗಳನ್ನು ಧರಿಸುತ್ತಿದ್ದರು.

ಹದಿನೇಳು ಮತ್ತು ಹದಿನೆಂಟನೆಯ ಶತಮಾನಗಳಲ್ಲಿ ಹಿಂದು ಹಾಗೂ ಮುಸ್ಲಿಂ ಮಹಿಳೆಯರು ಸೀರೆಯನ್ನು ಧರಿಸುವುದನ್ನೇ ಅಭ್ಯಾಸಮಾಡಿಕೊಂಡಿದ್ದರು. ಈ ಸೀರೆಗಳು 12 ರಿಂದ 16 ಕ್ಯೂಬಿಟ್ ಉದ್ದ ಒಂದರಿಂದ ಒಂದೂವರೆ ಗಜ ಅಗಲ ಇರುತ್ತಿದ್ದವು. ಸೀರೆಗಳು ಹಲವಾರು ಬಣ್ಣಗಳಿಂದ ವಿನ್ಯಾಸಗಳಿಂದ ಕೂಡಿರುತ್ತಿದ್ದವು. ಹೆಂಗಸರು ತಮ್ಮ

ಜಾತಿಗೆ ಅನುಗುಣವಾಗಿ ಸೀರೆಗಳನ್ನು ಉಡುತ್ತಿದ್ದರು. ನಿತ್ಯವೂ ಉಡುತ್ತಿದ್ದ ಸೀರೆಗಳು ವಿವಿಧ ಬಣ್ಣಗಳಿಂದ ಕೂಡಿರುತ್ತಿದ್ದವು. ಹಬ್ಬ ಹರಿದಿನಗಳಂದು ಸ್ತ್ರೀಯರು ವಿಶೇಷವಾದ ಸೀರೆಗಳನ್ನು, ಕುಪ್ಪಸಗಳನ್ನು ಧರಿಸುತ್ತಿದ್ದರು. ಸಾಮಾನ್ಯವಾಗಿ ಸ್ತ್ರೀಯರು ಕೆಂಪು ಬಣ್ಣದ ಸೀರೆಗಳನ್ನೂ ರವಿಕೆಗಳನ್ನೂ ತೊಡುತ್ತಿದ್ದರೆಂದು ಸಿ.ಎನ್. ಬ್ರಾಕೆನ್ ಬರಿ ತಿಳಿಸುತ್ತಾರೆ. ವಾರಾಂಗನೆಯರೂ ಮತ್ತು ಹುಡುಗಿಯರೂ ಅರ್ಧ ರವಿಕೆ ಮತ್ತು ಜಾಕೆಟ್ಟುಗಳನ್ನು ಧರಿಸುತ್ತಿದ್ದರು. ಹಿಂದೂ ಸಂಪ್ರದಾಯವನ್ನು ಅನುಸರಿಸುತ್ತಿದ್ದ ಬ್ರಾಹ್ಮಣರು ಮತ್ತು ಇತರ ಸ್ತ್ರೀಯರು ವಿಧವೆಯಾದಮೇಲೆ ರವಿಕೆಗಳನ್ನು ತೊಡುತ್ತಿರಲಿಲ್ಲ.

ಮಹಮದೀಯ ಮಹಿಳೆಯರು ಉತ್ತರ ಭಾರತದ ಸ್ತ್ರೀಯರಂತೆ ದುಪ್ಪಟ ಧರಿಸುತ್ತಿದ್ದರು. ಅದು 4½ ಗಜ ಉದ್ದವಾಗಿರುತ್ತಿತ್ತು. ಇದರೊಂದಿಗೆ ಅವರು ಕಸೂತಿ ಹಾಕಿದ ಪೈಜಾಮವನ್ನು ಅದನ್ನು ಅದರೊಂದಿಗೆ ಒಂದು ಸೊಂಟದ ಪಟ್ಟಿಯನ್ನು ಧರಿಸುತ್ತಿದ್ದರು. ವಿವಾಹದ ಸಮಯದಲ್ಲಿ ವಧು ಮಂಜಿಹಾ ಅಥವಾ ಹಳದಿ ಉಡುಪನ್ನು ಧರಿಸುತ್ತಿದ್ದರು. ಮುಸ್ಲಿಂ ಹೆಂಗಳೆಯರು ತಮ್ಮ ತಲೆಯನ್ನು ಸೀರೆಯ ಸೆರಗಿನಿಂದ ಅಥವಾ ದುಪ್ಪಟದಿಂದ ಮುಚ್ಚಿಕೊಳ್ಳುತ್ತಿದ್ದರು. ಸಾಮಾನ್ಯ ಜನರು ಹೆಚ್ಚು ಆಡಂಬರವಿಲ್ಲದ ತುಂಡುಬಟ್ಟೆಗಳನ್ನು ಮಾತ್ರ ಉಡುತ್ತಿದ್ದರು. ಥಾಮಸ್ ಬೌರಿ ಹೇಳುವಂತೆ ಅವರು ಸೊಂಟದ ಭಾಗವನ್ನು ಒಂದು ಸಣ್ಣ ವಸ್ತ್ರದಿಂದ ಧಾರಣೆ ಮಾಡುತ್ತಿದ್ದರು. ಹಿಂದುಗಳು ಒಂದು ದೋತಿಯನ್ನು ಮಾತ್ರ ಧರಿಸಿ ಮೇಲ್ಭಾಗವನ್ನು ಮುಚ್ಚಿಕೊಳ್ಳುತ್ತಿರಲಿಲ್ಲ. ಕೆಲಸ ಮಾಡುವಾಗ ಅವರು ಒಂದು ಒಳಉಡುಪನ್ನು ಧರಿಸಿ ಕೆಲಸ ಮಾಡುತ್ತಿದ್ದರು. ಮುಸ್ಲಿಮರು ಲುಂಗಿಗಳನ್ನು ಧರಿಸುತ್ತಿದ್ದರು. ಬುಡಕಟ್ಟಿನ ಜನರು ಮತ್ತು ಬಡವರು ತಲೆಗೆ ಪೇಟವನ್ನು ಧರಿಸುತ್ತಿರಲಿಲ್ಲ. ಆದರೆ ಸೊಂಟಕ್ಕೆ ಒಂದು ಬಟ್ಟೆಯನ್ನು ಸುತ್ತಿಕೊಳ್ಳುತ್ತಿದ್ದರು. ಬಿಸಿಲು ಹೆಚ್ಚಾದಾಗ ಅದನ್ನು ತಲೆಗೆ ಸುತ್ತಿಕೊಳ್ಳುತ್ತಿದ್ದರು. ಕುರುಬರು, ದನ ಕಾಯುವವರು ಕಂಬಳಿಗಳನ್ನು ಮೈಮೇಲೆ ಸುತ್ತಿಕೊಳ್ಳುತ್ತಿದ್ದರು. ವಿಜಯನಗರದ ಕಾಲದಲ್ಲಿ ವಿವಿಧ ಬುಡಕಟ್ಟಿನ ಜನರು ವರ್ಣರಂಜಿತವಾದ ಉಡುಪುಗಳನ್ನು ಧರಿಸುತ್ತಿದ್ದರು. ಚೆಂಚು ಜನರು ಸೊಂಟಕ್ಕೆ ಒಂದು ತುಂಡು ಬಟ್ಟೆಯನ್ನು ಸುತ್ತಿಕೊಳ್ಳುತ್ತಿದ್ದರು. ಅವರು ಬಟ್ಟೆಯಿಂದ ಮಾಡಿದ ಅಥವಾ ಮರದ ಎಲೆಗಳಿಂದ ತಯಾರಿಸಿದ ಟೋಪಿಗಳನ್ನು ಧರಿಸುತ್ತಿದ್ದರು. ತಲೆಯ ಮೇಲೆ ಅವರು ನವಿಲುಗರಿಯನ್ನು ಕೆಂಪು ಹೂಗಳನ್ನು ಇಟ್ಟುಕೊಳ್ಳುತ್ತಿದ್ದರು. ಬುಡಕಟ್ಟಿನ ಜನರಲ್ಲಿ ಸಾಮಾನ್ಯವಾಗಿ ಮಹಿಳೆಯರು ರವಿಕೆ ಅಥವಾ ಮೇಲಿನ ಉಡುಪುಗಳನ್ನು ಧರಿಸುತ್ತಿರಲಿಲ್ಲ. ಅವರು ಕಾರವಾರ ಬಟ್ಟೆಯಿಂದ ಕಸೂತಿ ಮಾಡಿದ ವರ್ಣರಂಜಿತ ಬಟ್ಟೆಗಳನ್ನು ಧರಿಸುತ್ತಿದ್ದರು. ಹಾಗೆಯೇ ಕಸೂತಿ ಮಾಡಿದ ಚೋಲಿಗಳನ್ನು ಧರಿಸುತ್ತಿದ್ದರು. ಸಾಮಾನ್ಯವಾಗಿ ಮಕ್ಕಳು ನಾಲ್ಕು ವರ್ಷವಾಗುವವರೆಗೂ ಬಟ್ಟೆಗಳನ್ನು ಧರಿಸುತ್ತಿರಲಿಲ್ಲ. ಹಬ್ಬದ ದಿನಗಳಂದು ಅವರು ಬಟ್ಟೆ ಉಡುವುದು ಸಾಮಾನ್ಯವಾಗಿತ್ತು. ಶ್ರೀಮಂತರ ಮಕ್ಕಳು ಬೆಲೆ ಬಾಳುವ ಜಗಜಗಿಸುವ ವಸ್ತ್ರಗಳನ್ನು ತೊಡುತ್ತಿದ್ದರು.

51

ವಿಜಯನಗರ ಕಾಲದ ಕನ್ನಡ ಇತಿಹಾಸ ಲೇಖನ ಕಲೆ ಪಾಂಡುರಂಗ ದೇಸಾಯಿಯವರ ಕೊಡುಗೆಗಳು (ಭಾಗ-1)

ಡಾ. ರಾಕೇಶ್ ಬಿ. ಸಿ. – ಡಾ. ಸಿ. ಎನ್. ಕೋಳಿಗುಡ್ಡೆ

ಪ್ರಾಚೀನ ಕಾಲದಿಂದಲೂ ಈ ಭರತಭೂಮಿಯಲ್ಲಿ ಹಿಂದೂ ಸಂಸ್ಕೃತಿಯನ್ನು ಕಾಪಾಡುವ ಸಾಧನಗಳು ಒಂದೊಂದು ರೂಪದಿಂದ ನೆಲೆಗೊಂಡಿರುವವು. ಪರ ಸಂಸ್ಕೃತಿಯ ಧಾಳಿಯು ಉತ್ತರ ಹಿಂದೂ ಸ್ಥಾನದಲ್ಲಿ ನುಗ್ಗಿ ಇಡೀ ಭರತಖಂಡವನ್ನೇ ಆಕ್ರಮಿಸುವ ಗಂಡಾಂತರವು ಬಂದೊದಗಿದಾಗ ವಿಜಯನಗರ ಸಾಮ್ರಾಜ್ಯವು ಹಿಂದೂ ಸಂಸ್ಕೃತಿಯನ್ನು ರಕ್ಷಣೆ ಮಾಡಿ ದಕ್ಷಿಣ ಭಾರತದಲ್ಲಿ ರಾಜಕೀಯ ಐಕ್ಯತೆಯನ್ನು ಮೂಡಿಸಿದ ಶ್ರೇಯಸ್ಸು ವಿಜಯನಗರ ಸಾಮ್ರಾಜ್ಯಕ್ಕೆ ಸಲ್ಲುತ್ತದೆ. ಈಗಿನ ಜೀವನದಷ್ಟೆ ವೈಚಿತ್ರ್ಯಮಯವಾಗಿಯೂ ಮಹತ್ವ ಪೂರ್ಣವಾಗಿಯೂ ಒಂದು ಕಾಲದಲ್ಲಿ ಬಾಳಿದ ಜೀವನವನ್ನು ಉಚಿತವಾದ ಪ್ರಮಾಣ ಬಲದಿಂದ ಮತ್ತೆ ನಿರ್ಮಿಸಿ ತೋರಿಸುವುದೆ ಚರಿತ್ರೆಯ ಮಹತ್ವದ ಗುರಿಯಾಗಿದೆ. ಈ ವಿಧಾನದಲ್ಲಿ ಚರಿತ್ರೆಯು ಸಾಹಿತ್ಯದ ಒಂದು ಅಂಗವಾಗಿ ಸಾಹಿತ್ಯವು ಚರಿತ್ರೆಯ ಒಂದು ಅಂಶವಾಗುವುದಲ್ಲದೇ ಚರಿತ್ರೆಯು ಸಾಹಿತ್ಯಕ್ಕೂ ಮಿಗಿಲಾಗಿ ಜೀವನ ಪ್ರಚೋದಕವಾಗಿ ನಿಲ್ಲುವುದು.

ವಿಜಯನಗರ ಸಾಮ್ರಾಜ್ಯವು ಸ್ಥಾಪಿತವಾಗಿ ಆರುನೂರು ವರ್ಷಗಳ ನೆನಪಿಗೆ ವಿಜಯನಗರ ಸ್ಮಾರಕೋತ್ಸವ ಮಂಡಳ, ಧಾರವಾಡದಿಂದ ತನ್ನ ಕಾರ್ಯವನ್ನು ಪ್ರಾರಂಭಿಸಿತು. ಈ ಪ್ರಯತ್ನದ ಫಲವಾಗಿ ಕನ್ನಡ ಲೇಖನಗಳನ್ನು ಒಟ್ಟುಗೂಡಿಸುವ ಕಾರ್ಯವನ್ನು ಮಂಡಲದವರು ಮಾಡಿದರು. ಈ ಒಂದು ಕಾರ್ಯವು ವಿಜಯನಗರ ಇತಿಹಾಸವನ್ನು ಮೊದಲಿಗೆ ಕ್ರೋಡೀಕರಿಸುವ ಪ್ರಯತ್ನವನ್ನು ಮಾಡಿರುವ ಈ ಒಂದು ಪ್ರಯತ್ನದ ಫಲವಾಗಿ ಹಲವಾರು ಲೇಖನಗಳು ಮತ್ತು ಕೃತಿಗಳು ಕ್ರಿ.ಶ. 1936ರಲ್ಲಿ ಹೊರಬಂದವು. ಈ ಒಂದು ಪ್ರಯತ್ನದಿಂದ ಹಲವಾರು ಅಂಶಗಳ ಬಗ್ಗೆ ಹೊಸಬೆಳಕನ್ನು ಮೂಡಿಸಲು ಪ್ರಯತ್ನಪಟ್ಟರು. ಈ ಪ್ರಯತ್ನದ ಪಲವಾಗಿ ವಿಜಯನಗರದ ಬಗ್ಗೆ ಇದ್ದಂತಹ ಹಲವಾರು ಸಂಶಯಗಳ ಬಗ್ಗೆ ಹಲವಾರು ವಿಷಯಗಳನ್ನು ಕುರಿತು ವಿಷಯವನ್ನು ಮಂಡಿಸಿದರು. ಈ ವಿಷಯಗಳು ವಿಜಯನಗರದ ಬಗ್ಗೆ ಇರುವ ಹಲವಾರು ವಿಷಯಗಳನ್ನು ತಿಳಿಗೊಳಿಸಿತು. ವಿಜಯನಗರ ಸಾಮ್ರಾಜ್ಯದ ಇತಿಹಾಸ ಸಾಮಗ್ರಿಗಳು ಕಾವ್ಯ, ಪುರಾಣ, ಶಿಲಾಶಾಸನ, ತಾಮ್ರಪಟ, ವೀರಗಲ್ಲು, ವಿದೇಶೀಯರ ವೃತ್ತಾಂತ, ಅಧಿಕಾರಿಗಳು ನಡೆಸಿದ ಪತ್ರವ್ಯವಹಾರಗಳೂ ಹೇರಳವಾಗಿದ್ದರೂ ಸಹ ಜನರು ಓದಲು ಅನುಕೂಲವಾದ ಇತಿಹಾಸವು

ಕ್ರಿ.ಶ. 1936ರವರೆಗೆ ಇದ್ದಿಲ್ಲ. ಈ ಒಂದು ಕಾರ್ಯವನ್ನು ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವ ಮಂಡಳದವರು ಮಾಡಿದರು. ಈ ಒಂದು ಕಾಲಘಟ್ಟಕ್ಕೆ ಹೊಂದಿಕೊಳ್ಳುವಂತೆ ಕರ್ನಾಟಕದ ಏಕೀಕರಣ ಚಳವಳಿಯ ಅಂಶಗಳನ್ನು ಈ ಸ್ಮಾರಕೋತ್ಸವದ ಪ್ರಕಟಣೆಯಲ್ಲಿ ಕಾಣಬಹುದು. ಭಾಷಾವಾರು ಪ್ರಾಂತ್ಯ ರಚನೆಯ ಬಗ್ಗೆ ಆ ಕಾಲಘಟ್ಟದಲ್ಲಿ ಅನೇಕ ಚಳವಳಿಗಳು ಸಹ ನಡೆದವು. ಕರ್ನಾಟಕದ ಇತಿಹಾಸಕ್ಕೆ ಮತ್ತು ಕರ್ನಾಟಕದ ಗತವೈಭವದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವಂತಹ ಮತ್ತು ಕರ್ನಾಟಕದ ಹೆಸರಿನಲ್ಲಿ ಒಗ್ಗೂಡುವಂತೆ ಮಾಡುವ ಪ್ರಯತ್ನಗಳು ನಡೆಯುತ್ತ ಇದ್ದಂತಹ ಸಂದರ್ಭದಲ್ಲಿ ವಿಜಯನಗರ ಸಾಮ್ರಾಜ್ಯ ಕುರಿತು ಪಾಂಡುರಂಗ ದೇಸಾಯಿಯವರು ಇತಿಹಾಸವನ್ನು ರಚಿಸಿ ಮಹದುಪಕಾರವನ್ನು ಮಾಡಿದರು. ಇದು ಕೂಡ ಕರ್ನಾಟಕದ ಗತವೈಭವಕ್ಕೆ ಸಾಕ್ಷಿಯಾಗಿದೆ. ಅದೇ ರೀತಿಯಾಗಿ ವಿಜಯನಗರ ಇತಿಹಾಸಲೇಖನ ಕಲೆಗೆ ಸಂಬಂಧಿಸಿದಂತೆ ಈ ಕಾಲಘಟ್ಟದಲ್ಲಿ ಹಲವಾರು ವಿಷಯಗಳ ಮೇಲೆ ಬೆಳಕನ್ನು ಚೆಲ್ಲಿದ್ದರಿಂದ ಇತಿಹಾಸರಚನೆಗೆ ತೊಡಕಾಗಿದ್ದ ಹಲವಾರು ಅಂಶಗಳ ನಿವಾರಣೆಗೆ ಪ್ರಯತ್ನಿಸಿದ್ದಾರೆ. ಅಲ್ಲಿಂದ ಈಚೆಗೆ ಹೊಸಹೊಸ ವಿಷಯಗಳನ್ನು ತಿಳಿಯಲಿಕ್ಕೆ ಕಾರಣವಾಗಿದೆ. ಕ್ರಿ.ಶ. 1936 ರವರೆಗೆ ಪ್ರಕಟಿತಗೊಂಡಂತಹ ವಿಷಯಗಳನ್ನು ಅಧಾರವಾಗಿಟ್ಟುಕೊಂಡು ಅದರಲ್ಲಿಯ ಕೆಲವು ಅಂಶಗಳ ಬಗ್ಗೆ ಇದ್ದಂತಹ ತೊಡಕುಗಳನ್ನು ನಿವಾರಿಸಲು ಪ್ರಯತ್ನಪಟ್ಟಿದ್ದಾರೆ. ಈ ಪ್ರಯತ್ನದ ಫಲವೇ ಪಾಂಡುರಂಗ ದೇಸಾಯಿಯವರ ವಿಜಯನಗರ ಸಾಮ್ರಾಜ್ಯ.

ಶ್ರೀಯುತ ಪಾಂಡುರಂಗ ದೇಸಾಯಿಯವರು ವಿಜಯನಗರ ಸಾಮ್ರಾಜ್ಯ ಮಾಲಿಕೆಯ ಒಂದನೆಯ ವಿಲಾಸದಲ್ಲಿ ವಿಹಂಗಮ ನಿರೀಕ್ಷಣ ಎಂಬ ಶೀರ್ಷಿಕೆಯ ಅಡಿಯಲ್ಲಿ ಕ್ರಿಸ್ತಶಕ ಆರಂಭದಿಂದ ಕ್ರಿ.ಶ. 1300ವರೆಗೆ ಕಣ್ಣು ಹಾಯಿಸಿದ್ದಾರೆ. ಕನ್ನಡಿಗರ ಕೊನೆಯ ಮಹಾಸಾಮ್ರಾಜ್ಯವಾದ ವಿಜಯನಗರ ಇತಿಹಾಸಕ್ಕೆ ಮುನ್ನ ಕನ್ನಡ ನಾಡಿನ ಜನ ಮತ್ತು ಪೂರ್ವದ ಇತಿಹಾಸವನ್ನು ವಿಹಂಗಮ ದೃಷ್ಟಿಯಿಂದ ಶ್ರೀಯುತರು ನಿರೀಕ್ಷಿಸಿದ್ದಾರೆ. ಈ ಒಂದು ವಿಷಯದ ಆಳಕ್ಕೆ ಹೋದಂತೆ ಕರ್ನಾಟಕದವರು ದ್ರಾವಿಡ ಸಂಸ್ಕೃತಿಯವರು ಎಂದು ನಾವು ಒಪ್ಪುವುದಾದರೆ ಕನ್ನಡಿಗರ ಇತಿಹಾಸ ಸಿಂಧೂನಾಗರಿಕತೆಯ ಪೂರ್ವಕ್ಕೆ ಸರಿಯುತ್ತದೆ. ಈ ವಿಷಯಗಳಿಗೆ ಅಲ್ಪವಿರಾಮವನ್ನು ನೀಡಿ ಇತಿಹಾಸ ಕಾಲದತ್ತ ಹೊರಳಿದ್ದಾರೆ. ಕ್ರಿಸ್ತಶಕ ಆರಂಭದ ಕಾಲಕ್ಕೆ ಕನ್ನಡ ಜನಾಂಗವು ರೂಪಗೊಂಡು ಬಾಳಿತ್ತು ಎಂಬುದಕ್ಕೆ ಸ್ಪಷ್ಟವಾದ ಕುರುಹುಗಳು ದೊರತ ಬಗ್ಗೆ ಮಾಹಿತಿ ನೀಡಿದ್ದಾರೆ. ಕದಂಬ ವಂಶ ಮತ್ತು ಗಂಗರಸರು ಇವರುಗಳ ಹಿರಿಮೆಯನ್ನು ಈ ರಾಜ್ಯಗಳ ಸ್ಥಾಪನೆ ಸಂವರ್ಧನೆಗಳ ಸಾಧಕದಿಂದ ಕನ್ನಡ ಜನಾಂಗದಲ್ಲಿ ಬಲ, ಆತ್ಮವಿಶ್ವಾಸ, ಮಹತ್ವಾಕಾಂಕ್ಷೆ ಇವುಗಳು ವೃದ್ಧಿಯಾದ ಬಗ್ಗೆ ತಿಳಿಸಿದ್ದಾರೆ. ಬದಾಮಿ ಚಾಲುಕ್ಯರು. ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು ನಂತರದಲ್ಲಿ ಹೊಯ್ಸಳರು ಮತ್ತು ಯಾದವರು ಇವರನ್ನು ಕುರಿತು ವಿವರಿಸಿದ್ದಾರೆ. ಈ ರಾಜರುಗಳು ಕರ್ನಾಟಕದವರಾಗಿದ್ದು (ಯಾದವರನ್ನು ಬಿಟ್ಟು) ಕರ್ನಾಟಕ ಸಂಸ್ಕೃತಿಯನ್ನು ದಕ್ಷಿಣಭಾರತದ ಜೊತೆಗೆ ಉತ್ತರ ಭಾರತದಲ್ಲಿಯೂ ಪ್ರಸರಿಸಿದರು. ಚಾಲುಕ್ಯರ ನಂತರ ದಕ್ಷಿಣಭಾರತದಲ್ಲಿ ರಾಜಕೀಯ ಅಸಾಯಕತೆ ಉಂಟಾಯಿತು. ಇಂತಹ ಸಂದರ್ಭದಲ್ಲಿ ಪರಕೀಯ ಧಾಳಿಗಳು ಅಂದರೆ ದಕ್ಷಿಣದಲ್ಲಿ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸುವ ಕಾರ್ಯವನ್ನು ಮಾಡಿದರು. ಇದರಿಂದ ದಕ್ಷಿಣ ಭಾರತದ ಏಕತೆಗೆ ಧಕ್ಕೆ ಉಂಟಾಯಿತು. ಇಂತಹ ಸಂದರ್ಭ 13ನೆಯ ಮತ್ತು 14ನೆಯ ಶತಮಾನದಲ್ಲಿ ಅನೇಕ ಘಟನೆಗಳು ನಡೆದವು. ನಂತರದಲ್ಲಿ ಕ್ರಿ.ಶ. 1336ರಲ್ಲಿ ವಿಜಯನಗರ ಸಾಮ್ರಾಜ್ಯ. ಸ್ಥಾಪನೆಯಾದುದನ್ನು ಕುರಿತು ವಿವರಿಸಿದ್ದಾರೆ. ಅರಸರ ಇತಿಹಾಸವನ್ನು ಹೇಳುವಾಗ ಜನತೆಯ ಇತಿಹಾಸವನ್ನು ನುಂಗಿಹಾಕಬಾರದು ಎಂಬುದಾಗಿ ಹೇಳಿದ್ದಾರೆ. ತಲಕಾಡು, ಬನವಾಸಿ, ಬಾದಾಮಿ ಮಾಳಖೇಡ, ಕಲ್ಯಾಣ ಮತ್ತು ದೇವಗಿರಿ ಕುರಿತು ವಿವರಿಸಿದ್ದಾರೆ. ಅದೇರೀತಿಯಾಗಿ ಸಾಮ್ರಾಜ್ಯಗಳ ವಿಸ್ತಾರವನ್ನು ಕುರಿತು ವಿವರಿಸಿದ್ದಾರೆ.

ಎರಡನೇ ವಿಲಾಸದಲ್ಲಿ ಕಾಳರಾತ್ರಿ ಎಂಬ ಶೀರ್ಷಿಕೆಯಡಿ ಕ್ರಿ.ಶ. 1294ರಿಂದ 1330ರ ಕಾಲಘಟ್ಟವನ್ನು ಕುರಿತು ವಿವರಿಸಿದ್ದಾರೆ. ಮಹಮ್ಮದಿಯರು ಉತ್ತರಭಾರತವನ್ನು ಆಕ್ರಮಿಸಿದ ನಂತರ ಅವರು ದಕ್ಷಿಣದತ್ತ ಗಮನ ಹರಿಸಿದರು. ಈ ಕಾಲಘಟ್ಟದಲ್ಲಿ ದಕ್ಷಿಣಭಾರತದಲ್ಲಿ ಇದ್ದಂತಹ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿದ್ದಾರೆ. ದೇವಗಿರಿಯ ಯಾದವರು, ದೊರಸಮುದ್ರದ ಹೊಯ್ಸಳರು, ವಾರಂಗಲ್ಲಿನ ಕಾಕತಿಯರು, ಮದುರೆಯ ಪಾಂಡ್ಯರು ಮತ್ತು ಮಾಂಡಳಿಕ ರಾಜರುಗಳು ಆಳ್ವಿಕೆಮಾಡುವುದರ ಕುರಿತು ವಿವರಿಸಿದ್ದಾರೆ. ಅಲ್ಲಾವುದ್ದೀನ್ ಖಿಲ್ಜಿಯು ಕ್ರಿ.ಶ. 1394ರಲ್ಲಿ ದೇವಗಿರಿಗೆ ಬಂದನು. ಅನಂತರ ಅವನ ದಂಡನಾಯಕ ಮಲ್ಲಿಕಾಫೂರ ದಂಡಯಾತ್ರೆಯನ್ನು ಮುಂದುವರೆಸಿ 1306–1330ರವರೆಗೆ ಧಾಳಿಮಾಡಿದನು. ಇಂತಹ ಸಂದರ್ಭದಲ್ಲಿ ದಕ್ಷಿಣದ ಎಲ್ಲಾ ರಾಜರುಗಳನ್ನು ಸೋಲಿಸಿ ಮಧುರೈಯಲ್ಲಿ ಅಧಿಕಾರಗ್ರಹಣ ಮಾಡಿ ರಾಮೇಶ್ವರದಲ್ಲಿ ಮಸೀದಿಯನ್ನು ನಿರ್ಮಿಸಿದುದರ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ. ಪ್ರಾಚೀನ ಕಾಲದಿಂದ ಪೂಜೆಗೆ ಯೋಗ್ಯವಾಗಿದ್ದ ದೇವಾಲಯಗಳು ಈ ಅವಧಿಯಲ್ಲಿ ಧ್ವಂಸವಾದವು. ಪವಿತ್ರ ಸ್ಥಳಗಳು ಅಪವಿತ್ರವಾದವು. ವೈಭವವು ಹಾಳಾಯಿತು. ನೂರಾರು ವರ್ಷಗಳಿಂದ ಕಟ್ಟಿದ ನಾಗರಿಕತೆಯು ಸಂಪೂರ್ಣ ನಾಶವಾಯಿತು. ಇದೇ ಸಂದರ್ಭದಲ್ಲಿ ತುಘಲಖ್‌ನು ದೇವಗಿರಿಗೆ ರಾಜಧಾನಿಯನ್ನು ಬದಾಲಾಯಿಸಿದನು. ಇಂತಹ ಸಂದರ್ಭದಲ್ಲಿ ದಕ್ಷಿಣಭಾರತದಲ್ಲಿದ್ದಂತಹ ಅರಾಜಕತೆಯನ್ನು ಕುರಿತು ಮತ್ತು ಪರಿಸ್ಥಿತಿಯನ್ನು ಕುರಿತು ವಿವರಿಸಿದ್ದಾರೆ. ಗಂಗಾದೇವಿಯ ಕೃತಿ 'ವೀರಕಂಪಣರಾಯಚರಿತಂ' ನಲ್ಲಿ ರಾಜ್ಯದ ಪರಿಸ್ಥಿತಿಯ ವಿವರಣೆ ನೀಡುವ ಭಾಗವನ್ನು ವಿವರಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಇಡೀ ದಕ್ಷಿಣ ಭಾರತ ಯಾವ ರೀತಿ ಜನಾಂಗ ಭೇದವನ್ನು ಮರೆತು ಒಂದಾಯಿತು ಎಂಬುದನ್ನು ತಿಳಿಸಿದ್ದಾರೆ.

ಮೂರನೆಯ ವಿಲಾಸದಲ್ಲಿ ಸ್ವರಾಜ್ಯೋದಯ ಶೀರ್ಷಿಕೆಯಡಿ ಕ್ರಿ.ಶ. 1330ರಿಂದ 1336ರ ನಡುವಿನ ಘಟನೆಗಳನ್ನು ಕುರಿತು ವಿವರಿಸಿದ್ದಾರೆ. ಜೊತೆಗೆ ಸ್ವಧರ್ಮ, ಸ್ವಸಂಸ್ಕೃತಿ ಇವುಗಳು ಹಿಂದೆ ಇದ್ದಂತಹ ಪರಿಸ್ಥಿತಿ. ಇಂತಹ ಪರಿಸ್ಥಿತಿಯಲ್ಲಿ ಕೆಲವು ವ್ಯಕ್ತಿಗಳು ಎದೆಗೆಡದೆ ಮರಳಿ ಸ್ವರಾಜ್ಯವನ್ನು ಸ್ಥಾಪಿಸಿ, ಸ್ವಶಕ್ತಿಯನ್ನು ಸಂವರ್ಧಿಸಿ, ಸ್ವಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವ ಕಾರ್ಯದಲ್ಲಿ ತೊಡಗಿದ ಬಗ್ಗೆ ಸ್ವಾತಂತ್ರ್ಯದ ಕಿಚ್ಚು ಕರ್ನಾಟಕದಲ್ಲೇ ಉಂಟಾಯಿತು ಎಂಬುದರ ಬಗ್ಗೆ ವಿವರಣೆಯನ್ನು ನೀಡಿದ್ದಾರೆ. ಜೊತೆಗೆ ಸ್ವರಾಜ್ಯದ ಜ್ಯೋತಿಯನ್ನು ಬೆಳಗಿಸಿದವನು ಮುಮ್ಮಡಿ ವೀರಬಲ್ಲಾಳ ಹೊಯ್ಸಳರ ಕೊನೆಯದೊರೆ, ಮಲ್ಲಿಕಾಫರ್‌ನ ದಾಳಿಯಿಂದ ಕಂಗೆಡದೇ ಮತ್ತು ಸಾಮ್ರಾಜ್ಯವನ್ನು ನಿರ್ಮಿಸುವ ಕಾರ್ಯದಲ್ಲಿ ತೊಡಗಿದನು. ಇಂತಹ ಸಂದರ್ಭದಲ್ಲಿ ಅಲೆಮಾರಿ ಜೀವನವನ್ನು ಕುರಿತು ಕ್ರಿ. ಶ. 1328ರಲ್ಲಿ ತಿರುವಣ್ಣಮಲೈ ಮತ್ತು ದಕ್ಷಿಣ ಆರ್ಕಾಟ್ ಜಿಲ್ಲೆಯಲ್ಲಿ ಬೀಡುಬಿಟ್ಟನು. ಮುಂದುವರೆದು ವಾರಂಗಲ್, ಆನೆಗೊಂದಿ ಮತ್ತು ಕಂಪಲಿಗಳ ಮೇಲೆ ಆದ ಪರಿಣಾಮಗಳು ಮಹಮದ್ ತುಘಲಖ್ ಧಾಳಿ, ಕಂಪಲಿ ಮತ್ತು ಬಹಾವುದ್ದಿನ್‌ನ ಸಂಬಂಧ, ಕಂಪಿಲರಾಯನ ಆಶ್ರಯ, ಸುಲ್ತಾನನು ಆನೆಗೊಂದಿಗೆ ಮುತ್ತಿಗೆ ಹಾಕಿದ್ದು, ಕಂಪಿಲರಾಯನನ್ನು ಸೋಲಿಸಿ ಆ ಪ್ರದೇಶದಲ್ಲಿ ಮಲಿಕ್ ನಾಯಿಬ್‌ನನ್ನು ನೇಮಿಸಿದ ಕುರಿತು ವಿವರಿಸಿದ್ದಾರೆ. ಅದೇ ರೀತಿ ಅಗ್ನಿಗೆ ಆಹುತಿಯಾದ ವಿವರಣೆ ಇದೆ, ಜೊತೆಗೆ ಪದ ಭ್ರಷ್ಟರಾದ ಜನನಾಯಕರಿಗೆ ಬಲ್ಲಾಳರಾಯನ ಆವಶ್ಯಕತೆ ಅನಿವಾರ್ಯ ಎನಿಸಿತು. ಇಂತಹ ಸಂದರ್ಭದಲ್ಲಿ ಅವನ ಮಾರ್ಗದರ್ಶನದಲ್ಲಿ ಮುಂದುವರೆಯಲು ಹವಣಿಸಿದರು. ಬಲ್ಲಾಳರಾಯನ ಸಂಘಟನೆಯನ್ನು ಚುರುಕುಗೊಳಿಸಿದ್ದನು. ವಾರಂಗಲ್‌ನ ಕೃಷ್ಣನಾಯಕನು ಇವನ ಜೊತೆ ಕೂಡಿದನು. ಇಂತಹ ಸಂದರ್ಭದಲ್ಲಿ ಸಭೆಯನ್ನು ಕರೆದು ಈ ಸಭೆಗೆ ಎಲ್ಲರಿಗೂ ಆಹ್ವಾನವನ್ನು ನೀಡಿದನು. ಈ ಒಂದು ಸಭೆಯಲ್ಲಿ ಸಂಗಮ ಪುತ್ರರು ಹೊಸರಾಜ್ಯ ಉದಯಕ್ಕೆ ಪ್ರೇರಣೆಯನ್ನು ಪಡೆದರು ಎನ್ನುವಂತಹ ವಿವರಣೆಯನ್ನು ಮೂರನೆಯ ವಿಲಾಸದಲ್ಲಿ ಕೂಲಂಕಷವಾಗಿ ವಿವರಿಸಿದ್ದಾರೆ.

ನಾಲ್ಕನೆಯ ವಿಲಾಸದಲ್ಲಿ ಸಾಮ್ರಾಜ್ಯ ಸಂಸ್ಥಾಪನೆ ಶೀರ್ಷಿಕೆಯಡಿ ಕ್ರಿ.ಶ. 1336ರಿಂದ 1346ರವರೆಗಿನ ಘಟನೆಗಳನ್ನು ಕುರಿತು ವಿವರಿಸಿದ್ದಾರೆ. ನವರಾಜ್ಯದ ಸ್ಥಾಪನೆಯ ಸಂಕಲ್ಪವು ಅಂಕುರಿಸಿತು. ಭಾರತೀಯ ಸಂಸ್ಕೃತಿಯನ್ನು ಪುನರುತ್ಥಾನದ ಧ್ವಜವು ಮೇಲಕ್ಕೇರಿಸಿತು. ಹರಿಹರನು ಇಂತಹ ಪರಿಸ್ಥಿತಿಯಲ್ಲಿ ಸ್ಥಳೀಯ ರಾಜರುಗಳ, ನಾಯಕರ ವಿಶ್ವಾಸವನ್ನು ಪಡೆದುಕೊಳ್ಳಬೇಕಾಗಿದ್ದಿತು. ಪರಕೀಯರನ್ನು ದೇಶದಿಂದ ಹೊರಹಾಕಬೇಕಾಗಿದ್ದಿತು. ಹಿಂದು ಜನಾಂಗದಲ್ಲಿ ಸಂಘಟನೆ ಉಂಟಾಗಿದ್ದಲ್ಲಿ ತನ್ನ ಸ್ವರಾಜ್ಯದ ಒಡೆಯನಾದ ಬಲ್ಲಾಳರಾಯನ ಧ್ಯೇಯಕ್ಕೆ ಯಾವ ವಿಧದಿಂದಲೂ ವಿರೋಧಿಯಾಗದೆ ಜನರಿಗೆ ಮನಗಾಣಿಸಬೇಕಾಗಿದ್ದಿತು. ಇಂತಹ ಪರಿಸ್ಥಿತಿಯಲ್ಲಿ ಹರಿಹರನು ಮುಂದಿನ ಹತ್ತು ವರ್ಷಗಳನ್ನು ದಕ್ಷ ರೀತಿಯಲ್ಲಿ ನಡೆಸಿಕೊಂಡು ಬಂದನು. ಈ ಹತ್ತು ವರ್ಷಗಳಲ್ಲಿ ಸಾಹಸ, ಹೋರಾಟವನ್ನು ಮಾಡಿ ಹಿಂದೂ ಜನರಲ್ಲಿ ಸಂಘಟನಾ ಶಕ್ತಿಯನ್ನು ನಿರ್ಮಾಣ ಮಾಡಿ ವೈರಿಗಳನ್ನು ಸಂಪೂರ್ಣವಾಗಿ ಪರಾಭವಗೊಳಿಸಿದನು. ಪೂರ್ವ ಮತ್ತು ಪಶ್ಚಿಮ ಸಮುದ್ರಗಳನ್ನು ಕೂಡಿಸಿ ಒಂದು ಬಲಿಷ್ಠ ಶಕ್ತಿಯನ್ನು ಹುಟ್ಟುಹಾಕಿದನು. ಕ್ರಿ.ಶ. 1336ರಲ್ಲಿ ಬಾರಕೂರುವಿನಲ್ಲಿ ಕೋಟೆಯನ್ನು ಕಟ್ಟಿಸಿದನು. ಕ್ರಿ.ಶ. 1339 ರಿಂದ ಕ್ರಿ.ಶ. 1340ರವರೆಗೆ ಕರ್ನೂಲ ಪ್ರಾಂತ್ಯವನ್ನು ಆಳುತ್ತಿದ್ದನು. ಕ್ರಿ.ಶ. 1340ರಲ್ಲಿ ಬದಾಮಿ ಪ್ರದೇಶದಲ್ಲಿ ಬಲವನ್ನು ಸ್ಥಾಪಿಸಿ ಕೋಟೆಯನ್ನು ಕಟ್ಟಿದನು. 'ಅರಿರಾಯ ವಿಭಾಡ', 'ಭಾಷೆಗೆ ತಪ್ಪದ ರಾಯರಗಂಡ', 'ಪೂರ್ವ-ಪಶ್ಚಿಮ ಸಮುದ್ರಾಧಿಪತಿ', ಬಿರುದುಗಳನ್ನು ಧರಿಸಿದನು. ಕ್ರಿ.ಶ. 1340ರಲ್ಲಿ ಹರಿಹರನು ಸ್ವತಂತ್ರ ದೊರೆಯಾಗಿ ಚತುಃಸಮುದ್ರಾಧಿಪತಿ ಬಿರುದನ್ನು ಧರಿಸಿದ್ದನು. ಕ್ರಿ.ಶ. 1342ರಲ್ಲಿ ಹೊನ್ನಾವರದ ಮುಸ್ಲಿಂ ಸುಬೇದಾರನು ಇವನ ಪ್ರಭುತ್ವವನ್ನು ಒಪ್ಪಿಗೊಂಡನು. ಕ್ರಿ.ಶ. 1343ರಲ್ಲಿ ಮಹಾರಾಜಧಿರಾಜ, ರಾಜಪರಮೇಶ್ವರ, ವೀರಪ್ರತಾಪ, ಹರಿಹರ ಮಹಾರಾಯ ಎಂಬ ಸಂಪೂರ್ಣ ಸ್ವತಂತ್ರವಾದ ಬಿರುದುಗಳನ್ನು ಧರಿಸಿದನು. ಕ್ರಿ.ಶ. 1336 ರಿಂದ 1343ರ ಅವಧಿಯಲ್ಲಿ ರಾಜ್ಯ ನಿರ್ಮಾಣದ ಗುರಿ ಭಾಗಶಃ ಈಡೇರಿತು. ಹಿಂದೂ ಶಕ್ತಿಗಳು ಹರಿಹರನಿಗೆ ಸಹಾಯಕರಾಗಿ ನಿಂತರು. ಈಶಾನ್ಯದ ಆಂಧ್ರ ಗಡಿಯಲ್ಲಿ ಕಂಪಣ್ಣನ ಅಧಿಕಾರ ಸ್ಥಿರವಾಗಿ ವಿಜಯನಗರಕ್ಕೆ ಒಳಪಟ್ಟಿತು. ಪಶ್ಚಿಮದ ಗಡಿಯಲ್ಲಿ ಮಾರಪ್ಪನು ಸಾಗರದವರೆಗಿನ ಪ್ರದೇಶವನ್ನು ಗೆದ್ದು ಸಾಮ್ರಾಜ್ಯಕ್ಕೆ ಸೇರಿಸಿದನು. ಸಾಮ್ರಾಜ್ಯದ ಮಧ್ಯಭಾಗದಲ್ಲಿ ಬುಕ್ಕರಾಯನು, ಹರಿಹರ ಮತ್ತು ವೀರಬಲ್ಲಾಳನಿಗೆ ಸಹಾಯಕನಾಗಿ ನಿಂತು ದಕ್ಷಿಣದಲ್ಲಿ ಮುಂದುವರೆದನು. ಯಾದವರ, ಹೊಯ್ಸಳರ, ಸಂಗಮರ, ತೆಲಗರ ಶಕ್ತಿಗಳು ಒಂದುಗೂಡುವುದನ್ನು ನೋಡಿದ ವೀರಬಲ್ಲಾಳನು ಸಂತೋಷವನ್ನು ಅನುಭವಿಸಿದನು. ರಾಜ್ಯವು ಕೃಷ್ಣ ನದಿಯವರೆಗೆ ಹಬ್ಬಿತು, ಭಾರತಿಯರ ಸಂಘಶಕ್ತಿಯು ಜಯಶಾಲಿಯಾಯಿತು. ಆದರೆ ಮಧುರೈಯಲ್ಲಿ ಮುಸ್ಲಿಂರ ಆಳ್ವಿಕೆ ಇತ್ತು ಇದನ್ನು ಕಿತ್ತುಹಾಕಲು ವೀರಬಲ್ಲಾಳನು ಪ್ರಯತ್ನಿಸಿದನು. ಅದೇ ಯುದ್ಧದಲ್ಲಿ ಮಡಿದನು. (ಕ್ರಿ.ಶ. 1342) ಹೊಯ್ಸಳರ ಕೊನೆಯ ಜ್ಯೋತಿ ಅಸ್ತಂಗತವಾಯಿತು. ಹರಿಹರ ಕ್ರಿ.ಶ. 1343ರಲ್ಲಿ ಸಾಮ್ರಾಟನೆಂದು ವಿರಾಜಮಾನನಾದನು. ಹರಿಹರ ಮತ್ತು ಅವನ ಸಹೋದರರು ಸಾಮ್ರಾಜ್ಯದ ಎಲ್ಲಾ ಭಾಗಗಳನ್ನು ಅಧೀನಕ್ಕೆ ಸೇರಿಸಿದರು. ಮುಂದೆ ವಾರಂಗಲ್‌ನ ರಾಜ ಕೃಷ್ಣನಾಯಕನು 1344ರಲ್ಲಿ ಬಂಡಾಯವೆದ್ದನು. ಈ ರೀತಿಯಾಗಿ ಪ್ರದೇಶಗಳ ಮೇಲೆ ಹಿಡಿತವನ್ನು ಸಾಧಿಸಿದರು. ಸುಮಾರು 15 ವರ್ಷಗಳ ಹೋರಾಟದ ನಂತರ ಬಲ್ಲಾಳರಾಯನು ಕಂಡ ಕನಸು ನನಸಾಯಿತು. ಸ್ವದೇಶದಲ್ಲಿ ಸ್ವರಾಜ್ಯ ಸ್ಥಾಪನೆಯಾಯಿತು. ಪ್ರಭುಶಕ್ತಿಯ ಪ್ರಭಾವದಿಂದ ಭಾರತಿಯ ಸಂಸ್ಕೃತಿಯು ಮತ್ತೆ ಜೀವಕಳೆಯನ್ನು ತುಂಬಿಕೊಂಡು ಭಾರತಿಯ ನಾಗರಿಕತೆಯು ಬೆಳೆಯಲು ಅನುವಾಯಿತು. ಎಂಟು ವರ್ಷಗಳ ಹಿಂದೆ ಹರಿಹರನು ಕಂಡ ಕನಸು ಆನೆಗೊಂದಿಯಲ್ಲಿ ಮರವಾಗಿ ಬೆಳೆಯಿತು.

ಹರಿಹರನು ನೆಲೆಗೊಂಡ ನಂತರ ರಾಜ್ಯದ ಗಡಿಗಳನ್ನು ಭದ್ರಪಡಿಸಿದನು. ಸಂಬಂಧಗಳನ್ನು ಸುಧಾರಿಸಿದನು. ಜೊತೆಗೆ ಜನಾಂಗದಲ್ಲಿ ಸಂಘಟನೆಯನ್ನು ಸಹಕಾರವನ್ನು ತರುವಲ್ಲಿ ಯಶಸ್ವಿಯಾದನು. ಅಷ್ಟರಲ್ಲಿ ಹೊಯ್ಸಳ

ಕೊನೆಯ ದೊರೆ ವೀರ ವಿರೂಪಾಕ್ಷ ನಾಲ್ವಡಿ ಬಲ್ಲಾಳನು ಕ್ರಿ.ಶ. 1346ರಲ್ಲಿ ಮರಣವನ್ನು ಹೊಂದಿದ ಅನಂತರದಲ್ಲಿ ಯಾವುದೇ ತೊಂದರೆ ಇಲ್ಲದೇ ಹರಿಹರನು ನ್ಯಾಯವಾಗಿಯೇ ರಾಷ್ಟ್ರದ ಭಕ್ತಿ ವಿಶ್ವಾಸಗಳಿಗೆ ಪಾತ್ರನಾದ ಬಗ್ಗೆ ಆತನ ಒಡೆತನವನ್ನು ಕೂಡಲೇ ಸ್ವಾಗತಪೂರ್ವಕವಾಗಿ ರಾಜ್ಯವು ಒಪ್ಪಿಕೊಂಡಿತು. 'ಮಹಾಮಂಡಲೇಶ್ವರ', 'ಅರಿರಾಯ ವಿಭಾಡ', 'ಭಾಷೆಗೆ ತಪ್ಪದ ರಾಯರಗಂಡ' ವೀರ ಹರಿಹರರಾಯನು ಸಹೋದರರು, ಅಳಿಯ ಮತ್ತು ಇತರರೊಂದಿಗೆ ಸ್ಫೂರ್ತಿಯನ್ನು ನೀಡಿದ ಶೃಂಗೇರಿಯ ಶ್ರೀ ಶಂಕರಾಚಾರ್ಯ ಮಠಕ್ಕೆ ಬಂದು ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ವಿಜಯೋತ್ಸವದ ಸ್ಮಾರಕರೂಪವಾಗಿ ಕ್ರಿ.ಶ. 1346ರಲ್ಲಿ ಮಹಾದಾನವನ್ನು ಮಾಡಿದನು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಉದ್ದೇಶ ಈಡೇರಿದ ಬಗ್ಗೆ ವಿಜಯನಗರ ಸಾಮ್ರಾಜ್ಯದ ವಿಜಯಧ್ವಜವು ಶ್ರೀ ವಿರೂಪಾಕ್ಷನ ಕೃಪಾ ಛತ್ರದಲ್ಲಿ ವಿಜಯನಗರವು ಪ್ರಜ್ವಲಿಸಿದ ಬಗ್ಗೆ ವಿವರಣೆಯನ್ನು ನೀಡಿದ್ದಾರೆ. ಶೃಂಗೇರಿ ಮಠದೊಂದಿಗೆ ಇದ್ದಂತಹ ಸಂಬಂಧವನ್ನು ವಿವರಿಸುತ್ತ ಧರ್ಮ ಭಾವನೆಯು ರಾಜಕೀಯ ಕ್ಷೇತ್ರದಲ್ಲಿಯೂ ಪ್ರಭಾವಶಾಲಿಯಾಗಿದ್ದಿತು ಎನ್ನುವಂತಹ ವಿಚಾರದ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ಧರ್ಮಗುರುಗಳು ಕೂಡ ರಾಜ್ಯ ಸ್ಥಾಪನೆಯ ಬಗ್ಗೆ ಸ್ಫೂರ್ತಿಯನ್ನು ನೀಡಿದುದರ ಕುರಿತು ವಿವರಿಸಿದ್ದಾರೆ. ಶೃಂಗೇರಿಯ ಮಠವು ಮುಂದಿನ ಅರಸರ ಆತ್ಮಗೌರವದ ಸಂಕೇತವಾದ ವಿವರಣೆಯನ್ನು ನೀಡಿದ್ದಾರೆ. ಲೇಖಕರು ಶೃಂಗೇರಿ ಮಠ ಮತ್ತು ಸಂಗಮರ ಸಂಬಂಧವನ್ನು ಕುರಿತು ಹೇಳಿದ್ದಾರೆ. ಶ್ರೀ ವಿದ್ಯಾರಣ್ಯರು ಈ ಸಾಮ್ರಾಜ್ಯ ಸ್ಫೂರ್ತಿಯೆಂದು ಹೇಳಿ ಇದಕ್ಕೆ ಆಧಾರ ಕೃತಿಯಾದ ರಾಜಕಾಲನಿರ್ಣಯವನ್ನು ಆಶ್ರಯಿಸಿದ್ದಾರೆ. ಅದೇ ರೀತಿಯಾಗಿ ಚಿನ್ನದ ಮಳೆ, ಮೊಲವು ನಾಯಿಯನ್ನು ಅಟ್ಟಿಸಿದ ದೃಶ್ಯ ಮತ್ತು ಭಂಡಾರವನ್ನು ಹಕ್ಕ ಮತ್ತು ಬುಕ್ಕರಿಗೆ ನೀಡಿದ ದಂತಕತೆಗಳನ್ನು ವಿವರಿಸಿದ್ದಾರೆ. ಆ ಕಾಲದ ವಿದ್ಯಮಾನಕ್ಕೆ ಸಂಬಂಧಿಸಿದಂತೆ ಶಾಸನಗಳಲ್ಲಿ ವಿದ್ಯಾರಣ್ಯರನ್ನು ಕುರಿತು ವಿವರಿಸಿದ ಬಗ್ಗೆ ಮತ್ತು ಸಂಶೋಧಕರಲ್ಲಿ ಮತಭೇದಗಳು ಉಂಟಾಗಿರುವವು ಎನ್ನುವಂತಹ ವಿಚಾರ ಕುರಿತು ಭಿನ್ನಾಭಿಪ್ರಾಯ ಮತ್ತು ಸರ್ವ ಸಮ್ಮತವಾದ ಸಮನ್ವಯ ಮಾರ್ಗವನ್ನು ಕಂಡುಹಿಡಿಯುವುದು ಕಷ್ಟಕರ ಎಂಬುದಾಗಿ ವಿವರಿಸಿದ್ದಾರೆ. ಸಾಮ್ರಾಜ್ಯ ಸ್ಥಾಪನೆಯಲ್ಲಿ ವಿದ್ಯಾರಣ್ಯರ ಹಸ್ತಕ್ಷೇಪ ಇಲ್ಲದೆ ಇರದು ಎಂಬುದಾಗಿ ಹೇಳಿದ್ದಾರೆ. ವಿದ್ಯಾರಣ್ಯರನ್ನು ಕುರಿತು, ಜನಕ ರಾಜಗುರು ಮತ್ತು ರಾಜಮಂತ್ರಿ ಇವುಗಳನ್ನು ದೃಢಪಡಿಸುವ ಪ್ರಥಮ ಮೂರು ದೊರೆಗಳ ಕಾಲದಲ್ಲಿ ಆದಂತಹ ಬೆಳವಣಿಗೆಯನ್ನು ಕುರಿತು ವಿವರಿಸಿದ್ದಾರೆ. ಸಾಕಷ್ಟು ಪ್ರಮಾಣಗಳು ದೊರೆವುದಿಲ್ಲವೆಂದಮಾತ್ರಕ್ಕೆ ಎಲ್ಲವು ಸುಳ್ಳು ಎಂಬುದಾಗಿ ಹೇಳಲು ಸಾಧ್ಯವಿಲ್ಲ. ಐತಿಹಾಸಿಕ ಮಹತ್ವವನ್ನು ಪಡೆಯದೆ ಇದ್ದರು ವಿಜಯನಗರ ಸ್ಥಾಪನೆಗೆ ವಿದ್ಯಾರಣ್ಯರು ಸ್ಫೂರ್ತಿಯನ್ನು, ಪ್ರೇರಣೆಗಳನ್ನು ನೀಡಿದರು ಎಂಬುದಾಗಿ ಹೇಳಿದ್ದಾರೆ. ವಿದ್ಯಾರಣ್ಯರ ಸ್ಫೂರ್ತಿಯಿಂದ ವಿಜಯನಗರ ಎಂಬ ಹೆಸರು ಇದ್ದಿರಬಹುದು ಮತ್ತು ಹರಿಹರನಿಗೆ ಆಧ್ಯಾತ್ಮಿಕ ಗುರುಗಳು ಆಗಿದ್ದಿರಬಹುದು. ಕ್ರಿ.ಶ. 1336 ರಿಂದ ಕ್ರಿ.ಶ. 1356ರ ಕಾಲಘಟ್ಟದಲ್ಲಿ ವಿದ್ಯಾರಣ್ಯರ ಹೆಸರು ವಿಜಯನಗರ ಶಾಸನಗಳಲ್ಲಿ ಬರೆಯುತ್ತಿದ್ದರು. ಅವರ ನಿವಾಸ ಕಾರ್ಯಕಲಾಪಗಳ ಬಗೆಗೆ ನಿಶ್ಚಿತವಾದ ಹೆಚ್ಚಿನ ಸಂದರ್ಭಗಳು ತಿಳಿಯಬರುವುದಿಲ್ಲ. ಬುಕ್ಕರಾಯನು ಕ್ರಿ.ಶ. 1356ರಲ್ಲಿ ವಿದ್ಯಾರಣ್ಯರನ್ನು ಕಾಶಿಯಿಂದ ಬರಮಾಡಿಕೊಂಡನೆಂದು ಶೃಂಗೇರಿಯ ಕಡತದಿಂದ ತಿಳಿದುಬರುತ್ತದೆ ಎನ್ನುವಂತಹ ವಿವರಣೆಯನ್ನು ನೀಡಿದ್ದಾರೆ. ರಾಜಕೀಯದಲ್ಲಿ ವಿದ್ಯಾರಣ್ಯರ ಪಾತ್ರವನ್ನು ಕುರಿತು ವಿವರಿಸಿದ್ದಾರೆ. ಇಮ್ಮಡಿ ಹರಿಹರನ ಕಾಲದಲ್ಲಿ ವಿದ್ಯಾರಣ್ಯರು ಕೆಲಕಾಲ ವಿಜಯನಗರ ಆಸ್ಥಾನದಲ್ಲಿ ಬಹುಗೌರವದ ಸ್ಥಾನವನ್ನು ಅಲಂಕರಿಸಿದ್ದರು ಎನ್ನುವಂತಹ ವಿಚಾರವನ್ನು ತಿಳಿಸಿದ್ದಾರೆ. ಶೃಂಗೇರಿ ಮಠದ ಪ್ರೇರಣೆಯಿಂದಲು ದಕ್ಷಿಣ ಭಾರತದಲ್ಲಿ ಸಂಗಮಪುತ್ರರ ಪ್ರಚಂಡವಾದ ಸಾಹಸ ಪರಾಕ್ರಮದಿಂದ ದಕ್ಷಿಣ ಭಾರತಲ್ಲಿ ಭಾರತೀಯ ಸಂಸ್ಕೃತಿಯನ್ನು ಉದ್ಧರಿಸಲು ಅವತರಿಸಿದ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಮಹಾಕಾರ್ಯವು ಕ್ರಿ.ಶ. 1336ರಲ್ಲಿ ಆರಂಭವಾಗಿ ಕ್ರಿ.ಶ. 1346ರಲ್ಲಿ ಪೂರ್ಣವಾಯಿತು.

ಕರ್ನಾಟಕ ಮತ್ತು ದಕ್ಷಿಣ ಭಾರತದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯ ಅತ್ಯಂತ ಸಂಸ್ಮರಣೀಯವಾಗಿದೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಉದ್ದೇಶ ಮತ್ತು ಆ ಕಾಲಘಟ್ಟದಲ್ಲಿದ್ದಂತಹ ಪರಿಸ್ಥಿತಿ ಮುಮ್ಮಡಿ ಬಲ್ಲಾಳರಾಯನ ಪಾತ್ರ, ದಕ್ಷಿಣ ಭಾರತದ ರಾಜರುಗಳು ಮತ್ತು ಸಂಗಮಪುತ್ರರು ಇವರುಗಳು ಸಾಮ್ರಾಜ್ಯವನ್ನು ಸ್ಥಾಪಿಸಿದರು. ವಿದ್ಯಾರಣ್ಯರು ಶೃಂಗೇರಿಯಲ್ಲಿ ಇದ್ದರಾ ಎನ್ನುವಂತಹ ಪ್ರಶ್ನೆ ಏಳುತ್ತದೆ. ಈ ಒಂದು ಸಾಮ್ರಾಜ್ಯದ ಸ್ಥಾಪನೆಗೆ ವಿದ್ಯಾರಣ್ಯರೇ ಕಾರಣರು ಎನ್ನುವಂತಹ ವಿಚಾರವನ್ನು ಮಂಡಿಸಿದ್ದಾರೆ. ವಾಸ್ತವವಾಗಿ ವ್ಯಾಸತೀರ್ಥರು ಸಾಯನಾಚಾರ್ಯರು, ಜಯತೀರ್ಥರು, ಅಪ್ಪಯ್ಯ ದೀಕ್ಷಿತರು, ಮಾಧವಾಚಾರ್ಯರು, ಮೊದಲಾದ ಮಹಾವಿದ್ವಾಂಸರು ಸಾಮ್ರಾಜ್ಯದ ಶ್ರೇಯಸ್ಸನ್ನು ಬಯಸಿದರು. ಇಂತಹ ಮಹಾಕಾರ್ಯವು ಕೇವಲ ಕೆಲವೇ ವ್ಯಕ್ತಿಗಳಿಂದ ಸಾಧ್ಯವಿಲ್ಲ, ಅಲ್ಲದೆ ಎಲ್ಲರೂ ಜೊತೆಗೂಡಿ ಈ ಒಂದು ಸಾಮ್ರಾಜ್ಯವನ್ನು ಹುಟ್ಟುಹಾಕಿ ಹಿಂದೂ ಧರ್ಮದ ಸಂರಕ್ಷಣೆಯನ್ನು ಮಾಡಿದ ಕಾರ್ಯ ಸ್ಮರಣಾರ್ಹವಾಗಿದೆ.

ಟಿಪ್ಪಣಿ

1. ಪಾಂಡುರಂಗ ದೇಸಾಯಿ, *ವಿಜಯನಗರ ಸಾಮ್ರಾಜ್ಯ*, ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವ ಮಂಡಳ, ಧಾರವಾಡ, 1936.

ವಿಜಯನಗರ ಇತಿಹಾಸದ ಆಕರ ಇಂಡಿಯನ್ ಆ್ಯಂಟಿಕ್ವೇರಿ

ಕೆಳದಿ ಗುಂಡಾಜೋಯಿಸ್

1872ರಿಂದ ಆರಂಭಗೊಂಡ ಇಂಡಿಯನ್ ಆ್ಯಂಟಿಕ್ವೇರಿ ಸಂಚಿಕೆಗಳು ಭಾರತದ ಇತಿಹಾಸ ಸಂಶೋಧನೆಗೆ ಅಮೂಲ್ಯ ಜ್ಞಾನ ಭಂಡಾರಗಳನ್ನು ಒಳಗೊಂಡಿವೆ. ಈ ಕೆಳಗಿನ ಪುರಾತತ್ವ ಮತ್ತು ಇತಿಹಾಸ ಸಂಶೋಧನೆಗಳನ್ನೇ ಗುರಿಯಾಗಿರಿಸಿಕೊಂಡು ಪ್ರಕಟಗೊಂಡಿರುವ ಇಂಡಿಯನ್ ಆ್ಯಂಟಿಕ್ವೇರಿ ಸಮಗ್ರ ಸಂಚಿಕೆಗಳು ವೈವಿಧ್ಯಮಯ ವಿಷಯಗಳನ್ನು ಒಳಗೊಂಡಿವೆಯಲ್ಲದೆ ಈ ಕೆಳಗೆ ನಮೂದಿತವಾದ ವಿಷಯಗಳ ಬಗ್ಗೆ ಹೆಚ್ಚಿನ ಆಕರ ಗ್ರಂಥಗಳಾಗಿವೆ.

ಪುರಾತತ್ವ ಇತಿಹಾಸ ಸಂಶೋಧನೆಗಳು

ಪುರಾತತ್ವ	(Archaeology)
ಶಾಸನಶಾಸ್ತ್ರ	(Epigraphy)
ಲಿಪಿಶಾಸ್ತ್ರ	(Palaeography)
ಹಸ್ತಪ್ರತಿಶಾಸ್ತ್ರ	(Manucriptology)
ಇತಿಹಾಸ	(History)
ನಾಣ್ಯಶಾಸ್ತ್ರ	(Numismatic)
ಪುರಾತತ್ವ ಪ್ರಶ್ನೋತ್ತರಗಳು	(Question and answers about archaeological problems)

ಸಂಪಾದಕರು

1. ರಿಚರ್ಡ್ ಕಾರ್ನಾಕ್ ಟೆಂಪಲ್
2. ಚಾರ್ಲ್ಸ್ ಇ.ಎ.ಡಬ್ಲು ಓಲ್ಡ್ ಹ್ಯಾಂ, ಸಿ.ಎಸ್.ಐ., ಐ.ಸಿ.ಎಸ್.
3. ಡಾ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ಎ.ಎಸ್.ಐ.
4. ಪ್ರೊ. ಡಿ.ಆರ್. ಭಂಡಾರ್‌ಕರ್
5. ಜೆ.ಎ.ಎಸ್. ಬರ್ಗೆಸ್,

ಮುಂತಾದವರ ಖ್ಯಾತ ವಿದ್ವಾಂಸರ ಸಂಪಾದಕತ್ವಗಳಲ್ಲಿ ವೈವಿದ್ಯಮಯ ಸಂಶೋಧನಾತ್ಮಕ ಲೇಖನಗಳು ಪ್ರಕಟವಾಗಿವೆ. ಇಂಡಿಯನ್ ಆ್ಯಂಟಿಕ್ವೇರಿಯಲ್ಲಿರುವ ಸಂಶೋಧನಾತ್ಮಕ ಲೇಖನಗಳು ಅಮೂಲ್ಯ ಲೇಖನ ಸಾಮಗ್ರಿಗಳಾಗಿವೆ.

ಜೆ.ಎಫ್. ಫ್ಲೀಟ್‌ರವರ ಸಂಸ್ಕೃತ ಮತ್ತು ಪ್ರಾಚೀನ ಕನ್ನಡ ಶಾಸನಗಳು, ಮೇಜರ್ ಡಿಕ್ಸನ್‌ರವರ 60 ಶಾಸನಗಳ ಛಾಯಾಚಿತ್ರಗಳು, ಮದರಾಸಿನ ಉನ್ನತಾಧಿಕಾರಿ ವಾಲ್ಟರ್ ಇಲಿಯಟ್‌ರವರ 595 ಹಸ್ತಪ್ರತಿ ಸಂಗ್ರಹಗಳು, ಸಂಪುಟ 11ರಲ್ಲಿರುವ ಅಕ್ಕಣ್ಣ-ಮಾದಣ್ಣ ಕುರಿತು ಕೆಳದಿ ನೃಪವಿಜಯದಲ್ಲಿಯೂ ಕಂಡು ಬರುವ ಆಕರಗಳು, ಲೀಡನ್ ವಿಶ್ವವಿದ್ಯಾಲಯದ ಬೃಹತ್ ತಾಮ್ರ ಶಾಸನ ಮುಂತಾದುವು ವಿಜಯನಗರದ ಆಕರಗಳಿಗೆ ಅಮೂಲ್ಯ ಮಾಹಿತಿಗಳನ್ನು ನೀಡುತ್ತವೆ. ಸುಮಾರು 30 ಸಂಪುಟಗಳಲ್ಲಿರುವ ಬ್ರಿಟಿಷರ ಕಾಲದಲ್ಲಿ ಶ್ರೇಷ್ಠ ಪುರಾತತ್ವ ವಿದ್ವಾಂಸರುಗಳಿಂದ ಬೆಳಕು ಕಂಡ ಸಂಶೋಧನಾ ಕೃತಿಗಳು ಮೂಲ ಸಾಮಗ್ರಿಗಳನ್ನೊಳಗೊಂಡಿದ್ದು ಮುಂದಿನ ಸಂಶೋಧನೆಗಳಿಗೆ ದಾರಿದೀಪವಾಗಿದೆ. ತಲಸ್ಪರ್ಶಿಯಾಗಿ ಶೋಧಿಸಿ ವಿಜಯನಗರ ಇತಿಹಾಸವನ್ನು ಸಿದ್ದಪಡಿಸಿದ ವಿದೇಶೀ ವಿದ್ವಾಂಸರ ಲೇಖನಗಳು ಸಮರ್ಪಕವಾಗಿ ಆಕರ ಸಾಮಗ್ರಿಗಳನ್ನು ದೊರಕಿಸಿಕೊಡಬಲ್ಲದು. ಹುಲ್ಟ್ಜ್, ಸಿವೆಲ್, ಫ್ಲೀಟ್, ಕೀಲ್ ಹಾರ್ನ್ ಮೇಜರ್ ಜೆ.ಎಸ್. ಕಿಂಗ್, ಲೆಫ್ಟಿನೆಂಟ್ ಹೇಗ್ ರಿಚಾರ್ಡ್ ಟೆಂಪಲ್, ಎಸ್.ಎಮ್. ಎಡ್ವರ್ಡ್, ಶ್ರೀಕಂಠಶಾಸ್ತ್ರಿ, ಬ್ಯಾನರ್ಜಿ, ಹಯವದನರಾವ್, ಸಾಲೆತೊರೆ ಮುಂತಾದವರ ಲೇಖನಗಳು ಸಂಪುಟಗಳ ಮೆರುಗನ್ನು ಇಮ್ಮಡಿಗೊಳಿಸಿವೆ. ರಾಮಶರ್ಮರವರಂತೂ ವಿಜಯನಗರ ಚರಿತ್ರೆಗೆ ಇಂಡಿಯನ್ ಆ್ಯಂಟಿಕ್ವೇರಿಯನ್ನು ಧಾರಾಳವಾಗಿ ಬಳಸಿಕೊಂಡಿದ್ದಾರೆ.

53

ನಾಗಮಂಗಲ ತಾಲ್ಲೂಕಿನ ವಿಜಯನಗರದ ಶಾಸನಗಳು

ಡಾ. ಗಿರಿಜಾ

ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಸಮಯದಲ್ಲಿ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು ಒಂದು ಮುಖ್ಯ ಆಡಳಿತ ಕೇಂದ್ರವಾಗಿತ್ತು. ಈ ತಾಲ್ಲೂಕಿನ ಸುತ್ತಮುತ್ತಲ ಕೆಲವು ಗ್ರಾಮಗಳಲ್ಲಿ ಈ ಅರಸರ ಅವಧಿಯ ಶಾಸನಗಳು ಕಂಡುಬರುತ್ತವೆ. ಅವುಗಳಲ್ಲಿ ಬಹುಪಾಲಿನವು ದಾನ ಶಾಸನಗಳೇ ಆಗಿವೆ. ಈ ಲೇಖನದಲ್ಲಿ ತಾಲ್ಲೂಕಿನಲ್ಲಿ ದೊರೆತಿರುವ ವಿಜಯನಗರ ಸಾಮ್ರಾಜ್ಯದ ಶಾಸನಗಳ ಸೂಕ್ಷ್ಮ ಅಧ್ಯಯನವಿದಾಗಿದೆ.

ಮಂಟಪಗಳು

ಕ್ರಿ.ಶ. 1511ರ ನಾಗಮಂಗಲ ಗ್ರಾಮದ ಶಾಸನವು ಕೃಷ್ಣದೇವರಾಯನ ಆಳ್ವಿಕೆಯ ಸಮಯದಲ್ಲಿ ಅರಮನೆಯ ಬೇಹಾರಿಗಳು ಗುಮ್ಮಳಾಪುರದ ಅಕ್ಕನ ಚೆನ್ನಿ ಸೆಟ್ಟಿಯರ ಮಕ್ಕಳು ಹೊನ್ನಿ ಸೆಟ್ಟಿಯರ ಶ್ರೀಮದನಾದಿ ಅಗ್ರಹಾರ ಶ್ರೀ ವೀರಬಲ್ಲಾಳ ಚತುರ್ವೇದ ಭಟ್ಟಾರತ್ನಾಕರವಾದ ನಾಗಮಂಗಲದ ವೀರಭದ್ರದೇವರ ರಂಗಮಂಟಪದ ಮುಂದೆ ಗಂಧಗೋಡಿ ಮಂಟಪದ ಸೇವೆಯನ್ನು ಮಾಡಿ ವೀರಭದ್ರದೇವರಿಗೆ ಸಮರ್ಪಿಸಿದ ವಿಷಯವನ್ನು ಉಲ್ಲೇಖಿಸುವುದು. ಈ ಶಾಸನವನ್ನು ಬರೆದಾತ ವೀರಾಚಾರಿ ಎಂದು ತಿಳಿಸಿದೆ. ಕ್ರಿ.ಶ. 1518ರ ಬೆಳ್ಳೂರು ಶಾಸನವು ತೊರಗಲೆಯ ದುರ್ಗದ ಅಧಿಪತಿ ರಾಮಪ್ಪರಾವುತರ ಮಕ್ಕಳು ಹರಿದಾಸರಾವುತರು ಬೆಳ್ಳೂರಿನ ಪ್ರಸನ್ನ ಮಾಧವ ದೇವರ ಮುಂದೆ ಉತ್ಸವಮಂಟಪ, ದೀಪಮಾಲೆಯ ಕಂಭ, ಬಲಿಪೀಠವನ್ನು ನಿಲ್ಲಿಸಿದರೆಂದು ಉಲ್ಲೇಖಿಸುವುದು.

ಕಂಭಗಳನ್ನು ನಿಲ್ಲಿಸುವುದಕ್ಕಾಗಿ ನೀಡಿದ ದಾನ

ಕ್ರಿ.ಶ. 14–15ನೇ ಶತಮಾನಕ್ಕೆ ಸೇರುವ ನಾಗಮಂಗಲದ ಶಾಸನವು ಸಮಸ್ತ ಗುಣ ಸಂಪನನಾದಂತ ಸಂಕರಮು ಕರಿಹಣಿಕರು ಗದ್ಯಾಣ ನಾಲ್ಕು ಕೊಟ್ಟು ಮಾಡಿಸಿದ ಕಂಭ ಎಂದಿದೆ. ಕ್ರಿ.ಶ. 1472ರ ದೇವಲಾಪುರದ ಶಾಸನವು ಕಠಾರಿ ಸಾಳುವ ನರಸಿಂಗಯ್ಯದೇವ ಮಹಾ ಅರಸರು ಹಳ್ಳಿಕಾರ ಲಚ್ಚೆನಾಯ್ಕರ ಮಕ್ಕಳು ಚಿಕ್ಕಲ್ಲಪ್ಪನಾಯ್ಕರಿಗೆ ಪಾಲಿಸಿದ ದೇವಲಾಪುರದಲ್ಲಿ ಸಾವಿರ ಕಾಲ ಇದ್ದಲ್ಲಿ ಲಕ್ಷುಮಿಕಾಂತ ದೇವರ ಸನ್ನಿಧಿಯಲು ಸರ್ವ ಪ್ರಾಚೀನಕರ್ಮವಿಪಾಕ ಮಹಾದಾನವ ಮಾಡಿದ ಕಾಲದಲ್ಲಿ ಸಕಲ ಐಶ್ವರ್ಯ ಭಾಗ್ಯವಾಗಿ ದೀಪಾಮಾಲೆ ಕಂಭವನ್ನು ಬಾಗಿಲವಾಡವನು

ನೀಡಿದ ದಾಖಲೆಯಾಗಿದೆ. ಕ್ರಿ.ಶ. 14–15ನೇ ಶತಮಾನಕ್ಕೆ ಸೇರಿದ ಸುಬ್ಬರಾಯನ ಕೊಪ್ಪಲುವಿನ ಶಾಸನವು ಮಹಾಪ್ರಧಾನಿ ಬೀಚಿಯ ದಣಾಯಕರ ಕುಮಾರ ಜವನಿಕೆನಾರಾಯಣ ಬಲಪದಣಾಯಕರ ದಾದಿ ಗೋವಿದೇವಿಯರು, ನಾಗಣನವರು ಮಾಡಿಸಿದ ಕಂಭ ಎಂದಿದೆ. ಕ್ರಿ.ಶ. 1590ರ ಬಿಂಡಿಗನವಲೆಯ ಶಾಸನವು ಶ್ರೀಮಾತಾ ತಾಚಾಸೆವಲರವರು ಕಂಭ ದಾನ ಮಾಡಿದ್ದನ್ನು ತಿಳಿಸುವುದು. ಕ್ರಿ.ಶ. 1460ರ ಸುಬ್ಬರಾಯನ ಕೊಪ್ಪಲು ಗ್ರಾಮದ ಶಾಸನವು ಬೂವನಹಳ್ಳಿಯ ಅವಸಗೌಡ ಚೌಡಗೌಡಗಳಿಗೆ ಮೇಲುಗೊಡಗಿ ತಗ್ಗಿನಲ್ಲಿ ಗದ್ದೆ ಕಂಭ 60 ಆ ಬೂವನಹಳ್ಳಿಯಿಂದ ಉತ್ತರಕ್ಕೆ ಹಿರಿಯ ಅಕ್ಕಿಯಿಂದ ಪಶ್ಚಿಮಕ್ಕೆ ಮೇಲುಗೊಡಗಿ ಕಂ 200 ಹಿರಿಯಕೆರೆಯ ಕೆಳಗೆ ಪಗಿಂ ದಿಣೆಯ ಮೇಲೆ ಸೊಲಗೆ ಕೊಡಿಗೆ ಕಂ 60 ದೇವರ ಕೊಡಗಿ ಓಣಿಯಿಂದ ಉತ್ತರಕ್ಕೆ ಬೆದ್ದಲು 300. ಈ ಗದ್ದೆ ಬೆದ್ದಲು ಹೊರವಾದಂದು ದಿಬ್ಯಮಹಾಜನಗಳು ಆ ಯವಸಗೌಡ ಚೌಡಗೌಡಗಳಿಗೆ ನಟ್ಟು ಕೊಟ್ಟ ಕಲ್ಲು. ಈ ಕಂಭವನ್ನು ಬಿಟ್ಟಿತಮ್ಮನು ಮಾಡಿಸಿದನು ಎಂದಿದೆ.

ವಸ್ತುಗಳ ರೂಪದಲ್ಲಿ ನೀಡಿದ ದಾನಗಳು

ದೇವಸ್ಥಾನದ ಇಲ್ಲವೆ ಸಾರ್ವಜನಿಕ ಸಂಸ್ಥೆಗಳಿಗೆ ಅಗತ್ಯ ವಸ್ತುಗಳ ಅವಶ್ಯಕತೆಯನ್ನು ಲಕ್ಷಿಸಿ ಅಂತಹ ವಸ್ತುಗಳನ್ನು ದಾನ ರೂಪದಲ್ಲಿ ನಿಡುವಂತಹ ಸತ್ಪರಂಪರೆ ನಮ್ಮಲ್ಲಿ ಕಾಣುತ್ತವೆ. ಈ ತಾಲ್ಲೂಕಿನ ಶಾಸನಗಳಲ್ಲಿಯೂ ಇಂತಹ ಸಾಮಗ್ರಿ ರೂಪದ ದಾನ ನೀಡಿರುವುದನ್ನು ಕಾಣುತ್ತೇವೆ. ಕ್ರಿ.ಶ. 1563ರ ಹೊನ್ನಾವರದ ಶಾಸನವು ಸದಾಸಿವರಾಯನ ಆಳ್ವಿಕೆಯ ಅವಧಿಯಲ್ಲಿ ಜಗದೇಕರಾಯ ವೊಡೆಯರ ಕಾರ್ಯಕರ್ತರಾದ ಅಲುಲಮಲುಕ ವೊಡೆಯರಿಗೆ ಅನೇಕ ಯಶಸ್ಸಾಗಬೇಕೆಂದು ತಂಮೋಜಿ ಪಂಡಿತರು ಶ್ರೀ ಲಕ್ಷ್ಮೀಕಾಂತದೇವರಿಗೆ ನಂದಾದೀಪ ಇಲ್ಲದ್ದಕ್ಕೆ ನಂದಾದೀಪ ದಾನ ನೀಡಿದ್ದನ್ನು ದಾಖಲಿಸುವುದು.

ತೆರಿಗೆ ದಾನ

ಈ ತಾಲ್ಲೂಕಿನ ಕೆಲವು ಶಾಸನಗಳಲ್ಲಿ ವಿವಿಧ ಬಗೆಯ ತೆರಿಗೆಗಳನ್ನು ದೇವಾಲಯದ ಪೂಜಾಕಾರ್ಯಗಳಿಗಾಗಿ ಊರಿನ ಹಿರಿಯರು ಮತ್ತು ಸಾರ್ವಜನಿಕರು ದಾನ ಬಿಟ್ಟ ಉಲ್ಲೇಖವನ್ನು ನೀಡುತ್ತವೆ. ಇವುಗಳು ಇಂತಿವೆ. ಕ್ರಿ.ಶ. 15–16ನೇ ಶತಮಾನಕ್ಕೆ ಸೇರಿದ ಕೆಳಗೆರೆ ಗ್ರಾಮದ ಶಾಸನವು, ಗರರಾಮದ ಹಲಗೆಕಾರನಾಥಗೆ ಪೆಂಮಾಳೆ ಹಳ್ಳಿಯಲ್ಲಿನ ಹತ್ತು ಕೊಳಗ, ಮೂರು ಬಳ್ಳ ಗದ್ದೆಯನ್ನು ಕೊಡಗೆ ಕೊಟ್ಟು, ಆ ಗದ್ದೆಯ ಸಿದ್ದಾಯವನ್ನು ಎಂದೆಂದಿಗೂ ಕಟ್ಟುತ್ತ ಬರುವೆನು ಎಂದು ತಿಳಿಸುವ ಈ ಶಾಸನಕ್ಕೆ ಕೇಶವದೇವನ ಸ್ವಹಸ್ತದ ಒಪ್ಪವಿದೆ ಎಂದು ತಿಳಿಸುವುದು. ಕ್ರಿ.ಶ. 1537ರ ದೇವರಹಳ್ಳಿಯ ಶಾಸನವು ಅಚ್ಚುತದೇವಮಹಾರಾಯರು ಆಳ್ವಿಕೆಯಲ್ಲಿ ವೆಂಕಟಾದ್ರಿನಾಯಕನಿಗೆ ಪುರದ ಮಾಗಣಿಗೆ ಸಲುವ ದೇವಲಾಪುರ ಸ್ತರ (ಸ್ಥಳ)ಕ್ಕೆ ಹೊಂದಿಕೊಂಡಿರುವ ಅಂಮನಪುರದ ತೆರಿಗೆಯನ್ನು ಕೊಟ್ಟಂತ ಉಲ್ಲೇಖವಿದೆ. ಕ್ರಿ.ಶ. 1529ರ ದೇವರಹಳ್ಳಿಯ ಮತ್ತೊಂದು ಶಾಸನವು, ತಪಸೀರಾಯನ ಭಂಡಾರಕ ಶ್ರೀಮಾನ್ ಮಹಾನಾಯಕಚಾರ್ಯ ಬಯಲಹುಲಿ ಅವರೆಗೆರೆಯ ಗಿರಿಯಂಣನಾಯಕರ ಮಕ್ಕಳು ವಿರುಪಣನಾಯಕರು ಲಕ್ಷ್ಮೀದೇವಿಯರ ಗುಡಿ ಕಟ್ಟುವುದಕ್ಕೆ, ಧೂಪ, ದೀಪ, ನೈವೇದ್ಯಕ್ಕೆ ಸುಂಕದ 114 ವರಹವನ್ನು ಬಿಟ್ಟುಕೊಟ್ಟ ವಿಷಯವನ್ನು ತಿಳಿಸುವುದು. ಕ್ರಿ.ಶ. 16ನೇ ಶತಮಾನಕ್ಕೆ ಸೇರಿದ ನಾಗಮಂಗಲದ ಶಾಸನವು ಭಟ್ಟರತ್ನಾಕರವಾದ ನಾಗಮಂಗಲದ ಅಸೇಷಮಹಾಜನರುಗಳಿಗೆ ಈ ಊರ ವೀರಭದ್ರ ದೇವರಿಗೆ ಪ್ರತಿವರ್ಷ ಕಟ್ಟುತ್ತ ಬಂದಂತ ಮೊದಲ ತೆರ 5 ಪಣವನ್ನು ಕಟ್ಟುವನು. ಉಳಿದ ಅಳಿಬಳಿಯಲ್ಲವನ್ನು ವೀರಭದ್ರದೇವರಿಗೆ ಸಲುವಾಗಿ ದಾನ ಬಿಟ್ಟರೆಂದು ತಿಳಿಸುವುದು ಮತ್ತು ಈ ಶಾಸನಕ್ಕೆ ಆ ಮಹಾಜನಗಳ ಒಪ್ಪ, ಶಂಖ, ಚಕ್ರ ಹಾಗೂ ಈ ಮಹಾಜನಗಳ ನಿಯೋಗದಿಂದ ಬರೆದ ಸೇನಬೋವ ಶ್ರೀರಂಗದೇವನ

ಮಗ ಕಾವಣ್ಣ, ಬಾಲ್ದಳಿಸೆಟ್ಟಿಯ ಧರ್ಮ ಎಂದು ದಾಖಲಿಸಿದೆ. ಕ್ರಿ.ಶ. 1473ರ ದೇವಲಾಪುರದ ಶಾಸನವು ಅಮೃತೂರ ಸುಂಕದ ಮಾರುದಾನ ಸೆಟ್ಟರು ತಮ್ಮ ಸುಂಕಕೆ ಸಲುವ ಜೇಡರ ಮೊಜ್ಜನ ಮಗ್ಗ . . ಕ್ರಕ್ಕೆ ಸಲುವ 6 ಹಣವನ್ನು ಲಕ್ಷುಮಿಕಾಂತನ ದೇವರ ವಸ್ತ್ರಕ್ಕೆ ಧಾರೆ ಎರೆದು ಕೊಟ್ಟದ್ದನ್ನು ಉಲ್ಲೇಖಿಸುವುದು. ಕ್ರಿ.ಶ. 1483ರ ಶಾಸನವು ದೇವಲಾಪುರದ ಬಿಂಡಿಗನವಿಲೆಯ ತಿಮರಸರ ಮಗ ಕೋನೇರಿ ದೇವಗಳು ದೇವಲಾಪುರದಲ್ಲಿ ತಮ್ಮ ಸುಂಕಕ್ಕೆ ಸಲ್ಲುವ ಮೊಜ್ಜನ ಮರೆ ಮಗ್ಗಕೆ ಸಲುವ 3 ಹಣವನ್ನು ಲಕ್ಷುಮಿಕಾಂತನ ಮೈ ಭೋಗಕ್ಕೆ ಧಾರೆ ಎರೆದು ಕೊಟ್ಟದನ್ನು ಉಲ್ಲೇಖಿಸುವುದು. ಕ್ರಿ.ಶ. 1484ರ ಚುಂಚನಹಳ್ಳಿ ಶಾಸನವು ವಿರೂಪಾಕ್ಷಪುರಕ್ಕೆ ಚುಂಚುನ ಭಯಿರವದೇವರಿಗೆ ಕಠಾರಿಸಾಳುವ, ಸಾಳುವ ನರಸಿಂಗರಾಜ ವೊಡೆಯರ ಮನೆಯ ಪ್ರಧಾನ ವಿರುಪಾಕ್ಷದೇವ ಅಣಗಳು ಆರಣಿಯ ಸ್ಥಳದ ಚುಂಚನಹಳ್ಳಿಯ ಗ್ರಾಮವನು ಮಕರ ಸಂಕ್ರಾಂತಿಯ ದಿನ ದಾನವಾಗಿ ಕೊಟ್ಟ ವಿಷಯ ಉಲ್ಲೇಖಿಸುವುದು. ಕ್ರಿ.ಶ. 1460ರ ಕಡುಗುಬಾಳದ ಶಾಸನವು ಶ್ರೀರಂಗರಾಯ ಮಹಾರಾಯರು ಆಳ್ವಕೆ ಮಾಡುವ ಸಂದರ್ಭದಲ್ಲಿ ಸುರಗಿಯ ದೇವಪ್ಪನಾಯಕರು ಕಡುಗಬಾಳ ರಾಮಲಿಂಗದೇವರ ಅಮೃತಪಡಿಗೆ ತಮ್ಮ ತಮ್ಮ ನಾಯಕತನಕ್ಕೆ ಸಲುವ ದೇವಲಾಪುರ ಗ್ರಾಮಕ್ಕೆ ಸೀಮಾಸಂಬಂಧ ಗ್ರಾಮದ ಕಾಡಾರಂಭ, ನೀರಾರಂಭ, ಆಣೆ, ಅಚ್ಚು, ಕಟ್ಟು, ಮನೆತೆರೆ ಆಡುತೆರೆ ಈ ಗ್ರಾಮದ ದೇವರಾದ ರಾಮನಾಥದೇವರಿಗೆ ದೇವಪ್ಪನಾಯಕರು ಬಿಟ್ಟ ಉಲ್ಲೇಖವಿದೆ.

ಭೂಮಿದಾನ

ದೇವಾಲಯದ ಪೂಜೆ ಪುನಸ್ಕಾರಗಳಿಗಾಗಿ, ಜೀರ್ಣೋದ್ಧಾರಕ್ಕಾಗಿ, ಮುಂತಾದ ಕಾರ್ಯಗಳಿಗಾಗಿ ಭೂಮಿ ದಾನ ನೀಡಿದಂತ ವಿಷಯವನ್ನು ಉಲ್ಲೇಖಿಸುವ ಅನೇಕ ಶಾಸನಗಳು ಈ ತಾಲ್ಲೂಕಿನಲ್ಲಿ ಕಾಣಸಿಗುತ್ತವೆ. ಕ್ರಿ.ಶ. 15ನೇ ಶತಮಾನದ ಕೆಳಗೆರೆಯ ಈ ಶಾಸನವು ಬ್ರಾಹ್ಮರ ಸ್ವಯಾರ್ಜಿತವೊಕ್ಕಲು ಕೊಡಗೆಯಾದ ಬೀಜವರಿ ಗದ್ದೆ, ಹೊಲ, ತೋಟ, ಹಿರಿಯ ಗದ್ದೆಗಳನ್ನು ಮತ್ತು ಈ ಪ್ರದೇಶದ ನಾಲ್ಕು ಸೀಮೆಯನ್ನೊಳಗೊಂಡಂತ ಭೂಮಿಯನ್ನು ಸರ್ವಮಾನ್ಯವಾಗಿ ದಾನ ಬಿಟ್ಟ ವಿಷಯ ತಿಳಿಸುವುದು. ಈ ದಾನವನ್ನು ಯಾರಿಗೆ ಎಂಬ ವಿಷಯ ಸ್ಪಷ್ಟವಿಲ್ಲ. ಕಾರಣ ಶಾಸನದ ಅಕ್ಷರ ಅಳಸಿದೆ ಹಾಗೂ ಈ ಶಾಸನವು ಪುರವೀರ, ಹೊನ್ನಪಾತ್ಮಜ, ವರದಪ್ಪರಾಯರ ಹೆಸರನ್ನು ಉಲ್ಲೇಖುಸುವುದು. ಬಹುಶಃ ಇವರೇ ದಾನಿಗಳಾಗಿರಬೇಕು. ಕ್ರಿ.ಶ. 1457ರ ಮಾದಿಹಳ್ಳಿಯ ಶಾಸನವು ಮಲ್ಲಿಕಾರ್ಜುನರಯನ ಆಳ್ವಿಕೆಯ ಸಮಯದಲ್ಲಿ, ಮಾದೆಯನಾಯಕರು ತಮ್ಮ ಅನುಮತಿಯಿಂದ (ಗ್ರಾಮನಾಮ ಅಳಿಸಿದೆ) ಸಲುವ ದೇವಲಾಪುರದ ಕಾಲುವಳಿ ಮಾದಿಹಳ್ಳಿಯನ್ನು, ಮಲುನಾಯಕನಹಳ್ಳಿಯನ್ನು ತಿರುಮಲದೇವರ ಅಂತರಂಗ ಭೋಗಕ್ಕೆಂದು ಕೊಟ್ಟ ಹೊಲ ಎಂದಿದೆ. ಕ್ರಿ.ಶ. 15–16ನೇ ಶತಮಾನಕ್ಕೆ ಸೇರುವ ದೇವರಹಳ್ಳಿಯ ಶಾಸನವು ತಿರುಮಲದೇವರ ನಂದಾದೀಪಕೆ ಎಣ್ಣೆಯ ಗಾಣ, ಹೊಲವನ್ನು ದಾನ ಕೊಟ್ಟದ್ದಾಗಿ ತಿಳಿಸುವುದು. ಕ್ರಿ.ಶ. 1329ರ ನಾಗಮಂಗಲದ ಶಾಸನವು ಶ್ರೀ ಬಲ್ಲಾಳ ಚತುರ್ವೇದಿ ನಾಗಮಂಗಲದ ಶ್ರೀ ಚೆನ್ನಕೇಶವ ದೇವರಿಗೆ ಉತ್ತರಾಯಣ ಸಂಕ್ರಮಣದಂದು ಕರದಾಳ ಮಲ್ಲಿದೇವನು ಆತನ ಹೆಂಡತಿ ಚನ್ನದೇವಿಯವರು ಹೊಲತ್ತಿಯಲ್ಲಿಯ ಭೂಮಿಯನ್ನು ಮತ್ತು ದೇವರಿಗೆ ಕ್ಷೀರ ಧಾರೆಯನೆರೆದರು ಎಂದು ತಿಳಿಸುವುದು.

ಕೆರೆ ನಿರ್ಮಾಣಕ್ಕೆ ಕೊಟ್ಟ ದಾನ

ಕೆರೆಗಳು ಗ್ರಾಮದ ಜನ ಜಾನುವಾರುಗಳಿಗೆ, ವ್ಯವಸಾಯಕ್ಕೆ, ನಿತ್ಯದ ಹಲವಾರು ಚಟುವಟಿಕೆಗಳಿಗೆ ತುಂಬ ಉಪಯುಕ್ತವಾಗಿದ್ದು, ಈ ಕಾರಣ ಪ್ರತಿ ಗ್ರಾಮಗಳಲ್ಲಿ ಒಂದು ಕೆರೆಯನ್ನು ಸಾಮಾನ್ಯವಾಗಿ ನಿರ್ಮಿಸಿದ್ದನ್ನು ಕಾಣುತ್ತೇವೆ.

ಇಂತಹ ಶಾಸನೋಲ್ಲೇಖಿತ ಕೆರೆಗಳನ್ನು ಈ ತಾಲ್ಲೂಕಿನಲ್ಲಿಯೂ ಕಾಣುತ್ತೇವೆ. ಕ್ರಿ.ಶ. 1531-32ರ ಶಿವಹಳ್ಳಿಯ ಶಾಸನವು ಬಳಗುಂದಿಯ ತಿಪಯನ ಮಗ ಕದರೆನಾಯಕ ಕಟಿಸಿದ ಕೆರೆ ಎಂದು ದಾಖಲಿಸುವುದು. ಕ್ರಿ.ಶ. 1391ರ ದಡಗ ಗ್ರಾಮದ ಶಾಸನವು ಕೆರೆಯನ್ನು ಕಟ್ಟಿಸಿದ ಹಾಗೂ ಅದನ್ನು ಉಭಯ ಧರ್ಮಕ್ಕೆ ಸಲ್ಲುವಂತೆ ದಾನಕೊಟ್ಟ ವಿಷಯವನ್ನು ದಾಖಲಿಸುವುದು. ಕ್ರಿ.ಶ. 1521ರ ದೊಂದೆಮಾದಿಹಳ್ಳಿಯ ಶಾಸನವು ಶ್ರೀಮದನಾದಿಯ ಅಗ್ರಹಾರವಾದ ಭಟ್ಟರತ್ನಾಕರವಾದ ನಾಗಮಂಗಲದ ಅಶೇಷಮಹಾಜನಗಳು ಈ ಊರ ಜನ್ನಿಕೊಚಿಗಳ ಮಗ ವಿಠಣನವರಿಗೆ ಕೊಟ್ಟ ಓಲೆಯ ಕ್ರಮವೆಂದರೆ ನಮ್ಮ ಹೊಸಹಳ್ಳಿಯ ಪೂರ್ವಕೆ ಹೊಲದ ಒಳಗೆ ಮಲ್ಲಿಗೆ ದಡುಪಿನ ಮಾವಿನಹಳ್ಳವು, ನವಿಲಹಳ್ಳವು, ಕೂಡಿದಲ್ಲಿ ಕೆರೆ ಕಟ್ಟುವಂತಾಗಿ ಕೊಟ್ಟರು. ಈ ಕೆರೆಯನ್ನು ಕಟ್ಟಿದ್ದಕ್ಕೆ ಈ ವಿಠಣನಿಗೆ ಕೆರೆಗೊಡಂಗೆಯ ಕೊಟ್ಟ ಮರಿಯಾದೆ. ಈ ಮಾಯಿದೇವಿಯ ಕೆರೆಯ ಕೆಳಗೆ ಕೋಡಿಯ ಹಂತದಿಂದ, ತುಂಬಿಹಂತದಿಂದ, ಎಷ್ಟು ಗದ್ದೆ ಆಯಿತ್ತೊ ಅವಿಷ್ಟು ಗದ್ದೆಯೊಳಗೆ ನಾಲ್ಕರಲ್ಲಿ ಒಂದು ಭಾಗವನ್ನು ಏರಿಯ ಮೊದಲಲ್ಲಿ ಪೂರ್ವ-ಪಶ್ಚಿಮವಾಗಿ ನಾಲ್ಕನೇ ಒಂದು ಭಾಗವನ್ನು ಸರ್ವಬಾಧೆ ಪರಿಹಾರಕ್ಕಾಗಿ ಸರ್ವಮಾನ್ಯವಾಗಿ ಧಾರಾಪೂರ್ವಕಂ ಮಾಡಿ ಈ ವಿಠಣನವರಿಗೆ ನಾಗಮಂಗಲದ ಅಶೇಷ ಮಹಾಜನಗಳು ಕೆರೆಗೊಡಗೆಯ ನಾಲ್ಕರಲೊಂದು ಭಾಗವನ್ನು ದಾನಕೊಟ್ಟ ವಿಷಯವನ್ನು ತಿಳಿಸುವುದು. ಇದನ್ನು ಮಹಾಜನಗಳ ನಿಯೋಗದಿಂದ ಬರೆದಾತನು ಕುಳಾಗ್ರಣಿ ಅಪ್ಪಯ್ಯನ ಮಗ ಸೇನಬೋವ ಶ್ರೀರಂಗ ಎಂದಿದೆ.

ಗ್ರಾಮದಾನ

ಕ್ರಿ.ಶ. ದೇವಾಲಯಗಳ ಪೂಜೆ ಪುನಸ್ಕಾರಕ್ಕಾಗಿ, ಜೀರ್ಣೋದ್ಧಾರಕ್ಕಾಗಿ, ದೇವಾಲಯದ ಕೆಲಸ ಮಾಡಿದ್ದಕ್ಕಾಗಿ, ದೇವರ ಅಂಗರಂಗಭೋಗಕ್ಕೆ, ತಂದೆ, ತಾಯಿಗಳಿಗೆ ಪುಣ್ಯವಾಗಲಿ ಎಂದು ಹೀಗೆ ಅನೇಕ ಕಾರಣಗಳಿಗಾಗಿ ಗ್ರಾಮಗಳನ್ನು ದಾನ ನೀಡಿದ ಬಗ್ಗೆ ಈ ತಾಲೂಕಿನ ಶಾಸನಗಳು ದಾಖಲಿಸಿವೆ. ಕ್ರಿ.ಶ. 1444ರ ಮುತ್ಸಂದ್ರದ ಶಾಸನವು ದೇವಲಾಪುರದ ಮಲೆನಾಯಕನಹಳ್ಳಿಯ ತಿರುಮಲದೇವರಿಗೆ ತೆಪ್ಪದ ಮುದ್ದೆನಾಯಕರ ಮಕ್ಕಳು ನಾಗೆಯನಾಯಕರು ದೇವರ ಅಮೃತಪಡಿಗೆ ತಮ್ಮ ನಾಯಕತನಕ್ಕೆ ಸಲುವ ದೇವಲಾಪುರದ ಸ್ಥಳದ ಹೊರ ವೃತ್ತಿಯ ಮುದಸಮುದ್ರದ ಗ್ರಾಮವನು ಕೊಟ್ಟ ವಿಷಯವನ್ನು ಹೊಂದಿದೆ. ಕ್ರಿ.ಶ. 1545ರ ಹೊನ್ನೇನಹಳ್ಳಿಯ ಶಾಸನವು ಸದಾಶಿವರಾಯನ ಆಳ್ವಿಕೆಯ ಸಂದರ್ಭದಲ್ಲಿ ಬರೆಸಲಾಗಿದೆ. ಈ ಶಾಸನವು ತುಂಗಭದ್ರ ತೀರದ ವಿಠಲೇಶ್ವರ ಸನ್ನಿಧಿಯಲ್ಲಿ ವಿವಿಧ ಶಾಖೆಯ, ಗೋತ್ರದ ಬ್ರಾಹ್ಮಣರಿಗೆ ದಾನ ಕೊಟ್ಟ ವಿಷಯವನ್ನು ಮತ್ತು ಪೆನುಗೊಂಡ ಮಹಾರಾಜ್ಯದ ಹೊಯ್ಸಳ ನಾಡೊಳಗಿನ ಬೆಲೂರು ಸೀಮೆಯಲ್ಲಿ ಪ್ರಾಚೀನ ಬೆನಕನಕೆರೆ, ಹೊಡುಕೇಕಟ್ಟೆ ತಟಾಕಾ ನಿರ್ಮಿಸಿದಂತೆ ತಿಳಿಸುವುದು. ಕ್ರಿ.ಶ. 1512ರ ದೊಡ್ಡಜಟಕ ಗ್ರಾಮದ ಶಾಸನವು ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಹೊಯ್ಸಳದೇಶದ ವೇಲೂರ ಸೀಮೆಯೊಳಗೆ ಸೇರಿದ ಹಿರಿಜೆಟ್ಟಿಗಹಳ್ಳಿಗೆ, ಚಿನ್ನಾದೇವಿಪುರ ಎಂದು ಪ್ರತಿನಾಮ ಇತ್ತೆಂದು ತಿಳಿಸುವುದು. ಇಂದು ಈ ಗ್ರಾಮಕ್ಕೆ ದೊಡ್ಡಜಟಕ ಎಂದು ಕರೆಯಲ್ಪಡುತ್ತಿದೆ. ಈ ಗ್ರಾಮದ 20 ವೃತ್ತಿಗಳನ್ನು ಕೆಲವು ಬ್ರಾಹ್ಮಣರಿಗೆ ಹಂಚಿದ ವಿಷಯವನ್ನು ತಿಳಿಸುವುದು. ಈ ಶಾಸನ ಬರೆದಾತ ಮಲ್ಲಣಾಚಾರ್ಯರ ಮಗ ವೀರಣಾಚಾರ್ಯ ಎಂದಿರುವುದು. ಈ ಗ್ರಾಮಕ್ಕೆ ಹಿಂದೆ "ಹಿರಿಜಟ್ಟಿಗಹಳ್ಳಿ" ಎಂಬ ಹೆಸರು ಬಂದಿರಲು ಕಾರಣವೇನಿರಬಹುದು ಎಂದು ಈ ಕೆಳಗಿನಂತೆ ನೋಡಬಹುದು :-

"ಹಿರಿಜಟ್ಟಿಗಹಳ್ಳಿ" - "ಜಟ್ಟಿಗ" ಅಂದರೆ ವೀರ, ಕುಸ್ತಿಮಾಡುವವ, ಪೈಲವಾನ ಎಂಬ ಅರ್ಥಗಳಿವೆ. ಹಿಂದೆ ಈ ಹಿರಿಜಟ್ಟಿಗಹಳ್ಳಿಯಲ್ಲಿ ಗರಡಿಮನೆ ಇದ್ದು, ಇಲ್ಲಿ ಪರಿಣಿತಿ ಪಡೆದ ಒಬ್ಬ ಹಿರಿಜಟ್ಟಿಗ ಇದ್ದಿರಬೇಕು. ಆತನು ಅಲ್ಲಿಯ

ಕುಸ್ತಿಪಟುಗಳಿಗೆ ತರಬೇತಿ ನೀಡುತ್ತಿದ್ದಿರಬೇಕು. ಬಹುಶಃ ಅವನ ಹೆಸರಿನಿಂದ ಈ ಗ್ರಾಮಕ್ಕೆ ಅಂದರೆ "ಹಿರಿಜಟ್ಟಿ" ಇರುವ ಗ್ರಾಮವೇ ಮುಂದೆ "ಹಿರಿಜಟ್ಟಿಗಹಳ್ಳಿ" ಎಂಬ ಹೆಸರಿನಿಂದ ಪ್ರಖ್ಯಾತವಾಗಿರಬೇಕು. ನಂತರ ಕೃಷ್ಣದೇವರಾಯನ ಅವಧಿಯಲ್ಲಿ ಚಿನ್ನಾದೇವಿಪುರ ಎಂದು ಪ್ರತಿನಾಮ ಪಡೆದುಕೊಂಡಿದೆ. ಆ ನಂತರದ ದಿನಗಳಲ್ಲಿ ಈ ಗ್ರಾಮಕ್ಕೆ "ದೊಡ್ಡಜಟಕ" ಎಂದು ಕರೆಯುತ್ತಿರುವುದು ಒಂದು ವಿಶೇಷವೇ ಆಗಿದೆ. ಈ "ದೊಡ್ಡಜಟಕ" ಎಂಬುದು "ಹಿರಿಜಟ್ಟಿಗ" ಎಂಬ ರೂಪದಿಂದ ಮಾರ್ಪಾಡುಗೊಂಡಿರಬಹುದೇ? ಎಂದು ಗಮನಿಸಿದಾಗ – ಇಲ್ಲಿ "ಹಿರಿ" ಎಂದರೆ "ದೊಡ್ಡ" ಅಂಬ ಅರ್ಥವನ್ನು ಹೊಂದಿದ್ದು "ಜಟ್ಟಿಗ" ಎಂಬುದನ್ನು ಪ್ರತಿಯೊಂದು ಅಕ್ಷರಗಳನ್ನು ವಿಂಗಡಿಸಿ ನೋಡಿದರೆ "ಜ" ಎಂಬುದು ಹಾಗೆ ಉಳಿದಿದೆ. "ಟಿ" ಎಂಬುದು "ಟ" ಕಾರವಾಗಿದೆ. "ಗ" ಎಂಬದು "ಕ" ಕಾರವಾಗಿದೆ. ಜಟ್ಟಿಗ+ಜಟಕ ಎಂದು ಮಾರ್ಪಾಡಾಗಿರುವ ಸಾಧ್ಯತೆ ಇದೆ. ಒಟ್ಟಿನಲ್ಲಿ "ಹಿರಿಜಟ್ಟಿಗ" ಎಂಬುದು "ದೊಡ್ಡಜಟಕ" ಎಂದು ಈ ರೀತಿಯಲ್ಲಿ ಮಾರ್ಪಾಡಾಗಿದೆ ಎಂದು ತಿಳಿದುಬರುವುದು. ಕ್ರಿ.ಶ. 1524ರ ತಿಬ್ಬನಹಳ್ಳಿಯ ಶಾಸನವು ಕೃಷ್ಣರಾಯ ವಿದ್ಯಾನಗರದಲ್ಲಿ ಆಳ್ವಿಕೆ ಮಾಡುವ ಸಮಯದಲ್ಲಿ ಚೆನ್ನಪಟ್ಟಣದ ಈರಪ್ಪದೇವರ ಅಮೃತಪಡಿಗೆ ನಾಗಮಂಗಲಕ್ಕೆ ಸಲುವ ದೇವಲಾಪಿರದ ಸ್ಥನದ ತಿಬನಹಳ್ಳಿಯನ್ನು ಕೃಷ್ಣರಾಯಸಮುದ್ರ ಎಂದು ಪ್ರತಿನಾಮ ಮಾಡಿ ಈ ಗ್ರಾಮಕೆ ಸಲುವ ಚತುಸೀಮೆಯ ಒಳಗಿದ್ದ ಗದೆ ಬೆದಲು ತೋಟ ತುಡಿಕೆ ಅಣೆ ಅಚ್ಚುಕಟ್ಟು ನಿಧಿ ನಿಕ್ಷೇಪ ದಾನ ಕೊಟ್ಟದ್ದನ್ನು ತಿಳಿಸುತ್ತದೆ. ಕ್ರಿ.ಶ. 1513ರ ದೇವಲಾಪುರದ ಶಾಸನವು ಕೃಷ್ಣದೇವರಾಯನ ಆಳ್ವಿಕೆಯಲ್ಲಿ ನಂಜಪದೇವರ ಪುತ್ರರು ದೇವಭಟ್ಟರಿಗೆ ಕೊಡ್ಡ ಧರ್ಮ ಶಾಸನ. ಷೋಡಶಮಹಾದಾನದೊಳಗಿನ ಹೇಮಾಶ್ವಮಹಾದಾನ ಮಾಡಿದಲ್ಲಿ ತದಂಗ ಭೂದಾನವಾಗಿ ಧಾರೆಯನೆರೆದು ಕೊಡ್ಡ ಅಗ್ರಹಾರ ಮದನಪುರ, ಮಲ್ಲಿಗೆರೆ ಎರಡು ಗ್ರಾಮಗಳನ್ನು ಪಂಪಾಕ್ಷೇತ್ರದ ಶ್ರೀ ವಿರೂಪಾಕ್ಷದೇವರ ಸನ್ನಿಧಿಯಲ್ಲಿ ಗ್ರಾಮ ಎರಡರ ಚತುಸೀಮೆ ಒಳಗಾಗಿದ್ದ ನಿಧಿ ನಿಕ್ಷೇಪ ಎಲ್ಲವನ್ನು ಆಚಂದ್ರಾರ್ಕಸ್ಥಾಯಿಯಾಗಿ ಹೇಮಾಶ್ವಮಹಾದಾನದ ಪ್ರತಾಪವಿಜಯಮದನಪುರ, ಮಲ್ಲಿಗೆರೆ ಗ್ರಾಮ 2 ಕ್ಕೆ ಉಲ್ಲೇಖಿಸುವುದು. ಕ್ರಿ.ಶ. 1526ರ ಕಾಳಿಂಗನಹಳ್ಳಿ ಗ್ರಾಮದ ಶಾಸನವು ಕೃಷ್ಣದೇವಮಹಾರಾಯರು ಆಳ್ವಿಕೆ ಮಾಡುವ ಸಂದರ್ಭದಲ್ಲಿ ಮೇಲುಗೋಟೆಯ ಚೋಳಹಯನವರ ಹಸ್ತದಿಂದ ಚೆಲಪಿಳೆಯನ (ದೇವರ ಹೆಸರಿರಬಹುದು) ಕೈಂಗಿಯಾಕೆ ಕಾಳಿಂಗರಾಮನಹಳ್ಳಿಯ ದಕ್ಷಿಣ ಭಾಗವನ್ನು ತಮ್ಮ ಧರ್ಮವಾಗಿ ಕೊಟ್ಟ ಮಾಹಿತಿ ಇದೆ ಮತ್ತು ತಿಮ್ಮಯನ ಮಲೆಹನಾಯ್ಕರ ಹೆಸರು ಇದೆ. ಕ್ರಿ.ಶ. 1560ರ ಕದಬಳಿಯ ಶಾಸನವು ಶ್ರೀಮತು ಕಹಿನ ತಿರುಮಲದೇರ ಶ್ರೀಪಾದ ಸೇವೆಗೆ ಬಲೆನಾಯಕರ ಮಕ್ಕಳು ಒಡೆವನಾಯಕರು, ಲಖಪನಾಯಕರು ಮಕ್ಕಳು ಕೆಂಚಪನಾಯಕರು ತಮ್ಮ ಒಡೆಯ ವಿರೂಪರಾಜವೊಡೆಯರಿಗೆ ಪುಣ್ಯವಾಗಲಿ ಎಂದು ಬೆಳೂರು ಸೀಮೆಯೊಳಗೆ ಗ್ರಾಮ 1 ದನ್ನು ಧಾರೆಯೆರೆದು ಕೊಟ್ಟಂತೆ ತಿಳಿಸುವುದು.

ಪ್ರತಿನಾಮಗಳು

ಕ್ರಿ.ಶ. 15–16ನೇ ಶತಮಾನಕ್ಕೆ ಸೇರಿದ ವೊಡೇರಪುರ ಗ್ರಾಮದ ಶಾಸನವು ಗಂಗರಾಜರಾಯರು ನಂಜೆವೊಡೇರಿಗೆ ಗ್ರಾಮದ ಹೆಸರು ಅಳಿಸಿದೆ. ಆ ಗ್ರಾಮಕ್ಕೆ ಪ್ರತಿನಾಮವಾದ ಬಸವನಪುರವನ್ನು ದಾನ ಕೊಟ್ಟ ವಿಷಯವನ್ನು ತಿಳಿಸುವುದು. ಕ್ರಿ.ಶ. 1526ರ ಮಾಚಲಗಟ್ಟದ ಶಾಸನವು ಶ್ರೀಮದ್ರಾಜಗುರು ಸರ್ವಜ್ಞ ವಿಷ್ಣು ಭಟ್ಟೈಯಗಳ ಮಕ್ಕಳು, ಚಕ್ರವರ್ತಿ ಚಟುಪಾಧ್ಯಾಯರಿಗೆ ಶ್ರೀ ಬಿಜ್ಜಳೇಶ್ವರಪುರಕ್ಕೆ ಪ್ರತಿನಾಮವಾಗಿರುವ ಮಾಚನಕಟ್ಟದ ಸ್ತಾನಪತಿಗಳಾದ ಚಿಕ್ಕಮಲ್ಲಯನಾಯಕನ ಮಗ ಕೇತೆಮಾದೆಯನಾಯಕನು ಕೊಟ್ಟ ದಾನ ಪತ್ರದ ಕ್ರಮವೆಂದರೆ – ಮಾಚನಕಟ್ಟದ ಊರಿನ ಒಳಗಿನ ಗೋಪಿಸೆಟಿಯ ಗೋಯಿಯನ ಮನೆಯಿಂದ ಮಾಡಲು ಹೆಬಾಗಿಲ ಓಣಿಯಿಂದ ದಕ್ಷಿಣಕ

ಕೇತಿಸೇಟಿಯ ಮಾಡೆಯನ ಚಿಕಮನೆಯಿಂದ ಪಶ್ಚಿಮಕೆ ಹಿತಿಲಮನೆಯ ಹದಿಕೆಯ ಗೋಡೆಯಿಂದ ಉತ್ತರಕೆ ಇಂತೀ ನಾಲ್ಕು ಸೀಮೆಯ ಒಳಗಾಗಿ ಗ 15 ರ ಮನೆ ಆ ಮಾಚನಕಟದ ಹಿರೆಯಕೆರೆಯ ಕೆಳಗೆ ಚಿಕಸಿವೆಯನಾಯಕನ ತೋಟ, ಗದೆಯಿಂದ ಪೂರ್ವಕೆ ಪನಗದ್ದೆಯಿಂದ ದಕ್ಷಿಣಕೆ ಕಾಚನ--ದಿಂದ ಪಶ್ಚಿಮಕ್ಕೆ ಗವುಡುಗಳ ಕೊಡುಗೆಯ ಪಲಸಿನ ಗದ್ದೆಯಿಂದು ಉತ್ತರಕೆ ಇಂತಿಷ್ಟು ನಾಲ್ಕು ಸೀಮೆ ಒಳಗಿನ ತೆಂಗಿನ ಅಡಕೆಯ ಮರದ ತೋಟವು ಬೆದಲು ಹೆಗಡೆಯ ಕೊಡಗೆಯ ಕೆರೆಯಿಂದ ಪಶ್ಚಿಮಕೆ ಆಚೆಯ ಕೆರೆಯಿಂದ ಉತ್ತರಕ್ಕೆ ಹರಳಸಾರಿಗೆಯಿಂದ ಪೂರ್ವಕೆ ಒಡ್ಡರಹಳ್ಳಿಗೆ ಹೋಗುವ ಓಣಿಯಿಂದ ದಕ್ಷಿಣಕೆ ಹರಳಸಾರಿಗೆಯ ಉತ್ತರಕೆ ತುಂಡೊಳಗಾದ ಬೆದಲು 500 ಎಂದಿದೆ. ಈ ಮನೆಯ ತೋಟ ಬೆದ್ದಲು ಇಷ್ಟನ್ನು ಆ ಚಕ್ರವರ್ತಿ ಭಟೋಪಾಧ್ಯಾಯರಿಗೆ ಆ ಮಲೆಯನಾಯಕ ತನ್ನ ಸ್ತ್ರೀಪುತ್ರಜ್ಞಾತಿ ಸಹಿತ ದಾಯಾದ್ಯಾನುಮತಿ ಪುರಸ್ಸರವಾಗಿ ಈ ಗ್ರಿಹ ಕ್ಷೇತ್ರಗಳ ಅಷ್ಟಭೋಗ ತೇಜ ಸ್ವಾಮ್ಯನಿಧಿ ನಿಕ್ಷೇಪ ಜಲ ಪಾಷಾಣ ಸಿದ್ಧ ಸಾಧ್ಯವೊಳಗಾದ ಈ ಗೃಹ, ಕ್ಷೇತ್ರಗಳನ್ನು ಸ್ವರುಚ್ಯದಿಂದ ಒಡಂಬಟ್ಟು ತನ್ನ ಮಗ ಚಿಕಮಲಪಗೆ ಉಪದೇಶ ಮಾಡಿ ಅವನ ಕೈಯಿಂದ ಕೊಡಿಸಿದ ದಾನ ಪತ್ರ ಎಂದು ತಿಳಿಸುವುದು. ಇದಕ್ಕೆ ಸಾಕ್ಷಿ ಮನಾತದೇವರ ಸ್ಥಾನಿಕ ದಣಯ ಚಿಕದೇವನಣನ ಮಗ ಹಿರಿಯಮಲಪ ಕುಡಿಹರ ಆಲಪನ ತಮ ಸೋಮಣ. ಅಮನಲ ಕಂವೆಯ ಮಗ ಸೋಮ ಎಂದು ಸಾಕ್ಷಿದಾರರ ಹೆಸರುಗಳನ್ನು ಉಲ್ಲೇಖಿಸಿದೆ. ಕ್ರಿ.ಶ. 1342ರ ಬೆಳ್ಳೂರು ಶಾಸನವು ಉದ್ಭವ ನರಸಿಂಹಪುರವಾದ ಬೆಳ್ಳೂರ ಶ್ರೀಮದಶೇಷಮಹಾಜನಗಳು ತಮ್ಮೊಳು ಎಲ್ಲರೂ ಒಂದು ಗೂಡಿ ಬರಿಸಿದ ದಾನ ಶಾಸನ. ಮಾಧವದೇವರ, ಗೋಪಾಳದೇವರ, ಲಕ್ಷುಮೀನಾರಾಯಣದೇವರ, ದೇವದಾನ ಊರ ಕೆಳಗಾಗಿ ಇರುವಂತಾಗಿ ಆ ಗದ್ದೆ, ತೋಟಗಳಿಗೆ ಮಾರ್ಪಾಟುಮಾಡಿಸಿ ಪ್ರತಿ ಕ್ಷೇತ್ರವನ್ನು ಕೊಟ್ಟು ಉಪದಿಯ ವಸ್ತುವನ್ನು ತೆತ್ತು. ಆ ದೇವದಾನದ ತೋಟ, ಗದ್ದೆ, ವಿತ್ತಿ, ಪ್ರಾಪ್ತಕೆ ಸಲುವವು ವೃತ್ತಿ ಪ್ರಾಪ್ತದ ಮುತ್ತಗದ ಕಡಹಿತಗದ್ದೆ ದೇವದಾನವಾಗಿ ಸಲುವವು ಈ ಮರಿಯಾದೆಗೆ ಆ ಮಹಾಜನಗಳ ಶ್ರೀಹಸ್ತದ ಒಪ್ಪ ಶ್ರೀ ಅಲ್ಲಾಳನಾಥರದು ಎಂದಿದೆ. ಪ್ರತಿನಾಮಗಳಾದ ಕೃಷ್ಣರಾಯಪುರಗಳೆಂಬ ಸರ್ವಮಾನ್ಯದ ಅಗ್ರಹಾರಗಳಾಗಿ ಶ್ರೀ ವಿರೂಪಾಕ್ಷ ದೇವಗರಾಣಿ ಮದನಪುರ, ಮಲ್ಲಿಗೆರೆ ಅಗ್ರಹಾರಗಳನ್ನು ಕೊಟ್ಟರು. ಈ ಉಭಯ ಗ್ರಾಮವಾದ ಮದನಪುರ, ಮಲ್ಲಿಗೆರೆ ಗ್ರಾಮಗಳ ಪೂರ್ವನಾಮಧೇಯ ಪ್ರತಾಪವಿಜಯಕೃಷ್ಣರಾಯಪುರ ಎಂದಿತು ಎಂದು ತಿಳಿಸುವುದು. "ಪ್ರತಾಪವಿಜಯ" ಎಂಬುದು ಕೃಷ್ಣದೇವರಾಯನ ಬಿರುದುಗಳಲ್ಲಿ ಒಂದಾಗಿದ್ದು, ಕೃಷ್ಣದೇವರಾಯನು ತನ್ನ ಬಿರುದಿನೊಂದಿಗೆ ತನ್ನ ಹೆಸರನ್ನು ಸೇರಿಸಿ "ಪ್ರತಾಪ ವಿಜಯಕೃಷ್ಣರಾಯಪುರಂ" ಎಂದು ಈ ಗ್ರಾಮಗಳಿಗೆ ಹೆಸರು ಇಟ್ಟಿರುವುದು ಒಂದು ವಿಶೇಷವೇ ಆಗಿದೆ. ಅದೇ ಕ್ರಿ.ಶ. 1521ರ ಕಾಮಿಡಿಹಳ್ಳಿಯ ಶಾಸನವು ಕೃಷ್ಣದೇವರಾಯನ ಆಳ್ವಿಕೆಯ ಸಮಯದ್ದಾಗಿದೆ. ಈ ಶಾಸನವು ಚಿನ್ನಾದೇವಿಯ ಜೀವನ ಚರಿತ್ರೆಯ ಮೇಲೆ ಹೊಸ ಬೆಳಕನ್ನು ಬೀರುತ್ತಿದೆ. ಕೃಷ್ಣದೇವರಾಯನ ರಾಣಿವಾಸದ ಚಿನ್ನಾದೇವಿಯವರು ಹಂಪೆಯ ವಿರೂಪಾಕ್ಷನ ದರ್ಶನಕ್ಕೆ ಆಗಮಿಸಿದ ಯಡೆಯೂರಿನ ಸುಪ್ರಸಿದ್ಧ ವೀರಶೈವ ಯತಿ ಸಿದ್ಧಲಿಂಗೇಶ್ವರರಿಗೆ ಮತ್ತು ಜೊತೆಯಲ್ಲಿದ್ದ ಮಲ್ಲಿಕಾರ್ಜುನ ದೇವನೆಂಬ ಯತಿಗಳಿಗೆ ನಾಗಮಂಗಲ ಸ್ಥಳದ, ದಡಿಗ ಸೀಮೆಯ ಕಾಮಿಡಿಹಳ್ಳಿಯನ್ನು ದಾನವಾಗಿ ನೀಡುತ್ತಾಳೆ. ಈ ಕಾಮಿಡಿಹಳ್ಳಿಯ ಪ್ರಾಚೀನ ಹೆಸರಾದ ಬಸವೋಜಯ್ಯನಪುರವೆಂದು ಪ್ರತಿನಾಮವಾಗಿ ಹೆಸರನ್ನು ಇಟ್ಟು ಈ ದಾನವನ್ನು ನೀಡಲಾಗಿದೆ. ಒಟ್ಟಿನಲ್ಲಿ ಈ ಶಾಸನದಿಂದ ಚಿನ್ನಾದೇವಿಯ ತಂದೆ ವೀರಪೊಡೆಯನು ನಾಗಮಂಗಲ ಸ್ಥಳದ ನಾಯಕತನವನ್ನು ಮಾಡುತ್ತಿದ್ದಂತದ್ದು ಹಾಗೂ ಚಿನ್ನಾದೇವಿ ತನ್ನ ವಂಶಸ್ಥರ ಹೆಸರನ್ನು ಈ ಶಾಸನದಲ್ಲಿ ಹೆಸರಿಸಿರುವುದರಿಂದ ಅವಳು ಅಧಿಕಾರಿಗಳ ಕುಟುಂಬದವಳೆಂದು ತಿಳಿದು ಬರುವುದು. ರಾಣಿ ಚಿನ್ನಾದೇವಿಯನ್ನು ವೇಶ್ಯೆಯೆಂದೂ, ನೃತ್ಯಗಾರ್ತಿಯೆಂದೂ ಪಾಯೆಸ್ ಮತ್ತು ನ್ಯೂನಿಜ್ ಇಬ್ಬರೂ ಹೇಳಿರುವರು. ಆದರೆ ಈ ಶಾಸನದ ಆಧಾರದಿಂದ ಚಿನ್ನಾದೇವಿ ವೇಶ್ಯೆಯಲ್ಲವೆಂದು

ತಿಳಿದುಬರುವುದು. ಒಟ್ಟಿನಲ್ಲಿ ಚಿನ್ನಾದೇವಿಯು ಯಡೆಯೂರ ಸಿದ್ಧಲಿಂಗಯತಿಗಳಿಗೆ ತನ್ನ ತಂದೆಯ ಆಳ್ವಿಕೆಯಲ್ಲಿದ್ದ ಕಾಮಿಡಿಹಳ್ಳಿಯೆಂಬ ಗ್ರಾಮವನ್ನು ದಾನ ಕೊಟ್ಟಿರುವುದೂ ಕೂಡ. ಅವಳಿಗೂ ನಾಗಮಂಗಲ ಸ್ಥಳಕ್ಕೂ ಇರುವ ಸಂಬಂಧವನ್ನು ಸೂಚಿಸುತ್ತದೆ. ಅದರಂತೆ ಕ್ರಿ.ಶ. 1525ರ ಕೃಷ್ಣದೇವರಯನ ಆಳ್ವಿಕೆಯ ಸಮಯದಲ್ಲಿ ನಾಗಮಂಗಲಕ್ಕೆ ಸಲುವ ದೇವಲಾಪುರದ ಸ್ಥಾನದ ತಿಬ್ಬನಹಳ್ಳಿಯನ್ನು ಕೃಷ್ಣದೇವರಾಯಸಮುದ್ರ ಎಂದು ಪ್ರತಿನಾಮ ಮಾಡಿದ ವಿಷಯವನ್ನು ತಿಳಿಸುವುದು.

ವೀರಗಲ್ಲುಗಳು

ಕ್ರಿ.ಶ. 1427ರ ಚುಂಚನಹಳ್ಳಿಯ ವೀರಗಲ್ಲು ಶಾಸನವು ಬುಕಣವೊಡೆಯರ ಆಳ್ವಕೆಯ ಸಮಯದಲ್ಲಿ ಶ್ರೀಮನುಮಹಾ ಸಾವಂತಾಧಿಪ ಕಲಿಯರಗಂಡ ನಾಯ್ಕರ (ವೀರನ ಹೆಸರು ಅಳಿಸಿದೆ) ಗಂಡರಗೊಳಿ ಹಟದ ನಾಯ್ಕರಗಂಡ ಇತರರು, ಬಿರಂಮಲೆಯಲ್ಲಿ ಕಾದಿಬಿದರು ಎಂದಿದೆ. ಈ ವೀರಗಲ್ಲನ್ನು ನಿಲ್ಲಿಸಿದವ ಚಿಕನಾಯ್ಕ ಎಂದಿದೆ. ಕ್ರಿ.ಶ. 13–14ನೇ ಶತಮಾನದ ಚುಂಚನಹಳ್ಳಿಯ ಶಾಸನವು ಹಿರಿಯಮಾಯನಾಯಕ ತನ್ನ ತಮ್ಮ ಚಿಕಮಾಯನಾಯಕನ ವೀರಗಲ್ಲು ಎಂದಿದೆ. ಏಳೋಜನ ಮಗ ಸಿದೋಜನ ಉಲ್ಲೇಖವಿದೆ. ಕ್ರಿ.ಶ. 1457ರ ಸೋಗಾದಿಯ ವೀರಗಲ್ಲು ಶಾಸನದಲ್ಲಿ ಯಾವುದೇ ಮಾಹಿತಿ ಇರುವುದಿಲ್ಲ.

ಒಟ್ಟಾರೆಯಾಗಿ ವಿಜಯನಗರ ಅವಧಿಯಲ್ಲಿ ನಾಗಮಂಗಲ ತಾಲ್ಲೂಕು ಒಂದು ಪ್ರಮುಖ ಆಡಳಿತ ಕೇಂದ್ರವಾಗಿತ್ತು ಎಂದು ಈ ತಾಲ್ಲೂಕಿನ ಶಾಸನಗಳ ಮಾಹಿತಿಯಿಂದ ತಿಳಿದುಬರುವುದು. ಈ ಪ್ರದೇಶವು ಈ ಅವಧಿಯ ಅರಸರಾದ ಕಠಾರಿಸಾಳುವ ನರಸಿಂಗಯ್ಯದೇವನಿಂದ ಮುಂದುವರಿದು ಕೃಷ್ಣದೇವರಾಯ, ಅಚ್ಯುತರಾಯ, ಸದಾಶಿವರಾಯ, ಮಲ್ಲಿಕಾರ್ಜುನರಾಯ, ಶ್ರೀರಂಗರಾಯಮಹಾರಾಯರ ಆಳ್ವಿಕೆಯವರೆಗೂ ಆಡಳಿತಕ್ಕೊಳಪಟ್ಟ ಪ್ರದೇಶವಾಗಿತ್ತು ಎಂದು ಈ ತಾಲ್ಲೂಕಿನಲ್ಲಿ ಕಂಡುಬರುವ ಶಾಸನಗಳಿಂದ ತಿಳಿದು ಬರುವುದು ಮತ್ತು ಈ ತಾಲ್ಲೂಕಿನ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಂಡುಬರುವ ಶಾಸನಗಳು ತುಂಬ ವೈವಿಧ್ಯಪೂರ್ಣವಾದ ವಿಷಯಗಳನ್ನೊಳಗೊಂಡಂತವುಗಳಾಗಿವೆ. ಅವುಗಳಲ್ಲಿ ವೈಷ್ಣವ, ಶೈವ ದೇವಾಲಯಗಳಿಗೆ ನೀಡಿದ ದಾನದ ವಿಷಯವನ್ನು ಹಾಗೂ ಮಂಟಪ, ಉತ್ಸವಮಂಟಪಗಳನ್ನು, ಕಂಭಗಳನ್ನು ನಿರ್ಮಿಸಿದ ಬಾಗಿಲವಾಡ ನಿಲ್ಲಿಸಿದ ದೀಪಮಾಲೆ, ದೇವರ ವಸ್ತ್ರಕ್ಕೆ, ಕ್ಷೀರಧಾರೆಯನ್ನು ಮಾಡಿಸುವುದಕ್ಕೆ ದೇವರ ವೈಭೋಗಕ್ಕೆ ದಾನ ಬಿಟ್ಟ ವಿವಿಧ ರೀತಿಯ ತೆರಿಗೆಗಳಾದ ಅಮೃತೂರ ಸುಂಕ, ಗದ್ಯಾಣ, ಪಣ, ಅಳಿಬಳಿ ಎಂಬ ತೆರಿಗೆಗಳನ್ನು ಉಲ್ಲೇಖಿಸಿವೆ ಹಾಗೂ ಹೊಲ, ಗದ್ದೆ, ತೋಟ, ಗ್ರಾಮಗಳನ್ನು ದೇವರ ಕಾರ್ಯಕ್ಕಾಗಿ ಬಿಟ್ಟ ವಿಷಯವನ್ನು, ಎಣ್ಣೆಯ ಗಾಣವನ್ನು ದೇವರ ನಂದಾದೀಪಕ್ಕಾಗಿ ಬಿಟ್ಟ ಮಾಹಿತಿಯನ್ನು ನೋಡುತ್ತೇವೆ. ಕೆರೆಗಳನ್ನು ನಿರ್ಮಿಸಿ ಉಭಯ ಧರ್ಮಗಳಿಗೆ ಸಲ್ಲುವಂತೆ ದಾನ ಕೊಟ್ಟ ವಿಷಯವನ್ನು ಕಾಣುತ್ತೇವೆ ಹಾಗೂ ಕ್ರಿ.ಶ. 1545ರ ಸದಾಶಿವರಾಯನ ಆಳ್ವಿಕೆಯ ಅವಧಿಯಲ್ಲಿ ಹೊನ್ನಕನಹಳ್ಳಿಗೆ ಪ್ರತಿನಾಮವಾಗಿ ವೆಂಗಟಾದ್ರಿಸಮುದ್ರ ಎಂದು, ಕ್ರಿ.ಶ. 1512ರ ಕೃಷ್ಣದೇವರಾಯನ ಆಳ್ವಿಕೆಯ ಸಮಯದಲ್ಲಿ ಹಿರಿಜೆಟ್ಟಿಗಹಳ್ಳಿಗೆ ಚಿನ್ನಾದೇವಿಪುರ ಎಂದಿದ್ದು ಇಂದು ಈ ಗ್ರಾಮಕ್ಕೆ ದೊಡ್ಡಜಟಕ ಎಂದು ಕರೆಯುವ ವಿಷಯವನ್ನು ಕ್ರಿ.ಶ. 1524ರ ಕೃಷ್ಣರಾಯರ ಆಳ್ವಿಕೆಯ ಸಮಯದಲ್ಲಿ ದೇವಲಾಪುರದ ಸ್ಥಾನದ ತಿಬ್ಬನಹಳ್ಳಿಯನ್ನು ಕೃಷ್ಣರಾಯಸಮುದ್ರ ಎಂದು ಕರೆಯುತ್ತಿದ್ದು, ಇಂದು ತಿಬ್ಬನಹಳ್ಳಿ ಎಂದು ಕರೆಯುತ್ತಿರುವರು. ಕ್ರಿ.ಶ. 1513ರ ದೇವಲಾಪುರ ಗ್ರಾಮದ ಶಾಸನವು ಕೃಷ್ಣದೇವರಾಯನ ಆಳ್ವಿಕೆಯ ಸಂದರ್ಭದಲ್ಲಿ ಮದನಪುರ, ಮಲ್ಲಿಗೆರೆ ಎರಡು ಗ್ರಾಮಗಳನ್ನು ಪಂಪಾಕ್ಷೇತ್ರದ ಶ್ರೀವಿರೂಪಾಕ್ಷದೇವರ ಸನ್ನಿಧಿಯಲ್ಲಿ ಗ್ರಾಮ ಎರಡರ ಚತುಸೀಮೆ ಒಳಗಾಗಿದ್ದ ನಿಧಿ ನಿಕ್ಷೇಪ ಎಲ್ಲವನ್ನು ಆಚಂದ್ರಾರ್ಕಸ್ಥಾಯಿಯಾಗಿ ಗ್ರಾಮ 2ಕ್ಕೆ

ಪ್ರತಿನಾಮಗಳಾದ ಕೃಷ್ಣರಾಯಪುರಗಳೆಂಬ ಸರ್ವಮಾನ್ಯದ ಅಗ್ರಹಾರಗಳಾಗಿ ಶ್ರೀ ವಿರೂಪಾಕ್ಷ ದೇವಗರಾಣೆ ಮದನಪುರ, ಮಲ್ಲಿಗೆರೆ ಅಗ್ರಹಾರಗಳನ್ನು ಕೊಟ್ಟರು. ಈ ಉಭಯ ಗ್ರಾಮಗಳಾದ ಮದನಪುರ ಮಲ್ಲಿಗೆರೆ ಗ್ರಾಮಗಳ ಪೂರ್ವನಾಮ ಪ್ರತಾಪವಿಜಯಕೃಷ್ಣರಾಯಪುರಂ ಎಂದಿತು ಎಂಬ ವಿಷಯವನ್ನು ತಿಳಿಸುವುದು. ಅದೇ ರೀತಿ ಎಲ್ಲ ತಾಲ್ಲೂಕಿನಲ್ಲಿ ಸಾಮಾನ್ಯವಾಗಿ ದೊರೆಯುವಂತೆ ಈ ತಾಲ್ಲೂಕಿನಲ್ಲಿಯೂ ಕೇವಲ ಮೂರು ಸ್ಮಾರಕ ಶಾಸನಗಳು ಲಭಿಸಿವೆ. ಈ ಸ್ಮಾರಕ ಶಾಸನಗಳಲ್ಲಿ ಒಂದು ಬುಕಣವೊಡೆಯರ ಆಳ್ವಿಕೆಯ ಅವಧಿಯಲ್ಲಿ ಒಬ್ಬ ವೀರ ಶತ್ರುವಿನೊಂದಿಗೆ ಹೋರಾಡಿ ಮಡಿದ ವಿಷಯವನ್ನು ತಿಳಿಸುವುದು ಮತ್ತು ಶಾಸನಗಳನ್ನು ಲಿಖಿಸಿದ ಲೇಖಕರ ಹೆಸರುಗಳನ್ನು ತಿಳಿಸುವ ಶಾಸನಗಳನ್ನು ಈ ತಾಲ್ಲೂಕಿನಲ್ಲಿ ಕಾಣಬಹುದು.

ಶಾಸನೋಲ್ಲೇಖಿತ ಬರಹಕಾರರು

ಕ್ರಿ.ಶ. 1511ರ ಶಾಸನೋಲ್ಲೇಖಿತ ಬರೆಹಕಾರ ವೀರಾಚಾರಿ, ಕ್ರಿ.ಶ. 1521ರ ಶಾಸನದಲ್ಲಿ ಕುಲಾಗ್ರಣಿ ಅಪ್ಪಯ್ಯ, ಕ್ರಿ.ಶ. 1545ರ ಶಾಸನದಲ್ಲಿ ಮಲ್ಲಣಾಚಾರ್ಯರ ಮಗ ವೀರಣಾಚಾರ್ಯ ಎಂದಿದೆ.

ಆಕರ ಗ್ರಂಥಗಳು

1. *ಎಪಿಗ್ರಾಫಿಯ ಕರ್ನಾಟಿಕ,* ಸಂಪುಟ 7.
2. *ಪ್ರಾಚೀನ ಕರ್ನಾಟಕ ಆಡಳಿತ ಪರಿಭಾಷಾಕೋಶ,* (ಸಂ) ಶ್ರೀನಿವಾಸ ರಿತ್ತಿ.
3. *ಕೃಷ್ಣದೇವರಾಯನ ಶಾಸನಗಳು* (ಕನ್ನಡ-ಸಂಸ್ಕೃತ ಶಾಸನಗಳು), (ಸಂ.) ಡಾ. ಡಿ.ವಿ. ಪರಮಶಿವಮೂರ್ತಿ.
4. *ರಾಣಿ ಚೆನ್ನಾದೇವಿಯ ಚರಿತ್ರೆಗೆ ಹೊಸ ತಿರುವು,* ಡಾ. ಡಿ.ವಿ. ಪರಮಶಿವಮೂರ್ತಿ (ಲೇಖನ)

54

ವಿಜಯನಗರ ಅರಮನೆಗಳ ಅವಶೇಷಗಳು

ವಿನೋದಾ ಪಾಟೀಲ

ವಿಜಯನಗರದ ಅರಮನೆ ಅವಶೇಷಗಳನ್ನು, ಅರಮನೆಗಳ ಬಗೆಗಿನ ಲಿಖಿತ ಆಕರಗಳನ್ನು ಮತ್ತು ವರ್ಣಚಿತ್ರಗಳನ್ನು ಗಮನಿಸಿದಾಗ ಯಾವುದೇ ಭಾಗದಲ್ಲಿ 14ನೇ ಶತಮಾನಕ್ಕಿಂತ ಪೂರ್ವ ಕಾಲದ ಅರಮನೆ ಅವಶೇಷಗಳು ಕಂಡುಬಂದಿಲ್ಲ. ಭಾರತೀಯ ಪ್ರಾಚ್ಯವಸ್ತು ಸರ್ವೇಕ್ಷಣಾ ಇಲಾಖೆ ಮತ್ತು ಕರ್ನಾಟಕ ಪ್ರಾಚ್ಯವಸ್ತು ಇಲಾಖೆ ಹಂಪೆಯಲ್ಲಿ ಅನೇಕ ವರ್ಷಗಳಿಂದ ನಡೆಸುತ್ತಿರುವ ಉತ್ಖನನದ ಪರಿಣಾಮವಾಗಿ ವಿಜಯನಗರ ಅರಮನೆಗಳ ಅವಶೇಷಗಳು ದೊರೆತಿವೆ. ಈ ಉತ್ಖನನವು ಅರಮನೆ ಕಟ್ಟಡಗಳ ವಿನ್ಯಾಸಗಳನ್ನು ಮಾತ್ರ ನಿರೂಪಿಸಿದ್ದಲ್ಲದೆ, ಅರಮನೆಗಳ ಗೃಹಸಂಬಂಧಿತ (domestic) ಧಾರ್ಮಿಕ ಮತ್ತು ಸಾಂಪ್ರದಾಯಿಕ ಪದ್ಧತಿಗಳ ನಡುವಿನ ಸಂಬಂಧಗಳ ಬಗ್ಗೆ ಹೊಸ ಬೆಳಕನ್ನು ಚೆಲ್ಲುತ್ತವೆ. ಈ ಕಟ್ಟಡಗಳನ್ನು ಸ್ವಚ್ಛಗೊಳಿಸಿದಾಗ ಅಲ್ಲಿ ಪಯೋಗಿಸಿದ ಕಲ್ಲು ಮತ್ತು ಗಾರೆಗಳ ಬಗ್ಗೆ, ವಿನ್ಯಾಸದ ಬಗ್ಗೆ ತಿಳಿಯುತ್ತದೆ.

ಅರಮನೆಗಳು ಹೆಚ್ಚಾಗಿ ಕಲ್ಲು ಮತ್ತು ಮಣ್ಣಿನ ಚೂಪಾದ ಗೋಡೆಗಳುಳ್ಳ ಆವರಣಗಳ ಒಳಗೆ ಇವೆ. ಅರಮನೆಗಳನ್ನು ಬಾಗಿಲು ಮತ್ತು ಮಾರ್ಗಗಳನ್ನೊಳಗೊಂಡ (ದಾರಿಗಳನ್ನೊಳಗೊಂಡ) ಹಜಾರಗಳ ಮೂಲಕ ಪ್ರವೇಶಿಸುವ ವ್ಯವಸ್ಥೆಯಿದೆ. ಒಂದು ಅಥವ ಅನೇಕ ಹಂತಗಳನ್ನೊಳಗೊಂಡ ತಳಪಾಯದ ಮೇಲೆ ಕಟ್ಟಿದ್ದು ಪೂರ್ವ ಅಥವ ಉತ್ತರ ದಿಕ್ಕಿಗೆ ಮುಖ ಮಾಡಿ ಕಟ್ಟಲಾಗಿದೆ. ಈ ಅಂತಸ್ತುಗಳನ್ನು (ಹಂತ) ಗ್ರಾನೈಟ್ ಕಲ್ಲುಗಳಿಂದ ಕಟ್ಟಿದ್ದು ಅವುಗಳ ಮೇಲೆ ಎಲೆ-ಬಳ್ಳಿ, ಕೀರ್ತಿಮುಖ, ಆನೆ, ಕೆಲವೆಡೆ ಮನುಷ್ಯರ ಚಿತ್ರಗಳಿವೆ. ಗೋಡೆಗಳನ್ನು ಕಲ್ಲು, ಮಣ್ಣು ಮತ್ತು ಇಟ್ಟಿಗೆಗಳಿಂದ ಕಟ್ಟಿ, ಮಣ್ಣು ಅಥವಾ ಗಾರೆಯಿಂದ ಗಿಲಾವು ಮಾಡಲಾಗಿದೆ. ಗೋಡೆಗಳ ಮಧ್ಯದಲ್ಲಿ ಇಟ್ಟಿಗೆಯ ಗೂಡುಗಳು ಮತ್ತು ಪ್ರವೇಶ ಬಾಗಿಲುಗಳಿವೆ. ಉತ್ಖನನದಲ್ಲಿ ಕಬ್ಬಿಣದ ಮೊಳೆಗಳು, ಹಿಡಿಕಟ್ಟುಗಳು (clamps), ಇದ್ದಿಲು, ಬೂದಿ ದೊರೆತಿರುವುದರಿಂದ ಅರಮನೆಗಳನ್ನು ಮರದ ಕಂಬ, ತೊಲೆ ಮತ್ತು ಜಂತಿಗಳಿಂದ (rafters) ಕಟ್ಟಿದ್ದು ಅವು ಬೆಂಕಿಗೆ ಆಹುತಿಯಾಗಿರಬಹುದೆಂದು ಊಹಿಸಬಹುದಾಗಿದೆ. ಛಾವಣಿಯನ್ನು ಇಟ್ಟಿಗೆ ಮತ್ತು ಸುಣ್ಣದ ಗಾರೆಯಿಂದ ಕಟ್ಟಿ ತಾಮ್ರ ಮತ್ತು ದಂತಗಳಿಂದ ಅಲಂಕರಿಸಿದ್ದರೆಂಬುದು ಇಲ್ಲಿ ದೊರೆತ ಅವಶೇಷಗಳಿಂದ ತಿಳಿಯುತ್ತದೆ.

ಅರಮನೆಯ ಒಳಭಾಗವು ನೆಲಮಟ್ಟದಿಂದ ಎತ್ತರವಾಗುತ್ತಾ ಹೋಗುತ್ತದೆ. ಒಂದು ಕೆಳಹಂತದಿಂದ ಮೇಲಿನ ಹಂತಕ್ಕೆ ಹೋಗಲು ಒಂದು ಅಥವ ಎರಡು ಮೆಟ್ಟಿಲುಗಳಿದ್ದು, ಮೆಟ್ಟಿಲುಗಳ ಪಕ್ಕದಲ್ಲಿ ಅಲಂಕಾರವುಳ್ಳ ಕಟಾಂಜನಗಳಿವೆ (balustrades). ನೆಲ ಮಟ್ಟದಲ್ಲಿ ಹಜಾರವಿದ್ದು ಈ ಹಜಾರದ ಸುತ್ತ ಮೂರು ಭಾಗಗಳಲ್ಲಿ 'U' ಆಕಾರದ ಭಾಗಗಳಿವೆ. ಕಟ್ಟಡದ ಮಧ್ಯದಲ್ಲಿ ಚೌಕಾಕಾರದ ಅಥವ ಆಯತಾಕಾರದ ಕೋಣೆಗಳಿವೆ. ಕೆಲವೆಡೆ ಸುತ್ತಲೂ ದಾರಿಯಿದೆ. ಆ ದಾರಿಯಲ್ಲಿ ಉಪಕೋಣೆಗಳಿವೆ. ಈ ಮುಖ್ಯಭಾಗಗಳಲ್ಲಿ ನೀರಿನ ತೊಟ್ಟಿ, ಕಾಲುವೆ, ಸ್ನಾನಗೃಹ, ಶೌಚಾಲಯಗಳಿವೆ.

ರಾಜ ಪ್ರಾಂಗಣದ ಪಶ್ಚಿಮ ದಿಕ್ಕಿನ ಅರಮನೆಗಳು

ಈ ಪ್ರದೇಶದಲ್ಲಿರುವ ಕಟ್ಟಡಗಳನ್ನು ಭಾರತೀಯ ಪ್ರಾಚ್ಯವಸ್ತು ಸರ್ವೇಕ್ಷಣ ಇಲಾಖೆಯವರು 1976ರಿಂದ ಸ್ವಚ್ಛಗೊಳಿಸುತ್ತಾ ಬಂದಿದ್ದಾರೆ. ಇವು ವಿಶಾಲವಾದ ಪ್ರವೇಶ ಮಾರ್ಗಗಳಿಂದ ಮತ್ತು ಕೆಲವು ವಿಶಿಷ್ಟತೆಗಳಿಂದ ಆಕರ್ಷಣೀಯವಾಗಿವೆ. ನೂರು ಕಂಬಗಳುಳ್ಳ ಸಂದರ್ಶನ ಹಜಾರದ (audiance hall) ಪಶ್ಚಿಮಕ್ಕಿರುವ ಅರಮನೆಯನ್ನು ನಾಲ್ಕು ಹಜಾರಗಳ ಮೂಲಕ ಪ್ರವೇಶಿಸಬಹುದು. ಪ್ರತಿಯೊಂದು ಹಜಾರಕ್ಕೂ ಪ್ರವೇಶದ್ವಾರಗಳಿದ್ದು ಅವು ಬೇರೆ ಬೇರೆ ದಿಕ್ಕುಗಳಲ್ಲಿವೆ. ಮೊದಲನೆಯ ಪ್ರವೇಶದ್ವಾರವು ಹಜಾರರಾಮಚಂದ್ರ ದೇವಸ್ಥಾನದ ನೈಋತ್ಯ ದಿಕ್ಕಿನಲ್ಲಿದ್ದು ಇದು ಹಜಾರದ ವಾಯುವ್ಯ ಮೂಲೆಗೆ ಸೇರುತ್ತದೆ. ಎರಡನೆಯ ಬಾಗಿಲು ಆಗ್ನೇಯ ಮೂಲೆಯಲ್ಲಿ ಬಹಳ ವಿಶಾಲವಾಗಿದೆ. ಈ ಬಾಗಿಲಿನ ತಳಪಾಯವು (basement) 7 ಭಾಗಗಳನ್ನು ಹೊಂದಿದ್ದು ಇದರ ಉತ್ತರ-ದಕ್ಷಿಣ ಮಾರ್ಗದಲ್ಲಿನ (passage way) ಕಟಾಂಜನಗಳ ಯಾಳಿಗಳು ಹಿಂಬದಿಯ ಕಾಲುಗಳ ಮೇಲೆ ನಿಂತಿವೆ. ದಕ್ಷಿಣಕ್ಕಿರುವ ಮೆಟ್ಟಿಲುಗಳು ಮೂರನೆ ಹಜಾರಕ್ಕೆ ಕರೆದೊಯ್ಯುತ್ತವೆ. ಈ ಹಜಾರದಲ್ಲಿ ಮಧ್ಯದಲ್ಲಿ ನೀರಿನ ತೊಟ್ಟಿಯಿದ್ದು ಸುತ್ತಲೂ ಎತ್ತರವಾದ ಜಗಲಿಗಳಿವೆ. ಪಶ್ಚಿಮಕ್ಕಿರುವ ಜಗಲಿಯ ಕಂಬಗಳುಳ್ಳ ಹಜಾರದಂತಿದೆ. ಈ ಹಜಾರದಲ್ಲಿ ಎರಡನೆಯ ಮಟ್ಟವಿದ್ದು (level) ಇದು ನಾಲ್ಕನೆಯ ಹಜಾರಕ್ಕೆ ಹೋಗುವ ನಾಲ್ಕನೆ ಬಾಗಿಲಿನಂತಿದೆ. ಇದರ ದಕ್ಷಿಣಕ್ಕೆ ಆಯತಾಕಾರದ ಸ್ವಾಗತ (reception) ಹಜಾರವಿದೆ. ಈ ಹಜಾರದ ಹಿಂಭಾಗದಲ್ಲಿ ಸ್ನಾನ ಗೃಹ ಮತ್ತು ಶೌಚಾಲಯಗಳಿವೆ. ಉತ್ತರ ದಿಕ್ಕಿನಲ್ಲಿರುವ ಆವರಣ ಗೋಡೆಯಲ್ಲಿರುವ ಬಾಗಿಲು ಮುಂದಿನ ಹಜಾರಗಳಿಗೆ ಕರೆದೊಯ್ಯುತ್ತದೆ. ಇಲ್ಲಿರುವ ಮೊದಲನೆ ಹಜಾರದಲ್ಲಿ ಪೂರ್ವಕ್ಕೆ ಮುಖಮಾಡಿರುವ ಸ್ವಾಗತ. ಹಜಾರದ ಮುಂದೆ ಒಂದೇ ಕಲ್ಲಿನಲ್ಲಿ ಮಾಡಿದ ಸಣ್ಣ ನೀರಿನ ತೊಟ್ಟಿಯಿದೆ. ಈ ತೊಟ್ಟಿಯ ಬದಿಗಳಲ್ಲಿ ಕಮಲದ ಹೂವಿನ ಚಿತ್ರಗಳಿವೆ. ಈ ಹಜಾರದಿಂದ ಪಶ್ಚಿಮಕ್ಕೆ ಹೋಗುವ ಪ್ರವೇಶಮಾರ್ಗವು ದಕ್ಷಿಣಕ್ಕೆ ತಿರುಗಿ ವಿಶಾಲವಾದ ಆವರಣದ ಕಡೆಗೆ ಹೋಗುತ್ತದೆ. ಈ ಆವರಣದ ಮಧ್ಯದಲ್ಲಿ ಪೂರ್ವಕ್ಕೆ ಮುಖಮಾಡಿದ ಅರಮನೆ ಕಟ್ಟಡವಿದೆ.

ವಿಜಯನಗರದಲ್ಲಿರುವ ಅತ್ಯಂತ ದೊಡ್ಡದಾದ ಈ ಅರಮನೆಯು ಪೂರ್ವದಿಂದ ಪಶ್ಚಿಮಕ್ಕೆ ಎತ್ತರವಾಗುತ್ತ ಹೋಗುವ ನಾಲ್ಕು ಹಂತಗಳನ್ನೊಳಗೊಂಡಿದ್ದು ಮಧ್ಯದಲ್ಲಿರುವ ಮೆಟ್ಟಿಲುಗಳಿಂದ ಒಂದಕ್ಕೊಂದು ಜೋಡಿಸಲ್ಪಟ್ಟಿವೆ. ಮೊದಲನೆ ಹಂತವನ್ನು ನಂತರದಲ್ಲಿ ಮೆಟ್ಟಿಲುಗಳೊಂದಿಗೆ ವಿಸ್ತರಿಸಲಾಗಿದ್ದು ಮೆಟ್ಟಿಲುಗಳ ಎರಡೂ ಬದಿಗೆ ಯಾಳಿಗಳ ಕಟಾಂಜನವಿದೆ. ಎರಡನೆಯ ಹಂತವು ಒಂದು ಹಜಾರವನ್ನೊಳಗೊಂಡಿದ್ದು ಪೂರ್ವದಲ್ಲಿ ಎರಡು ಕಂಬಗಳ ಮತ್ತು ತಳಹದಿಗಳ ಕುರುಹುಗಳಿವೆ. ಉಳಿದ ಮೂರು ಭಾಗಗಳಲ್ಲಿಯೂ ಕಂಬಗಳ ಪೀಠಗಳು ಕಂಡುಬರುತ್ತವೆ. ಇಟ್ಟಿಗೆಯ ಗೋಡೆಗಳಲ್ಲಿ ಗೂಡುಗಳಿದ್ದು ಅವುಗಳಲ್ಲಿ ಅರ್ಧ ವೃತ್ತಾಕಾರದ ಪಾಣಿಪೀಠಗಳಿವೆ (ಮೂರ್ತಿಪೀಠ). ಈ

ಪೀಠಗಳ ಮೇಲೆ ಮೂರ್ತಿಗಳ ಭಗ್ನ ಪಾದ, ಕೈ ಮತ್ತು ಕಾಲುಗಳ ತುಂಡುಗಳು ಬಿದ್ದಿವೆ. ಈ ಹಂತದಲ್ಲಿರುವ ಮೆಟ್ಟಿಲುಗಳು ಮೇಲಿನ ಹಂತಕ್ಕೆ ಕರೆದೊಯ್ಯುತ್ತವೆ. ಈ ಹಂತದ ಮಧ್ಯದಲ್ಲಿ ಪೂರ್ವಕ್ಕೆ ಮುಖಮಾಡಿದ ಚೌಕಾಕಾರದ ಕೋಣೆಯಿದ್ದು ಇದರ ಮುಂದೆ ತೆರೆದ ಅಂಗಳವಿದೆ. ಇದರ ಸುತ್ತಲೂ ದಾರಿಯಿದ್ದು ಮೂರು ಉಪಕೋಣೆಗಳಿಗೆ ಪ್ರವೇಶ ಬಾಗಿಲುಗಳಿವೆ. ವಾಯುವ್ಯ ಮೂಲೆಯಲ್ಲಿರುವ ಮೆಟ್ಟಿಲುಗಳ ಅವಶೇಷಗಳು ಬಹುಶಃ ಮಾಳಿಗೆಗೆ ಕರೆದೊಯ್ಯುತ್ತವೆ. ಅರಮನೆಯ ಮೂರು ಭಾಗಗಳನ್ನು ಸುತ್ತುವರೆದಿರುವ ಮೊಗಸಾಲೆಯ ತಳಹದಿಗಳನ್ನು ಗಮನಿಸಿದಾಗ ಅಲ್ಲಿ ತೆರೆದ ಕಂಬಗಳ (colonnade) ಸಾಲುಗಳು ಇದ್ದಿರಬಹುದೆಂದು ತಿಳಿಯುತ್ತದೆ.

ಈ ಅರಮನೆಯ ದಕ್ಷಿಣಕ್ಕೆ ಬೇರೆ ಬೇರೆ ದಿಕ್ಕುಗಳೆಡೆಗೆ ಮುಖಮಾಡಿರುವ ಚಿಕ್ಕ ಮೂರು ಅರಮನೆಗಳು ಕಂಡುಬಂದಿವೆ. ಆದರೆ ಇವುಗಳಲ್ಲಿ ಪ್ಪೂರ್ವಕ್ಕೆ ಮುಖಮಾಡಿದ ಕಟ್ಟಡವು ಮಾತ್ರ ಸುಸ್ಥಿತಿಯಲ್ಲಿದೆ. ಈ ಅರಮನೆಯು ಎರಡು ಅಂತಸ್ತುಗಳಲ್ಲಿ ವಿಂಗಡಿಸಲ್ಪಟ್ಟಿದ್ದು ಕೆಳಗಿನ ಹಂತದಲ್ಲಿ ಒಂದು ಮುಖಮಂಟಪವಿದೆ. ಇದರ ಸುತ್ತಲೂ ಮೂರು ಬದಿಗೆ ಐದು ಆಯತಾಕಾರದ ಕೋಣೆಗಳ ತಳಹದಿಗಳಿವೆ.

ಉತ್ತರ ದಿಕ್ಕಿನಲ್ಲಿರುವ ಆವರಣಗಳಲ್ಲಿ ಕೆಲವು ಅರಮನೆ ಕಟ್ಟಡಗಳು ಕಂಡುಬರುತ್ತವೆ. ಈಶಾನ್ಯ ಮೂಲೆಯಲ್ಲಿ ಪೂರ್ವಕ್ಕೆ ಮುಖಮಾಡಿದ ಒಂದು ಅರಮನೆಯಿದೆ. ಈ ಅರಮನೆ ಪ್ರವೇಶಿಸಲು ಸಾಲಾಗಿ ನಾಲ್ಕು ಪ್ರವೇಶದ್ವಾರಗಳು, ತೊಟ್ಟಿ ಮತ್ತು ಅಂಗಳಗಳಿವೆ. ಈ ತೊಟ್ಟಿಗಳು ಬೇರೆ ಬೇರೆ ಮೂಲೆಗಳಲ್ಲಿವೆ. ಕಂಬಗಳುಳ್ಳ ಸ್ವಾಗತ ಹಜಾರವು ಮೂರು ಹಂತಗಳಲ್ಲಿದ್ದು ಪ್ರವೇಶ ಸಂಕೀರ್ಣದೊಂದಿಗೆ ಸೇರಿದೆ. ಈ ಹಜಾರವು ಉತ್ತರ ದಿಕ್ಕಿಗೆ ಮುಖಮಾಡಿದ್ದು ಒಂದು ದೊಡ್ಡ ಹಜಾರಕ್ಕೆ ಸೇರಿದಂತಿದೆ. ಇಲ್ಲಿಂದ ಒಂದು ದಾರಿಯು (passage way) ಎರಡನೆ ಹಜಾರಕ್ಕೆ ಹೋಗುತ್ತದೆ. ಈ ಹಜಾರದ ಈಶಾನ್ಯ ಮೂಲೆಯಲ್ಲಿ ಗಾರೆಯ ನೆಲವಿರುವ ಸ್ನಾನಗೃಹ ಮತ್ತು ಶೌಚಾಲಯಗಳಿವೆ. ಈ ಆವರಣದ ಒಂದು ವಿಶೇಷ ಲಕ್ಷಣವೆಂದರೆ ಗಾರೆಯ ನೆಲದಲ್ಲಿ ಅಲ್ಲಲ್ಲಿ ಗುಂಡಿಗಳಿವೆ. ಗುಂಡಿಗಳು ವೃತ್ತಾಕಾರದಲ್ಲಿದ್ದು ಸರಳುಗಳಿಂದ ಒಂದಕ್ಕೊಂದು ಜೋಡಿಸಲ್ಪಟ್ಟಿವೆ. ಈ ಗುಂಡಿಗಳನ್ನು ಬಹುಶಃ ಹೂವಿನ ಗಿಡಗಳನ್ನು ನೆಡಲು ಮಾಡಿರಬಹುದೆಂದು ಊಹಿಸಲಾಗಿದೆ. ಅರಮನೆಯು ಮೂರು ತಲಗಳಲ್ಲಿದ್ದು (levels) ಮೊದಲನೆಯ ಹಂತವು ತಳಪಾಯದ ಮೇಲೆ ಕಟ್ಟಲ್ಪಟ್ಟಿದ್ದು ತಳಪಾಯದ ಮೇಲೆ ಪ್ರಾಣಿ ಮತ್ತು ಪಕ್ಷಿಗಳ ಸಾಲುಗಳಿವೆ. ಮಧ್ಯದಲ್ಲಿ ಎರಡೂ ಬದಿಗಳಲ್ಲಿ ಮೆಟ್ಟಿಲುಗಳಿವೆ. ಅರಮನೆಯು ಈಗ ಹಾಳಾಗಿದ್ದು ಎರಡನೆಯ ಹಂತದಲ್ಲಿ 'U' ಆಕಾರದ ರಚನಾ ವಿನ್ಯಾಸವು ಕಂಡುಬರುತ್ತದೆ. ಮೂರನೆ ಹಂತದ ಮಧ್ಯದಲ್ಲಿ ಒಂದು ಕೋಣೆಯಿದೆ. ಇದರ ಸುತ್ತಲೂ ದಾರಿ ಮತ್ತು ಉಪಕೋಣೆಗಳಿವೆ. ಈ ಅರಮನೆಯ ಪಶ್ಚಿಮದಿಕ್ಕಿನಲ್ಲಿರುವ ಅನೇಕ ಕಟ್ಟಡಗಳನ್ನು ಸ್ವಚ್ಛ ಮಾಡಲಾಗಿದೆ. ಈ ಕಟ್ಟಡಗಳ ಉತ್ತರದ ಭಾಗದಲ್ಲಿ ಆಳವಾದ ಆಯತಾಕಾರದ ತೊಟ್ಟಿಯಿದೆ. ತೊಟ್ಟಿಗೆ ಕಾಲುವೆಯ ಮೂಲಕ ನೀರನ್ನು ಬಿಡಲಾಗುತ್ತಿತ್ತು.

ಗಣ್ಯ ವರ್ಗದವರ ಅರಮನೆಗಳು

1982ರಲ್ಲಿ ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಇಲಾಖೆಯವರು ವಿಜಯನಗರದಲ್ಲಿ ಉತ್ಖನನ ಕೈಗೊಳ್ಳುವವರೆಗೂ ರಾಜವಂಶದವರು ವಾಸಿಸುವ ಅರಮನೆಗಳ ವಾಯುವ್ಯ ಭಾಗದಲ್ಲಿರುವ ಅರಮನೆ ಕಟ್ಟಡಗಳ ಬಗ್ಗೆ ಯಾವ ಮಾಹಿತಿಯೂ ಲಭ್ಯವಿರಲಿಲ್ಲ. ಉತ್ಖನನದ ನಂತರ ಇಲ್ಲಿರುವ ಕಟ್ಟಡಗಳು ಅಧಿಕಾರ ವರ್ಗದವರು ವಾಸಿಸುವ ಸ್ಥಳಗಳೆಂದು ತಿಳಿದುಬಂದಿದೆ. ಆದರೆ ವಿಜಯನಗರ ಅರಸರ ಆಸ್ಥಾನದಲ್ಲಿದ್ದ ಯಾವ ಜನರು ಇಲ್ಲಿ

ವಾಸಿಸುತ್ತಿದ್ದರೆಂಬುದನ್ನು ತಿಳಿಯಲು ಯಾವ ಆಧಾರಗಳೂ ದೊರೆತಿಲ್ಲ. ಇಲ್ಲಿ 18 ಅರಮನೆಗಳು, 13 ಬಾವಿಗಳು, ಮೂರು ನೀರಿನ ತೊಟ್ಟಿಗಳು ಅನೇಕ ಸಣ್ಣ ಜೀರ್ಣಗೊಂಡ ದೇವಸ್ಥಾನಗಳು ಬೆಳಕಿಗೆ ಬಂದಿವೆ. ಅರಮನೆಗಳು ಪ್ರತ್ಯೇಕ ಆವರಣಗಳಲ್ಲಿದ್ದು ಮಧ್ಯದಲ್ಲಿ ಕಿರಿದಾದ ದಾರಿಗಳಿವೆ. ಅಭ್ಯಾಸದ ಅನುಕೂಲತೆಗಾಗಿ ಈ ಅರಮನೆಗಳಿಗೆ ಸಂಖ್ಯೆಗಳನ್ನು ಕೊಡಲಾಗಿದೆ.

ಗಣ್ಯರ ಮೊದಲನೆ ಅರಮನೆ (NMQ-1)

ಈ ಆವರಣದಲ್ಲಿ ಉತ್ತರಕ್ಕೆ ಮುಖಮಾಡಿದ ಒಂದು ಅರಮನೆಯಿದೆ. ಪೂರ್ವ ಮತ್ತು ಪಶ್ಚಿಮಕ್ಕೆ ಕಂಬಗಳುಳ್ಳ ಎರಡು ಹಜಾರಗಳು, ವಾಯುವ್ಯ ಮೂಲೆಯಲ್ಲಿ ಒಂದು ಆಳವಾದ ಬಾವಿ, ನೈಋತ್ಯ ದಿಕ್ಕಿನಲ್ಲಿ ಒಂದು ನೀರಿನ ತೊಟ್ಟಿಯಿದೆ. ಆವರಣದ ಉತ್ತರ ದಿಕ್ಕಿನಲ್ಲಿ 13 ಮೆಟ್ಟಿಲುಗಳ ಪ್ರವೇಶದ್ವಾರವಿದೆ. ಮೆಟ್ಟಿಲುಗಳ ಎರಡು ಬದಿಗಳ ಪ್ರಾರಂಭದಲ್ಲಿ ಯಾಳಿ ಕಟಾಂಜನವಿದೆ. ಅರಮನೆಯು ಎರಡು ಅಂತಸ್ತುಗಳ ತಳಹದಿಯ ಮೇಲೆ ನಿಂತಿದೆ. ಅರಮನೆಯ ಒಳಭಾಗದ ಮೊದಲನೆ ಹಂತವನ್ನು ಮೆಟ್ಟಿಲುಗಳ ಮೂಲಕ ಪ್ರವೇಶಿಸಬಹುದು. ಅರಮನೆ ಪ್ರವೇಶಿಸಿದ ಮೇಲೆ ಅಂಗಳವಿದ್ದು ಇಲ್ಲಿ ಪೂರ್ವ ಮತ್ತು ಪಶ್ಚಿಮಕ್ಕೆ ತಳಹದಿಯ ಮೇಲೆ ನಿಂತಿರುವ ಎರಡು ಕೋಣೆಗಳಿವೆ. ಇಟ್ಟಿಗೆ ಮತ್ತು ಗಾರೆಯಿಂದ ಕಟ್ಟಿದ ಕಟಾಂಜನವು ಯಾಳಿಗಳಿಂದ ಅಲಂಕರಿಸಲ್ಪಟ್ಟಿದ್ದು ಮೆಟ್ಟಿಲುಗಳು ಎರಡನೆ ಹಂತಕ್ಕೆ ಕರೆದೊಯ್ಯುತ್ತವೆ. ಈ ಹಂತವು **'U'** ಆಕಾರದ ಐದು ಹಂತಗಳುಳ್ಳ ತಳಹದಿಯ ಮೇಲೆ ನಿಂತಿದೆ. ಮೆಟ್ಟಿಲುಗಳ ಎರಡು ಸಾಲುಗಳು ಮೂರನೆಯ ಮತ್ತು ಅಂತಿಮ ಹಂತಕ್ಕೆ ಕರೆದೊಯ್ಯುತ್ತವೆ. ಇಲ್ಲಿ ಮಧ್ಯದಲ್ಲಿರುವ ಕೋಣೆಯ ಮೂರು ಬದಿಗಳಲ್ಲಿ ಉಪಕೋಣೆಗಳಿವೆ. ಈ ಕೋಣೆಗಳು ಮೊಗಸಾಲೆಗೆ ತೆರೆದುಕೊಂಡಿವೆ. ಆಗ್ನೇಯ ದಿಕ್ಕಿನಲ್ಲಿರುವ ಕಲ್ಲಿನ ಮೆಟ್ಟಿಲುಗಳು ಮತ್ತು ಕಾಲುವೆ ಸ್ನಾನದ ಕೋಣೆಯಿದ್ದ ಲಕ್ಷಣಗಳನ್ನು ತೋರಿಸುತ್ತದೆ. ಇಲ್ಲಿ ಚೈನಾದೇಶದ ವಿವಿಧ ಬಣ್ಣದ ಪಿಂಗಾಣಿ ವಸ್ತುಗಳ ಅವಶೇಷಗಳು ಮತ್ತು ಸ್ಥಳೀಯವಾಗಿ ತಯಾರಿಸಿದ ಮಣ್ಣಿನ ಪಾತ್ರೆಗಳು ದೊರೆತಿವೆ. ಪಿಂಗಾಣಿ ವಸ್ತುಗಳ ಮೇಲೆ ಹೂವು–ಎಲೆಗಳ ಚಿತ್ರಗಳಿವೆ.

ಗಣ್ಯರ ಎರಡನೆ ಅರಮನೆ (NMQ-2)

ಈ ಆವರಣವು ಅರಮನೆಯ ನೈಋತ್ಯ ದಿಕ್ಕಿನಲ್ಲಿ ಪ್ರಸನ್ನ ವಿರೂಪಾಕ್ಷ ದೇವಸ್ಥಾನದ ಸಮೀಪದಲ್ಲಿದೆ. ಆವರಣದೊಳಗೆ ಪೂರ್ವಕ್ಕೆ ಮುಖಮಾಡಿದ ಒಂದು ಅರಮನೆಯಿದೆ. ಇದರ ಮೂರು ಭಾಗಗಳಲ್ಲಿ ಕೋಣೆಗಳ ಸಾಲುಗಳಿವೆ. ಇವುಗಳ ಸುತ್ತಲೂ ತೆರೆದ ದಾರಿಯಿದ್ದು ದಾರಿಯಲ್ಲಿ ಮುಚ್ಚಿದ ಚರಂಡಿಗಳಿವೆ. ಅರಮನೆಯನ್ನು ಎತ್ತರವಾದ ಎರಡು ತಳಪಾಯಗಳ ಮೇಲೆ ಕಟ್ಟಿದ್ದಾರೆ. ಅರಮನೆಯು ನಾಲ್ಕು ಹಂತಗಳಲ್ಲಿದೆ. ಎರಡನೆ ಹಂತಕ್ಕೆ ಹೋಗಲು ಎರಡು ಸಾಲು ಮೆಟ್ಟಿಲುಗಳಿವೆ. ಮೆಟ್ಟಿಲುಗಳ ಪಕ್ಕದಲ್ಲಿ ಎರಡೂ ಬದಿಯಲ್ಲಿ ಆನೆಗಳ ಕಟಾಂಜನವಿದೆ. ಆನೆಗಳು ಬೀಸುಗಾಲು ಹಾಕುತ್ತಿರುವ ಭಂಗಿಯಲ್ಲಿದ್ದು ಸೊಂಡಿಲುಗಳಲ್ಲಿ ಕಮಲದ ಹೂವುಗಳನ್ನು ಹಿಡಿದಿವೆ. ಈ ಆನೆ ಕಟಾಂಜನದ ಮೂಲಕ ಮೂರನೆ ಮತ್ತು ನಾಲ್ಕನೆಯ ಅಂತಸ್ತುಗಳಿಗೆ ಹೋಗಲು ಮೆಟ್ಟಿಲುಗಳ ಎರಡು ಸಾಲುಗಳಿವೆ. ನಾಲ್ಕನೆಯ ಅಂತಸ್ತಿನಲ್ಲಿ ಮಧ್ಯದಲ್ಲಿ ಆಯತಕಾರದ ಕೋಣೆಯಿದೆ. ಮೇಲಿನ ಅಂತಸ್ತಿಗೆ ಹೋಗಲು ಈ ಕೋಣೆಯ ನೈಋತ್ಯದಿಕ್ಕಿನಲ್ಲಿ ಮರದ ಪಾವಟಿಗೆಗಳಿದ್ದ ಗುರುತುಗಳಿವೆ. ಮೇಲಿನ ಅಂತಸ್ತು ಹಾಳಾಗಿದೆ. ಮಧ್ಯದ ಕೋಣೆಯ ಹಿಂಭಾಗದಲ್ಲಿರುವ ರುಬ್ಬುವ ಕಲ್ಲುಗಳ ಅವಶೇಷಗಳು ಇಲ್ಲಿ ಜನವಸತಿಯಿದ್ದ ಲಕ್ಷಣಗಳನ್ನು ತೋರಿಸುತ್ತದೆ. ಚಿಕ್ಕ ತಾಮ್ರದ ಬುಟ್ಟಿ ಮತ್ತು ಚೀನಿ ಮಾದರಿಯ ಪಾತ್ರೆಯ ತುಂಡುಗಳ ಅವಶೇಷಗಳು ದೊರೆತಿವೆ.

ಗಣ್ಯರ ಮೂರನೆ ಅರಮನೆ (NMQ-3)

ಈ ಆವರಣದಲ್ಲಿ ಉತ್ತರಕ್ಕೆ ಮುಖಮಾಡಿದ ಒಂದು ಚಿಕ್ಕ ಅರಮನೆಯಿದ್ದು ಕೇವಲ ಎರಡು ಅಂತಸ್ತುಗಳಿವೆ. ಕೆಳ ಅಂತಸ್ತಿನಲ್ಲಿ ಒಂದು ಅಂಗಳವಿದ್ದರೆ ಮೇಲಿನ ಅಂತಸ್ತಿನ ಮಧ್ಯದಲ್ಲಿ ಒಂದು ಕೋಣೆಯಿದೆ. ಸುತ್ತಲೂ ಮೊಗಸಾಲೆಯಿದೆ. NMQ2ರಲ್ಲಿ ದೊರೆತಂತೆ ಇಲ್ಲಿಯೂ ಸುಣ್ಣದ ಕಾಂಕ್ರೇಟ್ ಮತ್ತು ನುಣುಪಾದ ಮೇಲ್ಮೈಗಳು ದೊರೆತಿವೆ. ಮಣ್ಣಿನ ಪಾತ್ರೆಗಳು, ಚೀನಾ ಮಾದರಿಯ ಪಿಂಗಾಣಿ ಪಾತ್ರೆಗಳು, ಅಲಂಕಾರವನ್ನು ಗಾಜಿನ ತುಂಡುಗಳು, ಕಬ್ಬಿಣದ ಮೊಳೆಗಳು, ಇಕ್ಕುಳ, ಕೊಡಲಿ, ಶಂಖದ ಉಂಗುರ, ತಾಮ್ರದ ನಾಣ್ಯಗಳು, ಕಲ್ಲಿನ ಬಳಪ. ಬೇರೆ ಬೇರೆ ಮಾದರಿಯ ಮಣಿಗಳು, ಬಂಗಾರದ ಚೈನಿನ ತುಂಡುಗಳು ದೊರೆತಿವೆ.


ಗಣ್ಯರ ನಾಲ್ಕನೆಯ ಅರಮನೆ (NMQ-4)

ಈ ಆವರಣದಲ್ಲಿ ಪೂರ್ವಾಭಿಮುಖವಾಗಿರುವ ದೊಡ್ಡ ಅರಮನೆಯ ಕಟ್ಟಡವಿದೆ. ಇದರ ಸುತ್ತಲೂ ಆವರಣಗೋಡೆಯಿಲ್ಲ. ಇದು ಮೂರು ಹಂತಗಳಿದ್ದು ಎರಡನೆ ಹಂತದಲ್ಲಿ ಉಪಕೋಣೆಗಳನ್ನು ಹೊಂದಿದೆ. ಮೂರನೆ ಹಂತದ ಮಧ್ಯದಲ್ಲಿ ಚೌಕಾಕಾರದ ಕಲ್ಲಿನ ತಳಪಾಯವಿದೆ. ಬಹುಶಃ ಇದನ್ನು ಮಧ್ಯದ ಕೋಣೆಗಾಗಿ ಕಟ್ಟಿರಬಹುದು. ಇಲ್ಲಿ ಹೂ-ಬಳ್ಳಿ ಪ್ರಾಣಿಗಳ ಚಿತ್ರಗಳು ಮತ್ತು ಮನುಷ್ಯರ ಮೂರ್ತಿಗಳು ದೊರೆತಿವೆ. ಎರಡು ಬಂಗಾರದ ಆಭರಣಗಳು ದೊರೆತಿದ್ದು ಅವುಗಳಲ್ಲಿ ಒಂದು ಬೆಸುಗೆ ಹಾಕಿದ ಅಲಂಕಾರಿಕ ಉಂಗುರ ಮತ್ತು ಇನ್ನೊಂದು ಮುತ್ತು ಕೂರಿಸಿದ ಕೊಂಡಿಗಳಿವೆ. ಈ ಮುತ್ತು ಕೂರಿಸಿದ ಕೊಂಡಿ ಅಥವ ಕೊಕ್ಕೆ ಮೂಗು ಅಥವ ಕಿವಿಯ ಆಭರಣವಾಗಿರಬಹುದು.


ರಾಜಪ್ರಾಂಗಣದ ಪೂರ್ವಕ್ಕಿರುವ ಕೆಲವು ಅರಮನೆಗಳು

1997-99ರಲ್ಲಿ ಪುರಾತತ್ವ ಇಲಾಖೆಯವರು ಕೈಗೊಂಡ ಉತ್ಖನನದಲ್ಲಿ ಪೂರ್ವಕ್ಕೆ ಮುಖಮಾಡಿದ ಎರಡು ಜೊತೆ ಅರಮನೆಗಳು ಬೆಳಕಿಗೆ ಬಂದಿವೆ. ಇವು ಅಷ್ಟಾಕೃತಿಯ ಸ್ನಾನಗೃಹದ ಹತ್ತಿರ ಇವೆ. ಇವುಗಳನ್ನು ತುಂಬ ಸರಳವಾಗಿ ಕಟ್ಟಿದ್ದಾರೆ. ಮೊದಲನೆ ಬೋದಿಯ ಒಂದು ಕಟ್ಟಡವು ಆವರಣ ಗೋಡೆಯೊಳಗೆ ಇದೆ. ಈ ಕಟ್ಟಡದ ಒಳಭಾಗವು ಒಂದರ ಮೇಲೊಂದು ನಿಂತಿರುವ ಮೂರು ಅಂತಸ್ತುಗಳಲ್ಲಿದೆ. ಪ್ರತಿಯೊಂದು ಅಂತಸ್ತು ಕಲ್ಲು ಅಥವ ಇಟ್ಟಿಗೆಯ ತಳಪಾಯದಿಂದ ಬೇರ್ಪಟ್ಟಿದ್ದು ಸ್ಪಷ್ಟವಾಗಿ ಗೋಚರಿಸುತ್ತದೆ. ಮೊದಲನೆ ಮತ್ತು ಎರಡನೆ ಅಂತಸ್ತುಗಳಲ್ಲಿ ಒಂದೊಂದು ಹಜಾರಗಳಿವೆ. ಮೂರನೆ ಅಂತಸ್ತಿನಲ್ಲಿ ಮಧ್ಯದಲ್ಲಿ ಒಂದು ಕೋಣೆ ಮತ್ತು ಮೂರು ಭಾಗಗಳಲ್ಲಿ ದಾರಿಯಿದೆ. ಈ ದಾರಿಯಲ್ಲಿ ಕೋಣೆಗಳು ಅಥವ ಆಳವಾದ ಗೂಡುಗಳಿವೆ. ಜೋಡಿ ಅರಮನೆಗಳಲ್ಲಿ ಒಂದಾದ ದೊಡ್ಡ ಅರಮನೆಯು ಆವರಣ ಗೋಡೆಗೆ ಹೊಂದಿಕೊಂಡಿದ್ದು ಪೂರ್ವ ದಿಕ್ಕಿನಲ್ಲಿರುವ ಹಜಾರಗಳವರೆಗೆ ವಿಸ್ತರಿಸಲ್ಪಟ್ಟಿದೆ. ಇಲ್ಲಿ ಮುಖ್ಯ ಪ್ರವೇಶದ್ವಾರವಿದೆ. ಅರಮನೆಯ ಮುಂಭಾಗವು ಭೂಮಿ ಮಟ್ಟದಲ್ಲಿದ್ದು ಪಕ್ಕದಲ್ಲಿ ಎತ್ತರವಾದ ತಳಪಾಯಗಳಿವೆ. ಒಳಭಾಗದಲ್ಲಿ ಮೊದಲ ಹಂತದಲ್ಲಿ ಹಜಾರವಿದೆ. ಈ ಹಜಾರವು ಎರಡನೆ ಹಂತದ ಮುಂದೆ ಚಾಚಿಕೊಂಡಿರುವ ಭಾಗದೊಂದಿಗೆ ಹೊಂದಿಕೊಂಡಿದೆ. ಎರಡನೆ ಹಂತದಲ್ಲಿ ಮಧ್ಯದಲ್ಲಿ ಒಂದು ಸುತ್ತು ಪಕ್ಕದಲ್ಲಿ ಎರಡು ಕೋಣೆಗಳಿವೆ. ಮನುಷ್ಯಾಕೃತಿಗಳ ಮಾದರಿಗಳನ್ನು ಗೋಡೆಗೆ ಅಂಟಿಕೊಂಡಿರುವಂತೆ ಅಲಂಕರಿಸಲಾಗಿದೆ. ಸ್ತ್ರೀ ಮತ್ತು ಪುರುಷ ಆಕೃತಿಗಳಲ್ಲಿದ್ದು ಸ್ತ್ರೀಯರ ಕೇಶವಿನ್ಯಾಸವು ಶ್ರೀಮಂತವಾಗಿದೆ. ಮುಖದ ಕೆತ್ತನೆಗಳನ್ನು ತುಂಬ ಸೂಕ್ಷ್ಮವಾಗಿ ಕೆತ್ತಿದ್ದಾರೆ. ಬಹುಶಃ ಇವು ಆಸ್ಥಾನದಲ್ಲಿದ್ದ ವ್ಯಕ್ತಿಗಳ ಆಕೃತಿಗಳಾಗಿರಬಹುದು.


ವಾಯುವ್ಯ ದಿಕ್ಕಿನಲ್ಲಿ ಇನ್ನೊಂದು ಜೋಡಿ ಅರಮನೆಗಳಿವೆ. ಚೂಪಾದ ಕಲ್ಲು ಮತ್ತು ಮಣ್ಣಿನಿಂದ ಕಟ್ಟಿದ್ದಾರೆ. ಇವುಗಳಲ್ಲಿ ದೊಡ್ಡ ಅರಮನೆಯು ಗೋಡೆಗಳಿರುವ ಆವರಣಗೋಡೆಯನ್ನೊಳಗೊಂಡಿದ್ದು ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಪ್ರವೇಶದ್ವಾರಗಳಿವೆ. ಸುಸ್ಥಿತಿಯಲ್ಲಿರುವ ಆಭರಣಗಳು ಉತ್ಖನನದಲ್ಲಿ ದೊರೆತಿವೆ. ಹತ್ತಿರದಲ್ಲಿಯೇ ಪೀಠದ ಮೇಲೆ ವಿಗ್ರಹದ ತುಂಡು ದೊರೆತಿದೆ. ಇದು ನಾಲ್ಕು ಹಂತಗಳಲ್ಲಿದೆ. ಮೊದಲನೆ ಹಂತದಲ್ಲಿ ಎರಡೂ ಕೊನೆಗಳಲ್ಲಿ ಕೋಣೆಗಳಿವೆ, ಎರಡನೆ ಹಂತದಲ್ಲಿ ಮೂರು ಬದಿಗೆ ಎತ್ತರವಾದ ತಳಪಾಯ ಸುತ್ತುವರಿದಿದೆ. ಮೂರನೆ ಹಂತದಲ್ಲಿ ಎರಡು ಉಪಕೋಣೆಗಳಿದ್ದು ದಾರಿಯ ಕಡೆಗೆ ತೆರೆದುಕೊಂಡಿವೆ. ಈ ದಾರಿಯು ಎತ್ತರವಾದ ತಳಪಾಯದ ಸುತ್ತಲೂ ಇದ್ದು ನಾಲ್ಕನೆ ಹಂತವಾಗಿ ಮಾರ್ಪಟ್ಟಿದೆ. ಈ ಜೋಡಿ ಅರಮನೆಗಳಲ್ಲಿ ಎರಡನೆಯದು ಪಶ್ಚಿಮಕ್ಕೆ ಗೋಡೆಗಳುಳ್ಳ ಆವರಣಗೋಡೆ ಹೊಂದಿದೆ. ಇದನ್ನು ಪ್ರವೇಶಿಸಲು ಉತ್ತರ ದಿಕ್ಕಿನಲ್ಲಿ ಪ್ರವೇಶವಿದೆ. ದಕ್ಷಿಣಕ್ಕೆ ಪ್ರವೇಶವುಳ್ಳ ಸಂಕೀರ್ಣವಿದ್ದು ಇದು ಹಜಾರಗಳೊಂದಿಗೆ ಹೊಂದಿಕೊಂಡಿದೆ. ಇಲ್ಲಿ ಈಗ ಮೊದಲ ಅಂತಸ್ತಿನ 'U' ಆಕಾರದ ಕಟ್ಟಡ ಮಾತ್ರ ಇದೆ. ಆವರಣಗೋಡೆಯ ದಕ್ಷಿಣ ದಿಕ್ಕಿನಲ್ಲಿ ಕೆಳಗಿನ ಹಂತದಲ್ಲಿ ಕಲ್ಲಿನ ಕಾಲುವೆ ಮತ್ತು ಮೇಲಿನ ಹಂತದಲ್ಲಿ ಗಾರೆಯಿಂದ ಗಿಲಾವು ಮಾಡಿದ ಕಾಲುವೆ ಮತ್ತು ತೊಟ್ಟಿ, ಆವರಣಗೋಡೆಯ ಪಶ್ಚಿಮಕ್ಕೆ ಮೆಟ್ಟಿಲುಗಳುಳ್ಳ ದೊಡ್ಡ ತೊಟ್ಟಿಯಿದೆ.



ಕಮಲ ಮಹಲ್ ಹತ್ತಿರವಿರುವ ಅರಮನೆ



ಹಜಾರ ರಾಮಚಂದ್ರ ದೇವಸ್ಥಾನದ ಆವರಣದ ನೈಋತ್ಯ ದಿಕ್ಕಿನಲ್ಲಿರುವ ಅರಮನೆಯ ನಕ್ಷೆ




ಹಜಾರ ರಾಮಚಂದ್ರ ದೇವಸ್ಥಾನದ ಆವರಣದ ವಾಯುವ್ಯ ದಿಕ್ಕಿನಲ್ಲಿರುವ ಅರಮನೆ



ಹಜಾರ ರಾಮಚಂದ್ರ ದೇವಸ್ಥಾನದ ಆವರಣದ ವಾಯುವ್ಯ ದಿಕ್ಕಿನಲ್ಲಿರುವ
ಅರಮನೆಯ ನಂದಿ ಮುಖದ ನಳಿಕೆಯುಳ್ಳ ತೊಟ್ಟಿ



ರಾಜವಂಶದವರು ಅರಮನೆಗಳ ಪೂರ್ವ ಭಾಗದಲ್ಲಿರುವ ಅರಮನೆಗಳ ಆವರಣ



ಅಧಿಕಾರಿಗಳ ಅರಮನೆಗಳಿರುವ ವಠಾರಗಳ ಪಕ್ಷಿ ನೋಟ.

ಹಾಡುವಳ್ಳಿಯ ಚಂದ್ರನಾಥ ಬಸದಿಗಳು

ಡಾ॥ ಕೆ. ಜಿ. ಭಟ್‌ಸೂರಿ

ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನ ಹಾಡುವಳ್ಳಿ ಗ್ರಾಮ ಭಟ್ಕಳ ತಾಲೂಕಿನಿಂದ 17 ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಪ್ರಾಚೀನ ಹೆಸರು ಸಂಗೀತಪುರ. (ರಮೇಶ್ ಕೆ.ವಿ. 1969, ಪುಟ 94) ಸಂಗೀತಪುರವೆಂಬ ಈ ಗ್ರಾಮ ಕ್ರಿ.ಶ. 14ರಿಂದ 16ನೇ ಶತಮಾನದವರೆಗೆ ಸಾಳ್ವ ಅರಸರ ರಾಜಧಾನಿಯಾಗಿತ್ತು. ಸಾಳ್ವ ಅರಸ ಮನೆತನದಲ್ಲಿ ಎರಡು ಪ್ರಮುಖ ಶಾಖೆಗಳಿವೆ ಎಂಬುದನ್ನು ಶಾಸನಗಳು ಸ್ಪಷ್ಟಪಡಿಸುತ್ತವೆ. (1) ಗೇರುಸೊಪ್ಪ, (2) ಹಾಡುವಳ್ಳಿ. ವಿಜಯನಗರವನ್ನು ಆಳಿದ ತುಳು ಅರಸು ಮನೆತನ ಈ ಶಾಖೆಗೆ ಸಂಬಂಧಿಸಿದೆ. (ಸೂರ್ಯನಾಥ ಕಾಮತ್ 1992, ಪುಟ 211) ಹಾಡುವಳ್ಳಿ ಅರಸು ಮನೆತನಕ್ಕೆ ಸೇರಿದ ಪ್ರಾಚೀನ ಶಾಸನ ಕ್ರಿ.ಶ. 1408ರ ಕಾಲಕ್ಕೆ ಸೇರಿದೆ. ನಗಿರೆ ಮತ್ತು ಹಾಡುವಳ್ಳಿಯಲ್ಲಿ ಹುವರಸರ ಒಡೆಯನಿಂದ ಪ್ರಾರಂಭವಾಗಿ ಮೊದಲನೆ ಸಂಗೀರಾಯ, ಮಲ್ಲಿರಾಯ, ಮೊದಲನೆ ಇಂದರಸ, ಇಮ್ಮಡಿ ಸಂಗೀರಾಯ, ಇಮ್ಮಡಿ ಇಂದರಸ, ದೇವರಸ ಒಡೆಯ, ಗುರುರಾಯ ಒಡೆಯ, ಇಮ್ಮಡಿ ದೇವರಸ ಒಡೆಯ, ಬೈರಾಂಭ, ಚನ್ನಾಂಭೆ ಮತ್ತು ಚೆನ್ನಬೈರಾದೇವಿಯರು ಇಲ್ಲಿ ಪ್ರಮುಖವಾಗಿ ಆಡಳಿತ ನಡೆಸಿದವರಾಗಿದ್ದಾರೆ.

ಪ್ರಸ್ತುತ ಈ ಲೇಖನ ಹಾಡುವಳ್ಳಿಯ ಚಂದ್ರನಾಥ ಬಸದಿಗೆ ಸೀಮಿತವಾಗಿದೆ. ಹಾಡುವಳ್ಳಿ ಮೂಲತಃ ಒಂದು ಜೈನ ಕೇಂದ್ರ, ಜೈನ ಕೇಂದ್ರವಾದ ಈ ಗ್ರಾಮದಲ್ಲಿ ಹಲವಾರು ಬಸದಿಗಳಿದ್ದರೂ, ಹೆಚ್ಚಿನವು ಚಂದ್ರನಾಥ ಬಸದಿಗಳೇ ಆಗಿವೆ. ಚಂದ್ರಗಿರಿ ಬೆಟ್ಟದ ಚಂದ್ರನಾಥ ಬಸದಿ ಹಾಡುವಳ್ಳಿ ಗ್ರಾಮದಿಂದ ಎರಡು ಕಿ.ಮೀ. ಅಂತರದಲ್ಲಿದ್ದು, ಬೆಟ್ಟದ ಮೇಲಿದೆ. ಚಂದ್ರನಾಥ ಬಸದಿಯ ಉದ್ದಗಲ 17.20 x 7.65 ಮೀ. ಈ ಬಸದಿಯ ಒಳಭಾಗ ಗರ್ಭಗೃಹ ಮಂಟಪ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಗರ್ಭಗೃಹ ಪ್ರದಕ್ಷಿಣಾ ಪಥವನ್ನು ಒಳಗೊಂಡಿದ್ದು, ಇದನ್ನು ಸಾಂಧಾರ ಮಾದರಿಯ ದೇವಾಲಯ ಎನ್ನಬಹುದು. ಗರ್ಭಗೃಹದ ಲಲಾಟಬಿಂಬದಲ್ಲಿ ಯಾವುದೇ ಕೆತ್ತನೆಗಳಿಲ್ಲದೇ ಮೂಲ ಸ್ವರೂಪದಲ್ಲಿರುವುದು ಇದೊಂದು ವಿಶೇಷತೆ. ಪ್ರತಿ ಗರ್ಭಗೃಹದ ಮುಂದೆ ಅಂತರಾಳ ಇರುವುದು ಸಾಮಾನ್ಯ ಲಕ್ಷಣ.

ಪ್ರಸ್ತುತ ಈ ಬಸದಿಯಲ್ಲಿ ಅಂತರಾಳ ಇರದೆ ಉಪಮಂಟಪವಿದೆ. ಈ ಉಪಮಂಟಪದಲ್ಲಿ ಹೆಚ್ಚು ಜನ ನಿಂತು ಪೂಜೆಯನ್ನು ವೀಕ್ಷಿಸಲು ಸಾಧ್ಯವಾಗುವಂತೆ ಇದರ ರಚನೆಯಾದಂತಿದೆ. ಇದರ ಮುಂದಿನ ಭಾಗ ಸಭಾಮಂಟಪ. ಇದು ಸಭೆ ನಡೆಯುವ ಸ್ಥಳ ಅಂದರೆ ಧಾರ್ಮಿಕ ವಿಧಿ ವಿಧಾನಗಳು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಬಹುದಾದ ಸ್ಥಳ ಎಂದು ಹೇಳಬಹುದು. ಚಂದ್ರನಾಥ ಬಸದಿಯ ಉಪಮಂಟಪ ಮತ್ತು ಸಭಾಮಂಪಗಳ ನಾಲ್ಕು + ನಾಲ್ಕು ಸ್ತಂಭಗಳು ಒಂದೇ ಮಾದರಿಯಲ್ಲಿದೆ. ಸಭಾಮಂಪಟದಲ್ಲಿರುವ ಈ ಸ್ತಂಭಗಳು ಚೌಕಾಕಾರದ ಮೇಲೆ ಲತಾಸುರುಳಿಯಿಂದ ಮೇಲೇರುತ್ತಾ ಬೋದಿಗೆಗಳನ್ನು ಒಳಗೊಂಡಿದೆ. ಮೇಲ್ಛಾವಣಿ ಪದ್ಮವನ್ನು ಒಳಗೊಂಡಿದ್ದು, ಪದ್ಮಾಲಂಕೃತಗಳಲ್ಲಿ ವೈವಿಧ್ಯತೆ ಇದೆ. ಸಭಾಮಂಟಪದ ಬಾಗಿಲು ಮೇಲೆ ಲಲಾಟಬಿಂಬದಲ್ಲಿ ತೀರ್ಥಂಕರ ಬಿಂಬವಿದ್ದು, ಬಾಗಿಲು ವಾಡದ ದ್ವಾರದಲ್ಲಿ ದ್ವಾರಪಾಲಕರಿದ್ದಾರೆ. ಸಭಾಮಂಟಪದ ಮುಂದಿನ ಭಾಗವೇ ಮುಖಮಂಟಪ. ಮುಖಮಂಟಪದಿಂದ ಸಭಾಮಂಟಪಕ್ಕೆ ಹೋಗುವ ದ್ವಾರದಲ್ಲಿ ಲಲಾಟಬಿಂಬದಲ್ಲಿ ಪದ್ಮಾಸನದಲ್ಲಿ ಕುಳಿತ ತೀರ್ಥಂಕರ ಮೂರ್ತಿ ಇದೆ. ದ್ವಾರದ ಎಡಬಲಕ್ಕೆ ಚೌರಿ ಹಿಡಿದ ಉಬ್ಬುಶಿಲ್ಪವಿದೆ. ಬಲಭಾಗದಲ್ಲಿ ಖಡ್ಗಾಸನದಲ್ಲಿ ದೇಹದಂಡಿಸಿ ನಿಂತಿರುವ ತೀರ್ಥಂಕರರ ಉಬ್ಬುಶಿಲ್ಪವಿದೆ. ಮುಖ ಮಂಟಪದಲ್ಲಿನ ನಾಲ್ಕು ಸ್ತಂಭಗಳು ಸಭಾಮಂಟಪದ ಸ್ತಂಭದ ಮಾದರಿಯಲ್ಲಿದ್ದು, ಬೋದಿಗೆ ಕೆತ್ತನೆಯಲ್ಲಿ ಸೌಂದರ್ಯದಲ್ಲಿ ವೈವಿಧ್ಯತೆ ಇದೆ. ಮುಖ ಮಂಟಪ, ಸಭಾಮಂಟಪಕ್ಕೆ ಹೋಗುವಾಗ ಎಡಬಲಕ್ಕೆ ಕಟಾಂಜನ ಪದ್ಮಾಲಂಕೃತವಾಗಿರುವುದು ವಾಸ್ತು ವಿಶೇಷತೆಯಾಗಿದೆ.

ಚಂದ್ರನಾಥ ಬಸದಿಯ ಹೊರಭಾಗ ಅಧಿಷ್ಠಾನ, ಹೊರಪ್ರದಕ್ಷಿಣಾಪಥ ಎತ್ತರದ ವೇದಿಕೆಯ ಸುತ್ತಲೂ ಸ್ತಂಭಗಳು ಚೌಕಾಕಾರ, ಅಷ್ಟಕೋನ, ಚೌಕಾಕಾರವಾಗಿ ಮೇಲೇರುತ್ತಾ ತೊಲೆಬಾರವನ್ನು ಹೊತ್ತಿದೆ. ಅಧಿಷ್ಠಾನ (85 ಸೆಂ.ಮೀ.) ಎತ್ತರವಿದ್ದು, ಇದರ ಮೇಲೆ ಇನ್ನೊಂದು ಅಧಿಷ್ಠಾನ ಮಂಚಬಂಧ ಮಾದರಿಯಲ್ಲಿದೆ. ಇದೊಂದು ವಿಶೇಷತೆಯೇ ಸರಿ. ಎತ್ತರವಾದ ಅಧಿಷ್ಠಾನದ ಮೇಲೆ ಭಿತ್ತಿಯ ಸುತ್ತಲೂ 24 ಕುಡ್ಯಸ್ತಂಭಗಳಿದ್ದು, ಕುಡ್ಯಸ್ತಂಭಗಳ ಮುಂಭಾಗದಲ್ಲಿ ಖಡ್ಗಾಸನದಲ್ಲಿ ನಿಂತ ತೀರ್ಥಂಕರ ಬಿಂಬವಿದೆ. ಲಂಬಾಕಾರದಲ್ಲಿ ಸಿಸ್ಟ್‌ಕಲ್ಲನ್ನು ಭಿತ್ತಿಗೆ ಹಾಸಲಾಗಿದೆ. ಕಪೋತ ಇಳಿಜಾರಾಗಿದ್ದು, ಇಲ್ಲಿ ಹೆಚ್ಚು ಮಳೆ ಬೀಳುತ್ತಿರುವುದರಿಂದ ರಕ್ಷಣೆಗಾಗಿ ಇಳಿಜಾರು ಮಾಡಿದೆ. ಕಪೋತದ ಮೇಲೆ ಎಡಬಲಕ್ಕೆ ಎರಡು ಕೋತಿಗಳು ಮಲಗಿ ಕೆಳಕ್ಕೆ ಇಣುಕಿ ನೋಡಿದಂತಿರುವುದು ಕಲಾಕಾರನ ನೈಜತೆಯನ್ನು ಪ್ರದರ್ಶಿಸಿದಂತಿದೆ. ಮೇಲ್ಛಾವಣಿ ಸಿಸ್ಟ್‌ಕಲ್ಲಿನಿಂದ ವಿಸ್ತೃತವಾಗಿ ಹಾಸಲಾಗಿದ್ದು, ಭಟ್ಕಳದಲ್ಲಿನ ಜಟ್ಟಪ್ಪನಾಯಕ ಬಸದಿಯನ್ನು ಹೋಲುತ್ತದೆ. ಬಸದಿಯ ಮೇಲೆ ಇಂದು ಇರುವ ಪ್ರಸ್ತುತ ಕಟ್ಟಡ ಪಾಳು ಬಿದ್ದಿದ್ದರೂ ವಿಜಯನಗರ ಕಾಲದಲ್ಲಿ ಈ ಗ್ರಾಮದಲ್ಲಿ ಮಹಡಿ ಕಟ್ಟಿರುವ ಉದಾಹರಣೆ ಇದೊಂದೇ ಆಗಿದೆ. (ಭಟ್‌ಸೂರಿ. ಕೆ.ಜಿ. 2003).

ಚಂದ್ರನಾಥ ಸ್ವಾಮಿ ಬಸದಿ

ಪ್ರಸ್ತುತ ಈ ಚಂದ್ರನಾಥ ಬಸದಿ ಜಂಬಿಟ್ಟಿಗೆಯಿಂದ ಆವೃತವಾಗಿದೆ. ಈ ಬಸದಿ ಚೌವ್ವೀಸ್ ತೀರ್ಥಂಕರ ಬಸದಿಯ ಆವರಣದ ಮುಂಭಾಗದಲ್ಲಿದೆ. ಈ ಬಸದಿಯ ಉದ್ದಗಲ 11.70 x 5.70 ಮೀ. ಇದ್ದು ಪೂರ್ವಾಭಿಮುಖವಾಗಿದೆ. ಬಸದಿ ಗರ್ಭಗೃಹ ಉಪಮಂಟಪಗಳನ್ನೊಳಗೊಂಡಿದ್ದು, ಜೀರ್ಣೋದ್ಧಾರವಾಗಿದೆ. ಬಸದಿಯ ಒಳಗೆ ಚಂದ್ರನಾಥ ಎಡಕ್ಕೆ ನೇಮಿನಾಥ ಮೂರ್ತಿ ಶಿಲ್ಪವಿದೆ. ಚಂದ್ರನಾಥನ ಎರಡು ತೀರ್ಥಂಕರ ಮೂರ್ತಿಗಳು ಮಾರ್ಬಲ್ ಕಲ್ಲಿನಿಂದ ಮಾಡಲ್ಪಟ್ಟಿದ್ದು, ವಿಜಯನಗರೊತ್ತರ ಕಾಲಕ್ಕೆ ಸೇರಿದೆ. ಎರಡು ತೀರ್ಥಂಕರ ಮೂರ್ತಿಗಳು ಬಿತ್ತಿಗೆ ತಾಗಿ ಎತ್ತರದಲ್ಲಿಡಲ್ಪಟ್ಟಿದೆ. ಇಡೀ ಆವರಣದ ಬಸದಿಯ ಮುಂದೆ ವಾಸ್ತುವಿನ ಭಾಗವಾಗಿ ಮಾನಸ್ತಂಭವಿದ್ದರೂ, ಮಾನಸ್ತಂಭದ ಕಾಲ ಈ ಬಸದಿಯ ಪೂರ್ವಕಾಲದ್ದಾಗಿದೆ ಎಂದು ಹೇಳಬಹುದು.

ಚಂದ್ರನಾಥ ದೇವ ಬಸದಿ

ಹಾಡುವಳ್ಳಿ ಗ್ರಾಮದಲ್ಲಿರುವ ಕೇಂದ್ರ ಪುರಾತತ್ವ ಸರ್ವೇಕ್ಷಣ ಅಡಿಯಲ್ಲಿ ಬರುವ ಈ ಚಂದ್ರನಾಥ ಬಸದಿ ಪೂರ್ವಾಭಿಮುಖವಾಗಿದೆ. ಈ ಬಸದಿಯ ಉದ್ದಗಲ 18.55 x 5.44 ಮೀ. ಇದೆ. ಬಸದಿಯ ಒಳಭಾಗ ಗರ್ಭಗೃಹ, ಸಭಾಮಂಟಪ, ತೆರೆದ ಮಂಟಪವನ್ನೊಳಗೊಂಡಿದೆ. ಗರ್ಭಗೃಹದಲ್ಲಿ ಚಂದ್ರನಾಥನ ಮೂರ್ತಿ ಶಿಲ್ಪವಿದೆ. ಸಭಾಮಂಟಪದಲ್ಲಿ ನಾಲ್ಕು ಸಂಭಗಳಿದ್ದು, ಭುವನೇಶ್ವರಿಯನ್ನೊಳಗೊಂಡಿದೆ. ಸಭಾಮಂಟಪಕ್ಕೆ ಒಳಗೆ ಹೋಗುವಾಗ ಭಿತ್ತಿಯ ಎಡಬಲಕ್ಕೆ ಹೂವಿನ ಕೆತ್ತನೆಗಳಿವೆ, ದ್ವಾರದ ಮೇಲೆ ನಾಗಾವೃತ ತೋರಣವಿದೆ. ಸಭಾಮಂಟಪ ಹೊರ ಮಂಟಪದ ಸ್ತಂಭಗಳಲ್ಲಿ ವೈವಿದ್ಯತೆ ಇದೆ. ಈ ವೈವಿದ್ಯ ಸ್ತಂಭಗಳ ಮಾದರಿಯನ್ನು ಇಲ್ಲಿ ಕಾಣಬಹುದು. (1) ಪೀಠದ ಮೇಲೆ ಚೌಕಾಕಾರ, ವೃತ್ತಾಕಾರ, ಸೂಕ್ಷ್ಮ ಕೆತ್ತನೆ ವರ್ತುಲಾಕಾರವಾಗಿ ಮೇಲೇರುತ್ತಾ ಬೋಧಿಗೆಯನ್ನೊಳಗೊಂಡಿದೆ. (2) ಪೀಠದ ಮೇಲೆ ಚೌಕಾಕಾರ 16, 36 ಕೋನ, ಮೇಲೆರುತ್ತಾ ಪುನಃ ಚೌಕಾಕಾರವಾಗಿ ಮೇಲೆ ತೊಲೆಯನ್ನು ಹೊತ್ತಿದೆ. (ಭಟ್‌ಸೂರಿ. ಕೆ.ಜಿ. 2003). (3) ಪೀಠದ ಮೇಲೆ ಚೌಕಾಕಾರ ಅಷ್ಟಕೋನದ ಮೇಲೆ ಆಮಲಕ ಮೇಲೆ ಬೋದಿಗೆ ಇದೆ. (4) ಬಿತ್ತಿ ಇಲ್ಲದ ಮಂಟಪದ ಹೊರಾವರಣದ ಸುತ್ತಲೂ ಇರುವ ಸ್ತಂಭ ಚೌಕಾಕಾರದ ಪೀಠ, ಚೌರಸ್, ಅಷ್ಟ, ಮತ್ತೆ ಚೌಕಾಕಾರದಲ್ಲಿ ಮೇಲೇರುತ್ತಾ ಬೋದಿಗೆ ಹೊತ್ತಿದೆ. (5) ಚಂದ್ರನಾಥ ಬಸದಿಯ ಹೊರಭಾಗ ವಾಸ್ತುವಿನ ದೃಷ್ಟಿಯಿಂದ ಅಧಿಷ್ಠಾನ ಪ್ರದಕ್ಷಿಣಾ ಪಥವನ್ನೊಳಗೊಂಡಿದೆ.

ಅಧಿಷ್ಠಾನದ ಸುತ್ತಲೂ ಉತ್ತರಕ್ಕೆ ಆರು, ದಕ್ಷಿಣಕ್ಕೆ ಆರು, ಪಶ್ಚಿಮಕ್ಕೆ ನಾಲ್ಕು, ಪೂರ್ವಕ್ಕೆ ನಾಲ್ಕು ಸ್ತಂಭಗಳನ್ನೊಳ ಗೊಂಡಿದ್ದು, ಈ ಸ್ತಂಭಗಳು ಇಳಿಜಾರಿನ ಮಾಡನ್ನು ಹೊತ್ತಿದೆ. ಸಿಸ್ಟ್‌ಕಲ್ಲಿನಿಂದ ಮಾಡನ್ನು ಹಾಸಲಾಗಿದೆ. ಈ ಇಳಿಜಾರಾದ ಮಾಡು ಈ ಭಾಗದ ವಾಸ್ತು ಶೈಲಿಯಾಗಿದೆ. ಭಿತ್ತಿಯ ಮೇಲೆ ಯಾವುದೇ ಅಲಂಕಾರಕ್ಕೆ ಪ್ರಾಧಾನ್ಯತೆ ನೀಡಿಲ್ಲ. ಗರ್ಭಗೃಹದ ಒಳಗೆ ಚಂದ್ರನಾಥ ಮೂರ್ತಿಶಿಲ್ಪವಿದ್ದು, ಎಡಬಲಕ್ಕೆ ಪಾರ್ಶ್ವನಾಥ, ನೇಮಿನಾಥ ಮತ್ತು ಮಹಾವೀರ ಬಸದಿಗಳಿವೆ.

ಈ ಎಲ್ಲಾ ಬಸದಿಗಳು ಒಂದೇ ಗ್ರಾಮದಲ್ಲಿರುವುದು ಒಂದು ವಿಶೇಷತೆಯೇ ಸರಿ. ಅಂದು ಹಾಡುವಳ್ಳಿಗ್ರಾಮ ತುಳುನಾಡಿನಲ್ಲಿ ಒಳಗೊಂಡಿರುವುದರಿಂದ ಬಸದಿಯ ಇಳಿಜಾರಿದ ಮಾಡು ಇಲ್ಲಿನ ವೈಶಿಷ್ಟ್ಯತೆಯಾಗಿದೆ. ಇಲ್ಲಿನ ಬಸದಿಗಳನ್ನು ತಳವಿನ್ಯಾಸದ ದೃಷ್ಟಿಯಿಂದ ನೋಡಿದರೆ ಎರಡು ಗುಂಪುಗಳಾಗಿ ವಿಂಗಡಿಸಬಹುದು.

(1) ಅಯತಕಾರವಿರುವ ಗರ್ಭಗೃಹವುಳ್ಳ ಬಸದಿಗಳು, ಉದಾ: ಚಂದ್ರಗಿರಿಬೆಟ್ಟದ ಚಂದ್ರನಾಥ ಬಸದಿ.

(2) ಆಯತಕಾರದ ತಳವಿನ್ಯಾಸದ ಚತುರಸಗರ್ಭಗೃಹ, ಉದಾಹರಣೆಗಾಗಿ ಹಾಡುವಳ್ಳಿಯ ಚಂದ್ರನಾಥ ಬಸದಿ.

(3) ಇಲ್ಲಿನ ಇನ್ನೊಂದು ವಿಶೇಷತೆ ಮಹಡಿಯ ಮೇಲಿನ ಕಟ್ಟಡ ರಚನೆ.

(4) ಒಂದೇ ಗ್ರಾಮದಲ್ಲಿ ಮೂರು ನಾಲ್ಕು ಚಂದ್ರನಾಥ ಬಸಿದಿಗಳಿರುವುದು ವಿಶೇಷತೆಯೇ ಸರಿ. ಜ್ವಾಲಮಾಲಿನಿ ಚಂದ್ರನಾಥ ತೀರ್ಥಂಕರನ ಯಕ್ಷಿ, ಜ್ವಾಲಮಾಲಿನಿ ಲೌಕಿಕ ಸಂತೋಷವನ್ನು ನೀಡುವುದರಿಂದ ತೀರ್ಥಂಕರರನ್ನು ಯಕ್ಷಿಯರೊಡನೆ ಪೂಜಿಸಿದರೆ ಅದರ ಪ್ರಭಾವ ಹೆಚ್ಚುವುದು ಎಂಬುದರ ನಂಬಿಕೆ ಜಾನಪದರಲ್ಲಿದೆ.

(5) ವೈವಿಧ್ಯಮಯ ಸ್ಥಂಭಗಳ ಮಾದರಿ ಚಂದ್ರನಾಥ ಬಸದಿಯು ಕಲಾ ಸೌಂದರ್ಯಕ್ಕೆ ನಿದರ್ಶನವಾಗಿದೆ. ಶಿಲಾಸ್ಥಂಭದ ಹೊರತಾಗಿ ಕಂಚಿನ ಸ್ಥಂಭ ಮಾಡಿಸಿರುವುದು ಇಲ್ಲಿನ ವಿಶೇಷ ವೈಶಿಷ್ಟತೆಯಾಗಿದೆ. ಪ್ರಸ್ತುತ ಈ

ಸ್ಥಂಭದ ಒಂದು ಭಾಗ ಶಾಸನವನ್ನೊಳಗೊಂಡು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನಾ ಸಂಸ್ಥೆಯ ವಸ್ತುಸಂಗ್ರಹಾಲಯದಲ್ಲಿದೆ. ಇನ್ನೊಂದು ಭಾಗ ಧರ್ಮಸ್ಥಳ ಮಂಜುನಾಥ ವಸ್ತುಸಂಗ್ರಹಾಲಯದಲ್ಲಿ ಇಡಲ್ಪಟ್ಟಿದೆ. ಹೀಗೆ ಇಲ್ಲಿ ಜೈನಧರ್ಮ ಸನಾತನವಾಗಿ ಬೆಳೆದು, ಸ್ಥಳೀಯವಾಗಿ ಇಲ್ಲಿನ ವಾಸ್ತುಕಲೆ ಮತ್ತು ಮೂರ್ತಿಶಿಲ್ಪ ವೈಶಿಷ್ಟ್ಯಪೂರ್ಣ ಕೊಡುಗೆ ಎಂದು ಹೇಳಬಹುದು.

ಆಕರ ಗ್ರಂಥಗಳು

1) ಕೆ.ಜಿ. ಭಟ್‌ಸೂರಿ, ಅಪ್ರಕಟಿತ ಪಿ.ಎಚ್.ಡಿ. ಪ್ರಬಂಧ, *ಉತ್ತರಕನ್ನಡ ಜಿಲ್ಲೆಯ ವಾಸ್ತು ಮತ್ತು ಕಲೆ.* (ಪ್ರಾಚೀನ ಮಧ್ಯಕಾಲೀನ, 1987) ಮೈಸೂರು ವಿಶ್ವವಿದ್ಯಾಲಯ, ಮೈಸೂರು.

2) ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗದಲ್ಲಿ ಸಲ್ಲಿಸಿದ ಅಪ್ರಕಟಿತ ಯು.ಜಿ.ಸಿ. ಕಿರಿಯೋಜನೆ, 2003.


3) ಕೆ.ವಿ. ರಮೇಶ, *ತುಳುನಾಡಿನ ಇತಿಹಾಸ,* 1969, ಗೀತಾ ಬುಕ್‌ಹೌಸ್, ಮೈಸೂರು.

4) ಸೂರ್ಯನಾಥಕಾಮತ್, 1985, *ಉತ್ತರ ಕನ್ನಡ ಡಿಸ್ಟ್ರಿಕ್ಟ್ ಗೆಜೆಟಿಯರ್,* ಬೆಂಗಳೂರು.


5) ಸೂರ್ಯನಾಥಕಾಮತ್ 1992, *ಸಾಳ್ವರು ಕರ್ನಾಟಕ ಪರಂಪರೆ,* ಸಂ. 1, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು.




ಚಂದ್ರನಾಥ ಬಸದಿಯ ಸಭಾಮಂಟಪ



ಹಾಡುವಳ್ಳಿ ಚಂದ್ರನಾಥ ಬಸದಿಯ
ಮುಂಬಾಗದ ನೋಟ




ಚಂದ್ರಗಿರಿ ಬೆಟ್ಟದ ಚಂದ್ರನಾಥ ಬಸದಿ



ಹಾಡುವಳ್ಳಿ ಚಂದ್ರನಾಥ ಬೆಟ್ಟದ
ಬಸದಿಯ ಮಹಡಿ ನೋಟ

ವಿಜಯನಗರ ಹೆಸರು ಕನ್ನಡಿಗರಲ್ಲಿ ವಿಶೇಷವಾಗಿ ಸ್ಫೂರ್ತಿಯ ಸೆಲೆಯಾಗಿ ಹರಿದು ಹಲವಾರು ಪ್ರಮುಖ ಸಾಧನೆಗಳಿಗೆ ಕಾರಣೀಭೂತವಾಗಿದೆ. ವಿಜಯನಗರ ಒಂದು ಸಾಮ್ರಾಜ್ಯದ ರಾಜಧಾನಿಯಾಗಿ ಸಾಂಸ್ಕೃತಿಕ ಪರಂಪರೆಯ ನೆಲೆವೀಡಾಗಿ, ವಾಸ್ತುಶಿಲ್ಪ ವೈಭವದ ಪ್ರತೀಕವಾಗಿ, ರಕ್ಷಣೆಯ ಮಹತ್ವದ ಸ್ಥಳವಾಗಿ, ನಾಗರೀಕ ಸೌಲಭ್ಯಗಳ ಮಹಾನಗರಿಯಾಗಿ, ಶ್ರೇಷ್ಠ ರಾಜತಾಂತ್ರಿಕರ ಭೇಟಿಯ ಸ್ಥಳವಾಗಿ, ವೈಭವದ ದಸರಾ ಉತ್ಸವದ ರಂಗಮಂಚವಾಗಿ 250 ವರ್ಷಗಳಿಗೂ ಹೆಚ್ಚುಕಾಲ ಮೆರೆದು, ಇಂದು ಹಾಳುಹಂಪೆಯಾಗಿ, ಅಗೆದಷ್ಟೂ, ಬಗೆದಷ್ಟೂ ವಿದ್ವಾಂಸರಿಗೆ-ಅಧ್ಯಯನಿಗಳಿಗೆ ಹೊಸ ಹೊಸ ಮೂಲಸಾಮಗ್ರಿಗಳನ್ನು ಒದಗಿಸುತ್ತಿರುವ ಮಹತ್ವದ ಐತಿಹಾಸಿಕ ನೆಲೆಯಾಗಿದೆ. 'ವಿಜಯನಗರ ಅಧ್ಯಯನ' ಮಾಲಿಕೆಯ ಸಂಪುಟಗಳನ್ನು ಒಮ್ಮೆ ತಿರುವುಹಾಕಿದರೆ ಅದರಲ್ಲಿ ಅಡಕವಾಗಿರುವ ವಿಷಯಗಳು, ಲೇಖನಗಳು ವಿಜಯನಗರ ಅಧ್ಯಯನ ಮಾಲಿಕೆಯ ಮಹತ್ವವನ್ನು ಸಾರುತ್ತವೆ. ಬರೆದಷ್ಟು, ಸಂಶೋಧಿಸಿದಷ್ಟು ಅಧ್ಯಯನದ ಮಹತ್ವ ದಿನೇ-ದಿನೇ, ವರ್ಷೇ-ವರ್ಷೇ ಬೆಳೆಯುತ್ತಿದೆ. ವಿಷಯಾಧಾರಿತವಾಗಿ ಹೇಳುವುದಾದರೆ, ಹೊಸ ಶಾಸನಗಳು, ಸಾಂಸ್ಕೃತಿಕ ಅಧ್ಯಯನ, ಆಡಳಿತದ ವಿಷಯಗಳು, ಸಾಹಿತ್ಯ, ಮುಂತಾದ ವಿಷಯಗಳನ್ನು ಕುರಿತು ವಿಜಯನಗರ ಸಾಮ್ರಾಜ್ಯದ ಮಹತ್ವವನ್ನು ಸಾರುವ ಲೇಖನಗಳು ಅಡಕವಾಗಿವೆ. ಈ ಮಾಲಿಕೆ ಇಂದು ಸಂಶೋಧಕರ ಕೈಪಿಡಿಯಾಗಿ, ಮಹತ್ವದ ಸಂಶೋಧನಾ ಪ್ರಕಟಣೆಯಾಗಿ ಗುರುತಿಸಿಕೊಂಡಿದೆ.



ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ
ಮೈಸೂರು